



ಮಹಾತ್ಮ

(ಮೋಹನದಾಸ ಕರಮಚಂದ ಗಾಂಧಿಯವರ ಜೀವನ)

ಎಂಟು ಸಂಪುಟಗಳಲ್ಲಿ

ಲೇಖಕರು

ಡಿ. ಜಿ. ತೆಂಡುಲ್ಕರ್

ಜವಾಹರಲಾಲ್ ನೆಹರು ಅವರ ಮುನ್ನುಡಿ

೧೮೬೯ ರಿಂದ ೧೯೨೦ರ ವರೆಗೆ

ಸಂಪುಟ ೧

ಮೂಲ ಇಂಗ್ಲಿಷ್ ಕೃತಿಯ ಮುದ್ರಕರು :

ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಕಟನ ಮಂತ್ರಿ ಶಾಖೆ
ಭಾರತ ಸರ್ಕಾರ

ಮಹಾತ್ಮ

ಕನ್ನಡ ಅನುವಾದ

ಸಂಪಾದಕರು

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಗಾಂಧೀ ಭವನ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Kannada translation of MAHATMA-by D. G. Tendulkar; published by Publication Division, Ministry of Information and Broadcasting, Government of India. Translation published with permission by Gandhi Bhavan, University of Mysore, Mysore. pp. XII+XVI+503

Price: Rs 35.

ಮೊದಲ ಮುದ್ರಣ ೧೯೭೪

ಬೆಲೆ : ಮೂವತ್ತೈದು ರೂಪಾಯಿ.

ಮುದ್ರಣ
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮೈಸೂರು

ಮುನ್ನುಡಿ

ಇತಿಹಾಸಪೂರ್ವಕಾಲದಿಂದ ನೂರಾರು ಸಾವಿರಾರು ಆಚಾರ್ಯರು, ಸಾಹಿತಿಗಳು, ಯೋಧರು, ಧರ್ಮಸಂಸ್ಥಾಪಕರು, ಸಾಧುಸಂತರು, ವಿಚಾರವಂತರು, ವಿಜ್ಞಾನಿಗಳು, ವಿದ್ವಾಂಸರು, ಸಾಹಿತಿಗಳು ಮಾನವಕೋಟಿಯ ಮೇಲೆ ಅದಮ್ಯವಾದ ಪ್ರಭಾವವನ್ನು ಬೀರುತ್ತ ಜಗತ್ತಿನ ಇತಿಹಾಸ ಸೃಷ್ಟಿಗೆ ಕಾರಣರಾಗಿದ್ದಾರೆ. ಬುದ್ಧ, ಯೇಸು, ಮಹಮದ್ ಮೊದಲಾದ ಧರ್ಮೋಪದೇಶಕರು ದೇಶಕಾಲಾತೀತರಾಗಿ ಜನಹೃದಯ ಸಿಂಹಾಸನದಲ್ಲಿ ಮಂಡಿಸಿರುತ್ತ, ಅವರ ಬಾಳಿನಲ್ಲಿ ಚಿರಂತನಜೀವಂತ ಸ್ಫೂರ್ತಿಶಕ್ತಿಯಾಗಿದ್ದಾರೆ. ವಿಚಾರ ಸಂಘರ್ಷದ ಹಾಗೂ ತತ್ಫಲವಾದ ನೂತನ ಜ್ಞಾನೋದಯದ ಪರಿಣಾಮವಾಗಿ ಯುಗಧರ್ಮವೂ, ಜೀವನ ಮೌಲ್ಯಗಳೂ ರೂಪಾಂತರಗೊಂಡು ಜಾತಿ ಮತಕುಲಗಳ ಪ್ರತಿಷ್ಠೆ ಶಿಥಿಲಗೊಂಡು ಜಗತ್ತಿನ ಇತಿಹಾಸದಲ್ಲಿ ನೂತನ ಪ್ರಕರಣ ಪ್ರಾರಂಭವಾಗುವುದು ಸಹಜ. ತಮ್ಮ ವಿಚಾರವಂತಿಕೆಯಿಂದ, ದಾರ್ಶನಿಕ ಪ್ರತಿಭೆಯಿಂದ, ಕ್ರಿಯಾಶೀಲತೆಯಿಂದ, ಮಾನವೀಯ ದೃಷ್ಟಿಯಿಂದ ಮನುಕುಲದ ಮೇಲೆ ಕಾಲದೇಶಾತೀತವಾದ ಪ್ರಭಾವವನ್ನು ಬೀರಿ ಆಧುನಿಕ ಇತಿಹಾಸದ ನಿರ್ಮಾಪಕರಲ್ಲಿ ಅಗ್ರಪೂಜೆಗೆ ಪಾತ್ರರಾದವರು ಗಾಂಧೀಜಿ ಮತ್ತು ಲೆನಿನ್. ವಿದೇಶೀಯರ ಸಾರ್ವಭೌಮತ್ವ ಮಾತ್ರವಲ್ಲ, ಅವರ ಪ್ರಭಾವದಿಂದಲೂ ತಂತಮ್ಮ ರಾಷ್ಟ್ರಗಳನ್ನು ಮುಕ್ತಗೊಳಿಸಿ ಪ್ರಪಂಚದ ಚರಿತ್ರೆಯಿಂದ ದಾಸ್ಯವನ್ನು ತೊಲಗಿಸಿದ ಕೀರ್ತಿ ಆ ಇಬ್ಬರು ಮಹನೀಯರಿಗೆ ಸಲ್ಲತಕ್ಕದ್ದಾಗಿದೆ. ವಿದೇಶೀಯರ ರಾಜಕೀಯ ಹಾಗೂ ಆರ್ಥಿಕ ದಾಸ್ಯದಿಂದ ಮುಕ್ತಿಯನ್ನು ಪಡೆಯುವುದು ಮಾತ್ರ ಸ್ವಾತಂತ್ರ್ಯವಲ್ಲ, ಸಾಂಸ್ಕೃತಿಕ ದಾಸ್ಯದಿಂದ, ದಾರಿದ್ರ್ಯದಿಂದ ಮುಕ್ತಿ ಪಡೆಯುವುದೇ ನಿಜವಾದ ಶ್ರೇಷ್ಠವಾದ ಸ್ವಾತಂತ್ರ್ಯವೆಂದು ಅದರ ಕಲ್ಪನೆಯನ್ನು ವಿಸ್ತಾರಗೊಳಿಸಿದ, ಖಚಿತಗೊಳಿಸಿದ, ತಮ್ಮ ಕಲ್ಪನೆಯ ಸ್ವಾತಂತ್ರ್ಯವನ್ನು ಕಾರ್ಯಗತಗೊಳಿಸಲು ತ್ರಿಕರಣಶುದ್ಧಿಯಾಗಿ ಪ್ರಯತ್ನಿಸಿ, ಬಹುಮಟ್ಟಿಗೆ ಯಶಸ್ವಿಗಳಾದ ಧೀರ ಧೀಮಂತ ನಿಷ್ಠಾವಂತರವರು.

ಬುದ್ಧ ಬಸವೇಶ್ವರರ, ಪೀಳಿಗೆಯಲ್ಲಿ ಭಾರತೀಯ ಸಂಸ್ಕೃತಿಯ ಶಿಖರಪ್ರಾಯವೆಂಬಂತೆ, ಸಹಸ್ರಾರು ವರ್ಷಗಳ ದಾಸ್ಯವಿಮೋಚನೆಗೆಂಬಂತೆ ಗಾಂಧೀಜಿ ಹುಟ್ಟಿ, ದೇಶವಿದೇಶಗಳಲ್ಲಿ ವ್ಯಾಸಂಗ ಮಾಡಿ, ಪರರಾಷ್ಟ್ರದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸ್ವರಾಷ್ಟ್ರದಲ್ಲಿ ಮಹಾಗಾರುಡಿಗನಂತೆ ಜನರ ಮನಸ್ಸನ್ನೊಲಿಸಿಕೊಂಡು, ಸ್ವದೇಶೀಯ ಸ್ವಾತಂತ್ರ್ಯ ಸಂಪಾದನೆಯ ಮೂಲಕ ಜಗತ್ತಿನ ಗುಲಾಮೀ ರಾಷ್ಟ್ರಗಳನ್ನು ಜಾಗೃತಗೊಳಿಸಿ ಸಚೇತನಗೊಳಿಸಿ ಧ್ರುವತಾರೆಯಾದ ಕತೆ, ಜಗತ್ತಿನ ವಿಸ್ಮಯಕಾರಿ ಸಂಗತಿಯಾಗಿದೆ. ಎಲ್ಲ ಮಹಾಪುರುಷರಂತೆಯೇ ಅವರ ಜೀವನವೂ ಹೂವಿನ ಸುಪ್ಪತ್ತಿಗೆಯಾಗಿರಲಿಲ್ಲ. ಆಫ್ರಿಕಾದಲ್ಲಾಗಲೀ ಭಾರತದಲ್ಲಾಗಲೀ ಅವರು ಕೊನೆಯುಸಿರಿರುವ ತನಕ ಪಟ್ಟ ಶ್ರಮ, ಅನುಭವಿಸಿದ ಕ್ಲೇಶಸಂಕಟಗಳು,

ಸಹಿಸಿದ ಅನ್ಯಾಯ ಕಿರುಕುಳಗಳು, ಮಾಡಿದ ತ್ಯಾಗ, ನಡೆಸಿದ ಧ್ಯೇಯ ಅನುಪಮವಾದುವು. ಅವರ ಬಾಳಿನಲ್ಲಿ ಘಟಿಸಿದ ಪ್ರತಿಯೊಂದು ಸಂಘಟನೆಯೂ ಅವರು ಕಾರಣಪುರುಷರೆನ್ನುವುದನ್ನು ಸೂಚಿಸುತ್ತಿತ್ತು. ಕೊಲೆಗೆ ಕೊಲೆ, ಹುಸಿಗೆ ಹುಸಿ, ಸೇಡಿಗೆ ಸೇಡು, ಮುಯ್ಯಿಯಾಗುತ್ತದೆ. ಆದ್ದರಿಂದ ಸತ್ಯ, ಪ್ರೇಮ, ಅಹಿಂಸೆಗಳ ಮೂಲಕ ಎಂಥ ದುಷ್ಟಶಕ್ತಿಯನ್ನಾದರೂ ದಮನಗೊಳಿಸಬೇಕೆಂಬುದಕ್ಕೆ ಅವರ ಬಾಳೇ ಸಾಕ್ಷಿಯಾಯಿತು. ತಮ್ಮ ದೇಶದ ಜನ ಸುಖವಾಗಿ ಬಾಳಲೆಂದು, ವಿಶ್ವಕ್ಕೆ ಶಾಂತಿಯೊದಗಲೆಂದು ತಮ್ಮ ಬಾಳನ್ನೇ ಪಣವೊಡ್ಡಿ ಸ್ವಾತಂತ್ರ್ಯಯಜ್ಞವನ್ನು ಸಾಂಗಗೊಳಿಸಿದರು. ಭಾರತದ ಮಾತ್ರವಲ್ಲ, ಇಡೀ ಜಗತ್ತಿನ ಸಮಸ್ಯೆಗಳಿಗೆ ಅವರ ಜೀವನದಲ್ಲಿ ಉತ್ತರ ದೊರೆಯುತ್ತದೆ.

ಅವರು ತೀರಿಕೊಂಡು ಕಾಲುಶತಮಾನವಾಗಿ ಮೇಲೆ ನಡೆಯುತ್ತಿದೆ. ಈಗಾಗಲೇ ಅವರನ್ನು ಭಾರತೀಯರು ಮರೆತು, ಇಂದಿನ ಜಗತ್ತಿಗೆ ಅವರ ಸಂದೇಶ ಸರಿಹೊಂದುತ್ತದೆಯೇ ಎಂಬ ಪ್ರಶ್ನೆ ಎಲ್ಲ ದಿಕ್ಕುಗಳಲ್ಲಿಯೂ ಅನುರಣಿತವಾಗುತ್ತಿದೆ. ಲೆನಿನ್ ಅಥವಾ ಮಾವೋ ಮತ್ತು ಗಾಂಧೀಜಿಯವರ ಗುರಿ ಬೇರೆ ಬೇರೆಯಲ್ಲ; ಸಾಧನಾ ಮಾಧ್ಯಮ ಮಾತ್ರ ಪರಸ್ಪರ ವಿಭಿನ್ನ. ಗಾಂಧೀಜಿಯವರು ಆರಿಸಿಕೊಂಡ ಮಾಧ್ಯಮ ಭಾರತೀಯ ಸಂಸ್ಕೃತಿಗನುಗುಣವಾದುದೆನ್ನುವುದನ್ನು ಯಾರೂ ಮರೆಯುವಂತಿಲ್ಲ. ಜಗತ್ತಿನ ಶ್ರೇಷ್ಠ ಮಾನವತಾವಾದಿಗಳಾದ ಬುದ್ಧ ಬಸವೇಶ್ವರರ ಹಾದಿಯೂ ಗಾಂಧೀಜಿಯವರ ಹಾದಿಯೂ ಅಭಿನ್ನವಲ್ಲ. ಲೆನಿನ್ ಅನುಸರಿಸಿದ ದಾರಿಯೂ ಆ ಗುರಿಗೆ ಕೊಂಡೊಯ್ಯುತ್ತದೆ, ನಿಜ; ಆದರೆ ಅದು ಭಾರತೀಯ ಮನೋಧರ್ಮಕ್ಕೆ ಸಹಜವಾದದ್ದಲ್ಲವೆನ್ನುವುದು ಈಗಾಗಲೇ ಖಚಿತವಾಗಿದೆ. ಗಾಂಧೀಜಿಯ ದಾರಿ ಕಷ್ಟತಮವಾದದ್ದು. ಅಧಿಕಾರ ವಿಕೇಂದ್ರಿಕರಣ, ಗ್ರಾಮಸ್ವರಾಜ್ಯ, ಯಂತ್ರೀಕರಣಬಾಹಿರವಾದ ಅರ್ಥನೀತಿ, ಭಾರತೀಯತ್ವನಿಷ್ಠೆ, ಸತ್ಯ, ಪ್ರೇಮ, ಅಹಿಂಸೆಗಳು ಯಾರಿಗೆ ಹಿಡಿಸುತ್ತವೆ? ಹಿಂಸಾತ್ಮಕವಾದ ಯಾವ ಸಾಧನೆಯೂ ಶಾಶ್ವತವಾದುದಲ್ಲವೆಂಬುದು ಗಾಂಧೀಜಿಯವರವಾದ. ಸಂಪದ್ಯುಕ್ತವಾದ ಶ್ರೀಮಂತರಾಷ್ಟ್ರಗಳಲ್ಲಿ ಸುಖವಿದೆಯೆ ಎಂದು ಯೋಚಿಸುವಾಗ ಅವರ ವಾದದ ಸಾರ್ಥಕತೆ ಅಭಿವ್ಯಕ್ತವಾಗುತ್ತದೆ.

ಗಾಂಧೀಜಿ ಸೃಷ್ಟಿಸಿದ್ದ ಅಮಾನುಷ ಸುಮಧುರ ಪ್ರೇಮಮಯ ವಾತಾವರಣವಿಂದು ಕಾಣುತ್ತಿಲ್ಲ. ಅದನ್ನು ಹಾಳುಮಾಡಿದವರು ನಮ್ಮ ರಾಷ್ಟ್ರನಾಯಕರು. ಆ ವಾತಾವರಣ ಮತ್ತೆ ಮೊಗದೋರುತ್ತದೆಯೆ ಎಂಬ ಸಂಶಯ ಇತ್ತೀಚಿನ ಘಟನೆಗಳಿಂದ ಸ್ಫುಟವಾಗುತ್ತದೆ. ಸದ್ಯಸ್ಥಿತಿಯಲ್ಲಿ ಗಾಂಧೀಮಾರ್ಗಕ್ಕಿಂತ ಲೆನಿನ್‌ಮಾರ್ಗ ಗ್ರಾಹ್ಯವೊ ಏನೊ ಎಂದು ಕೆಲವರಿಗಾದರೂ ಅನ್ನಿಸಿದರೆ ತಪ್ಪಾಗಲಾರದು. ಆದರೆ ಕೊನೆಗಾದರೂ ಗಾಂಧೀಮಾರ್ಗವೇ ಶಾಶ್ವತವಾದ ಸರ್ವೋದಯಕ್ಕೆ ಅತ್ಯವಶ್ಯವಾದೀತೆಂದು ತೋರುತ್ತದೆ. ಏನೇ ಆಗಲಿ, ಗುರಿ ಮಾತ್ರ ದೂರ ಸರಿಯಬಾರದು.

"ನನ್ನ ಜೀವನದಲ್ಲಿ ಅಸಾಂಗತ್ಯಗಳನ್ನು ಕಾಣುವವರಿದ್ದಾರೆ" ಎಂದು ಗಾಂಧೀಜಿಯವರೇ ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಾರೆ. ಅವರ ವರ್ಣಾಶ್ರಮ ಪಕ್ಷಪಾತವನ್ನು ಮೆಚ್ಚುವುದು ಕಷ್ಟ. ಆದರೆ ಅವರ ಒಟ್ಟುದ ವ್ಯಕ್ತಿತ್ವ ನಮಗೆ ಮುಖ್ಯ. ಮಂದಗಾಮಿಗಳಾಗಲಿ, ಉಗ್ರಗಾಮಿಗಳಾಗಲಿ, ಯಾವ ಪಕ್ಷದವರೇ ಆಗಲಿ, ಯಾವ ವಯಸ್ಸಿನವರೇ ಆಗಲಿ, ಯಾವ ದೇಶದವರೇ ಆಗಲಿ, ಚಿರಂತನ ಮೌಲ್ಯಗಳಲ್ಲಿ ಆಸಕ್ತಿಯಿರುವವರು ಗಾಂಧೀಜಿಯವರ ಜೀವನ ಚರಿತ್ರೆಯನ್ನೂ ಅವರ ಕೃತಿಗಳನ್ನೂ ಅತ್ಯವಶ್ಯವಾಗಿ ವ್ಯಾಸಂಗಮಾಡಬೇಕು. ಅಂಥ ವ್ಯಾಸಂಗದಿಂದ ಪ್ರತಿಯೊಂದು ಚೇತನವೂ ಪೂರ್ಣವಾಗುತ್ತದೆ, ಹಿರಿದಾಗುತ್ತದೆ, ಸಾರ್ಥಕವಾಗುತ್ತದೆ.

ಗಾಂಧೀಜೀಯವರ ಲೇಖನ ಭಾಷಣಗಳೆಲ್ಲ ಸಾಮಾನ್ಯವಾಗಿ ಆಂಗ್ಲ ಅಥವಾ ಗುಜರಾತಿ ಭಾಷೆಗಳಲ್ಲಿವೆ. ಪ್ರತಿಯೊಬ್ಬ ಭಾರತೀಯನಿಗೂ ಅವು ಸುಲಭವಾಗಿ ಲಭಿಸುವಂತೆ ಏರ್ಪಾಡು ಮಾಡಬೇಕಾದ್ದು ಸರಕಾರದ ಅಥವಾ ವಿದ್ಯಾಸಂಸ್ಥೆಗಳ ಕರ್ತವ್ಯ. ಅನೇಕ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ಗಾಂಧೀಭವನಗಳು ನಿರ್ಮಾಣವಾಗಿವೆ. ಅಲ್ಲೆಲ್ಲ ಏನು ಕೆಲಸ ನಡೆಯುತ್ತದೆಯೋ ಕಾಣೆ. ಈಗಾಗಲೆ ಕನ್ನಡದಲ್ಲಿಲ್ಲದ ಗಾಂಧೀಸಾಹಿತ್ಯವನ್ನು ಕನ್ನಡಿಸಿ ಸಾಮಾನ್ಯ ಜನತೆಗೆ ದೊರಕಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನ ಕಾರ್ಯಕ್ರಮ ಹಾಕಿಕೊಂಡಿದೆ. ಆ ದಿಶೆಯಲ್ಲಿ ಈ ಹೊತ್ತಿಗೆ ಒಂದೆರಡು ಗ್ರಂಥಗಳೂ ಹೊರಬಂದಿವೆ. ಗಾಂಧೀಜಿಯವರ ಸಾಚಾ ಅನುಯಾಯಿಗಳಾದ ಶ್ರೀ ತೆಂಡೂಲ್ಕರ್ ಅವರ "ಮಹಾತ್ಮ" ಎಂಬ ಗ್ರಂಥದ ಎಂಟು ಸಂಪುಟಗಳೂ ಇಷ್ಟರಲ್ಲಿಯೇ ಹೊರಗೆ ಬರಲಿವೆ. ಗಾಂಧೀಜೀಯವರ ಲೇಖನ ಭಾಷಣಗಳನ್ನೇ ಹೆಚ್ಚಾಗಿ ಬಳಸಿಕೊಂಡು ರಚನೆಗೊಂಡಿರುವ ಕೃತಿಯಿದು. ಪ್ರತಿಯೊಂದು ಪುಟದಲ್ಲಿಯೂ ಗಾಂಧೀಜಿ ಓದುಗರೊಡನೆ ಸಂಭಾಷಿಸುತ್ತಿರುವಂತೆ ತೋರುತ್ತದೆ. ಅನೇಕ ನುರಿತ ಅರಿತ ವಿದ್ವಾಂಸರು ಭಾಷಾಂತರ ಮಾಡಿದ್ದರೂ ಈ ಕಾರ್ಯ ಎಷ್ಟು ಕಷ್ಟಕರವಾದದ್ದೆನ್ನುವ, ಜವಾಬ್ದಾರಿಯುತವಾದದ್ದೆನ್ನುವ ವಿಚಾರ ಈ ಸಂಪುಟಗಳನ್ನೋದಿದವರಿಗೆ ಅರ್ಥವಾಗದಿರದು. "ಮಹಾತ್ಮ" ಗ್ರಂಥದ ಕನ್ನಡ ಮುದ್ರಣದ ಪ್ರಕಟನೆಯ ಜತೆಜತೆಗೆ 'Last Phase' ಎಂಬ ಪ್ಯಾರಿಲಾಲರ ಗ್ರಂಥದ ಭಾಷಾಂತರವನ್ನೂ ಪ್ರಕಟಿಸಲಾಗುತ್ತದೆ. ಮಾಜಿ ವಿದ್ಯಾ ಸಚಿವರಾದ ಶ್ರೀಮಾನ್ ಕೆ. ವಿ. ಶಂಕರಗೌಡರು ಆ ಗ್ರಂಥದ ಭಾಷಾಂತರ ಕಾರ್ಯದಲ್ಲಿ ತೊಡಗಿದ್ದಾರೆ. ಇಷ್ಟೆಲ್ಲ ಯೋಜನೆಯ ಯಶಸ್ಸಿಗೆ ಕಾರಣರಾದವರು ದಕ್ಷ ನಿರ್ದೇಶಕರಾದ ಡಾ. ತಿಪ್ಪೇರುದ್ರಸ್ವಾಮಿಗಳು. ಇವರಿಗೆಲ್ಲ ನಾನು ವಿಶ್ವವಿದ್ಯಾನಿಲಯದ ಪರವಾಗಿ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

ಕುಲಪತಿ ಭವನ
೨೪-೪-೧೯೭೪

ದೇ. ಜವರೇಗೌಡ

ಕನ್ನಡಕೃತಿ, ಕೃತಜ್ಞತೆ

ಶ್ರೀ ತೆಂಡುಲ್ಕರ್ ಅವರಿಂದ ಇಂಗ್ಲೀಷಿನಲ್ಲಿ ರಚಿತವಾದ ‘ಮಹಾತ್ಮ’ ಗ್ರಂಥದ ಎಂಟೂ ಸಂಪುಟಗಳನ್ನು ಕನ್ನಡಕ್ಕೆ ತರುವ ಬೃಹದ್‌ಯೋಜನೆಯ ಅಂಗವಾಗಿ ಈಗ ಮೊದಲ ಸಂಪುಟ ಪ್ರಕಟವಾಗುತ್ತಿದೆ. ಮಿತ್ರರಾದ ಶ್ರೀ ಜಿ. ವಿ. ನಾರಾಯಣಮೂರ್ತಿ ಅವರು ಈ ಯೋಜನೆಯನ್ನು ಗಾಂಧೀಭವನ ಕೈಗೆತ್ತಿಕೊಳ್ಳಬಹುದೆಂಬ ಸೂಚನೆಯನ್ನು ಮೊದಲು ಕೊಟ್ಟಾಗ ಅದನ್ನು ಅಳುಕುತ್ತಲೇ ನಮ್ಮ ಕುಲಪತಿಗಳಾದ ಪ್ರೊ. ದೇ. ಜವರೇಗೌಡ ಅವರ ಮುಂದಿಟ್ಟೆ. ಅದು ಅವರಿಗೂ ಹಿಡಿಸಿತು. ಅವರ ಮನಸ್ಸಿಗೆ ಒಮ್ಮೆ ಬಂದಿತೆಂದರೆ ಆ ಕೆಲಸ ಆದಂತೆಯೇ. ಅವರ ಪ್ರಯತ್ನದ ಫಲವಾಗಿ ಈ ಯೋಜನೆಗೆ ಪ್ರಾರಂಭದ ಧನಸಹಾಯವೂ ಲಭಿಸಿ ಇದು ಕಾರ್ಯಗತವಾಗಲು ಸಾಧ್ಯವಾಯಿತು. ಈಗ ಮೊದಲ ಸಂಪುಟ ಪ್ರಕಟವಾಗುತ್ತಿದೆ. ಎರಡನೆಯ ಸಂಪುಟ ಅಚ್ಚಿನಲ್ಲಿದೆ. ಇನ್ನು ಎರಡು ಮೂರು ವರ್ಷಗಳಲ್ಲಿ ಎಲ್ಲ ಸಂಪುಟಗಳನ್ನೂ ಹೊರತರುವ ಆಶಯವನ್ನು ಗಾಂಧೀಭವನ ತಳೆದಿದೆ. ಇಂತಹ ಒಂದು ಮಹತ್ತರವಾದ ಕಾರ್ಯ, ಗಾಂಧೀ ಭವನದಿಂದ ನಡೆಯಲು ಸಾಧ್ಯವಾದುದಕ್ಕೆ ಕುಲಪತಿಗಳ ಸಾಹಸವೇ ಕಾರಣ. ಅವರು ಕೈಕೊಂಡ ಮಹತ್ಕಾರ್ಯಗಳಲ್ಲಿ ಇದೂ ಒಂದೆಂದು ನಂಬಿದ್ದೇನೆ. ಗಾಂಧೀ ಭವನಕ್ಕೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ, ಮತ್ತು ಈ ಗ್ರಂಥಕ್ಕೆ ವಿಚಾರಪೂರಿತವಾದ ಮುನ್ನುಡಿಯನ್ನು ಬರೆದುಕೊಟ್ಟುದಕ್ಕಾಗಿ ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಗಾಂಧೀಭವನದ ಪ್ರಕಟನ ಸಮಿತಿ ತುಂಬಾ ಉಪಯುಕ್ತವಾದ ಸಲಹೆಗಳನ್ನಿತ್ತು ಮಾರ್ಗದರ್ಶನ ಮಾಡಿದೆ. ಒಂದೊಂದು ಸಂಪುಟವನ್ನು ಮೂರು ಜನ ಭಾಷಾಂತರಕಾರರಿಗೆ ವಹಿಸಬೇಕೆಂದು ಅಲ್ಲಿ ತೀರ್ಮಾನಿಸಲಾಯಿತು. ಅಂತೆಯೇ ಮೊದಲನೆಯ ಸಂಪುಟವನ್ನು ಶ್ರೀಗಳಾದ ಜಿ. ವಿ. ನಾರಾಯಣಮೂರ್ತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಪ್ರಭುಶಂಕರ—ಇವರಿಗೆ ವಿಭಾಗಿಸಿಕೊಡಲಾಯಿತು.

ಪ್ರಾರಂಭದಿಂದ ಹಿಡಿದು ‘ಮತ್ತೆ ಲಂಡನ್ನಿಗೆ’ ಎನ್ನುವ ಭಾಗವೂ ಸೇರಿದಂತೆ ಈ ಗ್ರಂಥದ ಮೊದಲ ೧೬೪ ಪುಟಗಳನ್ನು ಶ್ರೀ ಜಿ. ವಿ. ನಾರಾಯಣಮೂರ್ತಿ ಅವರು ಭಾಷಾಂತರಿಸಿದ್ದಾರೆ.

‘ಹಿಂದ್ ಸ್ವರಾಜ್’ದಿಂದ ‘ಹೊಸ ಹುಮ್ಮಸ್ಸು’ ಅಂದರೆ ಪುಟ ೧೬೬ರಿಂದ ೩೩೨ರ ವರೆಗೆ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅನುವಾದಿಸಿದ್ದಾರೆ.

ಮೂರನೆಯ ಭಾಗ ‘ರೈತರು ಮತ್ತು ಕಾರ್ಮಿಕರೊಡನೆ’ ಎನ್ನುವುದರಿಂದ ಹಿಡಿದು ಕೊನೆಯವರೆಗೆ,—ಇದರ ಅನುವಾದಕರು ಶ್ರೀ ಪ್ರಭುಶಂಕರ ಅವರು.

ಸಾಧ್ಯವಾದಷ್ಟು ಮಟ್ಟಿಗೆ ಭಾಷೆಯ ಏಕರೂಪತೆಯನ್ನು ಕಾಯ್ದುಕೊಳ್ಳುವುದರತ್ತ ಗಮನವಿತ್ತು ಭಾಷಾಂತರದಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿರುವುದರ ಹೊರತಾಗಿ, ಭಾಷಾಂತರಕಾರರ ಭಾಷೆಯನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಭಾಷಾಂತರಕಾರರು ತುಂಬಾ ಶ್ರದ್ಧೆಯಿಂದ ಈ ಕೆಲಸವನ್ನು ನಿರ್ವಹಿಸಿಕೊಟ್ಟಿದ್ದಾರೆ. ಅವರಿಗೆ ವಂದನೆಗಳು.

ಇದನ್ನು ಕನ್ನಡದಲ್ಲಿ ಪ್ರಕಟಿಸಲು ಒಪ್ಪಿಗೆಯನ್ನಿತ್ತ, ಭಾರತ ಸರ್ಕಾರದ ಪ್ರಕಟನ ಶಾಖೆ ಮತ್ತು 'ನವಜೀವನ ಟ್ರಸ್ಟ್'ಗಳಿಗೂ, ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಚ್. ನರಸಣ್ಣ ಮತ್ತು ಅವರ ಸಿಬ್ಬಂದಿವರ್ಗದವರಿಗೂ, ಒಂದಲ್ಲ ಒಂದು ರೀತಿಯಲ್ಲಿ ನೆರವಾದ ಇತರ ಎಲ್ಲರಿಗೂ ಕೃತಜ್ಞತೆ ಸಲ್ಲಬೇಕು.

ಗಾಂಧೀ ಭವನ
25–4–74

ಎಚ್. ತಿಪ್ಪೇರುದ್ರಸ್ವಾಮಿ
ಗೌರವ ನಿರ್ದೇಶಕ

ಪರಿವಿಡಿ

ಮುನ್ನುಡಿ

ಗಾಂಧೀಜಿ ಕಾಲವಶರಾಗಿ ಹತ್ತಿರ ಹತ್ತಿರ ಮೂರುವರೆ ವರ್ಷಗಳು ಕಳೆದಿವೆ. ಅವರ ಸಾವು ಒಂದು ವಿಸ್ಮಯಕಾರಿ ಬದುಕಿಗೆ ಶಿಖರಪ್ರಾಯ ಹಾಗೂ ಪರಿಪೂರ್ಣ ಪರಾಕಾಷ್ಠೆಯೂ ಆಯಿತು. ಅವರು ಇನ್ನೂ ಜೀವಂತರಾಗಿದ್ದಾಗಲೇ ಅವರ ಬಗೆಗೆ ಅಸಂಖ್ಯ ಕಥೆಗಳೂ ಮತ್ತು ಐತಿಹ್ಯಗಳೂ ಹುಟ್ಟಿಕೊಂಡಿದ್ದುವು; ಈಗಂತೂ ಅವರೊಬ್ಬ ಪೌರಾಣಿಕ ವ್ಯಕ್ತಿಯಾಗಿ ಕಂಡುಬಂದು, ಭಾರತದ ಋಷಿಗಳ ಮಹಾ ಪುರುಷರ ಮತ್ತು ಜ್ಞಾನಿಗಳ ಮಹಾ ಪರಂಪರೆಗೆ ಸೇರಿಹೋಗಿದ್ದಾರೆ. ಮುಂದೆ ಬರುವ ಪೀಳಿಗೆಗಳಿಗೆ ಅವರು ಒಂದು ಹೆಸರು ಮಾತ್ರ; ಪೂಜಾರ್ಹವಾದ ಒಂದು ಹೆಸರೆನಿಸಿದರೂ ಅದೊಂದು ಬರಿಯ ಹೆಸರೇ. ಇನ್ನು ಕೆಲವು ವರ್ಷಗಳಲ್ಲಿ ಅವರೊಂದಿಗೆ ವೈಯಕ್ತಿಕ ಸಂಪರ್ಕ ಹೊಂದಿದ್ದು, ಅವರ ಉಜ್ವಲ, ತೇಜಸ್ವೀ, ಭವ್ಯ ವ್ಯಕ್ತಿತ್ವದ ಅನುಭವ ಹೊಂದಿದ್ದ ಬಹಳ ಮಂದಿ ಬದುಕಿರಲಾರರು. ಆಗ ಐತಿಹ್ಯಗಳು ಬೆಳೆದು, ಎಷ್ಟೋ ಆಕಾರಗಳನ್ನು ತಾಳುತ್ತವೆ; ಅನೇಕ ವೇಳೆ ಅವುಗಳ ಹಿಂದೆ ಸತ್ಯಾಂಶ ಇಲ್ಲದಿರಲೂ ಬಹುದು. ಮುಂದಿನ ಸಂತತಿಗಳ ಜನ ಅವರನ್ನು ನೆನಪು ಮಾಡಿಕೊಂಡು ಗೌರವಭಾವ ಸಲ್ಲಿಸುತ್ತಾರೆ. ಭಾರತದ ಸಂಪ್ರದಾಯದಂತೆ ನಮ್ಮ ದೇವತೆಗಳ ಗುಂಪಿಗೆ ಅವರನ್ನು ಸೇರಿಸಿ, ಅವರ ಜನ್ಮ ದಿನವನ್ನೂ ಪುಣ್ಯದಿನವನ್ನೂ ಆಚರಿಸುತ್ತಾರೆ. ಅವರ ಹೆಸರನ್ನು ಕೇಳಿದಾಗ ಜಯಘೋಷ ಮಾಡಿ, ಅದರಿಂದ ನಮ್ಮ ಕರ್ತವ್ಯಸಲ್ಲಿಸಿದೆವೆಂಬ ಸ್ವಲ್ಪ ಹಿಗ್ಗನ್ನೂ ಪಡೆದು ಕೊಳ್ಳುತ್ತಾರೆ.

ದೇವತೆಗಳಾರಾದರೂ ಇರುವರೋ, ಇಲ್ಲವೊ ನಾನರಿಯೆ; ನನಗೆ ಅವರ ಬಗೆಗೆ ಆಸಕ್ತಿಯೂ ಇಲ್ಲ. ಆದರೆ ಕೆಲವು ಗುಣಗಳಿರುವುದಂತೂ ನಿಜ. ಅವು ಮಾನವನನ್ನು ಸಾಮಾನ್ಯ ಜನಜಂಗುಳಿಯಿಂದ ಮೇಲೇರಿಸಿ, ಅವನು ಭಿನ್ನವಾದ ಮೃತ್ತಿಕೆಯಿಂದ ಸೃಷ್ಟಿಯಾದವನೋ ಎಂದು ಗೋಚರಿಸುವಂತೆ ಮಾಡುತ್ತವೆ. ಮಾನವಕುಲದ ಸುದೀರ್ಘ ಕಥೆಯನ್ನು ಅನೇಕ ದೃಷ್ಟಿಗಳಿಂದ ಪರಿಗಣಿಸ ಬಹುದು; ಅದು ಮಾನವನ ಮತ್ತು ಅವನ ಚೈತನ್ಯದ ಮುನ್ನಡೆ ಹಾಗೂ ಬೆಳವಣಿಗೆಗಳ ಕಥೆ ಎನ್ನಬಹುದು; ಅದು ದುಃಖ ದುರಂತಗಳಿಂದ ತುಂಬಿದ ಕಥೆಯೂ, ಸ್ತ್ರೀಪುರುಷರ ಸಾಮೂಹಿಕ ವಿಪ್ಲವ ಮತ್ತು ಆಂದೋಲನಗಳ ಕಥೆಯೂ ಆಗಿದೆ; ಅದು ಆ ಜನಸಮುದಾಯಗಳ ಚಳವಳಿಗಳಿಗೆ ಭಾವವನ್ನೂ ರೂಪವನ್ನೂ ಕೊಟ್ಟ ಪ್ರಮುಖ ಮಹಾ ವ್ಯಕ್ತಿಗಳ ಕಥೆಯೂ ಆಗಿದೆ.

ಆ ಕಥೆಯಲ್ಲಿ ಗಾಂಧೀ ಸರ್ವೋತ್ಕೃಷ್ಟ ಸ್ಥಾನವನ್ನು ಪಡೆದಿದ್ದಾರೆ; ಹಾಗೆಯೇ ಮುಂದೆಯೂ ಪಡೆದಿರುತ್ತಾರೆ. ಅವರ ಬಗೆಗೆ ಯಥಾರ್ಥವಾಗಿ ನಿರ್ಣಯಿಸಲು ನಾವು ತೀರ ಸಮೀಪದಲ್ಲಿದ್ದೇವೆ. ನಮ್ಮಲ್ಲಿ ಕೆಲವರು ಅವರೊಡನೆ ನಿಕಟ ಬಾಂಧವ್ಯ ಹೊಂದಿದ್ದು, ಅವರ ಉದಾತ್ತ ಹಾಗೂ ಪ್ರೇಮಮಯ ವ್ಯಕ್ತಿತ್ವ ದಿಂದ ಪ್ರಭಾವಿತರಾಗಿದ್ದೆವು. ಅವರು ನಮ್ಮ ಜೀವನದ ಒಂದು ಭಾಗವೇ ಆಗಿದ್ದರು; ಅವರು ಕಣ್ಮರೆಯಾದುದರಿಂದ ನಮಗೆ ಅತೀವ ವಿಷಾದವೆನಿಸಿದೆ. ನಮ್ಮ ವೈಯಕ್ತಿಕ ಸಂಬಂಧ ಅತ್ಯಂತ ಗಾಢವಾಗಿರುವುದರಿಂದ, ಅವರ ಗುಣ ವಿಮರ್ಶೆ ಮಾಡಲು, ಅದೊಂದು ಆತಂಕವೇ ಆಗಿವೆ. ಆದರೆ ಇಷ್ಟು ಗಾಢವಾಗಿ ಅರಿಯದಿದ್ದವರಿಗೆ, ಶಾಂತಿಯಿಂದ ಕೂಡಿದ ನಮ್ರತೆಯು ಆ ವ್ಯಕ್ತಿಯಲ್ಲಿದ್ದ ಜೀವಂತಜ್ಯೋತಿಯ ಪೂರ್ಣಾನುಭವವನ್ನು ಹೊಂದಲು ಬಹುಶಃ ಸಾಧ್ಯವಾಗ ಲಾರದು. ಹೀಗಾಗಿ ಈ ಎರಡು ಬಗೆಗಳವರಿಗೂ ಯುಕ್ತ, ಯಥಾರ್ಥ ದೃಷ್ಟಿ ಅಥವಾ ಜ್ಞಾನವು ಇಲ್ಲವಾಗಿದೆ. ಇಂದಿನ ಸಮಸ್ಯೆಗಳು ಮತ್ತು ಸಂಘರ್ಷಗಳನ್ನು ಕುರಿತು ಚಿಂತಿಸುವ ಭವಿಷ್ಯದ ಇತಿಹಾಸಕಾರನಿಗೂ ಆ ಯಥಾರ್ಥ ದೃಷ್ಟಿ ಬಂದೀತೋ ಇಲ್ಲವೋ ನಾನರಿಯೆ. ಆದರೆ ಈ ಪ್ರಚಂಡ ವ್ಯಕ್ತಿ ಅನತಿ ದೂರದ ಭವಿಷ್ಯದಲ್ಲಿ ಹೇಗೋ ದೂರದ ಭವಿಷ್ಯದಲ್ಲಿಯೂ ಹಾಗೆಯೇ ಗೌರವಾದರಗಳನ್ನು ತಪ್ಪದೆ ಹೊಂದುವರೆಂಬ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ. ಯಾವ ಸಂದೇಶ ಅವರಲ್ಲಿ ಮೂರ್ತಸ್ವರೂಪವಾಗಿದ್ದಿತೋ ಅದು ಮುಂದೆ ಬರುವ ವರ್ಷಗಳಲ್ಲಿ ಇಂದಿಗಿಂತ ಹೆಚ್ಚು ಗ್ರಹಿಸಲ್ಪಟ್ಟು ಅನುಷ್ಠಾನದಲ್ಲಿ ಬಂದೀತು. ಆ ಸಂದೇಶ ಯಾವುದೇ ಒಂದು ದೇಶ ಅಥವಾ ಜನಸಮುದಾಯಕ್ಕೆ ಸೀಮಿತವಾಗಿರಲಿಲ್ಲ. ಅದರ ಸತ್ಯ ಎಲ್ಲ ದೇಶಗಳಿಗೂ ಮತ್ತು ಸಮಗ್ರ ಮಾನವತೆಗೂ ಅನ್ವಯಿಸುವಂಥ ದಾಗಿದ್ದಿತು. ಅವರು ತಮ್ಮ ಸಮಕಾಲೀನ ಭಾರತದ ಕೆಲವು ಅಂಶಗಳನ್ನು ಒತ್ತಿ ಹೇಳಿರಬಹುದು. ಅವು ಕಾಲ ಮತ್ತು ಪರಿಸ್ಥಿತಿ ಪರಿವರ್ತನೆಯಾದಂತೆ ಹೆಚ್ಚು ಪ್ರಭಾವವಿಲ್ಲದೆ ಹೋಗಬಹುದು. ಆದರೆ ಅವರ ಸಂದೇಶದ ತಿರುಳು, ಕಾಲ ದೇಶಗಳಿಂದ ಬಂಧಿತವಾಗಿರಲಿಲ್ಲ. ಇದು ವಾಸ್ತವವಾಗಿಸ್ವ ಪಕ್ಷದಲ್ಲಿ ಶಾಶ್ವತವಾಗಿ ಉಳಿದು ಮಾನವನ ಅರಿವಿನಲ್ಲಿ ಬೆಳೆಯುತ್ತದೆ.

ಗಾಂಧೀಜಿ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು. ಆ ಕಾರ್ಯದಲ್ಲಿ, ಆ ಕಾಲಕ್ಕೆ ನಮಗೆ ಅತ್ಯಂತ ಮುಖ್ಯವಾದ ಅನೇಕ ವಿಷಯಗಳನ್ನು ಕಲಿಸಿದರು ನಾವು ಭಯ ಮತ್ತು ದ್ವೇಷ ಭಾವವನ್ನು ವರ್ಜಿಸಬೇಕೆಂದೂ, ಒಗ್ಗಟ್ಟು, ಸಮತೆ ಮತ್ತು ಭ್ರಾತೃಭಾವದಿಂದ ಕೂಡಿರಬೇಕೆಂದೂ ದಲಿತರಾದವರನ್ನು ಮೇಲಕ್ಕೆತ್ತ ಬೇಕೆಂದೂ ಬೋಧಿಸಿದರು. ಶ್ರಮಗಾಂಭೀರ್ಯವನ್ನೂ ಆಧ್ಯಾತ್ಮದ ಪರಮ ಪ್ರಧಾ ನತೆಯನ್ನೂ ನಮಗೆ ಅರುಹಿದರು. ಎಲ್ಲಕ್ಕಿಂತ ಮಿಗಿಲಾಗಿ, ನಮ್ಮ ಎಲ್ಲ ಚಟು ವಟಿಕೆಗಳಲ್ಲಿಯೂ ಇರಬೇಕಾದ ಸತ್ಯಸಂಧತೆಯ ವಿಷಯವಾಗಿ ಎಡೆಬಿಡದೆ ಬೋಧಿ

ಸಿದರು; ವಿಪುಲವಾಗಿ ಬರೆದರು. ಅವರು ತಮ್ಮ ಪಾಲಿಗೆ ಸತ್ಯವೇ ದೇವರೆಂದೂ ದೇವರೇ ಸತ್ಯವೆಂದೂ ಪದೇ ಪದೇ ನುಡಿದರು. ಇದನ್ನು ಕೇಳಿದ ಪಂಡಿತರು ಹುಬ್ಬೇರಿಸಬಹುದು; ತಾತ್ವಿಕರೂ ಮತ್ತು ಸಿನಿಕರೂ 'ಸತ್ಯವೆಂದರೆ ಏನು?' ಎಂಬ ಹಳೆಯ ಪ್ರಶ್ನೆಯನ್ನೇ ಕೇಳಬಹುದು. ಆ ಪ್ರಶ್ನೆಗೆ ನಂಬಿಕೆಯಿಂದ ಉತ್ತರ ನೀಡುವ ಧೈರ್ಯವುಳ್ಳವರು ನಮ್ಮಲ್ಲಿ ಇಲ್ಲವೆಂದೇ ಹೇಳಬಹುದು. ಅಲ್ಲದೆ ಅದಕ್ಕೆ ಉತ್ತರವೂ ಅನಂತಮುಖವಾಗಿದ್ದು, ನಮ್ಮ ಪರಿಮಿತ ಬುದ್ಧಿ ಅದನ್ನು ಗ್ರಹಿಸಲಾರದು. ನಮ್ಮ ಮನಸ್ಸು ಎಷ್ಟೇ ಪರಿಮಿತಿಯಲ್ಲಿ ಕೆಲಸಮಾಡಿದರೂ ಮತ್ತು ಅಂತಃಸ್ಫೂರ್ತಿಯ ಸಾಮರ್ಥ್ಯ ಎಷ್ಟೇ ಪರಿಮಿತವಾದರೂ ನಮ್ಮಲ್ಲಿ ಪ್ರತಿಯೊಬ್ಬನೂ ಅವನವನು ಕಾಣುವಂತೆ, ಸತ್ಯದ ಸೀಮಿತ ಕಲ್ಪನೆಯನ್ನು ಹೊಂದಿರಲು ಸಾಧ್ಯವೆಂದು ನಾನು ಭಾವಿಸುತ್ತೇನೆ. ಪರಿಣಾಮ ಏನಾದೀತೆಂದು ಲೆಕ್ಕಿಸದೆ ಸ್ವತಃ ಕಲ್ಪನೆಯ ಭ್ರಮೆಯೆಂದು ಭಾವಿಸುವ ವಸ್ತುವಿನೊಂದಿಗೆ, ತಾನೇ ರಾಜಿಮಾಡಿಕೊಳ್ಳಲು ಯತ್ನಿಸದೆ ಅವನು ಕಾರ್ಯೋನ್ಮುಖನಾಗುವನೇ? ಯೋಗ್ಯವಾದ ಗುರಿಯ ಅನ್ವೇಷಣೆ ಮಾಡುವಾಗಲೂ ಅದನ್ನು ಸಾಧಿಸುವ ಸಲುವಾಗಿ ಸಾಧನದೊಂದಿಗೆ ರಾಜಿಮಾಡಿಕೊಳ್ಳುವನೆ? ಸಾಧನವನ್ನು ಗುರಿಗೆ ಅಧೀನ ಮಾಡುವನೇ?

ಇವುಗಳಿಗೆಲ್ಲ ಒಂದೇ ಉತ್ತರವಿದೆಯೆಂಬ ರೀತಿಯಲ್ಲಿ ಭಾಷಾ ಚಾತುರ್ಯದಿಂದ ಪ್ರಶ್ನೆಗಳನ್ನು ರಚಿಸುವುದು ಸುಲಭ. ಆದರೆ ಜೀವನ ಬಹಳ ಜಟಿಲವಾದುದು. ಅದು ಒಡ್ಡುವ ಸವಾಲುಗಳು ಎಂದಿಗೂ ಸುಲಭವಲ್ಲ. ಬಹುಶಃ ಒಬ್ಬ ವ್ಯಕ್ತಿ ತಾನೇ ತಾನಾಗಿ ಏಕಾಂತ ಜೀವನ ನಡೆಸುತ್ತಾ, ತನ್ನ ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದರಲ್ಲಿ ತಕ್ಕಮಟ್ಟಿಗೆ ಯಶಸ್ಸನ್ನು ಪಡೆಯುವಂತೆ ಶ್ರಮಿಸಬಹುದು. ಆದರೆಅವನು ತನ್ನ ಕ್ರಿಯೆಗಳೇ ಅಲ್ಲದೆ ಇನ್ನೂ ಅನೇಕ ಮಂದಿಯ ಬಗೆಗೆ ಆಸಕ್ತಿ ವಹಿಸಿದ್ದಾಗ, ವಿಧಿ ಅಥವಾ ಪರಿಸ್ಥಿತಿ ಇತರರನ್ನು ರೂಪಿಸಿ, ಅವರಿಗೆ ಮಾರ್ಗದರ್ಶನ ಮಾಡುವ ಸ್ಥಾನದಲ್ಲಿ ಅವನನ್ನು ಇಟ್ಟಿದ್ದಾಗ, ಅವನ ವರ್ತನೆ ಹೇಗಿರಬೇಕು? ಜನತೆಯ ನಾಯಕ ಹೇಗೆ ಕ್ರಿಯಾನಿರತನಾಗಬೇಕು? ಅವನು ನಾಯಕನಾದರೆ, ಮಾರ್ಗದರ್ಶನ ಮಾಡಬೇಕು, ಕೇವಲ ಜನಜಂಗುಳಿಯ ಆಜ್ಞೆಯಂತೆ ವರ್ತಿಸಬಾರದು. ಆದರೆ ಇಂದು ಪ್ರಜಾಪ್ರಭುತ್ವದ ಕ್ರಿಯಾತ್ಮಕ ಸ್ವರೂಪವು, ಕೆಲವು ಆಧುನಿಕ ಕಲ್ಪನೆಗಳ ಪ್ರಕಾರ, ಬಹುಮತಕ್ಕೆ ಮಣಿಯಬೇಕೆಂಬುದನ್ನು ಸೂಚಿಸುವಂತೆ ಕಂಡುಬರುತ್ತದೆ. ನಾಯಕ ಈ ರೀತಿ ಮಾಡಿದರೆ, ಅವನು ನಾಯಕನಾಗಿ ಉಳಿಯಲಾರ; ಇತರರನ್ನು ಮಾನವ ಪ್ರಗತಿಯ ಸರಿಯಾದ ಪಥದಲ್ಲಿ ದೂರ ಒಯ್ಯಲಾರ. ಅವನು ಏಕಾಂಗಿಯಾಗಿ ತಾನು ಕಂಡ ಬೆಳಕಿಗೆ ತಕ್ಕಂತೆ ನಡೆದರೆ ಯಾರನ್ನು ಮುಂದೆ ಒಯ್ಯಬೇಕೆಂದು ಶ್ರಮಿಸುವನೋ ಅವರಿಂದಲೇ ಪ್ರತ್ಯೇಕನಾದಂತಾಗುತ್ತದೆ. ಅವನು ಇತರರ ತಿಳಿವಳಿಕೆಯ ಮಟ್ಟಕ್ಕೆ

ತನ್ನನ್ನು ಇಳಿಸಿಕೊಂಡರೆ, ತಾನೂ ಕೆಳಕ್ಕೆ ಇಳಿದಂತೆ ಆಗುತ್ತದೆ; ತನ್ನ ಆದರ್ಶಕ್ಕೆ ಅಪ್ರಾಮಾಣಿಕನಾಗಿ ಸತ್ಯವನ್ನು ರಾಜಿಗೆ ಗುರಿಪಡಿಸಿದಂತಾಗುತ್ತದೆ. ಒಮ್ಮೆ ಇಂಥ ರಾಜಿಕ್ರಿಯೆ ಆರಂಭವಾದರೆ ಸಾಕು, ಅದಕ್ಕೆ ಕೊನೆಯಿಲ್ಲದೆ ಹೋಗುತ್ತದೆ; ಅದು ಕೃತ್ರಿಮದ ಪಥವಾಗುತ್ತದೆ. ಹೀಗಿರುವಾಗ ಅವನ ವರ್ತನೆ ಹೇಗಿರಬೇಕು? ಅವನೊಬ್ಬನಿಗೇ ಸತ್ಯದ ಅಥವಾ ಅದರ ಕೆಲವು ಅಂಶಗಳ ಗ್ರಹಿಕೆಯಾದರೆ ಸಾಲದು. ಇತರರೂ ಅದನ್ನು ಗ್ರಹಿಸುವಂತೆ ಮಾಡುವುದರಲ್ಲಿ ಅವನು ಯಶಸ್ವಿಯಾಗಬೇಕು.

ಸಾಮಾನ್ಯವಾದ ಜನನಾಯಕ, ಅದರಲ್ಲಿಯೂ ಒಂದು ಪ್ರಜಾಸತ್ತಾತ್ಮಕ ಸಮಾಜದಲ್ಲಿ, ತನ್ನ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಾ ಹೋಗಬೇಕು; ಹಾಗೆಯೇ ಎರಡು ಕೆಡಕುಗಳಲ್ಲಿ ಯಾವುದು ಕಡಮೆಯೋ ಅದನ್ನು ಅವನು ಆರಿಸಿಕೊಳ್ಳಬೇಕು. ಆದರೆ ಈ ವಿಧಾನದಲ್ಲಿ ನಡೆಯುತ್ತಾ ಹೋದರೆ ಆ ಬಗೆಯ ಹೊಂದಾಣಿಕೆಯಿಂದ, ಮೂಲ ಆದರ್ಶಕ್ಕೂ ಮತ್ತು ಗುರಿಗೂ ಅಪಾಯ ಬರುವ ಸಂದರ್ಭಗಳು ಜನಿಸುತ್ತವೆ. ಈ ಪ್ರಶ್ನೆಗೆ ಸ್ಪಷ್ಟವಾದ ಉತ್ತರವಿಲ್ಲವೆಂದು ನನ್ನ ಭಾವನೆ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಮತ್ತು ಪ್ರತಿಯೊಂದು ತಲೆಮಾರೂ ತನ್ನ ಉತ್ತರವನ್ನು ತಾನೇ ಕಂಡುಕೊಳ್ಳಬೇಕು.

ತಮ್ಮ ಕಲ್ಪನೆಯ ಆದರ್ಶಗಳಿಗೂ ಮತ್ತು ಸತ್ಯಕ್ಕೂ ತಪ್ಪದೆ ಪರಿಪೂರ್ಣವಾಗಿ ಗಾಂಧೀಜಿ ನಡೆದುಕೊಂಡು ಬಂದುದು ಅತಿಶಯ ಆಶ್ಚರ್ಯವೇ ಸರಿ. ಆದರೂ ಆಗಾಗ ಅವರು ಜನಸಮುದಾಯವನ್ನು ರೂಪಿಸಿ, ಜಾಗೃತಗೊಳಿಸುವುದರಲ್ಲಿ ಯಶಸ್ವಿಯಾದರು. ಅವರ ವರ್ತನೆ ಕಠೋರವಾಗಿರಲಿಲ್ಲ; ಅವರು ಸಂದರ್ಭದ ಅಗತ್ಯಗಳಿಗೆ ಬಹಳ ಎಚ್ಚರವಾಗಿದ್ದು, ಪರಿವರ್ತಿತವಾಗುತ್ತಿದ್ದ ಪರಿಸ್ಥಿತಿಗಳಿಗೆ ತಮ್ಮನ್ನು ಹೊಂದಿಸಿಕೊಳ್ಳುತ್ತಿದರು. ಆದರೆ ಆ ಎಲ್ಲ ಹೊಂದಾಣಿಕೆಗಳೂ ಗೌಣ ವಿಷಯಗಳಿಗೆ ಮಾತ್ರ ಸಂಬಧಿಸಿರುತ್ತಿದ್ದುವು. ಮೂಲಭೂತ ವಿಷಯಗಳಿಗೆ ಸಂಬಂಧಿಸಿದಂತೆ ಅವರು ಎಂದೂ ಜಗ್ಗದೆ, ಬಂಡೆಯಂತೆ ಸ್ಥಿರವಾಗಿ ಇರುತ್ತಿದ್ದರು. ಯಾವುದನ್ನು ಕೆಡುಕು ಎಂದು ಅವರು ಪರಿಗಣಿಸುತ್ತಿದ್ದರೋ ಅದರ ಬಗೆಗೆ ರಾಜಿ ಸಾಧ್ಯವೇ ಇರಲಿಲ್ಲ. ಅವರು ಒಂದು ತಲೆಮಾರಿಗೂ ಹೆಚ್ಚಿನ ಕಾಲ ಜನತೆಯನ್ನು ರೂಪಿಸಿ, ಅವರನ್ನು ತಾತ್ಕಾಲಿಕವಾಗಿಯಾದರೂ ಮೇಲಕ್ಕೆ ಎತ್ತಿದರು. ಅದೊಂದು ಅದ್ಭುತ ಸಾಧನೆಯಾಗಿದ್ದಿತು.

ಆ ಸಾಧನೆ ಬಹುಕಾಲ ನಿಂತಿತೇ? ನಿಸ್ಸಂಶಯವಾಗಿ ಬಹುಕಾಲ ನಿಲ್ಲುವಂಥ ಪರಿಣಾಮಗಳನ್ನು ಆ ಸಾಧನೆ ಉಂಟುಮಾಡಿತು. ಆದರೂ ಅದರ ಹಿಂದೆ ಕೆಲವು ಪ್ರತಿಕ್ರಿಯೆಗಳೂ ಉಂಟಾಗಿವೆ. ಯಾವುದೋ ಪರಿಸ್ಥಿತಿಯ ಒತ್ತಡಕ್ಕೆ ಗುರಿಯಾಗಿ, ಸಾಮಾನ್ಯ ಮಟ್ಟದಿಂದ ಮೇಲಕ್ಕೆ ಎತ್ತಲ್ಪಟ್ಟ ಜನ, ಹಿಂದೆ ಇದ್ದುದಕ್ಕಿಂತಲೂ ಇನ್ನೂ ಕೆಳಮಟ್ಟಕ್ಕೆ ಮತ್ತೆ ಇಳಿಯುವ ಸಂಭವವುಂಟು. ಇಂದು ಇದು ಸಂಭವಿಸುತ್ತಿರುವುದನ್ನು ನಾವು ಕಾಣಬಹುದು. ಗಾಂಧೀಜಿಯ ಸುತಂತ

ಕೊಲೆಯಲ್ಲಿಯೇ ಅಂಥ ಪ್ರತಿಕ್ರಿಯೆಯನ್ನು ನಾವು ಕಂಡೆವು. ಗಾಂಧೀಜಿ ಯಾರ ಜೀವನಮಟ್ಟವನ್ನು ಮೇಲಕ್ಕೆ ಎತ್ತಬೇಕೆಂದು ತಮ್ಮ ಪೂರ್ಣಜೀವನವನ್ನು ವಿನಿಯೋಗಿಸಿದರೋ ಅವರು ಸಾರ್ವತ್ರಿಕವಾಗಿ ಕೆಳಗೆ ಇಳಿಯುತ್ತಿರುವುದು ಶೋಚನೀಯ. ಬಹುಶಃ ಇದೊಂದು ತಾತ್ಕಾಲಿಕ ಅವಸ್ಥೆ ಇರಬಹುದು. ಜನ ಇದರಿಂದ ಪಾರಾಗಿ ಮತ್ತೆ ತಮ್ಮ ನಿಜಸ್ಥಿತಿಯನ್ನು ಕಂಡುಕೊಳ್ಳುತ್ತಾರೆ. ಭಾರತೀಯರ ಪ್ರಜ್ಞೆಯ ಆಳದಲ್ಲಿ ಗಾಂಧೀಜಿಯ ಮೂಲ ಬೋಧೆಗಳು ಸ್ಥಿರವಾಗಿ ನಿಂತು, ರಾಷ್ಟ್ರೀಯ ಜೀವನದ ಮೇಲೆ ಪ್ರಭಾವ ಬೀರುವುವೆಂಬ ವಿಷಯದಲ್ಲಿ ನನಗೆ ಶಂಕೆಯೇ ಇಲ್ಲ.

ಗಾಂಧಿಯಷ್ಟೇ ದೊಡ್ಡವನಲ್ಲದ ಯಾವ ವ್ಯಕ್ತಿಯೂ ನಿಜವಾದ ಗಾಂಧೀ ಜೀವನ ಕುರಿತು ಬರೆಯಲು ಶಕ್ತನಾಗಲಾರ. ಆದುದರಿಂದ ಆತನ ನಿಜವಾದ ಹಾಗೂ ಯಥೋಚಿತವಾದ ಜೀವನ ಚರಿತ್ರೆಯನ್ನು ನಾವು ನಿರೀಕ್ಷಿಸಲಾರೆವು. ಗಾಂಧೀ ಜೀವನ ಕುರಿತು ಬರೆಯುವುದು ಕಷ್ಟವೇ ಹೌದು. ಆ ಜೀವನ, ಅರ್ಧ ಶತಮಾನಕ್ಕೂ ಮೇಲ್ಪಟ್ಟ ಕಾಲ ಭಾರತದ ಜೀವನದಲ್ಲಿ ಹಾಸುಹೊಕ್ಕಾಗಿರುವುದರಿಂದ, ಆ ಕಾರ್ಯ ಇನ್ನೂ ಹೆಚ್ಚಿನ ಕಷ್ಟದ ಕಾರ್ಯವಾಗುತ್ತದೆ. ಹೀಗಿದ್ದರೂ ಅನೇಕರು ಅವರ ಜೀವನಚರಿತ್ರೆ ಕುರಿತು ಬರೆಯಲು ಯತ್ನಿಸಿದರೆ ಅದು ಆ ಅಸಾಮಾನ್ಯ ಜೀವನದ ಯಾವುದೋ ಕೆಲವು ಅಂಶಗಳ ಮೇಲೆ ಬೆಳಕನ್ನು ಚೆಲ್ಲಲು ಸಾಧ್ಯವಾಗಿ, ಭಾರತದ ಇತಿಹಾಸದಲ್ಲಿ ಸ್ಮರಣೀಯವಾದ ಈ ಕಾಲದ ಬಗೆಗೆ ಇತರರಿಗೆ ಅಷ್ಟಿಷ್ಟು ಅರಿವನ್ನುಂಟುಮಾಡಿಕೊಡುವುದರಲ್ಲಿ ಯಶಸ್ವಿಯಾಗಬಹುದು.

ತೆಂಡುಲ್ಕರರು ಈ ಗ್ರಂಥವನ್ನು ಬರೆಯಲು ಬಹಳ ವರ್ಷಗಳ ಕಾಲ ಶ್ರಮಿಸಿದ್ದಾರೆ. ಅವರು ಗಾಂಧೀಜಿ ಬದುಕಿದ್ದಾಗಲೇ ಇದರ ಬಗೆಗೆ ನನಗೆ ತಿಳಿಸಿದ್ದರು. ಗಾಂಧೀಜಿಯ ಸಾವಿಗೆ ಕೆಲವು ತಿಂಗಳುಗಳ ಮುಂಚೆ ಅವರ ಸಲಹೆ ಕೇಳಿದ್ದುದೂ ನನಗೆ ನೆನಪಿದೆ. ಈ ಕೃತಿ ಅನೇಕ ವರ್ಷಗಳ ಅಗಾಧ ಶ್ರಮ ಮತ್ತು ಶ್ರದ್ಧೆಯ ಫಲ ಎಂಬುದನ್ನು ಯಾರುಬೇಕಾದರೂ ಕಾಣಬಹುದು. ಗಾಂಧೀಜಿಯ ಬಗೆಗೆ ನನಗೆ ಗೊತ್ತಿರುವ ಯಾವುದೇ ಒಂದು ಗ್ರಂಥ ಕೊಡುವ ಅಂಶಗಳನ್ನು ಮತ್ತು ವಿಷಯಗಳನ್ನು ಮೀರಿಸುವಂತೆ ಇದರಲ್ಲಿ ಒಟ್ಟಿಗೆ ಕೊಡಲಾಗಿದೆ. ಗ್ರಂಥಕರ್ತರ ವಿವರಣೆ ಮತ್ತು ಅಭಿಪ್ರಾಯಗಳ ಬಗೆಗೆ ನಾವು ಒಪ್ಪುವುದು, ಬಿಡುವುದು ಬೇರೆ ವಿಷಯ. ಇಲ್ಲಿ ಅಗಾಧ ಸಾಮಗ್ರಿ ದೊರಕುತ್ತದೆ. ಇದರಿಂದ ನಾವು ನಮ್ಮ ಸ್ವಂತ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಬಹುದು. ಆದುದರಿಂದ ಈ ಗ್ರಂಥವು, ಯಾವ ವ್ಯಕ್ತಿ ತನ್ನ ಕಾಲದ ತಲೆಮಾರಿನಲ್ಲಿ ಪರಮ ಪ್ರಧಾನನಾಗಿದ್ದನೋ ಅದರ ಬಗೆಗೂ ಮತ್ತು ಭಾರತದ ಇತಿಹಾಸದಲ್ಲಿ ಯಾವ ಕಾಲ ತನ್ನದೇ ಆದ ವಿಶಿಷ್ಟ ಪ್ರಾಮುಖ್ಯವನ್ನು ಹೊಂದಿದೆಯೋ ಅದರ ಬಗೆಗೂ

ಒಂದು ಮಹಾ ಮೌಲ್ಯದ ದಾಖಲೆಯಾಗಿದೆಯೆಂದು ನಾನು ಪರಿಗಣಿಸುತ್ತೇನೆ. ಇಂದು ನಾವು ದ್ವೇಷ ಮತ್ತು ಹಿಂಸೆ, ಅಂಜಿಕೆ ಮತ್ತು ರಾಗೋದ್ರೇಕ ಇವುಗಳಿಂದ ಛಿದ್ರವಾದ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆ. ಯುದ್ಧದ ಕರಾಳ ಛಾಯೆ ನಮ್ಮ ತಲೆಯ ಮೇಲೆ ದಟ್ಟವಾಗಿ ಹರಡಿನಿಂತಿದೆ. ಅಂಜಿಕೆ ಮತ್ತು ರಾಗೋದ್ರೇಕಗಳನ್ನು ವರ್ಜಿಸಬೇಕೆಂದೂ, ದ್ವೇಷ ಮತ್ತು ಹಿಂಸೆಗಳಿಂದ ದೂರ ಸರಿಯಬೇಕೆಂದೂ ಗಾಂಧೀಜಿ ನಮಗೆಲ್ಲ ಬೋಧಿಸಿದರು. ಇಂದಿನ ಕೂಗಾಟದ ತಳಮಳದಲ್ಲಿ ಅವರ ವಾಣಿ ಅನೇಕರಿಗೆ ಕೇಳಿಸದಿರಬಹುದು. ಆದರೆ ಈ ಜಗತ್ತು ನಾಗರಿಕ ರೂಪದಲ್ಲಿ ಉಳಿದು ಬಾಳಬೇಕಾದರೆ, ಒಂದಲ್ಲ ಒಂದು ದಿನ ಅದಕ್ಕೆ ಗಮನಕೊಟ್ಟು ಕೇಳಿ ಅದನ್ನು ಅರಿತುಕೊಳ್ಳಲೇಬೇಕಾಗುತ್ತದೆ.

ಕೆಲವರು ಗಾಂಧೀಜೀವನ ಕುರಿತು ಬರೆಯಬಹುದು; ಕೆಲವರು ಅವರ ಸಿದ್ಧಾಂತಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನೂ ಕುರಿತು ಚರ್ಚಿಸಿ, ಟೀಕಿಸಬಹುದು. ಆದರೆ ನಮ್ಮಲ್ಲಿ ಕೆಲವರಿಗೆ ಅವರು ಸಿದ್ಧಾಂತಕ್ಕಿಂತ ಭಿನ್ನವಾಗಿಯೇ ಉಳಿಯುತ್ತಾರೆ. ಅವರು ತೇಜೋಮಯರಾದ ಪ್ರೇಮಭರಿತ ವ್ಯಕ್ತಿಯಾಗಿದ್ದರು; ನಮ್ಮ ಸಾಮಾನ್ಯ ಬಾಳುಗಳಿಗೂ ಘನತೆ ನೀಡಿ, ಅವುಗಳಿಗೂ ಅಲ್ಪ ಸ್ವಲ್ಪ ಸಾರ್ಥಕತೆ ಬರುವಂತೆ ಮಾಡಿದರು. ಅವರ ಮರಣದಿಂದ ನಮ್ಮಲ್ಲಿ ಒಂದು ಬಗೆ ಶೂನ್ಯತೆಯ ಹಾಗೂ ನಾವು ಏಕಾಕಿಯಾದೆವೆಂಬ ಭಾವ ಉಳಿದಿದೆ. ಅವರ ಕಂಗಳು ಆಗಾಗ ನಗೆಚಿಮ್ಮುತ್ತಿದ್ದರೂ ಅವು ಅಂತವಿಲ್ಲದ ದುಃಖದ ಆಗರವೂ ಆಗಿದ್ದುವು. ಈ ಮಹಾಪುರುಷನ ಅನೇಕ ಚಿತ್ರಗಳು ನನ್ನ ಮನಸ್ಸಿನಲ್ಲಿ ಎದ್ದು ನಿಲ್ಲುತ್ತವೆ. ಆದರೆ ಕೈಯಲ್ಲಿ ಊರುಗೋಲು ಹಿಡಿದು, ೧೯೩೦ರಲ್ಲಿ ದಾಂಡಿಗೆ ಉಪ್ಪಿನ ಸತ್ಯಾಗ್ರಹ ಯಾತ್ರೆ ನಡೆಸಿದ ಅವರ ಚಿತ್ರ ನನಗೆ ಪ್ರಭಾವಯುತವೂ ಅರ್ಥಯುತವೂ ಆಗಿದೆ. ಆ ಯಾತ್ರಿಕ, ಮೌನಭರಿತನಾಗಿ, ಶಾಂತಿಭರಿತನಾಗಿ. ಸಂಕಲ್ಪಯುತನಾಗಿ, ನಿರ್ಭೀತನಾಗಿ, ನಡೆದಿದ್ದ ಸತ್ಯಾನ್ವೇಷಕನಾಗಿದ್ದ. ಅವನ ಅನ್ವೇಷಣೆ, ಅವನ ಯಾತ್ರೆ, ಪರಿಣಾಮಗಳನ್ನು ಲೆಕ್ಕಿಸದೆ ಸಾಗಿದ್ದಿತು.

ಪಹಲ್ಗಾಮ್, ಕಾಶ್ಮೀರ
ಜೂನ್ ೩೦, ೧೯೫೧

ಜವಾಹರಲಾಲ್ ನೆಹರೂ

ಹೊಸ ಆವೃತ್ತಿಗೆ ಪೀಠಿಕೆ

ಈ ಕೃತಿಯು ಮೊದಲನೆಯ ಆವೃತ್ತಿ ಬಹುಮಟ್ಟಿಗೆ ಒಂದು ದಶಕದ ಹಿಂದೆ ಪ್ರಕಟವಾಯಿತು. ಮುಂದೆ ಕೊಟ್ಟಿರುವ ಆ ಮೊದಲನೆಯ ಆವೃತ್ತಿಯ ಮುನ್ನುಡಿಯಲ್ಲಿ ಈ ಕೃತಿಯು 'ಆತ್ಮಕಥೆ'ಯನ್ನು ದೀರ್ಘವಾಗಿಯೇ ಹೇಳಲಾಗಿದೆ. ಆ ಆವೃತ್ತಿಯ ಪ್ರತಿಗಳು ಮುಗಿದುಹೋಗಿ, ಗ್ರಂಥಸಂಗ್ರಹಕಾರರಿಗೆ ಅದೊಂದು ಅಪರೂಪ ವಸ್ತುವಾಗಿದೆ. ಪೂರ್ಣವಾಗಿ ಸಂಸ್ಕರಣ ಮಾಡಿರುವ ಈ ಆವೃತ್ತಿಯಲ್ಲಿ, ಮಹಾದೇವ ದೇಸಾಯಿಯವರ ದಿನಚರಿಯು ಐದು ಸಂಪುಟಗಳು, ಪ್ಯಾರೇಲಾಲ್ ಅವರ 'ಕಡೆಯ ಮಜಲು' (Last Phase) ಮತ್ತು 'ಮಹಾತ್ಮಾ ಗಾಂಧಿಯವರ ಸಂಕಲಿತ ಕೃತಿಗಳು' (Collected Works of Mahatma Gandhi) ಇವುಗಳಲ್ಲಿ ಪ್ರಕಟವಾದ ಹೊಸ ವಿಷಯಗಳ ಬೆಳಕಿನಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಿ ಹೊಸ ಅಂಶಗಳನ್ನು ಸೇರಿಸಿದ್ದೇನೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಅನೇಕ ಪ್ರಾಂತೀಯ ಸರಕಾರಗಳು ರಕ್ಷಿಸಿ ಇಟ್ಟಿರುವ ವಿವರವಾದ ವರದಿಗಳು ಮತ್ತು ಸಮಕಾಲೀನ ಪತ್ರಿಕೆಗಳಿಂದ ಕತ್ತರಿಸಿ ತೆಗೆದಿರುವ ಭಾಗಗಳನ್ನೊಳಗೊಂಡಂತೆ ಇನ್ನೂ ಇತರ ಮೂಲಗಳನ್ನು ನಾನು ಪರಿಶೀಲಿಸಿದ್ದೇನೆ.

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರ ಪ್ರಾರಂಭದ ಜೀವನಕ್ಕೆ ಸಂಬಂಧಿಸಿದ ಮೂಲ ದಾಖಲೆಗಳ ಛಾಯಾಗ್ರಾಹಕ ಪ್ರತಿಗಳನ್ನು (Photostats) ಎಚ್ಚರಿಕೆಯಿಂದ ಪರಿಶೀಲಿಸಿದ ತರುವಾಯ, 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ', 'ನನ್ನ ಸತ್ಯಾನ್ವೇಷಣೆ' ಈ ಗ್ರಂಥಗಳಲ್ಲಿ ಗಾಂಧೀಜಿ ಕೊಟ್ಟಿರುವ ಕೆಲವು ಕಾಲಗಳನ್ನು ತಿದ್ದುವ ಸ್ವಾತಂತ್ರ್ಯ ತೆಗೆದುಕೊಂಡಿದ್ದೇನೆ; ಉದಾ: 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಜನನದ ಕಾಲ ಮತ್ತು 'ಹಿಂದ್ ಸ್ವರಾಜ್ಯದ' ಪ್ರಥಮ ಆವೃತ್ತಿಯ ಪ್ರಕಟನೆಯ ಕಾಲ–ಇತ್ಯಾದಿ. ಈ ಕೆಲವು ತಿದ್ದುಪಡಿಗಳಿಗೆ ಸಂಬಂಧಿಸಿದಂತೆ, ಗಾಂಧೀಜಿ ಬದುಕಿದ್ದಾಗಲೇ ಅವರೊಂದಿಗೆ ನಾನು ಚರ್ಚಿಸಿದ್ದೆ; ಅವರು ನನ್ನ ಈ ಸಂಶೋಧನಾ ಕಾರ್ಯದ ಬಗೆಗೆ ಅತ್ಯಂತ ಸಹಕಾರವನ್ನು ತೋರಿಸಿದ್ದರು. ವಿಪ್ಲವ ಮತ್ತು ಒತ್ತಡಗಳು ಇದ್ದುದರಿಂದ, ಗಾಂಧೀಜಿ ಮೂಲದಾಖಲೆಗಳನ್ನು ಪರಿಶೀಲಿಸುವ ವ್ಯವಧಾನ ಹೊಂದಿರಲಿಲ್ಲ. ಅವರು ತಮ್ಮ ನೆನಪನ್ನೇ ಅವಲಂಬಿಸಬೇಕಾಗಿದ್ದಿತು. ಚಾರಿತ್ರಿಕ ನಿಷ್ಕೃಷ್ಟತೆಯ ದೃಷ್ಟಿಯಿಂದ, ಒಬ್ಬ ಲೇಖಕನು

ಮೂಲದಾಖಲೆಗಳನ್ನು ಸಾಧ್ಯವಾದಷ್ಟು ಪರಿಶೀಲಿಸಲೇಬೇಕು. ನನ್ನ ಈ ಕೃತಿ ಸಾಧ್ಯವಾದಷ್ಟು ಯಥಾರ್ಥವಾಗಿರಲು ಪ್ರಯತ್ನಿಸಿದ್ದೇನೆ. ಇದು ಅನೇಕ ವರ್ಷಗಳ ವರೆಗೆ ಆಧಾರಯುತವಾದ ಆಕರಗ್ರಂಥವಾಗಿರುವುದೆಂದು ನಂಬಿದ್ದೇನೆ.

ಈ ನನ್ನ ಕೃತಿ ಮತ್ತು ಇದರ ಪ್ರಕಟನೆಯ ವಿಷಯದಲ್ಲಿ ಕ್ರಿಯಾತ್ಮಕ ಆಸಕ್ತಿ ವಹಿಸಿದ ಜವಾಹರಲಾಲ್ ನೆಹರೂ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕೃತಿಯ ಪರಿಷ್ಕರಣ ಕಾರ್ಯದಲ್ಲಿ ನನ್ನ ಜತೆ ಸಹಕರಿಸಿ ಕೆಲಸಮಾಡಿದ ಅನೂ ಬಂದ್ಯೋಪಾಧ್ಯಾಯ ಅವರಿಗೆ ವಂದನೆಗಳು.

ಕೆಲವಾರು ಅನಿವಾರ್ಯ ಕಾರಣಗಳ ದೆಸೆಯಿಂದಲೂ ಮತ್ತು ಬೆಲೆಯನ್ನು ಆದಷ್ಟು ಕಡಮೆ ಇಡುವ ದೃಷ್ಟಿಯಿಂದಲೂ ಚಿತ್ರಗಳ ಸಂಖ್ಯೆಯನ್ನು ಕನಿಷ್ಠ ಮಿತಿಗೆ ಇಳಿಸಲಾಗಿದೆ. ಈ ಪರಿಷ್ಕೃತ ಕೃತಿಯನ್ನು ಹೊರತರುವ ವಿಷಯದಲ್ಲಿ ಹೃತ್ಪೂರ್ವಕ ಸಹಕರಿಸಿದ ಪ್ರಕಾಶನ ವಿಭಾಗಕ್ಕೆ ನಾನು ಕೃತಜ್ಞನಾಗಿದ್ದೇನೆ.

“ಏಕಾಂತ”, ಮುಂಬಯಿ
ಅಕ್ಟೋಬರ್, ೧೯೬೦

ಡಿ. ಜಿ. ತೆಂಡುಲ್ಕರ್

ಪ್ರಥಮ ಆವೃತ್ತಿಗೆ ಮುನ್ನುಡಿ

ಈ ಗ್ರಂಥದ ಮೂಲವನ್ನು ನಾನು ನಿರೂಪಿಸಲಾರೆ; ಇದು ತಾನಾಗಿಯೇ ಲಿಖಿತವಾಗಿದೆ. ಅಲ್ಲದೆ ಇದು ನನ್ನ ಮತ್ತು ನನ್ನ ಪೀಳಿಗೆಯ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ. ಅದೊಂದು ಕನಸಿನ ಲೋಕ; ಅದರಿಂದ ನಾನಿನ್ನೂ ಹೊರಕ್ಕೆ ಬಂದಿಲ್ಲ. ಗಾಂಧೀಜಿ ಮತ್ತು ಅವರ ಕಥೆ ಸದಾ ಕಾಲ ನನ್ನ ಮನಸ್ಸಿನ ಕಣ್ಣ ಮುಂದಿದೆ. ಕೆಲವು ವರ್ಷಗಳ ಹಿಂದೆ, ಅವರು ನಮ್ಮೊಡನೆ ಚಲಿಸುತ್ತಾ, ಸಂಭಾಷಣೆ ಮಾಡುತ್ತಾ ಇದ್ದಂತೆಈಗಲೂ ಇದೆ. ಅವರ ಸಾವು ಎನ್ನುವುದು ಕೇವಲ ಸಣ್ಣ ಪ್ರಸಂಗ; ಅವರು ಅದನ್ನು ಸ್ವಾಗತಿಸಿದರು. ಅನೇಕ ಸಲ ಅವರು ಅದನ್ನು ನಿರಾಕರಿಸಿದುದೂ ಉಂಟು. ಅವರ ಭವ್ಯ ಸಾಮರಸ್ಯದ ಬದುಕಿಗೆ ಅದೇ ತಕ್ಕ ಮುಕ್ತಾಯ.

ನಾನು ಪುನರವಲೋಕನ ಮಾಡಿದರೆ, ತಿಲಕರ ಸಾವು ಮತ್ತು ಅದಕ್ಕಾಗಿ ರಾಷ್ಟ್ರಾದ್ಯಂತ ಶೋಕದ ಅಭಿವ್ಯಕ್ತಿ, ಅನಂತರ ಮರುದಿನವೇ ಗಾಂಧೀಜಿ ಜನಕೋಟಿಯನ್ನು ಸಾಹಸದ ಔನ್ನತ್ಯಕ್ಕೆ ಏರಿಸಿದ ಪ್ರಕಾಶಮಾನವಾದ ಚಿತ್ರ ನನ್ನ ನೆನಪಿಗೆ ಬರುತ್ತವೆ. ೧೯೨೦ರ ಆಗಸ್ಟ್ ೧, ನನ್ನ ನಿಗೂಢ ಪ್ರಜ್ಞೆಯಲ್ಲಿ ಸ್ಥಿರವಾಗಿ ನಿಂತಿದೆ. ಆಗ ಅದಿನ್ನೂ ಮಹಾನಾಟಕವೊಂದರ ನಾಂದಿಯಾಗಿತ್ತು. ಅದು ಬಹುಮಟ್ಟಿಗೆ ನ್ಯೂನತೆ ಇಲ್ಲದೆಯೇ ಬೆಳೆದಿದೆ. ಆಗ ನಾನಿನ್ನೂ ಹತ್ತು ವರ್ಷದ ಹುಡುಗನಾಗಿದ್ದೆ.

ಲಕ್ಷಾಂತರ ಜನರಂತೆಯೇ ನಾನೂ ಕ್ರಾಂತಿಯ ಸುಳಿಗಾಳಿಯಲ್ಲಿ ಸಿಲುಕಿದೆ. ಅದೊಂದು ವಿಚಿತ್ರ ಕ್ರಾಂತಿ. ಅದು ಬಹಿರಂಗವಾಗಿಯೇ ಸರಕಾರದ ಪ್ರತಿಭಟನೆಯಾಗಿದ್ದಿತು. ಅದಮ್ಯ ಸಂಕಲ್ಪದಿಂದ ಪಾಶವಿಕ ಶಕ್ತಿಯನ್ನು ಎದುರಿಸಿ, ಅದರಲ್ಲಿ ಅಖಂಡ ರಾಷ್ಟ್ರ ಭಾಗವಹಿಸಿದ್ದಿತು. ಕ್ಷಣಮಾತ್ರದಲ್ಲಿ ಮನಸ್ಸು ಸ್ವತಂತ್ರವಾಗಿ ಹಸಿವು ಸಾವುಗಳನ್ನು ಧಿಕ್ಕರಿಸಿ, ಆ ಮಹಾನಾಯಕ ಎತ್ತ ನಡೆದನೋ ಅತ್ತ ಹಿಂಬಾಲಿಸಿತು. ಅದು ಕೇವಲ ನಾಯಕಪೂಜೆಯಾಗಿರಲಿಲ್ಲ. ಗಾಂಧೀಜಿ ಜನತೆಯಲ್ಲಿ ಹುಟ್ಟಿಸಿದ ಪರಾಕ್ರಮದ ಅರಿವಿನಿಂದ ಮನಸ್ಸಿನ ದಾಸ್ಯಶೃಂಖಲೆಗಳನ್ನು ಕಿತ್ತೊಗೆಯುವಂತಾಯಿತು.

ರಾಷ್ಟ್ರದ ಪ್ರಗತಿಯಲ್ಲಿ ಏಳು-ಬೀಳುಗಳೇನೋ ಇದ್ದುವು, ಆದರೆ ಜಡತೆ ಇರಲಿಲ್ಲ. ಸೋಲೆಂಬುದನ್ನೇ ಅರಿಯದ ಗಾಂಧೀಜಿ, ಜನತೆ ಹಿಂದೆಂದೂ ನಡೆಯದಿದ್ದ ಪಥದಲ್ಲಿ ಮುನ್ನಡೆಯಲು ಸ್ಫೂರ್ತಿಯನ್ನು ಕೊಟ್ಟರು.

ಈ ಕೃತಿ, ನಾವು ಯಾವ ಘಟನೆಗಳ ಮೂಲಕ ಬದುಕನ್ನು ಸಾಗಿಸಿದೆವೋ ಅವುಗಳ ಸರಳ ಕಥನ. ಅದು ಗಾಂಧೀಜಿಯ ನಾಯಕತ್ವದಲ್ಲಿ ನಡೆದ ಸುಮಾರು ಐವತ್ತು ವರ್ಷಗಳ ಇತಿಹಾಸ. ಈ ಭಾವೋದ್ರೇಕದ ಕಾಲವನ್ನು ಕುರಿತು ನೈತಿಕ ವ್ಯಾಖ್ಯಾನವಾಗಲೀ ನಾಟಕೀಯ ನಿರೂಪಣೆಯ ಪ್ರಯತ್ನವಾಗಲೀ ನಡೆದಿಲ್ಲ. ಈ ಆಂದೋಲನದಲ್ಲಿ ಪ್ರಧಾನ ಪಾತ್ರ ವಹಿಸಿದ್ದಲ್ಲದೆ, ಇದರ ಬಗೆಗೆ ಶ್ರೇಷ್ಠ ವ್ಯಾಖ್ಯಾನವನ್ನೂ ಬರೆದ ಗಾಂಧೀಜಿಯ ಮಾತುಗಳನ್ನೇ ಎಷ್ಟು ಸಾಧ್ಯವೋ ಅಷ್ಟು ಬಳಸಿಕೊಂಡು ನಿಷ್ಠೆಯಿಂದ ಕಥೆ ಹೇಳಲು ಪ್ರಯತ್ನಿಸಿದ್ದೇನೆ.

ಹೊಸ ವಿಚಾರವನ್ನು ರೂಪಿಸಲು, ಗಾಂಧೀಜಿ ಮಾಡಿದುದನ್ನು ಪರೀಕ್ಷಿಸ ಬೇಕೆಂದು ಬಹಳ ವರ್ಷಗಳಿಂದ ನಾನು ಉತ್ಸುಕನಾಗಿದ್ದರೂ ಇಂತಹ ಕೃತಿ ರಚನೆಯನ್ನು ಕೈಗೊಳ್ಳುವೆನೆಂದು ನಾನು ಭಾವಿಸಿರಲಿಲ್ಲ. ಆರಂಭದಲ್ಲಿ ನಾನೊಬ್ಬ ಉಪಾಸಕನಂತಿದ್ದ. ಅನಂತರ ವಿಮರ್ಶಕನಾದೆ. ಈಗ ಪಕ್ಷಪಾತರಹಿತ ಮೆಚ್ಚುಗೆ ಗಾರನಂತಿದ್ದೇನೆ. ನಾನು ಯಾವುದೇ ಒಂದು ವಿಚಾರಪಂಥಕ್ಕೆ ಸೇರಿದವನಲ್ಲ. ಇಲ್ಲಿಯವರೆಗೂ ಗಾಂಧೀಜಿಯ ತತ್ವ ವಿಚಾರವನ್ನು ಕುರಿತು ಆಳವಾಗಿ ಚಿಂತಿಸು ವುದಕ್ಕೂ ನನಗೆ ಸಮಯವಿರಲಿಲ್ಲ. ನಾನು ಸದಾ ಅವರನ್ನು ಒಪ್ಪದಿದ್ದರೂ, ಬೇರೆ ಯಾವ ಚಾರಿತ್ರಿಕ ವ್ಯಕ್ತಿ ನನ್ನ ಮನಸ್ಸನ್ನು ಆಕರ್ಷಿಸಿರುವುದಕ್ಕಿಂತ ಹೆಚ್ಚಾಗಿ, ಅವರ ವ್ಯಾಪಕ ಜೀವನ, ಧ್ಯೇಯ, ಸ್ಥೈರ್ಯ ನನ್ನನ್ನು ಆಕರ್ಷಿಸಿವೆ.

ನಾನು 'ಯಂಗ್ ಇಂಡಿಯಾ'ವನ್ನು ಹೆಬ್ಬಯಕೆಯಿಂದ ಓದಿ, ಮುಂದಿನ ಸಂಚಿಕೆಗಾಗಿ ಕಾಯುತ್ತಿದ್ದ ಆ ಆರಂಭದ ಕಾಲವಿನ್ನೂ ನನಗೆ ನೆನಪಿದೆ. ಗಾಂಧೀಜಿ, ಮೂವತ್ತು ವರ್ಷಗಳ ಕಾಲ ಸಹಸ್ರಾರು ಮಂದಿಯ ಮನಸ್ಸಿಗೆ ಆಹಾರವಿತ್ತರು ; ಅಗೋಚರವಾಗಿ ಜನಕೋಟಿಯ ಶೀಲಸ್ವಭಾವಗಳನ್ನು ರೂಪಿಸಿದರು. ಮಾತು, ಬರಹ, ಕ್ರಿಯೆ ಇವುಗಳ ಪೂರ್ಣ ಸಾಮರಸ್ಯದಿಂದ—ಇದನ್ನು ಅವರು ಯಾವಾ ಗಲೂ ಬುದ್ಧಿಪೂರ್ವಕವಾಗಿಯೇ ಮಾಡದಿದ್ದರೂ—ಜನತೆಯ ಅನುಸರಣೆಗೆ ಒಂದು ಪರಮ ನಿದರ್ಶನವನ್ನು ಕೊಟ್ಟರು. ಇಂದು ಅವರ ಪ್ರಭಾವ ಕ್ಷೀಣವಾಗಿ. ಅವರ ಅನುಯಾಯಿ ಅವರೊಬ್ಬರೇ ಎನ್ನುವಂತೆ ಭಾಸವಾಗಬಹುದು. ಆದರೆ ಅದ್ಭುತ ವಿಚಾರಗಳ ಬೀಜ ಬಿತ್ತಿದುದು ಹೇಗೆ ತಾನೆ ನಿಷ್ಫಲವಾದೀತು.

ಗಾಂಧೀಜಿ ದೀರ್ಘಕಾಲ ಬದುಕಿದ್ದು, ಅಗಾಧ ಕ್ರಿಯಾತ್ಮಕ ಜೀವನ ನಡೆಸಿ ದುದು ಭಾರತದ ಅದೃಷ್ಟವೆನ್ನಬೇಕು. ಅವರ ಜೀವನ ಬಹುಮಟ್ಟಿಗೆ ರಾಷ್ಟ್ರದ ಚಟುವಟಿಕೆಗಳ ಎಲ್ಲ ಮಜಲುಗಳನ್ನು ಮುಟ್ಟಿತು. ಅವರು ಹೊಂದಿದ್ದ ಸಂಬಂಧ ಗಳು ಭಿನ್ನಭಿನ್ನವಾಗಿದ್ದಂತೆಯೇ ಅವರ ಅನುಭವಗಳೂ ವಿಶಿಷ್ಟ ರೀತಿಯವಾಗಿ ದ್ದುವು. ಅವರು ತಮ್ಮ ಬರಹ ಮತ್ತು ಮಾತುಗಳ ಮೂಲಕ ಜಗತ್ತಿಗೆ ಜ್ಞಾನ ದಾನ ಮಾಡಿದರು. ಅವರ ಕ್ರಿಯೆಗಳೇ ಅದಕ್ಕೆ ನಿದರ್ಶನಗಳಾಗಿದ್ದುವು. ಐನ್‌ಸ್ಟೀನ್ ಹೀಗೆ ಬರೆದರು: "ಅನೇಕ ತಲೆಮಾರುಗಳು ಕಳೆದಮೇಲೆ ಇಂಥ ವ್ಯಕ್ತಿ

ಎಂದಾದರೂ ರಕ್ತಮಾಂಸಯುತ ದೇಹಧಾರಿಯಾಗಿದ್ದು ನಡೆದಾಡಿದುದುಂಟೆ ಎಂದು ಅಂದಿನ ಜನ ನಂಬದಿದ್ದರೂ ಇರಬಹುದು."

ಈ ಕೃತಿಯನ್ನು ಪೂರ್ಣಗೊಳಿಸಲು ಗಾಂಧೀಜಿಯ ಸಹಕಾರ ದೊರಕಿದುದು ನನ್ನ ದೊಡ್ಡ ಭಾಗ್ಯ. ಇದು ಅನೇಕ ವರ್ಷಗಳ ಸಂಶೋಧನೆಯಿಂದ ಕೂಡಿದೆ. ಇದನ್ನು ಬರೆಯಲು ಆರು ವರ್ಷಗಳ ಕಾಲ ಹಿಡಿಯಿತು. ಕೆಲವು ಮುಖ್ಯ ಭಾಷಣಗಳನ್ನೂ ಮತ್ತು ಬರಹಗಳನ್ನೂ ಗಾಂಧೀಜಿಯೇ ಈ ಗ್ರಂಥಕ್ಕಾಗಿ ಪುನರವಲೋಕನ ಮಾಡಿಕೊಟ್ಟರು. ಚಾರಿತ್ರಿಕ ಅಂಶಗಳನ್ನು ಮೂಲದಾಖಲೆಗಳಿಂದಲೂ ಮತ್ತು ಗಾಂಧೀಜಿಯ ಕೆಲವರು ನಿಕಟವರ್ತಿ ಸಹೋದ್ಯೋಗಿಗಳಿಂದಲೂ ತಾಳೆನೋಡಿಸಲಾಗಿದೆ. 'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ' ಮತ್ತು 'ಹರಿಜನ' ಇವುಗಳು ಪ್ರಧಾನ ಆಕರಗಳಾಗಿವೆ. ಮಹಾದೇವ ದೇಸಾಯಿ ಮತ್ತು ಪ್ಯಾರೇಲಾಲ್ ಇವರಿಗೆ ನನ್ನ ಋಣ ಅಗಾಧವಾಗಿದೆ.

ಗ್ರಂಥವನ್ನು ಪ್ರಮಾಣಬದ್ಧವಾಗಿಯೂ ವಿವರಗಳಿಂದ ಕೂಡಿದುದನ್ನಾಗಿಯೂ ಮಾಡಲು ಕಳೆದ ಐವತ್ತು ವರ್ಷಗಳ ವರ್ತಮಾನ ಪತ್ರಿಕೆಗಳನ್ನು ನಾನು ಪರಿಶೀಲಿಸಿದ್ದೇನೆ. ವಿವಿಧ ಭಾರತೀಯ ಭಾಷೆಗಳು ಮತ್ತು ವಿದೇಶೀ ಭಾಷೆಗಳು ಇವುಗಳಲ್ಲಿ ದೊರಕುವ ಎಲ್ಲ ಸಾಹಿತ್ಯವನ್ನೂ ಬಳಸಿಕೊಂಡು ಜಳ್ಳಿನಿಂದ ಕಾಳನ್ನು ಬೇರ್ಪಡಿಸಲಾಗಿದೆ. ಸಂದೇಹ ಬಂದ ಸಂದರ್ಭಗಳಲ್ಲಿ ಗಾಂಧೀಜಿಯೇ ನನ್ನ ಕಟ್ಟಕಡೆಯ ಆಧಾರವಾಗಿದ್ದರು. ೧೯೪೮ರ ಜನವರಿ ೨೨ರಂದು ನಾನು ಅವರನ್ನು ಕಡೆಯದಾಗಿ ಸಂಧಿಸಿದಾಗ ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಕುರಿತು ಚರ್ಚಿಸಿದೆವು; ಜೀವನ ಚರಿತ್ರೆಗ್ರಂಥದ ಆಕಾರ, ಗಾತ್ರ, ಮಾಟ, ಉಪಯೋಗಿಸುವ ಮೊಳೆ, ಚಿತ್ರಗಳು, ಕಾಗುಣಿತ ಸಾಮಾನ್ಯ ಸ್ವರೂಪ, ಉದ್ಧರಣದ ಚಿಹ್ನೆಗಳು, ಕೂಡುಗೆರೆ—ಇವುಗಳನ್ನೆಲ್ಲ ಕುರಿತು ಚರ್ಚಿಸಿದೆವು. ನನ್ನ ಕಾರ್ಯದಲ್ಲಿ ಅವರಿಗೆ ತುಂಬಾ ಆಸಕ್ತಿಯಿತ್ತು. ಅವರು ಯಾವಾಗಲೂ ತಮ್ಮ ಕೃಪಾಭರಿತ ಸಹಕಾರವನ್ನು ನೀಡಿದರು

ಗಾಂಧೀಜಿಯ ನಿಕಟವರ್ತಿಗಳಾಗಿದ್ದವರ ವಶದಲ್ಲಿಯೂ ಮತ್ತು ಖಾಸಗೀ ಸಂಗ್ರಹಗಳಲ್ಲಿಯೂ ಇದ್ದ ಮುಖ್ಯವಾದ ಮತ್ತು ಸುಲಭವಾಗಿ ದೊರಕಲಾರದ ಪತ್ರಗಳನ್ನೂ ನಾನು ಉಪಯೋಗಿಸಿಕೊಂಡಿದ್ದೇನೆ. ವಸ್ತುಸಂಗ್ರಹಕ್ಕಾಗಿ ಗಾಂಧೀಜಿಯ ಹೆಸರಿನ ಸಂಪರ್ಕಹೊಂದಿದ ಪ್ರಮುಖವಾದ ಸ್ಥಳಗಳಿಗೆಲ್ಲ ಭೇಟಿಯಿತ್ತಿದ್ದೇನೆ. ಇಷ್ಟಾದರೂ ಅವರ ಜೀವನವನ್ನು ಚಿತ್ರಿಸಲು ನನ್ನ ಪ್ರಯತ್ನ ಕೇವಲ ಸಾಮಾನ್ಯವಾದುದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಎಲ್ಲೆಲ್ಲೋ ಹರಡಿರುವ ಗಾಂಧೀಜಿಯ ಜೀವನಸಿಧಿಯಲ್ಲಿ ಬಹು ಭಾಗ ಇನ್ನೂ ಸಂಶೋಧಕ

ವಿದ್ಯಾರ್ಥಿಗಳ ಕರಗತವಾಗಿಲ್ಲ. ನಾನು ಸಂಗ್ರಹಿಸಿರುವ ವಸ್ತು, ಮುಂದಿನ ಪೀಳಿಗೆಗೆ ಉಪಯುಕ್ತವಾಗುವುದೆಂದು ಮಾತ್ರ ಭಾವಿಸುತ್ತೇನೆ.

ಅನೇಕ ವರ್ಷಗಳ ಹಿಂದೆ ನಾನು ಕೈಗೊಂಡ ಈ ಕಾರ್ಯ ಸದಾ ಸುಲಭವಾಗಿ ಮುಂದುವರಿಯಲಿಲ್ಲ. ಸಹಕಾರ ವಿಪುಲವಾಗಿತ್ತು; ಜತೆಗೆ ಸ್ವಲ್ಪ ಅಸಹಕಾರವೂ ಇತ್ತು. ಆದರೆ ಗಾಂಧೀಜಿಯೇ ನನ್ನ ಪ್ರಧಾನ ಮಾರ್ಗದರ್ಶಕರಾಗಿದ್ದುದರಿಂದ ನಾನು ಅಷ್ಟಿಷ್ಟು ಸಾಧಿಸಲು ಸಾಧ್ಯವಾಗಿದೆ. ನಾವು ಚಾರಿತ್ರಿಕ ಕೃತಿಗಳ ಬಗೆಗೆ ಸಾರಗ್ರಹಣ ಬುದ್ಧಿಯನ್ನು ಇನ್ನೂ ಬೆಳಸಿಕೊಳ್ಳಬೇಕಾಗಿದೆಯೆಂದು ನಾನು ಇಲ್ಲಿ ಹೇಳಲೇಬೇಕಾಗಿದೆ. ಗಾಂಧೀಜಿಯ ಸಹೋದ್ಯೋಗಿಗಳಲ್ಲಿ ಕೆಲವರು ಅವರ ಪತ್ರಗಳನ್ನು ನಾಶಗೊಳಿಸಿದರೆಂದು ಕೇಳುವುದು ನೋವಿನ ಅನುಭವವೇ ಆಯಿತು. ಭಾರತದ ದೊಡ್ಡ ಪುಸ್ತಕ ಭಂಡಾರಗಳೂ 'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳ ಹಿಂದಿನ ಪ್ರತಿಗಳನ್ನು ಉಳಿಸಿಕೊಂಡಿಲ್ಲ.

ನನ್ನ ಕಾರ್ಯ ಶ್ರಮಯುಕ್ತವೇ ಆದರೂ ನಾನು ಅದರಲ್ಲಿ ಪೂರ್ಣವಾಗಿ ಆನಂದವನ್ನು ಅನುಭವಿಸಿದ್ದೇನೆ. ಇದನ್ನು ಬೇರೆ ಯಾರಾದರೂ ಕೈಗೊಳ್ಳಬೇಕಾಗಿತ್ತೆಂದು ನನಗೆ ಆಗಾಗ ಅನ್ನಿಸುತ್ತದೆ. ಚಾರಿತ್ರಿಕ ಕೃತಿಗಳನ್ನು ರಚಿಸುವ ಮನೋಧರ್ಮ ನನ್ನಲ್ಲಿಲ್ಲ. ನನ್ನಲ್ಲಿರುವ ಕಲಾವಿದನ ಪ್ರವೃತ್ತಿಗೆ ಪೂರ್ಣ ತೃಪ್ತಿಯಾಗಿಲ್ಲ. ಹೀಗಿದ್ದರೂ ನಾನು ವಾಸ್ತವಿಕ ಅಂಶಗಳಿಗೆ ಮಾತ್ರ ಅಂಟಿಕೊಳ್ಳಬೇಕೆಂದು ನಿರ್ಧರಿಸಿ, ಎಷ್ಟೇ ಸ್ವಾರಸ್ಯವಾದ ಪ್ರಸಂಗವಾದರೂ, ಅದು ನಂಬಿಕೆಗೆ ಲೇಶಮಾತ್ರ ಸಂಶಯವೆಂಬಂತೆ ಕಂಡುಬಂದಲ್ಲಿ ಅದನ್ನು ವರ್ಜಿಸಿದ್ದೇನೆ.

ಈ ಕೃತಿಯ ಎಂಟು ಸಂಪುಟಗಳನ್ನು ಪೂರ್ಣಗೊಳಿಸುವುದರಲ್ಲಿ ಹಲವರು ಗೆಳೆಯರಿಂದಲೂ ಮತ್ತು ಸಹಾನುಭೂತಿಯುಳ್ಳವರಿಂದಲೂ ನೆರವು ಮತ್ತು ಸಹಕಾರಗಳನ್ನು ಪಡೆದಿದ್ದೇನೆ. ಪ್ರಥಮವಾಗಿ ನನ್ನ ಗೆಳೆಯ, ದಿವಂಗತ ಯೂಸುಫ್ ಮೆಹರಲ್ಲೀ ಅವರಿಗೆ ನಾನು ಋಣಿಯಾಗಿದ್ದೇನೆ. ನನಗೆ ಕೇವಲ ಓದುವುದರಲ್ಲಿಯೇ ಇಷ್ಟವಿದ್ದರೂ, ಅವರು ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಪುಸ್ತಕಗಳನ್ನು ಒದಗಿಸಿಕೊಟ್ಟು, ಬರೆಯಲು ನನ್ನನ್ನು ಒತ್ತಾಯಪಡಿಸಿದರು. ೧೯೪೦ರಲ್ಲಿ ನಾವಿಬ್ಬರೂ ನಾಸಿಕ್ ಸೆರೆಮನೆಯಲ್ಲಿ ಬಂಧನದಲ್ಲಿದ್ದಾಗ ಈ ಗ್ರಂಥ ರಚನೆಗೆ ಬೀಜಾಂಕುರವಾಯಿತು. ಆದರೆ ಆಗ ಅದು ನಮ್ಮಿಬ್ಬರಿಗೂ ತಿಳಿದಿರಲಿಲ್ಲ.

ಸೆರೆಮನೆಯಲ್ಲಿದ್ದಾಗ ಇನ್ನೊಬ್ಬ ಗೆಳೆಯರಾದ ಆರ್. ಆರ್. ದಿವಾಕರರಿಗೂ ನನಗೂ ಭೇಟಿಯಾಯಿತು. ಅವರು ಈ ಕೃತಿಯಲ್ಲಿ ತೀವ್ರ ಆಸಕ್ತಿಯನ್ನು ತೋರಿಸಿದರು. ಅವರಿಂದಲೇ ಇಂದಿನ ಈ ರೂಪವನ್ನು ಪಡೆದು ಇದು ಪ್ರಕಟವಾಗುತ್ತಿದೆ. ೧೯೪೨-೪೫ರಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ ಅಜ್ಞಾತವಾಸ ಮಾಡುತ್ತಿದ್ದ ಅವರು ನನ್ನೊಂದಿಗೆ ಸೇರಿ, ಕ್ರಿಯಾತ್ಮಕವಾಗಿ ಕೆಲಸಮಾಡಿ,

ಗಾಂಧೀಜಿಯ ಎಪ್ಪತ್ತೈದನೆಯ ಜನ್ಮದಿನ ಸಂಪುಟವನ್ನು ಹೊರತರಲು ನೆರವಾದರು. ತರುವಾಯ ಗಾಂಧೀಜಿಯ ದೀರ್ಘಪ್ರಮಾಣದ ಜೀವನಚರಿತ್ರೆಯನ್ನು ಬರೆಯ ಬೇಕೆಂದು ಅವರು ನನಗೆ ಸೂಚಿಸಿದರು. ಅನಂತರ ಈ ಎಂಟು ಸಂಪುಟಗಳು ಆದಷ್ಟು ಜಾಗ್ರತೆ ಪ್ರಕಟನೆಯಾಗುವ ಬಗೆಗೆ ಬಹಳ ಆಸಕ್ತಿ ವಹಿಸಿದರು. ಅವರು ತಮ್ಮ ಸ್ವಂತ ಗ್ರಂಥಗಳಿಗಿಂತ ಹೆಚ್ಚಾಗಿ, ಈ ಗ್ರಂಥದ ಬಗೆಗೆ ಆಸಕ್ತಿ ತೋರಿ ಸಿದರೆಂದರೆ ಉತ್ಪ್ರೇಕ್ಷೆಯಲ್ಲ.

ಈ ಕೃತಿಯ ಪ್ರಕಟನೆಯ ಕಥೆಗೇ ಒಂದು ಪ್ರತ್ಯೇಕವಾದ ಅಧ್ಯಾಯ ಯುಕ್ತ ವೆನಿಸಿದರೂ, ಇಲ್ಲಿ ಅದಕ್ಕೆ ಸ್ಥಳವಿಲ್ಲ. ಈ ಕಲ್ಪನೆಯ ಆರಂಭದಿಂದಲೇ ಪಂಡಿತ ಜವಾಹರಲಾಲ್ ನೆಹರೂ ಸಕ್ರಿಯ ಸಹಕಾರವಿತ್ತರೆಂದು ಮಾತ್ರ ಹೇಳಬಯಸು ತ್ತೇನೆ. ಅವರು ಅನೇಕ ವರ್ಷಗಳಿಂದ ನನಗೆ ಬೆಂಬಲ ನೀಡಿದ್ದಾರೆ. ಈ ಜೀವನ ಚರಿತ್ರೆಯ ಪ್ರಕಟನೆಯಲ್ಲಿ ವೈಯಕ್ತಿಕ ಆಸಕ್ತಿಯನ್ನು ತೋರಿಸಿದ್ದಾರೆ. ಅಮೂಲ್ಯ ವಾದ ವಸ್ತುಗಳು ದೊರಕಲು ನೆರವನ್ನು ಕೊಟ್ಟುದಲ್ಲದೆ, ಅವರ ವಶದಲ್ಲಿದ್ದ ಅನೇಕ ಮುಖ್ಯ ಪತ್ರಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದರು. ಎಲ್ಲಕ್ಕಿಂತ ಮಿಗಿಲಾಗಿ ಅವರು ನನ್ನಲ್ಲಿ ತಮ್ಮ ವಿಶ್ವಾಸವನ್ನು ಇಟ್ಟಿದ್ದರು. ಒಬ್ಬ ಸೂಕ್ಷ್ಮ ಮನಸ್ಸಿನ ವ್ಯಕ್ತಿಗೆ ಅವರ ಪ್ರಭಾವ ಆಗಾಧ.

ಈ ಉದ್ಯಮದಲ್ಲಿ ವಿಠಲ್‌ಭಾಯಿ ಝೂವೇರಿ ನನ್ನ ಪ್ರಧಾನ ಸಹೋದ್ಯೋಗಿ ಯಾಗಿದ್ದಾರೆ. ಅವರು ಇಪ್ಪತ್ತು ವರ್ಷಗಳಿಗೂ ಮೇಲ್ಪಟ್ಟು ನನ್ನ ಗೆಳೆಯ ಹಾಗೂ ಸಹಕಾರ್ಯಕರ್ತರಾಗಿದ್ದಾರೆ. ಹಲವಾರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಾವು ಜತೆಯಲ್ಲಿ ಕೆಲಸ ಮಾಡಿದ್ದೇವೆ. ಅವರು ಗಾಂಧೀಜಿಯ ಎಪ್ಪತ್ತೈದನೆಯ ಜನ್ಮದಿನ ಸಂಪುಟವನ್ನು ಸುಂದರ ಕೃತಿಯಾಗುವಂತೆ ಮಾಡಿದ್ದಾರೆ. ಪ್ರಕೃತ ಕೃತಿಗೆ, ಅವರು ಇದರ ' ಹಾರುಹಾಳೆ 'ಗಳಿಗೂ (fly-leaf) ಮತ್ತು ಮೇಲು ಹೊದಿಕೆಗೂ ಅಪೂರ್ವ ಚಿತ್ರಗಳನ್ನೂ, ಮತ್ತು ದಾಖಲೆಗಳನ್ನೂ ಸಂಗ್ರಹಿಸುವ ಹೊಣೆ ಹೊತ್ತುದಲ್ಲದೆ, ನನ್ನ ಸಂಶೋಧನ ಕಾರ್ಯಕ್ಕೂ ವಸ್ತುವನ್ನು ಒದಗಿಸಲು ಶ್ರಮಿಸಿದ್ದಾರೆ. ಅವರ ಉತ್ಕೃಷ್ಟ ಗಾಂಧೀಭಂಡಾರವನ್ನು ಉಪಯೋಗಿಸಿ ಕೊಳ್ಳಲು ನನಗೆ ಅನುಮತಿಯಿತ್ತರು. ಈ ಕೃತಿಯನ್ನು ಸೂಕ್ಷ್ಮಚಿತ್ರಗಳಿಂದ ಸಿಂಗರಿಸಿ, ಇಮ್ಮಡಿ ಸ್ವಾರಸ್ಯಪೂರ್ಣವಾಗಿಯೂ ಮತ್ತು ವಿಷಯಭರಿತವಾಗಿಯೂ ಮಾಡಿದ್ದಾರೆ. ಒಂದು ಗ್ರಂಥದ ದಾಖಲೆಯ ಭಾಗಕ್ಕೆ ಚಿತ್ರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವುಗಳನ್ನು ಶೇಖರಿಸಿ ಆರಿಸುವುದರಲ್ಲಿ ಅವರು ಉತ್ಸಾಹವನ್ನು ಮತ್ತು ಸುರುಚಿಯನ್ನೂ ತೋರಿಸಿದ್ದಾರೆ. ಮೇಲುಹೊದಿಕೆ ಮತ್ತು ' ಹಾರುಹಾಳೆ 'ಗಳನ್ನು ರೂಪಿಸುವುದರಲ್ಲಿ ವಿಠಲ್‌ಭಾಯಿ, ಎಸ್. ದಾಸ್ ಗುಪ್ತ ಅವರ ಸಹಕಾರವನ್ನು ಪಡೆದಿದ್ದಾರೆ.

ಗ್ರಂಥದ ಮೂಲಪಾಠ ಮತ್ತು ಅದರ ಸ್ವರೂಪ ರಚನೆಗೆ ನನ್ನದೇ ಪೂರ್ಣ ಹೊಣೆ. ಇದರ ಕೆಲವಾರು ನ್ಯೂನತೆಗಳು ನನಗೆ ಅರಿವಿವೆ. ಬಹುಶಃ ಹೆಚ್ಚು ಅನುಕೂಲವಾದ ಸನ್ನಿವೇಶಗಳಿದ್ದಿದ್ದರೆ ಅವುಗಳನ್ನು ತಪ್ಪಿಸಬಹುದಾಗಿತ್ತು. ಎಪ್ಪತ್ತೈದನೆಯ ಜನ್ಮದಿನ ಸಂಪುಟದ ಕಾರ್ಯದಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಗೆಳೆಯ ಎಂ. ಚಲಪತಿರಾವ್ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಓದಿ ಅದನ್ನು ಉಳಿಗೆಲಸದಿಂದ ನಯಗೊಳಿಸಿ ಸಹಾಯಮಾಡಿದ್ದಾರೆ. ಅವರು ನನ್ನ ಕೆಲಸವನ್ನು ತಮ್ಮದೆಂದೇ ಭಾವಿಸಿ, ಅದಕ್ಕಾಗಿ ಹಲವಾರು ತಿಂಗಳುಗಳನ್ನು ಸತತವಾಗಿ ವಿನಿಯೋಗಿಸಿದ್ದಾರೆ.

ನನ್ನ ಗೆಳೆಯ ಎನ್. ಜಿ. ಜೋಗ್ ಸಹ ಹಸ್ತಪ್ರತಿಯನ್ನು ಓದಿ, ಇತರ ವಿಷಯಗಳಲ್ಲಿ ಸಹಾಯಮಾಡಿದ್ದಾರೆ. ಯೂಸುಫ್ ಜೆ. ಮೆಹರಲ್ಲೀ, ರಾಮ ಮನೋಹರ ಲೋಹಿಯಾ ಮತ್ತು ಫ್ರಾಂಕ್ ಮೊರೇಸ್ ಮೊದಲಾದ ಗೆಳೆಯರೂ ಹಸ್ತಪ್ರತಿಯ ಕೆಲವು ಭಾಗಗಳನ್ನು ಓದಿ ಸದಾ ಉತ್ತೇಜನವನ್ನು ಕೊಟ್ಟಿದ್ದಾರೆ.

ನನ್ನ ಗೆಳತಿ ಮತ್ತು ಸಹೋದ್ಯೋಗಿ ಅನೂ ಬಂದ್ಯೋಪಾಧ್ಯಾಯ ಹಸ್ತಪ್ರತಿಯನ್ನು ಪರಿಷ್ಕರಿಸುವ ಕಾರ್ಯದಲ್ಲಿ ನಾಲ್ಕು ವರ್ಷಗಳ ಕಾಲ ನನಗೆ ನೆರವನ್ನು ಇತ್ತಿದ್ದಾರೆ. ಅವರು ಸದಾ ನನ್ನೊಂದಿಗೇ ಇದ್ದು, ನನ್ನ ಕೃತಿಯನ್ನು ತಮ್ಮದೆಂದೇ ಭಾವಿಸಿದ್ದಾರೆ. ಇದಕ್ಕಾಗಿ ಆಕೆಗೆ ಕೃತಜ್ಞನಾಗಿದ್ದೇನೆ. ಅಚ್ಚಿನ ಪ್ರತಿಗಳನ್ನು ಶುದ್ಧಮಾಡುವುದರಲ್ಲಿಯೂ ಮತ್ತು ಬೆರಳಚ್ಚಿನ ತಪ್ಪುಗಳಿಲ್ಲದಂತೆ ನೋಡಿಕೊಳ್ಳುವುದರಲ್ಲಿಯೂ ಆಕೆ ನೆರವಾಗಿದ್ದಾರೆ. ಆಕೆಯ ಸಮರ್ಥ ನೆರವಿನಿಂದ ಶಬ್ದಾರ್ಥಕೋಶ ಮತ್ತು ವಿಷಯಸೂಚಿ ಇವುಗಳನ್ನು ತಯಾರಿಸುವ ಶ್ರಮ ನನಗೆ ಕಡಮೆಯಾಗಿದೆ.

ಆರಂಭದಿಂದಲೂ ವಿಠಲಭಾಯಿಗೂ ಮತ್ತು ನನಗೂ ಆತ್ಮಸಂತೋಷದಿಂದ ನೆರವನ್ನಿತ್ತವರಲ್ಲಿ ಸುಮತೀ ಮೊರಾರ್ಜೀ ಪ್ರಮುಖರು. ಆಕೆ ಗ್ರಂಥಗಳನ್ನು ಒದಗಿಸಿಕೊಟ್ಟು ಕೆಲವರೇ ಮಾಡಬಹುದಾದ ಹಲವಾರು ವಿಧಗಳಲ್ಲಿ ಸಹಾಯವನ್ನಿತ್ತರು. ಕೃತಿರಚನೆಯ ಕಾರ್ಯದಲ್ಲಿ ತಮ್ಮನ್ನು ಪೂರ್ಣವಾಗಿ ನಿವೇದಿಸಿಕೊಂಡು ಅಮೂಲ್ಯ ಕೊಡುಗೆಯನ್ನಿತ್ತಿದ್ದಾರೆ.

ನನ್ನ ಹಳೆಯ ಸಹೋದ್ಯೋಗಿ ಮತ್ತು ಗೆಳತಿ ಮೃದುಲಾ ಸಾರಾಭಾಯಿ ಈ ಕೃತಿಗೆ ಸಂಬಂಧಿಸಿದಂತೆ ಅನೇಕ ಪ್ರಮುಖರನ್ನು ಕಾಣುವುದರಲ್ಲಿಯೂ ಮತ್ತು ಸಂಬಂಧಪಟ್ಟ ಸ್ಥಳಗಳಿಗೆ ಭೇಟಿಮಾಡುವುದರಲ್ಲಿಯೂ ನನಗೆ ನೆರವನ್ನು ಕೊಟ್ಟರು.

ಇಬ್ಬರು ಗೆಳೆಯರಾದ ಡಾ. ಎನ್. ಬಿ. ಪರೂಲೇಕರ್ ಮತ್ತು ಬಾಬೂರಾವ್ ಪಟೇಲ್ ನನ್ನನ್ನು ಆರ್ಥಿಕ ತೊಂದರೆಯಿಂದ ಪಾರುಮಾಡಿ, ಈ ಪ್ರಿಯ ಕಾರ್ಯಕ್ಕೆ ನನ್ನ ಸೇವೆಯನ್ನೆಲ್ಲ ಕೇಂದ್ರೀಕರಿಸಲು ನೆರವಾದರು.

ನವಜೀವನ ಟ್ರಸ್ಟಿನ ಪರವಾಗಿ ಜೀವನ್‌ಜೀ ಭಾಯಿ ದೇಸಾಯಿ ಕೆಲವು ವಸ್ತುಗಳನ್ನು ಒದಗಿಸಿಕೊಟ್ಟುದಲ್ಲದೆ, ಟ್ರಸ್ಟಿನ ಸ್ವಾಮ್ಯವಾದ ಗಾಂಧೀಜಿಯ ಬರಹಗಳ ಕೆಲವು ಭಾಗಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಸಹಾಯವೆಸಗಿದ್ದಾರೆ. ಇವಕ್ಕಾಗಿ ನವಜೀವನ ಟ್ರಸ್ಟಿನವರಿಗೆ ನನ್ನ ಧನ್ಯವಾದಗಳು.

ಗಾಂಧೀ–ಟಾಗೋರ್ ಪತ್ರವ್ಯವಹಾರವನ್ನೂ ಮತ್ತು ಕೆಲವು ಚಿತ್ರಗಳನ್ನೂ ಉಪಯೋಗಿಸಿಕೊಳ್ಳಲು ಅನುಮತಿಯಿತ್ತ ವಿಶ್ವ–ಭಾರತಿಗೂ ಕೃತಜ್ಞತೆಗಳು ಸಲ್ಲಬೇಕು.

ನವಖಾಲೀಯಲ್ಲಿ ಗಾಂಧೀಜಿಯ ಕಾರ್ಯದರ್ಶಿಯಾಗಿದ್ದ ನಿರ್ಮಲ್ ಕುಮಾರ್ ಬೋಸ್ ಕೆಲವು ವಿಷಯಗಳನ್ನು ಒದಗಿಸಿದುದಲ್ಲದೆ ನವಖಾಲಿಯ ಮೇಲಿನ ಅಧ್ಯಾಯವನ್ನು ಕೃಪೆಯಿಟ್ಟು ಅವಲೋಕಿಸಿದರು. ಮನೂಗಾಂಧೀ, ಯು. ಎಂ. ಡಿ. ಥ್ಯಾಕರ್ಸ್ಸಿ, ಗಿರಿಧಾರಿ ಕೃಪಲಾನಿ ಮತ್ತು ಶ್ಯಾಮಲದಾಸ್ ಗಾಂಧೀ ಕೆಲವು ವಿಷಯಗಳನ್ನು ಒದಗಿಸಿದರು. ಡಾ. ಮಣಿಲಾಲ್ ತ್ರಿವೇದಿ, ಸಿ. ಎಂ. ತ್ರಿವೇದಿ, ಡಿ. ಆರ್. ಡಿ. ವಾಡಿಯಾ, ಕುಸುಮ ಬೆನ್ ದೇಸಾಯಿ, ಶಿವಲಾಲ್ ಮತ್ತು ಕನೂಗಾಂಧೀ ಛಾಯಾಚಿತ್ರಗಳನ್ನು ಎರವಲಾಗಿ ಇತ್ತರು.

ಆರ್. ಜಿ. ಸೊಮನ್, ನರೇಂದ್ರ ದೇವ, ಡಿ. ಎಸ್. ಭಕ್ಲೆ, ಸೋಲೀ ಬಾಟ್ಲೀವಾಲಾ, ಖಿಮಾಜೀ ಭಾಯಿ ಪಟೇಲ್, ಬಾಲಕೋಬಾ ಭಾವೆ, ರತಿಲಾಲ್ ಸೇಠ್, ವಿ. ಸಿ. ಮಸ್ರುವಾಲಾ, ಎನ್. ಆರ್. ಪಾಠಕ್ ಇವರುಗಳೆಲ್ಲ ವಸ್ತುಸಂಗ್ರಹಣ ಕಾರ್ಯದಲ್ಲಿ ಸಕ್ರಿಯವಾಗಿ ನೆರವಾದವರಲ್ಲಿ ಕೆಲವರಾಗಿದ್ದಾರೆ. ಆರ್. ಕೆ. ಪ್ರಭು ಮತ್ತು ಜಿ. ಎನ್. ಧಾವನ್, ತಮ್ಮ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳ ಕಟ್ಟುಗಳನ್ನು ಎರವಲು ಕೊಟ್ಟುದಲ್ಲದೆ, ತಮ್ಮ ಇತರ ಗಾಂಧೀ ಸಾಹಿತ್ಯವನ್ನೂ ನನ್ನ ವಶಕ್ಕೆ ಕೊಟ್ಟರು. ಉಷಾ ಮೆಹತಾ ಗಾಂಧೀಜಿಯ ಕೆಲವು ಗುಜರಾತೀ ಲೇಖನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ಕೊಟ್ಟರು.

ಪುಣೆಯ 'ಭಾರತ ಸೇವಕ ಸಂಘ'ದ ಪುಸ್ತಕ ಭಂಡಾರ, ಸಾಬರಮತಿ ಆಶ್ರಮ ಪುಸ್ತಕ ಭಂಡಾರ, ಕಾಶೀ ವಿದ್ಯಾಪೀಠ, ಸರಕಾರಿ ದಾಖಲೆಗಳ ಪುಸ್ತಕ ಭಂಡಾರ, ಮುಂಬಯಿಯ 'ರಾಯಲ್ ಏಷ್ಯಾಟಿಕ್ ಸೊಸೈಟಿ'ಯ ಪುಸ್ತಕ ಭಂಡಾರ, ಅಲಹಾಬಾದಿನ ಎ.ಐ.ಸಿ.ಸಿ. ಪುಸ್ತಕ ಭಂಡಾರ ಮತ್ತು ಯಾಸ್ನಾಯಾ ಪೋಲಿಯಾನಾದ ವಸ್ತುಸಂಗ್ರಹಾಲಯ ಇವುಗಳ ಮೇಲ್ವಿಚಾರಕರಿಗೆಲ್ಲ ನನ್ನ ಧನ್ಯವಾದಗಳು ಸಲ್ಲುತ್ತವೆ.

ಹಸ್ತಪ್ರತಿಯನ್ನು ಟೈಪ್ ಮಾಡುವ ಅತಿ ಶ್ರಮಸಾಧ್ಯವಾದ ಕೆಲಸದಲ್ಲಿ ಭಾಸ್ಕರನ್ ಮತ್ತು ಅನಂತ ಆಪಸರೇ, ಇವರುಗಳು ಹರ್ಷಚಿತ್ತರಾಗಿ ನೆರವನ್ನು ಇತ್ತಿದ್ದಾರೆ. ಎಂ. ವಿ. ಗಣೇಶ್ ಮತ್ತು ಸಿ. ವಿ. ನಟೇಶನ್ ಸಹ ನೆರವನ್ನಿತ್ತರು.

ಸೆಂಟ್ರಲ್ ಕ್ಯಾಮರಾ ಕಂಪನಿ, ಕಾಂಟಿನೆಂಟಲ್ ಫೋಟೋ ಸ್ಟೋರ್ಸ್, ಪ್ರೀಮಿಯರ್ ಆಫ್‌ಸೆಟ್ ವರ್ಕ್ಸ್, ಪ್ರಾಂತೀಯ ಕೈಗಾರಿಕಾ ಸಂಘ, ಎಲ್.ಎನ್. ರೇಣು, ಪುಂಡಲೀಕ ಕಾತ್ಗಡೆ, ಯು. ಎಸ್. ಮೋಹನರಾವ್, ಪಿ. ಡಿ. ತೆಂಡನ್, ಸೀತಾರಾಮ ಗುಂಫೆ, ಹರಿನಾರಾಯಣ ಸಿಂಗ್, ವಿದ್ಯುತ್‌ಕುಮಾರ್ ವಿ. ಮುನ್ಷಿ, ಚಂಪಕಲಾಲ್ ಸಿ. ಷಾ, ವಿ. ಎನ್. ರಾಜ್‌ಜೀ, ಸಿ. ಸಿ. ಷಾ, ಕೆ. ನಾಗೇಶರಾವ್, ಎಸ್. ಎ. ಐಯ್ಯರ್, ಗಿರಿಧಾರಿ ಮತ್ತು ಎಂ. ಓ. ಮಥಾಯ್ ಇವರುಗಳೆಲ್ಲ ಸಹಾಯಮಾಡಿದರು. ಗ್ರಂಥದ ಕ್ಯಾಲಿಕೋ ಮರೆಹಾಳೆಯ ಮೇಲೆ ಸಿಲ್ಕ್ ಸ್ಕ್ರೀನ್ ಮುದ್ರಣ ಮಾಡಿದ್ದಕ್ಕಾಗಿ ಜೆ. ಮಿಸ್ತ್ರಿಗೆ ವಂದನೆಗಳು.

ಪ್ರಕಾಶನದ ಹೊರೆ ನನ್ನ ಮತ್ತು ನನ್ನ ಸಹೋದ್ಯೋಗಿ ವಿಠಲ್ ಭಾಯಿ ಝವೇರಿಯ ಮೇಲೆ ಬಿದ್ದಿತು. ಇದು ಸಾಧ್ಯವಾಗಲು ಈ ಕೆಳಕಂಡ ಮಹನೀಯರು ಸಾಲರೂಪವಾಗಿ ಚಂದಾ ನೀಡಿ ನೆರವಾಗಿದ್ದಾರೆ. ಇವರೆಲ್ಲರಿಗೂ ನಾವು ಋಣಿಗಳು :

ದಿವಂಗತ ಶ್ರೀ ಧೀರಜ್‌ಲಾಲ್ ಬಿ. ದೇಸಾಯಿ, ಶ್ರೀಮತಿ ಸುಶೀಲಾ ರಾಣಿ ಬಾಬೂರಾವ್, ಶ್ರೀ ಜೆ. ಎಂ. ಕೂಪರ್, ಶ್ರೀ ಎಂ. ಎನ್. ಕುಲಕರ್ಣಿ, ಶ್ರೀ ಕೆ. ಎಚ್. ಕಬ್ಬೂರ್, ಶ್ರೀ ಪಿ. ಎನ್. ಕೌಲ್, ಶ್ರೀ ರಾಮನಾಥ ಪೊದ್ದಾರ್, ಶ್ರೀ ಜಹಾಂಗೀರ್ ಪಿ. ಪಟೇಲ್, ಶ್ರೀ ಪ್ರತಾಪ್ ದಯಾಳ್ ದಾಸ್, ಶ್ರೀಗಳಾದ ಆಮ್ಲುಕ್ ಅಮೀಚಂದ್ ಮತ್ತು ಕಂಪೆನಿ, ಕ್ರೌನ್ ಸ್ಪಿನ್ನಿಂಗ್ ಮತ್ತು ಮ್ಯಾನು ಫ್ಯಾಕ್ಚರಿಂಗ್ ಕೋ., ಲಿಮಿಟೆಡ್, ಭಾಯಿದಾಸ್ ಮಗನ್‌ಲಾಲ್ ಅಂಡ್ ಕೋ., ಎನ್. ಎಂ. ತ್ರಿಪಾಠೀ ಲಿಮಿಟೆಡ್, ಮಫತ್‌ಲಾಲ್ ಗಂಗಾಭಾಯಿ ಅಂಡ್ ಕೋ. ಮತ್ತು ವಿಜಯನಗರಂ ಮಹಾರಾಜ್ ಕುಮಾರ್.

ಶ್ರೀ ಎಸ್. ಕೆ. ಪಾಟೀಲರು ಈ ಹಣ ಕೂಡಿಸುವ ಪ್ರಯಾಸದ ಕಾರ್ಯದಲ್ಲಿ ನಮಗೆ ನೆರವಾಗಿದ್ದಾರೆ.

ಪ್ರಕಾಶನದ ಕಾರ್ಯದಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದುದಲ್ಲದೆ ಎಲ್ಲ ಆವಶ್ಯಕವಾದ ಸೌಕರ್ಯಗಳನ್ನು ನೀಡಿದ ಬೆನೆಟ್ ಕೋಲ್‌ಮನ್ ಅಂಡ್ ಕಂಪನಿ ಲಿಮಿಟೆಡ್‌ನ ಜನರಲ್ ಮ್ಯಾನೇಜರ್ ಜೆ. ಸಿ. ಜೈನ್ ಅವರಿಗೆ ನಮ್ಮ ವಿಶೇಷ ವಂದನೆಗಳು ಸಲ್ಲುತ್ತವೆ. ಟೈಂಸ್ ಆಫ್ ಇಂಡಿಯಾ ಮುದ್ರಣಾಲಯದ ಕಾರ್ಯ ಕರ್ತರು ಪೂರ್ಣ ಸಹಕಾರವಿತ್ತುದಕ್ಕೆ ನಮ್ಮ ವಂದನೆಗಳು.

ಸಮಗ್ರ ಜಗತ್ತಿಗೇ ಸೇರುವ ಮಹಾವ್ಯಕ್ತಿಯ ಜೀವನಚರಿತ್ರೆಯನ್ನು ಪ್ರಕಟಿಸಲು ನಮಗೆ ಮನಃಪೂರ್ವಕ ಸಹಕಾರವನ್ನಿತ್ತ, ಭಾರತದ ಮತ್ತು ಹೊರದೇಶಗಳ ಇತರ ಅನೇಕ ಗೆಳೆಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಡಿ. ಜಿ. ತೆಂ.

ಪ್ಲಾಸಿಯಿಂದ ಅಮೃತಸರಕ್ಕೆ

ವಿದೇಶೀಯರನ್ನು ಓಡಿಸಲು ಕಡೆಯ ಉಗ್ರ ಪ್ರಯತ್ನವಾದ ೧೮೫೭ರ ಬಂಡಾಯ ಸಂಭವಿಸಿದ ಹನ್ನೆರಡು ವರ್ಷಗಳ ತರುವಾಯ, ಮೋಹನದಾಸ್ ಕರಮಚಂದ್ ಗಾಂಧೀ ಜನಿಸಿದರು. ೧೮೫೬ರಲ್ಲಿ ಲಾರ್ಡ್ ಡಾಲ್‌ಹೌಸಿ, ಭಾರತದಿಂದ, ನಿರ್ಗಮಿಸಿದಾಗ, ಬ್ರಿಟಿಷ್ ಆಡಳಿತವು, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಮಗ್ರ ಭಾರತದ ಮೇಲೆ ಸ್ಥಾಪಿತವಾಗಿದ್ದಿತು. ಅದು ಭಾರತದ ಇತಿಹಾಸ ಪಠ್ಯ ಪುಸ್ತಕಗಳಲ್ಲಿ 'ಭಾರತೀಯ ದಂಗೆ' ಎಂಬ ಹೆಸರಿನಿಂದ ಪರಿಚಯವಿರುವ ಬಂಡಾಯದಿಂದ ೧೮೫೭ರ ಮೇ ತಿಂಗಳಲ್ಲಿ ಹಠಾತ್ತನೆ ಸವಾಲನ್ನು ಎದುರಿಸಬೇಕಾಗಿತ್ತು. ಬಂಡಾಯವು ೧೮೫೮ರ ಜೂನ್ ವೇಳೆಗೆ ಮುಕ್ತಾಯವಾಯಿತು. ಆ ಬಂಡಾಯದ ಪರಿಣಾಮವಾಗಿ ಸಂಭವಿಸಿದ ಪ್ರಸಂಗಗಳ ಜೊತೆಗೆ, ರಣಭೂಮಿಯಲ್ಲಿ ಹೋರಾಡುತ್ತಲೇ ಸಾವನ್ನು ಅಪ್ಪಿದ ಝಾನ್ಸಿ ಲಕ್ಷ್ಮಿಬಾಯಿಯ ಸ್ಫೂರ್ತಿದಾಯಕ ವ್ಯಕ್ತಿತ್ವ ಗಮನಾರ್ಹವಾದುದು.

೧೭೫೭ರಲ್ಲಿ ಪ್ಲಾಸೀ ಬಳಿ ನಡೆದ ಕದನದ ತರುವಾಯ ಬ್ರಿಟಿಷ್ ಆಧಿಪತ್ಯದ ತಳಹದಿಯನ್ನು ಸ್ಥಾಪಿಸಲಾಯಿತು. ಭಾರತದ ಆಚೆ, ಹೊರದೇಶಗಳಲ್ಲಿ, ಔದ್ಯಮಿಕ ಕ್ಷೇತ್ರದಲ್ಲಿ ಸಂಭವಿಸಿದ ಹಲವಾರು ನಿರ್ಮಾಣಗಳು ಬ್ರಿಟನ್ ದೇಶವನ್ನು ೧೭೭೦ರ ಕೈಗಾರಿಕಾ ಕ್ರಾಂತಿಗೆ ಅಣಿಗೊಳಿಸಿದುವು. ಇದು ಯಶಸ್ವಿಯಾಗಲು ವಿಶಾಲವಾದ ಮಾರುಕಟ್ಟೆ ಮತ್ತು ಧನದ ಬಂಡವಾಳ ಅಗತ್ಯವಾಗಿದ್ದುವು. ಪರಾಜಿತವಾದ ಭಾರತ ಗೋಣಗುಟ್ಟದೆ ಇವುಗಳನ್ನು ಒದಗಿಸಿತು. ಈಸ್ಟ್ ಇಂಡಿಯಾ ಕಂಪೆನಿಯು ತನ್ನ ಭಂಡಾರವನ್ನು ತುಂಬಿಕೊಳ್ಳಲು ಬಂಗಾಳವನ್ನು ಕೊಳ್ಳೆಹೊಡೆಯಿತು. ೧೭೭೦ರಲ್ಲಿ ಬಂಗಾಳದಲ್ಲಿ ಸಂಭವಿಸಿದ ಒಂದು ಕ್ಷಾಮವು ಭಾರತದ ವಿನಾಶಸ್ಥಿತಿಯನ್ನು ಎತ್ತಿ ತೋರಿಸಿತು. ಅದರಲ್ಲಿ ೧೦ ದಶಲಕ್ಷ ಜನ ಮೃತ್ಯುವಶರಾದರು. ಆದರೂ ಭೂಕಂದಾಯವನ್ನು ಹೆಚ್ಚಿಸಿ, ಅದನ್ನು ಕಠೋರ ರೀತಿಯಲ್ಲಿ ವಸೂಲು ಮಾಡಲಾಯಿತು. ೧೮೧೩ರ ವೇಳೆಗೆ, ಕಂಪೆನಿ ಭಾರತದೊಡನೆ ಹೊಂದಿದ್ದ ವ್ಯಾಪಾರದ ಸರ್ವಪ್ರಾಮುಖ್ಯ ಕೊನೆಗೊಂಡಿತು. ಹೊಸದೊಂದು ಶೋಷಣೆಯ ರೀತಿ ಆರಂಭವಾಯಿತು. ಬ್ರಿಟಿಷ್ ಉತ್ಪನ್ನಗಳಿಗೆ ಅನುಕೂಲವಾಗುವಂತೆ ಭಾರತದ ಮಾರುಕಟ್ಟೆಯನ್ನು ವಿಸ್ತರಿಸುವಂತೆಯೂ ಮತ್ತು ಬ್ರಿಟಿಷ್ ಕೈಗಾರಿಕೆಗೆ ಸಹಾಯವಾಗುವಂತೆ ಭಾರತದ ಕಚ್ಚಾವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುವಂತೆಯೂ ಅದು ರೂಪಿತವಾಯಿತು. ಈ ಕಾಲದಲ್ಲಿ ಭಾರತ

ದಿಂದ ಇಂಗ್ಲೆಡಿಗೆ ಅಗಾಧ ಸಂಪತ್ತಿನ ಹೊಳೆ ಹರಿದುಬಂದಿತು. ಬ್ರಿಟಿಷ್ ಕೈಗಾರಿಕೆಗೆ ಇದನ್ನು ರಕ್ಷಣಾ ನೀತಿಗೆ ಬದಲಾಗಿ ನಿರ್ಬಂಧರಹಿತವಾದ ವ್ಯಾಪಾರದ ದೇಶವನ್ನಾಗಿ ಬದಲಾಯಿಸಲು ಉತ್ತೇಜನ ದೊರಕಿತು. ಬ್ರಿಟನ್ ಅಂದಿನಕಾಲದ ಜಗತ್ತಿನಲ್ಲಿ ಅತ್ಯಂತ ದೊಡ್ಡ ಉತ್ಪಾದನಾ ದೇಶವಾಯಿತು. ಇದರಿಂದ ಭಾರತದಲ್ಲಿ ಘೋರ ದಾರಿದ್ರ್ಯ ಮತ್ತು ಪದೇ ಪದೇ ಕ್ಷಾಮಗಳು ಸಂಭವಿಸುವಂತಾದುವು. ನಿರ್ಬಂಧ ರಹಿತ ವ್ಯಾಪಾರದ ಹೆಸರಿನಲ್ಲಿ ಬ್ರಿಟಿಷ್ ಉತ್ಪನ್ನಗಳು ಭಾರತಕ್ಕೆ ಆತಂಕವಿಲ್ಲದೆ ಬರತೊಡಗಿದವು. ಆದರೆ ಇಂಗ್ಲೆಡನ್ನು ಪ್ರವೇಶಿಸುವ ಭಾರತೀಯ ಸರಕುಗಳ ಮೇಲೆ ಭಾರಿ ಸುಂಕವನ್ನು ವಿಧಿಸಲಾಯಿತು. ೧೭೮೭ರಲ್ಲಿ ಭಾರತದಿಂದ ಬ್ರಿಟನ್ನಿಗೆ ೩ ದಶಲಕ್ಷ ರೂಪಾಯಿಗಳ ಢಕ್ಕಾ ಮಸ್ಲಿನ್ ರಫ್ತಾಗಿತ್ತು; ೧೮೧೭ರಲ್ಲಿ ಅದು ಪೂರ್ಣವಾಗಿ ನಿಂತುಹೋಯಿತು. ಇಡೀ ಜಗತ್ತಿಗೆ ಶತಮಾನಗಳಿಂದ ಹತ್ತಿ ಬಟ್ಟೆಯನ್ನು ರಫ್ತು ಮಾಡುತ್ತಿದ್ದ ಭಾರತ ೧೮೫೦ರ ವೇಳೆಗೆ ಬ್ರಿಟನ್ನಿನ ಹತ್ತಿಬಟ್ಟೆಯ ಉತ್ಪನ್ನದಲ್ಲಿ ನಾಲ್ಕನೆಯ ಒಂದು ಭಾಗವನ್ನು ಆಮದು ಮಾಡಿಕೊಳ್ಳುವಂತಾಯಿತು.

ಇಂಗ್ಲೆಂಡಿನ ಯಂತ್ರೋತ್ಪನ್ನ ವಸ್ತ್ರ, ಭಾರತದ ಕೈಮಗ್ಗದ ಉದ್ಯಮವನ್ನು ನಾಶಮಾಡಿತು; ಹಾಗೆಯೇ ಯಂತ್ರೋತ್ಪನ್ನ ನೂಲು, ಭಾರತೀಯ ನೂಲುಗಾರ ರನ್ನು ನಾಶಮಾಡಿತು. ಭಾರತದ ಪರಂಪರಾಗತ ಅರ್ಥ ವ್ಯವಸ್ಥೆಯ ಆಧಾರ ವಾಗಿದ್ದು, ಕೃಷಿಗೆ ಪೂರಕವಾಗಿದ್ದ ಗೃಹಕೈಗಾರಿಕೆ ನಾಶವಾಗುವಂತಾಯಿತು. ಲಕ್ಷಾಂತರ ಕಸಬುದಾರರೂ ಮತ್ತು ಕರಕುಶಲ ವಿದ್ಯೆಯವರೂ ತಮ್ಮ ಜೀವನೋಪಾಯಕ್ಕೂ ಮತ್ತು ಉಳಿವಿಗೂ ಅನಿವಾರ್ಯವಾಗಿ ಕೃಷಿಯನ್ನೇ ಅವಲಂಬಿಸಬೇಕಾದ ಸ್ಥಿತಿ ಬಂದಿತು. ೧೭೭೦ ರಿಂದ ೧೯೦೦ ರವರೆಗಿನ ೧೩೦ ವರ್ಷಗಳಲ್ಲಿ ಇಪ್ಪತ್ತೆರಡು ಕ್ಷಾಮಗಳು ಸಂಭವಿಸಿದುವು. ಲಕ್ಷಾಂತರ ಮಂದಿ ಅನ್ನವಿಲ್ಲದೆ ಸಾವಿಗೀಡಾದರು. ಜೀವಸಹಿತ ಉಳಿದವರು ವಿದೇಶೀ ಪ್ರಭುತ್ವದ ಕೆಡುಕುಗಳನ್ನು ಪ್ರತಿಭಟಿಸುವ ಶಕ್ತಿಯಿಂದ ಕೂಡಿರಲಿಲ್ಲ. ಗೌರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ಹೀಗೆ ವರದಿ ಮಾಡಿದ್ದನು: 'ವಾಣಿಜ್ಯದ ಇತಿಹಾಸ ದಲ್ಲಿ ಇಂಥ ಸಂಕಟದ ಸ್ಥಿತಿಗೆ ಸಾಟಿ ಯಾದುದಿಲ್ಲ. ಹತ್ತಿ ನೇಕಾರರ ಮೂಳೆಗಳು ಭಾರತದ ಮೈದಾನಗಳನ್ನು ಬಿಳಿಗೈದಿವೆ'. ಹೀಗೆ ದಾರಿದ್ರ್ಯದಿಂದ ಶಕ್ತಿ ಯುಡುಗಿದ್ದ ಜನಾಂಗವೂ ನೀರತನದಿಂದ ಬಂಡಾಯವೆದ್ದಿತು.

೧೮೫೭ರ ಬಂಡಾಯವು ಎಲ್ಲೆಲ್ಲಿಯೂ ಗೊಂದಲವನ್ನುಂಟುಮಾಡಿತು. ಅದು ದಮನವಾದ ಮೇಲೆ, ಈಸ್ಟ್ ಇಂಡಿಯಾ ಕಂಪೆನಿಯು ರದ್ದಾಯಿತು. ಬ್ರಿಟಿಷ್ ಸಾಮ್ರಾಟ ದೇಶದ ಆಡಳಿತವನ್ನು ವಹಿಸಿಕೊಂಡನು. ೧೮೫೮ರ ಆಗಸ್ಟ್‌ನಲ್ಲಿ ವಿಧಿಸಲ್ಪಟ್ಟ "ಆಕ್ಟ್ ಫಾರ್ ದಿ ಬೆಟರ್ ಗೌರ್ನಮೆಂಟ್ ಆಫ್ ಇಂಡಿಯಾ" ಅಧಿಶಾಸನದ ಪ್ರಕಾರ ಕಂಪೆನಿಯ ಸದಸ್ಯರ ಮತ್ತು ಆಡಳಿತ ಮಂಡಲಿಯ

ಅಧಿಕಾರವು ರಾಜ್ಯ ಕಾರ್ಯದರ್ಶಿಗೆ (Secretary of State) ವರ್ಗವಾಯಿತು. ಅವನು ಬ್ರಿಟಿಷ್ ಸಂಪುಟದ ಸದಸ್ಯನಾಗಿದ್ದು, ಸಂಸತ್ತಿಗೆ ಹೊಣೆಗಾರನಾಗಿದ್ದನು. ಸಾಮ್ರಾಟ ಪ್ರತಿನಿಧಿ (ವೈಸ್‌ರಾಯ್) ಮತ್ತು ಗೌರ್ನರ್ ಜನರಲ್ ಎಂಬ ಹೊಸ ಹೆಸರಿನಿಂದ ಕರೆಯಲ್ಪಟ್ಟ ಲಾರ್ಡ್ ಕ್ಯಾನಿಂಗ್, ೧೮೫೮ರ ನವೆಂಬರ್‌ನಲ್ಲಿ ಮಾಡಿದ ರಾಜಘೋಷಣೆಯ ಮೂಲಕ ಈ ಪರಿವರ್ತನೆಯನ್ನು ವಿಧಿವತ್ತಾಗಿ ಪ್ರಕಟಿಸಿದನು. ''ನಾವು ನಮ್ಮ ಇತರ ಎಲ್ಲ ಪ್ರಜೆಗಳ ವಿಷಯದಲ್ಲಿ ಹೊಂದಿರುವ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳು ಇವುಗಳನ್ನೇ ನಮ್ಮ ಭಾರತೀಯ ಪ್ರದೇಶಗಳಲ್ಲಿ ವಾಸಿಸುವ ದೇಶೀಯರ ಬಗೆಗೂ ಹೊಂದಿದ್ದು ಅವುಗಳಿಗೆ ಬದ್ಧರಾಗಿದ್ದೇವೆ. ಅವರ ಅಭಿವೃದ್ಧಿಯೇ ನಮ್ಮ ಶಕ್ತಿ. ಅವರ ತೃಪ್ತಿಯೇ ನಮ್ಮ ಭದ್ರತೆ: ಅವರ ಕೃತಜ್ಞತೆಯೇ ನಮಗೆ ಮಹಾ ಪ್ರತಿಫಲ''

ಆಗಲೇ ಪರಾಧೀನವಾಗಿ ಅವನತವಾಗಿದ್ದ ಜನಾಂಗದ ಮೇಲೆ, ಬ್ರಿಟನ್ ಮತ್ತು ಭಾರತದ ಸಂಬಂಧಗಳಲ್ಲಿ, ಶೃಂಖಲೆ ಹೆಚ್ಚು ಬಿಗಿಯಾದ ಹೊಸ ಅಧ್ಯಾಯ ಆರಂಭವಾಯಿತು. ೧೮೬೫ರಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಕೇಬಲ್ ಮೂಲಕ ಸುದ್ದಿ ಕಳಿಸುವ ವ್ಯವಸ್ಥೆ ಆರಂಭವಾದ್ದರಿಂದಲೂ ೧೮೬೯ರಲ್ಲಿ ಸೂಯೆಸ್ ಕಾಲುವೆ ಆರಂಭವಾದ್ದರಿಂದಲೂ ಹಾಗೆಯೇ ಭಾರತದಲ್ಲಿಯೂ ರೈಲು ಮಾರ್ಗಗಳು, ರಸ್ತೆಗಳು ಮತ್ತು ತಂತಿ ಸುದ್ದಿ ವ್ಯವಸ್ಥೆ ಆರಂಭವಾದ್ದರಿಂದಲೂ ದೂರ ಎಂಬುದು ಬಹುಮಟ್ಟಿಗೆ ತನ್ನ ಶಕ್ತಿಯನ್ನು ಕಳೆದುಕೊಂಡಿತು.

ರಾಜಘೋಷಣೆ, ಅನೇಕ ವರ್ಷಗಳವರೆಗೆ ಒಂದು ಬಗೆಯಲ್ಲಿ ಅಪ್ಯಾಯಮಾನವಾಗಿತ್ತು. ಬ್ರಿಟಿಷ್ ಸಾಮ್ರಾಟನಿಗೆ ನಿಷ್ಠೆ ತೋರಿಸುವುದರಲ್ಲಿ ಭಾರತೀಯ ನಾಯಕರು ಒಬ್ಬರೊಡನೆ ಒಬ್ಬರು ಸ್ಪರ್ಧಿಸತೊಡಗಿದರು. ಆದರೆ, ಎಲ್ಲ ಬ್ರಿಟಿಷ್ ಪ್ರಜೆಗಳಿಗೂ ಸಮಾನ ಸ್ಥಾನಮಾನ ಎಂಬ ಬಗೆಗೆ, ೧೮೭೬ ರಿಂದ ೧೮೮೦ ರವರೆಗೆ ಸಾಮ್ರಾಟ ಪ್ರತಿನಿಧಿಯಾಗಿದ್ದ ಲಾರ್ಡ್ ಲಿಟ್ಟನ್, ಭಾರತ ರಾಜ್ಯ ಕಾರ್ಯದರ್ಶಿಗೆ ಬರೆದ ಒಂದು ಗುಪ್ತಪತ್ರದಲ್ಲಿ ಈ ರೀತಿ ಉಲ್ಲೇಖಿಸಿದನು: 'ಈ ಎಲ್ಲ ಹಕ್ಕುಗಳು ಮತ್ತು ಭರವಸೆಗಳು ಎಂದಿಗೂ ಈಡೇರಿಸಲು ಸಾಧ್ಯವಿಲ್ಲದುವು ಎಂಬುದು ನಮಗೆಲ್ಲ ಅರಿವಿದೆ.' ೧೮೬೪ರಲ್ಲಿ ಒಬ್ಬನೇ ಭಾರತೀಯ ಇಂಡಿಯನ್ ಸಿವಿಲ್ ಸರ್ವಿಸ್ಸಿಗೆ ಸೇರಿದನು; ೧೮೭೧ರಲ್ಲಿ ಮೂರು ಮಂದಿ ಸೇರಿದರು; ೧೯೧೫ರ ಹೊತ್ತಿಗೂ ಸಿವಿಲ್ ಸರ್ವಿಸ್ಸಿನ ಅತ್ಯಂತ ಉನ್ನತ ಹಾಗೂ ಅತ್ಯಂತ ಹೆಚ್ಚಿನ ಸಂಬಳದ ಹುದ್ದೆಗಳಲ್ಲಿ ಶೇ. ೮೦ಕ್ಕೂ ಹೆಚ್ಚಿನಷ್ಟು ಸ್ಥಾನಗಳು ಇನ್ನೂ ಬ್ರಿಟಿಷರ ವಶದಲ್ಲೇ ಇದ್ದುವು. ೧೮೫೭ರ ಬಂಡಾಯದಿಂದ ಬ್ರಿಟನ್ನಿನ ಸಾರ್ವಜನಿಕ ಜೀವನದಲ್ಲಿ ಉತ್ಪನ್ನವಾಗಿದ್ದ ಆ ಶಕ್ತಿಯ ಕಾವು ಆರಿಹೋಗುತ್ತಿದ್ದಿತು. ಎಲ್ಲೋ ಅಪರೂಪ ಸಂದರ್ಭಗಳಲ್ಲಿ ಮಾತ್ರ ಭಾರತದ ಬಗೆಗಿನ ನೀತಿ ರಾಜಕೀಯ ಪಕ್ಷಹೋರಾಟದ ವಿಷಯವಾಗುತ್ತಿತ್ತು. ಎರಡೂ ಕಡೆಗಳ ನಾಯಕರು ಭಾತಕ್ಕೆ ಸ್ವಯಮಾಧಿಕಾರ

ನೀಡುವುದು ಇನ್ನೂ ರಾಜಕೀಯ ಜಾಣ್ಮೆಯಲ್ಲವೆಂಬ ಒಮ್ಮತದಿಂದ ಕೂಡಿದ್ದರು. ಉದಾ: ಡಿಸ್ರೇಲಿ ೧೮೭೬ರಲ್ಲಿ ರಾಜ್ಞಿ ವಿಕ್ಟೋರಿಯಾಗೆ ಸಾಮ್ರಾಜ್ಞಿಯ ಬಿರುದನ್ನು ಸಲ್ಲಿಸುತ್ತಾ, "ಇಂಗ್ಲೆಂಡಿನ ಸಂಸತ್ ಭಾರತದ ಸಾಮ್ರಾಜ್ಯವನ್ನು ಎತ್ತಿಹಿಡಿದಿದೆಯೆಂಬುದನ್ನು ಜಗತ್ತಿಗೇ ತೋರಿಸಲು ಸಂಕಲ್ಪಿಸಿದೆ" ಎಂದು ನುಡಿದಿದ್ದರು. ಎಲ್ಲ ವಿಧಗಳಲ್ಲಿಯೂ ಡಿಸ್ರೇಲಿಗೆ ವಿರೋಧಿಯಾಗಿದ್ದ ಜಾನ್ ಬ್ರೈಟ್, ಭಾರತದ ಸ್ವಾತಂತ್ರ್ಯ ಸಾಧನೆಯು 'ತಲೆಮಾರುಗಳ' ಮಾತು ಎಂಬ ಟೋರಿಗಳ ನಿಶ್ಚಿತ ಅಭಿಪ್ರಾಯವನ್ನೇ ಹೊಂದಿದ್ದನು.

ಜನಾಂಗ, ಪರಾಜಿತವಾಗಿ ಸತ್ವಹೀನವಾಗಿದ್ದರೂ ಸಾರ್ವಜನಿಕ ಪ್ರಜ್ಞೆಯುಳ್ಳ ನಾಯಕರು ಹೊಸ ರಾಷ್ಟ್ರಕ್ಕೆ ಹೊಸ ಜೀವಕಳೆಯನ್ನು ತುಂಬಲು ಪ್ರಯತ್ನಿಸಿದರು. ರಾಮ ಮೋಹನರಾಯ್‌ನಂಥ ಮಹಾವ್ಯಕ್ತಿ ಹುಟ್ಟಿಬಂದರು.

೧೭೭೨ರಲ್ಲಿ ಜನಿಸಿದ ರಾಮಮೋಹನ್ ರಾಯ್ ಬಂಗಾಳದಲ್ಲಿ ಸಾರ್ವಜನಿಕ ಸೇವಾ ಕಾರ್ಯಕ್ಕೆ ತಳಹದಿ ಹಾಕಿದರು. ಸಂಸ್ಕೃತ, ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ಅವರು ನಿಷ್ಣಾತನಾಗಿದ್ದರು. ಅವರು ವಿಗ್ರಹಾರಾಧನೆ ಮತ್ತು ಮೂಢ ನಂಬಿಕೆಗಳ ವಿರುದ್ಧವಾಗಿ ಬೋಧಿಸಿದರು. ಆ ಕಾಲದಲ್ಲಿ ಇಂಗ್ಲಿಷ್ ಪಾಠಶಾಲೆಗಳಿಲ್ಲದಿದ್ದುದರಿಂದ ಅವರು ಇಪ್ಪತ್ತು ನಾಲ್ಕನೆಯ ವಯಸ್ಸಿನಲ್ಲಿ ಇಂಗ್ಲಿಷ್ ಕಲಿಯಲು ಪ್ರಾರಂಭಿಸಿದರು. ಅವರು ಪಶ್ಚಿಮದ ಧರ್ಮ ಮತ್ತು ಸಂಸ್ಕೃತಿಗಳ ಮೂಲವನ್ನು ಕಂಡುಹಿಡಿಯಲು ಗ್ರೀಕ್, ಲ್ಯಾಟಿನ್ ಮತ್ತು ಹಿಬ್ರೂಗಳನ್ನು ಕಲಿತರು. ಅವರು ವಿಜ್ಞಾನಶಾಸ್ತ್ರಗಳಲ್ಲಿಯೂ ಆಸಕ್ತಿ ಹೊಂದಿದ್ದರು. ೧೮೧೮ರಲ್ಲಿ ಅವರು ಸತೀ ಪದ್ಧತಿಗೆ ವಿರೋಧವಾಗಿ ಚಳವಳಿಯನ್ನು ಆರಂಭಿಸಿದರು. ರುದ್ರಭೂಮಿಗೆ ಹೋಗಿ ಆ ಕ್ರೂರ ಪದ್ಧತಿಯನ್ನು ತ್ಯಜಿಸಬೇಕೆಂದು ಜನರಿಗೆ ಪ್ರೇರಿಸಿದರು. ಆ ಪದ್ಧತಿ ೧೮೨೯ರ ಡಿಸೆಂಬರ್ ತಿಂಗಳಲ್ಲಿ ರದ್ದಾಯಿತು. ರಾಮಮೋಹನ ರಾಯ್ ತಮ್ಮ ವಿಚಾರಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ೧೮೨೧ರಲ್ಲಿ "ಸಂಬಾದ್ ಕೌಮುದಿ" ಎಂಬ ಬಂಗಾಳಿ-ಇಂಗ್ಲಿಷ್ ದ್ವಿಭಾಷಾ ಸಾಪ್ತಾಹಿಕವನ್ನೂ ಮತ್ತು ೧೮೨೨ರಲ್ಲಿ "ಮಿರಾತ್-ಉಲ್-ಅಖಬಾರ್" ಎಂಬ ಫಾರಸೀ ಭಾಷಾ ಸಾಪ್ತಾಹಿಕವನ್ನೂ ಪ್ರಾರಂಭಿಸಿದರು. ಈ ಪತ್ರಿಕೆಗಳು ಬಹುಶಃ ಭಾರತೀಯನೊಬ್ಬ ಪಾರಂಭಿಸಿ ನಡೆಸಿದ ಪ್ರಥಮ ಪತ್ರಿಕೆಗಳಿರಬೇಕು. ರಾಮಮೋಹನ ರಾಯ್ ಅವರ ಪತ್ರಿಕಾ ವ್ಯವಸಾಯ ಅವನ ಸುಧಾರಣಾ ಚಳವಳಿಗೆ ಪ್ರಧಾನವಾಗಿ ಸಂಬಂಧಿಸಿದ್ದವು. ಸಂಪ್ರದಾಯ ಪಂಥದವರು ಅವರಿಗೆ ತೀವ್ರ ವಿರೋಧಿಗಳಾಗಿದ್ದರು. ಅವರಿಗೆ ಕೆಲವರು ನಿಷ್ಠಾವಂತ ಬೆಂಬಲಿಗರಿದ್ದರು. ಅವರ ಪೈಕಿ ಬಂಗಾಳದ ಪುನರುತ್ಥಾನದಲ್ಲಿ ಮಹಾಪಾತ್ರ ವಹಿಸಿದ ಟಾಗೋರ್ ವಂಶದವರೂ ಇದ್ದರು. ಅವರು ವ್ಯಾಕರಣ, ಭೂಗೋಳ, ಖಗೋಳಶಾಸ್ತ್ರ ಮತ್ತು ಜ್ಯಾಮಿತಿಗಳನ್ನು ಕುರಿತು ಬಂಗಾಳಿಯಲ್ಲಿ ಪಠ್ಯಪುಸ್ತಕಗಳನ್ನು ಬರೆದರು. ಅವರ ಸಲಹೆಯ ಪ್ರಕಾರ

ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಆರಂಭಿಸುವುದಕ್ಕಾಗಿ ೧೮೧೭ರಲ್ಲಿ ಕಲ್ಕತ್ತಾದಲ್ಲಿ ಹಿಂದೂ ಕಾಲೇಜ್ ಸ್ಥಾಪಿತವಾಯಿತು. ಹಿಂದೂಗಳನ್ನು ಹಾನಿಕರ ಪದ್ಧತಿಗಳಿಂದ ತಪ್ಪಿಸಲು ೧೮೨೮ರಲ್ಲಿ ಬ್ರಾಂಹ್ಮೋ ಸಮಾಜವನ್ನು ಸ್ಥಾಪಿಸಿದರು. ದಿವ್ಯ ಉಪಾಸನೆಯಲ್ಲಿ ಒಟ್ಟುಗೂಡಿಸಲು ಇಚ್ಛಿಸಿದ ಎಲ್ಲ ಪಂಥಗಳವರಿಗೂ ಅದೊಂದು ಮೇಳಸ್ಥಾನವಾಗಬೇಕಾಗಿದ್ದಿತು. ೧೮೩೦ರಲ್ಲಿ ಅವರು ಡಿಲ್ಲಿಯ ನಾಮಮಾತ್ರದ ಸಾಮ್ರಾಟನಾಗಿದ್ದ ಅಕ್ಬರ್ ಷಾನ ಕುಂದುಕೊರತೆಗಳನ್ನು ನಿವೇದಿಸುವುದಕ್ಕಾಗಿ ಇಂಗ್ಲೆಂಡಿಗೆ ಹೋದರು. ಈ ಉದ್ದೇಶಕ್ಕಾಗಿ ಅವರು ಸಾಮ್ರಾಟನಿಂದ 'ರಾಜಾ' ಎಂಬ ಬಿರುದನ್ನು ಮತ್ತು ಅಧಿಕಾರಮುದ್ರೆಯನ್ನೂ ಪಡೆದರು. ಇಂಗ್ಲೆಂಡಿಗೆ ಯಾನ ಮಾಡುವಾಗ ಅವರ ಆರೋಗ್ಯ ದುರ್ಬಲವಾಗಿದ್ದರೂ ಕೇಪ್ ಟೌನ್ ರೇವುಪಟ್ಟಣದಲ್ಲಿ ಲಂಗರು ಹಾಕಿ ನಿಲ್ಲಿಸಿದ್ದ ಫ್ರೆಂಚ್ ಹಡಗೊಂದಕ್ಕೆ ಭೇಟಿಕೊಡಲು ಒತ್ತಾಯಪಡಿಸಿದರು. 'ಸ್ವಾತಂತ್ರ್ಯ, ಸಮತೆ, ಭ್ರಾತೃಭಾವ' ಇವುಗಳಿಗಾಗಿ ಕ್ರಾಂತಿಯ ಧ್ವಜವನ್ನು ಎತ್ತಿಹಿಡಿದ ಫ್ರಾನ್ಸಿಗೆ ತನ್ನ ಮಾತೃಭೂಮಿಯ ಗೌರವವನ್ನು ಸೂಚಿಸಲು ಬಯಸಿದರು. ಐದು ತಿಂಗಳ ಯಾನದ ತರುವಾಯ, ೧೮೩೧ರ ಏಪ್ರಿಲ್‌ನಲ್ಲಿ ಅವರು ಇಂಗ್ಲೆಂಡನ್ನು ತಲುಪಿದರು. ನಾಲ್ಕನೆಯ ವಿಲಿಯಂನ ಕಿರೀಟಧಾರಣೆಯ ಮಹೋತ್ಸವದ ಸಮಯದಲ್ಲಿ ಸ್ವತಂತ್ರ ದೇಶಗಳ ರಾಯಭಾರಿಗಳ ಸಾಲಿನಲ್ಲಿ ಅವರಿಗೂ ಆಸನವನ್ನು ನೀಡಲಾಗಿದ್ದಿತು. ೧೮೩೨ರ ಸುಧಾರಣಾ ಮಸೂದೆಯ ಮಹಾ ಚಳವಳಿಯಲ್ಲಿ ಅವರು ಗಾಢ ಆಸಕ್ತಿ ಹೊಂದಿದ್ದರು. ಆ ಸಂದರ್ಭದಲ್ಲಿ ಅವರು ಹೀಗೆ ನುಡಿದಿದ್ದರು: "ಈ ಹೋರಾಟಗಳು ಸುಧಾರಣಾವಾದಿಗಳು ಮತ್ತು ಸುಧಾರಣಾ ವಿರೋಧಿಗಳ ನಡುವೆ ನಡೆಯುತ್ತಿಲ್ಲ; ಜಗತ್ತಿನಾದ್ಯಂತ ಇರುವ ಸ್ವಾತಂತ್ರ್ಯ ಮತ್ತು ದಬ್ಬಾಳಿಕೆಗಳ ನಡುವಿನ ಹೋರಾಟಗಳಾಗಿವೆ." ೧೮೩೨ರಲ್ಲಿ ಅವರು ಪ್ಯಾರಿಸ್ಸಿಗೆ ಭೇಟಿಯಿತ್ತಾಗ, ಅತ್ಯಂತ ಉಚ್ಚ ಗೌರವಗಳಿಂದ ಸ್ವಾಗತಿಸಲ್ಪಟ್ಟರು. ಸುಧಾರಿತವಾದ ಸಂಸತ್ ಪ್ರಥಮ ಬಾರಿಗೆ ಅಧಿವೇಶನ ಸೇರಿದಾಗ, ಅವರು ಇಂಗ್ಲೆಂಡಿನಲ್ಲಿಯೇ ಇದ್ದರು. ಭಾರತದ ರಾಜಕೀಯ ಸುಧಾರಣೆಯನ್ನು ಪ್ರತಿಪಾದಿಸಿ, ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಬಗೆಗೆ ವಾದಿಸಿದರು. ಸಂಸತ್ತಿನ ಸಮಿತಿಯೊಂದರ ಮುಂದೆ ಸಾಕ್ಷ್ಯ ನೀಡಲು ಇಂಗ್ಲೆಂಡಿಗೆ ಹೋದ ಪ್ರಥಮ ಭಾರತೀಯ ಅವರೇ. 'ಆಧುನಿಕ ಭಾರತದ ತಂದೆ' ಎಂದು ಪ್ರಸಿದ್ಧನಾದ ರಾಜಾ ರಾಮಮೋಹನ ರಾಯ್ ಅಮೇರಿಕಾಕ್ಕೂ ಭೇಟಿನೀಡಲು ಇಚ್ಛಿಸಿದರು. ಆದರೆ ೧೮೩೩ರ ಸೆಪ್ಟೆಂಬರ್‌ನಲ್ಲಿ ಬ್ರಿಸ್ಟಲ್ ಪಟ್ಟಣದಲ್ಲಿದ್ದಾಗ ಅನಿರೀಕ್ಷಿತವಾಗಿ ಸಾವಿಗೆ ತುತ್ತಾದರು.

ಆ ಕಾಲದಲ್ಲಿ ಇನ್ನೊಬ್ಬ ಮಹಾ ವ್ಯಕ್ತಿ, ಸರ್ ಸಯ್ಯದ್ ಅಹಮದ್ ಖಾನ್. ೧೮೧೭ರಲ್ಲಿ ಜನಿಸಿದ ಅವರು ಮಹಾ ವಿದ್ವಾಂಸ ಮತ್ತು ಶಿಕ್ಷಣ ಪ್ರೇಮಿ ಆಗಿದ್ದರು. ೧೮೫೭ರ ಬಂಡಾಯದ ಪರಿಣಾಮವಾಗಿ, ಮುಸ್ಲಿಮರು ಹಿಂದೂಗಳಿಗಿಂತ ಹೆಚ್ಚಾಗಿ

ಬ್ರಿಟಿಷರ ಪ್ರತೀಕಾರಭಾವಕ್ಕೆ ಗುರಿಯಾದರು. ಆಗ ಅಹಮದ್ ಖಾನ್, ಅಧೀನ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದರು. ಅಂದಿನ ಬಂಡಾಯಕ್ಕೆ, ಸರಕಾರ ಜನತಾ ಸಂಪರ್ಕ ಹೊಂದದೆ ಇದ್ದುದೂ, ಆದುದರಿಂದ ಜನತೆಯ ಭಾವಗಳು ಮತ್ತು ಸ್ಥಿತಿಗತಿಗಳ ಬಗೆಗೆ ಏನೂ ತಿಳಿವಳಿಕೆ ಇಲ್ಲದಿದ್ದುದೂ ಒಂದು ಪ್ರಧಾನವಾದ ಕಾರಣವೆಂದು ಎತ್ತಿ ತೋರಿಸಿದರು. ಅವರು ಹೀಗೆ ಹೇಳಿದರು: "ಶಾಸನ ಸಭೆಗಳಲ್ಲಿ ಭಾರತೀಯರಿಗೆ ಪ್ರಾತಿನಿಧ್ಯವಿದ್ದಿದ್ದರೆ, ಅವರು ಜನತೆಯ ಕುಂದು ಕೊರತೆಗಳನ್ನು ಆಗಾಗ ಸರಕಾರದ ಗಮನಕ್ಕೆ ತರುತ್ತಿದ್ದರು."

ಮೊಗಲರ ಆಡಳಿತ ಕಾಲದಲ್ಲಿ ಉನ್ನತ ಸ್ಥಾನ ಮತ್ತು ಪ್ರಸಿದ್ಧಿಯನ್ನು ಪಡೆದಿದ್ದ ಕುಟುಂಬವೊಂದಕ್ಕೆ ಸೇರಿದ್ದ ಸೈಯ್ಯದ್ ಅಹಮದ್, ೧೮೩೭ರಲ್ಲಿ ಸಿವಿಲ್ ಸರ್ವಿಸ್ಸಿನ ಸಾಮಾನ್ಯ ಕೆಲಸಕ್ಕೆ ಸೇರಿ ಕ್ರಮೇಣ ಅಂದಿನ ಭಾರತದಲ್ಲಿ ಭಾರತೀಯನೊಬ್ಬ ಹೊಂದಿದ್ದ ಅತ್ಯಂತ ಉನ್ನತ ಸ್ಥಾನವಾದ ಗೌರ್ನರ್ ಜನರಲ್‌ನ ಶಾಸನ ಸಭೆಯ ಸದಸ್ಯತ್ವವನ್ನು ಪಡೆದುಕೊಂಡರು. ಅವರ ಕೋಮಿನಲ್ಲಿ ಅವರ ಪ್ರಭಾವ ಮಹತ್ವದ್ದಾಗಿದ್ದಿತು. ಅವರು ಅದಕ್ಕೆ ಸಲ್ಲಿಸಿದ ಗಮನಾರ್ಹವಾದ ಸೇವೆ ಶಿಕ್ಷಣ ಕ್ಷೇತ್ರದಲ್ಲಾಗಿದ್ದಿತು. ಅವರು ಪ್ರಾಚ್ಯ ಶಿಕ್ಷಣವನ್ನೂ ಮತ್ತು ಪಾಶ್ಚಾತ್ಯ ಸಾಹಿತ್ಯ ಹಾಗೂ ವಿಜ್ಞಾನವನ್ನೂ ಪರಸ್ಪರ ಹೊಂದಾಣಿಕೆಗೆ ತರಲು ಯತ್ನಿಸಿದರು. ೧೮೫೮ರಿಂದ, ಆತ ಕಾಲವಾದ ೧೮೯೮ರ ವರೆಗೂ ಭಾರತದ ಮುಸ್ಲಿಂ ಸಾರ್ವಜನಿಕ ಜೀವನದಲ್ಲಿ ಪ್ರಧಾನವಾಗಿದ್ದರು. ಆತ ಕಾಂಗ್ರೆಸ್ಸಿನ ಬೇಡಿಕೆಯ ನ್ಯಾಯದ ಬಗೆಗೆ ಒಪ್ಪಿದರೂ, ಮುಸ್ಲಿಮರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಸೇರಿಕೊಳ್ಳುವ ಅಭಿಪ್ರಾಯಕ್ಕೆ ವಿರೋಧವಾಗಿದ್ದರು. ಕೋಮು ರಾಜಕೀಯದಿಂದ ದೂರವಿದ್ದು, ಶಿಕ್ಷಣಕ್ಕೆ ಶಕ್ತಿಸರ್ವಸ್ವವನ್ನೂ ವಿನಿಯೋಗಿಸಬೇಕೆಂದು ಬುದ್ಧಿವಾದವಿತ್ತರು. ೧೮೭೬ರಲ್ಲಿ ಅಲೀಘಡದಲ್ಲಿ ಮುಸ್ಲಿಂ ಕಾಲೇಜ್ ಸ್ಥಾಪಿಸಿದರು. ಹತ್ತು ವರ್ಷಗಳ ತರುವಾಯ, ಆತ ಒಂದು ಮುಸ್ಲಿಂ ಸಮ್ಮೇಳನವನ್ನು ನಡೆಸಿದರು. 'ವಿಚಾರವೊಂದೇ ಯುಕ್ತ ಮಾರ್ಗದರ್ಶಿ' ಎಂಬುದು ಆತನ ಶಿಕ್ಷಣ ಧ್ಯೇಯವಾಗಿದ್ದಿತು. ಹಿಂದೂಗಳು ಮತ್ತು ಮುಸ್ಲಿಮರು ಇಬ್ಬರೂ ಭಾರತದ ಎರಡು ಕಣ್ಣುಗಳೆಂಬುದು ಆತನ ನಂಬಿಕೆಯಾಗಿದ್ದಿತು.

ಹತ್ತೊಂಬತ್ತನೆಯ ಶತಮಾನದ ಮಧ್ಯ ಕಾಲದವರೆಗೂ ಪಾಶ್ಚಾತ್ಯ ರಾಜಕೀಯ ಅಭಿಪ್ರಾಯಗಳು ಭಾರತದಲ್ಲಿ ಅಭಿವ್ಯಕ್ತಗೊಳ್ಳಲಿಲ್ಲ. ೧೮೫೧ರಲ್ಲಿ, ಬಂಗಾಳದಲ್ಲಿ, 'ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್' ಎಂಬ ಸಂಸ್ಥೆಯೂ, ೧೮೫೨ರಲ್ಲಿ 'ಮುಂಬೈ ಅಸೋಸಿಯೇಷನ್' ಎಂಬ ಸಂಸ್ಥೆಯೂ ಸ್ಥಾಪಿತವಾದುವು. ದಾದಾಭಾಯಿ ನವರೋಜಿ ಮತ್ತು ಪ್ರಸಿದ್ಧ ನ್ಯಾಯಶಾಸ್ತ್ರಜ್ಞ ವಿಶ್ವನಾಥ ನಾರಾಯಣ ಮಾಂಡಲಿಕ್ ಇವರುಗಳು ಮುಂಬೈ ಅಸೋಸಿಯೇಷನ್ನಿನ ಪ್ರಮುಖ

ವ್ಯಕ್ತಿಗಳಾಗಿದ್ದರು. ಲ್ಯಾಂಕಾಷೈರಿನ ವಸ್ತುಗಳಿಗೆ ತೋರಿಸಿದ ಸ್ವಪಕ್ಷಪಾತವನ್ನು ಪ್ರತಿಭಟಿಸುವ ಸಲುವಾಗಿ, ಮಾಂಡಲಿಕ್, ಇಂದು 'ಖಾದೀ' ಎಂದು ಕರೆಯುವ ದೇಶೀ ವಸ್ತ್ರವನ್ನು ಧರಿಸಿ, ಮುಂಬೈ ಶಾಸನ ಸಭೆಯ ಮುಂದೆ ಹಾಜರಾಗಿ, ಅದು ತನ್ನ ರಾಜಕೀಯ ಪ್ರತಿಭಟನೆಯೆಂದು ನುಡಿದಿದ್ದನು. ದಕ್ಷಿಣ ಭಾರತದಲ್ಲಿ ೧೮೭೮ರಲ್ಲಿ ಹಿಂದೂ ಪತ್ರಿಕೆಯ ಸ್ಥಾಪನೆಯಿಂದ ಸಾರ್ವಜನಿಕ ಜೀವನಕ್ಕೆ ಅಂಕುರಾರ್ಪಣವಾಯಿತು. ಅದರ ಸ್ಥಾಪಕರುಗಳಾದ ಎಂ. ವಿಜಯ ರಾಘವಾಚಾರಿಯಾರ್, ರಂಗಯ್ಯ ನಾಯಿಡು, ಜಿ. ಸುಬ್ರಹ್ಮಣ್ಯ ಅಯ್ಯರ್, ಎನ್. ಸುಬ್ಬರಾವ್, ಇವರುಗಳು ೧೮೮೪ರಲ್ಲಿ ಮಹಾಜನ ಸಭೆಯ ಮೂಲಕ ರಾಜಕೀಯ ಸಂಘ ವ್ಯವಸ್ಥೆಗೆ ಅಸ್ತಿಭಾರ ಹಾಕಿದರು.

ಬಂಗಾಳದ ಬ್ರಾಹ್ಮೋ ಸಮಾಜದ ಉಪಶಾಖೆಯಾಗಿ, ಮುಂಬೈಯಲ್ಲಿ ೧೮೬೭ರಲ್ಲಿ ಪ್ರಾರ್ಥನಾ ಸಮಾಜ ಸ್ಥಾಪನೆಯಾಯಿತು. ಪ್ರೊ. ಆರ್. ಜಿ. ಭಂಡಾರಕರ್, ನ್ಯಾಯಮೂರ್ತಿ ರಾನಡೆ, ಸರ್ ನಾರಾಯಣ ಚಂದಾವರ್ಕರ್, ಇವರು ಅದನ್ನು ಸೇರಿ, ಸಮಾಜ ಸುಧಾರಣೆಗಾಗಿ ಶ್ರಮಿಸಿದರು. ೧೮೪೨ರಲ್ಲಿ ಜನಿಸಿದ ಮಹಾದೇವ ಗೋವಿಂದ ರಾನಡೆ ಸಮರ್ಥ ನ್ಯಾಯಮೂರ್ತಿಯಾಗಿದ್ದುದಲ್ಲದೆ, ಇತಿಹಾಸಕಾರ, ಅರ್ಥಶಾಸ್ತ್ರಜ್ಞ ಮತ್ತು ಉತ್ಸಾಹಭರಿತ ಸಮಾಜ ಸುಧಾರಕರಾಗಿದ್ದರು. ಗೋಪಾಲ ಕೃಷ್ಣ ಗೋಖಲೆ ಅವರ ಶಿಷ್ಯರಾಗಿದ್ದರು. ರಾನಡೆಯನ್ನು ಕುರಿತು, ಅವರು ಒಮ್ಮೆ ಹೀಗೆ ಹೇಳಿದ್ದರು: "ಮೂವತ್ತು ವರ್ಷಗಳ ಕಾಲ ಅವರು ನಮ್ಮ ಅತ್ಯುನ್ನತ ವಿಚಾರ ಮತ್ತು ಅತ್ಯುನ್ನತ ಆದರ್ಶ ಗಳನ್ನು ಪ್ರತಿನಿಧಿಸಿದ್ದರು."

ಭಾರತದಲ್ಲಿ ಸಮಾಜಸುಧಾರಣೆ ಅತ್ಯಂತ ಕಠಿಣ ಕಾರ್ಯವಾಗಿದ್ದಿತು. ಲೌಕಿಕ ಸ್ಥಾನಮಾನಗಳನ್ನು ಕಳೆದುಕೊಂಡ ಜನ, ತಮಗೆ ಶತಮಾನಗಳಿಂದ ಬಂದಿದ್ದ ಸಮಾಜಿಕ ಪದ್ಧತಿಗಳನ್ನು ಬಿಡದೆ ಅಪ್ಪಿಕೊಂಡಿದ್ದರು. ೧೮೪೯ರಲ್ಲಿ ಮುಂಬೈಯಲ್ಲಿ, 'ಪರಮಹಂಸ ಮಂಡಲ'ವೆಂಬ ಗುಪ್ತ ಸಂಘ ಸ್ಥಾಪನೆಯಾಯಿತು. ಅದರ ಧ್ಯೇಯವು ಜಾತಿ ಮತ್ತು ಕುಲಗಳ ವ್ಯತ್ಯಾಸಗಳನ್ನು ತೊಡೆದುಹಾಕುವುದಿದ್ದಿತು. ಅದು ವಿಧವಾ ಪುನರ್ವಿವಾಹವನ್ನು ಪ್ರತಿಪಾದಿಸಿತು; ವಿಗ್ರಹಾರಾಧನೆಯನ್ನು ತಿರಸ್ಕರಿಸಿತು. ಹೊಸ ಸದಸ್ಯನೊಬ್ಬ ಒಂದೇ ಪಾತ್ರೆಯಿಂದ ಹಾಲನ್ನು ಕುಡಿಯಬೇಕಾಗಿತ್ತಲ್ಲದೆ ರೊಟ್ಟಿಯನ್ನೂ ತಿನ್ನಬೇಕಾಗಿದ್ದಿತು. ಆ ಸಮಾಜದ ಶಾಖೆಗಳು ಮುಂಬೈಯ ಹೊರಗಡೆಯೂ ವ್ಯಾಪಿಸಿದ್ದುವು. ಕೆಲವರು ಮುಸ್ಲಿಮರೂ ಮತ್ತು ಕ್ರೈಸ್ತರೂ ಅದರ ಸದಸ್ಯರಾಗಿದ್ದರು. ಸಮಾಜ ಬಹಿಷ್ಕಾರದ ಭೀತಿಯಿದ್ದುದರಿಂದ ಅದು ಗೋಪ್ಯವನ್ನು ವಿಧಿಸಿದ್ದಿತು. ಅದರ ಅಸ್ತಿತ್ವದ ಮತ್ತು ಸದಸ್ಯರ ಹೆಸರುಗಳ ಬಗೆಗೆ ವಿವೇಚನಾರಹಿತವಾದ ಪ್ರಕಟನೆಯೊಂದರಿಂದ ಅದು ೧೮೬೦ರಲ್ಲಿ ಕೊನೆಗೊಂಡಿತು.

ಸಮಾಜಸುಧಾರಣೆಗಾಗಿ ಬಹಿರಂಗವಾಗಿ ಕೆಲಸ ಮಾಡುತ್ತಿದ್ದ ಭಂಡಾರಕರ್, ತೆಲಾಂಗ್, ರಾನಡೆ ಮತ್ತು ಆಗರಕರ್ ಮೊದಲಾದವರು ತಮ್ಮ ಟೀಕಾಕಾರರನ್ನು ಎದುರಿಸಬೇಕಾಯಿತು. ೧೮೯೦ರಲ್ಲಿ ರಾನಡೆ ಮತ್ತು ತಿಲಕ್ ಇವರುಗಳೊಳಗೊಂಡಂತೆ, ೫೦ ಮಂದಿ ಪ್ರಮುಖ ಬ್ರಾಹ್ಮಣರು ಒಂದು ಕ್ರೈಸ್ತ ಮತ ಪ್ರಸಾರಕರ ಸಭೆಗೆ ಆಹ್ವಾನಿಸಲ್ಪಟ್ಟರು. ಅಲ್ಲಿ ಟೀ ಮತ್ತು ಬಿಸ್ಕತ್ ಹಂಚಲಾಗಿತ್ತು. ಈ ಸುದ್ದಿ ಬೆಳಕಿಗೆ ಬಂದ ಕೂಡಲೇ ರಾನಡೆ ಮತ್ತು ತಿಲಕ್ ಜಾತಿಯಿಂದ ಬಹಿಷ್ಕೃತರೆಂದು ಸಾರಲಾಯಿತು. ಅವರು ಸಾರ್ವಜನಿಕ ಚಳವಳಿಗೆ ಮಣಿದು, ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಯಿತು.

೧೮೭೦ರಲ್ಲಿ ಗಣೇಶ ವಾಸುದೇವ ಜೋಷಿ ಸ್ಥಾಪಿಸಿದ ಸಾರ್ವಜನಿಕ ಸಭಾ, ಮಹಾರಾಷ್ಟ್ರದಲ್ಲಿ ಘನವಾದ ರಾಜಕೀಯ ಮತ್ತು ಸಾಮಾಜಿಕ ಕಾರ್ಯವನ್ನೆಸಗಿತು. ಆತ ಸ್ವದೇಶಿಯನ್ನು ಪ್ರಚಾರ ಮಾಡಿದನು. ತಾನೇ ಸ್ವತಃ ಕೈಯಿಂದ ದಿನವೂ ನೂಲನ್ನು ತೆಗೆದು ಅದರಿಂದ ಮಾಡಿದ ವಸ್ತ್ರವನ್ನು ಧರಿಸಿದನು. ಸ್ವದೇಶೀ ಅಂಗಡಿಗಳನ್ನು ತೆರೆದು, ತನ್ನ ಸ್ವಂತ ನಿದರ್ಶನದಿಂದ ಜನರನ್ನು ಸ್ವದೇಶೀ ಕಡೆಗೆ ಪರಿವರ್ತಿಸಿದನು. ಆತನಿಗೆ ವೈಚಾರಿಕ ಸ್ಫೂರ್ತಿ ದೊರಕಿದುದು ರಾನಡೆಯವರಿಂದ. ಅವರೂ ಸಾರ್ವಜನಿಕ ಸಭೆಗಾಗಿ ಕೆಲಸಮಾಡಿದರು. ೧೮೯೫ರಲ್ಲಿ ಆ ಸಂಸ್ಥೆ ತಿಲಕರ ವಶವಾಯಿತು, ೧೮೮೦–೯೧ರಲ್ಲಿ ಚಿಪ್ಲೂಣಕರ್, ಆಗರ್‌ಕರ್ ಮತ್ತು ತಿಲಕ್ ಜನತೆಯನ್ನು ರಾಷ್ಟ್ರೀಯ ಸೇವೆಗೆ ಸಿದ್ಧಗೊಳಿಸಲು 'ನ್ಯೂ ಇಂಗ್ಲೀಷ್ ಸ್ಕೂಲ್' ಎಂಬ ಸಂಸ್ಥೆಯನ್ನು ಹಾಗೆಯೇ 'ಮರಾಠಾ' ಎಂಬ ಇಂಗ್ಲಿಷ್ ವಾರಪತ್ರಿಕೆ ಮತ್ತು 'ಕೇಸರಿ' ಎಂಬ ಮರಾಠೀ ಪತ್ರಿಕೆಗಳನ್ನು ಸ್ಥಾಪಿಸಿದರು. ಈ ತ್ರಿಮೂರ್ತಿಗಳು ಜಾಗ್ರತೆ ಪ್ರಸಿದ್ಧಿಗೆ ಬಂದರು. ೧೮೯೬ರಲ್ಲಿ ತಿಲಕರ ಉಗ್ರ ಪಂಥದವರಿಗೂ ಮತ್ತು ರಾನಡೆಯವರ ಸೌಮ್ಯ ಪಂಥದವರಿಗೂ ಹೊಂದಾಣಿಕೆಯಾಗದಂಥ ಭಿನ್ನಾಭಿಪ್ರಾಯಗಳು ಬಂದುದರಿಂದ ರಾನಡೆ ಮತ್ತು ಅವರ ಶಿಷ್ಯ ಗೋಖಲೆ 'ಡೆಕ್ಕನ್ ಸಭಾ' ಎಂಬುದನ್ನು ಸ್ಥಾಪಿಸಿದರು.

೧೮೨೫ರಲ್ಲಿ ಮುಂಬೈನಲ್ಲಿ ಜನಿಸಿದ ದಾದಾಭಾಯಿ ನವರೋಜಿಯವರು ರಾಜಾರಾಮಮೋಹನರಾಯ್ ತರುವಾಯ, ಅತ್ಯಂತ ಪ್ರಸಿದ್ಧಿಗೆ ಬಂದರು. ಅವರು ಭಾರತ ಮತ್ತು ಇಂಗ್ಲೆಂಡ್‌ಗಳಲ್ಲಿ ಮೂವತ್ತು ಸಂಸ್ಥೆಗಳಿಗೂ ಹೆಚ್ಚಿನ ಸಂಖ್ಯೆಯ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರು, ಅಗಾಧ ಪ್ರತಿಭಟನೆಯಿದ್ದರೂ, ೧೮೪೯ರಲ್ಲಿ ಮುಂಬೈನಲ್ಲಿ ಸ್ತ್ರೀ ಶಿಕ್ಷಣಕ್ಕೆ ಅಸ್ತಿಭಾರ ಹಾಕಿದರು. ೧೮೫೧ರಲ್ಲಿ ಅವರು 'ರಾಸ್ತ್‌ಗೋಫ್ತಾರ' ಎಂಬ ಗುಜರಾತಿ ಪತ್ರಿಕೆಯನ್ನು ಸ್ಥಾಪಿಸಿದರು. ಅದು ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸುಧಾರಣೆಗಾಗಿ ಪ್ರಗತಿಪರ ವಿಚಾರಗಳ ಸಾಧನವಾಯಿತು. ಅವರು ೧೮೫೪ರಲ್ಲಿ ಮುಂಬೈಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಗಣಿತ ಮತ್ತು ಭೌತಶಾಸ್ತ್ರಗಳ ಪ್ರಥಮ ಭಾರತೀಯ ಪ್ರಾಚಾರ್ಯರಾಗಿ

ನೇಮಕವಾದರು. ಮುಂದಿನ ವರ್ಷ ಅವರು ಲಂಡನ್ನಿನ 'ಕಾಮಾ' ವ್ಯಾಪಾರದ ಕಂಪೆನಿಯ ನೌಕರಿಯನ್ನು ಅಂಗೀಕರಿಸಿದರು. ಭಾರತಕ್ಕೂ ಮತ್ತು ಇಂಗ್ಲೆಂಡಿಗೂ ನಡುವೆ ಗಾಢಸಂಬಂಧವನ್ನು ಸ್ಥಾಪಿಸಬೇಕೆಂಬುದು ಅವರ ಧ್ಯೇಯವಾಗಿದ್ದಿತು. "ಇಂಡಿಯನ್ ಸಿವಿಲ್ ಸರ್ವಿಸ್ ಮತ್ತು ಇತರ ಸೇವಾ ಪರೀಕ್ಷೆಗಳಿಗೆ ಸ್ಪರ್ಧಿಸುವ ಭಾರತೀಯ ಯುವಕರಿಗೆ ಇಂಗ್ಲೆಂಡಿನಲ್ಲಿ ಯಾವ ಆತಂಕವಿಲ್ಲದಿರುವಂತೆ ವಸತಿಯನ್ನು ಏರ್ಪಡಿಸುವುದು ಮುಖ್ಯ ಉದ್ದೇಶವಾಗಿದ್ದಿತು." ಆದರೆ ಅವರು ೧೮೫೮ರಲ್ಲಿ ಕಂಪೆನಿಯ ತಮ್ಮ ಪಾಲುಗಾರಿಕೆಯನ್ನು ತ್ಯಜಿಸಿದರು. ಸಾವಿರಾರು ಮಂದಿ ಜನರ ನಾಶಕ್ಕೆ ಕಾರಣವಾಗಿದ್ದ ಅಫೀಮು, ಮದ್ಯಸಾರ ಮತ್ತು ದ್ರಾಕ್ಷಾರಸ ಇವುಗಳನ್ನು ಮಾರಿ ಬಂದ ಹಣದಿಂದ ಅವರು ಜೀವಿಸಲು ಇಚ್ಛಿಸಲಿಲ್ಲ. ಅವರು ಲಂಡನ್ ವಿಶ್ವವಿದ್ಯಾನಿಲಯದ ಕಾಲೇಜ್‌ನಲ್ಲಿ ಗುಜರಾತೀ ಭಾಷೆಯ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಾ, ಇನ್ನೂ ಹಲವಾರು ಸಂಸ್ಥೆಗಳಲ್ಲಿ ಸಕ್ರಿಯ ಪಾತ್ರ ವಹಿಸ ತೊಡಗಿದರು. ೧೮೬೬ರಲ್ಲಿ, ಇಂದು 'ಈಸ್ಟ್ ಇಂಡಿಯಾ ಅಸೋಸಿಯೇಷನ್' ಎಂದು ಪ್ರಸಿದ್ಧವಾಗಿರುವ ಸಂಸ್ಥೆಯನ್ನು ಸ್ಥಾಪಿಸಿದರು. ಅವರು ಭಾರತದ ಅನಧಿಕೃತ ರಾಯಭಾರಿಯಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸಿದರು. ೧೮೭೪ರಲ್ಲಿ ಅವರು ಬರೋಡಾ ರಾಜ್ಯದ ಒಬ್ಬ ಮಂತ್ರಿಯಾಗಿಯೂ ೧೮೮೫ರಲ್ಲಿ ಮುಂಬೈ ನ್ಯಾಯ ವಿಧಾಯಕ ಸಭೆಯ ವಿಶೇಷ ಸದಸ್ಯರಾಗಿಯೂ ನೇಮಕವಾದರು. ೧೮೯೨ರಲ್ಲಿ ಅವರು ಬ್ರಿಟಿಷ್ ಸಂಸತ್ತಿಗೆ ಪ್ರಥಮ ಭಾರತೀಯ ಸದಸ್ಯರಾಗಿ ಚುನಾಯಿತರಾದರು. ಅವರು ೧೯೦೧ರಲ್ಲಿ ಪ್ರಕಟಿಸಿದ 'ಪಾವರ್ಟಿ ಅಂಡ್ ಅನ್‌ಬ್ರಿಟಿಷ್ ರೂಲ್ ಇನ್ ಇಂಡಿಯಾ' ಎಂಬ ಗ್ರಂಥ ಭಾವೀ ಜನಾಂಗಕ್ಕೆ ನೀಡಿದ ದೊಡ್ಡ ಕೊಡುಗೆ. ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಮೂರುಸಲ ಅಧ್ಯಕ್ಷರಾದರು. ೧೯೦೪ರಲ್ಲಿ ಆಮ್‌ಸ್ಟರ್‌ಡಾಮಿನಲ್ಲಿ ನಡೆದ ಅಂತರ ರಾಷ್ಟ್ರೀಯ ಸಮಾಜವಾದೀ ಸಮ್ಮೇಳನದಲ್ಲಿ ಅವರು ಭಾರತೀಯ ಪ್ರತಿನಿಧಿಯಾಗಿ ಭಾಗವಹಿಸಿದರು. ಭಾರತದ ಪ್ರತಿನಿಧಿಗೆ ಗೌರವವನ್ನು ಸೂಚಿಸುವ ಸಲುವಾಗಿ, ಪ್ರತಿನಿಧಿಗಳು ಮೌನವಾಗಿ ಎದ್ದು ನಿಂತರು. ದಾದಾಭಾಯಿಯವರ ಭಾಷಣವನ್ನು ಕೇಳಿದ ಮೇಲೆ, ಆಮ್‌ಸ್ಟರ್‌ಡಾಂ ಕಾಂಗ್ರೆಸ್ "ಭಾರತದ ಬಗೆಗೆ ಬ್ರಿಟನ್ ವರ್ತಿಸುತ್ತಿರುವುದು ಅಪಮಾನಕರ" ಎಂಬ ನಿರ್ಣಯವನ್ನು ಅಂಗೀಕರಿಸಿತು. ಭಾರತದ ಈ ವೃದ್ಧ ಪಿತಾಮಹ ೧೯೧೭ರಲ್ಲಿ, ತೊಂಬತ್ತೆರಡನೆಯ ವಯಸ್ಸಿನಲ್ಲಿ ಕಾಲವಾದರು.

ಪ್ರಸಿದ್ಧ ವ್ಯಕ್ತಿಗಳು ಮತ್ತು ಸಂಸ್ಥೆಗಳಲ್ಲದೆ ಭಾರತೀಯ ವರ್ತಮಾನ್ ಪತ್ರಿಕೆಗಳು ಆ ಆರಂಭದ ಕಾಲದಲ್ಲಿ ಪ್ರಮುಖ ಪಾತ್ರ ವಹಿಸಿದುವು. ಜನರು ಭಿನ್ನ ಭಿನ್ನ ಪ್ರಾಂತಗಳ ಸಮಸ್ಯೆಗಳನ್ನು ಅರಿತುಕೊಳ್ಳುವುದಕ್ಕೂ, ಅವರಲ್ಲಿ ಒಂದು ಬಗೆಯ ಭ್ರಾತೃಭಾವ ಜನಿಸುವುದಕ್ಕೂ ನೆರವಾದವು. ಜನತೆಗೆ

ರಾಜಕೀಯ ಶಿಕ್ಷಣ ನೀಡಲು ಪ್ರಭಾವಯುತ ಶಕ್ತಿ ಆದುವು. ಮದರಾಸಿನಲ್ಲಿ 'ಹಿಂದೂ', ಮಹಾರಾಷ್ಟ್ರದಲ್ಲಿ 'ಕೇಸರಿ' ಮತ್ತು 'ಮರಾಠಾ', ಬಂಗಾಳದಲ್ಲಿ 'ಅಮೃತ್ ಬಜಾರ್ ಪತ್ರಿಕಾ', ಸ್ಥಾಪಿತವಾದುವು. ೧೮೭೮ರಲ್ಲಿ 'ದೇಶೀಭಾಷಾ ಮುದ್ರಣ ಕಾನೂನು' ಅಂಗೀಕೃತವಾದಾಗ, ಆದರಿಂದತಪ್ಪಿಸಿಕೊಳ್ಳುವ ಸಲುವಾಗಿ ಬಂಗಾಳಿ–ಇಂಗ್ಲಿಷ್ ಪತ್ರಿಕೆಯಾಗಿದ್ದ 'ಪತ್ರಿಕಾ' ತತ್‌ಕ್ಷಣ ಇಂಗ್ಲಿಷ್ ಪತ್ರಿಕೆಯಾಗಿ ಪರಿವರ್ತಿತವಾಯಿತು. ಆ ಕಾಲದಲ್ಲಿ ಪತ್ರಿಕೆಗಳು ರಾಷ್ಟ್ರೀಯ ತೀರ್ಪುಗಾರರಂತಿದ್ದುವು. 'ಕೇಸರಿ'ಯಂಥ ಪತ್ರಿಕೆಗಳನ್ನು ಹಳ್ಳಿಗಳಲ್ಲಿ ತಂಡ ತಂಡಗಳಾಗಿ ಓದುತ್ತಿದ್ದರು.

೧೮೫೦ ರಿಂದ ೧೯೦೦ರ ವರೆಗಿನ ಪಾಂಡಿತ್ಯ ಪೂರ್ಣ ಸಾಹಿತ್ಯ, ರಾಷ್ಟ್ರದ ಆತ್ಮಗೌರವವನ್ನು ಎಚ್ಚರಗೊಳಿಸಲು ಅತ್ಯಂತ ಪ್ರಭಾವಯುತ ಶಕ್ತಿಯಾಯಿತು. ಪ್ರಸಿದ್ಧ ಪ್ರಾಚ್ಯ ಸಂಶೋಧಕರಾದ ರಾಜೇಂದ್ರಲಾಲ್ ಮಿತ್ರ, ಭಂಡಾರಕರ್ ಮತ್ತು ತಿಲಕ್ ಪ್ರಾಚ್ಯದ ಪ್ರಾಚೀನ ಜ್ಞಾನನಿಧಿಯನ್ನು ಸಂಶೋಧಿಸಿ, ಕರ್ತೃತ್ವಶಾಲಿತ್ವ ಮತ್ತು ಪಾಂಡಿತ್ಯ ಕೇವಲ ಪಶ್ಚಿಮದ ಗುತ್ತಿಗೆಯಲ್ಲವೆಂಬುದನ್ನು ಜಗತ್ತಿಗೆ ತೋರಿಸಿದರು ವಿಲಿಯಂ ಜೋನ್ಸ್, ಎಡ್ವಿನ್ ಆರ್ನಾಲ್ಡ್, ಮ್ಯಾಕ್ಸ್ ಮುಲ್ಲರ್ ಮೊದಲಾದ ಪಂಡಿತ ವರೇಣ್ಯರು ಭಾರತವನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಟ್ಟರು. ಸಾಹಿತ್ಯ, ತತ್ವಜ್ಞಾನ ಮತ್ತು ಮತಧರ್ಮ ಇವುಗಳಲ್ಲದೆ ದೇಶದ ರಾಜಕೀಯ ಜೀವನದ ಮೇಲೆ ಪ್ರಭಾವ ಬೀರಿದ ಅಮೂಲ್ಯ ಚಾರಿತ್ರಿಕ ಕೃತಿಗಳನ್ನು ಭಾರತ ಸೃಷ್ಟಿಸಿತು. ರೋಮೇಶಚಂದ್ರ ದತ್, ರಾನಡೆ ಮತ್ತು ದಾದಾಭಾಯಿ ಇವರುಗಳು, ಮೂಕರಂತಿದ್ದ ಭಾರತದ ಕೋಟ್ಯಂತರ ಜನತೆಯ ನಿಜ ಪರಿಸ್ಥಿತಿಯನ್ನು ತಮ್ಮ ವಿದ್ವತ್ಪೂರ್ಣ ಕೃತಿಗಳಿಂದ ಬೆಳಕಿಗೆ ತಂದರು. ರಾನಡೆ ಭಾರತೀಯ ಅರ್ಥಶಾಸ್ತ್ರಕ್ಕೆ ತಳಹದಿ ಹಾಕಿದರು. ಸರ್ ಆಶುತೋಷ್ ಮುಕರ್ಜೀ ಕೇವಲ ಪರೀಕ್ಷೆಯ ಸಂಸ್ಥೆಯಾಗಿದ್ದ ಕಲ್ಕತ್ತಾ ವಿಶ್ವವಿದ್ಯಾನಿಲಯವನ್ನು ಭಾರತೀಯ ಪಂಡಿತರಿಂದಲೇ ವ್ಯವಸ್ಥಿತವಾಗಿ ನಡೆಸಲ್ಪಟ್ಟ, ಪ್ರಾಚ್ಯಕ್ಷೇ ಅತ್ಯಂತ ದೊಡ್ಡ ಶಿಕ್ಷಣ ಕೇಂದ್ರಗಳಲ್ಲಿ ಒಂದನ್ನಾಗಿ ಪರಿವರ್ತಿಸಿದರು. ಅವರು ಜ್ಞಾನದ ಎಲ್ಲ ವಿಭಾಗಗಳಲ್ಲಿಯೂ ಸಂಶೋಧನಾ ಕಾರ್ಯಕ್ಕೆ ಉತ್ತೇಜನವಿತ್ತರು. ಭಾರತವು ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಜಗದೀಶ್ ಚಂದ್ರಬೋಸ್, ಸಿ. ವಿ. ರಾಮನ್, ಮಹಾಗಣಿತಜ್ಞ ರಾಮಾನುಜನ್ ಇವರುಗಳ ಸಂಶೋಧನಾ ಕಾರ್ಯಗಳಿಂದ ವಿಜ್ಞಾನದಲ್ಲಿಯೂ ಜಗತ್ತಿನ ಗಮನವನ್ನು ಸೆಳೆಯಿತು. ಕಲೆಯ ಕ್ಷೇತ್ರದಲ್ಲಿಯೂ ಬಂಗಾಳವು ಪ್ರವರ್ತನ ಕೆಲಸ ಮಾಡಿತು. ಕಲ್ಕತ್ತಾದ ಕಲಾಶಾಲೆಯ ಪ್ರಾಧ್ಯಾಪಕರಾಗಿದ್ದ ಈ. ಬಿ. ಹ್ಯಾವೆಲ್ ಅವರು ತಮ್ಮ ಪ್ರತಿಭಾಪೂರ್ಣ ಗ್ರಂಥಗಳಿಂದ ಭಾರತೀಯ ಕಲೆಯನ್ನು ಜನಪ್ರಿಯಗೊಳಿಸಿದರು, ಡಾ. ಆನಂದ್ ಕೆ. ಕುಮಾರಸ್ವಾಮಿಯವರು ಕಲೆಯನ್ನು ಕುರಿತು ತಮ್ಮ ವಿದ್ವತ್ಪೂರ್ಣ ಹಾಗೂ ಸ್ಫೂರ್ತಿಯುತ ಬರಹಗಳಿಂದ ನವಭಾರತದ ಅಭಿರುಚಿಗೆ

ಮಾರ್ಗದರ್ಶನ ಮಾಡಿದರು. ಸಾಹಿತ್ಯದಲ್ಲಿ ಬಂಕಿಂ ಚಂದ್ರ ಚಟರ್ಜೀ, ಟಾಗೋರ್ ಮತ್ತು ಇಕ್ಬಾಲ್ ಇವರುಗಳು ಭಾರತಕ್ಕೆ ಹೊಸ ಆದರ್ಶವನ್ನೂ ಸ್ಫೂರ್ತಿಯನ್ನೂ ನೀಡಿದರು. ಬಂಕಿಮರ 'ವಂದೇ ಮಾತರಂ', ಇಕ್ಬಾಲರ 'ಹಿಂದೂಸ್ಥಾನ್ ಹಮಾರಾ' ಈ ಗೀತೆಗಳು ಸ್ವಾತಂತ್ರ್ಯ ಹೋರಾಟದ ರಣಗೀತೆಗಳಾಗಿ ಭಾರತಾದ್ಯಂತ ಪ್ರತಿಧ್ವನಿಸಿದುವು.

ಭಾರತದಲ್ಲಿ ಹೊಸಜೀವನ ತಲೆದೋರುವುದಕ್ಕೆ ಧಾರ್ಮಿಕ ಕ್ಷೇತ್ರದಲ್ಲಿ ಸಂಭವಿಸಿದ ಪುನರುತ್ಥಾನ ಇನ್ನೊಂದು ಪ್ರಮುಖ ಅಂಶವಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ರಾಮಮೋಹನರಾಯ್ ಆರಂಭಿಸಿದ ಬ್ರಾಂಹ್ಮೊ ಸಮಾಜವು ಪ್ರಥಮ ಧಾರ್ಮಿಕ ಆಂದೋಲನವಾಗಿದ್ದಿತು. ಅವರ ಕಾರ್ಯವನ್ನು ದೇವೇಂದ್ರನಾಥ ಟಾಗೋರ್ ಮತ್ತು ಕೇಶವಚಂದ್ರಸೇನ ಮುಂದುವರಿಸಿದರು. ದೇವೇಂದ್ರನಾಥ್ ಶುದ್ಧ ಹಿಂದೂ ಪರಂಪರೆಯನ್ನು ಅನುಸರಿಸಿದರು. ಕೇಶವಚಂದ್ರಸೇನ ಕ್ರೈಸ್ತ ಮಾದರಿಯನ್ನು ಅನುಸರಿಸಿದರು. ಮುಂಬೈಯಲ್ಲಿ ಆರಂಭವಾದ ಪ್ರಾರ್ಥನಾ ಸಮಾಜವು ಇದೇ ಉದ್ದೇಶದಿಂದ ಕೂಡಿದ್ದಿತು. ೧೮೭೫ರಲ್ಲಿ ಮುಂಬೈನಲ್ಲಿಯೂ ಮತ್ತು ೧೮೭೭ರಲ್ಲಿ ಲಾಹೋರಿನಲ್ಲಿಯೂ ಪ್ರಾಚೀನ ವೈದಿಕ ತತ್ವಗಳ ಆಧಾರದ ಮೇಲೆ ದಯಾನಂದ ಸರಸ್ವತಿಗಳಿಂದ ಆರ್ಯಸಮಾಜವು ಸ್ಥಾಪಿತವಾಯಿತು. "ವೇದಗಳಿಗೆ ಹಿಂದಿರುಗಿ" ಎಂಬುದು ಆ ಸಂಸ್ಥೆಯ ಕರೆಯಾಗಿತ್ತು. ಅದು ತನ್ನ ಸಂಯಮ ಭರಿತ ಮತ್ತು ಆತ್ಮತ್ಯಾಗ ಭರಿತ ಅನುಯಾಯಿಗಳಿಂದ ಒಳ್ಳೆಯ ಪ್ರಭಾವವನ್ನು ಬೆಳೆಸಿಕೊಂಡಿತು. ಈ ಪುನರುತ್ಥಾನದ ಕಾರ್ಯಕ್ಕೆ ಶ್ರೀಮತಿ ಅನ್ನೀ ಬೆಸೆಂಟರ ಬ್ರಹ್ಮವಿದ್ಯಾ ಸಮಾಜದಿಂದ ಅಮೂಲ್ಯ ಸೇವೆ ದೊರಕಿತು. ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದ ವಿವೇಕಾನಂದರು ಅತ್ಯಂತ ರಮ್ಯ ವ್ಯಕ್ತಿ. ಅವರು ಕನ್ಯಾಕುಮಾರಿಯಿಂದ ಆಲ್ಮೋರಾ ವರೆಗೆ, ಭಾರತೀಯ ಯುವಕರನ್ನು ಕುರಿತು, ಉತ್ತಿಷ್ಠರಾಗಬೇಕೆಂದೂ ತಮ್ಮ ಆಧ್ಯಾತ್ಮದಿಂದ ಜಗತ್ತನ್ನು ಗೆಲ್ಲಬೇಕೆಂದೂ ಉದ್ಘೋಷಿಸಿದರು. ೧೮೮೫ರಲ್ಲಿ ಲಾಹೋರಿನಲ್ಲಿ 'ಅಂಜುಮಾನ್–ಇ-ಹಿಮಾಯತ್–ಉಲ್–ಇಸ್ಲಾಂ' ಸ್ಥಾಪಿತವಾಯಿತು. ಅದು ಮುಸ್ಲಿಂ ಧರ್ಮದಲ್ಲಿ ಹೊಸ ಆಸಕ್ತಿಯನ್ನು ಹುಟ್ಟಿಸುವುದಕ್ಕೂ ಕ್ರೈಸ್ತ ಮತ ಪ್ರಸಾರವನ್ನು ತಡೆಗಟ್ಟುವುದಕ್ಕೂ ಮತ್ತು ಉರ್ದು ಪಾಠಶಾಲೆಗಳನ್ನು ಪ್ರಾರಂಭಿಸುವುದಕ್ಕೂ ನೆರವಾಯಿತು.

ಧಾರ್ಮಿಕ ಉತ್ಸಾಹವನ್ನು ರಾಜಕಾರಣದ ವ್ಯವಸ್ಥೆಗೆ ಮೊದಲು ಉಪಯೋಗಿಸಿಕೊಂಡುದು ಮಹಾರಾಷ್ಟ್ರದಲ್ಲಿ. ೧೮೯೩ರಲ್ಲಿ, ತಿಲಕರು ಗಣಪತಿ ಉತ್ಸವವನ್ನು ಆರಂಭಿಸಿದರು. ಸ್ವಯಂಸೇವಕರು ಲಾಠೀಗಳನ್ನು ಉಪಯೋಗಿಸಿ, ಕತ್ತಿವರಸೆಯನ್ನು ಕಲಿತುಕೊಂಡರು. ನೂರಾರು ಹುಡುಗರುಸೇರಿದರು. ಭಾಷಣಗಳು, ಮೆರವಣಿಗೆಗಳು, ದೇಶಭಕ್ತಿಗೀತೆಗಳನ್ನು ಹಾಡುವುದು ಉತ್ಸವದ ಪ್ರಧಾನ ಅಂಶಗಳಾಗಿದ್ದುವು. ೧೮೯೫ರಲ್ಲಿ ತಿಲಕರು ಶಿವಾಜಿ ಉತ್ಸವವನ್ನೂ ಆರಂಭಿಸಿದರು. ಅದು ರಾಷ್ಟ್ರೀಯತೆ

ಯನ್ನು ಬೋಧಿಸಲು ವೇದಿಕೆಯಾಯಿತು. ಟಾಗೋರ್ ಮತ್ತು ಅರವಿಂದರು, ಬಂಗಾಳದಲ್ಲಿಯೂ ಶಿವಾಜಿಯ ನೆನಪಿಗೆ ಗೌರವ ತೋರಿಸುವ ಆಂದೋಲನಕ್ಕೆ ಬೆಂಬಲವನ್ನಿತ್ತರು. ೧೯೦೪ರಲ್ಲಿ ಟಾಗೋರರು 'ಶಿವಾಜಿ ಉಸ್ತಾದ್' ಎಂಬ ಕವನ ವನ್ನು ಬರೆದು ಕಲ್ಕತ್ತೆಯ ಪುರಭವನದಲ್ಲಿ ಓದಿದರು. ಗಣಪತಿಯ ಉತ್ಸವದಂತೆ, ಕಾಳೀ ಉತ್ಸವ ಬಂಗಾಳದಲ್ಲಿ ಆಚರಣೆಗೆ ಬಂದಿತು. ಈ ಉತ್ಸವಗಳ ಹಿಂದೆ ಇದ್ದ ಉದ್ದೇಶವನ್ನು ಪ್ರಬಲವಾಗಿ ಶಂಕಿಸಿದ ಬ್ರಿಟಿಷ್ ಸರಕಾರ ಅವುಗಳನ್ನು ದಮನ ಮಾಡಲು ಎಲ್ಲ ಮಾರ್ಗಗಳನ್ನೂ ಉಪಯೋಗಿಸಿತು.

೧೮೭೭ರಲ್ಲಿ ಡಿಲ್ಲಿಯಲ್ಲಿ ನಡೆದ ವೈಭವದ ದರ್ಬಾರ್, ರಾಜಕೀಯ ಅಶಾಂತಿಗೆ ಅಪಾರ ಉತ್ತೇಜನ ಕೊಟ್ಟಿತು. ದೇಶದ ನಾನಾ ಭಾಗಗಳಿಂದ ರಾಜರುಗಳು ಮತ್ತು ಶ್ರೀಮಂತರು ಮಹಾ ಆಡಂಬರದಿಂದ ಡಿಲ್ಲಿಯಲ್ಲಿ ಸೇರಿದರು. ಡಿಲ್ಲಿಯ ಸಮಾರಂಭವನ್ನು ವೀಕ್ಷಿಸಿದ ಭಾರತೀಯ ನಾಯಕರಿಗೆ ಹೀಗೆ ಭಾಸವಾಯಿತು. "ರಾಜರುಗಳು ಮತ್ತು ಶ್ರೀಮಂತರು ನಿರಂಕುಶ ವೈಸ್‌ರಾಯ್ ಒಬ್ಬನ ಪ್ರಶಂಸೆಗಾಗಿ ವೈಭವದ ಉತ್ಸವದಲ್ಲಿ ಒಟ್ಟುಗೂಡುವುದಾದರೇ ಆ ನಿರಂಕುಶ ಪ್ರಭುತ್ವವನ್ನು ಹಿಡಿತದಲ್ಲಿಡಲು ಸಂವಿಧಾನದ ಮಾರ್ಗಗಳಿಂದ ಜನತೆ ಏಕೆ ಒಟ್ಟುಗೂಡಬಾರದು ?"

ಕಲ್ಕತ್ತಾದ ಇಂಡಿಯನ್ ಅಸೋಸಿಯೇಷನ್, ೧೮೭೭ರಲ್ಲಿ ಒಂದು ರಾಷ್ಟ್ರೀಯ ಸಮ್ಮೇಳನವನ್ನು ನಡೆಸಿತು. ಆ ಸಮ್ಮೇಳನದಲ್ಲಿ, ಸುರೇಂದ್ರನಾಥ ಬ್ಯಾನರ್ಜೀ. ಡಿಲ್ಲಿಯ ಕೂಟದ ಬಗೆಗೆ ಉದಾಹರಿಸಿ, ದೇಶಕ್ಕಾಗಿ ಜನತೆ ಒಟ್ಟುಗೂಡಿ ಏಕೆ ವ್ಯವಸ್ಥಿತರಾಗಬಾರದೆಂದು ಪ್ರಶ್ನಿಸಿದರು. ಕಲ್ಕತ್ತೆಯ ವಿಧಾನವನ್ನು ಮದರಾಸ್ ಅನುಸರಿಸಿತು. ೧೮೮೪ರಲ್ಲಿ ಥಿಯೋಸಾಫಿಕಲ್ ಸಮ್ಮೇಳನ ಮುಕ್ತಾಯವಾದ ಮೇಲೆ ದಾದಾಭಾಯಿ ನವರೋಜಿ, ಕೆ. ಟಿ. ತೆಲಾಂಗ್, ಸುರೇಂದ್ರನಾಥ ಬ್ಯಾನರ್ಜೀ ಮತ್ತು ಎಸ್. ಸುಬ್ರಹ್ಮಣ್ಯ ಅಯ್ಯರ್ ಮೊದಲಾದ ಹದಿನೇಳು ಮಂದಿ ಪ್ರಸಿದ್ಧ ನಾಯಕರು– "ಮಾತೃಭೂಮಿಯ ರಕ್ಷಣೆಗಾಗಿ ಒಂದು ರಾಷ್ಟ್ರೀಯ ಚಳುವಳಿಯನ್ನು ಆರಂಭಿಸಲು ನಿರ್ಧಾರಮಾಡಿದರು. ೧೮೮೫ರ ಮಾರ್ಚಿ ತಿಂಗಳಲ್ಲಿ ಸೇರಿದ್ದ ನಾಯಕರು, ಮುಂದಿನ ಕ್ರಿಸ್‌ಮಸ್ ಕಾಲದಲ್ಲಿ ಭಾರತದ ಎಲ್ಲ ಭಾಗಗಳ ಪ್ರತಿನಿಧಿಗಳ ಸಭೆಯೊಂದನ್ನು ನಡೆಸಲು ನಿರ್ಧಾರ ಮಾಡಿದರು. ಅದು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲ ಎನ್ನಬಹುದು. ಇದು "ದೇಶೀ ಸಂಸತ್ತಿನ" ಬೀಜಾಂಕುರ; ಭಾರತ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಮುಖ್ಯವಾದ ಘಟನೆ ಎನ್ನಬಹುದು. ಪುಣೆ ಎಲ್ಲಕ್ಕೂ ಕೇಂದ್ರವಾಗಿ, ಬಹಳ ಅನುಕೂಲಕರ ಸ್ಥಳವೆಂದು ಭಾವಿಸಲಾಯಿತು. ಈ ಕೆಳಕಂಡ ಸುತ್ತೋಲೆಯನ್ನು ಕಳಿಸಲಾಯಿತು.

"ಭಾರತ ರಾಷ್ಟ್ರೀಯ ಸಂಘದ ಒಂದು ಸಮ್ಮೇಳನವು ೧೮೮೫ರ ಡಿಸೆಂಬರ್ ೨೫ರಿಂದ ೩೧ರ ವರೆಗೆ ಪುಣೆಯಲ್ಲಿ ನಡೆಯುತ್ತದೆ.

''ಸಮ್ಮೇಳನದ ಪ್ರತಿನಿಧಿಗಳು ; ಇಂಗ್ಲೀಷ್ ಭಾಷೆಯಲ್ಲಿ ಚೆನ್ನಾಗಿ ಪರಿಣತರಾದ ಬಂಗಾಳ, ಮುಂಬೈ ಮತ್ತು ಮದರಾಸ್ ಪ್ರಾಂತಗಳ ಪ್ರಮುಖ ರಾಜಕಾರಣಿಗಳು.

'' ಸಮ್ಮೇಳನದ ಪ್ರತ್ಯಕ್ಷ ಉದ್ದೇಶಗಳು ಹೀಗಿರುತ್ತವೆ: (ಅ) ರಾಷ್ಟ್ರೀಯ ಪ್ರಗತಿಗಾಗಿ ಅತ್ಯಂತ ಉತ್ಸಾಹದಿಂದ ಶ್ರಮಿಸುತ್ತಿರುವ ಎಲ್ಲ ಕಾರ್ಯಕರ್ತರೂ ಒಬ್ಬರ ನ್ನೊಬ್ಬರು ವೈಯಕ್ತಿಕವಾಗಿ ಪರಿಚಯ ಮಾಡಿಕೊಳ್ಳುವುದು ; (ಆ) ಮುಂದಿನ ವರ್ಷದಲ್ಲಿ ಕೈಗೊಳ್ಳಬೇಕಾದ ರಾಜಕೀಯ ಕಾರ್ಯಕ್ರಮಗಳನ್ನು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುವುದು.

''ಪರೋಕ್ಷವಾಗಿ, ಈ ಸಮ್ಮೇಳನವು 'ದೇಶೀಸಂಸತ್' ಒಂದರ ಬೀಜಾಂಕುರ ; ಇದು ಸರಿಯಾಗಿ ನಡೆದರೆ, ಭಾರತವು ಇನ್ನೂ ಯಾವುದೇ ಬಗೆಯ ಪ್ರಾತಿನಿಧಿಕ ಸಂಸ್ಥೆಗಳಿಗೆ ಪೂರ್ಣವಾಗಿ ಅನರ್ಹವಾಗಿದೆ ಎಂಬ ವಾದಕ್ಕೆ ಕೆಲವೇ ವರ್ಷಗಳಲ್ಲಿ ಪ್ರತಿವಾದವಿಲ್ಲದಂತೆ ಆದೀತು. ಈ ಪ್ರಥಮ ಸಮ್ಮೇಳನವು, ಮುಂದಿನ ಅಧಿವೇಶನ ಪುಣೆಯಲ್ಲಿ ನಡೆಯಬೇಕೆ ಅಥವಾ ಬ್ರಿಟೀಷ್ ಅಸೋಸಿಯೇಷನ್ನಿನ ಸಂಪ್ರದಾಯದಂತೆ ಪ್ರತಿವರ್ಷವೂ ಭಿನ್ನ ಭಿನ್ನ ಪ್ರಮುಖ ಕೇಂದ್ರಗಳಲ್ಲಿ ನಡೆಯಬೇಕೇ ಎಂಬುದನ್ನು ನಿರ್ಧಾರಮಾಡುತ್ತದೆ.''

ಕ್ರಿಸ್‌ಮಸ್ ಹಬ್ಬಕ್ಕೆ ಕೆಲವೇ ದಿವಸಗಳ ಮುಂಚೆ ಅನಿರೀಕ್ಷಿತವಾಗಿ ಕಾಲರಾ ಸಂಭವಿಸಿದುದರಿಂದ ಆ ಪ್ರಥಮ ಸಮ್ಮೇಳನ ಪುಣೆಯಲ್ಲಿ ನಡೆಯಲಿಲ್ಲ. ಇಂದು ಕಾಂಗ್ರೆಸ್ ಎಂದು ಕರೆಯಲ್ಪಡುವ ಸಂಸ್ಥೆಯ ಆ ಪ್ರಥಮ ಸಮ್ಮೇಳನ ಮುಂಬೈನಲ್ಲಿ ನಡೆಯಿತು. ಕಾಂಗ್ರೆಸ್ಸಿನ ಪ್ರಥಮ ಐತಿಹಾಸಿಕ ಸಮ್ಮೇಳನ ೧೮೮೫ರ ಡಿಸೆಂಬರ್ ೨೮ರಂದು ಮುಂಬೈಯ ಗವಾಲಿಯಾ ರಸ್ತೆಯಲ್ಲಿರುವ ಗೋಕುಲದಾಸ್ ತೇಜಪಾಲ್ ಸಂಸ್ಕೃತ ಕಾಲೇಜ್‌ನಲ್ಲಿ ಆರಂಭವಾಯಿತು. ಎಪ್ಪತ್ತೆರಡು ಮಂದಿ ಪ್ರತಿನಿಧಿಗಳು ಕಾರ್ಯಕ್ರಮವನ್ನು ಚರ್ಚಿಸಿದರು. ಸರಕಾರದ ಸೇವೆಯಲ್ಲಿ ಇದ್ದುದರಿಂದ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೂವತ್ತು ಮಂದಿ ಗೆಳೆಯರಲ್ಲಿ ಪ್ರಧಾನರಾದ ನ್ಯಾಯಮೂರ್ತಿ ರಾನಡೆ, ಪ್ರೊ. ಆರ್. ಜಿ. ಭಂಡಾರಕರ್ ಅವರುಗಳಿದ್ದರು. ಭಾಗವಹಿಸಿದ್ದವರಲ್ಲಿ ದಾದಾಭಾಯಿ ನವರೋಜೀ, ಫಿರೋಜ್ ಷಾ ಮೆಹತಾ, ಕೆ. ಟಿ. ತೆಲಾಂಗ್, ಡಿ. ಈ. ವಾಚಾ, ಗೋಪಾಲ ಗಣೇಶ ಅಗರ್‌ಕರ್, ಎನ್. ಜಿ. ಚಂದಾವರ್ಕರ್, ಎಸ್. ಸುಬ್ರಹ್ಮಣ್ಯ ಅಯ್ಯರ್, ಎಂ. ವೀರರಾಘವಾಚಾರಿಯಾರ್, ನರೇಂದ್ರನಾಥ ಸೇನ್, ಇವರುಗಳಿದ್ದರು. ಸಮ್ಮೇಳನದಲ್ಲಿ ಕೇಳಿ ಬಂದ ಪ್ರಥಮ ಭಾಷಣಗಳೆಂದರೆ, ಎ. ಓ. ಹ್ಯೂಂ, ಎಸ್. ಸುಬ್ರಹ್ಮಣ್ಯ ಅಯ್ಯರ್ ಮತ್ತು ತೆಲಾಂಗ ರದು. ಅವರು ಬಂಗಾಳದ ಸಮರ್ಥ ಭಾರತೀಯ ಕ್ರೈಸ್ತರಾಗಿದ್ದ ಡಬ್ಲ್ಯೂ. ಸಿ. ಬ್ಯಾನರ್ಜೀ ಅವರ ಹೆಸರನ್ನು ಪ್ರಥಮ ಕಾಂಗ್ರೆಸ್ ಅಧ್ಯಕ್ಷರ ಸ್ಥಾನಕ್ಕೆ ಸೂಚಿಸಿ, ಅನುಮೋದಿಸಿ, ಬೆಂಬಲವಿತ್ತರು.

ಕಾಂಗ್ರೆಸ್ ಕಾರ್ಯಕ್ರಮವು ಶಾಸನಬದ್ಧ ಪ್ರಗತಿಯ ವೇಗ ಮತ್ತು ವಿಧಾನಕ್ಕೆ ಸಂಬಂಧಿಸಿದಂತೆ ಇದ್ದಿತು. ವೇಗಕ್ಕೆ ಸಂಬಂಧಿಸಿದಂತೆ ೧೮೬೧ರಲ್ಲಿ ತೆಗೆದುಕೊಂಡ ಹೆಜ್ಜೆಗಿಂತ ಮುಂದೆ ಹೋಗುವುದು ಅನಿವಾರ್ಯವೆಂದು ಘೋಷಿಸಲಾಯಿತು. ರಾಷ್ಟ್ರೀಯ ಕಾಂಗ್ರೆಸ್ ಅಂಗೀಕರಿಸಿದ ಒಂಬತ್ತು ನಿರ್ಣಯಗಳು ಭಾರತದ ಬೇಡಿಕೆಗಳಿಗೆ ರೂಪ ಕೊಡುವ ಕಾರ್ಯಕ್ಕೆ ನಾಂದಿಯಾಯಿತು. ಮೊದಲನೆಯ ನಿರ್ಣಯವು ಭಾರತೀಯ ಆಡಳಿತವನ್ನು ಕುರಿತು ಪರಿಶೀಲಿಸಲು ರಾಜನಿಯೋಗವೊಂದರ ರಚನೆಯನ್ನು ಬೇಡಿತು. ಎರಡನೆಯದು ಭಾರತ ಸಲಹಾಸಮಿತಿ (Indian Council) ಯನ್ನು ರದ್ದುಗೊಳಿಸಬೇಕೆಂದು ಬೇಡಿತು. ಮೂರನೆಯದು, ಅಂದು ಆಚರಣೆಯಲ್ಲಿದ್ದಂತೆ, ಶಾಸನ ಸಭೆಗಳಲ್ಲಿ ಎಲ್ಲ ಸದಸ್ಯರೂ ನಾಮಕರಣ ಹೊಂದಿದ ಸದಸ್ಯರಾಗಿದ್ದುದರಿಂದ ಅದರ ದೋಷಗಳನ್ನು ಎತ್ತಿ ತೋರಿಸಿ, ಚುನಾಯಿತ ಸದಸ್ಯರ ಆವಶ್ಯಕತೆಯನ್ನು ಬೇಡಿತು. ನಾಲ್ಕನೆಯದು ಐ. ಸಿ. ಎಸ್ ಪರೀಕ್ಷೆಗೆ ಏಕಕಾಲದ ಪರೀಕ್ಷೆಗಳನ್ನೂ ಮತ್ತು ಅಭ್ಯರ್ಥಿಗಳ ವಯೋಮಿತಿ ಹೆಚ್ಚಿಸುವುದನ್ನೂ ಪ್ರಾರ್ಥಿಸಿತು ಐದು ಮತ್ತು ಆರನೆಯ ನಿರ್ಣಯಗಳು ಅಧಿಕವಾಗಿ ಏರುತ್ತಿದ್ದ ಸೈನ್ಯದ ಮೇಲಿನ ವೆಚ್ಚದ ಬಗೆಗೆ ಸಂಬಂಧಿಸಿದ್ದುವು. ಏಳನೆಯದು ಉತ್ತರ ಬರ್ಮಾವನ್ನು ವಶಪಡಿಸಿಕೊಂಡು ಭಾರತದೊಡನೆ ಅದನ್ನು ಸೇರಿಸಬೇಕೆಂದಿದ್ದ ಸಲಹೆಯ ಬಗೆಗೆ ಪ್ರತಿಭಟನೆಯಾಗಿದ್ದಿತು. ಎಂಟನೆಯ ನಿರ್ಣಯವು ಕಾಂಗ್ರೆಸ್ಸಿನ ಈ ಎಲ್ಲ ನಿರ್ಣಯಗಳನ್ನೂ ದೇಶಾದ್ಯಂತ ಇರುವ ರಾಜಕೀಯ ಸಂಸ್ಥೆಗಳಿಗೆ ಕಳಿಸಿಕೊಟ್ಟು, ಅವು ಸಾರ್ವಜನಿಕ ಸಭೆಗಳನ್ನು ನಡಸಿ, ನಿರ್ಣಯಗಳನ್ನು ಅಂಗೀಕರಿಸುವಂತೆ ಅಪ್ಪಣೆ ಕೊಟ್ಟಿತು. ಕಡೆಯ ನಿರ್ಣಯವು, ೧೮೮೬ರ ಡಿಸೆಂಬರ್ ೨೮ರಂದು, ಮುಂದಿನ ಕಾಂಗ್ರೆಸ್ ಅಧಿವೇಶನವನ್ನು ಕಲ್ಕತ್ತಾದಲ್ಲಿ ನಡೆಸಬೇಕೆಂದು ತೀರ್ಮಾನಿಸಿತು.

ಮೂರು ದಿನಗಳ ಕಾರ್ಯಕ್ರಮಗಳು ಅಧ್ಯಕ್ಷರಿಗೆ ವಂದನಾರ್ಪಣೆಯ ಮೂಲಕ ಕೊನೆಗೊಂಡವು. ಅದರ ತರುವಾಯ 'ಕಾಂಗ್ರೆಸ್ಸಿನ ಜನಕ' ಹ್ಯೂಮ್ ಅವರಿಗೆ ಜಯಘೋಷವಾಯಿತು. ಮುಂದಿನ ಎಲ್ಲ ಕಾಂಗ್ರೆಸ್ ಅಧಿವೇಶನಗಳಲ್ಲಿಯೂ–೧೯೧೨ರಲ್ಲಿ ಆತನ ಅವಸಾನದವರೆಗೂ – ಆ ರೀತಿ ಜಯಘೋಷ ಮಾಡಲಾಗುತ್ತಿತ್ತು. ಹ್ಯೂಂ, ಬ್ರಿಟಿಷ್ ಸಾಮ್ರಾಜ್ಞಿಗೆ ಮೊಗುಸಲ ಮೂರು ಜಯಘೋಷ ಮಾಡಿದಾಗ ಸ್ಥಳೀಯ ಪ್ರತಿಭಟನೆ ಕಂಡು ಬಂದಿತು.

ಪ್ರಥಮ ಕಾಂಗ್ರೆಸ್ಸಿನ ನಿರ್ಣಯಗಳು ಎಲ್‌ಫಿನ್‌ಸ್ಟನ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ವರ್ಡ್ಸ್‌ವರ್ತ್ ಅವರ ಗೃಹದಲ್ಲಿ ಸೇರಿದ್ದ ಸಭೆಯಲ್ಲಿ ರಚಿತವಾದುವು. ಸರ್. ವಿಲಿಯಂ ವೆಡ್ಡರ್‌ಬರ್ನ್, ನ್ಯಾಯಮೂರ್ತಿ ರಾನಡೆ, ಮೊದಲಾದ ಅಧಿಕಾರಿಗಳೂ ಅಲ್ಲಿ ಹಾಜರಿದ್ದರು. ಕಾಂಗ್ರೆಸ್ಸಿನ ಹಿನ್ನೆಲೆಯನ್ನು ಡಬ್ಲ್ಯೂ. ಸಿ. ಬ್ಯಾನರ್ಜೀ ಹೀಗೆ ಚಿತ್ರಿಸಿದರು. "ಭಾರತದ ಪ್ರಮುಖ ರಾಜಕಾರಣಿಗಳು ವರ್ಷಕ್ಕೊಮ್ಮೆ ಸಭೆ ಸೇರಿ, ಪರಸ್ಪರ ಸ್ನೇಹಭಾವದಿಂದ ಸಾಮಾಜಿಕ ವಿಷಯಗಳನ್ನು ಚರ್ಚಿಸಿದರೆ, ಅದರಿಂದ

ದೇಶಕ್ಕೆ ಬಹಳ ಒಳ್ಳೆಯದಾಗುವುದೆಂದು, ೧೮೮೪ರಲ್ಲಿ ಎ. ಎ. ಓ. ಹ್ಯೂಂ ಕಲ್ಪನೆ ಹೊಂದಿದ್ದರು. ಅವರು ರಾಜಕಾರಣ, ಚರ್ಚೆಗಳ ವಿಷಯವಾಗಬೇಕೆಂದು ಅಪೇಕ್ಷಿಸಲಿಲ್ಲ; ಏಕೆಂದರೆ, ಕಲ್ಕತ್ತಾ, ಮುಂಬೈ. ಮದರಾಸು ಮತ್ತಿತರ ಭಾರತದ ಭಾಗಗಳಲ್ಲಿ, ಅಂಗೀಕೃತ ರಾಜಕೀಯ ಸಂಸ್ಥೆಗಳಿವೆ. ಈ ಸಂಸ್ಥೆಗಳ ರಾಜಕಾರಣಿಗಳೆಲ್ಲ ಒಟ್ಟು ಸೇರಿ, ರಾಜಕೀಯವನ್ನು ಚರ್ಚಿಸಿದರೆ ಇವುಗಳ ಪ್ರಾಧಾನ್ಯ ಕಡಿಮೆಯಾಗುವುದೆಂದು ಅವರು ಭಾವಿಸಿದರು. ಹೀಗೆ ರಾಜಕಾರಣಿಗಳು ಸೇರಿದ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಪ್ರಾಂತದ ಗೌರ್ನರ್ ಅಧ್ಯಕ್ಷತೆ ವಹಿಸಬೇಕೆಂದೂ, ಇದರಿಂದ ಅಧಿಕಾರಿ ವರ್ಗಗಳಿಗೂ ಮತ್ತು ಅಧಿಕಾರೇತರ ಭಾರತೀಯ ರಾಜಕಾರಣಿಗಳಿಗೂ ಅಗಾಧ ಸೌಹಾರ್ದ ಜನಿಸುವುದೆಂದೂ ಅವರು ಭಾವಿಸಿದರು. ಈ ಎಲ್ಲ ಅಭಿಪ್ರಾಯಗಳಿಂದ ಕೂಡಿದವರಾಗಿ, ೧೮೮೫ರ ಆದಿಭಾಗದಲ್ಲಿ ಅವರು ಸಿಮ್ಲಾಕ್ಕೆ ಹೋಗಿದ್ದಾಗ ವೈಸ್‌ರಾಯ್‌ರನ್ನು ಭೇಟಿ ಮಾಡಿದರು. ಲಾರ್ಡ್ ಡಫ್ರಿನ್ ಈ ವಿಚಾರಗಳ ಬಗೆಗೆ ತುಂಬ ಆಸಕ್ತಿ ತೋರಿಸಿದರು. ಇಂಗ್ಲೆಂಡಿನಲ್ಲಿ ಸರಕಾರಕ್ಕೆ ವಿರೋಧ ಪಕ್ಷವಿದ್ದಂತೆ, ಆ ಬಗೆಯ ಕೆಲಸಗಳನ್ನು ಮಾಡುವ ಯಾವ ವ್ಯಕ್ತಿಗಳ ಸಂಸ್ಥೆಯೂ ಈ ದೇಶದಲ್ಲಿಲ್ಲ ವೆಂದು ಅವರು ನುಡಿದರು. ಭಾರತದ ರಾಜಕಾರಣಿಗಳು ವರ್ಷಕ್ಕೊಮ್ಮೆ ಸಭೆ ಸೇರಿ, ಯಾವ ಅಂಶಗಳಲ್ಲಿ ಸರಕಾರದ ಆಡಳಿತ ನ್ಯೂನತೆಗಳಿಂದ ಕೂಡಿದೆಯೆಂದೂ ಅದನ್ನು ಹೇಗೆ ಉತ್ತಮಪಡಿಸಬೇಕೆಂದೂ ಸೂಚಿಸಿದರೆ. ಅದರಿಂದ ಸರಕಾರಕ್ಕೂ ಮತ್ತು ಪ್ರಜೆಗಳಿಗೂ ಅನುಕೂಲವಾಗುವುದೆಂದೂ, ಅಂಥ ಸಭೆಗೆ ಗೌರ್ನರ್ ಅಧ್ಯಕ್ಷತೆ ವಹಿಸಬಾರದೆಂದೂ, ಏಕೆಂದರೆ ಆತನ ಎದುರಿಗೆ ಜನ ಮನಬಿಚ್ಚಿ ಮಾತನಾಡಲಾರ ರೆಂದೂ ತಿಳಿಸಿದನು. ಕಲ್ಕತ್ತಾ, ಮುಂಬೈ ಮತ್ತು ಮದರಾಸ್ ಹಾಗೂ ಇತರ ಸ್ಥಳಗಳ ಪ್ರಮುಖ ರಾಜಕಾರಣಿಗಳು ಲಾರ್ಡ್ ಡಫ್ರಿನ್ ಅವರ ಯೋಜನೆಯನ್ನು ಏಕಾಭಿಪ್ರಾಯದಿಂದ ಅಂಗೀಕರಿಸಿ, ಅದಕ್ಕೆ ರೂಪುಕೊಡಲು ಮುಂದುವರಿದರು. ಲಾರ್ಡ್ ಡಫ್ರಿನ್, ತಾವು ಈ ದೇಶದಲ್ಲಿ ಇರುವವರೆಗೂ ಕಾಂಗ್ರೆಸ್ಸಿನ ಯೋಜನೆಗೆ ಸಂಬಂಧಿಸಿದಂತೆ ತಮ್ಮ ಹೆಸರನ್ನು ಬಹಿರಂಗಕ್ಕೆ ತರಬಾರದೆಂದೂ ಹ್ಯೂಂ ಅವರಿಗೆ ತಿಳಿಸಿದ್ದರು. ಈ ಅಂಶವನ್ನು ನಿಷ್ಠೆಯಿಂದ ಕಾಪಾಡಲಾಯಿತು. ಹ್ಯೂಂ ಯಾರಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರೋ ಅವರಿಗೆ ಮಾತ್ರ ಇದು ಗೊತ್ತಿದ್ದಿತು.

ಇಂಡಿಯನ್ ಸಿವಿಲ್ ಸರ್ವಿಸ್‌ನಿಂದ ವಿಶ್ರಾಂತಿ ಹೊಂದಿದ್ದ ಹ್ಯೂಂ ಅವರು ರಾಜಕೀಯ ಅತೃಪ್ತಿ ಒಳಸರಿಯುತ್ತಿತ್ತೆಂಬುದಕ್ಕೆ ಸಾಕ್ಷ್ಯವನ್ನು ಹೊಂದಿದ್ದರು. ಕೆಲವು ಹಿಂದೂ ಮತೀಯ ಪಂಗಡಗಳ ಮತ್ತು ಮಠಗಳ ಮುಖಂಡರಿಗೆ, ಸಾರ್ವ ಜನಿಕ ಪ್ರಕೋಪ ಏಳುವುದೆಂಬ ಬಗೆಗೆ ಅವರ ಶಿಷ್ಯರುಗಳು ಒದಗಿಸಿದ ಸುದ್ದಿ ಇವರಿಗೂ ದೊರಕಿದ್ದಿತು. ದಖನ್ನಿನ ಮುಂಬೈ ಪ್ರಾಂತದಲ್ಲಿ ವಾಸುದೇವ ಬಲವಂತ ಫಡಕೆ ಎಂಬಾತನ ಮುಖಂಡತ್ವದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದಂತೆ ಆಂದೋಲನ ಎದ್ದಿದ್ದಿತು. ಇದರ ಅರ್ಥ ಒಂದು ವ್ಯವಸ್ಥಿತ ದಂಗೆ ಸಂಭವಿಸುವು

ದಿತ್ತೆಂದಲ್ಲ. ಏನೋ ಒಂದು ಬಗೆಯ ನಿಸ್ಸಹಾಯಕತೆ ಜನರ ಭಾವನೆಯಲ್ಲಿತ್ತು. ಆದುದರಿಂದ ಅವರು ಏನನ್ನಾದರೂ ಮಾಡುವ ಹವಣಿಕೆಯಲ್ಲಿದ್ದರು. ಇದ್ದಕ್ಕಿದ್ದಂತೆ ಹಿಂಸಾತ್ಮಕ ಅಪರಾಧಗಳು–ಆಕ್ಷೇಪಣೀಯ ವ್ಯಕ್ತಿಗಳ ಕೊಲೆ, ಬ್ಯಾಂಕುಗಳ ದರೋಡೆ, ನಿಜವಾಗಿಯೂ ನ್ಯಾಯಬಾಹಿರ ಕೃತ್ಯಗಳು–ಇವುಗಳೆಲ್ಲ ಸಾಕಷ್ಟು ಶಕ್ತಿ ಸಂಘಟನೆಯಿಂದ ಎಂದಾದರೂ ರಾಷ್ಟ್ರೀಯ ವಿಪ್ಲವವಾಗುವ ಸಂಭವವಿತ್ತು.” ಇಂಥ ಅಶಾಂತಿಗೆ ಹ್ಯೂಂ ಒಂದು ರಕ್ಷಣಾ ಸಾಧನವನ್ನು ಒದಗಿಸಲು ನಿರ್ಧಾರ ಮಾಡಿದ್ದನು. ಕಾಂಗ್ರೆಸ್ ಆ ಸಾಧನವಾಗಿದ್ದಿತು.

ಪ್ರಥಮ ಕಾಂಗ್ರೆಸ್ಸಿನ ನಾಯಕರು ತಾವೇ ನೇಮಿಸಿಕೊಂಡ ನಾಯಕರಾಗಿದ್ದರು. ಎರಡನೆಯದು ಚುನಾಯಿತ ಪ್ರತಿನಿಧಿಗಳನ್ನು ಹೊಂದಿದ್ದಿತು. ಅಂದಿನ ದಿನಗಳಲ್ಲಿ ಯಾವುದೇ ಬಗೆಯ ಸಂಘವಾಗಲೀ ಯಾವುದೇ ಸಾರ್ವಜನಿಕ ಸಭೆಯಾಗಲೀ ಪ್ರತಿನಿಧಿಯನ್ನು ಚುನಾಯಿಸಬಹುದಾಗಿದ್ದಿತು. ಈ ರೀತಿಯಲ್ಲಿ ೫೦೦ ಪ್ರತಿನಿಧಿಗಳನ್ನು ಚುನಾಯಿಸಲಾಗಿದ್ದಿತು. ಅವರಲ್ಲಿ ೪೩೪ ಮಂದಿ ತಮ್ಮ ಹೆಸರು ಮತ್ತು ಪರಿಚಯಗಳೊಂದಿಗೆ ಹಾಜರಿದ್ದಂತೆ ದಾಖಲಾತಿ ಹೊಂದಿದ್ದರು. ಪ್ರತಿನಿಧಿಗಳು ಕಲ್ಕತ್ತಾಕ್ಕೆ ಬರತೊಡಗಿದರು. ಕಾಂಗ್ರೆಸ್ ಸಮ್ಮೇಳನವು ೧೮೮೬ರ ಡಿಸೆಂಬರ್ ೨೮ರಂದು ಪುರಭವನದಲ್ಲಿ ನಡೆಯಿತು. ಅದು ಕಿಕ್ಕಿರಿದು ತುಂಬಿದ್ದಿತು. ಪ್ರಸಿದ್ಧ ವಿದ್ವಾಂಸರಾಗಿದ್ದ ಡಾ.ರಾಜೇಂದ್ರಲಾಲ್ ಮಿತ್ರ, ಪ್ರತಿನಿಧಿಗಳನ್ನು ಮತ್ತು ಅಥಿತಿಗಳನ್ನು ಸ್ವಾಗತಿಸಿದರು. ಟಾಗೋರ್ ಅವರು ಆ ಸಂದರ್ಭಕ್ಕೆ ಬಂದು ವಿಶೇಷ ಸ್ವಾಗತ ಗೀತೆಯನ್ನು ರಚಿಸಿ ಹಾಡಿದರು; “ನೆರೆದಿಹೆವು ನಾವೆಲ್ಲ ಇಲ್ಲಿ, ಮಾತೆಯ ಕರೆಯಿಂದ ಇಲ್ಲಿ” ಎಂಬುದದು. ಅವರು ‘ವಂದೇ ಮಾತರಂ’ ಗೀತೆಯನ್ನು ತಮ್ಮದೇ ಆದ ರಾಗದಲ್ಲಿ ಹಾಡಿದರು. ಅಧ್ಯಕ್ಷತೆ ವಹಿಸಿದ್ದ ದಾದಾಭಾಯಿ ನವರೋಜಿಯವರು ಭಾರತದ ಆಡಳಿತದ ಬಗೆಗೆ ರಾಜನಿಯೋಗವೊಂದನ್ನು ರಚಿಸಲು ಸರಕಾರ ನಿರಾಕರಿಸಿತ್ತೆಂಬ ವಿಷಯವನ್ನು ಸಭಿಕರ ಗಮನಕ್ಕೆ ತಂದರು. ಅವರು ಭಾರತದ ಬಡತನವನ್ನು ಕುರಿತು ಒತ್ತಿಹೇಳಿ, ವ್ಯಾಪಕವಾಗಿ ಹರಡಿರುವ ಆಶ್ರಯಹೀನ ಸ್ಥಿತಿ ಹಾಗೂ ಅದನ್ನು ಪರಿಹರಿಸುವ ಬಗೆಗೆ ಕಾಂಗ್ರೆಸ್ ಅನುಸರಿಸಬೇಕಾದ ಮಾರ್ಗಗಳ ಬಗೆಗೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಹಾಗೂ ಕರ್ತವ್ಯಗಳ ಬಗೆಗೂ ಒತ್ತಾಯ ಪಡಿಸಿದರು. ಅವರು ತಮ್ಮ ಆರಂಭ ಭಾಷಣದಲ್ಲಿ, ಸಮಾಜ ಸುಧಾರಣೆಗಳ ಅಗತ್ಯತೆ ಬಗೆಗೆ ತಮಗೆ ಅಗಾಧ ಅರಿವಿದ್ದರೂ, ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಯೆಂದು, ಆದುದರಿಂದ ಅದು ಭಾರತೀಯರಿಗೆಲ್ಲ ಒಪ್ಪಿತವೆನಿಸುವ ರಾಜಕೀಯ ವಿಷಯಗಳನ್ನು ಮಾತ್ರ ಕುರಿತು ಪರಿಶೀಲಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಆ ವರ್ಷ ಕಾಂಗ್ರೆಸ್ಸಿಗೆ ದೊರಕಿದ ಮಹಾನಾಯಕರೆಂದರೆ, ಸುರೇಂದ್ರನಾಥ ಬ್ಯಾನರ್ಜೀ ಮತ್ತು ಪಂಡಿತ ಮದನ ಮೋಹನ ಮಾಳವೀಯ. ಮೊದಲನೆಯ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಡಬ್ಲ್ಯು. ಸಿ. ಬ್ಯಾನರ್ಜಿ, ಎರಡನೆಯ ಅಧಿವೇಶನ ದಲ್ಲಿ ಹೀಗೆ ನುಡಿದರು: "ಇಗ್ಲೆಂಡಿನ ರಾಣಿ ಮತ್ತು ಜನತೆಯ ನಾಗರಿಕತೆ ತರುವ ಪ್ರಭಾವವುಳ್ಳ ಆಡಳಿತದ ಆಶ್ರಯದಲ್ಲಿ ಯಾರ ನಿರ್ಬಂಧವೂ ಇಲ್ಲದೆ, ಸ್ವಲ್ಪವೂ ಅಳುಕು ಅಥವಾ ಶಂಕೆಯಿಲ್ಲದೆ, ಸ್ವತಂತ್ರವಾಗಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೋಸ್ಕರ ನಾವೆಲ್ಲ ಇಲ್ಲಿ ಸೇರಿದ್ದೇವೆ. ಇಂಥದು ಬ್ರಿಟಿಷ್ ಆಡಳಿತದಲ್ಲಿ ಮಾತ್ರ ಸಾಧ್ಯ." ಬ್ರಿಟಿಷ್ ಆಡಳಿತದ ಪ್ರತಿನಿಧಿಗಳು ಇಂಥ ಸೌಭ್ರಾತೃಭಾವದ ಬಗೆಗೆ ಕಲಹವಾಡುವುದಾದರೂ ಹೇಗೆ? ಬ್ರಿಟಿಷ್ ನಿವೃತ್ತ ಅಧಿಕಾರಿ ಹ್ಯೂಂ ಕಾಂಗ್ರೆಸ್ಸಿನ ಕ್ರಿಯಾತ್ಮಕ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಇದು ಹಲವಾರು ವರ್ಷಗಳವರೆಗೆ, ಇಂಥ ಬ್ರಿಟಿಷರ ಅಭಿಮಾನಿಗಳಾದ ಜಾರ್ಜ್ ಯೂಲ್, ಅನಂತರ ಸರ್ ವಿಲಿಯಂ ವೆಡ್ಡರ್‌ಬರ್ನ್ ಮತ್ತು ಸರ್ ಹೆನ್ರಿ ಕಾಟನ್ ಇವರುಗಳಿಂದ ಬೆಂಬಲ ಪಡೆಯುತ್ತಿತ್ತು. ಸಂಪ್ರದಾಯದಂತೆ ವೈಸ್‌ರಾಯಿಯ ಸಿಬ್ಬಂದಿಗೆ ಕಳಿಸಿದ ಆಹ್ವಾನಗಳು ಅಧಿಕಾರಿಗಳು ರಾಜಕೀಯ ಸಮ್ಮೇಳನಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂಬ ಕಾರಣದ ಮೇಲೆ ಹಿಂದಕ್ಕೆ ಬರುತ್ತಿದ್ದುವು. ಕಾಂಗ್ರೆಸ್ ಅಧಿವೇಶನ ನಾಲ್ಕುದಿನಗಳ ಕಾಲ ನಡೆಯಿತು. ಅಧಿವೇಶನ ಮುಕ್ತಾಯವಾದ ಮೇಲೆ, ಕಾಂಗ್ರೆಸ್ ಅಧ್ಯಕ್ಷರ ನಾಯಕತ್ವದಲ್ಲಿ ಒಂದು ನಿಯೋಗಕ್ಕೆ ಲಾರ್ಡ್ ಡಫ್ರಿನ್ ಸಂದರ್ಶನವಿತ್ತರು. ಅವರನ್ನು "ರಾಜಧಾನಿಗೆ ಆಗಮಿಸಿದ ಪ್ರತಿಷ್ಠಿತ ವ್ಯಕ್ತಿ"ಗಳೆಂದು ಸ್ವಾಗತಿಸಲಾಯಿತು. ಅವರು ನಿಯೋಗ ದವರನ್ನು ಉದ್ಯಾನದ ಔತಣ ಕೂಟಕ್ಕೆ ಆಹ್ವಾನಿಸಿ, ಆ ರೀತಿ ಆಹ್ವಾನಿಸಿದುದು ಜನತೆಯ ಪ್ರತಿನಿಧಿಗಳಂತಲ್ಲವೆಂಬ ಮಾತನ್ನು ಎಚ್ಚರಿಕೆಯಿಂದ ವಿವರಿಸಿದರು.

ಕಾಂಗ್ರೆಸ್ಸಿನ ಮೂರನೆಯ ಅಧಿವೇಶನ ೧೮೮೭ರ ಡಿಸೆಂಬರ್ ತಿಂಗಳಲ್ಲಿ ಮದರಾಸಿನಲ್ಲಿ ಸಮಾವೇಶಗೊಂಡಿತು. ಅದು ಹೆಚ್ಚಿನ ಉತ್ಸಾಹವನ್ನು ಪ್ರಚೋದಿಸಿತು. ೬೦೦ ಮಂದಿ ಪ್ರತಿನಿಧಿಗಳು ಬಂದಿದ್ದರು. ಅವರಲ್ಲಿ ೨೫೦ ಮಂದಿ ಮದರಾಸ್ ಪ್ರಾಂತದ ಹೊರಗಿನಿಂದ ಬಂದಿದ್ದರು. ಕಾಂಗ್ರೆಸ್ಸಿನ ಅಧಿವೇಶನಕ್ಕೆಂದೇ ವಿಶೇಷ ಚಪ್ಪರ ಏರ್ಪಾಡಾದುದು ಮದರಾಸಿನಲ್ಲೇ ಪ್ರಥಮ. ಬದ್ರುದ್ದೀನ್ ತ್ಯಾಬ್ಜೀ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಅವರು ಮುಂಬೈಯ ಪ್ರಸಿದ್ಧ ವಕೀಲರಾಗಿದ್ದರು. ೩೦೦೦ ಮಂದಿ ಪ್ರೇಕ್ಷಕರು ಅಧಿವೇಶನದಲ್ಲಿ ವೀಕ್ಷಕರಾಗಿದ್ದರು. ಮದರಾಸಿನ ಗೌರ್ನರ್ ಪ್ರತಿನಿಧಿಗಳನ್ನು ರಾಜ್ಯಭವನಕ್ಕೆ ಆಹ್ವಾನಿಸಿ, ಚೆನ್ನಾಗಿ ಸತ್ಕರಿಸಿದರು. ಗೌರ್ನರ್‌ರ ಬ್ಯಾಂಡನ್ನು ನುಡಿಸಲಾಗಿತ್ತು.

೧೮೮೮ರಲ್ಲಿ ಕಾಂಗ್ರೆಸ್ಸಿನ ನಾಲ್ಕನೆಯ ಅಧಿವೇಶನ ಅಲಹಾಬಾದಿನಲ್ಲಿ ಸೇರುವ ವೇಳೆಗೆ, ಆಂದೋಲನದ ಬಗೆಗೆ ಸರಕಾರದ ವರ್ತನೆಯಲ್ಲಿ ಪೂರ್ಣ ಬದಲಾವಣೆ ಎದ್ದು ಕಾಣುತ್ತಿತ್ತು. ಡಫ್ರಿನ್ ೧೮೮೮ರಲ್ಲಿ ಭಾರತದಿಂದ ನಿರ್ಗಮಿಸುವ ಮುನ್ನ ಮಾಡಿದ ಭಾಷಣದಲ್ಲಿ, ಕಾಂಗ್ರೆಸ್, ಆತ್ಮವಿಶ್ವಾಸ ಪೂರ್ವಕವಾಗಿ ಮಾಡಿದ ಬೇಡಿಕೆಗಳ ಬಗೆಗೆ ಉದ್ದೇಶಿಸಿ ನುಡಿಯುತ್ತಾ ಅದರ ಅನುಯಾಯಿಗಳನ್ನು ಅಸಂಖ್ಯ ಭಾರತ ಜನಸ್ತೋಮದಲ್ಲಿ 'ಅಣುಸದೃಶ ಅಲ್ಪಸಂಖ್ಯಾತ'ರೆಂದು ಕರೆಯಲು ಯೋಗ್ಯವೆಂದು ಭಾವಿಸಿದನು. ಕಾಂಗ್ರೆಸ್ ಅಧಿವೇಶನ ಅಲಹಾಬಾದಿನಲ್ಲಿ ನಡೆಯದಂತೆ ಮಾಡಲು ಪ್ರಯತ್ನಿಸಲಾಯಿತು. ಆ ವರ್ಷದಲ್ಲಿ ಕಾಂಗ್ರೆಸ್ ಚಟುವಟಿಕೆಗಳ ಬೆಳವಣಿಗೆ ಹಿಂದೆ ಎಂದೂ ಇಲ್ಲದಷ್ಟಿತ್ತು. ನೂರಾರು ಸಹಸ್ರಾರು ಹಸ್ತಪತ್ರಿಕೆಗಳನ್ನು ಮತ್ತು ಕಿರುಹೊತ್ತಗೆಗಳನ್ನು ಹಂಚಲಾಯಿತು. ನೂರಾರು ಮಂದಿ, ಪ್ರತಿನಿಧಿಗಳ ಆಯ್ಕೆಯಲ್ಲಿ ಭಾಗವಹಿಸಿದರು. ಚುನಾಯಿತರಾದ ಸುಮಾರು ೧೫೦೦ ಮಂದಿ ಪ್ರತಿನಿಧಿಗಳಲ್ಲಿ ೧೨೪೮ ಮಂದಿ ಅಧಿವೇಶನದಲ್ಲಿ ಹಾಜರಿದ್ದರು. ಜಾರ್ಜ ಯೂಲ್ ಅಧ್ಯಕ್ಷರಾಗಿ ಆಯ್ಕೆಯಾದರು.

ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷ ಭಾರತೀಯ ಕ್ರೈಸ್ತರಾಗಿದ್ದರು., ಎರಡು ಮತ್ತು ಆರನೆಯ ಅಧಿವೇಶನಗಳಿಗೆ ಪಾರ್ಸಿ; ಮೂರನೆಯದಕ್ಕೆ ಮುಸ್ಲಿಂ; ನಾಲ್ಕು ಮತ್ತು ಐದನೆಯದಕ್ಕೆ ಆಂಗ್ಲರು; ಏಳನೆಯ ಅಧಿವೇಶನಕ್ಕೆ ಮಾತ್ರ, ಪ್ರಥಮ ಬಾರಿಗೆ ಒಬ್ಬ ಹಿಂದು ಅಧ್ಯಕ್ಷರಾದರು. ಕಾಂಗ್ರೆಸ್ಸಿನ ಪ್ರಥಮ ಹದಿಮೂರು ವರ್ಷಗಳ ಅವಧಿಯಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟ ಸಂಖ್ಯೆಯ ಪ್ರತಿನಿಧಿಗಳು, ಎಷ್ಟೋ ಬಾರಿ, ಅಧಿವೇಶನಗಳು ನಡೆದ ಸ್ಥಳಗಳು ಸಾವಿರಾರು ಮೈಲಿಗಳ ದೂರದಲ್ಲಿದ್ದರೂ, ಅಧಿವೇಶನದಲ್ಲಿ ಹಾಜರಿರುವುದಕ್ಕಾಗಿಯೇ ತಮ್ಮ ಸ್ವಂತ ಖರ್ಚಿನಿಂದ ಪ್ರಯಾಣ ಮಾಡುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ಅಧಿಕಾರಿಗಳು ಇದನ್ನು ಅಂಗೀಕರಿಸದಿರುವ ಅಪಾಯವಿತ್ತು. ಕಾಂಗ್ರೆಸ್ ಆಗಲೇ "ರಾಜನಿಷ್ಠೆಯಿಲ್ಲದ್ದು" ಎಂಬ ಸಂಶಯಕ್ಕೆ ಗುರಿಯಾಗಿದ್ದಿತು, ಭಾರತ ತನ್ನ ವಾಣಿಯನ್ನು ವ್ಯಕ್ತಪಡಿಸಿತ್ತು. ಅದೊಂದು ರಾಷ್ಟ್ರವಾಗಿ ಬೆಳೆಯುತ್ತಿದ್ದಿತು.

ಪ್ರತಿವರ್ಷವೂ ಕಾಂಗ್ರೆಸ್ ಅಧಿವೇಶನ ಸೇರುತ್ತಿತ್ತು. ನಾಡಿನ ಪ್ರಗತಿಪರ ಶಕ್ತಿಗಳಿಗೆ ಅದು ರಾಷ್ಟ್ರೀಯ ವೇದಿಕೆಯಾಗಿತ್ತು. ಆದರೆ ೧೯೦೫ರ ವರೆವಿಗೂ ನಿಜವಾದ ಜನತಾ ಆಂದೋಲನ ಸ್ವರೂಪ ಅದಕ್ಕೆ ಬಂದಿರಲಿಲ್ಲ. ೧೯೦೫-೬ರ ವರೆಗಿನ ಕಾಲದಲ್ಲಿ ನಾಡಿನಲ್ಲೆಲ್ಲ ಹೊಸದೊಂದು ಜೀವಕಳೆ ಚಿಮ್ಮಿ ಹರಿಯುತ್ತಿತ್ತು; ಅದು ಎರಡು ಬಗೆಯ ರಾಷ್ಟ್ರೀಯ ಪಂಥಗಳ ಉಗಮವನ್ನು ಕಂಡಿತು, ಅವರಲ್ಲಿ ಆತ್ಮಾವಲಂಬನೆ ಮತ್ತು ಸ್ವತಂತ್ರ ಕ್ರಿಯೆ ಎದ್ದು ಕಾಣುತ್ತಿದ್ದುವು.

ಈ ಎರಡು ಹೊಸ ರಾಷ್ಟ್ರಿಯ ಪಂಥಗಳಿಗೂ (ಒಂದು ತೀವ್ರಗಾಮಿಗಳದೆಂದೂ ಇನ್ನೊಂದು ಕ್ರಾಂತಿಕಾರಿಗಳದೆಂದೂ ಹೆಸರಾಯಿತು.) ಇದ್ದ ವ್ಯತ್ಯಾಸ ಮಾರ್ಗಕ್ಕೆ ಸಂಬಂಧಿಸಿತ್ತು. ತೀವ್ರಗಾಮಿಗಳು ರಾಜಕೀಯ ಚಳುವಳಿಯಲ್ಲಿಯೂ ಮತ್ತು ಬ್ರಿಟಿಷ್ ವಸ್ತುಗಳು ಹಾಗೂ ಸರಕಾರಿ ಕಚೇರಿಗಳು, ನ್ಯಾಯಸ್ಥಾನಗಳು ಮತ್ತು ಶಾಲೆಗಳ ಬಹಿಷ್ಕಾರ ಇವುಗಳ ಜತೆಗೆ ಸ್ವದೇಶಿ ಹಾಗೂ ರಾಷ್ಟ್ರೀಯ ಮತ್ತು ದೇಶೀಯ ಸಂಸ್ಥೆಗಳಾದ ಪಾಠಶಾಲೆಗಳು ಮತ್ತು ಪಂಚಾಯಿತಿಗಳನ್ನು ಸ್ಥಾಪಿಸು ವುವರ ಮೂಲಕ ರಾಷ್ಟ್ರೀಯ ಪುನರ್ನಿರ್ಮಾಣವನ್ನು ನಂಬಿದರು. ಇನ್ನೊಂದು ಪಂಥ ಪಾಶ್ಚಾತ್ಯ ಕ್ರಾಂತಿಕಾರೀ ಮಾರ್ಗಗಳಾದ ಭಯೋತ್ಪಾದನ ಮತ್ತು ರಾಜ ಕೀಯಕೊಲೆಗಳು, ಡಕಾಯಿತಿಗಳು, ಪಿಸ್ತೂಲು ಮತ್ತು ಬಾಂಬುಗಳ ಉಪಯೋಗ ಇವುಗಳನ್ನು ನಂಬಿದ್ದಿತು. ಎರಡೂ ಪಂಥಗಳೂ ಸ್ವತಂತ್ರ ಮತ್ತು ಸ್ವಾವಲಂಬೀ ಭಾರತ, ತನ್ನ ಪ್ರಾಚೀನ ವೈಭವ ಮತ್ತು ಅಭಿವೃದ್ಧಿಗೆ ಮತ್ತೆ ಬರುವಂತಾಗ ಬೇಕೆಂದು ನಂಬಿದ್ದರು.

ರಾಜಕಾರಣಕ್ಕೆ ಹೊಸ ತಿರುವನ್ನು ಕೊಡಲು ಅನೇಕ ಅಂಶಗಳು ಜತೆಗೂಡಿ ದ್ದುವು. ಇಟಲಿಯ ಮಾಜೀನೀ ಮತ್ತು ಗಾರಿಬಾಲ್ಡಿ ಇವರುಗಳ ಸ್ಫೂರ್ತಿಯುತ ನಾಯಕತ್ವ ಭಾರತದಲ್ಲಿಯೂ ವಿಶೇಷ ಗಮನವನ್ನು ಆಕರ್ಷಿಸಿದ್ದಿತು. ಮ್ಯಾಜೀನಿಯ ಜೀವನ ಮತ್ತು ಕೃತಿಗಳು ಭಾರತದ ಹಲವಾರು ಭಾಷೆಗಳಲ್ಲಿ ದೊರಕುವಂತಾದವು. ೧೯೦೫ರಲ್ಲಿ ಚೀನಾ ರಷ್ಯಾದ ಮೇಲೆ ವಿಜಯಗಳಿಸಿದಾಗ 'ಏಷ್ಯಾಕ್ಕೆಲ್ಲ ನವೋದಯವ ಕಾಲ' ವೆಂದು ಸ್ವಾಗತಿಸಲಾಯಿತು. ಪೂರ್ವ ದೇಶ ಗಳು ಪಶ್ಚಿಮಕ್ಕಿಂತ ದುರ್ಬಲ ಮತ್ತು ನಿಸ್ಸಹಾಯಕ ಎಂಬ ಭಾವನೆ ಕಡಿಮೆ ಯಾಗಲಾರಂಭವಾಯಿತು. ಈಜಿಪ್ಟ್, ಪರ್ಷಿಯ, ತುರ್ಕಿ ಮತ್ತು ರಷ್ಯಾಗಳಲ್ಲಿ ರಾಷ್ಟ್ರಿಯ ಉದ್ಧಾರಕ್ಕೂ ಮತ್ತು ಸ್ವಾತಂತ್ರ್ಯಕ್ಕೂ ನಡೆಯುತ್ತಿದ್ದ ಹೊಸ ಆಂದೋ ಲನಗಳಿಂದ ಹೊಸ ಆಶೆಗೆ ಸತ್ವ ದೊರಕಿತು.

ಹೊರಗಿನ ಪ್ರಸಂಗಗಳ ಪ್ರಭಾವಗಳಿಗಿಂತ ಹೆಚ್ಚಾಗಿ, ಲಾರ್ಡ್ ಕರ್ಜನ್ ಮತ್ತು ಆತನ ತರುವಾಯ ಮಿಂಟೋ ಅನುಸರಿಸಿದ ನಿರ್ದಯ ನೀತಿಯ ಪರಿಣಾಮ ಅಗಾಧವಾಗಿದ್ದಿತು. ೧೯೦೪ರಲ್ಲಿ ಭಾರತೀಯ ಅಧಿಕಾರಿಗಳ ಗೋಪ್ಯ ಅಧಿನಿಯಮ ತಿದ್ದುಪಡಿಯಾಯಿತು. "ಸರಕಾರ ಅಥವಾ ವ್ಯವಸ್ಥಿತ ಪ್ರಭುತ್ವದ ಬಗೆಗೆ ಶಂಕೆ ಅಥವಾ ಹೇಯಭಾವವನ್ನು ಹುಟ್ಟಿಸುವಂತೆ" ವೃತ್ತ ಪತ್ರಿಕೆಗಳು ಮಾಡುವ ಟೀಕೆ ಶಿಕ್ಷಾರ್ಹವೆನಿಸಿತು. ಅದೇ ವರ್ಷ ಕರ್ಜನ್, ಭಾರತೀಯ ವಿಶ್ವವಿದ್ಯಾನಿಲಯಗಳ ಅಧಿನಿಯಮವನ್ನು ಆಚರಣೆಗೆ ತಂದನು. ಅದು ಭಾರತೀಯ ನಾಯಕರಲ್ಲಿ ಅತೃಪ್ತಿ ಯನ್ನುಂಟುಮಾಡಿತು. ಅದರ ಉದ್ದೇಶ ಕಾಲೇಜುಗಳು ಮತ್ತು ಪಾಠಶಾಲೆಗಳ ಮೇಲೆ ಅಧಿಕಾರಶಾಹೀ ಕಟ್ಟುಗಳನ್ನು ವಿಧಿಸುವುದೇ ಆಗಿದ್ದಿತು. ಲಾರ್ಡ್ ಕರ್ಜನ್‌ನ ಈ ಎಲ್ಲ ಕೃತಿಗಳೂ ಮತ್ತು ವಚನಗಳೂ ಜನರಲ್ಲಿ ಅಪ್ರಿಯವನ್ನು

ಉಂಟುಮಾಡಿದಂತೆಯೇ ವಂಗ ವಿಭಜನೆಯು ಭಾರತದಲ್ಲಿ ಅತ್ಯಂತ ಅತೃಪ್ತಿಯನ್ನು ಹುಟ್ಟಿಸಿತು. ಅದು ಭಾರತದ ಎಲ್ಲ ಮತಗಳವರ ಮತ್ತು ವರ್ಗಗಳವರ ಒಮ್ಮತದ ವಿರೋಧವನ್ನು ಹುಟ್ಟಿಸಿತು. ಬಂಗಾಳದಲ್ಲಿ ಘನವಾಗಿ ವೃದ್ಧಿಯಾಗುತ್ತಿದ್ದ ರಾಷ್ಟ್ರೀಯ ಶಕ್ತಿಗಳ ಮೇಲೆ ಇದೊಂದು ಸೂಕ್ಷ್ಮವಾದ ಧಾಳಿಯೆಂದು ಭಾವಿಸಲಾಯಿತು. ಹಿಂದೂ ಮುಸ್ಲಿಮರ ನಡುವೆ ಒಡಕನ್ನು ಹೆಚ್ಚಿಸುವುದೂ ವಿಭಜನೆಯ ಉದ್ದೇಶವಾಗಿದ್ದಿತು. ಕರ್ಜನ್ ಪೂರ್ವ ಬಂಗಾಳಕ್ಕೆ ಹೋಗಿ, ಮುಸ್ಲಿಮರ ದೊಡ್ಡ ಸಭೆಗಳನ್ನು ಸೇರಿಸಿ, ವಿಭಜನೆಯ ಉದ್ದೇಶವು ಬಂಗಾಳದ ಆಡಳಿತದ ಹೊರೆಯನ್ನು ಕಡಮೆಮಾಡುವುದಲ್ಲದೆ, ಒಂದು ಮುಸ್ಲಿಂ ಪ್ರಾಂತವನ್ನು ಸೃಷ್ಟಿಮಾಡಿ ಅದರಲ್ಲಿ ಇಸ್ಲಾಂ ಪ್ರಧಾನವಾಗುವಂತೆಯೂ ಮತ್ತು ಅದರ ಅನುಯಾಯಿಗಳು ಉಚ್ಚ್ರಾಯಸ್ಥಿತಿದಲ್ಲಿ ಇರುವಂತೆ ಮಾಡುವುದೂ ಆಗಿದೆಯೆಂದು ತಿಳಿಸಿದನು. ಅನೇಕ ಪ್ರಮುಖ ಮುಸ್ಲಿಮರು ಇದನ್ನು ವಿರೋಧಿಸಿದರು. ನವಾಬ್ ಜಾದಾ ಅತೀಕುಲ್ಲಾ ಖಾನ್ ೧೯೦೬ರ ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡುತ್ತಾ "ಪೂರ್ವ ಬಂಗಾಳದ ಮುಸ್ಲಿಮರು ಬಂಗಾಳವನ್ನು ವಿಭಜಿಸುವ ಬಗೆಗೆ ಬೆಂಬಲಿಸಿದ್ದಾರೆಂಬುದು ತಪ್ಪೆಂದು ನಾನು ನೇರವಾಗಿ ಹೇಳಬಯಸುತ್ತೇನೆ. ನಿಜವಾದ ಅಂಶ ಹೀಗಿದೆ, ಕೇಲವೇ ಮಂದಿ ಮುಸ್ಲಿಂ ಪ್ರಮುಖರು ತಮ್ಮ ಸ್ವಂತ ಉದ್ದೇಶಗಳಾಗಿ ಅದಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ" ಎಂದರು.

ದೇಶವೇ ಬಂಗಾಳದ ಹಿಂದೆ ಸಂಘಟಿತವಾಗಿ ನಿಲ್ಲುವಂಥ ಮನೋವೃತ್ತಿ ಹುಟ್ಟಿತು. ೧೮೯೬ರಲ್ಲಿ ಪ್ಲೇಗುಜಾಡ್ಯ ಪ್ರಥಮ ಬಾರಿಗೆ ಗೋಚರಿಸಿತು. ಜತೆಗೆ ಅಭಾವ ಸ್ಥಿತಿಯೂ ಹರಡಿತು. ಮುಂದಿನ ವರ್ಷ ಕ್ಷಾಮ, ಪ್ಲೇಗು, ಭೂಕಂಪ, ಯುದ್ಧ ಮತ್ತು ದಬ್ಬಾಳಿಕೆ ಇವುಗಳೆಲ್ಲ ಭಾರತವನ್ನು ಆವರಿಸಿದವು. ರಾನಡೆಯವರು ಹೇಳಿದ ಪ್ರಕಾರ, ಸಪ್ತ ಮಾರಿಗಳು ಭಾರತವನ್ನು ಧಾಳಿಮಾಡಿದಂತೆ ಕಂಡು ಬಂದಿತು. ನಲವತ್ತು ಲಕ್ಷ ಮಂದಿ ೧೮೯೭ರಲ್ಲಿ ಪರಿಹಾರ ಪಡೆಯುತ್ತಿದ್ದರು; ಸಾವಿನ ಸಂಖ್ಯೆ ಏರಿಹೋಯಿತು. ಪರಿಹಾರ ನೀಡುವುದಕ್ಕೂ ಮತ್ತು ಕಂದಾಯ ವಸೂಲಾತಿಯನ್ನು ನಿಲ್ಲಿಸುವುದಕ್ಕೂ ಸರಕಾರದ ಯಂತ್ರ ಬಹಳ ನಿಧಾನವಾಗಿ ಚಲಿಸುತ್ತಿತ್ತು. ದುಃಖಪೀಡಿತ ಜನರಿಗೆ ನೆರವನ್ನು ನೀಡಲು ತಿಲಕ್ ಸ್ವಯಂಪ್ರೇರಿತ ಸೇವೆಯನ್ನು ಏರ್ಪಡಿಸಿದರು. ಹಾಗೆಯೇ ಬಡರೈತರಿಂದ ಬಲವಂತವಾಗಿಕಂದಾಯ ವಸೂಲಾತಿಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಅವರು ಕೇಸರಿ ಪತ್ರಿಕೆಯಲ್ಲಿ ಹೀಗೆ ಬರೆದರು; "ಯಾರೂ ಸಾಯಬಾರದೆಂಬುದು ರಾಣಿಯ ಇಚ್ಛೆಯಾಗಿರುವಾಗ, ಎಲ್ಲರೂ ಬದುಕಬೇಕೆಂದು ಗೌರ್ನರ್ ಘೋಷಿಸುತ್ತಿರುವಾಗ, ಆವಶ್ಯಕತೆ ಬಿದ್ದರೆ ರಾಜ್ಯ ಕಾರ್ಯದರ್ಶಿ ಸಾಲವನ್ನು ಎತ್ತಲೂ ಸಿದ್ಧವಿರುವಾಗ, ನೀವು ಅಂಜುಕುಳಿತನ ಮತ್ತು ಹಸಿವಿನಿಂದ ಸಾಯುವಿರಾ? ಸರಕಾರಕ್ಕೆ ಕೊಡಲು ನಿಮ್ಮಲ್ಲಿ ಹಣವಿದ್ದರೆ ಅಗತ್ಯವಾಗಿ ಕೊಡಿ. ನಿಮ್ಮಲ್ಲಿ ಇಲ್ಲವಾದರೆ, ಸರಕಾರದ

ಅಧೀನ ಅಧಿಕಾರಿಗಳ ಕೋಪದಿಂದ ಪಾರಾಗಲು ನಿಮ್ಮ ವಸ್ತುಗಳನ್ನು ವಿಕ್ರಯ ಮಾಡುವಿರಾ? ಸಾವಿನ ಹಿಡಿತದಲ್ಲಿದ್ದಾಗಲೂ ನೀವು ಧೈರ್ಯದಿಂದ ಇರಲಾರಿರಾ?"

ಕಷ್ಟಕೋಟಲೆ ಮತ್ತು ದುಃಖ ಘೋರವಾಗಿದ್ದುವು. ಬ್ಯೂಬಾನಿಕ್ ಪ್ಲೇಗು ಬಂದು ಅವನ್ನು ಇನ್ನೂ ಹೆಚ್ಚಿಸಿತು. ಪುಣೆಯಲ್ಲಿ ಬಿಳಿಯ ಸೈನಿಕರು ಆರೋಗ್ಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದರು. ನಗರವು ಸೈನ್ಯದ ರಕ್ಷಣೆಯಲ್ಲಿ ವಿಭಾಗಗಳಾಗಿ ವಿಂಗಡಿಸಲ್ಪಟ್ಟು, ಬ್ರಿಟಿಷ್ ಸೈನಿಕರು ಮನೆಗಳನ್ನು ಪ್ರವೇಶಿಸಿ, ಸ್ತ್ರೀಯರು, ಪುರುಷರು ಮತ್ತು ಮಕ್ಕಳನ್ನು ಪರೀಕ್ಷಿಸಲಾರಂಭಿಸಿದರು. ಇದರಿಂದ ಜನರ ಕ್ರೋಧಾನಲ ಉಜ್ವಲವಾಯಿತು. ರಾಣಿಯ ಜನ್ಮದಿನವಾಗಿದ್ದ ೧೮೯೭ರ ಜೂನ್ ೨೨ರಂದು ರಾತ್ರಿ ಈ ಕಾರ್ಯಾಚರಣೆಗಳ ಅಧಿಕಾರಿಯಾಗಿದ್ದ ಐ.ಸಿ.ಎಸ್. ಅಧಿಕಾರಿ ಮಿ. ರ್‍ಯಾಂಡ್ ಮತ್ತು ಆತನ ಸಂಗಾತಿ ಲೆ. ಐರ್‍ಸ್ಟ ಎಂಬಿಬ್ಬರು, ಛಾಪೇಕರ್ ಸೋದರರಿಂದ ಗುಂಡಿಟ್ಟು ಕೊಲ್ಲಲ್ಪಟ್ಟರು. ಇದರ ತರುವಾಯ, ಅಧಿಕಾರಿಗಳು ದಮನ ನೀತಿಯನ್ನು ಅನುಸರಿಸಿದರು. ತಿಲಕ್ ಮತ್ತು ಇತರ ಪತ್ರಕರ್ತರು ರಾಜ ದ್ರೋಹದ ಆಪಾದನೆಗೆ ಗುರಿಯಾಗಿ ಶಿಕ್ಷೆಗೊಳಗಾದರು ತಿಲಕ್ ಯಾವ ನ್ಯಾಯ ವಿಚಾರಣೆಗೆ ಗುರಿಯಾಗಿದ್ದರೋ ಆ ಲೇಖನ ತಮ್ಮದಲ್ಲವೆಂದು ನ್ಯಾಯ ಸ್ಥಾನದಲ್ಲಿ ಒಪ್ಪಿಕೊಳ್ಳಬೇಕೆಂದು ಕೇಳಲಾಯಿತು. ತಿಲಕ್ ಅದನ್ನು ನಿರಾಕರಿಸಿ, ಹೀಗೆ ನುಡಿದರು: "ನಮ್ಮ ಜೀವನದ ಕೆಲವು ಸಮಯಗಳಲ್ಲಿ ನಾವು ನಮ್ಮನ್ನು ಪೂರ್ಣವಾಗಿ ಸ್ವಾಧೀನದಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಆಗ ನಾವು ನಮ್ಮ ಜನತೆಯ ಪ್ರತಿನಿಧಿಗಳಾಗಿ ವರ್ತಿಸಬೇಕಾಗುತ್ತದೆ." ೧೨೪ 'ಎ' ವಿಧಿಯಲ್ಲಿ ಬರುವ 'ಅಪ್ರೀತಿಯ' ಎಂಬ ಪದಕ್ಕೆ ನ್ಯಾಯಾಧೀಶ 'ಪ್ರೀತಿಶೂನ್ಯತೆ' ಎಂಬ ಹೊಸ ಅರ್ಥವನ್ನು ಕೊಟ್ಟನು. ತಿಲಕರಿಗೆ ಹದಿನೆಂಟು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದನು.

ದೇಶಾದ್ಯಂತ ಪ್ರತಿಭಟನೆ ಸಂಭವಿಸಿತು. ತಿಲಕರ ರಕ್ಷಣೆಗಾಗಿ ನಿಧಿಸಂಗ್ರಹ ಮಾಡಲಾಯಿತು. ಆ ಕಾರ್ಯದಲ್ಲಿ ಟಾಗೋರರು ಪ್ರಧಾನ ಪಾತ್ರ ವಹಿಸಿದರು. ಮ್ಯಾಕ್ಸ್‌ಮುಲ್ಲರ್ ಕ್ಷಮೆ ತೋರಿಸಬೇಕೆಂದು ಮನವಿ ಸಲ್ಲಿಸಿದರು: "ತಿಲಕರು ಸಂಸ್ಕೃತ ವಿದ್ವಾಂಸರೆನ್ನುವುದೇ ನನ್ನ ಆಸಕ್ತಿ" ಎಂದು ನುಡಿದರು. ೧೮೯೭ರಲ್ಲಿ ನಡೆದ ರಾಜಕೀಯ ನಾಯಕನೊಬ್ಬನ ಈ ಕಾರಾಗೃಹ ಶಿಕ್ಷೆ, ಭಾರತಕ್ಕೇ ಪ್ರಥಮ ವೆನಿಸಿತು. ತಿಲಕರು ಆರಾಮ ಕುರ್ಚಿಯ ರಾಜಕೀಯವನ್ನು ಕೊನೆಗಾಣಿಸಿ ದರು. ಅವರು 'ಲೋಕಮಾನ್ಯ' ಎಂದು ಜನಪ್ರಿಯರಾದರು.

೧೮೯೭-೧೯೦೦ರ ಕಾಲದಲ್ಲಿ ಮತ್ತೆ ಕ್ಷಾಮ ಪ್ರಾಪ್ತವಾಯಿತು. ಆದರೂ ಭಾರತೀಯರಿಗೆ ತಮ್ಮ ರಾಜ್ಯದ ಆದಾಯದಲ್ಲಿ ಯಾವ ಹತೋಟಿಯೂ ಇಲ್ಲ ದಿದ್ದುದರಿಂದ ಕನಿಷ್ಠ ಪಕ್ಷ ವರ್ಷಕ್ಕೆ ೨೦,೦೦೦,೦೦೦ ಪೌಂಡುಗಳನ್ನು ಇಂಗ್ಲೆಂಡ್

ಸಲ್ಲಿಸಬೇಕಾಗಿದ್ದ ಸಾಲಗಳ ಮೇಲಿನ ಬಡ್ಡಿಗಾಗಿಯೂ ವಿಶ್ರಾಂತಿ ವೇತನ ಇತ್ಯಾದಿ ವೆಚ್ಚಗಳಿಗಾಗಿಯೂ ಮೀಸಲಿಡಲಾಗಿದ್ದಿತು. ಈ ಅತೃಪ್ತಿಯ ಜತೆಗೆ, ಕರ್ಜನ್, ಭಾರತ ಸರಕಾರದ ಸೇವೆಯ ಉನ್ನತ ದರ್ಜೆಗಳಲ್ಲಿದ್ದ ಭಾರತೀಯರನ್ನು ವಿಸರ್ಜಿಸುವ ನೀತಿಯನ್ನು ಅನುಸರಿಸಿದನು. ೧೯೦೪ರಲ್ಲಿ ಆಯ–ವ್ಯಯ ಅಂದಾಜಿನ ಬಗೆಗೆ ಮಾತನಾಡುತ್ತಾ ಹೀಗೆ ನುಡಿದನು: "ಭಾರತದ ಸಿವಿಲ್ ಸರ್ವಿಸ್ಸಿನ ಅತ್ಯಂತ ದರ್ಜೆಯ ಅಧಿಕಾರ ಇಂಗ್ಲಿಷರಿಗೇ ಸಲ್ಲುವುದು ಸಾರ್ವತ್ರಿಕ ನಿಯಮ; ಆಂಶಿಕವಾಗಿ ತರಬೇತಿಯಿಂದಲೂ, ಶಿಕ್ಷಣದಿಂದಲೂ, ಸರಕಾರದ ಆಡಳಿತ ನಿಯಮಗಳ ತಿಳಿವಳಿಕೆಯಿಂದಲೂ, ಆ ಕಾರ್ಯ ನಿರ್ವಹಿಸಲು ಅಗತ್ಯವಾಗಿ ಬೇಕಾದ ಮನೋಧರ್ಮ ಮತ್ತು ಶೀಲಶಕ್ತಿ ಇವುಗಳೆಲ್ಲ ಅವರಲ್ಲಿ ಇರುವುದೇ ಇದಕ್ಕೆ ಕಾರಣ."

೧೯೦೫ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಘಟಿಕೋತ್ಸವವನ್ನು ನೆರವೇರಿಸುತ್ತಾ ಕರ್ಜನ್ ಹೀಗೆ ಘೋಷಿಸಿದನು: "ಪೌರ್ವಾತ್ಯ ದೇಶಗಳ ನೀತಿಸಂಹಿತೆಯಲ್ಲಿ ಸತ್ಯಕ್ಕೆ ಗೌರವ ದೊರಕುವ ಮೊದಲೇ ಪಶ್ಚಿಮ ದೇಶಗಳಲ್ಲಿ ಉನ್ನತ ಸ್ಥಾನ ಅದಕ್ಕೆ ದೊರಕಿದ್ದಿತು; ವಂಚನೆ, ಕಪಟೋಪಾಯ ಇವುಗಳು ಇಲ್ಲಿ ಯಾವಾಗಲೂ ಗೌರವ ಪಡೆದಿವೆ." ಆತನ ಅರಿವಿಗೆ ಬಂದಂತೆ ಭಾರತೀಯ ಪುರಾಣಗಳು, "ಪ್ರಾಮಾಣಿಕ ಜನ ಯಶಸ್ವಿಯಾಗಿ ಮೋಸ, ವಂಚನೆ ಮಾಡಿರುವುದನ್ನು ಶ್ಲಾಘಿಸುತ್ತವೆಂದು ನುಡಿದನು. ಬಂಗಾಳೀ ಜನಕ್ಕೆ ಅವರ ವಾಗಾಡಂಬರದ ಬಗೆಗೆ ಎಚ್ಚರಿಕೆಯನ್ನು ಕೊಟ್ಟನು: "ನಾನು ನಿಮಗೆ ಹೇಳುವುದೆಲ್ಲ ಇಷ್ಟೆ. ಈ ಗುಣ ವಿಶೇಷದ ವಿಷಯದಲ್ಲಿ ಸಮರ್ಥಿಸಿಕೊಳ್ಳಬೇಡಿ." ಕಡೆಗೆ, "ಭಾರತೀಯ ಜನಾಂಗ" ಎಂಬುದಿದೆಯೆಂಬುದನ್ನು ನಿರಾಕರಿಸಿ, ತನ್ನ ಭಾಷಣವನ್ನು ಮುಕ್ತಾಯ ಮಾಡಿದನು.

ಭಾರತದ ಆತ್ಮಗೌರವಕ್ಕೆ ಮತ್ತೊಂದು ಧಕ್ಕೆ ತಗುಲಿತು. ಹೊರದೇಶಗಳಲ್ಲಿ ಪ್ರಧಾನವಾಗಿ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅವಹೇಳನಕ್ಕೆ ಗುರಿಯಾಗಿದ್ದರು. ಗೋಖಲೆ ಕೇಂದ್ರಶಾಸನ ಸಭೆಯಲ್ಲಿ ಹೀಗೆ ನುಡಿದರು "ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗೆ ಒಂದೇಸಮನಾಗಿ ಆಗುತ್ತಿರುವ ಅವಹೇಳನದಷ್ಟು ಬೇರೆಯಾವ ಸಮಸ್ಯೆಯೂ ಹೆಚ್ಚು ಅಹಿತ ಭಾವವನ್ನು ಉಂಟುಮಾಡಿಲ್ಲ." ಆಗ ಇನ್ನೂ ಅಪರಿಚಿತನಾಗಿದ್ದ ಯುವಕ ಬ್ಯಾರಿಸ್ಟರ್ ಗಾಂಧೀ ಅಲ್ಲಿ ತನ್ನ ಹೊಸ ಅಸ್ತ್ರವಾದ ಸತ್ಯಾಗ್ರಹದಿಂದ ಹೋರಾಟ ನಡೆಸುತ್ತಿದ್ದನು. ಆ ಹೋರಾಟ ಭಾರತದಲ್ಲಿ ಎಲ್ಲ ವರ್ಗಗಳ ಜನರ ಗಮನವನ್ನು ಸಹಾನುಭೂತಿಯನ್ನು, ತನ್ನೆಡೆಗೆ ಸೆಳೆದು ಕೊಂಡಿದ್ದಿತು.

೧೯೦೫ರಲ್ಲಿ ವಂಗ ವಿಭಜನೆಯ ವಿರುದ್ಧ ಆಂದೋಲನ ಆರಂಭವಾಯಿತಲ್ಲದೆ, ಅದೇ ವರ್ಷ ಕಾಂಗ್ರೆಸ್‌ನಲ್ಲಿ ಯುವಜನರು—'ಲಾಲ್-ಬಾಲ್-ಪಾಲ್'—ಲಾಲಾ ಲಜಪತರಾಯ್, ಬಾಲಗಂಗಾಧರ ತಿಲಕ್, ಬಿಪಿನ ಚಂದ್ರಪಾಲ್—ಇವರ

ನಾಯಕತ್ವದಲ್ಲಿ ಬಂಡಾಯವೆದ್ದರು. ಅವರು ಬ್ರಿಟಿಷ್ ಸಂಸತ್ತಿಗೆ ಮನವಿ ಸಲ್ಲಿಸುವುದನ್ನು 'ಭಿಕ್ಷುಕತನ' ಎಂದು ಕರೆದು, ಕಾಂಗ್ರೆಸ್ಸಿನ ಮನೋಧರ್ಮ ಪರಿವರ್ತನೆಯ ಹೋರಾಟದಲ್ಲಿ ದಿಗ್ವಿಜಯ ಗಳಿಸಿದರು. ತಿಲಕರ ಧ್ಯೇಯಘೋಷ, "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ನಾನು ಅದನ್ನು ಹೊಂದಿಯೇ ಹೊಂದುತ್ತೇನೆ" ಎಂಬುದು ಭಾರತದಲ್ಲೆಲ್ಲ ಪ್ರತಿಧ್ವನಿಸಿತು.

ಇದಕ್ಕೆ ಹಿಂದಿನ ವರ್ಷ ಕಾಂಗ್ರೆಸ್ ಅಧ್ಯಕ್ಷ ಸರ್ ಹೆನ್ರಿ ಕಾಟನ್ ಅವರ ನಾಯಕತ್ವದಲ್ಲಿ ಒಂದು ನಿಯೋಗ, ಕಾಂಗ್ರೆಸ್ ಅಂಗೀಕರಿಸಿದ ನಿರ್ಣಯ ಗಳೊಂದಿಗೆ ಲಾರ್ಡ್ ಕರ್ಜನ್ ನಿಯೋಗವನ್ನು ಭೇಟಿಯಾಗಲು ಅಪೇಕ್ಷಿಸಿತು. ಲಾರ್ಡ್‌ಕರ್ಜನ್ ನಿಯೋಗವನ್ನು ಭೇಟಿಮಾಡಲು ನಿರಾಕರಿಸಿ, ಕಾಂಗ್ರೆಸ್ ಚಟುವಟಿಕೆಗಳನ್ನು ಕೇವಲ 'ಕಂಠಶೋಷಣೆ' ಎಂದು ತೆಗಳಿದನು. ಇದರ ಪರಿಣಾಮವಾಗಿ, ಭಾರತದ ಕುಂದುಕೊರತೆಗಳನ್ನು ಬ್ರಿಟಿಷ್ ಸಾರ್ವಜನಿಕರ ಮುಂದೆ ಮಂಡಿಸಲು ಗೋಖಲೆ ಮತ್ತು ಲಜಪತರಾಯ್ ಇವರುಗಳಿಂದ ಕೂಡಿದ ಒಂದು ನಿಯೋಗವನ್ನು ಇಂಗ್ಲೆಂಡಿಗೆ ಕಳಿಸಲಾಯಿತು. ಬ್ರಿಟನ್ನಿನ ನ್ಯಾಯ ಪರತೆಯಲ್ಲಿ ಕಾಂಗ್ರೆಸಿಗರು ಪ್ರಬಲ ನಂಬಿಕೆಯನ್ನು ಹೊಂದಿದ್ದರು. ೧೮೮೯ರಿಂದ ಕಾಂಗ್ರೆಸಿನ ಒಂದು ಬ್ರಿಟಿಷ್ ಸಮಿತಿಯು ಲಂಡನ್ನಿನಲ್ಲಿ ಸ್ಥಾಪಿತವಾಗಿದ್ದಿತು. ಬ್ರಿಟನ್ನಿನ ಸಾಮಾನ್ಯರ ಸಭೆಗೆ ಭಾರತದ ವಿದ್ಯಮಾನಗಳಲ್ಲಿ ಆಸಕ್ತಿಯನ್ನು ಹುಟ್ಟಿಸಲು ಬ್ರಿಟಿಷ್ ಸಾಂಸತ್ತಿಕ ಸಮಿತಿಯೊಂದನ್ನು ೧೮೯೩ರಲ್ಲಿ ರಚಿಸ ಲಾಗಿದ್ದಿತು. ಇದರ ಉದ್ದೇಶ ಬ್ರಿಟಿಷ್ ಸಂಸತ್ ಸದಸ್ಯರಿಗೂ ಬ್ರಿಟಿಷ್ ಸಾರ್ವ ಜನಿಕರಿಗೂ ಭಾರತದ ಪ್ರಶ್ನೆಗಳ ಬಗೆಗೆ ಸರಿಯಾದ ಮಾಹಿತಿಯನ್ನು ಒದಗಿಸು ವುದೇ ಆಗಿದ್ದಿತು.

ಗೋಖಲೆ ಮತ್ತು ಲಜಪತ್‌ರಾಯ್ ಇಂಗ್ಲೆಂಡಿನಲ್ಲೆಲ್ಲ ಸಂಚರಿಸಿ, ಪ್ರಮುಖ ವ್ಯಕ್ತಿಗಳ ಸಂಪರ್ಕ ಪಡೆದು, ಪರಿಚಯ ಮಾಡಿಕೊಂಡರು; ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಆದರೆ ಅವರು ನಿರಾಶರಾಗಿ ಭಾರತಕ್ಕೆ ಹಿಂದಿರುಗಿದರು. ಬ್ರಿಟನ್ ಭಾರತಕ್ಕೆ ಏನನ್ನೂ ಮಾಡಲಾರದಷ್ಟು ತನ್ನ ಸ್ವಂತ ವಿದ್ಯಮಾನಗಳಲ್ಲಿ ಮಗ್ನವಾಗಿದೆಯೆಂದೂ, ಬ್ರಿಟಿಷ್ ಪತ್ರಿಕಾ ಪ್ರಪಂಚ ಭಾರತೀಯರ ಆಶೋತ್ತರಗಳನ್ನು ಪ್ರತಿಪಾದಿಸುವ ಇಷ್ಟದಿಂದ ಕೂಡಿಲ್ಲವೆಂದೂ, ಆದುದರಿಂದ ಇಂಗ್ಲೆಂಡಿನಲ್ಲಿ ಭಾರತದ ಸಮಸ್ಯೆಗಳ ಬಗೆಗೆ ಆಸಕ್ತಿಯಿಂದ ಆಲಿಸು ವವರಿಗೆ ಅಭಾವವಿದೆಯೆಂದೂ, ಆದುದರಿಂದ ಭಾರತೀಯರು ಸ್ವಾತಂತ್ರ್ಯಗಳಿಸಿ ಕೊಳ್ಳಲು ಆತ್ಮಾವಲಂಬಿಗಳಾಗಬೇಕೆಂದೂ ಲಜಪತ್ ರಾಯ್ ಘೋಷಿಸಿದರು.

ಲಜಪತರಾಯರ ಈ ಸಂದೇಶ, ೧೯೦೫ರ ಡಿಸೆಂಬರ್‌ನಲ್ಲಿ ಬನಾರಸ್ಸಿನಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಅಧಿವೇಶನದ ಯುವಕರ ಹೃದಯದಲ್ಲಿ ನೆಟ್ಟು ನಿಂತಿತು. ಆ ವೇಳೆಗೆ ವಂಗ ವಿಭಜನೆ ಕೃತನಿಶ್ಚಯವಾಗಿತ್ತು. ಬ್ರಿಟಿಷ್ ವಸ್ತು

ಗಳ ಬಹಿಷ್ಕಾರವನ್ನೊಳಗೊಂಡಂತೆ, ಸ್ವದೇಶೀ ಚಳವಳಿ ಬಂಗಾಳದಲ್ಲಿ ಆರಂಭವಾಗಿತ್ತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗೋಖಲೆ ಬಹಿಷ್ಕಾರವನ್ನು ರಾಜಕೀಯ ಅಸ್ತ್ರವಾಗಿ ಅಂಗೀಕರಿಸಿದರು. ಆದರೆ ಹಿರಿಯರು ಈ ಹೊಸ ಸಂದೇಶವನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಆದುದರಿಂದ ಸಂಸ್ಥೆ ಇಬ್ಭಾಗವಾಗುವ ಭೀತಿ ಹುಟ್ಟಿತು. ಬ್ರಿಟಿಷ್ ರಾಜಕುಮಾರ ಮತ್ತು ರಾಜಕುಮಾರಿಯರನ್ನು ಸ್ವಾಗತಿಸಬೇಕೆಂಬ ಪ್ರಥಮ ನಿರ್ಣಯದ ಬಗೆಗೆ ಪ್ರಬಲವಾದ ವಿರೋಧ ಬಂದಿತು. ಬಂಗಾಳದ ಪ್ರತಿನಿಧಿಗಳು ಬಹಿರಂಗವಾಗಿಯೇ ವಿರೋಧದ ಬೆದರಿಕೆ ಹಾಕಿದರು. ಹೇಗೋ ರಾಜಿ ಆಗಿ, ಒಡಕು ತಪ್ಪಿತು. ಕಾಂಗ್ರೆಸ್ ಪಾಳೆಯದಲ್ಲೇ ಯುವಕ ಪ್ರತಿನಿಧಿಗಳ ಒಂದು ಬಹಿರಂಗ ಸಮ್ಮೇಳನ ನಡೆಯಿತು. ಇದರಿಂದ ರಾಷ್ಟ್ರೀಯವಾದಿ ಅಥವಾ ತೀವ್ರವಾದಿ ಎಂಬ ಹೊಸ ಪಕ್ಷ ಉದಯವಾಯಿತು. ತಿಲಕರು ಪರೋಕ್ಷ ಪ್ರತೀಕಾರವನ್ನು ಬೋಧಿಸಿ, ರಾಷ್ಟ್ರೀಯ ಪುನರ್ರಚನೆಯ ಕಾರ್ಯಕ್ರಮವೊಂದನ್ನು ನಿರೂಪಿಸಿದರು. ಹೊಸ ರಾಷ್ಟ್ರೀಯವಾದಿ ಪಂಥ ಅದನ್ನು ಸ್ವೀಕರಿಸಿ, ಕಾರ್ಯರೂಪಕ್ಕೆ ತಂದಿತು.

ಬಂಗಾಳದ ವಿಭಜನೆಯ ಯೋಜನೆಯು ೧೯೦೫ರ ಜುಲೈ ೧೯ರ ನಿರ್ಣಯವೊಂದರ ಮೂಲಕ ಘೋಷಿಸಲ್ಪಟ್ಟಿತು. ಇದರ ಬಗೆಗೆ ಭಾರತದಾದ್ಯಂತ ವಿರೋಧವಿದ್ದರೂ ಅಕ್ಟೋಬರ್ ೧೯ರಂದು ಅದು ಆಚರಣೆಗೆ ಬರುವಂತಾಯಿತು.

ನಿರ್ಣಯ ಅಂಗೀಕೃತವಾದ ಮೇಲೆ ಹಿಂದೆ ಎಂದೂ ಇಲ್ಲದಿದ್ದಂಥ ಆಂದೋಲನ ಆರಂಭವಾಯಿತು. ವಿಭಜನೆಯ ವಿರುದ್ಧ ಪ್ರತಿಭಟನೆಯನ್ನು ಸೂಚಿಸಲು ಬಂಗಾಳದಲ್ಲೆಲ್ಲ ಸಾರ್ವಜನಿಕ ಸಭೆಗಳು ನಡೆದವು. ೧೯೦೫ರ ಆಗಸ್ಟ್ ೭ರಂದು ಕಲ್ಕತ್ತೆಯ ಪುರಸಭಾ ಭವನದಲ್ಲಿ ಒಂದು ಪ್ರಚಂಡ ಪ್ರದರ್ಶನ ಏರ್ಪಾಡಾಯಿತು. ಕೇವಲ ಪ್ರತಿಭಟನೆಗಳೆಲ್ಲ ವಿಫಲವೆಂಬ ಭಾವನೆ ಉಂಟಾಗಿದ್ದಿತು. ಬಹಿಷ್ಕಾರ ಪ್ರತಿಜ್ಞೆಯನ್ನು ಸುರೇಂದ್ರನಾಥ ಬ್ಯಾನರ್ಜಿ ತಯಾರಿಸಿದರು. ಜನರು ಅದಕ್ಕೆ ಸಹಿಮಾಡಬೇಕೆಂದು ಮನವಿ ಮಾಡಿಕೊಂಡರು. ಆ ಪ್ರತಿಜ್ಞೆ ಹೀಗಿದ್ದಿತು: “ಇಂದಿನಿಂದ ಕನಿಷ್ಠ ಒಂದು ವರ್ಷಕಾಲ ನಾನು ಬ್ರಿಟಿಷ್ ವಸ್ತುಗಳನ್ನು ಕೊಳ್ಳುವುದನ್ನು ತ್ಯಜಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ. ಈ ಪ್ರತಿಜ್ಞೆ ನೆರವೇರಲು ದೇವರು ನನಗೆ ನೆರವಾಗಲಿ.” ಅಗಾಧ ಜನ ನೆರೆದಿದ್ದ ಸಭೆಯೊಂದರಲ್ಲಿ ಅಕ್ಟೋಬರ್ ೧೬ರನ್ನು ದುಃಖದ ದಿನವೆಂದು ಘೋಷಿಸಲಾಯಿತು. ಒಂದು ನಿಧಿಯನ್ನು ಶೇಖರಿಸಲು ಆರಂಭಿಸಲಾಯಿತು. ಸ್ಥಳದಲ್ಲೇ ೫೦,೦೦೦ ರೂಪಾಯಿ ಕೂಡಿತು. ಸ್ವದೇಶೀ ಮತ್ತು ಬಹಿಷ್ಕಾರ ಚಳವಳಿ ದೇಶದಾದ್ಯಂತ ನಡೆಯಿತು. “ನಾರಾಯಣಗಂಜ್ ಮತ್ತು ಢಾಕಾಗಳ ಮಹಿಳೆಯರೂ ಸ್ವದೇಶೀ ಪ್ರತಿಜ್ಞೆಯನ್ನು ತೆಗೆದುಕೊಂಡು ವಿದೇಶೀ ವಸ್ತುಗಳ ಬಹಿಷ್ಕಾರ ಚಳುವಳಿಯನ್ನು ಸೇರಿದರೆಂದು” ಢಾಕಾದ ಜಿಲ್ಲಾಧಿಕಾರಿ ತನ್ನ ಅಧಿಕಾರಯುತ ವರದಿಯಲ್ಲಿ ಉಲ್ಲೇಖಿಸಿದ್ದನು.

ಮ್ಯಾಂಚೆಸ್ಟರ್‌ನಿಂದ ಭಾರತಕ್ಕೆ ರಫ್ತಾಗುತ್ತಿದ್ದ ವಸ್ತ್ರದ ಪ್ರಮಾಣ ಬಹಳ ಕಡಮೆಯಾಯಿತು. ೧,೮೦೦,೦೦೦ ರೂಪಾಯಿ ಶೇಖರಿಸಿ ಶ್ರೀರಾಮಪುರದ ಹಳೆಯ ಹತ್ತಿಗಿರಣಿಯೊಂದನ್ನು ಕೊಂಡುಕೊಂಡು, ಅದನ್ನು ವಿಸ್ತರಿಸಿ, ವಂಗ-ಲಕ್ಷ್ಮಿ ಗಿರಣಿ ಎಂಬ ಹೆಸರನ್ನು ಇಡಲಾಯಿತು. ಭಾರತೀಯ ಉದ್ಯಮಕ್ಕೆ ಹಣ ಕಾಸಿನ ಪ್ರೋತ್ಸಾಹನೀಡಲು 'ಬಂಗಾಳಾದ ನ್ಯಾಷನಲ್ ಬ್ಯಾಂಕ್' ಸ್ಥಾಪಿತ ವಾಯಿತು. ವಿದ್ಯಾರ್ಥಿಗಳು ವಿಭಜನೆಗೆ ವಿರೋಧ ವ್ಯಕ್ತಪಡಿಸುವ ಸಭೆಗಳಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿದರು; ಅದನ್ನು ತಮ್ಮ ಪರಸ್ಪರ ಸ್ವಾಗತದ ಪದವನ್ನಾಗಿ ಉಪಯೋಗಿಸಿಕೊಂಡರು; ರಾಷ್ಟ್ರಸೇವೆಗೆ ಸ್ವಯಂ ಸೇವಕರಾಗಿ ದಾಖಲಾಗಿ ವಿದೇಶೀ ವಸ್ತ್ರದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಸ್ವದೇಶೀ ಚಳವಳಿಯ ಸಭೆಗಳನ್ನು ಬಲಪ್ರಯೋಗಮಾಡಿ ಚದುರಿಸಲಾಯಿತು. ಅನೇಕ ನಾಯಕರುಗಳಿಗೆ ಚಿತ್ರಹಿಂಸೆ ಕೊಟ್ಟು, ರಾಜದ್ರೋಹದ ಆಪಾದನೆಗೆ ಗುರಿ ಮಾಡಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ವಂದೇಮಾತರಂ ಗೀತೆಯನ್ನು ಹಾಡುವುದು ನ್ಯಾಯಬಾಹಿರವೆಂದು ಘೋಷಿಸಲಾಯಿತು. ಹೀಗೆ ಸಾರ್ವಜನಿಕ ಅಭಿವ್ಯಕ್ತಿಯನ್ನು ಹತ್ತಿಕ್ಕಲೆತ್ನಿಸಿದುದು ಎಲ್ಲೆಲ್ಲಿಯೂ ಅತೃಪ್ತಿಯನ್ನು ಕೆರಳಿಸಿತು. ಇದರಿಂದ ಭಯೋತ್ಪಾದಕರ ಚಳವಳಿಯ ಬೆಳವಣಿಗೆಗೆ ಸಹಾಯಕವಾಯಿತು.

ವಿಭಜನೆಗೆ ವಿರುದ್ಧ ಚಳುವಳಿಯ ಕಾಲದಲ್ಲಿ ಟಾಗೋರರು ತಮ್ಮ ದಂತದ ಗೋಪುರದಿಂದ ಕೆಳಗಿಳಿದು ಬಂದು ಅದರಲ್ಲಿ ಭಾಗವಹಿಸಿದರು. ಕವಿ, ರಚನಾತ್ಮಕ ಅಸಹಕಾರವನ್ನು ಪ್ರತಿಪಾದಿಸಿದರು. ಅವರು ದೇಶಪ್ರೇಮ ಗೀತೆಗಳನ್ನು ರಚಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ, ದೊಡ್ಡ ಸಭೆಗಳಲ್ಲಿ ಭಾಷಣ ಮಾಡಿದರು. ಒಂದು ಚಿರ ಸ್ಮರಣೀಯ ಮೆರವಣಿಗೆಯ ನಾಯಕತ್ವ ವಹಿಸಿ, ಕಲ್ಕತ್ತಾದ ರಾಜಬೀದಿಗಳಲ್ಲಿ ಹೋಗುತ್ತಾ ಹೀಗೆ ಹಾಡಿದರು: 'ವಿಧಿ ಕೂಡಿಸಿರುವ ಬಾಂಧವ್ಯವನ್ನು ಕಡಿದು ಹಾಕುವಷ್ಟು ಪ್ರಭಾವಶಾಲಿಯೇ ನೀನು?" ಭಾವೋದ್ರೇಕಿಸುವ ಅವರ ಗೀತೆಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿ, ಪ್ರತಿಯೊಬ್ಬ ಬಂಗಾಳಿಯ ತುಟಿಯ ಮೇಲೂ ನಲಿದಾಡಿದವು.

ಸರಕಾರವು ಮುಸ್ಲಿಮರಿಗೆ ಕೃತ್ರಿಮ ಪ್ರೋತ್ಸಾಹ ತೋರಿಸುವ ನೀತಿಯನ್ನು ಆರಂಭಿಸಿದ್ದಿತು. ಒಬ್ಬ ದೊಡ್ಡ ಅಧಿಕಾರಿ, ''ಇಬ್ಬರು ಹೆಂಡತಿಯರಲ್ಲಿ ಮುಸ್ಲಿಂ ಪತ್ನಿ ಪ್ರೀತಿಪಾತ್ರಳು" ಎಂದುಸುರಿದ್ದನು ವಿಭಜನೆಯನ್ನು ಆರಂಭದಲ್ಲಿ ಒಂದು ಅನಪೇಕ್ಷಿತ ವ್ಯವಸ್ಥೆಯೆಂದು ಪರಿಗಣಿಸಿದ್ದ ಢಾಕಾದ ನವಾಬ್ ಸಲೀಮುಲ್ಲಾ ಖಾನ್‌ಗೆ ಕಡಮೆ ಬಡ್ಡಿದರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಸಾಲ ಕೊಡುವುದರ ಮೂಲಕ ಆತನನ್ನು ಸರಕಾರದ ಕಡೆಗೆ ವಶಪಡಿಸಿಕೊಳ್ಳಲಾಯಿತು. ಹಿಂದೂ-ಮುಸ್ಲಿಂ ಕೋಮು ಗಳ ನಡುವೆ ವಿರೋಧವನ್ನು ಹುಟ್ಟಿಸುವಂಥ ಸರಕಾರದ ನೀತಿಯ ಪರಿಣಾಮವಾಗಿ ಎಲ್ಲೆಲ್ಲಿಯೂ ಗಲಭೆಗಳು ನಡೆದುವು. ಅನೇಕರು ಸತ್ತರು; ದೇವಾಲಯಗಳು

ಅಪವಿತ್ರಗೊಳಿಸಲ್ಪಟ್ಟುವು ; ಅಂಗಡಿಗಳು ಕೊಳ್ಳೆಯಾದುವು ; ಹಿಂದೂ ವಿಧವೆಯರನ್ನು ಕದ್ದುಕೊಂಡು ಹೋಗಿ ಮಾನಭಂಗ ಮಾಡಲಾಯಿತು. ಕೋಮಿಲಾ ಎಂಬಲ್ಲಿ ನಡೆದ ಗಲಭೆಗಳ ವಿಚಾರಣೆಯಲ್ಲಿ ನ್ಯಾಯಾಧೀಶ ಪ್ರತ್ಯಕ್ಷವಾಗಿಯೇ ಮುಸ್ಲಿಮರ ಪರ ವಹಿಸಿದನು.

ಕಲ್ಕತ್ತಾದಲ್ಲಿ, ೧೯೦೬ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಆಂದೋಲನದ ಇತಿಹಾಸದಲ್ಲಿ ಗಮನಾರ್ಹವಾದುದು. ಹಳೆಯ ಪ್ರಭಾವವು ಕಡೆಯದಾಗಿ ಶಕ್ತಿಗುಂದಿತು. ನಾಯಕರು ಸ್ವತಂತ್ರವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕಾಂಗ್ರೆಸ್ ಅಧ್ಯಕ್ಷ ದಾದಾಭಾಯಿ ನವರೋಜಿ ಭಾರತ ಜನಾಂಗದ 'ಸ್ವರಾಜ್ಯ' ಆದರ್ಶವನ್ನು ಘೋಷಿಸಿದರು. ಹೊಸ ಆಶೋತ್ತರಗಳ ಮಂತ್ರ, 'ಸ್ವರಾಜ್ಯ' ಎಂಬ ಶಬ್ಧವನ್ನು ಪ್ರಥಮ ಬಾರಿಗೆ ಕಾಂಗ್ರೆಸ್ಸಿನ ವೇದಿಕೆಯಿಂದ ಉಚ್ಚರಿಸಲಾಯಿತು. "ಸ್ವರಾಜ್ಯವೊಂದೇ ಪ್ರಧಾನ ಪರಿಹಾರ. ಒಗ್ಗಟ್ಟಿನಿಂದ, ತಾಳ್ಮೆಯಿಂದ ಕೆಲಸಮಾಡಿ, ಸ್ವರಾಜ್ಯವನ್ನು ಗಳಿಸಿರಿ. ಇಂದು ದಾರಿದ್ರ್ಯ, ಕ್ಷಾಮ ಮತ್ತು ಪ್ಲೇಗುಗಳಿಂದ ನಶಿಸಿ ಹೋಗುತ್ತಿರುವ ಲಕ್ಷಾಂತರ ಮಂದಿಯ ಮತ್ತು ಜೀವನಾಧಾರಕ್ಕೆ ಸಾಕಷ್ಟು ಆಹಾರವಿಲ್ಲದೆ ಹಸಿವಿನಿಂದ ಕಂಗೆಟ್ಟಿರುವ ನೂರಾರು ಮಂದಿಯ ಉದ್ಧಾರಕ್ಕಾಗಿಯೂ ಭಾರತ ಹಿಂದೊಮ್ಮೆ ಹೊಂದಿದ್ದ ಹೆಮ್ಮೆಯ ಸ್ಥಾನವನ್ನು, ಪಾಶ್ಚಾತ್ಯ ನಾಗರಿಕ ಜನಾಂಗಗಳ ಮಧ್ಯೆ ಮತ್ತೊಮ್ಮೆ ಗಳಿಸಿಕೊಳ್ಳುವುದಕ್ಕೂ ಶ್ರಮಿಸಿರಿ." ಸ್ವದೇಶೀ, ಬಹಿಷ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ ಇವುಗಳನ್ನು ಕುರಿತು ಮಾಡಿದ ನಿರ್ಣಯಗಳು ತಿಲಕರ ನಾಯಕತ್ವದ ಹೊಸಪಕ್ಷಕ್ಕೆ ತೃಪ್ತಿಕರವಾಗಿ ಕಂಡು ಬಂದಿತು. ಫಿರೋಜ್ ಷಾ ಮೆಹತಾರವರ ನಾಯಕತ್ವದಲ್ಲಿದ್ದ ಸಾಮ್ಯವಾದಿಗಳು ಇದನ್ನು ಬಹಳ ತೀವ್ರ ಕಾರ್ಯಕ್ರಮಗಳೆಂದು ಭಾವಿಸಿ, ಈ ನಿರ್ಣಯಗಳನ್ನು ಪರಿವರ್ತಿಸಲು ಮಾಡಿದುದರಿಂದ ೧೯೦೭ರ ಸೂರತ್ ಅಧಿವೇಶನದಲ್ಲಿ ಒಡಕು ಉಂಟಾಯಿತು.

೧೯೦೬–೮ರ ವೇಳೆಗೆ ರಾಷ್ಟ್ರೀಯ ಪಕ್ಷವು ಸ್ಥಿರವಾಗಿ ಶಕ್ತಿ ಪಡೆಯಿತು. ಈ ಹೊಸ ಪಕ್ಷದ ನಾಯಕರಲ್ಲಿ ಒಬ್ಬರಾದ ಅರವಿಂದ ಘೋಷರು ಒಂದು ಉಲ್ಕೆಯಂತೆ ಗೋಚರಿಸಿದರು. ಅವರು ನಾಲ್ಕು ವರ್ಷಗಳ ಕಾಲ ಶ್ರಮಿಸಿ, ಕಡೆಗೆ ೧೯೧೦ರಲ್ಲಿ ಪಾಂಡಿಚೆರಿಯಲ್ಲಿ ತಪಸ್ಸಿನ ಅನುಷ್ಠಾನ ಮಾಡುತ್ತಾ ನೆಲಸಿದರು. ಅವರ ಪ್ರಭಾವ ಅಗಾಧವಾಗಿದ್ದಿತು. ಅವರು 'ವಂದೇ ಮಾತರಂ' ಮತ್ತು 'ಕರ್ಮಯೋಗಿನ್' ಎಂಬ ಪತ್ರಿಕೆಗಳ ಮೂಲಕ ನಡೆಸಿದ ಸಾಹಿತ್ಯಿಕ ಚಟುವಟಿಕೆ ಅದ್ಭುತವಾಗಿದ್ದಿತು. ಅವರು ಎರಡು ಸಲ ವಿಚಾರಣೆಗೆ ಗುರಿಯಾಗಿ, ೧೯೦೮ರಲ್ಲಿ ಒಂದು ವರ್ಷಕಾಲ ಸೆರೆಮನೆಯಲ್ಲಿ ಇಡಲ್ಪಟ್ಟರು. ೧೯೧೦ ರಲ್ಲಿ ಅವರ ಮೇಲೆ ಮೂರನೆಯ ಸಲ ವಿಚಾರಣೆಯು ಆರಂಭವಾಗುವ ವೇಳೆಗೆ ಅವರು ಬ್ರಿಟಿಷ್ ಪ್ರದೇಶವನ್ನು ತ್ಯಜಿಸಿ ಹೋಗಿದ್ದರು. ಅವರ ಸಾಹಿತ್ಯಶಕ್ತಿಯ ಪ್ರಭಾವವಾಗಿ ಅನೇಕ ಯುವಕರು ತಮ್ಮ ಜೀವನವನ್ನು

ಬಲಿದಾನಕೊಡುವ ಸ್ಫೂರ್ತಿಯನ್ನು ಪಡೆದುಕೊಂಡರು. ಅವರ ದಾರ್ಶನಿಕ ಮತ್ತು ಸಾಂಸ್ಕೃತಿಕ ಕೃತಿಗಳು ಇಂದಿಗೂ ನಿಗೂಢ ಪ್ರಜ್ಞೆ, ವಿದ್ವತ್ತು ಮತ್ತು ಪ್ರಸಾದ ಭಾವಗಳಿಗೆ ಸಾಟಿಯಿಲ್ಲದೆ ಇವೆ.

೧೯೦೮ರಲ್ಲಿ ಶಾಸನ ಕಡತಕ್ಕೇರಿಸಿದ 'ರಾಜದ್ರೋಹ ಸಭೆಗಳ ಶಾಸನ', 'ಭಾರತೀಯ ವೃತ್ತಪತ್ರಿಕಾಶಾಸನ' ಇವುಗಳ ಪರಿಣಾಮವಾಗಿ ಸಾರ್ವಜನಿಕ ಪ್ರಚಾರ ಕಾರ್ಯವು ಪೂರ್ಣವಾಗಿ ತಟಸ್ಥ ಸ್ಥಿತಿಗೆ ಬಂದಿತು. ಐವತ್ತೆರಡು ವಯಸ್ಸಿನ ಲೋಕಮಾನ್ಯ ತಿಲಕರು ಕೇಸರಿ ಪತ್ರಿಕೆಯಲ್ಲಿ ಬರೆದ ಕೆಲವು ಲೇಖನಗಳಿಗಾಗಿ, ೧೯೦೮ರಲ್ಲಿ, ಆರು ವರ್ಷಗಳ ಕಠಿಣ ಶಿಕ್ಷೆಗೂ ಮತ್ತು ೧೦೦೦/– ರೂ.ಗಳ ದಂಡಕ್ಕೂ ಗುರಿಯಾದರು. ತಿಲಕರು ನ್ಯಾಯಾಧೀಶರನ್ನು ಸಂಬೋಧಿಸಿ, ಹೀಗೆ ಹೇಳಿದರು : "ನ್ಯಾಯಮಂಡಲಿಯ ತೀರ್ಪು ಏನೇ ಇರಲಿ, ನಾನೆಂದೂ ನಿರಪರಾಧಿಯೆಂದೇ ಹೇಳುತ್ತೇನೆ. ಎಲ್ಲವುಗಳ ಭವಿಷ್ಯವನ್ನು ನಿರ್ಧಾರ ಮಾಡುವ ದೈವ ಶಕ್ತಿಗಳು ಇವೆ ; ಬಹುಶಃ ನಾನು ಸ್ವತಂತ್ರನಾಗಿರುವುದಕ್ಕಿಂತಲೂ ನನ್ನ ಕ್ಲೇಶಾನುಭವದಿಂದ ನಾನು ಪ್ರತಿನಿಧಿಸುವ ಧ್ಯೇಯವು ಹೆಚ್ಚು ಅಭಿವೃದ್ಧಿಗೆ ಬರಲು ಸಾಧ್ಯವೆಂಬುದು ಆ ದೈವ ಶಕ್ತಿಯ ಸಂಕಲ್ಪವಿರಬೇಕು." ಈ ಅತ್ಯಂತ ಜನಪ್ರಿಯ ಪೂಜ್ಯ ನಾಯಕನಿಗೆ ಈ ರೀತಿ ಅಮಾನುಷ ಶಿಕ್ಷೆ ವಿಧಿಸಲ್ಪಡುವುದರಿಂದ ರಾಷ್ಟ್ರಾದ್ಯಂತ ಪ್ರತಿಭಟನೆ ನಡೆಯಿತು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಶರಣು ಹೊಡೆದರು. ಹರತಾಳಗಳು ನಡೆದುವು. ಮುಂಬೈ ಹತ್ತಿಗಿರಣಿ ಕಾರ್ಮಿಕರು ಆರು ದಿನಗಳ ಕಾಲ ಕೆಲಸವನ್ನು ನಿಲ್ಲಿಸಿದರು. ಭಾರತದಲ್ಲಿ ಕಾರ್ಮಿಕರು ಕೈಗೊಂಡ ಪ್ರಥಮ ಮುಷ್ಕರ ಅದೇ.

ಈ ದಮನ ನೀತಿಯ ಪರಿಣಾಮವಾಗಿ, ಬಂಗಾಳದ ಕ್ರಾಂತಿಕಾರಿ ಪಕ್ಷಕ್ಕೆ ಸಹಾನುಭೂತಿ ವೃದ್ಧಿಯಾಗಿ ಅದು ಕ್ರಮೇಣ ಬಲಗೊಂಡಿತು. ಆ ಪಕ್ಷವು ಪಟ್ಟಣಗಳು ಮತ್ತು ಗ್ರಾಮಗಳಲ್ಲೆಲ್ಲ ತನ್ನ ಶಾಖೆಗಳನ್ನು ಹೊಂದಿದ್ದಿತು. ಸಂಘಕ್ಕೆ ಸೇರಿದ ಸದಸ್ಯರಿಗೆ ಗೀತೆ ಮತ್ತು ಸ್ವಾಮಿ ವಿವೇಕಾನಂದರ ಬರಹಗಳ ಅಧ್ಯಯನ, ಮ್ಯಾಜಿನೀ ಮತ್ತು ಗಾರಿಬಾಲ್ಡಿ ಇವರ ಜೀವನ ಪರಿಚಯ, ಬಾಂಬುಗಳು ಮತ್ತು ಇತರ ಮಾರಕಾಸ್ತ್ರಗಳ ತಯಾರಿಕೆ – ಉಪಯೋಗ ಇವುಗಳ ಬಗೆಗೆ ಸಾಹಿತ್ಯ ಪ್ರಚಾರ, ಇತ್ಯಾದಿಗಳನ್ನು ಪರಿಚಯ ಮಾಡಿಕೊಡಲಾಯಿತು. ಈ ಕ್ರಾಂತಿಕಾರಿ ಪಕ್ಷವು ರಷ್ಯಾ ಮತ್ತು ಇಟಲಿ ದೇಶಗಳ ಗುಪ್ತ ಸಂಘಗಳಂತೆ ರಚಿಸಲ್ಪಟ್ಟು ಅದರ ಕಾರ್ಯಕ್ರಮಗಳಲ್ಲಿ ಭಯೋತ್ಪಾದಕ ಕೃತ್ಯಗಳಿಗೆ ಪ್ರಧಾನತೆಯನ್ನು ಕೊಡಲಾಯಿತು.

ಖುದಿರಾಮ್ ಬೋಸ್ ಮತ್ತು ಪ್ರಫುಲ್ಲ ಚಂದ್ರ ಇವರುಗಳು ೧೯೦೮ರ ಏಪ್ರಿಲ್‌ನಲ್ಲಿ ಮುಝಫರ್‌ಪುರದ ನ್ಯಾಯಾಧೀಶ ಮಿ. ಕಿಂಗ್ಸ್ ಫೋರ್ಡನ ಕೊಲೆ ಮಾಡುವ ವೀರಕಾರ್ಯಕ್ಕೆ ಯತ್ನಿಸಿದರು. ಆದರೆ ಇಬ್ಬರು ನಿರಪರಾಧಿಗಳಾಗಿದ್ದ ಆಂಗ್ಲ ಮಹಿಳೆಯರು ಅದಕ್ಕೆ ತುತ್ತಾದರು. ಖುದಿರಾಮ್ ಬಂಧಿತನಾದನು; ವಿಚಾರಣೆಗೆ ಗುರಿಯಾಗಿ ಗಲ್ಲಿಗೇರಿಸಲ್ಪಟ್ಟನು. ಕ್ರಾಂತಿಕಾರಿಗಳು ಇದನ್ನು ಸುಮ್ಮನೆ ನೋಡುತ್ತ ಕುಳಿತು

ಕೊಳ್ಳಲಿಲ್ಲ. ಸರಕಾರದ ಪರವಾಗಿ ಸಾಕ್ಷಿ ಹೇಳಿದ ಅಪರಾಧಿಗಳಲ್ಲೊಬ್ಬನಾದ ಗೋಸಾವಿಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಸೆರೆಮನೆಯಲ್ಲಿಯೇ ಗುಂಡಿಟ್ಟು ಕೊಂದರು. ಎರಡು ತಿಂಗಳುಗಳ ತರುವಾಯ, ಖುದಿರಾಮನನ್ನು ಬಂಧಿಸಿದ್ದ ಸಬ್–ಇನ್‌ಸ್ಪೆಕ್ಟರ್ ಅವರನ್ನು ಕೊಲೆಮಾಡಿದರು. ೧೯೦೯ರ ಫೆಬ್ರವರಿಯಲ್ಲಿ ಅಲೀಪುರ ಮತ್ತು ಗೋಸಾವಿ ಕೊಲೆ ಮೊಕದ್ದಮೆಗಳಲ್ಲಿ ಭಾಗವಹಿಸಿದ್ದ ಸರಕಾರಿ ನ್ಯಾಯವಾದಿಯನ್ನು ಆತ, ಅಲೀಪುರ ಮೊಕದ್ದಮೆಯ ಮೇಲ್ಮನವಿಯನ್ನು ಕೇಳಿಕೊಂಡು, ಶ್ರೇಷ್ಠ ನ್ಯಾಯಾಲಯ ದಿಂದ ಹೊರಕ್ಕೆ ಬರುತ್ತಿದ್ದಾಗ ಗುಂಡಿಟ್ಟು ಕೊಲ್ಲಲಾಯಿತು. ಇದು ಕ್ರಾಂತಿಕಾರಿಗಳ ಸಂಘಶಕ್ತಿಗೂ ಮತ್ತು ಅವರ ನಿರ್ಭೀತ ಕೃತ್ಯಗಳಿಗೂ ನಿದರ್ಶನಗಳಾದುವು.

೧೯೦೬ ರಿಂದ ೧೦ರವರೆಗೆ ಕ್ರಾಂತಿಕಾರಿಗಳು ಬಂಗಾಳವೊಂದರಲ್ಲಲ್ಲದೆ ಇತರ ಕಡೆಗಳಲ್ಲಿಯೂ ಚಟುವಟಿಕೆಯಿಂದ ಕೂಡಿದ್ದರು. ಪುಣೆಯ ವಿ. ಡಿ. ಸಾವರ್‌ಕರ್ ಮತ್ತು ಶ್ಯಾಮಜೀ ಕೃಷ್ಣವರ್ಮ ಇವರುಗಳು ಲಂಡನ್ ಮತ್ತು ಪ್ಯಾರಿಸ್‌ಗಳಿಂದ, ಮಹಾರಾಷ್ಟ್ರ ಮತ್ತು ಇತರ ಕಡೆಗಳಲ್ಲಿ ನಡೆದ ಕ್ರಾಂತಿಕಾರೀ ಆಂದೋಲನಕ್ಕೆ, ನಿರ್ದೇಶನ ಮಾಡಿದರು. ಸಾವರ್‌ಕರ್‌ರ ಸೋದರ ಗಣೇಶ್, ಕ್ರಾಂತಿಕಾರೀ ಕವನಗಳನ್ನು ಪ್ರಕಟಿಸಿದನೆಂಬ ಕಾರಣದ ಮೇಲೆ ೧೯೦೯ರಲ್ಲಿ ಆಜೀವ ಪರ್ಯಂತ ಗಡೀಪಾರು ಶಿಕ್ಷೆಗೆ ಗುರಿಯಾದನು. ಕ್ರಾಂತಿಕಾರಿಗಳಿಗೆ ವಿಧಿಸಿದ ಈ ಉಗ್ರ ಶಿಕ್ಷೆಗಳ ವಾರ್ತೆ ಲಂಡನ್ನಿನಲ್ಲಿದ್ದ ಯುವಕ ಭಾರತೀಯರ ಮೇಲೆ ತೀವ್ರ ಪರಿಣಾಮ ಮಾಡಿತು. ಅವರಲ್ಲಿ ಒಬ್ಬನಾದ ಮದನಲಾಲ ಧಿಂಗ್ರಾ, ಹೀಗೆ ಭಾರತೀಯ ಯುವಕರಿಗೆ ವಿಧಿಸಲಾದ ಅಮಾನುಷ ಗಡೀಪಾರು ಮತ್ತು ಗಲ್ಲಿನ ಶಿಕ್ಷೆಗೆ ಇಂಗ್ಲಿಷರ ಕೊಲೆಮಾಡಿ ಸೇಡುತೀರಿಸಿಕೊಳ್ಳಲು ನಿರ್ಧಾರ ಮಾಡಿದನು. ೧೯೦೯ರ ಜುಲೈ ಒಂದರಂದು ಅವನು ಕರ್ಜನ ವೈಲಿ ಅವರ ಮೇಲೆ ಗುಂಡನ್ನು ಹಾರಿಸಿದನು. ೧೯೧೦ರಲ್ಲಿ ಸಾವರ್‌ಕರ್ ಅವರನ್ನು ಲಂಡನ್ನಿನಲ್ಲಿ ಬಂಧಿಸಿ ಮುಂಬೈಗೆ ಕಳಿಸಲಾಯಿತು. ಪ್ರಯಾಣ ಮಧ್ಯದಲ್ಲಿ ಅವರು ಮಾರ್ಸೇಲ್ಸ್ ಬಳಿ ತಪ್ಪಿಸಿಕೊಂಡು ಮತ್ತೆ ಬಂಧಿತರಾದರು. ಸ್ವಲ್ಪಕಾಲದ ಮೇಲೆ, ಅವರ ವಿಚಾರಣೆ ನಡೆದು, ಗಡೀಪಾರು ಆಜ್ಞೆಗೆ ಗುರಿಯಾಗಿ, ಆಂಡಮಾನ್‌ನಲ್ಲಿ ಇಡಲ್ಪಟ್ಟರು.

ಭಾರತದ ಯಾವ ವೈಸ್‌ರಾಯಿಯೂ ಕರ್ಜನ್‌ನಷ್ಟು ಅಧಿಕಾರ ಮತ್ತು ಪ್ರಭಾವಗಳನ್ನು ಬೀರಲಿಲ್ಲ. ೧೯೦೫ರಲ್ಲಿ ಕರ್ಜನ್ ಭಾರತದಿಂದ ನಿರ್ಗಮಿಸಿದನು. ಅವನ ತರುವಾಯ ಲಾರ್ಡ್ ಮಿಂಟೋ ಅಧಿಕಾರಕ್ಕೆ ಬಂದನು. ೧೯೦೬ರ ಜೂನ್‌ನಲ್ಲಿ ಭಾರತ ರಾಜ್ಯ ಕಾರ್ಯದರ್ಶಿಯಾಗಿದ್ದ ಲಾರ್ಡ್ ಮಾರ್ಲೆ, ಲಾರ್ಡ್ ಮಿಂಟೋಗೆ ಈರೀತಿ ಬರೆದನು: "ಭಾರತದಲ್ಲಿ ಹೊಸ ಸತ್ವ ಮೂಡಿ ಹರಡುತ್ತಿದೆಯೆಂದು ಎಲ್ಲರೂ ಎಚ್ಚರಿಕೆ ನೀಡುತ್ತಿದ್ದಾರೆ. ನೀವು ಹಿಂದಿನ ರೀತಿಯಲ್ಲಿಯೇ ಆಡಳಿತ ನಡೆಸಲಾರಿರಿ. ಕಾಂಗ್ರೆಸ್ ಪಕ್ಷ ಮತ್ತು ತತ್ವಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಏನೇ ಇದ್ದರೂ ನೀವು ಅವುಗಳೊಂದಿಗೆ ವ್ಯವಹರಿಸಬೇಕಾಗುತ್ತದೆ. ಸ್ವಲ್ಪ ಕಾಲದಲ್ಲಿಯೇ ಮುಸ್ಲಿಮರೂ ಕಾಂಗ್ರೆಸ್ಸಿನೊಂದಿಗೆ ಜತೆಗೂಡಿ ನಿಮ್ಮ ವಿರುದ್ಧ ತಮ್ಮ ಬೆಂಬಲ

ನೀಡುವರೆಂಬುದು ಖಚಿತ.'' ಸೌಮ್ಯವಾದಿಗಳು ಮಾರ್ಲೆ ಅವರಲ್ಲಿ ತಮ್ಮ ಭರವಸೆಯನ್ನು ಇಟ್ಟಿದ್ದರು. ಭಾರತ ಸರಕಾರ ತೀವ್ರಗಾಮಿಗಳ ಬಗೆಗೆ ದಯಾಹೀನ ದಮನ ನೀತಿಯನ್ನು ಅನುಸರಿಸುವುದರ ಜತೆಗೆ, ಸೌಮ್ಯವಾದಿಗಳು, ಮುಸ್ಲಿಮರು, ರಾಜರುಗಳು ಮತ್ತು ಭೂಪತಿಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ತಂತ್ರವನ್ನು ಹೂಡುತ್ತಿದ್ದರು. ೧೯೦೮ರ ನವೆಂಬರ್ ೨ರಂದು ವಿಕ್ಟೋರಿಯಾ ರಾಜ್ಞಿಯ ಐವತ್ತನೆಯ ವಾರ್ಷಿಕೋತ್ಸವ ನಡೆದಾಗ, ಏಳನೆಯ ಎಡ್ವರ್ಡ್ ದೊರೆ ರಾಜರುಗಳಿಗೂ ಮತ್ತು ಭಾರತದ ಜನತೆಗೂ ಒಂದು ರಾಜಘೋಷಣೆಯ ಮೂಲಕ ಸಂದೇಶ ಕಳಿಸಿ, ರಾಜಕೀಯ ಸುಧಾರಣೆಗಳ ಬಗೆಗೆ ಸೂಚಿಸಿದರು. ಡಿಸೆಂಬರ್ ೧೭ರಂದು ಲಾರ್ಡ್ ಮಾರ್ಲೆ ಸಂಸತ್ತಿನ ಮುಂದೆ ಸುಧಾರಣೆಗಳ ಸಲಹೆಗಳನ್ನು ಮಂಡಿಸಿದನು. ವಾಮ ಪಕ್ಷದಿಂದ ಪ್ರತ್ಯೇಕವಾಗಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮದರಾಸಿನಲ್ಲಿ ಸಭೆಸೇರಿ 'ಮಿಂಟೋ-ಮಾರ್ಲೆ' ಯೋಜನೆಗೆ ಹೃತ್ಪೂರ್ವಕ ಸ್ವಾಗತವನ್ನು ನೀಡಿತು. ಆ ಸಲಹೆಗಳು ೧೯೦೯ರ ಮೇ ೧೫ರಂದು 'ಇಂಡಿಯನ್ ಕೌನ್ಸಿಲ್ ಆಕ್ಟ್' ಎಂಬ ಹೆಸರಿನಿಂದ ಅಂಗೀಕೃತವಾಗಿ, ನವೆಂಬರ್ ೧೫ರಿಂದ ಆಚರಣೆಗೆ ಬಂದುವು. ೧೯೦೮-೯ರ ಕಾಲಾವಧಿಯಲ್ಲಿ ಅನೇಕ ವಿದ್ಯಮಾನಗಳು ನಡೆದುವು. ಅಷ್ಟಾಗಿ ತೀವ್ರವೇಗವಿಲ್ಲದ ಸುಧಾರಣೆಗಳನ್ನು ಸೌಮ್ಯವಾದಿಗಳೂ ಖಂಡಿಸಿದರು. ಈ 'ಪ್ಯಾಂಡೊರಾ' ಪೆಟ್ಟಿಗೆಯ ಹಿಂದೆ ಒಂದು ಇತಿಹಾಸವೇ ಇದ್ದಿತು.

ಆಗಾಖಾನ್ ಅವರ ನೇತೃತ್ವದಲ್ಲಿ, ಕೆಲವರು ಮುಸ್ಲಿಮರು, ೧೯೦೬ರ ಅಕ್ಟೋಬರ್ ೧ರಂದು ಲಾರ್ಡ್‌ಮಿಂಟೋ ಅವರನ್ನು ಭೇಟಿಮಾಡಿ, ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು. ಅದೊಂದು ದೀರ್ಘ ಪತ್ರವಾಗಿತ್ತು. ಅದು ಮುಸ್ಲಿಂ ಜನಾಂಗದ ಪರವಾಗಿ ಎರಡು ಮುಖ್ಯ ಬೇಡಿಕೆಗಳನ್ನು ನಿವೇದಿಸಿದ್ದಿತು. ಒಂದನೆಯದು ಹೀಗಿದ್ದಿತು: "ಮುಸ್ಲಿಂ ಜನಾಂಗಕ್ಕೆ ನೀಡಬಹುದಾದ ಪ್ರತ್ಯಕ್ಷ ಅಥವಾ ಪರೋಕ್ಷ ಯಾವುದೇ ಬಗೆಯ ಪ್ರಾತಿನಿಧ್ಯ ಮತ್ತು ಎಲ್ಲ ವಿಧಗಳಲ್ಲಿಯೂ ಅವರ ಸ್ಥಾನಮಾನಗಳ ಮೇಲೆ ಪ್ರಭಾವ ಬೀರುವ ಸ್ಥಾನಗಳು ಅದರ ಸಂಖ್ಯಾಬಲಕ್ಕೆ ಅನುಗುಣವಾಗಿರಬೇಕಲ್ಲದೆ, ಸಾಮ್ರಾಜ್ಯದ ರಕ್ಷಣೆಗೆ ಅದು ನೀಡಿರುವ ಕಾಣಿಕೆಯ ವ್ಯಾವಹಾರಿಕ ಪ್ರಾಮುಖ್ಯತೆ ಮತ್ತು ಮೌಲ್ಯಗಳಿಗೆ ಅನುಗುಣವಾಗಿಯೂ ಇರಬೇಕು;'' ಹೀಗೆಯೇ ''ಸುಮಾರು ಒಂದು ನೂರು ವರ್ಷಗಳ ಹಿಂದೆ ಅದು ಹೊಂದಿದ್ದ ಸ್ಥಾನಕ್ಕೆ ತಕ್ಕಂತೆಯೂ ಇರಬೇಕು." ಎರಡನೆಯದು ಹೀಗಿದ್ದಿತು: ''ಸಲಹೆ ಮಾಡಿರುವ ಸುಧಾರಣೆಗಳಲ್ಲಿ, ಅವರು ಪ್ರತ್ಯೇಕ ಕೋಮುವಾರು ಚುನಾವಣಾ ಕ್ಷೇತ್ರಗಳ ಮೂಲಕ ತಮ್ಮ ಸ್ವಂತ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಕೊಡಲ್ಪಡಬೇಕು.'' ಮೌಲಾನಾ ಮಹಮ್ಮದ್ ಅಲೀ ಇದನ್ನು ಕುರಿತು ಹೀಗೆ ಹೇಳಿದರು: ''ಈ ನಿಯೋಗದ ಬೇಡಿಕೆ ಒಂದು ಆಜ್ಞಾಧಾರಕ ಕ್ರಿಯೆಯೇ ಆಗಿದ್ದಿತು." ಇದು ಒಂದು ಬಹಿರಂಗ ಗುಟ್ಟಾಗಿದ್ದಿತು. ಲಾರ್ಡ್ ಮಿಂಟೋ, ನಿಯೋಗಿಗಳ ವಾದವನ್ನು ಒಪ್ಪಿಕೊಂಡು ತನ್ನ ಉತ್ತರದಲ್ಲಿ ಹೀಗೆ

ಹೇಳಿದನು : ''ಭಾರತದಲ್ಲಿ ಯಾವುದೇ ಬಗೆಯ ಚುನಾವಣಾ ಪ್ರಾತಿನಿಧ್ಯದಲ್ಲಿ ಈ ಖಂಡದ ಜನಕೋಟಿಯ ನಂಬಿಕೆಗಳು ಮತ್ತು ಸಂಪ್ರದಾಯಗಳು ಪಂಗಡಗಳು ಇವುಗಳಿಗೆ ಗಮನ ಕೊಡದೆ, ಕೇವಲ ವೈಯಕ್ತಿಕ ಮತದಾನವನ್ನು ನೀಡುವುದು ಅಪಾಯಕಾರಿಯಾಗಿ ವಿಫಲಗೊಳ್ಳುವುದೆಂದು ನಿಮ್ಮಷ್ಟೇ ದೃಢವಾಗಿ ನಾನೂ ನಂಬುತ್ತೇನೆ.''

೧೯೦೬ರ ಡಿಸಂಬರ್‌ನಲ್ಲಿ, ಅಖಿಲಭಾರತ ಮುಸ್ಲಿಂಲೀಗ್ ಢಾಕಾದಲ್ಲಿ ವಿಧ್ಯುಕ್ತವಾಗಿ ಸ್ಥಾಪಿತವಾಯಿತು. ಮುಸ್ಲಿಂ ಶಿಕ್ಷಣಸಮ್ಮೇಳನದ ಸಲುವಾಗಿ, ಭಿನ್ನ ಭಿನ್ನ ಪ್ರಾಂತಗಳ ಮುಸ್ಲಿಮರು ಅಲ್ಲಿ ಸಭೆ ಸೇರಿದ್ದರು. ಢಾಕಾದ ನವಾಬ್ ಮಂಡಿಸಿದ ಮೊದಲನೆಯ ನಿರ್ಣಯವು ಲೀಗ್ ಉದ್ದೇಶವನ್ನು ಹೀಗೆ ವಿವರಿಸಿತು : "೧) ಭಾರತದ ಮುಸಲ್ಮಾನರಲ್ಲಿ ಬ್ರಿಟಿಷ್ ಸರಕಾರ ಕೈಗೊಳ್ಳುವ ಯಾವುದೇ ಕಾರ್ಯ ಕ್ರಮಗಳಿಂದ ಅದರ ಆಶಯದ ಬಗೆಗೆ ಉಂಟಾಗಬಹುದಾದ ತಪ್ಪು ಭಾವನೆಯನ್ನು ತೊಡೆದು ಹಾಕುವುದು; ೨) ಭಾರತದ ಮುಸಲ್ಮಾನರ ರಾಜಕೀಯ ಹಕ್ಕುಗಳು ಮತ್ತು ಹಿತಗಳನ್ನು ರಕ್ಷಿಸುವುದು ಹಾಗೂ ಅವರ ಆಶೋತ್ತರಗಳನ್ನೂ ಮತ್ತು ಅಗತ್ಯತೆ ಗಳನ್ನು ಸರಕಾರಕ್ಕೆ ಗೌರವ ಪೂರ್ವಕವಾದ ನಿವೇದಿಸುವುದು: ೩) ಭಾರತದ ಮುಸಲ್ಮಾನರಲ್ಲಿ ಇತರ ಕೋಮುಗಳ ಬಗೆಗೆ ಉಂಟಾಗಬಹುದಾದ ವಿರೋಧ ಭಾವದ ಬೆಳವಣಿಗೆಯನ್ನು ಲೀಗ್‌ನ ಮೇಲೆ ವಿವರಿಸಿದ ಇತರ ಉದ್ದೇಶಗಳಿಗೆ ಭಂಗ ತರದ ರೀತಿಯಲ್ಲಿ-ತಪ್ಪಿಸುವುದು." ಅದರ ಅಂಗರಚನೆಯು ೧೯೦೭ರ ಡಿಸೆಂಬರ್‌ನಲ್ಲಿ, ಕರಾಚಿಯಲ್ಲಿ ರಚಿತವಾಗಿ, ೧೯೦೮ರಲ್ಲಿ ಲಕ್ನೋದಲ್ಲಿ ಅಂಗೀಕೃತವಾಯಿತು. ಲೀಗ್‌ನ ಅಂಗರಚನೆಯ ಪ್ರಕಾರ, ಆಗಖಾನ್ ಅದಕ್ಕೆ ಕಾಯಂ ಅಧ್ಯಕ್ಷನಾಗಿದ್ದನು ; ಇದು ೧೯೧೪ರವರೆಗೂ ಆಚರಣೆಯಲ್ಲಿ ಇದ್ದಿತು. ಆ ವರ್ಷ ಲೀಗ್‌ನ ಧ್ಯೇಯೋದ್ದೇಶ ಗಳಲ್ಲಿ ತೀವ್ರ ಬದಲಾವಣೆಗಳಾದುದರಿಂದ ಆತ ರಾಜಿನಾಮೆ ಕೊಟ್ಟನು.

ದೇಶದಲ್ಲಿ ಸಂಭವಿಸಿದ ರಾಜಕೀಯ ಆಂದೋಲನದ ಪರಿಣಾಮವಾಗಿ, ಸರಕಾರಕ್ಕೆ ಇಷ್ಟವಿಲ್ಲದಿದ್ದರೂ, ನಿಧಾನವಾದ ಸುಧಾರಣೆಗಳು ರೂಪಗೊಂಡುವು. ಅವು ಯಾವಾಗಲೂ ಕೇವಲ ನೆಪಮಾತ್ರದ ಪರಿಹಾರವಾಗಿದ್ದುವೇ ಹೊರತು ಎಂದಿಗೂ, ಅಧಿಕಾರದ ಇಚ್ಛಾಪೂರ್ವಕ ಕೊಡುಗೆಯಾಗಿರಲಿಲ್ಲ. ಜಾನ್ ಸ್ಟೂಯರ್ಟ್ ಮಿಲ್ ನಂಥವನೂ ಸಹ ''ಪ್ರತಿನಿಧಿ ಸರಕಾರವನ್ನು ಪಡೆಯಲು ಯೋಗ್ಯವಾದ ಸ್ಥಿತಿಗೆ ಏರಿದ ಆಶ್ರಿತ ಸಂಸ್ಥಾನಕ್ಕೂ ಭಾರತ ಸಮನಲ್ಲವೆಂದು'' ಭಾವಿಸಿದ್ದನು. ೧೮೬೧ರ ಶಾಸನದ ಮೂವತ್ತು ವರ್ಷಗಳ ತರುವಾಯ ೧೮೯೨ರಲ್ಲಿ ಮಾಡಿದ 'ಕೌನ್ಸಿಲ್ ಆಕ್ಟ್', ಕಾಂಗ್ರೆಸ್ ಅವಿಚ್ಛಿನ್ನವಾಗಿ ನಡೆಸಿದ ಚಳವಳಿಯ ಪರಿಣಾಮವಾಗಿದ್ದಿತು. ಆ ಆಕ್ಟಿನ ಪ್ರಕಾರ, ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಚುನಾವಣೆಯ ತತ್ವವು ಸ್ಪಷ್ಟವಾದ ರೀತಿಯಲ್ಲಿ ಅಂಗೀಕರಿಸಲ್ಪಡದಿದ್ದರೂ ಶಾಸನಬದ್ಧಬದ್ಧ ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ವಾಣಿಜ್ಯ ಸಂಸ್ಥೆಗಳು ಇವುಗಳ

ಸಲಹೆಯ ಮೇರೆಗೆ ಕೆಲವು ಸ್ಥಾನಗಳಿಗೆ ನಾಮಕರಣದ ಮೂಲಕ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಅವಕಾಶವನ್ನು ಕಲ್ಪಿಸಲಾಯಿತು. ಆಡಳಿತದ ಬಗೆಗೆ ಪ್ರಶ್ನೆ ಕೇಳುವ ಹಕ್ಕು ಕೊಡಲ್ಪಟ್ಟರೂ ಉಪಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನು ನೀಡಲಿಲ್ಲ. ಆಯವ್ಯಯ ಅಂದಾಜು ಪಟ್ಟಿಯ ಬಗೆಗೆ ಶಾಸನ ಸಭೆಗಳು ಸಾಮಾನ್ಯ ರೀತಿಯಲ್ಲಿ ಚರ್ಚೆ ಮಾಡಲು ಅವಕಾಶವಿತ್ತು. ಆದರೆ ಬೇಡಿಕೆಗಳನ್ನು ಕಡಮೆ ಮಾಡುವ ಬಗೆಗೆ ಸಲಹೆ ನೀಡಲು ಅವಕಾಶವಿರಲಿಲ್ಲ. ೧೯೦೯ರ ಮಿಂಟೋಮಾರ್ಲೆ ಸುಧಾರಣೆ, ಭಾರತೀಯರ ಅಭಿಪ್ರಾಯಗಳಿಗೆ ಬ್ರಿಟಿಷ್ ಸರಕಾರ ಮನ್ನಣೆ ಕೊಡುವ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದ್ದಿತು. ಸ್ವಾತಂತ್ರ್ಯದ ಪ್ರಧಾನ ಸಮಸ್ಯೆಗಳನ್ನು ಅಡ್ಡದಾರಿಗೆ ಎಳೆಯುವ ಬ್ರಿಟಿಷ್ ತಂತ್ರಗಳನ್ನು ಮಾತ್ರ ಅದು ತೋರಿಸುತ್ತಿತ್ತು.

ಲಾರ್ಡ್ ಹಾರ್ಡಿಂಜ್. ೧೯೧೦ರಲ್ಲಿ, ಲಾರ್ಡ್‌ಮಿಂಟೋ ತರುವಾಯ ಅಧಿಕಾರಕ್ಕೆ ಬಂದನು. ೧೯೨೧ರ ಡಿಸೆಂಬರ್ ೧೧ರಂದು ಡಿಲ್ಲಿಯಲ್ಲಿ ಸಾಮ್ರಾಟನ ದರ್ಬಾರ್‌ನಡೆಯಿತು; ಸಾಮ್ರಾಟ ಪಂಚಮ ಜಾರ್ಜ್ ಉಪಸ್ಥಿತನಿದ್ದನು. ಭಾರತ ಸರಕಾರದ ರಾಜಧಾನಿಯನ್ನು ಕಲ್ಕತ್ತಾದಿಂದ ಪ್ರಾಚೀನ ರಾಜಧಾನಿಯಾಗಿದ್ದ ಡಿಲ್ಲಿಗೆ ವರ್ಗಾಯಿಸಲಾಯಿತು. ವಂಗ ವಿಭಜನೆಯನ್ನು ರದ್ದು ಮಾಡಲಾಯಿತು.

ಸುಧಾರಣೆಗಾಗಲೀ ೧೯೧೮-೧೧ರ ದಮನಕಾರಿ ಶಾಸನಗಳಾಗಲೀ ಭಾರತದ ಭಯೋತ್ಪಾದಕರ ಕಾರ್ಯಗಳನ್ನು ತಡೆಗಟ್ಟಲು ಸಮರ್ಥನಾಗಲಿಲ್ಲ. ಲಾರ್ಡ್ ಹಾರ್ಡಿಂಜ್, ರಾಜಮರ್ಯಾದೆಯಿಂದ ೧೯೧೧ರ ಡಿಸೆಂಬರ್‌ನಲ್ಲಿ ಚಕ್ರವರ್ತಿ ಪ್ರತಿನಿಧಿಯಾಗಿ ಹೊಸ ರಾಜಧಾನಿ ಡಿಲ್ಲಿಗೆ ಆಗಮಿಸಿ, ಅವನು ಕುಳಿತಿದ್ದ ಆನೆ ಚಾಂದನೀ ಚೌಕದ ಮೂಲಕ ಹೋಗುತ್ತಿದ್ದಾಗ, ಅದರ ಕಡೆ ಬಾಂಬನ್ನು ಎಸೆಯಲಾಯಿತು. ಬಾಂಬು ಸಿಡಿದು ವೈಸರಾಯಿಯ ಸೇವಕರಲ್ಲಿ ಒಬ್ಬ ಸತ್ತನು; ಕೆಲವರಿಗೆ ಗಾಯಗಳಾದುವು. ಲಾರ್ಡ್ ಹಾರ್ಡಿಂಜ್‌ಗೂ ಕೆಲವು ಸಣ್ಣ ಗಾಯಗಳಾದುವು.

೧೯೧೩-೧೭ರ ಕಾಲದಲ್ಲಿ, ಕ್ರಾಂತಿಕಾರೀ ಚಳುವಳಿ ಬಂಗಾಳ ಮತ್ತು ಪಂಜಾಬುಗಳಲ್ಲಿ ಬಹುವಾಗಿ ಹೆಚ್ಚಿದುವು. ೧೯೧೪ರಲ್ಲಿ ಯುದ್ಧ ಆರಂಭವಾಯಿತು. ೧೯೧೫ರಲ್ಲಿ ಸಾಹಸದ ಡಕಾಯಿತಿಗಳೂ, ಮತ್ತು ಸರಕಾರಿ ಅಧಿಕಾರಿಗಳ ಮೇಲೆ ಹತ್ಯೆಯ ಪ್ರಕರಣಗಳೂ ನಡೆದುವು. ಅವುಗಳಲ್ಲಿ ಕೆಲವು ಪ್ರಾಣಾಂತಕವಾಗಿದ್ದವು. ಈ ಬಗೆಯ ಕೃತ್ಯಗಳು ನಿಲುಗಡೆಯಿಲ್ಲದೆ ೧೯೧೭ರ ವರೆಗೂ ನಡೆದುವು. ಯೂರೋಪಿನಲ್ಲಿದ್ದ ಕೆಲವರು ಭಾರತೀಯ ಕ್ರಾಂತಿಕಾರರು ಬರ್ಲಿನ್‌ನಲ್ಲಿ ಸಭೆಸೇರಿ, ಇಂಗ್ಲೆಂಡಿನ ಶತ್ರುಗಳಿಗೆ ನೆರವಾಗಲು ಯತ್ನಿಸಿದರು. ಆದರೆ ಜರ್ಮನಿಯ ಸೋಲಿನಿಂದ ಎಲ್ಲ ಹೊರಗಿನ ನೆರವೂ ಕೊನೆಗೊಂಡಿತು.

ಅಮೆರಿಕಾದಿಂದ ಸಿಕ್ ವಲಸೆಗಾರರು ಪಂಜಾಬಿಗೆ ಹಿಂದಿರುಗಿ ಬಂದಮೇಲೆ, ಅಲ್ಲಿ ನಡೆಯುತ್ತಿದ್ದ ಕ್ರಾಂತಿಕಾರೀ ಚಳುವಳಿಗೆ ಶಕ್ತಿ ತುಂಬಿದಂತಾಯಿತು. ಕೆನಡಾದಲ್ಲಿ ಅವರು ಅನೇಕ ಹೊಸರೀತಿಯ ಪ್ರತಿಬಂಧಕಗಳ ಪೀಡೆಗೆ ಒಳಗಾಗಿದ್ದರು.

೧೯೧೪ರ ಏಪ್ರಿಲ್‌ನಲ್ಲಿ ಒಬ್ಬ ಶ್ರೀಮಂತ ಸಿಕ್, 'ಕೋಮಗಟ ಮಾರು' ಎಂಬ ಜಪಾನಿನ ಜಹಜೊಂದನ್ನು ಗೊತ್ತುಮಾಡಿಕೊಂಡು ೩೫೧ ಮಂದಿ ಸಿಕ್ಕರಿಂದಲೂ ಮತ್ತು ೨೧ ಮಂದಿ ಪಂಜಾಬೀ ಮುಸ್ಲಿಮರಿಂದಲೂ ಹಾಂಗ್‌ಕಾಂಗಿನಿಂದ ಪ್ರಯಾಣ ಬೆಳಸಿದನು. ಅವರು ಕೆನಡಾದಲ್ಲಿ ಇಳಿಯಲು ಅವಕಾಶ ದೊರಕಲಿಲ್ಲವಾದ್ದರಿಂದ ಭಾರತಕ್ಕೆ ಹಿಂದಿರುಗಬೇಕಾಯಿತು. ಅವರು ಸೆಪ್ಟೆಂಬರ್ ೧೪ರಂದು ಭಾರತಕ್ಕೆ ಹಿಂದಿರುಗಿದಾಗ ಅವರಿಗೆ ತೊಂದರೆ ಕಾದಿದ್ದಿತು. ಬ್ರಿಟಿಷ್ ಸರಕಾರದ ಬಗೆಗೆ ಸಿಕ್ಕರ ಭಾವನೆಗಳು ಅಹಿತರೂಪ ತಾಳಿದುವು. ೧೯೧೪-೧೫ರ ಕಾಲದಲ್ಲಿ ಗಧಾರ್ ಪಕ್ಷದ ಪ್ರಚಾರವು ತೀವ್ರವಾಯಿತು. ಭಾರತದ ಸೈನ್ಯದಲ್ಲಿ ಅವಿಶ್ವಾಸವನ್ನು ಹರಡಲು ಪ್ರಯತ್ನ ಮಾಡಲಾಯಿತು. ಇದು ಆಂಶಿಕವಾಗಿ ಯಶಸ್ವಿಯಾಯಿತು.

೧೯೧೧-೧೩ರ ತುರ್ಕಿ ಇಟಲಿ ಮತ್ತು ಬಾಲ್ಕನ್ ಯುದ್ಧಗಳ ಕಾಲದಲ್ಲಿ ವಿಶ್ವ-ಇಸ್ಲಾಮೀ ಚಳವಳಿಯು ಬಲಗೊಂಡಿತು. ಷೌಕತ್ ಅಲೀ, ಮೊಹಮ್ಮದ್ ಮೌಲಾನ ಜಾಫರ್ ಅಲೀಖಾನ್ ಇದರ ನಾಯಕರಾಗಿದ್ದರು. ಅವರು ತುರ್ಕಿಯ ವಿಷಯದಲ್ಲಿ ಬ್ರಿಟನ್ ತೋರಿಸಿದ ವರ್ತನೆಯ ಬಗೆಗೆ ಬೇಸರಗೊಂಡರು. ೧೯೧೨ರಲ್ಲಿ ಭಾರತೀಯರು ರಕ್ತಚಂದ್ರ' (Indian Red Crescent) ಸಂಸ್ಥೆಗಾಗಿ ನಿಧಿಶೇಖರ ಮಾಡಲಾಯಿತು. ಯುವಕ ಡಾ. ಎಂ.ಎ. ಅನ್ಸಾರಿ ಮತ್ತು ಇತರರ ನಾಯಕತ್ವದಲ್ಲಿ ತುರ್ಕಿಗೆ ವೈದ್ಯಕೀಯ ನೆರವನ್ನು ನೀಡಲು ನಿಯೋಗವೊಂದು ಹೋಯಿತು. ಯುದ್ಧ ಆರಂಭವಾದ ಮೇಲೆ, ಅದು ಮುಗಿಯುವವರೆಗೂ, ಅಲೀ ಸಹೋದರರನ್ನು ಅವರವರ ಊರಿನಲ್ಲಿ ಸ್ಥಾನಬದ್ಧರನ್ನಾಗಿ ಇಡಲಾಯಿತು.

೧೯೧೨ರಲ್ಲಿ, ಅಬುಲ್ ಕಲಾಂ ಎಂಬ ಇಪ್ಪತ್ತುನಾಲ್ಕು ವರ್ಷದ ಯುವಕ, 'ಅಲ್-ಹಿಲಾಲ್' ಎಂಬ ಉರ್ದು ಪತ್ರಿಕೆಯನ್ನು ಆರಂಭಿಸಿದನು. ಅವನು 'ಆಜಾದ್' ಎಂಬ ಲೇಖನನಾಮವನ್ನು ಇಟ್ಟುಕೊಂಡನು. ಅವನ ಸಮರ್ಥ ಬರೆಹ, ಪಾಂಡಿತ್ಯ, ಮುಸ್ಲಿಮರ ಅಭಿಪ್ರಾಯವನ್ನು ಕ್ರಾಂತಿಕಾರೀ ರೀತಿಯಲ್ಲಿ ಬದಲಾಯಿಸಿ, ಮುಸ್ಲಿಂ ಜನಾಂಗವನ್ನು ಕಾಂಗ್ರೆಸ್ಸಿನ ಸಮೀಪಕ್ಕೆ ಬರುವಂತೆ ಮಾಡಿತು. ಆರು ತಿಂಗಳ ಕಾಲದಲ್ಲಿ ಅಲ್‌ಹಿಲಾಲ್ ೧೧,೦೦೦ ಪ್ರತಿಗಳ ಪ್ರಸಾರ ಹೊಂದಿ, ಯುದ್ಧದ ಕಾಲದಲ್ಲಿ ೨೬,೦೦೦ಕ್ಕೆ ಏರಿತು.

ಗ್ರೇಟ್‌ಬ್ರಿಟನ್ ತುರ್ಕಿಯ ಬಗೆಗೆ ವಿರೋಧ ಭಾವವನ್ನು ಹೊಂದಿದ್ದುದರ ಪರಿಣಾಮವಾಗಿ, ಕಾಂಗ್ರೆಸ್ ಮತ್ತು ಮುಸ್ಲಿಮರ ನಡುವೆ ಹೊಂದಾಣಿಕೆ ಬರುವಂತಾಯಿತು. ೧೯೧೩ರ ಏಪ್ರಿಲ್‌ನಲ್ಲಿ ನಡೆದ ವಾರ್ಷಿಕ ಅಧಿವೇಶನದಲ್ಲಿ ಅಖಿಲ ಭಾರತ ಮುಸ್ಲಿಂಲೀಗ್ ಹೊಸ ಅಂಗರಚನೆಯನ್ನು ಅಂಗೀಕರಿಸಿತು. ಈ ಸನ್ನಿವೇಶದಲ್ಲಿಯೇ ೧೯೧೩ರ ಕರಾಚಿ ಕಾಂಗ್ರೆಸ್‌ನಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಒಗ್ಗಟ್ಟಾದರು. "ಅಖಿಲ ಭಾರತ ಮುಸ್ಲಿಂಲೀಗ್, ಭಾರತ ಸ್ವಯಮಾಡಳಿತವನ್ನು ಪಡೆದುಕೊಳ್ಳ ಬೇಕೆಂಬ ಬಗೆಗೆ ಅಂಗೀಕರಿಸಿದ ತೀರ್ಮಾನಕ್ಕಾಗಿ ಕಾಂಗ್ರೆಸ್ ತನ್ನ ಮೆಚ್ಚುಗೆಯ

ನಿರ್ಣಯವನ್ನು ಮಾಡಿತು. ಎರಡು ಕೋಮುಗಳ ನಡುವೆ ಸಮರಸಭರಿತ ಸಹಕಾರವನ್ನು ಕೋರಿದ ಲೀಗ್‌ನ ವಾದವನ್ನು ಕಾಂಗ್ರೆಸ್ ಬೆಂಬಲಿಸಿತು.

೧೯೧೬ರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ಗಳೆರಡರ ಅಧಿವೇಶನಗಳು ಏಕ ಕಾಲದಲ್ಲಿ ಮುಂಬೈನಲ್ಲಿ ನಡೆದುವು. ಮೊಹಮ್ಮದ್ ಅಲೀ ಜಿನ್ನಾ ಈ ಬದಲಾವಣೆಗೆ ಪ್ರಧಾನವಾಗಿ ಕಾರಣರಾಗಿದ್ದರು. ಕಾಂಗ್ರೆಸ್ ನಾಯಕರು ಲೀಗ್ ಅಧಿವೇಶನದಲ್ಲಿ ಭಾಗವಹಿಸಿದರು. ಉತ್ತರೋತ್ತರ ಸುಧಾರಣೆಗಳ ಯೋಜನೆಯೊಂದನ್ನು ರೂಪಿಸಲು ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಎರಡೂ ಸಹಕರಿಸಿ ಅದನ್ನು ಸರಕಾರ ಒಪ್ಪುವಂತೆ ಒತ್ತಾಯ ಪಡಿಸಬೇಕೆಂದು ನಿರ್ಣಯಿಸಲಾಯಿತು. ಈ ಉದ್ದೇಶಕ್ಕಾಗಿ ಕಾಂಗ್ರೆಸ್ ಮತ್ತು ಲೀಗಿನ ಸಮಿತಿಗಳು ನೇಮಕವಾದುವು. ಒಂದು ಸಂಯುಕ್ತ ಸುಧಾರಣಾ ಯೋಜನೆ ರೂಪಿತವಾಯಿತು; ಭಾರತೀಯ ಶಾಸನ ಸಭೆಗಳಲ್ಲಿ ಮುಸ್ಲಿಮರಿಗೆ ವಿಶೇಷ ಪ್ರಾತಿನಿಧ್ಯ ದೊರಕಬೇಕೆಂಬ ಯೋಜನೆಯಿಂದ, ಹಿಂದೂ-ಮುಸ್ಲಿಂ ಸಮಸ್ಯೆಯ ಬಗೆಗೆ ಒಪ್ಪಂದವಾಯಿತು. ಲಕ್ನೋದಲ್ಲಿ ೧೯೧೬ರಲ್ಲಿ ಸೇರಿದ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ಗಳೆರಡರ ವಾರ್ಷಿಕಾಧಿವೇಶನದಲ್ಲಿ ಅದು ಉತ್ಸಾಹದಿಂದ ಅಂಗೀಕೃತವಾಯಿತು. ಅದು ಕಾಂಗ್ರೆಸ್ ಮತ್ತು ಲೀಗ್ ಯೋಜನೆ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಅದೇ ಕಾಂಗ್ರೆಸ್ ಅಧಿವೇಶನದ ಇನ್ನೊಂದು ಮುಖ್ಯ ಅಂಶವೆಂದರೆ, ಸೌಮ್ಯವಾದಿಗಳು ಮತ್ತು ತೀವ್ರವಾದಿಗಳ ನಡುವೆ ಉಂಟಾದ ಹೊಂದಾಣಿಕೆ. ಈ ಕೇವಲ ಎರಡು ವರ್ಷಗಳ ಕಾಲ ಮಾತ್ರ ಉಳಿಯಿತು. ಸೌಮ್ಯವಾದಿಗಳು 'ಉದಾರವಾದಿ'ಗಳೆಂದು ಕರೆದುಕೊಂಡು ಕಾಂಗ್ರೆಸ್ಸಿನಿಂದ ದೂರವಾದರು.

೧೯೧೬ರ ತರುವಾಯ, ಗಾಂಧಿ, ಭಾರತದ ರಾಜಕೀಯ ದಿಗಂತದಲ್ಲಿ ದಿನದಿನಕ್ಕೆ ವೃದ್ಧಿಯಾಗುವ ಮಹತ್ವಪೂರ್ಣ ಶಕ್ತಿಯಾಗಿ ಕಂಡುಬಂದರು. ಅವರು ೧೯೧೫ರ ಜನವರಿಯಲ್ಲಿ ಭಾರತಕ್ಕೆ ಹಿಂದಿರುಗಿ ಬಂದರು. ಅವರು ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ ಸತ್ಯಾಗ್ರಹ ಹೋರಾಟದಿಂದ ಪ್ರಸಿದ್ಧರಾಗಿದ್ದರು. ೧೯೧೦ರ ಕಾಲದಷ್ಟು ಹಿಂದೆಯೇ, ಟಾಲ್‌ಸ್ಟಾಯ್ ಗಾಂಧಿಯ ಹೊಸ ಆಯುಧವಾದ ಸೌಮ್ಯ ಪ್ರತಿಭಟನೆಯ ಬಗೆಗೆ ಹೀಗೆ ನುಡಿದಿದ್ದರು: "ಸೌಮ್ಯ ಪ್ರತಿಭಟನೆಯು ಭಾರತಕ್ಕಷ್ಟೇ ಅಲ್ಲ ಸಮಗ್ರ ಮಾನವಕುಲಕ್ಕೆ ಅನ್ವಯಿಸುವ ಅತ್ಯಂತ ಪ್ರಮುಖವಾದ ಪ್ರಶ್ನೆಯಾಗಿದೆ." ೧೯೧೭ರಲ್ಲಿ ಗಾಂಧಿ ಚಂಪಾರಣ್ಯದ ನೀಲಿ ತೋಟಗಳ ಕೂಲಿಗಾರರ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿದ್ದರು. ಅನಂತರ ಹಾಗೆಯೇ ಖೇಡಾ ರೈತರ ಸಮಸ್ಯೆಯನ್ನೂ ಬಗೆಹರಿಸಿದ್ದರು. ಅವರು ಬ್ರಿಟಿಷರಿಗೆ ಇನ್ನೂ ನಿಷ್ಠೆಯಿಂದಲೇ ಇದ್ದರು. ಯುದ್ಧೋದ್ಯಮಕ್ಕೆ ಸೈನಿಕರನ್ನು ಕೂಡಿಸುವ ಕಾಲದಲ್ಲಿ ಸರಕಾರಕ್ಕೆ ನೆರವಾಗಿದ್ದರು.

ಯುದ್ಧ ಮುಗಿದ ತರುವಾಯ ಬ್ರಿಟಿಷ್ ಸರಕಾರದ ಹೃದಯ ಪರಿವರ್ತನೆಗಾಗಿ ಭಾರತ ಕಾದಿದ್ದಿತು. ಇದಕ್ಕೆ ಪ್ರತಿಯಾಗಿ ರೌಲತ್ ಶಾಸನ ದೊರಕಿತು. ಸಮಗ್ರ ಜನತೆಯೇ ಅದನ್ನು ತೀವ್ರ ಅಸಮಾಧಾನದಿಂದ ಕಂಡಿದ್ದಿತು. ೧೯೧೯ರ ಏಪ್ರಿಲ್‌ನಲ್ಲಿ

ನಿರಪರಾಧೀ ನಿಶ್ಶಸ್ತ್ರ ಜನಸಮೂಹವನ್ನು, ಅಮೃತಸರದಲ್ಲಿ ಜನರಲ್ ಡೈಯರ್ ಮಾರಣಹೋಮ ಮಾಡಿದ್ದನು. ಈ ಅತ್ಯಾಚಾರ ಭಾರತದ ಹೆಮ್ಮೆಗೊಂದು ಆಘಾತದಂತಾಯಿತು. ಇಡೀ ದೇಶವೇ ವಿದೇಶೀ ಪ್ರಭುತ್ವದ ವಿರುದ್ಧ ಸಿಡಿದೆದ್ದಿತು. ಪ್ಲಾಸಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದರೆ ಅಮೃತಸರದಲ್ಲಿ ಅದು ಅಲ್ಲಾಡುವಂತಾಯಿತು. ಜಲಿಯನ್‌ವಾಲಾಬಾಗ್ ಕೇವಲ ಆರಂಭವೆಂದು ಗಾಂಧಿ ನುಡಿದರು : "ಜಗತ್ತಿನಲ್ಲಿ ಯಾವ ರಾಷ್ಟ್ರಕ್ಕೂ ಮೀರಿಸಲು ಸಾಧ್ಯವಿಲ್ಲದ ಸ್ಥಾನವನ್ನು ನಾವು ಪಡೆಯಬೇಕಾದರೆ. ಸಾವಿರ ಮಂದಿ ಸ್ತ್ರೀ ಪುರುಷರ ಕೊಲೆಯನ್ನಷ್ಟೇ ಅಲ್ಲದೆ ಎಷ್ಟೋ ಸಹಸ್ರಾರು ಮಂದಿಯ ಕೊಲೆಯನ್ನು ನಾವು ಶಾಂತ ಚಿತ್ತದಿಂದ ಸ್ವಾಗತಿಸಲು ಸಿದ್ಧರಾಗಬೇಕು. ಆದುದರಿಂದ ಸಂಬಂಧಪಟ್ಟವರೆಲ್ಲ ಧೃತಿಗೆಡುವುದಕ್ಕೆ ಪ್ರತಿಯಾಗಿ ಧೈರ್ಯವನ್ನು ಹೊಂದಿ, ಗಲ್ಲಿಗೆ ಏರಿಸುವ ಶಿಕ್ಷೆಯನ್ನು ಬದುಕಿನ ಸಾಮಾನ್ಯ ವಿಚಾರ ವೆಂದು ಭಾವಿಸುವರೆಂದು ನಾವು ನಂಬಿದ್ದೇವೆ.''

೧೯೧೯ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಅಧಿವೇಶನ ಅಮೃತಸರದಲ್ಲಿ ಸೇರಿತು. ಪಂಜಾಬಿನ ಅತ್ಯಾಚಾರಗಳ ಬಗೆಗೆ ವಿಚಾರಣೆಗಳ ಫಲಿತಾಂಶ ಇನ್ನೂ ನಿರೀಕ್ಷೆ ಯಲ್ಲಿದ್ದುದರಿಂದ ಯಾವ ನಿರ್ಣಯವನ್ನು ತೆಗೆದು ಕೊಳ್ಳಲಾಗಲಿಲ್ಲ. ಆ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಜನತೆಯ ದೇವತೆಯಂತಿದ್ದ ಧೀರ ನಾಯಕ ತಿಲಕರಿದ್ದರು ; ಜನತೆ ಯನ್ನು ಸಾಹಸದ ಔನ್ನತ್ಯಕ್ಕೆ ಕ್ಷಿಪ್ರದಲ್ಲಿಯೆ ಒಯ್ಯುವ ಗಾಂಧಿ ಇದ್ದರು.

೧೯೨೦ರ ಮೇನಲ್ಲಿ ಹಂಟರ್‌ಸಮಿತಿ ವರದಿಯ ತೀರ್ಮಾನಗಳು ಪ್ರಕಟ ವಾದುವು. ವಿಚಾರಣೆಯ ಫಲಿತಾಂಶದ ಪ್ರಕಟನೆಯ ಮುನ್ನ ಅಧಿಕಾರಿಗಳನ್ನು ರಕ್ಷಿಸುವುದಕ್ಕೆ ಸರಕಾರ ಪರಿಹಾರ ಶಾಸನವನ್ನು ಅಂಗೀಕರಿಸಿದ್ದಿತು.

ಗಾಂಧೀಜಿ ಬಹುವಾಗಿ ದಿಗ್ಭ್ರಮೆಗೊಂಡರು. ೧೯೨೦ರ ಆಗಸ್ಟ್ ೧ರಂದು ಅವರು ಸಾಮ್ರಾಟ ಪ್ರತಿನಿಧಿಗೆ ಬರೆದ ಪ್ರಸಿದ್ಧ ಪತ್ರದಲ್ಲಿ ಹೋರಾಟದ ಸೂಚನೆ ಯನ್ನಿತ್ತರು ; ''ಯಾವ ಸರಕಾರ ತನ್ನ ಅನೀತಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಒಂದು ಅಕೃತ್ಯದಿಂದ ಇನ್ನೊಂದಕ್ಕೆ ಚಲಿಸುತ್ತದೆಯೋ ಅದರ ಬಗೆಗೆ ನಾನು ಗೌರವ ವನ್ನಾಗಲೀ ವಿಶ್ವಾಸವನ್ನಾಗಲೀ ಇಟ್ಟುಕೊಳ್ಳಲಾರೆ." ಸತ್ಯಾಗ್ರಹವನ್ನು ಆರಂಭಿಸುವ ಮುನ್ನ ತಿಲಕರು ಕಾಲವಾದರು. ಭಾವಪರವಶರಾಗಿ ಗಾಂಧೀ ಹೀಗೆ ನುಡಿದರು : "ಜಗತ್ತಿನಲ್ಲಿ ನನ್ನ ಮಹಾರಕ್ಷೆ ಕಣ್ಮರೆಯಾಯಿತು.''

ಲೋಕಮಾನ್ಯ ತಿಲಕರ ಅಂತಿಮ ಸಂಸ್ಕಾರದ ಮೆರವಣಿಗೆಯಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದ್ದರು. ಪ್ರತಿಯೊಬ್ಬರೂ ಪ್ರೇಮ ಪೂರ್ವಕವಾಗಿ ದುಃಖಾಶ್ರುವನ್ನು ಸಲ್ಲಿಸಿದರು. ಎಲ್ಲರ ಮನಸ್ಸಿನಲ್ಲಿಯೂ ಇದ್ದ ಪ್ರಶ್ನೆ ಒಂದೇ : ''ತಿಲಕರ ಸ್ಥಾನಕ್ಕೆ ಬರುವವರು ಯಾರು ?''

ಗಾಂಧಿಯ ಜನನ
೧೮೬೯

ಗಾಂಧಿ ಮತ್ತು ಲೆನಿನ್– ಈ ಇಬ್ಬರು ಒಂದು ಹೊಸ ಯುಗದ ಮಹಾ ಶಿಲ್ಪಿಗಳು. ಅವರು ತಮ್ಮ ರಾಷ್ಟ್ರಗಳ ಭವಿಷ್ಯವನ್ನು ರೂಪಿಸಿದುದಲ್ಲದೆ ಮಾನವನ ಇತಿಹಾಸಕ್ಕೆ ಒಂದು ಹೊಸ ತಿರುವನ್ನೂ ಕೊಟ್ಟಿದ್ದಾರೆ. ಈರ್ವರೂ ಸರಿಸುಮಾರು ಒಂದೇ ಕಾಲದಲ್ಲಿ ಜನಿಸಿದರು.

ಮೋಹನ ದಾಸ್ ಕರಮಚಂದ ಗಾಂಧಿ, ೧೮೬೯ರ ಅಕ್ಟೋಬರ್ ೨ರಂದು ಕಾಥೇವಾಡದ ಪೋರ್‌ಬಂದರ್ ಅಥವಾ ಸುಧಾಮಪುರಿ ಪಟ್ಟಣದಲ್ಲಿ ಜನಿಸಿದರು. ಪೋರ್‌ಬಂದರಿನ ಸುತ್ತಲೂ ದಪ್ಪವಾದ ಮತ್ತು ಎತ್ತರವಾದ ಕೋಟೆಗೋಡೆಗಳಿದ್ದುವು; ಓಮಾನ್ ಸಮುದ್ರದ ಅಲೆಗಳು ಅವಕ್ಕೆ ಅಪ್ಪಳಿಸುತ್ತಿದ್ದುವು. ಹತ್ತಿರದಲ್ಲೇ ದೊರಕುತ್ತಿದ್ದ ಬಿಳಿಯ ಮತ್ತು ಮೃದುವಾದ ಶಿಲೆಯಿಂದ ಮನೆಗಳು ರಚಿತವಾಗಿದ್ದುವು. ಕಾಲಗತಿಸಿದಂತೆ ಈ ಮೃದು ಕಲ್ಲಿನ ಕಟ್ಟಡಗಳು ಗಾಳಿ, ಮಳೆ ಮತ್ತು ಬಿಸಿಲಿಗೆ ಬಿದ್ದುದರ ಪರಿಣಾಮವಾಗಿ ಗಡುಸಾಗಿ, ಯುಗ ಯುಗಾಂತರಗಳವರೆಗೆ ಬಾಳಿಕೆ ಬರಲೆಂಬ ದೃಷ್ಟಿಯಿಂದ ಕಟ್ಟಿದ ಘನವಾದ ಅಮೃತಶಿಲೆಯ ಬಂಡೆಗಳಂತೆ ಭಾಸವಾಗುತ್ತಿದ್ದುವು. ದೂರದಲ್ಲಿರುವ ಬರ್ದಾ ಗುಡ್ಡಗಳು ಈ 'ಶ್ವೇತಪುರಿಗೆ' ಕಾವಲಿನಂತಿದ್ದುವು.

ಪೋರಬಂದರ್ ಪ್ರದೇಶದ ಮುಖ್ಯ ಪಟ್ಟಣವಾದ ಪೋರಬಂದರಿನಲ್ಲಿ ವ್ಯಾಪಾರವೇ ಜನರ ಪ್ರಧಾನ ಉದ್ಯೋಗವಾಗಿದ್ದಿತು. ಸಮುದ್ರ ಯಾನಕ್ಕೆ ಒಗ್ಗಿಹೋಗಿದ್ದ ಆ ಜನ ಸಾಹಸಿಗಳೂ ಮತ್ತು ದೃಢಕಾಯರೂ ಆಗಿದ್ದರು. ಅವರು ಬಹಳ ಹಿಂದಿನ ಕಾಲದಿಂದ ಅರೇಬಿಯಾ, ಮತ್ತು ಆಫ್ರಿಕಾ ದೇಶಗಳ ತೀರದ ಪಟ್ಟಣಗಳೊಂದಿಗೆ ವ್ಯಾಪಾರ ನಡೆಸುತ್ತ ಬಂದಿದ್ದಾರೆ. ಈ ಪಟ್ಟಣ ಗಾಂಧೀ ವಂಶದ ಪೂರ್ವಜರ ನೆಲೆ. ಇವರು ಮೊದಲು ಕಿರಾಣಿ ವ್ಯಾಪಾರಗಾರರಾಗಿದ್ದರು. ಆದರೆ ಮೊಹನದಾಸನ ತಾತ ಮತ್ತು ತಂದೆ ಕಾಥೇವಾಡದ ಕೆಲವು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಈ ಕೆಲಸದಲ್ಲಿ, ಅವರು ರಾಜ್ಯನೌಕರರಲ್ಲಿ ಅಪರೂಪ ಗುಣಗಳಾಗಿದ್ದ ರಾಜ ಭಕ್ತಿ, ದಕ್ಷತೆ ಮತ್ತು ಶೀಲ ಇವುಗಳನ್ನು ಪಡೆದು ಪ್ರಸಿದ್ಧರಾಗಿದ್ದರು.

ಮೋಹನದಾಸನ ತಾತ ಉತ್ತಮಚಂದ್ ಗಾಂಧೀ, ಅತ್ಯಂತ ಕೆಳಗಿನ ಮೆಟ್ಟಲಿನಿಂದ ಮೇಲೇರಿ ಪೋರಬಂದರಿನ ದಿವಾನರಾದರು. ಒಮ್ಮೆ ಅವರು

ಮಹಾರಾಣಿ ರಾಜಮಾತೃವಿನ ಅಸಂತುಷ್ಟಿಗೆ ಪಾತ್ರನಾಗಿದ್ದ ಕಿರಾಣಿ ವರ್ತಕನೊಬ್ಬನಿಗೆ ರಕ್ಷಣೆ ನೀಡಿದರು. ಅವರು ಆ ಬಡಪಾಯಿಯನ್ನು ರಾಜಪಕ್ಷಕ್ಕೆ ಕೊಡಲು ಒಪ್ಪಲಿಲ್ಲ. ಇದರ ಪರಿಣಾಮವಾಗಿ, ರಾಜ್ಯದ ಸೈನಿಕರು ಅವರ ಮನೆಯ ಮೇಲೆ ಗುಂಡನ್ನು ಹಾರಿಸಿದರು. ಫಿರಂಗಿ ಗುಂಡಿನ ಗುರುತುಗಳು ಅನೇಕ ವರ್ಷಗಳವರೆಗೆ ಕಂಡುಬರುತ್ತಿದ್ದುವು. ಉತ್ತಮ ಚಂದ್, ಬರ್ದಾ ಗುಡ್ಡಗಳನ್ನು ದಾಟಿ ಜುನಾಗಢದಲ್ಲಿ ರಕ್ಷಣೆ ಪಡೆಯಲು ಯತ್ನಿಸಿದರು. ಅಲ್ಲಿ ಅವರು ನವಾಬನಿಗೆ ತಮ್ಮ ಎಡಗೈನಿಂದ ಸಲಾಮು ಮಾಡಿದರು. ಇದಕ್ಕೆ ಕಾರಣವನ್ನು ಕೇಳಿದಾಗ ಅವರ ಉತ್ತರ ಹೀಗಿದ್ದಿತು: ''ಬಲಗೈ ಪೋರಬಂದರ್‌ಗೆ ಆಗಲೇ ಮೀಸಲಾಗಿದೆ.''

ಕರಮಚಂದ್ ಅಥವಾ ಕಬಾಗಾಂಧೀ, ಇಪ್ಪತ್ತೈದನೆಯ ವಯಸ್ಸಿನಲ್ಲಿ ತಮ್ಮ ತಂದೆ ಉತ್ತಮಚಂದನ ಸ್ಥಾನದಲ್ಲಿ ಪೋರಬಂದರ್‌ನ ದಿವಾನರಾದರು. ಅವರಿಗೂ, ಸಹಾಯಕ ರಾಜಕೀಯ ಪ್ರತಿನಿಧಿಯಾಗಿದ್ದ ಆಂಗ್ಲೇಯನಿಗೂ ವಿರಸವುಂಟಾಯಿತು. ಆಂಗ್ಲೇಯನು ಮಹಾರಾಜರ ಬಗೆಗೆ ಅಪಮಾನಕರ ರೀತಿಯಲ್ಲಿ ಮಾತನಾಡಿದ್ದನು. ಕರಮಚಂದ್ ಅವನೊಡನೆ ವಿವಾದ ಮಾಡುವ ಧೈರ್ಯ ತೋರಿಸಿದ್ದರು. ಆದುದರಿಂದ ಅವರು ಬಂಧಿತರಾಗಿ, ಕೆಲವು ಘಂಟೆಗಳ ಕಾಲ ಒಂದು ವೃಕ್ಷದ ಕೆಳಗೆ ನಿಗ್ರಹಕ್ಕೆ ಒಳಗಾಗಬೇಕಾಯಿತು. ಆದರೆ ಅವರು ಜಗ್ಗಲಿಲ್ಲ. ಅವರು ತಮ್ಮ ತಂದೆಯಂತೆಯೇ ತತ್ವನಿಷ್ಠರಾಗಿದ್ದರು. ಅವರಿಗೆ ಹಣದಾಸೆ ಇರಲಿಲ್ಲ. ಅವರು ತಮ್ಮ ಭಾಷೆಯಲ್ಲಿ ಐದನೆಯ ತರಗತಿಯವರೆಗೆ ಮಾತ್ರ ಓದಿದ್ದರು. ಭೂವಿವರಣೆ, ಮತ್ತು ಇತಿಹಾಸದ ವಿಷಯದಲ್ಲಿ ಏನನ್ನೂ ತಿಳಿದಿರಲಿಲ್ಲ. ಆದರೆ ವ್ಯವಹಾರ ವಿಷಯದಲ್ಲಿ ಅಪಾರ ಅನುಭವ ಹೊಂದಿದ್ದರು. ಅವರು ಒಮ್ಮೆ ರಾಜಾಸ್ಥಾನಿಕ ನ್ಯಾಯಮಂಡಲದ ಸದಸ್ಯರೂ ಆಗಿದ್ದರು. ಈಗ ಆ ಸಂಸ್ಥೆ ಇಲ್ಲ. ಅದು ಬೇರೆ ಬೇರೆ ಮುಖಂಡರು ಮತ್ತು ಅವರ ಅನುಯಾಯಿಗಳಿಗೆ ಸಂಬಂಧಿಸಿದ ವಿವಾದಗಳನ್ನು ತೀರ್ಮಾನ ಮಾಡುವ ಪ್ರಭಾವಯುತ ಸಂಸ್ಥೆಯಾಗಿದ್ದಿತು. ಗಾಂಧೀ ವಂಶಸ್ಥರು ಪೋರಬಂದರಿನ ರಾಜಕೀಯ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಮೋಹನದಾಸ್ ಎಳೆಯವನಾಗಿದ್ದಾಗ ತನ್ನ ವಂಶಾವಳಿಯನ್ನೂ ಅದರ ಶಾಖೋಪಶಾಖೆಗಳನ್ನೂ ಬಾಯಿಪಾಠ ಮಾಡಿಕೊಂಡಿದ್ದನು.

ಕರಮಚಂದ್ ಗಾಂಧಿ ತಮ್ಮ ಕೊನೆಯ ಪತ್ನಿ ಪುತಲೀ ಬಾಯಿಯನ್ನು ವಿವಾಹವಾಗುವುದಕ್ಕೆ ಮುಂಚೆ ಮೂರು ಬಾರಿ ವಿಧುರರಾಗಿದ್ದರು. ಆಗ ಆಕೆಗೆ ಹದಿನೈದು ವರ್ಷ. ಅವರಿಗೆ ನಲವತ್ತು ವರ್ಷ ವಯಸ್ಸಾಗಿತ್ತು. ಮೊದಲನೆಯ ಮತ್ತು ಎರಡನೆಯ ವಿವಾಹಗಳಿಂದ ಇಬ್ಬರು ಹೆಣ್ಣು ಮಕ್ಕಳು ಜನಿಸಿದ್ದರು. ಪುತಲೀಬಾಯಿ ಒಬ್ಬಳು ಮಗಳನ್ನೂ ಮತ್ತು ಮೂವರು ಗಂಡು ಮಕ್ಕಳನ್ನೂ

ಹಡೆದರು. ರಲೀತಾಬೆನ್, ಲಕ್ಷ್ಮಿದಾಸ್ ಕರ್ಸನ್‌ದಾಸ್ ಮತ್ತು ಮೋಹನ ದಾಸ್. ಆಕೆಯದು ಬಹಳ ಧಾರ್ಮಿಕ ಮನೋಧರ್ಮ ಮತ್ತು ದಿಟ್ಟತನದ ವ್ಯಕ್ತಿತ್ವವಾಗಿದ್ದಿತು. ಆಕೆ ಅತ್ಯಂತ ಕಠಿಣವಾದ ವ್ರತಗಳನ್ನು ಸ್ವಲ್ಪವೂ ಅಳುಕದೆ ಆಚರಿಸುತ್ತಿದ್ದರು. ಚಾತುರ್ಮಾಸ್ಯದ ನಾಲ್ಕು ತಿಂಗಳ ಕಾಲದಲ್ಲಿ ದಿನವೂ ಒಪ್ಪತ್ತು ಊಟವಲ್ಲದೆ ದಿನ ಬಿಟ್ಟು ದಿನ ಉಪವಾಸವನ್ನೂ ಮಾಡುತ್ತಿದ್ದರು. ಆಕೆ ಹವೇಲಿಗೆ (ವೈಷ್ಣವ ದೇವಾಲಯ) ಹೋಗದೆ ಇದ್ದ ದಿನವೇ ಇರಲಿಲ್ಲ. ಮೋಹನದಾಸ್ ಆಕೆಯೊಂದಿಗೆ ಆಗಾಗ ದೇವಾಲಯಕ್ಕೆ ಹೋಗುತ್ತಿದ್ದನು. ಆದರೆ ಆ ದೇವಾಲಯದ ಉಜ್ವಲ ಆಡಂಬರ ಮತ್ತು ವೈಭವ ಅವನನ್ನು ಎಂದೂ ಆಕರ್ಷಿಸಲಿಲ್ಲ. ಆಕೆ ಬಹಳ ವ್ಯವಹಾರ ಚತುರೆ. ಠಾಕೂರ್ ಸಾಹೇಬನ ವಿಧವಾ ತಾಯಿಯು ರಾಜ್ಯಾಡಳಿತದ ವಿಷಯವಾಗಿ ಆಕೆಯ ಸಲಹೆಯನ್ನು ಕೇಳು ತ್ತಿದ್ದಳು. ಮೋಹನದಾಸ ಆಗಾಗ ತಾಯಿಯೊಡನೆ ಹೋಗಿ ಅವರ ಚರ್ಚೆಯನ್ನು ಕೇಳುವ ಅವಕಾಶವನ್ನು ಪಡೆಯುತ್ತಿದ್ದನು ಅವನ ಶೀಲವಿಕಾಸಕ್ಕೆ ಎಲ್ಲಕ್ಕಿಂತ ಹೆಚ್ಚಾಗಿ ಆಕೆಯ ಪ್ರಭಾವವೇ ಕಾರಣ. ಅವನು ತನ್ನ ಗಾಢವಾದ ಧಾರ್ಮಿಕ ಮನೋಧರ್ಮವನ್ನು ತಾಯಿಯಿಂದ ಆನುವಂಶಿಕವಾಗಿ ಪಡೆದಿದ್ದನು.

ಬಾಲ್ಯದ ವರ್ಷಗಳು
೧೮೭೫—೧೮೮೮

ಮೋಹನದಾಸ್ ತನ್ನ ಬಾಲ್ಯವನ್ನು ಪೋರಬಂದರಿನಲ್ಲಿ ಕಳೆದನು. ಅಲ್ಲಿ ಅವನು ಒಂದು ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದನು. ಅವನು ಸಾಮಾನ್ಯ ವಿದ್ಯಾರ್ಥಿಯಾಗಿದ್ದ. ಆದರೆ ಕಾಲಕ್ಕೆ ಸರಿಯಾಗಿ ಬರುತ್ತಿದ್ದನು. ಮಗ್ಗಿ ಕೋಷ್ಟಕವನ್ನು ಕಲಿಯುವುದು ಆತನಿಗೆ ಸ್ವಲ್ಪ ಕಷ್ಟವೇ ಆಗಿತ್ತು. ಬಾಲ್ಯದಲ್ಲಿ ಆತ ಬಹಳ ದಯಾಳು; ಕ್ರೀಡಾಶೀಲ, ಮತ್ತು ಹಠ ಸ್ವಭಾವದವನೂ ಆಗಿದ್ದನು.

ಮೋಹನನಿಗೆ ಏಳು ವರ್ಷ ವಯಸ್ಸಾಗಿದ್ದಾಗ ಅವನ ತಂದೆ ಪೋರಬಂದರ್ ರಾಜ್ಯದ ಸೇವೆಯನ್ನು ತ್ಯಜಿಸಿ. ತಮ್ಮ ಕುಟುಂಬದೊಂದಿಗೆ ರಾಜಕೋಟೆಗೆ ಹೋಗ ಬೇಕಾಗಿ ಬಂದಿತು. ಸ್ವಲ್ಪದಿನಗಳಲ್ಲಿ ಅವರು ಅಲ್ಲಿ ದಿವಾನರಾದರು. ಅಲ್ಲಿಯೂ ಮೋಹನನನ್ನು ಒಂದು ಪ್ರಾಥಮಿಕ ಶಾಲೆಗೆ ಸೇರಿಸಲಾಯಿತು. ಇದರ ತರು ವಾಯ ಅವನಿಗೂ ಕಸ್ತೂರ ಬಾಗೂ ವಿವಾಹ ನಿಶ್ಚಯವಾಯಿತು. ಕಸ್ತೂರಬಾ ತಂದೆ ಗೋಕುಲದಾಸ್ ಮಾಕನ್‌ಜೀ ಪೋರಬಂದರಿನಲ್ಲಿ ವರ್ತಕರಾಗಿದ್ದರು. ಆತನಿಗೂ ಮತ್ತು ಕರಮಚಂದ ಗಾಂಧಿಗೂ ಗಾಢ ಸ್ನೇಹವಿದ್ದಿತು. ಕಸ್ತೂರ ಬಾ ಮತ್ತು ಮೋಹನದಾಸ ಸಮವಯಸ್ಕರಾಗಿದ್ದರು. ಬಾ ಎಂದೂ, ಶಾಲೆಗೆ ಹೋದವಳೇ ಅಲ್ಲ.

ಮೋಹನದಾಸನಿಗೆ ಎಂಟು ವರ್ಷ ವಯಸ್ಸಾಗಿದ್ದಾಗ, ೧೮೭೭ರ ಜನವರಿ ೧ ರಂದು ಡಿಲ್ಲಿಯಲ್ಲಿ ಒಂದು ದರ್ಬಾರ್ ನಡೆಯಿತು. ವಿಕ್ಟೋರಿಯಾ ರಾಣಿ ಭಾರತದ ಸಾಮ್ರಾಜ್ಞಿ ಎಂಬ ಬಿರುದನ್ನು ಇಟ್ಟುಕೊಂಡಳೆಂಬ ಅಂಶವನ್ನು ಲಾರ್ಡ್ ಲಿಟ್ಟನ್ ಭಾರತದ ರಾಜರಿಗೂ ಮತ್ತು ಪ್ರಜೆಗಳಿಗೂ ಘೋಷಿಸಿದರು. ಸಾಮ್ರಾಜ್ಞಿಯ ಪರವಾಗಿ, ಸಾಮ್ರಾಟ ಪ್ರತಿನಿಧಿಯಾದ ಅವನು ಹೀಗೆ ಘೋಷಿ ಸಿದನು: "ಭಾರತ ದೇಶೀಯರಾದ ನೀವು, ನಿಮ್ಮ ಕುಲ ಮತ್ತು ಮತ ಯಾವುವೇ ಆಗಿದ್ದರೂ, ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ, ನೀವು ವಾಸಿಸುವ ಈ ದೇಶದ ಆಡಳಿತ ಕಾರ್ಯದಲ್ಲಿ ನಿಮ್ಮ ಇಂಗ್ಲಿಷ್ ಪ್ರಜೆಗಳೊಂದಿಗೆ ಒಂದು ಅಂಗೀಕೃತ ಭಾಗವನ್ನು ಅನುಭವಿಸುವ ಹಕ್ಕನ್ನು ಹೊಂದಿದ್ದೀರಿ".

ಬ್ರಿಟಿಷ್ ಸರಕಾರ, ರಾಜಕೋಟೆಯನ್ನು ತನ್ನ ರಾಜಕೀಯ ಪ್ರಾತಿನಿಧ್ಯದ ಕೇಂದ್ರ ಸ್ಥಳವನ್ನಾಗಿ ಆಯ್ಕೆ ಮಾಡಿಕೊಂಡಂದಿನಿಂದ ಅದೊಂದು ಪ್ರಮುಖ ಸ್ಥಳವಾಗಿ ಬೆಳೆಯುತ್ತಿತ್ತು. ಆ ಕಾಲದಲ್ಲಿ ಕಾಥೇವಾಡದಲ್ಲಿ ಪ್ರೌಢಶಾಲೆ

ಯನ್ನು ಹೊಂದಿದ್ದ ಕೆಲವೇ ಪಟ್ಟಣಗಳ ಪೈಕಿ ಅದೂ ಒಂದಾಗಿತ್ತು. ಈ ಕಾರಣ ದಿಂದ ಬಾಲಕ ಮೋಹನ್ ಹೆಚ್ಚಿನ ಶಿಕ್ಷಣ ಪಡೆಯಲು ಅವಕಾಶವಾಯಿತು. ಇದಿಲ್ಲದಿದ್ದರೆ, ಅವನ ಭವಿಷ್ಯ ಬೇರೆ ರೀತಿಯಾಗುತ್ತಿತ್ತೇನೋ.

ಮೋಹನದಾಸ ರಾಜಕೋಟೆಯ ಆಲ್‌ಫ್ರೆಡ್ ಹೈಸ್ಕೂಲನ್ನು ಸೇರಿದಾಗ ಅವನಿಗೆ ಹನ್ನೆರಡು ವರ್ಷ ವಯಸ್ಸಾಗಿತ್ತು. ಧೋತಿಯುಟ್ಟು, ನಿಲುವಂಗಿ ಧರಿಸಿ, ತಲೆಗೆ ಟೋಪಿಯಿಟ್ಟುಕೊಂಡು ಅವನು ಶಾಲೆಗೆ ಹೋಗುತ್ತಿದ್ದನು. ಸ್ವಲ್ಪ ಕಾಲದಲ್ಲಿಯೇ ಟೋಪಿಗೆ ಬದಲಾಗಿ ರುಮಾಲು ಬಂದಿತು. ಹನ್ನೆರಡನೆಯ ವಯಸ್ಸಿನಲ್ಲಿಯೇ ಅವನಿಗೂ ಕಸ್ತೂರ ಬಾ ಅವರಿಗೂ ವಿವಾಹವಾಯಿತು. ಧರಿಸಲು ಒಳ್ಳೆಯ ವಸ್ತ್ರಗಳು, ವಾದ್ಯಘೋಷ, ವಿವಾಹದ ಮೆರವಣಿಗೆ, ಪುಷ್ಕಳ ವಾದ ಭೋಜನ, ಇವುಗಳ ಜತೆಗೆ ಆಟವಾಡಲು ಒಬ್ಬ ಹುಡುಗಿ–ಇಷ್ಟಲ್ಲದೆ ಆತನಿಗೆ ಬೇರೆ ಏನೂ ಅನ್ನಿಸಲಿಲ್ಲ ಈ ವಿವಾಹದಿಂದ. ಆ ಕಾಲದಲ್ಲಿ ಬಾಲ್ಯವಿವಾಹ, ಭಾರತದಲ್ಲಿ ರೂಢಿಯಲ್ಲಿದ್ದ ಒಂದು ಪದ್ಧತಿ. ಅದು ಪೂರ್ಣವಾಗಿ, ಹಿರಿಯರ ಕಾಲ ಮತ್ತು ಆರ್ಥಿಕ ಅನುಕೂಲತೆಗಳಿಗೆ ಅನುಗುಣವಾಗಿ ಇರುತ್ತಿತ್ತು. ಕರಮ ಚಂದ ಗಾಂಧಿಗೆ ಅರವತ್ತು ವರ್ಷ ವಯಸ್ಸಾಗಿತ್ತು. ಅತ್ಯಂತ ಕಿರಿಯ ಮಗನ ವಿವಾಹವೂ ಆಗಿ, ತಾವು ಕಣ್ಣು ಮುಚ್ಚುವುದಕ್ಕೆ ಮುಂಚೆಯೇ ಒಬ್ಬ ಮೊಮ್ಮಗ ನನ್ನು ಕಾಣಬೇಕೆಂದು ಅವರು ಬಯಸಿದ್ದರು. ವಿವಾಹವು ಪೋರಬಂದರಿನಲ್ಲಿ ತುಂಬ ಹರ್ಷ ಮತ್ತು ವೈಭವಗಳಿಂದ ನಡೆಯಿತು. ಮೋಹನದಾಸ್ ಗಂಡನ ಅಧಿಕಾರ ವಹಿಸಲು ನಿಧಾನ ಮಾಡಲಿಲ್ಲ. ಹಿರಿಯರ ಎದುರಿನಲ್ಲಿ ತನ್ನ ಪತ್ನಿಯ ಸಂಗಡ ಮಾತನಾಡುವ ಧೈರ್ಯ ಅವನಿಗೆ ಇಲ್ಲದಿದ್ದರೂ ಆಕೆಯ ಚಲನವಲನಗಳ ಬಗೆಗೆ ಹಿಡಿತ ಇಟ್ಟುಕೊಳ್ಳಲು ಅವನು ಯತ್ನಿಸಿದನು.

ವಿವಾಹದ ಫಲವಾಗಿ ಮೋಹನದಾಸ ಒಂದು ವರ್ಷದ ವ್ಯಾಸಂಗವನ್ನು ಕಳೆದುಕೊಂಡನು. ಎರಡು ವರ್ಷಗಳ ಅಭ್ಯಾಸವನ್ನು ಒಂದೇ ವರ್ಷದಲ್ಲಿ ಕೂಡಿಸಿಕೊಳ್ಳಬೇಕಾಯಿತು. ಅವನೆಂದೂ ಪ್ರತಿಭಾವಂತ ವಿದ್ಯಾರ್ಥಿಯಾಗಿರಲಿಲ್ಲ. ಅಧ್ಯಾಪಕರ ಬೈಗುಳ ತಪ್ಪಿಸಿಕೊಳ್ಳಲು ಕಷ್ಟಪಟ್ಟು ವ್ಯಾಸಂಗ ಮಾಡುತ್ತಿದ್ದನು. ಸಾಮಾನ್ಯವಾಗಿ, ಅವನಿಗೆ ಶಾಲೆಯ ಪಠ್ಯಪುಸ್ತಕಗಳಲ್ಲದೆ, ಬೇರೆ ಯಾವುದನ್ನು ಓದಲೂ ಅಭಿರುಚಿ ಇರಲಿಲ್ಲ. ನಾಲ್ಕನೆಯ ತರಗತಿಯಿಂದ ಮುಂದಿನ ವ್ಯಾಸಂಗ ಇಂಗ್ಲಿಷ್ ಮಾಧ್ಯಮದ ಮೂಲಕವೇ ಸಾಗುತ್ತಿತ್ತು. ಮೊದಲು ಮೊದಲು, ಅದು ಕಷ್ಟವಾಗಿ ಕಂಡು ಬಂದಿತು. ಕಂಠಪಾಠ ಮಾಡುವುದು ಅವನಿಗೆ ಹಿಡಿ ಸಿರಲಿಲ್ಲ. ಇದರಿಂದ ಅವನು ಸಂಸ್ಕೃತದಲ್ಲಿ ಹಿಂದೆ ಬಿದ್ದ. ಜ್ಯಾಮಿತಿ ಅವನಿಗೆ ಇಷ್ಟವಾಗಿತ್ತು; ಏಕೆಂದರೆ, ಅದರಲ್ಲಿ ವಿಚಾರಶಕ್ತಿಯಿಂದಲೇ ಯಶಸ್ಸು ಬರುತ್ತಿತ್ತು. ಪ್ರೌಢಶಾಲೆಯ ವ್ಯಾಸಂಗ ಸುಮಾರಾಗಿ ಚೆನ್ನಾಗಿತ್ತು. ಅಧ್ಯಾಪಕರೇ ಪ್ರೋತ್ಸಾಹ ನೀಡಿದರೂ ಅವನು ಎಂದೂ 'ಕಾಪಿ' ಮಾಡುವುದನ್ನು ಕಲಿಯಲಿಲ್ಲ.

ಅವನು ಬಹಳ ಎಚ್ಚರಿಕೆಯಿಂದ ತನ್ನ ಶೀಲವನ್ನು ರಕ್ಷಿಸಿಕೊಂಡನು. ಸ್ವಲ್ಪ ತಪ್ಪು ಮಾಡಿದರೂ ಅವನಿಗೆ ಪಶ್ಚಾತ್ತಾಪವಾಗಿ ಕಣ್ಣೀರು ಸುರಿಯುತ್ತಿತ್ತು.

ಮೋಹನದಾಸ ಒಮ್ಮೆ 'ಶ್ರವಣನ ಪಿತೃಭಕ್ತಿನಾಟಕ' ಎಂಬುದನ್ನು ಓದಿದನು. ಅದು ಶ್ರವಣ ತನ್ನ ಅಂಧ ಮಾತಾಪಿತೃಗಳಿಗೆ ತೋರಿಸುತ್ತಿದ್ದ ಭಕ್ತಿಯ ಕಥೆಯಾಗಿತ್ತು. ಅದು ಅವನ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿತು. ''ನಾನು ಅನುಸರಿಸಲು ಇದೊಂದು ನಿದರ್ಶನ" ಎನಿಸಿತು ಅವನಿಗೆ. ಶ್ರವಣನ ಮರಣದಿಂದ ದುಃಖಿತರಾದ ಆತನ ತಂದೆ ತಾಯಿಗಳ ಹೃದಯ ವಿದ್ರಾವಕ ರಾಗವನ್ನು ಅವನು ತನ್ನ ತಂದೆ ತಂದು ಕೊಟ್ಟಿದ್ದ ರಾಗಮಾಲಿಕೆ ಯಲ್ಲಿ ನುಡಿಸಲು ಆಗಾಗ ಪ್ರಯತ್ನಿಸುತ್ತಿದ್ದನು. ಇದೇ ಕಾಲದಲ್ಲಿ ಅವನು ಹರಿಶ್ಚಂದ್ರ ನಾಟಕವನ್ನು ನೋಡಿದನು. ಅದು ಅವನ ಹೃದಯವನ್ನು ಸರೆ ಹಿಡಿಯಿತು. ''ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಬಾರದು?" ಎಂದು ಆಗಾಗ ಅವನು ತನ್ನಲ್ಲಿಯೇ ಪ್ರಶ್ನಿಸಿಕೊಳ್ಳುತ್ತಿದ್ದನು.

ಅವನಿಗೆ ಶಾಲೆಯ ಆಟಗಳಲ್ಲಿ ಆಸಕ್ತಿ ಇರಲಿಲ್ಲ. ಕ್ರಿಕೆಟ್ ಅಥವಾ ಕಾಲ್ಚೆಂಡಿನ ಆಟವನ್ನು ಕಡ್ಡಾಯ ಮಾಡುವವರೆಗೂ ಅವನು ಅದರಲ್ಲಿ ಎಂದೂ ಭಾಗ ವಹಿಸಲಿಲ್ಲ. ಹೀಗೆ ಅವನು ಯಾರ ಜತೆಗೂ ಸೇರದಿರಲು ಕಾರಣ, ಅವನ ನಾಚಿಕೆಯ ಸ್ವಭಾವ. ಆದರೆ ಅವನು ಕಾಲ್ನಡಿಗೆಯಲ್ಲಿ ದೀರ್ಘ ಸಂಚಾರವನ್ನು ಮಾಡುವ ಅಭ್ಯಾಸ ಇಟ್ಟುಕೊಂಡಿದ್ದನು. ಕ್ರೀಡೆ ಮತ್ತು ಒಳ್ಳೆಯ ಹಸ್ತಾಕ್ಷರ ಇವುಗಳು ಶಿಕ್ಷಣದ ಅಂಗವೆಂದು ಅವನು ಭಾವಿಸಿರಲಿಲ್ಲ. ಕಾಯಿಲೆಯಿದ್ದ ತಂದೆಗೆ ಶುಶ್ರೂಷೆ ಮಾಡುವ ನೆಪದಲ್ಲಿ ಅವನು ಶಾಲಾ ವ್ಯಾಯಾಮವನ್ನು ತಪ್ಪಿಸಿ ಕೊಂಡಿದ್ದನು. ಅಂದಿನಿಂದ ಶುಶ್ರೂಷೆ ಮಾಡುವುದು ಬಾಳಿನಾದ್ಯಂತ ಅವನಿಗೆ ತೀವ್ರ ಆಸಕ್ತಿಯ ವಿಷಯವಾಗಿದ್ದಿತು.

ವಿವಾಹವಾದ ತರುಣದಲ್ಲಿ, ಮೋಹನದಾಸ ಇನ್ನೂ ನಾಲ್ಕನೆಯ ತರಗತಿಯಲ್ಲಿ ಇದ್ದಾಗಲೇ, ಅವನ ಅಣ್ಣನ ಸಹಪಾಠಿ ಷೇಕ್ ಮೆಹತಾಬ್ ಎಂಬುವವನ ಪರಿಚಯವಾಯಿತು. ಮೆಹತಾಬ್ ಮೋಹನನನ್ನು ಅಡ್ಡದಾರಿಗೆ ಎಳೆದನು. ಈ ಹೊಸ ಗೆಳೆಯನ ಶೀಲದ ಬಗೆಗೆ ತಾಯಿ ಮತ್ತು ಪತ್ನಿ ಎಚ್ಚರಿಕೆ ನೀಡಿದರೂ, ಅವನನ್ನು ಸುಧಾರಿಸುವ ಸಲುವಾಗಿಯೇ ಅವನ ಜತೆ ಸೇರಿದನು. ಇಬ್ಬರಿಗೂ ಗಾಢಸ್ನೇಹ ಬೆಳೆಯಿತು. ಇಬ್ಬರೂ ಒಟ್ಟಿಗೆ ಫೋಟೋ ತೆಗೆಸಿ ಕೊಂಡರು. ಆಗ ಸುಧಾರಣೆಯ ಒಂದು ಅಲೆ ರಾಜಕೋಟೆಯನ್ನು ಆವರಿಸಿತ್ತು. ಮೋಹನದಾಸ, ಕೆಲವು ಕಾಲ, ಧಾರ್ಮಿಕ ಸಂಕಟಕ್ಕೆ ಗುರಿಯಾದನು. ಒಂದೊಂದಾಗಿ ಹಿಂದೂ ಪದ್ಧತಿಗಳನ್ನು ಉಲ್ಲಂಘಿಸಿ ನಾಸ್ತಿಕನಾದನು. ರಾಜ ಕೋಟೆಯ ಅನೇಕ ಗೌರವಾನ್ವಿತ ವ್ಯಕ್ತಿಗಳು ಮಾಂಸಾಹಾರ ಮಾಡುವರೆಂದೂ,

ಮದ್ಯಪಾನ ಮಾಡುವರೆಂದೂ ಕೇಳಿದ್ದ. ಅನೇಕ ಅಧ್ಯಾಪಕರೂ ಮತ್ತು ಪ್ರೌಢ ಶಾಲೆಯ ಬಾಲಕರೂ ಗೋಪ್ಯವಾಗಿ ಈ ಸುಧಾರಣೆಯಲ್ಲಿ ಪಾಲ್ಗೊಂಡಿದ್ದರೆಂದು ತಿಳಿದಿದ್ದನು. “ಅದೋ! ಬಲಶಾಲಿ ಇಂಗ್ಲಿಷಿನವ; ಅವನು ದುರ್ಬಲ ಭಾರತೀಯನ ಮೇಲೆ ರಾಜ್ಯಭಾರ ಮಾಡುತ್ತಾನೆ; ಏಕೆಂದರೆ, ಮಾಂಸಾಹಾರದಿಂದ ಅವನು ಐದು ಮೊಳ ಎತ್ತರವಿದ್ದಾನೆ!” ಈ ಅರ್ಥಬರುವ ಒಂದು ಜನಪ್ರಿಯ ಹಾಡು ವಿದ್ಯಾರ್ಥಿಗಳಲ್ಲಿ ಹರಡಿತ್ತು. ‘‘ಇಡೀ ದೇಶ ಮಾಂಸಾಹಾರವನ್ನು ಅಭ್ಯಾಸ ಮಾಡಿದರೆ, ಇಂಗ್ಲಿಷರನ್ನು ಗೆಲ್ಲಬಹುದು” ಎಂದು ಮೋಹನದಾಸ ವಿಚಾರ ಮಾಡಿದನು. ಈ ರಾಷ್ಟ್ರೀಯ ಮನೋಭಾವ ಅವನಿಗೆ ಸರಿ ಎನಿಸಿತು. ಗಾಂಧೀ ಕುಟುಂಬ ಮಾಂಸಾಹಾರಕ್ಕೆ ತೀರ ವಿರುದ್ಧವಾಗಿದ್ದಿತು. ಆದುದರಿಂದ ಬಾಲಕ ಮೋಹನದಾಸ್ ತನ್ನ ಹೊಸ ಸ್ನೇಹಿತನೊಂದಿಗೆ ಆ ಪ್ರಯೋಗ ಮಾಡಲು ಒಂದು ಗುಪ್ತ ಜಾಗವನ್ನು ಆರಿಸಿಕೊಂಡನು. ಮಾಂಸ ತಿಂದ ಮೇಲೆ, ಅವನ ಪ್ರಥಮ ಪ್ರತಿಕ್ರಿಯೆ—‘‘ಒಂದು ಜೀವಂತ ಮೇಕೆ ನನ್ನ ಹೊಟ್ಟೆಯಲ್ಲಿ ಅರಚಿಕೊಳ್ಳುತ್ತಿರುವಂತೆ ಭಾಸವಾಯಿತು”—ಎಂಬುದು. ಹೀಗೆ ಕರ್ತವ್ಯರೂಪದಲ್ಲಿ ಮಾಂಸಾಹಾರ ಪ್ರಯೋಗವನ್ನು ಸುಮಾರು ಒಂದು ವರ್ಷದವರೆಗೆ ಅವನು ಮುಂದುವರಿಸಿದನು; ಆದರೆ, ಆರು ಸಲಕ್ಕಿಂತ ಹೆಚ್ಚಾಗಿ ಆ ಭೋಜನವನ್ನು ಮಾಡಿರಲಿಲ್ಲ. ಇದರಿಂದ ತನ್ನ ತಂದೆ ತಾಯಿಗಳಿಗೆ ಬಹು ದೊಡ್ಡ ಮನೋಘಾತವಾಗುವುದೆಂದು ಅರಿತುಕೊಂಡ ಮೇಲೆ ಹಾಗೆಯೇ ಸುಳ್ಳು ಹೇಳುವುದನ್ನು ಇಚ್ಛಿಸದೆ, ಅವನು ಮಾಂಸಾಹಾರವನ್ನು ತ್ಯಜಿಸಿದ. ‘‘ಅವರು ಕಾಲವಾಗಿ ನಾನು ಸ್ವತಂತ್ರನಾದ ಮೇಲೆ ಮಾಂಸವನ್ನು ಬಹಿರಂಗವಾಗಿಯೇ ತಿನ್ನುತ್ತೇನೆ” ಎಂದು ಆಲೋಚಿಸಿದ.

ಅದೇ ಗೆಳೆಯ, ಮೋಹನದಾಸನನ್ನು ವೇಶ್ಯಾಗೃಹಕ್ಕೆ ಕರೆದುಕೊಂಡು ಹೋದ. ಆದರೆ ಮೋಹನ್ ಜುಗುಪ್ಸೆ ಹೊಂದಿ, ಅಲ್ಲಿಂದ ಹೊರಕ್ಕೆ ಬಂದ. ಅದೇ ಕಾಲದಲ್ಲಿ ಅವನು ಹೊಗೆ ಬತ್ತಿ ಸೇದುವುದನ್ನೂ ಕಲಿತಿದ್ದ. ಬೀಡಿಗಳನ್ನು ಕೊಳ್ಳುವುದಕ್ಕೆ ಅವನು ಸೇವಕನ ಜೇಬಿನಿಂದ ನಾಣ್ಯಗಳನ್ನು ಕದಿಯಲಾರಂಭಿಸಿದ. ಒಮ್ಮೆ ತನ್ನ ಮತ್ತು ತನ್ನ ಸೋದರನ ಮಾಂಸ ಭೋಜನದ ವೆಚ್ಚಕ್ಕಾಗಿ ತುಂಡು ಚಿನ್ನವನ್ನು ಕದ್ದನು. ಆದರೆ ಅದಕ್ಕಾಗಿ ಪಶ್ಚಾತ್ತಾಪಪಟ್ಟು, ಇದನ್ನೆಲ್ಲಾ ಲಿಖಿತ ಮೂಲಕವಾಗಿ ತನ್ನ ತಂದೆಗೆ ತಿಳಿಸಿ ಇದಕ್ಕೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಕೇಳಲು ನಿರ್ಧರಿಸಿದ. ಮತ್ತೊಮ್ಮೆ ಕದಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಗುಟ್ಟಾಗಿ ಸೇದುವುದು ಅವನಿಗೇ ಹೇಯವೆನಿಸಿತು. ಜುಗುಪ್ಸೆಯಿಂದ ದೇವಾಲಯವೊಂದಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ, ಧೈರ್ಯವಿಲ್ಲದೆ ವಿಫಲನಾದ. ಅವನು ಹೊಗೆ ಸೇದುವುದನ್ನು ಎಂದೆಂದಿಗೂ ತ್ಯಜಿಸಿದ. ಅವನ ಸತ್ಯನಿಷ್ಠೆ ಅವನನ್ನು ಕೈಬಿಡಲಿಲ್ಲ. ಬಹುಶಃ ಇದಕ್ಕೆ ಕಾರಣ ಅವನ

ಪ್ರಾಮಾಣಿಕ ತಂದೆತಾಯಿಗಳು ಮತ್ತು ದೇಹದಂಡನೆ ಇಲ್ಲದಿದ್ದುದರ ಸತ್ಪರಿಣಾಮ.

ಅವನ ಬಾಲ್ಯದ ಇನ್ನೊಂದು ಕಥೆಯೂ ಇದೆ. ಅವರ ಮನೆಯಲ್ಲಿ ಒಂದು ಹಬ್ಬ ನಡೆದಿತ್ತು. ಮೋಹನನೇ ತನ್ನ ಗೆಳೆಯನೊಬ್ಬನನ್ನು ಆಹ್ವಾನಿಸಿದ್ದನು. ಮಾವಿನ ಹಣ್ಣು ಅಂದಿನ ಪ್ರಧಾನ ಉಣಿಸು. ಆದರೆ ಏನೋ ತಪ್ಪಿಸಿಂದ, ಗೆಳೆಯನಿಗೆ ಈ ಭೋಜನಕ್ಕೆ ಸಕಾಲಕ್ಕೆ ಕರೆ ಹೋಗಲಿಲ್ಲ. ಹೀಗೆ ಸೌಜನ್ಯ ತಪ್ಪಿದುದಕ್ಕಾಗಿ, ಹತ್ತುವರ್ಷ ವಯಸ್ಸಿನ ಮೋಹನನಿಗೆ ಮಾವಿನ ಹಣ್ಣು ಪ್ರಿಯವಾಗಿದ್ದರೂ, ತಂದೆ ಮತ್ತು ಗೆಳೆಯರಿಬ್ಬರೂ ಎಷ್ಟೇ ಒಪ್ಪಿಸಲು ಪ್ರಯತ್ನಿಸಿದರೂ, ಆ ಹಣ್ಣಿನ ಕಾಲ ಮುಗಿಯುವವರೆಗೂ ಅವನು ಮಾವಿನ ಹಣ್ಣನ್ನು ತಿನ್ನದೆ ತನ್ನನ್ನು ತಾನೇ ಶಿಕ್ಷಿಸಿಕೊಂಡನು.

ಮೋಹನನ ಬಾಲ್ಯದ ಕಾಲವು ಬ್ರಾಂಹ್ಮೋ ಸಮಾಜ ಮತ್ತು ಆರ್ಯ ಸಮಾಜಗಳ ಮೂಲಕ ಹಿಂದೂ ಧರ್ಮದ ಪುನರುತ್ಥಾನದ ಕಾಲವಾಗಿದ್ದಿತು. ಕಾಥೇವಾಡದಲ್ಲಿಯೇ ಜನಿಸಿದ ಸ್ವಾಮೀ ದಯಾನಂದ ಸರಸ್ವತಿ ತಮ್ಮ ಕೀರ್ತಿ ಶಿಖರದಲ್ಲಿದ್ದರು. ಅಸ್ಪೃಶ್ಯತೆಯ ವಿರೋಧವಾಗಿ ಚಳವಳಿ ಹರಡುತ್ತಿದ್ದಿತು.

ಉಕಾ ಎಂಬ ಅಸ್ಪೃಶ್ಯ ಹೆಂಗಸು ಕಕ್ಕಸನ್ನು ಶುದ್ಧ ಮಾಡಲು ಗಾಂಧೀ ಮನೆಗೆ ಬರುತ್ತಿದ್ದಳು. ಆ ಭಂಗಿಯನ್ನು ಮುಟ್ಟಬಾರದೆಂದು ಮೋಹನದಾಸನಿಗೆ ಕಟ್ಟಾಜ್ಞೆಯಿತ್ತು. ಆಗ ಅವನಿಗೆ ಇನ್ನೂ ಹನ್ನೆರಡು ವರ್ಷ ವಯಸ್ಸಾಗಿದ್ದರೂ ಅಸ್ಪೃಶ್ಯತೆಗೆ ಧರ್ಮದಲ್ಲಿ ಆಧಾರ ವಿಲ್ಲವೆಂದು ತನ್ನ ತಾಯಿಗೆ ತಿಳಿಸುತ್ತಿದ್ದನು. ''ಇಂದು ಅಸ್ಪೃಶ್ಯರಲ್ಲಿ ಒಬ್ಬನೆಂದು ಪರಿಗಣಿಸಲಾಗಿರುವಾತನೊಬ್ಬ ರಾಮನನ್ನು ತನ್ನ ದೋಣಿಯಲ್ಲಿ ಕೂಡಿಸಿಕೊಂಡು ನದಿ ದಾಟಿಸಿದನೆಂದು ರಾಮಾಯಣದಲ್ಲಿಯೇ ಉಲ್ಲೇಖವಾಗಿರುವಾಗ ಅಸ್ಪೃಶ್ಯತೆಗೆ ಆಧಾರವೆಲ್ಲಿದೆ" ಎಂಬುದು ಅವನ ವಾದವಾಗಿತ್ತು.

ತಂದೆಗೆ ಐದು ವರ್ಷಗಳ ಕಾಲ ದೀರ್ಘ ಕಾಯಿಲೆಯಾದಾಗ ಮೋಹನದಾಸ ಅವರ ಶುಶ್ರೂಷೆ ಮಾಡಿದನು ಮತ್ತು ಅವರು ತಮ್ಮ ಮುಸ್ಲಿಂ ಮತ್ತು ಫಾರಸೀ ಗೆಳೆಯರೊಂದಿಗೆ ಅವರವರ ಧರ್ಮಗಳ ಬಗೆಗೆ ಚರ್ಚಿಸುವುದನ್ನು ಆಗ ಕೇಳುತ್ತಿದ್ದನು. ''ಭಕ್ತಿ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧ ಗ್ರಂಥ"ವಾದ ತುಲಸೀದಾಸ ರಾಮಾಯಣವನ್ನು ಕರಮ ಚಂದರಿಗೆ ನಿತ್ಯವೂ ಓದಿ ಹೇಳಲಾಗುತ್ತಿತ್ತು. ಅದನ್ನು ಈತನೂ ಕೇಳಿ ಎಲ್ಲ ಧರ್ಮಗ್ರಂಥಗಳ ಬಗೆಗೂ ಅಭಿರುಚಿಯನ್ನು ಬೆಳಸಿಕೊಂಡನು. ಮುಂದೆ ಅವನು ಕ್ರೈಸ್ತ ಧರ್ಮದಿಂದ ಗಾಢವಾಗಿ ಪ್ರಭಾವಿತನಾದನು. ಆದರೆ ಅವನು ಬಾಲಕನಾಗಿದ್ದಾಗ ಆದೊಂದು ಮತದ ಬಗೆಗೆ ಅವನಲ್ಲಿ ದ್ವೇಷ ಭಾವ ಜನಿಸಿದ್ದಿತು. ''ಗೋಮಾಂಸ ಭಕ್ಷಣೆಯನ್ನೂ ಮದ್ಯಪಾನವನ್ನೂ ಯಾವ ಧರ್ಮ ಬಲಾತ್ಕರಿಸುತ್ತದೆಯೋ ಅದು ಹೆಸರು ಹೇಳಲೂ

ಯೋಗ್ಯವಲ್ಲವೆಂದು ನಾನು ಭಾವಿಸಿದೆ” ಎಂಬುದು ಅವನ ವಿಚಾರವಾಗಿತ್ತು.

ಮೋಹನದಾಸನಿಗೆ ಹದಿನಾರು ವಯಸ್ಸಾಗಿದ್ದಾಗ ಅವನ ಅರವತ್ತು ಮೂರು ವಯಸ್ಸಿನ ತಂದೆ ಕಾಲವಾದರು. ಆಗ ಅವರು ರಾಜಕೋಟೆ ಸಂಸ್ಥಾನದಿಂದ ವಿಶ್ರಾಂತಿ ವೇತನ ಪಡೆಯುತ್ತಿದ್ದರು. ಸ್ವಲ್ಪ ಕಾಲದಲ್ಲೇ ಕಸ್ತೂರ ಬಾಗೆ ಒಂದು ಮಗು ಹುಟ್ಟಿ ಅದು ಮೂರು ನಾಲ್ಕು ದಿನಗಳಲ್ಲಿ ಕಾಲವಾಯಿತು.

೧೮೮೭ರ ನವೆಂಬರ್‌ನಲ್ಲಿ ಮೋಹನದಾಸ ಅಹಮದಾಬಾದ್ ಕೇಂದ್ರದಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿದ. ಅವನು ಭಾವಾನಗರದ ಶ್ಯಾಮಲದಾಸ್ ಕಾಲೇಜ್ ಸೇರಿದ. ಆದರೆ ಅಲ್ಲಿ ಮೊದಲ ಅರ್ಧ ವರ್ಷ ಅಧ್ಯಯನ ಕಷ್ಟವಾಗಿ ಕಂಡು ಬಂದುದರಿಂದ ಪ್ರಥಮ ಅವಧಿ ಮುಗಿದ ಕೂಡಲೇ ಊರಿಗೆ ಹಿಂದಿರುಗಿದ.

ಮೋಹನದಾಸನು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಿ ಬರಬೇಕೆಂದು ಅವರ ಕುಟುಂಬದ ಒಬ್ಬ ಗೆಳೆಯ ಸಲಹೆ ಮಾಡಿದನು: “ಕಾಲ ಬದಲಾಯಿಸಿದೆ. ತಕ್ಕ ವಿದ್ಯಾಭ್ಯಾಸವಿಲ್ಲದೆ ನಿಮ್ಮಲ್ಲಿ ಯಾರೂ ನಿಮ್ಮ ತಂದೆಯ ಗಾದಿಗೆ ಬರಲಾರಿರಿ” ಎಂಬ ವಾದ ಆತನದು. ಇಂಗ್ಲೆಂಡಿಗೆ ಹೋಗಬೇಕೆಂಬ ಸಲಹೆ ಮೋಹನದಾಸನಿಗೆ ಆ ಕೂಡಲೇ ಹಿಡಿಸಿತು. ಆದರೆ ಅವನ ತಾಯಿ ಅವನನ್ನು ಬಿಟ್ಟಿರಲು ಒಪ್ಪಲಿಲ್ಲ. ಇದನ್ನು ತಪ್ಪಿಸುವುದಕ್ಕಾಗಿ ಆಕೆ ಪೋರಬಂದರಿನಲ್ಲಿದ್ದ ಚಿಕ್ಕಪ್ಪನ ಸಲಹೆಯನ್ನು ಮೊದಲು ಪಡೆಯಬೇಕೆಂದು ಸೂಚಿಸಿದಳು. ಮೋಹನದಾಸನೊಬ್ಬನೇ ಎತ್ತಿನಗಾಡಿಯಲ್ಲಿಯೂ ಮತ್ತು ಒಂಟೆಯ ಮೇಲೂ ೧೨೦ ಮೈಲಿ ದೂರ ಪ್ರಯಾಣಮಾಡಿ, ನಾಲ್ಕು ದಿನಗಳ ತರುವಾಯ ಪೋರಬಂದರನ್ನು ತಲುಪಿದ. ಇಂಗ್ಲೆಂಡಿಗೆ ಪ್ರಯಾಣ ಮಾಡುವ ಅಧರ್ಮ ಕಾರ್ಯಕ್ಕೆ ನೇರವಾಗಿ ನೆರವಾಗುವುದನ್ನು ತಪ್ಪಿಸಿಕೊಳ್ಳಲು “ನಿನ್ನ ತಾಯಿಯ ಅಪ್ಪಣೆಯೇ ಮುಖ್ಯವೆಂದು” ಆ ಚಿಕ್ಕಪ್ಪ ನುಡಿದರು.

ಮೋಹನದಾಸ ವೈದ್ಯ ವೃತ್ತಿಯ ಶಿಕ್ಷಣವನ್ನು ಪಡೆಯಬೇಕೆಂದು ಆಶಿಸಿದ. ಆದರೆ ಅವನ ಅಣ್ಣ ಅದನ್ನು ವಿರೋಧಿಸಿದ; “ವೈಷ್ಣವರಾದ ನಾವು ಹೆಣಗಳನ್ನು ಕತ್ತರಿಸುವ ಕಾರ್ಯದಲ್ಲಿ ಭಾಗವಹಿಸ ಕೂಡದು” ಎಂದರು. ಹೊರ ದೇಶಕ್ಕೆ ಹೋಗಿ ನ್ಯಾಯಶಾಸ್ತ್ರ ವ್ಯಾಸಂಗಮಾಡಿ ಬರಲು ಅಗತ್ಯವಾದ ಹಣದ ಸೌಕರ್ಯ ಕುಟುಂಬಕ್ಕೆ ಇರಲಿಲ್ಲ. ಪ್ರೀತಿಯ ಅಣ್ಣ ಹೇಗೋ ೬೬೬ ಪೌಂಡುಗಳನ್ನು ಒದಗಿಸಲು ವಾಗ್ದಾನ ಮಾಡಿದ. ಮೋಹನದಾಸ್ ರಾಜ್ಯವಿದ್ಯಾರ್ಥಿ ವೇತನ ಪಡೆಯಲು ಯತ್ನಿಸಿ ವಿಫಲನಾದನು. ತಾಯಿಗೆ ಈತ ಹೋಗುವುದು ಇನ್ನೂ ಇಷ್ಟವಿರಲಿಲ್ಲ. ಆದರೆ ಮೋಹನದಾಸ್ ಮಾಂಸ, ಮದ್ಯ, ಮಹಿಳೆ ಇವುಗಳ ಸಂಪರ್ಕ ಹೊಂದುವುದಿಲ್ಲವೆಂದು ಭಾಷೆಕೊಟ್ಟ ತರುವಾಯ ಆಕೆ ತಮ್ಮ ಒಪ್ಪಿಗೆಯನ್ನಿತ್ತರು. ಆ ಕಾಲದಲ್ಲಿ ರಾಜಕೋಟೆಯ ಒಬ್ಬ ಯುವಕ ಇಂಗ್ಲೆಂಡಿಗೆ ಹೋಗು

ವುದು ಅಸಾಧಾರಣ ಕಾರ್ಯವೆನಿಸಿತ್ತು. ಅವನ ಪ್ರೌಢಶಾಲೆ ತನ್ನ ಹಿಂದಿನ ವಿದ್ಯಾರ್ಥಿಯ ಗೌರವಾರ್ಥವಾಗಿ ಬೀಳ್ಕೊಡುಗೆಯನ್ನು ಏರ್ಪಡಿಸಿತು. ಆಗ ಕೃತಜ್ಞತೆ ಸೂಚಿಸಲು ಕೆಲವು ಮಾತನ್ನಾಡುವುದೂ ಈತನಿಗೆ ಸಾಧ್ಯವಾಗಲಿಲ್ಲ.

ತಾಯಿ, ಹೆಂಡತಿ, ಕೆಲವು ತಿಂಗಳ ಮಗು ಇವರನ್ನು ಬಿಟ್ಟು ಮೋಹನ ದಾಸ ಬೊಂಬಾಯಿಗೆ ತೆರಳಿದನು. ಆವರೆಗೂ ಅವರ ಜಾತಿಯಲ್ಲಿ ಯಾರೂ ವಿದೇಶಕ್ಕೆ ಹೋಗಿರಲಿಲ್ಲ. ಆದುದರಿಂದ ಅವನ ಜಾತಿಯ ಸಮಸ್ತರ ಸಭೆ ಸೇರಿತು; ಅದರ ಮುಂದೆ ಅವನನ್ನು ಕರೆಸಲಾಯಿತು. ''ನೀನು ಇಂಗ್ಲೆಂಡಿಗೆ ಹೋಗ ಬೇಕೆಂಬ ಏರ್ಪಾಡು ಜಾತಿಯ ದೃಷ್ಟಿಯಿಂದ ಸೂಕ್ತವೆನಿಸುವುದಿಲ್ಲ'' ಎಂದು ಎಚ್ಚರಿಸಿದರು. "ನಾನು ಇಂಗ್ಲೆಂಡಿಗೆ ಹೋಗುವ ನಿರ್ಧಾರವನ್ನು ಕದಲಿಸಲಾರೆ; ಇಂಥ ವಿಷಯಗಳಲ್ಲಿ ಜಾತಿ ಪ್ರವೇಶಿಸಬಾರದೆಂಬುದು ನನ್ನ ಭಾವನೆ"—ಎಂದು ಮೋಹನದಾಸ ದೃಢವಾಗಿ ನುಡಿದ.

"ಇಂದಿನಿಂದ ಈ ಹುಡುಗ ನನ್ನ ಜಾತಿ ಬಾಹಿರನೆಂದು ಪರಿಗಣಿಸಬೇಕು ಯಾರು ಇವನಿಗೆ ನೆರವನ್ನು ನೀಡುವರೋ ಮತ್ತು ಬಂದರಿನಲ್ಲಿ ಇವನಿಗೆ ಸುಖ ಪ್ರಯಾಣ ಕೋರುವರೋ ಅವರುಗಳು ಒಂದೂಕಾಲು ರೂಪಾಯಿ ದಂಡ ತೆರುವ ಶಿಕ್ಷೆಗೆ ಬದ್ಧರಾಗುತ್ತಾರೆ"—ಇದು ಜಾತಿಜನತೆಯ ಗಂಭೀರ ತೀರ್ಪಾಗಿತ್ತು. ಮೋಹನದಾಸ ಇದರಿಂದ ವಿಹ್ವಲನಾಗಲಿಲ್ಲ.

ಲಂಡನ್ನಿನಲ್ಲಿ ವಿದ್ಯಾರ್ಥಿ

೧೮೮೮–೧೮೯೧

ಜುನಾಗಢದ ಒಬ್ಬ ನ್ಯಾಯವಾದಿಯ ಸಂಗಡ, ೧೯ ವಯಸ್ಸಿನ ಮೋಹನ ದಾಸ್ ಕರಮಚಂದ್ ಗಾಂಧೀ, ೧೮೮೮ರ ಸೆಪ್ಟೆಂಬರ್ ೪ರಂದು ಮುಂಬೈಯಿಂದ ಪ್ರಯಾಣ ಹೊರಟು, ಆ ತಿಂಗಳ ಕೊನೆಗೆ ಲಂಡನ್ ತಲುಪಿದನು. ಅವನು ತನ್ನೊಂದಿಗೆ ನಾಲ್ಕು ಮಂದಿಗಳಿಗೆ ಅಂದರೆ ಡಾ. ಪಿ. ಜೆ. ಮೆಹತಾ, ಶ್ರೀ ದಲಪತ ರಾವ್ ಶುಕ್ಲ, ಪ್ರಸಿದ್ಧ ಕ್ರಿಕೆಟ್ ಆಟಗಾರ ರಾಜಕುಮಾರ ರಣಜಿತ್ ಸಿಂಗ್‌ಜೀ ಮತ್ತು–ಎಲ್ಲಕ್ಕಿಂತ ಹೆಚ್ಚಿನ ಬೆಲೆಯುಳ್ಳದು–ದಾದಾಭಾಯಿ ನವರೋಜೀ, ಇವರುಗಳಿಗೆ ಪರಿಚಯ ಪತ್ರಗಳನ್ನು ಕೊಂಡೊಯ್ದಿದ್ದನು. ದಾದಾಭಾಯಿ ನವರೋಜರಿಗೆ ಪತ್ರವನ್ನು ಕೊಟ್ಟ ಮಹಾರಾಷ್ಟ್ರದ ಆ ಗೆಳೆಯನಿಗೆ ಅವರ ವೈಯಕ್ತಿಕ ಪರಿಚಯ ವಿರಲಿಲ್ಲ. ೧೮೮೬ರಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ಸಿನ ಎರಡನೆಯ ಅಧಿವೇಶನಕ್ಕೆ ಅಧ್ಯಕ್ಷತೆ ವಹಿಸಿದ್ದ ದಾದಾಭಾಯಿಯವರ ಭೇಟಿ, ನಾಚಿಕೆ ಸ್ವಭಾವದ ಮೋಹನದಾಸನಿಗೆ ಸ್ವಲ್ಪ ಧೈರ್ಯ ಕೊಡಬಹುದೆಂದು ಆತನ ಆಶಯವಾಗಿದ್ದಿತು.

ಜಹಜಿನಲ್ಲಿ ಯುವಕ ಗಾಂಧಿ ಕಪ್ಪು ಉಡುಪನ್ನು ಧರಿಸಿದ್ದ. ದಿನದ ಬಹುಭಾಗವನ್ನು ತನ್ನ ಕೊಠಡಿಯಲ್ಲಿಯೇ ಕಳೆಯುತ್ತಿದ್ದನು ಮತ್ತು ನಾಚಿಕೆಯ ಸ್ವಭಾವದ ಆತ ಕೆಲವು ದಿನಗಳವರೆಗೆ ಅಲ್ಲಿಯೇ ಆಹಾರ ತೆಗೆದುಕೊಳ್ಳುತ್ತಿದ್ದನು. ಪ್ರಯಾಣದ ಕಾಲದಲ್ಲಿ ಅವನು ಮಾಂಸವನ್ನಾಗಲೀ ಮದ್ಯವನ್ನಾಗಲೀ ಮುಟ್ಟಲಿಲ್ಲ. ತನ್ನೊಡನೆ ತಂದಿದ್ದ ಸಿಹಿ ತಿಂಡಿಗಳು, ಹಣ್ಣುಗಳು ಇವೇ ಅವನ ಆಹಾರವಾಗಿದ್ದುವು. ತನ್ನ ಸಹಪ್ರಯಾಣಿಕನೊಬ್ಬನಿಂದ ತಾನು ಜಹಜಿನಲ್ಲಿ ಮಾಂಸವನ್ನು ತಿನ್ನಲಿಲ್ಲವೆಂಬ ಒಂದು ಪ್ರಶಂಸೆಯ ಪತ್ರವನ್ನು ಪಡೆದುಕೊಂಡ. ದೀರ್ಘಕಾಲದ ಪ್ರಯಾಣದಲ್ಲಿ ಅವನು ಏಡನ್, ಪೋರ್ಟ್‌ಸೈಡ್, ಬ್ರಿಂಡಿಸಿ, ಮಾಲ್ಟಾ ಮತ್ತು ಜಿಬ್ರಾಲ್ಟರ್‌ಗಳಿಗೆ ಭೇಟಿಯಿತ್ತನು. ಅವನು ಲಂಡನ್ ತೀರದಲ್ಲಿ ಹೊರಕ್ಕೆ ಬಂದಾಗ ಆತ ಧರಿಸಿದ್ದುದು ಬಿಳಿಯ ಫ್ಲಾನಲ್ ಉಡುಪು. ಸಾಕಷ್ಟು ಚಳಿಯಿದ್ದ ಆ ಕಾಲದಲ್ಲಿ ಅಂಥ ಉಡುಪನ್ನು ಧರಿಸಿದ್ದವನು ಅವನೊಬ್ಬನೇ. ಎಲ್ಲವನ್ನು ಅವನು ತನ್ನ ದಿನಚರಿ ಪುಸ್ತಕದಲ್ಲಿ ಬರೆದಿಟ್ಟನು ; ಈ ಅಭ್ಯಾಸ ಆತನ ಜೀವಮಾನದ ಕೊನೆಯವರೆಗೂ ತಪ್ಪದೆ ಮುಂದುವರಿಯಿತು.

ಗಾಂಧಿ ಲಂಡನ್ನಿನಲ್ಲಿ ಬಂದಿಳಿದ ದಿನ, ಅವರ ಕುಟುಂಬದ ಗೆಳೆಯ ಡಾ. ಪಿ. ಜೆ. ಮೆಹತಾ ವಿಕ್ಟೋರಿಯ ಹೋಟಲಿನಲ್ಲಿ ಅವನನ್ನು ಭೇಟಿಯಾದರು. ಅವರ ರೇಷ್ಮೆಯ ಹ್ಯಾಟ್ ನೋಡಿ, ಆಶ್ಚರ್ಯಚಕಿತನಾದ ಗಾಂಧಿ, ಕುತೂಹಲದಿಂದ ಅದರ ಮೇಲೆ ತಪ್ಪು ರೀತಿಯಲ್ಲಿ ಕೈಯಾಡಿಸಿ, ಅದರ ತುಪ್ಪಳವನ್ನು ಅಸ್ತವ್ಯಸ್ತ ಮಾಡಿದನು. ಆ ಕೂಡಲೇ ಡಾ. ಮೆಹತಾ ಐರೋಪ್ಯರೊಂದಿಗೆ ನಡೆದುಕೊಳ್ಳುವ ಬಗೆಗೆ ಆತನಿಗೆ ಪ್ರಥಮ ಪಾಠ ಕಲಿಸಿದರು. ''ಇತರರ ವಸ್ತುಗಳನ್ನು ಮುಟ್ಟ ಬೇಡ. ಪ್ರಥಮ ಪರಿಚಯದಲ್ಲಿಯೇ ನಾವು ಭಾರತದಲ್ಲಿ ಮಾಡುವಂತೆ ಪ್ರಶ್ನೆಗಳನ್ನು ಕೇಳಬೇಡ; ಗಟ್ಟಿಯಾಗಿ ಮಾತನಾಡಬೇಡ; ಇತರರೊಡನೆ ಮಾತನಾಡುವಾಗ ನಾವು ಭಾರತದಲ್ಲಿ ಮಾಡುವಂತೆ 'ಸರ್' ಎಂದು ಎಂದಿಗೂ ಸಂಬೋಧಿಸಬೇಡ; ಏಕೆಂದರೆ, ಸೇವಕರು ಮತ್ತು ಅಧೀನರು ಮಾತ್ರ ತಮ್ಮ ಯಜಮಾನರನ್ನು ಆ ರೀತಿ ಸಂಬೋಧಿಸುತ್ತಾರೆ.

ಗಾಂಧಿಗೆ ಅವನ ಸುತ್ತ ಎಲ್ಲ ವಿಚಿತ್ರವಾಗಿದ್ದಿತು; ಅವನು ಯಾವಾಗಲೂ ತನ್ನ ದೇಶ ಮತ್ತು ಮನೆಯ ಬಗೆಗೆ ಚಿಂತಿಸುತ್ತಿದ್ದ. ''ಹೋಟಲಿನ ವೈಭವ ಕಂಡು ನನಗೆ ಏನೂ ತೋಚದಂತಾಯಿತು. ನನ್ನ ಜೀವಮಾನದಲ್ಲಿ ಎಂದೂ ಅಂಥ ಆಡಂಬರವನ್ನು ಕಂಡಿರಲಿಲ್ಲ. ಎಲ್ಲೆಲ್ಲಿಯೂ ವಿದ್ಯುಚ್ಛಕ್ತಿಯ ದೀಪಗಳಿದ್ದುವು." 'ಲಿಫ್ಟ್' ಉಪಯೋಗಿಸುವುದೂ ಅವನಿಗೆ ಆಶ್ಚರ್ಯವೆನಿಸಿತು. ನಾಲ್ಕನೆಯ ದಿನವೇ, ದಿನಕ್ಕೆ ಒಂದು ಪೌಂಡಿನಂತೆ ವೆಚ್ಚವಾಗುತ್ತಿದ್ದ ಆ ಹೋಟೆಲನ್ನು ಬಿಟ್ಟು, ಕಡಿಮೆ ವೆಚ್ಚವಿರುವ ಪ್ರದೇಶದಲ್ಲಿ ಇಂಗ್ಲಿಷ್ ಮಹಿಳೆಯೊಬ್ಬಳು ನಡೆಸುತ್ತಿದ್ದ ಒಂದು ಭೋಜನ ಶಾಲೆಗೆ ಸೇರಿದ. ಅಲ್ಲಿ, ಅವನು ಮಾಂಸಾಹಾರವನ್ನು ಮುಟ್ಟದೆ ಇದ್ದುದರಿಂದಲೂ ಮತ್ತು ಅದಲ್ಲದ ಇತರ ತಯಾರಿಕೆಗಳು ರುಚಿಕಂಡು ಬರಲಿಲ್ಲ ವಾದುದರಿಂದಲೂ ಉಪವಾಸದಿಂದಲೇ ಇರಬೇಕಾಯಿತು. ಒಬ್ಬ ಗೆಳೆಯ ಅವನನ್ನು ಪರಿವರ್ತಿಸಲು ಅವನೊಂದಿಗೆ ಬೆಂಥಮ್‌ನ 'ಪ್ರಯೋಜನವಾದ (Theory of Utility) ಎಂಬ ಗ್ರಂಥವನ್ನು ಓದಲು ಯತ್ನಿಸಿದನು. ಆದರೆ ಅದು ಏನೇನೂ ಅರ್ಥವಾಗಲಿಲ್ಲ. "ಈ ಗಹನ ವಿಚಾರಗಳು ನನಗೆ ಅರ್ಥವಾಗುವುದಿಲ್ಲ. ಮಾಂಸ ತಿನ್ನುವುದು ಅಗತ್ಯವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ವ್ರತವನ್ನು ಉಲ್ಲಂಘಿಸಲಾರೆ.''ಎಂದನು. ಯುವಕ ಗಾಂಧೀ ಹೊಸ ಪ್ರಲೋಭನೆಗಳಿಗೂ ಮತ್ತು ಸಾಮಾಜಿಕ ಒತ್ತಡಕ್ಕೂ ಗುರಿಯಾಗಬೇಕಾಯಿತು. ಆದರೆ ತನ್ನ ತಾಯಿಗೆ ಕೊಟ್ಟ ಭಾಷೆಯನ್ನು ಉಳಿಸಿಕೊಳ್ಳಲು ಇವುಗಳ ವಿರುದ್ಧ ಹೋರಾಡಲೂ ಬೇಕಾ ಯಿತು.

ಇಂಗ್ಲೆಂಡಿನಲ್ಲಿದ್ದಾಗ, ಮೊದಲು ಮೊದಲು, ಅನೇಕ ಭಾರತೀಯ ವಿದ್ಯಾರ್ಥಿ ಗಳು ಮಾಡುತ್ತಿದ್ದಂತೆ ಮೋಹನದಾಸ ತನ್ನ ಬಾಲ್ಯ ವಿವಾಹದ ಬಗೆಗೆ ಮೌನ ವನ್ನು ತಾಳಿದ್ದ. ಆದರೆ ಈತನಿಗೆ ಪರಿಚಿತಳಾದ ಒಬ್ಬ ಮಹಿಳೆ, ಯುವತಿಯೊಬ್ಬ

ಕೊಡನೆ ಈತನಿಗೆ ಸಂಬಂಧವನ್ನು ಏರ್ಪಡಿಸಲು ಯತ್ನಿಸುತ್ತಿದ್ದಾಗ ತಾನು ಗಂಡನೆಂದೂ ತಂದೆಯೆಂದೂ ಸತ್ಯಾಂಶವನ್ನು ತಿಳಿಸಿದನು. ಇಬ್ಬರು ಮಹಿಳೆಯರೂ ಅವನನ್ನು ಪೂರ್ಣವಾಗಿ ಕ್ಷಮಿಸಿದರು.

ಇನ್ನೂ ವ್ಯಾಸಂಗವನ್ನು ಕ್ರಮವಾಗಿ ಆರಂಭಮಾಡದಿದ್ದ ಕಾಲದಲ್ಲಿ ಅವನು ಪ್ರತಿದಿನವೂ ಸ್ವಲ್ಪ ಹೊತ್ತು 'ಡೈಲಿ ಡೆಲಿಗ್ರಾಫ್', 'ಡೈಲಿ ನ್ಯೂಸ್', 'ಪಾಲ್ ಮಲ್ ಗೆಜೆಟ್', ಮುಂತಾದುವುಗಳನ್ನು ಓದಲಾರಂಭಿಸಿದನು. ಭಾರತದಲ್ಲಿ ಇದ್ದಾಗ ಅವನು ಎಂದೂ ವರ್ತಮಾನ ಪತ್ರಿಕೆಯನ್ನು ಓದದೆ ಇದ್ದುದರಿಂದ ಅವನಿಗೆ ಇದೊಂದು ಒಳ್ಳೆಯ ಅನುಭವವೇ ಆಗಿರಬೇಕು. 'ಡೈಲಿ ಟೆಲಿಗ್ರಾಫ್' ಪತ್ರಿಕೆಯಲ್ಲಿ ಛಾಯಾ ಚಿತ್ರಗಳು ಮತ್ತು ಎಡ್ವಿನ್ ಆರ್ನಾಲ್ಡ್‌ನ ಪ್ರವಾಸ ಕಥೆಗಳು ವಿಶೇಷ ಅಂಶಗಳಾಗಿದ್ದುವು. ಜಾರ್ಜ್ ಬರ್ನಾರ್ಡ್‌ಷಾ ನಂಥ ಲೇಖಕರು 'ಪಾಲ್‌ಮಲ್ ಗೆಜೆಟ್' ಸಂಬಂಧ ಹೊಂದಿದ್ದರು.

ಸಸ್ಯಾಹಾರದ ಅನ್ವೇಷಣೆಗಾಗಿ ನಗರದಲ್ಲೆಲ್ಲ ಸಂಚರಿಸುತ್ತಿದ್ದಾಗ, ಅವನೊಮ್ಮೆ ವಿಚಿತ್ರ ಹೋಟೆಲೊಂದನ್ನು ಕಂಡನು. ಅಲ್ಲಿ ಸಸ್ಯಾಹಾರವಲ್ಲದೆ, ಸಸ್ಯಾಹಾರದ ವಿಷಯವಾಗಿ ಸಾಹಿತ್ಯದ ಮೂಲಕ ಪ್ರಚಾರವನ್ನು ನಡೆಸಲಾಗುತ್ತಿತ್ತು. ಅವನು 'ಸಾಲ್ಟ್' ಎಂಬಾತ ಬರೆದ 'ಪ್ಲೀ ಫಾರ್ ವೆಜಟೇರಿಯನಿಸಂ' (ಸಸ್ಯಾಹಾರ ಸಮರ್ಥನೆ) ಎಂಬ ಗ್ರಂಥವನ್ನು ಅಲ್ಲಿ ಕೊಂಡುಕೊಂಡನು. ಅದು ಆಹಾರ ನಿಯಮದ ಬಗೆಗೆ ಅವನಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿತು. "ನಾನು ಸಾಲ್ಟ್‌ನ ಪುಸ್ತಕವನ್ನು ಆಮೂಲಾಗ್ರವಾಗಿ ಓದಿ, ಅದರಿಂದ ತುಂಬ ಪ್ರಭಾವಿತನಾದೆ. ಆ ಪುಸ್ತಕವನ್ನು ಓದಿದಂದಿನಿಂದ ನಾನು ವಿಚಾರಪೂರ್ವಕವಾಗಿ ಸಸ್ಯಾಹಾರಿಯಾದೆನೆಂದು ಹೇಳಿಕೊಳ್ಳಬಹುದು. ನನ್ನ ತಾಯಿಗೆ ನಾನು ಭಾಷೆಯಿತ್ತ ದಿನ ಒಂದು ಧನ್ಯದಿನ. ಅವರೆಗೂ ನಾನು ಸತ್ಯಸಂಧತೆ ಮತ್ತು ತಾಯಿಗೆ ಕೊಟ್ಟ ಭಾಷೆ ಇವುಗಳಿಗಾಗಿ ಮಾಂಸಾಹಾರವನ್ನು ತ್ಯಜಿಸಿದ್ದೆನಾದರೂ ಎಲ್ಲ ಭಾರತೀಯರೂ ಮಾಂಸಾಹಾರಿಗಳಾಗಬೇಕೆಂದು ಬಯಸಿದ್ದೆ. ನಾನೇ ಒಂದು ದಿನ ಸ್ವತಂತ್ರವಾಗಿ, ಬಹಿರಂಗವಾಗಿ, ಮಾಂಸಾಹಾರಿಯಾಗುವ ದಿನಕ್ಕೂ ಮತ್ತು ಇತರರನ್ನು ಮಾಂಸಾಹಾರಿಗಳನ್ನಾಗಿ ಮಾಡುವುದಕ್ಕೂ ಕಾದು ಕುಳಿತಿದ್ದೆ. ಈಗ ನಾನು ಸಸ್ಯಾಹಾರವನ್ನು ವಿಚಾರಪೂರ್ವಕವಾಗಿ ಒಪ್ಪಿದೆ. ಅದನ್ನು ಪ್ರಚಾರ ಮಾಡುವುದು ಅಂದಿನಿಂದ ನನ್ನ ಧ್ಯೇಯವಾಯಿತು". ಅವನು ಸಸ್ಯಾಹಾರದ ವಿಷಯದಲ್ಲಿ ಪ್ರಧಾನರೆನಿಸಿದ್ದವರ ಸಂಪರ್ಕವನ್ನು ಪಡೆದನು. ತಾನೇ ಆಹಾರದ ಬಗೆಗೆ ಪ್ರಯೋಗಗಳನ್ನು ಮಾಡಲು ಪ್ರಾರಂಭಿಸಿ, ಸಿಹಿ ಮತ್ತು ಸಂಬಾರದ ಪದಾರ್ಥಗಳನ್ನು ತ್ಯಜಿಸಿದನು. ಟೀ ಮತ್ತು ಕಾಫೀಗಳನ್ನು ತ್ಯಜಿಸಿ, ಅವಕ್ಕೆ ಬದಲಾಗಿ ಕೋಕೋ ಸೇವಿಸಲು ಮೊದಲು ಮಾಡಿದನು. ಇನ್ನೊಮ್ಮೆ ಪಿಷ್ಟ ಪದಾರ್ಥಗಳನ್ನು ತ್ಯಜಿಸಿ, ರೊಟ್ಟಿ ಮತ್ತು ಹಣ್ಣನ್ನು ಮಾತ್ರ ಸೇವಿಸಿದನು;

ಮತ್ತೊಮ್ಮೆ ಹಾಲುಯೋವಾ, ಹಾಲು ಮತ್ತು ಮೊಟ್ಟೆಗಳು ಇವನ್ನು ಮಾತ್ರ ತೆಗೆದುಕೊಂಡನು.

ಗಾಂಧಿಯು ಆಹಾರದ ಗೀಳಿನಿಂದ ಅನೇಕ ಅಚಾತುರ್ಯದ ಸನ್ನಿವೇಶಗಳು ಒದಗಿದುವು. ಆದುದರಿಂದ ಇತರ ಜೀವನ ವಿಧಾನಗಳನ್ನು ಅನುಸರಿಸಿ, ಇಂಗ್ಲಿಷ್ ಗೃಹಸ್ಥನಂತೆ ಆಗಲು ಉತ್ಸಾಹಪೂರ್ವಕವಾಗಿ ಪ್ರಯತ್ನ ಮಾಡಿದನು. ನವೀನವಾಗಿ ಹೊಲಿದ ಉಡುಪನ್ನಲ್ಲದೆ, ಒಂದು ಎತ್ತರವಾದ ಹ್ಯಾಟನ್ನೂ ಮತ್ತು ಬಾಂಡ್‌ಸ್ಟ್ರೀಟ್‌ನಲ್ಲಿ ತಯಾರಾದ ಹತ್ತು ಪೌಂಡು ಬೆಲೆಯ ಸಂಜೆಯ ಉಡುಪನ್ನು ಕೊಂಡನು. ಕನ್ನಡಿಯ ಮುಂದೆ ನಿಂತು ತನ್ನ ಚೆದುರಿದ ಕೂದಲನ್ನು ಬೈತಲೆ ತೆಗೆದು ಕೂಡಿಸುವುದಕ್ಕೂ ಮತ್ತು ಕಂಠಬಂಧನ ಕಟ್ಟಿಕೊಳ್ಳುವುದಕ್ಕೂ ಬಹಳ ವೇಳೆ ಕಳೆಯುತ್ತಿದ್ದನು. ನೃತ್ಯ ಕಲಿಯಲು ಆರು ಪಾಠಗಳನ್ನು ಹೇಳಿಸಿಕೊಂಡರೂ ಅದರ ಲಯವನ್ನೇ ಗ್ರಹಿಸಲಾಗಲಿಲ್ಲ. ಪಾಶ್ಚಾತ್ಯ ಸಂಗೀತದ ಅಭಿರುಚಿ ಬೆಳೆಸಿಕೊಳ್ಳಲು ಪಿಟೀಲನ್ನು ಕಲಿಯಲು ಪ್ರಯತ್ನಿಸಿ, ವಿಫಲನಾದನು. ಫ್ರೆಂಚ್ ಮತ್ತು ಭಾಷಣ ಕಲೆಯನ್ನು ಕಲಿಯಲು ಪಿಟ್ಟ್‌ನ ಭಾಷಣವನ್ನು ಪುನರಾವರ್ತನ ಮಾಡುತ್ತಾ ನಿದ್ರೆ ಹೋದನು. ಹೀಗೆ ಇಂಗ್ಲಿಷ್ ಗೃಹಸ್ಥನಾಗಬೇಕೆಂದು ಮೂರು ತಿಂಗಳು ಹಂಬಲಿಸಿ, ಕಡೆಗೆ ಅದನ್ನೆಲ್ಲ ಬಿಟ್ಟು, ಶ್ರದ್ಧಾವಂತ ವಿದ್ಯಾರ್ಥಿಯಾದನು.

ಈ ಅವಿವೇಕತನದ ಕಾಲವು ಸ್ವಲ್ಪಮಟ್ಟಿನ ಆತ್ಮವಿಮರ್ಶೆಯಿಂದ ಹಗುರವಾಯಿತು. ಗಾಂಧಿ ತಾನು ವೆಚ್ಚಮಾಡಿದ ಪ್ರತಿ ಕಾಸಿಗೂ ಲೆಕ್ಕವಿಟ್ಟನು. ತನ್ನ ಬದುಕಿನ ವಿಧಾನದ ಬಗೆಗೆ ಕಟ್ಟುನಿಟ್ಟಾದ ಎಚ್ಚರಿಕೆಯನ್ನು ವಹಿಸಿದನು. ಸರಳ ಜೀವನ ನಡೆಸುವ ಉದ್ದೇಶದಿಂದ, ಅವನು ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು, ತನ್ನ ಊಟ-ತಿಂಡಿಗಳನ್ನು ತಾನೇ ತಯಾರಿಸಿಕೊಳ್ಳ ತೊಡಗಿದನು. ಜವೆಗೋಧಿಯ ಗಂಜಿ ಮತ್ತು ಕೋಕೋ ಇಷ್ಟು ಮಾತ್ರ ಅವನ ಆಹಾರವಾಗಿತ್ತು. ಈಗ ಅವನು ವಾರಕ್ಕೆ ಹದಿನೇಳು ಷಿಲ್ಲಿಂಗ್ ವೆಚ್ಚದಿಂದ ಜೀವನ ಸಾಗಿಸುತ್ತಿದ್ದ. ಅವನು ವಾಹನದಲ್ಲಿ ಸಂಚರಿಸುವುದನ್ನು ಬಿಟ್ಟು ಕಾಲುನಡಗೆಯನ್ನು ಅವಲಂಬಿಸಿದನು. ಒಂದೆರಡು ಸಲ ನಾಟಕಗಳನ್ನು ನೋಡಿದನು. ೧೮೯೦ರಲ್ಲಿ, ಅವನು ಲಂಡನ್ನಿನ ಸಸ್ಯಾಹಾರಿ ಸಂಘವನ್ನು ಸೇರಿ, ಶೀಘ್ರದಲ್ಲಿಯೇ ಅದರ ಕಾರ್ಯನಿರ್ವಾಹಕ ಸಮಿತಿಯ ಸದಸ್ಯನೂ ಆದನು. ಅವನು ಅದರ ಲಾಂಛನವನ್ನು ರಚಿಸಲು ನೆರವಾದನು. ತಾನು ವಾಸವಿದ್ದ ಪ್ರದೇಶದಲ್ಲಿಯೇ-ಬೇಸ್‌ವಾಟರ್-ಒಂದು ಸಸ್ಯಾಹಾರಿ ಕೂಟವನ್ನು ಸ್ಥಾಪಿಸಿದನು; ಉತ್ಸಾಹದಿಂದ ಅದರ ಕಾರ್ಯದರ್ಶಿಯಾದನು. ಸರ್. ಎಡ್ವಿನ್ ಆರ್ನಾಲ್ಡ್ ಅವರನ್ನು ಉಪಾಧ್ಯಕ್ಷರಾಗಬೇಕೆಂದು ಆಹ್ವಾನಿಸಿದನು. ಸ್ವಲ್ಪ ಕಾಲದಲ್ಲಿಯೇ ಅವನು ಅಲ್ಲಿಂದ ತನ್ನ ನಿವಾಸವನ್ನು ಬದಲಾಯಿಸಿದನು; ಕೂಟವೂ ಅದರೊಂದಿಗೇ ಮುಕ್ತಾಯವಾಯಿತು. ಸಸ್ಯಾಹಾರದ ಪಂಥದ ಮೂಲಕವಾಗಿ, ಇಂಗ್ಲೆಂಡಿನಲ್ಲಿ ಅಂದು

ಪ್ರಚಲಿತವಿದ್ದ ಹೊಸ ಚಳುವಳಿಗಳಾದ ಸಮಾಜವಾದ, ಅರಾಜಕವಾದ, ಅದ್ವೈವ ವಾದ, ಥಿಯೋಸಫಿ ಮತ್ತು ಮಿತಸಂತಾನ ಇವುಗಳ ನಾಯಕರೊಂದಿಗೆ ಪರಿಚಯವನ್ನು ಪಡೆದನು, 'ಸಸ್ಯಾಹಾರಿ' ಪತ್ರಿಕೆಗೆ ಹಿಂದೂ ಪದ್ಧತಿಗಳು ಮತ್ತು ಆಹಾರ ಇವುಗಳನ್ನು ಕುರಿತು ಒಂಬತ್ತು ಲೇಖನಗಳನ್ನು ಬರೆದನು. "ಸಸ್ಯಾಹಾರ ಚಳುವಳಿಯು ಪರೋಕ್ಷವಾಗಿ ಭಾರತದ ರಾಜಕಾರಣಕ್ಕೆ ನೆರವಾಗುತ್ತದೆ. ಏಕೆಂದರೆ, ಇಂಗ್ಲಿಷ್ ಸಸ್ಯಾಹಾರಿಗಳು ಭಾರತೀಯರ ಆಶೋತ್ತರಗಳ ಬಗೆಗೆ ಸಹಾನುಭೂತಿ ತೋರಿಸಲು ಸಿದ್ಧರಾಗುತ್ತಾರೆ" ಎಂದು ಅವನು ಭಾವಿಸಿದನು.

ನ್ಯಾಯಶಾಸ್ತ್ರ ಪರೀಕ್ಷೆಗಳಿಗೆ ಹೆಚ್ಚು ವ್ಯಾಸಂಗ ಅಗತ್ಯವಾಗಿರಲಿಲ್ಲ. ಆದುದರಿಂದ ತನ್ನ ಕಾಲವನ್ನು ಸಾಹಿತ್ಯದಲ್ಲಿ ಅರ್ಹತೆ ಪಡೆದುಕೊಳ್ಳುವುದಕ್ಕಾಗಿ ವಿನಿಯೋಗಿಸಲು ಅಪೇಕ್ಷಿಸಿದನು. ಆಕ್ಸ್‌ಫರ್ಡ್ ಅಥವಾ ಕೇಂಬ್ರಿಜ್ ವ್ಯಾಸಂಗ ಈತನಿಗೆ ನಿಲುಕದುದಾಗಿತ್ತು. ಏಕೆಂದರೆ ಅದಕ್ಕೆ ಅಗತ್ಯವಾದ ಹೆಚ್ಚು ಕಾಲ ಮತ್ತು ಹೆಚ್ಚು ಹಣ ಹೊಂದಿಸುವುದು ಸಾಧ್ಯವಾಗುವಂತಿರಲಿಲ್ಲ. ಲಂಡನ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತುಕೊಳ್ಳಲು ನಿರ್ಧಾರ ಮಾಡಿದನು. ಅದು ಕಷ್ಟದ ಕೆಲಸವಾಗಿದ್ದರೂ, ಸಾಮಾನ್ಯ ಜ್ಞಾನಕ್ಕೆ ಒಳ್ಳೆಯ ಸಾಧನವಾಗಿದ್ದುದರಿಂದ ನಿಷ್ಠೆಯಿಂದ ವ್ಯಾಸಂಗ ಮಾಡಿದನು. ಅವನು ಫ್ರೆಂಚ್, ಇಂಗ್ಲಿಷ್ ಮತ್ತು ರಸಾಯನ ಶಾಸ್ತ್ರದಲ್ಲಿ ತೇರ್ಗಡೆಯಾದರೂ ಲ್ಯಾಟಿನ್‌ನಲ್ಲಿ ಉತ್ತೀರ್ಣನಾಗಲಿಲ್ಲ. ಆರು ತಿಂಗಳಲ್ಲಿ ಎರಡನೆಯ ಸಲ ಪ್ರಯತ್ನ ಮಾಡಿದಾಗ, ಅವನು ವಿಜ್ಞಾನದ ವಿಭಾಗದಲ್ಲಿ ರಸಾಯನ ಶಾಸ್ತ್ರಕ್ಕೆ ಪ್ರತಿಯಾಗಿ ಶಾಖ ಮತ್ತು ಬೆಳಕು ವಿಷಯಗಳಲ್ಲಿ ಪರೀಕ್ಷೆ ಕೊಟ್ಟು ೧೮೯೦ರ ಜೂನ್ ತಿಂಗಳಲ್ಲಿ ತೇರ್ಗಡೆ ಹೊಂದಿದನು.

೧೮೮೯ರ ಕೊನೆಯಲ್ಲಿ ಇಬ್ಬರು ಥಿಯಾಸಫಿಸ್ಟರ ಪರಿಚಯ ಹೊಂದಿ ಅವರ ಜತೆಯಲ್ಲಿ ಭಗವದ್ಗೀತೆಯನ್ನು ಮೊದಲನೆಯಬಾರಿಗೆ ಓದಿದ. ಆ ಇಬ್ಬರು ಗೆಳೆಯರು, ಆರ್ನಾಲ್ಡ್‌ರ ಭಾಷಾಂತರ 'ದಿವ್ಯಗೀತೆ' (Song Celestial) ಯನ್ನು ಓದುತ್ತಿದ್ದರು. ಅವರು ಮೂಲವನ್ನು ಓದಿ ಹೇಳಬೇಕೆಂದು ಗಾಂಧಿಯನ್ನು ಆಹ್ವಾನಿಸಿದರು. ಅದು ಅವನ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಇದಾದ ಕೂಡಲೇ ಅವನು ಆರ್ನಾಲ್ಡ್‌ರ 'ಏಷ್ಯಾದ ಜ್ಯೋತಿ' (Light of Asia) ಯನ್ನು ಇನ್ನೂ ಹೆಚ್ಚಿನ ಆಸಕ್ತಿಯಿಂದ ಓದಿದನು. ಇವು, ಇತರ ಧರ್ಮ ಬೋಧಕರ ಜೀವನವನ್ನೂ ಮತ್ತು ಬೋಧನೆಯನ್ನೂ ವ್ಯಾಸಂಗ ಮಾಡಲು ಅವನ ಆಸಕ್ತಿಯನ್ನು ಚುರುಕುಗೊಳಿಸಿತು. ಥಿಯಾಸಫಿ ಗೆಳೆಯರು ಅವನನ್ನು ಮ್ಯಾಡಾಂ ಬ್ಲಾವ್‌ಟಸ್ಕಿಗೂ ಮತ್ತು ಶ್ರೀಮತಿ ಅನೀ ಬೆಸೆಂಟರಿಗೂ ಪರಿಚಯ ಮಾಡಿಕೊಟ್ಟರು. ಥಿಯಾಸಫಿ ಸಾಹಿತ್ಯವನ್ನು ಓದಿದುದು ಹಿಂದೂ ಧರ್ಮದ

ಬಗೆಗೆ ಓದುವ ಅವನ ಆಸೆಗೆ ಪ್ರಚೋದನೆ ದೊರಕುವಂತಾದರೂ ಥಿಯಾಸಫಿ ಸಮಾಜವನ್ನು ಸೇರಲು ಅವನಿಗೆ ಪ್ರೇರಣೆ ಕೊಡಲಿಲ್ಲ.

ಅದೇ ಕಾಲದಲ್ಲಿ 'ಸಸ್ಯಾಹಾರಿ' ಪತ್ರಿಕೆಯ ಸಂಪಾದಕನೂ ಮತ್ತು ಗಾಂಧಿಯ ಜತೆಗಾರನೂ ಆಗಿದ್ದ ಡಾ. ಜೊಸೈಯಾ ಓಲ್ಡ್‌ಫೀಲ್ಡ್, ಗಾಂಧಿಯ ಧಾರ್ಮಿಕ ನಂಬಿಕೆಯಲ್ಲಿ ಆಸಕ್ತಿ ಹೊಂದಿ, ಅವನು ಯಾವುದನ್ನು ಅಸತ್ಯವೆಂದು ನಂಬಿದ್ದನೋ ಅದರ ವಿರುದ್ಧ ಹೋರಾಡುತ್ತಾ, ಅವನನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸಲು ಪ್ರಯತ್ನಿಸುತ್ತಿದ್ದನು. ಆತನ ಕೋರಿಕೆಯ ಪ್ರಕಾರ, ಗಾಂಧಿ, ಬೈಬಲನ್ನು ಓದಿದನು. ಅವನಿಗೆ 'ಹೊಸ ಒಡಂಬಡಿಕೆ' ಮಾತ್ರ, ಅದರಲ್ಲಿಯೂ 'ಗಿರಿಯ ಮೇಲಿನ ಬೋಧೆ' ಮಾತ್ರ, ಹಿಡಿಸಿತು. ಅವನು ಕೆಲವು ಚರ್ಚುಗಳಲ್ಲಿ ಧರ್ಮಬೋಧೆ ಕೇಳಲು ಹೋದನು. ಸ್ಪರ್ಜನ್, ಫರಾರ್ ಮೊದಲಾದ ಪ್ರಸಿದ್ಧ ಬೋಧಕರ ಬೋಧನೆಯನ್ನು ಕೇಳಿದನು. ಡಾ· ಪಾರ್ಕರ್ ಅವರು 'ಸಿಟಿ ಟೆಂಪಲ್'ನಲ್ಲಿ ಕೊಡುತ್ತಿದ್ದ ಬೋಧೆಗೆ ಮಾತ್ರ ತಪ್ಪದೆ ಆಗಾಗ ಹೋಗುತ್ತಿದ್ದನು. ಧರ್ಮವು ಅವನಿಗೆ ಹೊಸ ವಿಷಯವೇ ಆಯಿತು; ಅವನ ಮನೋಧರ್ಮ ವಿಶಾಲವಾಯಿತು. ಅವನು ಗೀತೆ, ಗಿರಿಯ ಮೇಲಿನ ಬೋಧೆ (Sermon on the Mount) ಮತ್ತು ಏಷ್ಯಾ ಜ್ಯೋತಿ (Light of Asia)—ಇವುಗಳ ಸಮನ್ವಯ ಮಾಡಲು ಯತ್ನಿಸಿದನು.

ಅಂದು ಬ್ರಾಡ್ಲಾ ಎನ್ನುವವರು ಅದೈವವಾದ ಪ್ರಧಾನ ಪ್ರತಿಪಾದಕರಾಗಿದ್ದುದರಿಂದ ಗಾಂಧಿಯೂ ಅದರಲ್ಲಿ ಆಸಕ್ತಿ ವಹಿಸಿದನು. ಅದೈವವಾದ ಅವನ ಮೇಲೆ ಪ್ರಭಾವ ಬೀರದಿದ್ದರೂ ಅವನು ಬ್ರಾಡ್ಲಾ ಅವರ ಬಗೆಗೆ ಪೂಜ್ಯಭಾವವನ್ನೇ ಹೊಂದಿದ್ದನು. ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ 'ಭಾರತದ ಸದಸ್ಯ' ಎಂದು ಪ್ರಸಿದ್ಧರಾಗಿದ್ದ ಬ್ರಾಡ್ಲಾ ಅವರಿಗೆ, ಭಾರತದ ವಿಷಯದಲ್ಲಿ ತುಂಬ ಆಸಕ್ತಿಯಿತ್ತು. ಅವರು ೧೮೯೧ರಲ್ಲಿ ಕಾಲವಾದರು. ಇತರ ಪ್ರಸಿದ್ಧರಾದ ಬ್ರಿಟಿಷ್ ನಾಯಕರೊಂದಿಗೆ ಬ್ರಾಡ್ಲಾ ಅವರ ಶವಸಂಸ್ಕಾರದಲ್ಲಿ ಭಾಗವಹಿಸಿದನು. "ಬ್ರಾಡ್ಲಾನಂಥ ಅದೈವವಾದಿಗಳಿಗೆ, ಇತರರು ದೇವರೆಂದು ಕರೆಯುವುದರ ಸ್ಥಾನದಲ್ಲಿ ಸತ್ಯ ನಿಲ್ಲುತ್ತದೆ"–ಇದು ಗಾಂಧಿಯ ಅಭಿಪ್ರಾಯವಾಗಿತ್ತು.

೧೮೮೯ರಲ್ಲಿ ಲಂಡನ್ನಿನಲ್ಲಿ ಬಂದರು ಕೆಲಸಗಾರರ ಮುಷ್ಕರ ನಡೆಯಿತು. ಮುಷ್ಕರಗಾರರಿಗೆ ನೆರವಿತ್ತ ಕಾರ್ಡಿನಲ್ ಮ್ಯಾನಿಂಗ್ ಅವರಿಗೆ ಧನ್ಯವಾದ ಹೇಳಲು ಗಾಂಧಿ ಒಬ್ಬ ಭಾರತೀಯ ಮಿತ್ರನೊಡನೆ ಹೋಗಿದ್ದನು.

ಆ ಕಾಲದಲ್ಲಿ ದಾದಾಭಾಯಿ ಲಂಡನ್ನಿನಲ್ಲಿದ್ದರು. ೧೮೯೦ರಲ್ಲಿ ಅವರು ಭಾರತದ ಸಮಸ್ಯೆಗಳನ್ನು ಚರ್ಚಿಸಲು 'ಇಂಡಿಯಾ' ಎಂಬ ಪತ್ರಿಕೆಯನ್ನು ಸ್ಥಾಪಿಸಿದರು. ಅದು ಗ್ರೇಟ್‌ಬ್ರಿಟನ್ನಿನಲ್ಲಿದ್ದ ಇನ್ನೂರಕ್ಕೂ ಮೇಲ್ಪಟ್ಟ ಯುವಕ ಭಾರತೀಯ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿತು. ದಾದಾಭಾಯಿ ಆಗಾಗ ಇಂಡಿಯನ್ ಅಸೋಸಿಯೇಷನ್ ಸಭೆಗಳನ್ನು ಉದ್ದೇಶಿಸಿ, ಭಾಷಣ ಮಾಡುತ್ತಿದ್ದರು. ಒಮ್ಮೆ

ಗಾಂಧಿ ಧೈರ್ಯ ತಾಳಿ ತನ್ನಲ್ಲಿದ್ದ ಪರಿಚಯ ಪತ್ರವನ್ನು ಅವರಿಗೆ ಕೊಟ್ಟನು. "ನೀನು ಯಾವಾಗ ಬೇಕಾದರೂ ನನ್ನಲ್ಲಿಗೆ ಬಂದು ನನ್ನ ಸಲಹೆಯನ್ನು ಪಡೆಯಬಹುದು" ಎಂದು ದಾದಾಭಾಯಿ ಅವನಿಗೆ ಹೇಳಿದರು.

೧೮೮೯ರಲ್ಲಿ ಪ್ಯಾರಿಸ್‌ನಲ್ಲಿ ಹೊಸದಾಗಿ ರಚಿತವಾಗಿದ್ದ ಈಫೆಲ್ ಗೋಪುರದ ಆಕರ್ಷಕವಾದ ಒಂದು ಪ್ರದರ್ಶನ ನಡೆಯಿತು. ಟಾಲ್‌ಸ್ಟಾಯ್ ಅದನ್ನು ತೆಗಳಿದವರಲ್ಲಿ ಪ್ರಧಾನನಾಗಿದ್ದನು. ಇದೊಂದು ವಿವಾದಾಸ್ಪದ ವಿಚಾರವಾಗಿ ಅನೇಕರ ಆಸಕ್ತಿಯನ್ನು ಕೆರಳಿಸಿತು. ಗಾಂಧಿಯೂ ಈಫೆಲ್ ಗೋಪುರವನ್ನು ನೋಡಿ ಬಂದನು. ಅವನು ಅದರ ಗಾತ್ರದ ಬಗೆಗೆ ಆಕರ್ಷಿತನಾಗಿದ್ದರೂ, ಅದರಲ್ಲಿ ಸೌಂದರ್ಯವನ್ನು ಹೆಚ್ಚಿಸಬಹುದಾದ ಕಲಾತ್ಮಕವಾದುದೇನನ್ನೂ ಕಾಣಲಿಲ್ಲ. ಅವನು ಫ್ರಾನ್ಸಿನ ಪ್ರಾಚೀನ ಚರ್ಚುಗಳಿಂದ, ಅದರಲ್ಲಿಯೂ ನಾಟ್ರೆಡೇಮಿನ ಮತ್ತು ಅದರ ಒಳಗಿನ ವಿಸ್ತಾರವಾದ ಅಲಂಕರಣ ಹಾಗೂ ಸುಂದರ ಪ್ರತಿಮೆಗಳಿಂದ ತುಂಬ ಪ್ರಭಾವಿತನಾದನು. ಅವನು ಫ್ರಾನ್ಸಿನ ರಾಜಧಾನಿಯಲ್ಲಿ ಏಳು ದಿನಗಳನ್ನು ಕಳೆದನು.

೧೮೮೮ರ ನವೆಂಬರ್ ೬ ರಂದು ಗಾಂಧೀ 'ಇನ್ನರ್ ಟೆಂಪಲ್‌ಗೆ' (ಲಂಡನ್ನಿನ ನ್ಯಾಯವಾದಿ ಸಂಸ್ಥೆ) ದಾಖಲಾದನು. ನ್ಯಾಯಶಾಸ್ತ್ರ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವನು ಇಂಗ್ಲೆಂಡಿನಲ್ಲಿ ಮೂರು ವರ್ಷಗಳ ಕಾಲ ಇರಬೇಕಾಯಿತು. ''ಕಾಲಾವಧಿ ಪಾಲಿಸುವುದು'' ಎಂದರೆ, ಒಂದು ಅವಧಿಗೆ ಕಡೆಯ ಪಕ್ಷ ಆರು ಭೋಜನಕೂಟಗಳಲ್ಲಿ ಭಾಗವಹಿಸುವುದೆಂದು ಅರ್ಥ. ಒಂದೊಂದು ಭೋಜನಕೂಟವೂ ಪುಷ್ಕಳವಾಗಿದ್ದು ಮೂರು ಷಿಲ್ಲಿಂಗ್ ವೆಚ್ಚದ್ದಾಗಿರುತ್ತಿದ್ದಿತು. ಎಲ್ಲರೂ ಚೆನ್ನಾಗಿ ತಿಂದು ಕುಡಿಯುತ್ತಿದ್ದರು. ಬ್ರೆಡ್, ಬೇಯಿಸಿದ ಆಲೂಗೆಡ್ಡೆ ಮತ್ತು ಕೋಸು ಇವುಗಳನ್ನು ಮಾತ್ರ ಗಾಂಧಿ ತಿನ್ನುತ್ತಿದ್ದನು. ನಾಲ್ಕು ಮಂದಿಯ ಪ್ರತಿಯೊಂದು ತಂಡಕ್ಕೂ ಎರಡು ಸೀಸೆ ಮದ್ಯ ದೊರಕುತ್ತಿತ್ತು. ಗಾಂಧಿ ಮದ್ಯಪಾನ ಮಾಡುತ್ತಿರಲಿಲ್ಲವಾದ್ದರಿಂದ ಎಲ್ಲರೂ ಅವನನ್ನು ಆಶ್ರಯಿಸುತ್ತಿದ್ದರು. ಪರೀಕ್ಷೆಗಳು ಸುಲಭವಾಗಿಯೇ ಇದ್ದುವು. ಅವನು ಇತರರಂತಲ್ಲದೆ, ಎಲ್ಲ ಪಠ್ಯಪುಸ್ತಕಗಳನ್ನೂ ಓದಿದನು. ರೋಮನ್ ಶಾಸನವನ್ನು ಲ್ಯಾಟಿನ್‌ನಲ್ಲಿಯೇ ಓದಿದನು. ಅವನು ಪಠ್ಯಪುಸ್ತಕಗಳಿಗಾಗಿ ಹೆಚ್ಚು ಹಣ ವೆಚ್ಚ ಮಾಡಿದನು. ಬ್ರೂಮ್ ಎಂಬಾತನ 'Common Law' ಎಂಬುದನ್ನು ಓದಲು ಆತನಿಗೆ ಒಂಬತ್ತು ತಿಂಗಳು ಬೇಕಾಯಿತು. ಸ್ನೆಲ್ (Snell) ಎಂಬಾತನ "ಈಕ್ವಿಟಿ" ಎಂಬ ಗ್ರಂಥ ಆಸಕ್ತಿ ಜನಕವಾಗಿದ್ದರೂ ಅರಿತುಕೊಳ್ಳಲು ಸ್ವಲ್ಪ ಕಷ್ಟವೇ ಆಗಿದ್ದಿತು; ''ವೈಟ್ ಮತ್ತು ಟ್ಯೂಡರ್ ಅವರ ''ಲೀಡಿಂಗ್ ಕೇಸಸ್'', ಆಸಕ್ತಿಪೂರ್ಣವಾಗಿ ಬೋಧಪ್ರದವಾಗಿದ್ದಿತು.'' ವಿಲಿಯಮ್ಸ್ ಮತ್ತು ಎಡ್ವರ್ಡ್ ಎಂಬಾತನ ''ರಿಯಲ್ ಪ್ರಾಪರ್ಟಿ'' ಮತ್ತು ''ಗುಡ್‌ಈವ್'' ಎಂಬಾತನ ''ಪರ್ಸನಲ್ ಪ್ರಾಪರ್ಟಿ'' ಎಂಬ ಗ್ರಂಥಗಳನ್ನು ಓದಿದನು. ಮೈನ್ ಎಂಬಾತನ ''ಹಿಂದೂಶಾಸನ''

ಎಂಬುದನ್ನಂತೂ ಕೊನೆಯವರೆಗೂ ಆಸಕ್ತಿಯನ್ನು ಕಳೆದು ಕೊಳ್ಳದೆ" ಓದಿದನು. ಅವನ ವ್ಯಾಸಂಗವೆಲ್ಲ ಬಹಳ ಮಟ್ಟಿಗೆ ಪಠ್ಯಪುಸ್ತಕಗಳಿಗೇ ಸೀಮಿತವಾಗಿತ್ತು.

ಅವನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ೧೮೯೧ರ ಜೂನ್ ೧೦ರಂದು ನ್ಯಾಯವಾದಿಯಾಗಿ, ಅದರ ಮರುದಿನವೇ ಶ್ರೇಷ್ಠ ನ್ಯಾಯಾಲಯದಲ್ಲಿ ವಕೀಲನೆಂದು ದಾಖಲಾದನು.

ಗಾಂಧಿ ಇಂಗ್ಲೆಂಡಿನಲ್ಲಿದ್ದ ಮೂರು ವರ್ಷಗಳ ಕಾಲ ವಿಶೇಷ ಘಟನೆಗಳಿಂದ ಕೂಡಿದ್ದಿತು. ಅದು ಅಗಾಧ ಬೌದ್ಧಿಕ ಚಟುವಟಿಕೆಯ ಮತ್ತು ನಿರ್ಬಂಧರಹಿತ ವಿಚಾರ ಹಾಗೂ ವಾಕ್‌ಸ್ವಾತಂತ್ರ್ಯದ ಕಾಲವಾಗಿತ್ತು. ಇಡಿಯ ದೇಶವೇ ಒಂದು ಚೈತನ್ಯ ಭರಿತ ವಿಶ್ವವಿದ್ಯಾನಿಲಯದಂತಿತ್ತು. ಪ್ರತಿಯೊಂದು ವಿಚಾರ ಪಂಥದ ಬಗೆಗೂ ಸಹನೆಯಿತ್ತು. ಇಂಗ್ಲೆಂಡಿನ ಇತಿಹಾಸದಲ್ಲಿ ಹಿಂದಾಗಲೀ ಅಥವಾ ಮುಂದಾಗಲೀ ಎಂದೂ ಕಂಡುಬರದ ಹೊಸ ವಿಚಾರಗಳು ಬೋಧನೆ ಮತ್ತು ಆಚರಣೆಯಲ್ಲಿ ಕಂಡು ಬಂದುವು. ೧೮೮೭ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪಿತವಾಯಿತು. ಸಿಡ್ನಿವೆಬ್ ಮತ್ತು ಬರ್ನಾರ್ಡ್ ಷಾ ಇವರುಗಳ ಸಮರ್ಥ ನಾಯಕತ್ವದಲ್ಲಿದ್ದ ಫೇಬಿಯನ್ ಸಮಾಜವು ಸಮಾಜವಾದ ಮತ್ತು ವೈಜ್ಞಾನಿಕ ವಿಚಾರಗಳನ್ನು ಜನಪ್ರಿಯಗೊಳಿಸುತ್ತಿತ್ತು. ಕಾರ್ಲ್ ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಗ್ರಂಥದ ಪ್ರಥಮ ಸಂಪುಟವು ೧೮೮೭ರಲ್ಲಿ ಇಂಗ್ಲೀಷ್‌ನಲ್ಲಿ ಪ್ರಕಟವಾಗಿತ್ತು. ೧೮೮೯ರಲ್ಲಿ ಬರ್ನಾರ್ಡ್ ಷಾ ಅವರ 'ಫೇಬಿಯನ್ ಎಸ್ಸೇಸ್' ಪ್ರಕಟವಾಯಿತು. ೧೮೭೧ರಲ್ಲಿ ಪ್ರಕಟವಾಗಿದ್ದ ಮತ್ತು ಒಂದು ಯುಗವನ್ನೇ ಆರಂಭಿಸಿದ ಡಾರ್ವಿನ್ನನ ಗ್ರಂಥ 'ಡೀಸೆಂಟ್ ಆಫ್ ಮ್ಯಾನ್' ಬಹಳ ಜಿಜ್ಞಾಸೆಗೆ ಒಳಗಾಗಿದ್ದಿತು. ಕ್ರೊಪಾಟ್‌ಕಿನ್‌ನ 'ಮ್ಯೂಚುಯಲ್ ಏಡ್' ನೈಂಟೀನ್‌ತ್ ಸೆಂಚುರಿ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿತ್ತು. ಅವನು ಇಂಗ್ಲೆಂಡಿನಲ್ಲಿ ತನ್ನ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದನು. ಕಲಾಪ್ರಪಂಚದಲ್ಲಿ ರಸ್ಕಿನ್ ಮತ್ತು ವಿಲಿಯಂ ಮಾರಿಸ್ ಹೊಸ ಆಸಕ್ತಿಯನ್ನು ಹುಟ್ಟಿಸಿದ್ದರು. ಆರ್ನಾಲ್ಡ್‌ನ 'ಲೈಟ್ ಆಫ್ ಏಷ್ಯಾ', 'ದಿ ಸಾಂಗ್ ಸೆಲೆಸ್ಟಿಯಲ್' ಗ್ರಂಥಗಳು ಭಾರತಕ್ಕೆ ಅನೇಕ ಗೆಳೆಯರನ್ನು ಗಳಿಸಿಕೊಟ್ಟಿದ್ದುವು. ಗ್ರೇಟ್ ಬ್ರಿಟನ್ನಿನ ಆದ್ಯಂತ ಅನೇಕ ಪಂಡಿತ ಮಂಡಲಿಗಳು ಮ್ಯಾಕ್ಸ್ ಮುಲ್ಲರ್ ಅವರನ್ನು ಆಹ್ವಾನಿಸಿ, ಭಾರತೀಯ ತತ್ವಜ್ಞಾನ ಮತ್ತು ಮತಧರ್ಮದ ಬಗೆಗೆ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಹಿಂದೆ ಇಂಥ ಪಾಂಡಿತ್ಯಪೂರ್ಣ ಸಭೆಗಳಿಗೆ ಕೇವಲ ಐವತ್ತು ಮಂದಿ ಬರುತ್ತಿದ್ದರೆ, ಈಗ ಪ್ರಾಚ್ಯದ ಜ್ಞಾನದ ಬಗೆಗೆ ಕೇಳಲು ೧೮೦೦ ಮಂದಿಯಷ್ಟು ಬರುತ್ತಿದ್ದರು.

ಗಾಂಧಿ ಲಂಡನ್ನಿನಲ್ಲಿದ್ದಾಗ ೧೮೮೮ರಲ್ಲಿ ಅಲಹಾಬಾದಿನಲ್ಲಿ ನಡೆದ ಕಾಂಗ್ರೆಸ್ಸಿನ ನಾಲ್ಕನೆಯ ಅಧಿವೇಶನಕ್ಕೂ ಮತ್ತು ೧೮೮೯ರಲ್ಲಿ ಮುಂಬೈನಲ್ಲಿ ನಡೆದ ಐದನೆಯ ಅಧಿವೇಶನಕ್ಕೂ ಪ್ರಸಿದ್ಧ ಇಂಗ್ಲಿಷರಾದ ಜಾರ್ಜ್‌ಯೂಲ್ ಮತ್ತು ಸರ್ ವಿಲಿಯಂ

ವೆಡ್ಡರ್ ಬರ್ನ್ ಅಧ್ಯಕ್ಷತೆ ವಹಿಸಿದ್ದರು. ಐದನೆಯ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಇಂಗ್ಲೆಂಡಿನಿಂದ ಆಗಮಿಸಿದ್ದ ಬ್ರಾಡ್ಲಾ, ಹೀಗೆ ಘೋಷಿಸಿದರು. "ಜನತೆಯಲ್ಲಿ ಜನಿಸಿ, ಜನತೆಯ ವಿಶ್ವಾಸಕ್ಕೆ ಪಾತ್ರನಾಗಿ, ನಾನು ಜನತೆಗಾಗಿಯೇ ಪ್ರಾಣ ಬಿಡುತ್ತೇನೆ. ನನಗೆ ಭೌಗೋಳಿಕ ಅಥವಾ ಕುಲದ ಅಡಚಣೆಗಳಿಲ್ಲ."

ಭಾರತಕ್ಕೆ ನಿರ್ಗಮಿಸುವ ಮುನ್ನ ಗಾಂಧಿ ತನ್ನ ಸಸ್ಯಾಹಾರಿ ಗೆಳೆಯರನ್ನು ಆಹ್ವಾನಿಸಿ ಹಾಲ್ಬರ್ನ್ ಹೋಟೆಲಿನಲ್ಲಿ ಭೋಜನಕೂಟ ಏರ್ಪಡಿಸಿದ್ದನು. ಇದು ಮಾಂಸಾಹಾರಿ ಹೋಟೆಲೊಂದರ ಹೊಸ ಪ್ರಯೋಗವೇ ಆಗಿದ್ದಿತು. ಆ ಸಂದರ್ಭದಲ್ಲಿ ಭಾಷಣ ಮಾಡಬೇಕೆಂದು ಗೆಳೆಯರು ಅಪೇಕ್ಷಿಸಿದಾಗ, ಹಿಂದೆಲ್ಲ ಆದಂತೆ ಗಾಂಧಿ ವಿಫಲನಾದ. "ಗೃಹಸ್ಥರೇ, ನನ್ನ ಆಹ್ವಾನಕ್ಕೆ ಓಗೊಟ್ಟು, ದಯಮಾಡಿ ಆಗಮಿಸಿರುವ ತಮಗೆಲ್ಲ ವಂದನೆಗಳು"—ಎಂದು ನುಡಿದು ಹಠಾತ್ತನೆ ಕುಳಿತುಬಿಟ್ಟ. ಲಂಡನ್ನಿನ ಶಾಕಾಹಾರಿ ಪತ್ರಿಕೆ, ಗಾಂಧಿಯ ಚಿತ್ರಸಹಿತ ಒಂದು ಪೂರ್ಣ ಪುಟ ಭೇಟಿಯವರದಿಯನ್ನು ಪ್ರಕಟಿಸಿತು.

"ಭಾರತವನ್ನು ಬಿಟ್ಟರೆ, ಜಗತ್ತಿನಲ್ಲಿ ಇನ್ನೆಲ್ಲ ಸ್ಥಳಗಳಿಗಿಂತ ಲಂಡನ್ನಿನಲ್ಲಿ ನಾನು ಜೀವಿಸಲು ಅಪೇಕ್ಷಿಸುವೆ" ಎಂದು ಗಾಂಧಿ ಭಾವಿಸಿದನು. ಸಸ್ಯಾಹಾರಿ ಪತ್ರಿಕೆಯಲ್ಲಿ ಹೀಗೆ ಬರೆದನು: "ಲಂಡನ್ನಿಗೂ ಅದರ ವಾತಾವರಣಕ್ಕೂ ನಾನು ಅಷ್ಟೊಂದು ಹೊಂದಿಕೊಂಡಿದ್ದೆ; ಯಾರು ತಾನೆ ಆ ರೀತಿ ಆಗಲಾರರು? ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಪ್ರದರ್ಶನ ಸ್ಥಳಗಳು, ಸಾರ್ವಜನಿಕ ಉದ್ಯಾನವನಗಳು, ಸಸ್ಯಾಹಾರಿ ಹೋಟೆಲುಗಳು ಇವುಗಳಿಂದೆಲ್ಲ ಕೂಡಿರುವ ಲಂಡನ್ ವಿದ್ಯಾರ್ಥಿಗೆ, ಪ್ರವಾಸಿಗೆ, ವ್ಯಾಪಾರಿಗೆ, 'ಗೀಳುಗಾರನಿಗೆ'— ಸಸ್ಯಾಹಾರಿಯನ್ನು ಅವನ ವಿರೋಧಿಗಳು ಹಾಗೆ ಕರೆಯುವರು— ಇವರಿಗೆಲ್ಲ ಯೋಗ್ಯ ಸ್ಥಳವಾಗಿದೆ. ಇದರಿಂದ ಪ್ರಿಯವಾದ ಲಂಡನ್ನನ್ನು ಬಿಟ್ಟು ಹೋಗುವಾಗ ನನಗೆ ವ್ಯಸನವಾಗದೆ ಇರಲಿಲ್ಲ. ಅದೇ ಸಮಯದಲ್ಲಿ ನನಗೆ ಹರ್ಷವೂ ಆಗಿತ್ತು; ಏಕೆಂದರೆ, ಬಹಳ ಕಾಲದ ತರುವಾಯ ನಾನು ನನ್ನ ಭಾರತದ ಗೆಳೆಯರನ್ನೂ ಸಂಬಂಧಿಗಳನ್ನೂ ಮತ್ತೆ ನೋಡುವವನಾಗಿದ್ದೆ."

೧೮೯೧ರ ಜುಲೈ ೧೨ರಂದು ಗಾಂಧಿ ಭಾರತಕ್ಕೆ ಯಾನ ಮಾಡಿದನು.

ಉದ್ಯೋಗವಿಲ್ಲದ ನ್ಯಾಯವಾದಿ

೧೮೯೧–೧೮೯೩

ಎಂ. ಕೆ. ಗಾಂಧಿ, ಎಸ್‌ಕ್ವೈರ್, ಬ್ಯಾರಿಸ್ಟರ್–ಅಟ್–ಲಾ, ೧೮೯೧ರ ಜುಲೈನಲ್ಲಿ ಮುಂಬೈ ತಲುಪಿದರು. ಆತ ಸ್ವದೇಶಕ್ಕೆ ಆಗಮಿಸುವ ಕಾಲಕ್ಕೆ ದೊಡ್ಡ ದುಃಖದ ಛಾಯೆ ಕವಿದಿತ್ತು; ಅವರ ಅತ್ಯಂತ ಪ್ರಿಯ ತಾಯಿ ಕಾಲವಾಗಿದ್ದರು. ಅವರು ಲಂಡನ್ನಿನಲ್ಲಿದ್ದಾಗಲೇ, ಎಷ್ಟೋ ದಿವಸಗಳ ಹಿಂದೆಯೇ ಆಕೆ ಕಾಲವಾಗಿದ್ದರೂ ಅವರ ಅಣ್ಣ ಬೊಂಬಾಯಿಯಲ್ಲಿ ಸ್ವಾಗತಿಸಲು ಬಂದಾಗ ಆ ಶೋಕವಾರ್ತೆಯನ್ನು ತಿಳಿಸಿದರು. ಇದರಿಂದ ಗಾಂಧಿಗೆ ದೊಡ್ಡ ಆಘಾತವಾದರೂ ಅದನ್ನು ಹೊರಗೆ ವ್ಯಕ್ತಪಡಿಸಲಿಲ್ಲ. ಅವರು ತಮ್ಮನ್ನು ಲಂಡನ್ನಿನಲ್ಲಿ ಸ್ವಾಗತಿಸಿದ್ದ ಡಾ. ಪಿ.ಜೆ. ಮೆಹತಾ ಅವರ ಮನೆಯಲ್ಲಿ ಉಳಿದುಕೊಂಡರು. ಆ ಕಾಲದಲ್ಲಿ ಅವರು ಕವಿಯೂ ರತ್ನವ್ಯಾಪಾರಿಯೂ ಆಗಿದ್ದ ರಾಜಚಂದ್ರ ರಾವ್‌ಜೀ ಭಾಯಿ ಎಂಬ ಅಮೋಘ ವ್ಯಕ್ತಿಯ ಪರಿಚಯವನ್ನು ಪಡೆದರು. ರಾವ್‌ಜೀ ಭಾಯಿಗೆ ಅದ್ಭುತ ಜ್ಞಾಪಕ ಶಕ್ತಿಯೂ ಮತ್ತು ಏಕಕಾಲದಲ್ಲಿ ಹಲವಾರು ಕೆಲಸಗಳನ್ನು ಮಾಡುವ ಶಕ್ತಿಯೂ ಇದ್ದುವು. ಗಾಢವಾದ ಧಾರ್ಮಿಕ ಸ್ವಭಾವದವನಾಗಿದ್ದು, ಹಿಂದೂ ತತ್ವಜ್ಞಾನವನ್ನು ಚೆನ್ನಾಗಿ ಹೊಂದಿದ್ದ ಆತ, ಗಾಂಧಿಯ ಮೇಲೆ ಅಪಾರ ಪ್ರಭಾವ ಬೀರಿದನು. ರಾಜಚಂದ್ರ ಜೈನ ಯುವಕನಾಗಿದ್ದನು; ಗಾಂಧಿಯಷ್ಟೇ ಅವನಿಗೂ ವಯಸ್ಸು; ಅವನೂ ಕಾಠೇವಾಡದವನೇ ಆಗಿದ್ದನು. ಆತ ಮೂವತ್ತುಮೂರನೆಯ ವಯಸ್ಸಿನಲ್ಲಿ ಕಾಲವಾದರೂ ತನ್ನ ಧ್ಯೇಯವಾದದಿಂದಲೂ ಮತ್ತು ಧರ್ಮಕ್ಕೆ ಒಳ್ಳೆಯ ಜೀವನ ಅತ್ಯಂತ ಅಗತ್ಯವೆಂಬ ನಂಬಿಕೆಯಿಂದಲೂ ಅನೇಕ ಜನರ ಮೇಲೆ ಗಾಢವಾದ ಪ್ರಭಾವ ಬೀರಿದನು; ಗುಜರಾತೀ ಜೈನರಲ್ಲಿ ಒಂದು ಹೊಸ ಹುರುಪನ್ನು ಹುಟ್ಟಿಸಿದನು. ಆತನ ವಿಷಯವಾಗಿ ಗಾಂಧಿ ಹೀಗೆ ಉಲ್ಲೇಖಿಸಿದರು: "ಧರ್ಮಜ್ಞಾನದಲ್ಲಿ ಆತನನ್ನು ಟಾಲ್‌ಸ್ಟಾಯ್‌ಗಿಂತಲೂ ಎಷ್ಟೋ ಉದಾತ್ತನೆಂದು ಭಾವಿಸಿದೆನು. ರಾಜಚಂದ್ರ ಮತ್ತು ಟಾಲ್‌ಸ್ಟಾಯ್ ಈ ಇಬ್ಬರೂ ತಾವು ಬೋಧಿಸಿದಂತೆಯೇ ನಡೆದರು".

ಗಾಂಧಿಯ ಅಣ್ಣ ಅವರನ್ನು ಮುಂಬೈನಿಂದ ನಾಸಿಕಕ್ಕೆ ನೇರವಾಗಿ ಕರೆದೊಯ್ದು, ತಮ್ಮ ಕುಲದವರ ಕ್ರೋಧವನ್ನು ಶಮನ ಮಾಡುವುದಕ್ಕಾಗಿ ಶುದ್ಧಿ ಸಂಸ್ಕಾರಗಳನ್ನು ಮಾಡಿಸಿದರು. ಅವರು ರಾಜಕೋಟೆಗೆ ಹಿಂದಿರುಗಿ ಬಂದಾಗ, ಜಾತಿಬಂಧುಗಳ ಜತೆಯಲ್ಲಿ-ಕುಲಧರ್ಮ ಕಾರ್ಯಗಳಿಗೆ ಅನುಗುಣವಾಗಿ, ವಿಧ್ಯುಕ್ತವಾಗಿ, ಜಾತಿಗೆ ಸೇರಿಸಿಕೊಳ್ಳಲಾಯಿತು. ಇದೇ ಕಾಲದಲ್ಲಿ ಮುಂಬೈ ಮತ್ತು ಪೋರಬಂದರಿನ ಜಾತಿ ಮುಖಂಡರು ಅವರಿಗೆ ಬಹಿಷ್ಕಾರ ಹಾಕಿದ್ದರು.

ರಾಜಕೋಟೆಯಲ್ಲಿ ನೆಲೆಸಿದ ಗಾಂಧಿ ತಮ್ಮ ಕುಟುಂಬದ ಮಕ್ಕಳನ್ನು ಹೊಸ ವಿಚಾರಗಳಿಗೆ ಅನುಗುಣವಾಗಿ ತರಬೇತು ಮಾಡಲು ಆರಂಭಿಸಿದರು. ಅವರ ಸ್ವಂತ ಮಗನಿಗೆ ನಾಲ್ಕು ವರ್ಷ ವಯಸ್ಸಾಗಿತ್ತು. ಜವೆಗೋಧಿಯ ಗಂಜಿ ಮತ್ತು ಕೋಕೋಗಳನ್ನು ತೆಗೆದುಕೊಳ್ಳಲು ಆರಂಭಿಸಿ, ಆ ವೇಳೆಗೆ ಅಭ್ಯಾಸವಾಗಿದ್ದ ಕಾಫೀ ಮತ್ತು ಟೀಗಳನ್ನು ದೂರ ಮಾಡಿದರು. ಅವರು ಮಕ್ಕಳಿಗೆ ದೈಹಿಕ ಶಿಕ್ಷಣ ಕೊಟ್ಟುದಲ್ಲದೆ, ಐರೋಪ್ಯ ಶೈಲಿಯ ಉಡುಪನ್ನೂ ಅಭ್ಯಾಸ ಮಾಡಿಸಿದರು.

ಸಂಸಾರದ ವೆಚ್ಚ ಹೆಚ್ಚಾದುದರಿಂದ ಅದನ್ನು ಸರಿದೂಗಿಸಲು ಗಾಂಧಿ ಮುಂಬೈಗೆ ಪ್ರಯಾಣಮಾಡಿದರು. ವಕೀಲಿ ಕೆಲಸವನ್ನು ಆರಂಭಿಸಿ, ನ್ಯಾಯಾಲಯದ ಅನುಭವವನ್ನು ಪಡೆದುಕೊಂಡು, ಭಾರತೀಯ ಕಾನೂನನ್ನು ಅಭ್ಯಾಸ ಮಾಡುವುದು ಅವರ ಉದ್ದೇಶವಾಗಿತ್ತು. ಅವರಿಗೆ ಆಗ ಇನ್ನೂ ಇಪ್ಪತ್ತೆರಡು ವರ್ಷ ವಯಸ್ಸು: ಯಾವ ಅನುಭವವೂ ಇರಲಿಲ್ಲ. ಅವರ ಕಾಲದ ಪ್ರಮುಖ ನ್ಯಾಯವಾದಿಗಳಾಗಿದ್ದ ನ್ಯಾಯಮೂರ್ತಿ ಬದ್ರುದ್ದೀನ್ ತ್ಯಾಬ್ಜೀ ಮತ್ತು ಸರ್ ಫಿರೋಜ್ ಷಾ ಮೆಹತಾ ಕಾಂಗ್ರೆಸಿನ ಮಾಜಿ ಅಧ್ಯಕ್ಷರಾಗಿದ್ದವರು.

ಗಾಂಧಿ ಅಲ್ಲಿನ ಗಿರ್‌ಗಾಂ ಪ್ರದೇಶದಲ್ಲಿ ವಾಸಮಾಡುತ್ತಿದ್ದರು. ಪ್ರತಿದಿನವೂ ಶ್ರೇಷ್ಠ ನ್ಯಾಯಾಲಯದಲ್ಲಿ, ಮೊಕದ್ದಮೆ ನಡೆಸುವುದನ್ನು ವೀಕ್ಷಿಸಲು, ಕೆಲವು ಮೈಲಿಗಳ ದೂರ ನಡೆದು ಹೋಗಬೇಕಾಗಿತ್ತು.ಅವರು ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಒಬ್ಬ ಅಡಿಗೆಯವನನ್ನು ನೇಮಕ ಮಾಡಿಕೊಂಡರು. ಆತ ಬ್ರಾಹ್ಮಣನಾಗಿದ್ದರೂ ಅಜ್ಞಾನಿಯೂ ಕೊಳಕನೂ ಆಗಿದ್ದನು. ಗಾಂಧಿ ಆತನನ್ನು ಕೇವಲ ಸೇವಕನೆಂದು ಭಾವಿಸದೆ, ಅವನ ಜತೆಯಲ್ಲಿ ತಾವೂ ಕೆಲಸ ಮಾಡುತ್ತಾ, ಅವನಿಗೆ ಶುಚಿತ್ವವನ್ನು ಕಲಿಸಲು ಯತ್ನಿಸಿದರು.

ಸ್ವಲ್ಪ ಕಾಲದಲ್ಲಿಯೇ ಒಂದು ಸಣ್ಣ ಮೊಕದ್ದಮೆ ಅವರಿಗೆ ಬಂದಿತು. ಆದರೆ ಈ ಯುವಕ ವಕೀಲನಿಗೆ ಧೈರ್ಯ ಸಾಲದೆ. ಇನ್ನೊಬ್ಬ ವಕೀಲರನ್ನು ನೇಮಿಸಿಕೊಳ್ಳಬೇಕೆಂದು ತನ್ನ ಕಕ್ಷಿಗಾರನಿಗೆ ತಿಳಿಸಿದರು. ಈ ಪ್ರಕರಣದ ತರುವಾಯ ಆತ ನ್ಯಾಯಾಲಕ್ಕೆ ಮತ್ತೆ ಹೋಗಲೇ ಇಲ್ಲ. ಒಂದು ಪಾಠಶಾಲೆಯಲ್ಲಿ ಒಪ್ಪತ್ತಿನ ಅಧ್ಯಾಪಕನ ಕೆಲಸಕ್ಕೆ ಅರ್ಜಿ ಹಾಕಿಕೊಂಡರು. ಅವರು ಪದವೀಧರರಾಗಿರಲಿಲ್ಲವಾದ್ದರಿಂದ ಆ ಕೆಲಸ ದೊರಕಲಿಲ್ಲ. ಅವರು ಮೊಕದ್ದಮೆಗಳನ್ನು ನಡೆಸುವುದರಲ್ಲಿ ಅನುಭವವಿಲ್ಲದವರಾದರೂ ಮನವಿ ಪತ್ರಗಳನ್ನು ಬರೆಯುವುದರಲ್ಲಿ, ಸಮರ್ಥರೆಂಬುದನ್ನು ಅರಿತುಕೊಂಡರು. ಮುಂಬೈನಲ್ಲಿ ಸಾಕಷ್ಟು ಕೆಲಸ ದೊರಕದೆ ಹೋದುದರಿಂದ, ಆರು ತಿಂಗಳೊಳಗೆ ಅವರು ರಾಜಕೋಟೆಗೆ ಮರಳಿದರು.

ರಾಜಕೋಟೆಯಲ್ಲಿ ಅರ್ಜಿಗಳನ್ನೂ ಮತ್ತು ಮನವಿಪತ್ರಗಳನ್ನೂ ಬರೆದುಕೊಟ್ಟು ತಿಂಗಳಿಗೆ ಸರಾಸರಿ ೨೦೦ ರೂಪಾಯಿಗಳನ್ನು ಸಂಪಾದಿಸುತ್ತಿದ್ದರು. ಅವರು ತಮ್ಮ ಪರ ವಾದಿಸಿದ ವಕೀಲರಿಗೆ ಶೇಕಡ ಇಷ್ಟು ಎಂದು ಶುಲ್ಕವನ್ನು, ತಮ್ಮ ನಿಯಮಕ್ಕೆ

ವಿರುದ್ಧವಾಗಿದ್ದರೂ ತೆರಬೇಕಾಗಿತ್ತು. ಅವರ ಅಣ್ಣನೇ 'ಛೋಟಾ ವಕೀಲ'ನಾಗಿದ್ದು ಅವನ ವಾದಕ್ಕೆ ಗಾಂಧಿ ಒಪ್ಪಿಕೊಳ್ಳಬೇಕಾಗಿತ್ತು.

ತತ್ವನಿಷ್ಠೆಯಲ್ಲಿ ರಾಜಿ ಮಾಡಿಕೊಳ್ಳುವುದು ಪ್ರಾಮಾಣಿಕರಾಗಿದ್ದ ಗಾಂಧಿಯನ್ನು ಕಷ್ಟದಲ್ಲಿ ಸಿಲುಕಿಸಿತು. ಒಮ್ಮೆ ಅವರು ಬ್ರಿಟಿಷ್ ರಾಜಕೀಯ ಪ್ರತಿನಿಧಿಯನ್ನು ಭೇಟಿ ಮಾಡಲು ಹೋದರು. ಪೊರಬಂದರಿನ ರಾಣಾಸಾಹೇಬ ಗಾದಿಗೆ ಬರುವುದಕ್ಕೆ ಮುನ್ನ ಅವನ ಕಾರ್ಯದರ್ಶಿ ಮತ್ತು ಸಲಹೆಗಾರನಾಗಿದ್ದ ತನ್ನ ಅಣ್ಣನ ವಿಷಯದಲ್ಲಿ ಬ್ರಿಟಿಷ್ ರಾಜಕೀಯ ಪ್ರತಿನಿಧಿ ಹೊಂದಿದ್ದ ತಪ್ಪು ಅಭಿಪ್ರಾಯವನ್ನು ಕಳೆಯುವುದು ಆ ಭೇಟಿಯ ಉದ್ದೇಶವಾಗಿತ್ತು. ಆ ಇಂಗ್ಲಿಷ್ ಅಧಿಕಾರಿ, ರಜೆ ತೆಗೆದುಕೊಂಡು ಇಂಗ್ಲೆಂಡಿಗೆ ಹೋಗಿದ್ದಾಗ, ಗಾಂಧಿ ಆತನ ಸ್ವಲ್ಪ ಪರಿಚಯ ಪಡೆದಿದ್ದರು. ಆದರೆ ಸಾಹೇಬನು ಅವರಿಗೆ ಸರಿಯಾದ ಸ್ವಾಗತ ನೀಡದೆ, ಅವರನ್ನು ಹೊರಕ್ಕೆ ದಬ್ಬಲು "ಸಾಕಷ್ಟು ಬಲಪ್ರಯೋಗ" ಮಾಡಬೇಕೆಂದು ಸೇವಕನಿಗೆ ಆಜ್ಞೆ ಮಾಡಿದನು. ಸ್ನೇಹ ಮಯ ಇಂಗ್ಲೆಂಡಿನಿಂದ ಆಗತಾನೇ ಹಿಂದಿರುಗಿ ಬಂದಿದ್ದ ಗಾಂಧೀಜಿಗೆ ಇದೊಂದು ನುಂಗಲಾರದ ತುತ್ತಾಯಿತು. ಆ ಸಾಹೇಬನ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಗಾಂಧಿ ಅಪೇಕ್ಷಿಸಿದರು. ಆದರೆ ರಾಜಕೋಟೆಗೆ ಬಂದಿದ್ದ ಫಿರೋಜ್ ಷಾ ಮೆಹತಾ ಹೀಗೆ ಎಚ್ಚರಿಕೆ ನೀಡಿದರು; "ಇಂಥ ಅನುಭವಗಳು ಅನೇಕ ವಕೀಲರು ಮತ್ತು ಬ್ಯಾರಿಸ್ಟರ್‌ಗಳಿಗೆ ಸಾಮಾನ್ಯವಾಗಿವೆ. ಇವರಿನ್ನೂ ಇಂಗ್ಲೆಂಡಿನಿಂದ ಬಂದ ತರುಣ; ಬ್ರಿಟಿಷ್ ಅಧಿಕಾರಿಗಳ ಮನೋಧರ್ಮವನ್ನು ತಿಳಿದಿಲ್ಲ. ಇಲ್ಲಿ ಏನನ್ನಾದರೂ ಸ್ವಲ್ಪ ಸಂಪಾದಿಸಿ, ಸುಖವಾಗಿ ಜೀವಿಸಬೇಕೆಂದು ಇಚ್ಛೆಯಿದ್ದರೆ, ಅರ್ಜಿಯನ್ನು ಹರಿದು ಹಾಕಿ, ಅಪಮಾನವನ್ನು ಸಹಿಸಿಕೊಳ್ಳಲು ಹೇಳಿ. ಅವರಿನ್ನೂ ಜೀವನದ ವಿಧಾನಗಳನ್ನು ಅರಿಯಬೇಕಾಗಿದೆ".

ಸ್ವಲ್ಪ ಕಾಲದಲ್ಲಿಯೇ ಗಾಂಧಿ ರಾಜಕೋಟೆಯಲ್ಲಿ ಜೀವಿಸುವುದು ದುಸ್ಸಹ ವಾಯಿತು. ಸಾಹೇಬನೊಂದಿಗೆ ಜಗಳವಾಡಿದ್ದುದರಿಂದ ವಕೀಲನ ಕೆಲಸ ಕಷ್ಟವಾಯಿತು. ಕಾಥೇವಾಡದ ಸಂಸ್ಥಾನಗಳು ಮತ್ತು ಅಧಿಕಾರಿಗಳ ನಡುವೆಯೂ ಅಧಿಕಾರಕ್ಕಾಗಿ ಕುಟಿಲೋಪಾಯಗಳು ನಡೆಯುತ್ತಿದ್ದುವು. ಇಂಥ ಕಲುಷಿತ ವಾತಾವರಣದಲ್ಲಿ ಸುರಕ್ಷಿತ ವಾಗಿರುವುದು ಹೇಗೆಂಬುದು ಅವರ ಸಮಸ್ಯೆಯಾಯಿತು.

ಅನಿರೀಕ್ಷಿತವಾಗಿ, 'ದಾದಾ ಅಬ್ದುಲ್ಲಾ ಮತ್ತು ಕಂಪೆನಿ' ಎಂಬುದರ ಪರವಾಗಿ. ಅದರ ಒಂದು ದೊಡ್ಡ ಮೊಕದ್ದಮೆಯಲ್ಲಿ, ವಕೀಲರಿಗೆ ಸಲಹೆ ನೀಡುವುದಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ಹೋಗಬೇಕಾದ ಒಂದು ಆಹ್ವಾನ ಬಂದಿತು. ಒಂದು ವರ್ಷ ಕಾಲ ಅಲ್ಲಿ ಕೆಲಸ ಮಾಡಬೇಕೆಂದೂ ಹೋಗಿಬರಲು ಪ್ರಥಮ ತರಗತಿಯ ಪ್ರಯಾಣ ವೆಚ್ಚ ಮತ್ತು ಎಲ್ಲ ಕಳೆದು ಮೇಲೆ ೧೦೫ ಪೌಂಡುಗಳ ಸಂಭಾವನೆ ಅವರಿಗೆ ಕೊಡಬೇಕೆಂದೂ ನಿಶ್ಚಿತವಾಯಿತು. ಗಾಂಧಿ ಒಪ್ಪಿಕೊಂಡರು. ಹೊರದೇಶಕ್ಕೆ ಹೋಗಿ ಬರುವ ಅವಕಾಶ ಮತ್ತು ಹೊಸ ಅನುಭವ ಇವುಗಳು, ಎರಡು ವರ್ಷಗಳಿಂದ ಕಷ್ಟಕೋಟಲೆಗಳೊಡನೆ ಒದ್ದಾಡುತ್ತಿದ್ದ ತರುಣ ಗಾಂಧಿಗೆ ದೈವಾನುಗ್ರಹದಂತಿದ್ದುವು.

೧೮೯೩ರ ಏಪ್ರಿಲ್‌ನಲ್ಲಿ ಗಾಂಧಿ ದಕ್ಷಿಣ ಆಫ್ರಿಕಾಕ್ಕೆ ಹೊರಟರು.

ಬೇಡವಾದ ಭೇಟಿಕಾರ

೧೮೯೩–೧೮೯೪

ಗಾಂಧಿ ಪ್ರಥಮ ತರಗತಿಯಲ್ಲಿ ಪ್ರಯಾಣ ಮಾಡಬೇಕೆಂದು ಅಪೇಕ್ಷಿಸಿದರು. ಆದರೆ ಯಾವ ಕಾರಣಕ್ಕೋ ಏನೋ, ಅವರನ್ನು ಅಧಿಕಾರಿಯ ಕೋಣೆಗೆ ತುರುಕಲಾಯಿತು. ಒಂದು ತಿಂಗಳಿಗೂ ಹೆಚ್ಚಿನ ಕಾಲದ ಯಾನದಲ್ಲಿ ಕಪ್ತಾನನು ಅವರಿಗೆ ಚದುರಂಗದ ಆಟವನ್ನು ಕಲಿಸಿದನು; ಮಾರ್ಗಮಧ್ಯದಲ್ಲಿ ಲಾಮೂ ಮತ್ತು ಜಾಂಜಿಬಾರ್‌ಗಳಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಲು ಕರೆದುಕೊಂಡು ಹೋದನು. ಜಹಜು ೧೮೯೩ರ ಮೇ ತಿಂಗಳು ಕೊನೆಗೆ ದರ್ಬಾನ್ ತಲಪಿತು. ಆಗ ಗಾಂಧಿಯು ಫ್ರಾಕ್–ಕೋಟ್ ಮತ್ತು ವೃತ್ತಿಸೂಚಕ ಕಪ್ಪು ರುಮಾಲನ್ನು ಗರಿಗರಿಯಾದ ಕಂಠಪಟ್ಟಿ ಮತ್ತು ನಾಜೂಕಿನ ಪಾದರಕ್ಷೆಗಳನ್ನೂ ಧರಿಸಿದ್ದರು. ಅಂಗಿಯ ಒಳಗೆ, ಅವರ ತಾಯಿ ಕೊಟ್ಟಿದ್ದ ಪವಿತ್ರ ವೈಷ್ಣವ ತುಲಸೀಹಾರವಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯ ಪ್ರಥಮ ಕಕ್ಷಿಗಾರ ಅಬ್ದುಲ್ಲಾ ಸೇಠ್,ಅವರನ್ನು ಹಡಗುಕಟ್ಟೆಯಲ್ಲಿ ಸ್ವಾಗತಿಸಿದ. ಜಹಜಿನಿಂದ ಇಳಿಯುವ ಮೊದಲೇ, ಬಿಳಿಯ ಜನರು ಭಾರತೀಯರನ್ನು ಗೌರವಹೀನವಾಗಿ ಕಾಣುವುದನ್ನು ಗಾಂಧಿ ಗಮನಿಸಿದ್ದರು.

ಒಂದು ವಾರದ ಒಳಗೆ, ಗಾಂಧಿ ದರ್ಬಾನ್ ನ್ಯಾಯಾಲಯಕ್ಕೆ ಭೇಟಿಯಿತ್ತರು. ನ್ಯಾಯಾಧೀಶ, ಅವರು ಧರಿಸಿದ್ದ ರುಮಾಲನ್ನು ತೆಗೆಯಬೇಕೆಂದು ಆಜ್ಞಾಪಿಸಿದ. ಗಾಂಧಿ ಅದನ್ನು ತಿರಸ್ಕರಿಸಿ ನ್ಯಾಯಾಲಯವನ್ನೇ ಬಿಟ್ಟು ಹೊರಗೆ ಹೋದರು. ಅವರು ಈ ಪ್ರಸಂಗ ಕುರಿತು ವೃತ್ತಪತ್ರಿಕೆಗಳಿಗೆ ಬರೆದುದರಿಂದ ಅನಿರೀಕ್ಷಿತ ಪ್ರಚಾರವಾಯಿತು. ಕೆಲವು ಪತ್ರಿಕೆಗಳು ಅವರನ್ನು "ಬೇಡವಾದ ಭೇಟಿಕಾರ" ಎಂದು ವರ್ಣಿಸಿದುವು.

೧೮೯೦–೯೧ರ ಕಾಲಾವಧಿಯಲ್ಲಿ ಸುಮಾರು ೧,೫೦,೦೦೦ ಭಾರತೀಯ ನೆಲಸುಗಾರರು ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದರು. ಅವರಲ್ಲಿ ಬಹಳ ಮಂದಿ ನೇಟಾಲಿನಲ್ಲಿ ತಮ್ಮ ಮನೆಮಠ ಮಾಡಿಕೊಂಡಿದ್ದರು. ಅಲ್ಲಿನ ಶಾಸನ ಕಡತದಲ್ಲಿ ಭಾರತೀಯರನ್ನು 'ಅರೆ–ಬರ್ಬರ' ಏಷ್ಯಾದವರು ಅಥವಾ ಏಷ್ಯಾದ ಅನಾಗರಿಕ ಬುಡಕಟ್ಟಿಗೆ ಸೇರಿದ ಜನರು, ಎಂದು ವರ್ಣಿಸಲಾಗಿದ್ದಿತು. ನೇಟಾಲ್ ಸರಕಾರದ ಒತ್ತಾಯಪೂರ್ವಕವಾದ ಬೇಡಿಕೆಗಳ ಪ್ರಕಾರ, ೧೮೬೦ರಲ್ಲಿ, ಕರಾರುಬದ್ಧವಾದ ಕಾರ್ಮಿಕರು ಅಲ್ಲಿಗೆ ವಲಸೆ ಹೋಗಲು ಭಾರತ ಸರಕಾರ ಅವಕಾಶ ನೀಡಿದ್ದಿತು.

ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯರು ವಿವಿಧ ಗುಂಪುಗಳಾಗಿ ವಿಂಗಡಣೆಯಾಗಿದ್ದುದನ್ನು ಕಂಡುಕೊಂಡ ಗಾಂಧಿಗೆ ತುಂಬ ವ್ಯಸನವಾಯಿತು. ಪಾರಸೀ ಕಾರಕೂನರು

ತಮ್ಮನ್ನು ಪರ್ಷಿಯನರೆಂದು ಕರೆದುಕೊಳ್ಳುತ್ತಿದ್ದರು. ಮುಸ್ಲಿಂ ವ್ಯಾಪಾರಗಾರರು ತಮ್ಮನ್ನು ಅರಬ್ಬಿಯವರೆಂದು ಕರೆದುಕೊಳ್ಳುವುದರಲ್ಲಿ ಒಲವು ತೋರಿಸುತ್ತಿದ್ದರು. ಶ್ರಮಜೀವಿಗಳಲ್ಲದ ಹಿಂದುಗಳು ಯಾವಕಡೆಗೂ ಇಲ್ಲದೆ ಇದ್ದರು. ಈ ಮೂರೂ ವರ್ಗಗಳವರೂ ಅಲ್ಪಸ್ವಲ್ಪ ಸಾಮಾಜಿಕ ಸಂಬಂಧಗಳನ್ನು ಹೊಂದಿದ್ದರು. ಆದರೆ ಕಾರ್ಮಿಕರಿಂದ ಕೂಡಿದ ನಾಲ್ಕನೆಯ ವರ್ಗದವರು–ಇವರೇ ಅಧಿಕ ಸಂಖ್ಯೆಯಲ್ಲಿದ್ದವರು–ಮೇಲಿನ ವರ್ಗಗಳವರೊಂದಿಗೆ ವ್ಯಾಪಾರ ಸಂಬಂಧವನ್ನಲ್ಲದೆ ಬೇರೆ ಏನನ್ನೂ ಹೊಂದಿರಲಿಲ್ಲ. ಅತ್ಯಂತ ಬಡವರ್ಗದವರೆಂದರೆ– ತಮಿಳು, ತೆಲುಗು ಮತ್ತು ಉತ್ತರ ಭಾರತಕ್ಕೆ ಸೇರಿದ ಕರಾರುಬದ್ಧರಾದ ಮತ್ತು ಸ್ವತಂತ್ರರಾದ ಕಾರ್ಮಿಕರು. ಅವರೆಲ್ಲ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಮತಗಳಿಗೆ ಸೇರಿದವರಾಗಿದ್ದರು. ಇಂಗ್ಲಿಷರು ಅವರನ್ನು 'ಕೂಲಿ'ಗಳೆಂದು ಕರೆಯುತ್ತಿದ್ದರು. ಭಾರತೀಯರಲ್ಲಿ ಬಹು ಸಂಖ್ಯಾತರು ಶ್ರಮಜೀವಿಗಳೇ ಆಗಿದ್ದುದರಿಂದ ಎಲ್ಲ ಭಾರತೀಯರೂ 'ಕೂಲಿ'ಗಳು ಅಥವಾ 'ಸಾಮಿ'ಗಳು ಎಂದು ಕರೆಯಲ್ಪಡುತ್ತಿದ್ದರು. ವರ್ತಕರು 'ಕೂಲಿ ವರ್ತಕರಾಗಿದ್ದರು'. ಗಾಂಧಿ 'ಕೂಲಿ ಬ್ಯಾರಿಸ್ಟರ್' ಆದರು.

ಒಂದು ವಾರ ಕಳೆದ ಮೇಲೆ ಗಾಂಧಿ, ಯಾವ ಮೊಕದ್ದಮೆಗೆ ಸಂಬಂಧಪಟ್ಟಂತೆ ನೇಮಕವಾಗಿದ್ದರೋ, ಆ ಮೊಕದ್ದಮೆ ನಡೆಯುತ್ತಿದ್ದ ಪ್ರಿಟೋರಿಯಾಕ್ಕೆ ಪ್ರಯಾಣ ಹೊರಟರು. ಅದು ಸುಗಮವಾದ ಪ್ರಯಾಣವಾಗಿರಲಿಲ್ಲ. ಗಾಂಧಿ ಪ್ರಥಮ ದರ್ಜೆ ಟಿಕೀಟನ್ನು ಪಡೆದಿದ್ದರೂ ನೇಟಾಲಿನ ರಾಜಧಾನಿ ಮೇರಿಟ್ಸ್‌ಬರ್ಗ್‌ನಲ್ಲಿ ರೈಲ್ವೆ ಅಧಿಕಾರಿಯೊಬ್ಬ, ಅವರನ್ನು ರೈಲಿನ ವ್ಯಾನ್ ವಿಭಾಗಕ್ಕೆ ಹೋಗಬೇಕೆಂದು ಆಜ್ಞಾಪಿಸಿದನು. ಆ ಅನ್ಯಾಯದ ಆಣತಿಗೆ ತಲೆಬಾಗಲು ಗಾಂಧಿ ನಿರಾಕರಿಸಿದ್ದರಿಂದ, ಒಬ್ಬ ಪೋಲೀಸ್ ಪ್ಯಾದೆ ಬಂದು, ಸಾಮಾನುಗಳ ಸಮೇತ ಅವರನ್ನು ಗಾಡಿಯಿಂದ ಆಚೆಗೆ ಎಳೆದು ಹಾಕಿದನು. ರೈಲು ಹೊರಟು ಹೋಯಿತು. ಗಾಂಧಿ ಆ ಕತ್ತಲು ರಾತ್ರಿಯೆಲ್ಲಾ ಚಳಿಯಲ್ಲಿ ನಡುಗುತ್ತಾ ಪ್ರಯಾಣಿಕರ ಕೊಠಡಿಯಲ್ಲಿಯೇ ಇರಬೇಕಾಯಿತು. ಈ ಅನುಭವ ಅವರ ಬದುಕಿನ ದಿಕ್ಕನ್ನು ಬದಲಾಯಿಸಿತು. "ಕೊಠಡಿಯಲ್ಲಿ ಒಬ್ಬ ಬಿಳಿಯವನು ಇದ್ದನು. ಅವನನ್ನು ಕಂಡು ನನಗೆ ಹೆದರಿಕೆಯಾಗಿತ್ತು. ನನ್ನ ಕರ್ತವ್ಯವೇನೆಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಭಾರತಕ್ಕೆ ಹಿಂದಿರುಗಲೇ ಅಥವಾ ದೇವರ ಸಹಾಯವನ್ನು ನಂಬಿ, ನನಗೆ ಬರುವುದನ್ನೆಲ್ಲ ಎದುರಿಸಿ, ಪ್ರಯಾಣವನ್ನು ಮುಂದುವರಿಸಲೇ? ನಾನು ಅಲ್ಲಿಯೇ ನಿಂತು ಕಷ್ಟ ಅನುಭವಿಸಲು ನಿರ್ಧಾರ ಮಾಡಿದೆ. ನನ್ನ ಸಕ್ರಿಯ ಅಹಿಂಸೆ ಅಂದಿನಿಂದ ಆರಂಭವಾಯಿತು."

ಗಾಂಧೀ ಮರುದಿವಸವನ್ನು ಮೆರಿಟ್ಸ್‌ಬರ್ಗ್ಗಿನ ವರ್ತಕರೊಡನೆ ಕಳೆದರು. ಆ ವರ್ತಕರು ತಮ್ಮ ಸ್ವಂತ ಕಷ್ಟಗಳನ್ನು ತಿಳಿಸಿ, ಸಮಾಧಾನ ಮಾಡಲು ಯತ್ನಿಸಿದರು. ರೈಲ್ವೆ ಕಂಪೆನಿಯ ಮೇಲ್ವಿಚಾರಕನಿಗೆ ಗಾಂಧಿ ಒಂದು ದೀರ್ಘ ತಾರನ್ನು ಕಳಿಸಿ, ದೂರಿತ್ತರು. ಆದರೆ ಅಧಿಕಾರಿ ರೈಲ್ವೆ ನೌಕರನ ವರ್ತನೆಯನ್ನು ಸಮರ್ಥಿಸಿಕೊಂಡನು.

ಸಾಯಂಕಾಲದ ರೈಲಿನಲ್ಲಿ, ಅವರು ಒಂದು ಮೀಸಲು ಸ್ಥಾನದಲ್ಲಿ ಪ್ರಯಾಣ ಮಾಡಿ, ಬೆಳಗಿನ ವೇಳೆಗೆ ಚಾರ್ಲ್ಸ್‌ಟೌನ್ ತಲುಪಿದರು. ಅಲ್ಲಿಂದ ಮುಂದೆ ಅವರು ಕುದುರೆ ಬಂಡಿಯಲ್ಲಿ ಪ್ರಯಾಣ ಮಾಡಿದರು. ಆ ಬಂಡಿ ಸ್ಟ್ಯಾಂಡರ್‌ಟನ್ ಮೂಲಕ ಹಾದು ಹೋಗಿ, ರಾತ್ರಿ ಅಲ್ಲಿಯೇ ತಂಗುತ್ತಿತ್ತು. ಬಂಡಿ ಚಾಲಕರ ಮುಖಂಡ, 'ಕೂಲಿ ಬ್ಯಾರಿಸ್ಟರ್' ಕುರಿತು ಚಾಲಕನ ಪಕ್ಕದಲ್ಲಿ ಕುಳಿತುಕೊಳ್ಳಬೇಕೆಂದು ಆಜ್ಞಾಪಿಸಿ, ತಾನು ಒಳಗಡೆ ಬಿಳಿಯ ಪ್ರಯಾಣಿಕರ ಜತೆಯಲ್ಲಿ ಕುಳಿತುಕೊಂಡನು. ಸುಮಾರು ಮೂರು ಘಂಟೆಯ ವೇಳೆಗೆ, ಬಂಡಿ, ಪಾರ್ಡೇಕೋಪನ್ನು ತಲಪಿತು. ಆಗ ಚಾಲಕರ ಮುಖಂಡನಿಗೆ ಶುದ್ಧ ಗಾಳಿ ಬೇಕೆನಿಸಿತು; ಹಾಗೆಯೇ ಹೊಗೆ ಸೇದಬೇಕೆನಿಸಿತು. ಅವನು ಚಾಲಕನಿಂದ ಒಂದು ಚೂರು ಕೊಳಕು ಚೀಲವನ್ನು ತೆಗೆದುಕೊಂಡು, ಅದನ್ನು ಕಾಲಿರಿಸಿಕೊಳ್ಳುವ ಜಾಗದ ಮೇಲೆ ಹಾಸಿ, ಗಾಂಧಿಯನ್ನು ಕುರಿತು ಹೀಗೆ ಹೇಳಿದ: "ಸಾಮಿ, ನೀನು ಇದರ ಮೇಲೆ ಕುಳಿತುಕೋ. ನಾನು ಚಾಲಕನ ಬಳಿ ಕೂಡಬೇಕು". ಗಾಂಧೀ ಕಾಲಿರಿಸುವ ಬಳಿ ಕುಳಿತುಕೊಳ್ಳಲು ನಿರಾಕರಿಸಿದರು. ಒಳಗೆ ಕುಳಿತುಕೊಳ್ಳಲು ಸಿದ್ಧವಿದ್ದರು. ಆ ಮುಖಂಡ ಗಾಂಧಿ ಮುಖಕ್ಕೆ ಪೆಟ್ಟುಕೊಟ್ಟು, ಅವರನ್ನು ಕೆಳಕ್ಕೆ ಎಳೆಯಲು ಯತ್ನಿಸಿದನು. ಗಾಂಧೀ ಕಂಬಿಯನ್ನು ಬಲವಾಗಿ ಹಿಡಿದುಕೊಂಡು ಕುಳಿತುಕೊಂಡರು. ಮತ್ತೊಂದು ಭಾರಿ ಪೆಟ್ಟು ಬಿದ್ದು ಅವರು ಕೆಳಕ್ಕೆ ಉರುಳುವ ಸ್ಥಿತಿಯಲ್ಲಿದ್ದರು. ಪ್ರಯಾಣಿಕರು ಮಧ್ಯೆ ಪ್ರವೇಶಿಸಿ, "ಆ ಬಡಪ್ರಾಣಿಯನ್ನು ಅವನ ಪಾಡಿಗೆ ಬಿಡಿ", ಎಂದರು. ಮುಖಂಡನಿಗೆ ಇದು ಹಿಡಿಸದಿದ್ದರೂ, "ಮುಂದೆ ನಿನಗೆ ಗತಿ ಕಾಣಿಸುವೆ" ಎಂದು ಬೆದರಿಕೆ ಹಾಕಿ, ಸುಮ್ಮನಾದನು. ಸ್ಟ್ಯಾಂಡರ್‌ಟನ್ ಒಂದು ಸಣ್ಣ ಹಳ್ಳಿ. ಅಲ್ಲಿ ಬಂಡಿ ಬದಲಾವಣೆಯಾಯಿತು. ಅಲ್ಲಿಂದ ಮುಂದಿನ ಪ್ರಯಾಣ ಯಾವ ಪ್ರಸಂಗವೂ ಇಲ್ಲದೆ ಸಾಗಿತು. ಗಾಂಧಿ ಮರುದಿನ ರಾತ್ರಿ ಜೊಹಾನ್ಸ್‌ಬರ್ಗ್ ಸೇರಿದರು.

ಆ ದಿನ ರಾತ್ರಿ ಅಲ್ಲಿ ಏನನ್ನೂ ಅರಿಯದ ಅಪರಿಚಿತ ವ್ಯಕ್ತಿಯಾದ ಗಾಂಧಿ, ಗ್ರಾಂಡ್ ಹೋಟಲಿಗೆ ಹೋದರು. ಆದರೆ ಅಲ್ಲಿ ಅವರಿಗೆ ಸ್ಥಳ ಸಿಕ್ಕಲಿಲ್ಲ. ಆ ರಾತ್ರಿಯನ್ನು ಗೆಳೆಯನಾದ ಮುಸ್ಲಿಂ ವರ್ತಕನೊಬ್ಬನ ಮನೆಯಲ್ಲಿ ಕಳೆದರು. ಆ ವರ್ತಕ ಹೋಟೆಲ್ ಪ್ರಸಂಗ ಕೇಳಿ ನಕ್ಕುಬಿಟ್ಟನು. "ಇಂಥ ಸ್ಥಳದಲ್ಲಿ ನಮ್ಮಂಥವರು ಮಾತ್ರ ಜೀವಿಸಬಲ್ಲೆವು; ಏಕೆಂದರೆ, ಹಣ ಗಳಿಸಲು ನಾವು ಎಂಥ ಅಪಮಾನವನ್ನಾದರೂ ಸಹಿಸುತ್ತೇವೆ–" ಎಂದನು. ಮರುದಿನ ರೈಲಿನಲ್ಲಿ ಗಾಂಧಿ ಪ್ರಿಟೋರಿಯಾಕ್ಕೆ ಪ್ರಯಾಣ ಮಾಡಿದರು. ಅದನ್ನು ತಲುಪಿದಾಗ ಅಂದು ಭಾನುವಾರ ರಾತ್ರಿ ಎಂಟು ಗಂಟೆಯಾಗಿದ್ದಿತು. ಒಬ್ಬ ಅಮೆರಿಕನ್ ನೀಗ್ರೋ ಅವರಿಗೆ ಒಂದು ರಾತ್ರಿ ತಂಗಲು, ಜಾನ್‌ಸ್ಟನ್ ಎಂಬಾತನ 'ಕುಟುಂಬದ ಹೋಟಲ್'ನಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟನು.

ಮರುದಿನ ಬೆಳಗ್ಗೆ, ಗಾಂಧೀ, ಮಿ. ಬೇಕರ್ ಎಂಬ ತಮ್ಮ ವಕೀಲರನ್ನು ಭೇಟಿಯಾದರು. ಮಿ. ಬೇಕರ್ ಗಾಂಧೀಯನ್ನು ಹರ್ಷದಿಂದ ಸ್ವಾಗತಿಸಿ, "ಇಲ್ಲಿ ನಿಮಗೆ ನಾವು ವಕೀಲಿ ಕೆಲಸಕೊಡಲು ಏನೂ ಇಲ್ಲ. ನಾವು ಬಹಳ ಉತ್ತಮ ಸಲಹೆಗಾರರನ್ನು

ನೇಮಕ ಮಾಡಿಕೊಂಡಿದ್ದೇವೆ. ನಾನು ನಿಮ್ಮ ನೆರವನ್ನು ಅಗತ್ಯವಾದ ವಿಷಯ ಸಂಗ್ರಹ ಕಾರ್ಯಕ್ಕೆ ಮಾತ್ರ ಉಪಯೋಗಿಸಿಕೊಳ್ಳುತ್ತೇವೆ''–ಎಂದರು. ಮಿ. ಬೇಕರ್ ವಕೀಲರಾಗಿದ್ದುದರ ಜತೆಗೆ, ನಿಷ್ಠಾವಂತ ಪಾದ್ರಿಯೂ ಆಗಿದ್ದರು. ಅವರು ರೊಟ್ಟಿ ಮಾಡುವ ಬಡವನೊಬ್ಬನ ಮನೆಯಲ್ಲಿ ವಾರಕ್ಕೆ ಮೂವತ್ತೈದು ಷಿಲ್ಲಿಂಗ್‌ಗಳ ಒಪ್ಪಂದದ ಮೇಲೆ ಗಾಂಧಿಗೆ ಭೋಜನಕ್ಕೆ ಗೊತ್ತು ಮಾಡಿಕೊಟ್ಟರು. ಮಿ. ಬೇಕರ್ ಅವರು ಕೆಲವರು ಗೆಳೆಯರೊಂದಿಗೆ, ಗಾಂಧಿಯನ್ನೂ ತಮ್ಮ ಖಾಸಗೀ ಚರ್ಚಿನಲ್ಲಿ ಪ್ರಾರ್ಥನೆ ಸಲ್ಲಿಸಲು ಪ್ರತಿದಿನವೂ ಬರುವಂತೆ ಆಹ್ವಾನಿಸಿದರು. ಗಾಂಧಿ ಇದಕ್ಕೆ ಒಪ್ಪಿದರು. ಮಿ. ಬೇಕರ್ ಅವರು ಬೈಬಲ್ಲೂ ಸೇರಿದಂತೆ ಕೆಲವು ಕ್ರೈಸ್ತ ಗ್ರಂಥಗಳನ್ನು ಗಾಂಧಿಗೆ ಓದಲು ಕೊಟ್ಟರು. ಗಾಂಧಿ ಕ್ರೈಸ್ತಮತಕ್ಕೆ ಸೇರಬೇಕೆಂಬುದು ಅವರ ಅಪೇಕ್ಷೆಯಾಗಿತ್ತು.

ಮೊದಲನೆಯ ವಾರದಲ್ಲಿಯೇ, ತ್ಯಾಬ್ ಹಾಜೀಖಾನ್ ಮೊಹಮ್ಮದ್ ಅವರ ನೆರವಿನಿಂದ, ಟ್ರಾನ್ಸ್‌ವಾಲ್‌ನಲ್ಲಿದ್ದ ಭಾರತೀಯರ ಸ್ಥಿತಿಗತಿಗಳ ಬಗೆಗೆ ಚರ್ಚಿಸಲು ಪ್ರಿಟೋರಿಯಾದ ಎಲ್ಲ ಭಾರತೀಯರ ಸಭೆಯೊಂದನ್ನು ಗಾಂಧಿ ಕರೆದರು. ಆ ಮೊದಲ ಸಭೆಯಲ್ಲಿ ಬಹಳ ಮಂದಿ ಮೆಮನ್ ವರ್ತಕರೇ ಇದ್ದರು. ಎಲ್ಲೋ ಕೆಲವರು ಮಾತ್ರ ಹಿಂದೂಗಳಿದ್ದರು. ಪ್ರಿಟೋರಿಯಾದಲ್ಲಿದ್ದ ಹಿಂದೂಗಳ ಸಂಖ್ಯೆಯೇ ಕಡಮೆ.

ಅಲ್ಲಿ ಗಾಂಧಿ, ವ್ಯಾಪಾರೋದ್ಯಮದಲ್ಲಿಯೂ ಸತ್ಯಸಂಧತೆಯನ್ನು ಅನುಸರಿಸುವುದರ ವಿಷಯವಾಗಿ ಮಾತನಾಡಿದರು. ಅದರಲ್ಲಿಯೂ ವಿದೇಶದಲ್ಲಿರುವವರು ಸತ್ಯಸಂಧರಾಗಿರುವುದರ ಹೊಣೆಗಾರಿಕೆ ಬಹಳ ಹೆಚ್ಚಿನದೆಂದೂ, ಕೆಲವರೇ ಭಾರತೀಯರ ನಡವಳಿಕೆ ಅವರ ಲಕ್ಷಾಂತರ ಬಂಧುಗಳ ಮೇಲೆ ಪ್ರತಿಫಲಿತವಾಗುತ್ತದೆಂದೂ ಹೇಳಿದರು. ಹಾಗೆಯೇ ಸಾರ್ವಜನಿಕ ಆರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂದುದಲ್ಲದೆ ಹಿಂದೂಗಳು–ಮುಸಲ್ಮಾನರು, ಫಾರಸೀಗಳು ಕ್ರೈಸ್ತರೂ, ಗುಜರಾತಿಗಳು, ಮದರಾಸಿಗಳು, ಪಂಜಾಬಿಗಳು ಎಂಬ ವ್ಯತ್ಯಾಸಗಳನ್ನು ಮರೆಯುವುದರ ಅಗತ್ಯವನ್ನೂ ಒತ್ತಿ ಹೇಳಿದರು. ಭಾರತೀಯ ನೆಲಸುಗಾರರ ಪರವಾಗಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಒಂದು ಸಂಘವನ್ನು ಸ್ಥಾಪಿಸುವ ಸಲಹೆ ಮಾಡಿ, ತಮಗೆ ಸಾಧ್ಯವಾದಷ್ಟು ಕಾಲವನ್ನು ಈ ಸೇವೆಗೆ ನೀಡುವುದಾಗಿ ತಿಳಿಸಿದರು. ಈ ಆತ್ಮೀಯವಾದ ಮಾತುಕತೆ ಅವರ ಜೀವನದಲ್ಲಿ ಪ್ರಥಮ ಸಾರ್ವಜನಿಕ ಭಾಷಣವಾಗಿತ್ತು. ಆಗ ಅವರಿಗೆ ಇಪ್ಪತ್ತೈದು ವರ್ಷ ವಯಸ್ಸು.

ಆ ಸಭೆಯಲ್ಲಿ ಇಂಗ್ಲಿಷ್ ಬಲ್ಲವರು ಬಹಳ ಕಡಿಮೆ ಮಂದಿ ಇದ್ದುದನ್ನು ಗಾಂಧಿ ಗಮನಿಸಿದರು. ವಿರಾಮವಿರುವವರು ಇಂಗ್ಲಿಷ್ ಕಲಿಯಬೇಕೆಂದೂ ಅದರಿಂದ ಅವರಿಗೆ ಉಪಯೋಗವಾಗುವುದೆಂದೂ ಸಲಹೆ ಮಾಡಿದರು. ತಾವೇ ಒಂದು ತರಗತಿ ನಡೆಸುವುದಾಗಿಯೂ ಅಥವಾ ವೈಯಕ್ತಿಕವಾಗಿ ಆ ಭಾಷೆ ಕಲಿಯಲು ಅಪೇಕ್ಷಿಸುವವರಿಗೆ ತಾವೇ ಕಲಿಸುವುದಾಗಿಯೂ ತಿಳಿಸಿದರು. ಆಗ ಮೂವರು ಯುವಕರು ಕಲಿಯುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅವರ ಪೈಕಿ ಇಬ್ಬರು ಮುಸ್ಲಿಮರಿದ್ದರು: ಅವರಲ್ಲಿ

ಒಬ್ಬ ಕ್ಷೌರಿಕ, ಇನ್ನೊಬ್ಬ ಕಾರಕೂನ. ಮತ್ತೊಬ್ಬ ಹಿಂದೂ; ಅವನು ಸಣ್ಣ ಅಂಗಡಿಯನ್ನಿಟ್ಟಿದ್ದನು. ಗಾಂಧಿ ಇವರಿಗೆ ಎಂಟು ತಿಂಗಳ ಕಾಲ ಕಲಿಸಿದರು. ಅವರು ತಮ್ಮ ವ್ಯಾಪಾರಕ್ಕೆ ಅಗತ್ಯವಾದಷ್ಟು ಪ್ರಗತಿಯನ್ನು ಮಾತ್ರ ಪಡೆದರು.

ಮುಂದೆ ಗಾಂಧಿ ಇಂಥ ಸಭೆಗಳನ್ನು ಪ್ರತಿ ತಿಂಗಳೂ ತಪ್ಪದೆ ಏರ್ಪಡಿಸಿದರು. ಅವರು ಪ್ರಿಟೋರಿಯಾದಲ್ಲಿ ಇದ್ದ ಕಾಲದಲ್ಲಿ ಟ್ರಾನ್ಸ್‌ವಾಲ್ ಮತ್ತು ಆರೇಂಜ್ ಫ್ರೀ ಸ್ಟೇಟ್‌ಗಳಲ್ಲಿದ್ದ ಭಾರತೀಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಅವಕಾಶವಾಯಿತು. ಈ ಅಧ್ಯಯನದಿಂದ ಅವರಿಗೂ ಮತ್ತು ಭಾರತೀಯ ನೆಲಸುಗಾರರಿಗೂ ತುಂಬಾ ಸಹಾಯವಾಯಿತು.

೧೮೮೮ರ ವಿಶೇಷ ಶಾಸನ ಆರೇಂಜ್ ಫ್ರಿಸ್ಟೇಟ್‌ನಲ್ಲಿದ್ದ ಭಾರತೀಯರ ಎಲ್ಲ ಹಕ್ಕುಗಳನ್ನೂ ತೊಡೆದು ಹಾಕಿತ್ತು. ಅವರು ಕೇವಲ ಹೋಟಲ್ ಮಾಣಿಗಳಾಗಿಯೋ ಅಥವಾ ಅಂಥದೇ ಯಾವುದಾದರೂ ಸೇವಕ ವೃತ್ತಿಯನ್ನು ಅನುಸರಿಸಿಯೋ ಅಲ್ಲಿ ಇರಬೇಕಾಗಿತ್ತು. ವ್ಯಾಪಾರದಲ್ಲಿ ತೊಡಗಿದ್ದವರಿಗೆ ಹೆಸರಿಗೆ ಮಾತ್ರ ಪರಿಹಾರ ಕೊಟ್ಟು ಹೊರದೂಡಲಾಗುತ್ತಿತ್ತು. ಟ್ರಾನ್ಸ್‌ವಾಲ್‌ನಲ್ಲಿಯೂ ೧೮೮೫ರಲ್ಲಿ ಒಂದು ಉಗ್ರ ಶಾಸನ ಜಾರಿಗೆ ಬಂದಿತ್ತು. ಅದು ೧೮೮೬ರಲ್ಲಿ ತಿದ್ದುಪಡಿಯಾಗಿ ಟ್ರಾನ್ಸ್‌ವಾಲಿಗೆ ಪ್ರವೇಶಿಸುವ ಎಲ್ಲ ಭಾರತೀಯರೂ ಮೂರು ಪೌಂಡ್ ತಲೆಗಂದಾಯವನ್ನು ತೆರಬೇಕಾಗಿತ್ತು. ಅವರಿಗಾಗಿಯೇ ಮೀಸಲಾದ ಸ್ಥಾನಗಳಲ್ಲಿ ಹೊರತು ಬೇರೆ ಕಡೆ ಜಮೀನನ್ನು ಹೊಂದಲು ಅವಕಾಶವಿರಲಿಲ್ಲ. ವರ್ಣೀಯ ಜನಕ್ಕೆ ಆ ಶಾಸನದ ಪ್ರಕಾರ, ಮತದಾನದ ಹಕ್ಕು ಇರಲಿಲ್ಲ. ಅದು ಭಾರತೀಯರಿಗೂ ಅನ್ವಯವಾಗುತ್ತಿತ್ತು. ರಾತ್ರಿ ೯ ಗಂಟೆಯಾದ ಮೇಲೆ ರಹದಾರಿಯಿಲ್ಲದೆ ಮನೆಯಿಂದ ಹೊರಗಡೆ ಸಂಚರಿಸುವುದಕ್ಕೂ ಅವಕಾಶವಿರಲಿಲ್ಲ.

ಅನೇಕ ವೇಳೆ, ಗಾಂಧಿ, ಒಬ್ಬ ಇಂಗ್ಲಿಷ್ ಗೆಳೆಯನೊಂದಿಗೆ ಸಂಚಾರ ಹೋಗುತ್ತಿದ್ದರು. ರಾತ್ರಿ ಹತ್ತುಗಂಟೆಗೆ ಮುಂಚೆ ಮನೆಗೆ ಹಿಂದಿರುಗುವುದು ಅಪರೂಪವಾಗಿತ್ತು.ಸರಕಾರದ ವಕೀಲರು, ಗಾಂಧಿಗೊಂದು ಪತ್ರ ಬರೆದು, ಅವರು ಯಾವ ಕಾಲದಲ್ಲಾದರೂ ಪೋಲಿಸರ ಹಸ್ತಕ್ಷೇಪವಿಲ್ಲದಂತೆ ಮನೆಯಿಂದ ಹೊರಗಡೆ ಇರಬಹುದೆಂದು ಅನುಮತಿನೀಡಿದ್ದರು. ಆದರೆ, ಒಮ್ಮೆ ಅಧ್ಯಕ್ಷ ಕ್ರೂಜರ್ ಅವರ ನಿವಾಸದ ಮುಂದೆಯೇ ಪೋಲೀಸು ಕಾವಲಿನವನು ಗಾಂಧಿಗೆ ಯಾವ ಬಗೆಯ ಎಚ್ಚರಿಕೆಯನ್ನೂ ನೀಡದೆ ಅವರನ್ನು ಎಳೆದಾಡಿ ರಸ್ತೆಯತ್ತ ಒದ್ದನು. ಇದನ್ನೆಲ್ಲ ಕಣ್ಣಾರೆ ಕಂಡ ಅವರ ಆಂಗ್ಲ ಗೆಳೆಯನೊಬ್ಬ ಕಾವಲುಗಾರನ ಮೇಲೆ ಮೊಕದ್ದಮೆ ಹೂಡಬೇಕೆಂದು ಸಲಹೆ ಮಾಡಿದನು. ಆದರೆ ಗಾಂಧಿ, "ನನಗೆ ವೈಯಕ್ತಿಕವಾಗಿ ಸಂಭವಿಸುವ ಯಾವುದೇ ಅನ್ಯಾಯಗಳ ಬಗೆಗೆ ನ್ಯಾಯಾಲಯಗಳಿಗೆ ಹೋಗಬಾರದೆಂದು ನಿಯಮ ಮಾಡಿಕೊಂಡಿದ್ದೇನೆ" ಎಂದು ಸ್ಪಷ್ಟವಾಗಿ ನುಡಿದರು. ಈ ಪ್ರಸಂಗ ಭಾರತೀಯ ನೆಲಸುಗಾರರ ಸ್ಥಿತಿಗತಿಗಳ ಬಗೆಗೆ ಅವರ ಅನುಕಂಪವನ್ನು ಮತ್ತಷ್ಟು ತೀವ್ರಗೊಳಿಸಿತು. ಅವುಗಳನ್ನು ಹೇಗೆ ಉತ್ತಮಪಡಿಸಬಹುದೆಂಬ ವಿಷಯ ಹೆಚ್ಚು ಹೆಚ್ಚಾಗಿ ಅವರ ಮನಸ್ಸನ್ನು ವ್ಯಾಪಿಸಿತು.

ಸಣ್ಣ ಪುಟ್ಟ ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದ್ದುದರ ಜತೆಗೆ ಅವರು ಬೇರೆ ಬೇರೆ ಮತಧರ್ಮವನ್ನು ಅಧ್ಯಯನ ಮಾಡಿದರು. ವೆಲ್ಲಿಂಗ್‌ಟನ್‌ನಲ್ಲಿ ನಡೆದ ಮೂರು ದಿನಗಳ ಕ್ರೈಸ್ತಮೇಳಕ್ಕೆ ಹೋಗಿ, ಅನೇಕ ಕ್ರೈಸ್ತ ಪ್ರತಿನಿಧಿಗಳೊಡನೆ ಆ ಧರ್ಮವನ್ನು ಕುರಿತು ಚರ್ಚಿಸಿದರು. ಅವರೆಲ್ಲ ಗಾಂಧಿಯನ್ನು ಕ್ರೈಸ್ತ ಧರ್ಮಕ್ಕೆ ಪರಿವರ್ತಿಸಲು ಪ್ರಬಲ ಪ್ರಯತ್ನ ಮಾಡಿದರು. ಆದರೆ, ತಮ್ಮ ಧರ್ಮದ ಬಗೆಗೆ ಗಾಂಧಿಗೆ ಪೂರ್ಣ ಅರಿವು ಇಲ್ಲದಿದ್ದರೂ, ಮತಾಂತರ ಹೊಂದಲು ಅವರಿಗೆ ಯಾವ ಕಾರಣವೂ ಕಂಡು ಬರಲಿಲ್ಲ. ಕ್ರೈಸ್ತ ಗೆಳೆಯರು ಗಾಂಧಿಯನ್ನು ಮತಾಂತರಿಸಲು ಯತ್ನಿಸುತ್ತಿದ್ದ ರೀತಿಯಲ್ಲಿ ಯಲ್ಲಿಯೇ ಮುಸ್ಲಿಂ ಗೆಳೆಯರೂ ಪ್ರಯತ್ನಿಸುತ್ತಿದ್ದರು. ರಾಜಚಂದ್ರರಿಗೆ ಪತ್ರಬರೆದು ಗಾಂಧಿ ತಮ್ಮ ಈ ಕಷ್ಟವನ್ನು ವ್ಯಕ್ತಪಡಿಸಿದರು. ಅಲ್ಲದೆ ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವ ಸಲುವಾಗಿ ಭಾರತೀಯ ಮತ್ತು ಇಂಗ್ಲೆಂಡಿನಲ್ಲಿದ್ದ ತಮ್ಮ ನೆಚ್ಚಿನ ಮಿತ್ರರೊಡನೆ ಪತ್ರವ್ಯವಹಾರ ನಡೆಸಿದರು. ಅವರು ಕೊರಾನನ್ನು ಓದಿದರು. ಅವರ ಮನಸ್ಸಿನ ಮೇಲೆ ಅತ್ಯಂತ ಪ್ರಭಾವ ಬೀರಿದ ಪುಸ್ತಕ, ಟಾಲ್‌ಸ್ಟಾಯ್‌ಯವರ "ದೇವರ ರಾಜ್ಯ ನಿನ್ನಲ್ಲಿಯೇ ಇದೆ" (The Kingdom of god is within you) ಎಂಬುದು. ಅನಂತರ ಅವರು ಹೀಗೆ ಬರೆದರು: "ಒಂದು ಕಾಲದಲ್ಲಿ ನಾನು ಹಿಂಸೆಯಲ್ಲಿ ನಂಬಿಕೆ ಹೊಂದಿದ್ದೆ. ಆ ಪುಸ್ತಕದ ವಾಚನ ನನ್ನ ಸಂಶಯವನ್ನು ಪರಿಹರಿಸಿತು; ನನ್ನನ್ನು ಅಹಿಂಸೆಯಲ್ಲಿ ದೃಢವಾಗಿ ನಂಬಿಕೆಯುಳ್ಳವನನ್ನಾಗಿ ಮಾಡಿತು". ಕ್ರೈಸ್ತ ಗೆಳೆಯರು ಆಲೋಚಿಸಲು ಸಾಧ್ಯವಾಗದಿದ್ದ ದಿಸೆಯಲ್ಲಿ ಅವರ ವ್ಯಾಸಂಗ ಅವರನ್ನು ಒಯ್ದಿತು. ಅವರು ಒಂದು ವರ್ಷದಲ್ಲಿ "ಸುಮಾರು ಎಂಬತ್ತು" ಗ್ರಂಥ ಗಳನ್ನು ಓದಿದರು.

ಅವರಲ್ಲಿ ಸುಪ್ತವಾಗಿದ್ದ ಧಾರ್ಮಿಕ ಭಾವನೆ ಚೈತನ್ಯಯುತ ಶಕ್ತಿಯಾದುದು ಪ್ರಿಟೋರಿಯಾದಲ್ಲಿಯೇ. ನ್ಯಾಯಶಾಸ್ತ್ರದ ನಿರ್ವಹಣೆಯಲ್ಲಿ ಅವರಿಗೆ ಒಳ್ಳೆಯ ತಿಳು ವಳಿಕೆ ಬಂದುದು ಮತ್ತು ವಕೀಲನಾಗಿ ವಿಫಲನಾಗಬೇಕಾಗಿಲ್ಲವೆಂಬ ನಂಬಿಕೆಯುಂಟಾ ದುದು ಇಲ್ಲಿಯೇ. ತ್ಯಾಬ್ ಸೇಠ್ ಮೇಲೆ ದಾದಾ ಅಬ್ದುಲ್ಲಾ ಮಾಡಿದ್ದ ಮೊಕದ್ದಮೆ ೪೦,೦೦೦ ಪೌಂಡುಗಳ ಮೌಲ್ಯದ್ದಾಗಿದ್ದುದಲ್ಲದೆ ವ್ಯಾಪಾರೋದ್ಯಮ ವ್ಯವಹಾರದಿಂದ ಉಂಟಾಗಿದ್ದುದರಿಂದ ಲೆಕ್ಕಾಚಾರದ ಜಟಿಲತೆಯಿಂದ ಕೂಡಿದ್ದಿತು. ಎರಡು ಕಡೆ ಗಳವರೂ ಸಮರ್ಥ ವಕೀಲರನ್ನೂ ಮತ್ತು ಸಲಹೆಗಾರರನ್ನೂ ನೇಮಕ ಮಾಡಿಕೊಂಡಿ ದ್ದರು. ವಕೀಲರಿಗಾಗಿ, ಗಾಂಧಿ ಅಂಕಿ ಅಂಶಗಳನ್ನು ವಿಂಗಡಿಸಿದರು; ಮೊಕದ್ದಮೆಯಲ್ಲಿ ಗಾಢ ಆಸಕ್ತಿಯನ್ನೂ ವಹಿಸಿದರು. ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನೂ ಓದಿದರು. ಹಾಗೆಯೇ ಲೆಕ್ಕ ಬರೆಯುವ ವಿಧಾನವನ್ನು ಚೆನ್ನಾಗಿ ಕಲಿತರು. ಗುಜರಾತಿನಲ್ಲಿದ್ದ ಬಹಳ ಮಟ್ಟಿನ ಪತ್ರ ವ್ಯವಹಾರವನ್ನು ಭಾಷಾಂತರ ಮಾಡಬೇ ಕಾಗಿದ್ದುದರಿಂದ ಭಾಷಾಂತರ ಮಾಡುವ ಸಾಮರ್ಥ್ಯವನ್ನೂ ಉತ್ತಮ ಪಡಿಸಿ ಕೊಂಡರು. ಅವರು ಕಾನೂನಿನ ಕೂಲಂಕಷ ಅಧ್ಯಯನ ಮಾಡಿ, ಮೊಕದ್ದಮೆಯ ಮೇಲೆ

ಪೂರ್ಣ ಹಿಡಿತವನ್ನು ಗಳಿಸಿಕೊಂಡರು. "ಅಂಕಿ ಅಂಶಗಳು ನ್ಯಾಯದ ಮುಕ್ಕಾಲು ಭಾಗ" ಎಂಬುದು ಅವರ ಮಾರ್ಗದರ್ಶಕ ನಿಯಮವಾಯಿತು. ಮೊಕದ್ದಮೆ ಮುಂದುವರಿದರೆ, ವಾದಿ ಮತ್ತು ಪ್ರತಿವಾದಿ ಇಬ್ಬರೂ ನಾಶವಾಗುವರೆಂಬ ಅಂಶ ಅವರಿಗೆ ಅರಿವಾಯಿತು. ಆದುದರಿಂದ ತ್ಯಾಬ್‌ಸೇಠ್ ಮತ್ತು ದಾದಾ ಅಬ್ದುಲ್ಲಾ ಸೇಠ್ ಇಬ್ಬರೂ ಪಂಚಾಯಿತಿಯ ತೀರ್ಪನ್ನು ಅಂಗೀಕರಿಸಲು ಒಪ್ಪಿಸಿದರು. ಈ ಪರಿಣಾಮದಿಂದ ಇಬ್ಬರಿಗೂ ಹರ್ಷ ವಾಯಿತು. ಇಬ್ಬರೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು. ಭಿನ್ನತೆಯಿಂದ ಒಡೆದು ಹೋದ ಪಕ್ಷಗಳನ್ನು ಒಂದುಗೂಡಿಸಲು ಗಾಂಧಿ ನ್ಯಾಯವಾದಿಯಾಗಿ ಪ್ರಯ ತ್ನಿಸುತ್ತಿದ್ದರು. ಮತ್ತು ಸಾಮಾನ್ಯವಾಗಿ ಅದರಲ್ಲಿ ಯಶಸ್ಸನ್ನು ಗಳಿಸಿದರು.

೧೮೯೪ರ ಕೊನೆಗೆ ಗಾಂಧಿ ಭಾರತಕ್ಕೆ ಹಿಂದಿರುಗುವ ಉದ್ದೇಶದಿಂದ ಮತ್ತೆ ದರ್ಬಾನಿಗೆ ಹೋದರು. ಆದರೆ ಅವರ ಕಕ್ಷಿಗಾರರು ನೀಡಿದ ಬೀಳ್ಕೊಡುಗೆಯ ಸಮಾರಂಭದಲ್ಲಿ 'ನೇಟಾಲ್ ಮರ್ಕ್ಯುರಿ' ಎಂಬ ಪತ್ರಿಕೆಯನ್ನು ಓದಿ, ದಕ್ಷಿಣ ಆಫ್ರಿಕಾ ಸರಕಾರ ಭಾರತೀಯರ ಮತದಾನ ಹಕ್ಕಿನ ಹರಣಕ್ಕೆ ಒಂದು ಮಸೂದೆಯನ್ನು ಮಂಡಿಸಲಿದೆಯೆಂಬ ವಿಷಯವನ್ನು ತಿಳಿದುಕೊಂಡರು. ಇದು ಇತರ ಅನರ್ಹತಾ ಮಸೂದೆಗಳನ್ನು ತರಲು ನಾಂದಿಯೆಂದು ಅವರಿಗೆ ಅರಿವಾಯಿತು. ಅವರು ಇದನ್ನು ಕೂಡಲೇ ತಮ್ಮ ದೇಶಬಾಂಧವರ ಗಮನಕ್ಕೆ ತಂದು ಸಂಘಟಿತ ಕಾರ್ಯಕ್ರಮಕೈಗೊಳ್ಳಲು ಅವರನ್ನು ಒತ್ತಾಯಪಡಿಸಿದರು. ಆ ಮಸೂದೆಯನ್ನು ವಿರೋಧಿಸದೆ, ಪ್ರತಿಭಟಿಸದೆ ಇದ್ದರೆ. ಸರ್ವನಾಶವನ್ನು ಯಾವುದರಿಂದಲೂ ತಪ್ಪಿಸಲು ಸಾಧ್ಯವಿಲ್ಲವೆಂದು ವಿವರಿ ಸಿದರು. ಇದನ್ನು ತಿಳಿದುಕೊಂಡ ಭಾರತೀಯರು ಭಯಚಕಿತರಾದರು. ಅಬ್ದುಲ್ಲಾ ಸೇಠ್ ಹೀಗೆ ಹೇಳಿದರು:: "ಇಂಥ ವಿಷಯಗಳು ನಮಗೇನು ಅರ್ಥವಾಗುತ್ತವೆ? ನಮ್ಮ ವ್ಯಾಪಾರಕ್ಕೆ ಧಕ್ಕೆ ತಗಲುವ ವಿಷಯವಾದರೆ ನಮಗೆ ತಿಳಿಯುತ್ತದೆ. ನಿಮಗೆ ಗೊತ್ತಿರುವಂತೆ ಆರೇಂಜ್ ಫ್ರಿಸ್ಟೇಟ್‌ನಲ್ಲಿ ನಮ್ಮ ವ್ಯಾಪಾರವೆಲ್ಲ ನಿರ್ನಾಮವಾಗಿದೆ. ಅದಕ್ಕಾಗಿ ನಾವು ಚಳವಳಿ ಮಾಡಿದೆವು: ಏನೂ ಪ್ರಯೋಜನವಾಗಲಿಲ್ಲ. ನಾವು ಎಷ್ಟಾ ದರೂ ಸಾಮಾನ್ಯರು. ಅನಕ್ಷರಸ್ಥರು. ಇಲ್ಲಿನ ಐರೋಪ್ಯ ವಕೀಲರೇ ನಮ್ಮ ಕಣ್ಣು ಮತ್ತು ಕಿವಿ".

ಗಾಂಧಿ, ಅಬ್ದುಲ್ಲಾ ಸೇಠರನ್ನು ಕುರಿತು ಹೀಗೆ ಹೇಳಿದರು: "ನಮ್ಮ ಶವಪೆಟ್ಟಿಗೆಗೆ ಈ ಮಸೂದೆಯೆ ಮೊದಲನೆಯ ಮೊಳೆ. ಇದು ನಮ್ಮ ಆತ್ಮಗೌರವದ ಬುಡವನ್ನೇ ಕತ್ತರಿಸುತ್ತದೆ". ಅತಿಥಿಗಳಲ್ಲಿ ಒಬ್ಬರು ಗಾಂಧೀಗೆ ಹೇಳಿದರು. "ಈ ಹಡಗಿನಲ್ಲಿ ನೀವು ಮಾಡಬೇಕಾಗಿರುವ ಪ್ರಯಾಣವನ್ನು ರದ್ದು ಮಾಡಿರಿ; ಒಂದು ತಿಂಗಳುಕಾಲ ಇಲ್ಲೇ ನಿಲ್ಲಿರಿ; ನೀವು ಮಾರ್ಗ ತೋರಿಸಿದಂತೆ ನಾವು ಹೋರಾಡುತ್ತೇವೆ". ಉಳಿದ ಎಲ್ಲರೂ ಇದನ್ನೇ ಅನುಮೋದಿಸಿದರು: "ಇದು ಸರಿ, ಸರಿ: ಅಬ್ದುಲ್ಲಾ ಸೇಠ್ ನೀವು ಗಾಂಧೀ ಯನ್ನು ಇಲ್ಲೇ ಉಳಿಸಿಕೊಳ್ಳಬೇಕು." ಅಬ್ದುಲ್ಲಾ ಸೇಠ್ ಉತ್ತರವಿತ್ತರು: "ಗಾಂಧೀ ಇಲ್ಲೇ ಉಳಿಯುವಂತೆ ನಾವು ಒಪ್ಪಿಸೋಣ. ಅವರ ಶುಲ್ಕದ ವಿಷಯ ಏನೆನ್ನುವಿರಿ?".

ಇದನ್ನು ಕೇಳಿಗೆ ಗಾಂಧಿಗೆ ನೋವಾಯಿತು. ಅವರು ಮಧ್ಯೆ ಮಾತನಾಡಿದರು; "ಶುಲ್ಕದ ಪ್ರಶ್ನೆಯೇ ಇಲ್ಲ. ಸಾರ್ವಜನಿಕ ಕಾರ್ಯಕ್ಕೆ ಶುಲ್ಕವೆಂಬುದಿಲ್ಲ. ನಾನು ಇರಲೇ ಬೇಕಾದರೆ, ನಿಮ್ಮ ಸೇವಕನಂತೆ ಇರಬಲ್ಲೆ. ನಾನು ಇನ್ನೊಂದು ತಿಂಗಳು ಕಾಲ ಇರಲು ಸಿದ್ಧನಾಗಿದ್ದೇನೆ, ಆದರೆ, ಒಂದು ವಿಚಾರವಿದೆ. ನೀವು ನನಗೆ ಏನನ್ನೂ ಕೊಡುವ ಅಗತ್ಯವಿಲ್ಲ. ಆದರೆ ಈಗ ನಾವು ಉದ್ದೇಶಿಸಿರುವ ಕಾರ್ಯವನ್ನು ಸ್ವಲ್ಪ ಹಣವಿಲ್ಲದೆ ನಿರ್ವಹಿಸಲು ಸಾಧ್ಯವಿಲ್ಲ. ಈ ಕಾರ್ಯಕ್ಕೆ ಒಬ್ಬ ವ್ಯಕ್ತಿ ಸಮರ್ಥನಲ್ಲವೆಂಬುದು ಸ್ಪಷ್ಟ. ಅನೇಕರು ಅವನಿಗೆ ಸಹಾಯ ಮಾಡಲು ಮುಂದೆ ಬರಲೇಬೇಕು."

ಈ ಮಾತಿಗೆ ಅನುಮೋದನೆ ಇತ್ತರು. "ಅಲ್ಲಾ ಮಹಾಮಹಿಮ; ಅವನು ಕರುಣಾಳು. ಹಣ ಬರುತ್ತದೆ. ಜನರೋ, ನೀವು ಕೇಳಿದಷ್ಟು ಜನ ಬರುತ್ತಾರೆ. ನೀವು ದಯಮಾಡಿ ಇಲ್ಲಿ ಉಳಿಯಲು ಒಪ್ಪಿಕೊಳ್ಳಿ. ಎಲ್ಲಾ ಸರಿಹೋಗುತ್ತದೆ."

ಮನಸ್ಸಿನಲ್ಲಿಯೇ ಗಾಂಧಿ ತ್ವರಿತವಾಗಿ ಒಂದು ಕಾರ್ಯಕ್ರಮವನ್ನು ತಯಾರಿಸಿದರು; ಒಂದು ತಿಂಗಳು ಕಾಲ ಅಲ್ಲಿ ಉಳಿಯಲು ನಿರ್ಧರಿಸಿದರು.

ಕತ್ತಲನಾಡಿಗೆ ಮುಂಬೆಳಗು

೧೮೯೪–೯೬

ಬೀಳ್ಕೊಡುಗೆಯ ಭೋಜನ ಮುಗಿದ ಕೂಡಲೇ, ಗಾಂಧಿ, ದರ್ಬಾನಿನ ಪ್ರಮುಖರೊಡನೆ ದಾದಾ ಅಬ್ದುಲ್ಲಾ ಅವರ ಮನೆಗೆ ಹೋದರು. ಅದೇ ದಿನ ರಾತ್ರಿ, ನೇಟಾಲ್ ಶಾಸನ ಸಭೆಗೆ ಸಲ್ಲಿಸುವ ಸಲುವಾಗಿ ಒಂದು ಮನವಿ ಪತ್ರವನ್ನು ತಯಾರಿಸಿದರು. ೧೮೯೪ರ ವರೆಗೂ ಭಾರತೀಯರೂ ಐರೋಪ್ಯರಂತೆಯೇ ಮತ ನೀಡುವ ಸಮಾನ ಹಕ್ಕನ್ನು ಹೊಂದಿದ್ದರು. ನೇಟಾಲ್ ವಸಾಹತುವಿನ ಸಾರ್ವತ್ರಿಕ ಮತದಾನ ಶಾಸನದ ಪ್ರಕಾರವಾಗಿ, ಬ್ರಿಟಿಷ್ ಪ್ರಜೆಗಳಾಗಿದ್ದ ಪ್ರತಿಯೊಬ್ಬ ಪ್ರಾಪ್ತ ವಯಸ್ಕನೂ, ಮತದಾರರ ಪಟ್ಟಿಯಲ್ಲಿ ದಾಖಲಾಗುತ್ತಿದ್ದನು. ಅವನು ೫೦ ಪೌಂಡುಗಳ ಸ್ಥಿರ ಆಸ್ತಿಯನ್ನು ಹೊಂದಿರಬೇಕಾಗಿತ್ತು. ಅಥವಾ ೧೦ ಪೌಂಡುಗಳ ತೆರಿಗೆಯನ್ನು ನೀಡುವವನಾಗಿರಬೇಕಾಗಿತ್ತು. ನೇಟಾಲಿನಲ್ಲಿ ಭಾರತೀಯ ಜನ ಸಮುದಾಯದಿಂದ ಅಂಥ ೨೫೦ ಮಂದಿ ಮತದಾರರು ಮಾತ್ರ ಇದ್ದರು; ಐರೋಪ್ಯದಲ್ಲಿರಲ್ಲಿ ೧೦,೦೦೦ ಮಂದಿ ಮತದಾರರಿದ್ದರು. ಈಗ, ಜನಾಂಗದ ಕಾರಣವನ್ನೊಡ್ಡಿ, ಈ ಮತದಾನದ ಹಕ್ಕನ್ನು ತೆಗೆದು ಹಾಕುವ ಪ್ರಯತ್ನ ನಡೆದಿದ್ದಿತು.

ಮನವಿ ಪತ್ರವನ್ನು ಗಾಂಧಿ "ಪ್ರಭಾವ ಯುಕ್ತವಾಗಿಯೂ, ಸೌಮ್ಯವಾಗಿಯೂ ಮತ್ತು ವ್ಯವಸ್ಥಿತವಾಗಿಯೂ" ತಯಾರಿಸಿದರು. ತತ್‌ಕ್ಷಣವೇ ಪ್ರಭಾವಶಾಲಿ ವರ್ತಕರಾಗಿದ್ದ ಹಾಜಿ ಆದಂ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅವರ ಹೆಸರಿನಲ್ಲಿ ಶಾಸನಸಭೆಯ ಅಧ್ಯಕ್ಷರಿಗೆ ಒಂದು ತಾರನ್ನು ಕಳಿಸಿ, ಮಸೂದೆಯ ಬಗೆಗೆ ಚರ್ಚೆಯನ್ನು ಮುಂದೂಡಬೇಕೆಂದು ಕೇಳಿಕೊಳ್ಳಲಾಯಿತು. ಅಂಥದೇ ತಾರನ್ನು ನೇಟಾಲಿನ ಪ್ರಧಾನಿಗೂ ಕಳಿಸಲಾಯಿತು. ಮಸೂದೆಯ ದ್ವಿತೀಯ ಪಠನ ಆಗಲೇ ಅಂಗೀಕೃತವಾಗಿತ್ತು, ಅಥವಾ ಇನ್ನೇನು ಆಗುವುದರಲ್ಲಿತ್ತು. ಈ ಕಠೋರ ಮಸೂದೆಯ ಬಗೆಗೆ ಭಾರತೀಯರು ಯಾವ ಪ್ರತಿಭಟನೆಯನ್ನೂ ವ್ಯಕ್ತಪಡಿಸದೆ ಇದ್ದುದು ಮತದಾನ ಹಕ್ಕನ್ನು ಹೊಂದಲು ಅವರು ಅನರ್ಹರೆಂಬುದಕ್ಕೆ ಸಾಕ್ಷಿ ಎಂದು ವಾದಿಸಲಾಗಿದ್ದಿತು. ತಾರನ್ನು ಕಳಿಸಿದುದರ ಪರಿಣಾಮವಾಗಿ, ಮಸೂದೆಯ ಮುಂದಿನ ಪಠನವನ್ನು ಎರಡು ದಿನಗಳ ಕಾಲ ಮುಂದಕ್ಕೆ ಹಾಕಲಾಯಿತು.

೧೮೯೪ರ ಜೂನ್ ೨೮ರಂದು ಸಲ್ಲಿಸಲಾದ ಮನವಿ ಪತ್ರವೇ ಭಾರತೀಯರು ದಕ್ಷಿಣ ಆಫ್ರಿಕಾ ಶಾಸನಸಭೆಗೆ ಕಳಿಸಿದ ಪ್ರಪ್ರಥಮ ಪತ್ರವಾಗಿತ್ತು.

ಎಂದೂ ಸಾರ್ವಜನಿಕ ಕಾರ್ಯವನ್ನು ಮಾಡದಿದ್ದ ಯುವಕರನ್ನು ಆ ಕೆಲಸಕ್ಕೆ

ನೇಮಕ ಮಾಡಿಕೊಳ್ಳಲಾಯಿತು. ಅನೇಕ ಕ್ರೈಸ್ತ ಯುವಕರು ಪ್ರಥಮ ಬಾರಿಗೆ ಒಟ್ಟಿಗೆ ಸೇರಿದಂತಾಯಿತು. ಇಂಗ್ಲಿಷ್ ಜ್ಞಾನವಿದ್ದ ಸ್ವಯಂಸೇವಕರು ಮತ್ತು ಇತರರು ರಾತ್ರಿಯೆಲ್ಲ ಕುಳಿತು ಮನವಿ ಪತ್ರದ ಪ್ರತಿಗಳನ್ನು ತಯಾರಿಸಿದರು. ವರ್ತಕ ಸ್ವಯಂ ಸೇವಕರು ತಮ್ಮ ಸ್ವಂತ ವಾಹನಗಳಲ್ಲಿ ಸಂಚರಿಸಿ, ಸಹಿಗಳನ್ನು ಸಂಗ್ರಹಿಸಿದರು. ಇದೆಲ್ಲವನ್ನೂ ರಾತ್ರಿ ಕಾಲದಲ್ಲಿಯೇ ಮಾಡಬೇಕಾಗಿದ್ದಿತು. ಮರುದಿನ ವೃತ್ತಪತ್ರಿಕೆಗಳು ಮನವಿಪತ್ರವನ್ನು ಪ್ರಕಟಿಸಿ, ಪ್ರೋತ್ಸಾಹಕರ ಟಿಪ್ಪಣಿಯನ್ನಿತ್ತವು. ಅದು ಶಾಸನಸಭೆಯಲ್ಲಿ ಪ್ರಭಾವವನ್ನು ಬೀರಿತು. ಆದರೂ ಮಸೂದೆ ಅಂಗೀಕೃತವಾಯಿತು.

ಗಾಂಧಿ ದಕ್ಷಿಣ ಆಫ್ರಿಕಾದ ವಿದ್ಯಮಾನಗಳನ್ನು ದಾದಾಭಾಯಿ ನವರೋಜಿ ಅವರಿಗೆ ತಿಳಿಸುತ್ತಿದ್ದರು. ಹೀಗೆ ವಿನೀತ ಭಾವದಿಂದ ಬರೆದರು: "ನಾನಿನ್ನೂ ಅನನುಭವಿ ಮತ್ತು ಯುವಕ; ಆದುದರಿಂದ ತಪ್ಪು ಮಾಡಲು ಸಾಧ್ಯ. ಇಲ್ಲಿ ನಾನು ಹೊತ್ತುಕೊಂಡಿರುವ ಹೊಣೆ ನನ್ನ ಸಾಮರ್ಥ್ಯಕ್ಕೆ ಮೀರಿದುದು. ನೀವು ದಯಮಾಡಿ ಮಾರ್ಗದರ್ಶನ ಮಾಡಿ, ಅಗತ್ಯ ಸಲಹೆಗಳನ್ನು ನೀಡಿದರೆ, ನನಗೆ ತುಂಬ ಉಪಕಾರ ಮಾಡಿದಂತೆ ಆಗುತ್ತದೆ. ನಾನು ಅದನ್ನು ಮಗ ತಂದೆಯಿಂದ ಸ್ವೀಕರಿಸುವಂತೆ ಸ್ವೀಕರಿಸುತ್ತೇನೆ".

ಇಂಥ ಚಳವಳಿ ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಪ್ರಥಮ ಅನುಭವವಾಗಿದ್ದಿತು. ಜನ ಸಮುದಾಯದಲ್ಲಿ ಹೊಸದೊಂದು ಉತ್ಸಾಹ ಉಕ್ಕೇರಿತು. ತಾವೆಲ್ಲ ಒಂದು ಮತ್ತು ಅವಿಭಾಜ್ಯರು ಎಂಬ ನಂಬಿಕೆ ಅವರಲ್ಲಿ ಜನಿಸಿತು. ವಸಾಹತುಗಳ ಕಾರ್ಯದರ್ಶಿಯಾಗಿದ್ದ ಲಾರ್ಡ್ ರಿಪ್ಪನ್‌ನಿಗೆ ಒಂದು ಬೃಹತ್ ಮನವಿ ಪತ್ರವನ್ನು ಸಲ್ಲಿಸುವ ನಿರ್ಧಾರ ಮಾಡಲಾಯಿತು. ಆ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ಸಾಹಿತ್ಯವನ್ನೂ ಗಾಂಧಿ ವ್ಯಾಸಂಗ ಮಾಡಿದರು. ಅವರು ಹೀಗೆ ವಾದಿಸಿದರು: "ಭಾರತದಲ್ಲಿ ನಮಗೆ ಇರುವಂಥ ಮತದಾನದ ಹಕ್ಕು ನೇಟಾಲಿನಲ್ಲಿಯೂ ನಮಗಿದೆ. ಅದನ್ನು ರಕ್ಷಿಸಿಕೊಳ್ಳುವುದು ಇಂದು ಅಗತ್ಯವಾಗಿದೆ; ಏಕೆಂದರೆ, ಮತದಾನದ ಹಕ್ಕನ್ನು ಉಪಯೋಗಿಸುವ ಭಾರತೀಯರ ಸಂಖ್ಯೆ ಇಲ್ಲಿ ಅತ್ಯಂತ ಕಡಿಮೆ ಇದೆ".

ಇಡೀ ಪ್ರಾಂತದಲ್ಲಿದ್ದ ಎಲ್ಲ ಭಾರತೀಯರ ಅಗಾಧ ಸಂಖ್ಯೆಯ ಸಹಿ ಸಂಗ್ರಹಿಸುವುದು ಸುಲಭವಾದ ಕಾರ್ಯವಾಗಿರಲಿಲ್ಲ. ಪ್ರತಿದಿನವೂ ಸಭೆಗಳು ನಡೆಯುತ್ತಿದ್ದುವು. ಹೆಚ್ಚು ಹೆಚ್ಚು ಜನ ಸೇರುತ್ತಿದ್ದರು. ಅಗತ್ಯವಾದ ನಿಧಿಯನ್ನು ಕೂಡಿಸಲಾಯಿತು. ಅನೇಕ ಮಂದಿ ಸ್ವಯಂ ಸೇವಕರು ಪ್ರತಿಗಳನ್ನು ತಯಾರಿಸುವುದಕ್ಕೂ ಸಹಿ ಸಂಗ್ರಹಿಸುವುದಕ್ಕೂ ಮತ್ತು ಇತರ ಕೆಲಸಗಳನ್ನು ಮಾಡುವುದಕ್ಕೂ ಯಾವ ಪ್ರತಿಫಲವನ್ನೂ ತೆಗೆದುಕೊಳ್ಳದೆ ನೆರವಾದರು. ಹಿಂದೆ ಕರಾರುಬದ್ಧರಾಗಿದ್ದ ಭಾರತೀಯರ ವಂಶಜರು ಉತ್ಸಾಹಭರಿತರಾಗಿ ಚಳುವಳಿಯನ್ನು ಸೇರಿದರು. ಒಂದು ತಿಂಗಳೊಳಗೆ ಹತ್ತು ಸಾವಿರ ಸಹಿಗಳುಳ್ಳ, ೧೮೯೪ ಜುಲೈ ೧೭ರ ಮನವಿ ಪತ್ರವನ್ನು ಲಾರ್ಡ್ ರಿಪ್ಪನ್‌ನಿಗೆ ಕಳಿಸಲಾಯಿತು. ಶಾಸನವನ್ನು ಅಂಗೀಕರಿಸದಿರಲು ಸಾಮ್ರಾಜ್ಞಿಗೆ ಸಿಫಾರಸು ಮಾಡಬೇಕೆಂದು ಪ್ರಾರ್ಥಿಸಲಾಗಿದ್ದಿತು. ಒಂದು ಸಾವಿರ ಪ್ರತಿಗಳನ್ನು ಅಚ್ಚು ಮಾಡಿಸಿ

ಹಂಚಲಾಯಿತು. ಈ ತೀವ್ರ ಚಳವಳಿ ಭಾರತದ ಜನತೆಗೆ ನೇಟಾಲಿನ ಸ್ಥಿತಿಗತಿಗಳನ್ನು ಮೊದಲ ಬಾರಿಗೆ ಪರಿಚಯ ಮಾಡಿಕೊಟ್ಟಿತು. ಟೈಂಸ್ ಪತ್ರಿಕೆಯೂ ಭಾರತೀಯರ ಬೇಡಿಕೆಗೆ ಬೆಂಬಲ ನೀಡಿತು.

ಭಾರತಕ್ಕೆ ಹಿಂದಿರುಗಲು ಅವಕಾಶಕೊಡಬೇಕೆಂದು ಗಾಂಧಿ, ಭಾರತೀಯ ಮಿತ್ರರನ್ನು ಕೇಳಿದರು. ಆದರೆ ಮಿತ್ರರು ಹೀಗೆ ವಾದಮಾಡಿದರು: "ನಮ್ಮ ಮನವಿ ಪತ್ರಕ್ಕೆ ವಸಾಹತು ಕಾರ್ಯದರ್ಶಿ ಅನುಕೂಲವಾದ ಉತ್ತರವನ್ನು ಕಳಿಸುವರೋ ಇಲ್ಲವೋ ಯಾರಿಗೆ ಗೊತ್ತು? ನೀವು ನಮ್ಮ ಉತ್ಸಾಹವನ್ನು ನೋಡಿದಿರಿ. ನಾವು ಕೆಲಸ ಮಾಡಲು ಮನಃಪೂರ್ವಕವಾಗಿ ಸಿದ್ಧರಿದ್ದೇವೆ. ನಮ್ಮಲ್ಲಿ ನಿಧಿಯೂ ಇದೆ. ಆದರೆ ಒಬ್ಬ ಮಾರ್ಗದರ್ಶಕರಿಲ್ಲವಾದರೆ, ಈವರೆಗೆ ಮಾಡಿದುದೆಲ್ಲ ನಿಷ್ಪ್ರಯೋಜಕವಾಗುತ್ತದೆ". ಈ ವಾದ ಗಾಂಧಿಗೆ ಹಿಡಿಸಿತು. ಆದರೆ ಅವರು ತಮ್ಮ ತೊಂದರೆಗಳನ್ನು ಸ್ಪಷ್ಟವಾಗಿ ತಿಳಿಸಿದರು. ಅವರು ಸಾರ್ವಜನಿಕ ಹಣದಿಂದ ಜೀವಿಸಲು ಇಚ್ಛಿಸಲಿಲ್ಲ. ಅಂದಿನ ಅವರ ಅಭಿಪ್ರಾಯದಂತೆ, ಬ್ಯಾರಿಸ್ಟರ್‌ಗಳು ಸೂಕ್ತವಾದ ಮಟ್ಟದಲ್ಲಿ ಬಾಳದಿದ್ದರೆ, ಅದರಿಂದ ಸಮಾಜದಲ್ಲಿ ಗೌರವ ಬರಲಾರದೆಂದು ನಂಬಿದ್ದರು. ಅದಕ್ಕೆ ಕನಿಷ್ಠಪಕ್ಷ ವರ್ಷಕ್ಕೆ ೨೦೦ ಪೌಂಡುಗಳ ಅಗತ್ಯವಿತ್ತು. ಪ್ರಮುಖ ವ್ಯಾಪಾರಗಾರರು ಒಂದು ವರ್ಷದವರೆಗಾದರೂ ನ್ಯಾಯವಾದದ ಕೆಲಸ ಗೊತ್ತುಮಾಡಿ ಅದಕ್ಕೆ ಮುಂಗಡ ರುಸುಂ ಕೊಡುವುದಾದರೆ ತಾವು ನಿಲ್ಲಲು ಸಿದ್ಧವಿರುವುದಾಗಿ ಹೇಳಿದರು. ಇಪ್ಪತ್ತು ವರ್ತಕರು ಗಾಂಧಿ ಮಾಡಿದ ಸಲಹೆಯನ್ನು ಅಂಗೀಕರಿಸಿದರು.

ನೇಟಾಲಿನ ಶ್ರೇಷ್ಠ ನ್ಯಾಯಸ್ಥಾನದಲ್ಲಿ ವಕೀಲರಾಗಿ ದಾಖಲಾಗಲು ಗಾಂಧಿ ಅರ್ಜಿ ಸಲ್ಲಿಸಿದರು. ನೇಟಾಲ್ ನ್ಯಾಯವಾದಿಗಳ ಸಂಘ, ವರ್ಣಭಾವನೆಯ ಕಾರಣದಿಂದ ಅದನ್ನು ವಿರೋಧಿಸಿತು. ಆದರೆ ಶ್ರೇಷ್ಠ ನ್ಯಾಯಸ್ಥಾನ ಆಕ್ಷೇಪವನ್ನು ತಳ್ಳಿ ಹಾಕಿತು. ಗಾಂಧಿ ವಕೀಲರಾಗಿ ದಾಖಲಾದರು. ಅವರು ಪ್ರಮಾಣ ವಚನವನ್ನು ತೆಗೆದುಕೊಂಡ ಮೇಲೆ, ಶ್ರೇಷ್ಠ ನ್ಯಾಯಾಧೀಶ ವಾಗ್ದಂಡನೆ ಮಾಡಿ, ರುಮಾಲನ್ನು ತೆಗೆಯಬೇಕೆಂದೂ, ಇತರ ಬ್ಯಾರಿಸ್ಟರ್‌ಗಳಂತೆ ಉಡುಪಿನಲ್ಲಿ ವಿಷಯದಲ್ಲಿ ನಿಯಮವನ್ನು ಅನುಸರಿಸಬೇಕೆಂದೂ ಸೂಚಿಸಿದನು. ಗಾಂಧಿ ಇನ್ನೂ ದೊಡ್ಡ ಹೋರಾಟಗಳನ್ನು ನಡೆಸುವ ಸಲುವಾಗಿ, ಶಕ್ತಿ ಸಂವರ್ಧನ ಮಾಡಿಕೊಳ್ಳಲು ಈ ಷರತ್ತಿಗೆ ಒಪ್ಪಿದರು. ನ್ಯಾಯವಾದಿಗಳ ಸಂಘ ವಿರೋಧಿಸಿದುದು ಗಾಂಧಿಗೆ ಮತ್ತಷ್ಟು ಪ್ರಾಮುಖ್ಯ ಬಂದಂತಾಯಿತು. ಪತ್ರಿಕೆಗಳ ಟೀಕೆ ಗಾಂಧಿಗೆ ಅನುಕೂಲಕರವಾಗಿತ್ತು. ನ್ಯಾಯವಾದಿಗಳ ಸಂಘ ಅಸೂಯೆಯಿಂದ ಕೂಡಿದ್ದೆಂದು ಆಪಾದಿಸಲಾಗಿತ್ತು.

ವಕೀಲನ ಕೆಲಸ, ಗಾಂಧಿಗೆ, ಉಪವೃತ್ತಿಯಾಗಿತ್ತು; ಅವರ ಪ್ರಧಾನ ಉದ್ವೇಶ ಸಾರ್ವಜನಿಕ ಕಾರ್ಯ. ಮನವಿ ಪತ್ರವನ್ನು ಕಳಿಸಿದುದಷ್ಟೇ ಸಾಕಾಗಿರಲಿಲ್ಲ. ಆದುದರಿಂದ ಭಾರತೀಯರ ಹಿತಾಸಕ್ತಿಗಳನ್ನು ಎಚ್ಚರಿಕೆಯಿಂದ ವೀಕ್ಷಿಸಲು ಒಂದು ಕಾಯಂ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಗಾಂಧಿ ಸೂಚಿಸಿದರು. ಅವರು ಭಾರತ ರಾಷ್ಟ್ರೀಯ

ಕಾಂಗ್ರೆಸಿನ ವಿಷಯವಾಗಿ ಓದಿದ್ದರೂ ಅದರ ಅಧಿವೇಶನಕ್ಕೆ ಎಂದೂ ಹೋಗಿರಲಿಲ್ಲ. ಇತ್ತೀಚೆಗೆ ೧೮೯೩ರಲ್ಲಿ ಲಾಹೋರಿನಲ್ಲಿ ನಡೆದಿದ್ದ ಅಧಿವೇಶನಕ್ಕೆ ದಾದಾಭಾಯಿ ನವ ರೋಜಿ ಅಧ್ಯಕ್ಷತೆ ವಹಿಸಿದ್ದರು. ಅವರು ಆ ಉದ್ದೇಶಕ್ಕಾಗಿಯೇ ಲಂಡನ್ನಿನಿಂದ ಬಂದಿದ್ದರು. ಗಾಂಧಿ, ನವರೋಜಿಯವರನ್ನೂ ಅವರಿಂದ ಕಾಂಗ್ರೆಸ್ಸನ್ನೂ ಮೆಚ್ಚಿ ಕೊಂಡಿದ್ದರು. ಅವರು ಆ ಹೆಸರನ್ನು ಜನಪ್ರಿಯಗೊಳಿಸಲು ಅಪೇಕ್ಷಿಸಿದರು. ಆದು ದರಿಂದ ನೇಟಾಲ್ ಭಾರತೀಯರ ಸಂಘವನ್ನು "ನೇಟಾಲ್ ಇಂಡಿಯನ್ ಕಾಂಗ್ರೆಸ್" ಎಂದು ಕರೆಯಲು ಸೂಚಿಸಿದರು.

೧೮೯೪ರ ಆಗಸ್ಟ್ ೨೨ರಂದು 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಸ್ಥಾಪಿತ ವಾಯಿತು. ಆ ದಿನ ದಾದಾ ಅಬ್ದುಲ್ಲಾ ಅವರ ವಿಶಾಲವಾದ ನಿವಾಸ ಜನಭರಿತವಾಗಿತ್ತು. ಮಿ. ಅಬ್ದುಲ್ಲಾ ಹಾಜೀ ಆದಂ ಅಧ್ಯಕ್ಷರಾಗಿ ಆಯ್ಕೆಯಾದರು. ಗಾಂಧಿ ಗೌರವ ಕಾರ್ಯ ದರ್ಶಿಯಾದರು. ಭಾರತದ ಕಾಂಗ್ರೆಸ್ಸಿಗೂ ನೇಟಾಲಿನ ಕಾಂಗ್ರೆಸ್ಸಿಗೂ ಒಂದು ವ್ಯತ್ಯಾಸ ವಿದ್ದಿತು. ನೇಟಾಲ್ ಕಾಂಗ್ರೆಸ್ ವರ್ಷವೆಲ್ಲ ಕಾರ್ಯನಿರತವಾಗಿತ್ತು. ಕಡೆಯ ಪಕ್ಷ ೩ ಪೌಂಡ್ ವಾರ್ಷಿಕ ಚಂದಾ ಇತ್ತವರು ಸದಸ್ಯರೆಂದು ದಾಖಲಾದರು. ಇಬ್ಬರೇ ಇಬ್ಬರು ವಾರ್ಷಿಕ ಚಂದಾ ೨೪ ಪೌಂಡ್ ಕೊಡುವವರಿದ್ದರು. ಗಾಂಧಿ ೧೨ ಪೌಂಡ್ ವಾರ್ಷಿಕ ಚಂದಾ ಕೊಡುತ್ತಿದ್ದರು. ಸುಮಾರು ೨೦೦ ಮಂದಿ ಹಿಂದೂಗಳು, ಮುಸ್ಲಿಮರು, ಫಾರಸೀಗಳು ಮತ್ತು ಕ್ರೈಸ್ತರು– ಒಂದೇ ತಿಂಗಳಲ್ಲಿ ದಾಖಲಾದರು. ಶ್ರೀಮಂತವರ್ತಕರು ತೀರ ದೂರದ ಹಳ್ಳಿಬಗಳಿಗೂ ಭೇಟಿಯಿತ್ತು ಹೊಸ ಸದಸ್ಯರನ್ನು ದಾಖಲು ಮಾಡಿ ಕೊಂಡರು. ಕೆಲವು ಸಂದರ್ಭಗಳಲ್ಲಿ ಒತ್ತಾಯ ಅಗತ್ಯವಾಗಿತ್ತು. ಆದರೆ ಅದು ಒಂದು ಬಗೆಯ ರಾಜಕೀಯ ತರಬೇತಿಯಾಗಿತ್ತು. ಜನಕ್ಕೆ ಪರಿಸ್ಥಿತಿಯ ಪರಿಚಯವಾಯಿತು. ಕಡೆಯ ಪಕ್ಷತಿಂಗಳಿಗೊಮ್ಮೆಯಾದರೂ ಕಾಂಗ್ರೆಸ್ ಸಭೆ ಸೇರುತ್ತಿತ್ತು. ಲೆಕ್ಕಪತ್ರಗಳ ವಿವರ ಅಂಗೀಕೃತವಾಗುತ್ತಿತ್ತು. ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಹೊಸ ವಿಷಯಗಳು ಚರ್ಚೆಯಾಗುತ್ತಿದ್ದುವು.

ಲಾರ್ಡ್ ರಿಪ್ಪನ್ ಮತದಾನ ಹಕ್ಕನ್ನು ಹರಣ ಮಾಡುವ ಮಸೂದೆಯನ್ನು ತಳ್ಳಿ ಹಾಕಿದರೆಂದು ವಾರ್ತೆ ಬಂದಿತು. ಇದು ಭಾರತೀಯರ ಉತ್ಸಾಹವನ್ನು ಇಮ್ಮಡಿ ಗೊಳಿಸಿತು. ಈಗ ಗಾಂಧಿ ಆಂತರಿಕ ಬೆಳವಣಿಗೆಯ ಪ್ರಶ್ನೆಯನ್ನು ತೆಗೆದುಕೊಂಡರು. ನೇಟಾಲ್ ಕಾಂಗ್ರೆಸ್ಸಿನ ಸಭೆಗಳಲ್ಲಿ ಗೃಹ ನೈರ್ಮಲ್ಯ, ವೈಯಕ್ತಿಕ ಶುಚಿತ್ವ, ವ್ಯಾಪಾರಕ್ಕೂ ಮತ್ತು ವಾಸಕ್ಕೂ ಪ್ರತ್ಯೇಕ ಸ್ಥಳಗಳ ಅಗತ್ಯತೆ, ಶ್ರೀಮಂತ ವರ್ತಕರು ತಮ್ಮ ಅಂತಸ್ತಿಗೆ ತಕ್ಕಂತೆ ವಾಸಿಸುವುದು ಇತ್ಯಾದಿ ವಿಷಯಗಳ ಮೇಲೆ ಉಪನ್ಯಾಸ ನಡೆಯುತ್ತಿದ್ದುವು. ಮೆಮನ್ ಗುಜರಾತಿಗಳೇ ಹೆಚ್ಚು ಸಂಖ್ಯೆಯಲ್ಲಿ ಇದ್ದುದರಿಂದ ಕಾರ್ಯಕಲಾಪಗಳು ಗುಜರಾತಿಯಲ್ಲಿ ನಡೆಯುತ್ತಿದ್ದುವು. ನೇಟಾಲ್ ಕಾಂಗ್ರೆಸ್ಸಿನ ಆಶ್ರಯದಲ್ಲಿ ಯುವಕ ಭಾರತೀಯರ ಅನುಕೂಲಕ್ಕಾಗಿ "ನೇಟಾಲ್ ಭಾರತೀಯ ಶಿಕ್ಷಣ ಸಂಘ" ಸ್ಥಾಪಿತ ವಾಯಿತು. ಆ ಯುವಕರು ಕರಾರುಬದ್ಧ ಕಾರ್ಮಿಕರಾಗಿದ್ದವರ ಮಕ್ಕಳಾಗಿದ್ದು,

ನೇಟಾಲಿನಲ್ಲಿ ಜನಿಸಿದ್ದುದರಿಂದ ಇಂಗ್ಲಿಷ್ ಆಡಬಲ್ಲವರಾಗಿದ್ದರು. ಅವರ ಸದಸ್ಯರು ನಾಮಮಾತ್ರದ ಶುಲ್ಕವನ್ನು ಕೊಡುತ್ತಿದ್ದರು. ಸಂಘದ ಪ್ರಧಾನ ಉದ್ದೇಶಗಳಲ್ಲಿ, ಯುವಕರು ಆಗಾಗ ಜತೆಗೂಡಲು ಒಂದು ವೇದಿಕೆ, ಮಾತೃಭೂಮಿಯ ಬಗೆಗೆ ಪ್ರೇಮವನ್ನು ಹುಟ್ಟಿಸುವುದು, ಸಾಮಾನ್ಯ ವಿಷಯ ಪರಿಚಯ ಮಾಡಿಕೊಡುವುದು– ಇವುಗಳೆಲ್ಲ ಸೇರಿದ್ದುವು. ಸದಸ್ಯರು ಕಾಲಕಾಲಕ್ಕೆ ಸಭೆ ಸೇರಿ, ಹಲವಾರು ವಿಷಯ ಗಳನ್ನು ಕುರಿತು ಮಾತನಾಡುತ್ತಿದ್ದರು, ಇಲ್ಲವೆ, ಪ್ರಬಂಧಗಳನ್ನು ಓದುತ್ತಿದ್ದರು.

ದಕ್ಷಿಣ ಆಫ್ರಿಕಾದ ಬ್ರಿಟಿಷ್ ಜನರಿಗೂ ಮತ್ತು ಭಾರತದ ಜನರಿಗೂ ವಸಾಹತು ಗಳ ವಾಸ್ತವ ಸ್ಥಿತಿಯನ್ನು ಪರಿಚಯ ಮಾಡಿಕೊಡುವುದು ನೇಟಾಲ್ ಕಾಂಗ್ರೆಸ್ಸಿನ ಇನ್ನೊಂದು ಕಾರ್ಯವಾಗಿತ್ತು. ಗಾಂಧಿ ಎರಡು ಲಘು ಪುಸ್ತಕಗಳನ್ನು ಬರೆದರು. "ಭಾರ ತೀಯರ ಮತದಾನದ ಹಕ್ಕು: ದಕ್ಷಿಣ ಆಫ್ರಿಕಾದ ಪ್ರತಿಯೊಬ್ಬ ಭಾರತೀಯನಿಗೂ ಒಂದು ಮನವಿ" ಮತ್ತು "ಒಂದು ಬಹಿರಂಗ ಪತ್ರ" ಎಂಬುವು. ಅವು ವ್ಯಾಪಕವಾಗಿ ಪ್ರಸಾರ ಹೊಂದಿದುವು. ಸತ್ಯದ ಪ್ರಾಮುಖ್ಯತೆಯನ್ನು ಗಾಂಧಿ ಒತ್ತಿ ಹೇಳಿದರು. ಅವರು ಉತ್ಪ್ರೇಕ್ಷೆಗೆ ಪ್ರೋತ್ಸಾಹ ಕೊಡಲಿಲ್ಲ; ಭಾರತೀಯರ ಗಮನವನ್ನು ಅವರ ನ್ಯೂನತೆಗಳತ್ತ ಸೆಳೆದರು. ವೃತ್ತ ಪತ್ರಿಕೆಗಳಿಗೆ ಸಾಧ್ಯವಾದಷ್ಟು ಸುದ್ದಿಯನ್ನು ಕಳಿಸಿ, ಭಾರತ–ವಿರೋಧ ಪ್ರಚಾರವನ್ನು ಪ್ರತಿಭಟಿಸಲಾಯಿತು.

ನೇಟಾಲ್ ಇಂಡಿಯನ್ ಕಾಂಗ್ರೆಸಿನಂತೆಯೇ ಟ್ರಾನ್ಸ್‌ವಾಲ್ ಮತ್ತು ಕೇಪ್ ಟೌನ್‌ಗಳಲ್ಲಿಯೂ ಸಂಸ್ಥೆಗಳಾದುವು. ಅವುಗಳ ಅಂಗರಚನೆ ಪ್ರತ್ಯೇಕವಾಗಿದ್ದರೂ ಮೂರೂ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಒಂದೇ ಆಗಿದ್ದುವು.

ವಸಾಹತುವಿನಲ್ಲಿ ಜನಿಸಿದ ಭಾರತೀಯರು ಮತ್ತು ಗುಮಾಸ್ತೆ ವರ್ಗದವರು ನೇಟಾಲ್ ಇಂಡಿಯನ್ ಕಾಂಗ್ರೆಸಿನ ಸದಸ್ಯರಾಗಿದ್ದರು. ಆದರೆ ಕಾರ್ಮಿಕ ಕೂಲಿಕಾರರೂ ಮತ್ತು ಕರಾರುಬದ್ಧ ಕಾರ್ಮಿಕರೂ ಅದರ ಪರಿಧಿಯ ಹೊರಗೇ ಇದ್ದರು. ಗಾಂಧಿ ನ್ಯಾಯಬದ್ಧ ಕಾರ್ಮಿಕರ ಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳಲು ಒಂದು ಅವಕಾಶ ಒದಗಿತು. ಹರಿದು ಚೂರು ಚೂರಾದ ವಸ್ತ್ರ ಧರಿಸಿದ, ಕೈಯಲ್ಲಿ ರುಮಾಲು ಹಿಡಿದಿದ್ದ, ಮುಂದಿನ ಎರಡು ಹಲ್ಲುಗಳು ಮುರಿದು ಬಾಯಲ್ಲಿ ರಕ್ತ ಸೋರುತ್ತಿದ್ದ ಒಬ್ಬ ತಮಿಳು ಯುವಕ, ಒಂದು ದಿನ ಅವರ ಮುಂದೆ ಬಂದು ನಿಂತನು. ಈ ದೃಶ್ಯ ಕಂಡು ಗಾಂಧಿ ಗಾಬರಿ ಯಾದರು. ಅವರು ತಲೆಯ ಮೇಲೆ ರುಮಾಲನ್ನು ಇಟ್ಟುಕೊಳ್ಳಬೇಕೆಂದೂ, ತಮ್ಮನ್ನು ಸಮಾನನಂತೆ ಭಾವಿಸಬೇಕೆಂದೂ ಯುವಕನಿಗೆ ಒತ್ತಾಯ ಮಾಡಿದರು. ಆ ಬಡ ಗುಲಾಮನಿಗೆ ಇದೊಂದು ಹೊಸ ಅನುಭವವಾಯಿತು. ಬಾಲಸುಂದರಂ ಎಂಬ ಹೆಸರಿನ ಅವನು ದರ್ಬಾನಿನ ಒಬ್ಬ ಪ್ರಖ್ಯಾತ ಐರೋಪ್ಯ ನಿವಾಸಿಯ ಬಳಿ ಕರಾರುಬದ್ಧನಾಗಿ ಸೇವೆಸಲ್ಲಿಸುತ್ತಿದ್ದನು. ಅವನ ಯಜಮಾನ ಅವನನ್ನು ರಕ್ತ ಸುರಿ ಯುವಂತೆ ಹೊಡೆದಿದ್ದನು. ಗಾಂಧಿ ಒಬ್ಬ ವೈದ್ಯನಿಗೆ ಹೇಳಿ ಕಳಿಸಿ ಅವನಿಂದ ಸರ್ಟಿ ಫಿಕೇಟನ್ನು ತೆಗೆದುಕೊಂಡು, ಏಟು ತಿಂದ ವ್ಯಕ್ತಿಯನು ನ್ಯಾಯಾಧೀಶನ ಬಳಿಗೆ ಕರೆದು

ಕೊಂಡು ಹೋದರು. ಯಜಮಾನನಿಗೆ ಶಿಕ್ಷೆ ಮಾಡಿಸಬೇಕೆಂಬುದು ಗಾಂಧಿಯ ಉದ್ದೇಶ ವಾಗಿರಲಿಲ್ಲ; ಆತನಿಂದ ಬಾಲಸುಂದರಂನನ್ನು ಮುಕ್ತನನ್ನಾಗಿ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಕರಾರುಬದ್ಧ ಕಾರ್ಮಿಕನು ತನ್ನ ಯಜಮಾನನ ಒಂದು ಆಸ್ತಿಯಾಗಿದ್ದನು. ಬಾಲಸುಂದರಂನನ್ನು ಬೇರೊಬ್ಬ ಯಜಮಾನನಿಗೆ ವರ್ಗಾಯಿಸಲು ಗಾಂಧಿ ಯಶಸ್ವಿಯಾದರು. ಅವನ ಮೊಕದ್ದಮೆಯ ಫಲಿತಾಂಶ ಪ್ರತಿಯೊಬ್ಬ ಕರಾರು ಬದ್ಧ ಕಾರ್ಮಿಕನಿಗಲ್ಲದೆ ಮದರಾಸಿನವರೆಗೂ ಹಬ್ಬಿತ್ತು. ಗಾಂಧಿ ಕರಾರುಬದ್ಧ ಕಾರ್ಮಿಕರ ಗೆಳೆಯನೆಂದು ಪ್ರಸಿದ್ಧರಾದರು. ಅವರೆಲ್ಲ ಗಾಂಧೀಯನ್ನು 'ಭಾಯಿ' ಎಂದು ಕರೆದರು. ಕರಾರುಬದ್ಧ ಕಾರ್ಮಿಕರ ಒಂದು ಪ್ರವಾಹವೇ ಅವರ ಕಾರ್ಯಾಲಯಕ್ಕೆ ಹರಿಯತೊಡಗಿತು. ಗಾಂಧಿ ಅವರ ದುಃಖವನ್ನು ಚೆನ್ನಾಗಿ ಅರಿತುಕೊಂಡರು. ಅಲ್ಲದೆ ಅವರ ಪರಿಸ್ಥಿತಿಯನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಲು ಒಂದು ಕಾರಣವೂ ಒದಗಿತು. ಹಿಂದೆ ಕರಾರುಬದ್ಧ ಕಾರ್ಮಿಕರಾಗಿದ್ದವರನ್ನು ಒಂದು ವಿಶೇಷ ರೀತಿಯ ಕಠಿಣ ಶಾಸನಕ್ಕೆ ಗುರಿಪಡಿಸಬೇಕೆಂದು ನಡೆಯುತ್ತಿದ್ದ ಚಳವಳಿಯೇ ಆ ಕಾರಣವಾಗಿತ್ತು.

೧೮೯೪ರಲ್ಲಿ ನೇಟಾಲ್ ಸರಕಾರ, ಹಿಂದೆ ಕರಾರುಬದ್ಧ ಕಾರ್ಮಿಕರಾಗಿದ್ದವರ ಮೇಲೆ ೨೫ ಪೌಂಡುಗಳ ವಾರ್ಷಿಕ ತೆರಿಗೆಯನ್ನು ವಿಧಿಸಲು ಯತ್ನಿಸಿತು. ಬಿಳಿಯ ವ್ಯಾಪಾರಿಗಳು ಭಾರತೀಯರ ಕುಶಲತೆ ಮತ್ತು ಜಾಣತನಗಳ ಬಗೆಗೆ ಭಯಗ್ರಸ್ತ ರಾಗಿದ್ದುದೇ ಈ ಹೊಸ ಮಸೂದೆಗೆ ಕಾರಣ. ೧೮೬೦ರಲ್ಲಿ ಬಿಳಿಯ ಜನಾಂಗದವರು ಭಾರತೀಯರನ್ನು ಪ್ರಥಮವಾಗಿ ಸ್ವಾಗತಿಸಿದಾಗ, ಅವರ ಐದು ವರ್ಷಗಳ ಕರಾರು ಮುಗಿಯುವುದರೊಳಗೆ, ತಮ್ಮ ಕೃಷಿ ಈ ಹೊರಗಿನಿಂದ ಬಂದ ಕಾರ್ಮಿಕರ ದುಡಿಮೆ ಯಿಂದ ಉತ್ತಮ ಸ್ಥಿತಿಗೆ ಬರುವುದೆಂದು ಭಾವಿಸಿದ್ದರು. ಆದರೆ ಭಾರತೀಯರು ಅವರು ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ ಬೆಳೆದರು. ಹಲವಾರು ಭಾರತೀಯ ವಿಧಾನಗಳನ್ನು ಆರಂಭಿಸಿ, ತಮ್ಮ ಕೌಶಲ್ಯದಿಂದ ಸ್ಥಳೀಯ ಬೆಳೆಗಳನ್ನು ಕಡಿಮೆ ವೆಚ್ಚದಲ್ಲಿ ಬೆಳೆಯ ಲಾರಂಭಿಸಿದರು. ಅವರ ಸಾಹಸ ಕೇವಲ ಕೃಷಿಗೆ ಸೀಮಿತವಾಗಿರಲಿಲ್ಲ. ಅವರು ಕೈಗಾರಿಕೆಗೂ ಪ್ರವೇಶಿಸಿದರು. ಅನೇಕ ಭಾರತೀಯರು ಕಾರ್ಮಿಕರ ಅಂತಸ್ತಿನಿಂದ ಭೂಮಾಲಿಕರ ಮತ್ತು ಗೃಹ ಮಾಲಿಕರ ಅಂತಸ್ತಿಗೆ ಏರಿದರು. ಅವರ ಅಭಿವೃದ್ಧಿ, ವಿರೋಧದ ಬೀಜ ವನ್ನು ಬಿತ್ತಿತು. ಧಾರ್ಮಿಕ ವ್ಯತ್ಯಾಸ ಮತ್ತು ಜೀವನ ವಿಧಾನ ಅದಕ್ಕೆ ಗಾಳಿ ಹಾಕಿತು. ಈ ವಿರೋಧವೇ ಮತದಾನದ ಹಕ್ಕನ್ನು ಹರಣ ಮಾಡುವ ಮಸೂದೆಗೂ ಮತ್ತು ಹಿಂದಿನ ಕರಾರುಬದ್ಧ ಕಾರ್ಮಿಕರಿಗೆ ತೆರಿಗೆ ವಿಧಿಸಬೇಕೆಂಬ ಮಸೂದೆಗೂ ಕಾರಣ ವಾಯಿತು.

ಕರಾರಿನ ಪತ್ರದ ಷರತ್ತುಗಳ ಪ್ರಕಾರ, ನೇಟಾಲ್ ಸರಕಾರವು ಭಾರತ ಸರಕಾರದ ಅನುಮತಿಯನ್ನು ಪಡೆಯಬೇಕಾಗಿದ್ದುದರಿಂದ ವಸಾಹತುದಾರರು ತಮ್ಮ ಪ್ರತಿನಿಧಿ ಗಳನ್ನು ಭಾರತಕ್ಕೆ ಕಳಿಸಿ, ವೈಸ್‌ರಾಯ್ ಲಾರ್ಡ್ ಎಲ್ಗಿನ್ನರು ಅದನ್ನು ಒಪ್ಪುವಂತೆ ಒತ್ತಾಯ ತರಲು ಯತ್ನಿಸಿದರು. ಎಲ್ಗಿನ್ ೨೫ ಪೌಂಡುಗಳು ಅತಿಯಾಯಿತೆಂದು

ಭಾವಿಸಿ, ಕಡೆಗೆ ೩ ಪೌಂಡುಗಳ ತೆರಿಗೆ ವಿಧಿಸಲು ಒಪ್ಪಿದರು. ಈ ಕ್ರೂರ ತೆರಿಗೆ ತುಂಬಾ ಬವಣೆಗೆ ಕಾರಣವಾಯಿತು. ಗೋಖಲೆಯವರು ನುಡಿದಂತೆ ಅದು, "ಕುಟುಂಬಗಳನ್ನು ವಿಚ್ಛೇದ ಮಾಡಿತು; ಪುರುಷರನ್ನು ಅಪರಾಧ ಮಾಡುವಂತೆ ಪ್ರೇರಿಸಿತು. ಸ್ತ್ರೀಯರನ್ನು ಮಾನಹೀನ ಬದುಕಿಗೆ ನೂಕಿತು." ಅದನ್ನು ರದ್ದುಪಡಿಸಲು ಗಾಂಧಿ ದೀರ್ಘಕಾಲ ಉಗ್ರ ಹೋರಾಟ ನಡೆಸಬೇಕಾಯಿತು.

ಗಾಂಧಿಯ ಈ ಸಾರ್ವಜನಿಕ ಚಟುವಟಿಕೆಗಳ ಜತೆಜತೆಗೇ ಅವರ ಅಧ್ಯಾತ್ಮ ವಿಕಾಸವೂ ಸಾಗಿತು. ಅವರು ನೇಟಾಲಿನಲ್ಲಿ ನೆಲೆಸಿದಾಗ, ಪ್ರಿಟೋರಿಯಾದ ಕ್ರೈಸ್ತ ಗೆಳೆಯರು ಅವರನ್ನು ಮರೆಯಲಿಲ್ಲ. ದರ್ಬಾನಿನಲ್ಲಿ ದಕ್ಷಿಣ ಆಫ್ರಿಕಾ ಜನರಲ್ ಮಿಷನ್ನಿನ ಮುಖ್ಯಸ್ಥ ಸ್ಪೆನ್ಸರ್ ವಾಲ್ಟರ್ ಅವರು ಗಾಂಧಿಯ ಸ್ನೇಹ ಬೆಳಸಿದ್ದರು; ಮತ್ತು ಸ್ವಲ್ಪ ಕಾಲದಲ್ಲೇ ಗಾಂಧಿ ಅವರ ಕುಟುಂಬದ ಸದಸ್ಯರಂತೆಯೇ ಆದರು. ಈ ಸ್ನೇಹ ಬಾಂಧವ್ಯದಿಂದ ಗಾಂಧಿಯ ಧಾರ್ಮಿಕ ಆಸಕ್ತಿ ಜೀವಂತವಾಗಿತ್ತು. ರಾಜಚಂದ್ರ ನೊಡನೆ ಅವರ ಪತ್ರ ವ್ಯವಹಾರ ಮುಂದುವರಿದಿತ್ತು. ಗಾಂಧಿಗೆ ಇದ್ದ ವಿರಾಮ ಅಲ್ಪವಾದರೂ ಅವರು ಹಿಂದೂಧರ್ಮ ಗ್ರಂಥಗಳನ್ನು ಓದಿದರು; ಕೆಲವು ಯೌಗಿಕ ವ್ಯಾಯಾಮಗಳನ್ನು ಅಭ್ಯಸಿಸಿದರು; ಆದರೆ ಅದರಲ್ಲಿ ಹೆಚ್ಚು ಪ್ರಗತಿ ಆಗಲಿಲ್ಲ.ಅವರು ಮ್ಯಾಕ್ಸ್‌ಮುಲ್ಲರ್ ಅವರ "ಭಾರತ–ಅದು ನಮಗೆ ಏನನ್ನು ಕಲಿಸಬಲ್ಲುದು?" (India-what it can teach us?) ಮತ್ತು ಉಪನಿಷತ್ತುಗಳ ಭಾಷಾಂತರ ಇವುಗಳನ್ನು ಓದಿದರು. ಅವರು ಇರ್ವಿಂಗನ "ಮೊಹಮ್ಮದನ ಜೀವನ', ಕಾರ್‌ಲೈಲ್ 'ಪ್ರವಾದಿಯನ್ನು ಕುರಿತು ಬರೆದ ಮೆಚ್ಚುಗೆ' ಇವುಗಳನ್ನು ಓದಿದರು. ಇವು ಮೊಹಮ್ಮದನ ಬಗೆಗೆ ಅವರ ಮೆಚ್ಚುಗೆಯನ್ನು ಹೆಚ್ಚಿಸಿದುವು. ಅವರು 'ಝರತುಷ್ಟ್ರನ ಬೋಧೆಗಳು' (Sayings of zarathustra) ಮತ್ತು ಟಾಲ್‌ಸ್ಟಾಯನ ಕೃತಿಗಳನ್ನು– ಓದಿದರು. ಟಾಲ್‌ಸ್ಟಾಯನ The Gospel in Brief ಮತ್ತು ಇತರ ಪ್ರಬಂಧಗಳು ಅವರ ಮೇಲೆ ಬಹಳ ಪ್ರಭಾವ ಬೀರಿದುವು.

ಈ ಕಾಲದಲ್ಲಿ ಅವರು, ಪ್ರತಿಭಾನುವಾರವೂ ತಮ್ಮ ಕ್ರೈಸ್ತ ಮಿತ್ರರೊಡನೆ ವೆಸ್ಲಿ ಪಂಥದ ಚರ್ಚಿಗೆ ಹೋಗುತ್ತಿದ್ದರು. ಈ ಚರ್ಚು ಗಾಂಧಿ ಮನಸ್ಸಿನ ಮೇಲೆ ಉತ್ತಮ ಪರಿಣಾಮವನ್ನು ಉಂಟು ಮಾಡಲಿಲ್ಲ. ಆದುದರಿಂದ ಅವರು ಅಲ್ಲಿಗೆ ಹೋಗುವುದನ್ನು ಬಿಟ್ಟರು. ಆದರೆ ಕ್ರೈಸ್ತ ಸಾಹಿತ್ಯದಿಂದ ಅದರಲ್ಲಿಯೂ ಬೈಬಲಿನಿಂದ ಅವರು ದೂರಾಗಲಿಲ್ಲ. ಅವರು ಮೀಸಲುಕ್ರೈಸ್ತ ಸಂಘದ ಮತ್ತು ಲಂಡನ್ನಿನ ಸಸ್ಯಾಹಾರಿ ಸಂಘದ ಸಾಹಿತ್ಯವನ್ನು ವಿತರಣೆಮಾಡುವ ಪ್ರತಿನಿಧಿಯಾದರು.

ಗಾಂಧಿಯವರ ತೀವ್ರವಾದ ಸಾರ್ವಜನಿಕ ಚಟುವಟಿಕೆಗಳಿಂದಲೂ ಮತ್ತು ಪ್ರಚಾರದಿಂದಲೂ ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಗತಿಗಳು ಭಾರತದಲ್ಲಿ ಚೆನ್ನಾಗಿ ಪರಿಚಿತವಾದುವು. ೧೮೯೪ರ ಡಿಸೆಂಬರ್‌ನಲ್ಲಿ, ಮದರಾಸಿನಲ್ಲಿ ಆಲ್‌ಫ್ರೆಡ್ ವೆಬ್, ಎಂ.ಪಿ., ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ, ದಕ್ಷಿಣ ಆಫ್ರಿಕಾ

ಕುರಿತು ಪ್ರಥಮ ನಿರ್ಣಯ ಮಾಡಿತು: "ದಕ್ಷಿಣ ಆಫ್ರಿಕಾ ವಸಾಹತುಗಳಲ್ಲಿ ವಾಸಿಸುವ ಸಾಮ್ರಾಜ್ಞಿಯ ಭಾರತೀಯ ಪ್ರಜೆಗಳ ಪ್ರಾರ್ಥನೆಯನ್ನು ಮನ್ನಣೆ ಮಾಡಿ, ವಸಾಹತು ಸರಕಾರ ಅವರ ಮತದಾನದ ಹಕ್ಕಿನ ಹರಣಕ್ಕಾಗಿ ಮಾಡಿರುವ ಮಸೂದೆಗಳನ್ನು ಒಪ್ಪಲು ನಿರಾಕರಿಸಬೇಕೆಂದು—ಈ ಕಾಂಗ್ರೆಸ್, ಸಾಮ್ರಾಜ್ಞಿಯ ಸರಕಾರವನ್ನು ವಿನಯ ದಿಂದ ಬೇಡುತ್ತದೆ." ಮುಂದಿನ ಕಾಂಗ್ರೆಸ್ ಅಧಿವೇಶನ ೧೮೯೫ರಲ್ಲಿ ಪುಣೆಯಲ್ಲಿ ಸೇರಿದಾಗ, ದಕ್ಷಿಣ ಆಫ್ರಿಕಾದ ಭಾರತೀಯರು ನೆಲಸುಗಾರರ ಮೇಲೆ ವಿಧಿಸಲು ಉದ್ದೇಶಿಸಿದ್ದ ಅನರ್ಹತೆಗಳ ಬಗೆಗೆ ತನ್ನ ಗಂಭೀರವಾದ ಪ್ರತಿಭಟನೆಯನ್ನು ವ್ಯಕ್ತ ಪಡಿಸಿ, ಈ ರೀತಿ ಆಶಿಸಿತು: "ಬ್ರಿಟಿಷ್ ಸರಕಾರ ಮತ್ತು ಭಾರತ ಸರಕಾರ, ಬ್ರಿಟಿಷ್ ಜನ್ಯ ಪ್ರಜೆಗಳ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗ ಯಾವ ಮನೋಧರ್ಮದಿಂದ ಹಸ್ತ ಕ್ಷೇಪ ಮಾಡಿದೆಯೋ ಅದೇ ಮನೋಧರ್ಮದಿಂದ ಈ ನೆಲಸುಗಾರರ ಹಿತಾಸಕ್ತಿಗಳನ್ನು ರಕ್ಷಿಸಲು ಮುಂದೆ ಬರುತ್ತದೆಂದು ನಂಬುತ್ತದೆ."

ಈ ವೇಳೆಗೆ ಗಾಂಧಿ ದಕ್ಷಿಣ ಆಫ್ರಿಕಾಕ್ಕೆ ಬಂದು ಮೂರು ವರ್ಷಗಳಾಗಿದ್ದುವು. ಅವರು ಒಳ್ಳೆಯ ಪ್ರಖ್ಯಾತಿಯನ್ನೂ ಮತ್ತು ವಕೀಲೀ ವೃತ್ತಿಯಲ್ಲಿ ತಕ್ಕಮಟ್ಟಿನ ಸ್ಥಾನ ವನ್ನೂ ಗಳಿಸಿ ಕೊಂಡಿದ್ದರು. ೧೮೯೬ರ ಜೂನ್ ೫ರಂದು ಅವರು ತಮ್ಮ ಪತ್ನಿ ಮತ್ತು ಮಕ್ಕಳನ್ನು ಕರೆತರಲು ಭಾರತಕ್ಕೆ ಯಾನಮಾಡಿದರು.

ಭಾರತದ ಪ್ರಕರಣ

೧೮೯೬

ಗಾಂಧಿ ಭಾರತವನ್ನು ತಲುಪಲು ಒಂದು ತಿಂಗಳು ಹಿಡಿಯಿತು. ಯಾನದ ಕಾಲದಲ್ಲಿ ಒಬ್ಬ ಇಂಗ್ಲಿಷ್ ಅಧಿಕಾರಿಯ ಸಂಗಡ ಅವರು ತಮಿಳು ಮತ್ತು ಉರ್ದು ಗಳನ್ನು ಕಲಿಯಲಾರಂಭಿಸಿದರು. ಮತ್ತೊಬ್ಬ ಅಧಿಕಾರಿಯೊಂದಿಗೆ ಅವರು ದಿನವೂ ಒಂದು ಘಂಟೆ ಚದುರಂಗದ ಆಟವನ್ನು ಆಡುತ್ತಿದ್ದರು. ದಕ್ಷಿಣ ಆಫ್ರಿಕಾದ ಭಾರತೀಯರ ಕಷ್ಟ ಕೋಟಲೆಗಳನ್ನು ಕುರಿತು ಒಂದು ಲಘು ಪುಸ್ತಕ ಬರೆಯಲು ಅವರು ಬಹಳ ಕಾಲವನ್ನು ವಿನಿಯೋಗಿಸುತ್ತಿದ್ದರು. ಸುಂದರವಾದ ಹೂಗ್ಲಿಯ ದೃಶ್ಯದರ್ಶನದಿಂದ ಈ ಹಿತಕರವಾದ ಯಾನ ಮುಕ್ತಾಯವಾಯಿತು.

ಗಾಂಧಿ ಕಲ್ಕತ್ತಾದಿಂದ ರಾಜಕೋಟೆಗೆ ಪ್ರಯಾಣ ಬೆಳೆಸಿದರು. ರೈಲು ಅಲಹಾ ಬಾದಿನಲ್ಲಿ ನಲವತ್ತೈದು ನಿಮಿಷಕಾಲ ತಂಗಿತು. ಆ ಕಾಲದ ಅವಧಿಯನ್ನು ಅವರು ಪಟ್ಟಣದೊಳಗೆ ಅಡ್ಡಾಡಿ ಬರಲು ಉಪಯೋಗಿಸಿಕೊಂಡರು. ಆದರೆ ರೈಲು ತಪ್ಪಿದು ದರಿಂದ ಅಲ್ಲೇ. ಆಗಲೇ ತಮ್ಮ ಕಾರ್ಯಾರಂಭಮಾಡಲು ನಿರ್ಧರಿಸಿದರು. ಅವರು 'ಪಯೋನೀರ್' ಪತ್ರಿಕೆಯ ವಿಷಯವಾಗಿ ಬಹಳ ಕೇಳಿದ್ದರು. ಆ ಪತ್ರಿಕೆ ವಸಾಹತು ನೆಲಸುಗಾರರಿಗೆ ನೆಲವು ನೀಡುವುದೆಂಬ ಅಭಿಪ್ರಾಯ ಅವರಿಗಿತ್ತು. ಅವರ ಸಂಪಾದಕ ರನ್ನು ಕಂಡು ದಕ್ಷಿಣ ಆಫ್ರಿಕಾದ ವಿದ್ಯಮಾನಗಳನ್ನು ಚರ್ಚಿಸಲು ಮನಸ್ಸು ಮಾಡಿದರು. ಸಂಪಾದಕ ಚೆಸ್ನೆ ಸಾವಧಾನವಾಗಿ ಕೇಳಿ, ಗಾಂಧಿ ಬರೆಯಬಹುದಾದ ಏನನ್ನಾದರೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಮಾತು ಕೊಟ್ಟರು.

ಅಲಹಾಬಾದಿನಿಂದ ಅವರು ರಾಜಕೋಟೆಗೆ ಹೋದರು. ೧೮೯೬ರ ಆಗಸ್ಟ್ ೧೪ರಂದು 'ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷ್ ಭಾರತೀಯರ ಕಷ್ಟಕೋಟಲೆಗಳು' ಎಂಬ ಹಸಿರು ರಟ್ಟಿನ ಒಂದು ಲಘು ಪುಸ್ತಕವನ್ನು—ಇದು ಮುಂದೆ "ಹಸಿರು ಲಘುಪುಸ್ತಕ" ಎಂದೇ ಹೆಸರು ಪಡೆಯಿತು—ಪ್ರಕಟಿಸಿದರು. ಹತ್ತು ಸಾವಿರ ಪ್ರತಿಗಳನ್ನು ಅಚ್ಚು ಮಾಡಿಸಿ, ಅದನ್ನು ಭಾರತದ ಎಲ್ಲ ಪತ್ರಿಕೆಗಳಿಗೂ ಮುಖಂಡರಿಗೂ ಕಳಿಸಿದರು. ಗಾಂಧಿ, ತಮ್ಮ ಸುತ್ತಮುತ್ತಲಿನ ಮಕ್ಕಳನ್ನು ಈ ಕಾರ್ಯಕ್ಕಾಗಿ ಕಲೆ ಹಾಕಿದರು. ಅವರ ಸಹಕಾರಕ್ಕೆ ಪ್ರತಿಯಾಗಿ ಆಫ್ರಿಕಾದ ಅಂಚೆ ಚೀಟಿಗಳನ್ನು ಕೊಟ್ಟರು. ಪಯೋನೀರ್ ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಈ ಲಘು ಪುಸ್ತಕದ ಬಗೆಗೆ ಉಲ್ಲೇಖಿಸಿತು. ಅದು ದಕ್ಷಿಣ ಆಫ್ರಿಕಾದ ೧,೦೦,೦೦೦ ಭಾರತೀಯರ ಪರವಾದ ಮನವಿಯಾಗಿದ್ದಿತು. "ಈ ಲಘು ಪುಸ್ತಕದ ಪ್ರತಿಯೊಂದು ವಾಕ್ಯದ ಪ್ರತಿಯೊಂದು ಶಬ್ದವೂ ಯಾವ ಅನುಮಾನದ

ನೆರಳಿಗೂ ಅವಕಾಶವಿಲ್ಲದಂತೆ ಸಮರ್ಥಿಸಲ್ಪಡುವಂಥವೆಂದು' ಗಾಂಧಿ ನಿರ್ಧಾರಾತ್ಮಕ ವಾಗಿ ನುಡಿದರು. ಕಷ್ಟಕೋಟಲೆಗಳ ಬಗೆಗೆ ವಿವರವಾದ ಟಿಪ್ಪಣಿ ಒಂದು ತಿಂಗಳು ತರುವಾಯ ಪ್ರಕಟವಾಯಿತು.

ಸಂಗ್ರಹವಾದ ಮತ್ತು ಅತಿ ಉತ್ಪ್ರೇಕ್ಷಿತವಾದ ಇದರ ಸಾರಾಂಶವನ್ನು ರಾಯಿಟರ್ಸ್, ನೇಟಾಲಿಗೆ ತಂತಿ ಮೂಲಕ ಕಳಿಸಿತು: "ಸೆಪ್ಟೆಂಬರ್ ೧೪ರಂದು ಭಾರತದಲ್ಲಿ ಪ್ರಕಟವಾದ ಒಂದು ಲಘು ಪುಸ್ತಕವು ನೇಟಾಲಿನ ಭಾರತೀಯರು ಸುಲಿಗೆಗೂ ಮತ್ತು ದಬ್ಬಾಳಿಕೆಗೂ ಗುರಿಯಾಗಿ ಮೃಗಗಳಂತೆ ಪರಿಗಣಿಸಲ್ಪಟ್ಟಿದ್ದಾರೆಂದೂ, ಪರಿಹಾರ ದೊರಕದೆ ಇದ್ದಾರೆಂದೂ ತಿಳಿಸುತ್ತದೆ. ಟೈಂಸ್ ಆಫ್ ಇಂಡಿಯಾ ಈ ಆಪಾದನೆಗಳ ಬಗೆಗೆ ವಿಚಾರಣೆ ನಡೆಯಬೇಕೆಂದು ವಾದಿಸುತ್ತಿದೆ". ಇದು ದಕ್ಷಿಣ ಆಫ್ರಿಕಾದ ಬಿಳಿಯರಿಗೆ ಅಸಮಾಧಾನ ವನ್ನು ಉಂಟುಮಾಡಿತು.

ಗಾಂಧಿ ರಾಜಕೋಟೆಯಲ್ಲಿ ತಂಗಿದ್ದ ಕಾಲದಲ್ಲಿ ಪ್ಲೇಗ್ ಬಂದಿತು. ಎಲ್ಲೆಲ್ಲಿಯೂ ಹಾಹಾಕಾರ ಹಬ್ಬಿತು. ಸಂಸ್ಥಾನಕೆ ತಮ್ಮ ಸೇವೆಯನ್ನು ನೀಡಿ, ನೈರ್ಮಲ್ಯ ರಕ್ಷಣೆಯ ಬಗೆಗೆ ಸಲಹೆಯನ್ನು ಕೊಟ್ಟರು ಪ್ಲೇಗ್ ಸಮಿತಿಯ ಸದಸ್ಯರಾಗಿ ಪ್ರತಿಯೊಂದು ವಿಭಾಗಕ್ಕೂ ಭೇಟಿಯಿತ್ತರು. ಕಕ್ಕಸುಗಳ ಶುಭ್ರತೆಯ ಬಗೆಗೆ ಅವರು ಪ್ರಾಮುಖ್ಯ ನೀಡಿದರು. ಅವುಗಳನ್ನು ಉತ್ತಮ ಪಡಿಸಲು ಎಲ್ಲ ಪ್ರಯತ್ನ ಮಾಡಿದರು. ಮೇಲಿನ ವರ್ಗಗಳ ಜನ ಈ ಕಾರ್ಯಕ್ಕೆ ಅಡಚಣೆಗಳನ್ನು ಒಡ್ಡಿದರೆ, ಬಡಜನರ ನಡುವೆ ಅವರು ಯಶಸ್ವಿಯಾದರು. ಪ್ಲೇಗ್‌ಸಮಿತಿ ಅಸ್ಪೃಶ್ಯರ ವಾಸಸ್ಥಳಗಳಿಗೂ ಭೇಟಿ ನೀಡಬೇಕಾಗಿತ್ತು. ಆದರೆ ಒಬ್ಬ ಸದಸ್ಯ ಮಾತ್ರ ಅವರೊಂದಿಗೆ ಹೋಗಲು ಸಿದ್ಧ ನಾಗಿದ್ದನು. ಈ ಪ್ರದೇಶ ನಗರದಲ್ಲೆಲ್ಲ ಅತ್ಯಂತ ಚೊಕ್ಕಟವಾಗಿದ್ದುದನ್ನು ಕಂಡು ಗಾಂಧಿಗೆ ಅಚ್ಚರಿಯೂ ಸಂತೋಷವೂ ಆಯಿತು.

ರಾಜಕೋಟೆಯಲ್ಲಿ ನಡೆದ ವಿಕ್ಟೋರಿಯಾ ರಾಣಿಯ ವಜ್ರಮಹೋತ್ಸವ ಸಮಿತಿಯ ಸದಸ್ಯರೂ ಆಗಿದ್ದರು ಗಾಂಧಿ. ಅವರು ತಮ್ಮ ಮನೆಯ ಮಕ್ಕಳಿಗೆ ಕಲಿಸಿದ ಮೊದಲನೆಯ ಪಾಠವೆಂದರೆ, ಬ್ರಿಟಿಷ್ ರಾಷ್ಟ್ರಗೀತೆ. ಅವರು ನೇಟಾಲಿನಲ್ಲಿ ಭಾಗವಹಿಸಿದ್ದ ಪ್ರತಿಯೊಂದು ಸಭೆಯಲ್ಲಿಯೂ ಅದನ್ನು ಕೇಳಿದ್ದರು. ಅವರು ಮಾಡಿದ ಮತ್ತೊಂದು ಕಾರ್ಯವೆಂದರೆ, ತಮಗಾಗಿ ನಿಯೋಜಿಸಲಾಗಿದ್ದ ಗಿಡವನ್ನು ನೆಟ್ಟುದು. ಆದರೆ ಈ ಉತ್ಸವದ ಹಿಂದೆ ಇದ್ದ ಠಕ್ಕುತನವು, ಸ್ವಲ್ಪ ಕಾಲದಲ್ಲಿಯೇ ಅವರಿಗೆ ಗೋಚರವಾಯಿತು. ಆದುದರಿಂದ ಅವರು ತಮ್ಮ ಸರ್ವ ಸಾಮರ್ಥ್ಯವನ್ನೂ ದಕ್ಷಿಣ ಆಫ್ರಿಕಾ ಸಮಸ್ಯೆಯ ಬಗೆಗೆ ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸುವುದರಲ್ಲಿ ವಿನಿಯೋಗಿಸತೊಡಗಿದರು.

ಮುಂಬೈನಲ್ಲಿ ಅವರು ರಾನಡೆ, ಬದ್ರುದ್ದೀನ್ ತ್ಯಾಬ್ಜೀ ಇವರನ್ನು ಭೇಟಿಮಾಡಿ. ದಕ್ಷಿಣ ಆಫ್ರಿಕಾ ಸಮಸ್ಯೆಯ ಪರಿಚಯ ಮಾಡಿಕೊಟ್ಟರು. ಅವರು ಫಿರೋಜ್ ಷಾ ಅವರನ್ನು ಕಂಡು ಮಾತನಾಡಬೇಕೆಂದೂ ಅಧಿಕಾರಿಗಳಾದ ತಾವು ರಾಜಕೀಯ ವಿಚಾರ ಗಳಿಗೆ ಸಂಬಂಧಿಸಿದಂತೆ ಸಭೆಗಳನ್ನು ಏರ್ಪಡಿಸಿ. ಅವುಗಳಲ್ಲಿ ಭಾಗವಹಿಸಲು ಸಾಧ್ಯ

ವಿಲ್ಲವೆಂದೂ ತಿಳಿಸಿದರು. ಅವರುಗಳ ಸಲಹೆಯ ಪ್ರಕಾರ ಗಾಂಧಿ, ಫಿರೋಜ್ ಷಾ ಮೆಹತಾ ಅವರನ್ನು ಕಂಡರು. ಸೆಪ್ಟೆಂಬರ್ ೨೬ರಂದು ಸರ್ ಕವಾಸ್‌ಜೀ ಜಹಾಂಗೀರ್ ಇನ್ಸ್ಟಿಟ್ಯೂಟ್ ಪ್ರಾಂಗಣದಲ್ಲಿ ಸಭೆ ಏರ್ಪಟ್ಟಿತು. ಫಿರೋಜ್ ಷಾ ಮೆಹತಾ ಅಧ್ಯಕ್ಷತೆ ವಹಿಸಿದ್ದರು. ಗಾಂಧಿಯ ಅನುಭವದಲ್ಲಿ ಆ ಬಗೆಯ ಸಭೆ ಅದೇ ಮೊದಲನೆಯದು. ಅವರು ಭಾರತದಲ್ಲಿ ತಮ್ಮ ಮೊಟ್ಟಮೊದಲನೆಯ ಭಾಷಣ ಮಾಡಿದರು. ಫಿರೋಜ್ ಷಾ ಮೆಹತಾ ಅವರ ಸೂಚನೆಯಂತೆ ಗಾಂಧಿ ತಮ್ಮ ಭಾಷಣವನ್ನು ಬರೆದಿದ್ದರು. ಅವರು ಸಭಾಕಂಪನ ಹೊಂದಿದುದರಿಂದ ಭಾಷಣವನ್ನು ಓದಲು ಡಿ.ಇ. ವಾಚಾ ಅವರಿಗೆ ಕೊಟ್ಟರು. ಗಾಂಧಿಮನವಿಯ ಕಡೆಯ ಭಾಗ ಹೀಗಿದ್ದಿತು: "ನಾವು ದಕ್ಷಿಣ ಆಫ್ರಿಕಾದಲ್ಲಿ ಎಲ್ಲ ಕಡೆಗಳಲ್ಲಿಯೂ ಬಂಧಿತರಾಗಿದ್ದೇವೆ. ನಿಮಗೆ ಮನವಿ ಮಾಡಿಕೊಳ್ಳುವ ಹಕ್ಕು ನಮಗೆ ಇದೆ. ನಮ್ಮ ಕುತ್ತಿಗೆಗೆ ಸುತ್ತಿರುವ ದಬ್ಬಾಳಿಕೆಯ ಹೊರೆ ಇಳಿಯದೆ ಹೋದರೆ, ಬಹಳ ಮಟ್ಟಿನ ಹೊಣೆಗಾರಿಕೆ ನಿಮ್ಮ ಹೆಗಲ ಮೇಲೆ ಉಳಿದಿರುತ್ತದೆ. ಭಾರ ಹೊತ್ತಿರುವ ನಾವು ಕ್ಲೇಶದಿಂದ ರೋದನ ಮಾತ್ರ ಮಾಡಬಲ್ಲವರಾಗಿದ್ದೇವೆ. ಇದನ್ನು ಹೋಗಲಾಡಿಸುವ ಕರ್ತವ್ಯ ನಮ್ಮ ಹಿರಿಯ ಮತ್ತು ಹೆಚ್ಚು ಸ್ವತಂತ್ರ ಸಹೋದರರಾದ ನಿಮ್ಮದು. ನಮ್ಮ ರೋದನ ನಿಷ್ಫಲವಾಗುವುದಿಲ್ಲವೆಂದು ನಾನು ನಂಬಿದ್ದೇನೆ".

ಗಾಂಧಿ, ಮುಂಬೈನಿಂದ, ಅಕ್ಟೋಬರ್ ೧೧ರಂದು ಪುಣೆಗೆ ಹೋದರು. ಅವರು ಮೊದಲು ಮಹಾರಾಷ್ಟ್ರದ ಆರಾಧ್ಯದೈವದಂತಿದ್ದ ಲೋಕಮಾನ್ಯ ತಿಲಕರನ್ನು ಭೇಟಿಯಾದರು. ತಿಲಕರು ಎಲ್ಲ ನೆರವನ್ನೂ ಕೊಡುವ ಭರವಸೆಯಿತ್ತರು. ಯಾವ ಪಕ್ಷಕ್ಕೂ ಸೇರದ ಒಬ್ಬರು ಅಧ್ಯಕ್ಷರನ್ನು ಗೊತ್ತುಮಾಡಿಕೊಡುವುದಾಗಿ ಹೇಳಿದರು. ಅವರು ಮಹಾವಿದ್ವಾಂಸರೆಂದು ಪ್ರಸಿದ್ಧರಾಗಿದ್ದ ಡಾ. ಭಂಡಾರ್‌ಕರರ ಹೆಸರನ್ನು ಸೂಚಿಸಿದರು. ಅದರ ತರುವಾಯ ಗಾಂಧೀ ಫರ್ಗ್ಯೂಸನ್ ಕಾಲೇಜಿನಲ್ಲಿ ಗೋಖಲೆಯವರನ್ನು ಕಂಡರು. ಗೋಖಲೆಯವರು ನೀಡಿದ ಪ್ರೀತಿಪೂರ್ವಕ ಸ್ವಾಗತ, ತತ್‌ಕ್ಷಣ ಅವರನ್ನು ಆಕರ್ಷಿಸಿತು. ಅವರೂ ಭಂಡಾರಕರರ ಅಧ್ಯಕ್ಷತೆಗೆ ಅನುಮೋದಿಸಿದರು. ಭಂಡಾರ್‌ಕರರು ಗಾಂಧಿಯನ್ನು ಪ್ರೀತಿಯ ತಂದೆ ಸ್ವಾಗತಿಸುವಂತೆ ಸ್ವಾಗತಿಸಿದರು. ಅವರು ಹೀಗೆ ನುಡಿದರು: "ನಾನು ರಾಜಕೀಯದಲ್ಲಿ ಪ್ರವೇಶಿಸುವುದಿಲ್ಲವೆಂದು ನಿಮಗೆ ಯಾರು ಬೇಕಾದರೂ ಹೇಳುವರು. ಆದರೆ ಈಗ ನಾನು ಇಲ್ಲವೆನ್ನಲಾರೆ. ನಿಮ್ಮ ವಿಚಾರ ಪ್ರಬಲವಾದುದಾಗಿದೆ. ನಿಮ್ಮ ಶ್ರಮ ಮೆಚ್ಚುಗೆಗೆ ಅರ್ಹವಾದುದು. ನಿಮ್ಮ ಸಭೆಯಲ್ಲಿ ಭಾಗವಹಿಸಲು ನಾನು ನಿರಾಕರಿಸಲಾರೆ". ಪುಣೆಯಲ್ಲಿ ಗಾಂಧಿಯ ಉದ್ದೇಶ ಯಶಸ್ವಿಯಾಯಿತು.

ಅನಂತರ ಗಾಂಧಿ ಮದರಾಸಿಗೆ ಪ್ರಯಾಣ ಮಾಡಿದರು. ಅಲ್ಲಿ ಅವರಿಗೆ ಅತ್ಯಂತ ಉತ್ಸಾಹ ಭರಿತರಾದ ಪ್ರೇಕ್ಷಕರು ದೊರಕಿದರು. ಅಕ್ಟೋಬರ್ ೨೬ರಂದು, ಸಭೆ ಮುಗಿದ ಮೇಲೆ, ಹಸಿರು ಪುಸ್ತಕಕೊಳ್ಳಲು ಪೈಪೋಟಿ ನಡೆಯಿತು. ಗಾಂಧಿ ಅದನ್ನು

ಪರಿಷ್ಕರಿಸಿದರು. ಮತ್ತೆ ೪೦೦೦ ಪ್ರತಿಗಳನ್ನು ಅಚ್ಚು ಹಾಕಿಸಲಾಯಿತು. 'ಮದರಾಸ್ ಸ್ಟಾಂಡರ್ಡ್' ಸಂಪಾದಕ ಜಿ. ಪರಮೇಶ್ವರನ್ ಪಿಳ್ಳೆ ಮತ್ತು 'ಹಿಂದೂ' ಪತ್ರಿಕೆಯ ಜಿ. ಸುಬ್ರಹ್ಮಣ್ಯ ಅಯ್ಯರ್ ಅವರಿಂದ ಗಾಂಧಿಗೆ ಉದಾರ ಸಹಾಯ ಲಭಿಸಿತು.

ಮದರಾಸಿನಿಂದ ಗಾಂಧಿ ಕಲ್ಕತ್ತಾಕ್ಕೆ ಹೋದರು. ಅಲ್ಲಿ ಅವರಿಗೆ ಯಾರೂ ಪರಿಚಯವಿಲ್ಲದಿದ್ದುದರಿಂದ ಗ್ರೇಟ್ ಈಸ್ಟರ್ನ್ ಹೋಟಲಿನಲ್ಲಿ ಇಳಿದುಕೊಂಡರು. ಅವರು ಪ್ರಥಮವಾಗಿ ಸುರೇಂದ್ರನಾಥ ಬ್ಯಾನರ್ಜೀ ಅವರನ್ನು ಭೇಟಿಯಾದಾಗ, "ಇಲ್ಲಿನ ಜನ ನಿಮ್ಮ ಕೆಲಸಕ್ಕೆ ಆಸಕ್ತಿ ತೋರಿಸಲಾರರು. ನಿಮಗೇ ಗೊತ್ತಿರುವಂತೆ ನಮ್ಮ ಸಮಸ್ಯೆಗಳೇ ಅತಿಯಾಗಿವೆ" ಎಂದರು. 'ಅಮೃತ ಬಜಾರ್ ಪತ್ರಿಕಾ' ಮತ್ತು 'ಬಂಗ ದೇಶೀ' ಪತ್ರಿಕಾಲಯಗಳಲ್ಲಿಯೂ ಹೆಚ್ಚು ಉತ್ತೇಜನ ದೊರಕಲಿಲ್ಲ. ಅವರು ಇತರ ಪತ್ರಿಕೆಗಳ ಸಂಪಾದಕರನ್ನು ಭೇಟಿ ಮಾಡಿದರು. 'ಸ್ಟೇಟ್‌ಮನ್' ಮತ್ತು 'ಇಂಗ್ಲಿಷ್ ಮನ್' ಪತ್ರಿಕೆಯ ಸಂಪಾದಕರು ಅವರನ್ನು ಚೆನ್ನಾಗಿ ಕಂಡರು. 'ಇಂಗ್ಲಿಷ್‌ಮನ್' ಪತ್ರಿಕೆಯ ಸಂಪಾದಕರಾಗಿದ್ದ ಮಿ. ಸಾಂಡರ್ಸ್, ಗಾಂಧಿಯನ್ನು ವಿಚಾರಾತ್ಮಕವಾಗಿ ಪರೀಕ್ಷಿಸಿದ ತರುವಾಯ ತಮ್ಮ ಕಾರ್ಯಾಲಯವನ್ನೂ ಮತ್ತು ಪತ್ರಿಕೆಯನ್ನೂ ಬಳಸಿಕೊಳ್ಳಲು ಅನುಮತಿ ಇತ್ತರು; ದಕ್ಷಿಣ ಆಫ್ರಿಕಾದ ಬಗೆಗೆ ತಾವು ಬರೆದ ಸಂಪಾದಕೀಯದಲ್ಲಿ ಗಾಂಧಿ ಇಷ್ಟಪಟ್ಟಂತೆ ಬದಲಾವಣೆ ಮಾಡುವ ಸ್ವಾತಂತ್ರ್ಯವನ್ನೂ ಕೊಟ್ಟರು.

ಕಲ್ಕತ್ತಾದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸುವ ಮುನ್ನ, ನೇಟಾಲಿನಿಂದ ನವೆಂಬರ್ ೧೨ರಂದು ಗಾಂಧಿಗೆ ತ್ವರಿತವಾದ ತಂತಿ ಸುದ್ದಿ ಬಂದಿತು: "ಜನವರಿಯಲ್ಲಿ ಸಂಸತ್ ಆರಂಭವಾಗುತ್ತದೆ. ಕೂಡಲೇ ಹಿಂದಿರುಗಿ". ಗಾಂಧಿ, ತಾವು ಕಲ್ಕತ್ತಾವನ್ನು ಹಠಾತ್ತಾಗಿ ಬಿಡಬೇಕಾಗಿ ಬಂದ ಕಾರಣವನ್ನು ಪತ್ರಿಕೆಗಳಿಗೆ ಬರೆದು ತಿಳಿಸಿ, ಆದಷ್ಟು ಜಾಗ್ರತೆ ನೇಟಾಲಿಗೆ ಜಹಜನ್ನು ಹಿಡಿಯಲು ಮುಂಬೈಗೆ ತೆರಳಿದರು. ನವೆಂಬರ್ ೧೬ ರಂದು, ಪುಣೆಯಲ್ಲಿ, ಡಾ. ಆರ್.ಜಿ. ಭಂಡಾರ್‌ಕರರ ಅಧ್ಯಕ್ಷತೆಯಲ್ಲಿ ಗಾಂಧಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಅವರ ಭಾಷಣ ಪ್ರಮುಖವಾಗಿ 'ಹಸಿರುಪುಸ್ತಕ'ದಿಂದ ಆಯ್ದ ಭಾಗಗಳೇ ಆಗಿದ್ದುವು. ಸಭೆಯಲ್ಲಿ ತಿಲಕರು ನಿರ್ಣಯವನ್ನು ಮಂಡಿಸಿದರು. ಅದರಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯ ನೆಲಸುಗಾರರ ಬಗೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ಅಂತೆಯೇ ಡಾ. ಭಂಡಾರ್‌ಕರರ ಅಧ್ಯಕ್ಷತೆಯಲ್ಲಿ ತಿಲಕ, ಗೋಖಲೆ ಮತ್ತು ಇತರ ಆರು ಮಂದಿಯುಳ್ಳ ಸಮಿತಿಯನ್ನು ರಚಿಸಿ ಭಾರತೀಯರ ಮೇಲೆ ಹೇರಿದ ಅನರ್ಹತೆಗಳ ಬಗೆಗೆ ಭಾರತ ಸರಕಾರಕ್ಕೆ ಮನವಿ ಪತ್ರವೊಂದನ್ನು ಅರ್ಪಿಸುವ ಅಧಿಕಾರವನ್ನೂ ಆ ಸಮಿತಿಗೆ ನೀಡಲಾಯಿತು.

೧೮೯೬ರ ನವೆಂಬರ್ ೩೦ರಂದು, ಗಾಂಧೀ, ಎಸ್. ಎಸ್. ಕ್ಟೂರ್‌ಲ್ಯಾಂಡ್‌ನಲ್ಲಿ ಎರಡನೆಯ ಬಾರಿ ದಕ್ಷಿಣ ಆಫ್ರಿಕಾಕ್ಕೆ ಕಸ್ತೂರ ಬಾ, ಮತ್ತು ಅವರ ಇಬ್ಬರು ಮಕ್ಕಳು ಅಲ್ಲದೆ ವಿಧವೆ ತಂಗಿಯ ಒಬ್ಬನೇ ಮಗ ಇವರೊಂದಿಗೆ ಪ್ರಯಾಣ ಹೊರಟರು.

ಬಿಳಿಯರು ಗಾಂಧಿಯನ್ನು ಥಳಿಸಿದುದು

೧೮೯೬–೧೮೯೭

ಇದು ಪತ್ನಿ ಮತ್ತು ಮಕ್ಕಳ ಸಮೇತರಾಗಿ, ಗಾಂಧಿ ಕೈಗೊಂಡ ಪ್ರಥಮ ಸಮುದ್ರಯಾನ. ಭಾರತೀಯನೊಬ್ಬ ನಾಗರಿಕನೆಂದು ಕಂಡು ಬರಬೇಕಾದರೆ, ಅವನ ಉಡುಪು ಮತ್ತು ವರ್ತನೆ ಐರೋಪ್ಯರ ಅಂತಸ್ತಿಗೆ ಹೊಂದಿದಂತಿರಬೇಕೆಂದೂ, ಸಮಾಜಕ್ಕೆ ಸೇವೆ ಸಲ್ಲಿಸಬೇಕಾದರೆ ಇದರಿಂದಲೇ ಸಾಧನ ದೊರಕುವುದೆಂದೂ ಆಗ ಗಾಂಧಿ ನಂಬಿದ್ದರು. ಆದುದರಿಂದ ಅವರು ತಮ್ಮ ಕುಟುಂಬದವರ ಉಡುಪಿನ ವಿಧಾನವನ್ನು ಬದಲಾಯಿಸಲು ನಿರ್ಧರಿಸಿದರು. ಅದಕ್ಕನುಗುಣವಾಗಿ, ಕಸ್ತೂರ ಬಾ ಫಾರಸೀ ಸೀರೆಯನ್ನು ಉಡಬೇಕಾಯಿತು. ಬಾಲಕರು ಫಾರಸೀ ಕೋಟು ಮತ್ತು ಇಜಾರಗಳನ್ನು ಧರಿಸಬೇಕಾಯಿತು. ಏಕೆಂದರೆ, ಆ ಕಾಲದಲ್ಲಿ ಭಾರತೀಯರ ಪೈಕಿ ಫಾರಸೀಗಳೇ ಅತ್ಯಂತ ನಾಗರಿಕರೆಂದು ಭಾವಿಸಲಾಗಿತ್ತು. ಗಾಂಧೀಕುಟುಂಬದವರು ಪಾದರಕ್ಷೆ ಮತ್ತು ಕಾಲು ಚೀಲಗಳನ್ನು ಧರಿಸಿದರು. ಹಾಗೆಯೇ ತುಂಬ ಕಸಿವಿಸಿ ಎನಿಸಿದರೂ ಚಾಕು ಮತ್ತು ಫೋರ್ಕುಗಳ ಉಪಯೋಗಕ್ಕೆ ಹೊಂದಿಕೊಳ್ಳಬೇಕಾಯಿತು.

೧೮೯೬ರ ಡಿಸೆಂಬರ್ ೧೮ರಂದು ಜಹಜು ದರ್ಬಾನಿನ ಹಡಗು ಕಟ್ಟೆಯಲ್ಲಿ, ಲಂಗರು ಬಿಟ್ಟಿತು. ಅದೇ ದಿನ ಮತ್ತೊಂದು ಜಹಜು ಅಲ್ಲಿಗೆ ಬಂದು ನಿಂತಿತ್ತು. ಕೂಡಲೇ ಆರೋಗ್ಯಾಧಿಕಾರಿ. ಎರಡು ಜಹಜುಗಳಿಗೂ ಸಂಪರ್ಕ ನಿಷೇಧವನ್ನು ವಿಧಿಸಿದ. ಜಹಜಿನಲ್ಲಿ ಯಾವ ಸಾಂಕ್ರಾಮಿಕ ರೋಗವಿಲ್ಲದಿದ್ದರೂ ಹಳದಿಯ ಬಾವುಟ ಸಾಮಾನ್ಯ ಕಾಲಾವಧಿಯನ್ನು ಮೀರಿ ಹಾರಾಡುತ್ತಿತ್ತು.

ಈ ಎರಡು ಜಹಜುಗಳು. ಏಕಕಾಲದಲ್ಲಿ, ಆರುನೂರು ಮಂದಿ ಪ್ರಯಾಣಿಕರನ್ನು ಹೊತ್ತು ತಂದುದು. ಗಾಂಧಿ ಇನ್ನೂ ಹೆಚ್ಚು ಮಂದಿ ಭಾರತೀಯರನ್ನು ದಕ್ಷಿಣ ಆಫ್ರಿಕಾದಲ್ಲಿ ನೆಲಸುವಂತೆ ಮಾಡಲು ಯೋಜಿಸಿರುವರೆಂದು ಆಗಲೇ ಹರಡಿದ್ದ ಸುದ್ದಿಗೆ ಇನ್ನೂ ಕಳೆಕೊಟ್ಟಿತು. ಈ ಮಧ್ಯೆ, ಭಾರತೀಯರು ಜಹಜಿನಿಂದ ಇಳಿಯುವುದನ್ನು ತಪ್ಪಿಸುವ ಉದ್ದೇಶದಿಂದ ದರ್ಬಾನಿನಲ್ಲಿ ದೊಡ್ಡ ಪ್ರದರ್ಶನ ನಡೆಸಲು ಸಿದ್ಧತೆಗಳು ಪೂರ್ಣಗೊಳ್ಳುತ್ತಿದ್ದುವು. ಡಿಸೆಂಬರ್ ೩೦ರ 'ನೇಟಾಲ್ ಅಡ್ವರ್ಟೈಸರ್' ಪತ್ರಿಕೆಯಲ್ಲಿ ಈ ವ್ಯವಸ್ಥೆಯ ಪೂರ್ವಭಾವೀ ಸಮಿತಿಯ ಅಧ್ಯಕ್ಷ ಮಿ. ಹ್ಯಾರಿಸ್ಪಾರ್ಕ್ಸ್ ಎನ್ನುವವನ ಮತ್ತು ಸಾಮ್ರಾಜ್ಞಿಯ ಸನ್ನದು ಪಡೆದ ಅಧಿಕಾರಿಯೊಬ್ಬನ ಸಹಿಯಲ್ಲಿ ಒಂದು ಪ್ರಕಟಣೆ ಹೊರಟಿತು: "೧೮೯೭ರ ಜನವರಿ ೪ರಂದು ೮ ಗಂಟೆಗೆ ಏಷ್ಯಾದಿಂದ ಬಂದಿರುವ ನೆಲಸುಗಾರರು ಹಡಗಿನಿಂದ ಭೂಸ್ಪರ್ಶ ಮಾಡಲು ಸಾಧ್ಯವಾಗದಂತೆ

ಪ್ರತಿಭಟಿಸಿ, ಪ್ರದರ್ಶನ ನಡೆಸುವ ಉದ್ದೇಶದಿಂದ ದರ್ಬಾನಿನ ಪ್ರತಿಯೊಬ್ಬ ಪುರುಷನೂ ಸಭೆಸೇರಿ ಮೆರವಣಿಗೆ ನಡೆಸಲು ಕೋರಲಾಗಿದೆ". ಸುಮಾರು ೨೦೦೦ ಮಂದಿ, ಎಲ್ಲ ಬಹಳಮಟ್ಟಿಗೆ ಕುಶಲ ಕೈಗಾರಿಕಾ ಕಾರ್ಮಿಕರು, ಪುರಭವನದಲ್ಲಿ, ನಡೆದ ಸಭೆಯಲ್ಲಿ ಹಾಜರಿದ್ದರು. ಅಲ್ಲಿ ಮಾಡಿದ ಭಾಷಣಗಳಿಂದ ಗಾಂಧಿಯೇ ಎಲ್ಲ ತಿರಸ್ಕಾರಗಳ ಪರಮ ಗುರಿಯೆಂಬುದೂ ಮತ್ತು ಸಭೆ ಸೇರಿದ ನಾಗರಿಕರು ತಮ್ಮ ಉದ್ದೇಶವನ್ನು ಈಡೇರಿಸಿ ಕೊಳ್ಳಲು ಬಲ ಪ್ರಯೋಗಕ್ಕೂ ಸಿದ್ಧರೆಂಬುದೂ ಸ್ಪಷ್ಟವಾಯಿತು.

ದರ್ಬಾನಿನಲ್ಲಿ ಆವೇಶದ ಕಾವೇರಿತು. ಸಿದ್ಧತೆಗಳು ಮುಂದುವರಿದುವು. ಎಲ್ಲ ವ್ಯವಸ್ಥೆಯೂ ಆಯಿತು. ಬಲಪ್ರಯೋಗ ಮಾಡಲು ಇಚ್ಛಿಸಿದ ಜನರ ಪಟ್ಟಿ ಸಿದ್ಧವಾಗಿ ಮುಂದಾಳುಗಳೂ ನೇಮಕವಾದರು. ಇದರಿಂದ ಭಯಭರಿತರಾದ ಭಾರತೀಯ ನಿವಾಸಿ ಗಳು ಯಾವ ಕ್ಷಣದಲ್ಲಾದರೂ ಸಾಮೂಹಿಕ ಹಿಂಸಾ ಕೃತ್ಯ ನಡೆದೀತೆಂದು ನಿರೀಕ್ಷಿಸಿದ್ದರು.

ಈ ಮಧ್ಯೆ ಜಹಜುಗಳು ಸಂಪರ್ಕ ನಿಷೇಧದಲ್ಲೇ ಮುಂದುವರಿದಿದ್ದುವು. ಇದರ ಬಗೆಗೆ ದೂರಿತ್ತ ಪತ್ರಗಳಿಗೆ ಉತ್ತರವೇ ಬಂದಿರಲಿಲ್ಲ. ಭಾರತೀಯ ಪ್ರಯಾಣಿ ಕರಿಗೆ ಬೆದರಿಕೆಯ ಪತ್ರಗಳು ಬಂದುವು: "ನೀವು ಹಿಂದಕ್ಕೆ ಹೋಗದಿದ್ದರೆ, ನಿಮ್ಮನ್ನೆಲ್ಲ ಖಂಡಿತವಾಗಿ ಸಮುದ್ರದಲ್ಲಿ ತಳ್ಳಲಾಗುವುದು. ನೀವು ಹಿಂದಿರುಗಲು ಒಪ್ಪಿದರೆ, ನಿಮ್ಮ ಪ್ರಯಾಣದ ಹಣವನ್ನು ಪಾವತಿ ಮಾಡಲಾಗುವುದು" ಇವಕ್ಕೆ ದೊರೆತ ಸಂಕ್ಷಿಪ್ತ ಉತ್ತರ ಹೀಗಿದ್ದಿತು: "ಪ್ರಯಾಣಿಕರು ಹಿಂದಿರುಗಲು ನಿರಾಕರಿಸಿದ್ದಾರೆ". ಸ್ಥಗಿತರಾಗಿದ್ದ ಪ್ರಯಾಣಿಕರ ಮಧ್ಯೆ ಓಡಾಡಿ ಗಾಂಧಿ ಅವರಿಗೆ ಉತ್ಸಾಹ ತುಂಬುತ್ತಿ ದ್ದರು. ಎಲ್ಲರೂ ಶಾಂತವಾಗಿಯೂ ಮತ್ತು ಧೈರ್ಯದಿಂದಲೂ ಇದ್ದರು. ಕಾಲ ಕಳೆಯು ವುದಕ್ಕಾಗಿ ಪ್ರಯಾಣಿಕರ ನಡುವೆ ಆಟಗಳನ್ನು ಏರ್ಪಡಿಸಲಾಯಿತು. ಕ್ರಿಸ್‌ಮಸ್ ಹಬ್ಬದ ದಿನ ಕಪ್ತಾನ, ತನ್ನ ಕೋಣೆಯ ಪ್ರಯಾಣಿಕರನ್ನು ಭೋಜನಕ್ಕೆ ಆಹ್ವಾನಿಸಿದನು. ಅಲ್ಲಿ ಗಾಂಧಿ, ಹಿಂಸೆಯ ಆಧಾರದ ಮೇಲೆ ನಿಂತ ಪಾಶ್ಚಾತ್ಯ ನಾಗರಿಕತೆಯ ವಿಷಯ ವಾಗಿ ಮಾತನಾಡಿ, ನೇಟಾಲಿನ ಬಿಳಿಯ ಜನರು ಬಹುಶಃ ಅದರ ಫಲವೆಂದು ತಿಳಿಸಿದರು. ಕಡೆಗೆ ಇಪ್ಪತ್ತೈದು ದಿನಗಳ ತರುವಾಯ ೧೮೯೭ರ ಜನವರಿ ೧೩ರಂದು ಬಂದರನ್ನು ಪ್ರವೇಶಿಸಲು ಹಡಗುಗಳಿಗೆ ಅವಕಾಶ ನೀಡಲಾಯಿತು. ಪ್ರಯಾಣಿಕರು ಭೂಸ್ಪರ್ಶ ಮಾಡಲು ಆಜ್ಞೆಯಾಯಿತು.

ಅಟಾರ್ನಿ ಜನರಲ್ ಮಿ. ಹ್ಯಾರಿ ಎಸ್ಕೊಂಬ್ ಅವರು ಒಂದು ದೋಣಿಯಲ್ಲಿ ಕುಳಿತು ಎಸ್. ಎಸ್. ಕೂರ್‌ಲ್ಯಾಂಡ್‌ನ ಸಮೀಪಕ್ಕೆ ಬಂದು, ಕಪ್ತಾನನಿಗೆ ಹೀಗೆ ಹೇಳಿ ದರು: "ಕಪ್ತಾನ, ನಿನ್ನ ಪ್ರಯಾಣಿಕರು ತಮ್ಮ ತಮ್ಮ ಸ್ವದೇಶದ ಹಳ್ಳಿಗಳಲ್ಲಿ ಎಷ್ಟು ಸುರಕ್ಷಿತರಾಗಿದ್ದರೋ. ನೇಟಾಲ್ ಶಾಸನದ ಆಶ್ರಯದಲ್ಲಿಯೂ ಅಷ್ಟೇ ಸುರಕ್ಷಿತರು ಎಂಬುದನ್ನು ಅವರಿಗೆ ನೀನು ತಿಳಿಸಬೇಕೆಂದು ಬಯಸುತ್ತೇನೆ".ಇನ್ನೊಂದು ಹಡಗಿಗೂ ಇದೇ ಸುದ್ದಿಯನ್ನು ಮುಟ್ಟಿಸಿದ ಮಿ. ಎಸ್ಕೊಂಬ್. ದಡಕ್ಕೆ ಬಂದು ಅಲ್ಲಿದ್ದ ಜನ ಸಮೂಹವನ್ನು ಉದ್ದೇಶಿಸಿ ಮಾತನಾಡಿದರು. ಅಗತ್ಯವಾಗಿ ಮಾಡಬೇಕೆಂದು ಉದ್ದೇ

ಶಿಸಿದುದನ್ನು ಆ ಜನ ಮಾಡಿರುವುದಾಗಿಯೂ ಇನ್ನು ಎಲ್ಲರೂ ಚದುರಬೇಕೆಂದೂ ರಾಣಿಯ ಹೆಸರಿನಲ್ಲಿ ತಾವು ಆಜ್ಞಾಪಿಸುವುದಾಗಿ ನುಡಿದರು. ಶೀಘ್ರದಲ್ಲಿಯೇ ನಡೆಯುವ ಸಂಸತ್ತಿನ ಅಧಿವೇಶನವೊಂದು ಈ ವಿಷಯವನ್ನು ಪರಿಶೀಲಿಸುವುದೆಂದೂ ಭರವಸೆ ಯಿತ್ತರು. ಭಾರತೀಯರ ವಿರುದ್ಧ ಪ್ರದರ್ಶನ ಮಾಡುವುದಕ್ಕಾಗಿ ಸೇರಿದ್ದ ೫,೦೦೦ ಮಂದಿ ಬಿಳಿಯ ಜನರ ಗುಂಪು ಕರಗಿ ಹೋಯಿತು.

ಎಲ್ಲ ಪ್ರಯಾಣಿಕರೂ ನದಿಯ ಹಾಯ್ಗುಡವಲ್ಲಿ ಭೂಮಿಗೆ ತಲುಪಿದರು. ಆದರೆ, ಗಾಂಧೀಜಿಗೆ ಒಂದು ಸುದ್ದಿ ಬಂದಿತು; ಕತ್ತಲಾಗುವವರೆಗೂ ಭೂಮಿಯನ್ನು ತಲುಪ ಬಾರದೆಂದು ಅದು ತಿಳಿಸಿತು. ಗಾಂಧಿ ಆ ಸಲಹೆಯನ್ನು ಪಾಲಿಸಲು ಒಪ್ಪಿದರು. ಆದರೆ, ಸ್ವಲ್ಪಕಾಲ ಕಳೆದ ಮೇಲೆ ಹಡಗಿನ ಕಂಪೆನಿಯ ಪ್ರತಿನಿಧಿಗೆ ನ್ಯಾಯಸಲಹೆ ಗಾರರಾಗಿದ್ದ ಮಿ. ಲಾಫ್ಟನ್ ಎನ್ನುವವರು ಹಡಗಿಗೆ ಬಂದು. ಗಾಂಧಿ ತಮ್ಮ ಜತೆಯಲ್ಲಿ ತೀರ ಪ್ರದೇಶಕ್ಕೆ ಬರಬೇಕೆಂದು ಸೂಚಿಸಿದರು. "ಮಿ. ಗಾಂಧಿಯವರು, ಕಳ್ಳನಂತೆ ರಾತ್ರಿಯಲ್ಲಿ ದರ್ಬಾನ್ ಪಟ್ಟಣಕ್ಕೆ ನುಸುಳಿಕೊಳ್ಳಬಾರದು. ಅವರು ಧೀರ ಪುರುಷನಂತೆ, ರಾಜಕೀಯ ನಾಯಕನಂತೆ ಪ್ರತಿಭಟನೆಯನ್ನು ಎದುರಿಸಬೇಕು" ಎಂದರು. ಅವರು ಕಪ್ತಾನನೊಡನೆ ಸಂಭಾಷಣೆ ನಡೆಸಿದರು. ತಾವೇ ಪೂರ್ಣ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವುದಾಗಿ ನುಡಿದ ಗಾಂಧಿ ತತ್‌ಕ್ಷಣ ತೀರ ಪ್ರದೇಶಕ್ಕೆ ಹೊರಡಲು ನಿರ್ಧಾರ ಮಾಡಿದರು. ಕಸ್ತೂರ ಬಾ ಮತ್ತು ಮಕ್ಕಳನ್ನು ಪ್ರತ್ಯೇಕವಾಗಿ ಕಳಿಸಲಾಯಿತು. ಅವರು ಗಾಂಧಿಯ ಶ್ರೀಮಂತ ಗೆಳೆಯ ಪಾರ್ಸೀ ರುಸ್ತುಂಜೀ ಅವರ ನಿವಾಸವನ್ನು ಸುರಕ್ಷಿತವಾಗಿ ತಲುಪಿದರು. ಗಾಂಧಿ ಭೂಮಿಯನ್ನು ಮುಟ್ಟುತ್ತಲೇ, ಕೆಲವರು ಹುಡುಗರು ಅವರನ್ನು ಗುರುತಿಸಿ, "ಗಾಂಧೀ, ಗಾಂಧೀ", "ಅವನನ್ನು ಹೊಡೆಯಿರಿ", "ಸುತ್ತುವರಿಯಿರಿ" ಎಂದು ಬೊಬ್ಬೆಯಿಟ್ಟರು. ಭೂಮಿಯನ್ನು ಮುಟ್ಟುವ ಸ್ಥಳದಲ್ಲಿ ಒಂದು ದೊಡ್ಡ ಗುಂಪು ಸೇರಿ, ಭಯೋತ್ಪಾದನೆ ಮಾಡುತ್ತಿತ್ತು. ಲಾಫ್ಟನ್ ಒಂದು ರಿಕ್ಷಾ ಗೊತ್ತು ಮಾಡಿದರು. ಆದರೆ ಜನರು ರಿಕ್ಷಾ ಹುಡುಗನನ್ನು ಕೊಂದು ಹಾಕು ವುದಾಗಿ ಬೆದರಿಸಿದರು. ಅವನು ರಿಕ್ಷಾವನ್ನು ಬಿಟ್ಟು ಓಡಿ ಹೋದನು. ಗಾಂಧಿ ಮತ್ತು ಲಾಫ್ಟನ್ ಮುಂದೆ ಹೋಗುತ್ತಿದ್ದಾಗ ಗುಂಪು ದೊಡ್ಡದಾಗುತ್ತಾ ಹೋಯಿತು. ಕಡೆಗೆ ಮುಂದುವರಿಯುವುದೇ ಕಷ್ಟವಾಯಿತು. ಈ ಗೊಂದಲ ಮತ್ತು ಗಲಭೆಯಲ್ಲಿ ಲಾಫ್ಟನ್ ಅವರನ್ನು ಗಾಂಧಿಯಿಂದ ಪ್ರತ್ಯೇಕಿಸಲಾಯಿತು. ಕಲ್ಲು, ಮೀನು, ಕೊಳೆತ ಮೊಟ್ಟೆ ಇವುಗಳೆಲ್ಲ ಗಾಂಧಿಯ ಸುತ್ತ ಬೀಳತೊಡಗಿದುವು. ಯಾರೋ ಅವರ ರುಮಾ ಲನ್ನು ಕಿತ್ತುಕೊಂಡರು; ಇತರರು ಗುದ್ದಲು ಮತ್ತು ಒದೆಯಲು ಪ್ರಾರಂಭಿಸಿದರು. ಗಾಂಧಿ ಪ್ರಜ್ಞಾಹೀನರಾಗುವ ಸ್ಥಿತಿಗೆ ಬಂದರು. ಅವರು ಒಂದು ಮನೆಯ ಮುಂದಿನ ಕಬ್ಬಿಣದ ಸಲಾಕಿಯನ್ನು ಹಿಡಿದುಕೊಂಡು ನಿಂತು ಉಸಿರು ಎಳೆದುಕೊಳ್ಳಲು ಯತ್ನಿ ಸಿದರು. ಆದರೆ ಸುತ್ತುವರಿಂದ ಜನ, ಗುದ್ದುತ್ತ, ಹೊಡೆಯುತ್ತ ಮುಂದುವರಿದರು.

ಪೋಲೀಸ್ ಸೂಪರಿಂಟೆಂಡೆಂಟರ ಪತ್ನಿ ಶ್ರೀಮತಿ ಅಲೆಗ್ಸಾಂಡರ್ ಎಂಬಾಕೆ

ಗಾಂಧಿಯನ್ನು ಬಲ್ಲವರಾಗಿದ್ದರು. ಅವರು ಆ ಮಾರ್ಗದಲ್ಲಿ ಹೋಗುತ್ತಿದ್ದರು. ಆಕೆ ತೂರಿ ಬರುತ್ತಿದ್ದ ಕಲ್ಲುಗಳ ಎದುರಿಗೆ ತಮ್ಮ ಛತ್ರಿಯನ್ನು ಬಿಚ್ಚಿ ಹಿಡಿದು, ಗಾಂಧಿಗೂ ಮತ್ತು ಗುಂಪಿಗೂ ನಡುವೆ ಅಡ್ಡವಾಗಿ ನಿಂತರು. ಇದು ಗುಂಪಿನ ರೋಷವನ್ನು ತಡೆ ಹಿಡಿಯಿತು. ಈ ಮಧ್ಯೆ ಒಬ್ಬ ಭಾರತೀಯ ಹುಡುಗ, ಗುಂಪು ಗಾಂಧಿಯನ್ನು ಕೊಂದು ಹಾಕುತ್ತಿದೆಯೆಂದು ಕಿರುಚುತ್ತಾ ಪೋಲೀಸ್ ನೆರವಿಗಾಗಿ ಓಡಿದನು. ಇಂಥ ಉತ್ಕಟ ಸಮಯದಲ್ಲಿ ಕೆಲವರು ಪೋಲೀಸ್ ಪ್ಯಾದೆಗಳು ಬಂದರು. ಪೋಲೀಸ್ ಸೂಪರಿಂಟೆಂ–ಡೆಂಟರು ಗಾಂಧಿಗೆ ಪೋಲೀಸ್ ಠಾಣೆಯಲ್ಲಿ ರಕ್ಷಣೆ ಕೊಡಲು ಮುಂದೆ ಬಂದರು. ಆದರೆ ಗಾಂಧಿ ಅದನ್ನು ಕೃತಜ್ಞತೆಯಿಂದ ತಿರಸ್ಕರಿಸಿದರು. "ಜನರಿಗೆ ತಮ್ಮ ತಪ್ಪು ಅರಿವಾದಾಗ ತಾವೇ ಖಂಡಿತ ಶಾಂತವಾಗುತ್ತಾರೆ, ಅವರ ನ್ಯಾಯಪರ ಭಾವನೆಯಲ್ಲಿ ನನಗೆ ನಂಬಿಕೆಯಿದೆ" ಎಂದರು. ಪೋಲೀಸರ ರಕ್ಷಣೆಯಲ್ಲಿ ಮುಂದೆ ಯಾವ ಅಪಾಯವೂ ಸಂಭವಿಸದೆ, ಅವರು ರುಸ್ತುಂಜೀಯವರ ನಿವಾಸವನ್ನು ತಲುಪಿದರು. ಗಾಂಧಿಗೆ ಮೈಯೆಲ್ಲ ಗಾಯಗಳಾಗಿದ್ದುವು. ಅಲ್ಲಿಯೇ ಇದ್ದ ಹಡಗಿನ ವೈದ್ಯ ಅವರಿಗೆ ಚಿಕಿತ್ಸೆ ನೀಡಿದನು. ಗಾಂಧಿಯ ಗೆಳೆಯರೂ ಮತ್ತು ಕುಟುಂಬದವರೂ, ಅವರಿಗಾಗಿ ತವಕದಿಂದ ಕಾದಿದ್ದರು.

ರಾತ್ರಿಯಾಗುವ ಸಮಯವಾಗಿತ್ತು. ಬಿಳಿಯ ಜನರು ರುಸ್ತುಂಜೀಯವರ ನಿವಾಸವನ್ನು ಸುತ್ತುವರಿದರು. "ನಮಗೆ ಗಾಂಧಿಯನ್ನು ಒಪ್ಪಿಸಿ" ಎಂದು ಕಿರುಚಿದರು. ಪೋಲೀಸ್ ಸೂಪರಿಂಟೆಂಡೆಂಟರು ಗಾಂಧಿಗೆ ಒಂದು ಸಂದೇಶ ಕಳಿಸಿದರು. "ನೀವು ನಿಮ್ಮ ಗೆಳೆಯರ ಮನೆಯನ್ನೂ ಅವರ ಆಸ್ತಿಯನ್ನೂ ಮತ್ತು ನಿಮ್ಮ ಕುಟುಂಬವನ್ನೂ ರಕ್ಷಿಸಿಕೊಳ್ಳಬೇಕಾದರೆ, ವೇಷಧರಿಸಿ, ಅಲ್ಲಿಂದ ತಪ್ಪಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ." ಅವರ ಸಲಹೆಯಂತೆ ಗಾಂಧಿ ಭಾರತೀಯ ಕಾನ್‌ಸ್ಟೇಬಲ್ಲನ ಸಮವಸ್ತ್ರವನ್ನೂ ರುಮಾಲಿನ ಬುಡದಲ್ಲಿ ಅಡಗಿದ್ದ ಲೋಹದ ಬೋಗುಣಿಯನ್ನೂ ಧರಿಸಿದರು. ಇಬ್ಬರು ಪತ್ತೆದಾರರು ಅವರ ಹಿಂದೆ ನಡೆದರು. ಒಬ್ಬಾತ ಭಾರತೀಯ ವ್ಯಾಪಾರಿಯ ವೇಷ ಹಾಕಿಕೊಂಡು, ಭಾರತೀಯನಂತೆ ಕಾಣಲು ಮುಖಕ್ಕೆ ಬಣ್ಣ ಹಚ್ಚಿಕೊಂಡನು. ಅವರು ಒಂದು ಕಿರು ಓಣಿಯಿಂದ ಪಕ್ಕದ ಅಂಗಡಿಯೊಂದಕ್ಕೆ ಹೋಗಿ, ಗೋಣಿ ಚೀಲಗಳ ರಾಶಿಯ ನಡುವೆ ತಪ್ಪಿಸಿಕೊಂಡು, ಬೇಲಿಗಳನ್ನು ಹಾರಿ, ಸ್ವಲ್ಪ ವೇಳೆಯ ಹಿಂದೆ ರಕ್ಷಣೆ ನೀಡುವುದಾಗಿ ಹೇಳಲಾಗಿದ್ದ ಪೋಲೀಸ್ ಠಾಣೆಯನ್ನು ತಲುಪಿದರು. ಈ ಮಧ್ಯೆ, ಪೋಲೀಸ್ ಸೂಪರಿಂಟೆಂಡೆಂಟರು, "ಗಾಂಧಿಯನ್ನು ನೆಲ್ಲಿ ಗಿಡಕ್ಕೆ ನೇಣು ಹಾಕಿ" ಎಂಬ ಹಾಡನ್ನು ಗುಂಪಿನಿಂದ ಹಾಡಿಸುತ್ತಾ ಅದನ್ನು ವಿನೋದವಾಗಿಟ್ಟಿದ್ದರು. ಗಾಂಧಿ ತಪ್ಪಿಸಿಕೊಂಡು ಹೋದರೆಂಬ ಸುದ್ದಿ ಗೊತ್ತಾದ ಕೂಡಲೇ, ಕ್ರೋಧ ಮತ್ತು ನಗುವಿನ ಮಿಶ್ರ ಭಾವದಿಂದ ಗುಂಪು ಚೆದುರಿತು.

ವಸಾಹತುಗಳಿಗೆ ರಾಜ್ಯಕಾರ್ಯದರ್ಶಿಯಾಗಿದ್ದ ಮಿ. ಜೋಸೆಫ್ ಚೇಂಬರ್‌ಲೇನ್ ನೇಟಾಲ್ ಸರಕಾರಕ್ಕೆ ಕೇಬಲ್ ಕಳಿಸಿ, ಗಾಂಧಿ ಮೇಲೆ ಆಕ್ರಮಣ ನಡೆಸಿದವರನ್ನು

ಕಾನೂನಿನ ಪ್ರಕಾರ, ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಪಡಿಸಬೇಕೆಂದು ಸೂಚಿಸಿದರು. ಆದರೆ ನೇಟಾಲ್ ಸರ್ಕಾರಕ್ಕೆ ಗಾಂಧಿ ಹೇಳಿದರು: "ನಾನು ಯಾರ ಮೇಲೂ ಕಾನೂನಿನ ಪ್ರಕಾರ ಕ್ರಮ ಜರುಗಿಸಲು ಇಚ್ಛಿಸುವುದಿಲ್ಲ. ಆಕ್ರಮಣಕಾರರನ್ನು ನಿಂದಿಸುವುದೂ ಇಲ್ಲ. ನಾನು ಭಾರತದಲ್ಲಿದ್ದಾಗ ನೇಟಾಲಿನ ಬಿಳಿಯ ಜನರ ಬಗೆಗೆ ಉತ್ಪ್ರೇಕ್ಷೆಯ ಹೇಳಿಕೆಗಳನ್ನು ಕೊಟ್ಟು, ಅವರನ್ನು ನಿಂದೆಗೆ ಗುರಿಮಾಡಿದ್ದೇನೆಂದು ಅವರು ತಪ್ಪಾಗಿ ಭಾವಿಸಿದ್ದರು. ನಾನು ಹೇಳಬೇಕೆಂದರೆ ಮುಖಂಡರು ಇದಕ್ಕೆ ಹೊಣೆಯಾಗುತ್ತಾರೆ. ಆದರೆ ನಾನು ಯಾರ ಮೇಲೂ ತಪ್ಪು ಹೊರಿಸಿ ವಿಚಾರಣೆಗೆ ಗುರಿಪಡಿಸಲು ಇಚ್ಛಿಸುವುದಿಲ್ಲ. ಸತ್ಯಾಂಶ ಗೊತ್ತಾದಾಗ ಅವರು ತಮ್ಮ ನಡತೆಗೆ ತಾವೇ ಪಶ್ಚಾತ್ತಾಪ ಪಡುವರೆಂದು ನಂಬಿದ್ದೇನೆ".

ಬಿರುಗಾಳಿ ಬಂದಂತೆಯೇ ಇಳಿದು ಹೋಯಿತು. ಗಾಂಧಿ ನಿರಪರಾಧಿಯೆಂದು ಪತ್ರಿಕೆಗಳು ಘೋಷಿಸಿ, ಗುಂಪಿನ ವರ್ತನೆಯನ್ನು ಖಂಡಿಸಿದುವು. ಗಾಂಧಿ ಮೂರು ಅಥವಾ ನಾಲ್ಕು ದಿವಸಗಳ ತರುವಾಯ ತಮ್ಮ ಮನೆಗೆ ಹೋದರು; ಎಂದಿನಂತೆ ತಮ್ಮ ಕಾರ್ಯದಲ್ಲಿ ನಿರತರಾದರು.

ನೇಟಾಲ್ ಶಾಸನಸಭೆಯಲ್ಲಿ ಎರಡು ಮಸೂದೆಗಳು ಮಂಡಿಸಲ್ಪಟ್ಟವು. ಒಂದು, ಭಾರತೀಯ ವ್ಯಾಪಾರಗಾರನಿಗೆ ತೀವ್ರ ಪ್ರತಿಕೂಲವನ್ನು ಉಂಟು ಮಾಡುವಂತಿತ್ತು; ಇನ್ನೊಂದು ಭಾರತೀಯ ವಲಸೆಗಾರಿಕೆಯ ಮೇಲೆ ಕಟ್ಟುನಿಟ್ಟಾದ ನಿರ್ಬಂಧಗಳನ್ನು ವಿಧಿಸುವಂತಿತ್ತು.

ಗಾಂಧಿಯ ಸಾರ್ವಜನಿಕ ಕಾರ್ಯಗಳು ಬಹುಮಟ್ಟಿಗೆ ಹೆಚ್ಚಿದುವು. ಭಾರತೀಯ ಸಮುದಾಯವು ತನ್ನ ಕರ್ತವ್ಯದ ಬಗೆಗೆ ಹೆಚ್ಚು ಜಾಗ್ರತವಾಯಿತು. ಮಸೂದೆಗಳು ಭಾರತೀಯ ಭಾಷೆಗಳಿಗೆ ಅನುವಾದವಾದುವು; ಅವುಗಳ ಪರಿಣಾಮಗಳು ಪೂರ್ಣವಾಗಿ ವಿವರಿಸಲ್ಪಟ್ಟವು. ಭಾರತೀಯರು ವಸಾಹತುಗಳ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಮಸೂದೆಗಳು ಶಾಸನಗಳಾದುವು.

ನೇಟಾಲ್ ಇಂಡಿಯನ್ ಕಾಂಗ್ರೆಸ್ಸಿನ ಪರವಾಗಿ, ಗಾಂಧಿ, ಹೆಚ್ಚು ನಿಧಿ ಸಂಗ್ರಹಕ್ಕೂ ಮತ್ತು ಸದಸ್ಯತ್ವಕ್ಕೂ ಮನವಿ ಮಾಡಿಕೊಂಡರು. ಅವರು ಕಾಂಗ್ರೆಸ್ಸಿಗಾಗಿಯೇ ಒಂದು ಭದ್ರವಾದ ನಿಧಿ ಕೂಡಿಸಿ, ಅದರ ಬಡ್ಡಿಯಿಂದ ಕೆಲಸಕಾರ್ಯಗಳು ನಡೆದುಕೊಂಡು ಹೋಗುವಂತಾಗಬೇಕೆಂದು ಅಪೇಕ್ಷಿಸಿದರು.

ಗಾಂಧಿ, ದರ್ಬಾನಿನ ಹೊರವಲಯದ ಸುಂದರವಾದ ಪ್ರದೇಶದಲ್ಲಿ ಒಂದು ಸಣ್ಣ ಮನೆಯನ್ನು ಹೊಂದಿದ್ದರು. ಅದು ತಕ್ಕ ಮಟ್ಟಿಗೆ ಸುಸಜ್ಜಿತವಾಗಿತ್ತು. ಅವರ ಆಹಾರ ಸರಳವಾಗಿದ್ದಿತು. ಆದರೆ ಅವರು ಇಂಗ್ಲಿಷ್ ಗೆಳೆಯರನ್ನೂ ಮತ್ತು ಭಾರತೀಯ ಸಹೋದ್ಯೋಗಿಗಳನ್ನೂ ಆಹ್ವಾನಿಸುತ್ತಿದ್ದುದರಿಂದ ಮನೆಯ ವೆಚ್ಚ ಸಾಕಷ್ಟು ಹೆಚ್ಚಾಗಿರುತ್ತಿತ್ತು. ಅವರು ಒಬ್ಬ ಸೇವಕನನ್ನೂ ಮತ್ತು ಅಡಿಗೆಯವನನ್ನೂ ಇಟ್ಟುಕೊಂಡಿದ್ದರು. ಅವರು ಮನೆಯಲ್ಲಿ, ಮಕ್ಕಳಿಗೆ ಉಡುಪು, ನಡತೆ ಎಲ್ಲದರಲ್ಲಿಯೂ ಇಂಗ್ಲಿಷ್ ಪದ್ಧತಿ

ಯಂತೆ ಇರಬೇಕೆಂದು ನಿಯಾಮಕ ಮಾಡಿದರು. ಮನೆ ಮತ್ತು ಮಕ್ಕಳ ವ್ಯವಸ್ಥೆ ಯೇನೋ ಆಯಿತು. ಆದರೆ ಮುಂದಿನದು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆ. ಐರೋಪ್ಯ ಪಾಠಶಾಲೆಗಳು ತೃಪ್ತಿಕರವಾಗಿರಲಿಲ್ಲ. ಮಕ್ಕಳನ್ನು ಅಲ್ಲಿ ಸೇರಿಸಿಕೊಂಡರೆ ಅದೇ ಒಂದು ಅನುಗ್ರಹದಂತಿತ್ತು. ಕ್ರೈಸ್ತಮತ ಪ್ರಸಾರ ಸಂಸ್ಥೆಗಳ ಶಾಲೆಗಳಿಗೆ ಕಳಿಸಲೂ ಗಾಂಧಿಗೆ ಇಷ್ಟವಿರಲಿಲ್ಲ. ಒಬ್ಬ ಇಂಗ್ಲಿಷ್ ಶಿಕ್ಷಕಿಯನ್ನು ನೇಮಕ ಮಾಡಿದರು. ಮತ್ತು ಗುಜರಾತಿಯಲ್ಲಿ ತಾವೇ ಪಾಠ ಹೇಳಿಕೊಡಲಾರಂಭಿಸಿದರು.

ಗಾಂಧಿಯಲ್ಲಿ ಒಂದು ತೀವ್ರ ಪರಿವರ್ತನೆಯಾಗುತ್ತಿತ್ತು. ಅವರು ಸುಖ ಸೌಲಭ್ಯ ಗಳ ಜೀವನವನ್ನು ಪ್ರಾರಂಭಿಸಿದ್ದರು; ಆದರೆ ಅದು ಬಹು ಕಾಲ ನಿಲ್ಲಲಿಲ್ಲ. ಆತ್ಮ ಪರೀಕ್ಷಣೆಯ ಕಾಲ ಸಂಭವಿಸಿತು; ಅವರ ಜೀವನ, ಕ್ರಮೇಣ ಸರಳತೆಯ ಕಡೆಗೆ ತಿರುಗಿತು. ಮನೆಯ ವೆಚ್ಚವನ್ನು ಕಡಮೆ ಮಾಡಲು ತಮ್ಮ ಬಟ್ಟೆಗಳನ್ನು ತಾವೇ ಒಗೆದು ಕೊಳ್ಳಲಾರಂಭಿಸಿದರು. ಬಟ್ಟೆ ಒಗೆಯುವುದರ ವಿಷಯವಾಗಿ ಒಂದು ಪುಸ್ತಕವನ್ನು ಕೊಂಡು, ಅದರ ಕಲೆಯನ್ನು ಅಧ್ಯಯನ ಮಾಡಿ, ಅದನ್ನು ಕಸ್ತೂರ ಬಾಗೆ ಕಲಿಸಿದರು. ಕ್ಷೌರಿಕನ ಮೇಲೆ ಹೊಂದಿದ್ದ ಅವಲಂಬನೆಯನ್ನೂ ತ್ಯಜಿಸಿದರು. ಕೂದಲು ಕತ್ತರಿಸುವ ಕತ್ತರಿಯನ್ನು ಕೊಂಡು, ಕನ್ನಡಿಯ ಮುಂದೆ ನಿಂತು, ತಾವೇ ಕೂದಲನ್ನು ಕತ್ತರಿಸಿ ಕೊಂಡರು.

ಗಾಂಧಿಯ ಕಾರ್ಯಾಲಯದಲ್ಲಿದ್ದ ಹಿಂದೂ ಮತ್ತು ಕ್ರೈಸ್ತ ಗುಮಾಸ್ತರು ಸಾಮಾನ್ಯ ವಾಗಿ ಅವರೊಡನೆಯೇ ವಾಸಿಸುತ್ತಿದ್ದರು. ಅವರು ತಮ್ಮ ಕೊಠಡಿಗಳಲ್ಲಿದ್ದ ಮೂತ್ರದ ಪಾತ್ರೆಗಳನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ಒಬ್ಬ ಹೊಸಬ ಕ್ರೈಸ್ತ ಗುಮಾಸ್ತೆ— ಅವನು ಪಂಚಮ ವರ್ಣದ ತಂದೆ ತಾಯಿಗಳಿಗೆ ಜನಿಸಿದ್ದವನು—ತನ್ನ ಕರ್ತವ್ಯವನ್ನು ಅರಿತುಕೊಂಡಿರಲಿಲ್ಲ. ಕೆಲವು ವೇಳೆ ಕಸ್ತೂರ ಬಾ ಇತರರ ಮೂತ್ರಪಾತ್ರೆಗಳನ್ನು ಶುದ್ಧಮಾಡುತ್ತಿದ್ದುದುಂಟು. ಆದರೆ ಅಸ್ಪೃಶ್ಯನ ಪಾತ್ರೆಯನ್ನು ಶುದ್ಧ ಮಾಡುವು ದೆಂದರೆ, ಆಕೆಯ ಸಹನೆ ಮೀರಿತು. ಒಂದು ದಿನ ಅವರು ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಂಡು ಮೆಟ್ಟಲಿನಿಂದ ಕೆಳಗೆ ಇಳಿಯುತ್ತಿದ್ದರು. ಅವರ ಕಣ್ಣಿನಿಂದ ಅಶ್ರು ಧಾರಾಪೂರ್ವಕವಾಗಿ ಹರಿಯುತ್ತಿತ್ತು. ಅವರು ಪಾತ್ರೆಯನ್ನು ಕೇವಲ ಹೊತ್ತು ತರು ವುದರಲ್ಲಿಯೇ ತೃಪ್ತಿಪಟ್ಟುಕೊಳ್ಳದೆ, ಅದನ್ನು ಸಂತೋಷದಿಂದ ಮಾಡಬೇಕೆಂದು ಗಾಂಧಿ ಬಯಸಿದರು. ಅವರು ಬಾ ಅವರ ಮೇಲೆ ಸಿಟ್ಟಿಗೆದ್ದು, ರಟ್ಟೆ ಹಿಡಿದು ಬಾಗಿಲ ವರೆಗೂ ಎಳೆದುಕೊಂಡು ಹೋದರು. "ನಿಮಗೆ ನಾಚಿಕೆಯಾಗುವುದಿಲ್ಲವೆ? ನಾನೆಲ್ಲಿಗೆ ಹೋಗಬೇಕು?" ಎಂದರು ಬಾ.

ಯಾವುದಾದರೂ ಗಟ್ಟಿಯಾದ ಸೇವಾಕ್ಷೇತ್ರವನ್ನು ಆರಿಸಿಕೊಳ್ಳಬೇಕೆಂಬ ಪ್ರಶ್ನೆ ಗಾಂಧಿಯ ಮನಸ್ಸಿನಲ್ಲಿ ಒಂದೇ ಸಮನೆ ಕೊರೆಯುತ್ತಿದ್ದಿತು. ಒಮ್ಮೆ ಕುಷ್ಠರೋಗಿ ಯೊಬ್ಬ ಅವರ ಮನೆ ಬಾಗಿಲಿಗೆ ಬಂದಾಗ, ಅವನಿಗೆ ಆಶ್ರಯ ನೀಡಿ, ಅವನ ಗಾಯ ಗಳಿಗೆ ಔಷಧ ಹಚ್ಚಿ, ಅವನ ಸೇವೆ ಮಾಡಲಾರಂಭಿಸಿದರು. ಕೆಲವು ದಿನಗಳ ಮೇಲೆ

ಅವನನ್ನು ವೈದ್ಯಶಾಲೆಗೆ ಕಳಿಸಿದರು. ಗಾಂಧಿ ಹೆಚ್ಚು ಮಾನವೀಯ ಕಾರ್ಯ–ಸ್ಥಿರ ಸ್ವರೂಪವನ್ನು–ಮಾಡಲು ಬಯಸಿದರು. ಆದುದರಿಂದ ಒಂದು ಸಣ್ಣ ವೈದ್ಯಶಾಲೆ ಯಲ್ಲಿ ದಿನವೂ ಕೆಲವು ಘಂಟೆಗಳ ಕಾಲ ಕೆಲಸ ಮಾಡಿದರು. ರೋಗಿಗಳ ದೂರುಗಳನ್ನು ತಿಳಿದುಕೊಳ್ಳುವುದು ಅವುಗಳನ್ನು ವೈದ್ಯರ ಗಮನಕ್ಕೆ ತರುವುದು ಮತ್ತು ವೈದ್ಯರ ಸೂಚನೆಯಂತೆ ಔಷಧಿಯನ್ನು ಕೊಡುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. ಇದು ಅವರಿಗೆ, ತೊಂದರೆಗೀಡಾದ ಭಾರತೀಯರ, ಅದರಲ್ಲಿಯೂ ಬಹುಮಂದಿ ಕರಾರುಬದ್ಧ ಕಾರ್ಮಿಕರ, ನಿಕಟ ಸಂಪರ್ಕ ಪಡೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಿತು.

ಗಾಂಧಿಯ ಇಬ್ಬರು ಗಂಡುಮಕ್ಕಳು ದಕ್ಷಿಣ ಆಫ್ರಿಕಾದಲ್ಲಿ ಜನಿಸಿದರು. ಅವರು ವೈದ್ಯಶಾಲೆಯಲ್ಲಿ ಹೊಂದಿದ್ದ ಅನುಭವದಿಂದ ಮಕ್ಕಳನ್ನು ಪೋಷಿಸಿ, ಬೆಳಸಲು, ಅನುಕೂಲವಾಯಿತು. 'ತಾಯಿಗೆ ಸಲಹೆಗಳು' (Advice to mother) ಎಂಬ ಪುಸ್ತಕವನ್ನು ಓದಿ, ಶಿಶುಪಾಲನೆ ಮಾಡಿದರು. ಕಡೆಯ ಮಗ ಹುಟ್ಟಿದಾಗ ತಾವೇ ಸೂಲಗಿತ್ತಿಯ ಕೆಲಸವನ್ನೂ ಮಾಡಿದರು. ಅವರು ಇನ್ನು ಹೆಚ್ಚು ಮಕ್ಕಳನ್ನು ಅಪೇಕ್ಷಿ ಸಲಿಲ್ಲ. ಇಂದ್ರಿಯ ನಿಗ್ರಹ ಸಾಧಿಸಲು ಶ್ರಮಿಸಲಾರಂಭಿಸಿದರು.

ಅಲ್ಲಿನ ಭಾರತೀಯರಿಗೆ ಶಿಕ್ಷಣ ನೀಡಿ ತಾಯ್ನಾಡಿನ ವಿದ್ಯಮಾನಗಳ ಬಗೆಗೆ ಅವರಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿದರು. ಎಲ್ಲರೂ ಸೇರಿ, ಭಾರತದ ಕ್ಷಾಮ ಪರಿ ಹಾರಕ್ಕೆ ಒಳ್ಳೇ ಕಾಣಿಕೆಯನ್ನು ಕಳಿಸಿಕೊಟ್ಟರು.

ಗಾಂಧಿ ಭಾರತಕ್ಕೆ ನಿಯೋಗ ಹೋಗಿ ಬಂದುದು ಫಲದಾಯಕವಾಯಿತು. ೧೮೯೬ರ ಕಲ್ಕತ್ತಾ ಕಾಂಗ್ರೆಸ್, ದಕ್ಷಿಣ ಆಫ್ರಿಕಾದ ಭಾರತೀಯರ ಅನರ್ಹತೆಗಳ ವಿರುದ್ಧ ಪ್ರತಿಭಟನೆ ಸೂಚಿಸುವ ನಿರ್ಣಯ ಮಾಡಿತು. ಮುಂದಿನ ವರ್ಷವೂ ಆ ನಿರ್ಣಯ ಮತ್ತೆ ಪುನರುಚ್ಚರಿಸಲ್ಪಟ್ಟಿತು.

ಯುದ್ಧ ಭೂಮಿಯಲ್ಲಿ

೧೮೯೯–೧೯೦೧

೧೮೯೯ರ ಅಕ್ಟೋಬರ್ ತಿಂಗಳಲ್ಲಿ ಬೋಯರ್ ಯುದ್ಧ ಆರಂಭವಾಯಿತು. ಒಂದರ ಹಿಂದೆ ಒಂದು ಪ್ರಸಂಗಗಳು ಶೀಘ್ರಗತಿಯಲ್ಲಿ ಸಂಭವಿಸಿದುವು. ಅಕ್ಟೋಬರ್ ೩೦ ರಂದು ಬ್ರಿಟಿಷ್ ಸೈನ್ಯವು ಲೇಡಿಸ್ಮಿತ್‌ಗೆ ಅಟ್ಟಲ್ಪಟ್ಟಿತು. ನವೆಂಬರ್ ತಿಂಗಳಲ್ಲಿ ಪಟ್ಟಣದ ತಂತಿ ಸಮಾಚಾರದ ಸಂಬಂಧ ಮತ್ತು ರೈಲು ದಾರಿ ಕತ್ತರಿಸಲ್ಪಟ್ಟವು. ನವೆಂಬರ್ ೧೦ ರಂದು ಬೋಯರರು ಕೋಲೆನ್ಸೋವನ್ನು ವಶಪಡಿಸಿಕೊಂಡರು; ಕೆಲವರನ್ನು ಕೈದಿಗಳನ್ನಾಗಿ ಹಿಡಿದರು. ಅವರ ಪೈಕಿ, ಮಿ. ವಿನ್‌ಸ್ಟನ್ ಚರ್ಚಿಲ್ ಸಹ ಇದ್ದರು. ದರ್ಬಾನಿನಲ್ಲಿ ಅಗಾಧ ಕೋಲಾಹಲವುಂಟಾಯಿತು. ಸಮಾಜದಲ್ಲಿ ಎಲ್ಲ ವರ್ಗಗಳವರನ್ನೂ ಅದು ಒಟ್ಟುಗೂಡಿಸಿತು. ರಣಮುಖಕ್ಕೆ ಹೋಗಲು ಬಯಸಿದವರಿಗೆಲ್ಲ ವೀರ ಪದವಿಯನ್ನು ನೀಡಲಾಯಿತು.

ಗಾಂಧಿಯ ಸಹಾನುಭೂತಿ ಬೋಯರರ ಕಡೆಗಿತ್ತು. ಅಂಥ ವಿಷಯಗಳಲ್ಲಿ, ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಕಾರ್ಯಾಚರಣೆಗೆ ತರಲು ತಮಗಿನ್ನೂ ಹಕ್ಕಿಲ್ಲವೆಂದು ಅವರು ನಂಬಿದ್ದರು. ಅವರ ದೇಶಬಾಂಧವರಲ್ಲಿ ಕೆಲವರು ಉಗ್ರವಾಗಿ ವಿರೋಧಿಸಿದರೂ, ಅವರು ಸಾಮ್ರಾಜ್ಯದ ಬಗೆಗೆ ಹೊಂದಿದ್ದ ನಿಷ್ಠೆ ಅವರನ್ನು ಬ್ರಿಟಿಷರ ಪಕ್ಷ ಸೇರುವಂತೆ ಮಾಡಿತು. ಬ್ರಿಟಿಷ್ ಪ್ರಜೆಯಾಗಿ ತಾವು ಹಕ್ಕುಗಳನ್ನು ಕೇಳಿದಂತೆಯೇ ಆ ಸಾಮ್ರಾಜ್ಯವನ್ನು ರಕ್ಷಿಸುವ ಕಾರ್ಯದಲ್ಲಿ ಭಾಗವಹಿಸುವುದು ತಮ್ಮ ಕರ್ತವ್ಯವೆಂದೂ ಅವರು ಭಾವಿಸಿದ್ದರು. ಅವರು ೧೧೦೦ ಜನರುಳ್ಳ ಮತ್ತು ೪೦ ನಾಯಕರುಳ್ಳ ಒಂದು ಪಡೆಯನ್ನು ಕೂಡಿಸಿದರು. ಸುಮಾರು ೩೦೦ ಮಂದಿ ಸ್ವತಂತ್ರ ಭಾರತೀಯರಿದ್ದರು: ಉಳಿದವರು ಕರಾರು ಬದ್ಧ ಕಾರ್ಮಿಕರು. ಭಾರತೀಯ ಶುಶ್ರೂಷಾ ಪಡೆಯೊಂದು ರಚಿತವಾಯಿತು. ಡಾ. ಬೂತ್, ಅವರಿಗೆಲ್ಲ ಪ್ರಥಮ ಚಿಕಿತ್ಸೆ ಕಲಿಸಿದರು.

ಸರಕಾರಕ್ಕೆ ಗಾಂಧಿ ಈ ರೀತಿ ಬರೆದರು: "ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವ ರೀತಿ ನಮಗೆ ತಿಳಿದಿಲ್ಲ. ಅದು ನಮ್ಮ ತಪ್ಪಲ್ಲ; ಅದು ನಮಗೆ ಬರದೆ ಇರುವುದು ಬಹುಶಃ ನಮ್ಮ ದುರದೃಷ್ಟವೇ. ಆದರೆ ಅದಕ್ಕಿಂತ ಏನೂ ಕಡಮೆಯಲ್ಲದ ಇತರ ಕರ್ತವ್ಯಗಳೂ ಇವೆ; ಅವು ಯಾವ ರೀತಿಯವೇ ಆದರೂ ಅವುಗಳನ್ನು ಮಾಡುವ ಅವಕಾಶ ನಮಗೆ ದೊರಕಿದರೆ, ನಮಗೊಂದು ಭಾಗ್ಯವೆಂದೇ ಪರಿಗಣಿಸುತ್ತೇವೆ. ಈ ವಿನೀತ ಸೇವಾ ಕೊಡುಗೆಯ ಉದ್ದೇಶವಾದರೂ ಇಷ್ಟೆ: ಭಾರತೀಯರೂ ಸಹ ಸಾಮ್ರಾಜ್ಞಿ ರಾಣಿಯ ಇತರ ಪ್ರಜೆಗಳಂತೆಯೇ ಯುದ್ಧ ಭೂಮಿಯಲ್ಲಿ ತಮ್ಮ ಕರ್ತವ್ಯ ಸಲ್ಲಿಸಲು ಸಿದ್ಧರಿದ್ದಾರೆಂಬುದೇ ಆಗಿದೆ. ಭಾರತದ ಸ್ವಾಮಿನಿಷ್ಠೆಯ ದ್ಯೋತಕವಿದು".

ಗ್ರೇಟ್ ಬ್ರಿಟನಿನ್ನ ಕೆಲವರು ಸಮಾಜವಾದಿಗಳು ಗಾಂಧಿಯ ಈ ಅಭಿಪ್ರಾಯ ದಲ್ಲಿ ಭಾಗಿಗಳಾಗಿದ್ದರು. ಬರ್ನಾರ್ಡ್ ಷಾ ಒಂದು ಪುಟ್ಟ ಹೊತ್ತಗೆಯಲ್ಲಿ ಹೀಗೆ ಉಲ್ಲೇಖಿ ಸಿದರು: ಇಂದು ನಾಗರಿಕತೆಯ ಹಿತದೃಷ್ಟಿಯಿಂದ ಒಂದು ಪ್ರಬಲಶಕ್ತಿ ಪ್ರಭುತ್ವ ನಡಸಬೇಕು. ಜನ್ಮದ ಗಣೆಗಳು ಅಂತರ ರಾಷ್ಟ್ರೀಯವಾಗಬೇಕಾದರೂ, 'ಜಾಗತಿಕ ಸಂಯುಕ್ತ ರಾಷ್ಟ್ರವಾಗಲು ಬ್ರಿಟಿಷ್ ಚಕ್ರಾಧಿಪತ್ಯವೊಂದೇ ಪರ್ಯಾಯವಾಗಿ ದೊರಕು ವಂಥದು'.

ಬ್ರಿಟಿಷರು ಮೊದಲು ಗಾಂಧಿಯವರ ನೆರವನ್ನು ಸ್ವೀಕರಿಸಲು ನಿರಾಕರಿಸಿದರು. ಸಹಾಯ ನೀಡಲು ಗಾಂಧಿ ಪದೇ ಪದೇ ಒತ್ತಾಯ ಮಾಡಿದುದರಿಂದ ಹೀಗೆ ಬರೆದರು: "ಭಾರತೀಯರಾದ ನಿಮಗೆ ಯುದ್ಧವೆಂದರೇನೋ ಗೊತ್ತಿಲ್ಲ. ನೀವು ಬಂದು ಸೈನ್ಯಕ್ಕೆ ಅಡಚಣೆಯೇ ಆದೀರಿ. ನಮಗೆ ನೀವು ಸಹಾಯ ಮಾಡುವುದಕ್ಕೆ ಬದಲಾಗಿ, ನಿಮ್ಮನ್ನು ನಾವೇ ನೋಡಿಕೊಳ್ಳಬೇಕಾಗುತ್ತದೆ". ಒಂದು ಸಾಮಾನ್ಯ ತಿರಸ್ಕಾರದ ಮಾತು ಹೀಗೆ ಪ್ರಚಲಿತವಿತ್ತು: "ವಸಾಹತುವಿಗೆ ಅಪಾಯ ಸಂಭವಿಸಿದರೆ, ಭಾರತೀಯರು ಪಲಾ ಯನ್ನ ಮಾಡುತ್ತಾರೆ". ಆದರೆ ಮುಂದೆ ಸರಕಾರಕ್ಕೆ ಆದ ಪರಾಭವದಿಂದ ಅದರ ಮನೋವೃತ್ತಿ ಬದಲಾಯಿಸಿತು.

ಬ್ರಿಟಿಷರೂ ಮತ್ತು ಬೋಯರರೂ ಪ್ರಚಂಡ ಮಾರಣ ಹೋರಾಟದಲ್ಲಿ ತೊಡಗಿದ್ದರು. ಪ್ರತಿಯೊಬ್ಬರ ಸೇವೆಯೂ ಅಗತ್ಯವಾಯಿತು. ೧೮೯೯ರ ಕೊನೆಯ ಭಾಗದಲ್ಲಿ ಗಾಂಧಿ ನೀಡಿದ ಸೇವಾ ಸಲಹೆಯನ್ನು ಸ್ವೀಕರಿಸಲಾಯಿತು. ಭಾರತೀಯ ಶುಶ್ರೂಷಾ ಪಡೆಯ ಅಧಿಕಾರಿಗಳೂ ಮತ್ತು ಕೆಲಸಗಾರರೂ ಸಾಮಾನ್ಯ ವೇತನವನ್ನು ಮಾತ್ರ ಪಡೆಯುತ್ತಿದ್ದರು. ನಾಯಕರ ಸೇವೆ ಉಚಿತವಾಗಿದ್ದಿತು. ಭಾರತೀಯ ವರ್ತಕರು ಸಾಮಗ್ರಿಗಳನ್ನೂ ಮತ್ತು ಸಮವಸ್ತ್ರಗಳನ್ನೂ ಒದಗಿಸಿದರು. ಕೆಲವು ಸಮಯಗಳಲ್ಲಿ ಭಾರತೀಯರು ಇಪ್ಪತ್ತರಿಂದ ಇಪ್ಪತ್ತೈದು ಮೈಲಿಗಳ ದೂರ, ಗಾಯ ಗೊಂಡವರನ್ನು ಡೋಲಿಗಳ ಮೇಲೆ ಹೊತ್ತು ನಡೆಯ ಬೇಕಾಗಿದ್ದಿತು. ಗಾಂಧಿ ಇಂಥ ಒಂದು ತಂಡದ ನಾಯಕರಾಗಿದ್ದರು. ಜನರಲ್ ವುಡ್‌ಗೇಟ್ ಗಾಯಗೊಂಡು ಬಿದ್ದಾಗ, ಸಾವಿನ ಸಮೀಪದಲ್ಲಿದ್ದ ಆ ವ್ಯಕ್ತಿಯನ್ನು ಗಾಂಧಿವಶಕ್ಕೆ ಕೊಡಲಾಯಿತು. ಗಾಂಧಿ ಆತನನ್ನು ರಣರಂಗದ ಆಸ್ಪತ್ರೆಯಿಂದ ಕೇಂದ್ರ ಆಸ್ಪತ್ರೆಗೆ ಒಯ್ಯಲು ನೆರ ವಾದರು. ಅದು ಮೂವತ್ತು ಮೈಲಿ ದೂರದಲ್ಲಿತ್ತು. ಬಿಸಿಲು, ಧೂಳು, ಇವುಗಳ ಜೊತೆಗೆ, ಬಿಡಾರವನ್ನು ಸೇರುವುದರೊಳಗೆ ಜನರಲ್ ಎಲ್ಲಿ ಮೃತಿ ಹೊಂದುವರೋ ಎಂಬ ಭೀತಿ ಬೇರೆ ತುಂಬಿದ್ದಿತು.

೧೯೦೦ರ ಫೆಬ್ರವರಿ ವೇಳೆಗೆ ಬ್ರಿಟಿಷರು ಜಯ ಗಳಿಸಿದುದರಿಂದ ಎರಡು ತಿಂಗಳು ಗಳ ಅಮೋಘ ಸೇವೆಯ ತರುವಾಯ ಭಾರತೀಯ ಶುಶ್ರೂಷಾ ತಂಡವನ್ನು ವಿಸರ್ಜಿಸ ಲಾಯಿತು. ಯುದ್ಧ ಇನ್ನೂ ಪೂರ್ಣವಾಗಿ ನಿಂತಿರಲಿಲ್ಲ; ಅಗತ್ಯಬಿದ್ದರೆ ಭಾರತೀಯರ ಸೇವೆಯನ್ನು ಉಪಯೋಗಿಸಿಕೊಳ್ಳುವುದಾಗಿ ಸರಕಾರ ಘೋಷಿಸಿತ್ತು. ೧೯೦೨ರ ಮೇ

ತಿಂಗಳಿನಲ್ಲಿ ಬೋಯರರು ಸಂಪೂರ್ಣವಾಗಿ ಶರಣಾಗತರಾದರು. ಬ್ರಿಟಿಷ್ ಪತ್ರಿಕೆಗಳು ಭಾರತೀಯ ಶುಶ್ರೂಷಾ ತಂಡದ ಸೇವೆಯನ್ನು ಶ್ಲಾಘಿಸಿ ಬರೆದುವು. "ನಾವೆಲ್ಲ ಸಾಮ್ರಾಜ್ಯದ ಪುತ್ರರು" ಎಂಬ ಪಲ್ಲವಿಯಿಂದ ಕೂಡಿದ ಪ್ರಶಂಸೆಯ ಕವನವನ್ನು ಪ್ರಕಟಿಸಿದುವು.

ಜನರಲ್ ಬುಲ್ಲರ್ ತಮ್ಮ ವರದಿಯಲ್ಲಿ ಭಾರತೀಯ ಶುಶ್ರೂಷಾ ತಂಡದ ಕಾರ್ಯದ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇತರ ನಾಯಕರುಗಳಿಗೆ ಕೊಟ್ಟಂತೆ ಗಾಂಧಿಗೂ ಯುದ್ಧ ಸೇವಾ ಪದಕವನ್ನು ಕೊಡಲಾಯಿತು. ಭಾರತೀಯರಿಗೆ ಇದ್ದ ಕೊರತೆಗಳೆಲ್ಲ ಈಗ ನಿವಾರಣೆಯಾಗುವುದು ನಿಶ್ಚಿತವೆಂದು ಎಲ್ಲರೂ ನಂಬಿದ್ದರು.

ಭಾರತೀಯರಿಗೆ ಇದು ಒಂದು ಹೊಸ ಅನುಭವವಾಗಿತ್ತು. ಅವರು ದೇಶಕ್ಕೆ ಸಲ್ಲಿಸಿದ ಕರ್ತವ್ಯ ಭಾವನೆಯಿಂದ, ಅವರ ಪೌರುಷಕ್ಕೆ ಬಲಬಂದತಾಯಿತು. ಆದರೆ ಈ ಯುದ್ಧದಿಂದ ಕಲಿತ ಒಂದು ಪಾಠವನ್ನು ಭಾರತೀಯರು ಅದರಲ್ಲೂ ಮುಖ್ಯವಾಗಿ ಅವರ ನಾಯಕ ಮರೆಯಲಿಲ್ಲ. ಎಲ್ಲೋ ಅಲ್ಪ ಮಂದಿ ಇದ್ದ ಬೋಯರರು ಒಂದು ಮಹಾ ಸಾಮ್ರಾಜ್ಯದ ಶಕ್ತಿಯನ್ನು ಎದುರಿಸಿ, ಅದ್ಭುತ, ಧೈರ್ಯ, ಸ್ಥೈರ್ಯ ಮತ್ತು ಆತ್ಮ ತ್ಯಾಗಗಳನ್ನು ತೋರಿಸಿದ್ದರು. ಅಲ್ಲದೆ, ಈ ಸತ್ವವನ್ನು ಕೇವಲ ಪುರುಷರಲ್ಲದೆ ಸ್ತ್ರೀಯರೂ ಮತ್ತು ಮಕ್ಕಳೂ ತೋರಿಸಿದ್ದರು. ಬೋಯರ್ ವೀರ ಮಹಿಳೆಯರೂ ಯುದ್ಧದಲ್ಲಿ ಭಾಗವಹಿಸಿದರು. ಆ ರೀತಿ ಮಾಡಲು ಅವರಿಗೆ ಸಾಧ್ಯವಿಲ್ಲದಿದ್ದಾಗ ತಮ್ಮ ಗಂಡಂದಿರೂ ಮತ್ತು ಮಕ್ಕಳೂ ಸ್ವಾತಂತ್ರ್ಯಕ್ಕಾಗಿ ಮಡಿಯಲು ಪ್ರೋತ್ಸಾಹವಿತ್ತರು. ಸ್ತ್ರೀಯರೂ ಮತ್ತು ಮಕ್ಕಳು ಅಗಾಧ ಕಷ್ಟಗಳನ್ನು ಅನುಭವಿಸಿದರು. ಆದರೂ ಅವರು ಯುದ್ಧ ನಿಲ್ಲಿಸುವಂತೆ ತಮ್ಮ ಪುರುಷರಿಗೆ ಹೇಳಲಿಲ್ಲ. ಬೋಯರ್ ಯುದ್ಧವು ಗಾಂಧಿಗೊಂದು ದೊಡ್ಡ ಅನುಭವವನ್ನು ತಂದು ಕೊಟ್ಟಿತು. ಅದು ಅವರ ಮೇಲೆ ಪ್ರಭಾವ ಬೀರಿ, ಅವರ ವ್ಯಕ್ತಿತ್ವವನ್ನು ರೂಪಿಸಲು ಕಾರಣವಾಯಿತು.

ಇತ್ತ ಭಾರತದಲ್ಲಿ, ಬೋಯರ್ ಯುದ್ಧವು, ರಾಷ್ಟ್ರೀಯ ಅಭಿಪ್ರಾಯದ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ಜನತೆ ಕ್ಷಾಮಕ್ಕೆ ಗುರಿಯಾಗಿ, ನಿಸ್ಸಹಾಯಕ ಸ್ಥಿತಿಯಲ್ಲಿತ್ತು. ೧೮೯೯ರಲ್ಲಿ ಲಕ್ನೋದಲ್ಲಿ ರೊಮೇಶ್ ಚಂದ್ರದತ್ತರ ಅಧ್ಯಕ್ಷತೆಯಲ್ಲಿ ಹದಿನೈದನೆಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಅದು ದಕ್ಷಿಣ ಆಫ್ರಿಕಾದ ಭಾರತೀಯರ ಸಂಕಷ್ಟಗಳನ್ನು ಪ್ರಸ್ತಾಪಿಸಿದ್ದಿತು.

೧೯೦೦ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ದಕ್ಷಿಣ ಆಫ್ರಿಕಾದ ಸಮಸ್ಯೆಗೆ ಸಂಬಂಧಿಸಿದಂತೆ ಹೊಸದೊಂದು ನಿರ್ಣಯವನ್ನು ಅಂಗೀಕರಿಸಿತು. ೧೯೦೦ರ ಸೆಪ್ಟೆಂಬರ್‌ನಲ್ಲಿ ಬ್ರಿಟಿಷರು ಟ್ರಾನ್ಸ್‌ವಾಲ್ ವಶಪಡಿಸಿಕೊಂಡಿದ್ದ ವಿಷಯವನ್ನು ಅದು ಪರಿಗಣಿಸಿತು. ಟ್ರಾನ್ಸ್‌ವಾಲ್. ಇನ್ನು ಬೋಯರ್ ವಸಾಹತುವಾಗಿರುವುದಿಲ್ಲವಾದ್ದರಿಂದ ಭಾರತೀಯರಿಗೆ ಆಗಿದ್ದ ಅನ್ಯಾಯವನ್ನು ಪರಿಹರಿಸಲು ಬ್ರಿಟಿಷರಿಗೆ ಸಾಧ್ಯವಾಗುವುದೆಂಬ ಆಶಯವನ್ನು ಅದರಲ್ಲಿ ವ್ಯಕ್ತಪಡಿಸಲಾಗಿತ್ತು. ಬೋಯರರು ಭಾರತೀಯ

ನೆಲಸುಗಾರರ ಬಗೆಗೆ ವಿಶ್ವಾಸವನ್ನು ಹೊಂದಿರಲಿಲ್ಲ. ಭಾರತದ ಹಿಂದಿನ ವೈಸ್‌ರಾಯ್‌ಯೂ ಮತ್ತು ಸಮರ ಖಾತೆಯ ಕಾರ್ಯದರ್ಶಿಯೂ ಆಗಿದ್ದ ಲಾರ್ಡ್ ಲ್ಯಾನ್ಸ್‌ಡೌನ್ ಷೆಫೀಲ್ಡನ ಒಂದು ಭಾಷಣದಲ್ಲಿ ಟ್ರಾನ್ಸ್‌ವಾಲಿನ ಬೋಯರರು ಬ್ರಿಟಿಷ್ ಭಾರತೀಯರ ಬಗೆಗೆ ತೋರಿಸಿದ ವರ್ತನೆ ನಮ್ಮ ಮನಸ್ಸನ್ನು ನೋಯಿಸಿದಷ್ಟು ಬೇರೆ ಯಾವ ಕಾರ್ಯವೂ ನೋಯಿಸಲಿಲ್ಲವೆಂದು ಹೇಳಿದ್ದರು.

ಭಾರತೀಯ ಶುಶ್ರೂಷಾ ತಂಡದ ಕೆಲಸ ಮುಕ್ತಾಯವಾದ ಮೇಲೆ, ಗಾಂಧಿ ತಮ್ಮ ಸಾರ್ವಜನಿಕ ಸೇವಾ ಕಾರ್ಯದಲ್ಲಿ ಮಗ್ನರಾದರು. ಮುಖ್ಯವಾಗಿ, ತಮ್ಮ ದೇಶದ ಜನರು ಬಹಳ ಸೋಮಾರಿಗಳೆಂದೂ ಮನೆ ಮತ್ತು ಅದರ ಸುತ್ತಮುತ್ತಲಿನ ನೈರ್ಮಲ್ಯದ ವಿಷಯದಲ್ಲಿ ನಿರ್ಲಕ್ಷ್ಯದಿಂದ ಇರುವರೆಂದೂ ಹೇಳಲಾಗುತ್ತಿದ್ದ ಅಪಾದನೆಯಿಂದ ಮುಕ್ತರಾಗಬೇಕೆಂದು ಅವರನ್ನು ಪ್ರೇರಿಸುತ್ತಿದ್ದರು. ಪ್ಲೇಗು ಸಂಭವಿಸುವ ಭಯವಿತ್ತು. ಪುರಸದಸ್ಯರ ಪ್ರಾರ್ಥನೆಯ ಮೇರೆಗೆ ಅವರು ಮನೆಮನೆಗೂ ಭೇಟಿ ನೀಡಿ, ರಕ್ಷಣಾಕಾರ್ಯಗಳಲ್ಲಿ ಭಾರತೀಯರ ಸಹಕಾರವನ್ನು ಕೋರಿದರು.

ಈ ವೇಳೆಗೆ, ಮೊದಲು ಯೋಚಿಸಿದಂತೆ ಒಂದು ತಿಂಗಳಿಗೆ ಬದಲಾಗಿ, ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ಆರು ವರ್ಷಗಳು ಕಳೆದಿದ್ದರು. ಅವರು ಅಲ್ಲಿಂದ ತಮ್ಮನ್ನು ಬಿಡುಗಡೆ ಮಾಡಲು ತಮ್ಮ ಸಹಕಾರ್ಯಕರ್ತರ ಒಪ್ಪಿಗೆ ಕೇಳಿದರು. ಇನ್ನು ಮುಂದೆ ತಾವು ದಕ್ಷಿಣ ಆಫ್ರಿಕಾದಲ್ಲಿ ಇದ್ದರೆ, ತಮ್ಮ ಮುಖ್ಯ ಕಾರ್ಯ ದ್ರವ್ಯಾರ್ಜನೆಯಾಗುವುದೆಂಬ ಭೀತಿ ಅವರನ್ನು ಆವರಿಸಿತು. ಭಾರತದ ಗೆಳೆಯರೂ ಅವರನ್ನು ಸ್ವದೇಶಕ್ಕೆ ಮರಳಬೇಕೆಂದು ಒತ್ತಾಯಪಡಿಸುತ್ತಿದ್ದರು. ಗಾಂಧಿಯೂ ಭಾರತದಲ್ಲಿ ತಮ್ಮ ಸೇವಾಕ್ಷೇತ್ರ ಹೆಚ್ಚು ವ್ಯಾಪಕವಾಗಬಹುದೆಂದು ಭಾವಿಸಿದ್ದರು. ಆದುದರಿಂದ ದಕ್ಷಿಣ ಆಫ್ರಿಕದ ಮಿತ್ರರು ಅವರ ಸೂಚನೆಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡರು. ಭಾರತಕ್ಕೆ ಹೋದ ಒಂದು ವರ್ಷದೊಳಗೆ, ಅವರ ಸೇವೆ ಮತ್ತೆ ಅಗತ್ಯವಾದರೆ, ಹಿಂದಿರುಗಿ ಬರಬೇಕೆಂಬ ಷರತ್ತಿಗೆ ಗಾಂಧಿ ಒಪ್ಪಿದರು

ನೇಟಾಲಿನ ಹಲವಾರು ಕಡೆಗಳಲ್ಲಿ ಗಾಂಧಿಗೆ ಬೀಳ್ಕೊಡುಗೆಯ ಸಮಾರಂಭಗಳು ನಡೆದುವು. ಬೆಳ್ಳಿ, ಚಿನ್ನ, ವಜ್ರ ಇತ್ಯಾದಿ, ಬೆಲೆಬಾಳುವ ವಸ್ತುಗಳು ಅವರಿಗೆ ಕೊಡುಗೆಗಳಾಗಿ ಬಂದುವು. ಅವುಗಳಲ್ಲಿ ಐವತ್ತು ಗಿನಿ ಬೆಲೆಬಾಳುವ ಒಂದು ಚಿನ್ನದ ಕಂಠಹಾರವನ್ನು ಕಸ್ತೂರ ಬಾ ಅವರಿಗೆಂದು ಕೊಡಲಾಗಿತ್ತು. ಗಾಂಧಿ ಈ ಕೊಡುಗೆಗಳನ್ನು ಇಟ್ಟುಕೊಳ್ಳಕೂಡದೆಂದು ನಿರ್ಧರಿಸಿದರು. ಆದರೆ ಆ ನಿರ್ಧಾರ ತೆಗೆದುಕೊಳ್ಳುವುದು ಸುಲಭವಾಗಿರಲಿಲ್ಲ.

"ಈ ಎಲ್ಲ, ವಸ್ತುಗಳೂ ಗೌರವದ ಕೊಡುಗೆಗಳಾಗಿ ಬಂದ ದಿನ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ನಾನು ನನ್ನ ಕೋಣೆಯಲ್ಲಿ ಶತಪಥ ತಿರುಗಿದೆ. ನನ್ನ ಮನಸ್ಸು ತುಂಬ ಅಲ್ಲೋಲ ಕಲ್ಲೋಲವಾಗಿತ್ತು. ಆದರೆ ಯಾವ ಪರಿಹಾರವೂ ಕಾಣಲಿಲ್ಲ. ನೂರಾರು ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ತ್ಯಜಿಸುವುದು ನನಗೆ ಕಷ್ಟ

ವಾಗಿತ್ತು. ಆದರೆ ಅವುಗಳನ್ನು ಇಟ್ಟುಕೊಳ್ಳುವುದು ಇನ್ನೂ ಕಷ್ಟತರವಾಗಿತ್ತು. ಒಂದು ವೇಳೆ ಅವುಗಳನ್ನು ನಾನು ಇಟ್ಟುಕೊಂಡರೆ, ನನ್ನ ಮಕ್ಕಳ ಸ್ಥಿತಿಯೇನು? ನನ್ನ ಪತ್ನಿಯ ಸ್ಥಿತಿಯೇನು? ಅವರೆಲ್ಲ ಸೇವಾ ಜೀವನಕ್ಕೆ ತರಬೇತಿ ಹೊಂದಿದ್ದರು. ಸೇವೆಗೆ ಪ್ರತಿಫಲ, ಸೇವೆಯೊಂದೇ ಎಂದು ಅವರು ತಿಳಿಯಬೇಕಾಗಿತ್ತು. ನನ್ನ ಮನೆಯಲ್ಲಿ ಬೆಲೆಬಾಳುವ ಒಡವೆಗಳಿರಲಿಲ್ಲ. ನಾವು ದಿನದಿನಕ್ಕೂ ನಮ್ಮ ಬಾಳನ್ನು ಸರಳಗೊಳಿಸಿಕೊಳ್ಳುತ್ತಿದ್ದೆವು. ಹೀಗಿರುವಾಗ ನಾವು ಚಿನ್ನದ ಗಡಿಯಾರಗಳನ್ನು ಇಟ್ಟುಕೊಳ್ಳುವುದಾದರೂ ಹೇಗೆ? ಚಿನ್ನದ ಸರಗಳು ಮತ್ತು ವಜ್ರದ ಉಂಗುರಗಳನ್ನು ಧರಿಸಿಕೊಳ್ಳುವುದಾದರೂ ಹೇಗೆ? ಅದರಲ್ಲಿಯೂ ನಾನೇ ಒಡವೆಗಳ ಮೋಹವನ್ನು ತ್ಯಜಿಸಿರೆಂದು ಜನಗಳಿಗೆ ಹೇಳುತ್ತಿರಲಿಲ್ಲವೆ? ಈಗ ನನಗೆ ಲಭಿಸಿದ ಒಡವೆಗಳನ್ನು ಏನು ಮಾಡಲಿ? ಅವುಗಳನ್ನು ಇಟ್ಟುಕೊಳ್ಳಬಾರದೆಂದು ನಾನು ನಿರ್ಧಾರ ಮಾಡಿದೆ. ಸಮಾಜದ ಪರವಾಗಿ ಅವುಗಳನ್ನೆಲ್ಲ ಒಂದು ಧರ್ಮನಿಧಿಯನ್ನಾಗಿ ಏರ್ಪಡಿಸಿ, ಪಾರ್ಸೀ ರುಸ್ತುಂಜೀ ಮತ್ತು ಇತರರನ್ನು ಧರ್ಮದರ್ಶಿಗಳನ್ನಾಗಿನೇಮಿಸಿ, ಒಂದು ಪತ್ರವನ್ನು ಬರೆದೆ. ಬೆಳಗಾದ ಮೇಲೆ ನನ್ನ ಪತ್ನಿ ಮತ್ತು ಮಕ್ಕಳೊಂದಿಗೆ ವಿಚಾರ ಮಾಡಿ, ಕಡೆಗೆ ಆ ಭಾರಿ ಹೊರೆಯಿಂದ ಮುಕ್ತನಾದೆ.

"ನನ್ನ ಹೆಂಡತಿಯನ್ನು ಒಪ್ಪಿಸುವುದು ಕಷ್ಟವಾಗಬಹುದೆಂದೂ, ನನ್ನ ಮಕ್ಕಳಿಗೆ ಸಂಬಂಧಿಸಿದಂತೆ ಯಾವ ಕಷ್ಟವೂ ಇರದೆಂದೂ ನನಗೆ ಗೊತ್ತಿದ್ದಿತು. ಆದುದರಿಂದ ನನ್ನ ಮಕ್ಕಳೆ ನನ್ನ ಪರವಾದಿಸುವಂತೆ ಮಾಡಲು ತೀರ್ಮಾನಿಸಿದೆ. ಮಕ್ಕಳು ನನ್ನ ಸಲಹೆಗೆ ಸುಲಭವಾಗಿ ಒಪ್ಪಿದರು. 'ನಮಗೆ ಈ ಬೆಲೆ ಬಾಳುವ ಕೊಡುಗೆಗಳು ಅಗತ್ಯವಿಲ್ಲ. ಇವುಗಳನ್ನು ನಾವು ಸಮಾಜಕ್ಕೆ ಹಿಂದಕ್ಕೆ ಕೊಡಬೇಕು. ಇವು ಮುಂದೆ ನಮಗೇನಾದರೂ ಅಗತ್ಯವೆನಿಸಿದರೆ ತಾವೇ ಕೊಂಡುಕೊಳ್ಳಬಹುದು' ಎಂದು ಅವರು ಹೇಳಿದರು.

"ನನಗೆ ಹರ್ಷವಾಯಿತು. 'ಹಾಗಿದ್ದರೆ ನೀವು ನಿಮ್ಮ ತಾಯಿಯ ಜತೆಗೆ ವಾದಿಸುವಿರಲ್ಲವೇ?' ಎಂದು ಅವರನ್ನು ಕೇಳಿದೆ.

"ಅಗತ್ಯವಾಗಿ ಎಂದು ಅವರು ಉತ್ತರವಿತ್ತರು. ಅದು ನಮ್ಮ ಕರ್ತವ್ಯ. ಅವರು ಈ ಒಡವೆಗಳನ್ನು ಧರಿಸಬೇಕಾದ ಅಗತ್ಯವಿಲ್ಲ. ಅವರು ಇವುಗಳನ್ನು ನಮಗಾಗಿ ತಾನೇ ರಕ್ಷಿಸಿಡಲು ಅಪೇಕ್ಷಿಸುವರು?"

"ಆದರೆ ಇದು ಹೇಳಿದಷ್ಟು ಸುಲಭವಾಗಿರಲಿಲ್ಲ.

'ನಿಮಗೆ ಇವು ಬೇಡದಿರಬಹುದು,' ಎಂದಳು ನನ್ನ ಪತ್ನಿ. ನಿಮ್ಮ ಮಕ್ಕಳಿಗೂ ಬೇಡದಿರಬಹುದು. ನಿಮ್ಮಿಂದ ಪ್ರೇರಿತರಾಗಿ ನಿಮ್ಮ ತಾಳಕ್ಕೆ ತಕ್ಕಂತೆ ಅವರು ಕುಣಿಯುವರು. ನಾನು ಅವುಗಳನ್ನು ಧರಿಸಲು ನೀವು ಅನುಮತಿ ಕೊಡುವುದಿಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ನನ್ನ ಸೊಸೆಯರ ಗತಿಯೇನು? ಅವರು ಅಗತ್ಯವಾಗಿ ಬಯಸಬಹುದು. ಅಲ್ಲದೆ ನಾಳೆ ಏನಾದೀತೋ? ಬಲ್ಲವರಾರು? ಇಷ್ಟೊಂದು ಪ್ರೇಮದಿಂದ ಕೊಡಲಾಗಿರುವ ಈ ಒಡವೆಗಳನ್ನು ನಾನಂತೂ ತ್ಯಜಿಸಲಾರೆ' ಹೀಗೆ

ಅವಳ ವಾದ ಪ್ರವಾಹ ಹರಿಯಿತು. ಇದೆಲ್ಲದರ ಕೊನೆಗೆ ಕಣ್ಣೀರೂ ಹರಿಯಿತು. ಆದರೆ ಮಕ್ಕಳು ದೃಢ ಮನಸ್ಕರಾಗಿದ್ದರು. ನಾನೂ ಅವಿಚಲನಾಗಿದ್ದೆ.

"ನಾನು ಮೃದುವಾಗಿ ಹೇಳಿದೆ: 'ಮಕ್ಕಳಿಗೆ ಮದುವೆ ಇನ್ನೂ ಎಂದೋ; ಅವರಿಗೆ ಬಾಲ್ಯದಲ್ಲಂತೂ ಮದುವೆಯನ್ನು ಮಾಡುವುದಿಲ್ಲವಲ್ಲ. ಅವರು ದೊಡ್ಡವರಾದ ಮೇಲೆ. ತಮ್ಮ ಪಾಡನ್ನು ತಾವೇ ನೋಡಿಕೊಳ್ಳಬಲ್ಲರು. ಅಲ್ಲದೆ, ಅವರಿಗೆ ನಾವು ತರುವ ಕನ್ಯೆಯರು ಒಡವೆಗಳನ್ನು ಆಶಿಸುವವರಂತೂ ಅಲ್ಲವಲ್ಲ. ಒಂದು ವೇಳೆ ನಾವೇನಾದರೂ ಅವರಿಗೆ ಆಭರಣಗಳನ್ನು ಕೊಡಬೇಕಾದರೆ, ನಾನು ಇದ್ದೇ ಇದ್ದೇನೆ. ಆಗ ನೀನು ನನ್ನನ್ನು ಕೇಳು'.

"'ನಿಮ್ಮನ್ನು ಕೇಳುವುದೇ ಈ ವರೆಗೆ ನಿಮ್ಮನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ನೀವು ನನ್ನ ಆಭರಣಗಳಿರದಂತೆ ಮಾಡಿದಿರಿ; ಅವುಗಳನ್ನಿಟ್ಟುಕೊಂಡು ನಾನು ಶಾಂತಿಯಿಂದ ಇರಲು ಬಿಡಲಿಲ್ಲ. ನಿಮ್ಮ ಸೊಸೆಯರಿಗೆ ನೀವು ಆಭರಣಗಳನ್ನು ತಂದು ಕೊಡುವಿರೆಂದು ಊಹಿಸಲು ಸಾಧ್ಯವೇ? ನಮ್ಮ ಹುಡುಗರನ್ನು ಇಂದಿನಿಂದಲೇ ಸಾಧುಗಳನ್ನಾಗಿ ಮಾಡಲು ನೀವು ಯತ್ನಿಸುತ್ತಿದ್ದೀರಿ. ಇಲ್ಲ, ಯಾವ ಆಭರಣವನ್ನೂ ಕೊಡುವುದಿಲ್ಲ. ಹೋಗಲಿ, ದಯವಿಟ್ಟು ಹೇಳಿ, ನನ್ನ ಕಂಠಹಾರದ ವಿಷಯದಲ್ಲಿ ನಿಮಗೆ ಇರುವ ಹಕ್ಕಾದರೂ ಏನು?'

"'ಆದರೆ' ನಾನು ಮಾತನ್ನು ಮುಂದುವರಿಸಿದೆ, 'ಕಂಠಹಾರವನ್ನು ನಿನ್ನ ಸೇವೆಗೆ ಕೊಡಲಾಯಿತೋ ಅಥವಾ ನನ್ನ ಸೇವೆಗೆ ಕೊಡಲಾಯಿತೋ?'

"'ನಾನು ಒಪ್ಪುತ್ತೇನೆ. ಆದರೆ ನೀವು ಮಾಡಿದ ಸೇವೆ ನಾನು ಮಾಡಿದ ಸೇವೆಯಂತೆಯೇ. ಹಗಲಿರುಳೂ ನಿಮಗಾಗಿ ದುಡಿದು ದಣಿದಿದ್ದೇನೆ. ಅದು ಸೇವೆಯಲ್ಲವೇ? ನೀವು ಏನೇನನ್ನೋ ನನ್ನ ಮೇಲೆ ಹೇರಿದಿರಿ; ಅದಕ್ಕಾಗಿ ಕಣ್ಣೀರು ಕೋಡಿ ಹರಿಸಿದಿರಿ; ಅದಕ್ಕಾಗಿ ನಾನು ಗುಲಾಮಳಂತೆ ದುಡಿದೆ'.

"'ಇವು ಮೊನೆಯಾದ ಇರಿತಗಳಾಗಿದ್ದುವು. ಅವುಗಳಲ್ಲಿ ಕೆಲವು ನನಗೆ ಸರಿ ಎನಿಸಿದುವು. ಆದರೆ ನಾನು ಆಭರಣಗಳನ್ನೆಲ್ಲ ಹಿಂದಕ್ಕೆ ಕೊಟ್ಟುಬಿಡಲು ನಿರ್ಧಾರ ಮಾಡಿದ್ದೆ. ಹೇಗೋ ಅಂತೂ ಅವಳ ಒಪ್ಪಿಗೆಯನ್ನು ಪಡೆದುಕೊಳ್ಳುವುದರಲ್ಲಿ ನಾನು ಯಶಸ್ವಿಯಾದೆ. ೧೮೯೬ ಮತ್ತು ೧೯೦೧ರಲ್ಲಿ ಪಡೆಯಲಾಗಿದ್ದ ಎಲ್ಲ ಕೊಡುಗೆಗಳನ್ನೂ ಹಿಂದಕ್ಕೆ ಕೊಟ್ಟೆ. ಒಂದು ಧರ್ಮದತ್ತಿ ಪತ್ರವನ್ನು ತಯಾರಿಸಿ, ಅದನ್ನು ಬ್ಯಾಂಕಿನಲ್ಲಿ ಇಡಲಾಯಿತು. ನನ್ನ ಅಪೇಕ್ಷೆಯಂತೆಯೋ ಅಥವಾ ಧರ್ಮದರ್ಶಿಗಳ ಅಪೇಕ್ಷೆಯಂತೆಯೋ ಅದನ್ನು ಸಮಾಜ ಸೇವೆಗೆ ಉಪಯೋಗಿಸಬೇಕಾಗಿತ್ತು".

ನೇಟಾಲ್ ಭಾರತೀಯರು ಗಾಂಧಿಯನ್ನು ತಮ್ಮ ಪ್ರೇಮಾಮೃತದಲ್ಲಿ ಮುಳುಗಿಸಿದರು. ೧೯೦೧ರ ಕೊನೆಗೆ, ಗಾಂಧಿ ತಮ್ಮ ಕುಟುಂಬ ಸಮೇತರಾಗಿ ಭಾರವಾದ ಹೃದಯದಿಂದ ಭಾರತಕ್ಕೆ ಪ್ರಯಾಣ ಹೊರಟರು.

ಕಾಂಗ್ರೆಸ್ಸಿಗೆ ಭೇಟಿ

೧೯೦೧–೧೯೦೨

ಕಲ್ಕತ್ತಾದಲ್ಲಿ ಭಾರತರಾಷ್ಟ್ರೀಯ ಕಾಂಗ್ರೆಸ್ಸಿನ ಹದಿನೇಳನೆಯ ಅಧಿವೇಶನ ಸೇರುವ ಸಮಯಕ್ಕೆ ಸರಿಯಾಗಿ ೧೯೦೧ನೇ ಡಿಸೆಂಬರ್ ೧೯ರಂದು ಗಾಂಧಿ ಮುಂಬೈ ತಲುಪಿದರು. ಕಾಂಗ್ರೆಸ್ ಅಧಿವೇಶನಕ್ಕೆ ಇದು ಅವರ ಮೊಟ್ಟಮೊದಲನೆಯ ಭೆಟ್ಟಿ. ಗಾಂಧಿ, ಪಾರ್ಸೀ ಅಂಗಿ ಮತ್ತು ಇಜಾರಗಳನ್ನು ಧರಿಸಿ, ಸರ್ ಫಿರೋಜ್ ಷಾ ಮೆಹತಾ ಮತ್ತು ಅಧಿವೇಶನದ ನಿಯುಕ್ತ ಅಧ್ಯಕ್ಷ ಡಿ. ಇ. ವಾಚಾ ಇವರುಗಳು ಪ್ರಯಾಣ ಮಾಡಿದ ರೈಲಿನಲ್ಲಿಯೇ ಪ್ರಯಾಣ ಮಾಡಿದರು. ಸರ್ ಫಿರೋಜ್ ಷಾ ಅವರನ್ನು ಅವರ ಬಂಡಿಯಲ್ಲಿಯೇ ಭೇಟಿ ಮಾಡಡಲು ಹೋದಾಗ, ಅವರು ಹೀಗೆ ಹೇಳಿದರು: "ಗಾಂಧಿ, ನಿಮ್ಮ ವಿಷಯ ದಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲವೆನಿಸುತ್ತದೆ. ನೀವು ಅಪೇಕ್ಷಿಸುವ ನಿರ್ಣಯ ವನ್ನೇನೋ ಅಂಗೀಕರಿಸುತ್ತೇವೆ. ಆದರೆ ನಮ್ಮ ದೇಶದಲ್ಲಿಯೇ ನಮಗೆ ಏನು ಹಕ್ಕು ಗಳಿವೆ?"–ಗಾಂಧೀ ಈ ಉತ್ತರ ಪಡೆಯಲು ಸಿದ್ಧರಾಗಿರಲಿಲ್ಲ.

ಗಾಂಧಿ, ಕಲ್ಕತ್ತಾದಲ್ಲಿ ತಿಲಕ್ ಮೊದಲಾದ ಪ್ರತಿನಿಧಿಗಳು ಬಿಡಾರ ಮಾಡಿದ್ದ ರಿಪ್ಪನ್ ಕಾಲೇಜಿನಲ್ಲಿ ಇಳಿದುಕೊಂಡರು. ಅವರು ಕಾಂಗ್ರೆಸಿನ ಅಧಿಕಾರ ವರ್ಗದವರಿಗೆ ಸೇವೆ ಸಲ್ಲಿಸಲು ಮುಂದಾಗಿ ಕಾರಕೂನ ಕೆಲಸವನ್ನು ಮಾಡಿದರು. ಅವರು ಕಾಂಗ್ರೆಸ್ ಸ್ವಯಂಸೇವಕರಿಗೆ ಪಾಠಕಲಿಸಲು ಕಕ್ಕಸುಗಳನ್ನು ಮತ್ತು ಪಡಸಾಲೆಗಳನ್ನು ತಾವೇ ಚೊಕ್ಕಟ ಮಾಡಿದರು. ಆದರೆ ಯಾವ ಸ್ವಯಂ ಸೇವಕನೂ ಅವರ ಜೊತೆ ಸೇರಲಿಲ್ಲ.

ಬೀದಾನ್ ಚೌಕದಲ್ಲಿ ರಚಿಸಲಾಗಿದ್ದ ಭವ ವಾದ ಮಂಟಪದಲ್ಲಿ. ಕಾಂಗ್ರೆಸ್ಸಿಗೆ ಸ್ವಾಗತವಿತ್ತಿತು ಕಲ್ಕತ್ತಾ ನಗರ. ಆ ಚೌಕದ ದೃಶ್ಯ ರಮ್ಯವಾಗಿತ್ತು. ಅದೇ ಕಾಲದಲ್ಲಿ ಪ್ರಥಮ ಕೈಗಾರಿಕಾ ಪ್ರದರ್ಶನವೂ ಪ್ರತ್ಯೇಕವಾದ ಮಂಟಪದಲ್ಲಿ ನಡೆಯಿತು. ಧ್ವಜ ಗಳಿಂದ ಅಲಂಕೃತವಾಗಿ ಇವೆರಡೂ ಸಂತಸವನು ಚಿಮ್ಮುತ್ತಿದ್ದುವು. ಕಾಂಗ್ರೆಸ್ ಮಂಟಪವು ವರ್ಣಮಯ ಹಸಿರುವಾಣಿಯಿಂದ ಅಲಂಕೃತವಾಗಿ. ವಿದ್ಯುದ್ದೀಪಗಳಿಂದ ದೇದೀಪ್ಯಮಾನವಾಗಿತ್ತು. ಡಿಸೆಂಬರ್ ೨೬ರಂದು ಕಾಂಗ್ರೆಸ್ ಅಧಿವೇಶನವು ಆರಂಭ ವಾಯಿತು. ಅಧ್ಯಕ್ಷರ ಮೆರವಣಿಗೆ, ಅಗಾಧ ಜನಸಂದಣಿಯ ನಡುವೆ. ನಿಧಾನವಾಗಿ ಸಾಗಿದಾಗ ಸಂದರ್ಭಕ್ಕಾಗಿಯೇ ವಿಶೇಷವಾಗಿ ರಚಿತವಾಗಿದ್ದ ಮೇಳಗೀತೆಯನ್ನು ಹಾಡಲಾಗುತ್ತಿತ್ತು.

ಕೀರ್ತಿಶೇಷರಾಗಿದ್ದ ರಾನಡೆಯವರಿಗೆ ಹೃದಯಸ್ಪರ್ಶಿ ಗೌರವವನ್ನು ಸಲ್ಲಿಸುವು ದರ ಮೂಲಕ ಕಾಂಗ್ರೆಸ್ ಅಧ್ಯಕ್ಷರು ತಮ್ಮ ಭಾಷಣವನು ಆರಂಭಿಸಿದರು. ಅವರ

ತರುವಾಯ, ಅವರು ಗತಿಸಿದ ಸಾಮ್ರಾಜ್ಞಿ ರಾಣಿಯ ಬಗೆಗೆ ಕೃತಜ್ಞತೆಯನ್ನು ಅರ್ಪಿಸಿದರು. ನೂತನ ದೊರೆ -ಸಾಮ್ರಾಟನ ಬಗೆಗೆ ಪ್ರಸ್ತಾಪ ಮಾಡಿ, ಕ್ಷಾಮದ ವಿಷಯವನ್ನು ಉಲ್ಲೇಖಿಸಿದರು; ೪೦,೦೦೦ ಪದಗಳ ದೀರ್ಘ ಭಾಷಣದಿಂದ ಕೆಲವು ಭಾಗಗಳನ್ನು ಮಾತ್ರ ಓದಿದರು.

ಗೋಖಲೆಯವರು ಗಾಂಧಿಯನ್ನು ವಿಷಯ ನಿಯಾಮಕ ಸಮಿತಿಯ ಸಭೆಗೆ ಕರೆದುಕೊಂಡು ಹೋದರು. "ದಕ್ಷಿಣ ಆಫ್ರಿಕಾದ ನೂರು ಸಾವಿರ ಬ್ರಿಟಿಷ್ ಭಾರತೀಯರ ಪರವಾಗಿ ಮನವಿದಾರ"ರಾಗಿ ಒಂದು ನಿರ್ಣಯವನ್ನು ಗಾಂಧಿ ಮಂಡಿಸಿದರು. ಅದರ ಮೇಲೆ ಮಾತನಾಡಲು ಅವರಿಗೆ ಐದು ನಿಮಿಷಗಳ ಕಾಲವನ್ನು ಮಾತ್ರ ಕೊಡಲಾಗಿತ್ತು. ಅವರು ತಮ್ಮ ಲಿಖಿತ ಭಾಷಣವನ್ನು ಓದುವುದಕ್ಕೆ ಪ್ರತಿಯಾಗಿ ಸಮಯ ಸ್ಫೂರ್ತಿಯಿಂದ ಮಾತನಾಡಲು ನಿಶ್ಚಯ ಮಾಡಿದರು. ಆದರೆ ಅವರು ಸಾಕಷ್ಟು ಮಾತನಾಡುವ ಮುನ್ನವೇ ಗಂಟೆ ಬಾರಿಸಿತ್ತು. ಅವರು ಮುಗುಡದ ಹೃದಯದಿಂದ ಕುಳಿತುಕೊಂಡರು. ಆ ದಿನಗಳಲ್ಲಿ ಪ್ರತಿನಿಧಿಗಳಿಗೂ ಮತ್ತು ಸಂದರ್ಶಕರಿಗೂ ವ್ಯತ್ಯಾಸವೇ ಇರಲಿಲ್ಲ. ಪ್ರತಿಯೊಬ್ಬರೂ ಕೈ ಎತ್ತಿ ಬಿಡುತ್ತಿದ್ದರು. ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾಗುತ್ತಿದ್ದುವು.

ಕಾಂಗ್ರೆಸ್ ಅಧಿವೇಶನದ ಮೂರು ದಿನಗಳ ಅವಧಿಯಲ್ಲಿ ಗೋಖಲೆ, ತಿಲಕ್ ಮತ್ತು ಸುರೇಂದ್ರನಾಥ ಬ್ಯಾನರ್ಜೀ ಮೊದಲಾದ ನಾಯಕರ ನಿಕಟ ಸಂಪರ್ಕವನ್ನು ಗಾಂಧಿ ಪಡೆದರು. ಅಧ್ಯಕ್ಷರಾಗಿದ್ದ ಮಿ. ವಾಚಾ ಗಾಂಧಿಯಲ್ಲಿ "ಬಹಳ ಒಳ್ಳೆಯ, ಬಹಳ ಚಟುವಟಿಕೆಯ, ಉತ್ಸಾಹ ತುಂಬಿ ತುಳುಕುವ" ವ್ಯಕ್ತಿಯನ್ನು ಕಂಡರು. ಕಾಂಗ್ರೆಸ್ಸಿನ ಬಗೆಗೆ ಗಾಂಧಿ ನಿರಾಶರಾದರು. ಅವರು ಅನೇಕ ನ್ಯೂನತೆಗಳನ್ನು ಗಮನಿಸಿದರು; ಅಲ್ಲಿ ಸತ್ವ ಸಂವರ್ಧನೆಯ ಬಗೆಗೆ ಗಮನವೇ ಇರಲಿಲ್ಲ; ಕಾಂಗ್ರೆಸ್‌ನ ಕಾರ್ಯಕಲಾಪಗಳಲ್ಲಿ ಇಂಗ್ಲಿಷ್ ಪ್ರಧಾನ ಸ್ಥಾನ ಪಡೆದಿತ್ತು; ಇದನ್ನು ಕಂಡು ಅವರ ಮನ ನೊಂದಿತು; ಅಧಿವೇಶನದ ವ್ಯವಸ್ಥೆಗಳೂ ನಿಯಮಬದ್ಧವಾಗಿರಲಿಲ್ಲ. ಸ್ವಯಂ ಸೇವಕರಿಗೆ ತರಬೇತಿ ಇರಲಿಲ್ಲ. "ಕಾಂಗ್ರೆಸ್ ವರ್ಷಕ್ಕೊಮ್ಮೆ ಮೂರು ದಿನಗಳ ಮೇಳವಾಗಿ ಅನಂತರ ನಿದ್ರೆ ಹೋಗುತ್ತದೆ" ಎಂಬುದು ಅವರ ಅಭಿಮತವಾಗಿತ್ತು.

ಕಾಂಗ್ರೆಸ್ ಅಧಿವೇಶನ ಮುಗಿದ ಮೇಲೆ, ಗಾಂಧಿ ಒಂದು ತಿಂಗಳು ಕಾಲ ಕಲ್ಕತ್ತಾದಲ್ಲಿ ತಂಗಿದರು. ದಕ್ಷಿಣ ಆಫ್ರಿಕಾದ ಕೆಲಸ ಕಾರ್ಯಗಳ ಬಗೆಗೆ ಅವರು 'ಚೇಂಬರ್ ಆಫ್ ಕಾಮರ್ಸ್' ಅಲ್ಲದೆ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಬೇಕಾಗಿದ್ದಿತು.

ಮೊದಲು ಕೆಲವು ದಿನಗಳು 'ಇಂಡಿಯಾ ಕ್ಲಬ್'ನಲ್ಲಿ ತಂಗಿದರು. ಅದೇ ಕಾಲದಲ್ಲಿ ಲಾರ್ಡ್ ಕರ್ಜನ್ ಕಲ್ಕತ್ತಾದಲ್ಲಿ ತನ್ನ ದರ್ಬಾರನ್ನು ನಡೆಸಿದನು. ದರ್ಬಾರಿನ ದಿನ ಮಹಾರಾಜರುಗಳು ತಮ್ಮ "ಸೊಗಸಾದ ಬಂಗಾಳೀ ಪಂಚೆಗಳನ್ನೂ ಮತ್ತು ಅಂಗಿಗಳನ್ನೂ" ಬಿಟ್ಟು ಮನೆಯ ಪಾರುಪತ್ಯಗಾರರಿಗೆ ಒಪ್ಪುವ ಇಜಾರಗಳನ್ನೂ ಮತ್ತು ಹೊಳೆಯುವ ಪಾದರಕ್ಷೆಗಳನ್ನೂ ಧರಿಸಿದ್ದುದನ್ನು ಕಂಡರು. ಅವರಲ್ಲಿ ಒಬ್ಬಾತ

ನನ್ನ ಈ ಬದಲಾವಣೆಗೆ ಕಾರಣವೇನೆಂದು ಕೇಳಿದಾಗ, "ನಾವು ಲಾರ್ಡ್ ಕರ್ಜನ್‌ನ ಮನೆಯ ಪಾರುಪತ್ಯಗಾರರು. ನಾನು ಇದಕ್ಕೆ ಗೈರು ಹಾಜರಾದರೆ, ತಕ್ಕ ಶಾಸ್ತಿಯನ್ನು ಅನುಭವಿಸಬೇಕು. ನನ್ನ ಎಂದಿನ ಉಡುಪಿನಲ್ಲಿ ಹಾಜರಾದರೆ ಅದೊಂದು ಅಪರಾಧವೇ" ಎಂಬುದು ಅವನ ಉತ್ತರವಾಗಿತ್ತು.

ಇನ್ನುಳಿದ ಕಾಲವನ್ನು ಅವರು ಕಲ್ಕತ್ತೆಯಲ್ಲಿ ಗೋಖಲೆಯವರೊಂದಿಗೆ ಕಳೆದರು. ಗೋಖಲೆ ಅವರಿಗೆ ಭಾರತದ ನಾಯಕರನ್ನು ಪರಿಚಯ ಮಾಡಿಕೊಟ್ಟರು. ಅವರು ಆಗಾಗ ರಾನಡೆಯವರ ವಿಷಯವಾಗಿ ಭಾವ ಪರವಶರಾಗಿ ಮಾತನಾಡುತ್ತಿದ್ದರು. ಅವರು ಡಾ. ಪಿ. ಸಿ. ರೇ ಅವರನ್ನು ಪರಿಚಯ ಮಾಡಿಕೊಟ್ಟರು. ಡಾ. ರೇ ನೆರೆಯಲ್ಲಿಯೇ ವಾಸವಾಗಿದ್ದು, ಆಗಾಗ ಗೋಖಲೆಯವರನ್ನು ಕಾಣಲು ಬರುತ್ತಿದ್ದರು. ಆ ವಿಜ್ಞಾನಿಯ ಸರಳ ಜೀವನವನ್ನು ಗಾಂಧಿ ತುಂಬ ಮೆಚ್ಚಿಕೊಂಡರು. ಡಾ. ರೇ ತಿಂಗಳಿಗೆ ೮೦೦ ರೂ.ಗಳನ್ನು ಸಂಪಾದಿಸಿದರೂ, ಅದರಲ್ಲಿ ೪೦ ರೂಪಾಯಿಗಳನ್ನು ಮಾತ್ರ ತಮ್ಮ ವೆಚ್ಚಕ್ಕಾಗಿ ಇಟ್ಟುಕೊಂಡು ಉಳಿದುದನ್ನು ಸಾರ್ವಜನಿಕ ಉದ್ದೇಶಗಳಿಗೆ ವಿನಿಯೋಗಿಸುತ್ತಿದ್ದರು.

ಕಲ್ಕತ್ತಾದಲ್ಲಿ ಗಾಂಧಿಗೆ ತುಂಬಾ ಕಾರ್ಯಕಲಾಪಗಳು ಇದ್ದುವು. ಅವರು ಗಣ್ಯ ವ್ಯಕ್ತಿಗಳನ್ನು ಸಂದರ್ಶಿಸಲು ಬಹಳ ದೂರ ನಡೆದುಕೊಂಡು ಹೋಗುತ್ತಿದ್ದರು. ಕಾಳೀಚರಣ ಬ್ಯಾನರ್ಜೀ ನ್ಯಾಯಮೂರ್ತಿ ಶಾರದಾ ಮಿತ್ರ, ಸರ್ ಗುರುದಾಸ್ ಬ್ಯಾನರ್ಜೀ ಮತ್ತು ಸಿಸ್ಟರ್ ನಿವೇದಿತಾ ಮೊದಲಾದವರನ್ನು ಅವರು ಭೇಟಿ ಮಾಡಿದರು.

ಗಾಂಧಿ ತಮ್ಮ ದಿನದ ಕಾಲವನ್ನು ಪ್ರಮುಖ ವ್ಯಕ್ತಿಗಳ ಭೇಟಿಗೂ ಮತ್ತು ಕಲ್ಕತ್ತಾದ ಧಾರ್ಮಿಕ ಸಾರ್ವಜನಿಕ ಸಂಸ್ಥೆಗಳ ಅಧ್ಯಯನಕ್ಕೂ ಹಂಚಿಕೊಂಡಿದ್ದರು. ಒಂದು ದಿನ ಅವರು ದೇವೇಂದ್ರನಾಥ ಟ್ಯಾಗೋರರನ್ನು ಕಾಣಲು ಹೋದರು. ಆಗ ಅವರು ಸಂದರ್ಶಕರನ್ನು ಬಿಡುತ್ತಿರಲಿಲ್ಲವಾದುದರಿಂದ ಅವರನ್ನು ನೋಡಲು ಅವಕಾಶವಾಗಲಿಲ್ಲ. ಆದರೆ ಅವರ ಮನೆಯಲ್ಲಿ ಏರ್ಪಡಿಸಿದ್ದ ಬ್ರಾಹ್ಮೋ ಸಮಾಜದ ಸಮಾರಂಭಕ್ಕೆ ಸ್ವಾಗತ ದೊರಕಿತ್ತು. ಆದರೆ ಬ್ರಾಹ್ಮೋ ಸಮಾಜದ ವಿಷಯವಾಗಿ ತುಂಬ ನೋಡಿದ್ದುದರಿಂದ, ಅವರು ಸ್ವಾಮಿ ವಿವೇಕಾನಂದರನ್ನು ಸಂದರ್ಶಿಸಲು ಬಹಳ ಉತ್ಸಾಹದಿಂದ ಬೇಲೂರು ಮಠಕ್ಕೆ ಹೋದರು. ಸ್ವಾಮಿಗಳು ಕಾಯಿಲೆಯಿಂದ ಮಲಗಿದ್ದಾರೆಂದೂ ಅವರನ್ನು ನೋಡುವಂತಿಲ್ಲವೆಂದೂ ತಿಳಿದು ಬಹಳ ನಿರಾಶೆಯಾಯಿತು.

ಕಾಳೀ ದೇವಾಲಯಕ್ಕೆ ಭೇಟಿಯಿತ್ತಾಗ, ಭಿಕ್ಷುಕರ ಸಾಲನ್ನು ಕಂಡು ಗಾಂಧಿ ದಿಗ್ಭ್ರಾಂತರಾದರು. ಅವರಲ್ಲಿ ಕೆಲವರು ಅಂಗ ವಿಕಲರು ಕೆಲವರು ಧಾಂಡಿಗರು: ಅವರೆಲ್ಲರೂ ಪ್ರೇಕ್ಷಕರನ್ನು ಭಿಕ್ಷೆಗಾಗಿ ಕಾಡಿ ಬೇಡುತ್ತಿದ್ದರು. ಧಾಂಡಿಗರಾದ ಭಿಕ್ಷುಕರಿಗೆ ಭಿಕ್ಷೆ ನೀಡುವುದಕ್ಕೆ ಗಾಂಧಿಯು ವಿರೋಧವಾಗಿದ್ದರು. ದೇವಾಲಯದ ಬಳಿ, ಕಾಳಿ ದೇವತೆಯ ತೃಪ್ತಿಗಾಗಿ, ಮೇಕೆಗಳನ್ನು ಕಡಿದು, ರಕ್ತದ ಹೊಳೆ ಹರಿಯುತ್ತಿದ್ದುದನ್ನು ಅವರು ನೋಡಿದರು. ಆ ಘೋರ ದೃಶ್ಯ ಕೆಲವು ದಿನಗಳ ವರೆಗೆ ಅವರ ಕಣ್ಣಿಗೆ ಕಟ್ಟಿದಂತಿತ್ತು.

ಫೂಂಜೀಗಳ ನಾಡಾದ ಬರ್ಮಾದೇಶಕ್ಕೆ ಗಾಂಧಿ ಮೊದಲ ಬಾರಿಗೆ ಭೇಟಿಯನ್ನಿತ್ತರು. ಅವರು ಅಲ್ಲಿನ ಮಹಿಳೆಯರ ಸ್ವಾತಂತ್ರ್ಯ ಮತ್ತು ಧೈರ್ಯವನ್ನು ಕಂಡು ಪ್ರಭಾವಿತರಾದರು. ಆದರೆ ಪುರುಷರ ಸೋಮಾರಿತನ ನೋಡಿ ವ್ಯಸನಗೊಂಡರು. 'ಪಗೋಡಾ'ಗಳು ನಿರ್ಲಕ್ಷ್ಯಕ್ಕೆ ಒಳಗಾಗಿದ್ದುವು; ಫೂಂಜಿಗಳು ಸೋಮಾರಿಗಳಾಗಿದ್ದರು. ರಂಗೂನಿನಲ್ಲಿ ಐರೋಪ್ಯರು ನಡೆಸುತ್ತಿದ್ದ ಬರ್ಮೀಯರ ಶೋಷಣೆಗೆ ಭಾರತೀಯರು ನೆರವಾಗುತ್ತಿದ್ದುದನ್ನು ಕಂಡು ತುಂಬಾ ನಿರಾಶರಾದರು.

ಒಂದು ಕಡೆ ನೆಲಸುವುದಕ್ಕೆ ಮುಂಚೆ, ರೈಲಿನ ಮೂರನೆಯ ತರಗತಿಯಲ್ಲಿ, ಭಾರತದಲ್ಲೆಲ್ಲಾ ಸಂಚಾರ ಮಾಡಿ ಕೆಳದರ್ಜೆಯ ಪ್ರಯಾಣಿಕರ ಹೀನಸ್ಥಿತಿಯ ಪರಿಚಯ ಮಾಡಿಕೊಳ್ಳಲು ಗಾಂಧಿ ಯೋಚಿಸಿದ್ದರು. ಅವರು ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡಬೇಕೆಂದು ಯೋಚಿಸಿದ ವಿಚಾರ ಕೇಳಿದ ಗೋಖಲೆ ನಕ್ಕು ಬಿಟ್ಟರು. ಆದರೆ ಅವರಿಗೆ ಸಿಹಿ ತಿಂಡಿ ಮತ್ತು ಚಪಾತಿಗಳಿಂದ ತುಂಬಿದ ಒಂದು ತಿಂಡಿ ಪಾತ್ರೆಯನ್ನು ತರಿಸಿ ಕೊಟ್ಟರು. ಗಾಂಧಿ ಹನ್ನೆರಡಾಣೆ ಬೆಲೆಯ ಒಂದು ಕಿತ್ತಾನಾರಿನ ಒರಟು ಚೀಲವನ್ನೂ ಮತ್ತು ಭಾರತದ ಒರಟು ಉಣ್ಣೆಯಿಂದ ಮಾಡಿದ ಒಂದು ನಿಲುವಂಗಿಯನ್ನೂ ಕೊಂಡುಕೊಂಡರು. ಆ ಚೀಲದಲ್ಲಿ ಉಣ್ಣೆಯ ನಿಲುವಂಗಿ ಒಂದು ಪಂಚೆ, ಒಂದು ಟವಲ್, ಒಂದು ಅಂಗಿ ಇವಿಷ್ಟನ್ನೂ ಇಟ್ಟುಕೊಂಡರು. ಒಂದು ಕಂಬಳಿ ಮತ್ತು ನೀರಿನ ಹೂಜಿಯನ್ನು ತೆಗೆದುಕೊಂಡರು. ಗೋಖಲೆ ಹೌರಾ ನಿಲ್ದಾಣದಲ್ಲಿ ಅವರಿಗೆ ಸುಖ ಪ್ರಯಾಣ ಕೋರಿದರು.

ರಾಜಕೋಟೆಗೆ ಹೋಗುವ ಮಾರ್ಗದಲ್ಲಿ ಬನಾರಸ್, ಆಗ್ರಾ, ಜೈಪುರ ಮತ್ತು ಪಲನ್‌ಪುರ್ ಇವುಗಳಲ್ಲಿ ತಂಗಲು ಗಾಂಧಿ ನಿರ್ಧರಿಸಿದರು. ಈ ಪ್ರತಿಯೊಂದು ನಗರದಲ್ಲಿಯೂ ಅವರು ಒಂದೊಂದು ದಿನ ಧರ್ಮಶಾಲೆಗಳಲ್ಲಿಯೋ ಅಥವಾ ಪಂಡಾಗಳಲ್ಲಿಯೋ ಸಾಮಾನ್ಯ ಯಾತ್ರಿಕರಂತೆ ಇಳಿದುಕೊಳ್ಳುತ್ತಿದ್ದರು. ರೈಲು ಪ್ರಯಾಣದ ವೆಚ್ಚವೂ ಸೇರಿದಂತೆ, ಅವರ ಒಟ್ಟು ವೆಚ್ಚ ಮೂವತ್ತೊಂದು ರೂಪಾಯಿಗಳಾಗಿದ್ದಿತು. ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡುವುದರಲ್ಲಿಯೂ ಮೇಲ್ ಗಾಡಿಗಳಿಗೆ ಬದಲಾಗಿ ಸಾಧಾರಣ ಗಾಡಿಗಳನ್ನೇ ಅವರು ಬಹುಮಟ್ಟಿಗೆ ಅಪೇಕ್ಷಿಸುತ್ತಿದ್ದರು. "ವಿದ್ಯಾವಂತ ಜನರು ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡಲು ಮನಸ್ಸನ್ನು ಮಾಡಿ, ಜನತೆಯ ಪದ್ಧತಿಗಳನ್ನು ಸುಧಾರಿಸಬೇಕಲ್ಲದೆ ಅಗತ್ಯವಾದಾಗ ರೈಲ್ವೆ ಅಧಿಕಾರಿಗಳಿಗೆ ದೂರನ್ನು ಕಳಿಸಬೇಕು. ಅವರನ್ನು ಸುಮ್ಮನಿರಲು ಬಿಡಬಾರದೆಂಬುದು ಅವರ ಅಭಿಪ್ರಾಯವಾಗಿದ್ದಿತು. ೧೯೨೦ರಿಂದ ಮುಂದೆ ಅವರು ಬಹುಮಟ್ಟಿಗೆ ಮೂರನೆಯ ದರ್ಜೆಯಲ್ಲೇ ಪ್ರಯಾಣ ಮಾಡಿದರು.

ಪ್ರಾತಃಕಾಲ ಬನಾರಸ್ ತಲುಪಿದರು. ರೈಲ್ವೆ ನಿಲ್ದಾಣದಲ್ಲಿ ಅನೇಕ ಮಂದಿ ಬ್ರಾಹ್ಮಣರು ಅವರನ್ನು ಸುತ್ತುವರಿದರು. ಅವರಲ್ಲಿ ಅತ್ಯಂತ ಶುಭ್ರನಾಗಿದ್ದಾತನನ್ನು ತಮ್ಮ ಆತಿಥೇಯನನ್ನಾಗಿ ಆರಿಸಿಕೊಂಡರು. ಆ ಪಂಡಾ, ಗಾಂಧಿ ಆಚರಿಸಬೇಕಾಗಿದ್ದ

ಕರ್ಮಗಳನ್ನು ಮಾಡಲು ಸಾಂಪ್ರದಾಯಿಕ ರೀತಿಯ ಸಿದ್ಧತೆಗಳನ್ನು ಮಾಡಿದನು. ಅದಕ್ಕೆ ಗಾಂಧಿ, ಒಂದು ರೂಪಾಯಿ ನಾಲ್ಕು ಆಣೆಗಳನ್ನು ಕೊಟ್ಟರು. ಸ್ನಾನ ಮಾಡಿದ ಮೇಲೆ, ಅವರು ಕಾಶೀ ವಿಶ್ವನಾಥನ ದರ್ಶನಕ್ಕೆ ಹೋದರು. ದೇವಾಲಯಕ್ಕೆ ಹೋಗುವ ದಾರಿ ಕಿರಿದಾಗಿದ್ದು, ಅಪಾಯಕರ ಹಾಗೂ ಕೊಳೆಯಿಂದ ಕೂಡಿದ ಓಣಿಯಾಗಿದ್ದಿತು. ದೇವಾಲಯದ ವಾತಾವರಣವು ಅವರಿಗೆ ಜಿಗುಪ್ಸೆ ತಂದಿತು. ತಮ್ಮನ್ನು ಪೀಡಿಸುತ್ತಿದ್ದ ಪೂಜಾರಿಗೆ ಅವರು ಒಂದು ಕಾಸು ದಕ್ಷಿಣೆಯನ್ನು ಕೊಟ್ಟರು. ಆತ ಅವರನ್ನು ಕುರಿತು, “ಈ ರೀತಿ ಎಸಗಿದ ಅಪಮಾನ, ನಿನ್ನನ್ನು ನರಕಕ್ಕೆ ನೇರವಾಗಿ ಕೊಂಡೊಯ್ಯುತ್ತದೆ.” ಎಂದು ಶಪಿಸಿದನು.

ಅನಂತರ ಅವರು ವ್ಯಾಧಿಯಿಂದ ಚೇತರಿಸಿಕೊಳ್ಳುತ್ತಿದ್ದ ಶ್ರೀಮತಿ ಬೆಸೆಂಟರನ್ನು ಭೇಟಿ ಮಾಡಿದರು. “ನಾನು ನನ್ನ ಗೌರವವನ್ನು ಸಲ್ಲಿಸಲು ಮಾತ್ರ ಬಂದಿದ್ದೇನೆ. ನಿಮ್ಮ ಆರೋಗ್ಯ ಸರಿಯಾಗಿಲ್ಲದಿದ್ದರೂ ನನಗೆ ಭೇಟಿ ನೀಡಿದುದಕ್ಕೆ ಕೃತಜ್ಞನಾಗಿದ್ದೇನೆ” ಎಂದು ನುಡಿದು, ಅವರ ಅಪ್ಪಣೆ ಪಡೆದು ಹೊರಟರು.

ರಾಜಕೋಟೆಯಲ್ಲಿ ನಿಂತ ಗಾಂಧಿ, ಕೆಲವು ತಿಂಗಳುಗಳ ಕಾಲ ನ್ಯಾಯವಾದಿಯಾಗಿ ಕೆಲಸ ಮಾಡಿದರು. ಪ್ರಾರಂಭದಲ್ಲಿ, ಅವರಿಗೆ ಸ್ವಲ್ಪ ಅಂಜಿಕೆಯಿತ್ತು. ಆದರೆ ಜಾಮ್ ನಗರದ ಒಂದು ಮೊಕದ್ದಮೆಯಲ್ಲಿ ಯಶಸ್ಸನ್ನು ಪಡೆದ ಮೇಲೆ ಸ್ವಲ್ಪ ಆತ್ಮಗೌರ ವಿಶ್ವಾಸ ಬಂದಿತು. ಅವರು ರಾಜಕೋಟೆಯಲ್ಲಿ ದೀರ್ಘಕಾಲ ಇರಬೇಕೆಂದು ಯೋಚಿಸಿದ್ದರು. ಆದರೆ ಅವರ ಗೆಳೆಯರು ಅಲ್ಲಿ ನೆಲೆಸಲು ಅವಕಾಶ ಕೊಡಲಿಲ್ಲ. ಅವರು ಮುಂಬೈನಲ್ಲಿ ನೆಲಸಿ, ನ್ಯಾಯವಾದಿಯಾಗಿ ಕೆಲಸ ಮಾಡುತ್ತಾ, ಕಾಂಗ್ರೆಸ್ ಕೆಲಸದಲ್ಲಿ ನೆರವಾಗಬೇಕೆಂಬುದು ಗೋಖಲೆಯವರ ಅಪೇಕ್ಷೆಯಾಗಿತ್ತು. ೧೯೦೨ರ ಮಧ್ಯಭಾಗದಲ್ಲಿ ಗಾಂಧಿ ರಾಜಕೋಟೆಯಿಂದ ಹೊರಟರು. ಮುಂಬೈಯಲ್ಲಿ ಪೇಯ್ನ್ ಗಿಲ್ಬರ್ಟ್ ಮತ್ತು ಸಯಾನೀಯವರ ಕಾರ್ಯಾಲಯದಲ್ಲಿ ಒಂದು ಕೋಣೆಯನ್ನೂ ಮತ್ತು ಗಿರ್‌ಗಾಂನಲ್ಲಿ ಒಂದು ಮನೆಯನ್ನೂ ಗೊತ್ತು ಮಾಡಿಕೊಂಡರು. ಅವರು ಇನ್ನೇನು ನೆಲಸಿದರು ಎಂಬಂತೆ ಕಂಡು ಬಂದಿತು.

ಗಾಂಧಿ ತಮ್ಮ ಮನೆಗೆ ವಾಸಕ್ಕೆ ಹೋಗಿ ಇನ್ನೂ ಕೆಲವೇ ದಿನಗಳಾಗಿದ್ದುವು. ಅಷ್ಟರಲ್ಲಿ ಅವರ ಎರಡನೆಯ ಮಗ ಮಣಿಲಾಲನಿಗೆ ಉಗ್ರ ವಿಷಮಶೀತಜ್ವರ ಕಾಣಿಸಿಕೊಂಡಿತು. ಜತೆಗೆ ನ್ಯೂಮೋನಿಯಾ ಸಹ ಕಾಣಿಸಿಕೊಂಡು ಪ್ರಜ್ಞಾಹೀನ ಸ್ಥಿತಿ ಕಂಡು ಬಂದಿತು. ಒಬ್ಬ ಪಾರ್ಸೀ ವೈದ್ಯ ಮೊಟ್ಟೆ ಮತ್ತು ಕೋಳಿಮಾಂಸದ ಸಾರನ್ನು ಸೇವಿಸಲು ಸಲಹೆ ಮಾಡಿದನು. ಗಾಂಧಿ ಸಮ್ಮತಿಸಲಿಲ್ಲ. ಅವರು ಹೀಗೆ ಹೇಳಿದರು: “ನಾವು ಜೀವಿಸಲು ಆರಿಸಿಕೊಳ್ಳುವ ಸಾಧನಕ್ಕೂ ಒಂದು ಮಿತಿ ಇರಬೇಕು; ನಾನು ತಿಳಿದಿರುವಂತೆ ಧರ್ಮವು ಇಂಥ ಸಂದರ್ಭದಲ್ಲಿಯೂ ನನಗಾಗಲೀ ನನ್ನವರಿಗಾಗಲೀ ಮಾಂಸ ಅಥವಾ ಮೊಟ್ಟೆಗಳನ್ನು ಸೇವಿಸಲು ಅವಕಾಶ ಕೊಡುವುದಿಲ್ಲವೆಂದು ನಂಬಿದ್ದೇನೆ. ಆದುದರಿಂದ ಸಂಭವಿಸಬಹುದೆಂದು ನೀವು ಹೇಳುವ ಅಪಾಯವನ್ನು ನಾನು ಎದುರಿಸ

ಲೇಬೇಕು". ಅವರು ಕುನ್ಹೆಯವರ ಚಿಕಿತ್ಸೆ ಪ್ರಕಾರ ಮಣಿಲಾಲ್‌ನಿಗೆ ಕಟಿಸ್ನಾನವನ್ನು ಕೊಡಲು ಆರಂಭಿಸಿ, ಕಿತ್ತಲೆಯ ರಸದೊಡನೆ ನೀರನ್ನು ಸೇರಿಸಿ ಮೂರು ದಿನ ಕೊಟ್ಟರು. ಜ್ವರ ಕಡಮೆಯಾಗಲೇ ಇಲ್ಲ. ಗಾಂಧಿ ಅಧೀರರಾದರು. ಆದರೂ ಜಲಚಿಕಿತ್ಸೆಯನ್ನೇ ಮುಂದುವರಿಸಿ, ಮಣಿಲಾಲ್‌ನ ಶರೀರವನ್ನು ಒದ್ದೆಬಟ್ಟೆಯಿಂದ ಸುತ್ತಿ, ಮೇಲೆ ಎರಡು ಕಂಬಳಿಗಳನ್ನು ಹೊದಿಸಿದರು. ಈ ಪ್ರಯೋಗ ಮೊದಲು ವಿಫಲವಾಗುವಂತೆ ಕಂಡು ಬಂದಿತು. ಆದರೆ ಕಡೆಗೆ ಅದರಿಂದಲೇ ಮಣಿಲಾಲ್‌ನಿಗೆ ಗುಣವಾಯಿತು. ಗಾಂಧಿ ಗಿರ್‌ಗಾಂನ ಜೌಗು ಮತ್ತು ಬೆಳಕಿಲ್ಲದಿದ್ದ ಆ ಮನೆಯನ್ನು ಬಿಟ್ಟು ಸಂತಾ ಕ್ರೂಜ್‌ನ ಒಂದು ಬಂಗಲೆಗೆ ಹೋದರು.

ಗಾಂಧಿ ತಮ್ಮ ವೃತ್ತಿಯಲ್ಲಿ ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಾಗಿ ಯಶಸ್ಸನ್ನು ಪಡೆದರು. ಆದರೆ ಅವರಿಗೆ ಶ್ರೇಷ್ಠ ನ್ಯಾಯಾಲಯದಲ್ಲಿ ವಾದಿಸುವ ಅವಕಾಶ ಇನ್ನೂ ಬಂದಿರಲಿಲ್ಲ. ಇತರ ಹೊಸ ಬ್ಯಾರಿಸ್ಟರ್‌ಗಳಂತೆ ಅವರು ತಪ್ಪದೆ ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿ, ಮೊಕದ್ದಮೆ ನಡೆಸುತ್ತಿದ್ದುದನ್ನು ವೀಕ್ಷಿಸುವುದರ ಜತೆಗೆ ಪುಸ್ತಕ ಭಂಡಾರ ವನ್ನೂ ಉಪಯೋಗಿಸುತ್ತಿದ್ದರು. ಅವರಿಗೆ ಹೊಸಬರ ಪರಿಚಯವೂ ಆಯಿತು. ಆ ದಿನಗಳಲ್ಲಿ ಗೋಖಲೆಯವರು ಪ್ರತಿವಾರವೂ ಅವರ ಕಾರ್ಯಾಲಯ ಕೋಣೆಗೆ ಎರಡು ಮೂರು ಸಲ ಹೋಗಿ ಬರುತ್ತಿದ್ದರು: ತಮ್ಮ ಜತೆಯಲ್ಲಿ ಗಾಂಧೀಗೆ ಭೇಟಿ ಮಾಡಿಸ ಬೇಕೆಂದು ತಾವು ಅಪೇಕ್ಷಿಸಿದ್ದ ಗೆಳೆಯರನ್ನೂ ಕರೆದುಕೊಂಡು ಹೋಗುತ್ತಿದ್ದರು.

ಅನಿರೀಕ್ಷಿತವಾಗಿ, ದಕ್ಷಿಣ ಆಫ್ರಿಕಾದಿಂದ ಗಾಂಧಿಗೆ ಒಂದು ತಂತಿ ಬಂದಿತು. "ಚೇಂಬರ್ ಲೇನ್ ಇಲ್ಲಿಗೆ ಬರುವ ನಿರೀಕ್ಷೆಯಿದೆ. ಕೂಡಲೇ ಹಿಂದಿರುಗಿ ಬನ್ನಿ". ಗಾಂಧಿ ತಾವು ಕೊಟ್ಟಿದ್ದ ಮಾತಿಗೆ ಅನುಸಾರವಾಗಿ ದಕ್ಷಿಣ ಆಫ್ರಿಕಾಕಕ್ಕೆ ಹೊರಡಲು ಅಣಿಮಾಡಿಕೊಂಡರು. ಅವರು ತಮ್ಮ ಕಾರ್ಯಾಲಯದ ಕೋಣೆಯನ್ನು ಬಿಟ್ಟುಕೊಟ್ಟರು. ದಕ್ಷಿಣ ಆಫ್ರಿಕಾದಲ್ಲಿ ತಾವು ಒಂದು ವರ್ಷ ಕಾಲವಾದರೂ ಇರಬೇಕಾಗಬಹುದೆಂದು ಭಾವಿಸಿ, ಬಂಗಲೆಯನ್ನು ಮಾತ್ರ ಇಟ್ಟುಕೊಂಡು ಹೆಂಡತಿ ಮತ್ತು ಮಕ್ಕಳನ್ನು ಅಲ್ಲಿಯೇ ಬಿಟ್ಟರು. ಅವರು ತಮ್ಮೊಡನೆ ನಾಲ್ಕೈದು ಮಂದಿ ಯುವಕರನ್ನು ಕರೆದುಕೊಂಡರು. ಮಗನ್‌ಲಾಲ್ ಅವರಲ್ಲಿ ಒಬ್ಬರಾಗಿದ್ದರು. ಗಾಂಧೀಗಳದು ದೊಡ್ಡ ವಂಶವಾಗಿತ್ತು. ಆ ಯುವಕರು ನಡೆದ ಹಾದಿಯಲ್ಲೇ ನಡೆಯುವುದನ್ನು ತ್ಯಜಿಸಿ, ಹೊರ ದೇಶಗಳಲ್ಲಿ ಸಾಹಸ ಮಾಡುವ ಸ್ವಾವಲಂಬನೆಯಿಂದ ಕೂಡಿರಬೇಕೆಂಬುದು ಅವರ ಇಚ್ಛೆಯಾಗಿತ್ತು.

೧೯೦೨ರ ಡಿಸೆಂಬರ್‌ನಲ್ಲಿ ಗಾಂಧಿ, ನೇಟಾಲಿಗೆ ಯಾನ ಮಾಡಿದರು.

ಪುನಃ ಆಫ್ರಿಕಾಕ್ಕೆ

೧೯೦೩

ಸಾಗರದ ಮೇಲೆ ಗಾಂಧಿ ಯಾನ ಮಾಡುತ್ತಿದ್ದಾಗ, ೧೯೦೨ರ ಡಿಸೆಂಬರ್‌ನಲ್ಲಿ ಭಾರತ ಕಾಂಗ್ರೆಸ್‌ನ ಅಧಿವೇಶನ ಅಹಮದಾಬಾದಿನಲ್ಲಿ ಮೊದಲನೆಯ ಬಾರಿಗೆ ಸೇರಿತು. ಅದು ಕಳೆದ ವರ್ಷಗಳಿಗಿಂತಲೂ ಮುಂಚೆಯೇ ಸೇರಿತ್ತು; ಏಕೆಂದರೆ ಜನವರಿ ೧ರಂದು ಡಿಲ್ಲಿಯಲ್ಲಿ ಏಳನೆಯ ಎಡ್ವರ್ಡ್‌ನ ಕಿರೀಟಧಾರಣ ಮಹೋತ್ಸವದ ದರ್ಬಾರ್ ನಡೆಯಬೇಕಾಗಿತ್ತು. ಸುರೇಂದ್ರನಾಥ್ ಬ್ಯಾನರ್ಜೀಯವರ ಅಧ್ಯಕ್ಷತೆಯಲ್ಲಿ ನಡೆದ ಆ ಅಧಿವೇಶನ ದಕ್ಷಿಣ ಅಫ್ರಿಕಾದ ಬಗೆಗೆ ಈ ಹೊಸ ನಿರ್ಣಯವನ್ನು ಮಾಡಿತು: "ಭಾರತೀಯ ನೆಲಸುಗಾರರು ಯುದ್ಧದ ಕಾಲದಲ್ಲಿ ನೀಡಿದ ನೆರವು ಮತ್ತು ನಿಷ್ಠೆಗಳ ದೃಷ್ಟಿಯಿಂದಲೂ, ಭಾರತವು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅದರ ಅತ್ಯಂತ ಉತ್ಕಟ ಸಮಯದಲ್ಲಿ ನೀಡಿದ ಅಮೂಲ್ಯ ಸಹಾಯದ ದೃಷ್ಟಿಯಿಂದಲೂ ಭಾರತ ಸರಕಾರವು ದಕ್ಷಿಣ ಆಫ್ರಿಕಾದ ಭಾರತೀಯ ನೆಲಸುಗಾರರನ್ನು ನ್ಯಾಯಯುತವೂ, ಪಕ್ಷಪಾತ ರಹಿತವೂ ಮತ್ತು ಔದಾರ್ಯ ಪೂರ್ಣವೂ ಆದ ರೀತಿಯಲ್ಲಿ ಕಾಣುವಂತೆ ಮಾಡಲು ಆವಶ್ಯಕವಾದ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ಉತ್ಕಂಠತೆಯಿಂದ ಪ್ರಾರ್ಥಿಸುತ್ತದೆ"

ಬೋಯರ್ ಯುದ್ಧಕ್ಕೆ ಮುಂಚೆ ಭಾರತೀಯರು ಯಾವ ಸಮಯದಲ್ಲಾದರೂ ಟ್ರಾನ್ಸ್‌ವಾಲನ್ನು ಪ್ರವೇಶಿಸಬಹುದಾಗಿತ್ತು. ಆದರೆ ೧೯೦೧ರಲ್ಲಿ ಬ್ರಿಟಿಷರು ಅದನ್ನು ವಶಪಡಿಸಿಕೊಂಡ ಮೇಲೆ ಹೊಸದಾಗಿ ಸೃಷ್ಟಿಯಾಗಿದ್ದ ಏಷ್ಯಾ ಇಲಾಖೆಗೆ ಪ್ರತಿಯೊಬ ಭಾರತೀಯನೂ ಪರವಾನಿಗೆಗಾಗಿ ಅರ್ಜಿ ಹಾಕಿಕೊಳ್ಳಬೇಕಾಗಿತ್ತು. ಭಾರತೀಯರನ್ನು ಬಿಳಿಯ ಜನಾಂಗದಿಂದ ಪ್ರತ್ಯೇಕಿಸುವುದೇ ಇದರ ಉದ್ದೇಶವಾಗಿತ್ತು. ಗಾಂಧಿ ಆಗಮಿಸುತ್ತಲೇ ತಮ್ಮ ಹಳೆಯ ಗೆಳೆಯ ದರ್ಬಾನಿನ ಪೋಲೀಸ್ ಸೂಪರಿಂಟೆಂಡೆಂಟ್ ಮಿ. ಅಲೆಗ್ಸಾಂಡರ್ ಅವರ ನೆರವಿನಿಂದ ಈ ಅನುಮತಿಯನ್ನು ಪಡೆದುಕೊಂಡರು.

ಗಾಂಧೀ ಚೇಂಬರ್‌ಲೇನ್ ಅವರ ಸಂಪರ್ಕ ಪಡೆಯಲು ಬಯಸಿದರು. ಅವರು ದಕ್ಷಿಣ ಆಫ್ರಿಕಾಕ್ಕೆ ಆತುರದಿಂದ ಆಗಮಿಸಿದ ಉದ್ದೇಶವೇ ಅದಾಗಿತ್ತು. ಇಂಗ್ಲಿಷರ ಮತ್ತು ಬೋಯರರ ಹೃದಯ ಗೆಲ್ಲಲು ಚೇಂಬರ್‌ಲೇನ್ ಬಂದಿದ್ದರು. ಅವರು ನೇಟಾಲ್ ಭಾರತೀಯರ ನಿಯೋಗಕ್ಕೆ ಗಮನವನ್ನೇ ನೀಡಲಿಲ್ಲ. ಅವರು ಗಾಂಧಿಯನ್ನು ಕುರಿತು, "ಸ್ವಯಮಾಡಳಿತ ಹೊಂದಿದ ವಸಾಹತುಗಳ ಮೇಲೆ ಸಾಮ್ರಾಜ್ಯ ಸರ್ಕಾರದ ಹತೋಟಿ ಇಲ್ಲವೆಂಬುದು ನಿಮಗೆ ಗೊತ್ತೇಯಿದೆ" ಎಂದರು.

ನೇಟಾಲಿನಿಂದ ಗಾಂಧಿ ಕೂಡಲೆ ಪ್ರಿಟೋರಿಯಾಕ್ಕೆ ಪ್ರಯಾಣ ಮಾಡಿದರು;

೧೯೦೩ರ ಜನವರಿ ೧೮ರಂದು ಅಲ್ಲಿಗೆ ತಲುಪಿದರು. ಅಲ್ಲಿಯೂ ಅವರು ಭಾರತೀಯರ ಪರವಾಗಿ ಮನವಿಯನ್ನು ತಯಾರಿಸಿ ಚೇಂಬರ್‌ಲೇನರಿಗೆ ಅರ್ಪಿಸಬೇಕಾಗಿತ್ತು. ಪ್ರಿಟೋರಿಯವ ಅಧಿಕಾರಿಗಳು ಗಾಂಧಿಯನ್ನು ಹೇಗಾದರೂ ಮಾಡಿ ದೂರವಿಡಲು ಯೋಜಿಸಿದ್ದರು. ಆದರೆ ಗಾಂಧಿ ಆಗಲೇ ಅಲ್ಲಿದ್ದುದನ್ನು ಕಂಡು ದಿಕ್ಕು ತೋಚದಾದರು. ಶಾಂತಿ ರಕ್ಷಣಾ ಕಾನೂನಿನ ಬಲದಿಂದ ಅವರನ್ನು ವಿಚಾರಣೆಗೆ ಗುರಿಪಡಿಸಲು ಯತ್ನಿಸಿದರು. ಅನುಮತಿಯಿಲ್ಲದೆ ಟ್ರಾನ್ಸ್‌ವಾಲ್ ಪ್ರವೇಶಿಸುವವರು ಆ ಕಾನೂನಿನ ಪ್ರಕಾರ ಬಂಧನ ಮತ್ತು ಕಾರಾಗೃಹ ಶಿಕ್ಷೆಗೆ ಗುರಿಯಾಗಬೇಕಾಗಿತ್ತು. ಅಲ್ಲಿದ್ದ ಆ ಅಧಿಕಾರಿಗಳು ಬೋಯರ್ ಯುದ್ಧದ ಕಾಲದಲ್ಲಿ ಭಾರತದಿಂದ ದಕ್ಷಿಣ ಆಫ್ರಿಕಾಕ್ಕೆ ಸೈನ್ಯದ ಜತೆಯಲ್ಲಿ ಬಂದಿದ್ದ ಸಾಹಸಿಗಳಲ್ಲಿ ಕೆಲವರಾಗಿದ್ದರು.

ಗಾಂಧಿ ನ್ಯಾಯವಾದ ಅನುಮತಿಯನ್ನು ಪಡೆದಿದ್ದಾರೆಂದು ಏಷ್ಯಾ ಇಲಾಖೆಗೆ ಗೊತ್ತಾದ ಮೇಲೆ, ಅಧಿಕಾರಿಗಳು ಬೇರೆ ಯಾವುದಾದರೂ ನೆಪದಿಂದ ಅವರ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡಲು ಪ್ರಯತ್ನಿಸಿದರು. ಸಿಂಹಳದಿಂದ ಬಂದಿದ್ದ ಒಬ್ಬ ಅಧಿಕಾರಿ, ಗಾಂಧಿಯನ್ನು ಕರೆಸಿ, ಅವರಿಗೆ ಕುಳಿತುಕೊಳ್ಳಲು ಆಸನವನ್ನೂ ಕೊಡದೆ, ಟ್ರಾನ್ಸ್‌ವಾಲ್‌ಗೆ ಪ್ರವೇಶಿಸಿದ್ದೇಕೆಂದು ನೇರವಾಗಿ ಪ್ರಶ್ನಿಸಿದನು. ತಮ್ಮ ದೇಶಬಾಂಧವರ ಕೋರಿಕೆಯ ಮೇರೆ, ಅವರಿಗೆ ನೆರವನ್ನು ನೀಡಲು ಬಂದುದಾಗಿ ಗಾಂಧಿ ಉತ್ತರವಿತ್ತಾಗ ಆತ, "ಈಗ ನಿಮ್ಮಲ್ಲಿರುವ ಅನುಮತಿ ತಪ್ಪಾಗಿ ಕೊಡಲ್ಪಟ್ಟಿದೆ. ನೀವು ಹಿಂದಕ್ಕೆ ಹೋಗಬೇಕು. ನೀವು ಚೇಂಬರ್‌ಲೇನ್‌ರನ್ನು ಸಂದರ್ಶಿಸಲು ಸಾಧ್ಯವಿಲ್ಲ. ಭಾರತೀಯರ ರಕ್ಷಣೆಗಾಗಿಯೇ ಏಷ್ಯಾ ಇಲಾಖೆ ವಿಶೇಷವಾಗಿ ಸೃಷ್ಟಿಯಾಗಿದೆ" ಎಂದನು.

ಗಾಂಧಿ ಚೇಂಬರ್‌ಲೇನ್‌ರನ್ನು ಆಗಲೇ ದರ್ಬಾನ್‌ನಲ್ಲಿ ಭೇಟಿಯಾಗಿರುವುದರಿಂದ, ಮನವಿದಾರರ ಪಟ್ಟಿಯಿಂದ ಅವರ ಹೆಸರನ್ನು ತೆಗೆದು ಹಾಕಲಾಗಿದೆಯೆಂದು ಏಷ್ಯಾ ಇಲಾಖೆಯ ಮುಖ್ಯಸ್ಥ ಪತ್ರ ಬರೆದನು. ಗಾಂಧಿ, ಈ ಅಪಮಾನವನ್ನು ಸಹಿಸಿಕೊಂಡು, ಭಾರತೀಯರ ಮುಖಂಡರೇ ತಮ್ಮ ವಾದವನ್ನು ಮಂಡಿಸಬೇಕೆಂದೂ, ಅದು ಚೇಂಬರ್‌ಲೇನ್‌ರ ಗಮನಕ್ಕೆ ಬರದೆ ಹಾಗೇ ಹೋಗಬಾರದೆಂದೂ ಅವರನ್ನು ಒಪ್ಪಿಸಿದರು.

ಭಾರತೀಯರು ಗಾಂಧಿಯಲ್ಲಿ ಪೂರ್ಣ ವಿಶ್ವಾಸವನ್ನು ಇಟ್ಟಿದ್ದರು. ಅಧಿಕಾರಿಗಳು ಅವರನ್ನು ನಿರ್ಲಕ್ಷಿಸುವಂತೆ, ಮಾಡಿದ ಪ್ರಯತ್ನವು ಅಧಿಕಾರಿಗಳ ವಿಚಾರದಲ್ಲಿ ಭಾರತೀಯರ ಶಂಕೆಯನ್ನು ಮತ್ತಷ್ಟು ಹೆಚ್ಚಿಸಿತು. ಗಾಂಧಿಯ ಮುಖ್ಯ ಉದ್ದೇಶವಾಗಿದ್ದ ಮನವಿ ಸಲ್ಲಿಸುವ ಕಾರ್ಯ ಮುಗಿದಿದ್ದರೂ, ದಕ್ಷಿಣ ಆಫ್ರಿಕಾದಲ್ಲಿ ಇನ್ನೂ ಹೆಚ್ಚು ಕಾಲ ನಿಲ್ಲಬೇಕೆಂಬ ಬಗೆಗೆ ಅವರನ್ನು ಒತ್ತಾಯ ಪಡಿಸ-ಬೇಕಾಗಿರಲಿಲ್ಲ. ಏಕೆಂದರೆ, ಟ್ರಾನ್ಸ್‌ವಾಲ್‌ನಲ್ಲಿ ನಿಂತು, ವರ್ಣಭೇದದ ವಿರುದ್ಧ ಹೋರಾಟ ನಡೆಸಬೇಕೆಂದು ಅವರೇ ನಿರ್ಧಾರ ಮಾಡಿದ್ದರು.

ಅವರು ಏಪ್ರಿಲ್ ತಿಂಗಳಿನಲ್ಲಿ ಜೊಹಾನ್ಸ್‌ಬರ್ಗ್‌ನ ಶ್ರೇಷ್ಠ ನ್ಯಾಯಾಲಯದಲ್ಲಿ

ವಕೀಲರಾಗಿ ದಾಖಲಾಗಲು ಅರ್ಜಿ ಸಲ್ಲಿಸಿದರು. ಅಂತೆಯೇ ಸೂಕ್ತ ಅರ್ಹತೆಯಿರುವ ವಕೀಲರೆಂದು ದಾಖಲಾದರು. ಜೋಹಾನ್ಸ್‌ಬರ್ಗ್‌ನಲ್ಲಿ ಅತ್ಯಂತ ಅಧಿಕ ಸಂಖ್ಯೆಯ ಭಾರತೀಯರಿದ್ದುದರಿಂದ, ಅಲ್ಲಿ ನೆಲಸಲು ಸೂಕ್ತವಾಗಿತ್ತು.

ಗಾಂಧಿ ಜೋಹಾನ್ಸ್‌ಬರ್ಗ್‌ನ ನ್ಯಾಯಾಲಯ ವಸತಿಯಲ್ಲಿ ಕಾರ್ಯಾಲಯವನ್ನು ಏರ್ಪಡಿಸಿದರು. ಅದರ ಪಕ್ಕದಲ್ಲಿಯೇ ಒಂದು ಕೋಣೆಯಲ್ಲಿ ಬಹಳ ಸರಳವಾಗಿ ಜೀವಿಸಲಾರಂಭಿಸಿದರು. ಅವರ ಕಾರ್ಯಾಲಯದ ಗೋಡೆಗಳು ನಾಲ್ಕು ಚಿತ್ರಗಳಿಂದ ಅಲಂಕೃತವಾಗಿದ್ದುವು. ಅವರ ಮೇಜಿನ ಗೋಡೆಯ ಮೇಲ್ಭಾಗದಲ್ಲಿ ಕ್ರಿಸ್ತನ ಸುಂದರವಾದ ಮುಖವನ್ನುಳ್ಳ ಚಿತ್ರ ಇದ್ದಿತು. "ಅದು ಅಲ್ಲಿರುವುದು ನನಗೆ ತುಂಬ ಪ್ರಿಯ" ಎಂದು ಗಾಂಧಿ ತಮ್ಮ ಗೆಳೆಯರಿಗೆ ಹೇಳುತ್ತಿದ್ದರು. ತಲೆಯನ್ನು ಮೇಲಕ್ಕೆ ಎತ್ತಿದಾಗಲೆಲ್ಲ ಅದು ನನ್ನ ದೃಷ್ಟಿಗೆ ಬೀಳುತ್ತದೆ". ಇತರ ಮೂರು ಗೋಡೆಗಳಲ್ಲಿ ರಾನಡೆ, ಶ್ರೀಮತಿ ಬೆಸೆಂಟ್ ಮತ್ತು ಡಬ್ಲ್ಯು. ಡಬ್ಲ್ಯು. ಹಂಟರ್ ಇವರ ಚಿತ್ರಗಳಿದ್ದುವು. ಹಂಟರ್ ಭಾರತದ ಮೇಲೆ ಪ್ರಸಿದ್ಧ ಪುಸ್ತಕಗಳನ್ನು ಬರೆದಿದ್ದರಲ್ಲದೆ, 'ಟೈಂಸ್' ಪತ್ರಿಕೆಯಲ್ಲಿ ಲೇಖನಗಳನ್ನು ಬರೆದು ದಕ್ಷಿಣ ಆಫ್ರಿಕಾದ ಭಾರತೀಯರ ಹಕ್ಕು ಬಾಧ್ಯತೆಗಳನ್ನು ಎತ್ತಿ ಹಿಡಿದು, ವಾದಿಸಿದ್ದರು. ಅವರ ಮನೆಯಲ್ಲಿ ಅವರ ತಂದೆಯವರ ಚಿತ್ರವೂ ಮತ್ತು ದಾದಾಭಾಯಿ ನವರೋಜಿಯವರ ದೊಡ್ಡ ಚಿತ್ರವೂ ಇದ್ದುವು.

ಭಾರತೀಯರ ಉದ್ದೇಶಗಳನ್ನು ಈಗ ಸ್ಪಷ್ಟವಾಗಿ ವಿವರಿಸಲಾಗಿದ್ದಿತು. ಏಷ್ಯಾ ಇಲಾಖೆಯು ಭಾರತೀಯರನ್ನು ಬ್ರಿಟಿಷ್ ನಾಗರಿಕತ್ವಕ್ಕೆ ಹೊರತಾದವರೆಂದು ಭಾವಿಸಿದ್ದಿತು. ಟ್ರಾನ್ಸ್‌ವಾಲ್‌ನ ಭಾರತೀಯ ಜನತೆಯನ್ನು ಅದರ ಉಪಯುಕ್ತ ಭಾಗವೆಂದು ಪರಿಗಣಿಸಬೇಕೆಂಬುದೂ ಮತ್ತು ಅವರನ್ನು "ಸಾಮ್ರಾಜ್ಯದ ನಿಜವಾದ ಪ್ರಜೆಗಳೆಂದು ಭಾವಿಸಬೇಕೆಂಬುದೂ ಗಾಂಧಿಯ ಗುರಿಯಾಗಿದ್ದಿತು.

ಟ್ರಾನ್ಸ್‌ವಾಲ್ ಭಾರತೀಯರೆಲ್ಲ ಬಹುಮಟ್ಟಿಗೆ ಯುದ್ಧಪೂರ್ವ ಕಾಲದಲ್ಲಿಯೇ ಅಲ್ಲಿನ ನಿವಾಸಿಗಳಾಗಿದ್ದವರು. ಅವರು ಅಧಿಕಾರ ಚ್ಯುತವಾಗಿದ್ದ ಡಚ್ ಸರಕಾರದಿಂದ ಅನುಮತಿಯನ್ನು ಪಡೆದಿದ್ದರು. ಅದಕ್ಕಾಗಿ, ಅವರು ಶಾಸನದಿಂದ ನಿಗದಿಯಾದಂತೆ ಮೂರು ಪೌಂಡಿನಿಂದ ೨೫ ಪೌಂಡುಗಳ ವರೆಗೆ ಶುಲ್ಕವನ್ನು ಕೊಡಬೇಕಾಗಿದ್ದಿತು. ಅದಿಲ್ಲದಿದ್ದರೆ, ಅವರು ಶಾಂತಿ ರಕ್ಷಣಾ ಆಜ್ಞೆಯ ಪ್ರಕಾರ ರಹದಾರಿಯನ್ನು ಪಡೆದು ನಿವಾಸಿ ಹಕ್ಕನ್ನು ಪಡೆದವರೆಂದು ಭಾವಿಸಲಾಗುತ್ತಿತ್ತು. ಇವರಿಗೆ ನ್ಯಾಯವನ್ನೂ ಮತ್ತು ನಾಗರಿಕತ್ವವನ್ನೂ ಗಳಿಸಿಕೊಡುವ ಸಲುವಾಗಿಯೇ ಗಾಂಧಿ ತಮ್ಮ ಸಾಮರ್ಥ್ಯವನ್ನೆಲ್ಲ ವಿನಿಯೋಗಿಸಿದರು. ಈ ಉದ್ದೇಶದಿಂದಲೇ ಅವರು 'ಟ್ರಾನ್ಸ್‌ವಾಲ್ ಬ್ರಿಟಿಷ್ ಭಾರತೀಯ ಸಂಘ'ವೆಂಬುದನ್ನು ಸ್ಥಾಪಿಸಿ, ಅವರು ಭಾರತಕ್ಕೆ ಕಡೆಯದಾಗಿ ಹಿಂದಿರುಗುವವರೆಗೂ ಅದರ ಗೌರವ ಕಾರ್ಯದರ್ಶಿ ಮತ್ತು ಕಾನೂನು ಸಲಹೆಗಾರರಾಗಿದ್ದರು.

ಜೋಹಾನ್ಸ್‌ಬರ್ಗ್ ಅಪ್ರಾಮಾಣಿಕ ಅಧಿಕಾರಿಗಳ ಪ್ರಬಲ ಕೇಂದ್ರವಾಗಿದ್ದಿತು. ಈ ಅಧಿಕಾರಿಗಳು–ಭಾರತೀಯರು, ಚೀನೀಯರು ಮತ್ತು ಇತರರನ್ನು ರಕ್ಷಿಸುವುದಕ್ಕೆ

ಪ್ರತಿಯಾಗಿ ಅವರಿಂದ ಹಣವನ್ನು ಸೆಳೆಯುತ್ತಿದ್ದರು. ಈ ವಿಷಯವಾಗಿ ಗಾಂಧಿಗೆ ದಿನವೂ ದೂರುಬರುತ್ತಿತ್ತು. ಇವನ್ನು ನಿರ್ಮೂಲನ ಮಾಡಲು ಅವರು ನಿರ್ಧಾರ ಮಾಡಿದರು. ಸಾಕ್ಷ್ಯ ಶೇಖರಿಸಲು ಭಾರತೀಯರು ಮತ್ತು ಚೀನೀಯರು ನೆರವಾದರು. ಅದು ಸಾಕಷ್ಟು ದೊರೆತ ಮೇಲೆ ಅವರು ಪೋಲೀಸ್ ಕಮೀಷನರ್ ಬಳಿಗೆ ಹೋದರು. ಪೋಲೀಸ್ ಕಮಿಷನರ್ ಇವಕ್ಕೆ ಕಾರಣರಾದ ಇಬ್ಬರು ಅಧಿಕಾರಿಗಳಿಗೆ ಆಜ್ಞೆ ಕಳಿಸಿದರು. ಆ ಅಧಿಕಾರಿಗಳು ವಿಚಾರಣೆಗೆ ಗುರಿಯಾದರು. ಪ್ರಬಲವಾದ ಸಾಕ್ಷ್ಯವಿದ್ದರೂ, ಬಿಳಿಯ ತೀರ್ಪುಗಾರರು ಅವರನ್ನು ನಿರಪರಾಧಿಗಳೆಂದು ಘೋಷಿಸಿ, ಬಿಡುಗಡೆ ಮಾಡಿದರು. ಆದರೆ ಆ ಇಬ್ಬರೂ ಅಧಿಕಾರ ಚ್ಯುತರಾದರು. ಇದರಿಂದ ಏಷ್ಯಾ ಇಲಾಖೆಯು ಬಹಳ ಮಟ್ಟಿಗೆ ಶುದ್ಧವಾಯಿತು.

ಜೀವನದ ಬಗೆಗೆ ಗಾಂಧಿಯ ದೃಷ್ಟಿ ವೇಗವಾಗಿ ಬದಲಾವಣೆ ಹೊಂದುತ್ತಿತ್ತು. ಅವರು ಮೊದಲು–ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ–ಕ್ರೈಸ್ತರ ಪ್ರಭಾವಕ್ಕೆ ಒಳಗಾಗಿದ್ದರು. ಈಗ ಜೋಹಾನ್ಸ್‌ಬರ್ಗ್ಗಿನ ಥಿಯಾಸಫಿಸ್ಟ್‌ರೊಂದಿಗೆ ಸ್ನೇಹ ಬೆಳಸಿದ್ದರು. ದಿನವೂ ಅವರೊಂದಿಗೆ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದರು. ಅವರು ವಿವೇಕಾನಂದರ 'ರಾಜಯೋಗ'ವನ್ನೂ ಪತಂಜಲಿಯ ಸೂತ್ರಗಳನ್ನೂ, ಮತ್ತು ಗೀತೆಯನ್ನೂ ಓದ ಲಾರಂಭಿಸಿದರು. ದಿನವೂ ಪ್ರಾತಃಕಾಲ ಸ್ನಾನ ಮತ್ತು ದಂತಧಾವನ ಮಾಡುವ ಕಾಲ ದಲ್ಲಿ ಒಂದು ಅಥವಾ ಎರಡು ಗೀತಾ ಶ್ಲೋಕಗಳನ್ನು ಬಾಯಿಪಾಠ ಮಾಡಿದರು. ಈ ಶ್ಲೋಕಗಳನ್ನು ಬರೆದು ಎದುರು ಗೋಡೆಗೆ ತಗಲು ಹಾಕಿ, ಅವುಗಳನ್ನು ಮನನ ಮಾಡುತ್ತಾ ಕಲಿತರು. ಈ ರೀತಿಯಲ್ಲಿ ಅವರು ಗೀತೆಯ ಹದಿಮೂರು ಅಧ್ಯಾಯಗಳನ್ನು ಕಂಠಪಾಠ ಮಾಡಿಕೊಂಡರು. ಅದು ಅವರ "ದಿನನಿತ್ಯದ ಆಕರ ಕೋಶ"ವಾಯಿತು. 'ಅಪರಿಗ್ರಹ', 'ಸಮಭಾವ', ಮೊದಲಾದ ಶಬ್ದಗಳು ಅವರ ಮನಸ್ಸನ್ನು ಸೆರೆ ಹಿಡಿದುವು. ಗೀತೆಯ 'ಅಪರಿಗ್ರಹ' ಬೋಧೆಯನ್ನು ಗಾಂಧಿ ಅರ್ಥಮಾಡಿಕೊಂಡ ಪರಿ ಹೀಗಿದ್ದಿತು: ಮೋಕ್ಷವನ್ನು ಬಯಸುವವರು. ಹೇರಳ ಆಸ್ತಿಯನ್ನು ಹೊಂದಿದ್ದರೂ ಅದರಲ್ಲಿ ಪರಮಾಣುವಿನಷ್ಟನ್ನು ತಮ್ಮದೆಂದು ಭಾವಿಸದೆ, ಅದರ ಧರ್ಮದರ್ಶಿಯಂತೆ ವರ್ತಿಸ ಬೇಕು. ಅಪರಿಗ್ರಹ ಮತ್ತು ಸಮಭಾವ ಬರಬೇಕಾದರೆ, "ಹೃದಯ ಪರಿವರ್ತನೆ, ಮನೋಧರ್ಮ ಪರಿವರ್ತನೆ" ಅಗತ್ಯವೆಂದು ಅವರು ಭಾವಿಸಿದರು.

ಗಾಂಧಿ ಸ್ವಲ್ಪ ಕಾಲದ ಹಿಂದೆ ಮುಂಬೈನಲ್ಲಿದ್ದಾಗ ಮಾಡಿಸಿದ್ದ ೧೦,೦೦೦ ರೂ. ಗಳ ಜೀವವಿಮೆ ರದ್ದಾಗಿ ಹೋಗಲು ಬಿಟ್ಟುಬಿಟ್ಟರು. ಅವರು ತಮ್ಮ ಅಣ್ಣ ಲಕ್ಷ್ಮೀ ದಾಸನಿಗೆ ಬರೆದ ಪತ್ರದಲ್ಲಿ, ಅಲ್ಲಿಯವರೆಗೂ ಕೂಡಿಟ್ಟಿದ್ದ ಹಣವನ್ನು ಅವರಿಗೆ ಕೊಟ್ಟಿ ರುವುದಾಗಿಯೂ, ಇನ್ನು ಮುಂದೆ ತಮ್ಮಿಂದ ಏನನ್ನೂ ನಿರೀಕ್ಷಿಸಬಾರದೆಂದೂ, ತಿಳಿ ಸಿದರು. ಏಕೆಂದರೆ, "ಮುಂದೆ ಕೂಡಿಟ್ಟಿದ್ದು ಏನಾದರೂ ಇದ್ದರೆ, ಅದು ಸಮಾಜದ ಅಭ್ಯುದಯಕ್ಕೆ ಉಪಯೋಗವಾಗತಕ್ಕದ್ದು". ಇದರಿಂದ ಅಣ್ಣನಿಗೆ ತುಂಬ ಕೋಪ ಬಂದು, ಅವರು ಪತ್ರವ್ಯವಹಾರವನ್ನೇ ನಿಲ್ಲಿಸಿಬಿಟ್ಟರು.

ಹೀಗೆ, ಗಾಂಧಿಯ ಅಧ್ಯಾತ್ಮ ವಿಕಾಸ ಆಗುತ್ತಿದ್ದಂತೆಯೇ ಸಸ್ಯಾಹಾರದ ವಿಷಯ ದಲ್ಲಿ ಅವರಿಗಿದ್ದ ಆಸಕ್ತಿಯೂ ಅಧಿಕವಾಯಿತು. ಅವರು ಜೋಹಾನ್ಸ್‌ಬರ್ಗ್ನಲ್ಲಿ ಎರಡು ಸಸ್ಯಾಹಾರಿ ಭೋಜನಾಲಯಗಳನ್ನು ನಡೆಸಲು ಹಣ ಸಹಾಯ ಮಾಡಿದರು. ಎರಡೂ ಹೆಚ್ಚು ಕಾಲ ಬಾಳಲಿಲ್ಲ. ಒಮ್ಮೆ, ಅವರ ಥಿಯಾಸಫಿಸ್ಟ್ ಗೆಳೆಯನೊಬ್ಬ ಆರಂಭಿಸಿದ ಭೋಜನಾಲಯಕ್ಕೆ ಕಕ್ಷಿಗಾರನೊಬ್ಬನ ಠೇವಣಿ ಹಣದಿಂದ ೧೦೦೦/–ಪೌಂಡುಗಳನ್ನು ಸಾಲವಾಗಿ ಕೊಟ್ಟರು. ಆದರೆ ಅದು ಯಶಸ್ವಿಯಾಗಲಿಲ್ಲ. ಗಾಂಧಿ ತಾವೇ ಕಕ್ಷಿಗಾರನ ಹಣವನ್ನು ಹಿಂದಕ್ಕೆ ಕೊಟ್ಟರು.

ಬದುಕು ಸರಳವಾಗುತ್ತಿದ್ದ ರೀತಿಯಲ್ಲಿಯೇ ಔಷಧಿಗಳ ಬಗೆಗೂ ಅವರ ವಿರೋಧ ಹೆಚ್ಚುತ್ತಿತ್ತು. ಅವರು ಆಗಾಗ ಮಲಬದ್ಧತೆಯಿಂದಲೂ ಮತ್ತು ತಲೆಶೂಲೆ ಯಿಂದಲೂ ನರಳುತ್ತಿದ್ದರು. ಆಗಾಗ, ಪ್ರವೃತ್ತಿಗೆ ತೆಗೆದುಕೊಂಡು ನಿಯಮಿತ ಆಹಾರ ದಿಂದ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದರು. ಮೂರು ಸಲ ಊಟ, ಮಧ್ಯಾಹ್ನ ಟೀ ಮತ್ತು ಅನೇಕ ರುಚಿಕರ ವಸ್ತುಗಳನ್ನು ಸೇವಿಸುತ್ತಿದ್ದರು. ಇದೇ ಕಾಲದಲ್ಲಿ ಮ್ಯಾಂಚೆಸ್ಟರ್‌ನಲ್ಲಿದ್ದ 'ಮೊದಲೂಟ ವರ್ಜ್ಯ ಸಂಘ(No Break fast Association)ದ ವಿಷಯವಾಗಿ ಓದಿದರು. ಅವರು ಎಂದೂ ಆರು ಅಥವಾ ಏಳಕ್ಕಿಂತ ಮುಂಚೆ ಏಳುತ್ತಿರಲಿಲ್ಲವಾದ್ದರಿಂದ ಮೊದಲೂಟ (Break fast) ಅನಗತ್ಯವೆಂದು ಭಾವಿಸಿ, ಅದನ್ನು ತ್ಯಜಿಸಿದರು. ತಲೆನೋವು ಎಲ್ಲೋ ಹೋಯಿತು; ಆದರೆ ಮಲಬದ್ಧತೆ ಇದ್ದೇ ಇತ್ತು.

ಅವರು ಜಸ್ಟ್ ಎಂಬಾತ ಬರೆದ 'ಪ್ರಕೃತಿಗೆ ಮರಳಿ' ಎಂಬ (Return nature) ಪುಸ್ತಕದಲ್ಲಿ ಮಣ್ಣಿನ ಚಿಕಿತ್ಸೆಯ ವಿಷಯವಾಗಿ ಓದಿದರು. ಒಳ್ಳೆಯ ಹಣ್ಣು ಮತ್ತು ತಿರುಳಿರುವ ಕಾಯಿ ಇವು ಮನುಷ್ಯನಿಗೆ ಸಹಜವಾದ ಆಹಾರವೆಂದೂ ಜಸ್ಟ್ ಪ್ರತಿ ಪಾದಿಸಿದ್ದನು. ಶುದ್ಧವಾದ ಮಣ್ಣನ್ನು ತಣ್ಣೀರಿನಲ್ಲಿ ನೆನೆಸಿ, ಪೌಲ್ಟೀಸಿನಂತೆ ಮಾಡಿ, ಶುದ್ಧವಾದ ಬಟ್ಟೆಯ ಮೇಲೆ ಹರಡಿ, ಕಿಬ್ಬೊಟ್ಟೆಯ ಮೇಲೆ ಕಟ್ಟಿಕೊಳ್ಳಲು ಆರಂಭಿ ಸಿದರು. ಇದನ್ನು ರಾತ್ರಿ ಮಲಗುವ ವೇಳೆ ಕಟ್ಟಿ. ಬೆಳಗ್ಗೆ ಏಳುವಾಗ ಬಿಚ್ಚುತ್ತಿದ್ದರು. ಇದು ತೀವ್ರ ಗುಣಕಾರಿಯಾಗಿ ಪರಿಣಮಿಸಿತು.

ನಾನಾ ಬಗೆಯ ಕೆಲಸಗಳಿದ್ದರೂ, ಗಾಂಧೀ ತಮ್ಮ ಕಾಲದ ಬಹುಭಾಗವನ್ನು ನ್ಯಾಯವಾದಿಯ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಜೋಹಾನ್ಸ್‌ಬರ್ಗ್‌ನಲ್ಲಿ ಅವರು ನಾಲ್ಕು ಮಂದಿ ಕಾರಕೂನರನ್ನು ನೇಮಕ ಮಾಡಿಕೊಂಡರೂ, ಅವರೆಲ್ಲ ಸೇರಿ ಕೆಲಸ ವನ್ನು ತೂಗಿಸಲು ಆಗುತ್ತಿರಲಿಲ್ಲ. ಅವರ ಇಂಗ್ಲಿಷ್ ಬಹಳ ಅತೃಪ್ತಿಕರವಾಗಿದ್ದುದರಿಂದ ಗಾಂಧಿ ತಾವೇ ಟೈಪ್‌ರೈಟಿಂಗ್ ಕೆಲಸವನ್ನು ಮಾಡಿಕೊಳ್ಳಬೇಕಾಗಿತ್ತು. ಕಡೆಗೆ. ಬಹಳ ಪ್ರಯಾಸದಿಂದ ಮಿಸ್ ಡಿಕ್ ಎಂಬ ಹುಡುಗಿಯನ್ನು ತಿಂಗಳಿಗೆ ೧೭ ಪೌಂಡ್ ಮತ್ತು ೧೦ ಷಿಲ್ಲಿಂಗ್ ವೇತನದ ಮೇಲೆ ಗೊತ್ತು ಮಾಡಿಕೊಂಡರು. ಆಕೆ ಸಾವಿರಾರು ಪೌಂಡು ಗಳ ಸಾರ್ವಜನಿಕ ನಿಧಿ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದಳು. ಆಕೆಗೆ ವಿವಾಹವಾದ

ಮೇಲೆ ಮಿಸ್ ಪೆಲ್ಸಿನ್ ಎಂಬ ಹದಿನೇಳು ವರ್ಷದ ಹುಡುಗಿಯನ್ನು ನೇಮಕ ಮಾಡಿಕೊಂಡರು. ಆಕೆ ಅನೇಕ ವರ್ಷಗಳ ವರೆಗೆ ಗಾಂಧಿಗೆ ಸಹಾಯವನ್ನು ಮಾಡಿದಳು. ಆಕೆ ತಿಂಗಳಿಗೆ ೧೦ ಪೌಂಡುಗಳಿಗಿಂತ ಹೆಚ್ಚಿಗೆ ತೆಗೆದುಕೊಳ್ಳಲು ನಿರಾಕರಿಸಿ, ಗಾಂಧಿಯ ಕೆಲಸಕಾರ್ಯಗಳಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದಳು.

೧೯೦೩ನೆಯ ವರ್ಷ ಭಾರತದಲ್ಲಿ ಅಪಾರವಾದ ಅತೃಪ್ತಿಯ ಆರಂಭಕ್ಕೆ ಕಾರಣವಾಯಿತು. ಡಿಸೆಂಬರ್ ತಿಂಗಳಲ್ಲಿ ಮದರಾಸಿನಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಮೇಲೆ ವಂಗವಿಭಜನೆಯ ಕಾರ್ಮೋಡ ತನ್ನ ಕರಾಳ ಛಾಯೆಯನ್ನು ಬೀರಿತು. ಅಧ್ಯಕ್ಷರಾಗಿದ್ದ ಲಾಲ್‌ಮೋಹನ್ ಘೋಷ್ ಲಾರ್ಡ್ ಕರ್ಜನ್ನನ ದಿಲ್ಲಿ ದರ್ಬಾರಿಗೆ ಸಂಬಂಧಪಟ್ಟ ನೋವಿನ ವಿಷಯವನ್ನೆತ್ತಿ ಹೀಗೆ ಹೇಳಿದರು: "ದಿಲ್ಲಿ ದರ್ಬಾರ್ ನಡೆಸಲು ವೆಚ್ಚ ಮಾಡಿದ ಹಣದಲ್ಲಿ ಅರ್ಧದಷ್ಟನ್ನಾದರೂ ಕ್ಷಾಮ ಪರಿಹಾರದ ಉದ್ದೇಶಕ್ಕೆ ಉಪಯೋಗಿಸಿದ್ದರೆ, ಲಕ್ಷಾಂತರ ಸ್ತ್ರೀಯರು. ಪುರುಷರು ಮಕ್ಕಳು ಹಸಿವಿನಿಂದ ಸಾಯುವುದನ್ನು ತಪ್ಪಿಸಬಹುದಾಗಿದ್ದಿತು. "ಅನಂತರ ಸೈನ್ಯದ ಅಗಾಧವೆಚ್ಚ, ನ್ಯಾಯವಿತರಣೆಯಲ್ಲಿ ದುರಾಡಳಿತ, ಐರೋಪ್ಯರಿಂದ ಭಾರತೀಯರಿಗೆ ದೈಹಿಕ ದಂಡನೆ, ಮತ್ತು ಪರಿಹಾರ ಪಡೆಯಲು ಇರುವ ಅಸಾಧ್ಯತೆ ಇತ್ಯಾದಿ ವಿಷಯಗಳನ್ನೆಲ್ಲ ಕುರಿತು ಹೇಳಿದರು. ವಸಾಹತುಗಳಿಗೆ ಸಂಬಂಧಿಸಿದ ಆ ವರ್ಷದ ನಿರ್ಣಯವು ಹೀಗಿತ್ತು: "ಬ್ರಿಟಿಷ್ ವಸಾಹತುಗಳಾದ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಇತರ ಕಡೆಗಳಲ್ಲಿರುವ ಸಾಮ್ರಾಟರ ಭಾರತೀಯ ಪ್ರಜೆಗಳಿಗೆ ಆಯಾ ವಸಾಹತು ಸರಕಾರಗಳಿಂದ ಉಂಟಾಗಿರುವ ಕಷ್ಟಕೋಟಲೆಗಳು ಮತ್ತು ಅನರ್ಹತೆಗಳ ಪರಿಣಾಮವಾಗಿ ಸ್ಥಾನಮಾನಗಳಿಗೂ ಮತ್ತು ಸಾಮ್ರಾಟ ಪ್ರಜೆಯ ಹಕ್ಕು ಬಾಧ್ಯತೆಗಳಿಗೂ ಆಗಿರುವ ಅವನತಿ ಇವುಗಳನ್ನೆಲ್ಲ ಪರಿಶೀಲಿಸಿದ ಕಾಂಗ್ರೆಸ್ ತುಂಬ ಆತಂಕವನ್ನೂ ಮತ್ತು ದುಃಖವನ್ನೂ ವ್ಯಕ್ತಪಡಿಸುತ್ತದಲ್ಲದೆ ಭಾರತೀಯರನ್ನು ಹಿಂದುಳಿದವರು ಮತ್ತು ಅನಾಗರಿಕ ಜನಾಂಗಗಳೆಂದು ಪರಿಗಣಿಸಿರುವ ವಸಾಹತುಗಳ ವರ್ತನೆಯ ಬಗೆಗೆ ಪ್ರತಿಭಟನೆ ಸಲ್ಲಿಸುತ್ತದೆ".

ಇಂಡಿಯನ್ ಒಪಿನಿಯನ್

೧೯೦೪

೧೯೦೪ರ ಆದಿ ಭಾಗದಲ್ಲಿ ಅಸಾಧಾರಣ ಮಳೆಸುರಿಯಿತು. ಮಳೆಮೋಡ ಹದಿನೇಳು ದಿನಗಳವರೆಗೆ ಜೋಹಾನ್ಸ್‌ಬರ್ಗ್‌ನ ಮೇಲೆ ಬಿಡದೆ ಕವಿದ್ದಿತ್ತು. ಮಳೆಯಿಂದ ನಗರ ಮುಳುಗಿ ಹೋದಂತಾಯಿತು. ಅನಂತರ ಪ್ಲೇಗ್ ಸಂಭವಿಸಿತು. ಆದರೆ ಕೆಲವು ಕಾಲದ ವರೆಗೆ ಪುರಸಭಾ ಅಧಿಕಾರಿಗಳು ವ್ಯಾಧಿಯನ್ನು ಗುರುತಿಸಲು ಅಸಮರ್ಥರಾಗಿದ್ದರು. ಗಾಂಧಿ ಭಾರತದಲ್ಲಿ ಹೊಂದಿದ್ದ ಅನುಭವದಿಂದ, ಅಲ್ಲೊಂದು ಇಲ್ಲೊಂದು ಚದುರಿದಂತೆ ಸಂಭವಿಸಿದ ಘಟನೆಗಳು ವಾಸ್ತವಿಕವಾಗಿ ಮಾರಕ ನ್ಯೂಮಾನಿಕ್ ಪ್ಲೇಗ್ ಎಂದು ಖಚಿತ ಅಭಿಪ್ರಾಯವನ್ನು ಹೊಂದಿದ್ದರು. ಹಳೆಯ ವಾಸಸ್ಥಳಗಳಲ್ಲಿ ಇದ್ದ ಅನೈರ್ಮಲ್ಯ ಸ್ಥಿತಿಗಳಿಂದ– ಅದು ಪುರಸಭೆಯ ಅಕ್ಷಮ್ಯ ಅಪರಾಧವೆಂದು ಅವರು ಹೇಳಿದರು. ಉಗ್ರಸ್ಥಿತಿಯನ್ನು ಮುಂಗಂಡು ಅವರು ಅಧಿಕಾರಿಗಳಿಗೆ ತಮ್ಮ ಅಭಿಪ್ರಾಯವನ್ನು ವರದಿ ಮಾಡಿದರು. ಪುರಸಭೆ ನಿರ್ಲಕ್ಷ್ಯವಾಗಿಯೇ ಇದ್ದಿತು.

ಗಣಿಗಳಲ್ಲಿ ಈ ಘೋರವ್ಯಾಧಿಗೆ ತುತ್ತಾಗಿ ಸತ್ತು ಹೋದ ಅಥವಾ ಸತ್ತು ಹೋಗುವ ಸ್ಥಿತಿಯಲ್ಲಿದ್ದ ಅನೇಕ ಮಂದಿ ಭಾರತೀಯರನ್ನು ತಂದು ಅವರ ವಾಸಸ್ಥಾನಗಳಲ್ಲಿ ಹಾಕಲಾಗುತ್ತಿದೆಯೆಂಬ ವಾರ್ತೆಯನ್ನು ಗಾಂಧಿ ಮಾರ್ಚಿ ೧೮ರಂದು ಕೇಳಿದರು. ತತ್‌ಕ್ಷಣ ಅವರು ಅಲ್ಲಿಗೆ ಬೈಸಿಕಲ್ ಮೇಲೆ ಹೋಗಿ, ತಾವೇ ಸ್ವತಃ ಕೆಲಸ ಮಾಡಲು ಪ್ರಾರಂಭಿಸಿದರು. ಐದು ಮಂದಿ ಭಾರತೀಯ ಸ್ವಯಂಸೇವಕರ ನೆರವಿನಿಂದ ಒಂದು ಖಾಲಿಯಿದ್ದ ಕೋಣೆಯ ಬೀಗವನ್ನೊಡೆದು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಅದನ್ನು ಆಸ್ಪತ್ರೆಯನ್ನಾಗಿ ಮಾಡಿಕೊಂಡರು. ಭಿನ್ನ ಭಿನ್ನ ಕಡೆಗಳಿಂದ ತಂದ ೨೩ ಮಂದಿ ರೋಗಿಗಳನ್ನು ಅಲ್ಲಿ ಸೇರಿಸಿದರು. ಭಾರತೀಯ ಬಾಂಧವರು ಸಭೆ ಸೇರಿ, ನಿಧಿ ಕೂಡಿಸಿದರು.

೧೯ರ ಮುಂಜಾನೆ ಪುರಸಭೆ ಹಳೆ ಸುಂಕ ವಸೂಲಿ ಮನೆಯನ್ನು ಒಂದು ತಾತ್ಕಾಲಿಕ ವೈದ್ಯಶಾಲೆಯನ್ನಾಗಿ ಪರಿವರ್ತಿಸಿ ಕೊಟ್ಟಿತು. ಭಾರತೀಯರೇ ಅದನ್ನು ಶುದ್ಧಪಡಿಸಿಕೊಂಡು, ಆದಷ್ಟು ಉತ್ತಮವಾಗಿ ಸೌಕರ್ಯಗಳಿಂದ ಸಜ್ಜುಗೊಳಿಸಿಕೊಂಡರು. ಮೂವತ್ತು ಮಂದಿ ಸ್ವಯಂಸೇವಕರು ಸಿದ್ಧರಾದರು. ರೋಗಿಗಳನ್ನು ಅಲ್ಲಿಡಲಾಯಿತು. ಪುರಸಭೆ ಒಬ್ಬಳು ದಾದಿಯನ್ನು ಕಳಿಸಿತು. ಆಕೆ ಬ್ರಾಂದಿಯನ್ನೂ ಮತ್ತು ಇತರ ವೈದ್ಯಶಾಲೆಯ ವಸ್ತುಗಳನ್ನೂ ತೆಗೆದುಕೊಂಡು ಬಂದಳು. ಆಕೆ ಮುನ್ನೆಚ್ಚರಿಕೆಯ ದೃಷ್ಟಿಯಿಂದ ಬ್ರಾಂದಿಯನ್ನು ಸೇವಿಸಬೇಕೆಂದು ಗಾಂಧಿಗೆ ಸೂಚಿಸಿದಳು. ಆದರೆ ಗಾಂಧಿ, ರೋಗಿ

ಗಳಿಗೂ ಅದರಿಂದ ಉತ್ತಮವಾಗುವುದಿಲ್ಲವೆಂದು ನಂಬಿದ್ದರು. ವೈದ್ಯಶಾಲೆಯ ಮೇಲ್ವಿಚಾರಕರಾಗಿದ್ದ ಡಾ. ಗಾಡ್‌ಫ್ರೇಯುವರ ಅನುಮತಿ ಪಡೆದು, ಮೂವರು ರೋಗಿಗಳನ್ನು ಮೃತ್ತಿಕಾ ಚಿಕಿತ್ಸೆಗೆ ಒಳಪಡಿಸಿ, ಅವರ ತಲೆಗೂ ಮತ್ತು ಎದೆಗೂ ಮಣ್ಣಿನ ಪಟ್ಟಿಗಳನ್ನು ಕಟ್ಟಿದರು. ಅವರಲ್ಲಿ ಇಬ್ಬರು ಬದುಕಿಕೊಂಡರು. ಇನ್ನು ಇಪ್ಪತ್ತು ಮಂದಿ ಕೊಠಡಿಯಲ್ಲಿಯೇ ಕಾಲವಾದರು. ದಾದಿಯೂ ಜಾಗ್ರತೆ ರೋಗಕ್ಕೆ ತುತ್ತಾಗಿ ಪಶ್ಚಾತ್ತನೆ ಮೃತಳಾದಳು. ಸ್ಥಳೀಯ ಜನರು ನೆಲಸುದಾಣದ ತಮ್ಮ ಮನೆಗಳನ್ನು ತ್ಯಜಿಸಿ, ಮೂರು ವಾರಗಳ ಕಾಲ, ಬಯಲಿನ ಗುಡಾರಗಳಲ್ಲಿ ವಾಸಿಸುವಂತೆ ಮಾಡಲು ಮತ್ತು ಅನಂತರ ಆ ಪ್ರದೇಶವನ್ನು ಬೆಂಕಿಹಚ್ಚಿಸಿ ಸುಡಲು ಅಧಿಕಾರಿಗಳಿಗೆ ಗಾಂಧಿ ನೆರವನ್ನಿತ್ತರು.

ಪ್ಲೇಗು ತಲೆದೋರುವುದಕ್ಕೆ ಒಂದು ವಾರ ಮುಂಚೆ, ಒಂದು ಸಾಪ್ತಾಹಿಕ ಪತ್ರಿಕೆಯನ್ನು ವಹಿಸಿಕೊಳ್ಳಬೇಕೆಂಬ ಸಲಹೆ ಬಂದಿತು. ದರ್ಬಾನಿನಲ್ಲಿ ಮುಂಬೈಯ ಶಾಲಾ ಅಧ್ಯಾಪಕನಾಗಿದ್ದ ಶ್ರೀಮದನ್‌ಜಿತ್ ಎನ್ನುವವರ ನಿರ್ದೇಶನದಲ್ಲಿ ಆಗಲೇ ಒಂದು ಮುದ್ರಣಾಲಯ ನಡೆಯುತ್ತಿತ್ತು. ಗಾಂಧಿ ಅದರ ವೆಚ್ಚದಲ್ಲಿ ಬಹಳ ಭಾಗವನ್ನು ಕೊಟ್ಟಿದ್ದರು. ಮುದ್ರಣಾಲಯ ಸಿದ್ಧವಾಗಿತ್ತು. ಪದವೀ ಪೂರ್ವ ಶಿಕ್ಷಣವನ್ನು ಪಡೆದಿದ್ದ ಮನ್‌ಸುಖಲಾಲ್ ನಜಾರ್ ಎಂಬ ಯುವಕ ಪತ್ರಿಕೋದ್ಯಮದಲ್ಲಿ ತರಬೇತಿ ಹೊಂದಿದವನಾಗಿದ್ದನು. ಅವನು 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಪ್ರಥಮ ಸಂಪಾದಕನಾಗಿ ತನ್ನ ಸೇವೆಯನ್ನು ಉಚಿತವಾಗಿ ನೀಡಲು ಮುಂದೆ ಬಂದನು. ಪತ್ರಿಕೆಯ ನಿಧಿಗೆ ಗಾಂಧಿ ಇಷ್ಟು ಹಣ ಕೊಡಬೇಕೆಂದೂ, ತಪ್ಪದೆ ಇಂಗ್ಲಿಷ್ 'ಕಾಲಂ'ಗೆ ಲೇಖನ ಬರೆಯಬೇಕೆಂದೂ ಗೊತ್ತಾಗಿದ್ದಿತು. ಸಾಪ್ತಾಹಿಕವು ಇಂಗ್ಲಿಷ್, ತಮಿಳು, ಗುಜರಾತಿ, ಮತ್ತು ಹಿಂದಿ ಈ ಭಾಷೆಗಳಲ್ಲಿ ಪ್ರಕಟವಾಯಿತು. ಉದ್ಯಮವೇನೋ ಅಗತ್ಯವಾಗಿತ್ತು ಆದರೆ, ಅದು ತುಂಬ ವೆಚ್ಚಕ್ಕೆ ಕಾರಣವಾಯಿತು. ಗಾಂಧಿ ತಮ್ಮ ವರಮಾನದಿಂದ ೨,೦೦೦ ಪೌಂಡುಗಳನ್ನು ಅದಕ್ಕಾಗಿ ಹಾಕಿದ್ದರು. ಈಗ ಮುದ್ರಣಾಲಯವನ್ನು ನಿಲ್ಲಿಸಿ ಬಿಡಬೇಕಾದ ಅಥವಾ ಅದರ ಪೂರ್ಣ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿತು. ಎರಡನೆಯದನ್ನೇ ಗಾಂಧಿ ಅಂಗೀಕರಿಸಿದರು.

ಮಿ. ಆಲ್ಬರ್ಟ್ ವೆಸ್ಟ್ ಎಂಬ ತಮ್ಮ ಗೆಳೆಯರನ್ನು ಇಂಡಿಯನ್ ಒಪಿನಿಯನ್ ಮೇಲ್ವಿಚಾರಣೆಗೆ ಇಟ್ಟರು. ಮಿ. ವೆಸ್ಟ್, ಮುದ್ರಣಾಲಯದ ಆರ್ಥಿಕ ಸ್ಥಿತಿ ಸಂಪೂರ್ಣ ಕೆಟ್ಟು ಹೋಗಿರುವುದೆಂದು ಗಾಂಧಿಗೆ ವರದಿ ಮಾಡಿದರು. ಆ ಕೂಡಲೇ ಗಾಂಧಿ ದರ್ಬಾನಿಗೆ ಹೊರಟರು.

ಜೋಹಾನ್ಸ್ ಬರ್ಗ್ ನಿಲ್ದಾಣದಲ್ಲಿ ಗಾಂಧಿಯನ್ನು ಬೀಳ್ಕೊಡಲು ಬಂದಿದ್ದ ಮಿ. ಪೋಲಕ್, ರಸ್ಕಿನ್‌ನ 'ಅಂಟು ದಿಸ್ ಲಾಸ್ಟ್' ಎಂಬ ಕೃತಿಯನ್ನು ಅವರಿಗೆ ಕೊಟ್ಟು ಇಪ್ಪತ್ತು ನಾಲ್ಕು ತಾಸುಗಳ ಕಾಲದಲ್ಲಿ ಅದನ್ನು ಓದಿ ಮುಗಿಸಬೇಕೆಂದು ಸಲಹೆ ಮಾಡಿದರು. ರಸ್ಕಿನ್‌ನ ಪುಸ್ತಕಗಳಲ್ಲಿ ಗಾಂಧಿ ಓದಿದುದು ಅದೇ ಮೊದಲನೆಯ ಪುಸ್ತಕ.

ಅದು ಅವರ ಮನಸ್ಸನ್ನು ಸೆರೆ ಹಿಡಿಯಿತು. ಆ ರಾತ್ರಿ ಅವರಿಗೆ ನಿದ್ರೆಯೇ ಬರಲಿಲ್ಲ. ೧೮೬೨ರಲ್ಲಿ ಪ್ರಕಟವಾಗಿದ್ದ ಆ ಪುಸ್ತಕದಲ್ಲಿ ತಮ್ಮ ಹೃದಯಾಂತರಾಳದ ಕೆಲವು ನಂಬಿಕೆಗಳು ಇದ್ದುದನ್ನು ಅವರು ಕಂಡುಕೊಂಡರು.

ಗಾಂಧಿ ಆ ಪುಸ್ತಕದಿಂದ ಗ್ರಹಿಸಿದ ತತ್ವಗಳು ಹೀಗಿದ್ದುವು: ವ್ಯಕ್ತಿಯ ಒಳಿತು ಸಕಲರ ಒಳಿತಿನಲ್ಲಿ ಅಡಗಿದೆ; ನ್ಯಾಯವಾದಿಯ ಕಾರ್ಯಕ್ಕೂ ನಾಯಿಂದನ ಕಾರ್ಯಕ್ಕೂ ಸಮನಾದ ಮೌಲ್ಯವಿದೆ; ಏಕೆಂದರೆ ಎಲ್ಲರೂ ತಮ್ಮ ತಮ್ಮ ಕೆಲಸಗಳಿಂದ ಜೀವನೋಪಾಯ ನಡಸುವ ಹಕ್ಕನ್ನು ಹೊಂದಿದ್ದಾರೆ; ಕಾಯಕದ ಬದುಕು, ಅದರಲ್ಲಿಯೂ ಕೃಷಿಕನ ಮತ್ತು ಕೈಕುಶಲಕಾರನ ಬದುಕು, ಯೋಗ್ಯವಾದುದು.

ಮುಂಜಾನೆ ಎದ್ದ ಗಾಂಧಿ, ಹೊಸದಾಗಿ ಕಲಿತ ಈ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರಲು ಸಿದ್ಧರಾಗಿದ್ದರು.

ಆ ದಿನ ತೋನ್‌ಗಾತ್‌ನಲ್ಲಿದ್ದ ತಮ್ಮ ದಾಯಾದಿಗಳನ್ನು ಕಾಣಲು ಹೋದರು; ಅವರ ಅಂಗಡಿಯನ್ನು ನೋಡಿದರು. ಆದರೆ ಅದರ ಹಿಂದುಗಡೆ ಇದ್ದ ಒಂದು ಎಕರೆ ಹಣ್ಣಿನ ಗಿಡಗಳ ತೋಟ ಅವರನ್ನು ತುಂಬ ಆಕರ್ಷಿಸಿತು. ಅದು ಬಹಳ ಅಂದವಾಗಿ ಕಂಡುದಲ್ಲದೆ ಆ ಭೂಮಿಯ ಸಾಧ್ಯತೆ ಅಗಾಧವಾಗಿದ್ದುದು ಮನವರಿಕೆಯಾಯಿತು. ತಮ್ಮ ದಾಯಾದಿಗಳ ಸುತ್ತ ಅಷ್ಟೊಂದು ಕೆಲಸ, ಅಷ್ಟೊಂದು ಸೌಂದರ್ಯ ಇದ್ದರೂ ಅದನ್ನೆಲ್ಲ ಬಿಟ್ಟು ಅಂಗಡಿಯಲ್ಲಿ ವೃಥಾ ಕಾಲ ಕಳೆಯುತ್ತಿರುವಂತೆ ತೋರಿತು. ಗಾಂಧಿ ಹೀಗೆ ಯೋಚಿಸಿದರು: "ಅವರು ಕೇವಲ ಕಾರ್ಮಿಕರ ನೆರವಿನಿಂದ ಭೂಮಿಯನ್ನು ಅಷ್ಟಿಷ್ಟು ವ್ಯವಸಾಯ ಮಾಡಿಸುತ್ತಾರೆ. ತಾವೇ ಏಕೆ ಶ್ರಮ ವಹಿಸಿ, ಅದನ್ನು ಉತ್ತಮವಾಗಿ ಮಾಡಬಾರದು? ಅಂಥ ಕನಸು ನಿಜವಾಗಿಯೂ ಕಾರ್ಯಗತವಾದೀತು".

ಗಾಂಧಿ, ಈ ವಿಷಯವನ್ನು ಮಿ. ವೆಸ್ಟ್ ಅವರೊಂದಿಗೆ ಚರ್ಚಿಸಿದರು. ಇಂಡಿಯನ್ ಒಪಿನಿಯನ್ ಕಾರ್ಯಾಲಯವನ್ನು ಒಂದು ತೋಟಕ್ಕೆ ಬದಲಾಯಿಸಲು ಸೂಚಿಸಿದರು. ಅಲ್ಲಿ ಎಲ್ಲರೂ ಶ್ರಮಪಡಬೇಕು. ಎಲ್ಲರಿಗೂ ಜೀವನಾಧಾರಕ್ಕೆ ಅಗತ್ಯವಾದ ಒಂದೇ ರೀತಿಯ ಪ್ರತಿಫಲ. ಜೊತೆಗೆ ಎಲ್ಲರೂ ವಿರಾಮ ಕಾಲದಲ್ಲಿ ಮುದ್ರಣಾಲಯದ ಕೆಲಸ ಮಾಡಬೇಕು ಸಲಹೆಯನ್ನು ಮಿ. ವೆಸ್ಟ್ ಒಪ್ಪಿದರು. ವರ್ಣ-ಜನಾಂಗ ಇವುಗಳ ವ್ಯತ್ಯಾಸವಿಲ್ಲದಂತೆ ಪ್ರತಿಯೊಬ್ಬರಿಗೂ ತಿಂಗಳಿಗೆ ಮೂರು ಪೌಂಡುಗಳ ಜೀವನಭತ್ಯವೆಂದು ಗೊತ್ತು ಮಾಡಲಾಯಿತು.

ಫೀನಿಕ್ಸ್ ವಸತಿ

೧೯೦೪

'ಅಂಟು ದಿಸ್ ಲಾಸ್ಟ್' ಗ್ರಂಥದ ತತ್ವಗಳನ್ನು ಅನುಷ್ಠಾನಕ್ಕೆ ತರಲು ಗಾಂಧಿ ಬಹಳ ಕಾಲ ತೆಗೆದುಕೊಳ್ಳಲಿಲ್ಲ. ಹತ್ತು ದಿನಗಳಲ್ಲಿ ಒಂದು ಸಾವಿರ ಪೌಂಡಿಗೆ ನೂರು ಎಕರೆ ಜಮೀನನ್ನು ಕೊಂಡು ಕೊಂಡರು. ಅದರಲ್ಲಿ ಸೊಗಸಾದ ಒಂದು ಚಿಕ್ಕ ಚಿಲುಮೆ; ಒಂದು ಶಿಥಿಲವಾದ ಕಟ್ಟಡ, ಮತ್ತು ತುಂಬಾ ಹಣ್ಣಿನ ಗಿಡಗಳಿದ್ದುವು; ಅವುಗಳಲ್ಲಿ ಕೆಲವು ಮಾವಿನ ಹಣ್ಣಿನ ಗಿಡಗಳು, ಇನ್ನು ಕೆಲವು ಕಿತ್ತಲೆ ಹಣ್ಣಿನ ಗಿಡಗಳು. ಇದು ಡರ್ಬಾನಿನಿಂದ ಹದಿನಾಲ್ಕು ಮೈಲಿ ದೂರದಲ್ಲಿ ಮತ್ತು ಫಿನಿಕ್ಸ್ ನಿಲ್ದಾಣದಿಂದ ಎರಡೂ ವರೆ ಮೈಲಿ ದೂರದಲ್ಲಿತ್ತು. ಹೀಗೆ ೧೯೦೪ರಲ್ಲಿ ಫೀನಿಕ್ಸ್ ವಸತಿ ಅಸ್ತಿತ್ವಕ್ಕೆ ಬಂದಿತು.

ಈ ಹೊಸ ಜಮೀನಿನಲ್ಲಿ ಯಾರೂ ವಾಸವಾಗಿರಲಿಲ್ಲ. ಕಾಡುಹುಲ್ಲು ಹುಲುಸಾಗಿ ಬೆಳೆದು, ತುಂಬ ಹಾವುಗಳಿದ್ದುವು. ಆರಂಭದಲ್ಲಿ ಗಾಂಧಿ ಮತ್ತು ಅವರ ಸಹೋದ್ಯೋಗಿಗಳು ಗುಡಾರದಲ್ಲಿ ವಾಸಿಸಿದರು. ಅವರು ತಮ್ಮೊಡನೆ ಬಂದಿದ್ದು, ವ್ಯಾಪಾರದಲ್ಲಿ ನಿರತರಾಗಿದ್ದ ಬಂಧುಗಳನ್ನೂ ಮತ್ತು ಗೆಳೆಯರನ್ನೂ ಫೀನಿಕ್ಸ್‌ಗೆ ಕರೆದುಕೊಂಡು ಹೋದರು. ಅವರಲ್ಲಿ ಮಗನ್‌ಲಾಲ್ ಗಾಂಧಿಯೂ ಒಬ್ಬರು.

ಪಾರ್ಸಿ ರುಸ್ತುಂಜೀ ಎಂಬ ಗೆಳೆಯ ಅವರಿಗೆ ಕಬ್ಬಿಣದ ತಗಡುಗಳನ್ನೂ ಮತ್ತು ಕಟ್ಟಡದ ಸಾಮಗ್ರಿಗಳನ್ನೂ ಕೊಟ್ಟರು. ಇದರಿಂದ ಕೆಲಸ ಆರಂಭವಾಯಿತು. ಭಾರತೀಯ ಬಡಗಿಗಳು ಮತ್ತು ಕಲ್ಲುಕುಟಿಗರ ನೆರವಿನಿಂದ–ಅವರು ಗಾಂಧಿಯೊಂದಿಗೆ ಬೋಯರ್ ಯುದ್ಧದ ಕಾಲದಲ್ಲಿ ಕೆಲಸಮಾಡಿದ್ದವರು–ಎಪ್ಪತ್ತೈದು ಅಡಿ ಉದ್ದ ಮತ್ತು ಐವತ್ತು ಅಡಿ ಅಗಲದ, ಒಂದು ಮುದ್ರಣಾಲಯದ ಕಟ್ಟಡ ಸಿದ್ಧವಾಯಿತು. ಕೇವಲ ಹದಿನೆಂಟು ತಿಂಗಳಕಾಲ ಡರ್ಬಾನಿನಲ್ಲಿದ್ದ 'ಇಂಡಿಯನ್ ಒಪಿನಿಯನ್' ಕಾರ್ಯಾಲಯವನ್ನು ಫೀನಿಕ್ಸ್‌ಗೆ ವರ್ಗಾಯಿಸಲಾಯಿತು.

ಮುದ್ರಣ ಯಂತ್ರವನ್ನು ನಡಸಲು ಒಂದು ಆಯಿಲ್ ಎಂಜಿನ್ ಉಪಯೋಗಿಸಲಾಯಿತು. ಆದರೆ ಕೈಯಿಂದ ವ್ಯವಸಾಯದ ಕೆಲಸ ನಡೆಯುವ ಸಂದರ್ಭಗಳಲ್ಲಿ ಹಸ್ತಶಕ್ತಿಯನ್ನು ಬಳಸುವುದೇ ಉತ್ತಮವೆಂದು ಭಾವಿಸಿದ ಗಾಂಧಿ ಒಂದು ಚಕ್ರದ ಯಂತ್ರವನ್ನೂ ಇಟ್ಟುಕೊಂಡರು. ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು 'ಫೂಲ್ಸ್‌ಕ್ಯಾಪ್' ಆಕಾರಕ್ಕೆ ಇಳಿಸಲಾಯಿತು. ತುರ್ತು ಪರಿಸ್ಥಿತಿ ಬಂದಾಗ, ಪತ್ರಿಕೆಯ ಪ್ರತಿಗಳನ್ನು ಕಾಲೊತ್ತುವ ಯಂತ್ರದಿಂದ ಒತ್ತಿ ತೆಗೆಯಲು ಅನುಕೂಲವಾಗಲೆಂಬುದು ಇದರ ಉದ್ದೇಶವಾಗಿತ್ತು.

ಮೊದಲ ರಾತ್ರಿ ಯಂತ್ರ ಕೆಲಸ ಮಾಡಲಿಲ್ಲ. ಆ ಯಂತ್ರದ ಒಬ್ಬ ಕೆಲಸಗಾರ ಮತ್ತು ಮಿ. ವೆಸ್ಟ್ ನಿರಾಶೆಹೊಂದಿ, ವಿಷಯವನ್ನು ಗಾಂಧಿಗೆ ತಿಳಿಸಲು ಬಂದರು. ಗಾಂಧಿ ಕಟ್ಟಡವಲ್ಲಿ ನಿದ್ರಿಸುತ್ತಿದ್ದ ಬಡಗಿಗಳನ್ನು ತತ್‌ಕ್ಷಣವೇ ಎಚ್ಚರಿಸಿ ಒತ್ತುಚಕ್ರ ವನ್ನು ತಿರುಗಿಸುವ ಕೆಲಸದಲ್ಲಿ ತೊಡಗಿದರು. ಅವರೂ ಬಡಗಿಗಳ ಜತೆಗೆ ಕೆಲಸ ಮಾಡಿದರು; ಇತರರೂ ಸರದಿಯ ಪ್ರಕಾರ, ಪ್ರಾತಃಕಾಲ ಏಳು ಘಂಟೆಯ ವರೆಗೂ ಕೆಲಸ ಮಾಡಿದರು. ಇನ್ನೂ ಬಹಳ ಕೆಲಸ ಉಳಿದಿತ್ತು. ಆದರೆ ಈಗ ಯಂತ್ರ ಮುಟ್ಟಿದ ಕೂಡಲೇ ಕೆಲಸ ಮಾಡಲಾರಂಭಿಸಿತು. ಪ್ರತಿಗಳನ್ನು ಸಕಾಲದಲ್ಲಿ ರವಾನಿಸುವುದು ಸಾಧ್ಯವಾಯಿತು. "ಇಂಡಿಯನ್ ಒಪಿನಿಯನ್"ನ ಪ್ರಥಮ ಸಂಚಿಕೆ, ಹೀಗೆ ಒತ್ತುವ ಯಂತ್ರದಿಂದಲೆ, ಒಂದು ಹಾಳೆಯ ಮೇಲೆ, ನಿಗದಿಯಾದಂತೆ ಅದು ಹೊರಬರಬೇಕಾ ಗಿದ್ದ ದಿನ, ೧೯೦೪ರ ಡಿಸೆಂಬರ್ ೨೪ರಂದು ಅಚ್ಚಾಯಿತು. ಈ ಸಾಹಸದಿಂದ ಪತ್ರಿಕೆಯು ಕಾಲಕ್ಕೆ ಸರಿಯಾಗಿ ಬರುವುದೆಂಬ ನಂಬಿಕೆ ಬಂದಿತು; ಕಾರ್ಯಕರ್ತರಲ್ಲಿ ಆತ್ಮನಂಬಿಕೆಯೂ ಉಂಟಾಯಿತು. ಕೆಲವು ಕಾಲದ ವರೆಗೆ, ಉದ್ದೇಶಪೂರ್ವಕವಾಗಿಯೇ ಎಂಜಿನ್ ಉಪ ಯೋಗವನ್ನು ನಿಲ್ಲಿಸಿ, ಹಸ್ತಶಕ್ತಿಯಿಂದ ಮಾತ್ರ ಯಂತ್ರವನ್ನು ನಡೆಸಲಾಯಿತು.

ಆರಂಭದ ಕಾಲದಲ್ಲಿ, ಪತ್ರಿಕೆಯ ಪ್ರಕಟಣೆಯ ದಿನ ವಸಾಹತುವಿನ ಎಲ್ಲ ಕಾರ್ಯ ಕರ್ತರೂ ಹೆಚ್ಚು ಕಾಲ ನಿದ್ದೆ ಮಾಡುವಂತಿರಲಿಲ್ಲ. ಮುದುಕರು, ಹುಡುಗರು ಆದಿ ಯಾಗಿ ಎಲ್ಲರೂ ಹಾಳೆಗಳನ್ನು ಮಡಿಸಿ, ಅವುಗಳನ್ನು ರವಾನಿಸುವ ಕಾರ್ಯದಲ್ಲಿ ನೆರ ವಾಗಬೇಕಾಗಿದ್ದಿತು. ಮುದ್ರಣದ ಮೊಳೆ ಜೋಡಿಸುವುದಕ್ಕಾಗಿಯೇ ಬೇರೆ ಕೆಲಸ ಗಾರರಿದ್ದರೂ, ವಸಾಹತುವಿನ ಪ್ರತಿಯೊಬ್ಬನೂ ಆ ಕಾರ್ಯವನ್ನು ಕಲಿತನು. ಗಾಂಧಿಯೂ ಅದನ್ನು ಅಭ್ಯಾಸ ಮಾಡಿದರು. ಮಗನ್‌ಲಾಲ್ ಆ ಕೆಲಸವದಲ್ಲಿ ಪರಿಣತರಾದುದಲ್ಲದೆ, ಮುದ್ರಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನೂ ಶೀಘ್ರವಾಗಿ ಕಲಿತರು.

ಫೀನಿಕ್ಸ್‌ನಲ್ಲಿ ನೆಲೆಸಿದವರಲ್ಲಿ ಎರಡು ವರ್ಗದವರಿದ್ದರು. "ಯೋಜನೆಗೆ ಸಂಬಂಧಿ ಸಿದವರು" ಮತ್ತು ಸಂಬಳದ ಕೆಲಸಗಾರರು. "ಯೋಜನೆಗೆ ಸಂಬಂಧಿಸಿದವರು" ಶ್ರಮ ಮಾಡಿ ಜೀವನವನ್ನು ನಡೆಸಬೇಕಾಗಿದ್ದಿತು. ಒಬ್ಬೊಬ್ಬರಿಗೂ ಮುದ್ರಣಾಲಯದಸುತ್ತಲೂ ಮೂರು ಮೂರು ಎಕರೆ ಜಮೀನನ್ನು ಕೊಡಲಾಗಿದ್ದಿತು. ಯಾವ ಕ್ಷೇತ್ರಕ್ಕೂ ಬೇಲಿ ಹಾಕಿರಲಿಲ್ಲ. ಕಿರಿದಾದ ಹಾದಿಗಳೂ ಮತ್ತು ಕಾಲುದಾರಿಗಳೂ ಒಂದು ಹಿಡುವಳಿ ಯನ್ನೂ ಇನ್ನೊಂದರಿಂದ ಪ್ರತ್ಯೇಕಗೊಳಿಸಿದ್ದುವು. ಮೊದಲಿನ ಯೋಜನೆಯಂತೆ, ರೈತರಿಗೆ ಯೋಗ್ಯವಾಗಿರುವ ಮಣ್ಣುಗೋಡೆಯ, ಹುಲ್ಲು ಚಾವಣಿಯ ಗುಡಿಸಲುಗಳನ್ನೋ ಅಥವಾ ಸಣ್ಣ ಇಟ್ಟಿಗೆಯ ಮನೆಗಳನ್ನೋ ಕಟ್ಟಿಸಬೇಕಾಗಿದ್ದಿತು. ಆದರೆ, ಹಣದ ಅಭಾವದಿಂದ ನೆಲಸುಗಾರರೇ ಕಬ್ಬಿಣದ ತಗಡಿನ ಮನೆಗಳನ್ನು ಕಟ್ಟಿಕೊಂಡರು. ಯಾರಾದರೊಬ್ಬರು ಮನೆಯನ್ನು ಅಥವಾ ಹಿಡುವಳಿಯನ್ನು ಬಿಟ್ಟು ಹೋದರೆ, ಅದನ್ನು ಮಾರದೆ, ಮತ್ತೊಬ್ಬ ಸದಸ್ಯನಿಗೆ ಕೊಡಲಾಗುತ್ತಿತ್ತು. ಹೊಸ ಸದಸ್ಯರಲ್ಲಿ ಕೆಲವರು ಭಾರತೀಯರು ಮತ್ತು ಧ್ಯೇಯವಾದಿ ಐರೋಪ್ಯರು ಇದ್ದರು. ವಸಾಹತುವು

ಆದಷ್ಟು ಮಟ್ಟಿಗೆ ಸ್ವಪರಿಪೂರ್ಣವಾಗಿರಬೇಕಾಗಿತ್ತು ಮತ್ತು ಜೀವನದ ಅಗತ್ಯಗಳನ್ನು ಅತ್ಯಂತ ಕಡಿಮೆ ಮಾಡಿಕೊಳ್ಳಬೇಕಾಗಿತ್ತು.

ವಸಾಹತುವಿನ ಕಟ್ಟಡಗಳನ್ನು ಬಿಟ್ಟರೆ, ಎರಡು ಮೈಲಿ ದೂರದ ಪ್ರದೇಶದಾಚೆ ಕೆಲವು ಜೂಲೂ ರೈತರ ಗುಡಿಸಲುಗಳ ಹೊರತು ಬೇರೆ ಏನೂ ಕಂಡು ಬರುತ್ತಿರಲಿಲ್ಲ. ವಸಾಹತುವಿಗೂ ಮತ್ತು ರೈಲು ನಿಲ್ದಾಣಕ್ಕೂ ನಡುವೆ ಸಾವಿರಾರು ಎಕರೆಗಳ ಒಂದು ದೊಡ್ಡ ಕಬ್ಬಿನ ತೋಟವಿತ್ತು. ರೈಲಿನ ನಿಲ್ದಾಣಕ್ಕೆ ಸ್ವಲ್ಪದೂರದಲ್ಲಿ ಒಂದು ಸಣ್ಣ ಅಂಗಡಿಯಲ್ಲದೆ ಬೇರೇನೂ ಅನುಕೂಲವಿರಲಿಲ್ಲ. ಎಲ್ಲ ಸಾಮಾನುಗಳನ್ನೂ ದರ್ಬಾನಿನಿಂದಲೇ ತರಬೇಕಾಗಿತ್ತು.

ಕೆಲವು ತಿಂಗಳುಗಳಲ್ಲಿ ಮರ ಮತ್ತು ಕಬ್ಬಿಣದ ತಗಡುಗಳನ್ನು ಉಪಯೋಗಿಸಿ, ಎಂಟು ವಾಸದ ಮನೆಗಳನ್ನು ಸಿದ್ಧಗೊಳಿಸಲಾಯಿತು. ಗಾಂಧಿಯ ನಿವಾಸವು ಬೇರೆಯವರ ನಿವಾಸಕ್ಕಿಂತ ಭಿನ್ನವಾಗಿರಲಿಲ್ಲ. ಆದರೆ ಸ್ವಲ್ಪ ದೊಡ್ಡದಾಗಿತ್ತು. ಅಷ್ಟೆ. ಅವುಗಳಲ್ಲಿ ವಾಸಕ್ಕೂ ಮತ್ತು ಭೋಜನಕ್ಕೂ ಅನುಕೂಲವಾಗುವಂತೆ ಒಂದು ದೊಡ್ಡ ಕೊಠಡಿಯಿತ್ತು. ಎರಡು ಸಣ್ಣ ಮಲಗುವ ಕೋಣೆಗಳೂ ಒಂದು ಪುಟ್ಟ ಅಡಿಗೆ ಮನೆಯೂ ಮತ್ತು ಹಳೆಯ ವಿಧಾನದ ಒಂದು ಸ್ನಾನದ ಮನೆಯೂ ಇದ್ದುವು. ಸ್ನಾನದ ಮನೆಯ ರಚನೆಯನ್ನು ಬುದ್ಧಿವಂತಿಕೆಯಿಂದ ಮಾಡಲಾಗಿತ್ತು. ಕಬ್ಬಿಣದ ತಗಡಿನ ಮೇಲ್ಛಾವಣಿಯಲ್ಲಿ ಒಂದು ದೊಡ್ಡ ಪ್ರಮಾಣದ ರಂಧ್ರವನ್ನು ಮಾಡಲಾಗಿದ್ದಿತು. ಅಲ್ಲಿ ಒಂದು ಸಣ್ಣ ಮರದ ತುಂಡಿನ ಮೇಲೆ ತೋಟಕ್ಕೆ ನೀರನ್ನು ಹಾಕುವ ತೊಟ್ಟಿಯನ್ನೂ ಆ ನೀರಿನ ತೊಟ್ಟಿಗೆ ಒಂದು ಹಗ್ಗವನ್ನೂ ಕಟ್ಟಲಾಗಿದ್ದಿತು. ರಂಧ್ರದ ಕೆಳಗಡೆ ನಿಂತು ಹಗ್ಗವನ್ನು ಎಳೆದರೆ ತುಂತುರು ಸ್ನಾನವಾಗುತ್ತಿತ್ತು. ಗಾಂಧಿಯವರ ಬಂಗಲೆಯ ಸಮತಟ್ಟವಾಗಿದ್ದ ಮೇಲ್ಛಾವಣಿಯ ಮೇಲೆ ಒಂದು ಬಗೆಯ ಗಾಳಿಯ ತಡಿಕೆಯನ್ನು ಕಟ್ಟಲಾಗಿತ್ತು. ಅದು ಮೇಲ್ಛಾವಣಿಯ ಮೇಲೆ ಮಲಗುವವರನ್ನು ಗಾಳಿಯ ಹೊಡೆತದಿಂದ ತಪ್ಪಿಸುತ್ತಿತ್ತು. ಬೇಸಗೆ ಕಾಲದಲ್ಲಿ ಗಾಂಧಿ ಮೇಲ್ಛಾವಣಿಯನ್ನು ತಮ್ಮ ಮಲಗುವ ಸ್ಥಳವನ್ನಾಗಿ ಉಪಯೋಗಿಸುತ್ತಿದ್ದರು.

ತೋಟದಲ್ಲಿ ನೈರ್ಮಲ್ಯದ ವ್ಯವಸ್ಥೆ ಹಳೆಯ ರೀತಿಯದಾಗಿದ್ದಿತು. ಒಂದೊಂದು ಬಂಗಲೆಯೂ ಅದರದೇ ಆದ ಒಂದೊಂದು ಗುಪ್ತಸ್ಥಾನವನ್ನು ಹೊಂದಿದ್ದು; ಒಂದೊಂದಕ್ಕೂ ಬಕೆಟ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಅದನ್ನು ಖಾಲಿ ಮಾಡುವ ಹೊಣೆ ಅಲ್ಲಲ್ಲಿ ವಾಸಿಸುವ ವ್ಯಕ್ತಿಗಳದೇ ಆಗಿತ್ತು.

"ಇಂಡಿಯನ್ ಒಪಿನಿಯನ್ ಪ್ರತಿವಾರವೂ ಪ್ರಕಟವಾಗುತ್ತಿತ್ತು. ಇನ್ನು ಅದರ ಸಂಪಾದಕರಾಗಿದ್ದ ನಜಾರ್ ಅವರು ಫೀನಿಕ್ಸ್‌ಗೆ ಹೋಗಲು ಇಷ್ಟಪಡಲಿಲ್ಲವಾದುದರಿಂದ ದರ್ಬಾನ್‌ನಿಂದಲೇ ಕಾರ್ಯ ನಿರ್ವಹಿಸುತ್ತಿದ್ದರು. ವೆಚ್ಚವನ್ನು ಕಡಿಮೆ ಮಾಡುವುದಕ್ಕೂ ಮತ್ತು ಮುದ್ರಣ ಕೆಲಸವನ್ನು ಸುಲಭ ಮಾಡುವುದಕ್ಕೂ, ಅದು ಹಿಂದಿ

ಮತ್ತು ತಮಿಳುಗಳನ್ನು ಬಿಟ್ಟು ಇಂಗ್ಲಿಷ್ ಮತ್ತು ಗುಜರಾತಿ–ಈ ಎರಡೇ ಭಾಷೆಗಳಲ್ಲಿ ಅಚ್ಚಾಗುತ್ತಿದ್ದಿತು. ಪತ್ರಿಕೆಯ ಉದ್ದೇಶಗಳು ಹೀಗಿದ್ದುವು: ಎಡ್ವರ್ಡ್ ದೊರೆಯ ಐರೋಪ್ಯ ಮತ್ತು ಭಾರತೀಯ ಪ್ರಜೆಗಳನ್ನು ಇನ್ನೂ ಹತ್ತಿರಕ್ಕೆ ತರುವುದು: ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು; ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು; ಭಾರತೀಯರಿಗೆ ಅವರ ತಪ್ಪುಗಳನ್ನು ಎತ್ತಿ ತೋರಿಸುವುದು, ಅವರು ತಮ್ಮ ಹಕ್ಕುಗಳಿಗಾಗಿ ಒತ್ತಾಯ ಮಾಡುವಾಗಲೇ ಅವರ ಕರ್ತವ್ಯದ ಹಾದಿಯನ್ನೂ ತೋರಿಸುವುದು".

ಗಾಂಧಿ ಫೀನಿಕ್ಸ್‌ನಲ್ಲಿ ಇನ್ನೂ ಸರಿಯಾಗಿ ನೆಲಸುವುದಕ್ಕೆ ಮೊದಲೇ ಜೋಹಾನ್ಸ್‌ಬರ್ಗ್‌ನಲ್ಲಿ ಹೊಸದಾಗಿ ಕಟ್ಟಿಸಿದ ಮನೆಗೆ ಹೋಗಬೇಕಾಯಿತು. ಅಲ್ಲಿನ ಕೆಲಸ ಕಾರ್ಯಗಳನ್ನು ಇನ್ನೂ ಹೆಚ್ಚುಕಾಲ ನೋಡಿಕೊಳ್ಳದೆ ಬಿಡುವಂತಿರಲಿಲ್ಲ.

೧೯೦೪ರಲ್ಲಿ, ಮುಂಬೈನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಅಧ್ಯಕ್ಷರಾಗಿದ್ದ ಸರ್ ಹೆನ್ರಿ ಕಾಟನ್ ಒಂದು ಸಲಹೆ ಮಾಡಿದರು. ಗ್ರೇಟ್ ಬ್ರಿಟನ್‌ನಲ್ಲಿ ಸಾರ್ವತ್ರಿಕ ಚುನಾವಣೆ ಹತ್ತಿರಕ್ಕೆ ಬರುತ್ತಿದ್ದುದರಿಂದ ಭಾರತೀಯರ ಪ್ರತಿನಿಧಿ ನಿಯೋಗವೊಂದು ಅಲ್ಲಿಗೆ ಹೋಗಿ ಭಾರತದ ಕುಂದು ಕೊರತೆಗಳ ಬಗೆಗೆ ಬ್ರಿಟಿಷ್ ಅಭ್ಯರ್ಥಿಗಳಿಗೂ ಮತ್ತು ಮತದಾರರಿಗೂ ಪರಿಚಯ ಮಾಡಿಕೊಡಬೇಕೆಂಬುದೇ ಆ ಸಲಹೆಯಾಗಿತ್ತು. ಅಧ್ಯಕ್ಷರ ಸಲಹೆಯನ್ನು ಸಮರ್ಥಿಸಿದ ತಿಲಕರು, ಇಂಗ್ಲೆಂಡಿನಲ್ಲಿ ಒಂದು ಕಾಯಂ ರಾಜಕೀಯ ನಿಯೋಗವಿರಬೇಕೆಂದು ಒತ್ತಾಯ ಪಡಿಸಿದರು. ಹಿಂದಿನ ಬೋಯರ್ ಸರಕಾರವು ಭಾರತೀಯರಿಗೆ ವಿರೋಧವಾಗಿ ಮಾಡಿದ್ದ ಶಾಸನವನ್ನು ಟ್ರಾನ್ಸ್‌ವಾಲಿನ ಬ್ರಿಟಿಷ್ ಸರ್ಕಾರವು ಉಗ್ರರೀತಿಯಲ್ಲಿ ಆಚರಣೆಗೆ ತರಲು ಪ್ರಯತ್ನಿಸುತ್ತಿರುವುದನ್ನು ಕುರಿತು ತನ್ನ ಪ್ರಬಲವಾದ ವಿರೋಧವನ್ನು ಕಾಂಗ್ರೆಸ್ ವ್ಯಕ್ತಪಡಿಸಿತು. ಸರ್ ಹೆನ್ರಿ ಕಾಟನ್ ಹೀಗೆ ನುಡಿದರು: " ಬೋಯರರು ಮಾಡಿದ ಶಾಸನವನ್ನು ಟ್ರಾನ್ಸ್‌ವಾಲಿಯ ಬ್ರಿಟಿಷ್ ಆಡಳಿತಗಾರರು ತಮಗೆ ಸಹಜವಾದ ಬ್ರಿಟಿಷರ ಸಾಮರ್ಥ್ಯದಿಂದ ಕರಾರು ವಾಕಾಗಿ ಆಚರಣೆಗೆ ತರುತ್ತಿದ್ದಾರೆ. ಅವರು ಭಾರತೀಯ ನೆಲಸುಗಾರರೊಂದಿಗೆ ವ್ಯವಹರಿಸುವಾಗ ಅವರ ಕಿರುಬೆರಳು ಮಿ. ಕ್ರೂಜರ್ ಅವರ ಸೊಂಟಕ್ಕಿಂತ ದಪ್ಪವಾಗಿದೆ; ಆತ ಚಾಟಿಯನ್ನು ಉಪಯೋಗಿಸಿದ್ದರೆ. ಅವರು ಚೇಳುಗಳಿಂದ ಕಡಿಸಿ ಶಿಕ್ಷೆ ವಿಧಿಸಿದ್ದಾರೆ".

ಮತ್ತೆ ಜೋಹಾನ್ಸ್ ಬರ್ಗ್‌ಗೆ

೧೯೦೫

ಗಾಂಧಿ ಒಂಟಿಯಾಗಿ ತಮ್ಮ ನ್ಯಾಯಾಲಯದ ಕಾರ್ಯವನ್ನು ತೂಗಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಅವರು ಮಿ. ಪೋಲಕ್ ಅವರನ್ನೂ ಮತ್ತು ಸ್ಕಾಚ್ ಥಿಯಾಸಫಿಸ್ಟ್ ಮಿ. ರಿಚ್ ಎನ್ನುವವರನ್ನೂ ತಮ್ಮ ಜತೆಗಿರುವಂತೆ ಆಹ್ವಾನಿಸಿದರು. ಅವರು ತಮ್ಮ ವೃತ್ತಿ ಸಹೋದ್ಯೋಗಿಗಳೊಂದಿಗೂ ಮತ್ತು ಕಕ್ಷಿಗಾರರೊಂದಿಗೂ ಒಳ್ಳೆ ಸಮಭಾವದ ನ್ಯಾಯವಾದಿಯೆಂದು ಪ್ರಸಿದ್ಧರಾಗಿದ್ದರು. ನ್ಯಾಯಸ್ಥಾನಗಳಲ್ಲಿಯೂ ಅತ್ಯಂತ ಗೌರವಕ್ಕೆ ಪಾತ್ರರಾಗಿದ್ದರು. ಗಾಂಧಿ ಪಾಟೀ ಸವಾಲಿನಲ್ಲಿ ಒಳ್ಳೆ ನಿಪುಣರಾಗಿದ್ದರು. ಅವರು ಅಪ್ರಾಮಾಣಿಕ ಸಾಕ್ಷಿಯನ್ನು ವಿಫಲಗೊಳಿಸಲು ಎಂದೂ ಅಸಮರ್ಥರಾಗುತ್ತಿರಲಿಲ್ಲ. ಹಾಗೆಯೇ ತಮ್ಮ ಕಕ್ಷಿಗಳ ವಿಷಯದಲ್ಲಿಯೂ ಅಷ್ಟೇ ನಿಯಮ ಬದ್ಧರಾಗಿದ್ದರು. ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ನಡಸುವಾಗ ಯಾವುದೇ ಹಂತದಲ್ಲಿ ತಮ್ಮ ಕಕ್ಷಿಗಾರ ಮೋಸಮಾಡಿರುವನೆಂದು ಕಂಡು ಬಂದರೆ ವಕಾಲತ್ತನ್ನು ತತ್‌ಕ್ಷಣವೇ ಬಿಟ್ಟು ಬಿಡುವುದು ಅವರ ಒಪ್ಪಂದದ ಒಂದು ಅಂಶವಾಗಿದ್ದಿತು. ನ್ಯಾಯಾಸ್ಥಾನದ ಹೊರಗಡೆ ಪಂಚಾಯಿತಿಯಿಂದ ತಮ್ಮ ಮೊಕ್ಕದ್ದಮೆಗಳನ್ನು ತೀರ್ಮಾನ ಮಾಡಿಕೊಳ್ಳುವುದು ಉತ್ತಮವೆಂದು ಕಕ್ಷಿಗಾರರಿಗೆ ಅವರು ಸದಾ ಹೇಳುತ್ತಿದ್ದರು. ನೇಟಾಲಿನಲ್ಲಿ ಅವರ ಮಾಸಿಕ ವರಮಾನ ಸರಾಸರಿ ೧೫೦ ಪೌಂಡುಗಳಿದ್ದಿತು; ಟ್ರಾನ್ಸ್‌ವಾಲ್‌ನಲ್ಲಿ ಅದು ೩೦೦ ಪೌಂಡುಗಳಿಗೆ ಮೀರಿದ್ದಿತು. ಬಡವಾರಾದರೆ ಅವರಿಗೆ ಕಡಿಮೆ ದರವನ್ನು ವಿಧಿಸುತ್ತಿದ್ದರು ಅಥವಾ ಉಚಿತವಾಗಿ ನಡೆಸುತ್ತಿದ್ದರು. ಯಾರಾದರೂ ಬಬ್ಬ ಕಕ್ಷಿ ಶುಲ್ಕವನ್ನು ಕೊಡಲು ತಪ್ಪಿದರೆ ಅವನಿಗೆ ಒತ್ತಾಯದ ಪತ್ರವನ್ನು ಬರೆಯುತ್ತಿರಲಿಲ್ಲ. ಅದಕ್ಕಾಗಿ ನ್ಯಾಯಸ್ಥಾನಕ್ಕೆ ಹೋಗುವುದೂ ಅವರ ರೀತಿಯಾಗಿರಲಿಲ್ಲ.

ಎರಡು ವರ್ಷಗಳ ಕಾಲ ಟ್ರಾನ್ಸ್‌ವಾಲ್‌ನ ಏಷ್ಯಾ ಇಲಾಖೆಯ ಅತ್ಯಾಚಾರಗಳನ್ನು ಅವರು ಪ್ರಬಲವಾಗಿ ಎದುರಿಸಿದ್ದರು. ಇದನ್ನು ನ್ಯಾಯಾಲಯದ ಮೂಲಕವೂ ಮತ್ತು ಇಂಡಿಯನ್ ಒಪೀನಿಯನ್ ಮೂಲಕವೂ ಮಾಡುತ್ತಿದ್ದರು. ಅವರ ಕೆಲಸ ಕಾರ್ಯಗಳು ಹೆಚ್ಚಿ, ಸದ್ಯದಲ್ಲಿ ಭಾರತಕ್ಕೆ ಹಿಂದಿರುಗುವ ಯೋಜನೆಯನ್ನೇ ಅವರು ಬಿಟ್ಟಿದ್ದರು. ೧೯೦೫ರ ಆರಂಭದಲ್ಲಿ ಕಸ್ತೂರ ಬಾ ಮತ್ತು ಮಕ್ಕಳು ಅಲ್ಲಿಗೆ ಬಂದರು.

ಜೋಹಾನ್ಸ್‌ಬರ್ಗ್‌ನಲ್ಲಿ ಗಾಂಧಿಯ ನೂತನಗೃಹ, ಊರಿನ ಹೊರ ವಲಯದಲ್ಲಿ ತಕ್ಕಮಟ್ಟಿಗೆ ಮಧ್ಯಮವರ್ಗದ ಪರಿಸರದಲ್ಲಿದ್ದಿತು. ಅದು ಎಂಟು ಕೊಠಡಿಗಳಿಂದ ಕೂಡಿದ ಎರಡು ಅಂತಸ್ತುಗಳನ್ನುಳ್ಳ ಪ್ರತ್ಯೇಕವಾದ ಮನೆಯಾಗಿದ್ದಿತು. ಸುತ್ತ

ತೋಟವೂ ಮತ್ತು ಮುಂದುಗಡೆ ಸ್ವಲ್ಪ ಬಯಲು ಪ್ರದೇಶವೂ ಇದ್ದಿತು. ಕುಟುಂಬ ದಲ್ಲಿ ಗಾಂಧಿ, ಕಸ್ತೂರ ಬಾ ಮತ್ತು ಮೂರು ಜನ ಮಕ್ಕಳು ಇದ್ದರು. ಮಣಿಲಾಲ್‌ನಿಗೆ ಹತ್ತು ವರ್ಷವಾಗಿತ್ತು: ರಾಮದಾಸ್‌ನಿಗೆ ಎಂಟು ಮತ್ತು ದೇವದಾಸನಿಗೆ ಐದು ವರ್ಷ. ಪೋಲಕ್ ಮತ್ತು ಒಬ್ಬ ಭಾರತೀಯನೂ ಗಾಂಧಿಯೊಡನೆ ವಾಸವಾಗಿದ್ದರು. ಮುಂದೆ ಕೆಲವು ತಿಂಗಳುಗಳಲ್ಲಿ ಶ್ರೀಮತಿ ಪೋಲಕ್ ಮತ್ತು ಶ್ರೀಮತಿ ವೆಸ್ಟ್ ತಮ್ಮ ಪತಿಗಳ ಜತೆ ಸೇರಿದರು. ಗಾಂಧಿ ತಮ್ಮ ದೊಡ್ಡ ಕುಟುಂಬಕ್ಕೆ 'ಬಾಪೂ' ಆಗಿದ್ದರು. ಅವರ ಸಹೋದ್ಯೋಗಿಗಳು ಅವರನ್ನು 'ಭಾಯಿ' ಎಂದು ಕರೆಯುತ್ತಿದ್ದರು.

ಕಸ್ತೂರ ಬಾ ಬಿಟ್ಟು ಕುಟುಂಬದ ಉಳಿದವರೆಲ್ಲ ಐರೋಪ್ಯ ಉಡುಪನ್ನು ಧರಿ ಸುತ್ತಿದ್ದರು. ಗಾಂಧಿ ಒಳ್ಳೆ ಮಾದರಿಯ 'ಸೂಟನ್ನು' ಧರಿಸುತ್ತಿದ್ದರು. ಕಪ್ಪು ಹಿನ್ನೆಲೆಯ ಮೇಲೆ ತೆಳುವಾದ ನೀಲಿ ಪಟ್ಟಿಯುಳ್ಳ ಬಟ್ಟೆ ಅವರಿಗೆ ಹೆಚ್ಚು ಪ್ರಿಯವಾಗಿತ್ತು. ಗರಿ ಗರಿಯಾದ ಕಂಠಪಟ್ಟಿ ಮತ್ತು ಕಂಠಬಂಧನ, ವೃತ್ತಿ ಸೂಚಕ ಕಪ್ಪು ರುಮಾಲು, ನೀಟಾದ ಪಾದರಕ್ಷೆ ಮತ್ತು ಕಾಲು ಚೀಲಗಳನ್ನು ಅವರು ಧರಿಸುತ್ತಿದ್ದರು.

ಫೀನಿಕ್ಸ್‌ನಲ್ಲಿ ಆರಂಭವಾದ ಸರಳ ಜೀವನ ಜೋಹಾನ್ಸ್ ಬರ್ಗ್ ಮನೆಗೂ ಬಂದಿತು. ಒಬ್ಬ ಬ್ಯಾರಿಸ್ಟರ್ ಮನೆಯಲ್ಲಿ ಎಷ್ಟು ಸರಳತೆ ಸಾಧ್ಯವೋ ಅಷ್ಟನ್ನೂ ಗಾಂಧಿ ಆಚರಣೆಗೆ ತಂದರು. ದೈಹಿಕ ಶ್ರಮ ಮಾಡಬೇಕೆಂಬ ಆಶೆ ಹೆಚ್ಚಿತು. ಅವರು ಏಳು ಪೌಂಡುಗಳ ಬೆಲೆ ಕೊಟ್ಟು ಒಂದು ಅಮೆರಿಕನ್ ಹಸ್ತಚಾಲಿತ ಯಂತ್ರವನ್ನು ಕೊಂಡುಕೊಂಡರು. ಪ್ರತಿದಿನವೂ ಬೆಳಗ್ಗೆ ೬.೩೦ಕ್ಕೆ ಮನೆಯ ಗಂಡಸರೆಲ್ಲ ಗೋಧಿ ಬೀಸಲು ಕೂಡುತ್ತಿದ್ದರು. ಬ್ರೆಡ್ಡನ್ನು ಮನೆಯಲ್ಲೇ ಮಾಡಲಾಗುತ್ತಿತ್ತು. ಬೀಸುವ ಕೆಲಸ ಸುಮಾರು ಅರ್ಧಗಂಟೆ ತೆಗೆದುಕೊಳ್ಳುತ್ತಿತ್ತು. ಇತರ ವ್ಯಾಯಾಮಗಳ ಪೈಕಿ, ಜಿಗಿಯುವುದರಲ್ಲಿ ಗಾಂಧಿ ಬಹಳ ನಿಪುಣರಾಗಿದ್ದರು.

ಜೊಹಾನ್ಸ್‌ಬರ್ಗ್‌ನ ಅವರ ಕಾರ್ಯಾಲಯ ಮನೆಯಿಂದ ಆರು ಮೈಲಿ ದೂರ ವಿತ್ತು. ಕೆಲವು ಕಾಲ ಅವರು ಬೈಸಿಕಲ್ ಉಪಯೋಗಿಸುತ್ತಿದ್ದರು. ಅದನ್ನು ಬಿಟ್ಟು ಆ ದೂರವನ್ನೆಲ್ಲಾ ಕಾಲುನಡಿಗೆಯಲ್ಲೇ ಕ್ರಮಿಸ ತೊಡಗಿದರು. ಅವರು ಎಂದೂ ರಿಕ್ಷಾ ವನ್ನು ಉಪಯೋಗಿಸಲಿಲ್ಲ. ಮನುಷ್ಯರನ್ನು ಪಶುಗಳಂತೆ ಉಪಯೋಗಿಸುವುದನ್ನು ಕಂಡು ಅವರು ಹೇಸುತ್ತಿದ್ದರು. ಬೆಳಗ್ಗೆ ೭.೩೦ಕ್ಕೆ ಬೆಳಗಿನ ಊಟವಿಲ್ಲದೆ ಹೊರಟು, ೯ಕ್ಕೆ ಕಾರ್ಯಾಲಯವನ್ನು ತಲುಪುತ್ತಿದ್ದರು. ಅನಂತರ ಪತ್ರಗಳನ್ನು ನೋಡಿ ಮಿಸ್. ಷೆಲ್ಸಿನ್‌ಗೆ ಪತ್ರಗಳನ್ನು ಹೇಳಿ ಬರೆಸುತ್ತಿದ್ದರು. ತರುವಾಯ ನ್ಯಾಯಾಲಯಕ್ಕೆ ಹೋಗು ತ್ತಿದ್ದರು. ಒಂದು ಘಂಟೆಗೆ ಭೋಜನ ಮಾಡುತ್ತಿದ್ದರು. ಅದು ಒಣಗಿದ ಮತ್ತು ಪಕ್ವವಾದ ಹಣ್ಣುಗಳಿಂದ ಕೂಡಿರುತ್ತಿತ್ತು. ಅವರ ಸಹಾಯಕರು ಮತ್ತು ಸ್ನೇಹಿತರು ಅವರ ಔದಾರ್ಯ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸುತ್ತಿದ್ದುದರಿಂದ ಒಂದು ಘಂಟೆ ಕಾಲ ಹಿಡಿಯುತ್ತಿತ್ತು. ಅವರು ಕಾರ್ಯಾಲಯವನ್ನು ೫ ಘಂಟೆಗೆ ಬಿಟ್ಟು ಏಳು ಘಂಟೆಗೆ ಮನೆ ತಲುಪುತ್ತಿದ್ದರು. ಆಗ ದೊಡ್ಡ ಕುಟುಂಬದ ನಡುವೆ ಭೋಜನ ನಡೆಯುತ್ತಿತ್ತು.

ನಾನಾ ಬಗೆಯ ತರಕಾರಿಗಳ ಪದಾರ್ಥಗಳನ್ನು ಮೊದಲು ಬಡಿಸಲಾಗುತ್ತಿತ್ತು. ಅನಂತರ ಚೆನ್ನಾಗಿ ಬೇಯಿಸಿದ ಬ್ರೆಡ್‌ನ ಪೂರ್ಣ ಊಟ; ಕಾಯಿ ಬೆಣ್ಣೆ, ಹಸಿ 'ಸ್ಯಾಲಡ್' ಇರುತ್ತಿತ್ತು. ಎರಡನೆಯ ಸಲ ಹಾಲಿನಿಂದ ತಯಾರಿಸಿದ ಯಾವುದಾದರೂ ಉಣಿಸು ಮತ್ತು ಹಣ್ಣು ಇರುತ್ತಿತ್ತು. ಕಡೆಯದಾಗಿ ಚಳಿಗಾಲವೋ ಬೇಸಗೆಯೋ ಅದಕ್ಕೆ ತಕ್ಕಂತೆ ಧಾನ್ಯದ ಸಾರ ಅಥವಾ ನಿಂಬೆ ಹಣ್ಣಿನ ಷರಬತ್ತು ಇರುತ್ತಿತ್ತು. ಭೋಜನದ ಕಾಲದಲ್ಲಿ ಸಾಮಾನ್ಯವಾಗಿ ಸರಳ ಸಂಭಾಷಣೆ. ವಿನೋದ ನಡೆಯುತ್ತಿದ್ದುವು.

ಭೋಜನವಾದ ಮೇಲೆ ಕುಟುಂಬದವರೆಲ್ಲ ಒಟ್ಟಿಗೆ ಕೂಡುತ್ತಿದ್ದರು. ಗೀತೆಯಿಂದ ಕೆಲವು ಶ್ಲೋಕಗಳನ್ನು ಗಾಂಧಿ ಹೇಳುತ್ತಿದ್ದರು. ಎಡ್ವಿನ್ ಆರ್ನಾಲ್ಡ್‌ನ 'ದಿವ್ಯ ಗೀತೆ'ಯಿಂದ ಪೋಲಕ್ ಇಂಗ್ಲಿಷ್ ಭಾಗಗಳನ್ನು ಓದುತ್ತಿದ್ದರು. ಗಾಂಧಿ ಕ್ಲಿಷ್ಟವಾದ ಭಾಗಗಳನ್ನು ವಿವರಿಸುತ್ತಿದ್ದರು: ಚರ್ಚೆ ನಡೆಯುತ್ತಿತ್ತು. ಅತಿಥಿಗಳು ಬಂದಿದ್ದಾಗ ಭಿನ್ನ ಭಿನ್ನ ಪಂಥಗಳ ತತ್ವಗಳ ಹೋಲಿಕೆ ಮತ್ತು ಆಧ್ಯಾತ್ಮ ಅನುಭಾವಗಳ ಪ್ರಸ್ತಾಪ ನಡೆಯುತ್ತಿತ್ತು.

ಗಾಂಧಿ ಆದಷ್ಟು ಸ್ವಾವಲಂಬಿಯಾಗಲು ಪ್ರಯತ್ನಿಸಿದರು. ಅವರ ಕುಟುಂಬ ಹಡಗಿನಲ್ಲಿ ಬರುವಾಗ. ಅವರ ಮಕ್ಕಳಲ್ಲಿ ಒಬ್ಬನಿಗೆ ಕೈ ಮುರಿದಿತ್ತು. ಅವನನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗಿ. ಚಿಕಿತ್ಸೆ ಮಾಡಿಸುವುದಕ್ಕೆ ಬದಲಾಗಿ ಗಾಂಧಿ ತಾವೇ ದಿನವೂ ಮೃತ್ತಿಕಾ ಚಿಕಿತ್ಸೆ ಮಾಡಿದರು. ಒಂದು ತಿಂಗಳೊಳಗೆ ಗಾಯವು ಪೂರ್ಣವಾಗಿ ಗುಣಮುಖವಾಯಿತು. ಆದರಿಂದ ಮೃತ್ತಿಕಾ ಚಿಕಿತ್ಸೆಯಲ್ಲಿ ಅವರ ನಂಬಿಕೆ ಹೆಚ್ಚಿತು. ಅವರು ತಮ್ಮ ಚಿಕಿತ್ಸಾ ಕ್ರಮವನ್ನು ಗಾಯಗಳು. ಜ್ವರಗಳು. ವಾಕರಿಕೆ. ಅರಿಶಿನಕಾಮಾಲೆ ಇತ್ಯಾದಿ ರೋಗಗಳಿಗೆಲ್ಲ ಪ್ರಯೋಗಿಸಿದರು. ಕೆಲವು ಸಂದರ್ಭಗಳಲ್ಲಂತೂ ಅದು ತುಂಬ ಯಶಸ್ವಿಯಾದುದುಂಟು. ಅವರ ಕಕ್ಷಿಗಾರರಲ್ಲಿ ಕೆಲವರು ಮತ್ತು ಹೊಸಬರು ಈ ಚಿಕಿತ್ಸಾ ಕ್ರಮದಲ್ಲಿ ನಂಬಿಕೆ ಇಟ್ಟಿದ್ದರು.

ಧಾನ್ಯವನ್ನು ಬೀಸುವುದು, ಶೌಚಗೃಹವನ್ನು ಶುದ್ಧಿ ಮಾಡುವುದು ಇತ್ಯಾದಿ ಕಾರ್ಯಗಳಲ್ಲಿ ತಮ್ಮ ಮಕ್ಕಳು ನೆರವಾಗುವುದು ಶಿಕ್ಷಣದ ಒಂದು ಭಾಗವೆಂದು ಗಾಂಧಿ ನಂಬಿದ್ದರು. ಅವರು ತಮ್ಮ ಮಕ್ಕಳಿಗೆ ಪಾಠ ಹೇಳಿಸಲು ವ್ಯವಸ್ಥೆ ಮಾಡಲಿಲ್ಲ; ಅವರನ್ನು ಯಾವ ಪಾಠಶಾಲೆಗೂ ಕಳಿಸಲಿಲ್ಲ. ಪ್ರತಿದಿನವೂ ಅವರನ್ನು ತಮ್ಮೊಂದಿಗೆ ತಮ್ಮ ಕಾರ್ಯಾಲಯಕ್ಕೆ ನಡೆಸಿಕೊಂಡು ಹೋಗಿ, ಜತೆಯಲ್ಲಿಯೇ ಕರೆದುಕೊಂಡು ಬರುತ್ತಿದ್ದರು. ಈ ದೀರ್ಘ ನಡಿಗೆಯ ಕಾಲದಲ್ಲಿ ಗುಜರಾತಿಯಲ್ಲಿಯೇ ಸಂಭಾಷಣೆ ನಡಸುವುದರ ಮೂಲಕ ಬೋಧಿಸುತ್ತಿದ್ದರು. ಕುಟುಂಬದಲ್ಲಿ ಇಂಗ್ಲಿಷ್ ಗೆಳೆಯರು ಇದ್ದುದರಿಂದಲೂ ಮತ್ತು ಅವರು ಇಂಗ್ಲಿಷ್ ಮಾತನಾಡುವ ದೇಶದಲ್ಲಿ ಇದ್ದುದರಿಂದಲೂ ಮಕ್ಕಳು ಇಂಗ್ಲಿಷ್‌ನಲ್ಲಿ ಓದುವುದನ್ನೂ ಬರೆಯುವುದನ್ನೂ ಸಾಕಷ್ಟು ಸುಲಭವಾಗಿ ಕಲಿತರು.

ಗಾಂಧಿ, ಜೋಹಾನ್ಸ್ ಬರ್ಗ್‌ನಲ್ಲಿ ಸುವ್ಯವಸ್ಥಿತವಾಗಿ ನೆಲೆಸಿದ್ದರೂ ಅವರೂ

ಮತ್ತು ಅವರ ಸಹೋದ್ಯೋಗಿಗಳೂ ಫೀನಿಕ್ಸ್‌ಗೆ ಹೋಗಿ ಹೊಲದ ಕೆಲಸ ಮಾಡ ಬೇಕೆಂದು ಅಪೇಕ್ಷಿಸಿದರು. ಆದುದರಿಂದ ಅವರು ತಮ್ಮ ಅವಿವಾಹಿತ ಗೆಳೆಯರಿಗೆ ಆದಷ್ಟು ಜಾಗ್ರತೆ ವಿವಾಹ ಮಾಡಬೇಕೆಂದು ಯೋಚಿಸಿದರು; ಏಕೆಂದರೆ ಅವರುಗಳೂ ರೈತರಾಗಬೇಕೆಂದು ಅಪೇಕ್ಷಿಸಿದ್ದರು. ೧೯೦೫ರ ಕೊನೆಯ ವೇಳೆಗೆ, ಗಾಂಧೀಜಿ ತಮ್ಮ ಕಾರ್ಯಕರ್ತರಲ್ಲಿ ಅನೇಕ ಮಂದಿಗೆ ವಿವಾಹ ಮಾಡಿಸಿದರು. ಭಾರತೀಯ ಸಹೋದ್ಯೋಗಿ ಗಳು ಭಾರತದಿಂದ ತಮ್ಮ ಕುಟುಂಬಗಳನ್ನು ಕರೆಸಿಕೊಳ್ಳಲು ಪ್ರೋತ್ಸಾಹಿಸಿದರು.

ಜೋಹಾನ್ಸ್‌ಬರ್ಗ್‌ನ ಥಿಯಸಾಫಿಕಲ್ ಲಾಡ್ಜ್‌ನಲ್ಲಿ ಗಾಂಧಿ ಮಾಡಿದ ದೀರ್ಘ ಭಾಷಣದಲ್ಲಿ ಅವರ ಜೀವನ ಸಿದ್ಧಾಂತ ಪ್ರತಿಬಿಂಬಿಸಿತ್ತು. ಥಿಯಾಸಫಿಯು ತಾತ್ವಿಕ ವಾಗಿ ಹಿಂದೂಧರ್ಮವೇ ಆಗಿದೆಯೆಂದೂ ಮತ್ತು ಹಿಂದೂ ಧರ್ಮವು ವ್ಯವಹಾರ ರೂಪದ ಥಿಯಾಸಫಿಯೆಂದೂ, ಇದು ತಮ್ಮ ಸ್ಪಷ್ಟ ಅಭಿಪ್ರಾಯವೆಂದೂ ಅವರು ನುಡಿದರು. ಥಿಯಾಸಫಿ ಸಾಹಿತ್ಯದಲ್ಲಿ, ಅತ್ಯಂತ ಪ್ರಯೋಜನ ಪಡೆಯಬಹುದಾದ ಅನೇಕ ಅಮೋಘ ಕೃತಿಗಳಿವೆಯೆಂದೂ, ಆದರೆ ಮಾನಸಿಕ ಮತ್ತು ಬೌದ್ಧಿಕ ಅಧ್ಯಯನ ವಾದ, ಅತೀಂದ್ರಿಯ ಶಕ್ತಿಗಳ ಬೆಳವಣಿಗೆ ಇವುಗಳ ಬಗೆಗೆ ಅತಿಯಾದ ಪ್ರಾಧಾನ್ಯ ನೀಡಲಾಗಿದೆಯೆಂದೂ ಇದರಿಂದ ಥಿಯಾಸಫಿಯ ತಿರುಳಾದ ಮಾನವ ಸೋದರ ಭಾವ ಮತ್ತು ಮಾನವನ ನೈತಿಕ ಬೆಳವಣಿಗೆ ಕಣ್ಮರೆಯಾಗಿವೆಯೆಂದು ತಮಗೆ ಅನ್ನಿಸಿದೆ ಯೆಂದೂ ಅವರು ತಿಳಿಸಿದರು. ಇಂಥ ವ್ಯಾಸಂಗಕ್ಕೆ ಮಾನವನ ಬದುಕಿನಲ್ಲಿ ಸ್ಥಾನವಿಲ್ಲ ವೆಂದು ತಾವು ಸೂಚಿಸುವುದಿಲ್ಲವೆಂದೂ ಆದರೆ ಇವು ಪ್ರತಿ ಜೀವನಕ್ಕೂ ಪರಮ ಅಗತ್ಯವಾದ ಕೆಲವು ಅಭ್ಯಾಸಗಳ ತರುವಾಯ ಬರಬೇಕೆಂಬುದು ತಮ್ಮ ವಿಚಾರ ವೆಂದೂ ತಿಳಿಸಿದರು. ಮಹಾಧರ್ಮ ಗ್ರಂಥಗಳನ್ನು ಅನುಸರಿಸುವುದಕ್ಕೆ ಮುಂಚೆ ಜೀವನದ ಕೆಲವು ನಿಯಮಗಳು ಹಾಸು ಹೊಕ್ಕಾಗಿ ಬೆಳೆಯಬೇಕೆಂಬುದೂ ಅವರ ಅಭಿಪ್ರಾಯವಾಗಿತ್ತು.

ಒಬ್ಬ ವ್ಯಕ್ತಿ ಯಾವುದೇ ಒಂದು ಶಾಸ್ತ್ರದಲ್ಲಿ ಯೋಗ್ಯತೆ ಪಡೆಯಬೇಕೆಂದು ಅಪೇಕ್ಷಿಸಿದಾಗ ಅವನು ಮೊದಲು ಒಂದು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗ ಬೇಕು. ಆದರೆ ಒಂದು ಧರ್ಮಗ್ರಂಥವನ್ನು ಅಧ್ಯಯನಕ್ಕೆ ತೆಗೆದುಕೊಂಡಾಗ ಯಾವುದೇ ಒಂದು ಬಗೆಯ ಪೂರ್ವಭಾವಿ ಸಿದ್ಧತೆ ಅಗತ್ಯವಿಲ್ಲವೆಂದೂ ಮತ್ತು ಈ ಗ್ರಂಥವನ್ನು ಯಾರಿಂದಲೂ ಬೋಧೆಯಿಲ್ಲದೆ ಓದಿ ತಾವೇ ಅರ್ಥಮಾಡಿಕೊಳ್ಳಲು ಸಾಧ್ಯವೆಂದೂ ಭಾವಿಸಲಾಗಿದೆ: ಈ ಬಗೆಯ ಮನೋಧರ್ಮ ನಿಜವಾದ ಆತ್ಮ ಸ್ವಾತಂತ್ರ್ಯವೆಂದೂ ಪರಿಗಣಿಸಲಾಗಿದೆ. ಯಾವ ವಿಷಯಗಳಲ್ಲಿ ತಮಗೆ ಸ್ವಲ್ಪವೂ ತಿಳಿವಳಿಕೆಯಿಲ್ಲವೋ ಅವುಗಳ ಬಗೆಗೆ ಇಂಥ ಮನೋಧರ್ಮ ಕೇವಲ ಸ್ವಚ್ಛಂದ ವೃತ್ತಿಯೆಂಬುದು ತಮ್ಮ ಭಾವನೆಯೆಂಬುದಾಗಿಯೂ ಅವರು ಹೇಳಿದರು. ಇಂಥ ಪವಿತ್ರ ಗ್ರಂಥಗಳ ಅಧ್ಯಯನಕ್ಕೆ ಮುಂಚೆ ಪೂರ್ಣ ಪರಿಶುದ್ಧವೂ ಮತ್ತು ಸತ್ಯಭರಿತವೂ ಆದ ಜೀವನವನ್ನು ಅಭ್ಯಸಿಸ ಬೇಕು. ಕೇಂದ್ರ ಬಿಂದುವಿನಿಂದ ದೂರ ಒಯ್ಯುವ ಇಂದ್ರಿಯಗಳನ್ನು ನಿಗ್ರಹಿಸಬೇಕು-

ಎಂದು ಹಿಂದೂ ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆಯೆಂಬುದು ಅವರ ವಿಚಾರ ಧಾರೆಯಾಗಿತ್ತು.

ಮನಸ್ಸನ್ನು ಅಮಲು ಹತ್ತಿದ ಕಪಿಗೆ ಹೋಲಿಸಲಾಗಿದೆ; ಅದು ಆ ರೀತಿಯೇ ಇದೆ. ಒಬ್ಬೊಬ್ಬರೂ ಅವರವರ ಮನಸ್ಸನ್ನು ಪರೀಕ್ಷಿಸಿಕೊಂಡರೆ, ಇತರರ ಬಗೆಗೆ ಕೆಟ್ಟುದನ್ನು ಯೋಚಿಸಲು ಕಾರಣವೇ ಇರದು; ಇದಕ್ಕೆ ಬದಲಾಗಿ ತಮ್ಮ ಬಗೆಗೇ ಜಿಗುಪ್ಸೆ ಪಟ್ಟುಕೊಳ್ಳುವ ಕಾರಣ ದೊರಕುತ್ತದೆ; ಏಕೆಂದರೆ, ಇತರರ ಬಗೆಗೆ ಸಲೀಸಾಗಿ ಉಪಯೋಗಿಸುವ ದರೋಡೆಕೋರರು ಮತ್ತು ಕೊಲೆಗಡುಗರು ಎಂಬ ಪದಗಳು ತಮಗೇ ಅನ್ವಯಿಸುವುವೆಂದು ತಿಳಿಯುತ್ತದೆ. ಪ್ರತಿಯೊಬ್ಬರೂ ಅವರವರ ಅಭ್ಯಾಸಕ್ಕೆ ಒಂದು ಮಿತಿಯನ್ನು ಒಪ್ಪಿಕೊಳ್ಳಬೇಕು. ಅಂಥ ಮಿತಿ ಅವರ ಕಾರ್ಯಗಳಿಗೆ ಅಡಚಣೆ ಯಾಗುವ ಬದಲು ಶಕ್ತಿಯನ್ನು ಹೆಚ್ಚಿಸಿ, ಉನ್ನತ ಮಟ್ಟಕ್ಕೆ ಏರಲು ಸಹಾಯವಾಗು ತ್ತದೆಂಬುದು ಅವರ ಅಭಿಪ್ರಾಯವಾಗಿತ್ತು.

ಬದುಕಿನ ವ್ಯಾಪ್ತಿಯನ್ನು ಸದಾ ಹೆಚ್ಚಿಸಿಕೊಳ್ಳುತ್ತಾ ಹೋಗುವುದು ಆವಶ್ಯಕ ವೆಂದು ಅವರು ಭಾವಿಸಲಿಲ್ಲ; ಆದರೆ ವ್ಯಾಸಂಗ ಮತ್ತು ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದು ಕರ್ತವ್ಯವೆಂದು ಭಾವಿಸಿದ್ದರು. ಏಕೆಂದರೆ, ಒಬ್ಬ ವ್ಯಕ್ತಿ ಒಂದು ವಿಶಿಷ್ಟವಸ್ತು ಅಥವಾ ಬದುಕಿನ ಕಲ್ಪನೆಯ ಬಗೆಗೆ ತನ್ನ ಗಮನವನ್ನು ಕೇಂದ್ರೀಕರಿಸಬೇಕು. ಇದರಿಂದ ಅವನು ತನ್ನ ಗಮನವನ್ನು ಹಲ ವಾರು ವಿಷಯಗಳ ಕಡೆಗೆ ಹರಿಸುವುದಕ್ಕಿಂತ ಹೆಚ್ಚಾಗಿ ಜೀವನದಿಂದ ಉಪಯೋಗ ಪಡೆಯಬಹುದು.

ಹಿಂದೂ ಜ್ಞಾನಿಗಳು ದೈವಿಕ ವಿಷಯಗಳನ್ನು ಕೇವಲ ಮಾನಸಿಕವಾಗಿ ಗ್ರಹಿಸು ವುದಕ್ಕಿಂತಲೂ ಅಂಥ ಬದುಕನ್ನು ಬಾಳುವುದು (ಅದು ಎಷ್ಟೇ ಆತಂಕಗಳಿಂದ ಅಥವಾ ಮಿತಿಗಳಿಂದ ಕೂಡಿರಲಿ) ಅತ್ಯಂತ ಹೆಚ್ಚಿನದೆಂದು ಹೇಳಿದ್ದಾರೆ. ಒಂದೊಂದಾಗಿ, ಹೆಜ್ಜೆ ಹೆಜ್ಜೆಯಾಗಿ, ಈ ವಿಷಯಗಳನ್ನು ತಮ್ಮ ಬದುಕಿನಲ್ಲಿ ಹೆಣೆದುಕೊಂಡ ಹೊರತು ದಿವ್ಯಬೋಧೆಯ ಪೂರ್ಣಗ್ರಹಿಕೆ ಆಗಲಾರದೆಂದು ಅವರು ಬೋಧಿಸಿದ್ದಾರೆ; ಅದು ದರಿಂದ ನಿಜವಾದ ಬದುಕನ್ನು ಬಾಳಬೇಕಾದರೆ, ಅದು ಉಪನ್ಯಾಸ ಪ್ರಾಂಗಣವಲ್ಲಿಲ್ಲ ವೆಂದೂ ಥಿಯಾಸಫಿಯ ಪುಸ್ತಕ ಭಂಡಾರಗಳಲ್ಲಿಲ್ಲವೆಂದೂ, ತಾವು ಗ್ರಹಿಸಿದಷ್ಟನ್ನು ಆಚರಣೆಗೆ ತಂದು ಬಾಳುವುದರಿಂದಲೇ ಸಾಧ್ಯವೆಂದೂ ತಿಳಿಸಿದರು.

ಅದೇವರ್ಷ ಜೂನ್ ೧೨ರಂದು ಭಾರತದಲ್ಲಿ 'ಭಾರತ ಸೇವಕರ ಸಂಘ' (Servants of India Society) ಗೋಖಲೆಯವರಿಂದ ಸ್ಥಾಪಿತವಾಯಿತು. ಗಾಂಧಿ ಭಾರತದ ನಾಯಕರೆಲ್ಲರ ಪೈಕಿ, ಗೋಖಲೆಯವರನ್ನು ಅತ್ಯಂತ ಗೌರವಿಸಿದ್ದರು. ಸಂಘದ ಅಂಗರಚನೆಯ ಪೀಠಿಕೆಯುಲ್ಲಿ ಹೀಗೆ ಉಲ್ಲೇಖಿಸಲಾಗಿದ್ದಿತು:

"ಕೆಲವು ಕಾಲದಿಂದೀಚೆಗೆ, ಅನೇಕ ಮಂದಿ ಶ್ರದ್ಧಾವಂತರ ಹಾಗೂ ವಿಚಾರವಂತರ ಮನಸ್ಸಿನಲ್ಲಿ ರಾಷ್ಟ್ರನಿರ್ಮಾಣ ಕಾರ್ಯವು ಇನ್ನೂ ಮುಂದುವರಿಯಬೇಕಾದರೆ, ನಿಜ

ವಾದ ಪ್ರಚಾರಕ ಮನೋಧರ್ಮದಿಂದ ಕೂಡಿದ ಮತ್ತು ವಿಶೇಷವಾಗಿ ತರಬೇತಿ ಹೊಂದಿದ ನಿಷ್ಠಾವಂತರ ಸೇವೆ ಅದಕ್ಕೆ ಅಗತ್ಯವೆಂಬ ಹಂತಕ್ಕೆ ಬಂದಿದೆಯೆಂಬ ನಂಬಿಕೆ ಬಲವಾಗುತ್ತಿದೆ. ಈ ವರೆಗೆ ಸಾಧಿಸಿರುವ ಕಾರ್ಯ ಅತಿ ಮುಖ್ಯವಾದುದು. ಕಳೆದ ಐವತ್ತು ವರ್ಷಗಳಲ್ಲಿ ಬೆಳೆದಿರುವ ಸಮಾನ ಪರಂಪರೆ ಮತ್ತು ಆಸಕ್ತಿಗಳ ಅನುಬಂಧ, ಸಮಾನ ನಂಬಿಕೆಗಳ ಮತ್ತು ಬಯಕೆಗಳ ಹಾಗೆಯೇ ಸಮಾನ ನ್ಯೂನತೆಗಳ ಭಾವನೆ– ಇವು ಅತ್ಯಂತ ಗಮನಾರ್ಹವಾಗಿವೆ. ನಾವು ಪ್ರಥಮತಃ ಭಾರತೀಯರು, ಅನಂತರ ಹಿಂದೂ ಗಳು, ಮುಸ್ಲಿಮರು, ಪಾರ್ಸೀಗಳು ಅಥವಾ ಕ್ರೈಸ್ತರು ಎಂಬ ಅರಿವು ಬಂದು ಅದು ಒಂದೇ ಸಮನಾಗಿ ಹೆಚ್ಚುತ್ತಿದೆ. ಸಂಘಟಿತ, ಪುನರುಜ್ಜೀವಿತ ಭಾರತವು ತನ್ನ ಪ್ರಾಚೀನ ವೈಭವಕ್ಕೆ ತಕ್ಕಂತೆ ಜಗತ್ತಿನ ಜನಾಂಗಗಳ ಸಾಲಿನಲ್ಲಿ ನಿಲ್ಲಲು ಮುಂದುವರಿಯಬೇಕೆಂಬ ಭಾವನೆಯು ದೇಶದ ಬುದ್ಧಿಜೀವಿಗಳ, ವಿದ್ಯಾವಂತ ವರ್ಗಗಳವರ ಅಂಗೀಕೃತ ಧ್ಯೇಯ ವಾಗಿದೆ. ಶಿಕ್ಷಣ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಶ್ಲಾಘನೀಯ ಕೆಲಸ ಪ್ರಾರಂಭವಾಗಿದೆ. ಎಲ್ಲ ವರ್ಗಗಳ ಜನರೂ ನಿಧಾನವಾದರೂ ನಿರ್ದಿಷ್ಟವಾಗಿ ಉದಾರ ಅಭಿಪ್ರಾಯಗಳ ಪ್ರಭಾವಕ್ಕೆ ಬರುತ್ತಿದ್ದಾರೆ. ಸಾರ್ವಜನಿಕ ಜೀವನದ ಬೇಡಿಕೆಗಳು ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿವೆ; ನಮ್ಮ ಜನ್ಮಭೂಮಿಗೆ ಸಂಬಂಧಿಸಿದ ಆಸಕ್ತಿಯು ಪ್ರಬಲವಾಗಿ ಬೆಳೆದು ಅದೊಂದು ಹೃದಯದ ಗಾಢವಾದ ಅನುರಾಗವೇ ಆಗುತ್ತಿದೆ. ಕಾಂಗ್ರೆಸ್ಸಿನ ಮತ್ತು ಸಮ್ಮೇಳನಗಳ ವಾರ್ಷಿಕ ಸಭೆಗಳು, ಸಾರ್ವಜನಿಕ ಸಂಘ ಸಂಸ್ಥೆಗಳ ಕೆಲಸಗಳು, ಭಾರತೀಯ ವೃತ್ತಪತ್ರಿಕೆಗಳಲ್ಲಿ ಬರಹಗಳು–ಇವುಗಳೆಲ್ಲ ಜನಜೀವನದಲ್ಲಿ ಸಂಚರಿಸುತ್ತಿರುವ ಹೊಸ ಸತ್ವದ ಕುರುಹುಗಳಾಗಿವೆ. ಈ ವರೆಗೆ ಆಗಿರುವ ಸಾಧನೆಗಳು ನಿಸ್ಸಂದೇಹವಾಗಿ ತೃಪ್ತಿ ತರುವಂಥವು. ಆದರೆ ಇದೆಲ್ಲದರ ಅರ್ಥ, ಕಾಡನ್ನು ಕಡಿದು ಅಸ್ತಿಭಾರ ಹಾಕಿದಂತಾಗಿದೆ. ಮಹಾಸೌಧವನ್ನು ರಚಿಸುವ ಕಾರ್ಯವನ್ನು ಈಗ ಕೈಗೊಳ್ಳಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಕಾರ್ಯದ ಪ್ರಮಾಣಕ್ಕೆ ತಕ್ಕಂತೆ ಕಾರ್ಯಕರ್ತರ ನಿಷ್ಠೆ ಮತ್ತು ತ್ಯಾಗ ಅಗತ್ಯವಾಗಿದೆ.

“ಸನ್ನಿವೇಶದ ಈ ಅಗತ್ಯತೆಗಳನ್ನು ತಕ್ಕಮಟ್ಟಿಗೆ ಈಡೇರಿಸಲು ‘ಭಾರತ ಸೇವಕರ ಸಂಘ’ವನ್ನು ಸ್ಥಾಪಿಸಲಾಗಿದೆ. ಅದರ ಸದಸ್ಯರು ಬ್ರಿಟಿಷರೊಡನೆ ಸಂಬಂಧವನ್ನು ವಿಧಿಸಂಕಲ್ಪವೆಂದು ಸ್ಪಷ್ಟವಾಗಿ ಅಂಗೀಕರಿಸುತ್ತಾರೆ. ಅದು ಭಾರತದ ಒಳಿತಿಗಾಗಿ ದೈವದ ಅತೀತ ಪ್ರಭಾವ. ದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವಯಮಾಡಳಿತ. ಜನತೆಗೆ ಸಾಮಾನ್ಯವಾಗಿ ಉನ್ನತ ಜೀವನ, ಇವು ಗುರಿಗಳು. ಈ ಗುರಿಗಳನ್ನು. ಅವುಗಳಿಗೆ ಯೋಗ್ಯವಾದ ನಿಷ್ಠೆ, ಸಹನೆಯ ಪ್ರಯತ್ನ ಮತ್ತು ತ್ಯಾಗಗಳಿಲ್ಲದೆ ಗಳಿಸುವುದು ಸಾಧ್ಯವಿಲ್ಲವೆಂದು ಅವರು ಅಂಗೀಕರಿಸುತ್ತಾರೆ. ಈ ಕಾರ್ಯದ ಬಹುಭಾಗ, ಈಗ ಸಾಮಾನ್ಯ ವಾಗಿ ಕಂಡು ಬರುವುದಕ್ಕಿಂತಲೂ ಉನ್ನತಮಟ್ಟದ ಶೀಲ ಮತ್ತು ಸಾಮರ್ಥ್ಯಗಳನ್ನು ಸೃಷ್ಟಿಸುವುದಕ್ಕೆ ವಿನಿಯೋಗವಾಗಬೇಕು. ಇದರ ಬೆಳವಣಿಗೆ ನಿಧಾನವಾಗಿಯೇ ಆಗ ಬೇಕು. ಅಲ್ಲದೆ ಇದರ ಮಾರ್ಗ ಅಗಾಧ ಕಷ್ಟಗಳಿಂದ ಕೂಡಿದೆ: ಹಿಮ್ಮೆಟ್ಟಿಸುವ

ಪ್ರಲೋಭನೆಗಳು ಸದಾ ಇರುತ್ತವೆ. ಈ ಕಾರ್ಯದಲ್ಲಿ ತೊಡಗಿದವರ ನಂಬಿಕೆಯನ್ನು ಅತೀವ ನಿರಾಶೆಗಳು ಪರೀಕ್ಷೆಗೆ ಈಡು ಮಾಡುತ್ತವೆ. ಆದರೆ ಕಾರ್ಯಕರ್ತರು ಎದೆಗುಂದದಿದ್ದರೆ, ಈ ಶ್ರಮಭರಿತವಾದ ಕಾರ್ಯಕ್ಕೆ ಇರುವ ಗುರಿ ಒಂದೇ. ಈ ಕಾರ್ಯ ಯಶಸ್ವಿಯಾಗಬೇಕಾದರೆ, ಒಂದು ಅಂಶ ಅಗತ್ಯವಾಗಿದೆ. ಧಾರ್ಮಿಕ ಕಾರ್ಯವನ್ನು ಕೈಗೊಳ್ಳುವ ಸತ್ವದಿಂದ ಕೂಡಿದ ಸಾಕಷ್ಟು ಮಂದಿ ಇದರಲ್ಲಿ ತೊಡಗಬೇಕು. ಸಾರ್ವಜನಿಕ ಜೀವನದ ಅಧ್ಯಾತ್ಮೀಕರಣವಾಗಬೇಕು. ದೇಶಭಕ್ತಿ ಹೃದಯವನ್ನು ತುಂಬಿಕೊಂಡು ಉಳಿದುದೆಲ್ಲ ಅದರ ಬಳಿಯಲ್ಲಿ ಕ್ಷುಲ್ಲಕವೆನಿಸಬೇಕು. ಮಾತೃಭೂಮಿಗಾಗಿ ತ್ಯಾಗವೆಸಗಬೇಕಾದ ಪ್ರತಿಯೊಂದು ಅವಕಾಶಕ್ಕೂ ಹರ್ಷವನ್ನು ವ್ಯಕ್ತಪಡಿಸುವ ಗಾಢವಾದ ದೇಶಭಕ್ತಿ, ಕಷ್ಟವಾಗಲೀ ಅಪಾಯವಾಗಲೀ ಬಂದಾಗ ಗುರಿಯಿಂದ ಹಿಂಜರಿಯಲು ನಿರಾಕರಿಸುವ ನಿರ್ಭೀತ ಹೃದಯ, ಯಾವುದರಿಂದಲೂ ಅಲುಗಿಸಲಾಗದ ಅಗೋಚರ ಶಕ್ತಿಯ ಸಂಕಲ್ಪದಲ್ಲಿ ನಂಬಿಕೆ–ಇವುಗಳಿಂದ ಕೂಡಿದ ಕಾರ್ಯಕರ್ತ, ಕಾರ್ಯವನ್ನು ಆರಂಭಿಸಿ, ತನ್ನನ್ನು ದೇಶಸೇವೆಗಾಗಿ ಬಲಿದಾನ ಎತ್ತುವುದರ ಪರಿಣಾಮವಾಗಿ ಲಭಿಸುವ ಸುಖವನ್ನು ನಿಷ್ಕಾಮವಂತನಾಗಿ ಅರಸುವವನಾಗಬೇಕು.

"ಭಾರತ ಸೇವಕರ ಸಂಘವು, ಧಾರ್ಮಿಕ ನಿಷ್ಠೆಯಿಂದ ದೇಶಸೇವೆ ಮಾಡಲು ತಮ್ಮ ಬದುಕನ್ನು ನಿವೇದಿಸಿಕೊಳ್ಳುವ ಮತ್ತು ಸಂವಿಧಾನಾತ್ಮಕ ಮಾರ್ಗಗಳಿಂದ ಭಾರತೀಯ ಜನರ ರಾಷ್ಟ್ರೀಯ ಹಿತಬಾಧ್ಯತೆಗಳನ್ನು ಬೆಳಸಲುಪ್ರಯತ್ನಿಸುವ ಮಂದಿಗೆ ತರಬೇತನ್ನು ನೀಡುವುದು. ಅದರ ಸದಸ್ಯರು ತಮ್ಮ ಪ್ರಯತ್ನಗಳನ್ನು ಪ್ರಧಾನವಾಗಿ ಈ ಉದ್ದೇಶಗಳಿಗೆ ವಿನಿಯೋಗಿಸುವರು: (೧) ತಮ್ಮ ಅನುಷ್ಠಾನ ಮತ್ತು ಬೋಧೆಗಳಿಂದ ಜನತೆಯಲ್ಲಿ ಮಾತೃಭೂಮಿಯ ಗಾಢವಾದ ಪ್ರೇಮವನ್ನು ಹುಟ್ಟಿಸಿ ತ್ಯಾಗ ಮತ್ತು ಸೇವೆಗಳ ಪರಮ ಸಾಧನೆಯನ್ನು ಕೈಗೊಳ್ಳುವರು. (೨) ಸಾರ್ವಜನಿಕ ಸಮಸ್ಯೆಗಳನ್ನು ಆಳವಾಗಿ ಅಧ್ಯಯನ ಮಾಡಿ, ರಾಜಕೀಯ ಶಿಕ್ಷಣ ಮತ್ತು ಚಳವಳಿಯ ಕಾರ್ಯವನ್ನು ವ್ಯವಸ್ಥೆಗೊಳಿಸಿ, ಸಾಮಾನ್ಯವಾಗಿ ರಾಜಕೀಯ ಜೀವನವನ್ನು ಬಲಗೊಳಿಸಲು ಪ್ರಯತ್ನಿಸುವರು; (೩) ಭಿನ್ನ ಭಿನ್ನ ಕೋಮುಗಳ ನಡುವೆ ಪ್ರೀತಿಯುತ ಸೌಹಾರ್ದ ಮತ್ತು ಸಹಕಾರಗಳನ್ನು ಬೆಳೆಸುವರು. (೪) ಶೈಕ್ಷಣಿಕ ಆಂದೋಲನಗಳಿಗೆ, ಪ್ರಧಾನವಾಗಿ ಮಹಿಳಾ ಶಿಕ್ಷಣಕ್ಕೂ ಹಿಂದುಳಿದವರ ಶಿಕ್ಷಣಕ್ಕೂ ಔದ್ಯಮಿಕ ಮತ್ತು ವೈಜ್ಞಾನಿಕ ಶಿಕ್ಷಣಕ್ಕೂ ಬೆಂಬಲ ನೀಡುವರು; (೫) ದೇಶದ ಕೈಗಾರಿಕಾ ಪ್ರಗತಿಗೆ ಸಹಾಯಕರಾಗುವರು. (೬) ನಿಮ್ನವರ್ಗಗಳವರ ಅಭ್ಯುದಯಕಾರ್ಯ ಮಾಡುವರು. ಸಂಘದ ಪ್ರಧಾನ ಕಾರ್ಯಾಲಯವು ಪುಣೆಯಲ್ಲಿ ಇರುತ್ತದೆ. ಅಲ್ಲಿ ಸದಸ್ಯರಿಗಾಗಿ ಒಂದು ನಿವಾಸ ಸ್ಥಾನವನ್ನು ಏರ್ಪಡಿಸುವುದಲ್ಲದೆ, ಈ ಕಾರ್ಯದ ವಿವಿಧ ವಿಷಯಗಳನ್ನು ಅವರು ಅಧ್ಯಯನ ಮಾಡಲು ನೆರವಾಗುವಂತೆ ಒಂದು ಪುಸ್ತಕ ಭಂಡಾರವನ್ನು ಏರ್ಪಡಿಸಲಾಗುವುದು".

ಭಾರತ ಸೇವಕರ ಸಂಘದ ಈ ಉದಾತ್ತವಾದ ಉದ್ದೇಶಗಳು, ಗಾಂಧಿಯ ಜೀವನಕ್ಕೆ ಮಾರ್ಗದರ್ಶಕ ಸಂದೇಶಗಳಾದುವು. ಭಾರತಕ್ಕೆ ಹಿಂದಿರುಗಿದ ಮೇಲೆ,

ಸಂಘವನ್ನು ಸೇರಲು ಅವರು ಆತುರರಾಗಿದ್ದರು. ಈ ಮಧ್ಯೆ ಅವರು ಫೀನಿಕ್ಸ್ ವಸಾಹತುವಿನಲ್ಲಿ ಕಾರ್ಯಕರ್ತರಿಗೆ ತರಬೇತನ್ನು ಕೊಡಲು ಯೋಜನೆಗಳನ್ನು ಮಾಡಿದರು. ಆ ಕಾರ್ಯಕರ್ತರು ದಕ್ಷಿಣ ಆಫ್ರಿಕಾದ ಭಾರತೀಯರ ಗೌರವವನ್ನು ಎತ್ತಿ ಹಿಡಿಯಲು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಬೇಕಾಗಿತ್ತು.

ಭಾರತ ರಾಷ್ಟ್ರೀಯ ಕಾಂಗ್ರೆಸ್ ೧೯೦೫ರ ಡಿಸೆಂಬರ್ ತಿಂಗಳಲ್ಲಿ ಬೆನಾರಸ್‌ನಲ್ಲಿ ಗೋಖಲೆಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಎದುರಿಗೆ ಬಂಡೆಗಳು, ಸುತ್ತಲೂ ಪ್ರಕ್ಷುಬ್ಧಗೊಂಡ ಅಲೆಗಳು—ಇವುಗಳ ಮಧ್ಯೆ ಕಾಂಗ್ರೆಸ್ ನೌಕೆಯನ್ನು ನಡೆಸುವ ಹೊಣೆಗಾರಿಕೆ ತಮ್ಮದಾಗಿದೆಯೆಂದು ಅವರು ನುಡಿದರು. ಅವರು ದಿವ್ಯ ಶಕ್ತಿಯ ಅನುಗ್ರಹವನ್ನು ಬೇಡಿದರು. ಬಂಗಾಳದ ವಿಭಜನೆಯ ವಿಷಯವನ್ನು ಕುರಿತು ಅದೊಂದು 'ಕ್ರೂರ ಅನ್ಯಾಯ' ಎಂದು ಕರೆದು ಅದಕ್ಕಾಗಿ ನಡೆಸುತ್ತಿದ್ದ ಆಂದೋಲನ ವನ್ನು ಕೃತಕ ತಯಾರಿಕೆ ಎಂದು ಲಾರ್ಡ್ ಕರ್ಜನ್ ನುಡಿದುದರ ಬಗೆಗೆ ಕುಪಿತರಾಗಿ, ಅದರಷ್ಟು ಉಗ್ರವೂ, ವ್ಯಾಪಕವೂ, ಸಹಜವೂ ಆದ ಚಳವಳಿ ಭಾರತದ ರಾಜಕಾರಣ ದಲ್ಲಿ ಎಂದೂ ಕಂಡು ಬಂದಿಲ್ಲವೆಂದು ನುಡಿದರು.

ಸ್ವದೇಶೀ ಚಳವಳಿಯನ್ನು ಕುರಿತು ಗೋಖಲೆಯವರು ಹೀಗೆ ಘೋಷಿಸಿದರು: "ಪರಮೋನ್ನತ ಸ್ವದೇಶಿಯಲ್ಲಿ ಸ್ವದೇಶಪ್ರೇಮ ಅಂತರ್ಗತವಾಗಿದೆ. ಅದರ ಪ್ರಭಾವ ಅದ್ಭುತ. ಅದನ್ನು ಕುರಿತ ಚಿಂತನೆಯೇ ರೋಮಾಂಚಕ; ಇದು ವ್ಯಕ್ತಿಯನ್ನು ಸ್ವಾರ್ಥ ದಿಂದ ಮೇಲೇರಿಸುತ್ತದೆ; ಇಂದಿನ ಭಾರತಕ್ಕೆ ಇದು ಎಲ್ಲಕ್ಕಿಂತ ಹೆಚ್ಚಾಗಿ ಅಗತ್ಯ ವಾಗಿದೆ. ಇದರ ತತ್ವ ಶ್ರೀಮಂತ–ಬಡವ, ರಾಯ–ರೈತ, ಪಟ್ಟಣ–ಹಳ್ಳಿ–ಹೀಗೆ ಎಲ್ಲ ಕಡೆಗಳಲ್ಲಿಯೂ ಪ್ರಚಾರವಾಗಬೇಕು. ಜಪಾನಿನಲ್ಲಿರುವಂತೆ ಮಾತೃಭೂಮಿಯ ಸೇವೆಯು ನಮಗೂ ಅದಮ್ಯವಾದ ಆಸಕ್ತಿಯಾಗಬೇಕು".

ಇಂಗ್ಲೆಂಡಿನ ಪ್ರಭುತ್ವಕ್ಕೆ ತನ್ನ ಸಲಹೆಗಳನ್ನು ಒತ್ತಾಯ ಪಡಿಸುವುದಕ್ಕಾಗಿ ಈ ಕಾಂಗ್ರೆಸ್ ಗೋಖಲೆಯವರನ್ನು ಪ್ರತಿನಿಧಿಯನ್ನಾಗಿ ನೇಮಕ ಮಾಡಿತು.

ದಕ್ಷಿಣ ಆಫ್ರಿಕಾದ ಬ್ರಿಟಿಷ್ ಭಾರತೀಯರು ಇನ್ನೂ ಕಿರುಕುಳ ಮತ್ತು ಅವನತಿಗೆ ಕಾರಣವಾದ ವಿಧಿ ನಿಷೇಧಗಳಿಗೆ ಗುರಿಯಾಗಿರುವ ಬಗೆಗೆ, ಕಾಂಗ್ರೆಸ್ ತನ್ನ ತೀವ್ರ ಸಂತಾಪವನ್ನು ಮತ್ತೆ ವ್ಯಕ್ತಪಡಿಸಿತು.

ಜ಼ೂಲೂ ದಂಗೆ ಮತ್ತು ಅನಂತರ

೧೯೦೬

೧೯೦೬ರ ಏಪ್ರಿಲ್ ತಿಂಗಳಲ್ಲಿ ಜ಼ೂಲೂ ದಂಗೆ ಎಂಬುದು ಪ್ರಾರಂಭವಾಯಿತು. ಗಾಂಧಿಯ ಸಲಹೆಯಂತೆ, ನೇಟಾಲ್ ಕಾಂಗ್ರೆಸ್ ಭಾರತೀಯ ಶುಶ್ರೂಷಾ ತಂಡವನ್ನು ರಚಿಸಿ, ಸೈನ್ಯದೊಡನೆ ಸೇವೆ ಸಲ್ಲಿಸಲು ಇಚ್ಛಿಸುವುದಾಗಿ ಸರಕಾರಕ್ಕೆ ತಿಳಿಸಿತು. ದಂಗೆಯ ವಿಷಯದಲ್ಲಿಯೇ ಗಾಂಧಿಗೆ ಅನುಮಾನವಿತ್ತು. ಆದರೂ ಬ್ರಿಟಿಷ್ ಸಾಮ್ರಾಜ್ಯ ಜಗತ್ತಿನ ಕ್ಷೇಮಕ್ಕಾಗಿಯೇ ಇದೆಯೆಂದು ಅವರು ನಂಬಿದ್ದರು.

ಜೂನ್ ತಿಂಗಳಿನಲ್ಲಿ ರಾಜಕೀಯ ಅನಿಶ್ಚಿತತೆ ಇದ್ದ ಪ್ರಯುಕ್ತ, ಗಾಂಧಿ ಜೋಹಾನ್ಸ್‌ಬರ್ಗಿನ ತಮ್ಮ ಕುಟುಂಬವನ್ನು ನೇಟಾಲಿಗೆ ಒಯ್ಯಬೇಕೆಂದು ನಿರ್ಧರಿಸಿದರು. ಡರ್ಬಾನನ್ನು ತಲುಪಿದ ಮೇಲೆ, ಭಾರತೀಯ ಶುಶ್ರೂಷಾ ತಂಡದ ಸೇವೆ ಅಂಗೀಕೃತವಾಗಿದ್ದುದು ಅವರಿಗೆ ತಿಳಿಯಿತು. ಗಾಂಧಿ ಕೂಡಲೇ ತಮ್ಮ ಕುಟುಂಬವನ್ನು ಫೀನಿಕ್ಸ್ ವಸಾಹತುವಿಗೆ ಕಳಿಸಿದರು. ಇಪ್ಪತ್ತುನಾಲ್ಕು ಮಂದಿ ಸ್ವಯಂ ಸೇವಕರನ್ನು ಕೂಡಿಸಿದರು. ಅವರಲ್ಲಿ ಹತ್ತೊಂಬತ್ತು ಮಂದಿ ಕರಾರು ಬದ್ಧತೆಯಿಂದ ಮುಕ್ತರಾಗಿದ್ದವರು; ಒಬ್ಬ ಪಠಾಣ ಮತ್ತು ನಾಲ್ಕು ಮಂದಿ ಗುಜರಾತಿಗಳು ಇದ್ದರು. ಪ್ರಧಾನ ವೈದ್ಯಾಧಿಕಾರಿ ಗಾಂಧಿಯನ್ನು ತಾತ್ಕಾಲಿಕ ಸಾರ್ಜಂಟ್–ಮೇಜರ್ ಸ್ಥಾನದಲ್ಲಿ ನೇಮಕ ಮಾಡಿದನು. ಭಾರತೀಯ ಶುಶ್ರೂಷಾ ತಂಡ, ಸರಕಾರದಿಂದ ಸಮವಸ್ತ್ರವನ್ನು ಪಡೆಯಿತು. ಅವರನ್ನು ವಿಳಂಬವಿಲ್ಲದೆ ಯುದ್ಧಮುಖಕ್ಕೆ ಕಳಿಸಲಾಯಿತು

ದಂಗೆ ನಡೆಯುತ್ತಿದ್ದ ಸ್ಥಳವನ್ನು ತಲುಪಿದಾಗ ಗಾಂಧಿಗೆ ಅದೊಂದು ಕರ ನಿರಾಕರಣ ಚಳವಳಿಯೆಂಬುದು ತಿಳಿಯಿತು. ಅವರಸ ಹಾನುಭೂತಿ ಜೂಲೂಗಳ ಕಡೆಗೆ ಹೋಯಿತು. ಭಾರತೀಯ ಶುಶ್ರೂಷಾ ತಂಡದ ಮುಖ್ಯ ಕೆಲಸವು ಗಾಯಗೊಂಡ ದಂಗೆಕೋರರಿಗೆ ಸೇವೆ ಮಾಡುವುದೇ ಆಗಿದ್ದುದನ್ನು ಕಂಡಂತೂ ಅವರ ಸಂತಸ ಹೆಚ್ಚಿತು. ಗಾಂಧಿ ಮತ್ತು ಅವರ ಜತೆಗಾರರನ್ನು ವೇಗವಾಗಿ ಚಲಿಸುತ್ತಿದ್ದ ಒಂದು ರಾವುತರ ಪಡೆಗೆ ಸೇರಿಸಲಾಗಿದ್ದಿತು; ಅವರು ತಮ್ಮ ಹೆಗಲ ಮೇಲೆ ಡೋಲಿಗಳನ್ನು ಹೊತ್ತು ಕೆಲವು ವೇಳೆ ದಿನಕ್ಕೆ ನಲವತ್ತು ಮೈಲಿಗಳಷ್ಟು ದೂರವನ್ನು ನಡೆಯಬೇಕಾಗಿತ್ತು. ಗಾಂಧಿಯ ವಶದಲ್ಲಿದ್ದ ಜೂಲೂಗಳು ಯುದ್ಧದಲ್ಲಿ ಗಾಯಗೊಂಡವರಾಗಿರಲಿಲ್ಲ. ಅವರೆಲ್ಲ ನಿರಪರಾಧಿ ಗ್ರಾಮಸ್ಥರು; ದಂಗೆಯಲ್ಲಿ ಭಾಗವಹಿಸಿದರೆಂದು ಶಂಕಿಸಲ್ಪಟ್ಟು ಸರಕಾರದಿಂದ ತೀವ್ರ ಹೊಡೆತಕ್ಕೆ ಗುರಿಯಾದವರಾಗಿದ್ದರು.

ಜೂಲೂ ದಂಗೆ ಗಾಂಧಿಯ ಕಣ್ಣನ್ನು ತೆರೆಸಿತು. ಮಣ್ಣಿನ ಮಕ್ಕಳ ಮೇಲೆ

ಬಿಳಿಯ ಜನ ನಡೆಸುತ್ತಿದ್ದ ನಗ್ನ ಅತ್ಯಾಚಾರಗಳನ್ನು ಕಂಡರು. ಬಿಳಿಯ ಜನ ಜೂಲೂ ಜನರನ್ನು ಛಡಿಯಿಂದ ಹೊಡೆಯುತ್ತಿದ್ದರು. ಅವರ ಗಾಯಗಳಿಗೆ ಚಿಕಿತ್ಸೆ ಮಾಡಲು ಇಚ್ಛಿಸುತ್ತಿರಲಿಲ್ಲ, ಭಾರತೀಯ ತಂಡದವರು ಸೇವೆ ಸಲ್ಲಿಸುತ್ತಿದ್ದುದನ್ನು ಕಂಡು ಸಹಿಸುತ್ತಿರಲಿಲ್ಲ. ಭಾರತೀಯರು ತಮ್ಮ ನೆರವಿಗೆ ಬಂದುದಕ್ಕೆ ಜೂಲೂಗಳು ತುಂಬ ಕೃತಜ್ಞರಾಗಿದ್ದರು. ಈ ಶುಶ್ರೂಷೆಯ ಕಾರ್ಯವಲ್ಲದೆ, ಬಿಳಿಯ ಸೈನಿಕರಿಗೆ, ಬೂತ್‌ರವರ ಸಣ್ಣ ಆಸ್ಪತ್ರೆಯಲ್ಲಿ ಔಷಧ ಕೊಡುತ್ತಿದ್ದಂತೆ ಇಲ್ಲಿಯೂ ಕೊಡಬೇಕಾಗಿತ್ತು.

ಜುಲೈ ವೇಳೆಗೆ 'ದಂಗೆ' ನಿಂತಿತು. ಭಾರತೀಯ ಶುಶ್ರೂಷಾ ತಂಡವು ಸುಮಾರು ಆರು ವಾರಗಳ ಕಾಲ ಸೇವೆ ಸಲ್ಲಿಸಿತು. ಅದರ ಸೇವೆಯನ್ನು ಇಂಗ್ಲೆಂಡಿಗೆ ಕಳಿಸಿದ ವರದಿಗಳಲ್ಲಿ ಶ್ಲಾಘಿಸಲಾಗಿತ್ತು. ಪ್ರತಿಯೊಬ್ಬ ಸದಸ್ಯನಿಗೂ ವಿಶೇಷ ಪದಕವನ್ನು ನೀಡಲಾಯಿತು.

ಜೂಲೂ ಲ್ಯಾಂಡಿನ ದೊಡ್ಡ ಕಣಿವೆಗಳಲ್ಲಿ ಸಂಚರಿಸಿದ ಗಾಂಧಿ ಆಗಾಗ ಗಾಢ ಆಲೋಚನಾ ಮಗ್ನರಾಗುತ್ತಿದ್ದರು. ಅವರ ಮನಸ್ಸಿನಲ್ಲಿ ತೇಲುತ್ತಿದ್ದ ಎರಡು ಭಾವಗಳು ಸ್ಥಿರತೆಯನ್ನು ಪಡೆದುವು: ಸೇವಾ ಜೀವನವನ್ನು ಪೂರ್ಣವಾಗಿ ಅಪೇಕ್ಷಿಸುವವನು ಇಂದ್ರಿಯ ನಿಗ್ರಹದ ಜೀವನವನ್ನು ಸಾಗಿಸಬೇಕು ; ಅವನು ಸ್ವಯಂ ಪ್ರೇರಿತ ದಾರಿದ್ರ್ಯವನ್ನು ಸ್ವೀಕರಿಸಬೇಕು.

ಗಾಂಧೀ ತಮ್ಮ "ಪೂಜ್ಯ ಅಣ್ಣ" ಲಕ್ಷ್ಮೀದಾಸ್ ಗಾಂಧಿಯವರಿಗೆ ೧೯೦೭ರ ಮೇ ೨೭ರಂದು ಬರೆದ ಪತ್ರ ಅವರ ಮನಸ್ಸಿನ ಸ್ಪಷ್ಟ ಚಿತ್ರಣವಾಗಿತ್ತು.

"ನಿಮ್ಮ ಏಪ್ರಿಲ್ ೧೭ರ ಪತ್ರ ಬಂದಿದೆ. ಏನು ಹೇಳಲೋ ನಾನರಿಯೆ. ನೀವು ನನ್ನ ಬಗೆಗೆ ಪೂರ್ವಕಲ್ಪಿತ ಅಭಿಪ್ರಾಯ ಹೊಂದಿದ್ದೀರಿ. ನಿಮ್ಮ ಪತ್ರಕ್ಕೆ ಪೂರ್ಣವಾಗಿ ಉತ್ತರ ಬರೆಯಬೇಕಾಗಿದೆ.

"(೧) ನಾನು ನಿಮ್ಮಿಂದ ಪ್ರತ್ಯೇಕವಾಗಬೇಕೆಂಬ ಅಭಿಪ್ರಾಯವನ್ನು ಹೊಂದಿಲ್ಲ; (೨) ಅಲ್ಲಿ (ಭಾರತದಲ್ಲಿ) ಇರುವ ಆಸ್ತಿಯಲ್ಲಿ ನಾನು ಏನನ್ನೂ ಬೇಡುವುದಿಲ್ಲ: (೩) ಯಾವುದನ್ನೂ ನನ್ನದೆಂದು ನಾನು ಹೇಳುವುದಿಲ್ಲ: (೪) ನನ್ನಲ್ಲಿ ಇರುವುದನ್ನೆಲ್ಲ ನಾನು ಸಾರ್ವಜನಿಕ ಸೇವೆಗೆ ಉಪಯೋಗಿಸುತ್ತಿದ್ದೇನೆ; (೫) ಸಾರ್ವಜನಿಕ ಕೆಲಸ ಮಾಡುವ ಬಂಧುವರ್ಗದವರಿಗೂ ಅದು ದೊರಕುತ್ತದೆ; (೬) ನನ್ನ ಸರ್ವಸ್ವವನ್ನೂ ನಾನು ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸದಿದ್ದರೆ ನಿಮ್ಮ ಹಣದ ಬಯಕೆಯನ್ನು ತೀರಿಸುತ್ತಿದ್ದೆ.

"ಸೋದರರಿಗಾಗಲೀ ಬಂಧುಗಳಿಗಾಗಲೀ ನಾನು ತುಂಬ ನೆರವಾಗಿದ್ದೇನೆಂದು ಎಂದೂ ಹೇಳಿಕೊಂಡಿಲ್ಲ. ನಾನು ಉಳಿತಾಯ ಮಾಡಿದುದನ್ನೆಲ್ಲ ಅವರಿಗೆ ಕೊಟ್ಟೆ. ಆದರೆ ಇದನ್ನು ಹೆಮ್ಮೆಯಿಂದ ಹೇಳಿಕೊಂಡಿಲ್ಲ; ಗೆಳೆಯರಿಗೆ ಮಾತ್ರ ಹೇಳಿದ್ದೇನೆ.

"ನೀವು ನನಗಿಂತ ಮುಂಚೆ ಕಾಲವಾದರೆ, ನಾನು ಕುಟುಂಬದ ಹೊಣೆಗಾರಿಕೆ ಹೊರುವ ಬಗೆಗೆ ಪೂರ್ಣ ಭರವಸೆ ಹೊಂದಿರಿ. ಆ ಕಾರಣಕ್ಕಾಗಿ ನೀವು ಹೆದರಬೇಕಾಗಿಲ್ಲ.

"ಹರಿಲಾಲ್‌ನಿಗೆ ಮದುವೆಯಾದರೆ ಒಳ್ಳೆಯದು; ಆಗದಿದ್ದರೂ ಒಳ್ಳೆಯದೇ.

ಸದ್ಯಕ್ಕಂತೂ ನಾನು ಅವನನ್ನು ನನ್ನ ಮಗನೆಂದು ಭಾವಿಸುವುದನ್ನು ತ್ಯಜಿಸಿದ್ದೇನೆ".

"ಮಣಿಯ ವಿವಾಹಕ್ಕೆ ನಾನು ಭಾರತಕ್ಕೆ ಬರಲು ಸಾಧ್ಯವಾದರೆ ಬಂದೇನು. ಆದರೆ ನನ್ನ ಸದ್ಯದ ಸ್ಥಿತಿಯ ಬಗೆಗೆ ನಿಮಗೆ ಯಾವ ಅಭಿಪ್ರಾಯವನ್ನೂ ಕೊಡಲಾರೆ. ದಯಮಾಡಿ ಮದುವೆಯ ತಾರೀಕನ್ನು ಕೇಬಲ್ ಮಾಡಿ. ನನಗೆ ಹೊರಡಲು ಸಾಧ್ಯವಾಗುವುದಾದರೆ, ಸಿದ್ಧವಾಗಿರಲು ಅನುಕೂಲವಾಗುತ್ತದೆ.

"ನಾನು ರೇವಾ ಶಂಕರ ಭಾಯಿಗೆ ಕೃತಜ್ಞನಾಗಿದ್ದೇನೆಂದು ನಿಮಗೆ ತಿಳಿಸಬಹುದೇನೋ.

"ನೀವು ನನ್ನನ್ನು ತ್ಯಜಿಸಿದರೂ, ನಾನು ನಿಮ್ಮ ಬಗೆಗೆ ಎಂದಿನಂತೆಯೇ ಇರುತ್ತೇನೆ.

"ನಾನು ಭಾರತದಲ್ಲಿದ್ದಾಗ ನಿಮ್ಮಿಂದ ಪ್ರತ್ಯೇಕವಾಗಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದಂತೆ ನೆನಪಿಲ್ಲ. ಒಂದು ವೇಳೆ ವ್ಯಕ್ತಪಡಿಸಿದ್ದರೂ ಈಗ ನನ್ನ ಮನಸ್ಸು ಸ್ಪಷ್ಟವಾಗಿದೆ; ನನ್ನ ಆಶೋತ್ತರಗಳು ಉನ್ನತವಾಗಿವೆ; ಯಾವುದೇ ಬಗೆಯ ಪ್ರಾಪಂಚಿಕ ಸುಖದ ಇಚ್ಛೆಯೂ ನನಗಿಲ್ಲ.

"ನನ್ನ ಬಾಳಿಗೆ ಅಗತ್ಯವೆಂದು ನಾನು ಭಾವಿಸುವ ಚಟುವಟಿಕೆಗಳಲ್ಲಿ ನಾನಿಂದು ನಿರತನಾಗಿದ್ದೇನೆ. ಇದನ್ನು ನಡೆಸುತ್ತಾ ನನಗೆ ಸಾವು ಬಂದರೆ, ಅದನ್ನು ಸಮಾಧಾನ ಚಿತ್ತದಿಂದ ಎದುರಿಸುತ್ತೇನೆ. ಈಗ ಹೆದರಿಕೆಯೆಂದರೇನೋ ನಾನರಿಯೆ.

"ಪರಿಶುದ್ಧ ಹೃದಯವಿರುವವರು ನನಗೆ ಪ್ರಿಯರು. ಜಗಮೋಹನ್ ದಾಸರ ಮಗ ಯುವಕ ಕಲ್ಯಾಣದಾಸ್, ಪ್ರಹ್ಲಾದನಂತಿದ್ದಾನೆ. ಆದುದರಿಂದ ಅವನು ನನಗೆ ಮಗನಿಗಿಂತಲೂ ಹೆಚ್ಚು ಪ್ರಿಯನಾಗಿದ್ದಾನೆ".

ಗಾಂಧೀ ಫೀನಿಕ್ಸ್‌ನಲ್ಲಿ ನಿಂತುದು ಸ್ವಲ್ಪ ಕಾಲವೇ. ಟ್ರಾನ್ಸ್‌ವಾಲ್‌ಗೆ ತತ್ಕ್ಷಣವೇ ಬರಬೇಕೆಂದು ಪತ್ರಗಳೂ ಮತ್ತು ಕೇಬಲ್‌ಗಳೂ ಅವರಿನ್ನೂ ಯುದ್ಧಮುಖದಲ್ಲಿದ್ದಾಗಲೇ ಅಧಿಕವಾಗಿ ಬರುತ್ತಿದ್ದುವು. ಜೋಹಾನ್ಸ್‌ಬರ್ಗ್‌ನಲ್ಲಿ ಅವರು ಅಗತ್ಯವಾಗಿ ಇರಬೇಕಾಗಿತ್ತು. ಆದುದರಿಂದ ತಮ್ಮ ಕುಟುಂಬದವರನ್ನು ಫೀನಿಕ್ಸ್‌ನಲ್ಲಿ ಬಿಟ್ಟು ತಾವು ಜೋಹಾನ್ಸ್‌ಬರ್ಗ್‌ಗೆ ಹೋದರು.

ಜೋಹಾನ್ಸ್‌ಬರ್ಗ್‌ನ ದೂರದ ಊರ ಹೊರವಲಯದಲ್ಲಿ ಒಂದು ಸಣ್ಣ ಮನೆ ಮಾಡಿ, ಅದಕ್ಕೆ ಅಗತ್ಯವಾದ ಗೃಹಕೃತ್ಯದ ಸಾಮಾನುಗಳನ್ನು ಜೋಡಿಸಿದರು. ಅಲ್ಲಿ ನೆಲಕ್ಕೆ ರತ್ನಕಂಬಳಿ ಇರಲಿಲ್ಲ. ಕಟಕಿಗಳಿಗೆ ತೆರೆಗಳಿರಲಿಲ್ಲ. ಯಾವುದೋ ಬಗೆಯ ಹಳದಿಯ ಬಣ್ಣದ ಆವರಣಗಳು ಮಾತ್ರ ಮರೆ ಮಾಡಿದ್ದುವು. ಮನೆಯ ಮುಂದೆ, ವಿಶಾಲವಾದ ಖಾಲಿ ನಿವೇಶನವಿತ್ತು. ಎರಡು ಮಲಗುವ ಕೋಣೆಗಳು, ಒಂದು ಅಡಿಗೆಯ ಮನೆ ಮತ್ತು ಸೇವಕರಿಗಾಗಿ ಒಂದು ಹೆಚ್ಚುವರಿ ಕೋಣೆಯೂ ಇದ್ದುವು. ಆ ಕೋಣೆಯಲ್ಲಿ ಒಬ್ಬ ಯುವಕ ಭಾರತೀಯ ಕಾರ್ಯಕರ್ತನಿದ್ದನು. ಸ್ವಲ್ಪ ಕಾಲದಲ್ಲಿಯೇ ಪೋಲಕ್ ದಂಪತಿಗಳೂ ಗಾಂಧಿಯ ಜೊತೆಗಿರಲು ಬಂದರು.

ಮನೆಯಲ್ಲಿ ಸೇವಕನಿರಲಿಲ್ಲ. ಎಲ್ಲರೂ ಮನೆಗೆಲಸವನ್ನು ಮಾಡುತ್ತಿದ್ದರು.

ಮೊದಲೂಟಕ್ಕೆ ಹಣ್ಣು, ಕಂದು ರೊಟ್ಟಿ, ಕಾಯಿಬೆಣ್ಣೆ ಇರುತ್ತಿದ್ದುವು. ಒಬ್ಬೊಬ್ಬರೂ ತಮಗೆ ಬೇಕಾದುದನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಈ ಕಾಲದಲ್ಲಿ ಗಾಂಧಿ ಮಾಡಿದ ಆಹಾರದ ಪ್ರಯೋಗಗಳು ಅನೇಕ. ಕೆಲವು ತಿಂಗಳವರೆಗೆ ಹೆಚ್ಚು ಉಪ್ಪಿಲ್ಲದ ಅಥವಾ ಸಂಬಾರದ ವಸ್ತುಗಳಿಲ್ಲದ ಅಡಿಗೆ ಸಾಗಿತು. ಅವರು ಕೆಲವು ಕಾಲ ಸಕ್ಕರೆ ಯನ್ನೇ ಉಪಯೋಗಿಸಲಿಲ್ಲ. ಏಕೆಂದರೆ, ಅದು ಕರಾರು ಬದ್ಧ ಕೂಲಿಗಳ ಶ್ರಮದಿಂದ ತಯಾರಾಗುತ್ತಿತ್ತು. ಅನಂತರ ಕೆಲವು ಕಾಲ ಆಹಾರವೆಲ್ಲ ಬೇಯಿಸದ ವಸ್ತುಗಳೇ ಆಗಿರುತ್ತಿದ್ದವು. ಅವುಗಳ ಜೊತೆಗೆ ಅಲಿವ್ ತೈಲವನ್ನು ಮಾತ್ರ ಸೇರಿಸಲಾಗುತ್ತಿತ್ತು. ಇವುಗಳ ಆಹಾರ ಮೌಲ್ಯ, ಮಾನವ ಶರೀರದ ಮೇಲೆ ಪರಿಣಾಮ ಮತ್ತು ಇವುಗಳ ಗುಣ ಇತ್ಯಾದಿಗಳ ಬಗೆಗೆ ದೀರ್ಘ ಚರ್ಚೆ ನಡೆದ ಮೇಲೆ ಈ ಪ್ರಯೋಗಗಳನ್ನು ಮಾಡುತ್ತಿದ್ದರು. ಕೆಲವು ಕಾಲ ಹಸಿ ಈರುಳ್ಳಿಯನ್ನು–ಅದು ರಕ್ತ ಶುದ್ಧಿ ಮಾಡುವುದೆಂಬ ದೃಷ್ಟಿಯಿಂದ–ಉಪಯೋಗಿಸಲಾಗುತ್ತಿತ್ತು. ಆದರೆ ಅದು ದೈಹಿಕ ಪ್ರಚೋದನೆಗೆ ಕಾರಣವಾಗುತ್ತದೆಂದು ಭಾವಿಸಿದುದರಿಂದ ಕೈ ಬಿಡಲಾಯಿತು. ಹಾಲು ಸಹ ಉದ್ರೇಕಕಾರಿಯೆಂದು ಅವರು ಭಾವಿಸಿ, ಕೆಲವು ಕಾಲ ತ್ಯಜಿಸಿದರು.

ಅಲ್ಲಿನ ಭಾರತೀಯ ಜನರ ಜೀವನಕ್ಕೆ ಸಂಬಂಧಿಸಿದಂತೆ ಒಂದು ಉತ್ಕಟ ಪರಿಸ್ಥಿತಿ ಸನ್ನಿಹಿತವಾಗಿತ್ತು. ಮಧ್ಯರಾತ್ರಿಗೆ ಮುಂಚೆ ಗಾಂಧಿ ಮನೆಗೆ ಬರುವುದು ಅಪರೂಪವಾಯಿತು. ಹದಿನೈದು ಘಂಟೆಗಳ ಶ್ರಮ ಪೂರಿತ ಕೆಲಸದ ತರುವಾಯ, ಅವರು ವಿಶ್ರಾಂತಿಗಾಗಿ ಆರು ಮೈಲಿ ನಡೆದು ಬರುತ್ತಿದ್ದರು. ಬಸ್ಸಿನ ಸೌಕರ್ಯವಿದ್ದರೂ ಅದು ಬಿಳಿಯ ಜನರಿಗೆ ಮಾತ್ರ. ಅವರ ಕೆಲಸಗಾರರಲ್ಲಿ ಕೆಲವರು ಹೊಸ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕೆಂದು ಚರ್ಚಿಸುತ್ತ ಜತೆಯಲ್ಲಿ ನಡೆಯುತ್ತಿದ್ದರು. ಮನೆಗೆ ಬಂದ ಮೇಲೂ ಚರ್ಚೆ ಮುಂದುವರಿಯುತ್ತಿತ್ತು. ರಾತ್ರಿವೇಳೆ ಬಹಳ ಹೊತ್ತಾದ ಮೇಲೆ ಎಲ್ಲರಿಗೂ ಮಲಗಲು ರಗ್ಗನ್ನು ಹಾಸಲಾಗುತ್ತಿತ್ತು.

ಆಗಸ್ಟ್ ೨೨ರಂದು ಟ್ರಾನ್ಸ್‌ವಾಲ್ ಸರಕಾರ ಒಂದು ವಿಶೇಷ ಪತ್ರ ಹೊರಡಿಸಿ ಅದರ ಮೂಲಕ ಭಾರತೀಯ ನೆಲಸುಗಾರರ ಹಿತಾಸಕ್ತಿಗಳಿಗೆ ಧಕ್ಕೆ ತರುವ ಒಂದು ಹೊಸ ಆಜ್ಞೆಯನ್ನು ಪ್ರಚುರ ಪಡಿಸಿತು. ಟ್ರಾನ್ಸ್‌ವಾಲ್‌ನಲ್ಲಿ ವಾಸಿಸಲು ಹಕ್ಕುಳ್ಳ ಪ್ರತಿಯೊಬ್ಬ ಎಂಟು ವರ್ಷ ವಯಸ್ಸಿಗೆ ಮೇಲ್ಪಟ್ಟ ಭಾರತೀಯ 'ಕೂಲಿಯೂ' ಅರಬ್ಬಿ ಅಥವಾ ತುರ್ಕಿಯವನೇ ಆಗಿರಲಿ, ಒಂದು ದಾಖಲೆಯ ಪತ್ರವನ್ನು 'ರಿಜಿಸ್ಟ್ರಾರ್ ಆಫ್ ಏಷ್ಯಾಟಿಕ್ಸ್' ಅವರಿಂದ ಪಡೆಯ ಬೇಕಾಯಿತು. ಅದರ ಪ್ರಕಾರ, ಅಭ್ಯರ್ಥಿಯು ತನ್ನನ್ನು ಗುರುತಿಸುವುದಕ್ಕಾಗಿ ಶರೀರದ ಮೇಲಿನ ಕೆಲವು ಚಿಹ್ನೆಗಳನ್ನು ಬರೆಸುವುದರ ಜತೆಗೆ ಬೆರಳಗಳ ಮತ್ತು ಹೆಬ್ಬೆಟ್ಟಿನ ಗುರುತನ್ನು ನೀಡಬೇಕಾಗಿದ್ದಿತು. ಒಂದು ಗೊತ್ತಾದ ತಾರೀಕಿನ ತರುವಾಯ ಈ ವಿಧಿಗೆ ತಪ್ಪಿದ ಯಾರೇ ಆಗಲಿ, ಟ್ರಾನ್ಸ್‌ವಾಲ್‌ನಲ್ಲಿ ವಾಸಿಸುವ ತಮ್ಮ ಹಕ್ಕನ್ನು ಕಳೆದುಕೊಳ್ಳುವುದಲ್ಲದೆ, ನೂರು ಪೌಂಡು ದಂಡ ಅಥವಾ ಮೂರು ತಿಂಗಳ ಕಾರಾಗೃಹ ವಾಸ, ಜತೆಗೆ ನ್ಯಾಯಸ್ಥಾನ ಇಚ್ಛಿಸಿದರೆ

ಗಡೀಪಾರು ಆಜ್ಞೆಯನ್ನು ವಿಧಿಸಬಹುದಾಗಿದ್ದಿತು. ಅಭ್ಯರ್ಥಿಗೆ ನೀಡಲಾದ ದಾಖಲೆ ಪತ್ರವನ್ನು ಪರೀಕ್ಷಿಸಲು ಖಾಸಗೀ ಮನೆಗಳನ್ನು ಪ್ರವೇಶಿಸಲು ಪೋಲೀಸು ಅಧಿಕಾರಿಗಳಿಗೆ ಅವಕಾಶವಿತ್ತು. ದಾಖಲೆ ತೋರಿಸಲು ತಪ್ಪಿದರೆ. ಅಥವಾ ವಿಧಿಯ ಪ್ರಕಾರ ಗೊತ್ತು ಮಾಡಿದ ವಿವರಗಳನ್ನೋಅಥವಾ ಗುರುತಿನ ಸಾಧನವನ್ನೋ ಒದಗಿಸಲು ತಪ್ಪಿದರೆ, ಅದೊಂದು ಅಪರಾಧವಾಗಿ ಪರಿಗಣಿಸಲ್ಪಟ್ಟು ನಿರಾಕರಿಸಿದ ವ್ಯಕ್ತಿ ದಂಡಕ್ಕೆ ಗುರಿಯಾಗಬೇಕಾಗಿತ್ತು ಅಥವಾ ಕಾರಾಗೃಹ ವಾಸವನ್ನು ಅನುಭವಿಸಬೇಕಾಗಿತ್ತು.

ಈ ಆಜ್ಞೆ ಜಾರಿಗೆ ಬಂದರೆ, ಮತ್ತು ಭಾರತೀಯರು ಇದನ್ನು ಪ್ರತಿಭಟಿಸದೆ ಒಪ್ಪಿಕೊಂಡರೆ, ದಕ್ಷಿಣ ಆಫ್ರಿಕಾದ ತಮ್ಮ ದೇಶಬಾಂಧವರ ಪೂರ್ಣ ನಾಶವಾಗುವುದೆಂದು ಗಾಂಧಿಗೆ ಮನವರಿಕೆಯಾಯಿತು. 'ಇಂಡಿಯನ್ ಒಪಿನಿಯನ್'ನ ಬಹುಮಂದಿ ಓದುಗರ ಅನುಕೂಲಕ್ಕಾಗಿ, ಗಾಂಧಿ ಕರಡು ಆಜ್ಞೆಯನ್ನು ಗುಜರಾತೀ ಭಾಷೆಗೆ ಅನುವಾದ ಮಾಡಿದರು. ಅನಂತರ ಅವರು ಪ್ರಮುಖ ಭಾರತೀಯರ ಸಭೆಯೊಂದನ್ನು ಕರೆದು, ಆಜ್ಞೆಯನ್ನು ಪದಶಃ ವಿವರಿಸಿದರು. ಸಭೆಗೆ ಬಂದಿದ್ದವರೆಲ್ಲ ಸಾರ್ವಜನಿಕ ಚಳವಳಿ ಮಾಡಲು ನಿರ್ಧಾರ ಮಾಡಿದರು.

ಬ್ರಿಟಿಷ್ ಭಾರತೀಯರ ಸಂಘದ ಪರವಾಗಿ ಗಾಂಧಿಯ ನಾಯಕತ್ವದಲ್ಲಿ ಒಂದು ನಿಯೋಗ ವಸಾಹತು ಕಾರ್ಯದರ್ಶಿಯನ್ನು ಭೇಟಿ ಮಾಡಿತು. ಆದರೆ, ಆತ ಔಪಚಾರಿಕ ಉತ್ತರ ನೀಡಿ. ಸರಕಾರದ ಸಲಹೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದನು. ಸೆಪ್ಟೆಂಬರ್ ೪ರಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲಾಯಿತು.

ಸೆಪ್ಟೆಂಬರ್ ೧೧ರಂದು ಜೊಹಾನ್ಸ್‌ಬರ್ಗ್‌ನ 'ಜ್ಯೂಯಿಷ್ ಎಂಪೈರ್ ಥಿಯೇಟರ್'ನಲ್ಲಿ ಭಾರತೀಯರ ಬೃಹತ್‌ಸಭೆ ನಡೆಯಿತು. ಸುಮಾರು ೩೦೦೦ ಮಂದಿ ಪ್ರತಿನಿಧಿಗಳು ಟ್ರಾನ್ಸ್‌ವಾಲ್‌ನ ನಾನಾ ಭಾಗಗಳಿಂದ ಬಂದು ಭಾಗವಹಿಸಿದರು. ಟ್ರಾನ್ಸ್‌ವಾಲ್ ಸಂಘದ ಅಧ್ಯಕ್ಷ ಅಬ್ದುಲ್ ಗನಿ, ಅಗ್ರಾಸನ ವಹಿಸಿದ್ದರು. ಆ ಸಭೆ ಅಂಗೀಕರಿಸಿದ ನಿರ್ಣಯಗಳಲ್ಲಿ ನಾಲ್ಕನೆಯದು ಬಹಳ ಮುಖ್ಯವಾಗಿದ್ದಿತು. ಭಾರತೀಯರು ಆಜ್ಞೆಗೆ ಶಿರಬಾಗಬಾರದೆಂದೂ ಅಂಥ ಉಲ್ಲಂಘನೆಯಿಂದ ಒದಗಬಹುದಾದ ಎಲ್ಲ ಶಿಕ್ಷೆಗಳನ್ನೂ ಅನುಭವಿಸಬೇಕೆಂದೂ ಅದು ನಿರ್ಧಾರ ಮಾಡಿದ್ದಿತು.

ನಿರ್ಣಯವನ್ನು ಸಮರ್ಥಿಸುತ್ತಾ ಗಾಂಧಿ ಗಂಭೀರವಾಗಿ ನುಡಿದರು: "ನಮಗೆ ಆಗುವ ಅನ್ಯಾಯಗಳಿಗೆ ಪರಿಹಾರ ಒದಗಿಸಬೇಕೆಂದು ಬೇಡಿದ ಮರುಕ್ಷಣವಲ್ಲಿಯೇ ನಮ್ಮ ಪ್ರಾರ್ಥನೆ ಈಡೇರದಿದ್ದರೆ ನಾವು ತುರಂಗಕ್ಕೆ ಹೋಗುವ ಬೆದರಿಕೆಯನ್ನು ಒಡ್ಡಿರುವೆವಾದುದರಿಂದ ನಮ್ಮ ತರ್ಕ ಲೋಪದಿಂದ ಕೂಡಿದೆಯೆಂದು ಕೆಲವು ಟೀಕಾಕಾರರು ಯೋಚಿಸಬಹುದು. ನಾವು ಯಾವ ಬೆದರಿಕೆಯನ್ನೂ ಹಾಕುತ್ತಿಲ್ಲ. ಅದು ಟನ್‌ಗಳಷ್ಟು ಭಾಷಣಗಳು ಮತ್ತು ಬರಹಗಳಿಗಿಂತಲೂ ಮೇಲಾದ ಒಂದು ಔನ್ಸಿನಷ್ಟು ಅನುಷ್ಠಾನ ಅಷ್ಟೆ. ನಾವು ಉಪಯೋಗಿಸಿರುವ ಪ್ರತಿಯೊಂದು ಗುಣವಾಚಕವೂ ಸನ್ನಿವೇಶದಿಂದ ಸಮರ್ಥನೆ ಪಡೆದಿದೆ. ಇನ್ನೂ ಬಲವಾದ ಗುಣವಾಚಕ ದೊರಕು

ವುದಾದರೆ, ಅದನ್ನೂ ನಾನು ಉಪಯೋಗಿಸುತ್ತೇನೆ. ದಕ್ಷಿಣ ಆಫ್ರಿಕಾದಲ್ಲಿ ಇರುವ ಎಲ್ಲ ಏಷ್ಯಾ ವಿರೋಧೀ ಶಾಸನಗಳನ್ನೂ ನಾನು ವ್ಯಾಸಂಗ ಮಾಡಿದ್ದೇನೆ. ಆದರೆ ಇದರಂಥದನ್ನು ನಾನು ಕಂಡಿಲ್ಲ. ಈ ಕ್ರಮ ತೆಗೆದುಕೊಳ್ಳುವುದರಿಂದ ನಾವು ಸರಿಯಾದ ಹೆಜ್ಜೆ ಇಟ್ಟಿದ್ದೇವೆಂದು ನನ್ನ ನಂಬಿಕೆ. ಈ ನಮ್ಮ ಕಾರ್ಯಕ್ರಮದಲ್ಲಿಯೂ ನಾವು ಸ್ವಾಮಿ ನಿಷ್ಠೆಯಿಂದ ಕೂಡಿದ್ದೇವೆ. ನನ್ನ ಜನತೆಯನ್ನು ನಾನು ಬಲ್ಲೆ. ಅವರನ್ನು ನಂಬಬಹು ದೆಂದು ನಾನು ತಿಳಿದಿದ್ದೇನೆ. ಒಂದು ಧೀರ ಹೆಜ್ಜೆ ಇಡಬೇಕಾದ ಸಂದರ್ಭ ಬಂದಾಗ ನಮ್ಮಲ್ಲಿ ಪ್ರತಿಯೊಬ್ಬನೂ ಅದರಂತೆ ನಡೆಯುವನೆಂದು ನಾನು ಬಲ್ಲೆ. ನನ್ನ ಮುಂದಿ ರುವ ಮಾರ್ಗ ಒಂದೇ; ಪ್ರತಿಯೊಬ್ಬನೂ ಹಿಂದೆ ನಿಂತು, ನನ್ನೊಬ್ಬನನ್ನೇ ಬಿಡುವು ದಾದರೂ, ಶಾಸನಕ್ಕೆ ಮಣಿಯದೆ ಸಾವನ್ನಪ್ಪುವುದು. ನಾನು ನನ್ನ ಪ್ರತಿಜ್ಞೆಗೆ ಎಂದೂ ಭಂಗ ತರುವುದಿಲ್ಲವೆಂಬ ಧೈರ್ಯದಿಂದಿದ್ದೇನೆ."

ಸಭೆಯಲ್ಲಿ ಸೇರಿದ ನಾನಾ ಜನರ ಉಪಯೋಗಕ್ಕಾಗಿ ಕಾರ್ಯಕ್ರಮವು ಗುಜರಾತೀ ಹಿಂದೀ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ನಡೆಯಿತು. ಭಾಷಣಗಳೆಲ್ಲ ಮುಗಿದ ಮೇಲೆ, ಸಭೆಯಲ್ಲಿದ್ದವರೆಲ್ಲ ಕೈ ಮೇಲಕ್ಕೆತ್ತಿ, ಕರಡು ಆಜ್ಞೆಯು ಶಾಸನವಾಗುವುದಾದರೆ ಅದಕ್ಕೆ ಶಿರಬಾಗುವುದಿಲ್ಲವೆಂದು, ದೇವರ ಸಾಕ್ಷಿಯಲ್ಲಿ ದೃಢ ನಿರ್ಧಾರದಿಂದ ಪಣ ತೊಟ್ಟರು.

ಕಾರ್ಯಕರ್ತರು ನಿಲುಗಡೆಯಿಲ್ಲದೆ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿ ದರು. ಎಲ್ಲೆಲ್ಲಿಯೂ ಸಭೆಗಳು ನಡೆದು ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು. ಈ ಕರಾಳ ಆಜ್ಞೆ 'ಇಂಡಿಯನ್ ಒಪಿನಿಯನ್'ನಲ್ಲಿ ಪ್ರಧಾನ ಚರ್ಚೆಯ ವಿಷಯವಾಯಿತು. ಹೊಸ ಚಳವಳಿಯನ್ನು ಯಾರೂ ಹೇಗೆ ಕರೆಯಬೇಕೆಂದು ಅರಿತಿರಲಿಲ್ಲ. ಗಾಂಧಿ ಅದನ್ನು 'ಸೌಮ್ಯ ಪ್ರತಿಭಟನೆ'(Passive Resistance) ಎಂದು ಕರೆದರು.

ಗಾಂಧಿ, ಮೊದಲು ಸರಕಾರಕ್ಕೆ ಮನವಿ ಪತ್ರಗಳನು ಸಲ್ಲಿಸಿದರು. ಶಾಸನ ಸಭೆಯು ಮಹಿಳೆಯರಿಗೆ ಸಂಬಂಧಿಸಿದ ಉಪವಿಧಿಗಳನ್ನು ಮಾತ್ರ ತೆಗೆದು ಹಾಕಿತು. ಉಳಿದ ಆಜ್ಞೆ, ಕರಡಿನಲ್ಲಿ ಬಹಳ ಮಟ್ಟಿಗೆ ಇದ್ದಂತೆಯೇ ಅಂಗೀಕೃತವಾಯಿತು.

ಭಾರತೀಯ ಜನಸಮುದಾಯವು, ಮೊದಲ ಹೆಜ್ಜೆಯಾಗಿ ಸೂಕ್ತವೆನಿಸಿದ ಶಾಸನಬದ್ಧ ಪರಿಹಾರ ಕ್ರಮಗಳನ್ನೆಲ್ಲ ಉಪಯೋಗಿಸಲು ಯತ್ನಿಸಿತು. ಟ್ರಾನ್ಸ್ ವಾಲ್ ಇನ್ನೂ ಸಮ್ರಾಟನ ವಸಾಹತುವಾಗಿದ್ದುದರಿಂದ ಸಾಮ್ರಾಜ್ಯ ಸರಕಾರವೇ ಅದರ ಶಾಸನ ನಿರ್ಮಾಣ ಹಾಗೂ ಆಡಳಿತಕ್ಕೆ ಹೊಣೆಯಾಗಿತ್ತು. ಅದಕ್ಕಾಗಿ ಗಾಂಧಿಯ ಸಲಹೆಯಂತೆ ಇಂಗ್ಲೆಂಡಿಗೆ ಒಂದು ನಿಯೋಗವನ್ನು ಕಳಿಸಲು ಭಾರತೀಯ ಜನ ಸಮುದಾಯ ನಿರ್ಧರಿಸಿತು. ನಾಲ್ಕನೆಯ ನಿರ್ಣಯದ ಮೇಲೆ ಪ್ರಮುಖ ಭಾರತೀಯ ಮುಖಂಡರು ಕೈಕೊಂಡ ವೈಯಕ್ತಿಕ ಪ್ರತಿಜ್ಞೆಗಳನ್ನು ನಿಯೋಗಕ್ಕೆ ಒಪ್ಪಿಗೆಯನ್ನಾಗಿ ತೆಗೆದುಕೊಳ್ಳಲಾಯಿತು. ಅಗತ್ಯವಾದ ನಿಧಿ ಶೇಖರವಾಯಿತು. ಎಂ. ಎಚ್. ಓ. ಅಲೀ ಮತ್ತು ಗಾಂಧಿ ಅಕ್ಟೋಬರ್ ೩ರಂದು ಇಂಗ್ಲೆಂಡಿಗೆ ಪ್ರಯಾಣ ಹೊರಟರು.

ಬೀಳ್ಕೊಡುಗೆಯ ಸಮಾರಂಭವೊಂದರಲ್ಲಿ ಗಾಂಧಿ ಹೀಗೆ ನುಡಿದರು; "ನಾವೇನೋ ನಮ್ಮ ಸಕಲ ಪ್ರಯತ್ನವನ್ನೂ ಮಾಡುತ್ತೇವೆ. ಆದರೆ ನಮ್ಮ ಪ್ರಾರ್ಥನೆ ಈಡೇರುವ ಅವಕಾಶ ಬಹಳ ಕಡಿಮೆ. ಆದುದರಿಂದ ನಾವು ಪ್ರಧಾನವಾಗಿ ನಾಲ್ಕನೆಯ ನಿರ್ಣಯವನ್ನೇ ಅವಲಂಬಿಸಬೇಕು. ಇಂಗ್ಲೆಂಡಿನಲ್ಲಿ ಎಲ್ಲ ಸ್ನೇಹಿತರಿಗೂ ನಮ್ಮ ಸಮಸ್ಯೆಯನ್ನು ವಿವರಿಸುತ್ತೇವೆ. ನೀವೂ ದಾಖಲೆ ಮಾಡಿಕೊಳ್ಳಲು ಒಪ್ಪದೆ ನಿಮ್ಮ ಕರ್ತವ್ಯವನ್ನು ನಿರ್ವಹಿಸಿ. ಚಳವಳಿಯನ್ನು ಮುಂದುವರಿಸಲು ಹಣವನ್ನು ಶೇಖರಿಸಬೇಕು. ಇದಕ್ಕಿಂತಲೂ ಮುಖ್ಯವಾದುದೆಂದರೆ, ಹಿಂದೂಗಳು ಮತ್ತು ಮುಸಲ್ಮಾನರಿಬ್ಬರೂ ಸಂಪೂರ್ಣ ಐಕಮತ್ಯದಿಂದಿರಬೇಕು".

ಲಂಡನ್ನಿಗೆ ನಿಯೋಗ

೧೯೦೬

೧೯೦೬ರ ಅಕ್ಟೋಬರ್ ೨೦ರಂದು ಇಂಗ್ಲೆಂಡ್ ತಲುಪುತ್ತಿದ್ದಂತೆಯೇ ಗಾಂಧಿ ಕಾರ್ಯನಿರತರಾದರು. ವಸಾಹತುಗಳ ರಾಜ್ಯಕಾರ್ಯದರ್ಶಿ ಲಾರ್ಡ್ ಎಲ್ಗಿನ್ ಅವರಿಗೆ ಒಪ್ಪಿಸಬೇಕಾದ ಮನವಿ ಪತ್ರವನ್ನು ಜಹಜಿನಲ್ಲಿಯೇ ತಯಾರಿಸಲಾಗಿದ್ದಿತು.

ದಾದಾಭಾಯಿ ನವರೋಜಿಯವರನ್ನೂ ಅವರ ಮೂಲಕ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಬ್ರಿಟಿಷ್ ಸಮಿತಿಯ ಸದಸ್ಯರನ್ನೂ ಗಾಂಧಿ ಭೇಟಿಯಾದರು. ಅವರು ಸಮಿತಿಗೆ ದಕ್ಷಿಣ ಆಫ್ರಿಕಾದ ಸಮಸ್ಯೆಗಳ ಪರಿಚಯ ಮಾಡಿಕೊಟ್ಟರು. ತರುವಾಯ ಅವರು ಸರ್ ಮಂಚೇರ್ಜಿ ಭೌವನಗ್ರೀ ಮತ್ತು ಸರ್ ಲೆಪೆಲ್ ಗ್ರಿಫಿನ್–ಇವರುಗಳನ್ನು ಭೇಟಿ ಮಾಡಿದರು. ಗ್ರಿಫಿನ್ ಭಾರತದಲ್ಲಿ ಆಡಳಿತ ಅಧಿಕಾರಿಯಾಗಿದ್ದುದಲ್ಲದೆ ಅನೇಕ ವರ್ಷಗಳ ಕಾಲ ಲಂಡನ್ನಿನ ಈಸ್ಟ್ ಇಂಡಿಯಾ ಅಸೋಸಿಯೇಷನ್ ಅಧ್ಯಕ್ಷರಾಗಿದ್ದರು. ಸರ್ ಲೆಪೆಲ್, ಭಾರತದ ರಾಜಕೀಯ ಆಂದೋಲನಕ್ಕೆ ವಿರೋಧಿಯಾಗಿದ್ದರೂ, ಗಾಂಧಿಗೆ ನೆರವು ನೀಡಲು ಸಿದ್ಧರಾಗಿದ್ದರು.

ನವೆಂಬರ್ ೮ ರಂದು ಸರ್ ಲೆಪೆಲ್ ಅವರ ನಾಯಕತ್ವದಲ್ಲಿ ಗಾಂಧಿ ಮತ್ತು ಹೆಚ್. ಓ, ಅಲೀ ಅವರ ಜತೆಗೆ, ಲಾರ್ಡ್ ಸ್ಟಾನ್ಲಿ, ಸರ್ ಜಾರ್ಜ್ ಬರ್ಡ್‌ವುಡ್, ಮಿ. ಜೆ. ಡಿ. ರೀಸ್, ಸರ್ ಹೆನ್ರಿ ಕಾಟನ್, ಮಿ. ಹೆರಾಲ್ಡ್ ಕಾಕ್ಸ್, ದಾಧಾಭಾಯಿ ನವರೋಜೀ, ಸರ್ ಭೌವನಗ್ರೀ ಇವರುಗಳಿಂದ ಕೂಡಿದ ನಿಯೋಗ ಲಾರ್ಡ್ ಎಲ್ಗಿನ್ ಅವರನ್ನು ಸಂದರ್ಶಿಸಿತು. ಸರ್ ಲೆಪೆಲ್ ಹೀಗೆ ನುಡಿದರು: "ಯೆಹೂದ್ಯರಿಗೆ ಸಂಬಂಧಿಸಿದಂತೆ ರಷ್ಯಾ ದೇಶದ ಶಾಸನವನ್ನು ಬಿಟ್ಟರೆ, ಇದಕ್ಕೆ ಸಮನೆನ್ನುವ ಶಾಸನ ಇಂಗ್ಲೆಂಡಿನಲ್ಲಾಗಲೀ ಯೂರೋಪಿನಲ್ಲಾಗಲೀ ಇಲ್ಲ. ಇದಕ್ಕೆ ಸಾಟಿಯಾದುದನ್ನು ನಾವು ಕಾಣಬೇಕಾದರೆ, ಪ್ಲಾಂಟಾಜೆನೆಟ್‌ರ ಕಾಲಕ್ಕೆ ಹೋಗಬೇಕು".

ಇದರ ತರುವಾಯ ಮಾತನಾಡಿದ ಗಾಂಧಿ, ಬ್ರಿಟಿಷ್ ಭಾರತೀಯರನ್ನು ಬ್ರಿಟಿಷ್ ನಾಗರಿಕರಂತೆ ಪರಿಗಣಿಸಬೇಕೆಂದು ಒತ್ತಾಯ ಮಾಡಿದರು. ಬ್ರಿಟಿಷ್ ಭಾರತೀಯ ಸಮುದಾಯಕ್ಕೆ ಕನಿಷ್ಠವಾಗಿ ಮಾಡಬಹುದಾದುದೆಂದರೆ, ಈಗಿರುವ ಶಾಸನದ ನ್ಯೂನತೆ ಮತ್ತು ಮುಂದೆ ಮಾಡಬೇಕಾಗಿರುವ ಶಾಸನದ ಅಗತ್ಯತೆ–ಇವುಗಳ ತತ್ತ್ವವನ್ನು ಪರಿಶೀಲಿಸುವುದಕ್ಕಾಗಿ ಒಂದು ನಿಯೋಗ ರಚಿಸುವುದು–ಎಂದು ಮುಕ್ತಾಯ ಮಾಡಿದರು. ಲಾರ್ಡ್ ಎಲ್ಗಿನ್ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ತಮ್ಮ ಕಷ್ಟಗಳನ್ನು ತಿಳಿಸಿ, ತಾವು ಮಾಡಬಹುದಾದುದನ್ನೆಲ್ಲ ಮಾಡುವುದಾಗಿ ಮಾತು ಕೊಟ್ಟರು.

ಇದೇ ನಿಯೋಗದವರು ಭಾರತದ ರಾಜ್ಯಕಾರ್ಯದರ್ಶಿಯಾಗಿದ್ದ ಮಿ. ಮಾರ್ಲೆ ಯವರನ್ನು ಭೇಟಿ ಮಾಡಿದರು. ಅವರೂ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಇದರ ತರುವಾಯ ಗಾಂಧಿ, ಪ್ರಧಾನಮಂತ್ರಿ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್‌ಮನ್ ಅವರನ್ನು ಕಂಡರು.

ಗಾಂಧಿಯನ್ನು ಸಂಧಿಸುವ ಸಲುವಾಗಿ, ಭಾರತದ ವ್ಯವಹಾರಗಳಿಗೆ ಸಂಬಂಧಿಸಿದ ಸಾಮಾನ್ಯರ ಸಭೆಯ (House of Commons) ನೂರುಮಂದಿ ಸದಸ್ಯರ ಸಭೆಯನ್ನು ಕರೆಯಲು ಸರ್ ವಿಲಿಯಂ ಬರ್ನ್ಸ್ ಕಾರಣರಾದರು.

ಗಾಂಧಿ ಆರುವಾರಗಳ ಕಾಲ ಇಂಗ್ಲೆಂಡಿನಲ್ಲಿದ್ದರು. ಮತ್ತು ತಮ್ಮ ಅವಧಿಯ ಪ್ರತಿಯೊಂದು ನಿಮಿಷವನ್ನೂ ಉಪಯೋಗಿಸಿಕೊಂಡರು. ನಿಯೋಗದ ವೆಚ್ಚದ ಬಗೆಗೆ ಪ್ರತಿಯೊಂದು ಅಂಶವನ್ನೂ ಅವರು ಅತ್ಯಂತ ಎಚ್ಚರಿಕೆಯಿಂದ ಇಟ್ಟರು. ಜಹಜಿನಲ್ಲಿ ಪ್ರಯಾಣ ಮಾಡುವಾಗ ಸೋಡಾ ಕೊಂಡುಕೊಂಡಂತಹ ಸಣ್ಣ ವಿಷಯಕ್ಕೂ ಅವರು ರಶೀತಿಯನ್ನಿಟ್ಟರು.

ಭಾರತೀಯ ವಿದ್ಯಾರ್ಥಿಗಳು ಗಾಂಧಿಗೆ ನಾನಾ ರೀತಿಗಳಲ್ಲಿ ಅಂದರೆ ವಿಳಾಸ ಬರೆಯುವುದು, ಅಂಚೆ ಚೀಟಿ ಹಚ್ಚುವುದು, ಅಥವಾ ಪತ್ರಗಳನ್ನು ಅಂಚೆ ಪೆಟ್ಟಿಗೆಗೆ ಹಾಕುವುದು– ಈ ಮೂಲಕ ನೆರವನ್ನಿತ್ತರು. ಮಿ. ಸೈಮಂಡ್ ಎಂಬ ಇಂಗ್ಲಿಷ್ ಗೆಳೆಯ ಪ್ರತಿದಿನ ರಾತ್ರಿ ಹನ್ನೆರಡು ಅಥವಾ ಒಂದು ಘಂಟೆಯ ವರೆಗೆ ನಿಸ್ವಾರ್ಥಿಯಾಗಿ ಬೆರಳಚ್ಚಿನ ಕೆಲಸವನ್ನು ಮಾಡಿಕೊಟ್ಟನು.

'ಟೈಂಸ್' ಪತ್ರಿಕೆ ಗಾಂಧಿ ಬರೆದ ಪತ್ರವನ್ನು ಪ್ರಕಟಿಸುವ ಸೌಜನ್ಯ ತೋರಿತು. ಗಾಂಧಿಯವರಿಂದ ದಕ್ಷಿಣ ಆಫ್ರಿಕಾದ ಭಾರತೀಯರ ವಿಷಯವನ್ನು ಕೇಳಿ ಆ ಸಮಸ್ಯೆ ತನಗೆ ಮನವಟ್ಟಾದ ಮೇಲೆ 'ಡೈಲಿ ನ್ಯೂಸ್' ಪತ್ರಿಕೆಯ ಸಂಪಾದಕ ಒಂದು ದೀರ್ಘವಾದ ಅನುಕೂಲಕರ ಲೇಖನವನ್ನು ತನ್ನ ಪತ್ರಿಕೆಯಲ್ಲಿ ಬರೆದನು. 'ಟ್ರೈಬ್ಯೂನ್', 'ಮಾರ್ನಿಂಗ್ ಲೀಡರ್' ಮತ್ತು 'ಸೌತ್ ಆಫ್ರಿಕಾ' ಈ ಪತ್ರಿಕೆಗಳು ಅವರಿಗೆ ಸಂದರ್ಶನವಿತ್ತುವು. ಇವುಗಳನ್ನು ಬಿಟ್ಟರೆ, ಇನ್ನು ಉಳಿದ ಪತ್ರಿಕೆಗಳು ನಿರ್ಲಕ್ಷ್ಯದಿಂದಲೋ ಅಥವಾ ವಿರೋಧವಾಗಿಯೋ ಇದ್ದುವು.

ಗಾಂಧಿ ಇಂಗ್ಲೆಂಡನ್ನು ಬಿಡುವ ಮುನ್ನ, ಅವರು ಇಳಿದುಕೊಂಡಿದ್ದ ಸೆಸಿಲ್ ಹೋಟಲಿನಲ್ಲಿ ತಮ್ಮ ನಿಯೋಗಕ್ಕೆ ನೆರವಿತ್ತ ಗೆಳೆಯರ ಗೌರವಾರ್ಥವಾಗಿ ಬೆಳಗಿನ ಉಪಹಾರವನ್ನಿತ್ತರು. ಈ ಸಂದರ್ಭದಲ್ಲಿಯೇ 'ಸೌತ್ ಆಫ್ರಿಕಾ ಬ್ರಿಟಿಷ್ ಇಂಡಿಯಾ ಕಮಿಟಿ' ರಚನೆಯಾದುದು. ಸರ್ ಮಂಚೇರ್ಜಿ ಭೌನಗ್ರೀ ಅದರ ಅಧ್ಯಕ್ಷರಾಗಿಯೂ ಮತ್ತು ಮಿ. ರಿಚ್ ಕಾರ್ಯದರ್ಶಿಯಾಗಿ ಪ್ರಕಟನೆಯ ಹೊಣೆಯನ್ನೂ ಹೊತ್ತರು.

ಗಾಂಧಿ ಡಿಸೆಂಬರ್ ತಿಂಗಳಿನಲ್ಲಿ ದಕ್ಷಿಣ ಆಫ್ರಿಕಾಕ್ಕೆ ಮರು ಪ್ರಯಾಣ ಬೆಳಸಿದರು. ಅವರಿನ್ನೂ ಸಮುದ್ರದ ಮೇಲೆ ಪ್ರಯಾಣ ಮಾಡುತ್ತಿದ್ದಾಗಲೇ ಒಂದು ಪ್ರಕಟನೆ ಬಂದಿತು: "ಟ್ರಾನ್ಸ್‌ವಾಲ್ ಏಷ್ಯಾಟಿಕ್ ಮಸೂದೆಯನ್ನು ಕಾರ್ಯರೂಪಕ್ಕೆ

ತರುವುದನ್ನು ಕುರಿತು ಸಾಮ್ರಾಟ ದೊರೆಗೆ ಲಾರ್ಡ್ ಎಲ್ಗಿನ್‌ರವರು ಇನ್ನು ಹೆಚ್ಚಿನ ಪರಿಶೀಲನೆಯಿಲ್ಲದೆ, ಸಲಹೆ ನೀಡಲು ಅಸಮರ್ಥರಾಗಿದ್ದಾರೆ." ಅಲ್ಲದೆ ಆಜ್ಞೆಯ ವಿಧಿಗಳು ಮುಂದುವರಿಸಲ್ಪಡುವುದಿಲ್ಲವೆಂದೂ ಘೋಷಿಸಲಾಯಿತು. ಇಷ್ಟರಮಟ್ಟಿಗೆ ಗಾಂಧೀ ನಿಯೋಗಕ್ಕೆ ಯಶಸ್ಸು ದೊರೆಯಿತು. ಇಂಗ್ಲೆಂಡಿನ ಲಿಬರಲ್ ಪಕ್ಷದ ಸರಕಾರ ಈ ಕರಾಳ ವಿಧಿಗೆ ಅಂಗೀಕಾರವಿತ್ತು ತನ್ನ ಹೆಸರನ್ನು ಕೆಡಿಸಿಕೊಳ್ಳಲು ಇಷ್ಟಪಡಲಿಲ್ಲ. ಏಕೆಂದರೆ, ಶೀಘ್ರದಲ್ಲಿಯೇ ಟ್ರಾನ್ಸ್‌ವಾಲ್ ಸರ್ಕಾರ, ಪ್ರತಿನಿಧಿ ಆಡಳಿತವನ್ನು ಪಡೆದೊಡನೆ ತನಗೆ ಅಗತ್ಯವಾದುದನ್ನು ತಾನೇ ಮಾಡಿಕೊಳ್ಳುವುದೆಂಬುದು ಅದಕ್ಕೆ ತಿಳಿದಿತ್ತು.

೧೯೦೬ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖವಾದ ವರ್ಷ. ಬಂಗಾಳದ ವಿಭಜನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಜನತೆ ಕೆರಳಿದ್ದಿತು. ಡಿಸೆಂಬರ್ ತಿಂಗಳಿನಲ್ಲಿ ಕಲ್ಕತ್ತಾದಲ್ಲಿ ಸಭೆ ಸೇರಿದ ಕಾಂಗ್ರೆಸ್ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿತು. ಅಧ್ಯಕ್ಷತೆ ವಹಿಸಿದ್ದ ದಾದಾಭಾಯಿ, ಲಾರ್ಡ್ ಕರ್ಜನ್ನರ ಆಡಳಿತದ ಬಗೆಗೆ ಸಿಟ್ಟಿಗೆದ್ದು, ಭಾರತೀಯರ ರಾಜಕೀಯ ಗುರಿ 'ಸ್ವರಾಜ್ಯ'ವೆಂದು ಘೋಷಿಸಿದರು. ಕಾಂಗ್ರೆಸ್ ವೇದಿಕೆಯಿಂದ ಮೊಟ್ಟಮೊದಲನೆಯ ಸಾರಿ ಹೊರಬಿದ್ದ ಆ ಪದ, ವಾತಾವರಣದಲ್ಲಿ ವಿದ್ಯುತ್ ಪ್ರವಾಹವನ್ನು ಹರಿಸಿತು. ೨೦,೦೦೦ ಮಂದಿ ನೆರೆದಿದ್ದ ಆ ಬೃಹತ್ ಸಭೆ ಎದ್ದು ನಿಂತು, 'ಸ್ವರಾಜ್ಯ' ಎಂದು ಪ್ರತಿಧ್ವನಿಗೈದಿತು. ಎಂಬತ್ತೆರಡು ವಯಸ್ಸಿನ ದಾದಾಭಾಯಿ ತಮ್ಮ ಪೂರ್ಣ ಭಾಷಣವನ್ನು ಓದಲು ಅಶಕ್ತರಾಗಿದ್ದರು. ಗೋಖಲೆಯವರು ಅವರ ಪರವಾಗಿ ಅದನ್ನು ಓದಿದರು. ಅದು ಭಾವೋದ್ದೀಪಕವಾಗಿದ್ದು, ಅಂಕಿ ಅಂಶಗಳಿಂದ ಕೂಡಿದ ಅಮೋಘವಾದ ಭಾಷಣವಾಗಿತ್ತು. ದಾದಾಭಾಯಿ ಹಿಂದೂ–ಮುಸ್ಲಿಂ ಐಕ್ಯವನ್ನು ಕುರಿತು ವಿಶೇಷವಾಗಿ ಒತ್ತಿ ನುಡಿದಿದ್ದರು. ಅದು ಭಾರತದ ಪ್ರಗತಿಗೆ ಅಗತ್ಯವೆಂದು ಸೂಚಿಸಿದ್ದರು.

'ಸ್ವರಾಜ್ಯ'ವನ್ನಲ್ಲದೆ, 'ವಂದೇ ಮಾತರಂ' ಗೀತೆಯನ್ನೂ ಆ ಕಾಂಗ್ರೆಸ್ ಜನಪ್ರಿಯಗೊಳಿಸಿತು. ಅದನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಥಮ ಬಾರಿಗೆ ಹಾಡಲಾಯಿತು. ಹೆಣ್ಣು ಮಕ್ಕಳು ಮೇಳದಲ್ಲಿ ಹಾಡಿದರು. ಸಭಿಕರು ಎದ್ದು ನಿಂತು ಗೌರವ ಸೂಚಿಸಿದರು.

ಬ್ರಿಟಿಷ್ ವಸ್ತುಗಳ ಬಹಿಷ್ಕಾರದ ಬಗೆಗೆ ಅಂಬಿಕಾಚರಣ್ ಮುಜುಂದಾರ್ ಮತ್ತು ಬಿಪಿನ್‌ಚಂದ್ರಪಾಲ್ ಭಾವಪೂರಿತವಾಗಿ ಮಾತನಾಡಿದರು. ಬಂಗಾಳದ ವಿಭಜನೆಯ ವಿರುದ್ಧ ಜನತೆಯ ಕ್ರೋಧವನ್ನು ವ್ಯಕ್ತಪಡಿಸುವ ಬಹಿಷ್ಕಾರ ಆಂದೋಲನ ನ್ಯಾಯಯುತವಾಗಿದ್ದಿತೆಂದೂ, ಇದೆಯೆಂದೂ, ಗೋಖಲೆಯವರು ಘೋಷಿಸಿದರು. ಇನ್ನೊಂದು ನಿರ್ಣಯ ರಾಷ್ಟ್ರೀಯ ವಿಧಾನದ ರಾಷ್ಟ್ರೀಯ ಶಿಕ್ಷಣವನ್ನು ರಾಷ್ಟ್ರೀಯ ಹತೋಟಿಯಲ್ಲಿ ವ್ಯವಸ್ಥೆ ಮಾಡುವ ಕಾಲ ಸನ್ನಿಹಿತವಾಗಿದೆಯೆಂದು ಹೇಳಿತು.

ಸ್ವದೇಶೀ ನಿರ್ಣಯ ಕುರಿತು ತಿಲಕ್ ಮತ್ತು ಲಜಪತ್‌ರಾಯ್ ಶಕ್ತಿಯುತವಾಗಿ ಮಾತನಾಡಿದರು.

ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ, ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಆಗುತ್ತಿದ್ದ ಅನ್ಯಾಯಗಳ ಬಗೆಗೆ ಪ್ರಬಲವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿತು.

ಸತ್ಯಾಗ್ರಹದ ಜನನ

೧೯೦೭

ಗಾಂಧಿ ಇಂಗ್ಲೆಂಡಿಗೆ ನಿಯೋಗ ಹೋಗಿ ಬಂದುದರ ಪರಿಣಾಮ, ಆ ಕರಾಳ ದಿನವನ್ನು ಸ್ವಲ್ಪ ಮುಂದಕ್ಕೆ ತಳ್ಳಿತು. ೧೯೦೭ರ ಜನವರಿ ೧ರಂದು ಟ್ರಾನ್ಸ್‌ವಾಲ್ ಮತ್ತು ಆರೇಂಜ್ ವಸಾಹತುಗಳು ಸ್ವಯಮಾಡಳಿತವನ್ನು ಪಡೆದುವು. ಟ್ರಾನ್ಸ್‌ವಾಲ್ ಸಂಸತ್ತಿನ ಪ್ರಥಮ ಅಧಿವೇಶನ ೧೯೦೬ರ ಆಜ್ಞೆಯನ್ನು ಸಮಗ್ರವಾಗಿ ಅಂಗೀಕರಿಸಿತು. ೧೯೦೭ರ ಮಾರ್ಚ್ ೨೧ರಂದು ಒಂದೇ ಅಧಿವೇಶನದಲ್ಲಿ ಮಸೂದೆಯ ಎಲ್ಲ ಹಂತಗಳೂ ಮುಗಿದು ಅದು ಶಾಸನವಾಗಿ ಬಿಟ್ಟಿತು. ಮೇ ತಿಂಗಳಿನಲ್ಲಿ ಅದು ಸಾಮ್ರಾಟನ ಒಪ್ಪಿಗೆಯನ್ನು ಪಡೆಯಿತು.

ಶಾಸನವು ಜುಲೈ ೧ರಿಂದ ಆಚರಣೆಗೆ ಬರಬೇಕಾಗಿತ್ತು. ಭಾರತೀಯರು ಜುಲೈ ೩೧ರವೊಳಗೆ ದಾಖಲಾತಿ ಮಾಡಿಸಿಕೊಳ್ಳಬೇಕಾಗಿತ್ತು. ಗಾಂಧಿ ಈ ಸವಾಲನ್ನು ಸ್ವಾಗತಿಸುತ್ತಾ ಹೀಗೆ ನುಡಿದರು: "ನಾವು ಟ್ರಾನ್ಸ್‌ವಾಲ್ ಸರಕಾರವನ್ನು ಅದರ ಧೈರ್ಯ ಮತ್ತು ನಿಷ್ಠೆಗಾಗಿ ಅಭಿನಂದಿಸಬೇಕು. ಅಂತೆಯೇ ಈ ಶಾಸನ ನಮ್ಮ ಮೇಲೆ ವಿಧಿಸುವ ಗುಲಾಮಗಿರಿಯ ಅರಿವು ನಮಗಿದ್ದರೆ ನಾವದನ್ನು ಎದುರಿಸಿ, ಅದಕ್ಕೆ ಮಣಿಯಲು ನಿರಾಕರಿಸಬೇಕು. ಮಾತಿಗಿಂತ ಹೆಚ್ಚಾಗಿ ಕಾರ್ಯದ ಬೆಲೆಯನ್ನು ಅರಿತಿರುವ ಧೀರ ಸರಕಾರ, ಧೀರತನಕ್ಕೂ ಮತ್ತು ಪ್ರತ್ಯಕ್ಷ ಕ್ರಿಯೆಗೂ ಮಂತ್ರ ಉತ್ತರ ನೀಡಬಲ್ಲುದು".

ಟ್ರಾನ್ಸ್‌ವಾಲ್ ಸರಕಾರ, ನಾಯಿಯ ಕತ್ತುಪಟ್ಟಿಯನ್ನು ಭಾರತೀಯರ ಕುತ್ತಿಗೆಗೆ ಎಸೆಯಲು ಯತ್ನಿಸುತ್ತಿದ್ದಿತು; ಭಾರತೀಯರು ಅದನ್ನು ಪ್ರತಿಭಟಿಸಲು ಸಿದ್ಧರಾಗುತ್ತಿದ್ದರು. ಈ ಹೊಸ ಪರಿಸ್ಥಿತಿಯನ್ನು ಕುರಿತು, ಗಾಂಧಿ, ಇಂಗ್ಲೆಂಡಿನಲ್ಲಿಯೂ ಮತ್ತು ಭಾರತದಲ್ಲಿಯೂ ಇದ್ದ ಗೆಳೆಯರಿಗೆ ಪತ್ರ ಬರೆದು ತಿಳಿಸುತ್ತಿದ್ದರು. ದಾದಾಭಾಯಿ ಪ್ರತಿವಾರವೂ ತಪ್ಪದೆ ಅವರಿಂದ ಪತ್ರಗಳನ್ನು ಪಡೆಯುತ್ತಿದ್ದರು.

'ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್' ಬಹಳ ಮಂದಿ ಸದಸ್ಯರನ್ನು ಹೊಂದಿತ್ತು. ಗಾಂಧಿ ಅವರನ್ನು ನೇರವಾಗಿ ಹೋರಾಟದಲ್ಲಿ ತೊಡಗಿಸಲು ಇಚ್ಛಿಸಲಿಲ್ಲ. ಆದುದರಿಂದ ಅವರು 'ಸೌಮ್ಯ ಪ್ರತಿಭಟನಾ ಸಂಘ'ವನ್ನು ಸ್ಥಾಪಿಸಿದರು. ಅದು ಅನೇಕ ಸದಸ್ಯರನ್ನು ಆಕರ್ಷಿಸಿತು. ಅವರ ಆಶ್ರಯದಲ್ಲಿ ಸಭೆಗಳು ಬಯಲಿನಲ್ಲಿ ನಡೆಯುತ್ತಿದ್ದುವು. ಅನೇಕರನ್ನು ಆಕರ್ಷಿಸುವುದಕ್ಕೂ ಮತ್ತು ವೆಚ್ಚವನ್ನು ಕಡಿಮೆ ಮಾಡುವುದಕ್ಕೂ ಇದು ಸಹಾಯಕವಾಗಿತ್ತು. ಪ್ರತಿಯೊಂದು ಸಭೆಯಲ್ಲಿಯೂ

ರಾಜಕೀಯ ಪರಿಸ್ಥಿತಿಯನ್ನು ವಿವರಿಸಲಾಗುತ್ತಿತ್ತು. ಪ್ರತಿಭಟನೆಯ ಪ್ರತಿಜ್ಞೆಯನ್ನು ಮತ್ತೆ ಹೊಸದಾಗಿ ತೆಗೆದುಕೊಳ್ಳಲಾಗುತ್ತಿತ್ತು.

ಸರಕಾರವು ಒಂದೊಂದು ಜಿಲ್ಲೆಯಾಗಿ ದಾಖಲೆಯ ಕಾರ್ಯವನ್ನು ಆಚರಣೆಗೆ ತರಲು ನಿಯೋಜಿಸಿತ್ತು. ಭಾರತೀಯರ ವ್ಯವಸ್ಥೆಯ ದೃಷ್ಟಿಯಿಂದ ಪ್ರಿಟೋರಿಯಾ ಬಹಳ ಬಲಹೀನವೆಂದು ಭಾವಿಸಿದ ಸರಕಾರ, ಜುಲೈ ೧ ರಂದು ಅಲ್ಲಿ ಒಂದು ರಹದಾರಿ ನೀಡುವ ಕಾರ್ಯಾಲಯವನ್ನು ತೆರೆಯಿತು; ಒಂದು ತಿಂಗಳು ಕಾಲದೊಳಗೆ ಭಾರತೀಯರು ದಾಖಲಾತಿ ಮಾಡಿಸಿಕೊಳ್ಳಬೇಕೆಂದು ಪ್ರಕಟನೆಯನ್ನು ಹೊರಡಿಸಿತು.

ಭಾರತೀಯ ಪ್ರಚಾರಕರು ಮನೆಮನೆಗೆ ಹೋಗಿ ದಾಖಲಾತಿಯ ಅರ್ಥವನ್ನು ವಿವರಿಸತೊಡಗಿದರು. "ಬಲಾತ್ಕಾರವೆನ್ನುವುದು ನಮ್ಮ ಹೋರಾಟದ ಸತ್ವಕ್ಕೆ ವಿರೋಧವಾದುದು. ದಾಖಲಾತಿ ನಿಬಂಧನೆಯ ಕಟ್ಟಿನಿಂದ ನಾವು ಸ್ವತಂತ್ರರಾಗಲು ಅಪೇಕ್ಷಿಸುತ್ತೇವೆ. ಬೇರೆಯಾವುದಕ್ಕೂ ಅದನ್ನು ವಿನಿಮಯ ಮಾಡಲು ಸಿದ್ಧರಿಲ್ಲ" ಎಂದು ಗಾಂಧಿ ನುಡಿದರು. ಪ್ರಿಟೋರಿಯಾದಲ್ಲೆಲ್ಲ ಪ್ರದರ್ಶನ ಪತ್ರಗಳು ತುಂಬಿ ಹೋದುವು. "ರಹದಾರಿ ಕಾರ್ಯಾಲಯವನ್ನು ಬಹಿಷ್ಕರಿಸಿ, ಸೆರೆಮನೆಗೆ ಹೋಗುವುದರಿಂದ ನಾವು ಪ್ರತಿಭಟಿಸಿದಂತಲ್ಲ. ನಮ್ಮ ಸಾರ್ವತ್ರಿಕ ಒಳಿತಿಗಾಗಿಯೂ ಮತ್ತು ಆತ್ಮಗೌರವಕ್ಕಾಗಿಯೂ ಕಷ್ಟವನ್ನು ಅನುಭವಿಸುತ್ತೇವೆ. ರಾಜನಿಗೆ ನಿಷ್ಠೆಯನ್ನು ತೋರಿಸಬೇಕಾದರೆ, ರಾಜನಿಗೂ ರಾಜನಾದ ಶಕ್ತಿಗೆ ನಿಷ್ಠೆಯನ್ನು ತೋರಿಸಬೇಕು–ಭಾರತೀಯರೇ ಸ್ವತಂತ್ರರಾಗಿ".ಇದು ಒಕ್ಕಣೆಯಾಗಿತ್ತು. ಬಹಿಷ್ಕಾರವು ಪೂರ್ಣವಾಗಿ ಯಶಸ್ವಿಯಾಯಿತು. ೧೫೦೦ ಜನಸಂಖ್ಯೆಯಲ್ಲಿ ಸುಮಾರು ೧೦೦ ಮಂದಿ ಮಾತ್ರ ದಾಖಲಾತಿ ಮಾಡಿಸಿಕೊಂಡರು.

ರಹದಾರಿ ನೀಡುವ ಕಾರ್ಯಾಲಯಗಳು ಒಂದೊಂದಾಗಿ ಎಲ್ಲ ಭಾರತೀಯ ಪ್ರದೇಶಗಳಲ್ಲಿಯೂ–ಜೆರ್ಮಿಸ್ಟನ್, ಪೀಟರ್ಸ್‌ಬರ್ಗ್, ಕ್ರೂಜರ್ ಡ್ರೋರ್ಪ್,ವೊಲ್ಕ್ ರಸ್ಟ್. ಜೊಹಾನ್ಸ್‌ಬರ್ಗ್ ಮತ್ತು ಇತರ ಕಡೆಗಳಲೆಲ್ಲ ಪ್ರಾರಂಭವಾದುವು ಆದರೆ ಫಲ ಉತ್ಸಾಹ ರಹಿತವಾಗಿತ್ತು. ಭಾರತೀಯ ಜನಾಂಗವು ಪ್ರತಿಯೊಂದು ರಹದಾರಿ ನೀಡುವ ಕಾರ್ಯಾಲಯವನ್ನು ಬಹಿಷ್ಕರಿಸುವಂತೆ ಬಹಿರಂಗವಾಗಿ ಪಿಕೆಟ್ ಮಾಡಲು ನಿರ್ಧರಿಸಿತು. ಸ್ವಯಂಸೇವಕರಿಗೆ ಬಿಲ್ಲೆಗಳನ್ನು ಕೊಡಲಾಗಿತ್ತು. ಯಾವ ಭಾರತೀಯನೇ ಆಗಲಿ, ರಹದಾರಿಯನ್ನು ಪಡೆದರೆ ಅವನ ವಿಷಯವಾಗಿ ಅವಿನಯವನ್ನು ತೋರಿಸಬಾರದೆಂದು ಕಟ್ಟಾಯವಾದ ಸೂಚನೆಗಳನ್ನು ಕೊಡಲಾಗಿತ್ತು. ಆತನ ಹೆಸರನ್ನು ಕೇಳಬೇಕಾಗಿತ್ತು. ಆತ ಅದನ್ನು ತಿಳಿಸದಿದ್ದರೆ, ಯಾವ ಕಾರಣಕ್ಕೂ ಅವಿನಯ ಅಥವಾ ಒಂಸೆಯನ್ನು ತೋರಿಸಬಾರದೆಂದು ತಿಳಿಸಲಾಗಿತ್ತು. ರಹದಾರಿಯ ಕಾರ್ಯಾಲಯಕ್ಕೆ ಹೋಗುವ ಪ್ರತಿಯೊಬ್ಬ ಭಾರತೀಯನಿಗೂ ಒಂದು ಅಚ್ಚಾದ ಕರಪತ್ರವನ್ನು ಕೊಟ್ಟು ಕರಾಳ ಶಾಸನಕ್ಕೆ ಶರಣಾಗುವುದರಿಂದ ಸಂಭವಿಸುವ ಅಪಾಯಗಳನ್ನೆಲ್ಲ ತಿಳಿಸಿ ಹೇಳಬೇಕು; ಪೋಲೀಸಿನವರು ಸ್ವಯಂ ಸೇವಕರನ್ನು ಥಳಿಸಿದರೆ ಅದನ್ನು ಶಾಂತವಾಗಿ

ಸಹಿಸಬೇಕು; ಮತ್ತು ಬಂಧಿಸಿದರೆ ಸಂತಸದಿಂದ ಶರಣಾಗಬೇಕು–ಎಂದು ನಿರೀಕ್ಷಿಸಲಾಗಿತ್ತು. ಪ್ರತಿಯೊಂದು ಪಿಕೆಟಿಂಗ್ ತಂಡಕ್ಕೂ ಒಬ್ಬ ನಾಯಕನಿರುತ್ತಿದ್ದನು. ಹನ್ನೆರಡು ವಯಸ್ಸಿಗೆ ಮೀರಿದವರೆಲ್ಲ ಪಿಕೆಟಿಂಗ್ ಕಾರ್ಯಕ್ಕೆ ಸೇರಿಕೊಳ್ಳಬಹುದಾಗಿತ್ತು. ಆದರೆ ಸ್ಥಳೀಯ ಕಾರ್ಯಕರ್ತರಿಗೆ ಪರಿಚಯವಿಲ್ಲದ ಯಾರೊಬ್ಬನನ್ನೂ ಸೇರಿಸಿಕೊಳ್ಳುತ್ತಿರಲಿಲ್ಲ.

ಜುಲೈ ೩೧ರಂದು, ದಾಖಲಾತಿಯ ಕಡೆಯ ದಿನ, ಪ್ರಿಟೋರಿಯಾದಲ್ಲಿ ಭಾರತೀಯರ ಸಾರ್ವಜನಿಕ ಸಭೆಯನ್ನು ಕರೆಯಲಾಗಿತ್ತು. ಒಂದು ಮಸೀದಿಯ ಬಯಲು ಸ್ಥಳದಲ್ಲಿ ೨೦೦೦ ಮಂದಿ ಭಾರತೀಯರು ತಮ್ಮ ಪ್ರತಿಭಟನೆಯನ್ನು ಸೂಚಿಸಲು ಸಭೆ ಸೇರಿದ್ದರು. ಟ್ರಾನ್ಸ್‌ವಾಲಿನ ೧೩,೦೦೦ ಭಾರತೀಯರನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಹಾಜರಿದ್ದರು. ಅಲ್ಲಿ ಸಣ್ಣ ವೇದಿಕೆಯಿತ್ತು. ಅಧ್ಯಕ್ಷ, ಭಾಷಣಕಾರ ಮತ್ತು ಕೆಲವರು ಗೆಳೆಯರಿಗೆ ಮಾತ್ರ ಅಲ್ಲಿ ಸ್ಥಳವಿತ್ತು. ಒಂದು ಸಣ್ಣ ಮೇಜು ಮತ್ತು ಕುರ್ಚಿಗಳು ಇದ್ದುವು. ಪ್ರೇಕ್ಷಕರೆಲ್ಲ ನೆಲದ ಮೇಲೆ ಕುಳಿತುಕೊಳ್ಳಬೇಕಾಗಿತ್ತು. ಬ್ರಿಟಿಷ್ ಅಸೋಸಿಯೇಷನ್ನಿನ ತಾತ್ಕಾಲಿಕ ಅಧ್ಯಕ್ಷ ಯೂಸುಫ್ ಇಸ್ಮೇಲ್ ಮಿಯಾ ಅಧ್ಯಕ್ಷತೆ ವಹಿಸಿದ್ದರು. ಜನರಲ್ ಬೋಥಾ ಅವರು ಕಳಿಸಿದ್ದ ಮಿ. ವಿಲಿಯಂ ಹಾಸ್ಕಿನ್ ಹೀಗೆ ಭಾಷಣ ಮಾಡಿದರು: "ಭಾರತೀಯರು ತಮ್ಮಿಂದ ಸಾಧ್ಯವಾಗುವುದನ್ನೆಲ್ಲ ಮಾಡಿ, ತಮ್ಮ ಪರಾಕ್ರಮವನ್ನು ತೋರಿಸಿದ್ದಾರೆ. ಈಗ ಅವರ ವಿರೋಧ ವಿಫಲವಾಗಿರುವುದರಿಂದ ಮತ್ತು ಶಾಸನ ಅಂಗೀಕಾರವಾಗಿರುವುದರಿಂದ, ಭಾರತೀಯ ಜನಾಂಗವು ಅದಕ್ಕೆ ಅಧೀನವಾಗಿ ತಮ್ಮ ಸ್ವಾಮಿನಿಷ್ಠೆಯನ್ನೂ ಮತ್ತು ಶಾಂತಿ ಪ್ರಿಯತೆಯನ್ನೂ ತೋರಿಸಬೇಕು. ದಾಖಲಾತಿ ಶಾಸನಕ್ಕೆ ಸಂಬಂಧಿಸಿದಂತೆ, ಬಿನ್ನವಿಸಬಹುದಾದ ಯಾವುದೇ ಸಣ್ಣಪುಟ್ಟ ವಿಧಿಗಳ ಬದಲಾವಣೆಯನ್ನು ಜನರಲ್ ಸ್ಮಟ್ಸ್ ಅವರು ಎಚ್ಚರಿಕೆಯಿಂದ ಪರಿಶೀಲಿಸುತ್ತಾರೆ. ಟ್ರಾನ್ಸ್‌ವಾಲ್ ಸರಕಾರವು ಈ ಸರಕಾರಕ್ಕೆ ಸಂಬಂಧಿಸಿದಂತೆ ಅಚಲವೆಂದು ನನಗೆ ಗೊತ್ತು. ಇದನ್ನು ವಿರೋಧಿಸುವುದೆಂದರೆ, ಗೋಡೆಗೆ ತಲೆಯನ್ನು ಕುಟ್ಟಿಕೊಂಡಂತೆಯೇ ಸರಿ". ಗಾಂಧಿ, ಹಾಸ್ಕಿನ್ ಅವರ ಭಾಷಣವನ್ನು ಸಭಿಕರಿಗೆ ಭಾಷಾಂತರಿಸಿ ಹೇಳಿದರು. ಆದರೆ ತಮ್ಮ ಮಾತಿನಲ್ಲಿ ಅವರಿಗೆ ಎಚ್ಚರಿಸಿದರು: "ನಾವು ಶಾಸನಕ್ಕೆ ಶರಣು ಹೋದರೆ, ಇದೇ ಕಡೆಯೆಂಬ ಯಾವ ಭರವಸೆಯೂ ಇಲ್ಲ. ಅಂಥ ಶಾಸನದ ಸಹಜ ಪರಿಣಾಮಗಳೆಂದರೆ ಪ್ರತ್ಯೇಕ ನಿವಾಸ ಸ್ಥಳಗಳಿಗೆ ವರ್ಗಾವಣೆ: ಕಡೆಗೆ ದೇಶದಿಂದ ಉಚ್ಚಾಟನೆಯೂ ಆಗಬಹುದು,"

"ಭಾರತೀಯರ ಪ್ರತಿಭಟನೆಯಿಂದ ಅಹಿತ ಪರಿಣಾಮಗಳುಂಟಾದರೆ ಅದಕ್ಕೆ ಅವರೇ ಮತ್ತು ಅವರ ಮುಖಂಡರೇ ತಪ್ಪಿತಸ್ಥರು" ಎಂದು ಜನರಲ್ ಸ್ಮಟ್ಸ್ ಘೋಷಿಸಿದರು. ಯಾವ ಭಾರತೀಯನೇ ಆಗಲಿ, ನಿಗದಿಯಾದ ತಾರೀಕು ಮುಗಿಯುವುದರೊಳಗೆ ದಾಖಲಾತಿ ಮಾಡಿಸಿಕೊಳ್ಳದಿದ್ದರೆ, ಗಡಿಪಾರು ಮಾಡಲಾಗುವುದೆಂದೂ ಎಚ್ಚರಿಸಿದರು. ದಾಖಲಾತಿ ಆದ ಹೊರತು ವ್ಯಾಪಾರಕ್ಕೆ ಪರವಾನಿಗೆಯನ್ನು

ಕೊಡುತ್ತಿರಲಿಲ್ಲ; ಅಂದರೆ, ಎಲ್ಲ ಭಾರತೀಯರೂ ತಮ್ಮ ಅಂಗಡಿಗಳನ್ನು ಮುಚ್ಚ ಬೇಕಾಗಿತ್ತು. "ಈ ದೇಶವನ್ನು ಬಿಳಿಯ ಜನರ ದೇಶವನ್ನಾಗಿ ಮಾಡಲು ಸರಕಾರ ಸಂಕಲ್ಪ ಮಾಡಿದೆ. ಈ ದಿಸೆಯಲ್ಲಿ ನಮಗೆ ಎಷ್ಟೇ ಕಷ್ಟ ಬಂದರೂ ನಾವಿಟ್ಟಿರುವ ಹೆಜ್ಜೆಯನ್ನು ಸಮರ್ಥಿಸಿಕೊಳ್ಳುತ್ತೇವೆ"–ಎಂದು ಸ್ಮಟ್ಸ್ ಘೋಷಿಸಿದರು.

ಯಾವ ಬೆದರಿಕೆಯೂ ಭಾರತೀಯರನ್ನೂ ಮತ್ತು ಚೀನೀಯರನ್ನೂ ದಾಖಲಾತಿ ಮಾಡಿಸಿಕೊಳ್ಳಲು ಪ್ರೇರಿಸುವಂತಿರಲಿಲ್ಲ. ಜೊಹಾನ್ಸ್‌ಬರ್ಗ್‌ನ ಒಂದು ಸಗಟು ವ್ಯಾಪಾರ ಸಂಸ್ಥೆಯು ಬಹಳ ಮಂದಿ ಚೀನೀ ಗಿರಾಕಿಗಳನ್ನು ಹೊಂದಿದ್ದಿತು. ದಾಖಲಾತಿ ಮಾಡಿಸಿ ಕೊಂಡ ಹೊರತು ತಾನು ಹೊಸದಾಗಿ ಸಾಲ ಕೊಡುವುದಿಲ್ಲವೆಂದು ಹೇಳಿ ಬಿಟ್ಟಿತು. ಅಂತೆಯೇ ಗಿರಾಕಿಗಳು ಸಹ ತಮ್ಮ ಹೆಸರಿನಲ್ಲಿದ್ದ ಮೊತ್ತವನ್ನೆಲ್ಲ ತಿಳಿಸಿಬಿಡಬೇಕೆಂದೂ ಅದನ್ನು ತತ್‌ಕ್ಷಣ ಕೊಟ್ಟು ಬಿಡುವುದಾಗಿಯೂ ಹೇಳಿ ಪೂರ್ಣ ಬಹಿಷ್ಕಾರದ ಬೆದರಿಕೆ ಹಾಕಿದರು. ಸಂಸ್ಥೆಯು ಕ್ಷಮೆ ಬೇಡಿ ದಾರಿಗೆ ಬಂದಿತು. ಡರ್ಬಾನಿನ ಒಂದು ಐರೋಪ್ಯ ಸಗಟು ವ್ಯಾಪಾರ ಸಂಸ್ಥೆಯು ಪೀಟರ್ಸ್‌ಬರ್ಗ್‌ನ ಭಾರತೀಯ ಸಂಸ್ಥೆ ಯೊಂದನ್ನು ಶಾಸನ ವಿಧಿ ಪ್ರಕಾರ ನಡೆದುಕೊಳ್ಳಬೇಕೆಂದು ಒತ್ತಾಯ ಪಡಿಸಿದಾಗ, ಅದು ಕೋಪಗೊಂಡು ತನ್ನ ಕೋರಿಕೆಯನ್ನೇ ರದ್ದುಪಡಿಸಿತು.

ಸರಕಾರ ಕಾಲಾವಧಿಯನ್ನು ಇನ್ನೊಂದು ತಿಂಗಳು ಹೆಚ್ಚಿಸಿತು. ಅದು ಇನ್ನೂ ಒಂದು ತಿಂಗಳು ಮುಂದಕ್ಕೆ ಹೋಯಿತು. ಆದರೂ ನಿಗದಿಯಾಗಿದ್ದ ಕಡೆಯ ತಾರೀಕು ನವೆಂಬರ್ ೩೧ರಂದು ೧೩,೦೦೦ ಜನಸಂಖ್ಯೆಯಲ್ಲಿ ೫೧೧ ಮಂದಿ ಮಾತ್ರ ದಾಖಲಾತಿ ಪಡೆದಿದ್ದರು.

ದಕ್ಷಿಣ ಆಫ್ರಿಕಾದ ಭಾರತೀಯರನ್ನು ಎಚ್ಚರಗೊಳಿಸಲು 'ಇಂಡಿಯನ್ ಒಪಿನಿ ಯನ್' ಪ್ರಮುಖ ಪಾತ್ರ ವಹಿಸಿತು. ಪ್ರಾರಂಭದಲ್ಲಿ ಅದು ಕೆಲವು ಜಾಹಿರಾತು ಗಳನ್ನು ಒಪ್ಪಿಕೊಳ್ಳುತ್ತಿತ್ತು. ಮುದ್ರಾಲಯ ಇತರ ಚಿಕ್ಕಪುಟ್ಟ ಮುದ್ರಣದ ಕೆಲಸ ವನ್ನೂ ಮಾಡುತ್ತಿತ್ತು. ಗಾಂಧಿ ಕ್ರಮೇಣ ಅದನ್ನು ತ್ಯಜಿಸಲು ನಿರ್ಧರಿಸಿ ಮುದ್ರಾ- ಲಯವನ್ನೂ ಮತ್ತು ಪತ್ರಿಕೆಯನ್ನೂ ತಮ್ಮ ವಿಚಾರ ಪ್ರಚಾರಕ್ಕಾಗಿಯೇ ಮೀಸಲಾ ಗಿಟ್ಟರು. ಚಂದಾ ಹಣವನ್ನು ಹೆಚ್ಚಿಸಲಾಯಿತು. ಆದರೂ ಚಂದಾದಾರರ ಸಂಖ್ಯೆ ೧೨೦೦ರಿಂದ ೩೫೦೦ಕ್ಕೆ ಹೆಚ್ಚಿತು. ಸಾಪ್ತಾಹಿಕವು ಭಾನುವಾರ ಬೆಳಗ್ಗೆ ಓದುಗರ ಕೈಸೇರುತ್ತಿತ್ತು. ಜನ ತಂಡಗಳಲ್ಲಿ ಕುಳಿತು ಅದನ್ನು ಓದುತ್ತಿದ್ದರು. ಅದು ಸ್ವಲ್ಪ ಕಾಲದಲ್ಲಿಯೇ ಹೋರಾಟದ ಒಂದು ಅಂಗವಾಯಿತು. ಗಾಂಧಿಯ ಚಲನವಲನ ಗಳನ್ನು ತಿಳಿಯಲು ಸರಕಾರಿ ಅಧಿಕಾರಿಗಳೂ ಅದನ್ನು ಶ್ರದ್ಧೆಯಿಂದ ಓದುತ್ತಿದ್ದರು.

ಹೋರಾಟ ಮುಂದುವರಿದಂತೆ, "ಸೌಮ್ಯ ಪ್ರತಿಭಟನೆ" (Passive Resistence) ಎಂಬ ಪದ ಅದರ ನಿಜವಾದ ಅರ್ಥವನ್ನು ಸರಿಯಾಗಿ ಸೂಚಿ ಸುವುದಿಲ್ಲವೆಂದು ಗಾಂಧಿಗೆ ಅನ್ನಿಸಿತು. ಅಲ್ಲದೆ, ಇಂಗ್ಲಿಷ್ ಹೆಸರಿನಿಂದಲೇ ಭಾರತೀ ಯರ ಹೋರಾಟವನ್ನು ಸೂಚಿಸುವುದು 'ಅಪಮಾನಕರ'ವೆನಿಸಿತು. ಆದುದರಿಂದ

ಈ ನೂತನ ಹೋರಾಟಕ್ಕೆ ಸರಿಯಾದ ಹೆಸರನ್ನು ಸೃಷ್ಟಿಸಿದವರಿಗೆ ಒಂದು ಸಣ್ಣ ಬಹುಮಾನ ನೀಡುವುದಾಗಿ 'ಇಂಡಿಯನ್ ಒಪಿನಿಯನ್'ನಲ್ಲಿ ಪ್ರಚಾರ ಮಾಡಿದರು. ಮಗನಲಾಲ್ ಗಾಂಧಿ 'ಸದಾಗ್ರಹ'–ಒಳ್ಳೆಯ ಕಾರ್ಯವನ್ನು ದೃಢತೆಯಿಂದ ಮಾಡುವುದು–ಎಂಬ ಅರ್ಥದಲ್ಲಿ, ಒಂದು ಪದವನ್ನು ಸೂಚಿಸಿದರು. ಗಾಂಧಿಗೆ ಈ ಪದವೇನೋ ಹಿಡಿಸಿತು. ಆದರೆ ಅದು ಪೂರ್ಣಾರ್ಥವನ್ನು ಸೂಚಿಸುತ್ತಿರಲಿಲ್ಲವಾದ್ದರಿಂದ ಅದನ್ನು 'ಸತ್ಯಾಗ್ರಹ' ಎಂದು ಬದಲಾಯಿಸಿದರು; ಅದು "ಸತ್ಯ ಮತ್ತು ಪ್ರೇಮ ಅಥವಾ ಅಹಿಂಸೆಯಿಂದ ಜನಿಸಿದ ಶಕ್ತಿ ಎಂದು ಕರೆದರು.

ಈ ಮಧ್ಯೆ ಯಥಾವತ್ತಾಗಿ ಸ್ವೀಕೃತವಾಗಿದ್ದ ವಲಸೆಮಸೂದೆ, ಡಿಸೆಂಬರ್ ೨೭ರಂದು ಸಾಮ್ರಾಟನ ಅಂಗೀಕಾರವನ್ನು ಪಡೆಯಿತು. ದಾಖಲಾತಿಗೆ ಸಂಬಂಧಿಸಿದಂತೆ ಬಹಳ ಮಟ್ಟಿನ ವಿರೋಧವು ಗಾಂಧಿ ಮತ್ತು ಅವರ 'ಸಂಚುಗಾರರಿಂದ' ರೂಪಿತವಾದುದೆಂದು ಭಾವಿಸಿದ ಜನರಲ್ ಸ್ಮಟ್ಸ್ ಅವರು, ನಾಯಕರನ್ನು ನ್ಯಾಯ ವಿಚಾರಣೆಗೆ ಗುರಿಮಾಡಿದರೆ, ಭಾರತೀಯ ಜನಾಂಗದ ನಂಬಿಕೆಯ ಮೇಲೆ ಯಾವ ಪರಿಣಾಮವಾಗುವುದೋ ನೋಡಬೇಕೆಂದು ನಿರ್ಧಾರ ಮಾಡಿದರು.

ಕ್ರಿಸ್‌ಮಸ್ ವಾರ, ಜನವರಿ ೨೭, ಶುಕ್ರವಾರ ಬೆಳಗ್ಗೆ ಟ್ರಾನ್ಸ್‌ವಾಲ್‌ನ ಪೋಲೀಸ್ ಕಮೀಷನರ್ ಗಾಂಧಿಗೆ ಮಾರಲ್‌ಬರೋ ನಿಲಯದಲ್ಲಿ ತಮ್ಮನ್ನು ಭೇಟಿ ಮಾಡಬೇಕೆಂಬ ಆದೇಶವನ್ನು ಫೋನ್ ಕರೆಯ ಮೂಲಕ ಕೊಟ್ಟರು. ಅಲ್ಲಿಗೆ ಹೋದಾಗ ಅವರ ಮತ್ತು ಇಪ್ಪತ್ತು ನಾಲ್ಕು ಮಂದಿ ಇತರರ ಬಂಧನಕ್ಕೆ ಆಜ್ಞೆಯಾಗಿದೆಯೆಂದು ತಿಳಿಸಲಾಯಿತು. ಅವರ ಪೈಕಿ ಕ್ವಿನ್ ಎಂಬ ಚೀನೀ ನಾಯಕನೂ ಇದ್ದನು. ತಾವೆಲ್ಲ ಮರುದಿನ ಬೆಳಗ್ಗೆ ೧೦ ಘಂಟೆಗೆ ಸಂಬಂಧಪಟ್ಟ ನ್ಯಾಯಾಧೀಶರ ಮುಂದೆ ಹಾಜರಾಗುವುದಾಗಿ ಗಾಂಧಿ ಮಾತನ್ನು ಕೊಟ್ಟರು. ಪೋಲೀಸ್ ಕಮಿಷನರ್ ಅವರ ಮಾತಿನಲ್ಲಿ ನಂಬಿಕೆಯನ್ನಿಟ್ಟರು.

ಶುಕ್ರವಾರ ಸಂಜೆ ಹೋರಾಟದ ಈ ಹೊಸ ಘಟ್ಟವನ್ನು ಕುರಿತು ಚರ್ಚಿಸಲು ಭಾರತೀಯರ ಸಭೆ ಕಿಕ್ಕಿರಿದು ಸೇರಿತು. ಸುಮಾರು ೧,೦೦೦ ಮಂದಿ ಹಾಜರಿದ್ದರು. ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ ಅಧ್ಯಕ್ಷ ಮಿ. ಈಸೋಪ್ ಮಿಯಾ ಅಗ್ರಾಸನ ವಹಿಸಿದರು. ವಾಗ್ದಾನದ ಮೇಲೆ ಬಿಡುಗಡೆಯಾಗಿದ್ದ ಗಾಂಧಿ ಮತ್ತು ಇಪ್ಪತ್ತು ಮಂದಿ ಅವರ ಸಹೋದ್ಯೋಗಿ ಸೆರೆಯಾಳುಗಳೂ ಆ ಸಭೆಯಲ್ಲಿ ಹಾಜರಿದ್ದರು.

ಗಾಂಧಿ ಹೀಗೆ ನುಡಿದರು: ಆ ದಿನ ಬೆಳಗ್ಗೆ ವಲಸೆ ನಿರ್ಬಂಧ ಶಾಸನಕ್ಕೆ ಸಂಬಂಧಿಸಿದ ಪ್ರಕಟನೆಯನ್ನು ಓದಿದಾಗ, ಲಾರ್ಡ್ ಎಲ್ಗಿನ್ ಭಾರತೀಯರ ಸ್ವಾಮಿನಿಷ್ಠೆಯ ಮೇಲೆ ಸಲ್ಲದ ಭಾರ ಹೊರಿಸಿದ್ದಾರೆಂದೆನ್ನಿಸಿತು. ಭಾರತದ ಮಾಜಿ ವೈಸ್‌ರಾಯ್ ಆಗಿದ್ದ ಲಾರ್ಡ್ ಎಲ್ಗಿನ್ ಭಾರತೀಯ ಸಂಪ್ರದಾಯವನ್ನು ಪೂರ್ಣವಾಗಿ ಮರೆತುಬಿಟ್ಟಿದ್ದರು. ಈ ಶಾಸನಕ್ಕೆ ಅಂಗೀಕಾರ ನೀಡಬೇಕೆಂದು ಸಾಮ್ರಾಟರಿಗೆ ಸಲಹೆ ಮಾಡಿ

ದಾಗ, ಅವರು, ಲಕ್ಷಾಂತರ ಭಾರತೀಯರಿಗೆ ತಾವು ಧರ್ಮದರ್ಶಿ ಎಂಬುದನ್ನು ಮರೆತಿದ್ದರು. ಭಾರತದ ಇತಿಹಾಸದಲ್ಲಿ ಎಂದೂ ಇಲ್ಲದಿದ್ದಂಥ ರೀತಿಯ ಬದಲಾವಣೆಯ ಅಂಚಿನಲ್ಲಿ ಭಾರತ ಇರುವುದನ್ನು ಪೂರ್ಣವಾಗಿ ಮರೆತಿದ್ದರು. ಭಾರತ ಎಂದೂ ಕ್ರಾಂತಿಕಾರಿ ಆಗಿರಲಿಲ್ಲ. ಆದರೆ ಇಂದು ಕ್ರಾಂತಿಕಾರಿ ಮನೋಧರ್ಮ ಕೆಲವರು ಭಾರತೀಯರ ಮನಸ್ಸಿನಲ್ಲಿ ನೆಲೆಗೊಳ್ಳುತ್ತಿದೆ. ಈ ಕ್ರಾಂತಿಕಾರಿ ಮನೋಧರ್ಮ ಭಾರತದಲ್ಲಿ ದೃಢವಾಗಿ ನೆಲೆಗೊಂಡರೆ, ಭಾರತಕ್ಕೆ ಅದೊಂದು ಕೆಟ್ಟ ಕಾಲವೇ ಸರಿ. ಆದರೆ ಲಾರ್ಡ್ ಎಲ್ಗಿನ್ ಇದಕ್ಕೆ ಬೀಜ ಬಿತ್ತಿದ್ದಾರೆಂದು ಹೇಳದಿರಲು ಸಾಧ್ಯವಿರಲಿಲ್ಲ. ಇದು ವಿದ್ಯಾರ್ಥಿ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿದ್ದರೆ, ಎಂದಿಗೂ ಭಾರತೀಯ ನೆಲದಲ್ಲಿ ಬೆಳೆಯಲಾರದು. ಆದರೆ, ಇಂಗ್ಲಿಷಿನ ಚಕಾರವನ್ನೂ ಅರಿಯದ ವರ್ತಕ, ಏಷ್ಯಾ ಶಾಸನಕ್ಕೆ ಸಂಬಂಧಿಸಿದಂತೆ ಈ ಮನೋಧರ್ಮದಿಂದ ಕೂಡಿದವನಾಗಿದ್ದಾನೆ. ಆ ಶಾಸನ ಮತ್ತು ಅದರ ಕೆಡುಕುಗಳ ಬಗೆಗೆ ತಮ್ಮ ದೇಶ ಬಂಧುಗಳಿಗೆ ತಿಳಿವಳಿಕೆ ಕೊಡಲು ತಾವು ಸಾಧನವೆಂಬುದನ್ನು ಗಾಂಧಿ ಮುಚ್ಚುಮರೆ ಮಾಡಲಿಲ್ಲ. ಆ ವಿಷಯದಲ್ಲಿ ಅಷ್ಟು ಪ್ರಮುಖ ಪಾತ್ರವಹಿಸಿದುದು ಅವರಿಗೆ ಹೆಮ್ಮೆಯನ್ನುಂಟು ಮಾಡಿತ್ತು. ಅವರ ವಿಚಾರಗಳೆಲ್ಲ ಜನತೆಯ ವಿಚಾರಗಳೇ ಆಗಿದ್ದುವು. ಅದನ್ನು ವ್ಯಕ್ತಪಡಿಸುವಾಗ ಅದಕ್ಕೆ ಸೌಮ್ಯ ಭಾವವನ್ನು ಮಾತ್ರ ಕೊಟ್ಟಿದ್ದರು. ಲಾರ್ಡ್ ಎಲ್ಗಿನ್ ಈ ವಲಸೆ ನಿರ್ಬಂಧ ಶಾಸನಕ್ಕೆ ಅಂಗೀಕಾರ ಕೊಟ್ಟು ಭಾರತೀಯರ ಸ್ವಾಮಿನಿಷ್ಠೆಯ ಮೇಲೆ ಸಲ್ಲದ ಭಾರ ಹಾಕಿದ್ದಾರೆಂಬ ಭಾವವನ್ನು ತಾವು ವ್ಯಕ್ತಪಡಿಸಿದ್ದುದು ಈ ಕಾರಣದಿಂದಲೇ. ಅದು ನಾಗರಿಕ ಸರಕಾರವೊಂದರ ಬರ್ಬರ ಕೃತಿಯಾಗಿತ್ತು; ಆ ಸರಕಾರ ತನ್ನನ್ನು ಕ್ರಿಸ್ತನ ಅನುಯಾಯಿ ಎಂದು ಕರೆದುಕೊಳ್ಳುವ ಧೈರ್ಯ ಮಾಡಿತ್ತು. ಜೀಸಸ್ ಕ್ರಿಸ್ತನು ಜೊಹಾನ್ಸ್‌ಬರ್ಗ್ ಮತ್ತು ಪ್ರಿಟೋರಿಯಾಗಳಿಗೆ ಆಗಮಿಸಿ, ಜನರಲ್ ಬೋಥಾ ಮತ್ತು ಜನರಲ್ ಸ್ಮಟ್ಸ್ ಹಾಗೂ ಇತರರ ಹೃದಯವನ್ನು ಪರೀಕ್ಷಿಸಿ ನೋಡಿದರೆ, ಅಲ್ಲಿ ವಿಚಿತ್ರವಾದ ಕ್ರಿಸ್ತ ಸತ್ವವನ್ನು ಕಂಡಾನೆಂದು ಗಾಂಧಿ ಭಾವಿಸಿದರು.

ಜನರಲ್ ಸ್ಮಟ್ಸ್ ಅವರು ಶಾಸನದ ಪ್ರಕಾರ ಕಾರ್ಯಕ್ರಮ ಕೈಗೊಳ್ಳುವುದರಲ್ಲಿ ಬಡವರ ಮೇಲೆ ಇನ್ನೂ ಕಣ್ಣಿಡದೆ, ಯಾರು ಸಾರ್ವಜನಿಕ ಜೀವನದಲ್ಲಿ ಮುಖಂಡರಾಗಿದ್ದರೋ ಅಂಥವರನ್ನು ಮಾತ್ರ ಆರಿಸಿಕೊಂಡುದಕ್ಕೆ ಶ್ಲಾಘಿಸಿದರು. ಇವರೆಲ್ಲ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಗುರಿಯಾಗಿ ಕಾರಾಗೃಹವಾಸ ಹೊಂದಬಹುದು ಅಥವಾ ಗಡೀಪಾರು ಆಜ್ಞೆಗೆ ಗುರಿಯಾಗಬಹುದು. ಆದರೆ ಇವರ ಹಿಂಬದಿಯಲ್ಲಿರುವ ಜನ, ದಾಖಲಾತಿ ಶಾಸನಕ್ಕೆ ದೃಢ ವಿರೋಧವನ್ನು ವ್ಯಕ್ತಪಡಿಸುವ ವಿಷಯದಲ್ಲಿ ಸ್ವಲ್ಪವೂ ಅನುಮಾನವಿರಲಿಲ್ಲ. ಆದರೆ ಈ ದಾಖಲಾತಿ ಶಾಸನ ಬಡ ಗಂಡಂದಿರ ಮೇಲೆ ಕಠಿಣವಾಗಿ ವರ್ತಿಸುವ ಅಧಿಕಾರವನ್ನು ಕೊಟ್ಟಿದೆ. ಅವರ ಕುಟುಂಬಗಳಿಂದ ಅವರನ್ನು ದೂರಕ್ಕೆ ಸಾಗಿಸಬಹುದು. ಇದಕ್ಕೆ ನಿದರ್ಶನವಾಗಿ ಹೋರಾಟದಲ್ಲಿ ಅದ್ಭುತವಾಗಿ ನಡೆದುಕೊಂಡಿರುವ ನಾಯಿಡು ಅವರ ವಿಷಯವನ್ನು ತಿಳಿಸಿದರು. ಆತನ ಹೆಂಡತಿ

ಮತ್ತು ಐವರು ಮಕ್ಕಳು ಐದು ವರ್ಷಗಳಿಂದ ವಸಾಹತುವಿನಲ್ಲಿದ್ದಾರೆ. ಆತ ಗಡೀ ಪಾರು ಆದರೆ, ಅವರ ಕುಟುಂಬ ರಕ್ಷಣೆಯ ಬಗೆಗೆ ಶಾಸನದಲ್ಲಿ ಒಂದು ವಿಧಿಯೂ ಅವರಿಗೆ ಕಂಡು ಬರಲಿಲ್ಲ. ಸರಕಾರದ ಉದ್ದೇಶವಾದರೂ ಏನು? ಈ ದೇಶದಲ್ಲಿ ಭಾರತೀಯರು ಬೇಡವಾದವರು ಎಂದು ಹೇಳಿ ಬಿಡುವ ಪ್ರಾಮಾಣಿಕತೆ ಅವರಿಗೆ ಏಕೆ ಬಂದಿಲ್ಲ? ಹೀಗೆ ಪರೋಕ್ಷವಾಗಿ ಶಕ್ತಿ ಪ್ರಯೋಗ ಮಾಡುವುದಾದರೂ ಏಕೆ? ಶಾಸನದ ಕೆಲವು ವಿಧಿಗಳನ್ನು ಗಾಂಧಿ ಬರ್ಬರ ಎಂದು ಕರೆದುದಲ್ಲದೆ, ಅವು ಅನಾಗರಿಕ ಸರಕಾರಕ್ಕೆ ಮಾತ್ರ ಸರಿಯಾದುವೆಂದೂ ಹೇಳಿದರು. ಆ ಅಧಿಕಾರಗಳು ಹಾಗೆಯೇ ಪ್ರಯೋಗವಾದರೆ ಮತ್ತು ಭಾರತೀಯ ಕಾರಾಗೃಹವಾಸ ಅಥವಾ ಗಡೀಪಾರು ಆಜ್ಞೆಗೆ ಗುರಿಯಾದರೆ, ಅದು ಅವರಿಗೆ ಒಂದು ಗೌರವವೇ. ತಮ್ಮ ಪವಿತ್ರ ಕರ್ತವ್ಯ ಗಳನ್ನು ತ್ಯಜಿಸಿ, ಮನುಷ್ಯತ್ವಕ್ಕೂ ಆತ್ಮಗೌರವಕ್ಕೂ ತಿಲಾಂಜಲಿ ಕೊಟ್ಟು, ಏನೋ ಎರಡು ಕಾಸು ಸಂಪಾದಿಸುವುದಕ್ಕಿಂತ ಇದೇ ಉತ್ತಮ. ತಮ್ಮ ಜನರಿಗೆ ತಾವು ಸಲಹೆ ನೀಡಿದ್ದಕ್ಕೆ ತಾವೆಂದಿಗೂ ವ್ಯಸನಪಡುವುದಿಲ್ಲವೆಂದೂ, ಹದಿನೈದು ತಿಂಗಳುಗಳ ಅವರ ಹೋರಾಟ ಚೆನ್ನಾಗಿ ನಡೆದಿದ್ದಿತೆಂದೂ ಗಾಂಧಿ ತಿಳಿಸಿದರು. ಆತ್ಮಗೌರವವುಳ್ಳ ಯಾವ ವ್ಯಕ್ತಿಯೂ ಈ ಶಾಸನವನ್ನು ಒಪ್ಪಿಕೊಳ್ಳಲಾರನು.

ತಾವೆಲ್ಲ ಬೇರ್ಪಡೆಯಾಗುವ ಸ್ಥಿತಿಗೆ ಬಂದಂತೆ ಗಾಂಧಿಯವರಿಗೆ ಕಂಡು ಬಂದಿತು. "ಭಾರತದ ಜನತೆಯನ್ನು ಪ್ರೀತಿಗೆ ಬದಲಾಗಿ ಭರ್ಜಿಯ ಇರಿತದಿಂದ ಸ್ವಾಧೀನದಲ್ಲಿಟ್ಟು ಕೊಳ್ಳಲು ಬಯಸುವುದಕ್ಕೆ ಮುನ್ನ ಸಾಮ್ರಾಜ್ಯ ಸರ್ಕಾರ ಹಿಂದೆ ಮುಂದೆ ನೋಡಿ ಆಲೋಚಿಸಬೇಕು. ಭಾರತ ಮತ್ತು ವಸಾಹತುಗಳಲ್ಲಿ ಈಗ ಇಂಗ್ಲೆಂಡ್ ಒಂದನ್ನು ಆರಿಸಿಕೊಳ್ಳಬೇಕಾಗಿದೆ. ಅದು ಇಂದೋ ನಾಳೆಯೋ ಆಗದಿದ್ದರೂ ಅದಕ್ಕೆ ಲಾರ್ಡ್ ಎಲ್ಗಿನ್, ತಮ್ಮ ಕಾರ್ಯಕ್ರಮಗಳ ಮೂಲಕ ಬೀಜವನ್ನು ಚೆಲ್ಲಿದ್ದಾರೆ." ಇದಕ್ಕಿಂತ ಮೃದುವಾದ ಶಬ್ದಗಳನ್ನು ಆರಿಸಿಕೊಳ್ಳಲು ಗಾಂಧಿಗೆ ಸಾಧ್ಯವಾಗಲಿಲ್ಲ; ಏಕೆಂದರೆ ಏಷ್ಯಾ ಶಾಸನವನ್ನು ವಲಸೆಗಾರರ ದಾಖಲಾತಿ ಶಾಸನದ ಜತೆಗೆ ಸೇರಿಸಲಾಗಿದ್ದಿತ್ತು.

ಗಾಂಧೀ ಮತ್ತು ಅವರ ಸಹೋದ್ಯೋಗಿಗಳು, ಡಿಸೆಂಬರ್ ೨೮ರಂದು ನ್ಯಾಯ ಸ್ಥಾನದ ಮುಂದೆ ಹಾಜರಾದರು. ಅವರೆಲ್ಲ, ವಿಧ್ಯುಕ್ತವಾಗಿ ನೀಡಲಾದ ದಾಖಲಾತಿ ಪತ್ರಗಳನ್ನು ಹೊಂದಿರುವರೇ ಎಂದು ಪ್ರಶ್ನಿಸಲಾಯಿತು. ಇಲ್ಲವೆಂದು ಉತ್ತರ ಬಂದ ಮೇಲೆ, ಎಲ್ಲರೂ ಬಂಧಿತರಾದರು. ಶಾಸನದ ಪ್ರಕಾರ ದಾಖಲಾತಿ ಪತ್ರವಿಲ್ಲದೆ ಟ್ರಾನ್ಸ್‌ವಾಲಿನಲ್ಲಿ ಇರುವ ಅಪರಾಧಕ್ಕೆ ಅವರು ಗುರಿಯಾಗಿದ್ದರು.

ಮಿ. ಎಂ. ಕೆ. ಗಾಂಧಿ, ವಕೀಲ, ಇನ್ನರ್ ಟೆಂಪಲ್‌ನ ಬ್ಯಾರಿಸ್ಟರ್–ಅಟ್-ಲಾ, ಟ್ರಾನ್ಸ್‌ವಾಲ್‌ನ ಬ್ರಿಟಿಷ್ ಭಾರತೀಯರ ಸಂಘದ ಗೌರವ ಕಾರ್ಯದರ್ಶಿ, ಪ್ರಥಮ ಆಪಾದಿತರಾಗಿ ವಿಚಾರಣೆಗೆ ಗುರಿಯಾದರು.

ಆಪಾದಿತ ಗಾಂಧಿ ಹದಿನಾರು ವರ್ಷಗಳಿಂದ ಟ್ರಾನ್ಸ್‌ವಾಲ್ ನಿವಾಸಿಯೆಂದು ಸೂಪರಿಂಟೆಂಡೆಂಟ್ ಮಿ. ವೆರ್ನನ್ ತಿಳಿಸಿದರು. ಅಂದು ಬೆಳಗ್ಗೆ ಅವರು ಗಾಂಧಿಯನ್ನು

ಭೇಟಿಯಾಗಿ, ದಾಖಲಾತಿ ಪತ್ರವನ್ನು ತೋರಿಸುವಂತೆ ಕೇಳಿದುದಾಗಿಯೂ, ಅವರೆ ಆಪಾದಿತ ಅದನ್ನು ತೋರಿಸಲಿಲ್ಲವೆಂದೂ, ದಾಖಲಾತಿ ಪತ್ರವನ್ನು ತೆಗೆದುಕೊಂಡಿರ ಲಿಲ್ಲವೆಂದೂ ತಿಳಿಸಿದರು. ಗಾಂಧಿ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಅವರು ಸಾಕ್ಷಿ ಸ್ಥಾನಕ್ಕೆ ಹೋಗಿ ಒಂದು ಹೇಳಿಕೆ ಕೊಡಲು ಸಿದ್ಧರಾದರು. ಅವರು ಆ ಅವಹೇಳನ ಕರವಾದ ದಾಖಲಾತಿ ಶಾಸನಕ್ಕೆ ಏಕೆ ಶಿರಬಾಗಲಿಲ್ಲವೆಂಬುದನ್ನು ತಿಳಿಸಲು ಬಯಸಿದರು.

ಮಿ. ಜೋರ್ಡನ್ (ನ್ಯಾಯಾಧೀಶ): ಅದಕ್ಕೆ ಏನೂ ಸಂಬಂಧವಿಲ್ಲವೆಂದು ನನಗೆ ಅನ್ನಿ ಸುತ್ತದೆ. ಶಾಸನವಿದೆ. ನೀವು ಅದನ್ನು ಉಲ್ಲಂಘಿಸಿದ್ದೀರಿ. ರಾಜಕೀಯ ಭಾಷಣ ಕೇಳಲು ನನಗೆ ಇಷ್ಟವಿಲ್ಲ.

ಗಾಂಧಿ: ರಾಜಕೀಯ ಭಾಷಣವನ್ನು ಮಾಡಲು ನನಗೂ ಇಷ್ಟವಿಲ್ಲ.

ಜೋರ್ಡನ್: ಪ್ರಶ್ನೆಯಿಷ್ಟು; ನೀವು ದಾಖಲಾತಿ ಪಡೆದಿದ್ದೀರೋ ಇಲ್ಲವೋ? ದಾಖ ಲಾತಿ ಮಾಡಿಸಿಕೊಳ್ಳದಿದ್ದರೆ, ಮೊಕದ್ದಮೆ ಮುಗಿಯಿತು. ನಾನು ಮಾಡ ಲಿರುವ ಆಜ್ಞೆಯ ಬಗೆಗೆ ನೀವು ವಿವರಣೆ ನೀಡಬೇಕೆಂದರೆ ಅದು ಬೇರೆ ಕಥೆ. ಟ್ರಾನ್ಸ್‌ವಾಲ್ ಶಾಸನದ ಅಂಗೀಕಾರ ಪಡೆದು, ಸಾಮ್ರಾಜ್ಯ ಸರಕಾರದ ಒಪ್ಪಿಗೆ ಪಡೆದಿರುವ ಶಾಸನವಿದೆ. ನಾನು ಮಾಡಬೇಕಾದುದು. ಮತ್ತು ಮಾಡಲು ಸಾಧ್ಯವಾದುದು, ಶಾಸನವಿರುವಂತೆ ಅದನ್ನು ಕಾರ್ಯಾರಚಣೆಗೆ ತರುವುದು.

ಗಾಂಧಿ: ನನ್ನ ಕಾರ್ಯ ಸಮರ್ಥಿಸಿಕೊಳ್ಳಲು ನಾನು ಯಾವ ಸಾಕ್ಷ್ಯವನ್ನೂ ನೀಡಲು ಬಯಸುವುದಿಲ್ಲ. ಶಾಸನದ ರೀತಿಯಾಗಿ ನಾನು ಯಾವ ಸಾಕ್ಷ್ಯವನ್ನೂ ಕೊಡಲು ಅವಕಾಶವಿಲ್ಲವೆಂಬುದನ್ನು ಬಲ್ಲೆ.

ಜೋರ್ಡನ್: ನನ್ನ ಕಾರ್ಯವೆಲ್ಲ ನ್ಯಾಯಬದ್ಧ ಸಾಕ್ಷ್ಯಕ್ಕೆ ಸಂಬಂಧಿಸಿದೆ. ನೀವು ಹೇಳಲೇ ಬೇಕೆನ್ನುವುದು ಬಹುಶಃ ಶಾಸನವನ್ನೇ ಅಂಗೀಕರಿಸುವುದಿಲ್ಲವೆಂದೂ ಮತ್ತು ಆತ್ಮಸಾಕ್ಷಿಯಾಗಿ ಅದನ್ನು ಪ್ರತಿಭಟಿಸುವಿರೆಂದೂ ಇರಬೇಕು.

ಗಾಂಧಿ: ಅದು ಪೂರ್ಣ ಸತ್ಯ.

ಜೋರ್ಡನ್: ನೀವು ಆತ್ಮಸಾಕ್ಷಿಯಾಗಿ ಶಾಸನವನ್ನು ವಿರೋಧಿಸುವಿರಾದರೆ, ನಾನು ಸಾಕ್ಷ್ಯವನ್ನು ಸ್ವೀಕರಿಸುತ್ತೇನೆ.

ಗಾಂಧಿ ತಾವು ಟ್ರಾನ್ಸ್‌ವಾಲಿಗೆ ಬಂದುದು ಇತ್ಯಾದಿ ವಿಷಯಗಳನ್ನೂ ಹೇಳ ಲಾರಂಭಿಸಿದರು. ಆಗ ಮಿ. ಜೋರ್ಡನ್ ಅದೆಲ್ಲ ಹೇಗೆ ಮೊಕದ್ದಮೆಗೆ ಸಂಬಂಧಿಸಿದೆ ಯೆಂದು ಕೇಳಿದರು. ಗಾಂಧಿ ಐದು ನಿಮಿಷ ನ್ಯಾಯಸ್ಥಾನದ ಸಹನೆ ಬೇಡಿದರು. ಆದರೆ ಮಿ. ಜೋರ್ಡನ್ ನಿರಾಕರಿಸಿದರು. "ನೀವು ಶಾಸನವನ್ನು ಧಿಕ್ಕರಿಸಿದ್ದೀರಿ" ಎಂದು ಒರಟಾಗಿ ನುಡಿದುಬಿಟ್ಟರು.

ಗಾಂಧಿ: ಹಾಗಿದ್ದರೆ ನಾನು ಹೇಳಬೇಕಾದುದೇನೂ ಇಲ್ಲ.

ಮಿ. ಜೋರ್ಡನ್ ತಮ್ಮ ತೀರ್ಮಾನವನ್ನು ಕೊಡುತ್ತಾ, ಸರಕಾರ ಬಹಳ

ಉದಾರವಾಗಿದ್ದಿತೆಂದೂ, ಆದರೆ ಇವರಲ್ಲಿ ಯಾರೂ ದಾಖಲಾತಿ ಮಾಡಿಸಿಕೊಂಡಿರಲಿಲ್ಲವೆಂದೂ ತಿಳಿಸಿದರು. ತಾವು ಕಠಿಣವಾಗಿರಲು ಇಚ್ಛಿಸುವುದಿಲ್ಲವೆಂದೂ ತಿಳಿಸಿ ಮೊಕದ್ದಮೆಯನ್ನು ದಾಖಲು ಮಾಡಿರುವವರ ಸಲಹೆಯ ಪ್ರಕಾರ ನಲವತ್ತೆಂಟು ಘಂಟೆಗಳಲ್ಲಿ ದೇಶತ್ಯಜಿಸಿಹೋಗಬೇಕೆಂಬ ಸೂಚನೆ ಕೊಡಲು ಇಚ್ಛಿಸುವುದಿಲ್ಲವೆಂದೂ ನುಡಿದರು. "ಒಬ್ಬ ವ್ಯಕ್ತಿ ರಾಜ್ಯದ ಸಂಕಲ್ಪಕ್ಕೆ ವಿರುದ್ಧವಾಗಿ ನಿಂತಾಗ, ರಾಜ್ಯವು ವ್ಯಕ್ತಿಗಿಂತ ಬಲಯುತವಾದುದು; ವ್ಯಕ್ತಿ ತೊಂದರೆ ಅನುಭವಿಸುತ್ತಾನೆ, ರಾಜ್ಯವಲ್ಲ" ಎಂದರು.

ಗಾಂಧಿ ಮಧ್ಯೆ ಮಾತನಾಡಿ ನಲವತ್ತೆಂಟು ಘಂಟೆಗಳ ಅಥವಾ ಇನ್ನೂ ಕಡಿಮೆ ಕಾಲದ ಆಜ್ಞೆಯನ್ನು ಮಾಡಬಹುದೆಂದು ನ್ಯಾಯಾಧೀಶರಿಗೆ ತಿಳಿಸಿದರು. ನ್ಯಾಯಾಧೀಶ ಸಿಟ್ಟಿಗೆದ್ದರು. "ಹಾಗಿದ್ದರೆ, ನಾನು ನಿಮಗೆ ನಿರಾಶೆ ಮಾಡಲಾರೆ. ನಲವತ್ತೆಂಟು ಘಂಟೆಗಳಲ್ಲಿ ವಸಾಹತುವನ್ನು ತ್ಯಜಿಸಿ ಹೋಗಿ. ಅದು ನನ್ನ ಆಜ್ಞೆ" ಎಂದರು.

ಆಪಾದಿತರೆಲ್ಲ ಒಬ್ಬೊಬ್ಬರಾಗಿ ವಿಚಾರಣೆಗೆ ಗುರಿಯಾದರು. ತಾವಾರೂ ತಪ್ಪಿತಸ್ಥರಲ್ಲವೆಂದು ನುಡಿಯಲು ಗಾಂಧಿ ಸಲಹೆ ಕೊಟ್ಟಿದ್ದರು. ಎಲ್ಲ ಆಪಾದಿತರೂ ಟ್ರಾನ್ಸ್‌ವಾಲ್ ತ್ಯಜಿಸಿ ಹೋಗಲು ಆಜ್ಞೆಯಾಯಿತು; ಕೆಲವರು ಎರಡು ದಿನಗಳಲ್ಲಿಯೂ ಮತ್ತೆ ಕೆಲವರು ಎರಡು ವಾರಗಳಲ್ಲಿಯೂ ಬಿಡಬೇಕೆಂದು ಆಜ್ಞೆಯಾಯಿತು.

ನ್ಯಾಯಸ್ಥಾನದ ಕಾರ್ಯ ಮುಗಿದ ಮೇಲೆ, ಗಾಂಧಿ ಸರಕಾರಿ ಚೌಕದ ಬಯಲಿನಲ್ಲಿ ಭಾರತೀಯರು, ಚೀನೀಯರು ಮತ್ತು ಐರೋಪ್ಯರು ತುಂಬಿದ್ದ ದೊಡ್ಡ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. "ನನಗೆ ಏನಾದರೂ ಆಗಲಿ, ಯಾರಿಗೆ ಏನಾದರೂ ಆಗಲಿ, ಹೋರಾಟವಂತೂ ನಡದೇ ನಡೆಯುತ್ತದೆ. ನಾನು ತಪ್ಪು ಮಾಡಿದ್ದೇನೆಂದು ದೈವ ಪ್ರೇರಣೆಯಾದರೆ, ನಾನೇ ಮೊದಲಿಗನಾಗಿ ತಪ್ಪನ್ನು ಒಪ್ಪಿಕೊಂಡು, ನಿಮ್ಮ ಕ್ಷಮೆ ಬೇಡುವೆ. ನಮ್ಮ ಆತ್ಮಗೌರವ ಮತ್ತು ಘನತೆಯನ್ನು ಕಳೆದುಕೊಳ್ಳುವುದಕ್ಕಿಂತ ವಸಾಹತುವನ್ನು ಬಿಟ್ಟು ಹೋಗುವುದೇ ಲೇಸು. ಈ ಧಾರ್ಮಿಕ ಯುದ್ಧದಲ್ಲಿ ನಾವು ಕಟ್ಟಕಡೆಯ ವರೆಗೂ ಹೋರಾಡುತ್ತೇವೆ."

ಜರ್ಮಿಸ್ಟನ್, ಪ್ರಿಟೋರಿಯಾ ಮತ್ತು ಇತರ ಸ್ಥಳಗಳಲ್ಲಿ ಸಭೆಗಳು ನಡೆದುವು. ಸರಕಾರ ತಮ್ಮನ್ನು ಬಂಧಿಸಿದ್ದಕ್ಕಾಗಿ ಗಾಂಧಿ ತಮ್ಮ ಧನ್ಯವಾದವನ್ನು ಅರ್ಪಿಸಿದರು. "ನಾವು ಬೇರ್ಪಡೆಯಾಗುವ ಸಮಯಕ್ಕೆ ಬಂದಿದೇವೆಂದು ನನಗೆ ಅನ್ನಿಸುತ್ತಿದೆ. ಭಾರತ ಮತ್ತು ವಸಾಹತುಗಳು ಇವೆರಡರಲ್ಲಿ ಒಂದನ್ನು ಇಂಗ್ಲೆಂಡ್ ಆರಿಸಿಕೊಳ್ಳಬೇಕಾದೀತು. ದೇವರು ನಮ್ಮೊಂದಿಗೆ ಇದ್ದಾನೆ. ನಮ್ಮ ಉದ್ದೇಶ ಒಳ್ಳೆಯದಾಗಿರುವ ವರೆಗೂ, ಸರಕಾರಕ್ಕೆ ಎಷ್ಟೇ ಅಧಿಕಾರವಿದ್ದರೂ ಮತ್ತು ಆ ಅಧಿಕಾರ ಎಷ್ಟೇ ಬರ್ಬರ ವಿಧಾನದಲ್ಲಿ ಪ್ರಯೋಗವಾದರೂ ನಾನು ಸ್ವಲ್ಪವೂ ಲೆಕ್ಕಿಸುವುದಿಲ್ಲ".

ಸೆರೆಮನೆಯ ಅನುಭವ

೧೯೦೮

೧೯೦೮ರ ಜನವರಿ ೧೦ರಂದು, ನಿಗದಿಯಾದ ಕಾಲದಲ್ಲಿ ವಸಾಹತುವನ್ನು ತ್ಯಜಿಸಿ ಹೋಗಲಿಲ್ಲವೆಂದು ಆಪಾದಿತರಾಗಿ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಯಾದ ಗಾಂಧಿ ಮತ್ತು ಇತರರು ತಪ್ಪಿತಸ್ಥರೆಂದು ಒಪ್ಪಿಕೊಂಡರು.

ಗಾಂಧಿ ನ್ಯಾಯಸ್ಥಾನದಲ್ಲಿ ನೀಡಿದ ಒಂದು ಸಣ್ಣ ಹೇಳಿಕೆಯಲ್ಲಿ, ತಮಗೂ ತಮ್ಮ ತರುವಾಯ ಬರುವವರಿಗೂ ತಾರತಮ್ಯ ತೋರಿಸಬಾರದೆಂದು ಹೇಳಿದರು. ಅವರಿಗೆ ಪ್ರಿಟೋರಿಯಾದಿಂದ ಆಗ ತಾನೆ ವಾರ್ತೆ ಬಂದಿತ್ತು. ಅವರ ಸಹೋದ್ಯೋಗಿಗಳಿಗೆ ಮೂರು ತಿಂಗಳ ಸಶ್ರಮ ಸೆರೆಮನೆವಾಸ ಮತ್ತು ಜತೆಗೆ ಭಾರಿ ದಂಡವನ್ನು ವಿಧಿಸಲಾಗಿತ್ತು. "ಇವರು ಅಪರಾಧವನ್ನು ಮಾಡಿದ್ದರೆ, ನಾನು ಅದಕ್ಕಿಂತ ಹೆಚ್ಚಿನ ಅಪರಾಧವನ್ನು ಮಾಡಿದ್ದೇನೆ" ಎಂದರು ಗಾಂಧೀ. ಆದುದರಿಂದ ತಮಗೆ ಅತ್ಯಧಿಕ ಶಿಕ್ಷೆಯನ್ನು ವಿಧಿಸಬೇಕೆಂದು ನ್ಯಾಯಾಧೀಶನನ್ನು ಕೇಳಿಕೊಂಡರು. ನ್ಯಾಯಾಧೀಶ ಗಾಂಧಿಗೆ ಎರಡು ತಿಂಗಳ ಸಾದಾ ಸೆರೆಮನೆವಾಸದ ಶಿಕ್ಷೆ ವಿಧಿಸಿದನು.

ನ್ಯಾಯಸ್ಥಾನದಲ್ಲಿ ನೂರಾರು ಮಂದಿ ಭಾರತೀಯರು ಮತ್ತು ನ್ಯಾಯವಾದಿಗಳು ಹಾಜರಿದ್ದರು. ಯಾವ ನ್ಯಾಯಾಲಯದಲ್ಲಿ ಗಾಂಧೀ ಆಗಾಗ ನ್ಯಾಯವಾದಿಯಾಗಿ ನಿಂತಿದ್ದರೋ ಅಲ್ಲೇ ಆಪಾದಿತನಾಗಿ ನಿಂತುದು ಅವರಿಗೆ ಸ್ವಲ್ಪ ಪೇಚನ್ನುಂಟು ಮಾಡಿತು. ಆ ಭಾವ ಜಾಗ್ರತೆ ಮಾಯವಾಗಿ, ಅವರು ಹೀಗೆ ನುಡಿದರು: "ನ್ಯಾಯವಾದಿಯ ಪಾತ್ರಕ್ಕಿಂತ ರಾಜಕೀಯ ಕೈದಿಯ ಪಾತ್ರ ಹೆಚ್ಚು ಗೌರವಾರ್ಹವಾದುದು". ಒಂದು ಪೋಲಿಸ್ ವಾಹನದಲ್ಲಿ ಅವರನ್ನು ಜೋಹಾನ್ಸ್‌ಬರ್ಗ್ ಸೆರೆಮನೆಗೆ ಒಯ್ಯಲಾಯಿತು. ಇದು ಅವರ ಸೆರೆಮನೆಯ ಪ್ರಥಮ ಅನುಭವ.

ಗಾಂಧಿಯನ್ನು ನ್ಯಾಯಸ್ಥಾನದಿಂದ ಹೊರಕ್ಕೆ ಒಯ್ದ ಕೂಡಲೇ ಭಾರತೀಯರು ಕಪ್ಪು ಧ್ವಜ ಹಿಡಿದು ಮೆರವಣಿಗೆ ನಡೆಸಿದರು. ಪೋಲೀಸರು ಅವರ ಮೇಲೆ ಬಿದ್ದು ಕೆಲವರನ್ನು ಚೆನ್ನಾಗಿ ಥಳಿಸಿದರು. ಭಾರತೀಯರು ಹೋರಾಟವನ್ನು ಮುಂದುವರಿಸಿದರು. ಜನವರಿ ೧೪ರಂದು ವೀರ ಸತ್ಯಾಗ್ರಹಿ ತಂಬಿನಾಯಿಡು ಮತ್ತು ಚೀನೀ ಸಂಘದ ಅಧ್ಯಕ್ಷ ಮಿ. ಕ್ವಿನ್ ಇವರು ಗಾಂಧಿಯ ಜೊತೆ ಸೇರಿದರು. ಜನವರಿ ೨೯ರ ವೊಳಗೆ ೧೫೫ ಮಂದಿ ಸೌಮ್ಯ ಪ್ರತಿಭಟನಕಾರರು ಸೆರೆಮನೆ ಸೇರಿದರು. ಅವರಲ್ಲಿ ಬಹಳ ಮಂದಿ ಸಂಚಾರಿ ವ್ಯಾಪಾರಿಗಳು ಮತ್ತು ಭಾರತದ ವಿವಿಧ ಭಾಗಗಳಿಂದ ಬಂದಿದ್ದು, ಭಿನ್ನ ಭಿನ್ನ ಜಾತಿಮತಗಳಿಗೆ ಸೇರಿದವರೂ ಆಗಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಎರಡೇ ವರ್ಗಗಳ ಕೈದಿಗಳನ್ನು ಅಂಗೀಕರಿಸಲಾಗಿದ್ದಿತು. ಬಿಳಿಯರು ಮತ್ತು ಕಪ್ಪು ವರ್ಣದವರು. ಮೊದಲು ಗಾಂಧಿಯನ್ನೂ ಮತ್ತು ಅವರೊಡನಿದ್ದ ಬಹಳ ಮಂದಿ ಕೈದಿಗಳನ್ನೂ ನೀಗ್ರೋ ಕೋಣೆಯಲ್ಲಿ ಇಡಲಾಯಿತು. ಅದು ಕೇವಲ ಐವತ್ತೊಂದು ಮಂದಿಗೆ ಮಾತ್ರ ಅವಕಾಶ ನೀಡುವಂಥದಾಗಿದ್ದಿತು. ಸೌಮ್ಯ ಪ್ರತಿಭಟನೆಕಾರರ ಸಂಖ್ಯೆ ೧೫೧ ಕ್ಕೆ ಏರಿದಾಗ, ಹೊರಗಡೆ ಗುಡಾರಗಳನ್ನು ಹಾಕಿ ಅವರಿಗೆ ಸ್ಥಾನವನ್ನು ಕಲ್ಪಿಸಲಾಯಿತು. ಸರಳಶಿಕ್ಷೆ ಅನುಭವಿಸುವವರು ತಮ್ಮ ಖಾಸಗೀ ಉಡುಪನ್ನು ಧರಿಸಬಹುದಾಗಿದ್ದಿತು. ಆದರೆ ಸತ್ಯಾಗ್ರಹಿಗಳು ಸೆರೆಮನೆಯ ಉಡುಪನ್ನು ಧರಿಸಲು ನಿರ್ಧಾರ ಮಾಡಿದ್ದರು; ಅವರು ತಮ್ಮ ಧಾರ್ಮಿಕ ಭಾವನೆಗಳಿಗೂ ಅಥವಾ ಆತ್ಮಗೌರವಕ್ಕೂ ಧಕ್ಕೆ ತರದಿರುವ, ಸೆರೆಮನೆಯ ಎಲ್ಲ ನಿಯಮಗಳನ್ನೂ ಪಾಲಿಸುತ್ತಿದ್ದರು. ನೀಗ್ರೋ ಕೈದಿಗಳಿಗೆ ಗೊತ್ತು ಮಾಡಿದ್ದ ಉಡುಪನ್ನು ಗಾಂಧಿ ಧರಿಸಿ, ಮೇಲ್ಪಂಕ್ತಿ ಹಾಕಿದರು.

ಸೆರೆಮನೆಯ ನಿಯಮಗಳ ಪ್ರಕಾರ ಭಾರತೀಯನಿಗೆ ಮೊದಲನೆಯ ವಾರದಲ್ಲಿ ಬೆಳಗ್ಗೆ ಸಕ್ಕರೆ ಅಥವಾ ತುಪ್ಪ ಇಲ್ಲದ ೧೨ ಔಂಸ್‌ಗಳ 'ಮೀಲೀ ಪಪ್'; ಮಧ್ಯಾಹ್ನದ ವೇಳೆ ೪ ಔಂಸ್ ಅನ್ನ ಮತ್ತು ೧ ಔಂಸ್ ತುಪ್ಪ; ಸಂಜೆ, ಐದು ದಿನಗಳ ವರೆಗೆ ೧೨ ಔಂಸ್‌ಗಳ 'ಮೀಲೀಪಪ್'; ಮೂರು ದಿವಸಗಳ ವರೆಗೆ ೧೨ ಔಂಸ್‌ಗಳ ಬೇಯಿಸಿದ ಬೀನ್ಸ್ ಮತ್ತು ಉಪ್ಪು–ಕೊಡಲಾಗುತ್ತಿತ್ತು. ಈ ಊಟದ ವಿಧಾನ 'ಕಾಫಿರ್' ಗಳಿಗಾಗಿ ರೂಪಿಸಿದುದಾಗಿದ್ದಿತು. ಎರಡನೆಯ ವಾರದಲ್ಲಿ ಮತ್ತು ಮುಂದೆ ಎರಡು ದಿವಸಗಳ ಕಾಲ ಬೇಯಿಸಿದ ಆಲೂಗಡ್ಡೆ, ಮತ್ತು ಎರಡು ದಿವಸಗಳ ವರೆಗೆ ಕೋಸು ಅಥವಾ ಕುಂಬಳಕಾಯಿ ಅಥವಾ ಅಂಥದೇ ಯಾವುದೋ ತರಕಾರಿಯನ್ನು ಮುಸುಗಿನ ಜೋಳದ ಜತೆಗೆ ಕೊಡಲಾಗುತ್ತಿತ್ತು. ಭಾನುವಾರದ ದಿವಸ ಮಾಂಸಾಹಾರಿಗಳಿಗೆ ಮಾಂಸದ ಜತೆಗೆ ತರಕಾರಿಯನ್ನು ಕೊಡಲಾಗುತ್ತಿತ್ತು. ಸಾಂಬಾರದ ಪದಾರ್ಥಗಳಿಗೆ ಉಪ್ಪಿನ ಜತೆಗೆ ಬೇರೆ ಏನನ್ನೂ ಕೊಡುತ್ತಿರಲಿಲ್ಲ. ಸಕ್ಕರೆಯನ್ನಂತೂ ಎಂದೂ ಕೊಡುತ್ತಿರಲಿಲ್ಲ. ಗಾಂಧಿ ಸೆರೆಮನೆಯ ಆಹಾರವನ್ನು ಸೇವಿಸಲು ಸಿದ್ಧರಿದ್ದರು. ಆದರೆ, ಇತರರೂ ಅಂಥ ಆಹಾರವನ್ನು ತಿನ್ನುವಂತೆ ಮಾಡುವುದು ಸೂಕ್ತವಲ್ಲವೆಂದು ಭಾವಿಸಿದರು. ಎರಡು ವಾರಗಳಲ್ಲಿ ಅವರು ಸೆರೆಮನೆಯ ಆಹಾರ ವಿಧಾನದಲ್ಲಿ ಸ್ವಲ್ಪ ಬದಲಾವಣೆಯನ್ನು ತರುವಂತೆ ಮಾಡಿದರು. 'ಪಪ್'ಗೆ ಬದಲಾಗಿ ರೊಟ್ಟಿಯನ್ನು ಕೊಡಲಾಯಿತು. ಭಾರತೀಯರು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಲು ಅಪ್ಪಣೆ ದೊರಕಿತು. ಗಾಂಧಿ ಸೆರೆಮನೆಯ ಕೆಲವು ನಿರ್ಬಂಧಗಳನ್ನು ಉಪಯುಕ್ತವೆಂದು ಭಾವಿಸಿದರು. ಅವರು ಬಿಡುಗಡೆಯಾದ ಮೇಲೂ ಅದನ್ನೇ ಅನುಸರಿಸಿವರು; ಟೀ ಸೇವಿಸುವುದನ್ನು ಬಿಟ್ಟರು; ಸೂರ್ಯಾಸ್ತಕ್ಕೆ ಮೊವಲೇ ದಿನದ ಕಡೆಯ ಊಟವನ್ನು ಮುಗಿಸಲಾರಂಭಿಸಿದರು.

ಬಿಳಿಯ ಕೈದಿಗಳಿಗೆ ಮಾತ್ರ ಮಗ್ಗಲು ಹಾಸಿಗೆ, ಹಲ್ಲುಜ್ಜುವ ಬ್ರಷ್, ಟವಲ್

ಮತ್ತು ಕರವಸ್ತ್ರವನ್ನು ಕೊಡಲಾಗುತ್ತಿತ್ತು. ಭಾರತೀಯರಿಗೆ ಇವುಗಳಲ್ಲಿ ಯಾವುದನ್ನೂ ಕೊಡುತ್ತಿರಲಿಲ್ಲ. ಚೀನೀಯರನ್ನು ಭಾರತೀಯರಿಗಿಂತ ಇನ್ನೂ ಹೀನಾಯವಾಗಿ ಕಾಣಲಾಗುತ್ತಿತ್ತು. ಗಾಂಧಿ ಅವರನ್ನೂ ಭಾರತೀಯ ಮಟ್ಟಕ್ಕೆ ಏರಿಸುವಂತೆ ಮಾಡಿದರು. ಸೆರೆಮನೆಯ ಸತ್ಯಾಗ್ರಹಿಗಳು ಒಂದು ಮೇಜನ್ನೂ ಮತ್ತು ಲೇಖನ ವಸ್ತುಗಳನ್ನೂ ಉಪಯೋಗಿಸಲು ಗೌರ್ನರ್ ಒಪ್ಪಿಗೆಯಿತ್ತನು. ಗಾಂಧಿಯವರ ಬಳಿಯಲ್ಲಿ ಬರ್ನ್ಸ್ ಕುರಿತು ಕಾರ್ಲೈಲ್ ಬರೆದ ಗ್ರಂಥ ಬೇಕನ್ನನ ಪ್ರಬಂಧಗಳು, ಟಾಲ್‌ಸ್ಟಾಯ್, ರಸ್ಕಿನ್ ಮತ್ತು ಸಾಕ್ರೆಟೀಸ್ ಮೊದಲಾದವರ ಕೃತಿಗಳಿದ್ದುವು. ಅವುಗಳಲ್ಲಿ ಕೆಲವನ್ನು ಅವರು ಮತ್ತೆ ಮತ್ತೆ ಓದಿದರು. ಬೆಳಗಿನ ವೇಳೆ ಗೀತೆಯನ್ನೂ ಮಧ್ಯಾಹ್ನದ ವೇಳೆ ಕೊರಾನಿನ ಇಂಗ್ಲಿಷ್ ಭಾಷಾಂತರವನ್ನೂ ಓದುತ್ತಿದ್ದರು. ಸಂಜೆ ವೇಳೆ ಇಂಗ್ಲಿಷ್ ಕಲಿಯಲು ಅಪೇಕ್ಷಿಸಿದ ಒಬ್ಬ ಚೀನೀ ಕ್ರೈಸ್ತನಿಗೆ ಬೈಬಲನ್ನು ಕಲಿಸಿದರು. ಅವರು ಕಾರ್ಲೈಲ್ ಮತ್ತು ರಸ್ಕಿನ್ನರ ಒಂದೊಂದು ಗ್ರಂಥವನ್ನು ಗುಜರಾತಿಗೆ ಭಾಷಾಂತರಿಸಲು ಪ್ರಾರಂಭಿಸಿದರು. ಆದರೆ ಜಾಗ್ರತೆ ಬಿಡುಗಡೆಯಾದುದರಿಂದ ಅದು ಅರ್ಧಕ್ಕೆ ನಿಂತುಹೋಯಿತು. ಪ್ರತಿದಿನ ಬೆಳಗ್ಗೆ ಅವರು ತಮ್ಮ ಜೊತೆಯವರೊಡನೆ ಸ್ವ ಇಚ್ಛೆಯಿಂದ ಅಂಗಸಾಧನೆ ಮಾಡುತ್ತಿದ್ದರು.

ಸತ್ಯಾಗ್ರಹಿಗಳ ಬಂಧನದ ವಿರುದ್ಧವಾಗಿ ಇಂಗ್ಲೆಂಡ್ ಮತ್ತು ಭಾರತಗಳಲ್ಲಿ ಪ್ರತಿಭಟನೆ ನಡೆದುವು. ಜನರಲ್ ಸ್ಮಟ್ಸ್ ಸಂಪುಟ ಆಗಾಗ ಸಭೆಗಳನ್ನು ನಡೆಸಿ, ಎರಡು ವಾರಗಳ ತರುವಾಯ ಟ್ರಾನ್ಸ್‌ವಾಲ್ 'ಲೀಡರ್' ಸಂಪಾದಕ ಮಿ. ಆಲ್ಬರ್ಟ್ ಕಾರ್ಟ್‌ರೈಟ್ ಅವರನ್ನು ಒಪ್ಪಂದದ ಷರತ್ತುಗಳೊಂದಿಗೆ ಗಾಂಧಿಯನ್ನು ಭೇಟಿ ಮಾಡಲು ಕಳಿಸಿದರು. ಭಾರತೀಯರು ಸ್ವ-ಇಚ್ಛೆಯಿಂದಲೇ ದಾಖಲಾತಿ ಪಡೆಯಬೇಕು. ಅದು ಯಾವ ಶಾಸನದಂತೆಯೂ ಅಲ್ಲ. ದಾಖಲಾತಿ ಪತ್ರದಲ್ಲಿನ ನಮೂದಿಸುವ ವಿಷಯಗಳನ್ನು ಸರಕಾರವು ಭಾರತೀಯರೊಂದಿಗೆ ಚರ್ಚಿಸಿ ತೀರ್ಮಾನಿಸಿಕೊಳ್ಳಬೇಕು. ಭಾರತೀಯರಲ್ಲಿ ಬಹುಸಂಖ್ಯಾತರು ಸ್ವ ಇಚ್ಛೆಯಿಂದ ದಾಖಲಾತಿ ಮಾಡಿಸಿಕೊಂಡರೆ, ಸರಕಾರವು ಕರಾಳ ಶಾಸನವನ್ನು ರದ್ದುಪಡಿಸಿ, ಸ್ವ ಇಚ್ಛೆಯ ದಾಖಲಾತಿಯನ್ನು ಶಾಸನಬದ್ಧ ಮಾಡಲು ಕಾರ್ಯ ಕೈಗೊಳ್ಳಬೇಕು.–ಇವು ಷರತ್ತುಗಳಾಗಿದ್ದುವು. ಗಾಂಧಿಯ ಅನುಯಾಯಿಗಳು ಇದರ ಬಗೆಗೆ ಪೂರ್ಣ ಜವಾಬ್ದಾರಿಯನ್ನು ಅವರಿಗೆ ಕೊಟ್ಟರು. ಗಾಂಧಿ ಈ ಷರತ್ತುಗಳ ಕರಡಿನಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಆದರೆ ಜನರಲ್ ಸ್ಮಟ್ಸ್ ಇದನ್ನೆಲ್ಲ ಕೇಳುವ ಸ್ಥಿತಿಯಲ್ಲಿರಲಿಲ್ಲ.

ಜನವರಿ ೩೦ ರಂದು ಜೋಹಾನ್ಸ್‌ಬರ್ಗ್‌ನ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಜನರಲ್ ಸ್ಮಟ್ಸ್‌ರನ್ನು ಸಂದರ್ಶಿಸಲು ಗಾಂಧಿಯನ್ನು ಪ್ರಿಟೋರಿಯಾಕ್ಕೆ ಕರೆದೊಯ್ದರು. ಫೌಂಟನ್‌ಹಾಲ್ಸ್‌ನಲ್ಲಿ ರೈಲನ್ನು ನಿಲ್ಲಿಸಲಾಯಿತು. ತೆರೆಯ ಮರೆಯಿದ್ದ ಒಂದು ಗಾಡಿಯಲ್ಲಿ ಗಾಂಧಿಯನ್ನು ಹತ್ತಿಸಿ, ಸರಕಾರದ ಭವನಕ್ಕೆ ಒಯ್ಯಲಾಯಿತು. ಜನರಲ್ ಸ್ಮಟ್ಸ್ ಅವರು ಗಾಂಧೀಯನ್ನು ಬಿಡುಗಡೆ ಮಾಡಿರು

ವುದಾಗಿಯೂ ಮತ್ತು ಅವರ ಸಲಹೆಗಳು ಸರಕಾರಕ್ಕೆ ಒಪ್ಪಿಗೆಯಾಗಿವೆಯೆಂದೂ ತಿಳಿಸಿದರು.

ಗಾಂಧಿಯ ಬಳಿ ಹಣವಿರಲಿಲ್ಲ. ಅವರು ರೈಲು ವೆಚ್ಚಕ್ಕಾಗಿ ಜನರಲ್ ಸ್ಮಟ್ಸ್ ರವರ ಕಾರ್ಯದರ್ಶಿಯಿಂದ ಸ್ವಲ್ಪ ಹಣ ಸಾಲ ತೆಗೆದುಕೊಂಡರು. ಸಂಜೆ ೭.೪೫ಕ್ಕೆ ರೈಲಿನಲ್ಲಿ ಹೊರಟು ರಾತ್ರಿ ೯ರ ವೇಳೆಗೆ ಜೊಹಾನ್ಸ್ ಬರ್ಗನ್ನು ತಲುಪಿದರು. ಅಲ್ಲಿಂದ ಅವರು ನೇರವಾಗಿ ಮಸೀದಿ ಮೈದಾನಕ್ಕೆ ಹೋದರು. ಮಧ್ಯ ರಾತ್ರಿ ಕಳೆದ ಸ್ವಲ್ಪ ವೇಳೆಯ ಮೇಲೆ ಸುಮಾರು ಸಾವಿರ ಮಂದಿ ಇದ್ದ ಭಾರತೀಯರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು: "ಈ ಒಪ್ಪಂದದಿಂದ ನಮ್ಮ ಹೊಣೆ ಹೆಚ್ಚಿದೆ. ಟ್ರಾನ್ಸ್‌ವಾಲಿಗೆ ಒಬ್ಬ ಭಾರತೀಯನನ್ನು ಕೂಡ ಕಳ್ಳತನದಿಂದಾಗಲೀ ಮೋಸದಿಂದಾಗಲೀ ಕರೆತರಲು ಇಚ್ಛಿಸುವುದಿಲ್ಲವೆಂದು ತೋರಿಸುವುದಕ್ಕಾಗಿ ನಾವೀಗ ಸ್ವ ಇಚ್ಛೆಯಿಂದ ದಾಖಲಾತಿ ಮಾಡಿಸಿಕೊಳ್ಳಬೇಕ .

ಗಾಂಧಿ ಭಾಷಣ ಮುಗಿಸುತ್ತಿದ್ದಂತೆಯೇ ಒಬ್ಬ ಪಠಾಣ ಎದ್ದು ನಿಂತು ಪ್ರಶ್ನೆಗಳ ಮಾಲಿಕೆಯನ್ನೇ ಹಾಕಿದ: "ಬೆರಳಿನ ಗುರುತನ್ನು ಕೊಡುವುದು ಅಪರಾಧಿಗಳು ಮಾತ್ರ ಎಂದು ಹೇಳಿದವರು ನೀವೇ. ಹೋರಾಟವೆಲ್ಲ ಬೆರಳು ಗುರುತನ್ನು ಕೊಡುವುದರ ಬಗೆಗೆ ಕೇಂದ್ರೀಕೃತ ಎಂದು ಹೇಳಿದವರೂ ನೀವೇ. ಇವುಗಳು ಇಂದಿನ ನಿಮ್ಮ ವರ್ತನೆಯ ಬಗೆಗೆ ಹೇಗೆ ಹೊಂದಿಕೊಳ್ಳುತ್ತವೆ?" ಗಾಂಧೀ ಹೀಗೆ ಉತ್ತರವಿತ್ತರು: "ಬೆರಳಿನ ಗುರುತನ್ನು ಕೊಡುವುದು ಹಾಗಿರಲಿ ಕಾರಳ ಶಾಸನದ ದೃಷ್ಟಿಯಿಂದ ನಮ್ಮ ಸಹಿಗಳನ್ನು ಕೊಡುವುದು ಸಹ ಪಾಪವೇ. ಆದರೆ ಈಗ ಪರಿಸ್ಥಿತಿ ಬದಲಾಯಿಸಿದೆ. ನೀವು ಬಲಾತ್ಕಾರದಿಂದ ನನ್ನ ವಂದನೆಯನ್ನು ಸ್ವೀಕರಿಸಲು ಯತ್ನಿಸಿ, ನಾನು ನಿಮಗೆ ಶರಣಾಗತನಾದರೆ, ಸಾರ್ವಜನಿಕ ದೃಷ್ಟಿಯಲ್ಲಿ, ನಿಮ್ಮ ದೃಷ್ಟಿಯಲ್ಲಿ–ನನ್ನ ದೃಷ್ಟಿಯಲ್ಲಿಯೂ ಸಹ ನಾನು ಪತಿತನೇ ಸರಿ. ಆದರೆ, ನಿಮ್ಮನ್ನು ಸೋದರನೆಂದೋ ಅಥವಾ ಸರಿಸಮಾನನೆಂದೋ ಭಾವಿಸಿ, ನಾನೇ ಸ್ವಇಚ್ಛೆಯಿಂದ ವಂದಿಸಿದರೆ, ಅದು ನನ್ನ ವಿನಯ ಮತ್ತು ಸಭ್ಯತೆಗಳನ್ನು ತೋರಿಸುತ್ತದೆ".

ಆದರೆ ಪಠಾಣನು ಗಾಂಧಿಯನ್ನು ಕುರಿತು ಒರಟಾಗಿ ಹೇಳಿದನು: "ನೀವು ಸಮಾಜಕ್ಕೆ ದ್ರೋಹವೆಸಗಿದ್ದೀರೆಂದೂ ಸಮಾಜ ಹಿತವನ್ನು ೧೫,೦೦೦ ಪೌಂಡುಗಳಿಗೆ ಜನರಲ್ ಸ್ಮಟ್ಸ್ ಅವರಿಗೆ ಮಾರಿ ಬಿಟ್ಟಿದ್ದೀರೆಂದೂ ಕೇಳಿದ್ದೇವೆ. ನಾವು ಎಂದಿಗೂ ಬೆರಳಿನ ಗುರುತುಗಳನ್ನು ಕೊಡುವುದಿಲ್ಲ; ಇತರರು ಕೊಡುವುದಕ್ಕೂ ಬಿಡುವುದಿಲ್ಲ. ನಾನು ಅಲ್ಲಾನ ಮೇಲೆ ಆಣೆಯಿಟ್ಟು ಹೇಳುತ್ತೇನೆ–ದಾಖಲಾತಿ ಮಾಡಿಸಲು ನಾಯಕತ್ವ ವಹಿಸುವವನನ್ನು ಕೊಲ್ಲುತ್ತೇನೆ".

ಯಾರು ಬೆರಳು ಗುರುತುಗಳನ್ನು ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವರೋ ಅವರಿಂದ ಅದನ್ನು ಒತ್ತಾಯ ಮಾಡಲಾಗುವುದಿಲ್ಲವೆಂದು ಗಾಂಧಿ ಹೇಳಿದರು. ಮತ್ತು ಯಾವೊಬ್ಬ ಪಠಾಣನೇ ಆಗಲೀ ಅಥವಾ ಯಾರೇ ಆಗಲೀ ಬೆರಳು ಗುರುತು

ಗಳನ್ನು ಕೊಡದೆ ದಾಖಲಾತಿ ಮಾಡಿಸಿಕೊಳ್ಳಲು ಬಯಸಿದರೆ ತಾವು ಅವನಿಗೆ ಎಲ್ಲ ಸಹಾಯವನ್ನೂ ನೀಡುವುದಾಗಿ ಭರವಸೆಯಿತ್ತರು. ಅನಂತರ ಅವರು ಹೀಗೆ ನುಡಿದರು: "ನನ್ನ ಗೆಳೆಯನು ನನಗೊಡ್ಡಿರುವ ಸಾವಿನ ಬೆದರಿಕೆ ನನಗಿಷ್ಟವಿಲ್ಲ.ಅಲ್ಲದೆ ಇನ್ನೊಬ್ಬನನ್ನು ಕೊಲೆ ಮಾಡುವುದಕ್ಕೆ ಪರಮಶಕ್ತಿಯ ಹೆಸರಿನಲ್ಲಿ ಆಣೆ ಇಟ್ಟುಕೊಳ್ಳಬೇಕಾಗಿಲ್ಲವೆಂದು ನನ್ನ ನಂಬಿಕೆ. ಏನೇ ಆಗಲಿ. ಈ ಒಪ್ಪಂದಕ್ಕೆ ಪ್ರಧಾನ ಕಾರಣನಾಗಿ, ಹಾಗೆಯೇ ಸಮಾಜದ ಸೇವಕನಾಗಿ, ಬೆರಳಿನ ಗುರುತನ್ನು ಕೊಡುವದಕ್ಕೆ ನಾನೇ ನಾಯಕತ್ವವನ್ನು ವಹಿಸುವುದು ನನ್ನ ಸ್ಪಷ್ಟ ಕರ್ತವ್ಯ. ಅದನ್ನು ನಿರ್ವಹಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ರೋಗದಿಂದಲೋ ಬೇರೆ ಯಾವ ಕಾರಣದಿಂದಲೋ ಸಾಯುವುದಕ್ಕಿಂತಲೂ ಸೋದರನೊಬ್ಬನ ಕೈಯಿಂದ ಸಾವನ್ನಪ್ಪುವುದು ನನಗೇನೂ ದುಃಖದ ವಿಷಯವಲ್ಲ. ಅಂತಹ ಸಂದರ್ಭದಲ್ಲಿಯೂ ಕೂಡ ಹತ್ಯಾಕಾರಿಯ ಮೇಲೆ ನಾನು ಕೋಪ ದ್ವೇಷಗಳಿಂದ ಮುಕ್ತನಾಗಿರುತ್ತೇನೆ; ಅದು ನನ್ನ ಚಿರಂತನ ಶ್ರೇಯಸ್ಸಿಗೇ ಕಾರಣವಾಗುತ್ತದೆ; ಅಲ್ಲದೆ ಮುಂದೆ ಎಂದಾದರೂ ಆತ ನನ್ನ ನಿರಪರಾಧಿತ್ವವನ್ನು ಮನಗಾಣಬಹುದು."

ಟ್ರಾನ್ಸ್‌ವಾಲಿನಲ್ಲಿ ಸುಮಾರು ೫೦ ಮಂದಿ ಪಠಾಣರಿದ್ದರು. ಅವರಲ್ಲಿ ಕೆಲವರು ಗಾಂಧಿಯ ಕಕ್ಷಿಗಾರರೇ ಆಗಿದ್ದರು. ಅವರೆಲ್ಲ ಹೋರಾಟದಲ್ಲಿ ಪೂರ್ಣವಾಗಿ ಭಾಗವಹಿಸಿದ್ದರು. ಯಾರೂ ಕರಾಳ ಶಾಸನಕ್ಕೆ ಶಿರ ಬಾಗಿರಲಿಲ್ಲ. ಅವರು ಮುಗ್ಧ, ಸರಳವಾಗಿ ನಂಬಿ ಬಿಡುವ ಜನರಾಗಿದ್ದುದರಿಂದ ಅವರನ್ನು ತಪ್ಪುದಾರಿಗೆ ಎಳೆಯುವುದು ಸುಲಭವಾಗಿತ್ತು.

ಗಾಂಧಿ ಮನೆಯನ್ನು ತಲುಪಿದಾಗ ಬೆಳಗಿನ ಜಾವ ೩ ಘಂಟೆ. ಏಳು ಘಂಟೆಗೆ ಅವರು ಸೆರೆಮನೆಯ ಅಧಿಕಾರಿಗಳಿಗೆ ವಶರಾದರು. ಒಂದು ಘಂಟೆಯ ತರುವಾಯ ಜನವರಿ ೩೧ರಂದು ಗಾಂಧಿ ತಮ್ಮ ಜತೆಯ ಕೈದಿಗಳೊಂದಿಗೆ ಬಿಡುಗಡೆ ಪಡೆದರು. ಭಾರತೀಯರು ಅವರನ್ನು ಸೆರೆಮನೆಯ ದ್ವಾರದಲ್ಲಿ ಸ್ವಾಗತಿಸಿದರು. ಎಲ್ಲರೂ ಸಭೆ ನಡೆಯುವ ಸ್ಥಳಕ್ಕೆ ಹೋದರು. ಅಲ್ಲಿ ಬಿಡುಗಡೆಯಾದ ಕೈದಿಗಳಿಗೆಲ್ಲ ಉತ್ಸಾಹದ ಸ್ವಾಗತ ಸಿಕ್ಕಿತು.

೧೯೦೮ರ ಫೆಬ್ರುವರಿ ೧೦, ಸೋಮವಾರ ಬೆಳಗ್ಗೆ ೯-೪೫ ಕಳೆದಿತ್ತು. ಗಾಂಧಿ ಮತ್ತು ಅವರ ಸಹೋದ್ಯೋಗಿಗಳು ಅವರ ಕಾರ್ಯಾಲಯದಿಂದ (ಅದು ಸತ್ಯಾಗ್ರಹ ಸಂಘದ ಕಾರ್ಯಾಲಯವೂ ಆಗಿದ್ದಿತು) ಎಲ್ಲರೂ ದಾಖಲಾತಿಪತ್ರ ಪಡೆಯಲು ಹೊರಟರು. ಒಳ್ಳೆ ಕಟ್ಟುಮಸ್ತಾಗಿದ್ದ ಮೀರ್ ಆಲಂನ ಜತೆಯಲ್ಲಿ ಎಂಟು ಮಂದಿ ಪಠಾಣರೂ ಹೊರಟರು. ದಾಖಲಾತಿ ಕಾರ್ಯಾಲಯದ ಬಳಿ ಮೀರ್ ಆಲಂ, ಗಾಂಧಿಯನ್ನು "ಏನು ಮಾಡುವಿರಿ" ಎಂದು ಪ್ರಶ್ನಿಸಿದನು. "ನಾನು ಹತ್ತು ಬೆರಳುಗಳ ಗುರುತನ್ನು ಕೊಟ್ಟು ದಾಖಲಾತಿ ಪತ್ರವನ್ನು ಪಡೆಯುತ್ತೇನೆ. ನೀವೂ ನನ್ನ ಸಂಗಡ ಬಂದರೆ, ಎರಡು ಹೆಬ್ಬೆಟ್ಟುಗಳ ಗುರುತಿನಿಂದ ಮಾತ್ರ ನಿಮಗೆ ದಾಖಲಾತಿ ಪತ್ರ ಕೊಡಿಸು

ತ್ತೇನೆ. ಅನಂತರ ನಾನೂ ನನ್ನ ಬೆರಳಿನ ಗುರುತನ್ನು ಹಾಕಿ ಒಂದು ಪತ್ರವನ್ನು ಪಡೆಯುತ್ತೇನೆ" ಎಂದು ಗಾಂಧಿ ಉತ್ತರವಿತ್ತರು.

ಗಾಂಧಿ ಆಡಿದ ವಾಕ್ಯ ಮುಗಿಯುತ್ತಿದ್ದಂತೆಯೇ ಮೀರಂ ಅಲಂ ಅವರನ್ನು ಒಂದು ಭಾರವಾದ ದೊಣ್ಣೆಯಿಂದ ಹೊಡೆದನು. ಒಬ್ಬ ಪ್ರತ್ಯಕ್ಷದರ್ಶಿ ಹೀಗೆ ನುಡಿದ: "ದೊಣ್ಣೆಯ ಹೊಡೆತ ಬೆನ್ನು ಮೂಳೆಗೆ ಬೀಳುವುದು ತಪ್ಪಿತು. ತತ್‌ಕ್ಷಣ ಗಾಂಧೀ 'ಹೇ ರಾಮ' ಎನ್ನುತ್ತಾ ಪ್ರಜ್ಞೆ ತಪ್ಪಿದರು. ಅವರು ಬೀಳುವಾಗ ಅವರ ತಲೆ ಮೊನಚಾದ ಒಂದು ಕಲ್ಲು ಬಂಡೆಗೆ ತಾಕಿತು. ಇದರ ಪರಿಣಾಮವಾಗಿ ಮೇಲಿನ ತುಟಿ ಮತ್ತು ಕೆನ್ನೆಗಳು ತೀವ್ರವಾಗಿ ಹರಿದುವು. ಒಂದು ಹಲ್ಲು ಅಲ್ಲಾಡುವಂತಾಯಿತು. ಕಣ್ಣಿನ ಮೇಲ್ಭಾಗ ಅವರ ಹಣೆ, ಇನ್ನೊಂದು ಕಲ್ಲಿಗೆ ತಗುಲಿತು. ಮೂರನೆಯ ಕಲ್ಲು ಕಣ್ಣಿಗೇ ಬಡಿಯಬೇಕಾಗಿದ್ದಿತು; ಹೇಗೋ ತಪ್ಪಿತು". ಮೀರ್ ಆಲಂ ಮತ್ತು ಅವನ ಸಂಗಡಿಗರು ಇನ್ನೂ ಏಟುಗಳನ್ನೂ ಮತ್ತು ಒದೆತಗಳನ್ನೂ ಕೊಟ್ಟರು. ಅವುಗಳನ್ನು ಈಸಾಪ್ ಮಿಯಾ ಮತ್ತು ತಂಬಿ ನಾಯಿಡು ತಪ್ಪಿಸಿದರು.

ಈ ಶಬ್ದವನ್ನು ಕೇಳಿ ಕೆಲವರು ಬಿಳಿಯರು ದೃಶ್ಯ ನಡೆದ ಸ್ಥಳಕ್ಕೆ ಧಾವಿಸಿದರು. ಮೀರ್ ಆಲಂ ಮತ್ತು ಅವನ ಸಂಗಡಿಗರು ಓಟ ಕಿತ್ತರು. ಆದರೆ ಐರೋಪ್ಯರು ಅವರನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಗಾಂಧಿಯನ್ನು ಎತ್ತಿಕೊಂಡು ಒಬ್ಬ ಐರೋಪ್ಯನ ಖಾಸಗೀ ಕಾರ್ಯಾಲಯಕ್ಕೆ ಒಯ್ಯಲಾಯಿತು. ಅವರಿಗೆ ಪ್ರಜ್ಞೆ ಬಂದ ಮೇಲೆ, ರೆ. ಜೋಸೆಫ್ ಡೋಕ್ ಅವರನ್ನು ಒಂದು ಗಾಡಿಯಲ್ಲಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಒಬ್ಬ ವೈದ್ಯರನ್ನು ಕರೆಸಿದರು. ಈ ಮಧ್ಯೆ ಗಾಂಧಿ, ದಾಖಲಾತಿ ಪತ್ರಗಳನ್ನು ತರುವಂತೆ ದಾಖಲಾತಿ ಅಧಿಕಾರಿಗಳಿಗೆ ಹೇಳಿಕಳಿಸಿ, ತತ್‌ಕ್ಷಣ ತಮ್ಮ ಹೆಸರನ್ನು ದಾಖಲಾತಿ ಮಾಡಲು ಅವಕಾಶ ನೀಡಬೇಕಾಗಿ ಕೇಳಿಕೊಂಡರು. ಅಧಿಕಾರಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಅವರಿಗೆ ಹೇಳಿದರು. "ನಾನು ಬದುಕಿದ್ದರೆ, ದೇವರಿಗೆ ಒಪ್ಪಿಗೆಯಾಗುವುದಾದರೆ, ಪ್ರಥಮ ದಾಖಲಾತಿ ಪತ್ರ ತೆಗೆದುಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದ್ದೇನೆ. ಆದುದರಿಂದ ಇಲ್ಲಿಗೆ ಈಗಲೇ ಪತ್ರಗಳನ್ನು ತರಬೇಕೆಂದು ನಾನು ಒತ್ತಾಯಿಸುತ್ತೇನೆ" ಎಂದರು ಗಾಂಧಿ.

ಪತ್ರಗಳನ್ನು ತರಿಸಲಾಯಿತು. ಭಗ್ನ ಶಯ್ಯೆಯಿಂದಲೇ ಗಾಂಧಿ ಹತ್ತು ಬೆರಳುಗಳ ಗುರುತನ್ನೂ ಕೊಟ್ಟರು. ಈ ದೃಶ್ಯ ನೋಡಿದ ಅಧಿಕಾರಿಯ ಕಣ್ಣುಗಳಲ್ಲಿ ನೀರೂರಿತು.

ಗಾಂಧಿಗೆ ಶುಶ್ರೂಷೆ ಮಾಡಿದ ಡಾ. ಥ್ವೈಟ್, ಕೆನ್ನೆಯ ಮೇಲಿನ ಮತ್ತು ತುಟಿಯ ಮೇಲ್ಭಾಗದ ಗಾಯಗಳನ್ನು ಹೊಲಿದರು. ಪಕ್ಕೆಲುಬುಗಳಿಗೆ ಹಚ್ಚಲು ಒಂದು ಬಗೆಯ ಮುಲಾಮನ್ನು ಸೂಚಿಸಿದರು. ಹೊಲಿಗೆ ಬಿಚ್ಚುವವರೆಗೂ ಪೂರ್ಣ ಮೌನವನ್ನು ವಿಧಿಸಿ, ಒಂದು ವಾರದ ವರೆಗೆ ಸಂಪೂರ್ಣ ವಿಶ್ರಾಂತಿಯನ್ನು ವಿಧಿಸಿದರು. ಮತ್ತು ಎರಡು ತಿಂಗಳ ಕಾಲ ಯಾವುದೇ ದೈಹಿಕ ಶ್ರಮವನ್ನು ಕೈಗೊಳ್ಳಬಾರದೆಂದೂ ಎಚ್ಚರಿಸಿದರು.

ರುಗ್ಣ ಶಯ್ಯೆಯಿಂದಲೇ ಗಾಂಧಿ ಸರಕಾರದ ವಕೀಲರಿಗೆ ತಂತಿ ಸುದ್ದಿ ಕಳಿಸಿ, ತಮ್ಮ ಮೇಲೆ ದಾಳಿ ಮಾಡಿದ್ದಕ್ಕೆ ಮೀರ್ ಆಲಂ ಮತ್ತು ಇತರರನ್ನು ತಪ್ಪಿತಸ್ಥರೆಂದು ತಾವು ಭಾವಿಸುವುದಿಲ್ಲವೆಂದೂ ಅವರನ್ನು ಬಿಡುಗಡೆ ಮಾಡಬೇಕೆಂದೂ ಪ್ರಾರ್ಥಿಸಿದರು. ಭಾರತೀಯ ಸಮುದಾಯಕ್ಕೆ ಒಂದು ಸಣ್ಣ ಸಂದೇಶ ಕಳಿಸಿದರು. "ನಾನು ಅದಷ್ಟು ಜಾಗ್ರತೆ ಕಾರ್ಯದಲ್ಲಿ ತೊಡಗುತ್ತೇನೆ. ಯಾರು ಈ ಕಾರ್ಯ ಮಾಡಿದರೊ ಅವರಿಗೆ ತಾವು ಮಾಡುತ್ತಿದ್ದುದರ ಅರಿವಿರಲಿಲ್ಲ. ನಾನು ಮಾಡುತ್ತಿದ್ದುದು ತಪ್ಪೆಂದು ಅವರು ಭಾವಿಸಿದ್ದರು. ಅವರಿಗೆ ಗೊತ್ತಿದ್ದ ಒಂದೇ ವಿಧಾನದಲ್ಲಿ ಅವರು ಪರಿಹಾರವನ್ನು ಪಡೆದುಕೊಂಡರು. ಆದುದರಿಂದ ಅವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳಬಾರದೆಂದು ಬೇಡುತ್ತೇನೆ. ಈ ಧಾಳಿ ಒಬ್ಬ ಮುಸಲ್ಮಾನ್ ಅಥವಾ ಮುಸಲ್ಮಾನರಿಂದ ನಡೆದಿರುವುದನ್ನು ಕಂಡು ಹಿಂದೂಗಳು ಕೆರಳಲು ಸಾಧ್ಯವಿದೆ. ಇದಕ್ಕೆ ಪ್ರತಿಯಾಗಿ ಇಂದು ಚೆಲ್ಲಿರುವರಕ್ತ ಎರಡೂ ಕೋಮುಗಳವರನ್ನು ವಿಚ್ಛಿನ್ನವಾಗದ ರೀತಿಯಲ್ಲಿ ಕೂಡಿಸಲಿ. ನನ್ನ ಮೇಲೆ ಧಾಳಿಯಾಗಿರಲಿ ಬಿಡಲಿ, ನನ್ನ ಸಲಹೆ ಎಂದಿನಂತೆಯೇ ಇದೆ. ಏಷ್ಯಾದ ಬಹುಸಂಖ್ಯಾತರು ಬೆರಳು ಗುರುತುಗಳನ್ನು ಕೊಡಬೇಕು. ಸ್ವಯಂ ಪ್ರೇರಣೆಯಿಂದ ದಾಖಲಾತಿ ಆದರೆ, ಶಾಸನವನ್ನು ರದ್ದು ಪಡಿಸಲಾಗುವುದೆಂಬ ಭಾಷೆಯಿತ್ತಿರುವುದರಿಂದ ಪ್ರತಿಯೊಬ್ಬ ಸದ್ಗೃಹಸ್ಥ ಭಾರತೀಯನೂ ಸರಕಾರಕ್ಕೆ ಮತ್ತು ವಸಾಹತುವಿಗೆ ಶಕ್ತಿಮೀರಿ ನೆರವಾಗುವುದು ಪವಿತ್ರ ಕರ್ತವ್ಯವಾಗಿದೆ".

ಮೀರ್ ಆಲಂ ಮೇಲೆ ಮೊಕದ್ದಮೆ ನಡೆಸಬಾರದೆಂಬ ಗಾಂಧಿಯ ಪ್ರಾರ್ಥನೆಯನ್ನು ಸರಕಾರ ಮನ್ನಿಸಲಿಲ್ಲ. ಗಾಂಧಿಯ ಮೇಲೆ ದಾಳಿ ಮಾಡಿದ್ದ ಪಠಾಣನಿಗೆ ಶಿಕ್ಷೆ ಆಗಲೇ ಬೇಕೆಂದು ಐರೋಪ್ಯರು ಒತ್ತಾಯಪಡಿಸಿದರು. ಮೀರ್ ಆಲಂ ಮತ್ತು ಅವನ ಒಬ್ಬ ಸಂಗಡಿಗ ಇಬ್ಬರಿಗೂ ಮೂರು ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಲಾಯಿತು.

ರೆ. ಡೋಕ್ ಅವರ ಪತ್ನಿ ಮತ್ತು ಮಕ್ಕಳು ಗಾಂಧಿಯನ್ನು ತಮ್ಮ ಕುಟುಂಬದವರಂತೆಯೇ ನೋಡಿಕೊಂಡರು. ಕೈಯಲ್ಲಿ ಬುಟ್ಟಿ ಹಿಡಿದುಕೊಂಡು. ಹರಕು ವಸ್ತ್ರ, ಹರಕು ಪಾವರಕ್ಷೆ ಧರಿಸಿದ ಸಂಚಾರೀ ವ್ಯಾಪಾರಿಯಿಂದ ಹಿಡಿದು ಅತ್ಯಂತ ಶ್ರೀಮಂತ ವರ್ತಕನವರೆಗೆ ಗಾಂಧಿಯನ್ನು ನೋಡಲು ಬಂದ ಎಲ್ಲರಿಗೂ ಡೋಕ್ ಅವರ ಮನೆಯಲ್ಲಿ ಸ್ವಾಗತವಿತ್ತು. ಡೋಕ್, ಗಾಂಧಿಯನ್ನು ಒಂದು ವರ್ಷದ ಹಿಂದೆ ಮಾತ್ರ ಪರಿಚಯ ಮಾಡಿಕೊಂಡಿದ್ದರು. ಇಬ್ಬರೂ ಗಾಢ ಸ್ನೇಹಿತರಾದರು. ಡೋಕ್‌ರು ಬಹಿರಂಗವಾಗಿಯೇ ಭಾರತೀಯರಿಗೆ ನೆರವನ್ನಿತ್ತರು. ಅವರು ಕೆಲವು ಕಾಲ ಇಂಡಿಯನ್ ಒಪಿನಿಯನ್ ಪತ್ರಿಕೆಗೆ ಸಂಪಾದಕರಾಗಿಯೂ ಸೇವೆ ಸಲ್ಲಿಸಿದರು. ಅವರು ೧೯೦೯ರಲ್ಲಿ ಗಾಂಧಿಯ ಪ್ರಥಮ ಜೀವನಕಥೆಯನ್ನು ಬರೆದರು.

ಡೋಕ್ ಅವರೊಂದಿಗೆ ಹತ್ತು ದಿನಗಳು ತಂಗಿದ ಮೇಲೆ, ಗಾಂಧಿಗೆ ಸ್ವಲ್ಪ ಗುಣಮುಖವಾಯಿತು. ಅವರು ಊರಿನ ಹೊರವಲಯದಲ್ಲಿದ್ದ ಪೋಲಕ್ ಅವರ ನಿವಾಸಕ್ಕೆ

ಹೋದರು. ಅಲ್ಲಿ ಅವರು ಗುಣಮುಖರಾಗುತ್ತಿದ್ದಾಗ ಬೆಳಸಿಕೊಂಡ ಒಂದು ಶಕ್ತಿಯನ್ನು ಮುಂದೆಯೂ ಉಳಿಸಿಕೊಂಡರು. ಅದೆಂದರೆ, ಅವರು ಕೆಲಸದಲ್ಲಿ ಮಗ್ನರಾಗಿದ್ದಾಗ ಇದ್ದಲ್ಲಿಯೇ ಕೆಲವು ನಿಮಿಷ ನಿದ್ರೆ ಹೋಗಿ, ಅನಂತರ ಹೊಸ ಚೇತನದಿಂದ ಎಚ್ಚರವಾಗುತ್ತಿದ್ದರು.

ಗಾಂಧಿ, ಕುಟುಂಬದವರು ಫೀನಿಕ್ಸ್‌ನಲ್ಲಿ ವಾಸಿಸುತ್ತಿದ್ದುದರಿಂದ ಜೋಹಾನ್ಸ್‌ಬರ್ಗ್‌ನಲ್ಲಿ ಗಾಂಧಿಯನ್ನು ಸಂದರ್ಶಿಸಲಾಗಲಿಲ್ಲ. ಅವರ ಹಣಕಾಸಿನ ಸ್ಥಿತಿಯೂ ತೃಪ್ತಿಕರವಾಗಿರಲಿಲ್ಲ. ಆದುದರಿಂದ ಗಾಂಧಿ ಚೆನ್ನಾಗಿ ಗುಣ ಹೊಂದಿದ ಮೇಲೆ ಅವರನ್ನು ನೋಡಲು ಫೀನಿಕ್ಸ್‌ಗೆ ಹೋದರು. ಆದರೆ ಅಲ್ಲಿ ಬಹಳ ಕಾಲ ನಿಲ್ಲಲಿಲ್ಲ.

ಏಪ್ರಿಲ್ ತಿಂಗಳ ವೇಳೆಗೆ ಗಾಂಧಿಗೆ ಸಾಕಷ್ಟು ಗುಣವಾಯಿತು. ಅವರು ಸಾರ್ವಜನಿಕ ಕಾರ್ಯದಲ್ಲಿ ಮತ್ತೆ ಮಗ್ನರಾದರು. ಅವರು ನೇಟಾಲ್ ಭಾರತೀಯರ ಸಹಾನುಭೂತಿಯನ್ನು ಪಡೆದುಕೊಳ್ಳುವುದಕ್ಕಾಗಿ, ಆಗಾಗ ಟ್ರಾನ್ಸ್‌ವಾಲ್‌ಗೂ ಮತ್ತು ನೇಟಾಲಿಗೂ ಓಡಾಡಬೇಕಾಯಿತು. ಅವರು ಆದಷ್ಟು ಜಾಗ್ರತೆ ದರ್ಬಾನಿಗೆ ಹೋಗಿ, ಅಲ್ಲೊಂದು ಸಾರ್ವಜನಿಕ ಸಭೆಯನ್ನು ಕರೆದರು. ಸಭೆ ಮುಗಿದಾಗ ಒಬ್ಬ ಪಠಾಣ ದೊಡ್ಡ ದೊಣ್ಣೆ ಹಿಡಿದು ನುಗ್ಗಿ ಬಂದ. ಆದರೆ ಅವರ ಸಹೋದ್ಯೋಗಿಗಳ ದೃಢ ಮನಸ್ಸಿನ ಕಾರ್ಯ ಪ್ರಭಾವದಿಂದ ಅವರ ಜೀವ ಉಳಿಯಿತು.

ಇನ್ನು ಮುಂದೆ ಗಾಂಧಿ ಒಬ್ಬ ಅಂಗರಕ್ಷಕನನ್ನು ಇಟ್ಟುಕೊಳ್ಳಲು ಅವರ ಸಹಕಾರ್ಯಕರ್ತರು ಒತ್ತಾಯ ಮಾಡಿದರು. ನೇಟಾಲಿನಲ್ಲಿ ಜನಿಸಿದ ಮಿ. ಜಾಕ್ ಮೂಡಲೇ ಎಂಬ ಮುಷ್ಟಿ ಕಾಳಗ ನಿಪುಣನಾದ ತಮಿಳು ಯುವಕ, ಗಾಂಧಿಗೆ ತಾನಾಗಿಯೇ ಅಂಗರಕ್ಷಕನಾದನು. ಫೀನಿಕ್ಸ್ ವಸಾಹತುವಿನಲ್ಲಿ ಗಾಂಧಿ ಬಯಲಿನಲ್ಲಿ ನಿದ್ರೆ ಮಾಡುವಾಗ ಆತ ಕಾವಲಿರುತ್ತಿದ್ದನು.

ಗಾಂಧಿ ಫೀನಿಕ್ಸ್‌ನಿಂದ ಇಂಡಿಯನ್ ಒಪಿನಿಯನ್‌ಗೆ ಧಾರಾವಾಹಿಯಾಗಿ ಲೇಖನಗಳನ್ನು ಬರೆದು, ಭಾರತೀಯರಲ್ಲಿ ಬಹು ಸಂಖ್ಯಾತರನ್ನು ಪ್ರಭಾವಯುತವಾಗಿ ತಮ್ಮ ಅಭಿಪ್ರಾಯಕ್ಕೆ ಒಲಿಸಿಕೊಂಡರು. ಸ್ವಯಂಪ್ರೇರಿತ ದಾಖಲಾತಿಯ ಕಡೆಯ ದಿನವಾದ ಮೇ ೯ಕ್ಕೆ ೯,೦೦೦ ಅರ್ಜಿಗಳು ಬಂದಿದ್ದುವು. ಅವುಗಳಲ್ಲಿ ೬,೦೦೦ವನ್ನು ಅಂಗೀಕರಿಸಲಾಯಿತು.

ಹೀಗೆ ಭಾರತೀಯರು ತಮ್ಮ ಭಾಗದ ಒಪ್ಪಂದದ ಕಾರ್ಯವನ್ನು ಮುಗಿಸಿದ್ದರು. ಕೊಟ್ಟ ಮಾತನ್ನು ನಡೆಸುವುದರಲ್ಲಿ ಭಾರತೀಯರು ತೋರಿಸಿದ ಉತ್ಸುಕತೆಯನ್ನು 'ಪ್ರಿಟೋರಿಯಾ ನ್ಯೂಸ್' ಪತ್ರಿಕೆ ಶ್ಲಾಘಿಸಿತು; ತರುವಾಯ ಗಾಂಧಿ ಸರಕಾರವನ್ನು ಭೇಟಿಮಾಡಿ. ಏಷ್ಯಾ ಶಾಸನ ತಿದ್ದುಪಡಿಯನ್ನು ರದ್ದುಗೊಳಿಸುವ ಬಗೆಗೆ ಅವರ ಭಾಗದ ಕಾರ್ಯವನ್ನು ಮಾಡಬೇಕೆಂದೂ, ಏಷ್ಯಾದವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ದಾಖಲಾತಿಗಳನ್ನು ನ್ಯಾಯಬದ್ಧವನ್ನಾಗಿ ಮಾಡಬೇಕೆಂದೂ ಬಿನ್ನವಿಸಿಕೊಂಡರು.

ವಚನ ಭಂಗ

೧೯೦೮

ಜನರಲ್ ಸ್ಮಟ್ಸ್. ಕರಾಳ ಶಾಸನವನ್ನು ರದ್ದು ಮಾಡುವುದಕ್ಕೆ ಪ್ರತಿಯಾಗಿ, ಇನ್ನೊಂದು ಹೆಜ್ಜೆ ಮುಂದಿಟ್ಟರು. ಅವರು ಹಳೆಯ ಶಾಸನವನ್ನು ಕಡತದಲ್ಲಿ ಉಳಿಸಿದರು: ಹೊಸ ಕ್ರಮವನ್ನು ಆಚರಣೆಗೆ ತಂದರು. ಸ್ವಯಂಪ್ರೇರಿತರಾಗಿ ಮಾಡಿಸಿಕೊಂಡ ದಾಖಲಾತಿಗಳನ್ನೂ ಶಾಸನದ ಪ್ರಕಾರ ನಿಗದಿಯಾಗಿದ್ದ ತಾರೀಕಿನ ತರುವಾಯ ಕೊಡಲಾದ ಪತ್ರಗಳನ್ನೂ ಊರ್ಜಿತಗೊಳಿಸಿ. ಸ್ವಯಂಪ್ರೇರಿತರಾಗಿ ದಾಖಲಾತಿ ಪತ್ರಗಳನ್ನು ಪಡೆದುಕೊಂಡವರನ್ನು ಅದರ ಕಾರ್ಯವ್ಯಾಪ್ತಿಯಿಂದ ವಿನಾಯಿತಿಸಿದರು. ಅಲ್ಲದೆ ದಾಖಲಾತಿಗೆ ಸಂಬಂಧಿಸಿದಂತೆ ಹೊಸ ನಿಬಂಧನೆಗಳನ್ನು ಮಾಡಿದರು. ಇದರಿಂದ ಒಂದೇ ಉದ್ದೇಶದಿಂದ ಕೂಡಿದ್ದ ಎರಡು ನಿಬಂಧನೆಗಳು ಏಕಕಾಲದಲ್ಲಿ ಆಚರಣೆಗೆ ಬಂದುವು. ಹೊಸದಾಗಿ ಬರುವ ಭಾರತೀಯರು ಮತ್ತು ಕಾಲಮಿಂಚಿ ದಾಖಲಾತಿ ಮಾಡಿಸಿಕೊಂಡವರು ಈ ಇಬ್ಬರೂ ಈಗ ಕರಾಳ ಶಾಸನಕ್ಕೆ ಬದ್ಧರಾಗಿದ್ದರು.

ಜನರಲ್ ಸ್ಮಟ್ಸ್ ಅವರು ಹೀಗೆ ಹೇಳಿಕೆಯನ್ನಿತ್ತರು: "ಜನವರಿ ೩೦ ರಂದಾಗಲೀ ಅಥವಾ ೧೯೦೮ರ ಫೆಬ್ರವರಿ ೩ ರಂದಾಗಲೀ. ೧೯೦೭ ರ ೭ನೆಯ ನಿಬಂಧನೆ ರದ್ದಾಗುವುದೆಂದು ನಾನು ಗಾಂಧಿಯವರಿಗೆ ಯಾವ ಭರವಸೆಯನ್ನೂ ಇತ್ತಿರಲಿಲ್ಲ". ಮೂಲ ಪತ್ರವನ್ನು ಬಹಿರಂಗ ಪಡಿಸಬೇಕೆಂದು ಗಾಂಧೀ ಸ್ಮಟ್ಸ್‌ರಿಗೆ ಸವಾಲನ್ನು ಹಾಕಿದರು. ಆದರೆ ಸ್ಮಟ್ಸ್ ಸವಾಲನ್ನು ಅಂಗೀಕರಿಸಲಿಲ್ಲ: ಆದರೆ ದೀರ್ಘ ಪತ್ರ ವ್ಯವಹಾರ ನಡೆಯಿತು.

೧೯೦೮ರ ಮೇ ೨೨ರಂದು, ಜನರಲ್ ಸ್ಮಟ್ಸ್ ಅವರು ಸ್ವಯಂಪ್ರೇರಿತ ಧಾಖಲಾತಿಯನ್ನು ನಿಬಂಧನೆಯ ಪ್ರಕಾರ ನ್ಯಾಯಬದ್ಧಗೊಳಿಸಲಾಗುವುದೆಂಬ ತಮ್ಮ ಉದ್ದೇಶವನ್ನು ಗಾಂಧಿಗೆ ತಿಳಿಸಿದರು. ಮರುದಿನ ಭಾರತೀಯ ಸಮುದಾಯದ ನಾಯಕರು ಸ್ವಯಂಪ್ರೇರಿತ ದಾಖಲಾತಿಯ ತಮ್ಮ ಅರ್ಜಿಗಳನ್ನು ಹಿಂದಕ್ಕೆ ಕೊಡಬೇಕೆಂದು ಬರೆದುಕೊಂಡರು. ಗಾಂಧಿ ಹೀಗೆ ಹೇಳಿದರು: "ನಾನು ಸೆರೆಮನೆಯಲ್ಲಿದ್ದಾಗ ನನ್ನ ಮುಂದಿಟ್ಟ ಪತ್ರದ ಆಧಾರದ ಮೇಲೆ. ನಾನು ಜನರಲ್ ಸ್ಮಟ್ಸ್‌ರನ್ನು ಭೇಟಿ ಮಾಡಲು ಹೋಗುವ ಮುನ್ನ ನನ್ನ ದೇಶಬಾಂಧವರನ್ನು ನಂಬಿಕೆಗೆ ತೆಗೆದುಕೊಳ್ಳಲಿಲ್ಲವೆಂದು ಅವರಲ್ಲಿ ಕೆಲವರು ಹೇಳುತ್ತಾರೆ. ಬಹುಶಃ ಇದರಲ್ಲಿ ಸ್ವಲ್ಪ ನ್ಯಾಯವಿದೆ. ಇದರ ಹೊಣೆ ನಾನೇ ಹೊತ್ತಿದ್ದೇನೆ. ಏಕೆಂದರೆ. ಜನರಲ್ ಸ್ಮಟ್ಸ್ ಅವರ ರಾಜಕಾರಣ ನಿಪುಣತೆಯಲ್ಲಿಯೂ ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯಲ್ಲಿಯೂ ಅತಿ

ಯಾದ ನಂಬಿಕೆಯನ್ನು ಇಟ್ಟಿದ್ದೆ. ಸೌಮ್ಯ ಪ್ರತಿಘಟನೆಯ ಆಂದೋಲನವು ಏಷ್ಯಾದ ಎಲ್ಲ ಜನಾಂಗಗಳವರಿಗೂ ಹಕ್ಕು ಬಾಧ್ಯತೆಗಳನ್ನು ಕೊಡಿಸಲು ನಡೆಯಿತೇ ಹೊರತು ಕೆಲವರಿಗೆ ಮಾತ್ರವಲ್ಲ".

ಈಗ ಸತ್ಯಾಗ್ರಹ, ವಲಸೆಶಾಸನಕ್ಕೂ ಅನ್ವಯಿಸುವಂತಾಯಿತು. ನೇಟಾಲಿನ ಚಾರ್ಲ್ಸ್ ಟೌನ್ ನಿವಾಸಿಯಾಗಿದ್ದ ಸೋರಬ್‌ಜೀ ಷಾಪುರ್‌ಜೀ ಎಂಬ ಪಾರ್ಸಿ ಸ್ನೇಹಿತನನ್ನು ಸತ್ಯಾಗ್ರಹವನ್ನು ಆಚರಿಸುವುದಕ್ಕಾಗಿ ಆರಿಸಿದರು. ವಲಸೆಗಾರರ ನಿಷೇಧ ನಿಬಂಧನೆಯ ಪ್ರಕಾರ ತಾನು ಈ ದೇಶದಲ್ಲಿರುವ ಹಕ್ಕನ್ನು ಪರೀಕ್ಷಿಸುವುದಾಗಿ ಪೂರ್ವ ಭಾವಿಯಾಗಿಯೇ ಸರಕಾರಕ್ಕೆ ತಿಳಿಸಿ, ಅವರು ಟ್ರಾನ್ಸ್‌ವಾಲನ್ನು ಪ್ರವೇಶಿಸಿದರು.

ಸೋರಬ್‌ಜೀ ಜೊಹಾನ್ಸ್‌ಬರ್ಗ್‌ಗೆ ಹೋಗಿ, ತಾವು ಆಗಮಿಸಿದ ಬಗೆಗೆ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಿದರು. ಹತ್ತು ದಿನಗಳ ತರುವಾಯ ಜುಲೈ ೮ರಂದು ನ್ಯಾಯಸ್ಥಾನಕ್ಕೆ ಹಾಜರಾಗಬೇಕೆಂಬ ಕರೆ ಅವರಿಗೆ ಹೋಯಿತು. ಸೋರಬ್‌ಜೀ ಯವರ ಪರವಾಗಿ ಗಾಂಧಿ ವಾದಿಸಿದರು. ನ್ಯಾಯಸ್ಥಾನಕ್ಕೆ ಬರಬೇಕೆಂದು ಕಳಿಸಿರುವ ಕರೆ ನ್ಯೂನತೆಯಿಂದ ಕೂಡಿದೆಯೆಂಬ ಕಾರಣದಿಂದ ಸೋರಬ್‌ಜೀಯನ್ನು ಬಿಡು ಗಡೆ ಮಾಡಬೇಕೆಂದು ಗಾಂಧಿ ಸಮರ್ಥಿಸಿದರು; ಮತ್ತು ಸೋರಬ್‌ಜೀ ಸಾಕಷ್ಟು ಜೀವನಾಧಾರ ಮತ್ತು ಶಿಕ್ಷಣ ಅರ್ಹತೆಗಳನ್ನು ಹೊಂದಿರುವುದನ್ನು ತೋರಿಸಿರು ವುದರಿಂದ ಅವರು ವಲಸೆಗಾರರ ನಿಷೇಧ ಶಾಸನದ ಪ್ರಕಾರ ನಿರ್ಬಂಧಿತ ವ್ಯಕ್ತಿಯಲ್ಲ ವೆಂದೂ ವಾದಿಸಿದರು. ನ್ಯಾಯಸ್ಥಾನ ಗಾಂಧಿಯ ವಾದವನ್ನು ಎತ್ತಿ ಹಿಡಿದು ಸೋರಬ್‌ಜೀಯನ್ನು ಬಿಡುಗಡೆ ಮಾಡಿದರೂ ಜುಲೈ ೧೦ರಂದು ನ್ಯಾಯಸ್ಥಾನದ ಮುಂದೆ ಮತ್ತೆ ಹಾಜರಾಗಬೇಕೆಂದೂ ತತ್‌ಕ್ಷಣ ತಿಳಿಸಿತು. ಸೋರಬ್‌ಜೀ ಏಳು ದಿನಗಳೊಳಗೆ ಟ್ರಾನ್ಸ್‌ವಾಲ್ ಬಿಟ್ಟು ಹೋಗಬೇಕೆಂದು ನ್ಯಾಯಾಧೀಶ ಆಜ್ಞೆಮಾಡಿದನು. ಆದರೆ ಸೋರಬ್‌ಜೀ ಆ ರೀತಿ ಮಾಡಲು ನಿರಾಕರಿಸಿ, ತಾವು ಬಿಟ್ಟು ಹೋಗುವ ಉದ್ದೇಶದಿಂದ ಕೂಡಿಲ್ಲವೆಂದು ತಿಳಿಸಿದರು. ಜುಲೈ ೨೦ರಂದು, ನ್ಯಾಯಾಧೀಶ ಅವರಿಗೆ ಒಂದು ತಿಂಗಳು ಸಶ್ರಮ ಕಾರಾಗೃಹ ವಾಸವನ್ನು ವಿಧಿಸಿದನು.

ಗಾಂಧಿ ಟ್ರಾನ್ಸ್‌ವಾಲ್ ಸರಕಾರಕ್ಕೆ ಹೀಗೆ ತಿಳಿಸಿದರು: "ಒಪ್ಪಂದದ ಷರತ್ತು ಗಳ ಪ್ರಕಾರ, ಏಷ್ಯಾ ಶಾಸನ ರದ್ದಾಗದಿದ್ದರೆ ಮತ್ತು ಒಂದು ನಿಗದಿಯಾದ ತಾರೀಖಿ ನೊಳಗೆ ಸರಕಾರದ ನಿರ್ಧಾರವನ್ನು ತಿಳಿಸದಿದ್ದರೆ, ಭಾರತೀಯರಿಗೆ ಕೊಡಲಾಗಿರುವ ಎಲ್ಲ ಪತ್ರಗಳನ್ನೂ ಶೇಖರ ಮಾಡಿ, ಸುಟ್ಟು, ಅದರ ಪರಿಣಾಮವನ್ನು ನಮ್ರತೆಯಿಂದ ಸ್ವೀಕರಿಸುತ್ತೇವೆ." ಭಾರತೀಯ ನಾಯಕರು ದಾಖಲಾತಿ ಅಧಿಕಾರಿಗೆ ತಮ್ಮ ಪ್ರಾರ್ಥನೆ ಸಲ್ಲಿಸಿ, ಒಪ್ಪಂದವು ಭಂಗವಾಗಿರುವುದರಿಂದಲೂ ತಾವು ತಮ್ಮ ಸ್ವಪ್ರೇರಣೆಯಿಂದ ದಾಖಲಾತಿ ಮಾಡಿಸಿಕೊಂಡ ಪತ್ರಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಇಚ್ಛಿ ಸುವುದರಿಂದಲೂ ಅವುಗಳನ್ನು ಹಿಂದಕ್ಕೆ ಕೊಡಬೇಕೆಂದು ಕೇಳಿದರು. ಪತ್ರಗಳನ್ನು ಹಿಂದಕ್ಕೆ ಕೊಡಲಿಲ್ಲವಾದ್ದರಿಂದ ಶ್ರೇಷ್ಠ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು

ಹೂಡಲಾಯಿತು. ಏಷ್ಯಾ ಜನಾಂಗದವರು ಸ್ವಪ್ರೇರಣೆಯಿಂದ ಕೊಟ್ಟ ಪ್ರಾರ್ಥನಾ ಪತ್ರಗಳನ್ನು ಹಿಂದಕ್ಕೆ ಕೇಳುವ ಅಧಿಕಾರವಿಲ್ಲವೆಂದು ಶ್ರೇಷ್ಠ ನ್ಯಾಯಾಲಯ ತೀರ್ಪನ್ನು ಕೊಟ್ಟಿತು.

ಗಾಂಧಿ ತಮ್ಮ ದೇಶ ಬಾಂಧವರಿಗೆ ಮನವಿ ಸಲ್ಲಿಸಿ, ದಾಖಲಾತಿ ಪತ್ರಗಳನ್ನು ಬಹಿರಂಗವಾಗಿ ಸುಟ್ಟು ಹಾಕಬೇಕೆಂದು ತಿಳಿಸಿದರು. ಈ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಮುನ್ನ ಸಂಧಾನಕ್ಕೆ ಮಾರ್ಗವಿರಬೇಕೆಂದೂ ಭಾರತೀಯರ ಉದ್ವೇಗದ ಭಾವವನ್ನು ಸರಕಾರಕ್ಕೆ ತಿಳಿಸಬೇಕೆಂದೂ ನಿರ್ಧಾರ ಮಾಡಲಾಯಿತು. ಈ ಕಾರಣಕ್ಕಾಗಿಯೇ ಭಾರತೀಯ ನಾಯಕರು ರಹದಾರಿಯಿಲ್ಲದ ಸಂಚಾರಿ ವ್ಯಾಪಾರಿಗಳಾದರು. ಸುಮಾರು ಒಂದು ನೂರು ಮಂದಿ ಭಾರತೀಯರನ್ನು ಬಂಧಿಸಿ, ವಿಚಾರಣೆ ನಡೆಸಿ, ದಂಡ ವಿಧಿಸಲಾಯಿತು. ದಂಡ ಕೊಡಲು ನಿರಾಕರಿಸಿದವರನ್ನು ಸೆರೆಮನೆಗೆ ಹಾಕಲಾಯಿತು. ನೂರಾರು ಮಂದಿ ಸತ್ಯಾಗ್ರಹಿಗಳನ್ನು ಸೆರೆಮನೆಗೆ ಕಳಿಸುವುದು ಅನಾನುಕೂಲವಾಗಿ ಕಂಡು ಬಂದುದರಿಂದ, ಸೆರೆಮನೆ ಶಿಕ್ಷೆಗೆ ಅವಕಾಶವನ್ನು ನೀಡದೆ. ಅವರ ವಸ್ತುಗಳನ್ನು ಮಾರಾಟ ಮಾಡಿ. ದಂಡವನ್ನು ವಸೂಲಿ ಮಾಡಲಾಯಿತು. ಕೆಲವರು ಬಡ ಸಂಚಾರಿ ವ್ಯಾಪಾರಿಗಳನ್ನು ಭಾರತಕ್ಕೆ ಗಡೀಪಾರು ಮಾಡಲಾಯಿತು. ಆದರೆ ಗಾಂಧಿ ಅವರಿಗೆ ನೆರವನ್ನೂ ಮತ್ತು ಅವರ ಪರವಾಗಿ ಚಳವಳಿಯನ್ನೂ ಜಿ.ಎ. ನಟೇಶನ್ ಅವರ ಮೂಲಕ ಏರ್ಪಡಿಸಿದರು. ಸೌಮ್ಯ ಪ್ರತಿಭಟನೆಕಾರರಲ್ಲಿ ಅನೇಕ ಕಾರ್ಯಕರ್ತರನ್ನು ಸೆರೆಮನೆಗೆ ಹಾಕಿ. ಅವರು ಸೆರೆಮನೆ ವಾಸ ಅನುಭವಿಸುತ್ತಿದ್ದರೂ ಅವರೆಲ್ಲರಿಗೂ ಸ್ಫೂರ್ತಿಯಿತ್ತ ತಮ್ಮನ್ನು ಮಾತ್ರ ಸ್ವತಂತ್ರರನ್ನಾಗಿ ಬಿಟ್ಟಿರುವ ಬಗೆಗೆ, ಗಾಂಧಿ, ಜುಲೈ ೨೧ರಂದು ಜನರಲ್ ಸ್ಮಟ್ಸರಿಗೆ ದೂರಿತ್ತರು."ನನ್ನನ್ನು ಹಾಗೆಯೇ ಬಿಟ್ಟು, ಬಡ ಭಾರತೀಯರನ್ನು ಶಿಕ್ಷಿಸುವುದು ಧೈರ್ಯವೇ?" ಎಂದು ಪ್ರಶ್ನಿಸಿದರು.

ಸೆರೆಮನೆಯಲ್ಲಿದ್ದ ಸಂಚಾರಿ ವ್ಯಾಪಾರಿಗಳಿಗೆ ಗೌರವ ಸೂಚಿಸುವ ಸಲುವಾಗಿ ಜುಲೈ ೨೯ರಂದು ಟ್ರಾನ್ಸ್‌ವಾಲಿನ ಭಾರತೀಯ ವರ್ತಕರೆಲ್ಲ ಟ್ರಾನ್ಸ್‌ವಾಲ್ ಅದ್ಯಂತ ವ್ಯಾಪಾರವನ್ನು ಬಂದ್ ಮಾಡಿದರು. ಗಾಂಧಿ ವ್ಯವಸ್ಥೆ ಮಾಡಿದ ಪ್ರಥಮ ಹರತಾಳವಿದು.

ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ವಾರದ ಸುದ್ದಿಯ ಮೂಲಕ ಅವರ ಓದುಗರಿಗೆ ಅಂದಂದಿನ ವಿದ್ಯಮಾನಗಳನ್ನು ಚೆನ್ನಾಗಿ ತಿಳಿಸಲಾಗುತ್ತಿತ್ತು. ನೂತನ ಏಷ್ಯಾ ಮಸೂದೆ ಶಾಸನಸಭೆಯ ಅಂಗೀಕಾರವನ್ನು ಪಡೆಯಬೇಕಾಗಿದ್ದ ದಿನವೇ ಸರಕಾರಕ್ಕೆ ನೀಡಿದ್ದ ಕಾಲಾವಧಿಯ ಕಟ್ಟಕಡೆಯ ದಿನವಾಗಿತ್ತು. ಕಾಲಾವಧಿ ಮುಗಿದ ಎರಡು ಘಂಟೆಗಳ ತರುವಾಯ, ಈ ಪತ್ರಗಳನ್ನು ಬಹಿರಂಗವಾಗಿ ಸುಡಲು ಸಭೆಯನ್ನು ಕರೆಯಲಾಗಿತ್ತು. ಆಗಸ್ಟ್ ೧೬, ಭಾನುವಾರ ಸಂಜೆ ೪ ಘಂಟೆಗೆ ಜೋಹಾನ್ಸ್‌ಬರ್ಗ್‌ನ ಹಮೀದಿಯಾ ಮಸೀದಿಯ ಮೈದಾನದಲ್ಲಿ ಸಭೆ ಸೇರಿತು. ಪತ್ರಗಳನ್ನು

ಸುಡುವ ಉದ್ದೇಶದಿಂದ ದೊಡ್ಡ ಕೊಪ್ಪರಿಗೆಯನ್ನು ತರಲಾಗಿತ್ತು. ಸಭೆ ಇನ್ನೇನು ಆರಂಭವಾಗಬೇಕು ಎನ್ನುವ ಹೊತ್ತಿಗೆ, ಒಬ್ಬ ಸ್ವಯಂಸೇವಕ ಬೈಸಿಕಲ್ ಮೇಲೆ ಬಂದು, ಸರಕಾರ ತನ್ನ ಧೋರಣೆಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದ ತಾರಿನ ಸುದ್ದಿಯನ್ನು ತಲುಪಿಸಿದನು. ಈ ಸುದ್ದಿಯನ್ನು ನೆರೆದಿದ್ದ ಸಭಿಕರಿಗೆ ಓದಿ ಹೇಳಲಾಯಿತು. ಅವರು ಅದನ್ನು ಏಕ ಪ್ರಕಾರದ ಗಟ್ಟಿಯಾದ ಧ್ವನಿಯಿಂದ ಸ್ವಾಗತಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧಿ ದೀರ್ಘಕಾಲ ನಡೆದ ಸಂಧಾನಗಳ ವಿವಿಧ ಘಟ್ಟಗಳನ್ನು ವಿವರಿಸಿದರು. ಅವರು ಹೀಗೆ ಹೇಳಿದರು: "ಯಾವ ಭಾರತೀಯನೇ ಆಗಲೀ, ತನ್ನ ಪತ್ರವನ್ನು ಸುಡುವುದಕ್ಕೆ ಇಲ್ಲಿ ಕೊಟ್ಟಿದ್ದರೂ, ಈಗ ಅದನ್ನು ಹಿಂದಕ್ಕೆ ಅಪೇಕ್ಷಿಸುವುದುದಾದರೆ, ಅದನ್ನು ಅವನಿಗೆ ಕೊಟ್ಟು ಬಿಡಲಾಗುವುದು. ಅಂಥವನು ಮುಂದೆ ಬಂದು ಅದನ್ನು ತೆಗೆದುಕೊಳ್ಳಲಿ. ಪತ್ರವನ್ನು ಸುಡುವುದೇ ಒಂದು ಅಪರಾಧವಲ್ಲ. ಇದರಿಂದ ಕಾರಾಗೃಹವಾಸ ಅಪೇಕ್ಷಿಸುವುದಾದರೆ. ಅದು ಅವನಿಗೆ ದೊರಕದು. ಪತ್ರಗಳನ್ನು ಸುಟ್ಟು ಹಾಕುವುದರಿಂದ ಕರಾಳ ಶಾಸನಕ್ಕೆ ಎಂದಿಗೂ ಶಿರಬಾಗುವುದಿಲ್ಲವೆಂಬ ನಮ್ಮ ಗಂಭೀರ ನಿರ್ಣಯವನ್ನು ಘೋಷಿಸ ಬಯಸುತ್ತೇವೆ. ಅಲ್ಲದೆ ಆ ಪತ್ರಗಳನ್ನು ತೋರಿಸಲು ನಮಗಿರುವ ಅಧಿಕಾರವನ್ನು ಇಲ್ಲದಂತೆ ಮಾಡಿಕೊಳ್ಳುತ್ತೇವೆ. ಇದನ್ನೆಲ್ಲಾ ನೀವು ಚೆನ್ನಾಗಿ ಪರಿಶೀಲಿಸಿ, ಅನಂತರವೇ ನಾನು ಸೂಚಿಸಿರುವ ಕಾರ್ಯದಲ್ಲಿ ಧುಮುಕಬೇಕೆಂದು ತಿಳಿಸುತ್ತೇನೆ".

ಮೀರ್ ಆಲಂ ಆಗ ತಾನೆ ಸೆರೆಮನೆಯಿಂದ ಬಿಡುಗಡೆಯಾಗಿ ಬಂದಿದ್ದನು. ಅವನೂ ಸಭೆಯಲ್ಲಿ ಹಾಜರಿದ್ದನು. ಗಾಂಧಿ ಭಾಯಿಗೆ ತಾನು ಅನ್ಯಾಯ ಮಾಡಿದ್ದುದಾಗಿಯೂ, ತಾನು ಸ್ವಪ್ರೇರಣೆಯಿಂದ ಪತ್ರವನ್ನು ತೆಗೆದುಕೊಂಡಿರಲಿಲ್ಲವಾದ್ದರಿಂದ ತನ್ನ ಮೂಲ ಪತ್ರವನ್ನೇ ಸುಟ್ಟು ಬಿಡಲು ಕೊಡುವುದಾಗಿಯೂ ತಿಳಿಸಿದನು. ಗಾಂಧಿ ಅವನಿಗೆ ಸಂತಸದಿಂದ ಹಸ್ತಲಾಘವವಿತ್ತು ಆತನ ವಿಷಯದಲ್ಲಿ ತಮ್ಮ ಮನಸ್ಸಿನಲ್ಲೆಂದೂ ದ್ವೇಷದ ಭಾವನೆಯನ್ನು ಇಟ್ಟುಕೊಂಡಿರಲಿಲ್ಲವೆಂದು ತಿಳಿಸಿದರು.

ಎರಡು ಸಾವಿರಕ್ಕೂ ಹೆಚ್ಚಿನ ಪತ್ರಗಳು ಗಾಂಧೀ ಹಸ್ತಕ್ಕೆ ಬಂದುವು. ಅವುಗಳನ್ನೆಲ್ಲ ಕೊಪ್ಪರಿಗೆಗೆ ಹಾಕಲಾಯಿತು. ಸಭಾಧ್ಯಕ್ಷರಾಗಿದ್ದ ಈಸಾಪ್ ಮಿಯಾ ಅದಕ್ಕೆ ಅಗ್ನಿಸ್ಪರ್ಶ ಮಾಡಿದರು. ಸಭಿಕರು ಎದ್ದುನಿಂತು, ದಹನ ಕಾಲದಲ್ಲಿ ಒಂದೇ ಸಮನಾಗಿ ಹರ್ಷಧ್ವನಿ ಮಾಡಿದರು. ಇದುವರೆಗೂ ತಮ್ಮ ಪತ್ರಗಳನ್ನು ಕೊಡದವೆ ಇದ್ದವರು. ಅವುಗಳನ್ನು ವೇದಿಕೆಯ ಮೇಲೆ ತಂದು ಕೊಟ್ಟರು. ಅವುಗಳನ್ನೂ ಬೆಂಕಿಗೆ ಹಾಕಲಾಯಿತು. ಗಾಂಧಿಯ ರಾಜಕೀಯ ಜೀವನದಲ್ಲಿ ಇದೇ ಪ್ರಥಮ 'ಬಾನ್‌ಫೈರ್' ಆಗಿದ್ದಿತು. ಒಂದು ಬ್ರಿಟಿಷ್ ಪತ್ರಿಕೆ ಇದನ್ನು 'ಬೋಸ್ಟನ್ ಟೀ ಪಾರ್ಟಿ'ಗೆ ಹೋಲಿಸಿತು.

ಭಾರತೀಯರ ಈ ತೀವ್ರ ಭಾವೋದ್ವೇಗವನ್ನು ಕಂಡ ಜನರಲ್ ಸ್ಮಟ್ಸ್, ಗಾಂಧಿಯನ್ನು ಆಗಸ್ಟ್ ೧೮ರಂದು ಸರಕಾರದೊಂದಿಗೆ ಮಾತುಕತೆಗೆ ಆಹ್ವಾನಿಸಿದರು.

ಮಾತುಕತೆಗಳು ವಿಫಲವಾದ ಪರಿಣಾಮವಾಗಿ, ಆಗಸ್ಟ್ ೨೩ರಂದು ಮತ್ತೊಂದು ಪ್ರಚಂಡ ಸಾರ್ವಜನಿಕ ಸಭೆ ನಡೆದು, ಇನ್ನಷ್ಟು ಪತ್ರಗಳನ್ನು ಸುಟ್ಟು ಹಾಕಲಾಯಿತು.

ಶಾಸನದ ಬಲವನ್ನು ಪರೀಕ್ಷಿಸಲು, ಭಾರತೀಯರು ಹೊಸ ಕಾರ್ಯಕ್ರಮಗಳನ್ನು ಕೈಗೊಂಡರು. ನೇಟಾಲಿನಲ್ಲಿದ್ದ ಕೆಲವರು ಭಾರತೀಯರು ಟ್ರಾನ್ಸ್‌ವಾಲ್‌ನಲ್ಲಿ ನೆಲಸಲು ಹಕ್ಕನ್ನು ಹೊಂದಿದ್ದರು. ಅವರಿಗೆ ಸ್ವಲ್ಪ ಇಂಗ್ಲಿಷ್ ಜ್ಞಾನವೂ ಇದ್ದಿತು. ಸೇಠ್ ದಾವೂದ್ ಮೊಹಮ್ಮದ್ ಮತ್ತು ಪಾರ್ಸೀ ರುಸ್ತುಂಜೀ ಮೊದಲಾದ ದೊಡ್ಡ ವರ್ತಕರು ಟ್ರಾನ್ಸ್‌ವಾಲ್ ಪ್ರವೇಶಿಸಲು ನಿರ್ಧಾರ ಮಾಡಿದರು. ಸತ್ಯಾಗ್ರಹಿಗಳು, ಆಗಸ್ಟ್ ೧೮ರಂದು ಟ್ರಾನ್ಸ್‌ವಾಲ್ ಗಡಿಗೆ ಬಂದಾಗ ಬಂಧಿಸಲ್ಪಟ್ಟರು. ಅವರನ್ನು ವಿಚಾರಣೆಗೆ ಗುರಿಪಡಿಸದೆ, ಎಚ್ಚರಿಕೆ ಕೊಟ್ಟು, ಗಡಿಯಿಂದ ಆಚೆಗೆ ಕಳಿಸಲಾಯಿತು. ಆದರೆ ಅವರು ಮತ್ತೆ ಆಗಸ್ಟ್ ೩೧ರಂದು ಟ್ರಾನ್ಸ್‌ವಾಲ್ ಪ್ರವೇಶಿಸಿದಾಗ, ಸೆಪ್ಟೆಂಬರ್ ೮ರಂದು ೫೦ ಪೌಂಡು ದಂಡ ತಪ್ಪಿದರೆ ಮೂರು ತಿಂಗಳು ಸಶ್ರಮ ಕಾರಾಗೃಹ ವಾಸದ ಶಿಕ್ಷೆಯನ್ನು ವಿಧಿಸಲಾಯಿತು. ಅವರು ಹರ್ಷಚಿತ್ತರಾಗಿ ಸೆರೆಮನೆ ಸೇರಿದರು.

ಟ್ರಾನ್ಸ್‌ವಾಲಿನ ಭಾರತೀಯರ ಉತ್ಸಾಹ ಅದ್ಭುತವಾಗಿತ್ತು. ನೇಟಾಲಿನ ದೇಶ ಬಾಂಧವರ ಬಿಡುಗಡೆ ಮಾಡಿಸಲು ತಮಗೆ ಸಾಧ್ಯವಿಲ್ಲವಾದರೆ ತಾವೂ ಅವರೊಂದಿಗೆ ಕಾರಾಗೃಹ ವಾಸ ಅನುಭವಿಸಲು ನಿರ್ಧರಿಸಿದರು. ಕೆಲವರು ರಹದಾರಿಯಿಲ್ಲದೆ ಸಂಚಾರಿ ವ್ಯಾಪಾರದಲ್ಲಿ ತೊಡಗಿದ್ದರು. ಇದರಿಂದ ಜೋಹಾನ್ಸ್‌ಬರ್ಗ್‌ನಲ್ಲಿ ಅನೇಕರ ಬಂಧನಗಳಾದುವು. ನೇಟಾಲಿನ ಭಾರತೀಯರು ದಾವುದ್ ಮೊಹಮ್ಮದ್‌ರ ಮಾರ್ಗವನ್ನು ಅನುಸರಿಸಿದರು. ಕಾರಾಗೃಹಗಳು ತುಂಬಿ ಹೋದುವು. ನೇಟಾಲಿನಿಂದ ಬಂದ 'ದಾಳಿಕಾರ'ರಿಗೆ ಮೂರು ತಿಂಗಳು ಶಿಕ್ಷೆಯಾದರೆ, ಟ್ರಾನ್ಸ್‌ವಾಲಿನ ರಹದಾರಿ ರಹಿತ ಸಂಚಾರಿ ವ್ಯಾಪಾರಿಗಳಿಗೆ ನಾಲ್ಕು ದಿನಗಳಿಂದ ಹಿಡಿದು ಮೂರು ತಿಂಗಳ ವರೆಗಿನ ಶಿಕ್ಷೆಯಾಯಿತು.

ಸೆಪ್ಟೆಂಬರ್ ೨೯ರಂದು, ಗಾಂಧಿ ಹದಿನೈದು ಮಂದಿಯೊಂದಿಗೆ ಎರಡನೆಯ ಸಲ ಬಂಧಿತರಾದರು. ಅಕ್ಟೋಬರ್ ೧೦ರಂದು ೨೫ ಪೌಂಡು ದಂಡ, ತಪ್ಪಿದರೆ ಎರಡು ತಿಂಗಳ ಸಶ್ರಮ ಶಿಕ್ಷೆಯನ್ನು ವಿಧಿಸಲಾಯಿತು. ಗಾಂಧಿ ಕಾರಾಗೃಹ ಶಿಕ್ಷೆಯನ್ನೇ ಆರಿಸಿಕೊಂಡರು. ಮತ್ತು ಅದರಿಂದ ಅವರು 'ಟ್ರಾನ್ಸ್‌ವಾಲ್‌ನಲ್ಲೆಲ್ಲ ಅತ್ಯಂತ ಸುಖಿ' ಎಂದು ಭಾವಿಸಿದರು. ನ್ಯಾಯಾಧೀಶ ಹೀಗೆ ನುಡಿದರು: "ಈ ನ್ಯಾಯಸ್ಥಾನದ ಮತ್ತು ಶ್ರೇಷ್ಠ ನ್ಯಾಯಸ್ಥಾನದ ವಕೀಲರಾದ ಮಿ. ಗಾಂಧಿಯವರನ್ನು ಈ ಪರಿಸ್ಥಿತಿಯಲ್ಲಿ ಕಾಣಲು ನನಗೆ ತುಂಬಾ ದುಃಖವಾಗುತ್ತದೆ. ಮಿ. ಗಾಂಧಿಯವರಾದರೋ ತಮ್ಮ ದೇಶಕ್ಕಾಗಿ ತೊಂದರೆಗೊಳಗಾಗಿರುವ ಹಿನ್ನೆಲೆಯಲ್ಲಿ ಈ ಪರಿಸ್ಥಿತಿಯನ್ನು ಬೇರೆ ರೀತಿಯಲ್ಲಿ ಪರಿಗಣಿಸಬಹುದು. ಆದರೆ ನಾನು ಬೇರೊಂದು ರೀತಿಯಲ್ಲಿ ಮಾತ್ರ ನೋಡಬಲ್ಲೆ".

ನೇಟಾಲಿನಿಂದ ಹಿಂದಿರುಗುವಾಗ ಗಾಂಧಿ ತಮ್ಮ ಪತ್ರವನ್ನು ತೋರಿಸಲಿಲ್ಲ

ವೆಂಬುದೇ ಅಪರಾಧವಾಗಿದ್ದಿತು. ಅವರು ಅದನ್ನು ಇತರರ ಪತ್ರಗಳ ಸಂಗಡ ಸುಟ್ಟು ಹಾಕಿದ್ದರು. ಅವರು ಹೆಬ್ಬೆರಳಿನ ಗುರುತನ್ನು ಕೊಡಲು ನಿರಾಕರಿಸಿದ್ದರು. ಹಾಗೆ ಮಾಡಿದ್ದರೆ ಶಾಸನಕ್ಕೆ ಶಿರಬಾಗಿದಂತೆ ಆಗುತ್ತಿತ್ತು. ಅವರನ್ನು ವಾಲ್ಕರ್ಸ್ಟ್ ಸೆರೆಮನೆಗೆ ಸೇರಿಸಲಾಯಿತು. ಅಲ್ಲಿ ಅವರು ಸೆರೆಮನೆಯ ಉಡುಪನ್ನು ಧರಿಸಿ, ನೆಲ ಅಗಿಯುವ ಕೆಲಸ ಮಾಡಲು ನಿಯುಕ್ತರಾದರು. ಅವರಿಗೆ ಕೆಲವು ಕಾಲ ಜಾಡಮಾಲಿಯ ಕೆಲಸವನ್ನೂ ಕೊಡಲಾಗಿತ್ತು. ಆ ಕಾಲದಲ್ಲಿ ಟ್ರಾನ್ಸ್‌ವಾಲ್‌ನ ಬೇರೆ ಸೆರೆಮನೆಗಳಲ್ಲಿ ಸುಮಾರು ೨೫೦ ಮಂದಿ ಸೌಮ್ಯ ಪ್ರತಿಭಟನೆ ಕಾರರಿದ್ದರು. ವಾಲ್ಕರ್ಸ್ಟ್‌ನಿಂದ ಗಾಂಧಿ ತಮ್ಮ ಜನಕ್ಕೆ ಈ ಸಂದೇಶವನ್ನು ಕಳಿಸಿದರು: "ಕಡೆಯ ವರೆಗೂ ಅತ್ಯಂತ ದೃಢತೆಯಿಂದ ಇರಿ. ಕ್ಲೇಶವೇ ನಮಗೆ ಪರಿಹಾರ. ಗೆಲುವು ಶತಸ್ಸಿದ್ಧ".

ಅಕ್ಟೋಬರ್ ೧೬ರ ಬೆಳಗ್ಗೆ ಗಾಂಧಿಯ ಕಾರಾಗೃಹ ಶಿಕ್ಷೆಯನ್ನು ಪ್ರತಿಭಟಿಸುವ ಸಲುವಾಗಿ, ಲಂಡನ್ನಿನಲ್ಲಿ ಒಂದು ಸಭೆ ನಡೆಯಿತು. ಸರ್ ಎಂ. ಭೌನಗ್ರೀ ಅಗ್ರಾಸನ ವಹಿಸಿದ್ದರು. ಲಜಪತ್‌ರಾಯ್, ಸಾವರ್‌ಕರ್, ಖಪರ್ದೆ, ಬಿಪಿನ್‌ಚಂದ್ರಪಾಲ್, ಆನಂದ ಕೆ. ಕುಮಾರ ಸ್ವಾಮಿ ಭಾಗವಹಿಸಿದ್ದರು.

ಅಕ್ಟೋಬರ್ ೨೭ರಂದು ಭಾನುವಾರ ಗಾಂಧಿಯನ್ನು ವಾಲ್ಕರ್ಸ್ಟ್‌ನಿಂದ ಜೋಹಾನ್ಸ್‌ಬರ್ಗ್ ಸೆರೆಮನೆಗೆ ವರ್ಗಾಯಿಸಲಾಯಿತು. ರೈಲು ನಿಲ್ದಾಣದಲ್ಲಿ ಇಳಿದು, ಕೈದಿಯ ಉಡುಪನ್ನು ಧರಿಸಿದ್ದ–(ಆ ಉಡುಪು ಎಲ್ಲ ಕಡೆಯಲ್ಲೂ ಅಗಲವಾದ ಬಾಣದ ಗುರುತಿನಿಂದ ಕೂಡಿತ್ತು). ಅವರನ್ನು ಸೂರ್ಯಾಸ್ತಕ್ಕೆ ಮುಂಚೆ, ಎಲ್ಲ ಕೈದಿಗಳೂ ತಮ್ಮ ತಮ್ಮ ಹೊರೆ ಹೊತ್ತುಕೊಂಡು ಹೋಗುವಂತೆ, ಸಿಪಾಯಿಯ ಕಾವಲಿನಲ್ಲಿ ರಸ್ತೆಯಲ್ಲಿ ಕರೆದೊಯ್ಯಲಾಯಿತು. ಅಪಾಯಕಾರಿಗಳಾದ ಕೈದಿಗಳ ವಾರ್ಡಿನಲ್ಲಿ ಅವರನ್ನಿಟ್ಟರು. ಕೈಗೆ ಕೋಳಹಾಕಿದ್ದ ಅವರನ್ನು ಎರಡು ಸಾರಿ ನ್ಯಾಯಾಲಯಕ್ಕೆ ಕರೆದು ತಂದರು. ನವೆಂಬರ್ ೯ರಂದು ಸೆರೆಮನೆಯಿಂದ ಗಾಂಧಿ, ಕಸ್ತೂರ ಬಾ ಅವರಿಗೆ ಈ ಪತ್ರ ಬರೆದರು: "ನಿನ್ನ ಕಾಯಿಲೆಯ ವಿಷಯವಾಗಿ ವೆಸ್ಟ್ ಅವರು ಕಳಿಸಿದ ತಾರು ಸುದ್ದಿ ಬಂದಿದೆ. ನನ್ನ ಹೃದಯ ಪರಿತಪಿಸುತ್ತಿದೆ. ಆದರೆ ನಿನ್ನ ಶುಶ್ರೂಷೆ ಮಾಡಲು ನಾನು ಬರಲು ಸಾಧ್ಯವಿಲ್ಲವಾಗಿದೆ. ಸತ್ಯಾಗ್ರಹ ಸಮರದಲ್ಲಿ ನಾನು ಎಲ್ಲವನ್ನೂ ತ್ಯಾಗ ಮಾಡಿದ್ದೇನೆ. ದಂಡವನ್ನು ತೆತ್ತರೆ ಮಾತ್ರ ನಾನು ಬಿಡುಗಡೆಯಾಗಬಲ್ಲೆ. ಆದರೆ ಅದು ಮಾಡಲಾರದಂಥದು. ನೀನು ಧೈರ್ಯಗೆಡಬೇಡ. ನೀನು ನಿನ್ನ ಆಹಾರವನ್ನು ಕ್ರಮಪಡಿಸಿಕೊಂಡರೆ ಆರೋಗ್ಯ ಉತ್ತಮವಾಗುತ್ತದೆ. ನಾನು ನಿನ್ನನ್ನು ಕಳೆದುಕೊಳ್ಳುವುದೇ ನನ್ನ ದುರ್ವಿಧಿಯಾಗಿದ್ದರೆ ನಾನಿಷ್ಟು ಮಾತ್ರ ಹೇಳಬಲ್ಲೆ: ನಾನಿನ್ನೂ ಬದುಕಿರುವಾಗಲೇ ನೀನು ಸಾಯುವುದಾದರೆ ಅದು ನಿನಗೆ ಕೆಡುಕೆಂದು ನಾನು ಭಾವಿಸುವುದಿಲ್ಲ. ನಾನು ನಿನ್ನನ್ನು ತುಂಬ ಪ್ರೀತಿಸುತ್ತೇನೆ. ನೀನು ಕಾಲವಾದರೂ ನನ್ನ ಭಾಗಕ್ಕೆ ಸದಾ ಬದುಕಿದ್ದಂತೆಯೇ. ನಾನು ನಿನಗೆ ತಿಳಿಸಿದ್ದಂತೆ ಮತ್ತೆ ಎಂದಿಗೂ ವಿವಾಹವಾಗುವುದಿಲ್ಲವೆಂದು ಹೇಳ ಬಯಸುತ್ತೇನೆ. ನೀನು ದೇವರ ಮೇಲಿನ ನಂಬಿಕೆ

ಯಿಂದ ಬೀಳ್ಕೊಡು. ಅಂಥ ಮರಣ, ಸತ್ಯಾಗ್ರಹಕ್ಕೆ ಅನುಗುಣವಾದುದೇ. ನನ್ನ ಹೋರಾಟ ಕೇವಲ ರಾಜಕೀಯವಾದುದಲ್ಲ; ಅದೊಂದು ಧರ್ಮಯುದ್ಧ. ಆದುದರಿಂದ ಅದು ಪೂರ್ಣ ಪರಿಶುದ್ಧವಾದುದು. ಅದರಲ್ಲಿ ಸಾವು–ಬದುಕುಗಳೆರಡಕ್ಕೂ ವ್ಯತ್ಯಾಸವಿಲ್ಲ. ಇದೇ ದೃಷ್ಟಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಎಲ್ಲವನ್ನೂ ಅನುಭವಿಸುತ್ತೀಯೆಂಬ ಭರವಸೆಯಿಂದಿದ್ದೇನೆ. ಇಷ್ಟೇ ನಾನು ನಿನ್ನನ್ನು ಕೇಳಿಕೊಳ್ಳುವುದು".

ಡಿಸೆಂಬರ್ ಆರಂಭದಲ್ಲಿ ಬಿಡುಗಡೆಯಾದ ಕೂಡಲೇ, ಗಾಂಧಿ, ಜೊಹಾನ್ಸ್ ಬರ್ಗ್‌ನಲ್ಲಿ ತಮ್ಮ ವಕೀಲಿಯ ಕೆಲಸ ಮತ್ತು ರಾಜಕೀಯ ಕಾರ್ಯದಲ್ಲಿ ಮಗ್ನರಾದರು. ಕಳೆದ ಮೂರು ತಿಂಗಳಿನಿಂದ ಆಗಾಗ ರಕ್ತಸ್ರಾವವನ್ನು ಅನುಭವಿಸುತ್ತಿದ್ದ ಕಸ್ತೂರ ಬಾ ಈಗ ದರ್ಬಾನಿನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ವೈದ್ಯರು ಅವರ ತೀವ್ರ ಪರಿಸ್ಥಿತಿಯನ್ನು ಫೋನ್ ಮೂಲಕ ವೈದ್ಯರು ಗಾಂಧಿಗೆ ತಿಳಿಸಿದರು. ಗಾಂಧಿ ಆ ಕೂಡಲೆ ರೈಲಿನಲ್ಲಿ ದರ್ಬಾನಿಗೆ ಪ್ರಯಾಣ ಮಾಡಿದರು. ವೈದ್ಯರು ಕಸ್ತೂರ ಬಾ ಅವರಿಗೆ ಗೋಮಾಂಸದ ಸಾರವನ್ನು ಕೊಟ್ಟಿದ್ದರೆಂದು ಕೇಳಿ ತುಂಬ ನೋವಿಗೊಳಗಾದರು. ತುಂತುರು ಹನಿ ಬೀಳುತ್ತಿದ್ದರೂ ಲೆಕ್ಕಿಸದೆ, ಚರ್ಮ–ಮೂಳೆಯಂತೆ ಕೃಶವಾಗಿದ್ದ ಆಕೆಯನ್ನು ತತ್‌ಕ್ಷಣವೇ ಫೀನಿಕ್ಸ್ ವಸಾಹತುವಿಗೆ ಕೊಂಡೊಯ್ದರು.

ಫೀನಿಕ್ಸ್‌ನಲ್ಲಿ ಕಸ್ತೂರ ಬಾ ಅವರನ್ನು ಗಾಂಧಿ ತಮ್ಮ ಜಲ ಚಿಕಿತ್ಸೆಗೆ ಒಳಪಡಿಸಿದರು. ಆಕೆಗೆ ಮತ್ತೆ ರಕ್ತಸ್ರಾವ ಪ್ರಾರಂಭವಾಗಿತ್ತು. ಉಪ್ಪು ಮತ್ತು ದ್ವಿದಳ ಧಾನ್ಯಗಳನ್ನು ತ್ಯಜಿಸಬೇಕೆಂದು ಆಕೆಗೆ ಸೂಚಿಸಿದರು. ಕಸ್ತೂರ ಬಾ ಅವರಿಗೆ ಈ ಬಗೆಯ ಚಿಕಿತ್ಸೆಗಳಲ್ಲಿ ಹೆಚ್ಚು ನಂಬಿಕೆ ಇರಲಿಲ್ಲ. ಈ ಪದಾರ್ಥಗಳನ್ನು ಬಿಡಲು ಸಾಧ್ಯವೆ ಎಂದು ಗಾಂಧಿಗೆ ಸವಾಲನ್ನು ಹಾಕಿದರು. "ನೀನು ತಪ್ಪು ತಿಳಿದುಕೊಂಡಿದ್ದೀಯೆ· ನಾನು ರೋಗದಿಂದ ಕೂಡಿದ್ದು, ವೈದ್ಯರು ಇವುಗಳನ್ನೋ ಬೇರೆಯಾವುದನ್ನೋ ತ್ಯಜಿಸಬೇಕೆಂದು ಸಲಹೆ ಮಾಡಿದ್ದರೆ ನಾನು ನಿಶ್ಶಂಕೆಯಿಂದ ಆರೀತಿ ಮಾಡುತ್ತಿದ್ದೆ. ಅದಿರಲಿ. ನೀನು ಹೇಗಾದರೂ ಮಾಡು. ನನಗೆ ಯಾವ ವೈದ್ಯರ ಸಲಹೆ ಇಲ್ಲದಿದ್ದರೂ ಇಂದಿನಿಂದ ಒಂದು ವರ್ಷಕಾಲ ಉಪ್ಪು ಮತ್ತು ದ್ವಿದಳ ಧಾನ್ಯಗಳನ್ನು ನಾನು ತ್ಯಜಿಸುತ್ತಿದ್ದೇನೆ"–ಎಂದರು ಗಾಂಧಿ.

ಕಸ್ತೂರ ಬಾ ದಿಗ್ಭ್ರಾಂತರಾದರು. ತಮ್ಮ ಪ್ರತಿಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಗಾಂಧಿಯನ್ನು ಬೇಡಿಕೊಂಡರು. ತಾವು ಉಪ್ಪು ಮತ್ತು ದ್ವಿದಳ ಧಾನ್ಯಗಳನ್ನು ತ್ಯಜಿಸುವುದಾಗಿ ವಾಗ್ದಾನ ಮಾಡಿದರು. ಗಾಂಧಿ "ನಿರ್ಧಾರಕವಾಗಿ ತೆಗೆದುಕೊಂಡ ಪ್ರತಿಜ್ಞೆಯಿಂದ" ಹಿಂಜರಿಯುವವರಲ್ಲ. ಅವರು ಹೇಳಿದರು: "ಇದು ನನಗೊಂದು ಪರೀಕ್ಷೆ. ನೀನು ನಿನ್ನ ನಿರ್ಧಾರವನ್ನು ಪೂರೈಸಲು ಒಂದು ನೈತಿಕ ಬೆಂಬಲ". ಉಪ್ಪಿನ ನಿಷೇಧವನ್ನು ಅವರು ಹತ್ತು ವರ್ಷಗಳವರೆಗೆ ಮುಂದುವರಿಸಿದರು. ಸಸ್ಯಾಹಾರಿಗಳಿಗೆ ಉಪ್ಪು ಅನಗತ್ಯವೆಂದು ಅವರು ನಂಬಿದ್ದರು.

ಈಗ ಕಸೂರ ಬಾ ಅವರನ್ನು ಗಾಂಧಿ ಒಂದು ಗಳಿಗೆ ಬಿಟ್ಟಿರುತ್ತಿರಲಿಲ್ಲ. ಅವರು

ಆಗಾಗ ನಿಂಬೇರಸವನ್ನು ಮಾತ್ರ ಕೊಡುತ್ತಿದ್ದರು. ಬೇರೆ ಏನನ್ನೂ ಕೊಡುತ್ತಿರಲಿಲ್ಲ. ನಿಧಾನವಾಗಿ ಹಣ್ಣು ಮತು ಹಾಲನ್ನು ಕೊಟ್ಟರು. ಕಡೆಯದಾಗಿ ಸಂಬಾರದ ಪದಾರ್ಥಗಳಿಲ್ಲದೆ ಮತ್ತು ದ್ವಿದಳ ಧಾನ್ಯಗಳಿಲ್ಲದೆ ತರಕಾರಿಯನ್ನು ಕೊಟ್ಟರು. ಕಾಯಿಲೆ ಒಂದು ಸಲವೂ ಮರುಕಳಿಸದೆ ಕಸ್ತೂರ ಬಾ ನಿಧಾನವಾಗಿ ಆರೋಗ್ಯ ಪಡೆದುಕೊಂಡರು. ಅವರು ತೀವ್ರವಾದ ರಕ್ತಹೀನತೆಯಿಂದ ಗುಣಮುಖವಾದುದು ಒಂದು ಬಗೆಯ ಪವಾಡದಂತೆಯೇ ಇದ್ದಿತು; ಏಕೆಂದರೆ ಅದೊಂದು ವಿಪತ್ಕಾರಿ ರೋಗವೆಂದು ಪರಿಗಣಿಸಲಾಗಿತ್ತು. ವೈದ್ಯರು ಭರವಸೆಯನ್ನೆಲ್ಲ ಬಿಟ್ಟಿದ್ದರು. ಆದರೆ ಗಾಂಧಿ ಅವರನ್ನು ಗುಣಪಡಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಇದ್ದಂತೆಯೇ ಭಾರತದಲ್ಲಿಯೂ ೧೯೦೮ನೆಯ ವರ್ಷ ಮಹತ್ವದ ವರ್ಷವಾಗಿತ್ತು. ರಾಷ್ಟ್ರೀಯ ಚಟುವಟಿಕೆ ಉಗ್ರವಾದುದರಿಂದ ಕಠೋರ ದಮನ ನೀತಿ ಪ್ರಾರಂಭವಾಗಿತ್ತು. ಮದರಾಸ್ ಕಾಂಗ್ರೆಸ್ ಅದನ್ನು ಬಲವಾಗಿ ಖಂಡಿಸಿದ್ದಿತು.

ದಕ್ಷಿಣ ಆಫ್ರಿಕಾದ ಬಗೆಗೆ ಕಾಂಗ್ರೆಸ್ ಈ ನಿರ್ಣಯವನ್ನು ಮಾಡಿತು: "ದಕ್ಷಿಣ ಆಫ್ರಿಕಾದ ಬ್ರಿಟಿಷ್ ವಸಾಹತುಗಳಲ್ಲಿ ಅತ್ಯಂತ ಗೌರವಕ್ಕೆ ಪಾತ್ರರೂ, ಉನ್ನತರೂ ಆದ ಬ್ರಿಟಿಷ್ ಭಾರತೀಯರ ವಿಷಯದಲ್ಲಿಯೂ ಅತ್ಯಂತ ಕ್ರೂರ, ಕಠೋರ ಮತ್ತು ಅವಹೇಳನಕರ ರೀತಿಯಲ್ಲಿ ವರ್ತಿಸುತ್ತಿರುವುದರ ಬಗೆಗೆ ಈ ಸಭೆ ಅತ್ಯಂತ ಕ್ರೋಧವನ್ನು ವ್ಯಕ್ತಪಡಿಸುತ ದೆ. ಇಂಥ ವರ್ತನೆಯ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯದ ಶ್ರೇಷ್ಠ ಹಿತಾಸಕ್ತಿಗಳಿಗೆ ಅಪಾರ ಅಪಾಯ ಸಂಭವಿಸೀತೆಂಬ ಭೀತಿಯನ್ನೂ ವ್ಯಕ್ತಪಡಿಸುತ್ತದೆ."

ಮತ್ತೆ ಲಂಡನ್ನಿಗೆ

೧೯೦೯

ಹೋರಾಟ ಉತ್ಸಾಹಗುಂದದೆ ಮುಂದುವರಿಯಿತು. ೧೯೦೯ರ ಜನವರಿ ೧೫ರಂದು. ಗಾಂಧಿ ಟ್ರಾನ್ಸ್‌ವಾಲ್‌ಗೆ ಮರಳಿ ಬಂದಾಗ ವಾಲ್ಕರ್‌ಸ್ಟ್ರನ ಪೋಲೀಸ್ ಅಧಿಕಾರಿ ದಾಖಲಾತಿ ಪತ್ರವನ್ನೂ ಮತ್ತು ಗುರುತಿನ ಸಾಧನಗಳನ್ನೂ ತೋರಿಸಬೇಕೆಂದು ಆಜ್ಞೆ ಮಾಡಿದನು. ಯಾವುದನ್ನೂ ತೋರಿಸಲಿಲ್ಲವಾದ್ದರಿಂದ ಅವರನ್ನು ಬಂಧಿಸಿ. ನ್ಯಾಯಾಧೀಶನ ಮುಂದೆ ಹಾಜರ್ ಪಡಿಸಲಾಯಿತು. ನ್ಯಾಯಾಧೀಶ ವಸಾಹತುವಿನಿಂದ ಆಚೆಗೆ ಒಯ್ದು ಬಿಡುವ ಆಜ್ಞೆ ಮಾಡಿದನು. ಅದೇ ರೀತಿ ಅವರನ್ನು ಒಯ್ದು ಗಡಿಯಾಚೆ ಕಾಲು ಮೈಲಿ ದೂರದಲ್ಲಿ ಬಿಟ್ಟು ಬರಲಾಯಿತು. ಆದರೆ ಅವರು ಆ ಕ್ಷಣವೇ ಹಿಂದಿರುಗಿ ಬಂದರು. ಅವರು ಮತ್ತೆ ಬಂಧಿತರಾದರೂ ಆಪಾದಿತರಾಗಲಿಲ್ಲ. ಸ್ವಯಂ ಪರಿಚಯದ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು. ಅಲ್ಲಿಂದ ಅವರು ಜೋಹಾನ್ಸ್‌ಬರ್ಗ್‌ಗೆ ಪ್ರಯಾಣ ಬೆಳೆಸಿದರು.

ಫೆಬ್ರವರಿ ೨೫ರಂದು ಗಾಂಧಿ ಮತ್ತು ಇತರ ಏಳು ಮಂದಿ, ವಾಲ್ಕರ್‌ಸ್ಟ್ರನಲ್ಲಿ ದಾಖಲಾತಿ ಪತ್ರಗಳನ್ನು ತೋರಿಸಿ, ಬೆರಳು ಗುರುತುಗಳನ್ನು ಕೊಡಲು ನಿರಾಕರಿಸಿದ್ದರಿಂದ ಅವರಿಗೆ ೫೦ ಪೌಂಡು ದಂಡ ಅಥವಾ ಮೂರು ತಿಂಗಳು ಸಶ್ರಮ ಕಾರಾಗೃಹ ವಿಧಿಸಲಾಯಿತು. ಎಲ್ಲರೂ ಕಾರಾಗೃಹಕ್ಕೆ ಹೋದರು. ನ್ಯಾಯಸ್ಥಾನವನ್ನು ಉದ್ದೇಶಿಸಿ, ಗಾಂಧಿ ಹೀಗೆ ನುಡಿದರು: "ನಾನು ನಡೆಯುತ್ತಿರುವ ರೀತಿ ಶಿಕ್ಷಾರ್ಹವೆನ್ನುವುದಾದರೆ, ಏಷ್ಯಾ ಶಾಸನದ ವಿರುದ್ಧ ಹೋರಾಟದಲ್ಲಿ ನಾನು ಮಹಾ ಅಪರಾಧಿ. ನೀವು ನನಗೆ ಪರಮಾಧಿ ಶಿಕ್ಷೆಯನ್ನು ವಿಧಿಸಿ ಎಂದು ಬೇಡುತ್ತೇನೆ"..

ಮೇ ೨೪ ರ ಬೆಳಗ್ಗೆ ಗಾಂಧೀ ಪ್ರಿಟೋರಿಯಾ ಸೆರೆಮನೆಯಿಂದ ಬಿಡುಗಡೆಯಾದರು. ನೂರು ಮಂದಿ ಭಾರತೀಯರು ಹಾರ ತುರಾಯಿಗಳೊಂದಿಗೆ ಅಲ್ಲಿ ಕಾದಿದ್ದು, ಸ್ವಾಗತಿಸಿದರು. ಅವರ ಜತೆಯಲ್ಲಿ ಗಾಂಧಿ ಒಂದು ಮಸೀದಿಗೆ ಹೋಗಿ ಅಲ್ಲಿ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು: "ನಮ್ಮವರ ಸಂಖ್ಯೆ ಕಡಿಮೆ ಇರಲಿ. ಹೆಚ್ಚಾಗಿರಲಿ ನಾವು ಗುರಿಯನ್ನು ಮುಟ್ಟುವವರೆಗೂ ಶ್ರಮಿಸುವ ಶಕ್ತಿಯನ್ನು ಕೊಡೆಂದು ದೇವರಲ್ಲಿ ನಿಷ್ಠೆಯಿಂದ ನಾನು ಪ್ರಾರ್ಥಿಸುತ್ತೇನೆ".

ಬಂಧನಗಳು, ಕಾರಾಗೃಹ ಶಿಕ್ಷೆ, ಗಡೀಪಾರು ಇವು ದಿನದಿನಕ್ಕೆ ಹೆಚ್ಚಿದುವು. ಗಾಂಧಿಯ ಕಾರಾಗೃಹ ವಾಸ, ಬಿಡುಗಡೆ. ಮತ್ತೆ ಬಂಧನ, ಮತ್ತೆ ಕಾರಾಗೃಹ ಶಿಕ್ಷೆ ಇವು ಚಳವಳಿಯ ಪ್ರಗತಿಗೆ ಅಡ್ಡವಾಗಲಿಲ್ಲ.

ಗಾಂಧಿ ಪ್ರತಿಯೊಂದು ಸಲ ಸೆರೆಮನೆಯಿಂದ ಬಂದಾಗಲೂ, ಅವರಲ್ಲಿ ಅಪರ್ಣನೀಯ ಬೆಳವಣಿಗೆ ಕಂಡು ಬರುತ್ತಿತ್ತು. ಈ ಸಲದ ಸೆರೆಮನೆಯ ವಾಸದ ಕಾಲದಲ್ಲಿ ಅವರು ಸುಮಾರು ಮೂವತ್ತು ಗ್ರಂಥಗಳನ್ನು ವ್ಯಾಸಂಗ ಮಾಡುವ ಅವಕಾಶ ಅವರಿಗೆ ಸಿಕ್ಕಿತ್ತು. ಅವುಗಳಲ್ಲಿ ಇಂಗ್ಲಿಷ್, ಹಿಂದೀ, ಗುಜರಾತೀ, ಸಂಸ್ಕೃತ ಮತ್ತು ತಮಿಳು ಗ್ರಂಥಗಳಿದ್ದುವು. ಸ್ಯೂರಿಝೀನೀ, ರಸ್ಕಿನ್, ಟಾಲ್‌ಸ್ಟಾಯ್, ಎಮರ್‌ಸನ್, ಕಾರ್ಲೈಲ್ ಇತ್ಯಾದಿಯವರ ಗ್ರಂಥಗಳನ್ನು ಓದಿದರು. ಮನುಸ್ಮೃತಿ, ಪತಂಜಲಿ ಯೋಗ ದರ್ಶನ, ಉಪನಿಷತ್ತುಗಳು ಗೀತಾ ಮತ್ತು ಬೈಬಲ್ ಇವುಗಳನ್ನೆಲ್ಲ ಅಭ್ಯಾಸ ಮಾಡಿದರು. "ಹೋರಾಟದಲ್ಲಿ ಬೇರೆ ಯಾವ ಭಾರತೀಯರೂ ಮಾಡದಿದ್ದಷ್ಟು ಕೆಲಸವನ್ನು ತಮಿಳರು ಮಾಡಿದುದರಿಂದ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ತೋರಿಸುವ ಸಲುವಾಗಿ" ಅವರು ತಮಿಳು ಗ್ರಂಥಗಳನ್ನು ಮತ್ತೆ ಮತ್ತೆ ಓದಿದರು.

ಕಾರಾಗೃಹ ಶಿಕ್ಷೆಯನ್ನು ಸ್ವಾಗತಿಸುವ ಬಗೆಗೆ ಗಾಂಧಿ ಹೀಗೆ ಉಲ್ಲೇಖಿಸಿದರು: "ಕಾರಾಗೃಹಕ್ಕೆ ಹೋಗಿ ಎಲ್ಲ ವಿಧಗಳ ವೈಯಕ್ತಿಕ ನಿಗ್ರಹಗಳಿಗೆ ಏಕೆ ಗುರಿಯಾಗಬೇಕು—ಎಂಬುದು ಒಂದು ದೃಷ್ಟಿ...ಈ ರೀತಿ ಸೆರೆಮನೆ ಶಿಕ್ಷೆ ಅನುಭವಿಸುವುದಕ್ಕಿಂತ ದಂಡವನ್ನು ಕೊಟ್ಟು ಬಿಡುವುದು ಉತ್ತಮ. ಸೆರೆಮನೆವಾಸದ ಶಿಕ್ಷೆಯನ್ನು ದೇವರು ಯಾರಿಗೂ ಕೊಡದಿರಲಿ—ಎಂದು ಅಂತಹವರು ಹೇಳುತ್ತಾರೆ. ಆದರೆ ಈ ಬಗೆಯ ವಿಚಾರದಿಂದ ಯಾರೇ ಆಗಲಿ ಹೇಡಿಗಳಾಗುವುದು ಖಚಿತ. ಹೀಗೆ ಭಯ ಪೀಡಿತರಾದಾಗ, ತನ್ನ ದೇಶದ ಉನ್ನತ ಹಿತಾಸಕ್ತಿಗಳಿಗಾಗಿ ಸೇವೆ ಸಲ್ಲಿಸುವುದನ್ನು ಅದು ತಪ್ಪಿಸುತ್ತದೆ. ಈ ಭಾವನೆ ಇಲ್ಲದಿದ್ದರೆ ಮಾತ್ರ ಅಮೂಲ್ಯವಾದ ಸೇವೆ ಸಂದೀತು.

"ಇನ್ನೊಂದು ದೃಷ್ಟಿ ಹೀಗಿದೆ: ತನ್ನ ದೇಶ ಮತ್ತು ಧರ್ಮ ಇವುಗಳ ಹಿತಸಾಧನೆಗಾಗಿ ಸೆರೆಮನೆ ಶಿಕ್ಷೆ ಅನುಭವಿಸುವುದು ಒಬ್ಬ ವ್ಯಕ್ತಿಯ ಒಳ್ಳೆಯ ಅದೃಷ್ಟವೇ ಸರಿ. ಜೀವನದಲ್ಲಿ ಸಾಮಾನ್ಯವಾಗಿ ಅನುಭವಿಸುವ ಕ್ಲೇಶದಲ್ಲಿ ಲೇಶ ಪಾಲೂ ಅಲ್ಲಿಲ್ಲ.ಅಲ್ಲಿ ಪಹರೆಯವನ ಆಜ್ಞೆಯನ್ನು ಮಾತ್ರ ಪಾಲಿಸಬೇಕು. ಆದರೆ ನಿತ್ಯ ಜೀವನದಲ್ಲಿ ಇನ್ನೂ ಎಷ್ಟೋ ಮಂದಿಯ ಆಜ್ಞೆಯಂತೆ ನಡೆಯಬೇಕಾಗುತ್ತದೆ. ಸೆರೆಮನೆಯಲ್ಲಿರುವಾಗ ದಿನನಿತ್ಯದ ಅನ್ನ ಸಂಪಾದನೆ, ಮತ್ತು ಅಡಿಗೆ ಮಾಡುವ ಯೋಚನೆ ಇವು ಇರುವುದಿಲ್ಲ. ಸರಕಾರವೇ ಅದನ್ನೆಲ್ಲ ನೋಡಿಕೊಳ್ಳುತ್ತದೆ. ಅದು ಪುಕ್ಕಟೆ ಆರೋಗ್ಯವನ್ನೂ ನೋಡಿಕೊಳ್ಳುತ್ತದೆ. ದೇಹಕ್ಕೆ ಕೆಲಸದ ರೂಪದಲ್ಲಿ ಸಾಕಷ್ಟು ವ್ಯಾಯಾಮವಾಗುತ್ತದೆ. ಎಲ್ಲ ಚಟಗಳಿಂದಲೂ ಅವನು ಮುಕ್ತ. ಅವನ ಆತ್ಮವೂ ಮುಕ್ತವಾಗಿರುತ್ತದೆ. ದೇವರ ಧ್ಯಾನ ಮಾಡಲು ಬೇಕಾದಷ್ಟು ಕಾಲ ದೊರಕುತ್ತದೆ. ಅವನ ದೇಹದ ಮೇಲೆ ನಿಗ್ರಹ ಇರುತ್ತದೆಯೇ ಹೊರತು ಆತ್ಮದ ಮೇಲಲ್ಲ. ತನ್ನ ಅಭ್ಯಾಸಗಳನ್ನು ಕ್ರಮಪಡಿಸಿಕೊಳ್ಳುವುದನ್ನು ಇಲ್ಲಿ ಕಲಿಯಬಹುದು. ಯಾರು ದೇಹವನ್ನು ನಿಗ್ರಹಿಸಿ ಇಟ್ಟಿರುವರೋ ಅವರೇ ಅದರ ರಕ್ಷಣೆಯನ್ನೂ ಮಾಡುತ್ತಾರೆ. ಸೆರೆಮನೆ ಜೀವನದ ಬಗೆಗೆ ಈ ದೃಷ್ಟಿಯನ್ನು ತಳೆದವನು ಸ್ವತಂತ್ರ ಪುರುಷನೇ ಆಗಿರುತ್ತಾನೆ. ಏನಾದರೂ ದುರದೃಷ್ಟ

ವುಂಟಾಗಿ, ಅಥವಾ ಯಾರಾದರೂ ಕ್ರೂರ ಪಹರೆಯವನು ಹಿಂಸಾ ಪ್ರಯೋಗ ಮಾಡಿದರೆ, ತಾಳ್ಮೆಯನ್ನು ಕಲಿಯಬಹುದು. ತನ್ನನ್ನು ತಾನು ಹತೋಟಿಯಲ್ಲಿ ಇಟ್ಟುಕೊಳ್ಳುವ ಅವಕಾಶ ಪಡೆದುದಕ್ಕಾಗಿ ಹರ್ಷಿಸಬಹುದು. ಈ ರೀತಿ ಯೋಚಿಸುವವರಿಗೆ ಸೆರೆಮನೆ ವಾಸದಿಂದಲೂ ಒಳ್ಳೆಯದಾಗುತ್ತದೆಂದು ಖಚಿತವಾಗಿ ಮನವರಿಕೆಯಾಗುತ್ತದೆ. ಇದರಿಂದ ಒಳ್ಳೆಯದೇ ಅಥವಾ ಕೆಟ್ಟದೇ ಎಂಬುದು ಪೂರ್ಣವಾಗಿ ವ್ಯಕ್ತಿಗಳ ಮನೋಧರ್ಮವನ್ನು ಅವಲಂಬಿಸುತ್ತದೆ. ಟ್ರಾನ್ಸ್‌ವಾಲ್ ಸೆರೆಮನೆಯಲ್ಲಿ ನನ್ನ ಅನುಭವಗಳನ್ನು ಕುರಿತು ಓದುವವರು ದೇಶ ಮತ್ತು ಧರ್ಮದ ಸಲುವಾಗಿ ಸೆರೆಮನೆಗೆ ಹೋಗಿ. ಅಲ್ಲಿನ ಕಷ್ಟಗಳನ್ನೂ ಕ್ಲೇಶಗಳನ್ನೂ ಅನುಭವಿಸುವುದರಿಂದ ಅದು ಅಂತಿಮ ಸುಖದ ನಿಜವಾದ ಮಾರ್ಗವೆಂದು ಒಪ್ಪಿಕೊಳ್ಳುವರೆಂದು ನಾನು ನಂಬಿದ್ದೇನೆ.

"ಇಂಥದೇ ಸನ್ನಿವೇಶದಲ್ಲಿದ್ದು, ತಲೆಗಂದಾಯವನ್ನು ಕೊಡಲು ನಿರಾಕರಿಸಿದ ಅಮೆರಿಕಾದ ನಾಗರಿಕ ಥೋರೋ, ೧೮೪೯ರಲ್ಲಿ ಇಂಥದೇ ವಿಚಾರಗಳನ್ನು ವ್ಯಕ್ತಪಡಿಸಿದನು. ಅವನನ್ನು ಬಂಧಿಸಿಡಲ್ಪಟ್ಟಿದ್ದ ಕೋಟೆಯ ಗೋಡೆಗಳನ್ನು ನೋಡಿ–ಅದು ಕಲ್ಲಿನಿಂದ ಕಟ್ಟಲ್ಪಟ್ಟು, ಎರಡು ಅಥವಾ ಮೂರು ಅಡಿ ಮಂದವಾಗಿದ್ದು, ಒಂದಡಿ ಮಂದದ ಮರ ಮತ್ತು ಕಬ್ಬಿಣದಿಂದ ಮಾಡಿದ ಬಾಗಿಲಿನಿಂದ ಕೂಡಿದ್ದಿತು–ತನ್ನಲ್ಲಿ ತಾನೇ ಹೀಗೆ ಹೇಳಿಕೊಂಡನು : 'ನನಗೂ ಮತ್ತು ನನ್ನ ಜನಕ್ಕೂ ನಡುವೆ ಒಂದು ಕಲ್ಲಿನ ಗೋಡೆ ಇರುವುದಾದರೆ, ಅವರು ನನ್ನಷ್ಟೇ ಸ್ವತಂತ್ರರಾಗುವ ಮುನ್ನ, ಅದನ್ನು ಹತ್ತಿ ಹೋಗಲು ಅಥವಾ ಒಡೆದುಕೊಂಡು ಹೋಗಲು ಇನ್ನೂ ಹೆಚ್ಚು ಕಷ್ಟವಾಗುವುದೆಂಬುದನ್ನು ಕಂಡುಕೊಂಡೆ. ಒಂದು ಕ್ಷಣಕಾಲ ನಾನು ಬಂಧಿತನಾಗಿರುವೆನೆಂದು ನನಗೆ ಅನ್ನಿಸಲಿಲ್ಲ. ಗೋಡೆಗಳಲ್ಲಿರುವ ಕಲ್ಲು ಮತ್ತು ಗಾರೆ ವ್ಯರ್ಥ ಎನ್ನಿಸಿತು.ನನ್ನ ವರ್ಗದ ಜನರಲ್ಲೆಲ್ಲ ನಾನೊಬ್ಬನೇ ತೆರಿಗೆ ಕೊಟ್ಟಿರುವೆನೆಂದು ಭಾಸವಾಯಿತು.ಅವರು ನನ್ನ ಬಗೆಗೆ ಹೇಗೆ ವರ್ತಿಸಬೇಕೆಂಬುದನ್ನು ಅರಿಯದವರಾಗಿದ್ದರು: ಅವರು ಅನಾಗರಿಕರಂತೆಯೇ ವರ್ತಿಸಿದರು. ಪ್ರತಿಯೊಂದು ಬೆದರಿಕೆಯಲ್ಲಿಯೂ ಪ್ರತಿಯೊಂದು ಶ್ಲಾಘನೆಯಲ್ಲಿಯೂ ತಪ್ಪಿದ್ದಿತು. ನನ್ನ ಮುಖ್ಯ ಉದ್ದೇಶ ಕಲ್ಲು ಗೋಡೆಯ ಆತ್ತಕಡೆ ನಿಂತುಕೊಳ್ಳುವುದೇ ಆಗಿದ್ದಿತೆಂದು ಅವರು ಭಾವಿಸಿದ್ದರು. ನನ್ನ ಚಿಂತನೆಗಳ ಬಾಗಿಲಿಗೆ ಅವರು ಎಷ್ಟೊಂದು ಕ್ರಿಯಾಶೀಲರಾಗಿ ಬೀಗ ಹಾಕಿದರೆಂಬುದನ್ನು ಕಂಡು ನನಗೆ ನಗು ಬರದೆ ಇರಲಿಲ್ಲ; ಏಕೆಂದರೆ, ಅವು ಯಾವ ನಿರ್ಬಂಧವೂ ಇಲ್ಲದೆ, ಅವರನ್ನೇ ಹಿಂಬಾಲಿಸಿದ್ದುವು; ಅವುಗಳೆಲ್ಲ ನಿಜವಾಗಿಯೂ ಅಪಾಯಕಾರಿಯಾಗಿಯೇ ಇದ್ದುವು. ಅವರು ನನ್ನ ವಿಚಾರಗಳನ್ನು ಮುಟ್ಟಲಿಲ್ಲವಾದ್ದರಿಂದ, ನನ್ನ ದೇಹಕ್ಕೆ ಶಿಕ್ಷೆ ಮಾಡಲು ನಿರ್ಧಾರ ಮಾಡಿದ್ದರು ; ಅದು ಹುಡುಗರಂತೆ: ಯಾವ ವ್ಯಕ್ತಿಯ ವಿಷಯದಲ್ಲಿ ಅವರಿಗೆ ಹೊಟ್ಟೆಕಿಚ್ಚು ಇದೆಯೋ ಅತ ಸಿಕ್ಕದಿದ್ದರೆ ಅವನ ನಾಯಿಯನ್ನು ಬೈದಂತೆ. ಪ್ರಭುತ್ವವು ಅರ್ಧವಿವೇಕಿಯಾಗಿದ್ದುದು ನನಗೆ ಕಂಡು ಬಂದಿತು: ಬೆಳ್ಳಿಯ ಚಮಚಗಳನ್ನು ಇಟ್ಟುಕೊಂಡು ಅಂಜುಕುಳಿಯಾಗಿದ್ದ ಏಕಾಂಗಿ ಮಹಿಳೆಯಂತೆ; ಆ ಪ್ರಭುತ್ವಕ್ಕೆ ಗೆಳೆಯರಾರು,

ಶತ್ರುಗಳಾರು ಎಂಬ ಅರಿವಿರಲಿಲ್ಲ. ಅದರ ಬಗೆಗೆ ನನ್ನಲ್ಲಿದ್ದ ಗೌರವವೆಲ್ಲ ಹೋಗಿತ್ತು. ನಾನು ಅದನ್ನು ಕನಿಕರದಿಂದ ಕಂಡೆ".

ಬಿಡುಗಡೆಯಾದ ಮೇಲೆ, ಗಾಂಧಿ ಹೆಚ್ಚಿನ ಉತ್ಸಾಹದಿಂದ ಹೋರಾಟದಲ್ಲಿ ತೊಡಗಿದರು. ನಾಲ್ಕು ಘಂಟೆಗಳ ಮೇಲ್ಪಟ್ಟು ಅವರು ನಿದ್ರಿಸುತ್ತಿರಲಿಲ್ಲ. ಅವರು ಎಚ್ಚರವಿದ್ದ ಕಾಲದಲ್ಲಿ ಪ್ರತಿಯೊಂದು ನಿಮಿಷವೂ ಆತಂಕಕರ ವಿಚಾರ ಮತ್ತು ಕ್ರಿಯೆಗಳಿಂದ ಕೂಡಿರುತ್ತಿತ್ತು. 'ನೇಟಾಲ್ ಮರ್ಕ್ಯುರಿ'ಗೆ ಅವರು ಇತ್ತ ಸಂದರ್ಶನದಲ್ಲಿ ಹೀಗೆ ಹೇಳಿದರು. "ಕಳೆದ ಎರಡು ವರ್ಷಗಳಿಂದ ಭಾರತೀಯರು ಹೋರಾಟ ನಡೆಸುತ್ತಿದ್ದಾರೆ. ೨,೦೦೦ಕ್ಕೆ ಮೇಲ್ಪಟ್ಟ ಜನ, ಎಂದರೆ, ಟ್ರಾನ್ಸ್‌ವಾಲ್‌ನ ಭಾರತೀಯ ನೆಲಸುಗಾರರ ಸಂಖ್ಯೆಯಲ್ಲಿ ಮೂರನೆಯ ಒಂದು ಭಾಗದಷ್ಟು ಜನ ಸೆರೆಮನೆಗೆ ಹೋಗಿದ್ದಾರೆ. ನಮ್ಮನ್ನು ಶರಣಾಗತರನ್ನಾಗಿ ಮಾಡುವುದು ಸುಲಭವೆಂದು ಸರಕಾರ ಭಾವಿಸಿದೆ. ಆದರೆ ಏನೇ ಕಷ್ಟ ಬರಲಿ, ಹೋರಾಟವನ್ನು ಮುಂದುವರಿಸುವ ಅನೇಕ ಜನ ನಮ್ಮಲ್ಲಿದ್ದಾರೆಂದು ನಾನು ನಂಬಿದ್ದೇನೆ".

ಭಾರತೀಯ ವರ್ತಕರು ಹಿಂದೆ ಬೀಳಲಿಲ್ಲ. ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದ ಮಿ. ಎ. ಎಂ. ಕಛಾಲಿಯಾ ತಮ್ಮ ಆಸ್ತಿಯನ್ನೆಲ್ಲವಶಪಡಿಸಿಕೊಳ್ಳಬೇಕೆಂದು ತಮ್ಮ ಸಾಲಗಾರರಿಗೆ ಕರೆಯನ್ನೀಯುತ್ತಾ ಹೀಗೆ ಹೇಳಿದರು: "ಈಗ ಭಾರತೀಯ ವರ್ತಕರು ಸ್ವಯಂ ಪ್ರೇರಿತ ದಾರಿದ್ರ್ಯ, ಬಲಾತ್ಕಾರದ ದಾರಿದ್ರ್ಯ ಮತ್ತು ಅಪಮಾನಗಳನ್ನು ಎದುರಿಸಬೇಕಾಗಿದೆ. ತಾವು ಅನ್ಯಾಯವೆಂದು ಭಾವಿಸುವ ಸರಕಾರವನ್ನು ತಮ್ಮ ಸಾಲಗಾರರಿಂದ ಅಥವಾ ತಮ್ಮ ದುಡಿಮೆಯಿಂದ ಸಂಪದ್ಭರಿತವನ್ನಾಗಿ ಮಾಡಲು ಇಚ್ಛಿಸುವುದಿಲ್ಲ. ಅವರು ಅಪಮಾನವನ್ನು ಎದುರಿಸಲೂ ಬಯಸುವುದಿಲ್ಲ. ಆದುದರಿಂದ ತಾತ್ಕಾಲಿಕವಾಗಿ, ಅವರು ವ್ಯಾಪಾರವನ್ನು ನಿಲ್ಲಿಸಿ, ತಮ್ಮ ಸಾಲಗಾರರಿಗೆ ಏನಾದರೂ ವಸ್ತುಗಳನ್ನು ಕೊಡಬೇಕಾಗಿದ್ದರೆ ಅವುಗಳನ್ನು ಕೊಟ್ಟು ಬಿಡಬೇಕು ಅಥವಾ ತಮ್ಮ ಮಳಿಗೆಗಳನ್ನು ಮುಚ್ಚಿಬಿಡಬೇಕು".

ಸತ್ಯಾಗ್ರಹಿಗಳನ್ನು ಸೋಲಿಸಲು ಸಾಧ್ಯವಿಲ್ಲವೆಂದು ಸರಕಾರಕ್ಕೆ ಮನವರಿಕೆಯಾಯಿತು. ಎರಡು ಕಡೆಗಳಲ್ಲಿಯೂ ಬಿರುಗಾಳಿ ಮತ್ತು ಸ್ತಬ್ಧತೆ ಎರಡೂ ಇದ್ದುವು. ಆದರೆ ಎರಡು ಪಕ್ಷಗಳೂ ಸ್ವಲ್ಪ ಮಟ್ಟಿಗೆ ಶಕ್ತಿಗುಂದಿದ್ದುವು. ದಕ್ಷಿಣ ಆಫ್ರಿಕಾದ ವಸಾಹತುಗಳನ್ನೆಲ್ಲ ಒಕ್ಕೂಟಕ್ಕೆ ತರಬೇಕೆಂಬ ದೃಷ್ಟಿಯಿಂದ, ಭವಿಷ್ಯದ ನೀತಿಯೇನೆಂಬುದರ ಒತ್ತಾಯ ಈಗ ದ್ವಿಗುಣವಾಗಿತ್ತು. ಇಷ್ಟರಲ್ಲೇ ಜನರಲ್ ಬೋಥಾ ಮತ್ತು ಜನರಲ್ ಸ್ಮಟ್ಸ್ ಇಬ್ಬರೂ ಲಂಡನ್ನಿಗೆ ಹೋಗುವ ನಿರೀಕ್ಷೆಯಿತ್ತು. ಒಂದು ಭಾರತೀಯ ನಿಯೋಗ ಲಂಡನ್ನಿಗೆ ಹೋಗಬೇಕೆಂದು ಗಾಂಧಿ ಸಲಹೆ ಮಾಡಿದರು. "ಬ್ರಿಟಿಷರು ಸಾಮ್ರಾಜ್ಯದ ಪ್ರಶ್ನೆಯನ್ನು ಸಂಕುಚಿತ ದೃಷ್ಟಿಯಿಂದ ನೋಡುವುದಕ್ಕೆ ಬದಲಾಗಿ, ಸಾಮ್ರಾಜ್ಯದ ದೃಷ್ಟಿಯಿಂದ ನೋಡುವರೆಂದು" ಅವರು ನಂಬಿದ್ದರು.

ಗಾಂಧಿ ಮತ್ತು ಪೋರ್‌ಬಂದರಿನ ಒಬ್ಬ ಮೆಮನ್ ವರ್ತಕ ಸೇಠ್‌ಹಾಜೀ

ಹಬೀಬ್ ಇವರು ಜೂನ್ ೨೩ರಂದು ಕೇಪ್‌ಟೌನ್‌ನಿಂದ ಹೊರಟು ಜುಲೈ ೧೦ರಂದು ಲಂಡನ್ ತಲುಪಿದರು. ಈಗ ಗಾಂಧಿ ಪರಿವರ್ತಿತ ವ್ಯಕ್ತಿಯಾಗಿದ್ದರು. ಇಂಗ್ಲೆಂಡಿಗೆ ಪ್ರಯಾಣ ಮಾಡುತ್ತಾ ಹೀಗೆ ಬರೆದರು: "ಸತ್ಯವಾಗಿ ಹೇಳುವುದೆಂದರೆ, ಈ ಜಹಜಿನಲ್ಲಿ ಪ್ರಥಮ ದರ್ಜೆಯ ಕೋಣೆಗಿಂತ ಸೆರೆಮನೆಯ ಜೀವನವೇ ನನಗೆ ಲೇಸೆನಿಸುತ್ತದೆ. ಇಲ್ಲಿ ನಮ್ಮನ್ನು ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾರೆ. ತಿಂದು ತಿಂದು ನಮ್ಮ ಆರೋಗ್ಯ ಕೆಡುತ್ತದೆ. ಅಸಂಖ್ಯ ಮಂದಿ ಸೇವಕರು ನಮಗೆ ದೈಹಿಕ ಶ್ರಮಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಯಾವಾಗಲೂ ಕೈಗಳನ್ನು ತೊಳೆದುಕೊಂಡು, ಚೊಕ್ಕವಾಗಿಟ್ಟುಕೊಳ್ಳುವುದರಲ್ಲೇ ನನಗೆ ಸಾಕಾಗಿ ಹೋಗಿದೆ. ಪ್ರಿಟೋರಿಯಾ ಸೆರೆಮನೆಯೇ ಉತ್ತಮವಾಗಿತ್ತು. ಅಲ್ಲಿನಂತೆ ಇಲ್ಲಿ ನಿಷ್ಠೆ-ಶ್ರದ್ಧೆ, ಮತ್ತು ಭಕ್ತಿಗಳಿಂದ ಪ್ರಾರ್ಥನೆ ಮಾಡಲು ಸಾಧ್ಯವಿಲ್ಲವಲ್ಲಾ! ಇದು ಅಕ್ಷರಶಃ ಸತ್ಯ. ಎಲ್ಲಿ ವೈಭವವಿದೆಯೋ, ಎಲ್ಲಿ ಆಡಂಬರವಿದೆಯೋ ಮತ್ತು ಸುಖ ಮತ್ತು ಭೋಗಗಳಿವೆಯೋ ಅಲ್ಲಿ ದೇವರಿಗೆ ನಮ್ರ ಮತ್ತು ನಿಷ್ಠಾವಂತ ಸೇವಕರಾಗಿರಲು ಸಾಧ್ಯವಿಲ್ಲ".

ಭಾರತೀಯ ನಿಯೋಗದವರು ಬ್ರಿಟಿಷ್ ಅಧಿಕಾರ ಷಾಹಿಯ ಮೇಲೆ ಯಾವ ಪ್ರಭಾವವನ್ನೂ ಬೀರಲಾಗಲಿಲ್ಲ. ಜನರಲ್ ಸ್ಮಟ್ಸ್ ಮತ್ತು ಜನರಲ್ ಬೋಥಾ ಆಗಲೇ ಅಲ್ಲಿಗೆ ಬಂದಿದ್ದರು. ಗಾಂಧಿ ಅನೇಕ ಬ್ರಿಟಿಷ್ ಪತ್ರಕರ್ತರನ್ನೂ ಮತ್ತು ಪಾರ್ಲಿಮೆಂಟಿನ ಸದಸ್ಯರನ್ನೂ ಭೇಟಿಯಾದರು. ಆದರೆ ಪರಿಣಾಮವೇನೂ ಆಗಲಿಲ್ಲ. ಗಾಂಧಿ ಧೈರ್ಯವಾಗಿ ಒಪ್ಪಿಕೊಂಡರು: "ನಾನು ಅವರನ್ನು ಭೇಟಿಯಾದಂತೆಲ್ಲ ದೊಡ್ಡವರೆಂದು ಭಾವಿಸಲ್ಪಟ್ಟವರನ್ನು ನೋಡುವುದು ಸಾಕೆನಿಸುತ್ತದೆ. ಇದೆಲ್ಲ ಶ್ಲಾಘನೆಯಿಲ್ಲದ ನಿಷ್ಫಲ ಕೆಲಸ. ಪ್ರತಿಯೊಬ್ಬನೂ ತನ್ನ ತನ್ನ ಯೋಚನೆಯಲ್ಲಿಯೇ ಮಗ್ನನಾಗಿರುವಂತೆ ಕಂಡು ಬರುತ್ತದೆ. ಅಧಿಕಾರದಲ್ಲಿ ಇರುವವರಲ್ಲಿ 'ನ್ಯಾಯಕ್ಕಾಗಿ ನ್ಯಾಯ' ಎಂಬ ಭಾವವೇ ಇಲ್ಲವಾಗಿದೆ. ಅವರು ತಮ್ಮ ಸ್ಥಾನವನ್ನು ರಕ್ಷಿಸಿಕೊಂಡು, ಅದನ್ನು ಭದ್ರಪಡಿಸಿಕೊಳ್ಳುವುದರಲ್ಲೇ ನಿರತರಾಗಿರುತ್ತಾರೆ. ಶುದ್ಧ, ಸರಳ ನ್ಯಾಯದ ಪ್ರಶ್ನೆಯಾಗಿದ್ದರೆ, ಅದು ಎಂದೋ ತೀರ್ಮಾನವಾಗಿ ಬಿಡುತ್ತಿತ್ತು. ಈ ರೀತಿ ತಿರುಗುತ್ತಾ ಕದೆಯ ಪಕ್ಷ ಒಬ್ಬನನ್ನೋ ಇಬ್ಬರನ್ನೋ ಭೇಟಿಯಾಗಲು ಅಮೂಲ್ಯವಾದ ದಿನವನ್ನೆಲ್ಲ ಕಳೆಯುವುದು, ಇದೆಲ್ಲಕ್ಕೂ ಹಣವನ್ನು ವೆಚ್ಚ ಮಾಡುವುದು ಸತ್ಯಾಗ್ರಹಿಯ ಲಕ್ಷಣಕ್ಕೆ ವಿರುದ್ಧವಾದುದು. ಇದಕ್ಕಿಂತ ಸೆರೆಮನೆಗೆ ಹೋಗಿ ಕ್ಲೇಶಾನುಭವ ಪಡೆಯುವುದು ಎಷ್ಟೋ ಉತ್ತಮ. ನಮ್ಮ ಬೇಡಿಕೆಗಳು ಮನ್ನಣೆ ಪಡೆದರೆ, ಅದು ಈ ನಿಯೋಗದ ಶ್ರಮಕ್ಕಿಂತ ಹೆಚ್ಚಾಗಿ ಸೆರೆಮನೆಗೆ ಹೋಗಿ ಕಷ್ಟಕೋಟಲೆಗಳನ್ನು ಅನುಭವಿಸಿದವರ ಶ್ರಮದ ಫಲ ಎನ್ನಬೇಕು: ನಾವು ವಿಫಲರಾದರೆ, ಅದರ ಅರ್ಥ ನಾವಿನ್ನೂ ಸಾಕಷ್ಟು ಕ್ಲೇಶಾನುಭವ ಪಡೆದಿಲ್ಲವೆಂಬುದು ಸ್ಪಷ್ಟ".

ಲಾರ್ಡ್ ಆಂಪ್-ಹಿಲ್ ಜನರಲ್ ಬೋಥಾ ಅವರ ಸಂದೇಶವನ್ನು ಗಾಂಧಿಗೆ ತಿಳಿಸಿದರು. ಆ ಸಂದೇಶವು ಬ್ರಿಟಿಷ್ ನೀತಿಯನ್ನೂ ಸೂಚಿಸುತ್ತಿತ್ತು: "ಜನರಲ್

ಬೋಥಾ ನಿಮ್ಮ ಚಿಕ್ಕಪುಟ್ಟ ಬೇಡಿಕೆಗಳನ್ನು ಈಡೇರಿಸಲು ಸಿದ್ಧರಿದ್ದಾರೆ. ಆದರೆ ಅವರು ಏಷ್ಯಾ ಶಾಸನವನ್ನು ರದ್ದು ಮಾಡುವುದಕ್ಕಾಗಲೀ, ವಲಸೆಗಾರರ ನಿರ್ಬಂಧನ ನಿಬಂಧನೆಯನ್ನು ತಿದ್ದುಪಡಿ ಮಾಡುವುದಕ್ಕಾಗಲೀ ಸಿದ್ಧರಿಲ್ಲ. ಅವರು ರಾಜ್ಯದ ಶಾಸನದಲ್ಲಿ ಹಾಸು ಹೊಕ್ಕಾಗಿರುವ ವರ್ಣ ವ್ಯತ್ಯಾಸವನ್ನೂ ತೆಗೆದು ಹಾಕಲು ನಿರಾ ಕರಿಸುತ್ತಾರೆ. ಜನರಲ್ ಸ್ಮಟ್ಸ್ ಅವರೂ ಜನರಲ್ ಬೋಥಾ ಅವರ ಅಭಿಪ್ರಾಯವನ್ನೇ ಉಳ್ಳವರಾಗಿದ್ದಾರೆ. ಇದು ಅವರ ಕೊನೆಯ ಕೊಡುಗೆ. ನೀವು ಇನ್ನೂ ಹೆಚ್ಚು ಬೇಕೆಂದು ಕೇಳಿದರೆ ನಿಮಗೂ ನಿಮ್ಮ ಜನಕ್ಕೂ ತೊಂದರೆಯನ್ನು ತಂದುಕೊಂಡಂತೆ".

ಸೇಠ್ ಹಜೀಹಬೀಬ್ ಗುಜರಾತೀಯಲ್ಲಿ ಹೀಗೆ ಹೇಳಿದರು: "ನಮ್ಮ ಸಮು ದಾಯ ಇನ್ನೂ ಕಷ್ಟಪಡಬೇಕೆಂಬುದು ನನ್ನ ಇಚ್ಛೆಯಲ್ಲ. ನಾನು ಪ್ರತಿನಿಧಿಸುವ ಪಕ್ಷವು ನಮ್ಮ ಸಮುದಾಯದ ಬಹು ಸಂಖ್ಯೆಯಿಂದ ಕೂಡಿದೆ. ಅದು ಸಮುದಾಯದ ಐಶ್ವರ್ಯದಲ್ಲಿ ಬಹಳ ಭಾಗವನ್ನು ಹೊಂದಿದೆ".

ಸೇಠ್ ಹಾಜೀ ಹಬೀಬ್‌ರ ಅಭಿಪ್ರಾಯವನ್ನು ಗಾಂಧಿ, ಪದಶಃ ಅನುವಾದ ಮಾಡಿ ಲಾರ್ಡ್ ಆಂಪ್‌ಹಿಲ್‌ರಿಗೆ ತಿಳಿಸಿದರು. ಅನಂತರ ಸತ್ಯಾಗ್ರಹಿಗಳ ಪರವಾಗಿ ಹೀಗೆ ನುಡಿದರು: "ಈ ನನ್ನ ಸಹೋದ್ಯೋಗಿ, ಸಂಖ್ಯಾದೃಷ್ಟಿಯಿಂದಲೂ ಹಣ ಕಾಸಿನ ದೃಷ್ಟಿಯಿಂದಲೂ ಹೆಚ್ಚು ಶಕ್ತಿಯುತರಾದವರ ಪ್ರತಿನಿಧಿಯೆಂದು ಹೇಳುವುದು ನಿಜವಾದ ಮಾತು. ನಾನು ಯಾವ ಭಾರತೀಯರ ಪರವಾಗಿ ಮಾತನಾಡುವೆನೋ ಇವರಿಗಿಂತ ಅವರು ಬಡವರಾಗಿದ್ದಾರೆ; ಹಾಗೂ ಸಂಖ್ಯೆಯಲ್ಲಿಯೂ ಕಡಮೆಯಾಗಿ ದ್ದಾರೆ. ಆದರೆ ಅವರು ಸಾವಿಗೂ ಸಿದ್ಧರಾಗಿದ್ದಾರೆ. ಅವರು ಕೆಲವು ವ್ಯಾವಹಾರಿಕ ಪರಿಹಾರಗಳಿಗಾಗಿ ಮಾತ್ರವಲ್ಲದೆ ತತ್ವಕ್ಕಾಗಿಯೂ ಹೋರಾಡುತ್ತಿದ್ದಾರೆ. ಜನರಲ್ ಬೋಥಾ ಅವರ ಶಕ್ತಿಯ ಅರಿವು ನಮಗಿದೆ. ಆದರೆ ನಾವು ನಮ್ಮ ಪ್ರತಿಜ್ಞೆಗೆ ಹೆಚ್ಚು ಬೆಲೆ ಕೊಡುತ್ತೇವೆ. ಅದರಂತೆ ನಡೆಯಲು ನಾವು ಎಂಥ ಕೆಟ್ಟ ಪರಿಣಾಮವನ್ನೂ ಎದುರಿಸಲು ಸಿದ್ಧರಾಗಿದ್ದೇವೆ. ನಾವು ನಮ್ಮ ಗಂಭೀರ ಪ್ರತಿಜ್ಞೆಗೆ ತಪ್ಪದೆ ಬದ್ಧರಾಗಿದ್ದರೆ ಯಾವ ದೇವರ ಹೆಸರಿನಲ್ಲಿ ನಾವು ಅದನ್ನು ತೆಗೆದುಕೊಂಡಿದ್ದೇವೋ ಅವನೇ ಅವನ್ನು ಸಫಲಗೊಳಿಸುವನೆಂಬ ನಂಬಿಕೆಯಿಂದ ಶಾಂತರಾಗಿದ್ದೇವೆ".

ಗಾಂಧಿ ಇಂಗ್ಲೆಂಡಿಗೆ ಭೇಟಿಯಿತ್ತ ಈ ಸಂದರ್ಭದಲ್ಲಿಯೇ ಮತದಾನ ಹಕ್ಕಿನ ಚಳವಳಿಗಾರರ ಮುಖಂಡರನ್ನು ಭೇಟಿ ಮಾಡಿದರು. ಅವರ ಕೆಲಸದಲ್ಲಿ ತುಂಬ ಆಸಕ್ತಿಯನ್ನು ತೋರಿಸಿದರು. ಕೆಲವು ಬ್ರಿಟಿಷ್ ಮಹಿಳೆಯರು ನಡೆಸುತ್ತಿದ್ದ ಸೌಮ್ಯ ಪ್ರತಿಭಟನೆಯ ವಿಧಾನಗಳ ಪ್ರಭಾವವನ್ನು ತಿಳಿದುಕೊಂಡರು. ಅವರಲ್ಲಿಯೂ ಶ್ರೀಮತಿಯವರಾದ ಪ್ಯಾಂಕ್ ಹರ್ಸ್ಟ್ ಮತ್ತು ಡೆಸ್‌ಪಾರ್ಡ್‌ರನ್ನಂತೂ ಬಹು ವಾಗಿ ಮೆಚ್ಚಿಕೊಂಡರು. ಚಳವಳಿಕಾರರಲ್ಲಿ ಕ್ಷಾತ್ರಮನೋಭಾವದ ಕೆಲವರು ಹಿಂಸಾ ಮಾರ್ಗಗಳಲ್ಲಿ ಪ್ರವೃತ್ತರಾದುದನ್ನು ಕಂಡು, "ಅವರಿಗೆ ತಮ್ಮದೇ ಆದ ಅಸ್ತ್ರವಿದೆ. ಪುರುಷರ ಕೆಟ್ಟ ಮಾರ್ಗಗಳನ್ನು ಅವರೂ ಏಕೆ ಅನುಸರಿಸಬೇಕು" ಎಂದು ವ್ಯಸನವನ್ನು ವ್ಯಕ್ತಪಡಿಸಿದರು.

ಲಂಡನ್ನಿನಲ್ಲಿದ್ದಾಗ, ಗಾಂಧಿ, ಇಂಗ್ಲಿಷ್ ಗೃಹಸ್ಥನ ಸಾಂಪ್ರದಾಯಿಕ ಉಡುಪನ್ನು ಧರಿಸುತ್ತಿದ್ದರು. ರೇಷ್ಮೆಯ ಹ್ಯಾಟ್, ಚೆನ್ನಾಗಿ ಹೊಲಿದ ಅಂಗಿ, ನವನಾಜೂಕಿನ ಪಾದರಕ್ಷೆ ಮತ್ತು ಕಾಲು ಚೀಲ ಇವುಗಳನ್ನೂ, ವಿಶೇಷ ಸಂದರ್ಭಗಳಿಗೆ ಗಂಜಿ ಹಾಕಿದ ಷರ್ಟು ಮತ್ತು ಕೊರಳ ಪಟ್ಟಿಯನ್ನೂ ಮತ್ತು ನಿಲುವಂಗಿ ಹಾಗೂ ನಡುವಂಗಿ ಯನ್ನೂ ಧರಿಸುತ್ತಿದ್ದರು. ಉನ್ನತದರ್ಜೆಯ ಮಧ್ಯಮ ವರ್ಗದ ಗಿರಾಕಿಗಳೂ ಮತ್ತು ಸಾಗರೋತ್ತರದ ರಾಜಕಾರಣಿಗಳೂ ಇಳಿದುಕೊಳ್ಳುತ್ತಿದ್ದ ವೆಸ್ಟ್ ಮಿನಿಸ್ಟರ್ ಪ್ಯಾಲೇಸ್ ಹೋಟಲಿನಲ್ಲಿ ಗಾಂಧಿ ಇಳಿದುಕೊಂಡಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಅವರು ಉದಾರ ಆತಿಥ್ಯ ನೀಡುತ್ತಿದ್ದಂತೆಯೇ ಲಂಡನ್ನಿ ನಲ್ಲಿಯೂ ಸಂತಸದಿಂದ ಅತಿಥಿ ಸತ್ಕಾರ ಮಾಡುತ್ತಿದ್ದರು. ಆ ಆತಿಥ್ಯ ಬಹಳ ಸರಳ ರೀತಿಯದಾಗಿದ್ದಿತು. ಆಗಾಗ ಭೋಜನದ ಕಾಲದಲ್ಲಿ ಹತ್ತು ಹನ್ನೆರಡು ಮಂದಿ ಗೆಳೆಯರೂ ಮತ್ತು ಸಂದರ್ಶಕರೂ ಅವರ ಆಹ್ವಾನದ ಮೇಲೆ ಖಾಸಗೀ ಕೋಣೆ ಯಲ್ಲಿ ಸೇರುತ್ತಿದ್ದರು. ಮಧ್ಯದಲ್ಲಿದ್ದ ಮೇಜು ಸಾಮಾನ್ಯವಾಗಿ ವೆಲ್‌ವೆಟ್ ಬಟ್ಟೆ ಯಿಂದ ಆವೃತವಾಗಿರುತ್ತಿದ್ದುದು. ಈಗ ವೃತ್ತ ಪತ್ರಿಕೆಗಳಿಗಿಂದಲೂ, ಕಿತ್ತಳೆ ಹಣ್ಣಿನ ರಾಶಿಯಿಂದಲೂ, ಬಾಳೆಹಣ್ಣು, ದ್ರಾಕ್ಷಿ ಮತ್ತು ಸುಲಿಯದ ನೆಲಗಡಲೆ ಕಾಯಿಯ ಒಂದು ದೊಡ್ಡ ಚೀಲದಿಂದಲೂ ಸಿದ್ಧವಾಗಿರುತ್ತಿತ್ತು. ಕರೆಗಂಟೆಯನ್ನು ಬಾರಿಸಿ ಗಾಂಧಿ, ಆಕರ್ಷಕವಾಗಿ ಉಡುಪನ್ನು ಧರಿಸಿದ್ದ ಮಾಣಿಯನ್ನು ಬರಮಾಡಿಕೊಂಡು ಟೀ ಮತ್ತು ಟೋಸ್ಟನ್ನು ಬಯಸಿದವರಿಗೆ ಅದನ್ನು ತರಿಸಿಕೊಡುತ್ತಿದ್ದರು. ಆಗ ಕೆಲಸ ಪ್ರಾರಂಭವಾಗುತ್ತಿತ್ತು. ತಿನ್ನುವುದು ಹರಟುವುದು ಸಂಭಾಷಣೆ, ನಗುವುದು-ಹೀಗೆ ಮುಂದುವರಿಯುತ್ತಿತ್ತು.

ಗಾಂಧಿ ಸುಮಾರು ನಾಲ್ಕು ತಿಂಗಳ ಕಾಲ ಲಂಡನ್‌ನಲ್ಲಿದ್ದರು. ಅವರು ಇಂಗ್ಲೆಂಡಿಗೆ ಬರುವುದಕ್ಕೆ ಮುನ್ನ ಜುಲೈ ೧ರಂದು, ಮದನ್‌ಲಾಲ್ ಧಿಂಗ್ರಾ ಎನ್ನುವವನಿಂದ ಸರ್ ಕರ್ಜನ್ ವೈಲಿಯ ಕೊಲೆಯಾಗಿತ್ತು. ಧಿಂಗ್ರಾ ಪೋಲೀಸರ ವಶದಲ್ಲಿದ್ದಾಗ, ಇಂಥ ಕೃತ್ಯಮಾಡುವುದು ದೇಶಭಕ್ತನ ಹಕ್ಕು ಎಂದು ಹೇಳಿದ್ದನು. ತರುವಾಯ ಓಲ್ಡ್ ಬೈಲಿಯಲ್ಲಿ ಅಪಾದಿತನ ಸ್ಥಾನದಲ್ಲಿ ನಿಂತು ತನ್ನ ಮೇಲೆ ಶ್ರೇಷ್ಠ ನ್ಯಾಯಾಧೀಶ ನಿಗೆ ಶಿಕ್ಷೆ ವಿಧಿಸುವ ಹಕ್ಕಿಲ್ಲವೆಂದು ಧೈರ್ಯವಾಗಿ ನುಡಿದನು: "ದೇಶಪ್ರೇಮಿಗಳಿಂದ ಭಾರತೀಯ ಯುವಕರನ್ನು ಅಮಾನುಷ ರೀತಿಯಲ್ಲಿ ಗಲ್ಲಿಗೇರಿಸಿದುದು ಮತ್ತು ಅವರನ್ನು ಗಡೀಪಾರುಮಾಡಿದುದು ಇವುಗಳಿಗೆಲ್ಲ ಸೇಡು ತಿರಿಸಿಕೊಳ್ಳುವ ಸಲುವಾಗಿ ಆ ದಿನ ಇಂಗ್ಲಿಷ್ ರಕ್ತವನ್ನು ಚೆಲ್ಲಲು ನಾನು ಪ್ರಯತ್ನ ಮಾಡಿದೆ. ಈ ಪ್ರಯತ್ನದಲ್ಲಿ ನಾನು ನನ್ನ ಅಂತಃಸಾಕ್ಷಿಯಲ್ಲದೆ, ಬೇರೆ ಯಾರೊಂದಿಗೂ ವಿಚಾರ ಮಾಡಿಲ್ಲ. ನಾನು ನನ್ನ ಕರ್ತವ್ಯದೊಂದಿಗಲ್ಲದೆ ಬೇರೆ ಯಾರೊಂದಿಗೂ ಪಿತೂರಿ ನಡೆಸಿಲ್ಲ. ವಿದೇಶೀಯರ ಈಟಿಯ ಬಲಾತ್ಕಾರಕ್ಕೆ ವಶವಾದ ರಾಷ್ಟ್ರವು ಸದಾ ಯುದ್ಧಸ್ಥಿತಿಯಲ್ಲಿರುತ್ತದೆಂದು ನನ್ನ ನಂಬಿಕೆ; ಏಕೆಂದರೆ, ನಿಶ್ಶಸ್ತ್ರೀಕೃತ ಜನಾಂಗಕ್ಕೆ ಯುದ್ಧವು ಅಸಾಧ್ಯವೆಂಬಂತೆ

ಆಗಿರುತ್ತದೆ. ನಾನು ಎಚ್ಚರ ಕೊಡದೆ ಮೇಲೆರಗಿದೆ; ನನಗೆ ಬಂದೂಕು ದೊರಕುವಂತಿರಲಿಲ್ಲ. ಆದುದರಿಂದ ನಾನು ನನ್ನ ಪಿಸ್ತೂಲನ್ನು ತೆಗೆದು ಹಾರಿಸಿದೆ. ಹಿಂದೂ ಆದ ನಾನು, ನನ್ನ ದೇಶಕ್ಕೆ ಉಂಟಾದ ಅನ್ಯಾಯವನ್ನು ದೈವ ದ್ರೋಹವೆಂದು ಬಗೆದೆ. ನನ್ನ ನಾಡದೇವಿಯ ಕೆಲಸ ಶ್ರೀರಾಮನ ಕೆಲಸ. ಆಕೆಯ ಸೇವೆ ಶ್ರೀಕೃಷ್ಣನ ಸೇವೆ. ಅವಳ ಮಗನಾಗಿ ಐಶ್ವರ್ಯದಲ್ಲಿಯೂ ಮೇಧಾಶಕ್ತಿಯಲ್ಲಿಯೂ ಬಡವನಾದ ನನ್ನಂತಹವನಿಗೆ ನನ್ನ ರಕ್ತವನ್ನಲ್ಲದೆ ಬೇರೆ ಏನನ್ನೂ ಅರ್ಪಿಸಲು ಸಾಧ್ಯವಿಲ್ಲ. ಆದುದರಿಂದ ಅವಳ ವೇದಿಕೆಯ ಮೇಲೆ ಅದನ್ನೇ ಯಜ್ಞರೂಪವಾಗಿ ನೀಡಿದ್ದೇನೆ. ಇಂದು ಭಾರತಕ್ಕೆ ಇಂದು ಬೇಕಾದ ಪಾಠವೆಂದರೆ ಪ್ರಾಣವನ್ನರ್ಪಿಸುವುದು ಹೇಗೆಂಬುದು. ನಮ್ಮ ಪ್ರಾಣಾರ್ಪಣೆ ಮಾಡಿಯೇ ಅದನ್ನು ಕಲಿಸಬೇಕು. ಆದ್ದರಿಂದ ನಾನು ಪ್ರಾಣಾರ್ಪಣೆ ಮಾಡುತ್ತೇನೆ. ನಾನು ಹುತಾತ್ಮನಾಗುವುದರಲ್ಲಿ ಅದ್ಭುತ ಶಕ್ತಿ ಅಡಗಿದೆ".

ಧಿಂಗ್ರಾ ನಿರ್ಭೀತನಾಗಿ ತನ್ನ ನಂಬಿಕೆಯನ್ನು ಪುನರುಚ್ಚರಿಸಿದ; ಮತ್ತು ತನ್ನ ಹೇಳಿಕೆಯನ್ನು ಈ ರೀತಿ ಮುಕ್ತಾಯ ಗೊಳಿಸಿದ: "ದೇವರಲ್ಲಿ ನನ್ನದೊಂದೇ ಪ್ರಾರ್ಥನೆ; ಇದೇ ಮಾತೆಯಲ್ಲಿ ನಾನು ಪುನರ್ಜನ್ಮ ಪಡೆಯುವಂತಾಗಲಿ; ಈ ಪವಿತ್ರ ಕಾರ್ಯ ಯಶಸ್ವಿಯಾಗಿ ಮಾನವತೆಯ ಒಳಿತಿಗಾಗಿಯೂ ಹಾಗೂ ದೇವರ ಹಿರಿಮೆಯನ್ನು ಸಾರುವುದಕ್ಕೂ ಮಾತೆ ಸ್ವತಂತ್ರಳಾಗಿ ನಿಲ್ಲುವ ವರೆಗೂ ನಾನು ಪ್ರಾಣಾರ್ಪಣೆ ಮಾಡುತ್ತಿರುವಂತಾಗಲಿ"." ಅವನ ಕಡೆಯ ಮಾತುಗಳು: "ವಂದೇ ಮಾತರಂ".

ಧಿಂಗ್ರಾನ ಹೇಳಿಕೆ ಗಾಢವಾದ ಪರಿಣಾಮ ಬೀರಿತು. ವಸಾಹತುಗಳ ಅಧೀನ ಕಾರ್ಯದರ್ಶಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್–"ದೇಶ ಪ್ರೇಮದ ಹೆಸರಿನಲ್ಲಿ ಮಾಡಿದ ಭಾಷಣಗಳಲ್ಲಿ ಅತ್ಯಂತ ಶ್ರೇಷ್ಠವಾದುದು" ಎಂದು ಉದ್ಗಾರ ತೆಗೆದನು.

ಈ ಸಲ ಲಂಡನ್ನಿನಲ್ಲಿದ್ದಾಗ ಗಾಂಧಿ ಪ್ರಸಿದ್ಧ ಭಾರತೀಯ ಕ್ರಾಂತಿಕಾರರ ಪರಿಚಯ ಪಡೆದರು. ಅವರೆಲ್ಲ, ಅಹಿಂಸೆಯನ್ನು ತ್ಯಜಿಸುವಂತೆ ಗಾಂಧಿಯನ್ನು ಒಪ್ಪಿಸಲು ಪ್ರಯತ್ನಿಸಿದರು. ಆದರೆ ಗಾಂಧಿ ಅದನ್ನು ದೃಢವಾಗಿ ನಿರಾಕರಿಸಿ, ಅವರನ್ನು ಅಹಿಂಸೆಗೂ ಸತ್ಯಾಗ್ರಹಕ್ಕೂ ಪರಿವರ್ತಿಸಲು ಉದ್ದೇಶಿಸಿದರು. ಕ್ರಾಂತಿಕಾರಿಗಳ ವೀರತನವನ್ನು ಮೆಚ್ಚಿಕೊಂಡರೂ ಅವರ ಉತ್ಸಾಹ ತಪ್ಪು ಮಾರ್ಗ ಹಿಡಿದಿದೆಯೆಂದು ಭಾವಿಸಿದರು. ಧಿಂಗ್ರಾನ ಕೃತ್ಯವನ್ನು ಕುರಿತು ಹೀಗೆ ಹೇಳಿದರು: "ಧಿಂಗ್ರಾ ಮಾಡಿದ ಕೆಲಸದಿಂದ ಮತ್ತು ಅಂತಹ ಕೆಲಸಗಳನ್ನು ಮಾಡುವುದರಿಂದ ಭಾರತಕ್ಕೆ ಲಾಭವಾಗುತ್ತದೆಂದು ನಂಬುವವರು ದೊಡ್ಡ ತಪ್ಪನ್ನು ಮಾಡುತ್ತಾರೆ. ಧಿಂಗ್ರಾ ದೇಶಪ್ರೇಮಿಯಾಗಿದ್ದ; ಆದರೆ ಅದು ಅಂಧ ಪ್ರೇಮ; ಆತ ತನ್ನ ದೇಹವನ್ನು ತಪ್ಪು ಕಾರ್ಯಕ್ಕಾಗಿ ತ್ಯಜಿಸಿದನು; ಅದರ ಪರಿಣಾಮ ತಪ್ಪು ಮಾರ್ಗಕ್ಕೆ ಮಾತ್ರ ಕಾರಣವಾಗಬಲ್ಲುದು."

ಗಾಂಧಿ ಸ್ಫೂರ್ತಿ ಪಡೆಯಲು ಟಾಲ್‌ಸ್ಟಾಯ್ ಕಡೆಗೆ ನೋಡಿದರು. ಲಂಡನ್ನಲ್ಲಿದ್ದಾಗ ಅವರಿಗೆ ತಮ್ಮ ಪ್ರಥಮ ಪತ್ರವನ್ನು ಬರೆದರು. ಆ ಪತ್ರಕ್ಕೆ ಉತ್ತರವಾಗಿ ಟಾಲ್‌ಸ್ಟಾಯ್, ತಮ್ಮ ಭಾರತೀಯ ಶಿಷ್ಯನ ಬಗೆಗೆ ಅತ್ಯಂತ ಕಳಕಳಿಯ ಸಹಾನು

ಭೂತಿಯನ್ನು ತೋರಿಸಿದರು: "ನಿಮ್ಮ ಅತ್ಯಂತ ಸ್ವಾರಸ್ಯವಾದ ಪತ್ರ ಈಗತಾನೆ ನನಗೆ ತಲುಪಿದೆ. ಅದು ನನಗೆ ಬಹಳ ಹರ್ಷ ಕೊಟ್ಟಿದೆ. ಟ್ರಾನ್ಸ್‌ವಾಲ್‌ನಲ್ಲಿರುವ ನಮ್ಮ ಪ್ರೀತಿಯ ಸೋದರರಿಗೂ ಮತ್ತು ಸಹಕಾರ್ಯಕರ್ತರಿಗೂ ದೇವರ ನೆರವು ದೊರೆಯಲಿ. ಅಲ್ಲಿ ನಡೆದಿರುವ ಹೋರಾಟದಂತೆಯೇ–ಕಠೋರತೆಗೆ ವಿರುದ್ಧವಾಗಿ ಮೃದುತ್ವ, ಹಮ್ಮು ಮತ್ತು ಹಿಂಸೆಗಳಿಗೆ ವಿರುದ್ಧವಾಗಿ ಸಾಧುತ್ವ ಮತ್ತು ಪ್ರೇಮ–ಈ ಬಗೆಯ ಹೋರಾಟ. ಇಲ್ಲಿ ನಮ್ಮಲ್ಲಿಯೂ ಪ್ರತಿವರ್ಷ ಹೆಚ್ಚು ಹೆಚ್ಚು ಅನುಭವಕ್ಕೆ ಬರುತ್ತಿದೆ. ಇದು ವಿಶೇಷವಾಗಿ, ಧರ್ಮತತ್ವಕ್ಕೂ ಮತ್ತು ಲೌಕಿಕ ತತ್ವಗಳಿಗೂ ನಡುವೆ ನಡೆಯುವ ಅತ್ಯಂತ ಪ್ರಖರವಾದ ಘರ್ಷಣೆಯಲ್ಲಿ–ಸೈನಿಕ ಸೇವೆಯ ನಿರಾಕರಣೆಯಲ್ಲಿ–ಕಂಡು ಬರುತ್ತಿದೆ. ಅಂಥ ನಿರಾಕರಣೆಗಳು ಹೆಚ್ಚು ಹೆಚ್ಚು ಸಂಭವಿಸುತ್ತಿವೆ. ನಾನು ನಿಮಗೆ ಸೋದರ ಭಾವದ ಸ್ವಾಗತ ನೀಡುತ್ತೇನೆ. ನಿಮ್ಮೊಂದಿಗೆ ಪತ್ರ ವ್ಯವಹಾರ ನಡೆಸಲು ಹರ್ಷಿಸುತ್ತೇನೆ".

ನವೆಂಬರ್ ೧೩ರಂದು. ಗಾಂಧಿ ನಿರಾಶಾಭರಿತರಾಗಿ ಲಂಡನ್ನಿನಿಂದ ತೆರಳಿದರು. ಆದರೆ ಸತ್ಯಾಗ್ರಹ ಸಮರವನ್ನು ಅತ್ಯಂತ ಅಹಿತಕರವಾದರೂ ಕೊನೆಯುವರೆಗೂ ನಡೆಸುವ ಕಠೋರ ನಿರ್ಧಾರವನ್ನು ಅವರು ಕೈಕೊಂಡಿದ್ದರು.

ಹಿಂದ್ ಸ್ವರಾಜ್ಯ

೧೯೦೯

ತಮ್ಮ ಇಂಗ್ಲೆಂಡ್ ಪ್ರವಾಸ ಕಾಲದಲ್ಲಿ ಗಾಂಧೀಜಿ ಭಾರತದ ಸ್ವಾತಂತ್ರ್ಯವನ್ನು (ಹೋಮ್‌ರೂಲ್) ಕುರಿತು ಆಳವಾಗಿ ಯೋಚಿಸಲು ಪ್ರಾರಂಭಿಸಿದರು. ಅಲ್ಲಿ ಅವರು ರಾಷ್ಟ್ರೀಯವಾದಿಗಳು, ಸಂವಿಧಾನವಾದಿಗಳು ಹಿಂಸಾವಾದಿಗಳು ಮುಂತಾದ ಎಲ್ಲ ಬಗೆಯ ರಾಜಕೀಯ ಅಭಿಪ್ರಾಯಗಳನ್ನುಳ್ಳ ಭಾರತೀಯರನ್ನೂ ಕಂಡರು. ಅವರೊಂದಿಗೆ ಚರ್ಚಿಸುತ್ತಿರುವಾಗ, ಅವರ (ಗಾಂಧೀಜಿಯ) ಸ್ವಂತ ರಾಜಕೀಯ ಅಭಿಪ್ರಾಯಗಳು ರೂಪುಗೊಳ್ಳುತ್ತಿದ್ದುವು. ಅನಂತರ 'ಹಿಂದ್ ಸ್ವರಾಜ್'ನ ತಿರುಳಾದ ಕೆಲವು ಸಿದ್ಧಾಂತಗಳು, ಅವರು ಲಾರ್ಡ್ ಅಂಫ್‌ಹಿಲರಿಗೆ ಅಕ್ಟೋಬರ್ ಒಂಬತ್ತು ೧೯೦೯ರಲ್ಲಿ ಬರೆದ ಪತ್ರದಲ್ಲಿ ಮೊದಲ ಬಾರಿಗೆ ವ್ಯಕ್ತವಾದುವು.

"ಭಾರತದಲ್ಲಿ, ಬ್ರಿಟಿಷ್ ಆಳ್ವಿಕೆಯಲ್ಲಿ ಅಸಹನೆ ಮತ್ತು ಬ್ರಿಟಿಷರನ್ನು ಕುರಿತ ದ್ವೇಷವು ಸರ್ವತ್ರ ಹರಡಿದೆ. ಹಿಂಸಾವಾದಿಗಳು ಪ್ರಬಲಿಸುತ್ತಿದ್ದಾರೆ. ಇದಕ್ಕೆ ಎದುರಾಗಿ ಹಿಂಸೆಯೊಡ್ಡುವುದು ವ್ಯರ್ಥ. ಆದರೂ ಬ್ರಿಟಿಷ್ ಆಳ್ವಿಕೆಗಾರರು ಔದಾರ್ಯದಿಂದ ಮತ್ತು ಸಕಾಲದಲ್ಲಿ ಸ್ವಾತಂತ್ರ್ಯವನ್ನು ಕೊಡುವುದಿಲ್ಲವೆಂದು ನಾನು ಶಂಕಿಸುತ್ತೇನೆ. ಬ್ರಿಟಿಷ್ ಜನತೆ ವ್ಯಾಪಾರವೆಂಬ ಸ್ವಾರ್ಥ ರಾಕ್ಷಸನ ಹಿಡಿತವಲ್ಲಿ ಬಲವಾಗಿ ಸಿಕ್ಕಿಕೊಂಡಿರುವಂತೆ ತೋರುತ್ತದೆ. ತಪ್ಪು ಜನಗಳದಲ್ಲ. ಆದರೆ ಪದ್ಧತಿಯದು..." ಪರದೇಶಿ ಭಂಡವಾಳಗಾರರಿಗಾಗಿ ಭಾರತ ಲೂಟಿಯಾಗುತ್ತಿದೆ. ...ಇಂಗ್ಲೆಂಡ್. ಆಧುನಿಕ ನಾಗರಿಕತೆಯನ್ನು ತಿರಸ್ಕರಿಸುವುದೇ ಇದಕ್ಕೆ ನಿಜವಾದ ಪರಿಹಾರಮಾರ್ಗ...ಈ ಆಧುನಿಕ ನಾಗರೀಕತೆಯು ಕ್ರಿಸ್ತಧರ್ಮ ಧ್ಯೇಯದ ನಿರಾಕರಣೆ" ಎಂದು ಬರೆದರು".

ಗಾಂಧೀಜಿ ಹೀಗೆ ಮುಂದುವರಿಸಿದರು "ಆದರೆ ಇದು ದೊಡ್ಡ ಮಾತು. ರೈಲುಗಳು ಯಂತ್ರೋಪಕರಣಗಳು ಮತ್ತು ಅದಕ್ಕೆ ಅನುಗುಣವಾದ ಸೋಮಾರಿತನದ ಸ್ವಭಾವಗಳು ಇವುಗಳೆಲ್ಲ ಭಾರತೀಯರಿಗೆ ಹೇಗೋ ಹಾಗೆ ಯೂರೋಪಿನವರಿಗೂ ಸಹ ಗುಲಾಮಗಿರಿಯ ನಿಜವಾದ ಸಂಕೇತ. ಆದುದರಿಂದ ನನಗೆ ಆಳ್ವಿಕೆಗಾರರೊಂದಿಗೆ ವಿರೋಧವಿಲ್ಲ. ಈ ಪದ್ಧತಿಯೊಂದಿಗೆ ಎಲ್ಲ ವಿರೋಧವೂ ಇದೆ. ಕಲ್ಕತ್ತ ಬೊಂಬಾಯಿನಂತಹ ನಗರಗಳು, ಅವುಗಳ ಬೆಳವಣಿಗೆ, ನನಗೆ ಸಂತೋಷಕ್ಕಿಂತ ದುಃಖದ ಸಂಗತಿಗಳಾಗಿವೆ. ಭಾರತ ತನ್ನ ಗ್ರಾಮಾಡಳಿತದ ಭಾಗವನ್ನು ಒಡೆದು ಹಾಕಿದುದರಿಂದ ನಾಶವಾಗಿದೆ. ಈ ಅಭಿಪ್ರಾಯಗಳು ನನಗೆ ಇರುವುದರಿಂದ ನಾನು ತೀವ್ರವಾದಿಗಳೊಂದಿಗೂ ಮಂದವಾದಿಗಳೊಂದಿಗೂ, ರಾಷ್ಟ್ರೀಯಭಾವನೆಯಲ್ಲಿ ಸಹಮತನಾಗಿ

ದ್ದರೂ, ಅವರ ಕಾರ್ಯವಿಧಾನವಲ್ಲಿ ಪೂರ್ಣವಾಗಿ ಅವರಿಂದ ಭಿನ್ನನಾಗಿದ್ದೇನೆ. ಏಕೆಂದರೆ ಆ ಎರಡು ಪಕ್ಷಗಳು ಕೊನೆಯಲ್ಲಿ ಹಿಂಸೆಯ ಮೇಲೆಯೇ ಅವಲಂಬಿತ ವಾಗಿವೆ. ಹಿಂಸಾಮಾರ್ಗ ಎಂದಮೇಲೆ, ಆಧುನಿಕ ನಾಗರಿಕತೆಯ ಅಂಗೀಕಾರ, ಹಿಂಸಾ ಮಾರ್ಗವಲ್ಲಿ ತೋರುವ ಅದೇ ವಿನಾಶಕಾರೀ ವಿಧಾನ. ಮತ್ತು ಅದರ ಫಲವಾಗಿ ನೀತಿಯ ನಾಶ. ಇವು ಇದ್ದೇ ಇವೆ. ಯಾರು ಆಳ್ವಿಕೆ ಮಾಡುತ್ತಾರೆ ಎಂಬುದು ನನಗೆ ಮುಖ್ಯವಲ್ಲ. ಆಳ್ವಿಕೆದಾರರು ನನ್ನ ಇಚ್ಛೆಗೆ ಅನುಗುಣವಾಗಿ ಆಳಬೇಕೆಂಬುದು ನನ್ನ ಬಯಕೆ. ಹಾಗಿಲ್ಲದಿದ್ದರೆ ನನ್ನನ್ನು ಆಳಲು ನಾನು ಅವರಿಗೆ ಸಹಾಯಕನಾಗುವುದಿಲ್ಲ. ನಾನು ಆಳ್ವಿಕೆಗಾರರ ವಿರುದ್ಧ ಅಹಿಂಸಾತ್ಮಕ ಅಸಹಕಾರಿಯಾಗುತ್ತೇನೆ".

ದಕ್ಷಿಣ ಆಫ್ರಿಕದಿಂದ ವಾಪಸಾಗುವಾಗ ಕಿಲ್ಡೊನಾನ್ ಕ್ಯಾಸಲ್ (Kildonan castle) ಎಂಬ ಹಡಗಿನಲ್ಲಿ ಗಾಂಧೀಜಿ ತನ್ನ ಮುವತ್ತು ಸಾವಿರ ಪದಗಳ. ಪ್ರಸಿದ್ಧ ವಾದ ಹಿಂದ್ ಸ್ವರಾಜ್ ಎಂಬ ಪುಸ್ತಕವನ್ನು ಗುಜರಾತಿಯಲ್ಲಿ ೧೯೦೯ರಲ್ಲಿ ಬರೆದರು. ನವೆಂಬರ್ ೧೩ರಿಂದ ನವೆಂಬರ್ ೨೨ರ ವರೆಗೆ ಅವರು ಹಗಲು ರಾತ್ರಿ ಅದರ ಹಸ್ತ ಪ್ರತಿಯನ್ನು ಬರೆದು ತಿದ್ದಿದರು. ಹಡಗಿನ ಆಫೀಸಿನಲ್ಲಿ ದೊರೆತ ಕಾಗದದ ಮೇಲೆಯೇ ರಚಿತವಾದ ೨೭೧ ಪುಟಗಳನ್ನುಳ್ಳದ್ದು ಆ ಪುಸ್ತಕ. ಸುಮಾರು ೫೦ ಪುಟಗಳನ್ನು ಗಾಂಧೀಜಿ ಎಡಗೈಯಲ್ಲಿ ಬರೆದರು. ಯಾಕೆಂದರೆ ಅವರ ಬಲಗೈ ಆಯಾಸಗೊಂಡಿತ್ತು.

ತನ್ನ ಸಹ ಕೆಲಸಗಾರರಲ್ಲಿ ಬೆಳೆಯುತ್ತಿದ್ದ ಹಿಂಸಾ ಪ್ರವೃತ್ತಿ. ಮನೋಭಾವ ಗಳಿಂದ ಗಾಂಧೀಜಿ ತುಂಬ ವಿಚಲಿತರಾದರು. "ಭಾರತದ ಸಮಸ್ಯೆಗಳಿಗೆ. ರೋಗಗಳಿಗೆ. ಹಿಂಸೆ ಔಷಧಿ ಅಲ್ಲ" ತನ್ನ ಆತ್ಮರಕ್ಷಣೆಗೆ ಭಾರತ ನಾಗರಿಕತೆಗೆ. ಬೇರೆಯಾದ ಮತ್ತು ಇನ್ನೂ ಉತ್ತಮವಾದ ಆಯುಧದ ರಕ್ಷಣೆ ಅವಶ್ಯಕವೆಂದು ಅವರು ಭಾವಿಸಿದರು. ಅವರು 'ಹಿಂದ್ ಸ್ವರಾಜ್ಯ' ಬರೆದುದು. ಭಾರತದ ಹಿಂಸಾವಾದಿಗಳಿಗೂ ಅದರ ಪಡಿ ಯಚ್ಚಾದ ಆಫ್ರಿಕದ ಹಿಂಸಾವಾದಿಗಳಿಗೂ ಉತ್ತರರೂಪವಾಗಿ. "ದಕ್ಷಿಣದ ಆಫ್ರಿಕದ ಸತ್ಯಾಗ್ರಹ ಇನ್ನೂ ಈಗ ತಾನೇ ಎರಡು ವರುಷದ ಮಗು. ಆದರೂ ಅದರ ವಿಷಯ ದಲ್ಲಿ ಸ್ವಲ್ಪ ಧೈರ್ಯದಿಂದ ಬರೆಯುವಷ್ಟು ಅದು ಈಗ ಬೆಳೆದು ಬಂದಿದೆ" ಎಂದರು. ಆ ಗ್ರಂಥದ ಲೇಖಕರ ಮಾತಿನಲ್ಲಿಯೇ ಹೇಳುವುದಾದರೆ ಈ ಗ್ರಂಥ "ದ್ವೇಷದ ಬದಲು ಪ್ರೇಮಸಂದೇಶವನ್ನು ಕಲಿಸುತ್ತದೆ. ಹಿಂಸೆಯ ಸ್ಥಳದಲ್ಲಿ ತ್ಯಾಗವನ್ನು ಬೋಧಿಸುತ್ತದೆ. ಹಿಂಸೆಗೆ ಎದುರಾಗಿ ಇದು ಆತ್ಮಶಕ್ತಿಯನ್ನು ಒಡ್ಡುತ್ತದೆ".

ಹಿಂದ್ ಸ್ವರಾಜ್ "ಆಧುನಿಕ ನಾಗರಿಕತೆಯ" ತೀಕ್ಷ್ಣ ದೂಷಣೆ. ಅದರಲ್ಲಿ ಸ್ವರಾಜ್ಯ. ನಾಗರಿಕತೆ, ವಕೀಲರು ವೈದ್ಯರು ಯಂತ್ರಗಳು. ಶಿಕ್ಷಣ ಸತ್ಯಾಗ್ರಹ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಇಪ್ಪತ್ತು ಅಧ್ಯಾಯಗಳಿವೆ. ಅದು ತನ್ನದೇ ಆದ ಸ್ವಂತ ಮಾರ್ಗದಲ್ಲಿ ವ್ಯಾವಹಾರಿಕ ಪ್ರಶ್ನೆಗಳನ್ನು ಕುರಿತು ಚರ್ಚಿಸುತ್ತದೆ. ಇದು ಸಂಭಾಷಣೆಯ ಕ್ರಮದಲ್ಲಿ ಬರೆಯಲ್ಪಟ್ಟಿದೆ. ಬಿಗಿಯಾದ ಸರಳವಾದ ಮತ್ತು ತರ್ಕಬದ್ಧವಾದ ಶೈಲಿ. ತನ್ನ ಸಹೋದ್ಯೋಗಿಗಳೊಂದಿಗೆ ಗಾಂಧಿ ನಡೆಸಿದ ಆತ್ಮೀಯ ಮಾತುಕಥೆಗಳ ಪ್ರಾಮಾ ಣಿಕ ನಿರೂಪಣೆ ಅದು. ಆ ಸಹೋದ್ಯೋಗಿಗಳಲ್ಲಿ ಒಬ್ಬ ನಿಸ್ಸಂದೇಹವಾಗಿ ಹಿಂಸಾವಾದಿ.

'ಹಿಂದ್ ಸ್ವರಾಜ್'ದಲ್ಲಿ ಇಟಲಿಗೂ ಭಾರತಕ್ಕೂ ಹೋಲಿಕೆ ಮಾಡಿರುವ ಒಂದು ಅಧ್ಯಾಯವೂ ಇದೆ. ಸ್ವರಾಜ್ಯದ ವಿಷಯದಲ್ಲಿ, ಗಾಂಧೀ ದೃಷ್ಟಿಯ ಸ್ವರಾಜ್ಯದ ಮುಖ್ಯ ಮತ್ತು ಮೂಲಭೂತ ಅಂಶಗಳ ವಿವರಣೆ ಇಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

"ಇಟಲಿಯವರು ಇಟಲಿಯನ್ನು ಆಳುತ್ತಿದ್ದಾರೆ. ಆದುದರಿಂದ ಇಟಲಿ ರಾಷ್ಟ್ರ ಸುಖವಾಗಿದೆ ಎಂದು ನೀವು ಯೋಚಿಸಿದರೆ ನೀವು ಕತ್ತಲೆಯಲ್ಲಿ ತೊಳಲುತ್ತಿದ್ದೀರಿ. ಇಟಲಿ ಸ್ವತಂತ್ರವಾಗಿಲ್ಲ ಎಂಬುದನ್ನು ಮಾಜಿನಿ ನಿಸ್ಸಂದೇಹವಾಗಿ ಸ್ಪಷ್ಟಪಡಿಸಿದ್ದಾನೆ. ವಿಕ್ಟರ್ ಇಮಾನುಯೆಲ್ ಸ್ವಾತಂತ್ರ್ಯವೆಂಬ ಮಾತಿಗೆ ಒಂದು ಅರ್ಥವನ್ನು ಕೊಟ್ಟನು. ಮಾಜಿನಿ ಬೇರೊಂದು ಅರ್ಥವನ್ನು ಕೊಟ್ಟನು. ಎಮ್ಯಾನುಯೆಲ್, ಕ್ಯಾವರ್ ಮತ್ತು ಗ್ಯಾರಿಬಾಲ್ಡಿಗೆ ಸಹ 'ಇಟಲಿ ಎಂದರೆ ಇಟಲಿಯ ರಾಜ ಮತ್ತು ಅವನ ಅನುಚರರು' ಮಾಜಿನಿಗೆ, 'ಇಟಲಿಯೆಂದರೆ ಇಟಲಿಯ ಜನರೆಲ್ಲ—ಅಂದರೆ ವ್ಯವಸಾಯಗಾರರು. ಎಮ್ಯಾನುಯೆಲ್, ಇಟಲಿಯ ಸೇವಕ ಮಾತ್ರ'. ಮಾಜಿನಿಯ ಇಟಲಿ, ಇನ್ನೂ ಗುಲಾಮಗಿರಿಯ ಸ್ಥಿತಿಯಲ್ಲಿಯೇ ಉಳಿದಿದೆ. ಅಲ್ಲಿಯ ಕೆಲಸಗಾರರು ಕೂಲಿಗಳು ಇನ್ನೂ ಅಸುಖಿಗಳಾಗಿಯೇ ಇದ್ದಾರೆ. ಆದುದರಿಂದ ಅವರು ಕೊಲೆಮಾಡುತ್ತಾರೆ, ದಂಗೆಯೇಳುತ್ತಾರೆ. ಅವರು ಯಾವಾಗಲೂ ದಂಗೆಯೇಳುವರೆಂಬುದೇ ನಿರೀಕ್ಷೆ. ಆಸ್ಟ್ರಿಯದ ಸೈನಿಕರು ಹಿಂದಕ್ಕೆ ಹೋದ ಮೇಲೆ ಇಟಲಿಗೆ ದೊರೆತ ಸ್ಪಷ್ಟವಾದ ಲಾಭವೇನು? ಲಾಭ ನಾಮಮಾತ್ರ. ಜನತೆಯ ಸ್ಥಿತಿ, ಬಹುಮಟ್ಟಿಗೆ ಮೊದಲಿದ್ದಂತೆಯೇ ಇದೆ. ಭಾರತದಲ್ಲಿಯೂ ಅಂತಹ ಸ್ಥಿತಿಯ ಪುನರ್‌ನಿರ್ಮಾಣಮಾಡಲು ನೀವು ಬಯಸುವುದಿಲ್ಲವೆಂದು ನನ್ನ ಪೂರ್ಣ ನಂಬಿಕೆ. ನೀವು ಭಾರತದಲ್ಲಿರುವ ಕೋಟಿ ಕೋಟಿ ಜನತೆ ಸುಖವಾಗಿರಬೇಕೆಂದು ಬಯಸುತ್ತೀರಿ? ಸರ್ಕಾರದ ಸೂತ್ರ ನಿಮ್ಮ ಕೈಯಲ್ಲಿರಬೇಕೆಂದಲ್ಲ ಎಂದು ನಾನು ನಂಬುತ್ತೇನೆ. ಅದು ನಿಜವಾದರೆ ನಾವು ಯೋಚಿಸಬೇಕಾದುದು ಒಂದೇ ವಿಷಯ. ಈ ಕೋಟಿ ಜನತೆಗೆ ಸ್ವರಾಜ್ಯ ದೊರೆಯುವುದು ಹೇಗೆ. ಭಾರತೀಯರು ಅನೇಕ ದೇಶೀಯ ರಾಜರ ಕಾಲ ತುಳಿತದಲ್ಲಿ ಅರೆಯಲ್ಪಡುತ್ತಿದ್ದಾರೆಂಬುವನ್ನು ನೀವು ಒಪ್ಪುತ್ತೀರಿ. ಈ ರಾಜರು ಅವರನ್ನು ನಿಷ್ಕರುಣೆಯಿಂದ ತುಳಿಯುತ್ತಿದ್ದಾರೆ. ಅವರು ಮಾಡುವ ಪ್ರಜಾಪೀಡೆ ಬ್ರಿಟಿಷರು ಮಾಡುವ ಪೀಡೆಗಿಂತ ಹೆಚ್ಚಾಗಿದೆ.ಅಂತಹ ಪೀಡೆ. ಭಾರತದಲ್ಲಿ ಇರಬೇಕೆಂದು ನೀವು ಬಯಸುವುದಾದರೆ. ನಮಗೂ ನಿಮಗೂ ಎಂದಿಗೂ ಸಹಮತವಿಲ್ಲ. ಇಂಗ್ಲಿಷರು ಹೊರಟು ಹೋದರೆ ಸಾಕು, ಜನರನ್ನು ರಾಜರು ತುಳಿದು ಹಾಕಲು ಅವಕಾಶ ಕೊಡಬೇಕೆಂದು ನನ್ನ ದೇಶಭಕ್ತಿ ನನಗೆ ಕಲಿಸಿಲ್ಲ. ನನಗೆ ಶಕ್ತಿಯಿದ್ದರೆ ನಾನು ಇಂಗ್ಲಿಷರ ಪ್ರಜಾಪೀಡನೆಯನ್ನು ಎದುರಿಸುವಂತೆ ಭಾರತದ ರಾಜರ ಪ್ರಜಾಪೀಡೆಯನ್ನೂ ಎದುರಿಸಬೇಕು. ದೇಶಪ್ರೇಮ ಎಂದರೆ ಎಲ್ಲ ಜನತೆಯ ಒಳಿತು. ಇದನ್ನು ನಾನು ಇಂಗ್ಲಿಷಿನವರಿಂದ ಗೆದ್ದುಕೊಳ್ಳಬಲ್ಲೆನಾದರೆ, ಇಂಗ್ಲಿಷರಿಗೆ ನನ್ನ ತಲೆಯನ್ನು ಬಾಗಿಸುತ್ತೇನೆ. ಇಂಗ್ಲಿಷಿನವನು ಯಾವನೊಬ್ಬನಾದರೂ. ಸರ್ಕಾರದ ಪ್ರಜಾಪೀಡೆಯನ್ನು ಎದುರಿಸಿ ಭಾರತ ಸ್ವಾತಂತ್ರ್ಯವನ್ನು ಸಂಪಾದಿಸಲು ತನ್ನನ್ನು

ಅರ್ಪಿಸಿಕೊಂಡರೆ, ಅಂತಹ ಆಂಗ್ಲೇಯನನ್ನು ನಾನು ಸಂತೋಷದಿಂದ ಭಾರತೀಯ ನೆಂದೇ ಸ್ವಾಗತಿಸುತ್ತೇನೆ. ನಮ್ಮನ್ನು ನಾವು ಆಳಲು ಕಲಿತರೆ ಅದೇ ಸ್ವರಾಜ್ಯ. ಈ ಸ್ವರಾಜ್ಯವನ್ನು ಪ್ರತಿಯೊಬ್ಬನೂ ತನಗೆ ತಾನೇ ಅನುಭವಿಸಬೇಕು. ಇತರರು ನನಗಾಗಿ ತಂದು ಕೊಡುವುದು ಸ್ವರಾಜ್ಯವಲ್ಲ. ಅದು ಪರದೇಶಿ ಆಳ್ವಿಕೆ."

ಗುರಿ ಮತ್ತು ಗುರಿಯ ಸಾಧನೆಯನ್ನು ಕುರಿತು ಗಾಂಧೀಜಿ ಹೀಗೆ ಬರೆದರು "ಮಾರ್ಗವನ್ನು ಬೀಜಕ್ಕೆ ಹೋಲಿಸಬಹುದು. ಗುರಿಯನ್ನು ಮರಕ್ಕೆ. ಬೀಜಕ್ಕೂ ಮರಕ್ಕೂ ಯಾವ ಅನಿವಾರ್ಯ ಸಂಬಂಧವಿದೆಯೋ ಗುರಿಗೂ ಸಾಧನೆಯ ಮಾರ್ಗಕ್ಕೂ ಅದೇ ಅನಿವಾರ್ಯ ಸಂಬಂಧವಿದೆ. ದೇವರ ಪೂಜೆಯಿಂದ ದೊರೆಯಬೇಕಾದ ಫಲವನ್ನು ಸೈತಾನನ ಎದುರಿಗೆ ಅಡ್ಡಬೀಳುವುದರಿಂದ ಹೊಂದುವ ಸಂಭವವಿಲ್ಲ. ಯಾರಾದರೂ 'ನಾನು ದೇವರನ್ನು ಪೂಜಿಸಬಯಸುತ್ತೇನೆ. ಸೈತಾನನ ಮೂಲಕವಾಗಿಯೇ ಹಾಗೆ ಮಾಡುವುದಾದರೂ ಚಿಂತೆಯಿಲ್ಲ' ಎಂದು ಹೇಳುವುದಾದರೆ ಅದು ಅಜ್ಞಾನ, ತಪ್ಪು ಎನ್ನಬೇಕಾಗುತ್ತದೆ. ನಾವು ಬಿತ್ತಿದಂತೆಯೇ ನಮ್ಮ ಬೆಳೆ".

ಭಾರತದಲ್ಲಿ ಒಬ್ಬ ಮಿತ್ರರಿಗೆ ಹಿಂದ್ ಸ್ವರಾಜ್ಯವನ್ನು ಕುರಿತು, ಗಾಂಧೀಜಿ ಹೀಗೆ ಸಂಕ್ಷೇಪಿಸಿ ಹೇಳಿದರು.

"(೧) ಪೂರ್ವಕ್ಕೂ ಪಶ್ಚಿಮಕ್ಕೂ ನಡುವೆ ಹೊಂದಾಣಿಕೆಯಾಗದ ಪ್ರತಿ ಬಂಧಕ ಯಾವುದೂ ಇಲ್ಲ.

"(೨) ಪಾಶ್ಚಾತ್ಯ ಅಥವಾ ಯೂರೋಪ್ ನಾಗರಿಕತೆ ಎಂಬುದು ಏನೂ ಇಲ್ಲ. ಆದರೆ ಬರಿ ಭೌತವಾದವೇ ಆದ ಆಧುನಿಕ ನಾಗರಿಕತೆಯೆಂಬುದು ಇದೆ.

"(೩) ಯೂರೋಪ್ ಜನರು, ಆಧುನಿಕ, ನಾಗರಿಕತೆಯಿಂದ ಪ್ರಭಾವಿತ ರಾಗುವುದಕ್ಕಿಂತ ಮುಂಚಿತವಾಗಿ, ಪೌರ್ವಾತ್ಯ ಜನತೆಯೊಂದಿಗೆ, ಅನೇಕ ಸಮಾ ನಾಂಶಗಳನ್ನು ಹೊಂದಿದ್ದರು. ಹೇಗೂ, ಭಾರತೀಯರೂ, ಮತ್ತು ಆಧುನಿಕ ನಾಗರಿಕತೆಯ ಸಂಪರ್ಕವಿಲ್ಲದ ಯೂರೋಪಿನ ಜನರೂ ಭಾರತೀಯರೊಂದಿಗೆ ಆ ನಾಗರಿಕತೆಯ ಸಂಪರ್ಕವಿರುವವರಿಗಿಂತ ಹೆಚ್ಚು ಉತ್ತಮವಾಗಿ ಮಿಳಿತ ರಾಗಬಲ್ಲವರಾಗಿದ್ದಾರೆ.

"(೪) ಭಾರತವನ್ನು ಆಳುತ್ತಿರುವವರು ಬ್ರಿಟಿಷರಲ್ಲ. ಆದರೆ ಆಧುನಿಕ ನಾಗರಿಕತೆ: ಅದರ ರೈಲು ಟೆಲಿಗ್ರಾಫ಼ು ಟೆಲಿಫೋನ್ ಮತ್ತು ಅದರ ಜಯಭೇರಿ ಗಳೆನಿಸಿಕೊಳ್ಳುವ ಪ್ರತಿಯೊಂದು ಹೊಸ ಸಂಶೋಧನೆಯ ಮೂಲಕ.

"(೫) ಬೊಂಬಾಯಿ ಕಲ್ಕತ್ತ ಮತ್ತು ಭಾರತದ ಇತರ ಮುಖ್ಯ ನಗರ ಗಳು ಇದರ ಪ್ಲೇಗು ಪ್ರದೇಶಗಳು.

"(೬) ನಾಳೆ ಇಂಗ್ಲಿಷರ ಆಳ್ವಿಕೆಯ ಸ್ಥಾನಕ್ಕೆ ಭಾರತದ ಆಳ್ವಿಕೆ ಬಂದರೆ, ಪರಿಸ್ಥಿತಿ ಏನೂ ಉತ್ತಮವಾಗುವುದಿಲ್ಲ. ಇಂಗ್ಲೆಂಡಿಗೆ ಸಾಗಿ ಹೋಗುತ್ತಿರುವ ಕೆಲವು ಹಣ ಭಾರತದಲ್ಲಿ ಉಳಿಯ ಬಲ್ಲದು ಅಷ್ಟೆ. ಆದರೆ ಆಗ ಇಂಡಿಯಾ

ಇಂಗ್ಲೆಂಡು ಅಥವಾ ಅಮೆರಿಕವನ್ನು ಅನುಕರಿಸುವ ಎರಡನೆ ಅಥವಾ ಐದನೆಯ ರಾಷ್ಟ್ರವಾಗಬಹುದು ಮಾತ್ರ.

"(೭) ಪಶ್ಚಿಮವು ತನ್ನ ಆಧುನಿಕ ನಾಗರಿಕತೆಯನ್ನು ಪೂರ್ಣವಾಗಿ ಬಹಿಷ್ಕರಿಸಿದಾಗ ಮಾತ್ರ ಪೂರ್ವ ಮತ್ತು ಪಶ್ಚಿಮಗಳು ನಿಜವಾಗಿಯೂ ಸಂಧಿಸಬಲ್ಲವು. ಪೂರ್ವವು ಆಧುನಿಕ ನಾಗರಿಕತೆಯನ್ನು ಅಂಗೀಕರಿಸಿಕೊಂಡಾಗಲೂ ಅವೆರಡೂ ಮೇಲು ನೋಟಕ್ಕೆ ಮಿಳಿತವಾದಂತೆ ತೋರಬಹುದು. ಆದರೆ ಆ ಮಿಳನ ಬರಿಯ ಶಸ್ತ್ರಾಸ್ತ್ರ ಸಜ್ಜಿತ ಶಾಂತಿ ಮಾತ್ರ ಆಗುತ್ತದೆ. ಉದಾಹರಣೆಗೆ ಜರ್ಮನಿ ಮತ್ತು ಇಂಗ್ಲೆಂಡಿನಂತೆ. ಆ ಎರಡು ರಾಷ್ಟ್ರಗಳೂ ಒಂದನ್ನೊಂದು ನುಂಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸಾವಿನ ದವಡೆಯಲ್ಲಿ ಒಟ್ಟಿಗೆ ಬರುತ್ತಿವೆ.

"(೮) ಜಗತ್ತನ್ನೆಲ್ಲ ಪೂರ್ಣವಾಗಿ ಶುದ್ಧೀಕರಿಸಲು ಪ್ರಾರಂಭಿಸುವುದು ಒಂದು ಸಂಸ್ಥೆಗಾಗಲಿ ವ್ಯಕ್ತಿಗಾಗಲಿ ಅಧಿಕ ಪ್ರಸಂಗಿತನ. ಪೂರ್ಣವಾಗಿ ಕೃತಕವಾದ ಮತ್ತು ವೇಗವಾಗಿ ಚಲಿಸುವ ಯಾಂತ್ರಿಕ ವಾಹನಗಳಿಂದ ಹಾಗೆ ಮಾಡಲು ಪ್ರಯತ್ನಿಸುವುದು ಅಸಾಧ್ಯವಾದುದನ್ನು ಪ್ರಯತ್ನಿಸಿದಂತೆಯೆ.

"(೯) ಭೌತಸುಖದ ಹೆಚ್ಚಳದಿಂದ ನೈತಿಕ ಬೆಳವಣಿಗೆಗೆ ಯಾವ ರೀತಿಯಲ್ಲಿಯೂ ಸಹಾಯಕವಾಗುವುದಿಲ್ಲವೆಂದು ಸಾಮಾನ್ಯವಾಗಿ ಹೇಳಬಹುದು.

"(೧೦) ವೈದ್ಯ ವಿಜ್ಞಾನ, ಕರಾಳ ಮಾಟವಿದ್ಯೆಯ ಸಂಘಟಿತ ತಿರುಳು. ಈಗ ಅತ್ಯುತ್ತಮ ವೈದ್ಯ ನಿಪುಣನೆನಿಸಿಕೊಳ್ಳುವುದಕ್ಕಿಂತ ಅಳಲೆಕಾಯಿ ಪಂಡಿತರು ಹೆಚ್ಚು ಸ್ಪೃಹಣೀಯರು.

"(೧೧) ಆಸ್ಪತ್ರೆಗಳು, ಸೈತಾನನು ತನ್ನ ಉದ್ದೇಶಕ್ಕಾಗಿ, ತನ್ನ ರಾಜ್ಯದ ಮೇಲಿನ ಆಧಿಪತ್ಯಕ್ಕಾಗಿ ಬಳಸಿಕೊಳ್ಳುತ್ತಿರುವ ಉಪಕರಣಗಳು. ಅವು ದುರಾಚಾರ, ಸಂಕಟ, ಅವನತಿ, ನಿಜವಾದ ಗುಲಾಮಗಿರಿಗಳನ್ನು ವೃದ್ಧಿಗೊಳಿಸುತ್ತಿವೆ. ನಾನು ನನಗಾಗಿ ಒಂದು ವೈದ್ಯಕೀಯ ತರಪೇತಿ ತೆಗೆದುಕೊಳ್ಳಬಹುದೇ ಎಂದು ಯೋಚಿಸಿದುದು ಪೂರ್ಣವಾಗಿ ದಾರಿ ಬಿಟ್ಟಂತೆ ಆಯಿತು. ಆಸ್ಪತ್ರೆಗಳಲ್ಲಿ ನಡೆಯುವ ಹೇಯ ಕೃತ್ಯಗಳಲ್ಲಿ ಹೇಗೂ ಭಾಗಿಯಾಗುವುದು ನನ್ನ ದೃಷ್ಟಿಗೆ ಪಾಪಕರ. ಮೇಹಜಾಡ್ಯಗಳಿಗಾಗಿಯೂ ಕ್ಷಯರೋಗಿಗಳಿಗಾಗಿಯೂ ಆಸ್ಪತ್ರೆಗಳು ಇಲ್ಲದಿದ್ದಲ್ಲಿ ನಮ್ಮಲ್ಲಿ ಕ್ಷಯವೂ ಲೈಂಗಿಕ ದುರಾಚಾರವೂ ಕಡಿಮೆಯಾಗಿರುತ್ತಿತ್ತು.

"(೧೨) ಕಳೆದ ಸುಮಾರು ಐವತ್ತು ವರ್ಷಗಳಲ್ಲಿ ತಾನು ಏನನ್ನು ಕಲಿತಿದೆಯೋ, ಅದನ್ನು ಮರೆಯುವುದರಲ್ಲಿಯೇ ಭಾರತಕ್ಕೆ ಮೋಕ್ಷವಿದೆ. ರೈಲುಗಳು ಟೆಲಿಗ್ರಾಫ್, ಆಸ್ಪತ್ರೆಗಳು, ಲಾಯರುಗಳು ಡಾಕ್ಟರುಗಳು ಮೊದಲಾದವರೆಲ್ಲ ಹೋಗಬೇಕು. ಮೇಲು ತರಗತಿಯವರೆನಿಸಿಕೊಳ್ಳುವವರೆಲ್ಲ ಉದ್ದೇಶಪೂರ್ವಕವಾಗಿ ಆತ್ಮಶ್ರದ್ಧೆಯಿಂದ, ರೈತನ ಸರಳಬಾಳು, ಸಜೀವವೂ ಸುಖಪ್ರದವೂ ಆದುದೆಂಬುದನ್ನು ಅರಿತುಕೊಂಡು, ಆ ಬಾಳನ್ನು ಜೀವಿಸಲು ಕಲಿಯಬೇಕು.

"(೧೩) ಭಾರತ, ಯಂತ್ರದಲ್ಲಿ ಮಾಡಿದ ಬಟ್ಟೆಯನ್ನು–ಅದು ಯೂರೋಪಿನ ಗಿರಣಿಯಾಗಲಿ ಭಾರತದ ಗಿರಣಿಯಾಗಲಿ–ಧರಿಸಬಾರದು.

"(೧೪) ಇದನ್ನು ಸಾಧಿಸಲು ಭಾರತಕ್ಕೆ ಇಂಗ್ಲೆಂಡು ಸಹಾಯ ಮಾಡಬಲ್ಲದು. ಆಗ ಅದು ಭಾರತವನ್ನು ತನ್ನ ಹಿಡಿತದಲ್ಲಿಟ್ಟುಕೊಂಡುದಕ್ಕೆ ಸಾರ್ಥಕ್ಯವನ್ನುಂಟು ಮಾಡಿದಂತಾಗುವುದು. ಹೀಗೆ ಯೋಚಿಸುವವರು ಇಂಗ್ಲೆಂಡಿನಲ್ಲಿಯೂ ಅನೇಕರು ಇರುವಂತೆ ತೋರುತ್ತಿದೆ.

(೧೫) ಹಿಂದಿನ ಋಷಿಗಳು, ಜನತೆಯ ಭೌತ ಅನುಕೂಲ್ಯಗಳಿಗೆ ಒಂದು ಹತೋಟಿಯನ್ನು ಕ್ಲುಪ್ತಗೊಳಿಸಿದುದರಲ್ಲಿ ನಿಜವಾದ ವಿವೇಕವಿದ್ದಿತು. ಐದು ಸಾವಿರ ವರುಷಗಳ ಹಿಂದಿನ ನೇಗಿಲೇ ಬಹುಶಃ ಈವತ್ತಿಗೂ ನಮ್ಮ ರೈತನ ನೇಗಿಲಾಗಿದೆ. ಪರಿಹಾರವಿರುವುದು ಇಲ್ಲಿ. ಇಂತಹ ಪರಿಸ್ಥಿತಿಯಲ್ಲಿ ಜನ, ಆಧುನಿಕ ನಾಗರಿಕತೆಯ ಸೌಲಭ್ಯಗಳನ್ನು ಅಂಗೀಕರಿಸಿ ಬಾಳುವುದಕ್ಕಿಂತ ಹೆಚ್ಚಿನ ಸುಖದಲ್ಲಿ, ಹೆಚ್ಚು ಕಾಲ ಜೀವಿಸಬಲ್ಲರು. ಪ್ರತಿಯೊಬ್ಬ ವಿವೇಕಿಯಾದ ಮನುಷ್ಯನೂ, ಪ್ರತಿಯೊಬ್ಬ ಆಂಗ್ಲೇಯನೂ ಸಹ, ತಾನು ಇಷ್ಟಪಟ್ಟರೆ ಈ ಸತ್ಯವನ್ನು ಅರಿತು ಅದಕ್ಕನುಸಾರವಾಗಿ ಆಚರಿಸಬಹುದೆಂದು ನನಗೆ ಅನಿಸುತ್ತದೆ.

"ಸತ್ಯಾಗ್ರಹದ ನಿಜವಾದ ಮನೋಭಾವ, ನನ್ನನ್ನು ಈ ಮೇಲಿನ ಖಚಿತವಾದ ನಿರ್ಣಯಗಳಿಗೆ ತಂದಿದೆ. ಇಂತಹ ಅತ್ಯದ್ಭುತವಾದ ಸುಧಾರಣೆ, ಇಂದಿನ ಈ ಹುಚ್ಚುಕುಣಿತದಲ್ಲಿಯೇ ತೃಪ್ತಿ ಹೊಂದುವವರಲ್ಲಿ ಸಾಧ್ಯವೇ ಎಂಬುದು, ಸತ್ಯಾಗ್ರಹಿಯಾಗಿ ನನಗೆ ಸಂಬಂಧಪಟ್ಟುದಲ್ಲ. ಈ ಸತ್ಯವನ್ನು ನಾನು ಅರಗಿಸಿಕೊಂಡಿರುವೆನಾದರೆ, ಅದರಂತೆ ಅನುಸರಿಸುವುದರಲ್ಲಿ ನಾನು ಸಂತೋಷ ಪಡಬೇಕು. ಆದುದರಿಂದ ಜನಸಾಮಾನ್ಯರು ಪ್ರಾರಂಭಿಸುವವರೆಗೆ ನಾನು ಕಾಯುತ್ತ ಕುಳಿತುಕೊಳ್ಳಕೂಡದು. ಹೀಗೆ ಯೋಚಿಸುವ ನಾವೆಲ್ಲ ಆವಶ್ಯಕವಾದ ಹೆಜ್ಜೆಯನ್ನು ಇಡಲೇಬೇಕು. ಮತ್ತು ನಾವು ಶ್ರದ್ಧಾವಂತರಾದರೆ ಉಳಿದವರು ನಮ್ಮನ್ನು ಅನುಸರಿಸಿಯೇ ಅನುಸರಿಸುತ್ತಾರೆ. ಧ್ಯೇಯವೇನೋ ಇದೆ. ನಮ್ಮ ಆಚರಣೆ ಸಾಧ್ಯವಾದಷ್ಟೂ ಅದರ ಸಮೀಪವಾಗಿರಬೇಕು. ಈ ಗೊಂದಲದ ಮಧ್ಯದಲ್ಲಿ ವಾಸಿಸುತ್ತ, ನಾವು ಎಲ್ಲ ದೋಷಗಳಿಂದ ಬಿಡಿಸಿಕೊಳ್ಳಲು ಶಕ್ಯವಾಗದಿರಬಹುದು. ನಾನು ರೈಲನ್ನು ಅಥವಾ ಮೋಟಾರನ್ನು ಏರಿದ ಪ್ರತಿಯೊಂದು ಸಂದರ್ಭದಲ್ಲಿಯೂ ನನ್ನ ನ್ಯಾಯಪ್ರವೃತ್ತಿಗೆ ನಾನು ಅನ್ಯಾಯವನ್ನು ಮಾಡುತ್ತಿದ್ದೇನೆಂದು ನನಗೆ ಗೊತ್ತು. ಈ ಆಧಾರದ ಮೇಲೆ ನಾನು ತರ್ಕಬದ್ಧವಾದ ಪರಿಣಾಮಕ್ಕೆ ಹೆದರುವುದಿಲ್ಲ. ಇಂಗ್ಲೆಂಡಿಗೆ ಪ್ರವಾಸ ಕೆಟ್ಟದ್ದು. ದಕ್ಷಿಣ ಆಫ್ರಿಕಕ್ಕೂ ಭಾರತಕ್ಕೂ ಹಡಗುಗಳಲ್ಲಿ ಸಮುದ್ರಯಾನ ಮಾಡುವುದೂ, ಸಂಪರ್ಕವೂ ಕೆಟ್ಟದ್ದು. ನಾವೂ ನೀವೂ ನಮ್ಮ ಬಾಳಿನಲ್ಲಿ ಈ ವಿಷಯಗಳನ್ನು ಮೀರಿ ನಡೆಯಬಹುದು. ಆದರೆ ತತ್ತ್ವ, ಸರಿಯಾಗಿರಬೇಕಾದುದು ಮುಖ್ಯ ಸಂಗತಿ. ಅಲ್ಲಿ ನೀವು ಎಲ್ಲ ಬಗೆಯ ಎಲ್ಲ ಪರಿಸ್ಥಿತಿಯ ಜನರನ್ನೂ ನೋಡುತ್ತಿರುತ್ತೀರಿ.

“ಆದುದರಿಂದ ನಾನು ಮಾನಸಿಕವಾಗಿ ತೆಗೆದುಕೊಂಡಿರುವ ಪ್ರಗತಿಯ ಹೆಜ್ಜೆ ಏಂಬುದನ್ನು ನಿಮಗೆ ತಿಳಿಸದೆ ಇರುವುದು ಸರಿಯಲ್ಲವೆಂದು ಭಾವಿಸುತ್ತೇನೆ. ನಾನು ಹೇಳುವುದು ನಿಮಗೆ ಸರಿಯೆಂದು ತೋರಿದರೆ ನೀವು ಕ್ರಾಂತಿಕಾರರಿಗೂ ಮತ್ತು ಎಲ್ಲರಿಗೂ ಸಹ ಹೀಗೆ ಹೇಳಬೇಕು. ‘ನಿಮಗೆ ಬೇಕಾದ ಅಥವ ಬೇಕೆಂದು ನೀವು ಯೋಚಿಸುವ ಸ್ವಾತಂತ್ರ್ಯ, ಜನರನ್ನು ಕೊಲ್ಲುವುದರಿಂದಾಗಲೀ ಹಿಂಸಾಕೃತ್ಯಗಳನ್ನು ಮಾಡುವುದರಿಂದಾಗಲೀ, ದೊರಕುವುದಿಲ್ಲ. ಆದರೆ ನೀವು ನ್ಯಾಯಮಾರ್ಗವನ್ನು ಹಿಡಿದು ನಿಜವಾದ ಭಾರತೀಯರಾಗುವುದರಿಂದ ಮಾತ್ರ ದೊರೆಯುತ್ತದೆ. ಆಗ ಬ್ರಿಟಿಷ್ ಆಡಳಿತಗಾರರು ಸೇವಕರಾಗುತ್ತಾರೆ. ಯಜಮಾನರಲ್ಲ.’ ಅವರು ವಿಶ್ವಸ್ತರಾಗುತ್ತಾರೆ ಪ್ರಜಾಪೀಡಕರಾಗುವುದಿಲ್ಲ. ಮತ್ತು ಭಾರತದ ಸಮಸ್ತ ಪ್ರಜೆಗಳೊಂದಿಗೂ ಪೂರ್ಣ ಶಾಂತಿಯಿಂದ ವಾಸಿಸುತ್ತಾರೆ. ಆದುದರಿಂದ ನಮ್ಮ ಭವಿಷ್ಯವನ್ನು ಅವಲಂಬಿಸಿರುವುದು ಬ್ರಿಟಿಷರ ಮೇಲಲ್ಲ, ಭಾರತದವರ ಮೇಲೆಯೇ. ಭಾರತೀಯರು ತಕ್ಕಷ್ಟು ಸ್ವಾರ್ಥತ್ಯಾಗವನ್ನೂ ಮಿತಸಂಯಮಗಳನ್ನೂ ಸಾಧಿಸಿಕೊಂಡರೆ ಈ ಗಳಿಗೆಯಲ್ಲಿಯೂ ಸ್ವತಂತ್ರರಾಗಬಲ್ಲರು. ಈಗ ನಾವು ಬಾಳಿನಲ್ಲಿ ಬಹುಮಟ್ಟಿಗೆ ಸರಳತೆಯನ್ನು ಸಾಧಿಸಿದ್ದೇವೆ. ಕೆಲವು ಕಾಲದ ಹಿಂದೆ ಈ ಗುಣ ಪೂರ್ಣವಾಗಿ ನಮ್ಮದೇ ಆಗಿತ್ತು. ಈಗಲೂ ಅತ್ಯುತ್ತಮ ಭಾರತೀಯರೂ ಅತ್ಯುತ್ತಮ ಆಂಗ್ಲೇಯರೂ ಭಾರತದ ವೈಶಾಲ್ಯದಲ್ಲಿ ಒಬ್ಬರನ್ನೊಬ್ಬರು ಸಂಧಿಸಿ ಮಧ್ಯಸ್ಥಗಾರರಾಗಿ ನಡೆಯಲು ಸಾಧ್ಯವಾಗುವುದು. ಚುರುಕು ಪ್ರಯಾಣದ ಸಾಧನಗಳು ಇಲ್ಲದಿದ್ದ ಕಾಲದಲ್ಲಿ ಗುರುಗಳೂ ಬೋಧಕರೂ ಎಲ್ಲ ಅಪಾಯಗಳನ್ನೂ ಎದುರಿಸಿಕೊಂಡು ದೇಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಾಲುನಡಿಗೆಯಲ್ಲಿ ಹೋದರು. ಅವರು ಹಾಗೆ ಹೋದುದು ತಮ್ಮ ದೇಹಧಾರ್ಢ್ಯವನ್ನೂ ಆರೋಗ್ಯವನ್ನೂ ಉತ್ತಮಪಡಿಸಿಕೊಳ್ಳುವುದಕ್ಕಾಗಿ ಅಲ್ಲ; ಅದರಿಂದ ಅದೂ ಆಯಿತೆಂಬುದೂ ಸರಿ. ಆದರೆ ಅವರು ಹೋದುದು ಮನುಷ್ಯ ಕಲ್ಯಾಣಕ್ಕಾಗಿ. ಆಗ ಕಾಶಿ ಮತ್ತು ಇತರ ಪವಿತ್ರಕ್ಷೇತ್ರಗಳು ಇದ್ದವು. ಆದರೆ ಇಂದು ಅವೆಲ್ಲ ಅಸಹ್ಯ ಕೊಂಪೆಗಳಾಗಿವೆ.

“ನಾನು ನನ್ನ ಮಕ್ಕಳೊಂದಿಗೆ ಗುಜರಾತಿಯಲ್ಲಿ ಮಾತನಾಡಿದುದಕ್ಕೆ ನೀವು ನನ್ನನ್ನು ಗದರಿಸುತ್ತಿದ್ದಿರಿ. ಈಗ ನನಗೆ, ನಾನು ಅವರೊಂದಿಗೆ ಇಂಗ್ಲಿಷಿನಲ್ಲಿ ಮಾತನಾಡಲು ನಿರಾಕರಿಸಿದುದು ಪೂರ್ಣ ಸರಿ ಎಂದು ಭಾಸವಾಗುತ್ತಿದೆ. ಒಬ್ಬ ಗುಜರಾತಿ ಮತ್ತೊಬ್ಬ ಗುಜರಾತಿಗೆ ಇಂಗ್ಲಿಷಿನಲ್ಲಿ ಬರೆಯುವುದನ್ನು ಊಹಿಸಿ. ಅವನು ಉಚ್ಚಾರಣೆಯಲ್ಲಿ ತಪ್ಪು ಮಾಡಿ ವ್ಯಾಕರಣ ದೋಷ ಮಾಡುತ್ತಾನೆಂದು ನೀವು ಹೇಳುವುದು ಸರಿ. ನಾನು ಇಂಗ್ಲಿಷಿನಲ್ಲಿ ಬರೆಯುವಾಗ ಅಥವಾ ಮಾತನಾಡುವಾಗ ಮಾಡುವ ಹಾಸ್ಯಾಸ್ಪದ ತಪ್ಪುಗಳನ್ನು ಗುಜರಾತಿಯಲ್ಲಿ ಬರೆಯುವಾಗ ಎಂದಿಗೂ ಮಾಡುವುದಿಲ್ಲ ನಾನು ಒಬ್ಬ ಭಾರತೀಯನೊಂದಿಗಾಗಲೀ ಅಥವಾ ಪರದೇಶದವರೊಂದಿಗಾಗಲೀ ಇಂಗ್ಲಿಷಿನಲ್ಲಿ ಮಾತನಾಡುವಾಗ ಅಷ್ಟರಮಟ್ಟಿಗೆ ನಾನು ಆ ಭಾಷೆಯನ್ನು ಮರೆ

ಯುತ್ತೇನೆಂದು ಯೋಚಿಸುತ್ತೇನೆ. ನನ್ನ ಕಿವಿಯನ್ನು ಆ ಭಾಷೆಗೆ ಸರಿಯಾಗಿ ನಾನು ಹೊಂದಿಸಿಕೊಳ್ಳಬೇಕಾದರೆ ನಾನು ಇಂಗ್ಲಿಷಿನವನೊಂದಿಗೆ ಮಾತನಾಡುವುದರಿಂದಲೂ ಅವನು ಮಾತನಾಡುವುದನ್ನು ಕೇಳುವುದರಿಂದಲೂ ಮಾತ್ರ ಸಾಧ್ಯ".

ಹಿಂದ್ ಸ್ವರಾಜ್. ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆಯಲ್ಲಿ ವಾರವಾರವೂ ಕ್ರಮವಾಗಿ ಪ್ರಕಟವಾಯಿತು. ಅನಂತರ ಅದನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದಾಗ ಬೊಂಬಾಯಿ ಸರ್ಕಾರ ಅದನ್ನು ೧೯೧೦ರಲ್ಲಿ ನಿಷೇಧಿಸಿತು. ಇದಕ್ಕೆ ಉತ್ತರವಾಗಿ ಗಾಂಧೀ 'ಇಂಡಿಯನ್ ಹೋಂ ರೂಲ್' ಎಂದು ಹೆಸರಿಟ್ಟು, ಅದರ ಇಂಗ್ಲಿಷ್ ಅನುವಾದವನ್ನು ಪ್ರಕಟಿಸಿದರು. ಗೋಖಲೆ ಅದನ್ನು ಓದಿದಾಗ ಅದು ಎಷ್ಟು ಅಪಕ್ವವಾದುದೆಂದು ಭಾವಿಸಿದರೆಂದರೆ, "ಗಾಂಧಿ ಒಂದು ವರುಷ ಭಾರತದಲ್ಲಿದ್ದರೆ ಅವರೇ ಅದನ್ನು ನಾಶ ಮಾಡುತ್ತಾರೆ" ಎಂದರು ಅವರು.

ಹಿಂದ್ ಸ್ವರಾಜ್ಯ. ಗಾಂಧಿಯವರ ಆಲೋಚನೆಗಳ ಸರ್ವ ತಿರುಳು. ಗಾಂಧಿಗೆ ನಲವತ್ತು ವರುಷಗಳಾಗಿದ್ದಾಗ ಅದನ್ನು ಅವರು ಬರೆದರು. ಕೆಲವು ವರುಷಗಳ ನಂತರ ಅವರು ಹೀಗೆ ಹೇಳಿದರು. "ಬ್ರಿಟಿಷ್ ಪಾರ್ಲಿಮೆಂಟಿನ ವಿಷಯದಲ್ಲಿ ಉಪ ಯೋಗಿಸಿರುವ 'ವ್ಯಭಿಚಾರಿ' ಎಂಬ ಒಂದು ಪದವನ್ನು ಹಿಂದಕ್ಕೆ ತೆಗೆದುಕೊಳ್ಳುವುದರ ಹೊರತು ಇನ್ನಾವ ಬದಲಾವಣೆಯನ್ನೂ ಮಾಡಲು ನಾನು ಬಯಸುವುದಿಲ್ಲ. ಆ ಪದ ಒಬ್ಬಳು ಆಂಗ್ಲ ಮಹಿಳೆಗೆ ಅಸಮಾಧಾನವನ್ನುಂಟು ಮಾಡಿತು." ಗಾಂಧಿ ಮತ್ತೂ ಹೇಳಿದರು "ನಾನು ಹಿಂದ್ ಸ್ವರಾಜ್ಯದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸು ವುದರಲ್ಲಿ. ಟಾಲಸ್ಟಾಯ್ ರಸ್ಕಿನ್ ಥೋರೋ ಎಮರ್‌ಸನ್ ಮತ್ತು ಇತರ ಲೇಖಕರು ಮತ್ತು ಭಾರತದ ವೇದಾಂತ ನಿಪುಣರನ್ನು ನಮ್ರತೆಯಿಂದ ಅನುಸರಿಸಲು ಮಾತ್ರ ಪ್ರಯತ್ನಿಸಿದ್ದೇನೆ. ಟಾಲಸ್ಟಾಯ್ ಅನೇಕ ವರುಷಗಳಿಂದ ಒಬ್ಬ ಗುರುವಾಗಿದ್ದಾರೆ."

ಗಾಂಧೀ, ಟಾಲಸ್ಟಾಯ್‌ರವರ ಸ್ವಂತ ಉಪಯೋಗಕ್ಕಾಗಿ ಅವರಿಗೆ ಈ ಪುಸ್ತಕದ ಒಂದು ಪ್ರತಿ ಕಳುಹಿಸಿದರು. ಟಾಲಸ್ಟಾಯ್ ಹೀಗೆ ಬರೆದರು. "ನಾನು ನಿಮ್ಮ ಪುಸ್ತಕ ವನ್ನು ತುಂಬ ಆಸಕ್ತಿಯಿಂದ ಓದಿದ್ದೇನೆ. ಯಾಕೆಂದರೆ ನೀವು ಅದರಲ್ಲಿ ಎತ್ತಿರುವ ಪ್ರಶ್ನೆ–ಶಾಂತಿಯುತ ಅಸಹಕಾರ–ಭಾರತಕ್ಕೆ ಮಾತ್ರವೇ ಅಲ್ಲ; ಅಖಿಲ ಮಾನವ ಕುಲಕ್ಕೂ ತುಂಬ ಪ್ರಮುಖವಾದ ಪ್ರಶ್ನೆಯೆಂದು ನಾನು ಯೋಚಿಸುತ್ತೇನೆ.

ಭಾರತ, ಗಾಂಧಿಯನ್ನು ಬೆಂಬಲಿಸುತ್ತದೆ

(೧೯೦೯)

ಲಂಡನ್ನಿಗೆ ಹೋದ ಗಾಂಧೀಜಿಯ ನಿಯೋಗ ಫಲಕಾರಿಯಾಗಲಿಲ್ಲ. ೧೯೦೯ನೆ ನವಂಬರ್ ೧೭ರಂದು ಲಾರ್ಡ್ಸ್‌ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ, ಭಾರತದ ಸ್ಟೇಟ್ ಸೆಕ್ರೆಟರಿಯವರು ಹೀಗೆ ಹೇಳಿದರು. "ಭಾರತದ ವಕ್ತಾರರು, ತಮ್ಮ ಪಕ್ಷದ ವಾದವನ್ನು ಬುದ್ಧಿವಂತಿಕೆಯಿಂದಲೂ ನ್ಯಾಯವಾಗಿಯೂ ಮಂಡಿಸಿದ್ದಾರೆ. ಟ್ರಾನ್ಸ್‌ವಾಲ್ ಸರ್ಕಾರದ ಮಂತ್ರಿಗಳು ಈ ಕಷ್ಟಗಳ ಬಹುಪಾಲನ್ನು ಪರಿಹರಿಸಲು ಸಿದ್ಧರಾಗಿದ್ದಾರೆ. ಇನ್ನು ಉಳಿಯುವುದು, ಟ್ರಾನ್ಸ್‌ವಾಲ್ ಸರ್ಕಾರ ಏಷಿಯಾದವರನ್ನು ತಮ್ಮ ದೇಶದೊಳಕ್ಕೆ ಸೇರಿಸುತ್ತಿಲ್ಲ ಎಂಬ ಸಿದ್ಧಾಂತಕ್ಕೆ ಸಂಬಂಧಿಸಿದ ಪ್ರಶ್ನೆ. ಸ್ವಯಂ ಆಡಳಿತವುಳ್ಳ ರಾಜ್ಯಗಳ ಆಡಳಿತ ನೀತಿಯಲ್ಲಿ ನಾವು ಮಧ್ಯೆ ಪ್ರವೇಶಿಸಲಾಗದು".

ಭಾರತದಲ್ಲಿ ಜನರು, ಆಫ್ರಿಕದ ಹೋರಾಟದಲ್ಲಿ ಮನೆಗಳು ಮುರಿದುದನ್ನೂ ಸಂಸಾರಗಳು ನಾಶವಾದುದನ್ನೂ ಓದಿದರು; ಕೇಳಿದರು. ಏಕಕಾಲದಲ್ಲಿ ತಂದೆ ಮತ್ತು ಗಂಡು ಮಕ್ಕಳೂ ಸೆರೆಮನೆಗೆ ಹೋಗಿದ್ದರು. ಕಷ್ಟಕ್ಕೊಳಗಾದ ತಾಯಂದಿರೂ ಹೆಂಡತಿಯರೂ ಹಣ್ಣು ತರಕಾರಿಗಳನ್ನು ಬೀದಿಗಳಲ್ಲಿ ತಿರುಗಿ ಮಾರುತ್ತ ಜೀವಿಸಬೇಕಾಗಿದ್ದಿತು. ದೇಹಶ್ರಮದ ಕೆಲಸಗಳನ್ನು ಎಂದಿಗೂ ಮಾಡದಿದ್ದ ವರ್ತಕರೂ ವ್ಯಾಪಾರಿಗಳೂ, ಟ್ರಾನ್ಸ್‌ವಾಲ್ ಸೆರೆಮನೆಗಳಲ್ಲಿ ಕಲ್ಲುಗಳನ್ನು ಒಡೆದು ಪಾಯಖಾನೆಗಳನ್ನು ಶುದ್ಧಿ ಮಾಡುತ್ತಿದ್ದರು. ಕೊರೆಯುವ ಚಳಿಗಾಲದಲ್ಲಿ ಅವರಿಗೆ ಸರಿಯಾದ ಬಟ್ಟೆಗಳಾಗಲೀ ಆಹಾರವಾಗಲಿ ಇರಲಿಲ್ಲ.

ಗೋಖಲೆ, ಬೊಂಬಾಯಿನಲ್ಲಿ ಒಂದು ಸಭೆಯಲ್ಲಿ ಮಾತನಾಡುತ್ತ ಪರಿಣಾಮಕಾರಿಯಾಗಿ ಮುಂದೆ ಹೇಳುವಂತೆ ವಿವರಿಸಿದರು. "ಈ ನಿರ್ಣಯದ ಪ್ರಥಮ ಭಾಗ. ಕಳೆದ ವರುಷದ ಪ್ರಾರಂಭದಲ್ಲಿ ಆಗಾಖಾನರ ಅಧ್ಯಕ್ಷತೆಯಲ್ಲಿ ಇದೇ ಭವನದಲ್ಲಿ ಅಂಗೀಕರಿಸಿದ ನಿರ್ಣಯದ ಪ್ರಥಮ ಭಾಗದೊಂದಿಗೆ ಸಮಾನವಾಗಿರುವುದು ನಿಮಗೆ ಕಾಣುತ್ತಿದೆ. ಇಂದು ಪರಿಸ್ಥಿತಿ, ಹಿಂದಿನ ಸಭೆ ನಡೆದಾಗ ಇದ್ದುದಕ್ಕಿಂತ ಇನ್ನೂ ತೀರ ಕೆಟ್ಟು ಹೋಗಿದೆ ಮತ್ತು ಟ್ರಾನ್ಸ್‌ವಾಲಿನಲ್ಲಿರುವ ೮ ಸಾವಿರ ಜನರ ಪೈಕಿ ಏಳುವರೆ ಸಾವಿರ ಜನರು ಹೋರಾಟಕ್ಕೆ ಇಳಿದಿದ್ದರು. ಇಂದು ಆ ವಸಾಹತಿನಲ್ಲಿ ಒಟ್ಟು ಭಾರತೀಯರ ಸಂಖ್ಯೆ ೬ ಸಾವಿರಕ್ಕೂ ಕಡಿಮೆಗೆ ಇಳಿದಿದೆ. ಇವರಲ್ಲಿ ಬಹುಪಾಲು ಜನರು. ಹೋರಾಟದಲ್ಲಿ ತುಂಬ ಸಹಾನುಭೂತಿಯುಳ್ಳವರಾಗಿ ಆರ್ಥಿಕವಾಗಿಯೂ ಇತರ ಮಾರ್ಗಗಳಿಂದಲೂ ಸಹಾಯ ಮಾಡುತ್ತಿದ್ದರೂ ಹೋರಾಟದ ಅತ್ಯಂತ ಕಠಿಣ ಭಾಗವಾದ

ವೊಳಿದ್ದವೆ. ಗಾಂಧೀಜಿಯ ನೇತೃತ್ವದಲ್ಲಿ ಕೆಲಸ ಮಾಡುತ್ತಿರುವ ಸುಮಾರು ಐದು ನೂರು ಧೀರ ಭಾರತೀಯರ ಪಾಲಿಗೆ ಬಿದ್ದಿದೆ. ಗಾಂಧೀ ಅದಮ್ಯ ಸ್ವಭಾವದ ಧೀರರು. ಅದ್ಭುತ ಆತ್ಮಬಲವುಳ್ಳವರು. ಧೀರರು ಹುತಾತ್ಮರು ಇಂಥವರ ಪಂಕ್ತಿಗೆ ಸೇರಿದವರು. ಎರಡನೆಯ ನಿರ್ಣಯದ ಮೇಲೆ ಮಾತನಾಡುವವರು, ಈ ಅಸಹಕಾರಿಗಳು ಅನುಭವಿ ಸಿರುವ ಭಯಂಕರ ಕಷ್ಟ ಮತ್ತು ಶಿಕ್ಷೆಗಳನ್ನು ಕುರಿತು ಹೇಳುತ್ತಾರೆ. ಸಂಕ್ಷೇಪವಾಗಿ ಹೇಳಬೇಕಾದರೆ ಎರಡುವರೆ ಸಾವಿರ ಜನರಿಗೆ ಶಿಕ್ಷೆಗಳು–ಕಠಿಣ ದೇಹಶ್ರಮದ ಶಿಕ್ಷೆಗಳು ಕೊಡಲ್ಪಟ್ಟಿವೆ. ಸುಮಾರು ಒಂದು ಸಾವಿರ ಜನರ ಸರ್ವಸ್ವವೂ ನಾಶವಾಗಿದೆ.ಒಂದು ಸಾವಿರ ಜನ, ಮನೆಮಾರು ಎಲ್ಲ ಬಿಟ್ಟು ಹೊರಟು ಹೋಗಿದ್ದಾರೆ. ಆದರೂ ಹೋರಾಟ ಬಿಡುವಿಲ್ಲದೆ ಒಂದೇ ಸಮನಾಗಿ ಇಂದಿನ ವರೆಗೆ ನಡೆಯುತ್ತಲೇ ಇದೆ. ನಾವು ಪರಿ ಗಣಿಸಬೇಕಾದ ಮೊದಲ ಅಂಶವೆಂದರೆ, ಗಾಂಧಿ ಮತ್ತು ಇತರ ನಮ್ಮ ದೇಶ ಬಂಧು ಗಳು, ಟ್ರಾನ್ಸ್‌ವಾಲಿನಲ್ಲಿ ಹೋರಾಡುತ್ತಿರುವುದು ತಮಗೋಸ್ಕರವಾಗಿ ಅಲ್ಲ. ನಮ್ಮ ಮಾತೃಭೂಮಿಯ ಗೌರವ ಮತ್ತು ಉತ್ತಮ ಭವಿಷ್ಯಕ್ಕಾಗಿ ಎಂಬುದು. ಈ ಪೂರ್ಣ ಚಳುವಳಿಯನ್ನು ವ್ಯವಸ್ಥೆಗೊಳಿಸಿರುವ ಉತ್ತಮ ವಿಧಾನವನ್ನು ಗಮನಿಸಿ. ಹಿಂದು ಗಳು ಪಾರಸಿಗಳು ಮುಸಲ್ಮಾನರು ಎಲ್ಲ ಪೂರ್ಣವಾಗಿ ಒಂದಾಗಿದ್ದಾರೆ. ಇದನ್ನು ಸಾಧಿಸಬಲ್ಲ ಒಬ್ಬ ಮನುಷ್ಯ ದೊಡ್ಡ ನೈತಿಕ ಬಲದ ಪ್ರತಿನಿಧಿ ಎಂಬುದರಲ್ಲಿ ಸಂದೇಹ ವಿಲ್ಲ. ಈ ವಿಷಯ ನಾವು ಹಗುರವಾಗಿ ಮಾತನಾಡುವುದಿಲ್ಲ. ನ್ಯಾಯ ಸಂಪಾದನೆಗೆ ಇತರ ಮಾರ್ಗಗಳೆಲ್ಲ ಮುಚ್ಚಿ ಹೋದಾಗ, ಗಾಂಧಿ ಅಸಹಕಾರವನ್ನು ಅಂಗೀಕರಿಸಿ ದುದು ನ್ಯಾಯವಾಯಿತು ಎಂದು ನಾವೆಲ್ಲ ಅಭಿಪ್ರಾಯ ಪಡುವುದು ಸರಿಯಾಗಿದೆ. ಈ ಕಾಲದಲ್ಲಿ ನಮ್ಮಲ್ಲಿ ಯಾರಾದರೂ ಟ್ರಾನ್ಸ್‌ವಾಲ್‌ನಲ್ಲಿ ಇದ್ದಿದ್ದರೆ ಗಾಂಧೀಜಿಯ ಬಾವುಟದ ಕೆಳಗೆ ನಿಂತು ಈ ಮಹದುದ್ದೇಶಕ್ಕಾಗಿ ಅವರೊಂದಿಗೆ ಕೆಲಸ ಮಾಡಿ ಎಲ್ಲ ಕಷ್ಟವನ್ನೂ ಹೆಮ್ಮೆಯಿಂದ ಅನುಭವಿಸುತ್ತಿದ್ದೆವು ಎಂಬುದರಲ್ಲಿ ನನಗೆ ಸಂದೇಹವಿಲ್ಲ".

ಗಾಂಧಿ, ನವಂಬರ್ ಒಂರಂದು ಕೇಪ್‌ಟೌನ್‌ನಲ್ಲಿ ಕಾಲಿಟ್ಟ ಕೂಡಲೇ, ಭಾರತದ ದೊಡ್ಡ ಕೈಗಾರಿಕೋದ್ಯಮಿ ರತನ್‌ಜಿ ಜೆಮ್‌ಷೆಡ್‌ಜಿ ಟಾಟಾ, ಸತ್ಯಾಗ್ರಹ ನಿಧಿಗಾಗಿ ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟಿರುವ ತಂತಿ ತಲಪಿತು. ಮೂರು ಸಾವಿರ ಜನರ ಕಾರಾಗೃಹವಾಸ, ಇನ್ನೂರು ಜನರ ಗಡೀಪಾರು, ನೂರಾರು ಸಂಸಾರಗಳಿಗೆ ಕೊಡಲ್ಪಟ್ಟ ಅವರ್ಣನೀಯ ಹಿಂಸೆ ಇವೆಲ್ಲ ಭಾರತದಲ್ಲಿ ತುಂಬ ಸಂಕಟವನ್ನುಂಟು ಮಾಡಿದವು. ಹೋರಾಟದಲ್ಲಿ ನಿರ್ಗತಿಕರಾದವರಿಗಾಗಿ ಅನೇಕ ಸಾವಿರ ರೂಪಾಯಿಗಳು ಶೇಖರಿಸಲ್ಪಟ್ಟಿತು. ಭಾರತದ ದೇಶೀಯ ರಾಜರೂ ಸಹ, ಅಸಹಕಾರದಲ್ಲಿ ತೀವ್ರ ಆಸಕ್ತಿಯನ್ನು ತೋರಿಸ ತೊಡಗಿದರು.

ಗಾಂಧೀಜಿಯ ಹೆಸರು ಭಾರತದಲ್ಲೆಲ್ಲ ಹೆಚ್ಚು ಪ್ರಚಾರವಾಯಿತು. ಮುಂದಿನ ಕಾಂಗ್ರೆಸ್ಸಿಗೆ ಗಾಂಧಿಜಿಯ ಹೆಸರನ್ನು ಬಂಗಾಳದ ಪ್ರಾಂತ ಕಾಂಗ್ರೆಸ್ ಸಮಿತಿ ಸೂಚಿಸಿತು. ಇಂಡಿ ಯನ್ ರೆವ್ಯು ಮಾಸಪತ್ರಿಕೆಯ ಸಂಪಾದಕ ಶ್ರೀ ಜಿ. ಎ. ನಟೇಶನ್, ಒಂದು ಸಂದೇಶ ಕೇಳಿ ಗಾಂಧಿಗೆ ತಂತಿ ಕಳುಹಿಸಿದರು. ಉತ್ತರವಾಗಿ ಗಾಂಧಿ ಹೀಗೆ ಬರೆದರು:

"ಯಾವ ಸಂದೇಶವನ್ನೂ ಕಳುಹಿಸಲು ನನಗೆ ಅರ್ಹತೆಯಿದೆಯೆಂದು ನಾನು ತಿಳಿದುಕೊಂಡಿಲ್ಲ. ಈ ಗಳಿಗೆಯಲ್ಲಿ ನನ್ನ ಮುಂದಿರುವುದು ಟ್ರಾನ್ಸ್‌ವಾಲಿನಲ್ಲಿ ನಡೆಯುತ್ತಿರುವ ಹೋರಾಟ. ಅದರ ಹೊರತು, ಮತ್ಯಾವುದನ್ನೂ ಕುರಿತು ಯೋಚಿಸಲೂ ನಾನು ಅಶಕ್ತನಾಗಿದ್ದೇನೆ. ಈ ಹೋರಾಟ ಭಾರತದ ಗೌರವವನ್ನು ಕಾಯುವುದಕ್ಕಾಗಿ ನಡೆಯುತ್ತಿರುವುದರ ದೃಷ್ಟಿಯಿಂದ, ಇದು ರಾಷ್ಟ್ರೀಯ ಹೋರಾಟವೆಂದು ನಮ್ಮ ಎಲ್ಲ ದೇಶಬಾಂಧವರೂ ಅರ್ಥ ಮಾಡಿಕೊಳ್ಳುವರೆಂದು ನಾನು ನಂಬುತ್ತೇನೆ. ನನ್ನದು ತಪ್ಪಾದರೂ ಆಗಬಹುದು. ಆದರೆ ಈ ಹೋರಾಟ, ಆಧುನಿಕ ಕಾಲದ ಅತ್ಯಂತ ಮಹತ್ವದ ಹೋರಾಟ ಎಂದು ನಾನು ಸಾರ್ವಜನಿಕವಾಗಿ ಹೇಳಲು ಹಿಂದೆಗೆದಿಲ್ಲ. ಏಕೆಂದರೆ, ಇದರ ಗುರಿ ಮತ್ತು ಸಾಧನಾಮಾರ್ಗ ಎರಡೂ ಅತ್ಯಂತ ಪರಿಶುದ್ಧವಾಗಿವೆ. ಎಲ್ಲಾ ರೀತಿಯಲ್ಲಿಯೂ ಹಿಂಸೆಗೆ ಬಹಿಷ್ಕಾರ. ತಾವು ನೋವನ್ನೂ ಕಷ್ಟವನ್ನೂ ಅನುಭವಿಸುವುದೇ, ಶಾಶ್ವತವಾದ ಸುಧಾರಣೆಗಳನ್ನು ಸಂಪಾದಿಸಲು, ಸತ್ಯವಾದ ಮತ್ತು ಪರಿಣಾಮಕಾರಿಯಾದ ಮಾರ್ಗವೆಂದು ಸತ್ಯಾಗ್ರಹಿಗಳು ನಂಬುತ್ತಾರೆ. ದೇವರಿಗೂ ಅವನ ಸಂವಿಧಾನಕ್ಕೂ ಮೊದಲು ವಿಧೇಯತೆ. ಅನಂತರ ಭೂಮಿಯ ರಾಜರಿಗೂ ಅವರ ಸಂವಿಧಾನಕ್ಕೂ ವಿಧೇಯತೆ ಎಂಬುದು ಸತ್ಯಾಗ್ರಹಿಗಳ ಮತ.

"ಅಧಿಕ ಪ್ರಸಂಗಿತನವಾಗದಿದ್ದಲ್ಲಿ—ಇಂತಹ ಒಂದು ಹೋರಾಟ, ಕಾಂಗ್ರೆಸಿನ ಪೂರ್ಣವಾದ ಕಾರ್ಯಕ್ರಮವಾಗಲು ಅರ್ಹವಾಗಿದೆ. ಅಥವಾ ಬಹುಭಾಗದ ಕಾರ್ಯಕ್ರಮವಾಗಲು ಅರ್ಹವಾಗಿದೆ ಎಂದು ನಾನು ಸೂಚಿಸುವ ಧೈರ್ಯ ಮಾಡುತ್ತೇನೆ. ಕಾಂಗ್ರೆಸ್ಸಿನ ಕಾರ್ಯಕ್ರಮುಗಳಲ್ಲಿ ಇದಕ್ಕೂ ಉಳಿದ ಕಾರ್ಯಗಳಿಗೂ ಇರುವ ವ್ಯತ್ಯಾಸವನ್ನು ಕಾಣಬೇಕು. ಇತರ ಸಂದರ್ಭಗಳಲ್ಲಿ ಕಾನೂನಿಗೂ ಆಡಳಿತಕ್ಕೂ ತೋರುವ ಪ್ರತಿಭಟನೆಯಲ್ಲಿ, ಹಿಂಸೆ, ಕಷ್ಟ ಅಡಕವಾಗಿಲ್ಲ. ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ, ವಿರೋಧದ ಮಾನಸಿಕ ಭಾವನೆ ಇರುತ್ತದೆಯೇ ಹೊರತು ಅದಕ್ಕನುಗುಣವಾಗಿ ಕಾರ್ಯ. ಏನೂ ಇಲ್ಲ. ನಾವು ಸತ್ಯಾಗ್ರಹವನ್ನು ಕುರಿತು ಯೋಚಿಸಿ, ಏಕಾಗ್ರತೆಯಿಂದ ಚಿಂತಿಸುವಾಗ, ಭಾರತದಲ್ಲಿ ನಾವು ಅನುಭವಿಸುತ್ತಿರುವ ಅನೇಕ ಕಷ್ಟಗಳಿಗೆ ಸತ್ಯಾಗ್ರಹವೇ ಖಂಡಿತವಾದ ಬಿಡುಗಡೆಯ ಮಾರ್ಗ ಎಂದೂ ನಾನು ಸೂಚಿಸಬಹುದೆ? ಈ ವಿಷಯ ಆಳವಾದ ವ್ಯಾಸಂಗಕ್ಕೆ ಅರ್ಹವಾದುದು. ನಮ್ಮ ದೇಶ. ಅತಿ ಪ್ರಾಚೀನ ಧರ್ಮಗಳ ತವರೂರು. ತನ್ನ ನಾಶಕ್ಕೆ ತಲೆ ಮುಂದಾಗಿ ನುಗ್ಗುತ್ತಿರುವ. ಮನುಷ್ಯನಲ್ಲಿರುವ ದೈವತ್ವವನ್ನು ನಿರಾಕರಿಸುವ, ಕರಾಳ ಹಿಂಸಾಕೃತ್ಯದ ಈ ಆಧುನಿಕ ನಾಗರಿಕತೆಯಿಂದ ಭಾರತ. ಕಲಿಯಬೇಕಾದುದು ಏನೂ ಇಲ್ಲ. ಇಂತಹ ನಮ್ಮ ನಾಡಿಗೂ ನಾಡಿನ ಬುದ್ಧಿಗೂ ಪ್ರಜ್ಞೆಗೂ ಸ್ವಭಾವಕ್ಕೂ ಸೂಕ್ತವಾಗುವ ಒಂದೇ ಆಯುಧವೆಂದರೆ ಸತ್ಯಾಗ್ರಹ. ಎಂದು ನಮಗೆ ಅರಿವಾಗುವುದು".

ಡಿಸೆಂಬರ್ ೨೨ರಂದು ಗಾಂಧಿಗೂ ಇತರ ಆರು ಮಂದಿಗೂ ಟ್ರಾನ್ಸ್‌ವಾಲ್‌ಗೆ ಪ್ರವೇಶಿಸಲು ಸರ್ಕಾರ ಅವಕಾಶ ಕೊಟ್ಟಿತು. ಅವರನ್ನು ಸೆರೆ ಹಿಡಿಯಲಿಲ್ಲ. ಇದನ್ನು

ಮಾಡಿದುದು ಭಾರತದಲ್ಲಿ ಆಗ ನಡೆಯಬೇಕಾಗಿದ್ದ ಕಾಂಗ್ರೆಸ್‌ನ ಮನವೊಲಿಸಲು ವುದಕ್ಕಾಗಿ. ಟ್ರಾನ್ಸ್‌ವಾಲ್ ಲೀಡರ್ ಎಂಬ ಪತ್ರಿಕೆ ಹೀಗೆ ಬರೆಯಿತು. "ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು, ಸೋಮವಾರ ಲಾಹೋರ್‌ನಲ್ಲಿ ಸಭೆ ಸೇರುತ್ತದೆ. ಪಾರ್ಲಿ ಸುಧಾರಣೆಗಳನ್ನು ಅಂಗೀಕರಿಸಿ ಕೆಲಸ ಮಾಡಿ ಅದಕ್ಕೆ ಪ್ರಾಮಾಣಿಕವಾದ ಅವಕಾಶ ಕೊಡಲು ಬಹುಮತ ದೊರೆಯಬಹುದೆಂಬ ನಿರೀಕ್ಷಣೆ ಇದೆ. ತೀವ್ರವಾದಿಗಳ ಜಯಕ್ಕೆ ಈಗ ಇರುವುದು ಒಂದೇ ಒಂದು ಅವಕಾಶ: ತಮ್ಮ ದೇಶದವರಿಗೆ ವಸಾಹತಿನಲ್ಲಿ ಆಗುತ್ತಿರುವ ಕಿರುಕುಳಗಳಿಂದ ಉದ್ರೇಕಗೊಳ್ಳುವುದು".

ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಸಭೆ ನಡೆದುದು ಲಾಹೋರಿನಲ್ಲಿ ಡಿಸೆಂಬರ್‌ನ ಅಂತ್ಯಭಾಗದಲ್ಲಿ. ಗೋಖಲೆ, ದಕ್ಷಿಣ ಆಫ್ರಿಕದ ಪರಿಸ್ಥಿತಿಯನ್ನು ಕುರಿತು ಠರಾವನ್ನು ಮಂಡಿಸುತ್ತ ಹೀಗೆ ಹೇಳಿದರು. "ದಕ್ಷಿಣ ಆಫ್ರಿಕದ ಸ್ಥಿತಿಗತಿಯಲ್ಲಿ, ಗಾಂಧಿಯ ಅಮರ ಪಾತ್ರವನ್ನು ನೋಡಿದ ಮೇಲೆ, ಈ ಸಭೆಯಲ್ಲಾಗಲೀ ಅಥವಾ ಮತ್ತಾವುದೇ ಭಾರತೀಯರ ಸಭೆಯಲ್ಲಾಗಲೀ ಯಾವ ಕಾಲದಲ್ಲಿಯೂ, ತುಂಬ ಪ್ರೇಮಾದರ ಮತ್ತು ಹೆಮ್ಮೆಯಿಂದಲ್ಲದೆ ಗಾಂಧಿಯ ಹೆಸರನ್ನು ಉಚ್ಚರಿಸುವುದು ಸಾಧ್ಯವಿಲ್ಲ. (ಆಗ ಕಾಂಗ್ರೆಸ್‌ನಲ್ಲಿದ್ದ ಜನಸ್ತೋಮ ಎದ್ದು ನಿಂತು ಗಾಂಧಿಜಿಗೆ ಮೂರು ಬಾರಿ ಜಯಕಾರ ಮಾಡಿದರು.)

ಗೋಖಲೆ ಮುಂದುವರಿಸಿದರು "ಮಹನೀಯರೇ ಗಾಂಧೀ, ನನಗೆ ಆತ್ಮೀಯ ವಾಗಿ ಗೊತ್ತಿದೆ ಎಂದು ಹೇಳುವುದು ನನ್ನ ಬಾಳಿನ ಸೌಭಾಗ್ಯಗಳಲ್ಲಿ ಒಂದು. ಅವರಿಗಿಂತ ಹೆಚ್ಚು ಪರಿಶುದ್ಧರೂ ಮಹೋನ್ನತರೂ, ಧೀರರೂ ಆತ್ಮೋನ್ನತಿಯುಳ್ಳವರೂ ಈ ಭೂಮಿಯಲ್ಲಿ ಆಗಲೀ ಇಲ್ಲ ಎಂದು ನಾನು ಹೇಳಬಲ್ಲೆ. ಗಾಂಧಿಜಿಯಂಥವರು ಸರಳ ನಿಯಮಬದ್ಧ ಜೀವನವನ್ನು ನಡೆಸುತ್ತ ಎಲ್ಲರಲ್ಲಿಯೂ ಭ್ರಾತೃಪ್ರೇಮ ಸತ್ಯ ನ್ಯಾಯ ಪ್ರೇಮ ಮೊದಲಾದ ಅತ್ಯುಚ್ಚ ಆದರ್ಶಗಳನ್ನು ಅಳವಡಿಸಿ, ತಮಗಿಂತ ದುರ್ಬಲರಾದ ಜನತೆಯ ನೇತ್ರಗಳನ್ನು ಮಂತ್ರದಂಡದಿಂದಲೋ ಎಂಬಂತೆ ಸ್ಪರ್ಶಿಸಿ ಅವರಿಗೆ ಜೀವನದ ಒಂದು ನೂತನ ದೃಶ್ಯವನ್ನೇ ತೋರಿಸುತ್ತಾರೆ. ಅವರನ್ನು ಮಾನವ ರಲ್ಲಿ ಮಾನವ, ಧೀರರಲ್ಲಿ ಧೀರ, ನಾಯಕರಲ್ಲಿ ನಾಯಕ, ದೇಶಭಕ್ತರಲ್ಲಿ ದೇಶಭಕ್ತ ಎಂದು ಹೇಳಬಹುದು. ಅವರಲ್ಲಿ ಭಾರತೀಯ ವ್ಯಕ್ತಿತ್ವ ಈ ಕಾಲಕ್ಕೆ ತನ್ನ ಅತ್ಯುತ್ಕೃಷ್ಟತೆಗೆ ಏರಿದೆಯೆಂದು ಧಾರಾಳವಾಗಿ ಹೇಳಬಹುದು"

ಶ್ರೀ ನಟೇಶನ್‌ರೂ ದಕ್ಷಿಣ ಆಫ್ರಿಕವನ್ನು ಕುರಿತು ಭಾವಪೂರ್ಣರಾಗಿ ಮಾತ ನಾಡಿದರು. ಶ್ರೋತೃಗಳು ಆವೇಶ ಬಂದವರಂತೆ ಸಹಾನುಭೂತಿಯಿಂದ ಚಿನ್ನ, ನೋಟು ಗಳ ಮಳೆಗರೆದರು. ಮಹಿಳೆಯರು ತಮ್ಮ ಉಂಗುರಗಳನ್ನೂ ಬಳೆಗಳನ್ನೂ ಕಿತ್ತೆಸೆ ದರು. ಸ್ಥಳದಲ್ಲಿಯೇ ಹದಿನೆಂಟು ಸಾವಿರ ರೂಪಾಯಿ ಕೂಡಿತು. ಅದೇ ಮೊದಲನೆಯ ಸಲವಾಗಿ, ಕಾಂಗ್ರೆಸಿನ ಸಾರ್ವಜನಿಕ ನಿರ್ಣಯದಲ್ಲಿ ಗಾಂಧೀಜಿಯ ಹೆಸರು ಸೂಚಿತ ವಾಯಿತು. ಆ ನಿರ್ಣಯ, ಎಲ್ಲ ಜಾತಿಮತಗಳ ಭಾರತೀಯರೂ ಆಫ್ರಿಕದ ಸತ್ಯಾಗ್ರಹಿ ಗಳಿಗೆ ಉದಾರ ಧನಸಹಾಯವನ್ನು ಕೊಡಬೇಕೆಂದು ಕೋರಿತು.

ಅಧ್ಯಕ್ಷ ಮಾಳವೀಯ, ಗಾಂಧಿಗೆ ಹೀಗೆ ತಂತಿ ಕೊಟ್ಟರು. "ಕಾಂಗ್ರೆಸ್ಸು ಹಾರ್ದಿಕವಾಗಿ ಭ್ರಾತೃಗಳ ಹೋರಾಟವನ್ನು ಒಪ್ಪಿ ಮೆಚ್ಚುತ್ತದೆ. ಮುಂದುವರಿಸಲು ಕೋರುತ್ತದೆ. ಪೂರ್ಣ ಸಹಾಯವನ್ನು ವಾಗ್ದಾನ ಮಾಡುತ್ತದೆ. ಹಣವನ್ನು ಕೇಬಲ್ ಮಾಡುತ್ತೇನೆ. ಬೋತಾಗೆ ಸಹಾಯಧನವನ್ನು ಕೊಡಲು ಕೇಬಲ್ ಕಳುಹಿಸಿದ್ದೇನೆ".

ಜನವರಿ ೧೦–೧೯೧೦ರಂದು ರತನ್‌ತಾತಾ, ಗಾಂಧಿಗೆ ಬೊಂಬಾಯಿನಿಂದ ಹೀಗೆ ಬರೆದರು "ನಮ್ಮ ದೇಶಬಾಂಧವರು ನಡೆಸುತ್ತಿರುವ ಮಹತ್ ಹೋರಾಟಕ್ಕೆ ನನ್ನ ಹಾರ್ದಿಕ ಅಭಿನಂದನೆ. ನಾನು ಮಾಡಿದ ಪ್ರಾರಂಭ (೨೫ ಸಾವಿರ ರೂಪಾಯಿ ದಾನ)ವನ್ನು ಇನ್ನೂ ಅನೇಕರು (ನಾನು ಬಯಸಿದಷ್ಟು ಅಲ್ಲದಿದ್ದರೂ)ಅನುಸರಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ನಾನು ಈ ಮಹಾನ್ ಹೋರಾಟದ ಮುನ್ನಡೆಯನ್ನು ತುಂಬ ಆಸಕ್ತಿಯಿಂದ ನೋಡುತ್ತಿರುತ್ತೇನೆಂದು ಹೇಳಬೇಕಾಗಿಯೇ ಇಲ್ಲ. ನಮ್ಮ ದೇಶದ ಗೌರವವನ್ನೂ ಘನತೆಯನ್ನೂ ಎತ್ತಿ ಹಿಡಿಯುವ ಈ ಕೆಚ್ಚೆದೆಯ ಕಾರ್ಯಗಳು, ಅವುಗಳಿಗೆ ಅರ್ಹವಾದ ಜಯದಲ್ಲಿ ಕೊನೆಗೊಳ್ಳುವುದೆಂದೂ ಶ್ರದ್ಧೆಯಿಂದ ನಂಬುತ್ತೇನೆ" ಹೈದರಾಬಾದಿನ ನಿಜಾಮರು, ನಿಧಿಗೆ ೨೫೦೦ ರೂ. ಕೊಟ್ಟರು. ರತನ್ ತಾತಾ ರವರು ಮತ್ತೆ ೨೫ ಸಾವಿರ ರೂ. ಕೊಟ್ಟರು. ಶ್ರೀ ಜೆ. ಬಿ. ಪೆಟಿಟ್‌ರು ೪೦೦ ಪೌಂಡುಗಳನ್ನು ಕೊಟ್ಟರು.

ಡಿಲ್ಲಿಯಲ್ಲಿ ಸೇರಿದ ಅಖಿಲ ಭಾರತ ಮುಸ್ಲಿಂ ಲೀಗ್, ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಬಲಿದಾನವನ್ನು ಪ್ರಸ್ತಾಪಿಸಿತು. ಆಗಾಖಾನರು ಸತ್ಯಾಗ್ರಹ ನಿಧಿಗಾಗಿ ಸ್ಥಳದಲ್ಲಿಯೇ ೩ ಸಾವಿರ ಸಂಗ್ರಹಿಸಿದರು.

೧೯೧೦ರ ಮಾರ್ಚಿ ಮೊದಲ ವಾರದಲ್ಲಿ ದರ್ಬಾನಿನ ನಿಲ್ದಾಣದಲ್ಲಿ ಸಂಭ್ರಮದ ದೃಶ್ಯ. ಸತ್ಯಾಗ್ರಹಿಗಳನ್ನು ಕಳುಹಿಸಿ ಕೊಡಲು ಸುಮಾರು ಮುನ್ನೂರು ಜನ ಭಾರತೀಯರು ಹೂವಿನ ಹಾರಗಳ ಸಹಿತ ಸೇರಿದ್ದರು. ಸತ್ಯಾಗ್ರಹಿಗಳು ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರಿಗೆ ರೈಲ್ವೆ ಅಧಿಕಾರಿಗಳು ವಿಶೇಷ ಗಾಡಿಗಳನ್ನು ಒದಗಿಸಿದ್ದರು. ಗಾಂಧಿಯವರ ನೇತೃತ್ವದಲ್ಲಿ ಬಂದ ಜನ, ನೇಟಾಲಿನಿಂದ ಗಡಿರೇಖೆಯನ್ನು ದಾಟಿ. ಯಾರಿಂದಲೂ ತಡೆಯಲ್ಪಡದೆ ಜೊಹಾನ್ಸ್‌ಬರ್ಗ್‌ಗೆ ಬಂದರು. ಮಾರ್ಗದಲ್ಲಿ ಸ್ಥಳದ ಭಾರತೀಯರು ಅವರನ್ನು ಸಂಧಿಸುತ್ತಿದ್ದರು. ಸತ್ಯಾಗ್ರಹಿಗಳು ಬೀದಿ ವ್ಯಾಪಾರವನ್ನು ಪ್ರಾರಂಭಿಸಿದರು. ಬಂಧನಕ್ಕೊಳಗಾಗಲು ಬಯಸಿದರು. ಸರ್ಕಾರ ಅವರನ್ನೆಲ್ಲ ನೇಟಾಲ್‌ಗೆ ಹಿಂದಿರುಗಿಸಿತು. ಗಾಂಧಿ "ಸರ್ಕಾರ ನನ್ನನ್ನು ಯಾಕೆ ಬಂಧಿಸುವುದಿಲ್ಲ ಎಂಬುದು ತಿಳಿಯುವುದಿಲ್ಲ" ಎಂದು ಹೇಳಿದರು.

ಏಪ್ರಿಲ್ ೨೫ರಲ್ಲಿ ಗೋಖಲೆಯವರಿಗೆ ಬರೆದ ಪತ್ರದಲ್ಲಿ, ಗಾಂಧಿ, ಪರಿಸ್ಥಿತಿಯ ಜಮಾಖರ್ಚು ಪಟ್ಟಿಯೊಂದನ್ನು ಗೋಖಲೆಯವರಿಗೆ ಕೊಟ್ಟರು. "ಹೋದ ೬ನೆ ಡಿಸೆಂಬರಿನ ನನ್ನ ಕೇಬಲ್‌ಗೆ ಉತ್ತರವಾಗಿ ನೀವು ನನಗೆ ಎಷ್ಟು ಹಣಬೇಕೆಂದು ಕೇಬಲ್ ಕೊಟ್ಟಿರಿ. ನನ್ನ ಉತ್ತರದ ಕೇಬಲ್‌ನಲ್ಲಿ ನಾನು ಹೀಗೆ ಹೇಳಿದೆ. "ಈಗ ತತ್‌ಕ್ಷಣ

ಬೇಕಾಗಿರುವುದು ಸಾವಿರ ಪೌಂಡು.ತಿಂಗಳು ಕಳೆಯುವುದರೊಳಗೆ ನನ್ನನ್ನು ಬಂಧಿಸುತ್ತಾರೆಂದು ನಿರೀಕ್ಷಿಸುತ್ತೇನೆ. ಮುಂದೆ ಇನ್ನೂ ಹೆಚ್ಚು ಹಣ ಬೇಕಾಗುತ್ತೆ" ಅದೇ ದಿನ ನಾನು ಹಣ ಹೇಗೆ ವಿಲೆವಾರಿಯಾಗುತ್ತಿದೆ ಎಂದು ನಿಮಗೆ ಬರೆದೆ. ಆ ಕಾಗದದಲ್ಲಿ ನಿಮಗೆ ನಾನು ಹೀಗೆ ಬರೆದೆ. ಫೋನಿಕ್ಸ್ ಆಶ್ರಮವನ್ನು ನಡೆಸಲು ನಾನು ಖಾಸಗಿಯಾಗಿ ಮಾಡಿದ ಸಾಲವನ್ನು, ನೀವು ಕಳುಹಿಸಿದ ಹಣದಿಂದ ತೀರಿಸಿದೆ. ಇದು ೧೨೦೦ ಪೌಂಡುಗಳಿಗಿಂತ ಹೆಚ್ಚು ಹಣದ ಲೆಕ್ಕವಾಯಿತು. ತಿಂಗಳ ಖರ್ಚಿನ ಅಂದಾಜು ಹಣದ ಲೆಕ್ಕ ಸಹ ನಾನು ನಿಮಗೆ ಕೊಟ್ಟೆ. ಇಲ್ಲಿ ಆಫೀಸ್ ಖರ್ಚು ೫೦ ಪೌಂಡು. ಲಂಡನ್ ಆಫೀಸ್ ಖರ್ಚು ೫೦ ಪೌಂಡು. ಇಂಡಿಯನ್ ಒಪಿನಿಯನ್‌ಗೆ ೫೦ ಪೌಂಡು. ಕಷ್ಟದಲ್ಲಿರುವ ಸಂಸಾರಗಳವರಿಗೆ ೨೫ ಪೌಂಡು.

"ನನ್ನ ಕಾಗದಕ್ಕೆ ನೀವು ಬರೆದ ಉತ್ತರದಲ್ಲಿ ಖರ್ಚುಗಳೆಲ್ಲ ಸರಿಯಾಗಿವೆ ಎಂದು ಬರೆದಿರಿ.

"ಚಳುವಳಿ ತಕ್ಕಷ್ಟು ದೀರ್ಘಕಾಲ ನಡೆಯುಬಹುದೆಂದು ಖಂಡಿತವಾಗಿರುವುದರಿಂದ ನಮ್ಮ ಜಮಾಖರ್ಚಿನ ವಿವರಣೆಯನ್ನು ನಿಮಗೆ ಕೊಡುವುದು ನನಗೆ ಅವಶ್ಯಕವಾಗಿದೆ. ಕಳೆದ ಡಿಸೆಂಬರ್‌ನಿಂದ ಇಲ್ಲಿಯ ವರೆಗೆ ಬಂದ ಹಣ ಹೀಗಿದೆ: ಬೊಂಬಾಯಿ ೪೨೫೩ ಪೌಂಡು ೩ ಷಿ ೪ ಪೆನ್ನಿ. ರಂಗೂನ್ ೭೫೦.ಪೌಂಡು. ಲಂಡನ್ ೧೩೫ ಪೌ ೮ ಷಿ. ೨ ಪೆನ್ನಿ. ಮೋಜಾಂಬಿಕ್ ೫೦ ಪೌಂಡು. ಜಾನ್ಸಿಬಾರ್ ೫೯ ಪೌಂ ೩ಷಿ ೬ ಪೆನ್ನಿ. ಲಾರೆನ್ಸೊ ಮಾರ್ಕ್ಸ್ ೧೧ ಪೌಂ ೧೨ ಷಿ. ನೇಟಾಲ್ ೮ ಪೌಂ. ೧೬ ಷಿ. ಸ್ಥಳದಲ್ಲಿ ಪೌ. ೧೭ ಷಿ ೭ ಪೆನ್ನಿ ಒಟ್ಟು ೫೨೭೯ ಪೌಂ. ೧೦ ಷಿ. ೭ ಪೆನ್ನಿ.

"ಬೊಂಬಾಯಿನಿಂದ ಬಂದ ಫಂಡನ್ನು ಎರಡು ಭಾಗ ಮಾಡಿದೆ. ೩೯೧೪ ಪೌಂ. ೧೦ಷಿ ಗಳನ್ನು ಸಾಮಾನ್ಯವಾಗಿ ಚಳುವಳಿ ನಡೆಸುವುದಕ್ಕಾಗಿ ಇಟ್ಟಿದ್ದೇವೆ. ೩೩೮ ಪೌಂ. ೧೩ ಷಿ ೪ ಪೆನ್ನಿಗಳನ್ನು ಸತ್ಯಾಗ್ರಹಿಗಳ ಮತ್ತು ಅವರ ಮೇಲೆ ಅವಲಂಬಿಸಿರುವವರ ಸಹಾಯಕ್ಕಾಗಿ ಬೇರೆ ಇಡಲಾಗಿದೆ. ಈ ಆದೇಶಗಳು ಸರಿಯಾಗಿ ಪಾಲಿಸಲ್ಪಡುತ್ತಿವೆ. ರಂಗೂನಿನಿಂದ ಮತ್ತು ಲಂಡನ್ನಿನಿಂದ ಬರುವ ಹಣವೂ ಸಹ–ಬೊಂಬಾಯಿಯ ಹಣದಂತೆ–ಕಷ್ಟದಲ್ಲಿರುವವರ ಸಹಾಯಕ್ಕಾಗಿಯೇ ಬೇರೆ ಇಡಲ್ಪಟ್ಟಿದೆ.

"ನಿಮ್ಮ ಕಾಗದವೂ ಶ್ರೀ ಪಟೆಟ್‌ರವರ ಕಾಗದವೂ ಖರ್ಚು ಮಾಡುವುದನ್ನು ನನ್ನ ವಿವೇಕಕ್ಕೆ ಬಿಟ್ಟಿವೆ. ಈ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳುವುದು ಅತ್ಯುತ್ತಮವೆಂದು ನಾನು ಭಾವಿಸಿದೆ. ಹಣವನ್ನೆಲ್ಲ ಜೋಹಾನ್ಸ್ ಬರ್ಗ್‌ನ ನೇಟಾಲ್ ಬ್ಯಾಂಕ್‌ನಲ್ಲಿ ಸತ್ಯಾಗ್ರಹ ಸಹಾಯನಿಧಿ ಎಂಬ ಖಾತೆಗೆ ಬೇರೆಯಾಗಿ ಜಮಾ ಮಾಡಿದ್ದೇವೆ. ಬ್ಯಾಂಕಿನ ಮಟ್ಟಿಗೆ. ಹಣದ ವ್ಯವಹಾರ ನನ್ನದು ಮಾತ್ರವೇ. ವಿಶಿಷ್ಟವಾದ ಅಥವಾ ಔಪಚಾರಿಕವಾದ ಬೇರೆ ಸಮಿತಿಯನ್ನು ಸ್ಥಾಪನೆ ಮಾಡಿಲ್ಲ ಮತ್ತು ಈ ಹಣ ಬ್ರಿಟಿಷ್ ಇಂಡಿಯನ್ ಸಮಿತಿಯ ಭಾಗವೆಂದೂ ಪರಿಗಣಿಸಲ್ಪಟ್ಟಿಲ್ಲ. ಬ್ರಿಟಿಷ್ ಇಂಡಿಯನ್ ಸಮಿತಿ (Association) ಸತ್ಯಾಗ್ರಹಕ್ಕಿಂತ ಇನ್ನೂ ಹೆಚ್ಚು ವಿಶಾಲವಾದ

ವಿಷಯಗಳ ವ್ಯಾಪ್ತಿಯುಳ್ಳದ್ದು. ಹಣದ ವಿಲೆವಾರಿ, ಬ್ರಿಟಿಷ್ ಇಂಡಿಯನ್ ಸಂಘದ ಅಧ್ಯಕ್ಷರಾದ ಶ್ರೀ ಕಚಾಲಿಯ ಮತ್ತು ಇತರ ಸತ್ಯಾಗ್ರಹಿಗಳ ಸಲಹೆಯ ಮೇರೆಗೆ ನಡೆಯುತ್ತಿದೆ.

"ಫೀನಿಕ್ಸ್ ಸಾಲ, ನಾನು ಸ್ವಲ್ಪ ಪ್ರತಿಕೂಲವಾದ ಕಾಲದಲ್ಲಿ ಹೋರಾಟಕ್ಕೆ ಸೌಕರ್ಯವಾಗುವುದಕ್ಕಾಗಿ ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು ಸ್ವಲ್ಪ ನಷ್ಟದಲ್ಲಿಯೇ ಮುಂದುವರಿಸಿಕೊಂಡು ಹೋಗಲು ಕೆಲವು ಯೂರೋಪಿಯನ್ ಸ್ನೇಹಿತರು ಮತ್ತು ಕಕ್ಷಿಗಾರರಿಂದ ತೆಗೆದುಕೊಂಡಿದ್ದ ಸಾಲ. ನನ್ನ ದಕ್ಷಿಣ ಆಫ್ರಿಕದ ನನ್ನ ಜೀವಿತದಲ್ಲಿ ನಾನು ಉಳಿಸಿದ ಹಣವನ್ನೆಲ್ಲ (ಸುಮಾರು ೫ ಸಾವಿರ ಪೌಂಡು) ಇಂಡಿಯನ್ ಒಪಿನಿಯನ್‌ನ್ನು ಮುಂದುವರಿಸಿಕೊಂಡು ಹೋಗುವುದಕ್ಕೂ ಫೀನಿಕ್ಸ್ ಆಶ್ರಮಕ್ಕಾಗಿಯೂ ವಿನಿಯೋಗಿಸಿದ್ದೇನೆ. ಫೀನಿಕ್ಸ್‌ನಿಂದ ನಾನೇನೂ ಆರ್ಥಿಕ ಲಾಭವನ್ನು ಹೊಂದುತ್ತಿಲ್ಲ. ನನ್ನ ಸಂಸಾರದ ವೆಚ್ಚವನ್ನು ಒಬ್ಬ ಯೂರೋಪಿಯನ್ ಮಿತ್ರರು ವಹಿಸಿಕೊಂಡಿದ್ದಾರೆ. ಫೀನಿಕ್ಸ್‌ನ ನನ್ನ ಯೂರೋಪಿಯನ್ ಮತ್ತು ಭಾರತೀಯ ಸಹೋದ್ಯೋಗಿಗಳು, ತಮಗೆ ಆವಶ್ಯಕವಾದಷ್ಟು ಹಣವನ್ನು ಮಾತ್ರ ಅಲ್ಲಿಂದ ತೆಗೆದುಕೊಂಡು ದಾರಿದ್ರ್ಯವ್ರತದಲ್ಲಿ ಜೀವಿಸುತ್ತಿದ್ದಾರೆ. ಫೀನಿಕ್ಸ್ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದರಿಂದ, ನಾನು ನನ್ನ ಪತ್ರದಲ್ಲಿ ಸೂಚಿಸಿದ ಮಾಸಿಕ ಸಹಾಯಧನದ ಅಪೇಕ್ಷೆಯಿಲ್ಲದೆಯೆ ಪತ್ರಿಕೆಯನ್ನು ಮುಂದುವರಿಸಲು ಸಾಧ್ಯವಾಗುವುದೆಂದು ತಿಳಿಸಲು ಸಂತೋಷವಾಗುತ್ತದೆ. ಲಂಡನ್‌ನಲ್ಲಿರುವ ಸಮಿತಿಗೆ ಬಹಳ ಮಿತವ್ಯಯದ ಮಟ್ಟದಲ್ಲಿ ಹಣ ವೆಚ್ಚ ಮಾಡುತ್ತಿದ್ದೇವೆ. ಇಲ್ಲಿಯ ಆಫೀಸುಗಳ ವಿಷಯದಲ್ಲಿಯೂ ಇದೇ ಮಾತನ್ನು ಹೇಳಬೇಕಾಗಿದೆ. ೨೦ನೆ ತಾರೀಖಿನಂದು ವೆಚ್ಚ ಈ ರೀತಿ ಇದೆ.

"ಸ್ಥಳೀಯ ವೆಚ್ಚ ೩೭೪ ಪೌಂ. ೧೧ಶಿ ೮ ಪೆನ್ನಿ: ಲಂಡನ್ ಆಫೀಸ್–೧೭೫ ಪೌಂಡು ೧೫ ಷಿ: ಕಷ್ಟದಲ್ಲಿರುವವರಿಗೆ ಸಹಾಯ ೪೪೯ ಪೌಂ ೧೧ಷಿ ೧೧ ಪೆನ್ನಿ: ಕಷ್ಟ ಪರಿಹಾರ ನಿಧಿ ೫೦ ಪೌಂಡು; ಇಂಡಿಯನ್ ಒಪಿನಿಯನ್ ಸಾಲ ೧೨೦೦ ಪೌಂಡು; ಒಟ್ಟು ೨೨೪೯ ಪೌಂ. ೧೮ ಷಿ ೭ ಪೆನ್ನಿ.

"ಇಷ್ಟಾದ ಮೇಲೆ ಕೈಯಲ್ಲಿ ಉಳಿದಿರುವ ಹಣ ೩೦೧೯ ಪೌಂ. ೧೨ ಷಿ. ಕಷ್ಟ ಪರಿಹಾರಕ್ಕೆ ಕೊಡುವ ಹಣ–ನಿಮಗೇ ಕಾಣುವಂತೆ–ಹೆಚ್ಚಾಗುತ್ತಿದೆ. ಡಿಸೆಂಬರ್‌ನಲ್ಲಿ ನಾವು ೨೫ ಪೌಂಡು ಕೊಟ್ಟೆವು. ಈಗಿನ ಲೆಕ್ಕದಂತೆ, ತಿಂಗಳಿಗೆ ೧೬೦ ಪೌಂಡು ಆಗುತ್ತದೆ. ಐವತ್ತು ಸಂಸಾರಗಳು ಸಹಾಯಧನವನ್ನು ಸ್ವೀಕರಿಸುತ್ತಿದ್ದಾರೆ. ಆಫೀಸನ್ನು ನಡೆಸುವ ವೆಚ್ಚಗಳಲ್ಲದೆ ಇತರ ಖರ್ಚುಗಳಲ್ಲಿ ಸತ್ಯಾಗ್ರಹಿಗಳಿಗೆ ದರ್ಬಾನಿನಿಂದ ಪ್ರಯಾಣದ ವೆಚ್ಚ ಮುಂತಾದವು, ಕೇಬಲ್ ಕಳುಹಿಸುವ ವೆಚ್ಚ ಮತ್ತು ಇತರ ವೆಚ್ಚಗಳು ಸೇರಿವೆ. ಮೇಲಿನ ವೆಚ್ಚಗಳು ನಾಲ್ಕುವರೆ ತಿಂಗಳಿಗೆ ಸಂಬಂಧಪಟ್ಟವು. ಕಷ್ಟ ಪರಿಹಾರ ಹಣ ಮತ್ತು ಇಂಡಿಯನ್ ಒಪಿನಿಯನ್‌ಗಾಗಿ ಹಣ ಇವುಗಳನ್ನು ಬಿಟ್ಟು, ತಿಂಗಳ ಸರಾಸರಿ

ವೆಚ್ಚ ೧೩೩ ಪೌಂಡು ಆಗುತ್ತದೆ. ಕಷ್ಟಕ್ಕೊಳಗಾದ ಸಂಸಾರಗಳ ಸಹಾಯಧನ ಕಾಲ ಕಳೆದಂತೆಲ್ಲ ಹೆಚ್ಚುತ್ತ ಹೋಗುವುದು ಖಂಡಿತ. ಆದುದರಿಂದ ಆ ಖರ್ಚನ್ನು ನಾನು ತಿಂಗಳಿಗೆ ೭೦೦ ಪೌಂಡು ಎಂದು ಹಾಕುತ್ತೇನೆ. ಆಗ ತಿಂಗಳಿನ ಸರಾಸರಿ ವೆಚ್ಚ ೩೩೩ ಪೌಂಡು ಎನ್ನಬಹುದು. ಆದುದರಿಂದ ಉಳಿದಿರುವ ೩೦೯ ಪೌಂ. ೧೨ ಷಿ ಮುಂದಿನ ಜನವರಿ ವೇಳೆಗೆ ವೆಚ್ಚವಾಗಿ ಬಿಡಬಹುದು.

"ಕಷ್ಟಕೆ ಒಳಗಾಗಿರುವ ಸಂಸಾರಗಳ ಮನೆ ಬಾಡಿಗೆಗಾಗಿ ಸುಮಾರು ೫೦ ಪೌಂಡು ಕೊಡಲ್ಪಡುತ್ತಿದೆ. ಆದುದರಿಂದ ಅವರನ್ನು ಒಂದು ವ್ಯವಸಾಯ ಕ್ಷೇತ್ರಕ್ಕೆ ಸಾಗಿಸುವುದನ್ನು ಕುರಿತು ಯೋಚಿಸುತ್ತಿದ್ದೇವೆ. ಅಲ್ಲಾದರೆ ಗಂಡಸರೂ ಹೆಂಗಸರೂ ಜೀವನವನ್ನು ನಿರ್ವಹಿಸಲು ಏನಾದರೂ ಕೆಲಸವನ್ನು ಮಾಡಬಹುದು. ಅದರಿಂದ ಈಗ ಆ ನಿಧಿಯಲ್ಲಿ ವೆಚ್ಚವಾಗುವ ಹಣದಲ್ಲಿ ಅರ್ಧವನ್ನಾದರೂ ಉಳಿಸಬಹುದು. ವ್ಯವಸಾಯ ಕ್ಷೇತ್ರಕ್ಕೆ ಬೇಕಾದ ಮೂಲಧನಕ್ಕೆ ತೊಂದರೆಯಿದ್ದಿತು. ಜೈಲಿನಿಂದ ಹೊರಕ್ಕೆ ಬಂದ ಶ್ರೀ ಕಚಾಲಿಯ ಮತ್ತು ಇತರರು, ನಾನೂ ಸಹ ವ್ಯವಸಾಯ ಕ್ಷೇತ್ರಕ್ಕೆ ಬೇಕಾದ ಹಣವನ್ನು ಖರ್ಚು ಮಾಡಲು ಸಿದ್ಧರಾಗಿದ್ದೆವು. ಏಕೆಂದರೆ ಚಳುವಳಿ ಮುಗಿದನಂತರ ಅದೇ ಕ್ಷೇತ್ರವನ್ನು ಮಾರುವ ಸಂಚಿಕೆಯಿದ್ದಿತು. ಆದರೆ ಅಷ್ಟು ದೊಡ್ಡ ಮೂಲಧನ ಪ್ರಾಯಶಃ ಈಗ ಬೇಕಾಗುವುದಿಲ್ಲ. ಏಕೆಂದರೆ ಒಬ್ಬ ಯೂರೋಪಿಯನ್ ಮಿತ್ರರು, ಒಂದು ವ್ಯವಸಾಯ ಕ್ಷೇತ್ರವನ್ನು ಕೊಂಡು, ಅದನ್ನು ಚಳುವಳಿ ಮುಗಿಯುವ ವರೆಗೆ ಸತ್ಯಾಗ್ರಹಿಗಳ ವಶಕ್ಕೆ ಉಚಿತವಾಗಿ ಕೊಡಲು ಮುಂದೆ ಬಂದಿದ್ದಾರೆ. ತುಂಬ ಉದಾರವಾದ ಈ ದಾನವನ್ನು ನಾವು ಇನ್ನೇನು ಅಂಗೀಕರಿಸುವುದರಲ್ಲಿದ್ದೇವೆ. ಈ ಕಾಗದ ನಿಮ್ಮ ಕೈಗೆ ತಲುಪುವುದರೊಳಗಾಗಿ ನಾವು ಅಂತಹ ಅರ್ಹವಾದ ಒಂದು ವ್ಯವಸಾಯ ಕ್ಷೇತ್ರವನ್ನು ಸಂಪಾದಿಸಬಹುದು. ಅಲ್ಲಿ ಕಷ್ಟಕ್ಕೊಳಗಾಗಿರುವ ಎಲ್ಲ ಸಂಸಾರಗಳೂ ಅವರುಗಳೊಡನೆ ನಾನೂ ಒಟ್ಟಾಗಿ ಜೀವಿಸುತ್ತೇವೆ.

"ನಾನು ನಿಮಗೆ ಕೊಟ್ಟ, ಸತ್ಯಾಗ್ರಹಿಗಳ ಲೆಕ್ಕ ಕಡಿಮೆ ಅಂದಾಜು ಆಯಿತೆಂದು ಈಗ ನನಗೆ ಕಾಣುತ್ತಿದೆ. ಚಳುವಳಿಗೆ ಬರುವುದಿಲ್ಲವೆಂದು ನಾನು ತಿಳಿದ ಅನೇಕರು ಈಗ ಸೆರೆಮನೆಯಲ್ಲಿದ್ದಾರೆ ಅಥವಾ ಗಡೀಪಾರು ಆಗಿದ್ದಾರೆ. ಈಚೆಗೆ ಅಧಿಕಾರಿಗಳು ಬಂಧಿಸುವುದರಲ್ಲಿ—ಅದರಲ್ಲಿಯೂ ಧೀರರಾದ ತಮಿಳರನ್ನು ಬಂಧಿಸುವುದರಲ್ಲಿ—ಬಹಳ ದಕ್ಷರಾಗಿದ್ದಾರೆ. ತಮಿಳರಿಗಿಂತ ಹೆಚ್ಚಾಗಿ ಚಳುವಳಿಯಲ್ಲಿ ಕಾರ್ಯಮಾಡಿದವರು ಯಾರೂ ಇಲ್ಲ. ಈ ಧೀರರು. ಪದೇ ಪದೇ ಜೈಲನ್ನು ವರಿಸಿದ್ದಾರೆ. ಈಗ ಇಂತಹ ಮುವತ್ತು ಜನ ಡೀಪಕ್‌ಲೂಫ್ ಸೆರೆಮನೆಯಲ್ಲಿದ್ದಾರೆ. ಅದು ಕಠಿಣ ಶಿಕ್ಷೆಗೆ ಒಳಗಾದ ಪೀನಲ್ (ದಂಡನಾರ್ಹ) ಖೈದಿಗಳ ಬಂಧಿಖಾನೆ. ಅಲ್ಲಿ ನಿಯಮಗಳು ಟ್ರಾನ್ಸ್‌ವಾಲಿನ ಇತರ ಬಂಧಿಖಾನೆಗಳಲ್ಲಿರುವುದಕ್ಕಿಂತ ಕಠಿಣವಾಗಿವೆ. ಅರವತ್ತು ಜನರನ್ನು ಆಗಲೇ ಗಡಿಪಾರು ಮಾಡಿ ಆಗಿದೆ. ಮುವ್ವತ್ತು ಜನರನ್ನು ಯಾವತ್ತಾದರೂ ಗಡಿಪಾರು ಮಾಡಬಹುದು. ಅಪ್ಪಣೆ ಹೊರಡಿಸಿ ಆಗಿದೆ. ಈ ಗಡಿಪಾರುಗಳ ಮೇಲೆ ನಾನು ತಕ್ಕಷ್ಟು

ಸಂಯಮದಿಂದ ಬರೆಯಲಾರೆ. ಈ ಜನರೆಲ್ಲ ಟ್ರಾನ್ಸ್‌ವಾಲನ್ನು ಹುಟ್ಟುದೇಶವಾಗಿ ಅಂಗೀಕರಿಸಿದವರು. ಕೆಲವರು ನೇಟಾಲಿಗೆ ಸಹ ಪ್ರಜೆಗಳು. ಇನ್ನು ಕೆಲವರಿಗೆ ನೇಟಾಲಿಗೆ ಪ್ರವೇಶಿಸಲು ಹಕ್ಕು ಇದೆ. ಅವರು ಆ ದೇಶದ ವಲಸೆಗಾರರ ಕಾನೂನು ಪ್ರಕಾರ ನಿಯಮಿತವಾದ ವಿದ್ಯಾರ್ಜನೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಕೆಲವರು ಟ್ರಾನ್ಸ್‌ವಾಲ್ ಅಥವ ದಕ್ಷಿಣ ಆಫ್ರಿಕದ ಇತರ ಭಾಗದಲ್ಲಿ ಜನಿಸಿದ ಇನ್ನೂ ಚಿಕ್ಕ ವಯಸ್ಸಿನ ಹುಡುಗರು. ಅನೇಕರು ಈ ದೇಶದಲ್ಲಿ ಹುಟ್ಟಿ ಬೆಳೆದಿರುವ ತಮ್ಮ ಸಂಸಾರಗಳನ್ನೆಲ್ಲ ಒಂದೆ ಬಿಟ್ಟು ಹೋಗಿದ್ದಾರೆ. ಗಡಿಪಾರಾದ ಈ ಜನರ ಧೀರ ಹೆಂಡತಿಯರು ಸಹೋದರಿಯರು ತಾಯಂದಿರು ಇವರನ್ನು ನಾನು ಪದೆ ಪದೆ ನೋಡುತ್ತೇನೆ. ಒಂದು ಸಲ ನಾನು ಅವರನ್ನು "ಗಡಿಪಾರು ಮಾಡಿರುವವರ ಜೊತೆ, ನೀವೂ ಇಂಡಿಯಕ್ಕೆ ಹೋಗ ಬಯಸುತ್ತೀರಾ?" ಎಂದು ಕೇಳಿದೆ. ಅವರು ಕೋಪದಿಂದ "ಹೇಗೆ ಸಾಧ್ಯ? ನಾವು ಮಕ್ಕಳಾಗಿದ್ದಾಗ ನಮ್ಮನ್ನು ಈ ದೇಶಕ್ಕೆ ಕರೆತಂದರು. ನಮಗೆ ಭಾರತದಲ್ಲಿ ಯಾರೂ ಗೊತ್ತಿಲ್ಲ. ನಾವು ಭಾರತಕ್ಕೆ ಹೋಗುವುದಕ್ಕಿಂತ ಹೆಚ್ಚಾಗಿ ಇಲ್ಲಿಯೇ ನಾಶವಾಗಲು ಬಯಸುತ್ತೇವೆ. ಇಂಡಿಯ ನಮಗೆ ಪರದೇಶ" ಎಂದರು. ರಾಷ್ಟ್ರೀಯ ದೃಷ್ಟಿಯಿಂದ ಈ ಬಗೆಯ ಮನೋಭಾವ ಎಷ್ಟೇ ವಿಷಾದಕರವಾದರೂ, ಈ ಜನ ದಕ್ಷಿಣ ಆಫ್ರಿಕದ ನೆಲದಲ್ಲಿ ಬೇರು ಬಿಟ್ಟಿದ್ದಾರೆಂಬುದು ವಾಸ್ತವಾಂಶ. ಹೋರಾಟ ಪ್ರಾರಂಭವಾಗುವುದಕ್ಕೆ ಮೊದಲು ಈ ಜನರಲ್ಲಿ ಅನೇಕರು ಮರ್ಯಾದೆಯಿಂದ ಸಂಪಾದಿಸಿ ಜೀವನ ನಡೆಸುತ್ತಿದ್ದರು. ಕೆಲವರು ಅಂಗಡಿ ಇಟ್ಟಿದ್ದರು. ಕೆಲವರು ಟ್ರಾಲಿ ಕಂಟ್ರಾಕ್ಟರುಗಳಾಗಿದ್ದರು. ಕೆಲವರು ಬೀದಿಯಲ್ಲಿ ಮಾರುತ್ತ ಹೋಗುತ್ತಿದ್ದರು. ಸಿಗರೇಟು ಮಾರುತ್ತಿದ್ದರು; ಹೋಟಲುಗಳಲ್ಲಿ ನೌಕರರಾಗಿದ್ದರು. ಕೆಲವರು–ಅತಿ ಕೀಳೆಂದರೆ ೬ ಪೌಂಡು, ಹದಿನೈದು ಪೌಂಡು(ತಿಂಗಳಿಗೆ) ಸಂಪಾದಿಸುತ್ತಿದ್ದರು. ಸ್ವಂತ ಕೆಲಸಗಳನ್ನು ಮಾಡುತ್ತಿದ್ದ ಟ್ರಾಲಿ ಕಂಟ್ರಾಕ್ಟರುಗಳು ಮತ್ತು ಇತರ ಸ್ವತಂತ್ರ ಕೆಲಸಗಾರರು ತಿಂಗಳಿಗೆ ೭೦ ಪೌಂಡಿನಿಂದ ಮುವತ್ತು ಪೌಂಡುಗಳ ವರೆಗೆ ಸಂಪಾದಿಸುತ್ತಿದ್ದರು. ಅವರೆಲ್ಲ ಈಗ ದರಿದ್ರರಾಗಿದ್ದಾರೆ. ಅವರ ಸಂಸಾರಗಳಿಗೆ ಸತ್ಯಾಗ್ರಹ ನಿಧಿಯಿಂದ ಜೀವನಕ್ಕೆ ಸಾಕೋ, ಸಾಲದೋ ಎಂಬಷ್ಟು ಮಾತ್ರ ಹಣ ದೊರೆಯುತ್ತಿದೆ.

"ನಿಮ್ಮ ಅವಗಾಹನೆಗಾಗಿ ಈ ವಿಷಯವನ್ನು ಹೇಳಬಹುದು. ಯೂನಿಯನ್ ಸರ್ಕಾರ ಒಂದು ಸಮಯದಲ್ಲಿ, 'ಟ್ರಾನ್ಸ್‌ವಾಲ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡಿರುವ ಜನ ಗಡೀಪಾರು ಆದಂತೆಯೇ ಅಲ್ಲ. ಬಹುಮಂದಿ ಟ್ರಾನ್ಸ್‌ವಾಲ್‌ನಲ್ಲಿಯೇ ರಿಜಿಸ್ಟರ್ ಮಾಡಿಸಿಕೊಂಡಿದ್ದರು. ಮತ್ತು ಟ್ರಾನ್ಸ್‌ವಾಲ್‌ನಲ್ಲಿ ಹೊರತು ಉಳಿದ ಕಡೆ ವಲಸೆಗಾರರಾಗಿದ್ದವರು,–ಭಾರತಕ್ಕೆ ಅಲ್ಲ–ಇತರ ಭಾಗಕ್ಕೆ ಗಡಿಪಾರು ಆಗುತ್ತಿದ್ದಾರೆ' ಎಂದು ಹೇಳಿದರು. ಈ ಎರಡೂ ಹೇಳಿಕೆಗಳು ಸುಳ್ಳಾಗಿವೆ. ಕೊಡುತ್ತಿರುವ ಕಾರಣ 'ಈ ಜನರು ತಮ್ಮ ಗುರುತಿನ ಚೀಟಿಗಳ ವಿವರಗಳನ್ನು ಕೊಡುತ್ತಿಲ್ಲ. ಮತ್ತು ತಾವು ಬಹುಕಾಲದಿಂದ ಅಲ್ಲಿ ವಾಸಿಸುತ್ತಿರುವುದನ್ನು ಕಾಗದ ಪತ್ರಗಳಿಂದ ಸಿದ್ಧಗೊಳಿಸಿಲ್ಲ'

ಎಂಬುದು. ಮೊದಲನೆ ಕಾರಣ ಅರ್ಥರಹಿತ. ಏಕೆಂದರೆ ಗುರುತಿನ ಕಾಗದಗಳನ್ನು ಒದಗಿಸಲು ತಿರಸ್ಕರಿಸುವುದೇ ಒಂದು ಕ್ರಿಮಿನಲ್ ತಪ್ಪು. ಮತ್ತು ಈ ಜನ, ತಾವಾಗಿಯೇ ಸ್ವಪ್ರೇರಣೆಯಿಂದ ರಿಜಿಸ್ಟರ್ ಮಾಡಿಕೊಂಡಿದ್ದುದರಿಂದ, ಗುರುತಿನ ಚೀಟಿಗಳ ವಿವರಗಳನ್ನು ಕೊಡಲು ತಪ್ಪಿದವರಿಗೆ ಶಿಕ್ಷೆ ಮಾಡುವ ಕಾನೂನು ರೀತ್ಯಾ ಅವರನ್ನು ಶಿಕ್ಷಿಸಬಹುದಾಗಿತ್ತು. ಅವರನ್ನು ರಿಜಿಸ್ಟರ್ ಮಾಡಿಕೊಳ್ಳದ ಭಾರತೀಯರು ಎಂದು ಹೇಳಿ ಗಡಿಪಾರು ಮಾಡುವ ಆವಶ್ಯಕತೆ ಇರಲಿಲ್ಲ. ಎರಡನೆಯ ಕಾರಣವೂ ಅಷ್ಟೇ ಅರ್ಥಹೀನ. ಏಕೆಂದರೆ ನೇಟಾಲನ್ನು ಪ್ರವೇಶಿಸಲು ಅಧಿಕಾರ ಹೊಂದಿದ್ದವರು ತಾವು ಅಲ್ಲಿಯ ಪ್ರಜೆಗಳು ಎಂದೇ ಹೇಳಿದರು. ಮತ್ತು ಯಾವುದಾದರೂ ಒಂದು ಯೂರೋಪಿಯನ್ ಭಾಷೆ ಗೊತ್ತಿದ್ದವರು, ಬೇರಾವ ಸಾಕ್ಷ್ಯವನ್ನೂ ಒದಗಿಸುವ ಆವಶ್ಯಕತೆಯಿರಲಿಲ್ಲ. ನನ್ನ ನಂಬಿಕೆ ಏನೆಂದರೆ, ಏಷಿಯಾಟಿಕ್ ಡಿಪಾರ್ಟ್‌ಮೆಂಟು, ವೀರರಾದ ತಮಿಳರ ಕೆಚ್ಚನ್ನು ಮುರಿಯುವುದರಲ್ಲಿ ವಿಫಲರಾಗಿ ಈಗ ನಮ್ಮ ಆರ್ಥಿಕ ಸ್ಥಿತಿಯನ್ನು ಪೂರ್ಣವಾಗಿ ಹದಗೆಡಿಸಿ, ನಮ್ಮನ್ನು ನಾಶಮಾಡಲು ಪ್ರವೃತ್ತವಾಗಿದೆ. ನಾನು ನಿಮಗೂ ನಿಮ್ಮ ಮೂಲಕ ಭಾರತದ ಸಾರ್ವಜನಿಕರಿಗೂ ಒಂದು ಆಶ್ವಾಸನೆಯನ್ನು ಕೊಡಬಹುದು. ಈ ಜನರಾಗಲೀ ಇವರ ಹೆಂಡತಿಯರು ತಾಯಂದಿರು ಸಹೋದರಿಯರಾಗಲೀ ಈ ಆಕರ್ಷಣೆಗೆ ಹೆಚ್ಚು ಪ್ರಮಾಣದಲ್ಲಿ ಬಲಿ ಬೀಳುವವರಲ್ಲ.

"ಟ್ರಾನ್ಸ್‌ವಾಲ್ ಶಾಸನದಲ್ಲಿ ಭಾರತಕ್ಕೆ ತೋರಿಸಿರುವ ಅವಮಾನವನ್ನು–ನಾವು ಹೋರಾಡುತ್ತಿರುವುದು ಅದಕ್ಕೆ ವಿರೋಧವಾಗಿಯೇ–ತೊಡೆದು ಹಾಕುವವರೆಗೆ ನಮ್ಮ ತಾಯಿನಾಡು ಶಾಂತವಾಗುವುದಿಲ್ಲವೆಂದೂ, ಮತ್ತು ಇಲ್ಲಿಯ ವರೆಗೆ ನಮಗೆ ದೊರಕುತ್ತಿರುವ ಬೆಂಬಲ ಮುಂದೆಯೂ ದೊರಕುವುದೆಂದೂ ನಾನು ನಂಬುತ್ತೇನೆ".

ಟಾಲಸ್ಟಾಯ್ ಫಾರಂ

೧೯೧೦

೧೯೧೦ರ ಮೇ ೩೦ರಂದು, ಗಾಂಧೀಜಿಯ ಮಿತ್ರರೂ ಧನಿಕ ಜರ್ಮನ್ ಶಿಲ್ಪಿಯೂ ಆದ ಕಲೆನ್‌ಬಾಕ್ ಎಂಬುವರು ಸತ್ಯಾಗ್ರಹಿಗಳ ಮತ್ತು ಕಷ್ಟದಲ್ಲಿರುವ ಅವರ ಕುಟುಂಬಗಳ ಉಪಯೋಗಕ್ಕಾಗಿ, ತಮ್ಮ ವ್ಯವಸಾಯ ಕ್ಷೇತ್ರವನ್ನು ಕೊಟ್ಟರು. ಅದನ್ನು ಅವರು ಕೊಟ್ಟುದು ಉಚಿತವಾಗಿ, ಯಾವ ಬಾಡಿಗೆ ಅಥವ ಹಣದ ಪ್ರತಿಫಲ ವಿಲ್ಲದೆ. ಗಾಂಧೀ ಮತ್ತು ಕಲೆನ್‌ಬಾಕ್ ಅದಕ್ಕೆ 'ಟಾಲಸ್ಟಾಯ್ ಫಾರಂ' ಎಂದು ನಾಮಕರಣ ಮಾಡಿದರು.

ಟಾಲಸ್ಟಾಯ್ ಫಾರಂ (ವ್ಯವಸಾಯ ಕ್ಷೇತ್ರ) ಸುಮಾರು ಎರಡು ಮೈಲಿ ಉದ್ದ, ಮುಕ್ಕಾಲು ಮೈಲಿ ಅಗಲವಾಗಿತ್ತು. ಫಾರಂನಲ್ಲಿ ಹಣ್ಣು ಬಿಡುವ ಸುಮಾರು ಒಂದು ಸಾವಿರ ಮರಗಳೂ ಒಂದು ಸಣ್ಣ ಮನೆಯೂ ಇದ್ದುವು. ಹಣ್ಣು ಬಿಡುವ ಕಾಲದಲ್ಲಿ ಕಿತ್ತಲೆ, ಓಟೆಯಿರುವ ಕಿತ್ತಳೆಯಂತಹ ಮತ್ತೊಂದು ಹಣ್ಣು (ಏಪ್ರಿಕಾಟ್) ಮತ್ತೂ ಮರದ್ರಾಕ್ಷಿ ಬೇಕಾದಂತೆ ಬೆಳೆಯುತ್ತಿದ್ದವು. ಎರಡು ಭಾವಿಗಳು ಮತ್ತು ಒಂದು ಝರಿಯಿಂದ ನೀರು ಒದಗುತ್ತಿತ್ತು. ಹತ್ತಿರದ ರೈಲ್ವೇ ಸ್ಟೇಶನ್ ಆದ ಲಾಲಿ ಎಂಬುದು ಫಾರಂನಿಂದ ಒಂದು ಮೈಲಿಯಲ್ಲಿತ್ತು. ಜೊಹಾನ್ಸ್‌ಬರ್ಗ್ ಇಪ್ಪತ್ತೊಂದು ಮೈಲಿಯಲ್ಲಿತ್ತು. ಈಗ ಗಾಂಧಿ ಮತ್ತು ಕಲೆನ್‌ಬಾಕ್, ಸತ್ಯಾಗ್ರಹಿಗಳ ವಾಸಕ್ಕಾಗಿ, ಫಾರಂನಲ್ಲಿ ಮನೆಗಳನ್ನು ಕಟ್ಟಲು ನಿಶ್ಚಯಿಸಿದರು. ಜೂನ್ ೪ ರಂದುಕೆಲವು ಸತ್ಯಾಗ್ರಹಿಗಳು ಒಂದು ಫಾರಂನಲ್ಲಿ ಕೆಲಸಮಾಡಲು ಮತ್ತು ವಾಸಿಸಲು ಪ್ರಾರಂಭಿಸಿದರು.

ಹೀಗೆ ಬಂದವರು ಗುಜರಾತು ತಮಿಳುನಾಡು ಆಂಧ್ರ ಮತ್ತು ಉತ್ತರ ಇಂಡಿಯಕ್ಕೆ ಸೇರಿದವರು. ಅವರಲ್ಲಿ ಹಿಂದುಗಳು ಮುಸಲ್ಮಾನರು ಪಾರ್ಸಿಗಳು ಮತ್ತು ಕ್ರಿಸ್ತರು ಇದ್ದರು. ಅವರಲ್ಲಿ ನಲವತ್ತು ಮಂದಿ ಯುವಕರು ಇಬ್ಬರು ಮೂವರು ಮುದುಕರು. ಐವರು ಮಹಿಳೆಯರು ಮತ್ತು ಮೂವತ್ತು ಮಕ್ಕಳು ಇದ್ದರು. ಮಕ್ಕಳ ಪೈಕಿ ಐವರು ಹೆಣ್ಣು ಮಕ್ಕಳಿದ್ದರು.

ಆಹಾರದ ಪ್ರಶ್ನೆ ಏನೂ ಕಷ್ಟವಾಗಲಿಲ್ಲ. ಬಂದ ಕುಟುಂಬಗಳಿಗೆಲ್ಲ. ಬೇರೆ ಬೇರೆ ಅಡಿಗೆಮನೆ ಮಾಡಿಕೊಳ್ಳುವುದು ಎಷ್ಟು ಅಸಂಬದ್ಧ ಎಂಬುದು ಗೊತ್ತಾಗಿದ್ದಿತು. ಅಲ್ಲದೆ ಮುಸಲ್ಮಾನರೂ ಕ್ರಿಸ್ತರೂ ಸಸ್ಯಾಹಾರದಿಂದಲೇ ಜೀವಿಸಲು ತತ್‌ಕ್ಷಣ ಒಪ್ಪಿದರು. ಅಡಿಗೆಯ ವಿಭಾಗವನ್ನು ಕ್ರೈಸ್ತ ಸ್ತ್ರೀಯರಿಗೆ ವಹಿಸಿದರು. ಗಾಂಧೀ ಮತ್ತು ಇತರರು ಅವರಿಗೆ ಸಹಾಯ ಮಾಡುತ್ತಿದ್ದರು. ಆಹಾರ, ಸಾಧ್ಯವಾದಷ್ಟೂ ಸರಳ

ವಾಗಿರಬೇಕಾಗಿತ್ತು. ಊಟದ ಕಾಲ ಸಂಖ್ಯೆ ಎಲ್ಲ ನಿಗದಿಯಾಗಿದ್ದಿತು. ಒಂದೇ ಅಡಿಗೆ ಮನೆ. ಎಲ್ಲರೂ ಒಟ್ಟಿಗೆ ಒಂದೇ ಪಂಕ್ತಿಯಲ್ಲಿ ಊಟ ಮಾಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ಸ್ವಚ್ಛತೆಯನ್ನು (ಊಟ ಮಾಡಿದ ಸ್ಥಳ ಮುಂತಾದುವು) ತಾವೇ ಮಾಡಿ ಕೊಳ್ಳುತ್ತಿದ್ದರು. ಅಡಿಗೆ ಮನೆಯ ಒಟ್ಟು ಪಾತ್ರೆಗಳನ್ನು, ಸರದಿಯಂತೆ ಎಲ್ಲರೂ ಶುದ್ಧಮಾಡುತ್ತಿದ್ದರು. ಕುಡಿತ ಬೀಡಿ ಚುಟ್ಟ ಸಿಗರೇಟಿಗೆ ಪೂರ್ಣ ಪ್ರತಿಬಂಧಕವಿತ್ತು.

ಕಟ್ಟಡಗಳ ಕೆಲಸವನ್ನು ಕಲೆನ್‌ಬಾಕ್ ನಿಯೋಜಿಸಿದರು. ಒಬ್ಬ ಯೂರೋಪಿಯನ್ ಕಲ್ಲುಕುಟಿಕ, ಫಾರಂನಲ್ಲಿ ನೆಲಸಿದವರಿಗೆ ಕಲ್ಲುಕೆಲಸವನ್ನು ಕಲಿಸುತ್ತಿದ್ದನು. ಒಬ್ಬ ಗುಜರಾತಿಬಡಗಿ, ತಾನು ದುಡ್ಡಿಲ್ಲದೆ ಕೆಲಸ ಮಾಡುವುದಾಗಿ ಒಪ್ಪಿದುದಲ್ಲದೆ ಇತರ ಬಡಗಿಗಳನ್ನೂ ಕಡಿಮೆ ದರದಲ್ಲಿ ಕರೆದುಕೊಂಡು ಬಂದನು. ಉಳಿದ ಸಾಧಾರಣ ಕೆಲಸಗಳನ್ನೆಲ್ಲ–ಬುದ್ಧಿಯ ಅವಶ್ಯಕತೆಯಿಲ್ಲದ ದೇಹಶ್ರಮದ ಕೆಲಸಗಳನ್ನೆಲ್ಲ—ಫಾರಂ ವಾಸಿಗಳೇ ಮಾಡಿದರು. ಸ್ವಚ್ಛತೆಯ ಕೆಲಸ ಮತ್ತು ಜೋಹಾನ್ಸ್‌ಬರ್ಗ್‌ಗೆ ಹೋಗಿ ಬೇಕಾದ ಸಾಮಾನುಗಳನ್ನು ವ್ಯಾಪಾರ ಮಾಡಿಕೊಂಡು ಬರುವ ಕಾರ್ಯ ತಂಬಿನಾಯರ್ ಎಂಬುವನಿಗೆ ಸೇರಿತ್ತು.

ಕಟ್ಟಡಗಳನ್ನು ಕಟ್ಟುತ್ತಿರುವಾಗ, ಎರಡು ತಿಂಗಳು, ಕುಟುಂಬಗಳು ಡೇರೆಗಳಲ್ಲಿ ವಾಸಿಸುತ್ತಿದ್ದರು. ಸಿದ್ಧಮಾಡಿದ ಮರದ ತುಂಡುಗಳನ್ನು ಕೊಂಡು, ಬಡಗಿಗಳು ಅವುಗಳನ್ನು ಬೇಕಾದ ಅಳತೆಗೆ ಕತ್ತರಿಸಿಕೊಂಡರು. ಹೆಚ್ಚು ಬಾಗಿಲು ಕಿಟಕಿಗಳನ್ನು ಮಾಡಬೇಕಾದುದಿರಲಿಲ್ಲ. ಎಲ್ಲ ಮಡಿಕೆಕಬ್ಬಿಣದ ಕಟ್ಟಡಗಳಾದುದರಿಂದ ಕಟ್ಟಲು ಹೆಚ್ಚುಕಾಲ ಹಿಡಿಯಲಿಲ್ಲ. ಸ್ತ್ರೀಯರಿಗೂ ಪುರುಷರಿಗೂ ಪ್ರತ್ಯೇಕ ವಾಸಸ್ಥಳಗಳಿದ್ದವು. ಟಾಲ್‌ಸ್ಟಾಯ್ ಫಾರಂನಲ್ಲಿರುವಾಗ ಮದುವೆಯಾದರೂ ಹೆಂಡತಿಯರಿಂದ ಪ್ರತ್ಯೇಕ ವಾಗಿರಬೇಕಾಗಿತ್ತು. ಕುಟುಂಬಗಳು ಸೆರೆಮನೆಯಲ್ಲಿ ಕೆಲಸಮಾಡುವುದಕ್ಕಿಂತ ಹೆಚ್ಚು ಕೆಲಸವನ್ನು ಫಾರಂನಲ್ಲಿ ಮಾಡುತ್ತಿದ್ದರು. ಅಡಿಗೆ ಮನೆಯಲ್ಲಿ ಕೆಲಸ ಮಾಡದಿದ್ದ ವರು–ಅವರು ಚಿಕ್ಕವರಾಗಲೀ ಮುದುಕರಾಗಲೀ–ತೋಟ ಮತ್ತು ಹಣ್ಣಿನ ಗಿಡಗಳ ನಿಗ ನೋಡುವುದು ಕಡ್ಡಾಯವಾಗಿದ್ದಿತು. ಪ್ರತಿಯೊಬ್ಬರೂ ಜೊಹಾನ್ಸ್‌ಬರ್ಗ್‌ಗೆ ಒಂದಿಲ್ಲೊಂದು ಕೆಲಸಕ್ಕಾಗಿ ಹೋಗಲೇ ಬೇಕಾಗಿತ್ತು. ಒಟ್ಟು ಕುಟುಂಬಗಳ ಕಾರ್ಯಕ್ಕಾಗಿ ಮಾತ್ರ ಯಾರಾದರೊಬ್ಬರು ರೈಲಿನಲ್ಲಿ–ಅದರಲ್ಲಿಯೂ ಮೂರನೆಯ ತರಗತಿಯಲ್ಲಿ ಹೋಗಬಹುದು ಎಂಬ ನಿಯಮವಿದ್ದಿತು. ಸ್ವಸಂತೋಷಕ್ಕಾಗಿ ಹೋಗುವವರು ನಡೆದು ಕೊಂಡೇ ಹೋಗಬೇಕಾಗಿದ್ದಿತು. ಮನೆಯಲ್ಲಿ ಸಿಪ್ಪೆ ಸಹಿತ ಬೀಸಿ ಮಾಡಿದ ಹಿಟ್ಟಿನಿಂದ ಮಾಡಿದ ರೊಟ್ಟಿ, ಮನೆಯಲ್ಲಿ ಮಾಡಿದ ಸಿಹಿಯುಬ್ಬರ, ನೆಲಗಡೆಯ ಬೆಣ್ಣೆ ಇವುಗಳನ್ನು ಹೊತ್ತು ತರಬೇಕಾಗಿದ್ದಿತು. ಪ್ರಯಾಣಿಕರು ರಾತ್ರಿ ಎರಡು ಗಂಟೆಗೆ ಎದ್ದು ಎರಡುವರೆಗೆ ಹೊರಡುತ್ತಿದ್ದುದು ಪದ್ಧತಿ. ಜೋಹಾನ್ಸ್‌ಬರ್ಗನ್ನು ತಲುಪಲು ಸುಮಾರು ಆರೇಳು ಗಂಟೆಗಳು ಬೇಕಾಗುತ್ತಿದ್ದುವು. ಕಲೆನ್‌ಬಾಕ್ ತನ್ನ ಪ್ರಿಯ ಹೆಗಲು ಚೀಲದೊಡನೆ ಅವರೊಂದಿಗೆ ಸಾಧಾರಣವಾಗಿ ಸೇರುತ್ತಿದ್ದರು.

'ಫಾರಂ'ನಲ್ಲಿ ಶುಚಿತ್ವದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿತ್ತು. ಎಲ್ಲ ಕಸಕಡ್ಡಿಗಳನ್ನೂ, ಅದಕ್ಕಾಗಿಯೇ ಅಗೆದಿದ್ದ ಗುಂಡಿಗಳಿಗೆ ಎಸೆಯುತ್ತಿದ್ದರು. ನೀರನ್ನು ರಸ್ತೆಯಲ್ಲಿ ಚೆಲ್ಲಲು ಅವಕಾಶವಿರುತ್ತಿರಲಿಲ್ಲ. ವ್ಯರ್ಥವಾಗುವ ನೀರನ್ನೆಲ್ಲ ಬಕೆಟ್‌ಗಳಲ್ಲಿ ಶೇಖರಿಸಿ ಮರಗಳಿಗೆ ಸುರಿಯುತ್ತಿದ್ದರು. ಆಹಾರ ತರಕಾರಿಚೂರು ಗಳನ್ನೆಲ್ಲ ಗೊಬ್ಬರವಾಗಿ ಉಪಯೋಗಿಸುತ್ತಿದ್ದರು. ಸಮೀಪದಲ್ಲಿಯೇ ಒಂದು ಚೌಕ ವಾದ ಗುಂಡಿಯನ್ನು ನಿರ್ಮಿಸಿ ಅದರಲ್ಲಿ ಪಾಯಖಾನೆಗಳನ್ನೆಲ್ಲ ಹಾಕಿ ಅಗೆದ ಮಣ್ಣಿ ನಿಂದ ಅದನ್ನು ಪೂರ್ಣವಾಗಿ ಮುಚ್ಚುತ್ತಿದ್ದರು.

ಕುಟುಂಬಗಳು ಸ್ವಾವಲಂಬಿಯಾಗುವ ಉದ್ದೇಶದಿಂದ, ಟಾಲ್‌ಸ್ಟಾಯ್ ಫಾರಂ ನಲ್ಲಿ ಸಣ್ಣ ಕೈಗಾರಿಕೆಗಳು ಸ್ಥಾಪಿತವಾದುವು. ಕಲೆನ್‌ಬಾಕ್ ಒಂದು ಜರ್ಮನ್ ಕ್ಯಾಥೋ ಲಿಕ್ ಮಠದಲ್ಲಿ ಪಾದರಕ್ಷೆಗಳನ್ನು ಮಾಡುವುದನ್ನು ಕಲಿತು, ಅದನ್ನು ಗಾಂಧೀಜಿಗೆ ಕಲಿಸಿದನು. ಗಾಂಧಿಜಿ, ಉಳಿದ ಫಾರಂವಾಸಿಗಳಿಗೆ ಕಲಿಸಿದರು. ಅವರು ಜೋಡು ಗಳನ್ನು ತಯಾರಿಸಿ ಸ್ನೇಹಿತರಿಗೆ ಮಾರ ತೊಡಗಿದರು. ಕಲೆನ್‌ಬಾಕರಿಂದ ಕಲಿತ ಮತ್ತೊಂದು ವಿದ್ಯೆಯೆಂದರೆ ಬಡಗಿ ಕೆಲಸ. ಅವರು ಮರದ ಸಾಮಾನುಗಳನ್ನೆಲ್ಲ ಬೆಂಚು ಗಳಿಂದ ಹಿಡಿದು ಪೆಟ್ಟಿಗೆಗಳವರಿಗೆ ಮಾಡತೊಡಗಿದರು.

ಚಿಕ್ಕವರಿಗಾಗಿ, ಜೂನ್ ತಿಂಗಳಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದರು. ಕುಟುಂಬಗಳವರಿಗೆಲ್ಲ ಬೆಳಗಿನ ಹೊತ್ತು ಕಷ್ಟವಾದ ದೈಹಿಕ ಕೆಲಸವಿದ್ದುದರಿಂದ, ಶಾಲೆಯ ತರಗತಿಗಳು ಮಧ್ಯಾಹ್ನ ಎರಡರಿಂದ, ಐದರವರೆಗೆ ನಡೆಯುತ್ತಿದ್ದವು. ಗಾಂಧಿ, ಕಲೆನ್‌ಬಾಕ್ ಇವರು ಕೆಲವು ಯುವಕರೊಡನೆ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಗಾಂಧೀಜಿ ಧಾರ್ಮಿಕ ಶಿಕ್ಷಣವನ್ನು ಹೇಳಿ ಕೊಡುತ್ತಿದ್ದರು. ಅವರು ಹಿಂದು ಧರ್ಮದ ಮುಖ್ಯ ತತ್ವಗಳನ್ನು ಕುರಿತು ಬರೆದರು. ಇಸ್ಲಾಂ ಮತ್ತು ಜೊರಾತುಷ್ಟ್ರ ಧರ್ಮ (ಪಾರ್ಸಿ)ಗಳನ್ನು ಕುರಿತು ವ್ಯಾಸಂಗ ಮಾಡಿದರು. ಅವರು ತಮ್ಮ ವಿದ್ಯಾರ್ಥಿ ಗಳಿಗೆ, ಎಲ್ಲ ಧರ್ಮಗಳನ್ನೂ ಪ್ರೀತಿಸಿ, ಸ್ವಂತ ಅಣ್ಣ ತಮ್ಮಂದಿರಂತೆ ಜೀವಿಸಲು ಬೋಧಿಸಿದರು. ತಮ್ಮ ಉಪನ್ಯಾಸಗಳ ಆಧಾರದ ಮೇಲೆ ಅವರು 'ನೀತಿಧರ್ಮ' ಎಂಬ ಪುಸ್ತಕವನ್ನು ಇಂಗ್ಲಿಷಿನಲ್ಲಿ ಬರೆದರು. ಅದು ಪ್ರಕಟವಾದುದು ೧೯೧೨ರಲ್ಲಿ.

ಗಾಂಧೀಜಿಯ ಪಾಲಿಗೆ ಬಂದ ಈ ವೈವಿಧ್ಯಮಯ ತರಗತಿಯಲ್ಲಿ ಎಲ್ಲ ವಯಸ್ಸಿನ ವರೂ ಇದ್ದರು. ಏಳು ವಯಸ್ಸಿನ ಬಾಲಕ ಬಾಲಕಿಯರು ಇಪ್ಪತ್ತು ವಯಸ್ಸಿನ ಯುವಕರು ಹನ್ನೆರಡು ವರುಷದ ಹುಡುಗಿಯರು ಇದ್ದರು. ಗಾಂಧಿ, ವಿದ್ಯಾರ್ಥಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದರು. ಗುಜರಾತಿ ಭಾಗಕ್ಕೆ ಗುಜರಾತಿ ಭಾಷೆಯಲ್ಲಿ ಶಿಕ್ಷಣ: ಉಳಿದ ಭಾಗಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ. ತೆಲುಗು ಮತ್ತು ತಮಿಳು ಬಾಲಕರಿಗೆ ತಮ್ಮ ಮಾತೃಭಾಷೆ, ಇಂಗ್ಲಿಷು ಮತ್ತು ಅಲ್ಪಸ್ವಲ್ಪ ಡಚ್ ತಿಳಿಯುತ್ತಿದ್ದಿತು. ಶಿಕ್ಷಣದ ಪ್ರಮುಖ ಭಾಗವಾಗಿ ಗಾಂಧೀಜಿ ಆಕರ್ಷಣೀಯವಾದ ಕಥೆಗಳನ್ನು ವಿದ್ಯಾರ್ಥಿಗಳಿಗೆ ಹೇಳುವುದು ಮತ್ತು ಓದುವುದು. ಇವನ್ನು ಇಟ್ಟುಕೊಂಡಿದ್ದರು. ಗಾಂಧೀ ಅವರಿಗೆ

ಸ್ವಲ್ಪ ತಮಿಳು ಮತ್ತು ಉರ್ದುವನ್ನು ಹೇಳಿಕೊಡುತ್ತಿದ್ದರು. ಇತಿಹಾಸ ಭೂಗೋಳ ಗಣಿತ ಇವುಗಳ ಸಾಮಾನ್ಯ ಜ್ಞಾನ ಬೋಧೆಯನ್ನೂ ಉದಾಸೀನ ಮಾಡಿರಲಿಲ್ಲ. ಹಿಂದೀ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಿಸುತ್ತಿದ್ದರು. ಬರೆಯುವುದನ್ನೂ ಭಜನೆಗಳನ್ನೂ ಕಲಿಸುತ್ತಿದ್ದರು. ಭಜನೆ ವಿದ್ಯಾರ್ಥಿಗಳ ಪ್ರಾರ್ಥನೆಯ ಭಾಗವಾಗಿತ್ತು. ಆ ಶಾಲೆಯುಲ್ಲಿ ಯಾವ ಪಠ್ಯ ಪುಸ್ತಕಗಳನ್ನೂ ಉಪಯೋಗಿಸುತ್ತಿರಲಿಲ್ಲ. ಶಿಕ್ಷಣದಲ್ಲಿ ಗಾಂಧೀಜಿ ಹೃದಯ ಸಂಸ್ಕೃತಿಗೆ, ಅಥವಾ ಶೀಲ ಸಂವರ್ಧನೆಗೆ ಪ್ರಥಮ ಸ್ಥಾನವನ್ನು ಕೊಟ್ಟಿದ್ದರು. ದೈಹಿಕ ಶಿಕ್ಷೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದರು. ಆತ್ಮ ಮತ್ತು ಹೃದಯುಗಳ ತರಬೇತಿ, ಅವುಗಳ ಆಚರಣೆಯಿಂದ ಮಾತ್ರ ಸಾಧ್ಯವೆಂದು ಗಾಂಧಿ ನಂಬಿದ್ದರು. ಈ "ಆಚರಣೆ ಎಂಬುದು ಉಪಾಧ್ಯಾಯರ ಜೀವನ ಮತ್ತು ಚಾರಿತ್ರ್ಯದ ಮೇಲೆ ಪೂರ್ಣವಾಗಿ ಅವಲಂಬಿಸಿದ್ದಿತು" ಒಂದೇ ಒಂದು ಸಲ ಗಾಂಧೀಜಿ ಒಬ್ಬ ವಿದ್ಯಾರ್ಥಿಯನ್ನು ಒಂದು ಇಂಚು ಪಟ್ಟಿಯಿಂದ ಹೊಡೆದರು. ತಪ್ಪಿತಸ್ಥ ಹುಡುಗನನ್ನು ಹೊಡೆಯುತ್ತಿರುವಾಗ ಗಾಂಧೀಜಿ ಸಹ ನಡುಗುತ್ತಿದ್ದರು.

ಟಾಲ್‌ಸ್ಟಾಯ್ ಫಾರಂನಲ್ಲಿ ಗಾಂಧಿ ನಡೆಸಿದ ಸಹ ವಿದ್ಯಾಭ್ಯಾಸ ಪ್ರಯೋಗ, ಧೀರತನದ್ದಾಗಿದ್ದಿತು. ತಂಟೆಕೋರರೆಂದು ಪ್ರಸಿದ್ಧರಾದ ಚಿಕ್ಕ ಹುಡುಗರನ್ನು ಕೃತ್ರಿಮ ವರಿಯುವ ಸಣ್ಣ ಹುಡುಗಿಯರೊಂದಿಗೆ, ಅವರು, ಒಂದೇ ಸ್ಥಳದಲ್ಲಿ ಒಂದೇ ಕಾಲದಲ್ಲಿ ಸ್ನಾನ ಮಾಡಲು ಕಳುಹಿಸಿದರು. ಅವರು ತಮ್ಮ ವಿದ್ಯಾರ್ಥಿಗಳಿಗೆ ಸಂಯಮದ ಆವಶ್ಯಕತೆಯನ್ನು ಪೂರ್ಣವಾಗಿ ಬೋಧಿಸಿದರು. ಸ್ನಾನ ಮಾಡುವವರು ಒಟ್ಟಾಗಿ ಹೋಗುತ್ತಿದ್ದರು. ಏಕಾಂತಕ್ಕೆ ಅವಕಾಶವೇ ಇರಲಿಲ್ಲ. ಸಾಮಾನ್ಯವಾಗಿ ಗಾಂಧಿಜಿಯೂ ನದಿಯಲ್ಲಿರುತ್ತಿದ್ದರು.

ಗಾಂಧೀಜಿ, ತೆರೆದ ಅಂಗಳದಲ್ಲಿ ಮಲಗುತ್ತಿದ್ದರು; ಅವರ ಸುತ್ತಮುತ್ತ ಬಾಲಕ ಬಾಲಕಿಯರು ಮಲಗುತ್ತಿದ್ದರು. ಫಾರಂನಲ್ಲಿ ಮಂಚ ಇರಲಿಲ್ಲ.ಹಾಸಿಗೆಗಾಗಿ ಎಲ್ಲರಿಗೂ ಎರಡೆರಡು ಕಂಬಳಿಗಳು ಕೊಡಲ್ಪಟ್ಟಿದ್ದವು. ಹೊದೆಯುವುದಕ್ಕೆ ಒಂದು, ಹಾಸಿಕೊಳ್ಳುವುದಕ್ಕೆ ಒಂದು. ದಿಂಬಿಗಾಗಿ ಪ್ರತಿಯೊಬ್ಬರಿಗೂ ಒಂದು ಮರದ ತುಂಡು. ಬಾಲಕ ಬಾಲಕಿಯರು ಯಾವ ಕೆಡಕೂ ಇಲ್ಲದೆ ಒಟ್ಟಿಗೆ ಜೀವಿಸಬಹುದೆಂಬ ನಂಬಿಕೆಯಿಂದ ಮಾಡಿದ ಈ ಪ್ರಯೋಗ, ಎಲ್ಲ ಕಾಲದಲ್ಲಿಯೂ ಸುಗಮವಾಗಿ ಕೆಲಸ ಮಾಡಲಿಲ್ಲ.

ಅಲ್ಲಿನ ಜೀವನವನ್ನು ಸಾಧ್ಯವಾದಷ್ಟು ಸರಳವಾದುದನ್ನಾಗಿ ಮಾಡಲಾಗಿತ್ತು. ಅಲ್ಲಿನ ಗಂಡಸರು ತಮ್ಮ ಕ್ಷೌರವನ್ನು ತಾವೇ ಪರಸ್ಪರವಾಗಿ ಮಾಡಿಕೊಳ್ಳುತ್ತಿದ್ದರು. ಅಲ್ಲಿ ಸೇರಿದ್ದವರೆಲ್ಲ ಕೂಲಿಗಳಾಗಿ ಬಿಟ್ಟಿದ್ದರು. ಆದುದರಿಂದ ಯೂರೋಪಿಯನ್ ಕೂಲಿಗಳ ಉಡುಪನ್ನೇ–ಕೂಲಿಗಳ ಷರಾಯಿ ಷರ್ಟ್‌ಗಳನ್ನು ಧರಿಸುತ್ತಿದ್ದರು. ಇದು ಜೈಲು 'ಡ್ರೆಸ್'ನ ಮಾದರಿಯದಾಗಿದ್ದಿತು. ಈ ಉಡುಪುಗಳನ್ನು ಒರಟಾದ ನೀಲಿ ಬಟ್ಟೆಗಳಿಂದ ಮಾಡಿದ್ದರು. ಫಾರಂನ ಸ್ತ್ರೀಯರು ಅವುಗಳನ್ನು ಹೊಲಿಯುತ್ತಿದ್ದರು.

ನಿತ್ಯ ಮೂರು ಊಟ. ಬೆಳಿಗ್ಗೆ ಆರು ಘಂಟೆಗೆ ರೊಟ್ಟಿ (ಬ್ರೆಡ್) ಮತ್ತು ಗೋಧಿ 'ಕಾಫಿ'; ಹನ್ನೊಂದು ಗಂಟೆಗೆ ಬೇಳೆ ತರಕಾರಿ ಅನ್ನ; ಸಂಜೆ ಐದುವರೆ ಗಂಟೆಗೆ ಗೋಧಿ ಗಂಜಿ ಮತ್ತು ಹಾಲು, ಅಥವಾ ಬ್ರೆಡ್ ಮತ್ತು 'ಕಾಫಿ'. ಸೆರೆಮನೆಯಲ್ಲಿ ಖೈದಿಗಳಿಗೆ ಕೊಡುತ್ತಿದ್ದ ಬೋಗುಣಿಯಂತಹ ಬಟ್ಟಲಿನಲ್ಲಿ ಆಹಾರವನ್ನು ಬಡಿಸುತ್ತಿದ್ದರು. ಚಮಚಗಳನ್ನು ಮರದಿಂದ ಫಾರಂನಲ್ಲಿಯೇ ಮಾಡುತ್ತಿದ್ದರು. ಸಂಜೆಯ ಊಟವಾದ ಮೇಲೆ ಫಾರಂನಲ್ಲಿದ್ದ ಎಲ್ಲರೂ ಏಳುಗಂಟೆಗೆ ಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಅವರು ಭಜನೆಗಳನ್ನು ಹಾಡುತ್ತಿದ್ದರು; ಕೆಲವು ವೇಳೆ ರಾಮಾಯಣದಿಂದಲೂ ಮತ್ತು ಇಸ್ಲಾಂ ಧರ್ಮದ ವಿಷಯವಾಗಿಯೂ ಗ್ರಂಥಭಾಗಗಳ ಪಠನೆಯನ್ನು ಕೇಳುತ್ತಿದ್ದರು. ಎಲ್ಲರೂ ರಾತ್ರಿ ೯ ಗಂಟೆಗೆ ಮಲಗುತ್ತಿದ್ದರು.

ಫಾರಂನಲ್ಲಿ ಅನೇಕರು ಏಕಾದಶಿ ಉಪವಾಸ ಮಾಡುತ್ತಿದ್ದರು. ಕೆಲವರು ಚಾತುರ್ಮಾಸವನ್ನು ಆಚರಿಸುತಿದ್ದರು. ಆಶ್ರಮದ ಮುಸಲ್ಮಾನರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಉಳಿದವರೂ ರಮಜಾನ್‌ನಲ್ಲಿ ಒಂದೇ ಊಟವನ್ನು ಸಂಧ್ಯಾಕಾಲ ಮಾಡುತ್ತಿದ್ದರು. ಎಲ್ಲರೂ ಇತರರಿಗೆ ಅವರವರ ಧಾರ್ಮಿಕ ಆಚರಣೆಗಳಲ್ಲಿ ಸಹಾಯಕರಾಗುತ್ತಿದ್ದರು. ಉಪವಾಸಗಳು ಆತ್ಮ ಸಂಯಮಕ್ಕೆ ಸಹಾಯಕವಾದುವೆಂದು ಪರಿಗಣಿಸಲ್ಪಟ್ಟಿದ್ದುವು.

ಫಾರಂ, ನಗರದಿಂದ ದೂರವಾಗಿದ್ದರೂ, ಸಂಭವಿಸಬಹುದಾದ ರೋಗರುಜಿನಗಳಿಗಾಗಿ, ಯಾವ ಔಷಧಿಗಳನ್ನೂ ಫಾರಂನಲ್ಲಿ ಇಟ್ಟಿರಲಿಲ್ಲ. ಆ ದಿನಗಳಲ್ಲಿ ಪ್ರಕೃತಿ ಚಿಕಿತ್ಸೆಯಲ್ಲಿ ಗಾಂಧೀಗೆ ಪೂರ್ಣ ನಂಬಿಕೆ ಇದ್ದಿತು. ಸುದೈವದಿಂದ ವೈದ್ಯರ ಸಹಾಯ ಬೇಕಾದ ಯಾವ ರೋಗವೂ ಸಂಭವಿಸಲಿಲ್ಲ. ಗಾಂಧಿ, ಪ್ರಕೃತಿ ಚಿಕಿತ್ಸೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದರು; ಅವರು ಒಬ್ಬ ಮುದುಕನ ಅಸ್ತಮವನ್ನೂ ಸಹ ಗುಣಪಡಿಸಿದರು. ಪ್ರಕೃತಿ ಚಿಕಿತ್ಸೆಯಲ್ಲಿದ್ದ ಗಾಂಧೀಜಿಯ ನಂಬಿಕೆ ಸಾಂಕ್ರಾಮಿಕವಾಗಿತ್ತು. ಆಶ್ರಮಕ್ಕೆ ಸೇರದ ರೋಗಿಗಳೂ ಸಹ ಅಪರೂಪವಾಗಿ ಗಾಂಧಿಜಿಯ ಕೈಯಿಂದ ಗುಣಪಡಿಸಿಕೊಳ್ಳಲು ಬರುತ್ತಿದ್ದರು.

ಟಾಲಸ್ಟಾಯ್ ಫಾರಂನಲ್ಲಿ ಹಾವುಗಳು ಸಮೃದ್ಧವಾಗಿದ್ದುವು. ಅವುಗಳನ್ನು ಕೊಲ್ಲುವುದು ಪಾಪ ಎಂದು ಗಾಂಧಿ ನಂಬಿದ್ದರು. ಕಲೆನ್‌ಬಾಕ್ ಬೇರೆ ಬೇರೆ ಜಾತಿಯ ಹಾವುಗಳ ಪರೀಕ್ಷೆ ಮಾಡಿ, ವಿಷದ ಹಾವುಗಳನ್ನು ಹೇಗೆ ಗುರುತಿಸುವುದೆಂಬುದನ್ನು ಫಾರಂವಾಸಿಗಳಿಗೆ ಹೇಳಿಕೊಟ್ಟರು. ಅಲ್ಲಿ ಆಲ್‌ಬ್ರೆಟ್ ಎಂಬ ಮತ್ತೊಬ್ಬ ಜರ್ಮನ್ ಸಹ ಇದ್ದನು. ಅವನು ಹಾವುಗಳೊಂದಿಗೆ ಆಟವನ್ನು ಕೂಡ ಆಡುತ್ತಿದ್ದನು. ಇದರಿಂದ ಅವರು ಭಯವನ್ನು ಬಿಟ್ಟರು.

ಗಾಂಧೀಜಿ, ಅತಿ ಹೆಚ್ಚಿನ ಕಾಲವನ್ನು ಸತ್ಯಾಗ್ರಹಕ್ಕಾಗಿ ವಿನಿಯೋಗಿಸಲು ಕಾತರರಾಗಿದ್ದರು. ಅವರ ಅಭಿಪ್ರಾಯದಂತೆ, ಅದರ ಜಯ, ದೇಹ ಮಾತು ಮನಸ್ಸುಗಳ ಪರಿಶುದ್ಧತೆಯ ಮೇಲೆ, ಬಹು ಪಾಲು ಅವಲಂಬಿಸಿದ್ದಿತು. ೧೯೧೧ರಲ್ಲಿ ಅವರು,

ತಮಗೆ ವರುಷಕ್ಕೆ ಐದು ಆರು ಸಾವಿರ ಪೌಂಡು ಆದಾಯವಿದ್ದ ವಕೀಲಿ ವೃತ್ತಿಯನ್ನು ಪೂರ್ಣವಾಗಿ ಬಿಟ್ಟು ಬಿಟ್ಟರು. ಅವರು ಉಳಿಸಿದ್ದ ಹಣದ ಬಹುಪಾಲು, ಸಾರ್ವಜನಿಕ ಕಾರ್ಯಕ್ಕಾಗಿ ವೆಚ್ಚವಾಗಿ ಹೋಗಿತ್ತು. ಫೀನಿಕ್ಸ್ ಕ್ಷೇತ್ರವೇ ಅವರ ೫ ಸಾವಿರ ಪೌಂಡು ಗಳನ್ನು ಬಳಸಿ ಕೊಂಡಿತ್ತು. ಸರ್ಕಾರದವರು ಹಾಕಿದ ಮೊಖದ್ದಮೆಗಳಲ್ಲಿ ಸಿಕ್ಕಿದ ಭಾರತೀಯರ ಕಷ್ಟದ ಬಾಳನ್ನೇ ತಾವೂ ಬಾಳಲು ಅವರು ತಮ್ಮ ಎಲ್ಲ ಅನ್ಯ ಬಂಧನ ಗಳನ್ನೂ ಬಾಂಧವ್ಯಗಳನ್ನೂ ಕಿತ್ತೊಗೆದರು. ಬಡತನದ ಬಾಳನ್ನೇ ಅವರು ಪ್ರತಿ ಪಾದಿಸಿದರು. ಅದೇ ಕಾರಣದಿಂದ ಅವರು ತಮ್ಮ ಜೀವನಕ್ರಮದಲ್ಲಿ ಇನ್ನೂ ಹೆಚ್ಚಿನ ಬದಲಾವಣೆಯನ್ನು ಮಾಡಲು ಪ್ರೇರಿತರಾದರು.

ಟಾಲಸ್ಟಾಯ್ ಫಾರಂನಲ್ಲಿ ಜನಪ್ರವಾಹದ ಏರಿಳಿತಗಳಾಗುತ್ತಿದ್ದವು. ಕೆಲವರು ಸೆರೆಮನೆ ಸೇರುವ ನಿರೀಕ್ಷಣೆಯಲ್ಲಿದ್ದರು; ಕೆಲವರು ಅಲ್ಲಿಂದ ಹಿಂದಿರುಗಿದ್ದರು. ಜುಲೈ ವೇಳೆಗೆ ಸತ್ಯಾಗ್ರಹಿಗಳಿಗೆ ವಿರಾಮದ ಕಾಲವಾಯಿತು. ಹೋಂ ಸೆಕ್ರೆಟರಿ ಯಾಗಿದ್ದ ಮಿ. ವಿನಸ್ಟನ್ ಚರ್ಚಿಲ್‌ರು 'ಸತ್ಯಾಗ್ರಹಿ ಅಥವಾ ಸ್ವಾತಂತ್ರ್ಯ ಹೋರಾಟ ಗಾರ'ರಾಗಿ ಬಂದಿಸಲ್ಪಟ್ಟವರನ್ನೆಲ್ಲ ಈ ಅನಾವಶ್ಯಕ ಅವಮಾನದಿಂದ ಬಿಡುಗಡೆ ಮಾಡ ಬೇಕೆಂದು ಕಾಮನ್ಸ್‌ಸಭೆಯಲ್ಲಿ ಹೇಳಿಕೆಯಿತ್ತರು.

ಟಾಲಸ್ಟಾಯ್-ಗಾಂಧಿ

೧೯೧೦

ಟಾಲಸ್ಟಾಯ್‌ಗೆ ಇಂಡಿಯದಲ್ಲಿ, ಅದರ ಸಾಮಾಜಿಕ ಬೆಳವಣಿಗೆ, ಬ್ರಿಟಿಷರಿಗೆ ವಿರೋಧವಾದ ಹೋರಾಟ, ಅದರ ದರ್ಶನ ಮತ್ತು ಧರ್ಮ ಇವುಗಳಲ್ಲಿ ಬಹು ಕಾಲದಿಂದ ಆಸಕ್ತಿಯಿದ್ದಿತು. ೧೯೦೮ರಲ್ಲಿಯೇ ಅವರು ಒಬ್ಬ ಭಾರತದ ಕ್ರಾಂತಿ ಕಾರನಿಗೆ "ಹಿಂದುವಿಗೆ ಒಂದು ಪತ್ರ" ಎಂಬ ಶಿರೋನಾಮೆಯಲ್ಲಿ (ಪತ್ರ ವ್ಯವಹಾರ ಗಳ ಸಂದರ್ಭದಲ್ಲಿ) ಒಂದು ಕಾಗದ ಬರೆದಿದ್ದರು. ಆ ಕಾಗದಲ್ಲಿ ಅವರು ಭಾರತದ ಕೋಟಿಸಂಖ್ಯೆಯ ಜನರನ್ನು ಅತ್ಯಲ್ಪ ಅಂದರೆ ಕೇವಲ ಬೆರಳೆಣಿಕೆಯ ಇಂಗ್ಲಿಷರ ಗುಲಾಮಗಿರಿಗೆ ಇಳಿಸಿದ್ದ ಆಕ್ರಮಣದ ವಿರುದ್ಧ, ಹಿಂಸಾಮಾರ್ಗದ ಪ್ರತಿಭಟನೆಯ ಸತ್ಯವನ್ನು ವಿರೋಧಿಸಿದ್ದರು. "ಇಂಡಿಯದ ಜನರು ಹಿಂಸೆಯಿಂದ ಗುಲಾಮಗಿರಿಗೆ ಇಳಿಸಲ್ಪಟ್ಟಿದ್ದರೆ ಅದಕ್ಕೆ ಕಾರಣ ಅವರು ಹಿಂಸಾಮಾರ್ಗದಲ್ಲಿ ಬಾಳುತ್ತಿರುವುದು ಮತ್ತು ಹಿಂದೆ ಬಾಳಿರುವುದೇ ಆಗಿದೆ. ಮತ್ತು ಅವರು ಮಾನವತ್ವದಲ್ಲಿ ಅಡಗಿರುವ ಮೂಲ ಭೂತ ಶಾಶ್ವತ ಧರ್ಮವನ್ನು ಪರಿಗಣಿಸದಿರುವುದೂ ಕಾರಣ"–ಎಂದು ಪ್ರತಿಪಾದಿಸಿದ್ದರು.

ಆ ಲೇಖನ ಎಲ್ಲೆಲ್ಲಿಯೂ ಪ್ರಚಾರವಾಯಿತು; ಗಾಂಧೀಜಿಯನ್ನೂ ಆಕರ್ಷಿಸಿತು. ಆ ಲೇಖನದಲ್ಲಿ ಅಡಕವಾಗಿದ್ದ ಸವಿನಯ ಕಾಯಿದೆ ಭಂಗ ಮತ್ತು ಸತ್ಯಾಗ್ರಹದ ಸಂದೇಶವನ್ನು ಗಾಂಧೀಜಿ ಅರಿತರು. ಅವರು ಮೊದಲ ಬಾರಿಗೆ ೧೯೦೯ರಲ್ಲಿ ಟಾಲಸ್ಟಾಯ್ ಅವರಿಗೆ ಕಾಗದವನ್ನು ಬರೆದುದು, ತಾವು ದಕ್ಷಿಣ ಆಫ್ರಿಕದಲ್ಲಿ ನಡೆಸುತ್ತಿದ್ದ ಸತ್ಯಾಗ್ರಹ ಸಮರದ ವಿಷಯವನ್ನು ತಿಳಿಸುವುದಕ್ಕಾಗಿಯೇ. ಅವರು ಹೀಗೆ ಬರೆದರು "ನಿಮಗೆ ಪೂರ್ಣ ಅಪರಿಚಿತನಾದ ನಾನು, ಸತ್ಯದ ಹಿತಾಸಕ್ತಿಗಾಗಿ ನಿಮಗೆ ಈ ಪತ್ರ ಬರೆಯುವ ಸ್ವಾತಂತ್ರ್ಯವನ್ನು ತೆಗೆದುಕೊಂಡಿದ್ದೇನೆ. ಯಾವ ಸಮಸ್ಯೆಗಳ ಪರಿಹಾರವನ್ನು ಕಂಡು ಹಿಡಿಯುವುದನ್ನೇ ನೀವು ನಿಮ್ಮ ಬಾಳಿನ ಕೆಲಸವಾಗಿ ಮಾಡಿಕೊಂಡಿರುವಿರೋ, ಆ ಸಮಸ್ಯೆಗಳಿಗೆ ನಿಮ್ಮ ಸಲಹೆಯನ್ನು ಪಡೆಯಲು ಬರೆದಿದ್ದೇನೆ" ಟಾಲಸ್ಟಾಯ್ ರವರು ತತ್‌ಕ್ಷಣವೇ "ನಿಮ್ಮ ಪತ್ರ ನನಗೆ ತುಂಬ ಸಂತೋಷವನ್ನುಂಟು ಮಾಡಿದೆ" ಎಂದು ಬರೆದು ಗಾಂಧೀಜಿಯ ಕಾರ್ಯಗಳಿಗೆ ಪ್ರೋತ್ಸಾಹವನು ಕೊಟ್ಟರು.

ಗಾಂಧೀಜಿ, ಟಾಲಸ್ಟಾಯ್‌ಗೆ ತಮ್ಮ ಎರಡನೆಯ ಪತ್ರವನ್ನು ಲಂಡನ್‌ನಿಂದ ಬರೆದರು. ಟ್ರಾನ್ಸ್‌ವಾಲಿನ ಭಾರತೀಯರ ಹೋರಾಟದಲ್ಲಿ ಟಾಲಸ್ಟಾಯಿ ಆಸಕ್ತಿ ವಹಿಸಬೇಕೆಂಬುದೇ ಆ ಪತ್ರದ ಗುರಿಯಾಗಿದ್ದಿತು. ಗಾಂಧೀ ಹೀಗೆ ಬರೆದರು. "ಈ

ಹೋರಾಟ, ಆಧುನಿಕ ಕಾಲದ ಹೋರಾಟಗಳಲ್ಲೆಲ್ಲ ಅತ್ಯಂತ ಮಹತ್ವಪೂರ್ಣವಾದುದು. ಏಕೆಂದರೆ ಇದರಲ್ಲಿ ಧ್ಯೇಯ ಮತ್ತು ಧ್ಯೇಯಸಾಧನೆಯ ಮಾರ್ಗ ಎರಡೂ ಆದರ್ಶಪೂರ್ಣವಾಗಿವೆ...ಇದಕ್ಕೆ ಜಯ ಲಭಿಸಿದರೆ, ಇದು ಭಾರತದ ಕೋಟಿ ಸಂಖ್ಯೆಯ ಜನರಿಗೆ ಮತ್ತು ಜಗತ್ತಿನಲ್ಲಿ ತುಳಿಯಲ್ಪಟ್ಟಿರುವ ಬಹುಪಾಲು ಜನರಿಗೆ ಮೇಲುಪಂಕ್ತಿಯಾಗುವ ಸಂಭವ ತುಂಬ ಹೆಚ್ಚಾಗಿದೆ." ಎಂದು ಬರೆದರು. ಮತ್ತು ಗಾಂಧೀಜಿ. ಡೋಕರು ಬರೆದಿದ್ದ ತಮ್ಮ ಜೀವನ ಚರಿತ್ರೆಯ ಪ್ರತಿಯನ್ನೂ ಟಾಲ-ಸ್ಟಾಯ್‌ರಿಗೆ ಅವರ ಅವಗಾಹನೆಗಾಗಿ ಕಳುಹಿಸಿದರು.

ಗಾಂಧೀಜಿಗೂ ಟಾಲಸ್ಟಾಯರಿಗೂ ನಡುವೆ ೧೯೧೦ರಲ್ಲಿ ಇನ್ನೂ ಹೆಚ್ಚು ಪತ್ರ ವ್ಯವಹಾರ ನಡೆಯಿತು. ಗಾಂಧೀಜಿ ತಮ್ಮ 'ಹಿಂದ್ ಸ್ವರಾಜ್' ಪುಸ್ತಕದ ಪ್ರತಿಯನ್ನು ಟಾಲಸ್ಟಾಯ್‌ಗೆ ಕಳುಹಿಸಿದರು. ಟಾಲಸ್ಟಾಯ್ ಅದನ್ನು ಓದಿ ಮನಃಪೂರ್ವಕವಾಗಿ ಪ್ರಶಂಸಿಸಿದರು. ಏಪ್ರಿಲ್ ೨೦ರಲ್ಲಿ ಟಾಲಸ್ಟಾಯ್ ತನ್ನ ಡೈರಿಯಲ್ಲಿ ಹೀಗೆ ಬರೆದರು, "ಸಂಜೆ, ನಾಗರಿಕತೆಯನ್ನು ಕುರಿತು ಗಾಂಧೀ ಬರೆದುದನ್ನು ಓದಿದೆ. ಆಶ್ಚರ್ಯ! ಬಹಳ ಸೊಗಸು" ಮರುದಿನ ಹೀಗೆ ಬರೆದರು. "ಗಾಂಧಿಯ ಮೇಲಿನ ಪುಸ್ತಕ ಓದಿದೆ. ಬಹಳ ಪ್ರಾಮುಖ್ಯವಾದುದು. ಅವರಿಗೆ ನಾನು ಬರೆಯಬೇಕು".

ಒಬ್ಬ ಮಿತ್ರರಿಗೆ ಟಾಲಸ್ಟಾಯ್ ಹೀಗೆ ಬರೆದರು. "ಗಾಂಧಿ ನಮಗೆ ಬಹಳ ಹತ್ತಿರವಾಗಿದ್ದಾನೆ. ಅವನು ನನ್ನ ಬರಹಗಳನ್ನು ಓದಿದ್ದಾನೆ. 'ಹಿಂದುವಿಗೆ ಪತ್ರ' ಇಂಡಿಯದ ಭಾಷೆಗೆ ಅನುವಾದವಾದುದನ್ನು ಓದಿದ್ದಾನೆ. ಅವನು ತನ್ನ ಪುಸ್ತಕದ ಮೇಲೆ ನನ್ನ ಅಭಿಪ್ರಾಯವನ್ನು ಕೇಳುತ್ತಾನೆ. ನಾನು ಅವನಿಗೆ ವಿವರವಾಗಿ ಬರೆಯಲು ಬಯಸುತ್ತೇನೆ. ಅಂತಹ ಪತ್ರವನ್ನು ನೀನು ನನಗಾಗಿ ಅನುವಾದ ಮಾಡುತ್ತೀಯಾ?"

ಗಾಂಧೀ, ಟಾಲಸ್ಟಾಯ್‌ಗೆ ಮತ್ತೆ ಆಗಸ್ಟ್ ೧೫ರಂದು ಬರೆದರು. ಸೆಪ್ಟೆಂಬರ್ ೬ರ ತನ್ನ ದಿನಚರಿಯಲ್ಲಿ ಟಾಲಸ್ಟಾಯ್ ಹೀಗೆ ಬರೆದರು. "ಟ್ರಾನ್ಸ್‌ವಾಲ್‌ನಿಂದ ಸತ್ಯಾಗ್ರಹಿಗಳ ವಸಾಹತನ್ನು ಕುರಿತು ಒಳ್ಳೆಯ ಸುದ್ದಿ" ಆ ಸಂದರ್ಭದಲ್ಲಿ ಟಾಲಸ್ಟಾಯ್‌ರವರು, ತಮ್ಮ ಹೆಂಡತಿಯೊಂದಿಗೆ ಉಂಟಾದ ತೀರ ವಿರಸ ಬಾಂಧವ್ಯದಿಂದ ತುಂಬ ನಿರುತ್ಸಾಹಿಗಳಾಗಿದ್ದರು. ಅವರ ದೇಹಾರೋಗ್ಯವೂ ಅಷ್ಟು ಚೆನ್ನಾಗಿರಲಿಲ್ಲ. ಆದರೂ ಟಾಲಸ್ಟಾಯ್, ಗಾಂಧೀಜಿಯ ಕಾಗದಕ್ಕೆ, ತಾವು ಅದನ್ನು ಓದಿದ ದಿನವೇ ಜವಾಬು ಕೊಟ್ಟರು. ಟಾಲಸ್ಟಾಯ್ ಸಪ್ಟಂಬರು ೬. ೧೯೧೦ರಂದು ಬರೆದ ಕಾಗದ, ರೈಲಿನಲ್ಲಿ ತುಂಬ ಸಾವಕಾಶವಾಗಿ, ಟಾಲಸ್ಟಾಯ್ ಸ್ವರ್ಗಸ್ಥರಾಗುವುದಕ್ಕೆ ಕೆಲವು ವಾರಗಳ ಮುಂಚೆ ಮಾತ್ರ ಗಾಂಧೀಜಿಗೆ ತಲಪಿತು. ಈ ಕೆಳಗಿನದು ರಷ್ಯನ್ ಮೂಲದಿಂದ ಅನುವಾದ:

"ನಿಮ್ಮ ಪತ್ರಿಕೆ ತಲಪಿತು. ಅದರಲ್ಲಿ ಸತ್ಯಾಗ್ರಹಿಗಳ ವಿಷಯದಲ್ಲಿರುವುದನ್ನೆಲ್ಲ ಓದಿ ಸಂತೋಷ ಪಟ್ಟೆ. ಅದನ್ನು ಓದಿದುದರಿಂದ, ನನ್ನ ಮನಸ್ಸಿನಲ್ಲಿ ಉದ್ಭವವಾದ ಯೋಚನೆಗಳನ್ನೆಲ್ಲ ನಿನಗೆ ಹೇಳಬೇಕೆಂದು ನನಗೆ ಅನಿಸಿತು.

"ನಾನು ಬದುಕಿರುವಷ್ಟು ಕಾಲವೂ, ಅದರಲ್ಲಿಯೂ ಮರಣ ಈಗ ಅತ್ಯಂತ

ಹತ್ತಿರವಾಗುತ್ತಿರುವುದು ನನಗೆ ಅನುಭವವಾಗುತ್ತಿರುವಾಗ– ನಾನು ನನಗೆ ವಿಶೇಷ ವಾಗಿ ಸ್ಪಷ್ಟವಾಗಿರುವ ಮತ್ತು ನನ್ನ ಮನಸ್ಸಿಗೆ ಅತ್ಯಂತ ಪ್ರಾಮುಖ್ಯವಾದುದೆಂದು ತೋರುವ ವಿಷಯವನ್ನು ಇತರರಿಗೆ ಹೇಳಬಯಸುತ್ತೇನೆ. ಅದೇ ಸವಿನಯ ಪ್ರತಿ ಭಟನೆ ಎಂಬುದು. ಅದು ಮತ್ತೇನೂ ಅಲ್ಲ; ಶುದ್ಧವಾದ ಪ್ರೇಮ; ಅಶುದ್ಧವಾದ ಮತ್ತು ತಪ್ಪು ಅರ್ಥಗಳಿಂದ ಕಲುಷಿತವಾಗದ ಪ್ರೇಮ. ಜನತೆಯ ಆತ್ಮಗಳನ್ನು ಬಂಧಿ ಸುವ, ಮತ್ತು ಅದರಿಂದ ಉಂಟಾಗುವ ಕಾರ್ಯಗಳುಳ್ಳ ಪ್ರೇಮವೇ ಮನುಷ್ಯನ ಬಾಳುವೆಯ ಒಂದೇ ಧರ್ಮ. ಮತ್ತು ಪ್ರತಿಯೊಬ್ಬ ಮಾನವನೂ ತನ್ನ ಹೃದಯಾಂತರಾಳದಲ್ಲಿ (ನಾವು ಮಕ್ಕಳಲ್ಲಿ ಅತಿಸ್ಪಷ್ಟವಾಗಿ ಕಾಣುವಂತೆ) ಇದನ್ನು ತಿಳಿದಿದ್ದಾನೆ; ಮತ್ತು ಅನು ಭವಿಸುತ್ತಾನೆ. ಈ ಧರ್ಮವನ್ನೇ ಜಗತ್ತಿನ ಎಲ್ಲರೂ ಎತ್ತಿ ಸಾರಿ ಹೇಳಿದರು –ಭಾರ ತೀಯರು, ಚೀಣರು ಹೀಬ್ರೂಗಳು ಗ್ರೀಕರು ಮತ್ತು ರೋಮ್‌ನ ಸಾಧುಗಳು. ಈ ಧರ್ಮವನ್ನು ಕ್ರೈಸ್ತನು ಅತ್ಯಂತ ಸ್ಪಷ್ಟವಾಗಿ ವಿವರಿಸಿದನು. ಅವನು ಎಲ್ಲರಿಗೂ ತಿಳಿ ಯುವಂತೆ ‹ಎಲ್ಲ ಧರ್ಮವೂ ಮತ್ತು ಸಂತರೂ ಪ್ರವಾದಿಗಳೂ ಪ್ರೇಮದಲ್ಲಿಯೇ ಇದ್ದಾರೆ' ಎಂದು ಸ್ಪಷ್ಟವಾಗಿ ಹೇಳಿದನು.

"ಆದರೆ ಕ್ರಿಸ್ತ ಈ ನಿಯಮಕ್ಕೆ (ಧರ್ಮಕ್ಕೆ) ಒದಗಬಹುದಾದ ಅತ್ಯಾಚಾರವನ್ನು ಊಹಿಸಿ, ಆ ಅತ್ಯಾಚಾರಕ್ಕೆ ನೇರವಾಗಿ ಬೆರಳು ಮಾಡಿ ತೋರಿಸಿದನು. ಧರ್ಮವನ್ನು ಕಲುಷಿತ ಮಾಡುವುದು ಪ್ರಾಪಂಚಿಕ ಆಸಕ್ತಿಗಳುಳ್ಳವರಿಗೆ ಸ್ವಾಭಾವಿಕ. ಧರ್ಮಕ್ಕೆ ಅಪಾಯ ಯಾವುದೆಂದರೆ ಆತ್ಮ ರಕ್ಷಣೆಗಾಗಿ ಬಲಪ್ರಯೋಗ ಮಾಡಬೇಕೆನ್ನುವುದು, ಅಥವಾ ಕ್ರಿಸ್ತನೇ ಹೇಳಿದಂತೆ 'ಏಟಿಗೆ ಉತ್ತರ ಏಟು;' ಅಪಹರಿಸಿಕೊಂಡ ವಸ್ತುಗಳನ್ನು ಬಲಪ್ರಯೋಗದಿಂದ ಹಿಂದಕ್ಕೆ ಪಡೆಯಬೇಕು ಎನ್ನುವುದು ಎಲ್ಲ ಬುದ್ಧಿವಂತರಿಗೂ ಗೊತ್ತಿರುವಂತೆ ಕ್ರಿಸ್ತನಿಗೂ ಗೊತ್ತಿದ್ದಿತು. ಏನೆಂದರೆ, ಬಾಳಿನ ಮೂಲಭೂತ ಧರ್ಮಕ್ಕೆ ಬಲಪ್ರಯೋಗ ಅಸಂಬದ್ಧವಾದುದು. ಮತ್ತು ಯಾವುದೇ ಸಂದರ್ಭದಲ್ಲಾಗಲೀ ಹಿಂಸೆಗೆ ಅವಕಾಶವನ್ನು ಕೊಟ್ಟರೆ ಧರ್ಮದ ದೌರ್ಬಲ್ಯವನ್ನು ಒಪ್ಪಿಕೊಂಡಂತೆ. ಅದರಿಂದ ಧರ್ಮವನ್ನು ತಿರಸ್ಕರಿಸಿದಂತೆ. ಹೊರನೋಟಕ್ಕೆ ಇಷ್ಟು ಉಜ್ವಲವಾಗಿ ತೋರುವ ಕ್ರಿಸ್ತನಾಗರಿಕತೆ ಪೂರ್ಣವಾಗಿ, ಈ ಕಣ್ಣಿಗೆ ಕಾಣುವ ತಪ್ಪು ತಿಳಿವಳಿಕೆ ಮತ್ತು ಪರಸ್ಪರ ವಿರುದ್ಧತೆಯ ಮೇಲೆ ತಿಳಿದೋ ತಿಳಿಯದೆಯೋ, ಹೆಚ್ಚಾಗಿ ತಿಳಿ ಯದೆಯೇ, ಬೆಳೆಯಿತು.

"ವಾಸ್ತವವಾಗಿ ಪ್ರೇಮದ ಪ್ರಪಂಚಕ್ಕೆ ಬಲವನ್ನು ಪ್ರವೇಶಗೊಳಿಸಿದ ಕೂಡಲೇ ಅಲ್ಲಿ ಪ್ರೇಮ ಉಳಿಯಲೇ ಇಲ್ಲ. ಆಗ ಪ್ರೇಮ, ಜೀವನದ ಧರ್ಮವಾಗುವುದೇ ಇಲ್ಲ; ಪ್ರೇಮದ ಧರ್ಮವೇ ಇಲ್ಲದ ಮೇಲೆ, ಹಿಂಸೆಯ ಹೊರತು ಮತ್ತಾವ ಧರ್ಮವೂ ಅತ್ಯಂತ ಶಕ್ತನ ಬಲದ ಹೊರತು ಉಳಿಯಲಿಲ್ಲ. ಕ್ರಿಶ್ಚಿಯನ್ ಜನಾಂಗ ಹೀಗೆ ಹತ್ತೊಂ ಬತ್ತು ನೂರು ವರುಷಗಳು ಬಾಳಿದೆ. ಎಲ್ಲ ಕಾಲದಲ್ಲಿಯೂ ತಮ್ಮ ಬಾಳನ್ನು ರೂಪಿಸಿ ಕೊಳ್ಳುವುದರಲ್ಲಿ ಜನ ಹಿಂಸೆಯ ಮಾರ್ಗದರ್ಶನವಲ್ಲಿ ಬಾಳಿದರೆಂಬುದು ನಿಜ.

ಕ್ರೈಸ್ತಧರ್ಮವನ್ನು ಅನುಸರಿಸುವ ರಾಷ್ಟ್ರಗಳಿಗೂ ಇತರ ರಾಷ್ಟ್ರಗಳಿಗೂ ಇರುವ ವ್ಯತ್ಯಾಸವೆಂದರೆ, ಕ್ರಿಸ್ತ ಜಗತ್ತಿನಲ್ಲಿ ಮಾತ್ರ ಪ್ರೇಮಧರ್ಮ ಸ್ಪಷ್ಟವಾಗಿ ನಿಖರವಾಗಿ ಹೇಳಲ್ಪಟ್ಟಿತು. ಮತ್ತಾವ ಮತಗಳಲ್ಲಿಯೂ ಅದು ಅಷ್ಟು ಸ್ಪಷ್ಟವಾಗಿ ಹೇಳಲ್ಪಡಲಿಲ್ಲ. ಮತ್ತು ಕ್ರಿಸ್ತ ರಾಷ್ಟ್ರಗಳ ಜನರು ಈ ಧರ್ಮವನ್ನು ಗಂಭೀರವಾಗಿ ಒಪ್ಪಿಕೊಂಡಿದ್ದರೂ ಹಿಂಸೆಗೆ ಅವಕಾಶವನ್ನು ಕೊಟ್ಟು, ಹಿಂಸೆಯ ಮೇಲೆಯೇ ತಮ್ಮ ಬಾಳನ್ನು ಕಟ್ಟಿ ಕೊಂಡಿದ್ದಾರೆ. ಕ್ರೈಸ್ತ ಜನರ ಜೀವನ, ತಾವು ಏನನ್ನು ಹೇಳಿಕೊಳ್ಳುತ್ತಾರೆಯೋ ಮತ್ತು ಜೀವನ ಕ್ರಮವನ್ನು ಯಾವ ತತ್ವಗಳ ಮೇಲೆ ರೂಪಿಸಿಕೊಳ್ಳುತ್ತೇವೆಂದು ಹೇಳು ತ್ತಾರೆಯೋ ಇವೆರಡರ ನಡುವಿನ ಪರಸ್ಪರ ವಿರುದ್ಧತೆಗಳೇ ಆಗಿವೆ. ಇದು ಪ್ರೇಮವೇ ಜೀವನದ ಧರ್ಮವೆಂದು ಒಪ್ಪಿಕೊಂಡರೂ, ಹಿಂಸೆಯ ಅಂಗೀಕಾರ ಮತ್ತು ಹಿಂಸೆಯ ಪ್ರಶಂಸೆ–ಹಿಂಸೆಯು ಜೀವನದ ನಾನಾ ರಂಗದಲ್ಲಿ ಅಂದರೆ ಆಳ್ವಿಕೆಗಾರರ ಅಧಿಕಾರ, ನ್ಯಾಯಸ್ಥಾನಗಳು ಸೈನ್ಯಶಕ್ತಿ ಇವುಗಳಲ್ಲಿ ಆವಶ್ಯಕವೆನ್ನುವುದು—ಇವೇ ಆ ಪರಸ್ಪರ ವಿರುದ್ಧತೆಗಳಾಗಿವೆ. ಈ ವಿರುದ್ಧತೆಗಳು ಯಾವಾಗಲೂ ಕ್ರಿಸ್ತಪ್ರಪಂಚದ ಜನತೆಯ ಅಭಿವೃದ್ಧಿಯೊಂದಿಗೇ ಬೆಳೆಯುತ್ತ ಬಂದು ಈಚೀಚಿಗೆ ಅದರ ಅಂತ್ಯಘಟ್ಟವನ್ನು ಮುಟ್ಟಿವೆ.

"ಈಗ ಪ್ರಶ್ನೆ, ಸ್ಪಷ್ಟವಾಗಿ ಹೀಗೆ ನಿಲ್ಲುತ್ತದೆ: ಇಲ್ಲವೇ ನಾವು ಕ್ರಿಸ್ತನ ಬೋಧನೆ ಗಳನ್ನು ಅಂಗೀಕರಿಸುವುದೇ ಇಲ್ಲ ಎಂದು ಹೇಳುವುದು; ಅಥವಾ ನಮ್ಮ ಬಾಳನ್ನು ಹೆಚ್ಚು ಶಕ್ತಿಯ ಆಧಾರದ ಮೇಲೆ ರೂಪಿಸುತ್ತೇವೆ ಎನ್ನುವುದು; ಇಲ್ಲವಾದರೆ ಈ ಬಲಾ ತ್ಕಾರ ತೆರಿಗೆ, ನ್ಯಾಯಸ್ಥಾನ, ಪೋಲೀಸು ಇಲಾಖೆಗಳು–ಮುಖ್ಯವಾಗಿ ಸೈನ್ಯ–ಇವನ್ನೆಲ್ಲ ತೆಗೆದು ಹಾಕುವುದು.

"ಈ ವರುಷದ ವಸಂತ ಕಾಲದಲ್ಲಿ, ಮಾಸ್ಕೋವಿನ ಒಂದು ಮಹಿಳಾ ಪ್ರೌಢ ಶಾಲೆಯಲ್ಲಿ ಬೈಬಲ್ ಮೇಲೆ ಒಂದು ಪರೀಕ್ಷೆ ನಡೆಯಿತು. ಅಲ್ಲಿದ್ದ ಉಪಾಧ್ಯಾಯರು ಮತ್ತು ಪಾದ್ರಿಯು ವಿದ್ಯಾರ್ಥಿನಿಯರನ್ನು ಕ್ರಿಸ್ತನ ಹತ್ತು ಆಜ್ಞೆಗಳ ಮೇಲೆ– ಮುಖ್ಯವಾಗಿ "ನೀನು ಕೊಲ್ಲ ಕೂಡದು" ಎಂಬ ಆರನೆಯ ಆಜ್ಞೆಯ ಮೇಲೆ ಪ್ರಶ್ನೆ ಕೇಳಿದರು. ಸರಿಯಾದ ಉತ್ತರ ಕೊಟ್ಟ ಮೇಲೆಯೂ ಸಹ ಪಾದ್ರಿಯು ಮತ್ತೊಂದು ಪ್ರಶ್ನೆಯನ್ನು ಹಾಕುತ್ತಿದ್ದನು. 'ಕೊಲ್ಲುವುದು ಎಲ್ಲ ಕಾಲದಲ್ಲಿಯೂ ತಪ್ಪೆಂದು ದೇವರು ಹೇಳಿದ್ದಾನೆಯೇ?' ಎಂದು. ಕಷ್ಟಕ್ಕೆ ಸಿಕ್ಕಿಕೊಂಡ ಆ ಹೆಣ್ಣುಗಳು, ಮೊದಲೇ ತಮಗೆ ಹೇಳಿ ಕೊಟ್ಟಿದ್ದಂತೆ 'ಎಲ್ಲ ಕಾಲದಲ್ಲಿಯೂ ಅಲ್ಲ–ಯುದ್ಧದಲ್ಲಿಯೂ ತಪ್ಪಿತಸ್ಥರನ್ನು (ಕೋರ್ಟಿನಲ್ಲಿ ಮರಣದಂಡನೆಗೆ ಗುರಿಯಾದವರನ್ನು) ಕೊಲ್ಲುವುದಕ್ಕೂ ಅನುಮತಿ ಯಿದೆ' ಎಂದು ಉತ್ತರಿಸಬೇಕಾಯಿತು. ನಾನು ಹೇಳುತ್ತಿರುವುದು ಕಥೆಯಲ್ಲ. ನಡೆದ ಸಂಗತಿ. ಕಣ್ಣಾರ ಕಂಡವರು ನನಗೆ ಹೇಳಿದುದು. ಪ್ರಥಮ ಪರೀಕ್ಷೆಯಾದ ಮೇಲೆ, ಮತ್ತೆ ಹುಡುಗಿಯನ್ನು ಅದೇ ಪ್ರಶ್ನೆ ಕೇಳಿದರು. 'ಕೊಲ್ಲುವುದು, ಯಾವಾಗಲೂ ಪಾಪವೆ?" ಅವಳು ವಿಚಲಿತಳಾಗಿ ನಾಚಿಕೆಯಿಂದ 'ಯಾವಾಗಲೂ' ಎಂದಳು.ಪಾದ್ರಿಯು

ಎಲ್ಲ ಕುತರ್ಕಗಳಿಗೂ ಅವಳು ಖಂಡಿತವಾದ ನಂಬಿಕೆಯಿಂದ 'ಹಳೆಯ ಒಡಂಬಡಿಕೆ ಯಲ್ಲಿ ಕೊಲ್ಲುವುದನ್ನು ಯಾವಾಗಲೂ ಪ್ರತಿಷೇಧಿಸಿದೆ. ಕೊಲ್ಲುವುದನ್ನು ಮಾತ್ರವೇ ಅಲ್ಲ. ಕ್ರಿಸ್ತನು ಅಣ್ಣ ತಮ್ಮಂದಿರಿಗೆ (ಜನರಿಗೆ) ಯಾವ ಕೇಡು ಮಾಡುವುದನ್ನೂ ನಿಷೇಧಿಸಿದ್ದಾನೆ' ಎಂದಳು. ತನ್ನ ವಾಗ್ವೈಖರಿಯ ಕಲೆ ಎಷ್ಟಿದ್ದರೂ, ಪಾದ್ರಿಯ ಬಾಯಿ ಕಟ್ಟಿ ಹೋಯಿತು. ಹುಡುಗಿಯೇ ಜಯಶೀಲಳಾದಳು.

"ಹೌದು; ನಾವು ನಮ್ಮ ಪತ್ರಿಕೆಗಳಲ್ಲಿ ಆಕಾಶಯಾನದ ಬೆಳವಣಿಗೆ, ತೊಡಕಾದ ರಾಜಕೀಯ ಸಂಬಂಧಗಳು, ಬೇರೆ ಬೇರೆ ಕ್ಲಬ್ ಮತ್ತು ಸಭೆಗಳು, ನಾನಾ ಬಗೆಯ ಸಂಘ ಗಳು, ಕಲಾಕೃತಿಗಳೆನಿಸಿಕೊಳ್ಳುವುವು—ಇವುಗಳ ವಿಷಯವನ್ನೆಲ್ಲ ಮಾತನಾಡುತ್ತ ಆ ತರುಣಿ ಹೇಳಿದ ವಿಷಯಕ್ಕೆ ಮೌನವಾಗಿರಬಹುದು. ಆದರೆ ಅದನ್ನು ಬರಿಯ ಮೌನ ದಿಂದ ನಿವಾರಿಸಲು ಸಾಧ್ಯವಿಲ್ಲ. ಏಕೆಂದರೆ ಕ್ರಿಸ್ತಪ್ರಪಂಚದಲ್ಲಿ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಕಡಿಮೆಯಾಗಿಯೋ ಹೆಚ್ಚಾಗಿಯೋ ಅದು ಯಾವಾಗಲೂ ಕೆಲಸ ಮಾಡುತ್ತಿರುತ್ತದೆ. ಸಮತಾವಾದ ಸಮಾಜವಾದ ಅರಾಜಕತಾವಾದ. ಸಾಲ್ವೇಶನ್ ಸೈನ್ಯ, ಹೆಚ್ಚುತ್ತಿರುವ ದುಷ್ಕೃತ್ಯಗಳು, ನಿರುದ್ಯೋಗ, ಬೆಳೆಯುತ್ತಿರುವ ಧನಿಕರ ಹುಚ್ಚು ಭೋಗ, ಬಡವರ ಕಷ್ಟ ಅತಿಯಾಗಿ ಹೆಚ್ಚುತ್ತಿರುವ ಆತ್ಮಹತ್ಯೆಗಳು–ಇವೆಲ್ಲ ಆ ಮಾನಸಿಕ ಪರಸ್ಪರ ವಿರುದ್ಧತೆಯ ತೊಳಲಾಟದ ಗುರುತು ಗಳು. ಇವು ಒಮ್ಮೆ ತೀರ್ಮಾನವಾಗಬೇಕೆ ಹೊರತು, ತೀರ್ಮಾನಿಸದೆ ಹಾಗೆಯೇ ಬಿಡುವಂಥವು ಗಳಲ್ಲ. ಮತ್ತು ಅವುಗಳನ್ನು ತೀರ್ಮಾನಿಸುವಾಗ ಪ್ರೇಮ ಧರ್ಮಗಳನ್ನು ಅಂಗೀಕರಿಸಿ ಹಿಂಸೆಯನ್ನು ನಿರಾಕರಿಸಿ ತೀರ್ಮಾನಿಸಬೇಕು.

"ಆದುದರಿಂದ ಟ್ರಾನ್ಸ್‌ವಾಲ್‌ನಲ್ಲಿ ನಿಮ್ಮ ಕಾರ್ಯಕ್ರಮ. ಪ್ರಪಂಚದ ಈ ಕೊನೆ ಯಲ್ಲಿರುವ ನಮಗೆ ಅತ್ಯಂತ ಮುಖ್ಯವಾದ ಕಾರ್ಯವಾಗಿ ತೋರುತ್ತದೆ. ಪ್ರಪಂಚದಲ್ಲಿ ನಡೆಯುತ್ತಿರುವ ಕಾರ್ಯಗಳಲ್ಲೆಲ್ಲ ಅದು ಅತ್ಯಂತ ಪ್ರಾಮುಖ್ಯವಾದುದು ಅದರಲ್ಲಿ ಕ್ರಿಸ್ತರಾಷ್ಟ್ರಗಳು ಮಾತ್ರವೇ ಅಲ್ಲ. ಜಗತ್ತಿನ ಇತರ ಎಲ್ಲ ರಾಷ್ಟ್ರಗಳೂ ಅನಿವಾರ್ಯವಾಗಿ ಭಾಗವಹಿಸುವುವು.

"ಇಲ್ಲಿ, ರಷ್ಯದಲ್ಲಿಯೂ ಈ ಚಟುವಟಿಕೆ ತೀವ್ರವಾಗಿ ಬೆಳೆಯುತ್ತಿದೆ ಎಂಬುವನ್ನು ತಿಳಿಯಲು ನಿಮಗೆ ಸಂತೋಷವಾಗಬಹುದು. ಸೈನ್ಯದಲ್ಲಿ ಯುದ್ಧಮಾಡಲು ತಿರಸ್ಕರಿ ಸುವವರ ಸಂಖ್ಯೆ ವರುಷದಿಂದ ವರುಷಕ್ಕೆ ಹೆಚ್ಚುತ್ತಿರುವುದೇ ಈ ಮಾರ್ಗವಾಗಿದೆ. ರಷ್ಯದಲ್ಲಿ ಸವಿನಯ ಕಾನೂನು ಭಂಗ ಮಾಡಿ ಸೈನ್ಯದಲ್ಲಿ ಸೇವೆ ಮಾಡಲು ನಿರಾಕರಿ ಸಿರುವವರ ಸಂಖ್ಯೆ, ಎಷ್ಟೇ ಕಡಿಮೆಯಾಗಿರಲಿ, ದೇವರು ತಮ್ಮೊಂದಿಗೆ ಇದ್ದಾನೆಂದು ಅವರು ಧೈರ್ಯವಾಗಿ ಹೇಳಬಹುದು. ಮತ್ತು ದೇವರಿಗಿಂತ ಮನುಷ್ಯ ಹೆಚ್ಚು ಶಕ್ತ.

"ಕ್ರೈಸ್ತ ಧರ್ಮವನ್ನು–ಅದು ಕ್ರಿಸ್ತರಾಷ್ಟ್ರಗಳಲ್ಲಿ ಆಚರಣೆಯಲ್ಲಿರುವ ದೋಷ ಪೂರ್ಣವಾದ ರೂಪದಲ್ಲಿ ಸಹ–ಒಪ್ಪಿಕೊಳ್ಳುವುದರಲ್ಲಿ, ಮತ್ತು ಅದೇ ಕಾಲದಲ್ಲಿ ಯುದ್ಧದಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಜನರನ್ನು ಕೊಲ್ಲಲು ಸೈನ್ಯಗಳನ್ನೂ ಯುದ್ಧೋ

ಪಕರಣಗಳನ್ನೂ ಒಪ್ಪಿಕೊಳ್ಳುವುದರಲ್ಲಿ ಸಹ, ಸ್ಪಷ್ಟವಾಗಿ ಎದ್ದು ಕಾಣುವ ಪರಸ್ಪರ ವಿರುದ್ಧತೆ ಇದೆ. ಈ ವಿರುದ್ಧತೆ ನಿಧಾನವಾಗಿಯೋ ಬೇಗವೋ–ಪ್ರಾಯಶಃ ಬೇಗವೇ–ಕ್ರಿಸ್ತ ಧರ್ಮದ ಅಂಗೀಕಾರವನ್ನೇ ನಾಶ ಮಾಡಿಬಿಡಬಹುದು. ಈ ಸೈನ್ಯ ಮುಂತಾದವು ಅದಕ್ಕೆ ಅನಿವಾರ್ಯವಾದ ಅಥವಾ ಅದರ ಅಧಿಕಾರಕ್ಕೆ ಆವಶ್ಯಕವಾದ ಸೈನ್ಯ, ಹಿಂಸಾ ಪ್ರವೃತ್ತಿ, ಇವುಗಳನ್ನು ನಾಶ ಮಾಡಬಹುದು. ಈ ಅಸಂಬದ್ಧತೆ ಎಲ್ಲ ಸರ್ಕಾರಗಳಿಗೂ ಅನುಭವವಾಗುತ್ತಿದೆ ನಿಮ್ಮ ಬ್ರಿಟಿಷ್ ಸರ್ಕಾರಕ್ಕೆ ನಮ್ಮ ರಷ್ಯನ್ ಸರ್ಕಾರಕ್ಕೆ ಸಹ. ತಾವು ಉಳಿದುಕೊಳ್ಳಬೇಕೆಂಬ ಆತ್ಮರಕ್ಷಣೆಯ ಉದ್ದೇಶದಿಂದ ಸರ್ಕಾರವನ್ನು ಎದುರಿಸುವವರ ಮೇಲೆ– ಇಲ್ಲಿ ರಷ್ಯಾದಲ್ಲಿ ಮತ್ತು ನೀವು ಪತ್ರಿಕೆಯಲ್ಲಿ ಸಮೂದಿಸಿರುವಂತೆ ಅಲ್ಲಿ–ಸರ್ಕಾರಗಳು ತಮ್ಮ ವಿರೋಧಿಗಳ ಮೇಲೆ ವಿರೋಧಿಗಳ ಪ್ರತಿಭಟನೆಗಿಂತ ಹೆಚ್ಚು ಜೋರಾದ ಮತ್ತು ಶಕ್ತಿಯುತವಾದ ಹಿಂಸಾ ಪ್ರವೃತ್ತಿಯನ್ನು ನಡೆಸುತ್ತಿವೆ. ತಮಗೆ ಮುಖ್ಯ ಅಪಾಯ ಎಲ್ಲಿದೆ ಎಂಬುದು ಸರ್ಕಾರಗಳಿಗೆ ಗೊತ್ತು. ಅವರು ಎಚ್ಚರಿಕೆಯಿಂದ ತಮ್ಮ ಹಿತಾಸಕ್ತಿಗಳನ್ನು ಮಾತ್ರವೇ ಅಲ್ಲ, ಇರಬೇಕೇ ಬೇಡವೇ ಎಂಬ ಪ್ರಶ್ನೆಯನ್ನೂ ಕಾಯ್ದುಕೊಳ್ಳುತ್ತಾರೆ".

ಟಾಲಸ್ಟಾಯ್ ೧೯೧೦ರ ನವೆಂಬರ್ ೨೦ ರಂದು ತೀರಿಕೊಂಡಾಗ "ಇಂಡಿಯನ್ ಒಪಿನಿಯನ್" ಹೀಗೆ ಬರೆಯಿತು.

"ದಿವಂಗತ ಕೌಂಟ್ ಲಿಯೋ ಟಾಲಸ್ಟಾಯ್ ವಿಷಯದಲ್ಲಿ ನಾವು ಗೌರವ ಪೂಜ್ಯತೆಯಿಂದ ಮಾತ್ರ ಬರೆಯ ಬಲ್ಲೆವು. ನಮ್ಮ ಮಟ್ಟಿಗೆ ಅವರು ಈ ಯುಗದ ಅತ್ಯಂತ ಮಹದ್ವ್ಯಕ್ತಿಗಿಂತ ಹೆಚ್ಚಾಗಿದ್ದರು. ನಾವು ಸಾಧ್ಯವಾದಷ್ಟು ಮಟ್ಟಿಗೆ, ಅವರ ಬೋಧನೆಯನ್ನು ಆಚರಿಸಲು ಪ್ರಯತ್ನಿಸಿದ್ದೇವೆ. ಅವರ ಭೌತದೇಹದ ಅಂತ್ಯ, ಅವರು ತಮ್ಮ ಅದ್ವಿತೀಯ ಮಾರ್ಗದಲ್ಲಿ ಪ್ರಾರಂಭಿಸಿದ ಮಾನವೀಯತೆಯ ಕಾರ್ಯಕ್ಕೆ ಕೊನೆಯ ಸ್ಪರ್ಶವನ್ನು ಮಾತ್ರ ಕೊಟ್ಟಿತು. ಟಾಲಸ್ಟಾಯ್ ಸತ್ತಿಲ್ಲ. ಅವರು ಜಗತ್ತಿನಲ್ಲೆಲ್ಲ ಇರುವ ತಮ್ಮ ಅಸಂಖ್ಯಾತ ಅನುಯಾಯಿಗಳಲ್ಲಿ ಜೀವಿಸುತ್ತಿದ್ದಾರೆ. ಕಾಲ ಕಳೆದಂತೆ ಅವರ ಉಪದೇಶಗಳು ಮನುಷ್ಯ ಸಮಾಜದಲ್ಲಿ ಹೆಚ್ಚು ಹೆಚ್ಚಾಗಿ ಹರಡುವುವೆಂದು ನಾವು ದೃಢವಾಗಿ ನಂಬುತ್ತೇವೆ. ಕ್ರಿಸ್ತನ ಭಕ್ತರಾದರೂ, ಅವರು ಕ್ರಿಸ್ತಧರ್ಮವನ್ನು ಮಾತ್ರವೇ ಅನುಷ್ಠಿಸಿ ವ್ಯಾಖ್ಯಾನಿಸಲಿಲ್ಲ. ಅಂತಿಯೇ ಅವರು ಜಗತ್ತಿನ ಮೂಲವಾದ ಮಹಾನ್ ಧರ್ಮದ ತಿರುಳಿನ ಕಾರ್ಯಕಾರೀ ದರ್ಶನವನ್ನೂ ಕೊಟ್ಟರು. ಮತ್ತು ಅವರು ಇಂದಿನ ನಾಗರಿಕತೆ ಹೇಗೆ ಬಲದ ಮೇಲೆ ಅವಲಂಬಿಸಿದೆ, ಇದು ಹೇಗೆ ಮನುಷ್ಯನಲ್ಲಿರುವ ದೇವತ್ವದ ನಿರಾಕರಣೆ: ಎಂಬುದನ್ನು ತೋರಿಸಿದರು ಮತ್ತು ಮನುಷ್ಯ ತನ್ನ ಪೂರ್ಣತೆಗೆ ಏರುವುದಕ್ಕೆ ಮುಂಚೆ ಹೇಗೆ ತನ್ನ ಎಲ್ಲ ಕಾರ್ಯಗಳಲ್ಲಿಯೂ ನಿತ್ಯಜೀವನದಲ್ಲಯೂ ಪಶುಶಕ್ತಿಗೆ ಬದಲಾಗಿ ಪ್ರೇಮವನ್ನು ಬೆಳೆಸಬೇಕು ಎಂಬುದನ್ನು ಬೋಧಿಸಿದರು. ನಾವು ಮೊದಲನೆಯ ಪುಟದಲ್ಲಿ ಮುದ್ರಿಸಿರುವ ಗಾಂಧಿಗೆ ಬರೆದ ಅವರ ಪತ್ರ ಅವರ ಲೇಖನಿಯಿಂದ ಪ್ರವಹಿಸಿದ ಕಡೆಯ ಪತ್ರಗಳಲ್ಲಿ ಒಂದು. ಆ ಪತ್ರದಲ್ಲಿ ಅವರು ತಮ್ಮ ಅಂತ್ಯದ

ಸೂಚನೆಯನ್ನು ಕೊಟ್ಟರು. ಯಸ್ನಾ ಪಾಲ್ಯಾನದ ಋಷಿಯು (ಟಾಲಸ್ಟಾಯ್) ಟ್ರಾನ್ಸ್‌ವಾಲ್ ಹೋರಾಟ ಜಾಗತಿಕ ಪ್ರಸಿದ್ಧಿಯ ಅಂಶವೆಂದು ಪರಿಗಣಿಸಿದ್ದುದು. ವಿಶಾಲವಾದ ಭಾರತದ ಸತ್ಯಾಗ್ರಹಿಗಳಿಗೆ ಹೆಚ್ಚಾದ ಉತ್ತೇಜನ ಮತ್ತು ವಿಷಾದ ಪೂರಿತ ಸಮಾಧಾನವನ್ನು ತರಬೇಕು”.

ಬಿರುಗಾಳಿಗೆ ಮುಂಚೆ ಶಾಂತಿ

೧೯೧೧

ಟಾಲಸ್ಟಾಯ್ ಫಾರಂ, ಸತ್ಯಾಗ್ರಹಿಗಳಿಗೆ ಸೌಭಾಗ್ಯವಾಯಿತು. ಅದು ಅವರಿಗೆ ತರಪೇತಿ ಕೇಂದ್ರವೂ ಆಶ್ರಯ ಸ್ಥಾನವೂ ಆಯಿತು. ಗಾಂಧೀಜಿ, ಅಲ್ಲಿಂದ ತಮ್ಮ ಕಾರ್ಯಗಳನ್ನೆಲ್ಲ ನಡೆಸುತ್ತಿದ್ದರು. ಅವರ ಸ್ವಾರ್ಥರಹಿತ ನಾಯಕತ್ವ ದಕ್ಷಿಣ ಆಫ್ರಿಕದಲ್ಲಿದ್ದ ಏಷ್ಯಾದವರನ್ನೆಲ್ಲ ಸ್ಫೂರ್ತಿಗೊಳಿಸುತ್ತಿದ್ದಿತು.

ಜನವರಿ ೧೯೧೧ರಲ್ಲಿ ಮಿ। ಕ್ವಿನ್‌ರವರು–ಅವರನ್ನು ಅನ್ಯಾಯವಾಗಿ ಸಿಲೋನ್‌ಗೆ ಗಡಿಪಾರು ಮಾಡಿದ್ದರು—ಟ್ರಾನ್ಸ್‌ವಾಲಿಗೆ ಹಿಂದಿರುಗಿದರು. ಜನವರಿ ೧೩ರಂದು ಅವರು ಟಾಲಸ್ಟಾಯ್ ಫಾರಂಗೆ ಗಾಂಧಿಯೊಂದಿಗೆ ಮಾತುಕಥೆಯಾಡಲು ಹೋದರು. ಜನವರಿ ೧೯ರಂದು ಅವರ ಬಳಿ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಇಲ್ಲದುದರಿಂದ, ಅವರಿಗೆ ಮೂರು ತಿಂಗಳು ಸಜ ವಿಧಿಸಲಾಯಿತು.

ಇಂಡಿಯ, ದಕ್ಷಿಣ ಆಫ್ರಿಕದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತಿಯನ್ನು ಮುಂದುವರಿಸುತ್ತಿತ್ತು. ಆದರೆ ಭಾರತದ ಪತ್ರಿಕೆಗಳು ಕರಾರುಬದ್ಧ ಕೂಲಿಗಳ ವಿಷಯದಲ್ಲಿ ಅನುಸರಿಸಿದ ಧೋರಣೆಯಿಂದ ಗಾಂಧಿಗೆ ಸಮಾಧಾನವಾಗಲಿಲ್ಲ. ಫೆಬ್ರುವರಿ ೨೫ರ ಇಂಡಿಯನ್ ಒಪಿನಿಯನ್‌ನಲ್ಲಿ ಅವರು ಹೀಗೆ ಹೇಳಿದರು. ಭಾರತದ ಗವರ್ನರ್ ಜನರಲ್ಲರು, ದಕ್ಷಿಣ ಆಫ್ರಿಕಕ್ಕೆ ಕೂಲಿಗಾಗಿ ಭಾರತೀಯರನ್ನು ರವಾನಿಸುವುದನ್ನು ನಿಲ್ಲಿಸುವ ಕುರಿತು ತೆಗೆದುಕೊಂಡ ಕಾರ್ಯಕ್ರಮದ ಮೇಲೆ, ಭಾರತದ ನಮ್ಮ ಸಹೋದ್ಯೋಗಿಗಳ (ಪತ್ರಿಕೆಗಳ) ಸಂಪಾದಕೀಯ ಟಿಪ್ಪಣಿಗಳನ್ನು ನಾವು ಎಚ್ಚರಿಕೆಯಿಂದ ವ್ಯಾಸಂಗ ಮಾಡಿದ್ದೇವೆ. ಅದರ ಉಪಯುಕ್ತ ಸಾರಾಂಶವನ್ನು ನಮ್ಮ ವಾಚಕರಿಗೆ ಕೊಡುವುದಕ್ಕಾಗಿ. ಆದರೆ ಈ ವಿಷಯದಲ್ಲಿ ಭಾರತದ ಪತ್ರಿಕೆಗಳು ಅನುಸರಿಸಿರುವ ಕ್ರಮ, ನಮಗೆ ನಿರಾಶಾದಾಯಕವಾಗಿದೆಯೆಂದು ಹೇಳಬೇಕು. ಭಾರತ ಸರ್ಕಾರ, ದಕ್ಷಿಣ ಆಫ್ರಿಕಕ್ಕೆ ವಿರುದ್ಧವಾಗಿ ಪ್ರತಿಕೂಲ ಕ್ರಮಗಳನ್ನು ಕೈಗೊಂಡಿರುವುದಕ್ಕೆ ಸರ್ವತ್ರ ತುಂಬ ಆನಂದವಾಗಿರುವಂತೆ ತೋರುತ್ತದೆ. ಅನೇಕ ಪತ್ರಿಕೆಗಳು ಭಾರತದಲ್ಲಿಯೇ ಕೂಲಿಗಳ ಅಭಾವ, ಸಾರ್ವತ್ರಿಕವಾಗಿದೆ ಎಂದು ಹೇಳುತ್ತವೆ. ಇದರ ಅರ್ಥ ವೇನು? ಮೊದಲು ಕೆಲಸಕೊಡುವ ಯಜಮಾನರ ಆವಶ್ಯಕತೆಗಳನ್ನು ಗಮನಿಸಿ, ಅನಂತರ ಸಾಧ್ಯವಾದರೆ ಕೂಲಿಗಳ ಆವಶ್ಯಕತೆ ನೋಡಿ" ಈ ಕರಾರು ಬದ್ಧ ಕ್ರಮ, ಮಾತೃಭೂಮಿಗೆ ಶಾಶ್ವತ ಅವಮಾನ. ಕರಾರು ಬದ್ಧಕೂಲಿ, ನೈತಿಕ ಕಳಂಕ. ಅದು ಫೀಜಿಯಲ್ಲಿರಲಿ, ಅಸ್ಸಾಂನಲ್ಲಿರಲಿ, ನೇಟಾಲ್‌ನಲ್ಲಿರಲಿ, ಇದನ್ನು ಕೊನೆಗಾಣಿಸಿ ಎಂದು ನಾವು ಇಂಡಿಯನ್ ಸಾರ್ವಜನಿಕ ಮುಖಂಡರನ್ನು ಒತ್ತಾಯಿಸುತ್ತೇವೆ".

ಒಂದು ವರ್ಷಕ್ಕೆ ಮೊದಲು, ಗೋಖಲೆ ಅವರು ತಮ್ಮ ಇಂಪೀರಿಯಲ್ ಕೌನ್ಸಿಲ್ ಭಾಷಣದಲ್ಲಿ ನೇಟಾಲ್ ವಸಾಹತಿಗೆ ಭಾರತದ ಕರಾರುಬದ್ಧ ಕೂಲಿಗಳ ರವಾನೆಯನ್ನು ನಿಷೇಧಿಸಬೇಕೆಂದು ಕೇಳಿದ್ದರು. ಇಂಡಿಯ ಸರ್ಕಾರ ಆ ಠರಾವನ್ನು ಒಪ್ಪಿ ಡೌನಿಂಗ್ ಸ್ಟ್ರೀಟ್‌ಗೆ (ಇಂಗ್ಲೆಂಡು ಆಫೀಸು) ಪ್ರಬಲವಾದ ಶಿಫಾರಸನ್ನು ಮಾಡಿತು. ಈ ಮಧ್ಯೆ ಲಾರ್ಡ್ ಆಂಪ್‌ಹಿಲ್ಲರೂ ದಕ್ಷಿಣ ಆಫ್ರಿಕದ ಸಮಿತಿಯೂ, ಭಾರತೀಯರ ಪರವಾಗಿ ಚಳುವಳಿ ಹೂಡಿ ಜಯ ಶಾಲಿಗಳಾಗಿ, ಇಂಪೀರಿಯಲ್ ಗವರ್ನಮೆಂಟು ದಕ್ಷಿಣ ಆಫ್ರಿಕದ ಯೂನಿಯನ್ ಸರ್ಕಾರಕ್ಕೆ ಒಂದು ಅಪ್ಪಣೆಯನ್ನು ಕಳುಹಿಸುವಂತೆ ಒತ್ತಾಯವನ್ನು ತಂದರು. ಆ ಅಪ್ಪಣೆಯಲ್ಲಿ ೧೯೦೭ರ ಮಸೂದಾ ಕಾನೂನನ್ನು ಹಿಂದೆಗೆದುಕೊಳ್ಳುವ ಶಿಫಾರಸು ಇತ್ತು. ಜನಾಂಗ ಬಹಿಷ್ಕಾರವನ್ನು ತೊಡೆದು ಹಾಕುವುದು, ಅದರ ಬದಲು ಭಾರತ ಒಪ್ಪಿದ್ದ ಜನಾಂಗ ಬಹಿಷ್ಕಾರ ನಿರೋಧ, ಜೊತೆಯಲ್ಲಿ ಆಡಳಿತ ವ್ಯವಸ್ಥೆಯ ಮೂಲಕ ಆಫ್ರಿಕ ಯೂನಿಯನ್ ನಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿದ ಕೆಲವೇ ಭಾರತೀಯರನ್ನು ಪ್ರತಿವರ್ಷ ಸೇರಿಸಿಕೊಳ್ಳುವುದು ಇವೇ ಆ ಸೂಚನೆಯ ತಿರುಳಾಗಿದ್ದವು.

ತಾತ್ಕಾಲಿಕವಾಗಿ ಆಫ್ರಿಕ ಯೂನಿಯನ್ ಸರ್ಕಾರ, ಅದಕ್ಕೆ ಬಾಗುವುದಾಗಿ ನಿಶ್ಚಯಿಸಿತು. ಜೂನ್ ೧೯೧೧ರಲ್ಲಿ ನಡೆಯುವ ಕಾರೊನೇಶನ್ ಉತ್ಸವ ಮುಗಿಯುವ ವರೆಗೆ ಭಾರತೀಯರನ್ನು ಸಮಾಧಾನ ಪಡಿಸಿಕೊಂಡಿರಬೇಕೆಂಬುದು ಅವರ ಕಾತರತೆಯಾಗಿತ್ತು. ವಸಾಹತು ಶಾಸಕರು ಒಂದು ಹೊಸ ಮಸೂದೆಯನ್ನು ತಯಾರಿಸಿದರು. ಅದು ಫೆಬ್ರವರಿ ೨೫ (೧೯೧೧) ರಂದು ಪ್ರಕಟವಾಯಿತು. ಗಾಂಧೀ ಹೀಗೆ ಬರೆದರು. "ಈ ಮಸೂದೆ ಸತ್ಯಾಗ್ರಹಿಗಳನ್ನು ಸಮಾಧಾನ ಪಡಿಸುವುದಕ್ಕಾಗಿಯೇ ಉದ್ದೇಶಿತವೆಂಬುದು ಸ್ಪಷ್ಟವಾಗಿದೆ. ಮತ್ತು ಜನರಲ್ ಸ್ಮಟ್ಸ್‌ರು ಲಾರ್ಡ್ ಕ್ರೀವ್‌ರಿಗೆ, ದಕ್ಷಿಣ ಆಫ್ರಿಕದಲ್ಲಿ ಯೂರೋಪಿಯನ್ನರಿಗೂ ಭಾರತೀಯರಿಗೂ ಸಮಾನತೆಯನ್ನು ನಿರಾಕರಿಸಿ ಬರೆದ ಲಾರ್ಡ್ ಕ್ರೀವ್‌ರಿಗೆ ಪ್ರಸಿದ್ಧ ಪತ್ರದ ಒಂದು ವರ್ಷದ ಅನುಭವ ಬ್ರಿಟಿಷ್ ಸಾಮ್ರಾಜ್ಯದ ಸಂಪ್ರದಾಯಗಳನ್ನು ಸುಲಭವಾಗಿ ಮುರಿಯುವುದು ಸಾಧ್ಯವಿಲ್ಲವೆಂಬುದನ್ನು ಜನರಲ್ ಸ್ಮಟ್ಸ್‌ರಿಗೆ ಸ್ಪಷ್ಟವಾಗಿ ಕಲಿಸಿದೆ. ಆದರೆ ಮಸೂದೆಯನ್ನು ಕಾರ್ಯಗತ ಮಾಡುವಾಗ, ಅದರ ಕರ್ತೃಗಳ ಉದ್ದೇಶಗಳನ್ನು ಅದು ಸಾಧಿಸುವುದಿಲ್ಲ. ೧೯೦೭ರ ೨ನೆ ಆಕ್ಟ್ ಹಿಂದೆಗೆದುಕೊಳ್ಳಲ್ಪಟ್ಟಿರುವುದು ತುಂಬ ಸಮಾಧಾನಕರವಾಗಿದೆ. ಏಷ್ಯಾದವರನ್ನು ಆಫ್ರಿಕದಿಂದ ಹೊರಗಿಡುವುದು ಅವರ ಹೆಸರನ್ನು ಹೇಳಿ ಸ್ಪಷ್ಟವಾಗಿ 'ನಿಮಗೆ ಪ್ರವೇಶವಿಲ್ಲ' ಎನ್ನುವುದರಿಂದಲ್ಲ; ಅವರನ್ನು ಕಟ್ಟುನಿಟ್ಟಾದ ವಿದ್ಯಾರ್ಹತೆಯ ಪರೀಕ್ಷೆಗೆ ಒಳಪಡಿಸುವುದರಿಂದ. ಉಳಿದ ಎಲ್ಲ ವಿಷಯಗಳಲ್ಲಿಯೂ ಮಸೂದೆ. ತುಂಬ ಅಸಮರ್ಪಕವಾಗಿದೆ. ಅದು ನಿಷ್ಕಾರಣವಾಗಿ. ಕೇಪ್ ಮತ್ತು ನೇಟಾಲ್ ಭಾರತೀಯರು ಇದುವರೆಗೆ ಅನುಭವಿಸುತ್ತಿರುವ ಹಕ್ಕುಗಳನ್ನೆಲ್ಲ ಅಪಹರಿಸುತ್ತದೆ. ಇಂಪೀರಿಯಲ್ ಸರ್ಕಾರವು (ಇಂಗ್ಲೆಂಡ್) ನೇಟಾಲ್ ಮತ್ತು ಕೇಪ್ ಭಾರತೀಯರ ವಿರುದ್ಧ

ಕಾನೂನು ಮಾಡಲು ದಕ್ಷಿಣ ಆಫ್ರಿಕ ಯೂನಿಯನ್ ಸರ್ಕಾರಕ್ಕೆ ಅವಕಾಶ ಕೊಡು ವುದಾದರೆ ದಕ್ಷಿಣ ಆಫ್ರಿಕದ ಯೂನಿಯನ್ ಸರ್ಕಾರ ಟ್ರಾನ್ಸ್‌ವಾಲ್ ಸತ್ಯಾಗ್ರಹಿಗಳ ಕೇಳಿಕೆಗೆ ಮಾನ್ಯತೆ ನೀಡಲು ಒಪ್ಪುತ್ತದೆ".

ಮಸೂದೆಗೆ, ಉನ್ಮತ್ತ ಅಭಿಮಾನಿಗಳು ತೀವ್ರ ವಿರೋಧ ವ್ಯಕ್ತಪಡಿಸಿದರು. "ಪ್ರತಿವರ್ಷವೂ ನಿಗದಿಯಾದ ಅಲ್ಪಸಂಖ್ಯೆಯಲ್ಲಿ ಆಫ್ರಿಕಕ್ಕೆ ಏಷಿಯದವರನ್ನು ಸೇರಿಸಲು ಮಾತ್ರ ಅವಕಾಶವಿರುವುದರಿಂದ, ಆಫ್ರಿಕದಲ್ಲಿ ಎಲ್ಲಿ ಬೇಕಾದರೂ ತಿರುಗಾಡುವುದಕ್ಕೂ ಅಥವಾ ಉಳಿದು ವಾಸಮಾಡುವುದಕ್ಕೂ ಅವರಿಗಿರುವ ಹಕ್ಕನ್ನು ಮೊಟಕುಗೊಳಿಸುವ ಪ್ರಶ್ನೆ ಇಲ್ಲ" ಎಂಬ ಸ್ಮಟ್ಸ್‌ರ ವಾದಕ್ಕೆ ಅವರು ಆಕ್ಷೇಪಿಸಿದರು. ಹಠಮಾರಿಗಳು, ಏಷಿಯಾದವರ ಸೇರಿಸುವಿಕೆಯನ್ನು ಪೂರ್ಣವಾಗಿ ತಡೆಯಲು ಮಸೂದೆಯಲ್ಲಿ ಅವ ಕಾಶ ಮಾಡಬಯಸಿದರು. ಗಾಂಧಿ, ಸ್ಪಷ್ಟವಾಗಿ "ಜನಾಂಗ ಭೇದ ಶಾಸನವೆಂಬ ಹಾವಿ ನೊಂದಿಗೆ ಆಟ ಸಾಧ್ಯವಿಲ್ಲ. ಆರೇಂಜ್ ಫ್ರೀ ಸ್ಟೇಟ್‌ನಲ್ಲಿರುವ ಜನಾಂಗ ಭೇದ ಶಾಸನ ವೆಂಬ ಸಾಂಕ್ರಾಮಿಕ ವಿಷ, ಪೂರ್ಣ ಯೂನಿಯನ್ನನ್ನು ಬೇಗ ಮುತ್ತುವುದು" ಎಂದು ಘೋಷಿಸಿದರು.

ಗಾಂಧೀಜಿಗೂ ಜನರಲ್ ಸ್ಮಟ್ಸ್‌ರಿಗೂ ನಡುವೆ ಟೆಲಿಗ್ರಾಂ ಮತ್ತು ಪತ್ರ ವ್ಯವಹಾರ ನಡೆದವು. ೧೯೧೧ನೆ ಸೆಪ್ಟೆಂಬರ್‌ನಲ್ಲಿ ಒಂದು ತಾತ್ಕಾಲಿಕ ಶಾಂತಿ, ಏರ್ಪಟ್ಟಿತು.

ಗಾಂಧೀ, ತುಂಬ ಹಗುರವಾದ ಮನಸ್ಸಿನಿಂದ ಮೇ ೨೭ರ ಇಂಡಿಯನ್ ಒಪಿನಿ ಯನ್‌ನಲ್ಲಿ ಹೀಗೆ ಬರೆದರು. "ಟ್ರಾನ್ಸ್‌ವಾಲ್‌ನಲ್ಲಿ, ಏಷ್ಯಾಟಿಕ್ ತೊಂದರೆಯಲ್ಲಿ ಕೊನೆಗೆ ಒಂದು ತಾತ್ಕಾಲಿಕ ಪರಿಹಾರ ಏರ್ಪಟ್ಟಿದೆ. ಮತ್ತು ಟ್ರಾನ್ಸ್‌ವಾಲ್‌ನ ಭಾರ ತೀಯರೂ ಚೀಣರೂ, ಕೊನೆ ಪಕ್ಷ ಎಂಟು ತಿಂಗಳು ಕಾಲವಾದರೂ ತಮ್ಮ ಸಾಮಾನ್ಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗಲು ಸ್ವತಂತ್ರರಾಗಿದ್ದಾರೆ. ಜನರಲ್ ಸ್ಮಟ್ಸ್‌ರ ವಾಗ್ದಾನ ನೆರವೇರಿರುವುದರಿಂದ ಸತ್ಯಾಗ್ರಹ, ಅದಕ್ಕೆ ಅವಕಾಶಕೊಟ್ಟ ಕಾರಣ ಮರೆಯಾದುದರಿಂದ, ನಿಸ್ಸಂದೇಹವಾಗಿ ನಿಲ್ಲುತ್ತದೆ. ಆದರೆ, ಇಷ್ಟೇ ಅವಮಾನಕರ ವಾದ ಯಾವುದಾದರೂ ಹೊಸ ಏಷಿಯಾ ವಿರೋಧಿ ಶಾಸನ ಜಾರಿಗೆ ಬಂದರೆ, ದಕ್ಷಿಣ ಆಫ್ರಿಕ ಹೊಸ ಸತ್ಯಾಗ್ರಹವನ್ನು ಕಾಣುತ್ತದೆಂದು ಸಕಾರಣವಾಗಿಯೂ ನಿಜವಾಗಿಯೂ ಹೇಳಬಹುದು." ಎಂದು ಬರೆದರು.

ಜೂನ್ ೧ನೆ ತಾರೀಖು, ಸತ್ಯಾಗ್ರಹಿಗಳೆಲ್ಲರ ಬಿಡುಗಡೆಯಾಯಿತು. ಕಠಿಣವಾದ ಶಾಂತಿಯುತವಾದ ಹೋರಾಟದ ಅಂತ್ಯ ಖಾತರಿಯಾಯಿತೆಂದು ಭಾರತೀಯರು ನಂಬಿದರು. ಸ್ಟಾರ್ ಪತ್ರಿಕೆ ಹೀಗೆ ಬರೆಯಿತು. "ಮಿ. ಗಾಂಧಿ, ತಮ್ಮ ವಕೀಲಿ ಕಾರ್ಯ ವನ್ನು ಮಿ. ರಿಟ್ಜ್ ಎಂಬುವರು ವಹಿಸಿಕೊಳ್ಳಲು ಆಗಲೇ ಏರ್ಪಾಡು ಮಾಡಿದ್ದಾರೆ. ಅವರು ಸಾರ್ವಜನಿಕ ಜೀವನದಿಂದ ನಿವೃತ್ತರಾಗಿ ನೇಟಾಲ್‌ನಲ್ಲಿ ಇದ್ದುಕೊಂಡು ಟಾಲಸ್ಟಾಯ್‌ರ ತತ್ವಜ್ಞಾನದ ನಿಕಟ ಪರಿಚಯವನ್ನು ಹೊಂದುವರು" ಎಂದು ಪ್ರಕಟಿಸಿತು.

ಜೂನ್ ೫ನೆ ತಾರೀಖು ಪ್ರಿಟೋರಿಯ ಸತ್ಯಾಗ್ರಹಿಗಳು ಹನ್ನೊಂದು ಮಂದಿ ಗೋಲ್ಡನ್ ನಗರದ ಸತ್ಯಾಗ್ರಹಿಗಳ ವಿರುದ್ಧ ಜೊಹಾನ್ಸ್ ಬರ್ಗ್‌ನಲ್ಲಿ ಫುಟ್‌ಬಾಲ್ ಪಂದ್ಯವನ್ನು ಆಡಿದರು. ಆಗ ಅತ್ಯಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದರು. ಗಾಂಧಿಜಿ ಹೋರಾಟದ ವಿಷಯದಲ್ಲಿ ಕೆಲವು ಮಾತುಗಳನ್ನಾಡುವ ಅವಕಾಶವನ್ನು ಈ ಸಂದರ್ಭ ದಲ್ಲಿ ತೆಗೆದುಕೊಂಡರು. ಮನಸ್ಸಿನಲ್ಲಿ ಯಾವ ಕಹಿಯೂ ಇರಲಿಲ್ಲ. ಗಾಂಧಿ, ಸಾಮ್ರಾಜ್ಯದ ಮಿತ್ರರೇ ಆಗಿದ್ದರು. ಕಿರೀಟ ಧಾರಣೆಯ ದಿನ ಯೂನಿಯನ್ನಿನ ಭಾರತೀಯರು ತಮ್ಮ ಶುಭಸಂದೇಶ ಕಳಿಸಿದರು.

ಜೂನ್ ೨೪ನೆ ತಾರೀಖಿನ 'ಇಂಡಿಯನ್ ಒಪಿನಿಯನ್'ನಲ್ಲಿ ಗಾಂಧಿ ಹೀಗೆ ಬರೆದರು. "ದಕ್ಷಿಣ ಆಫ್ರಿಕದ ಬ್ರಿಟಿಷ್ ಇಂಡಿಯನ್ನರು ಏಕೆ ಮತ್ತು ಹೇಗೆ ಬ್ರಿಟಿಷ್ ಸಿಂಹಾಸನಕ್ಕೆ –ಯಾವ ಬ್ರಿಟಿಷ್ ಚಕ್ರವರ್ತಿಯ ವಸಾಹತಿನಲ್ಲಿ ಅವರಿಗೆ ಸಾಮಾನ್ಯ ಮಾನವನಿಗೆ ಇರಬೇಕಾದ ನಾಗರಿಕ ಹಕ್ಕುಗಳು ಸಹ ಇಲ್ಲವೋ ಆ ಸಿಂಹಾಸನಕ್ಕೆ–ರಾಜ ಭಕ್ತಿಯನ್ನು ತೋರಿಸಿ, ಕಿರೀಟ ಧಾರಣೆಯಲ್ಲಿ ಸಂತೋಷಿಸಬೇಕು. ಇದು ಶುದ್ಧ ಅಸಂಗತ ಎಂದು ಯಾವ ಅಪರಿಚಿತನಿಗಾದರೂ ತೋರಬಹುದು.

"ಬ್ರಿಟಿಷ್ ರಾಜರು, ತತ್ವಶಃವಾಗಿಯಾದರೂ ಶುದ್ಧತೆ ಸಮಾನತೆ ನ್ಯಾಯ ಇವು ಗಳನ್ನು ಪ್ರತಿನಿಧಿಸುತ್ತಾರೆ. ಬ್ರಿಟಿಷ್ ರಾಜತಂತ್ರಜ್ಞರು ಈ ಗುರಿಯನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ಅವರು ಅನೇಕ ವೇಳೆ ಹಾಗೆ ಮಾಡಲು ಕ್ಷುದ್ರತನ ದಿಂದ ಅಶಕ್ತರಾಗುತ್ತಾರೆ ಎಂಬುದು ತೀರ ನಿಶ್ಚಯ. ಆದರೆ ನಮ್ಮ ಪ್ರಶ್ನೆಗೆ ಅದು ಅಸಂಬದ್ಧ. ಬ್ರಿಟಿಷ್ ರಾಜಪ್ರಭುತ್ವ ಬಹಳ ಮಿತವಾದುದು (ಸಾಂಕುಶ). ತಾತ್ಕಾಲಿಕ ಪರಿಸ್ಥಿತಿಯಲ್ಲಿ ಹಾಗಿರುವುದು ಸರಿಯೂ ಹೌದು. ...ಬ್ರಿಟಿಷ್ ಬಾವುಟದ ಕೆಳಗೆ ಇರಲು ಬಯಸಿರುವವರು, ನಮ್ಮಂತೆ ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದರೂ ತಮ್ಮ ಆತ್ಮ ಸಾಕ್ಷಿಗೆ ವಿರೋಧವಿಲ್ಲದಂತೆ ತಾತ್ಕಾಲಿಕವಾಗಿ ಈ ಪ್ರಬಲ ವಸಾಹತುಗಳ ಒಡೆಯರಿಗೆ ರಾಜಭಕ್ತಿಯನ್ನು ಸಲ್ಲಿಸಬೇಕು. ನಮ್ಮ ರಾಜಭಕ್ತಿಯನ್ನು ಸಮರ್ಪಿಸುವುವರಲ್ಲಿ, ನಾವು ಮೇಲೆ ಹೇಳಿದ ಧ್ಯೇಯಗಳಿಗೆ ನಮ್ಮ ಭಕ್ತಿಯನ್ನು ತೋರಿಸುತ್ತೇವೆ. ಈ ಧ್ಯೇಯಗಳನ್ನು ಸಾಧಿಸಲು ನಮ್ಮ ರಾಜಭಕ್ತಿ ಒಂದು ಮುಂಗಡ ಪ್ರಯತ್ನ".

ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಕಿರೀಟಧಾರಣೆಯ ಅಧಿಕೃತ ಉತ್ಸವಗಳನ್ನು ಬಹಿಷ್ಕರಿಸಿದರು. "ಯೂರೋಪಿನವರೊಂದಿಗೆ ಸರಿಸಮಾನತೆಯ ಆಧಾರದ ಮೇಲೆ ಅಧಿಕೃತ ಉತ್ಸವಗಳಲ್ಲಿ ಪಾಲುಗೊಳ್ಳಬಹುದು" ಎಂದು ಗಾಂಧಿ ಹೇಳಿದರು.

ಕಿರೀಟಧಾರಣೆಯನಂತರ, ಆಫ್ರಿಕದ ಯೂನಿಯನ್ನಿನ ಪಾರ್ಲಿಮೆಂಟಿನಲ್ಲಿ ಒಂದು ಹೊಸ ವಲಸೆಮಸೂದೆ ಇಡಲ್ಪಟ್ಟಿತು. ಆ ಮಸೂದೆ, ಕೆಲವು ವಿಷಯಗಳಲ್ಲಿ ಮೊದಲ ಮಸೂದೆಗಿಂತ ಉತ್ತಮವಾಗಿತ್ತು. ಆದರೆ ಅದು ಜನರಲ್ ಸ್ಮಟ್ಸ್‌ರ ವಾಗ್ದಾನ ವನ್ನು ಪೂರೈಸಲಿಲ್ಲ. ಭಾರತೀಯರು ತೀವ್ರ ಅಸಮಾಧಾನಪಟ್ಟರು. ಮತ್ತು ಕೋಪ ಗೊಂಡರು. ಸದ್ಯಕ್ಕೆ ಸರ್ಕಾರ ಆ ಮಸೂದೆಯನ್ನು ಕೈಬಿಟ್ಟು ತಾತ್ಕಾಲಿಕ ಒಪ್ಪಂದ

ವನ್ನೇ ಒಂದು ವರ್ಷ ಹೆಚ್ಚಿಸಿತು. ಗೋಖಲೆಯವರ ಮುಂಬರುವ ಭೇಟಿಯಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವ ಒಂದು ಸೂತ್ರ, ಕಂಡುಹಿಡಿಯಲ್ಪಡುವುದೆಂಬ ನಂಬಿಕೆ ಇದ್ದಿತು.

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಪ್ರಸ್ತಾಪ ೧೯೧೧ರ ಕಲ್ಕತ್ತ ಕಾಂಗ್ರೆಸ್‌ನಲ್ಲಿ ಸೊರಾಬ್ಜಿ ಷಾಪುರ್‌ಜಿಯಿಂದ ಇಡಲ್ಪಟ್ಟಿತು. ಅವರು ಆಫ್ರಿಕದಲ್ಲಿ ಸತ್ಯಾಗ್ರಹಿಯಾಗಿ ಎಂಟು ಸಲ ಸೆರೆಮನೆ ಸೇರಿ ಬಂದಿದ್ದರು. ಆವಶ್ಯಕತೆಯೊದಗಿದರೆ ತತ್‌ಕ್ಷಣ ಮತ್ತೆ ಹೋಗಲೂ ಸಿದ್ಧರಾಗಿದ್ದರು. ಕಾಂಗ್ರೆಸ್ಸು ಗಾಂಧಿಯನ್ನೂ ಟ್ರಾನ್ಸ್‌ವಾಲ್‌ನ ಭಾರತೀಯರನ್ನೂ ರಿಜಿಸ್ಟ್ರೇಷನ್ ಮತ್ತು ವಲಸೆಗಾರರ ಏಷಿಯಾ ವಿರೋಧಿ ಕಾನೂನಿನ ರದ್ದಿತಿಗಾಗಿ ಅಭಿನಂದಿಸಿತು. ಮತ್ತು ಸರ್ಕಾರವು ಅತ್ಯಧಿಕ ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಹೊರದೇಶಗಳಿಗಾಗಲೀ ಸ್ವದೇಶದಲ್ಲಿಯೇ ಆಗಲಿ ಭಾರತೀಯ ಕೂಲಿಗಳನ್ನು ಕರಾರುಬದ್ಧ ವಲಸೆ ನಿಯಮಗಳ ಮೇಲೆ ಸೇವೆಗೆ ನಿಯಮಿಸುವುದನ್ನು ಬಹಿಷ್ಕರಿಸಬೇಕೆಂದು ಕೇಳಿಕೊಂಡಿತು.

ಗೋಖಲೆಯವರ ಭೇಟಿ

೧೯೧೨

ಹೋರಾಟವನ್ನು ನಿಲ್ಲಿಸಿದ್ದುದರಿಂದ, ಟಾಲ್‌ಸ್ಟಾಯ್ ಫಾರಂನಲ್ಲಿ ಜೀವನ ಶಾಂತವಾಗಿತ್ತು. ಅಲ್ಲಿ ಸೇರಿದ್ದವರು ಹಣ್ಣಿನ ತೋಟದಲ್ಲಿ, ಪಟ್ಟಣದ ಗದ್ದಲ ಗಲಾಟೆಗಳಿಲ್ಲದೆ ಆನಂದದಿಂದಿದ್ದರು.

ಭಾರತದ ವಿಷಯಗಳಲ್ಲಿ ತೀವ್ರ ಆಸಕ್ತಿಯಿಂದ, ಗಾಂಧಿ ಪುಸ್ತಕಗಳನ್ನೂ ವರ್ತಮಾನ ಪತ್ರಿಕೆಗಳನ್ನೂ ವ್ಯಾಸಂಗ ಮಾಡಿದರು. ಕಲ್ಕತ್ತದಲ್ಲಿ ಹಸುವಿನಿಂದ ಅದರ ಕೊನೆಯ ತೊಟ್ಟು ಹಾಲನ್ನು ಹಿಂಡಲು ಅನುಸರಿಸುತ್ತಿದ್ದ ಕ್ರೌರ್ಯದ ವಿಷಯವನ್ನು ಅವರು ಓದಿದರು. ಈ ವಿಷಯವನ್ನು ಕಲೆನ್‌ಬಾಕರೊಂದಿಗೆ ಚರ್ಚಿಸಿದರು. ಇಬ್ಬರೂ ಹಾಲನ್ನು ಬಹಿಷ್ಕರಿಸಿ ತಮ್ಮ ಆಹಾರದಲ್ಲಿ ಆಲಿವ್‌ಎಣ್ಣೆ, ಹೊಸ ಮತ್ತು ಒಣಗಿದ ಹಣ್ಣುಗಳು, ಹಸಿ ನೆಲಗಡಲೆಕಾಯಿ ಬಾಳೆಹಣ್ಣು ಖರ್ಜೂರ ಮತ್ತು ನಿಂಬೆಹಣ್ಣುಗಳನ್ನು ಉಪಯೋಗಿಸುವುದೆಂದು ನಿರ್ಣಯಿಸಿದರು. ಅವರು ಬೇಯಿಸಿದ ಆಹಾರವನ್ನೂ ಬಹಿಷ್ಕರಿಸಿದರು. ಈ ಪ್ರಯೋಗದ ಕಾಲದಲ್ಲಿ ಗಾಂಧಿ ಸುಲಭವಾಗಿ ದಿನಕ್ಕೆ ನಲವತ್ತು ಮೈಲಿ ನಡೆಯುತ್ತಿದ್ದರು. ಒಂದು ಸಲ ತಮ್ಮ ಶಕ್ತಿಯನ್ನು ಪರೀಕ್ಷಿಸಲು ಐವತ್ತೈದು ಮೈಲಿ ನಡೆದರು. ಗಾಂಧೀಜಿಗೆ ಟಾಲಸ್ಟಾಯ್ ಫಾರಂ, "ಪರಿಶುದ್ಧತೆಗಾಗಿ ಮತ್ತು ಅಂತ್ಯ ಹೋರಾಟಕ್ಕಾಗಿ ಒಂದು ಕೇಂದ್ರ"ವಾಗಿತ್ತು. ೧೯೧೨ರ ಸೆಪ್ಟಂಬರ್‌ನಲ್ಲಿ ಗಾಂಧಿ ತಮ್ಮ ಸರ್ವಸ್ವವನ್ನೂ ಕೊಟ್ಟು, ಟಾಲಸ್ಟಾಯ್ ಮತ್ತು ರಸ್ಕಿನ್‌ರು ತಮ್ಮ ಕೃತಿಗಳಲ್ಲಿಯೂ ಬಾಳಿನಲ್ಲಿಯೂ ಎತ್ತಿ ಹಿಡಿದ ಧ್ಯೇಯಗಳಿಗಾಗಿ, ಫೀನಿಕ್ಸ್ ಟ್ರಸ್ಟ್ ಸ್ಥಾಪಿಸಿದರು. ಆಗ ಗಾಂಧಿಯ ಆಸ್ತಿ ೫೧೩೦ ಪೌಂಡು ೪ ಷಿಲಿಂಗ್ ೫ ಪೆನ್ನಿಯಿದ್ದಿತು.

ಗಾಂಧಿ, ಉದ್ದಕ್ಕೂ ಗೋಖಲೆಯವರೊಂದಿಗೆ ಪತ್ರವ್ಯವಹಾರ ಮಾಡುತ್ತಲೇ ಇದ್ದರು. ಗೋಖಲೆ ದಕ್ಷಿಣ ಆಫ್ರಿಕಕ್ಕೆ ಭೇಟಿ ಕೊಡಬೇಕೆಂಬುದು ಗಾಂಧೀಜಿಯ ಇಷ್ಟವಾಗಿದ್ದಿತು. ೧೯೧೧ರಲ್ಲಿ ಗೋಖಲೆ ಇಂಗ್ಲೆಂಡಿನಲ್ಲಿದ್ದಾಗ, ಅವರು ದಕ್ಷಿಣ ಆಫ್ರಿಕದಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ಅರಿಯಲು, ಅಲ್ಲಿಗೆ ಭೇಟಿ ಕೊಡುವುದು ತಮ್ಮ ಉದ್ದೇಶವೆಂದು ಸೆಕ್ರೆಟರಿ ಆಫ್ ಸ್ಟೇಟ್‌ರಿಗೆ ತಿಳಿಸಿದರು. ಸೆಕ್ರೆಟರಿ ಆಫ್ ಸ್ಟೇಟರು ಗೋಖಲೆಯವರ ಕಾರ್ಯವನ್ನು ಒಪ್ಪಿ, ಆಫ್ರಿಕ ಸರ್ಕಾರಕ್ಕೆ ಗೋಖಲೆಯವರ ಸ್ಥಾನಮಾನವನ್ನು ತಿಳಿಸಿದರು. ಇದರಿಂದ ಗೋಖಲೆಯವರಿಗೆ ಪ್ರಯಾಣಕಾಲದಲ್ಲಿಯೂ ಮತ್ತು ಆಫ್ರಿಕದಲ್ಲಿಯೂ ಎಲ್ಲ ಸೌಲಭ್ಯಗಳೂ ಸರ್ಕಾರದ ಸಹಕಾರವೂ ಖಾತರಿಯಾಯಿತು.

ಗೋಖಲೆ ಕೇಪ್‌ಟೌನನ್ನು ೧೯೧೨ನೆ ಅಕ್ಟೋಬರ್ ೧೨ರಂದು ತಲಪಿದರು. ದಕ್ಷಿಣ ಆಫ್ರಿಕದ ಇತಿಹಾಸದಲ್ಲಿ ಅದೊಂದು ಮಹತ್ವಪೂರ್ಣ ಘಟನೆ. ಒಬ್ಬ ಪ್ರಖ್ಯಾತ ಭಾರತ ರಾಷ್ಟ್ರೀಯ, ಯೂರೋಪಿಯನ್ ನಾಯಕರೊಂದಿಗೆ ಅವರ ದೇಶದಲ್ಲಿ ಪ್ರತ್ಯಕ್ಷವಾಗಿ ಸಂಪರ್ಕಹೊಂದಿದುದು ಅದೇ ಮೊದಲನೆಯ ಸಲ. ಗೋಖಲೆಯನ್ನು 'ಕೂಲಿರಾಜ' ಎಂದು ಸಂಬೋಧಿಸಿ, ಅವರು ಹೋದೆಡೆಗಳಲ್ಲೆಲ್ಲ ಜನರು ಅವರನ್ನು ಅಧಿಕ ಸಂಖೆಯಲ್ಲಿ ಅನುಸರಿಸುತ್ತಿದ್ದರು. ಆಫ್ರಿಕ ಯೂನಿಯನ್ ಸರ್ಕಾರ, ಸನ್ಮಾನ್ಯ ಅತಿಥಿಗೆ ಆತಿಥ್ಯ ಮಾಡಿ ರೈಲಿನಲ್ಲಿ ಒಂದು ಸುಸಜ್ಜಿತ ಡಬ್ಬಿಯನ್ನು (ಸೆಲೂನ್) ಅವರ ಉಪಯೋಗಕ್ಕೆ ಒವಗಿಸಿದರು. "ಇಂಡಿಯದ ಟಾಲಸ್ಟಾಯ್"ರನ್ನು ಸ್ವಾಗತಿಸುವುದರಲ್ಲಿ ಬಿಳಿಯರು ಭಾರತೀಯರೊಂದಿಗೆ ಸ್ಪರ್ಧಿಸಿದರು. ವಲಸೆ ಇಲಾಖೆಯ ಮಿಸ್ಟರ್ ರನ್ನಿಮಾನ್ ಎಂಬುವರು ಗೋಖಲೆಯವರನ್ನು ದೇಶದಲ್ಲೆಲ್ಲ ಕರೆದುಕೊಂಡು ಹೋಗಲು ನಿಯಮಿತರಾಗಿದ್ದರು. ಗೋಖಲೆಯವರನ್ನು ಸ್ವಾಗತಿಸಲು ಏರ್ಪಾಡಾದ ಪ್ರತಿ ಸಾರ್ವಜನಿಕ ಸಭೆಗೂ, ಆ ಸ್ಥಳದ ಮೇಯರ್ ಅವರೇ ಅಧ್ಯಕ್ಷರಾಗುತ್ತಿದ್ದರು.

ಕೇಪ್‌ಟೌನ್‌ನಲ್ಲಿ ನೂರಾರು ಭಾರತೀಯರು ಗೋಖಲೆಯವರನ್ನು ಕಣ್ಣೀರು ತುಂಬಿ ಎದುರುಗೊಂಡರು. ಐವತ್ತು ಕುದುರೆಗಾಡಿಗಳ ಬಹುದೊಡ್ಡ ಮೆರವಣಿಗೆ, ನಾಲ್ಕು ಕುದುರೆಗಳ ಗಾಡಿಯೊಂದರಲ್ಲಿ ಗೋಖಲೆಯವರು. ಜನ ಅವರನ್ನು ಎಲ್ಲೆಡೆಯೂ 'ವಂದೇ ಮಾತರಂ' ಘೋಷಣೆಯೊಂದಿಗೆ ಎದುರುಗೊಂಡರು. ದೊಡ್ಡ ಸಂಖ್ಯೆಯ ಭಾರತೀಯರೂ ಯೂರೋಪಿಯನ್ನರೂ ತುಂಬಿದ ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ಗೋಖಲೆ ತಮ್ಮ ವಾಗ್ವೈಭವದಿಂದ ಎಲ್ಲರ ಹೃದಯವನ್ನೂ ಗೆದ್ದರು. ಜೊಹಾನ್ಸ್‌ಬರ್ಗ್‌ಗೆ ಹೋಗುವ ಮಾರ್ಗದಲ್ಲಿ ಕ್ಲರ್ಕ್ಸ್‌ಡ್ರಾಪ್ ಎಂಬಲ್ಲಿ ಅವರು ಸ್ವಲ್ಪಕಾಲ ನಿಂತಾಗ ಅವರನ್ನು ಭಾರತೀಯರು ತುಂಬ ಉತ್ಸಾಹದಿಂದ ಬರಮಾಡಿಕೊಂಡರು. ಗೋಖಲೆ ದಾರಿಯಲ್ಲಿ ಇನ್ನೂ ಎರಡು ಮೂರು ಸ್ಟೇಶನ್‌ಗಳಲ್ಲಿ ನಿಂತು ಸಭೆಗಳಲ್ಲಿ ಭಾಗವಹಿಸಬೇಕಾಗಿದ್ದುದರಿಂದ, ಅವರು ಸ್ಪೆಶಲ್‌ರೈಲಿನಲ್ಲಿ ಪ್ರಯಾಣ ಮಾಡಿದರು.

ಜೊಹಾನ್ಸ್‌ಬರ್ಗ್ ರೈಲ್ವೆ ಸ್ಟೇಷನ್ ಪ್ಲಾಟ್ ಫಾರಂನಲ್ಲಿ ಆ ಸಂದರ್ಭಕ್ಕಾಗಿಯೇ ವಿಶೇಷ ವೇದಿಕೆಯನ್ನು ನಿರ್ಮಿಸಿ, ಬೆಲೆಯಾದ ಜಮಖಾನಗಳಿಂದ ಅಲಂಕರಿಸಿದ್ದರು. ಇತರ ಯೂರೋಪಿಯನ್ ಗೃಹಸ್ಥರೊಂದಿಗೆ ಅಲ್ಲಿ ಜೋಹಾನ್ಸ್‌ಬರ್ಗ್ ಮೇಯರ್‌ರೂ ಇದ್ದರು. ಅವರು, ಗೋಖಲೆಯವರು ಆ ನಗರದಲ್ಲಿರುವವರೆಗೆ ತಮ್ಮ ಕಾರನ್ನು ಗೋಖಲೆಯವರ ವಶಕ್ಕೆ ಕೊಟ್ಟರು. ಗೋಖಲೆಯವರಿಗೆ ಒಪ್ಪಿಸಿದ ಪೌರಬಿನ್ನವತ್ತಳೆ, ರೊಡೆಷಿಯ ತೇಗದ ರ್‍ಯಾಂಡ್ ತಟ್ಟೆಯ ಮೇಲೆ ಸರ್ವರ್ಣದಲ್ಲಿ ಕೊರೆಯಲ್ಪಟ್ಟಿತ್ತು. ತಟ್ಟೆ, ಭಾರತ ಮತ್ತು ಸಿಲೋನ್‌ಗಳ ನಕ್ಷೆಯನ್ನು ಒಳಗೊಂಡಿತ್ತು. ನಕ್ಷೆಯ ಎರಡು ಕಡೆಗಳಲ್ಲಿಯೂ, ಒಂದೆಡೆ ತಾಜಮಹಲ್ ಮತ್ತೊಂದೆಡೆ ಒಂದು ಭಾರತದ ಒಂದು ವಿಶಿಷ್ಟವಾದ ದೃಶ್ಯ ಇವುಗಳು ಕೊರೆಯಲ್ಪಟ್ಟಿದ್ದವು.

ಜೊಹಾನ್ಸ್‌ಬರ್ಗ್‌ಗೆ ಐದುಮೈಲಿ ದೂರದಲ್ಲಿ ಗುಡ್ಡದ ಮೇಲೆ, ಕಲೆನ್‌ಬಾಕರ

ಒಂದು ಅಚ್ಚುಕಟ್ಟಾದ ಮನೆಯಲ್ಲಿ ಗೋಖಲೆಗೆ ವಸತಿಯನ್ನು ಮಾಡಿದ್ದರು. ಗೋಖಲೆಯವರ ಭೇಟಿಗಾಗಿ ಬರುವವರನ್ನು ಸಂಧಿಸಲು ಒಂದು ವಿಶಾಲ ಆಫೀಸನ್ನು ನಗರದಲ್ಲಿ ತಾತ್ಕಾಲಿಕವಾಗಿ ಬಾಡಿಗೆಗೆ ಹಿಡಿದಿದ್ದರು. ಅದರಲ್ಲಿ ಗೋಖಲೆಯವರಿಗಾಗಿ ಒಂದು ಖಾಸಗಿ ಕೊಠಡಿ, ಮತ್ತೊಂದು ದಿವಾನಖಾನೆ, ಭೇಟಿಗೆ ಬಂದವರಿಗಾಗಿ ಒಂದು ನಿರೀಕ್ಷಣ ಕೊಠಡಿ ಇವೆಲ್ಲ ಇದ್ದವು. ಗೋಖಲೆಯವರನ್ನು ಅನೇಕ ಪ್ರಸಿದ್ಧ ಪ್ರಮುಖರಿಗೆ ಪರಿಚಯ ಮಾಡಿಕೊಡಲಾಯಿತು. ಯೂರೋಪಿಯನ್ನರು ತಮ್ಮ ಅಭಿಪ್ರಾಯಗಳನ್ನು ಗೋಖಲೆ ಅವರಿಗೆ ಸ್ಪಷ್ಟಪಡಿಸುವ ಸಲುವಾಗಿ, ಹದಿನೈದು ಮಂದಿ ಪ್ರಮುಖ ಐರೋಪ್ಯರ ಭೇಟಿಯನ್ನು ಏರ್ಪಡಿಸಲಾಯಿತು. ಗೋಖಲೆಯವರ ಗೌರವಾರ್ಥವಾಗಿ ಒಂದು ಭೋಜನ ಕೂಟವನ್ನು ಏರ್ಪಡಿಸಿದರು. ಇದಕ್ಕೆ ೧೫೦ ಯೂರೋಪಿಯನ್ನರೂ ಸೇರಿದಂತೆ ೪೦೦ ಅತಿಥಿಗಳನ್ನು ಆಹ್ವಾನಿಸಿದ್ದರು. ಭೋಜನಕೂಟದ ಖರ್ಚಿಗಾಗಿ ಭಾರತೀಯರು ತಲಾ ಒಂದು ಗಿನಿ ಕೊಟ್ಟು ಪ್ರವೇಶ ಹೊಂದಬೇಕಾಗಿತ್ತು. ಊಟ ಪೂರ್ಣವಾಗಿ ಸಸ್ಯಾಹಾರ. ಮಾದಕ ಪಾನೀಯ (ವೈನ್) ಇಲ್ಲ. ಅಡಿಗೆ ಮಾಡಿದವರು ಭಾರತೀಯ ಸ್ವಯಂಸೇವಕರು. ಅಡಿಗೆಮನೆಯ ವ್ಯವಸ್ಥೆ ಭಾರತೀಯ ಕ್ರಿಸ್ತರಿಗೆ ಸೇರಿತ್ತು. ಸಾರ್ವಜನಿಕ ಸ್ಥಳದಲ್ಲಿ ಒಂದೇ ಮೇಜಿನ ಮೇಲೆ ಅಷ್ಟೊಂದು ಭಾರತೀಯರೊಂದಿಗೆ ಕುಳಿತು ಊಟ ಮಾಡುವುದು ಆಫ್ರಿಕದ ಬಿಳಿಯರಿಗೆ ಒಂದು ಹೊಸ ಅನುಭವವಾಗಿತ್ತು. ಈ ಸಭೆಯಲ್ಲಿ ಗೋಖಲೆ, ಆಫ್ರಿಕದಲ್ಲೆಲ್ಲ ತಮ್ಮ ಅತ್ಯಂತ ಪ್ರಮುಖವಾದ ಭಾಷಣವನ್ನು–ಸ್ಪಷ್ಟವಾದ ಖಂಡಿತವಾದ ಸುಸಂಸ್ಕೃತವಾದ ಭಾಷಣವನ್ನು–ಮಾಡಿದರು.

ಜೋಹಾನ್ಸ್‌ಬರ್ಗ್‌ನಲ್ಲಿ ಭಾರತೀಯರ ಪ್ರಯೋಜನಕ್ಕಾಗಿ ಒಂದು ಸಾರ್ವಜನಿಕ ಸಭೆ ಏರ್ಪಾಡಾಯಿತು. ಸಭೆಯಲ್ಲಿ ಅನೇಕ ಕೊಂಕಣಿ ಮುಸಲ್ಮಾನರೂ ಕೆಲವು ಮಹಾರಾಷ್ಟ್ರ ಹಿಂದುಗಳೂ ಇದ್ದರು. ಗೋಖಲೆಯವರ ಮರಾಠಿ ಭಾಷಣವನ್ನು ತಾನು ಹಿಂದಿಗೆ ಅನುವಾದಿಸುವುದಾಗಿ ಗಾಂಧೀ ಹೇಳಿದಾಗ ಗೋಖಲೆ ಗಟ್ಟಿಯಾಗಿ ನಕ್ಕು ಹೀಗೆ ಹೇಳಿದರು. "ನಿಮ್ಮ ಹಿಂದಿಯ ಜ್ಞಾನವನ್ನು ನಾನು ಚೆನ್ನಾಗಿ ಪರೀಕ್ಷೆ ಮಾಡಿದ್ದೇನೆ. ಅದಕ್ಕಾಗಿ ನಿಮ್ಮನ್ನು ವಿಶೇಷವಾಗಿ ಅಭಿನಂದಿಸುವಂತಿಲ್ಲ. ನಿಮಗೆ ಮರಾಠಿಯ ಜ್ಞಾನ ಎಲ್ಲಿ ಉಂಟಾಯಿತು ಎಂದು ಕೇಳಬಹುದೆ?" ಎಂದರು. ಗಾಂಧಿ, "ನನ್ನ ಹಿಂದುಸ್ತಾನಿ ವಿಷಯದಲ್ಲಿ ಯಾವುದು ಸತ್ಯವೋ ಮರಾಠಿಯ ವಿಷಯದಲ್ಲಿಯೂ ಅದೇ ಸತ್ಯ. ಮರಾಠಿಯ ಒಂದು ಮಾತನ್ನೂ ನಾನು ಆಡಲಾರೆ. ಆದರೆ ನಿಮ್ಮ ಮರಾಠಿ ಭಾಷಣದ ಸಾರಾಂಶವನ್ನು ಸಂಗ್ರಹಿಸಬಲ್ಲೆನೆಂಬ ನಂಬಿಕೆ ನನಗೆ ಇದೆ. ವಿಷಯ ನನಗೆ ಪರಿಚಿತವಾದದ್ದು. ಹೇಗೂ ನಾನು ನಿಮ್ಮ ಅಭಿಪ್ರಾಯಗಳನ್ನು ತಪ್ಪಾಗಿ ಜನರಿಗೆ ಹೇಳದಂತೆ ನೀವು ನೋಡಿಕೊಳ್ಳುತ್ತೀರಿ" ಎಂದು ಹೇಳಿದರು. ಗಾಂಧಿಯ ಮಾತನ್ನು ಗೋಖಲೆ ಒಪ್ಪಿದರು. ಜೊಹಾನ್ಸ್‌ಬರ್ಗ್‌ನಿಂದ ಜಾನ್ಸಿಬಾರ್ ವರೆಗೆ, ಅಂತಹ ಸಭೆಗಳಲ್ಲೆಲ್ಲ ಅವರು ಮರಾಠಿಯಲ್ಲಿ ಮಾತನಾಡಿದರು. ಅವರ ಭಾಷಾಂತರಕಾರರಾಗಿ

ಗಾಂಧಿ ಕೆಲಸ ಮಾಡಿದರು. ಒಟ್ಟಿನಲ್ಲಿ ಪ್ರಯೋಗದ ಫಲಿತಾಂಶದಿಂದ ಗೋಖಲೆಗೆ ತೃಪ್ತಿಯಾಯಿತು. ಗಾಂಧಿಗೆ ಭಾರತೀಯ ಒಂದು ಭಾಷೆಗೆ, ದಕ್ಷಿಣ ಆಫ್ರಿಕದಲ್ಲಿ ಯಾವರೂ ತಕ್ಕ ಸ್ಥಾನ ದೊರೆಯಿತಲ್ಲ ಎಂದು ಸಂತೋಷವಾಯಿತು.

ಗೋಖಲೆ, ನೇಟಾಲನ್ನು ಸಂದರ್ಶಿಸಿದರು. ಪ್ರಿಟೋರಿಯಕ್ಕೆ ಹೋದಾಗ ಅವರು ದಕ್ಷಿಣ ಆಫ್ರಿಕ ಯೂನಿಯನ್ ಸರ್ಕಾರದ ಅತಿಥಿಯಾಗಿದ್ದರು. ಅಲ್ಲಿ ಅವರು ಜನರಲ್ ಬೋತ, ಜನರಲ್ ಸ್ಮಟ್ಸ್‌ರೂ ಸೇರಿದಂತೆ ಮಂತ್ರಿಗಳನ್ನು ಸಂಧಿಸಬೇಕಾಗಿದ್ದುದರಿಂದ, ನಾಲ್ಕು ವಸಾಪತುಗಳಲ್ಲಿ ಭಾರತೀಯರ ಇತಿಹಾಸವನ್ನು ಸಂಕ್ಷೇಪವಾಗಿ ಸಿದ್ಧಮಾಡುವಂತೆ ಗಾಂಧೀಗೆ ಹೇಳಿದರು. ಗೋಖಲೆ ರಾತ್ರಿಯೆಲ್ಲ ತಾವು ಎಚ್ಚರವಾಗಿದ್ದು ಇತರರನ್ನೂ ಎಚ್ಚರದಲ್ಲಿಟ್ಟು, ಎಲ್ಲ ವಿಷಯಗಳನ್ನೂ ಪೂರ್ಣವಾಗಿ ಅರಿತು ಕೊಂಡು, ದಕ್ಷಿಣ ಆಫ್ರಿಕದ ರಾಜತಾಂತ್ರಿಕರನ್ನು ಎದುರಿಸಲು ಸಿದ್ಧರಾದರು.

ನವಂಬರ್ ೧೪ರಂದು ಮಂತ್ರಿಗಳೊಡನೆ ಅವರ ಭೇಟಿ ಎರಡು ಗಂಟೆ ನಡೆಯಿತು. ಸಭೆಯಿಂದ ಹಿಂದಿರುಗಿ ಗೋಖಲೆ ಗಾಂಧಿಗೆ "ಗಾಂಧೀ ನೀವು ಭಾರತಕ್ಕೆ ಒಂದು ವರುಷದೊಳಗೆ ಹಿಂದಿರುಗಬೇಕು. ಎಲ್ಲವೂ ತೀರ್ಮಾನವಾಗಿದೆ. ಕರಾಳಶಾಸನ ಹಿಂತೆಗೆದು ಕೊಳ್ಳಲ್ಪಡುತ್ತದೆ. ವಲಸೆ ಕಾನೂನಲ್ಲಿ ಜನಾಂಗ ಪ್ರತಿಬಂಧಕ ಅಂಶ ರದ್ದಾಗುತ್ತದೆ. ಮೂರು ಪೌಂಡಿನ ತಲೆಗಂದಾಯ ವಜ ಆಗುತ್ತದೆ" ಎಂದು ಹೇಳಿದರು. ಆದರೆ ಗಾಂಧಿಗೆ ಭಯವಿದ್ದೇ ಇದ್ದಿತು. ಅವರು ಗೋಖಲೆಗೆ ಹೀಗೆ ಹೇಳಿದರು. "ಮಂತ್ರಿಗಳನ್ನು ನಾನು ಅರಿತಂತೆ ನೀವು ಅರಿತಿಲ್ಲ. ನೀವು ಈ ವಿಷಯದಲ್ಲಿ ಹೊಂದಿರುವಷ್ಟು ನಂಬಿಕೆ ನನಗೆ ಇಲ್ಲ. ಮಂತ್ರಿಗಳಿಂದ ಈ ಅಂಶವನ್ನು ನೀವು ಅರಿತಿರುವಿರೆಂಬುದೇ ನನಗೆ ಸಾಕು. ನಿಮಗೆ ಸರ್ಕಾರ ಕೊಟ್ಟಿರುವ ವಾಗ್ದಾನ, ನಮ್ಮ ಕೇಳಿಕೆಗಳು ನ್ಯಾಯವಾದುವು ಎಂಬುದಕ್ಕೆ ಸಾಕ್ಷಿ. ಹೋರಾಡಬೇಕಾಗಿ ಬಂದರೆ ಇದು ನಮ್ಮ ಹೋರಾಟದ ಉತ್ಸಾಹವನ್ನು ಇಮ್ಮಡಿಗೊಳಿಸುವುದು. ಆದರೆ ನಾನು ಭಾರತಕ್ಕೆ ಇನ್ನೊಂದು ವರುಷದೊಳಗೆ ಇನ್ನೂ ಅನೇಕ ಭಾರತೀಯರು ಸೆರೆಮನೆಗೆ ಹೋಗುವುದಕ್ಕೆ ಮುಂಚಿತವಾಗಿ ಹಿಂದಿರುಗಬಲ್ಲೆನೆಂದು ಯೋಚಿಸುವುದಿಲ್ಲ"

ಗೋಖಲೆ, ಟಾಲಸ್ಟಾಯ್ ಫಾರಂನಲ್ಲಿ ನವಂಬರ್ ಎರಡರಿಂದ ನಾಲ್ಕರವರೆಗೆ ಇದ್ದರು. ಅವರು ಕಲೆನ್‌ಬಾಕರ ಕೊಠಡಿಯಲ್ಲಿ ಉಳಿದುಕೊಂಡರು. ಅವರಿಗಾಗಿ ಪ್ರತ್ಯೇಕವಾದ ಒಂದು ಮಂಚವನ್ನು ಕೊಳ್ಳಲಾಗಿತ್ತು. ಗೋಖಲೆ ಬಂದ ಕ್ಷಣದಿಂದ ಹೊರಡುವವರೆಗೆ ಗಾಂಧೀ ಮತ್ತು ಕಲನ್‌ಬಾಕ್, ಅವರ ಶುಶ್ರೂಷೆಯಲ್ಲಿ ಎಡಬಿಡದೆ ತೊಡಗಿದ್ದರು. ಗಾಂಧಿ, ಸ್ವಂತ ಇಚ್ಛೆಯಿಂದಲೇ ಗೋಖಲೆಯ ಕೈಂಕರ್ಯವನ್ನು ಕೈಕೊಂಡರು. ಅವರ ಪರಿಚಾರಕರೂ ದಾದಿಯೂ ಆದರು. ಗೋಖಲೆಯವರ ವಸ್ತ್ರವನ್ನು ತುಂಬ ಎಚ್ಚರಿಕೆಯಿಂದ ತಮ್ಮ ಕೈಯಿಂದಲೇ ಒಗೆದು ಶುದ್ಧಿ ಮಾಡಿ ಇಸ್ತ್ರಿ ಮಾಡಿದರು.

ಪ್ರಿಟೋರಿಯದಲ್ಲಿ ನವಂಬರ್ ೧೪ರಂದು ಭಾರತೀಯರಿಗೆ ತಮ್ಮ ಬೀಳ್ಕೊ

ಡುಗೆಯ ಭಾಷಣದಲ್ಲಿ ಗೋಖಲೆ ಈ ಸಂದೇಶವನ್ನಿತ್ತರು. "ನಿಮ್ಮ ಭವಿಷ್ಯ, ನಿಮ್ಮ ಕೈಯಲ್ಲಿಯೇ ಇದೆ ಎಂಬುದನ್ನು ಎಂದಿಗೂ ನೆನಪಿಡಿ. ನೀವು ಟ್ರಾನ್ಸ್‌ವಾಲಿನಲ್ಲಿ ಕಳೆದ ಮೂರು ವರುಷಗಳಲ್ಲಿ ನಡೆಸಬೇಕಾಗಿ ಬಂದಂತಹ ಹೋರಾಟವನ್ನು ಮತ್ತೆ ನಡೆಸುವ ಆವಶ್ಯಕತೆ ಬರದಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಆದರೆ ಹೋರಾಟ ವನ್ನು ಮತ್ತೆ ಪ್ರಾರಂಭಿಸುವುದಾದರೆ, ಅಥವ ನಿಮಗೆ ನ್ಯಾಯದೊರೆಯದುದಕ್ಕಾಗಿ ಅಥವ ನಿಮ್ಮ ಮೇಲೆ ಹೊರಿಸಿದ ಅನ್ಯಾಯಕ್ಕಾಗಿ ಅಂತಹ ಚಳುವಳಿಯನ್ನು ನೀವು ನಡೆಸಬೇಕಾಗಿ ಬಂದರೆ ಒಂದು ಸಂಗತಿ ನೆನಪಿನಲ್ಲಿಟ್ಟುಕೊಳ್ಳಿ. ನೀವು ಪ್ರಕಟಿಸುವ ನಿಮ್ಮ ಶೀಲ, ಯೋಗ್ಯತೆ, ಒಗ್ಗಟ್ಟಿನಿಂದ ಕೆಲಸ ಮಾಡುವುದು, ನ್ಯಾಯಕ್ಕಾಗಿ ಕಷ್ಟವನ್ನು ಅನುಭವಿಸುವ ತ್ಯಾಗಮಾಡುವ ಶಕ್ತಿ ಇವುಗಳ ಮೇಲೆ ಈ ಪ್ರಶ್ನೆ ತೀರ್ಮಾನವಾಗುತ್ತದೆ. ಭಾರತ, ನಿಮ್ಮ ಬೆಂಬಲಕ್ಕೆ ಇರುವುದೆಂಬುದರಲ್ಲಿ ಸಂದೇಹವಿಲ್ಲ. ಅವಳ ಭಾವಪೂರಿತ ಸಹಾನುಭೂತಿ, ಅವಳ ಹೃದಯ, ಅವಳ ನಂಬಿಕೆ ಭರವಸೆ ನಿಮ್ಮೊಂದಿಗೆ ಇರುತ್ತವೆ. ಅಷ್ಟೇ ಅಲ್ಲ, ಈ ಸಾಮ್ರಾಜ್ಯದಲ್ಲಿರುವ ಅತ್ಯುತ್ತಮವಾದುದೆಲ್ಲ, ನಾಗರಿಕ ಪ್ರಪಂಚದಲ್ಲಿರುವ ಅತ್ಯುತ್ತಮವಾದುದೆಲ್ಲ, ನಿಮಗೆ ಜಯವನ್ನು ಬಯಸುತ್ತವೆ. ಆದರೆ ನಿಮಗೆ ಆದ ಅನ್ಯಾಯವು ಸರಿಯಾಗಬೇಕಾದರೆ ಮುಖ್ಯಕಾರ್ಯ ನಿಮ್ಮದಾಗಬೇಕು. ನೆನಪಿಟ್ಟುಕೊಳ್ಳಿ. ಈ ರಾಷ್ಟ್ರದಲ್ಲಿ, ಭಾರತೀಯ ಪ್ರಶ್ನೆಯನ್ನು ನ್ಯಾಯವಾಗಿ ಪರಿಹರಿಸಿಕೊಳ್ಳಲು ನಿಮಗೆ ಹಕ್ಕು ಇದೆ. ಅಂತಹ ನ್ಯಾಯವಾದ ಪರಿಹಾರದಲ್ಲಿ, ನಿಮ್ಮ ಇಂದಿನ ಜೀವಿತದ ಪ್ರಶ್ನೆ ಮಾತ್ರವಲ್ಲ. ನಿಮ್ಮ ಘನತೆ ಆತ್ಮಗೌರವ, ನಿಮ್ಮ ಮಾತೃಭೂಮಿಯ ಗೌರವ ಮತ್ತು ಒಳ್ಳೆಯ ಹೆಸರು ಇವುಗಳೆಲ್ಲ ವಿಳನವಾಗಿವೆ".

ಬೊಂಬಾಯಿಯಲ್ಲಿ ಬಂದು ಹಡಗಿನಿಂದ ಇಳಿದ ನಂತರ, ಒಂದು ಭಾಷಣದಲ್ಲಿ ಗೋಖಲೆ ಹೀಗೆ ಹೇಳಿದರು. "ಈಗ ಇರುವಂತೆ ಗಾಂಧಿಯೊಂದಿಗೆ ವೈಯಕ್ತಿಕವಾಗಿ ಸಂಪರ್ಕವನ್ನು ಹೊಂದಿದವರಿಗೆ ಮಾತ್ರ ಅವರ ವ್ಯಕ್ತಿತ್ವದ ಅದ್ಭುತ, ಅರ್ಥವಾಗುತ್ತದೆ. ನಿಸ್ಸಂದೇಹವಾಗಿ ಅವರು, ಧೀರರ ಮಹಾತ್ಮರ ಸತ್ವದಿಂದ ಮಾಡಲ್ಪಟ್ಟವರು.ಅಷ್ಟೇ ಅಲ್ಲ. ತಮ್ಮ ಸುತ್ತ ಇರುವ ಸಾಮಾನ್ಯ ಜನರನ್ನು ಧೀರರನ್ನಾಗಿಯೂ ಮಹಾತ್ಮರನ್ನಾ ಗಿಯೂ ಮಾಡುವ ಅತ್ಯಾಶ್ಚರ್ಯಕರವಾದ ಆತ್ಮಶಕ್ತಿ ಅವರಿಗೆ ಇದೆ. ನೀವು ನಂಬು ವಿರಾ? ಟ್ರಾನ್ಸ್‌ವಾಲ್‌ನಲ್ಲಿ ಈಚೆಗೆ ನಡೆದ ಸತ್ಯಾಗ್ರಹ ಹೋರಾಟದಲ್ಲಿ ೨೭೦೦ ಜನ ಭಾರತೀಯರು, ತಮ್ಮ ದೇಶದ ಮರ್ಯಾದೆ ರಕ್ಷಣೆಗಾಗಿ ಗಾಂಧೀಜಿಯ ನೇತೃತ್ವದಲ್ಲಿ ಸೆರೆಮನೆಗೆ ಹೋದರು. ಅವರಲ್ಲಿ ಕೆಲವರು ಒಳ್ಳೆ ಧನಿಕರು ಇದ್ದರು. ಸಣ್ಣ ವ್ಯಾಪಾರಿ ಗಳೂ ಇದ್ದರು. ಆದರೆ ಬಹುಭಾಗದ ಜನರು ಬಡವರು. ಸಮ್ಯ ವ್ಯಕ್ತಿಗಳು: ಬೀದಿ ಯಲ್ಲಿ ಸಾಮಾನು ಮಾರುವವರು. ಕೂಲಿಗಳು ಕೆಲಸಗಾರರು ಮುಂತಾದವರು: ಅವಿದ್ಯಾವಂತರು, ತಮ್ಮ ದೇಶವನ್ನು ಕುರಿತು ತಮ್ಮ ಬಾಳಿನಲ್ಲಿ ಮಾತನಾಡುವ ಅಭ್ಯಾಸವಿಲ್ಲದವರು. ಆದರೂ ಈ ಜನ, ಟ್ರಾನ್ಸ್‌ವಾಲಿನಲ್ಲಿ ಸೆರೆಮನೆ ಸೇರುವ ಧೈರ್ಯ ವನ್ನು ತೋರಿಸಿದರು. ಕೆಲವರು ಪದೇ ಪದೇ ಈ ಧೈರ್ಯವನ್ನು ತೋರಿಸಿದರು.

ಅವರು ಹೀಗೆ ಮಾಡಿದುದು, ತಮ್ಮ ದೇಶಕ್ಕೆ ವಿರೋಧವಾದ ಅವಮಾನಕರವಾದ ಶಾಸನಗಳಿಗೆ ತಲೆಬಾಗುವುದಕ್ಕೆ ಪ್ರತಿಯಾಗಿ. ಆ ಹೋರಾಟದಲ್ಲಿ ಅನೇಕ ಸಂಸಾರಗಳು ಒಡೆದು ಹೋದುವು. ಸಂಸಾರಗಳು ಚದುರಿ ಹೋದುವು, ಒಂದು ಕಾಲದಲ್ಲಿ ಧನಿಕ ರಾಗಿದ್ದವರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಪಾಪರ್ ಆದರು. ಸ್ತ್ರೀಯರು ಮಕ್ಕಳು ಅವರ್ಣನೀಯವಾದ ಕಷ್ಟವನ್ನು ಅನುಭವಿಸಿದರು. ಆದರೆ ಅವರು, ಈ ಬದಲಾವಣೆಯನ್ನು ಉಂಟು ಮಾಡಿದ ಗಾಂಧಿಯ ಆತ್ಮಬಲದಿಂದ ಸ್ಫೂರ್ತಿತರಾದರು. ಇದು ಮನುಷ್ಯನ ಆತ್ಮಶಕ್ತಿ ಹೇಗೆ ಮಾನವರ ಮನಸ್ಸಿನ ಮೇಲೆ ಮತ್ತೂ ಪರಿಸರದ ಮೇಲೆ ಸಹ ಪ್ರಭಾವವನ್ನು ಬೀರುತ್ತದೆಂಬ ಸತ್ಯವನ್ನು ಉದಾಹರಣೆಯಿಂದ ತೋರಿಸಿತು. ನಮ್ಮ ಬಾಳಿನಲ್ಲಿ, ಹೀಗೆ ಗಾಂಧೀ ಮಾಡಿದಂತೆ ತಮ್ಮ ಆತ್ಮಶಕ್ತಿಯಿಂದ ನನ್ನ ಮೇಲೆ ಪರಿಣಾಮ ಮಾಡಿದ ಇಬ್ಬರನ್ನು ಮಾತ್ರ ನಾನು ಬಲ್ಲೆ. ನಮ್ಮ ವೃದ್ಧ ಪಿತಾಮಹ ಮಹಾನ್ ದಾದಾಭಾಯಿ ನವರೋಜಿ ಮತ್ತು ನನ್ನ ಗುರು ಶ್ರೀ ರಾನಡೆ. ಅವರು ಎಂಥವರೆಂದರೆ ಅವರ ಎದುರಿಗೆ ನಾವು ಯಾವ ಅಕಾರ್ಯವನ್ನೂ ಅಯೋಗ್ಯ ಕಾರ್ಯ ವನ್ನೂ ಮಾಡಲು ನಾಚುತ್ತೇವೆ ಮಾತ್ರವಲ್ಲ ಅವರ ಸಮಕ್ಷದಲ್ಲಿ ನಮ್ಮ ಮನಸ್ಸು ಸಹ ಅಯೋಗ್ಯ ಕಾರ್ಯವನ್ನು ಕುರಿತು ಚಿಂತಿಸಲೂ ಹೆದರುವುದು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಈ ಹೋರಾಟ, ನಿಜವಾಗಿ ಗಾಂಧಿಯಿಂದಲೇ ಬೆಳೆದು ನಿಂತಿದೆ. ಸ್ವಾರ್ಥ ವಿಲ್ಲದೆ, ಕಳಂಕವಿಲ್ಲದೆ ಅವರು ಈ ದೊಡ್ಡ ಹೋರಾಟವನ್ನು ಭಾರತಕ್ಕಾಗಿ ಇಪ್ಪತ್ತು ವರ್ಷಗಳಿಂದ ನಡೆಸಿದ್ದಾರೆ. ಇಂಡಿಯ ಅವರಿಗೆ ಕೃತಜ್ಞತೆಯ ದೊಡ್ಡ ಋಣವನ್ನು ಸಲ್ಲಿಸಬೇಕಾಗಿದೆ. ಈ ಕಾರ್ಯಕ್ಕಾಗಿ ಅವರು ತಮ್ಮನ್ನೂ ತಮ್ಮ ಸರ್ವಸ್ವವನ್ನೂ ಪೂರ್ಣ ವಾಗಿ ತ್ಯಾಗ ಮಾಡಿದ್ದಾರೆ. ಅವರಿಗೆ ಒಳ್ಳೆ ಲಾಭದಾಯಕವಾದ ವಕೀಲಿವೃತ್ತಿಯಿದ್ದಿತು. ಅವರು ವರುಷಕ್ಕೆ ೫ ಸಾವಿರ ೬ ಸಾವಿರ ಪೌಂಡುಗಳನ್ನು ಸಂಪಾದಿಸುತ್ತಿದ್ದರು. ಈ ಮೊತ್ತ ದಕ್ಷಿಣ ಆಫ್ರಿಕದಲ್ಲಿ ವಕೀಲರಿಗೆ ಉತ್ತಮ ಸಂಪಾದನೆಯೆಂದು ಪರಿಗಣಿತ ವಾಗಿದೆ. ಆದರೆ ಈಗ ಅವರು ಅದನ್ನೆಲ್ಲ ಬಿಟ್ಟು ತಿಂಗಳಿಗೆ ಮೂರು ಪೌಂಡು ಖರ್ಚಿನಲ್ಲಿ ಬೀದಿಯ ಭಿಕಾರಿಯಂತೆ ಜೀವಿಸುತ್ತಿದ್ದಾರೆ. ಅವರ ವಿಷಯದಲ್ಲಿ ಎದ್ದು ಕಾಣುವ ಮತ್ತೊಂದು ಸಂಗತಿಯೆಂದರೆ ಅವರು ಈ ಬಹುದೊಡ್ಡ ಹೋರಾಟವನ್ನು ಅವಿಚ್ಛಿನ್ನವಾಗಿ ನಡೆಸಿದ್ದರೂ, ಅವರ ಮನಸ್ಸು, ಯೂರೋಪಿಯನ್ನರ ವಿಷಯದಲ್ಲಿ ದ್ವೇಷ ಮತ್ತು ಕಟುತ್ವರಹಿತವಾಗಿದೆ. ನನ್ನ ಪ್ರವಾಸದಲ್ಲಿ, ಯೂರೋಪಿಯನ್ ಜನರು, ಗಾಂಧಿಯನ್ನು ಸರ್ವತ್ರ ವಿಶ್ವಾಸದಿಂದ ನೋಡುತ್ತಾರೆ ಎಂಬುದು ವ್ಯಕ್ತವಾಯಿತು. ನನಗೆ ಇದಕ್ಕಿಂತ ಸಂತೋಷವಾದ ವಿಷಯ ಬೇರೊಂದಿಲ್ಲ. ಪ್ರತಿಯೊಂದು ಸಭೆ ಯಲ್ಲಿಯೂ ಸೇರುತ್ತಿದ್ದ ಯೂರೋಪಿಯನ್ನರು, ಗಾಂಧಿ ಸಭೆಯಲ್ಲಿದ್ದಾರೆ ಎಂದು ತಿಳಿದ ಕೂಡಲೇ ಅವರ ಸುತ್ತ ಬಂದು ಹಸ್ತಲಾಘವ ಕೊಡಲು ನಿಲ್ಲುತ್ತಿದ್ದರು. ತಾವು ಗಾಂಧಿಗೆ ವಿರೋಧವಾಗಿ ಕಠಿಣವಾಗಿ ಹೋರಾಡಿ ಅವರನ್ನು ಅರೆದುಹಾಕಲು ಪ್ರಯತ್ನಿಸಿದರೂ, ಮಾನವನಾಗಿ ಗಾಂಧೀಜಿಯನ್ನು ತಾವು ತುಂಬ ಗೌರವಿಸುತ್ತೇವೆಂಬು ದನ್ನು ಸ್ಪಷ್ಟಪಡಿಸುತ್ತಿದ್ದರು.

ಮಹತ್ತರ ಹೋರಾಟ

೧೯೧೩

ಸತ್ಯಾಗ್ರಹಿಗಳು ೧೯೧೩ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದನಂತರ ಗಾಂಧಿ ತಮ್ಮ ಪಾಠಶಾಲೆಯನ್ನು ಟಾಲಸ್ಟಾಯ್ ಫಾರಂನಿಂದ ಫೀನಿಕ್ಸ್ ಆಶ್ರಮಕ್ಕೆ ಸಾಗಿಸಿದರು.

ಫೀನಿಕ್ಸ್, ಪ್ರಾರಂಭವಾದಂದಿನಿಂದ ಬಹಳ ಬದಲಾವಣೆಯನ್ನು ಹೊಂದಿದ್ದಿತು. ಹಳೆಯ ಕೆಲವು ಜನರು ಹೊರಟು ಹೋಗಿದ್ದರು. ಕೆಲವು ಹೊಸಬರು ಬಂದು ಸೇರಿದ್ದರು. ಜಮೀನಿನ ತುಂಡುಗಳನ್ನು ಮೊದಲಿಗಿಂತ ಉತ್ತಮವಾಗಿ ಸಾಗುವಳಿ ಮಾಡುತ್ತಿದ್ದರು. ಒಂದು ಬಗೆಯ ಬೇಲಿಯನ್ನು ನೆಟ್ಟಿದ್ದರು. ಹೆಚ್ಚು ಕಡಿಮೆ ಎಲ್ಲರೂ ತಮ್ಮ ತಮ್ಮ ತರಕಾರಿಗಳನ್ನು ತಾವೇ ಬೆಳೆಯುತ್ತಿದ್ದರು. ಹಸಿಯ ಕಾಯಿಪಲ್ಯಗಳನ್ನೂ ಸೊಗಸಾದ ನಾನಾ ಬಗೆಯ ಪುಷ್ಪಗಳನ್ನು ಬೆಳಸುತ್ತಿದ್ದರು. ಪೈನ್‌ಆಪಲ್ ಬೆಳೆಯುತ್ತಿದ್ದವು. ಒಂದು ಎರಡು ಮನೆಗಳನ್ನು ವಿಸ್ತರಿಸಿದ್ದರು. ಹೆಚ್ಚು ಬೆಂಚು ಕುರ್ಚಿ ಮುಂತಾದವೂ ಇದ್ದುವು. ಕಿಟಕಿಗಳಿಗೆ ಆಕರ್ಷಣೀಯವಾದ ಪರದೆಗಳು ಇದ್ದವು. ಒಂದು ದೊಡ್ಡ ಕೊಠಡಿಯನ್ನು ಕಟ್ಟಿ, ಶಾಲೆಗಾಗಿ ಸಿದ್ಧಪಡಿಸಿದ್ದರು. ಆಗ ಅಲ್ಲಿ ಸುಮಾರು ಹದಿನಾಲ್ಕು ಮಕ್ಕಳು–ಐದು ವಯಸ್ಸಿನಿಂದ ಹದಿನೇಳು ವರುಷಗಳ ವರೆಗಿನವರು–ಶಾಲೆಗೆ ಬರುತ್ತಿದ್ದರು. ಗಾಂಧೀ, ವಿದ್ಯಾರ್ಥಿಗಳ ಶೀಲ ಮತ್ತು ಚಾರಿತ್ರ್ಯ ಬೆಳವಣಿಗೆಗೆ ತುಂಬ ಪ್ರಾಮುಖ್ಯವನ್ನು ಕೊಟ್ಟರು. ವಿದ್ಯಾರ್ಥಿಗಳು ಪ್ರಾಯಕ್ಕೆಬರುತ್ತಿದ್ದರು. ಅವರ ಬೆಳೆಯುತ್ತಿರುವ ಲೈಂಗಿಕ ಜೀವನವನ್ನು ಅವರು ಅಧ್ಯಯನ ಮಾಡಬೇಕಾಗಿದ್ದಿತು. ಆ ವಿಷಯದ ಮೇಲೆ ಅವರು ಬಹಳವಾಗಿ ಆಲೋಚಿಸಿ ಅನೇಕ ಗ್ರಂಥಗಳನ್ನೂ–ಜೊತೆಗೆ "ಯುವಕನು ಅರಿಯಬೇಕಾದುದೇನು" ಎಂಬ ಗ್ರಂಥವನ್ನೂ ತರಿಸಿಕೊಂಡರು. ಮಕ್ಕಳನ್ನು ಸಂಯಮದ ಮಾರ್ಗದಲ್ಲಿ ತಿದ್ದುವ ಅವರ ಪ್ರಯೋಗ ಎಲ್ಲ ಕಾಲದಲ್ಲಿಯೂ ಸುಗಮವಾಗಿ ನಡೆಯಲಿಲ್ಲ.

ಗಾಂಧೀಜಿಯ ವಿಶಾಲವಾದ ವಾಸದ ಕೊಠಡಿ ಆಶ್ರಮವಾಸಿಗಳೆಲ್ಲ ಒಟ್ಟಾಗಿ ಸೇರುವ ಸ್ಥಳವಾಗಿದ್ದಿತು. ಇಲ್ಲಿ ಪ್ರತಿಭಾನುವಾರವೂ ಪೂರ್ವ ಪಶ್ಚಿಮಗಳ ಸಮರಸ ಮಿಳನ; ಸಂಜೆ ಎಲ್ಲ ಸದಸ್ಯರೂ ಒಂದು ವಿಧವಾದ ಧಾರ್ಮಿಕ ಪ್ರಾರ್ಥನೆಗಾಗಿ ಸೇರುತ್ತಿದ್ದರು. ಒಬ್ಬಿಬ್ಬರು ಇಂಗ್ಲಿಷ್ ಸದಸ್ಯರು ಆರ್ಗನ್ ವಾದ್ಯವನ್ನು ನುಡಿಸುತ್ತಿದ್ದರು. ಪ್ರಾರ್ಥನೆಯ ಸಂಗೀತಭಾಗದಲ್ಲಿ, ಗಾಂಧಿಜಿ ಸಹ ಸೇರಿಕೊಂಡು ಪ್ರಾರ್ಥನಾ ಪುಸ್ತಕದಲ್ಲಿ ಆನಂದದಿಂದ ಲೀನರಾಗುತ್ತಿದ್ದರು. ಆ ಪ್ರಾರ್ಥನಾ ಪುಸ್ತಕವೆಲ್ಲ ಮೂಲಗಳಿಂದಲೂ ಆರಿಸಿದ ಹದಿನೆಂಟು ಹಾಡುಗಳನ್ನು ಫೀನಿಕ್ಸ್ ಪ್ರೆಸ್‌ನಲ್ಲಿ ಅಚ್ಚು ಮಾಡಿ ಬೈಂಡ್

ಮಾಡಿಸಿದ ಪುಸ್ತಕ. ಸಾಧಾರಣವಾಗಿ ಗಾಂಧೀಜಿ ಗೀತೆಯ ಒಂದು ಭಾಗದ ವಾಚನದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದ್ದರು. ಅವರ ಪ್ರಿಯವಾದ ಸ್ತೋತ್ರಗಾನಗಳು "ನನ್ನ ಜೀವವನ್ನು ತೆಗೆದುಕೊ ಅದು ದೇವರಿಗೆ ಮೀಸಲಾಗಲಿ" ಮತ್ತು (Take my life. Let it be Consecrated.) 'ಕರುಣಾಳು ಬಾ ಬೆಳಕೆ' ಎಂಬುವಾಗಿದ್ದವು.

೧೯೧೩ನೆ ಇಸ್ವಿಯ ಮಧ್ಯಭಾಗದಲ್ಲಿ, ಸತ್ಯಾಗ್ರಹ ಮತ್ತೆ ಪ್ರಾರಂಭವಾಗದಿದ್ದಲ್ಲಿ, ಭಾರತಕ್ಕೆ ಹಿಂದಿರುಗಬೇಕೆಂಬುದು ಗಾಂಧೀಜಿಯ ಉದ್ದೇಶವಾಗಿತ್ತು. ಆದರೆ ಜನವರಿ ೧೮ರಂದು ಇಂಡಿಯನ್ ಒಪಿನಿಯನ್ ಹೀಗೆ ಬರೆಯಿತು. "ಸತ್ಯಾಗ್ರಹದ ಪುನರ್ಜನ್ಮ ಆವಶ್ಯಕವಾಗಲಾರದೆಂದು ನಾವು ನಂಬಿದ್ದೆವು. ಆದರೆ ಸರ್ಕಾರ ಅದನ್ನು ಹೊರತರಲು ಹಠತೊಟ್ಟಂತೆ ತೋರುತ್ತದೆ. ಕರಾರಿಗೆ ಅನುಗುಣವಾಗಿ ಬ್ರಿಟಿಷ್ ಇಂಡಿಯ ಪ್ರಜೆಗಳು ಟ್ರಾನ್ಸ್‌ವಾಲಿನಲ್ಲಿಯೋ ಅಥವ ಯೂನಿಯನ್ನಿನಲ್ಲಿಯೋ ನೆಲೆಸಲು ಅವರಿಗೆ ಅವಕಾಶ ಕೊಡುವ ವಾಗ್ದಾನವನ್ನು ಸರ್ಕಾರ ನಡೆಸುವುದಿಲ್ಲವೆಂದು ನಮಗೆ ತಿಳಿದು ಬಂದಿದೆ".

ಮೂರು ಪೌಂಡು ತೆರಿಗೆಯ ಮಸೂದೆಯನ್ನು ಹಿಂದೆಗೆದುಕೊಳ್ಳುವ ವಾಗ್ದಾನವನ್ನು ಸರ್ಕಾರ ಮುರಿಯಿತು. ತಾತ್ಕಾಲಿಕ ಒಪ್ಪಂದ ಸಹ ಅನಿರ್ದಿಷ್ಟ ಮತ್ತು ಸಂದಿಗ್ಧವಾಗಿತ್ತು. ಅಂತಹ ಸಮಯದಲ್ಲಿ ಸುಪ್ರೀಂ ಕೋರ್ಟು, ಹೊಗೆಯಾಡುತ್ತಿದ್ದ ಬೆಂಕಿಗೆ ಸೌದೆ ಹಾಕುವ ಒಂದು ತೀರ್ಮಾನವನ್ನು ಕೊಟ್ಟಿತು: ಪೋರ್ಟ್ ಎಲಿಜಬೆತ್‌ನ ಹಸನ್ ಈಸಾಪ್ ಎಂಬುವನು ೧೯೦೮ರಲ್ಲಿ ಭಾರತವನ್ನು ಸಂದರ್ಶಿಸಿದ್ದನು. ಮತ್ತು ಆಗ ಬಾಯ್‌ಮರಿಯಮ್‌ಳನ್ನು ಮದುವೆಯಾಗಿದ್ದನು. ಹೆಂಡತಿಯನ್ನು ಬಿಟ್ಟು, ೧೯೦೯ ರಲ್ಲಿ ಅವನು ದಕ್ಷಿಣ ಆಫ್ರಿಕಕ್ಕೆ ಹಿಂದಿರುಗಿದನು. ಆದರೆ ಮತ್ತೆ ೧೯೧೨ರಲ್ಲಿ ಅವಳನ್ನು ಕರೆತರಲು ಇಂಡಿಯಕ್ಕೆ ಹೋದನು. ದಕ್ಷಿಣ ಆಫ್ರಿಕಕ್ಕೆ ಅವನು ಹೆಂಡತಿಯೊಂದಿಗೆ ಹಿಂದಿರುಗಿದಾಗ ವಲಸೆ ಅಧಿಕಾರಿ, ಅವಳು ಹಡಗಿನಿಂದ ಇಳಿಯಲು ಅವಕಾಶ ಕೊಡದೆ ಭಾರತಕ್ಕೆ ವಾಪಸು ಹೋಗಬೇಕೆಂದು ಅಪ್ಪಣೆ ಮಾಡಿದನು. ಸರ್ಕಾರವು ಹೆಂಡತಿಯನ್ನು ಭಾರತಕ್ಕೆ ದೂಡುವುದನ್ನು ತಡೆ ಹಿಡಿಯಬೇಕೆಂದು ಗಂಡನು ಕೊಟ್ಟ ಅರ್ಜಿಯನ್ನು, ಸುಪ್ರೀಂ ಕೋರ್ಟು ತಿರಸ್ಕರಿಸಿತು.

ಗಾಂಧೀಜಿ ಸರ್ಕಾರಕ್ಕೆ "ಸಾರ್ಲೆ ಜಡ್ಜ್‌ಮೆಂಟು ಸರ್ಕಾರಕ್ಕೆ ಒಪ್ಪಿಗೆಯೆ? ಕಾನೂನಿಗೆ ಜಡ್ಜ್ ಮಾಡಿರುವ ಅರ್ಥ ಸರಿಯಾದರೆ, ಸರ್ಕಾರ, ಭಾರತದಲ್ಲಿ ಭಾರತದ ಧಾರ್ಮಿಕ ಪದ್ಧತಿ ಮತ್ತು ಕಾನೂನಿಗನುಗುಣವಾಗಿ ನಡೆದಿರುವವಿವಾಹಗಳು ದಕ್ಷಿಣ ಆಫ್ರಿಕದಲ್ಲಿಯೂ ನ್ಯಾಯಬದ್ಧವಾಗುವಂತೆ ಕಾನೂನನ್ನು ತಿದ್ದುಪಡಿ ಮಾಡುವ ಉದ್ದೇಶವುಳ್ಳದುದಾಗಿದೆಯೋ ?" ಎಂದು ಕೇಳಿ ಬರೆದರು. ಗಾಂಧೀಜಿಯ ಪ್ರಾರ್ಥನೆಯನ್ನು ಸಲ್ಲಿಸಲು ಯೂನಿಯನ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಮಾರ್ಚಿ ೨೨ರ ಇಂಡಿಯನ್ ಒಪಿನಿಯನ್‌ನಲ್ಲಿ ಗಾಂಧಿ, ಈ ವಿಷಯದಲ್ಲಿ ಗಂಭೀರವಾದ ನಿಲವನ್ನು ಅಂಗೀಕರಿಸಿದರು. "ಮುಖ್ಯಪ್ರಶ್ನೆ, ಮುಸಲ್ಮಾನ ಸಂಪ್ರದಾಯದಂತೆ

ಮದುವೆಯಾದ ಹೆಂಡತಿ, ವಲಸೆ ಕಾನೂನಿನ ಅರ್ಥದಲ್ಲಿಯೂ ಮದುವೆಯಾದವಳೆ ಎಂಬುದು. ಜಡ್ಜರು ಈ ಮದುವೆ, ವಲಸೆ ಕಾನೂನಿನ ಆವಶ್ಯಕತೆಗಳನ್ನು ಪೂರೈಸಿಲ್ಲ ವಾಗಿ ಈ ಅರ್ಜಿಯನ್ನು ವಜಾ ಮಾಡಬೇಕು." ಎಂದು ನಿರ್ಣಯಿಸಿದರು. ಇದು ಒಂದು ಪರೀಕ್ಷಾ ಮೊಖದ್ದಮೆ ಎಂದು ತಿಳಿದೇ ಇತ್ತು. ಈ ಒಬ್ಬ ವ್ಯಕ್ತಿಗೆ ವಿರೋಧವಾಗಿ ತೀರ್ಮಾನವೂ ಕೊಡಲ್ಪಟ್ಟಿತು...ಇದರ ಅರ್ಥವೇನಾಯಿತು ಎಂದರೆ ಪ್ರತಿಯೊಬ್ಬ ಹಿಂದು ಹೆಂಡತಿಯೂ ಮುಸಲ್ಮಾನ ಹೆಂಡತಿಯೂ ಕಾನೂನಿಗೆ ವಿರುದ್ಧವಾಗಿ ದಕ್ಷಿಣ ಆಫ್ರಿಕ ದಲ್ಲಿದ್ದಾರೆ. ಆದುದರಿಂದ ಸರ್ಕಾರದ ಕರುಣೆಯಲ್ಲಿದ್ದಾರೆ. ಆ ಕರುಣೆಯೊಂದೇ ಅವಳನ್ನು ಈ ದೇಶದಲ್ಲಿ ಇರಗೊಡಬಲ್ಲದು. ಸತ್ಯಾಗ್ರಹಿಗಳು ತಮಗೆ ದೊರಕಬೇಕಾದ ಪರಿಹಾರ ಗಳಲ್ಲಿ ಈ ಮೊದಲು ಯೋಚಿಸದೆ ಇದ್ದ ಆದರೆ ಸಹನಾತೀತವಾದ ಈ ಕಿರುಕುಳಕ್ಕೆ ಪರಿಹಾರವನ್ನು ತಮ್ಮ ಆವಶ್ಯಕತೆಗಳಲ್ಲಿ ಸೇರಿಸಿಕೊಳ್ಳಬೇಕೇ ಎಂಬುದನ್ನು ಗಂಭೀರ ವಾಗಿ ಯೋಚಿಸಬೇಕು.".

ಮಾರ್ಚಿ ೩೦ ರಂದು ಜೋಹಾನ್ಸ್ ಬರ್ಗ್ ಹಮಿಡಿಯ ಇಸಾಮಿಕ್ ಸೊಸೈಟಿಯ ಭವನದಲ್ಲಿ ಬಾಯಿಮರಿಯಮ್ ಮೊಖದ್ದಮೆಯಲ್ಲಿ ಜಡ್ಜ್ ಸಾರ್ಲೆ ಕೊಟ್ಟ ತೀರ್ಮಾನವನ್ನು ಪ್ರತಿಭಟಿಸಲು ಸಾರ್ವಜನಿಕ ಸಭೆ ನಡೆಯಿತು. "ಭಾರತೀಯರು ತಮ್ಮ ಸ್ತ್ರೀತ್ವದ ರಕ್ಷಣೆ ಮತ್ತು ಗೌರವಕ್ಕಾಗಿ ಸತ್ಯಾಗ್ರಹವನ್ನು ಅಂಗೀಕರಿಸುವುದು ಅವರ ಕಡ್ಡಾಯ ಕರ್ತವ್ಯವಾಗುವುದು" ಎಂದು ಗಾಂಧಿ ಘೋಷಿಸಿದರು.

ಹೊಸ ವಲಸೆ ಕಾನೂನು, ವಿಶೇಷ ಗೆಜೆಟ್‌ನಲ್ಲಿ ಏಪ್ರಿಲ್ ೧೨ರಂದು ಪ್ರಕಾಶಿತ ವಾಯಿತು. ಗಾಂಧೀಜಿಯನ್ನು ಅದು ಪೂರ್ಣವಾಗಿ ನಿರಾಶೆಗೊಳಿಸಿತು. ಗಾಂಧಿ ಹೀಗೆ ಹೇಳಿದರು. "ಈ ಮಸೂದೆ, ಇದರ ಹಿಂದಿನದಕ್ಕಿಂತ ಹೆಚ್ಚು ಕೇಡಿನದಾಗಿದೆ. ತಾತ್ಕಾಲಿಕ ಒಪ್ಪಂದವನ್ನು ಮುಖ್ಯ ಅಂಶಗಳಲ್ಲಿಯೇ ಕಾರ್ಯಕಾರಿಯಾಗಿ ಮಾಡಲು ಇದರಲ್ಲಿ ಅವಕಾಶವಿಲ್ಲ. ಸರ್ಕಾರ ವಿಧಿಯಿಲ್ಲದೆ ಬಲಾತ್ಕಾರವಾಗಿ ಏನನ್ನು ಕೊಡಬೇಕೋ ಅಷ್ಟನ್ನು ಮಾತ್ರ ಕೊಡುತ್ತದೆ. ಯೂನಿಯನ್‌ನಲ್ಲಿ ಹಕ್ಕನ್ನು ಸಂಪಾದಿಸಿಕೊಂಡಿರುವ ವರಿಗೂ ಅದು ಕೇಡನ್ನು ಬಯಸುತ್ತದೆ. ಮತ್ತು ಹೇಗಾದರೂ ಮಾಡಿ, ನ್ಯಾಯ ದಿಂದಲೋ ಅನ್ಯಾಯದಿಂದಲೋ, ನಮ್ಮ ನಾಶವನ್ನು ಯೋಜಿಸುತ್ತಿದೆ ಎಂಬ ಸಂಶಯ ವನ್ನು ಈ ಮಸೂದೆ ದೃಢಪಡಿಸುತ್ತದೆ. ಈ ಕ್ರೂರ ವಿಧಾನವನ್ನು ಆಚರಿಸುವುವರಲ್ಲಿ ಎಷ್ಟು ದೂರ ಹೋಗಲು ಧೈರ್ಯವೋ ಅಷ್ಟನ್ನೂ ಮಾಡಿದ್ದಾರೆ. ವಲಸೆ ಮಸೂದೆ. ಕಾನೂನಾದರೆ, ಅದು ನಮ್ಮ ಪ್ರಿಯವಾದ ಕೆಲವು ಹಕ್ಕುಗಳನ್ನೂ ಮತ್ತು ಈಗಿರುವ ಹಕ್ಕುಗಳನ್ನೂ ಗಾಳಿಗೆ ತೂರಿ, ಈಗಾಗಲೇ ರಕ್ಷಣಾರಹಿತವಾಗಿರುವ ನಮ್ಮ ಸ್ಥಿತಿಯನ್ನು ಇದರ ಎರಡರಷ್ಟು ಅಪಾಯಕರವಾಗಿ ಮಾಡುತ್ತದೆ. ಸರ್ಕಾರ ತಿದ್ದಿ, ಮಸೂದೆಯನ್ನು ಮುಖ್ಯಾಂಶಗಳಲ್ಲಿ ಬದಲಾಯಿಸದಿದ್ದಲ್ಲಿ ಸತ್ಯಾಗ್ರಹದ ಪುನರುತ್ಥಾನವಾಗಬೇಕು : ಅದರ ಜೊತೆಯಲ್ಲಿ ಹಿಂದಿನ ದುಃಖಗಳೂ ನೋವುಗಳೂ ಸಹ. ಮತ್ತೆ ಸ್ಥಾಪಿತವಾಗಿರುವ ಸಂಸಾರಗಳೆಲ್ಲ ಒಡೆಯಬೇಕು. ನಾವು ಮತ್ತೆ ನೋವಿನಲ್ಲಿಯೇ ಸುಖವನ್ನು ಕಾಣು ವುದನ್ನು ಕಲಿಯಬೇಕು".

ಮೇ ಮೊದಲನೆಯ ವಾರದಲ್ಲಿ ಟ್ರಾನ್ಸ್‌ವಾಲ್ ಇಂಡಿಯನ್ ಮಹಿಳಾ ಸಂಘ ಅಂತರಂಗಿಕ ವ್ಯವಹಾರಗಳ ಸಚಿವರಿಗೆ. ಸಾರ್ಲೆ ತೀರ್ಮಾನ ಭಾರತ ಸ್ತ್ರೀಯರಿಗೆ ಉಂಟು ಮಾಡಿರುವ ಅವಮಾನವನ್ನು ಸಹಿಸುವುದಕ್ಕಿಂತ ಸೆರೆವಾಸವನ್ನು ಹೆಚ್ಚು ಪ್ರಿಯವಾಗಿ ಬಯಸಿ, ತಾವೂ ಪುರುಷರೊಂದಿಗೆ ಸತ್ಯಾಗ್ರಹವನ್ನು ಆಚರಿಸುವುದಾಗಿ ಟೆಲಿಗ್ರಾಂ ಕೊಟ್ಟಿತು.

ಮೇ ೩ರ ಇಂಡಿಯನ್ ಒಪಿನಿಯನ್‌ನಲ್ಲಿ ಗಾಂಧಿ ಹೀಗೆ ಬರೆದರು. "ಮಸೂದೆ ಅವಸರವಾಗಿ ಒಂದು ಮಜಲನ್ನು ದಾಟಿ ಹೋದರೂ, ಅದು ಮೂರನೆ ವಾಚನದ ಘಟ್ಟಕ್ಕೆ ತಲಪುವುದೇ ಇಲ್ಲವೆಂದು ನಾವು ಊಹಿಸುತ್ತೇವೆ. ಆದರೆ ಸತ್ಯಾಗ್ರಹಿಗಳು ಸಿದ್ಧವಾಗಿರುವುದು ಒಳ್ಳೆಯದು. ಸತ್ಯಾಗ್ರಹ ಪ್ರಾರಂಭವಾದರೆ, ಮುಂಬರುವ ಈ ಮೂರನೆಯ ಹೋರಾಟ ಅತ್ಯಂತ ಶುದ್ಧವೂ ಕೊನೆಯದೂ ಅತ್ಯಂತ ಉಜ್ವಲವೂ ಆಗಿರುತ್ತದೆ. 'ಒಬ್ಬ ಸತ್ಯಾಗ್ರಹಿ, ನ್ಯಾಯಕ್ಕೆ ಜಯವನ್ನು ದೊರಕಿಸಲು ಸಾಕು' ಎಂಬ ಥೋರೋವಿನ ನಂಬಿಕೆಯಲ್ಲಿ ನಾವೂ ಪಾಲುಗೊಳ್ಳುತ್ತೇವೆ. ನ್ಯಾಯ ನಮ್ಮ ಕಡೆಗಿದೆ. ಕೊಟ್ಟ ಪವಿತ್ರ ವಾಗ್ದಾನಗಳನ್ನು ಲಕ್ಷಿಸದ ಸರ್ಕಾರದ ಬಳಿ, ನ್ಯಾಯ ಇರಲಾರದು ಮತ್ತು ನಮ್ಮಲ್ಲಿ ಅನೇಕ ನಿಜವಾದ ಸತ್ಯಾಗ್ರಹಿಗಳಿದ್ದಾರೆ. ಆದರ್ಶ ಸತ್ಯಾಗ್ರಹಿಯ ಗುಣಲಕ್ಷಣಗಳ ಅಳತೆಯಿಂದ ನಮ್ಮಲ್ಲೆಲ್ಲ ಕೊರತೆ ತೋರಬಹುದು. ಆದರೆ ಮನುಷ್ಯ ಮಾತ್ರನಿಗೆ ಸಾಧ್ಯವಾದಷ್ಟು. ಆದರ್ಶದ ಸಮೀಪವನ್ನು ತಲುಪಬಲ್ಲವರು ನಮ್ಮ ಗುಂಪಿನಲ್ಲಿ ಅನೇಕರಿದ್ದಾರೆಂದು ನಮಗೆ ಖಾತರಿ ಇದೆ. ಅಂಥವರ ಮೇಲೆ ದೊಡ್ಡ ಕರ್ತವ್ಯ ಬಿದ್ದಿದೆ".

ಜೂನ್‌ನಲ್ಲಿ ವಲಸೆಗಾರರ ಮಸೂದೆ ಮಂಜೂರಾಯಿತು. ನಿರುತ್ಸಾಹಗೊಳ್ಳದೆ ಗಾಂಧಿ, ಸಂಧಾನದ ಮಾತುಕಥೆಗಳಿಗೆ ಹೊಸ ಪ್ರಯತ್ನವನ್ನು ಪ್ರಾರಂಭಿಸಿದರು. ಸೆಪ್ಟಂಬರ್ ೧೩ರಂದು, ಇಂಡಿಯನ್ ಒಪಿನಿಯನ್‌ನಲ್ಲಿ "ಮಾತು ಕಥೆಗಳು ನಿಷ್ಫಲ ವಾದವೆಂದು ಅವರು ಘೋಷಿಸಿದರು. ಯೂನಿಯನ್ ಸರ್ಕಾರ, ನಿಸ್ಸಂದೇಹವಾಗಿ ಸತ್ಯಾಗ್ರಹವನ್ನು ಆಹ್ವಾನಿಸುತ್ತಿದೆ. ಅದು ಅವರಿಗೆ ದೊರಕಬೇಕು. ತೀರ್ಮಾನದ ಮನೋಭಾವವಿಲ್ಲದಿದ್ದರೆ, ಆ ತೀರ್ಮಾನ ತೀರ್ಮಾನವೇ ಅಲ್ಲ. ಸರ್ಕಾರ ಇಂಡಿಯದವರ ವಿಷಯದಲ್ಲಿ ಸ್ನೇಹದಿಂದೇನೂ ಪ್ರೇರಿತವಾಗಿಲ್ಲ. ಆದುದರಿಂದ ತೀರ್ಮಾನವಾಗದಿರುವುದೂ ಒಳ್ಳೆಯದೆ. ಗಂಟು ಹಾಕಿದ ರಾಜಿಗಿಂತ ತೆರೆದ ಹೋರಾಟ ಎಷ್ಟೋ ಉತ್ತಮ. ಈ ಸಲದ ಹೋರಾಟ, ದಕ್ಷಿಣ ಆಫ್ರಿಕದ ಸರ್ಕಾರದ ಮತ್ತು ಯೂರೋಪಿಯನ್ ಜನತೆಯ ಮನೋಭಾವವನ್ನು ತಿದ್ದುವುದಕ್ಕಾಗಿ. ಈ ಪರಿಣಾಮ, ದಕ್ಷಿಣ ಆಫ್ರಿಕ ಸರ್ಕಾರದ ಮತ್ತು ಅದರ ಪ್ರಮುಖರಾದವರ ಹೃದಯವನ್ನು ಕರಗಿಸಬಲ್ಲ ದೀರ್ಘ ಕಾಲದ ಮತ್ತು ಕಟುವಾದ ಕಷ್ಟಗಳ ಅನುಭವದಿಂದ ಮಾತ್ರ ಸಾಧ್ಯ. ಈ ಅಗ್ನಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಶಕ್ತಿಯೂ ಆತ್ಮವಿಶ್ವಾಸವೂ ಜನತೆಗೆ ಉಂಟಾಗಲಿ" ಎಂದು ಬರೆದರು.

೨೦ನೆ ಸೆಪ್ಟಂಬರಿನಲ್ಲಿ ಕಾರ್ಯವಿಧಾನಗಳನ್ನು ಚರ್ಚಿಸುತ್ತ ಗಾಂಧಿ ಹೀಗೆ ಬರೆದರು. "ಈ ಸಲ ಸತ್ಯಾಗ್ರಹ, ಹಿಂದಿನವುಗಳಿಗೆ ಹೋಲಿಸಿದರೆ ಸುಲಭವಾಗುವುದು. ಏಕೆಂದರೆ ಅದು ಯೂನಿಯನ್ನಿನ ಎಲ್ಲ ಪ್ರಾಂತಗಳಿಗೂ ಅನ್ವಯಿಸುತ್ತದೆ. ಕಷ್ಟ ನೋವು ಕಡಿಮೆಯಾಗುತ್ತದೆಂದಲ್ಲ; ನಿಜವಾಗಿ ಅವು ಹೆಚ್ಚು ಆಗುವ ಸಂಭವವಿದೆ. ಆದರೆ ಜೈಲಿಗೆ ಹೋಗುವುದು ಸುಲಭವಾಗುವುದು. ಇಲ್ಲಿಯ ವರೆಗೆ ಸತ್ಯಾಗ್ರಹಿಗಳು, ಟ್ರಾನ್ಸ್‌ವಾಲ್ ಗಡಿಯನ್ನು ದಾಟಿ, ಬಂಧನವನ್ನು ಎದುರಿಸಿದರು. ಹಾಗೆಯೇ ಈ ಹೋರಾಟವೂ ಪ್ರಾರಂಭವಾಯಿತು. ಗಡಿಯನ್ನು ದಾಟುವ ವಿಷಯದಲ್ಲಿ ನಾವು ಒಟ್ಟಿಗೆ ಹೀಗೆ ಹೇಳಿಬಿಡಬಹುದು. ಈ ಬಗೆಯ ಹೋರಾಟದಿಂದ ನಾವು ಪ್ರಾಂತೀಯ ಗಡಿಗಳನ್ನು ತೆಗೆದು ಹಾಕಬೇಕೆಂದು ಹೇಳುತ್ತೇವೆಂದಲ್ಲ. ಅದಕ್ಕೆ ಬದಲಾಗಿ ಈ ಹೋರಾಟದ ಕಾರಣ ಮುಗಿದ ಕೂಡಲೇ, ಬೇರೆ ಬೇರೆ ಪ್ರಾಂತಗಳ ಗಡಿಗಳನ್ನು ದಾಟಿರುವವರು ತಾವು ಯಾವ ಪ್ರಾಂತಕ್ಕೆ ಸೇರಿದವರೋ ಅಲ್ಲಿಗೇ ಹಿಂದಿರುಗುತ್ತಾರೆ. ಸತ್ಯಾಗ್ರಹಿಗಳು ತಮ್ಮ ಖಾಸಗಿ ಮತ್ತು ಸ್ವಂತ ಹಕ್ಕುದಾರಿಗಾಗಿ ಹೋರಾಡುತ್ತಿಲ್ಲ. ಹೋರಾಡಲಾರರು."

ಮುಂದೆ ಅವರು ಹೀಗೆ ಹೇಳಿದರು. "ಆದರೆ ಗಡಿ ದಾಟುವುದು, ಮಡ್ಡು ಹೆಚ್ಚವಾಗುವ ಕಾರ್ಯ. ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಲು ಇಚ್ಛಿಯುಳ್ಳವರು ಗೌರವವಾಗಿ ಗಂಭೀರವಾಗಿ, ಬೀದಿಯಲ್ಲಿ ಸಾಮಾನು ಮಾರುವುದು, ಲೈಸೆನ್ಸಿಲ್ಲದೆ ವ್ಯಾಪಾರ ಮಾಡುವುದು, ಲೈಸೆನ್ಸ್ ಇದ್ದರೂ ತೋರಿಸದೆ ಇರುವುದು, ಈ ಮಾರ್ಗಗಳಿಂದ ಬಂಧನವನ್ನು ಆಹ್ವಾನಿಸಬಹುದು. ಅವರು ಪ್ರತಿ ಸಂದರ್ಭದಲ್ಲಿಯೂ ಪೋಲೀಸಿನವರಿಗೂ ಅಥವಾ ನ್ಯಾಯಸ್ಥಾನಕ್ಕೂ 'ಹೀಗೆ ಕಾನೂನು ಭಂಗಿಸುವುದು ನಮ್ಮ ಉದ್ದೇಶವಲ್ಲ. ಆದರೆ ಸರ್ಕಾರದೊಂದಿಗೆ ಒಂದು ತೀರ್ಮಾನವಾಗುವವರೆಗೆ ನೈತಿಕ ಅಥವಾ ಸ್ವಾಭಾವಿಕ ಆಧಾರವಿಲ್ಲದೆ ಬರಿಯ ಕೃತಕ ಆಧಾರದ ಮೇಲೆ ಸೃಷ್ಟಿಯಾಗಿರುವ ಕಾನೂನನ್ನು ನಡೆಸಲು ಅಧಿಕಾರಿಗಳೊಂದಿಗೆ ನಾವು ಸಹಕರಿಸುವುದಿಲ್ಲ' ಎಂದು ಹೇಳಬೇಕು. ಇದು ಒಂದು ದಿನದ ಹೋರಾಟವಲ್ಲ. ಪ್ರತಿಯೊಬ್ಬನೂ ತಾವು ಹೇಗೆ ಬಂಧನವನ್ನು ಆಹ್ವಾನಿಸಬಹುದೆಂಬುದನ್ನು ತಾನೇ ಯೋಚಿಸಿಕೊಳ್ಳಬಲ್ಲನು. ನಮ್ಮ ಮತ್ತು ನಮ್ಮ ದೇಶದ ಗೌರವಕ್ಕಾಗಿ ಕಷ್ಟವನ್ನು ಅನುಭವಿಸುವ ಇಚ್ಛಾಶಕ್ತಿ ನಮಗಿರುವುದಾದರೆ ಕಾಲವೂ ಅನುಭವವೂ ನ್ಯಾಯವಾದ ಮಾರ್ಗವನ್ನು ತೋರಿಸುವುವು."

ಹೋರಾಟವನ್ನು ಪುನರಾರಂಭಿಸಿದುದರಿಂದ ಗಾಂಧೀಜಿಯ ಕಾರ್ಯಕ್ರಮಗಳು ತುಂಬಾ ಹೆಚ್ಚಿದುವು. "ಜನ, ಕಷ್ಟವನ್ನೇ ಅನುಭವಿಸಬೇಕಾಗಿಬಂದರೆ, ಚೆನ್ನಾಗಿ ತಿಳಿದಿರುವ ಮತ್ತು ಗಂಭೀರವಾದ ಅಸೌಕರ್ಯಗಳಿಗಾಗಿ ಹಾಗೆ ಮಾಡುವುದು ಉತ್ತಮ".

ಹಿಂದಿನ ಹೋರಾಟದಲ್ಲಿ ಭಾರತೀಯ ಜನಾಂಗ ಅನುಭವಿಸಿದ್ದ ಭಯಂಕರ ಕಷ್ಟಗಳು—ಆರ್ಥಿಕ ನಷ್ಟವೇ ಐವತ್ತು ಲಕ್ಷ ರೂಪಾಯಿಗಳಾಗಿದ್ದಿತು—ಚಳುವಳಿಗೆ ದಾಖಲಾಗುವವರ ಸಂಖ್ಯೆಯನ್ನು ವಿಶಾಲಗೊಳಿಸುವ ಭರವಸೆ ಕೊಡಲಿಲ್ಲ. ಗಾಂಧೀ

ಹೀಗೆ ಹೇಳಿದರು "ಇದು ನಮ್ಮ ಮೂರನೆಯ ಹೋರಾಟ. ಹೋರಾಟಗಳಲ್ಲೆಲ್ಲ ಇದು ಅತ್ಯಂತ ಉಜ್ವಲವಾಗಿರುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ. ನಾವು ಸರ್ಕಾರವನ್ನು ಮೋಸಮಾಡುವುದಿಲ್ಲ. ನಮ್ಮನ್ನೂ ಮೋಸ ಮಾಡಿಕೊಳ್ಳ ಬಯಸುವುದಿಲ್ಲ. ಮುಂಬರುವ ಚಳುವಳಿಯಲ್ಲಿ ಜನರು ನೂರರ ಸಂಖ್ಯೆಯಲ್ಲಿ ಸೆರೆಮನೆಗೆ ಹೋಗುವರೆಂದು ನಾವು ನಿರೀಕ್ಷಿಸುವಂತಿಲ್ಲವೆಂಬುದು ಸ್ಪಷ್ಟ. ಆದರೆ ಸಂಖ್ಯೆಯಲ್ಲಿ ಕಡಿಮೆಯಾಗುವದು, ಕೆಲವೇ ಕೆಲವರ ಅತೀವಶ್ರದ್ಧೆ ಮತ್ತು ಅಜೇಯ ಮನೋದಾರ್ಢ್ಯದಿಂದ ಪೂರೈಕೆಯಾಗುತ್ತದೆ, ಜಗತ್ತಿನಲ್ಲಿ ಯಾವ ರಾಷ್ಟ್ರವೂ, ತನ್ನ ಎಲ್ಲ ಮಕ್ಕಳನ್ನೂ ಏಕಕಾಲದಲ್ಲಿ ಯುದ್ಧಭೂಮಿಗೆ ಕಳುಹಿಸುವುದು ಸಾಧ್ಯವಿಲ್ಲ. ನಮ್ಮದು ಶಾಂತಿಸೈನ್ಯ. ಆದರೆ ನಾವು ಹೋರಾಟರಂಗದಲ್ಲಿ ನಿಜವಾದ ಐದುನೂರು ಸತ್ಯಾಗ್ರಹಿಗಳನ್ನು ಹೊಂದಿರಲಿ, ಐವತ್ತು ಅಥವಾ ಐದು. ಕೊನೆಗೆ ಒಬ್ಬನೇ ಆಗಿರಲಿ, ಜಯ ನಮ್ಮದು".

ಹೋರಾಟವನ್ನು ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಗಾಂಧಿ, ಸರ್ಕಾರಕ್ಕೆ ಹೀಗೆ ತಿಳಿಸಿದರು. "ಜನಾಂಗ ವಿರೋಧ, ವಲಸೆ ಕಾನೂನನ್ನು ಎಲ್ಲಿಯವರೆಗೆ ವಿಕೃತ ಗೊಳಿಸುತ್ತಿರುತ್ತದೋ, ಇಂದಿನ ಕಾನೂನು ಜಾರಿಯಾಗುವುದಕ್ಕೆ ಹಿಂದೆ ಇದ್ದ ಹಕ್ಕು ಗಳನ್ನು ಎಲ್ಲಿಯವರೆಗೆ ಪುನರುಜ್ಜೀವನಗೊಳಿಸುವುದಿಲ್ಲವೋ, ವಿವಾಹಿತ ಸ್ತ್ರೀಯರ ಸ್ಥಾನ ದಕ್ಷಿಣ ಆಫ್ರಿಕದಲ್ಲಿ ಎಲ್ಲಿಯವರೆಗೆ ಸುಭದ್ರವಾಗಿರುವುದಿಲ್ಲವೋ–ಒಟ್ಟಿನಲ್ಲಿ ಸರ್ಕಾರವಲ್ಲಿ ಮತ್ತು ಈಗಿರುವ ಕಾನೂನಿನಲ್ಲಿ ಔದಾರ್ಯ ಮತ್ತು ನ್ಯಾಯ ಮನೋಭಾವ ಪ್ರಕಟವಾಗುವುದಿಲ್ಲವೋ–ಅಲ್ಲಿಯವರೆಗೆ ನಮ್ಮ ಸತ್ಯಾಗ್ರಹ ಮುಂದುವರಿಯುತ್ತಲೇ ಇರುತ್ತದೆ."

ಹೊಸ ವಿವಾಹ ಕಾನೂನಿನ ವಿಷಯ ಕಸ್ತೂರಿ ಬಾಗೆ ತಿಳಿದಾಗ ಅವರಿಗೆ ಅತಿಯಾದ ಕೋಪಬಂದು ಅವಳು ಗಾಂಧೀಜಿಗೆ ಹೇಳಿದಳು "ಹಾಗಾದರೆ ಈ ದೇಶದ ಕಾನೂನಿನಂತೆ ನಾನು ನಿಮ್ಮ ಹೆಂಡತಿಯಲ್ಲ?" ಗಾಂಧಿ, "ಹೌದು" ಎಂದರು. "ನಮ್ಮ ಮಕ್ಕಳೂ ನಮ್ಮ ನಮ್ಮ ವಾರಸುದಾರರಲ್ಲ" ಎಂದು ಸೇರಿಸಿದರು. ಕಸ್ತೂರಿ ಬಾ "ಹಾಗಾದರೆ ನಾವು ಭಾರತಕ್ಕೆ ಹೋಗೋಣ" ಎಂದಳು. ಗಾಂಧೀಜಿ "ಅದು ಹೇಡಿತನವಾಗುತ್ತದೆ. ಅದರಿಂದ ಕಷ್ಟ ಪರಿಹಾರವಾಗುವುದಿಲ್ಲ" ಎಂದರು. ಆಕೆ "ಹಾಗಾದರೆ ನಾನೂ ಚಳು ವಳಿಯಲ್ಲಿ ಸೇರಿಕೊಳ್ಳಲಾಗದೆ?" ಎಂದಳು. ಗಾಂಧಿ "ಆಗಬಹುದು. ಆದರೆ ಅದು ಸಣ್ಣ ವಿಷಯವಲ್ಲ" ಎಂದರು. "ನಿನ್ನ ಆರೋಗ್ಯ ಚೆನ್ನಾಗಿಲ್ಲ. ಇಂತಹ ಕಷ್ಟ ನಿನಗೆ ಅನುಭವವಿಲ್ಲ. ಚಳುವಳಿಯಲ್ಲಿ ಸೇರಿ ಅನಂತರ ಅಧೈರ್ಯದಿಂದ ಸೋತರೆ ಅದು ಅವಮಾನ" ಎಂದರು. ಆದರೆ ಕಸ್ತೂರಿ ಬಾ ಹೆದರಲಿಲ್ಲ. ಫೀನಿಕ್ಸ್‌ನ ಇತರ ಮಹಿಳೆ ಯರೂ ಅವರ ಜೊತೆ ಸೇರಿಕೊಂಡರು.

ಗಾಂಧೀಜಿಯ ಸಲಹೆಗಳಿಗಾಗಿ ಕಾಯುತ್ತಿದ್ದ ಫೀನಿಕ್ಸ್ ಸತ್ಯಾಗ್ರಹಿಗಳು, ವಾಲ್ಕ್ ಸ್ರಸ್ಟ್‌ಗಾಗಿ ಡರ್ಬಾನ್‌ನಲ್ಲಿ ಸೆಪ್ಟಂಬರ್ ಹದಿನೈದರಂದು ರೈಲನ್ನು ಏರಿದರು. ಅವರು ಕಾಫಿರ್‌ಮೇಲ್ ಟ್ರೇನಿನಲ್ಲಿ ಮೂರನೆಯ ತರಗತಿಯಲ್ಲಿ ತಮಗೆ ಅತ್ಯಂತ

ಆವಶ್ಯಕವಾದ ಕೆಲವು ಪದಾರ್ಥಗಳನ್ನು ಮಾತ್ರ ತೆಗೆದುಕೊಂಡು ಪ್ರಯಾಣ ಮಾಡಿದರು. ಆಪ್ತಮಿತ್ರರಿಗೆ ಮಾತ್ರ ಸುದ್ದಿ ತಿಳಿಸಲ್ಪಟ್ಟಿದ್ದರೂ ಎಲ್ಲ ವರ್ಗಗಳಿಗೂ ಸೇರಿದ ಸುಮಾರು ನೂರು ಭಾರತೀಯರು ಅವರನ್ನು ಸೆಂಟ್ರಲ್ ಸ್ಟೇಶನ್‌ನಲ್ಲಿ ಬೀಳ್ಕೊಟ್ಟರು. ಫೋಲ್ಕ್ ಸ್ರಸ್ಟ್ ಸೇರಿದಾಗ, ಅವರನ್ನು ವಲಸೆ ಅಧಿಕಾರಿ ತಡೆದನು. ಅವರು ಯಾವ ಸಂಗತಿ ಯನ್ನೂ ತಿಳಿಸಲಿಲ್ಲ. ಒಬ್ಬನೇ ಸತ್ಯಾಗ್ರಹಿ ಅವರೆಲ್ಲರ ಪರವಾಗಿ ಮತ್ತು ಅವರಿಗಾಗಿ ಕಾರ್ಯ ಮಾಡುತ್ತಿದ್ದನು. ಅವನು ವಿನಯದಿಂದ ಅಧಿಕಾರಿಗೆ "ನಿಮ್ಮನ್ನು ಪೇಚಾಟಕ್ಕೆ ಸಿಕ್ಕಿಸುವುದು ನಮ್ಮ ಇಚ್ಛೆಯಲ್ಲ. ಸದ್ಯಕ್ಕೆ ನಮ್ಮ ಪೂರ್ಣವಾದ ಹೆಸರು ವಿಳಾಸಗಳನ್ನು ಹೇಳುವುದಾಗಲೀ, ಅಥವಾ ನಮ್ಮನ್ನು ಗುರುತಿಸುವ ಸಂಗತಿಗಳನ್ನು ತಿಳಿಸುವುದಾಗಲೀ ನಮ್ಮ ಉದ್ದೇಶವಲ್ಲ" ಎಂದು ಹೇಳಿದನು.

ಅಧಿಕಾರಿಯ ಪ್ರಾರ್ಥನೆಯ ಮೇಲೆ, ಮರುದಿವಸ, ಎಲ್ಲರ ಪರವಾಗಿ ಮಾತ ನಾಡುತ್ತಿದ್ದವನು ಈ ಹೇಳಿಕೆಯಿತ್ತನು. "ನನ್ನ ಜೊತೆಯಲ್ಲಿ ಪ್ರಯಾಣ ಮಾಡು ತ್ತಿರುವವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುತ್ತೇನೆ. ನಾನು ಹನ್ನೆರಡು ಜನ ಪುರುಷರು ಮತ್ತು ನಾಲ್ವರು ಸ್ತ್ರೀಯರ ಜೊತೆಯಲ್ಲಿ ಹೋಗುತ್ತಿದ್ದೇನೆ. ನಾವು ಸತ್ಯಾಗ್ರಹಿಗಳಾದುದರಿಂದ ಕಾನೂನಿಗುಣವಾದ ಯಾವ ಕಾಗದ ಪತ್ರಗಳ ಕಾರಣವೂ ಪರೀಕ್ಷೆಯೂ ಇಲ್ಲದೆ ಪ್ರಯಾಣ ಮಾಡುತ್ತಿದ್ದೇವೆ. ಮತ್ತು ಸತ್ಯಾಗ್ರಹಿ ಗಳಾದುದರಿಂದ ಈಗಿರುವ ಕಾನೂನನ್ನು ಅಂಗೀಕರಿಸಲು ತಿರಸ್ಕರಿಸುತ್ತೇವೆ".

ಫೋಲ್ಕ್‌ಸ್ರಸ್ಟ್ ಪೋಲೀಸ್ ಠಾಣೆಯಲ್ಲಿ ಎಲ್ಲ ಸತ್ಯಾಗ್ರಹಿಗಳಿಗೂ ಸ್ಥಳಾವಕಾಶ ವಿರಲಿಲ್ಲ. ಅವರು ಸ್ನೇಹಿತರ ಮನೆಯಲ್ಲಿ ವಸತಿಯನ್ನು ಹುಡುಕಿಕೊಳ್ಳಲು ಅಧಿಕಾರಿ ಗಳು ತಿಳಿಸಿದರು. ಸೆಪ್ಟಂಬರ್ ೧೮ರಂದು, ಅವರನು ಕರೆಸಿ ಹೊಸ ಕಾನೂನಿಗನುಗುಣ ವಾಗಿ ಅವರು ನಿಷೇಧಿಸಲ್ಪಟ್ಟ ವಲಸೆಗಾರರೆಂದು ಅವರ ಮೇಲೆ ತಪ್ಪನ್ನು ಹೊರಿಸಿದರು. ಸೆಪ್ಟಂಬರ್ ೨೨ರಂದು ಪಂಗಡದ ಜನರನ್ನೆಲ್ಲ ನೇಟಾಲ್ ಗಡಿಗೆ ಗಡೀಪಾರು ಮಾಡಿ ದರು. ಗಡಿಯಲ್ಲಿದ್ದ ಆಳವಿಲ್ಲದ ಝರಿಯಲ್ಲಿ ಅರ್ಧದಿಂದ ಆಚೆಗೆ ಜನರನ್ನು ತಳ್ಳು ವುದರ ಮೂಲಕ ಗಡೀಪಾರು ಆಜ್ಞೆ ಜಾರಿ ಮಾಡಲ್ಪಟ್ಟಿತು. ಸತ್ಯಾಗ್ರಹಿಗಳು ಮತ್ತೆ ಹಿಂದಿರುಗಿದರು. ಅವರನ್ನು ಬಂಧಿಸಿ ಛಾರ್ಜ್ ಆಫೀಸಿಗೆ ನೇರವಾಗಿ ಕೊಂಡುಹೋದರು. ಹತ್ತು ಜನಕ್ಕೆ ಮೂರು ತಿಂಗಳ ಶಿಕ್ಷೆ; ಆರು ಜನಕ್ಕೆ—ಅವರಲ್ಲಿ ನಾಲ್ವರು ಮಹಿಳೆಯರು. ಕಸ್ತೂರಿ ಬಾ ಸೇರಿ— ಒಂದು ತಿಂಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು.

ಸತ್ಯಾಗ್ರಹಿಗಳು ಸುರಕ್ಷಿತವಾಗಿ ಸೆರೆಮನೆಯಲ್ಲಿ ಸೇರಿಸಲ್ಪಡುವವರೆಗೆ ಅವರ ಹೆಸರನ್ನು ಗಾಂಧಿ ರಹಸ್ಯವಾಗಿಟ್ಟಿದ್ದರು. ಸರ್ಕಾರ ಅವರನ್ನು ಅವರ ಪಾಡಿಗೆ ಬಿಟ್ಟು ಬಿಡುವ ಸಂಭವವಿದ್ದಿತು ಮತ್ತು ಕೊನೆಯ ಗಳಿಗೆಯಲ್ಲಿ ಏನಾದರೂ ಹಿಂದೆಗೆದರೆ ಅವರು ಮುಂದುವರಿಸಲು ಬಯಸಿದ ಚಳುವಳಿಗೆ ತುಂಬ ಹಾನಿಯನ್ನು ಉಂಟು ಮಾಡಬಹುದಾಗಿದ್ದಿತು.

ಗಾಂಧಿ, ಸೆಪ್ಟಂಬರ್ ೨೫ರಂದು ಕಾಫಿರ್ ಮೇಲ್‌ನಲ್ಲಿ ಡರ್ಬಾನ್‌ನಿಂದ ಟ್ರಾನ್ಸ್

ವಾಲಿಗೆ ಹೊರಟರು. ಅವರನ್ನು ಅನೇಕ ಮಿತ್ರರು, ಸ್ಟೇಷನ್ನಿನಲ್ಲಿ ಬೀಳ್ಕೊಟ್ಟರು. ಗಾಂಧೀಜಿಯ ನಾಲ್ವರು ಜೊತೆಗಾರರನ್ನೂ ವೋಲ್ಕ್‌ಸ್ರಸ್ಟ್‌ನಲ್ಲಿ ಬಂಧಿಸಿದರು. ಆದರೆ ಅಧಿಕಾರಿ ಗಾಂಧಿಯವರನ್ನು ಬಂಧಿಸಲಿಲ್ಲ. ಗಾಂಧಿ ಸಪ್ಟೆಂಬರ್ ೨೭ಕ್ಕೆ ಜೊಹಾನ್ಸ್ ಬರ್ಗ್‌ಗೆ ಬಂದು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಸಪ್ಟೆಂಬರ್ ೨೮ ರಂದು, ಗಾಂಧಿಯ ಮಗ ಮಣಿಲಾಲನೂ ಸೇರಿದಂತೆ ಪ್ರಸಿದ್ಧರಾದ ಸತ್ಯಾಗ್ರಹಿಗಳು ಬೆಳಗಿನ ಜಾವದಿಂದಲೇ, ತುಂಬಿದ ಕುಕ್ಕೆಗಳೊಂದಿಗೆ ಬೀದಿಯಲ್ಲಿ ವ್ಯಾಪಾರ ಮಾಡುತ್ತ ಹೊರಟರು. ಮೊದಲದಿನ ಅವರನ್ನು ಬಂಧಿಸಲಿಲ್ಲ. ಆದರೆ ಎರಡನೆಯ ದಿನ ಎಲ್ಲರನ್ನೂ ಬಂಧಿಸಿ ಏಳು ದಿನಗಳ ಕಠಿಣ ಶಿಕ್ಷೆಯನ್ನು ಕೊಟ್ಟರು.

ಈಗ ಸ್ತ್ರೀಯರನ್ನು ಚಳುವಳಿಯಿಂದ ಹೊರಗಿಡುವುದು ಸಾಧ್ಯವಾಗಿರಲಿಲ್ಲ; ಮಾತ್ರವೇ ಅಲ್ಲ, ಗಾಂಧೀಜಿ, ಅವರನ್ನೂ ಪುರುಷರ ಜೊತೆ ಆಹ್ವಾನಿಸಿದರು. ಅವರು ಮೊದಲು ಟಾಲಸ್ಟಾಯ್ ಫಾರವಿ್ಮನ ಮಹಿಳೆಯರನ್ನು ಆಹ್ವಾನಿಸಿದ್ದರು. ಅವರು ಅತ್ಯಂತ ಸಂತೋಷದಿಂದ ಚಳುವಳಿಯಲ್ಲಿ ಸೇರಿದ್ದರು. ಅವರ ಪೈಕಿ ಒಬ್ಬಳು ಗರ್ಭಿಣಿ ಯಾಗಿದ್ದಳು. ಉಳಿದ ಆರು ಜನ ಒಂದು ತಿಂಗಳ ಮಕ್ಕಳನ್ನು ಎತ್ತಿಕೊಂಡಿದ್ದರು. ಅವರೆಲ್ಲ–ಒಬ್ಬಳ ಹೊರತು– ತಮಿಳರು.

ನೇಟಾಲ್‌ನಿಂದ ಪರ್ಮಿಟ್ ಇಲ್ಲದೆ ಟ್ರಾನ್ಸ್‌ವಾಲಿಗೆ ಬರುವುದು ಹೇಗೆ ಅಪರಾಧ ವಾಗಿದ್ದಿತೋ, ಹಾಗೆಯೇ ಟ್ರಾನ್ಸ್‌ವಾಲಿನಿಂದ ನೇಟಾಲಿಗೆ ಹೋಗುವುದೂ ಅಪರಾಧ ವಾಗಿದ್ದಿತು. ಗಾಂಧೀಜಿಯ ತಂತ್ರ ಹೀಗಿತ್ತು: ನೆಟಾಲಿಗೆ ಪ್ರವೇಶಿಸಿದ ಕೂಡಲೇ ಸ್ತ್ರೀ ಸತ್ಯಾಗ್ರಹಿಗಳನ್ನು ಬಂಧಿಸಿದರೆ ಸರಿ; ಒಳ್ಳೆಯದೇ ಆಯಿತು. ಅವರು ಬಂಧಿತರಾಗ ದಿದ್ದರೆ ನ್ಯೂ ಕಾಸೆಲ್‌ಗೆ ಹೋಗಿ, ಅಲ್ಲಿ ನಿಂತು, ಅಲ್ಲಿಯ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಕರಾರುಬದ್ಧ ಕೂಲಿಗಳನ್ನು ಮುಷ್ಕರ ಹೂಡುವಂತೆ ಪ್ರೇರಿಸುವುದು. ಸ್ತ್ರೀ ಸತ್ಯಾಗ್ರಹಿಗಳ ಮಾತೃಭಾಷೆ ತಮಿಳು ಆಗಿತ್ತು. ಕಲ್ಲಿದ್ದಲಿನ ಗಣಿಯಲ್ಲಿಯ ಕೂಲಿಗಳ ಬಹುಭಾಗ ಮದ್ರಾಸ್ ಪ್ರಾಂತದಿಂದ ಬಂದವರಾಗಿ ತಮಿಳು ಅಥವಾ ತೆಲುಗನ್ನು ಮಾತನಾಡುತ್ತಿದ್ದರು.

ಟ್ರಾನ್ಸ್‌ವಾಲಿನಲ್ಲಿ ತಮ್ಮನ್ನು ಬಂಧಿಸದುದಕ್ಕಾಗಿ ನಿರಾಶೆಗೊಂಡ ಸತ್ಯಾಗ್ರಹಿ ಗಳು ಅನಂತರ ನೇಟಾಲಿಗೆ ಪ್ರವೇಶಿಸಿದರು. ಆದರೆ ಅಪ್ಪಣೆ ಚೀಟಿಯಿಲ್ಲದೆ ಪ್ರವೇಶಿ ಸಿದ್ದುದಕ್ಕಾಗಿ ಅವರನ್ನು ಸರ್ಕಾರ ಬಂಧಿಸಲಿಲ್ಲ. ಆಗ ಅವರು ಯೋಜಿತ ಕಾರ್ಯಕ್ರಮದಂತೆ ನ್ಯೂಕಾಸಲ್‌ಗೆ ಹೋಗಿ ತಮ್ಮ ಕೆಲಸದಲ್ಲಿ ತೊಡಗಿದರು. ಫಲ, ತತ್‌ಕ್ಷಣ ದೊರೆಯಿತು. ಕೂಲಿಗಳ ಮನಸ್ಸು ಕರಗಿತು. ಮೂರು ಸಾವಿರಕ್ಕಿಂತ ಹೆಚ್ಚು ಕೂಲಿಗಳು ಅಕ್ಟೋಬರ್ ೧೭ರಂದು ಮುಷ್ಕರ ಹೂಡಿದರು.

ಸರ್ಕಾರ, ಸ್ತ್ರೀ ಸತ್ಯಾಗ್ರಹಿಗಳನ್ನು ತಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಇನ್ನು ಬಿಡುವುದು ಸಾಧ್ಯವಿರಲಿಲ್ಲ. ಅಕ್ಟೋಬರ್ ಇಪ್ಪತ್ತೊಂದರಂದು ಸರ್ಕಾರ ಅವರನ್ನು ಬಂಧಿಸಿ, ಅವರಿಗೆ ಮೂರು ತಿಂಗಳು ಸಜ ವಿಧಿಸಿ ಅವರನ್ನೆಲ್ಲ

ಫೀನಿಕ್ಸ್ ಪಂಗಡದ ಜೊತೆ ಒಂದೇ ಸೆರೆಮನೆಯಲ್ಲಿಟ್ಟರು. ಬಾ ಫಾತಿಮಾ ಮೆಹತಾಬ್ ಮತ್ತು ಆಕೆಯ ತಾಯಿ, ಸೆರೆಮನೆ ಸೇರಿದ ಪ್ರಥಮ ಮುಸಲ್ಮಾನ ಮಹಿಳೆಯರು.

ಸ್ತ್ರೀಯರು ವಿಶೇಷವಾದ ಧೈರ್ಯವನ್ನು ತೋರಿಸಿದರು. ಅವರಿಗೆ ಕಾನೂನಿನ ತೊಡಕುಗಳು ಗೊತ್ತಿರಲಿಲ್ಲ. ಅನೇಕರಿಗೆ ತಮ್ಮ ದೇಶದ ವಿಷಯದಲ್ಲಿ ಯಾವುದೂ ತಿಳಿದಿರಲಿಲ್ಲ. ಅವರ ದೇಶಪ್ರೇಮ, ಶ್ರದ್ಧೆ ಭಕ್ತಿಯ ಮೇಲೆ ಅವಲಂಬಿಸಿತ್ತು. ಕೆಲವರು ಅನಕ್ಷರಸ್ಥರಾಗಿದ್ದರು; ಓದುವುದಕ್ಕೂ ಅರಿತವರಲ್ಲ. ಅವರು ಸೆರೆಮನೆಗೆ ಹೋದುದು "ತಮ್ಮ ಹೃದಯಾಂತರಾಳದಿಂದ ಅರ್ಪಿಸಿದ ಸಂಕಟ ಧ್ವನಿ ಮತ್ತು ಪ್ರಾರ್ಥನೆ" ಯಾಗಿತ್ತು. ಅವರೆಲ್ಲರನ್ನೂ ಮಾರಿಟ್ಸ್‌ಬರ್ಗ್ ಸೆರೆಮನೆಯಲ್ಲಿಟ್ಟಿದ್ದರು; ಅವರಿಗೆ. ತೊಂದರೆಯನ್ನೂ ಕೊಡುತ್ತಿದ್ದರು. ಅವರ ಆಹಾರ, ಅತಿ ಕನಿಷ್ಠ ದರ್ಜೆಯದಾಗಿತ್ತು. ಸೆರೆಮನೆಯ ಕೆಲಸವಾಗಿ ಅವರಿಗೆ ಬಟ್ಟೆ ಶುದ್ಧಿ ಮಾಡುವ ಕೆಲಸವನ್ನು ಕೊಟ್ಟಿದ್ದರು. ಹೊರಗಡೆಯಿಂದ ಆಹಾರವನ್ನು ತಂದು ಕೊಡಲು ಅವಕಾಶವಿರಲಿಲ್ಲ.

ನ್ಯೂಕ್ಯಾಸಲ್ ಕೂಲಿಗಳ ಮೇಲೆ, ಮಹಿಳಾ ಸತ್ಯಾಗ್ರಹಿಗಳ ಬಂಧನದಿಂದ ಪರಿಣಾಮವಾಯಿತು. ಅವರು ಮುಷ್ಕರ ಹೂಡಿ, ಪಂಗಡ ಪಂಗಡವಾಗಿ ಪಟ್ಟಣವನ್ನು ಪ್ರವೇಶಿಸಿದರು. ಈ ಸುದ್ದಿ ತಿಳಿದ ಕೂಡಲೇ ಗಾಂಧೀಜಿ ಫೀನಿಕ್ಸ್ ಬಿಟ್ಟು ನ್ಯೂಕ್ಯಾಸಲ್ಲನ್ನು ಪ್ರವೇಶಿಸಿದರು.

ಮುಷ್ಕರಕಾರರಿಂದ ಗಾಂಧೀಜಿಗೆ ಅನೇಕ ದೂರುಗಳು ಬಂದವು. ಮುಷ್ಕರ ಕಾರರಿಗೆ ದೀಪ, ನೀರು ನಿಲ್ಲಿಸಿಬಿಟ್ಟರು. ಅವರ ಮನೆಯ ಪಾತ್ರೆ ಪದಾರ್ಥಗಳನ್ನೆಲ್ಲ ಹೊರಕ್ಕೆ ಎಸೆದರು. ಮಾಲಿಕರ ಮನೆಗಳಲ್ಲಿ ವಾಸಿಸುತ್ತಿದ್ದ ಅನೇಕರಿಗೆ ಮನೆ ಬಿಡ ಬೇಕೆಂದು ಎಚ್ಚರಿಕೆ ಕೊಡಲ್ಪಟ್ಟಿತು. ಕೆಲವು ಮುಷ್ಕರಗಾರರಿಗೆ ಒದೆತಗಳೂ ಬಿದ್ದವು.

ಗಾಂಧೀಜಿಯ ಸಮಸ್ಯೆ, ಸುಲಭವಾದುದಾಗಿರಲಿಲ್ಲ. ಇನ್ನೂ, ಭಾರತದಿಂದ ಹಣ ಬರಲು ಪ್ರಾರಂಭವಾಗಿರಲಿಲ್ಲ. ಭಾರತೀಯ ವ್ಯಾಪಾರಿಗಳು ತುಂಬ ಭಯಗ್ರಸ್ತ ರಾಗಿದ್ದರು. ಅವರಿಗೆ ಕಲ್ಲಿದ್ದಲು ಮಾಲಿಕರೊಂದಿಗೆ ವ್ಯಾಪಾರಿ ಸಂಬಂಧವಿದ್ದುದರಿಂದ ಸತ್ಯಾಗ್ರಹಿಗಳಿಗೆ ಬಹಿರಂಗವಾಗಿ ಹಣಕೊಡಲು ಅವರು ಸ್ವಲ್ಪವೂ ಸಿದ್ಧರಾಗಿರಲಿಲ್ಲ. ಈ ಸಲ ಗಾಂಧಿ, ಅವರೊಂದಿಗೆ ಉಳಿದುಕೊಳ್ಳಲೂ ಇಲ್ಲ. ಅವರು ಮಧ್ಯಮ ವರ್ಗದ, ತಮಿಳು ಕ್ರೈಸ್ತನಾದ ಡಿ. ಎಂ. ಲಾಜರಸ್‌ನ ಮನೆಯಲ್ಲಿ ತಂಗಿದರು. ಲಾಜರಸ್ ಕರಾರು ಬದ್ಧಕೂಲಿ ಸಂಸಾರಕ್ಕೆ ಸೇರಿದವರಾಗಿದ್ದನು. ಅವನಿಗೆ ಭಾರತೀಯ ಗಣಿ ಕೆಲಸಗಾರರಲ್ಲಿ ತುಂಬ ಪ್ರೀತಿಯಿತ್ತು. ಅವನಿಗೆ ಒಂದು ಸಣ್ಣ ತುಂಡು ಹೊಲವೂ ಎರಡು ಮೂರು ಕೊಠಡಿಗಳುಳ್ಳ ಒಂದು ಮನೆಯೂ ಇದ್ದಿತು. ಅವನು ಗಾಂಧೀಜಿಗೂ ಉಳಿದ ಸ್ತ್ರೀ ಸತ್ಯಾಗ್ರಹಿಗಳಿಗೂ ಆಶ್ರಯ ಕೊಟ್ಟುದಲ್ಲದೆ ತನ್ನ ಸರ್ವಸ್ವವನ್ನೂ ಚಳು ವಳಿಗೆ ವಿನಿಯೋಗಿಸಿದನು. ಈಗ ಅವನ ಮನೆ ಒಂದು ಛತ್ರವಾಗಿ ಹೋಗಿತ್ತು. ಜನರು ಎಲ್ಲ ಕಾಲದಲ್ಲಿಯೂ ಬಂದು ಹೋಗುತ್ತಿದ್ದರು. ಅದಿಗೆ ಮನೆಗೆ ಹಗಲು ರಾತ್ರಿ ಬಿಡುಗಡೆಯಿರಲಿಲ್ಲ.

ಕೂಲಿಗಳಿಗೆ, ಅವರ ಮುಷ್ಕರಕ್ಕೆ ಅಂತ್ಯವೇ ಇಲ್ಲವೆಂದೂ ಆದುದರಿಂದ ಅವರು, ಅವರ ಒಡೆಯರು ಕೊಟ್ಟಿದ್ದ ವಾಸದ ಮನೆಗಳನ್ನು ಬಿಡಬೇಕೆಂದೂ ಗಾಂಧೀ ಹೇಳಿದರು. ಅವರು ಕೂಲಿಗಳಿಗೆ "ಕೊಳ್ಳುವವರು ಸಿಕ್ಕುವ ನಿಮ್ಮ ಪದಾರ್ಥಗಳನ್ನೆಲ್ಲ ಮಾರಿಬಿಡಿ ಉಳಿದುವನ್ನು ಮನೆಗಳಲ್ಲಿ ಬಿಟ್ಟು ಬಿಡಿ" ಎಂದು ಹೇಳಿದರು. ತಮ್ಮ ವಸ್ತ್ರಗಳು ಮತ್ತು ಕಂಬಳಿ ಇವಿಷ್ಟರೊಂದಿಗೆ ಮಾತ್ರ ಬಂದು ತಮ್ಮನ್ನು ಸೇರಬೇಕೆಂದೂ ಅವರಿಗೆ ತಿಳಿಸಿದರು. ಮುಷ್ಕರ ಇರುವಷ್ಟು ಕಾಲವೂ ತಾವೂ ಅವರೊಂದಿಗೆ ಇದ್ದು ಅವರ ಜೊತೆಯೇ ಊಟ ಮಾಡುವುದಾಗಿ ಗಾಂಧಿ ತಿಳಿಸಿದರು. "ಈ ನಿಯಮದಂತೆ ಮಾತ್ರ ನಾನು ನಿಮಗೆ ಮಾರ್ಗದರ್ಶಕನಾಗಲು ಸಿದ್ಧನಾಗಿದ್ದೇನೆ" ಎಂದರು. ಯಾವ ಬಗೆಯ ಬಲಾತ್ಕಾರಕ್ಕೂ ಅವಕಾಶವಿರಲಿಲ್ಲ.

ಕೆಲಸಗಾರರೆಲ್ಲ ಗಾಂಧೀಜಿಯ ಜೊತೆ ಸೇರಿದರು. ಹೆಂಡತಿ ಮಕ್ಕಳೊಂದಿಗೆ ತಲೆಯ ಮೇಲೆ ತಮ್ಮ ಬಟ್ಟೆಗಳ ಗಂಟುಗಳನ್ನು ಹೊತ್ತುಕೊಂಡು "ಗೃಹಜೀವನವನ್ನು ತೊರೆದು ಗೃಹರಹಿತ ಜೀವನಕ್ಕೆ" ನುಗ್ಗುತ್ತಿರುವವರ ಪ್ರವಾಹ ಅನಂತವಾಗಿತ್ತು.

ಐತಿಹಾಸಿಕ ಮಹಾಯಾತ್ರೆ

೧೯೧೩

ನ್ಯೂಕ್ಯಾಸಲ್‌ನಲ್ಲಿ ಮುಷ್ಕರ ಪ್ರಾರಂಭವಾದ ಅನಂತರ ಹದಿನೈದು ದಿವಸ ಪರಿಸ್ಥಿತಿ ಅನಿಶ್ಚಿತವಾಗಿತ್ತು. ಸರ್ಕಾರ ಒಂದು ವಿಧವಾದ ನರಗಳ ಯುದ್ಧವನ್ನು (ಮನಃಕ್ಷೋಭೆಯುಂಟಾಗುವ) ಹೂಡಿತ್ತು. ಮುಷ್ಕರ ಹೂಡಿದವರನ್ನಾಗಲೀ ಅವರ ಮುಂದಾಳುಗಳನ್ನಾಗಿ ಸೆರೆಹಿಡಿಯುವ ಇಚ್ಛೆಯನ್ನು ತೋರಿಸಲಿಲ್ಲ.

"ಈ ಜನರಿಗೆ, ಆಹಾರವನ್ನು ಹೇಗೆ ಒದಗಿಸಲಿ?" ಎಂದು ಗಾಂಧಿ ಯೋಚಿಸಿದರು. ನೂರಾರು ಜನರನ್ನು ನಿರುದ್ಯೋಗದಲ್ಲಿ ನಿಲ್ಲಿಸುವುದು ಒಳ್ಳೆಯದಲ್ಲ. ಒಂದು ಪರಿಹಾರ ಮಾರ್ಗ ಕಂಡಿತು. ಈ ನಂಬಿಕೆಯ ಯಾತ್ರಿಕರನ್ನು ಸತ್ಯಾಗ್ರಹದ ಶಿಪಾಯಿಗಳಾಗಿ ಏಕೆ ಪರಿವರ್ತಿಸಬಾರದು? ಈ ಸೈನ್ಯವನ್ನು ತೆಗೆದುಕೊಂಡು ಹೋಗಿ ಸೆರೆಮನೆಯಲ್ಲಿ ಯಾಕೆ ಸೇರಿಸಬಾರದು ಅಥವ ಟಾಲ್‌ಸ್ಟಾಯ್ ಫಾರಂನಲ್ಲಿನಿಲ್ಲಿಸಬಾರದು?" ಆದರೆ ಆ ಸೈನ್ಯದ ಬಲ ೫೦೦೦ ಆಗಿತ್ತು. ರೈಲು ಛಾರ್ಜಿಗೇ ಹಣವಿರಲಿಲ್ಲ. ಟ್ರಾನ್ಸ್‌ವಾಲಿನ ಗಡಿ ದೂರದಲ್ಲಿತ್ತು. ನಡೆದುಕೊಂಡು ಹೋಗುವುದೆಂದು ಗಾಂಧೀ ತೀರ್ಮಾನಿಸಿದರು. "ಕೈಕಾಲು ಊನವಾಗಿದ್ದವರು ಮಾತ್ರ ರೈಲಿನಲ್ಲಿ ಹೋಗಬೇಕು" ಎಂದರು.

ಈ ಸಿದ್ಧತೆಗಳು ನಡೆಯುತ್ತಿರುವಾಗ ಕಲ್ಲಿದ್ದಲು ಒಡೆಯರಿಂದ. ಬಂದು ಸಂಧಿಸಬೇಕೆಂಬ ಒಂದು ಆಹ್ವಾನ ಗಾಂಧಿಗೆ ತಲಪಿತು. ಕೆಲಸಕ್ಕೆ ಹಿಂದಿರುಗುವಂತೆ ಮುಷ್ಕರಕಾರರಿಗೆ ಗಾಂಧಿ, ಸಲಹೆ ಕೊಡಬೇಕೆಂದು ಅವರು ಬಯಸಿದರು. ಗಾಂಧೀ ಅದಕ್ಕೆ ಒಪ್ಪಲಿಲ್ಲ. ಬದಲಾಗಿ ಕಲ್ಲಿದ್ದಲು ಒಡೆಯರು, ಮೂರು ಪೌಂಡಿನ ತೆರಿಗೆಯನ್ನು ರದ್ದು ಮಾಡಿಸಲು ಕೆಲಸಗಾರರ ಪರವಾಗಿ ಸರ್ಕಾರದಲ್ಲಿ ಪ್ರಯತ್ನಿಸಬೇಕೆಂದು ಹೇಳಿದರು.

ಗಾಂಧಿ, ನ್ಯೂಕ್ಯಾಸಲ್‌ನಿಂದ ಹಿಂದಿರುಗಿದಾಗ, ಇನ್ನೂ ಹೆಚ್ಚು ಕೂಲಿಗಳು ತಮ್ಮ ಸೈನ್ಯಕ್ಕೆ ಬಂದು ಸೇರಿರುವುದನ್ನು ಕಂಡರು. ಎಲ್ಲ ಕಡೆಗಳಿಂದಲೂ ಇನ್ನೂ ಅನೇಕರು ಬರುತ್ತಿದ್ದರು. ಕಲ್ಲಿದ್ದಲು ಒಡೆಯರು ತೋರಿಸಿದ ಭಯವನ್ನು ಗಾಂಧಿ ಅವರಿಗೆ ಹೇಳಿ, ಅಪಾಯಗಳನ್ನೆಲ್ಲ ಚಿತ್ರೀಕರಿಸಿದರು. ಕೆಲಸಗಾರರ ಜೊತೆಯಲ್ಲಿ ಅವರ ಹೆಂಡತಿ ಮಕ್ಕಳೂ ಸಹ ಇದ್ದರು. ಆದರೆ ಅವರಾರೂ ಹಿಂದಕ್ಕೆ ಹೋಗಲು ಇಷ್ಟಪಡಲಿಲ್ಲ. ತಮಗೆ ಇಂಥ ಕಷ್ಟಗಳೆಲ್ಲ ಅಭ್ಯಾಸವಾಗಿರುವುದರಿಂದ ತಮ್ಮ ವಿಷಯದಲ್ಲಿ ಗಾಂಧಿ ಕಾತರರಾಗಿರಬೇಕಾದುದಿಲ್ಲವೆಂದು ಅವರು ಹೇಳಿದರು.

ಒಂದು ಸಾಯಂಕಾಲ, ಮಾರನೆಯ ಬೆಳಗಿನ ಜಾವ ತಮ್ಮ ನಡಿಗೆಯ ಯಾತ್ರೆಯನ್ನು ಪ್ರಾರಂಭಿಸಬೇಕೆಂದು ಆರು ಸಾವಿರ ಕೂಲಿಗಳಿಗೆ ತಿಳಿಸಲಾಯಿತು. ಯಾತ್ರೆ

ಯಲ್ಲಿ ಅನುಸರಿಸಬೇಕಾದ ನಿಯಮಗಳನ್ನೆಲ್ಲ ಅವರಿಗೆ ಓದಲಾಯಿತು. ಅವರಿಗೆ ಸಿಕ್ಕುತ್ತಿದ್ದುದು ಒಬ್ಬೊಬ್ಬರಿಗೆ ದಿನಕ್ಕೆ ಒಂದುವರೆ ಪೌಂಡು ಬ್ರೆಡ್, ಅರ್ಧ ಔನ್ಸು ಸಕ್ಕರೆ ಮಾತ್ರ. ಯಾರೊಬ್ಬರೂ ಆವಶ್ಯಕವಾದುದಕ್ಕಿಂತ ಹೆಚ್ಚು ವಸ್ತ್ರಗಳನ್ನು ಇಟ್ಟುಕೊಳ್ಳಕೂಡದು. ದಾರಿಯಲ್ಲಿ ಯಾರ ಪದಾರ್ಥಗಳನ್ನೂ ಮುಟ್ಟಕೂಡದು. ಬಂಧನವನ್ನು ಸ್ವಾಗತಿಸಬೇಕು, ಬಯ್ಗುಳವನ್ನು ಶಾಂತಿಯಿಂದ ಸೈರಿಸಬೇಕು. ಛಡಿ ಏಟನ್ನು ಸಹ ಸಹಿಸಬೇಕು. ಈ 'ಸೈನ್ಯ'ವನ್ನು ತಮ್ಮ ಸ್ಥಳದಲ್ಲಿ ನಿಂತು ಮುಂದುಮುಂದಕ್ಕೆ ನಡೆಸಿಕೊಂಡು ಹೋಗುವವರ ಹೆಸರನ್ನೂ ಗಾಂಧಿ ಹೇಳಿದರು. ಬೋಅರ್ ಯುದ್ಧ ಮತ್ತು ಜುಲು 'ದಂಗೆ'ಯಲ್ಲಿ ಅವರಿಗೆ ದೊರೆತಿದ್ದ ಅನುಭವ, ಈಗ ಒಳ್ಳೆ ಸಹಾಯಕ್ಕೆ ಬಂದಿತು.

೧೯೧೩–ಅಕ್ಟೋಬರ್ ೨೮ರಂದು ಆ ಉದ್ದವಾದ ಕಾರವಾನ್ (ಯಾತ್ರಿಕರ ಸಾಲು) ನ್ಯೂಕ್ಯಾಸಲ್‌ನಿಂದ ೩೬ ಮೈಲಿ ದೂರವಿದ್ದ ಚಾರಲ್ಸ್‌ಟೌನ್ ಎಂಬ ಚಿಕ್ಕದಾದ ಗಡಿ ಊರನ್ನು ತಲಪಿತು. ಅಲ್ಲಿ ಸ್ತ್ರೀಯರಿಗೆ ಮಾತ್ರ ಉಳಿದುಕೊಳ್ಳಲು ಸ್ಥಳ ಸಿಕ್ಕಿತು. ಉಳಿದವರೆಲ್ಲ ಬಯಲಿನಲ್ಲಿ ತಂಗಿ, ತಮ್ಮ ಝಾಡಮಾಲಿಗಳಾಗಿ ತಮ್ಮ ಮಲಗಳ ಶುದ್ಧಿಯನ್ನೂ ಮಾಡಿಕೊಂಡರು. ಕಾಲೆನ್‌ಬಾಕ್ ಆ ವೇಳೆಗೇ ಅಲ್ಲಿಗೆ ಬಂದಿದ್ದರು. ಅವರ ಜೊತೆ ಮಿಸ್ ಚೆಲ್ಸಿನ್, ಪಿ. ಕೆ. ನಾಯಿಡು ಮತ್ತು ಆಲ್ಬರ್ಟ್ಸ್ ಕ್ರಿಸ್ಟಾಫರ್ ಸಹ ಬಂದಿದ್ದರು.

ನ್ಯೂಕ್ಯಾಸೆಲ್‌ನಿಂದಲೂ ಅನೇಕ ಕೂಲಿಗಳು ಬಂದು ಸೇರಿದರು. ಅಡಿಗೆ ಮನೆ ಇಪ್ಪತ್ತು ನಾಲ್ಕು ಗಂಟೆಯೂ ಚಟುವಟಿಕೆಯಲ್ಲಿದ್ದಿತು. ಹಸಿದವರು ಹಗಲು ರಾತ್ರಿ ಯಾವ ಘಳಿಗೆಯಲ್ಲಿಯೂ ಬರುತ್ತಿದ್ದರು. ಊಟಕ್ಕೆ ಅಕ್ಕಿ ಬೇಳೆ ಇವುಗಳೆ. ಗಾಂಧಿ, ಅಡಿಗೆ ಮಾಡುವವರಿಗೆ ಮುಖಂಡರಾಗಿ, ಆಹಾರವನ್ನು ಹಂಚುವ ಕೃತಜ್ಞತೆಯಿಲ್ಲದ ಕಾರ್ಯವನ್ನು ವಹಿಸಿಕೊಂಡರು. ಬೇಳೆಯಲ್ಲಿ ನೀರು ಹೆಚ್ಚಾಗಿರುತ್ತಿದ್ದಿತು. ಅಥವಾ ಆಹಾರ ಚೆನ್ನಾಗಿ ಬೆಂದಿರುತ್ತಿರಲಿಲ್ಲ. ಆದರೂ ಸೈನ್ಯ, ಮಾತನಾಡದೆ ಊಟ ಮಾಡುತ್ತಿತ್ತು. ಅಶಿಸ್ತು ಅಥವ ಕೋಪದ ಪ್ರದರ್ಶನ ಇರಲಿಲ್ಲ.

ಒಬ್ಬ ಪ್ರತ್ಯಕ್ಷದರ್ಶಿ ಹೀಗೆ ಹೇಳುತ್ತಾನೆ: "ಚಾರ್ಲ್ಸ್ ಟೌನಿನ ಒಂದು ದರ್ನಾತದ ಟಿನ್ ಗುಡಿಸಲಿನ ಹಿತ್ತಲಿನಲ್ಲಿ ಗಾಂಧಿ ಇದ್ದರು. ಅವರ ಮುಂದೆ ಒಂದು ಒರಟಾದ ಮರದ ಮೇಜು ಇತ್ತು. ಮಗ್ಗುಲಲ್ಲಿ ಹನ್ನೆರಡು ಚೀಲಗಳಲ್ಲಿ ೫೦೦ ತುಂಡು ಬ್ರೆಡ್ ಇದ್ದವು. ಷರಾಯಿ ಮತ್ತು ಷರ್ಟ್‌ನ್ನು ಮಾತ್ರ ಧರಿಸಿದ್ದ ಗಾಂಧಿ, ಅದ್ವಿತೀಯ ಕೈ ಚುರುಕಿನಿಂದ ರೊಟ್ಟಿಗಳನ್ನು ಮೂರು ಮೂರು ಅಂಗುಲಕ್ಕೆ ಕತ್ತರಿಸಿ, ತನ್ನ ಭುಜದ ಹಿಂದುಗಡೆಯ ಬಟ್ಟಲಿನಲ್ಲಿದ್ದ ಸಕ್ಕರೆಯನ್ನು ಅದಕ್ಕೆ ತುಂಬಿ ಹೊರಗಡೆ ಕ್ಯೂನಲ್ಲಿ ನಿಂತಿದ್ದ ಭಾರತೀಯರಿಗೆ ಅವನ್ನು ಹಂಚುತ್ತಿದ್ದರು. ಒಂದು ಸಲಕ್ಕೆ ಹನ್ನೆರಡು ಜನರಂತೆ ಒಳಕ್ಕೆ ಬಿಡುತ್ತಿದ್ದರು. ಹೀಗೆ ಮಾಡುತ್ತಿರುವಾಗ ಗಾಂಧಿ, ಉದ್ದಕ್ಕೂ ನನಗೆ ನಿರ್ದುಷ್ಟವಾದ ಸುಸಂಸ್ಕೃತ ಇಂಗ್ಲಿಷಿನಲ್ಲಿ ತಮ್ಮ ಚಳುವಳಿಯ ಕ್ರಮವನ್ನು ವಿವರಿಸುತ್ತಿದ್ದರು".

ಮುಷ್ಕರ ಪೂರ್ಣ ಬಿರುಸಿನಿಂದ ನಡೆಯುತ್ತಿದ್ದಿತು. ರೈಲಿನಿಂದಲೂ ರಸ್ತೆ

ಯಿಂದಲೂ ಕೂಲಿಗಳು ನದೀ ಪ್ರವಾಹದಂತೆ ನುಗ್ಗಿಬರುತ್ತಿದ್ದರು. ಇಬ್ಬರು ಮಹಿಳೆಯರು ತಮ್ಮ ಹಸುಗೂಸುಗಳು ಮಾರ್ಗದಲ್ಲಿ ಸತ್ತು ಹೋದರೂ ಕಠೋರ ಧೈರ್ಯದಿಂದ ಚಾರಲ್ಸ್ ಟೌನನ್ನು ತಲುಪಿದರು. ಒಂದು ಮಗು, ದಾರಿಯಲ್ಲಿ ಗಾಳಿ ಬಿಸಿಲಿಗೆ ಸಿಕ್ಕಿ ಸತ್ತಿತು. ಮತ್ತೊಂದು, ನದಿಯನ್ನು ದಾಟುತ್ತಿರುವಾಗ ತಾಯಿಯ ಕೈಯಿಂದ ನದಿಯೊಳಕ್ಕೆ ಬಿದ್ದು ತೇಲಿಹೋಯಿತು. ಆದರೆ ಆ ವೀರಮಾತೆಯರು ದುಃಖದಲ್ಲಿ ಮುಳುಗಿ ಹೋಗಲು ಮನಸ್ಸು ಕೊಡಲಿಲ್ಲ. ಒಬ್ಬಳು "ನಾವು ಸತ್ತವರಿಗಾಗಿ ಕೊರಗುವುದಲ್ಲ. ನಾವು ಎಷ್ಟು ಕೊರಗಿದರೂ ಅವರೇನೂ ಹಿಂದಕ್ಕೆ ಬರುವುದಿಲ್ಲ. ನಾವು ಬದುಕಿರುವವರಿಗಾಗಿ ಕೆಲಸ ಮಾಡಬೇಕು" ಎಂದಳು.

ಯಾತ್ರಿಕರನ್ನು ಸರ್ಕಾರ ಚಾರಲ್ಸ್‌ಟೌನಿನಲ್ಲಿಯೇ, ಟ್ರಾನ್ಸ್‌ವಾಲನ್ನು ಮುಟ್ಟುವುದಕ್ಕೆ ಮುಂಚಿತವಾಗಿ ಬಂಧಿಸಬಹುದೆಂದು ಶಿಬಿರದಿಂದ ಗಾಂಧಿ, ತಂತಿ ಕೊಟ್ಟರು. ಅವರು "ಸರ್ಕಾರ, ಮೂರು ಪೌಂಡು ತೆರಿಗೆಯ ಕಾನೂನನ್ನು ಹಿಂದೆಗೆದುಕೊಂಡರೆ, ಕರಾರು ಬದ್ಧಕೂಲಿಗಳನ್ನು ಮುಷ್ಕರದಿಂದ ಬಿಡಿಸಿ ಅವರನ್ನು ತಮ್ಮ ಕೆಲಸಕ್ಕೆ ಹಿಂದಕ್ಕೆ ಕಳುಹಿಸಬಹುದು. ಈ ಮುಷ್ಕರದ ಕೂಲಿಗಳು ಭಾರತೀಯರ ಇತರ ಅಸೌಕರ್ಯಗಳ ಸತ್ಯಾಗ್ರಹದಲ್ಲಿ ಸೇರುವುದು ನನ್ನ ಇಷ್ಟವಲ್ಲ" ಎಂದೂ ಸರ್ಕಾರಕ್ಕೆ ತಿಳಿಸಿದರು.

ಒಂದು ವಾರದ ವರೆಗೆ ಈ ತಂತಿಗೆ ಯಾವ ಜವಾಬು ಸರ್ಕಾರದಿಂದ ಬರಲಿಲ್ಲ. ಸತ್ಯಾಗ್ರಹಿ ಸೈನ್ಯಕ್ಕೆ ಹೊಸ ಸಲಹೆಗಳು ಕೊಡಲ್ಪಟ್ಟವು. ಅವರು ನಿತ್ಯ ಇಪ್ಪತ್ತರಿಂದ ಇಪ್ಪತ್ತನಾಲ್ಕು ಮೈಲಿ ನಡೆದು, (ಎಂಟುದಿನಗಳಿಗೆ ಅಥವ ಮಧ್ಯೆ ಬಂಧಿತರಾಗುವ ವರೆಗೆ)–ಟಾಲಸ್ಟಾಯ್ ಫಾರಮ್ಮನ್ನು ತಲುಪಬೇಕಾಗಿದ್ದಿತು. ಅವರನ್ನೆಲ್ಲ ಫಾರಮ್ಮಿನಲ್ಲಿ ನಿಲ್ಲಿಸಲು ಕಾಲೆನ್‌ಬಾಕ್, ಎಲ್ಲ ಏರ್ಪಾಡನ್ನೂ ಮಾಡಿದ್ದರು. ಟಾಲಸ್ಟಾಯ್ ಫಾರಮ್ಮನ್ನು ಸೇರಿ, ಅಲ್ಲಿ ಈ ಕೆಲಸಗಾರರಿಂದಲೇ ಮಣ್ಣಿನ ಗುಡಿಸಲುಗಳನ್ನು ಕಟ್ಟಿಸಿ ಹೋರಾಟಮುಗಿಯುವವರೆಗೆ ಅಲ್ಲಿಯೇ ಇರುವುದು; ಜೀವನಕ್ಕಾಗಿ ಅಲ್ಲಿಯ ಭೂಮಿಯನ್ನು ಸಾಗುವಳಿ ಮಾಡುವುದು, ಉದ್ದೇಶವಾಗಿದ್ದಿತು.

ಪ್ರಯಾಣಕ್ಕೆ ಎಲ್ಲ ಸಿದ್ಧತೆಗಳೂ ಮುಗಿದನಂತರ, ಗಾಂಧಿ, ತೀರ್ಮಾನಕ್ಕಾಗಿ ಮತ್ತೊಂದು ಪ್ರಯತ್ನ ಮಾಡಿದರು. ಚಾರ್ಲ್ಸ್‌ಟೌನಿನಿಂದ ಅವರು ಜನರಲ್ ಸ್ಮಟ್ಸ್‌ರಿಗೆ ಟೆಲಿಫೋನ್ ಮಾಡಿದರು. ಸ್ಮಟ್ಸರು, ಪ್ರಿಟೋರಿಯಾದಲ್ಲಿದ್ದರು. ಅವರ ಸೆಕ್ರಟರಿ "ಜನರಲ್‌ರಿಗೆ ನಿಮ್ಮೊಂದಿಗೆ ಏನೂ ಕೆಲಸವಿಲ್ಲ. ನಿಮಗೆ ಇಷ್ಟ ಬಂದಂತೆ ಮಾಡಬಹುದು" ಎಂದು ಉತ್ತರ ಕೊಟ್ಟರು. ಮರುದಿನ ಹೊರಡುವುದೆಂದು ಗಾಂಧಿ ತೀರ್ಮಾನಿಸಿದರು.

ಈ ಸಲ ಗಾಂಧೀಜಿ, ಮೊದಲಿಗಿಂತ ಉತ್ತಮವಾದ ಏರ್ಪಾಡುಗಳನ್ನು ಮಾಡಿದ್ದರು. ಅವರು ಒಂದು ಸಣ್ಣ ತಾತ್ಕಾಲಿಕ ಔಷಧಿ ಪೆಟ್ಟಿಗೆ– ಜೊತೆಯಲ್ಲಿ ಸಾಮಾನ್ಯರೂ ಉಪಯೋಗಿಸಬಹುದಾದ ಕೆಲವು ಶಸ್ತ್ರೋಪಕರಣಗಳು– ಇವನ್ನು ತೆಗೆದುಕೊಂಡರು. ಆದರೆ, ಯಾತ್ರಿಕರ ಜೊತೆ ಯಾವ ವಾಹನವೂ ಇಲ್ಲದುದರಿಂದ ಪೆಟ್ಟಿಗೆಯನ್ನು ಹೆಗಲಿನ

ಮೇಲೆ ಹೊತ್ತುಕೊಂಡು ಹೋಗಬೇಕಾಗಿದ್ದಿತು. ಅವರು ಪ್ರತಿದಿನವೂ ಒಂದು ಹಳ್ಳಿಯ ಸಮೀಪದಲ್ಲಿ ತಂಗುವವರಾದುದರಿಂದ ಅತ್ಯಂತ ಕಡಿಮೆ ಔಷಧಿಗಳನ್ನು–ಸುಮಾರು ಒಂದು ನೂರು ಜನಕ್ಕೆ ಸಾಕಾಗುವಷ್ಟು ಮಾತ್ರ–ಕೊಂಡು ಹೋಗುತ್ತಿದ್ದರು. ಗಾಂಧಿ, ಆಹಾರಕ್ಕೂ ಔಷಧಿಗೂ ಹಳ್ಳಿಯವರ ಮೇಲೆ ಅವಲಂಬಿಸಿದ್ದರು. ಒಂದು ದೊಡ್ಡ ಯೂರೋಪಿಯನ್ ಬ್ರೆಡ್ ಕಾರ್ಖಾನೆಯು, ಸ್ವಸಂತೋಷದಿಂದ ಪ್ರತಿಯೊಂದು ತಂಗುವ ಮಜಲಿನಲ್ಲಿಯೂ ಬ್ರೆಡ್ಡನ್ನು ಒದಗಿಸಲು ಕಂಟ್ರಾಕ್ಟ್ ಮಾಡಿಕೊಂಡಿತು. ಏರ್ಪಾಡುಗಳೆಲ್ಲ ಸುಗಮವಾಗಿ ನಡೆದವು. ಏಕೆಂದರೆ ರೈಲ್ವೆ ಅಧಿಕಾರಿಗಳು ಸಹ ಬ್ರೆಡ್ಡನ್ನು ಸಕಾಲದಲ್ಲಿ ಸಾಗಿಸಿಕೊಡುವುದರಲ್ಲಿ ಸಹಕರಿಸಿದರು. ಯಾತ್ರೆಯ ಖರ್ಚು ದಿನಕ್ಕೆ ೨೫೦ ಪೌಂಡು ಆಗಿತ್ತು. ಗೋಖಲೆಯವರು ತಿಂಗಳಿಗೆ ೭ ಸಾವಿರ ಪೌಂಡಿನಂತೆ ಆರು ತಿಂಗಳು ಹಣ ಒದಗಿಸಲು ಯೋಜಿಸಿದರು.

ನವಂಬರ್ ಆರರಂದು, ಬೆಳಗಿನ ಆರುವರೆ ಗಂಟೆಗೆ ೨೦೩೭ ಪುರುಷರು ೧೨೭ ಸ್ತ್ರೀಯರು ಮತ್ತು ೫೭ ಮಕ್ಕಳು, ಪ್ರಾರ್ಥನೆಯನ್ನು ಸಲ್ಲಿಸಿ "ದೇವರ ಹೆಸರಿನಲ್ಲಿ" ಯಾತ್ರೆಯನ್ನು ಪ್ರಾರಂಭಿಸಿದರು. ಈ ಯಾತ್ರಿಕರು ಕಲ್ಲಿದ್ದಲು ಗಣಿಕೆಲಸಗಾರರು, ಅಥವಾ ಕಬ್ಬಿನ ತೋಟಗಳ ಕೆಲಸಗಾರರು. ಕೆಲವರು ಕರಾರುಬದ್ಧ ಕೂಲಿಗಳು. ಕೆಲವರು ಸ್ವತಂತ್ರ ಕೂಲಿಗಳು. ಕೆಲವರು ಪಾಶ್ಚಾತ್ಯ ಉಡುಪನ್ನು ಧರಿಸಿದ್ದರು. ಆದರೆ ಬಹು ಪಾಲು ಯಾತ್ರಿಕರು ತುಂಡು ಪಂಚೆ ಉಟ್ಟಿದ್ದರು.

ಚಾರಲ್ಸ್‌ಟೌನಿನಿಂದ ಒಂದು ಮೈಲಿ ದೂರದಲ್ಲಿ ಟ್ರಾನ್ಸ್‌ವಾಲನ್ನೂ ನೇಟಾಲಿನ್ನೂ ಬೇರ್ಪಡಿಸುವ ಒಂದು ನದಿಯಿದ್ದಿತು. ರಾವುತ ಪೋಲೀಸರು ಗಡಿಯಲ್ಲಿ ಕಾವಲಿದ್ದರು. ಗಾಂಧಿ ತಾನು ಸನ್ನೆ ಮಾಡಿದಾಗ ಯಾತ್ರಿಕರು ಗಡಿಯನ್ನು ದಾಟಬೇಕೆಂದು ಯಾತ್ರಿಕರಿಗೆ ಹೇಳಿ ಪೋಲೀಸಿನವರ ಬಳಿಗೆ ಹೋದರು. ಆದರೆ ಅವರಿನ್ನೂ ಪೋಲೀಸಿನವರೊಂದಿಗೆ ಮಾತನಾಡುತ್ತಿರುವಾಗ ಹರಕಲು ಬಟ್ಟೆಯ ಇಂಡಿಯನ್ನರು ಸಂತೋಷ ಧ್ವನಿಯಿಂದ ಕೂಗುತ್ತ, ಬೇರೆ ಭಾಗದಲ್ಲಿ ನುಗ್ಗಿ ಗಡಿಯನ್ನು ದಾಟಿದರು. ಪೋಲೀಸರು ಅವರನ್ನು ಸುತ್ತುಗಟ್ಟಿದರು. ಆದರೆ ಏರಿ ಬರುತ್ತಿರುವ ಗುಂಪನ್ನು ತಡೆಯುವುದು ಸುಲಭವಾಗಿರಲಿಲ್ಲ. ಅವರನ್ನು ಬಂಧಿಸುವ ಉದ್ದೇಶ ಪೋಲೀಸರಿಗೆ ಇರಲಿಲ್ಲ. ಗಾಂಧಿ ಯಾತ್ರಿಕರನ್ನೆಲ್ಲ ಸಮಾಧಾನಗೊಳಿಸಿ ಅವರನ್ನೆಲ್ಲ ಒಂದು ಸಾಲಿನಲ್ಲಿ ನಿಲ್ಲುವಂತೆ ಮಾಡಿದರು. ಕೆಲವೇ ನಿಮಿಷಗಳಲ್ಲಿ ಶಿಸ್ತು ಸ್ಥಾಪನೆಯಾಗಿ ಯಾತ್ರಿಕರು, ಟ್ರಾನ್ಸ್‌ವಾಲಿಗೆ ಯಾತ್ರೆಯನ್ನು ಪ್ರಾರಂಭಿಸಿದರು.

ಮೂರು ಮೈಲಿ ದೂರದ ಮೆರವಣಿಗೆ ರಸ್ತೆಯ ಮೇಲೆ ಹರಡಿ, ವೋಲ್ಕ್‌ಸ್ರಸ್ಟ್‌ನ ಬೀದಿಗಳ ಮೂಲಕ ಹೋಗುವಾಗ, ಹಿಂಸಾಕೃತ್ಯವನ್ನು ಮಾಡುವುದಾಗಿ ಎರಡು ದಿನಗಳ ಕೆಳಗೆ ಹೆದರಿಸಿದ್ದ ಯೂರೋಪಿಯನ್ನರು ಯಾವ ತೊಂದರೆಯನ್ನೂ ಕೊಡಲಿಲ್ಲ. ಕೆಲವರು, ಭಾರತೀಯರು ಟ್ರಾನ್ಸ್‌ವಾಲನ್ನು ಪ್ರವೇಶಿಸಿದರೆ ಅವರನ್ನು ಗುಂಡಿಟ್ಟು ಕೊಲ್ಲುವುದಾಗಿ ಹೇಳಿದ್ದರು. ಆ ಗೊಂದಲಮಯ ಸಭೆಯಲ್ಲಿ ಹಾಜರಿದ್ದ ಕಾಲೆನ್

ಬಾಕರು ಯೂರೋಪಿಯನ್ನರೊಂದಿಗೆ ಸಮಾಧಾನಕರವಾದ ಮಾತುಗಳನ್ನು ಆಡಲು ಪ್ರಯತ್ನಿಸಿದಾಗ ಅವರನ್ನು, ಕೂಗಿ ತಿರಸ್ಕರಿಸಿದ್ದರು. ಹೇಗೂ ಅಹಿಂಸಾ ಶಿಪಾಯಿಗಳು ಆ ಸ್ಥಳವನ್ನು ಶಾಂತಿಯಿಂದ ದಾಟಿ ಹೋದರು.

"ಸನ್‌ಡೆ ಪೋಸ್ಟ್" ಹೀಗೆ ಬರೆಯಿತು. "ಗಾಂಧೀ ಮಾರ್ಗದರ್ಶನವಲ್ಲಿ ಹೋಗುತ್ತಿರುವ ಯಾತ್ರಿಕರು ತುಂಬ ಚಿತ್ರಮಯ ಜನಗುಂಪು. ಅವರು ಕಣ್ಣಿಗೆ ತೀರ ಅಲ್ಪರಾಗಿ ತೋರುತ್ತಾರೆ; ಬಡಕಲಾಗಿ ತೋರುತ್ತಾರೆ. ಅವರ ಕಾಲು ಬರಿಯ ಕಡ್ಡಿ. ಆದರೆ, ಅರೆಹೊಟ್ಟೆಗೂ ಸಾಲದ ಆಹಾರವನ್ನು ತಿಂದು ಅವರು ನಡೆದು ಹೋಗುತ್ತಿರುವುದು, ಅವರು ನಿಜವಾಗಿ ಗಟ್ಟಿಮುಟ್ಟಾಗಿದ್ದಾರೆಂಬುದನ್ನು ತೋರಿಸುತ್ತದೆ. ಎರಡು ಸಾವಿರ ಯಾತ್ರಿಕರ ಪೈಕಿ ಸುಮಾರು ೧೫೦೦ಜನ, ತಕ್ಕಮಟ್ಟಿಗೆ ಒಂದು ಗುಂಪಿನಲ್ಲಿ ಹೋಗುತ್ತಾರೆ. ಉಳಿದವರು ಸಣ್ಣ ಸಣ್ಣ ಗುಂಪುಗಳಲ್ಲಿ–ಎರಡು ಮೂರು ಮೈಲಿ ದೂರದಲ್ಲಿ ಹಿಂಬಾಲಿಸುತ್ತಾರೆ. ಗಾಂಧೀಜಿಯನ್ನು ಪೂರ್ಣ ಭಕ್ತಿಯಿಂದ ಕಂಡು ಯಾವಾಗಲೂ ಬಾಪು ಎಂದು ಕರೆಯುತ್ತಾರೆ".

ವೋಲ್ಕ್‌ಸ್ರುಸ್ಟ್‌ನಿಂದ ಎಂಟು ಮೈಲಿ ದೂರದ ಪಾಮ್‌ಫೋರ್ಡ್‌ನಲ್ಲಿ ಯಾತ್ರಿಕರು ರಾತ್ರಿ ತಂಗಿದರು. ಅವರು ಅಲ್ಲಿಗೆ ಮುಟ್ಟಿದುದು ಸಂಜೆ ಐದು ಗಂಟೆಗೆ. ಅವರು ಅಲ್ಲಿ ತಮ್ಮ ಬ್ರೆಡ್ ಮತ್ತು ಸಕ್ಕರೆಯ ಅಲ್ಪಾಹಾರವನ್ನು ತಿಂದು ಬಯಲಿನಲ್ಲಿ ವಿಶ್ರಾಂತಿ ತೆಗೆದುಕೊಂಡರು. ಕೆಲವರು ಮಾತುಕಥೆಯಾಡುತ್ತಿದ್ದರು. ಕೆಲವರು ಭಜನೆ ಮಾಡುತ್ತಿದ್ದರು. ಮಕ್ಕಳನ್ನೂ ಎತ್ತಿಕೊಂಡು ಬಂದಿದ್ದ ಕೆಲವು ಯಾತ್ರಿಕ ಸ್ತ್ರೀಯರು ಬಳಲಿದ್ದುದರಿಂದ ಅವರನ್ನು ದಾರಿಯಲ್ಲಿ ಒಬ್ಬ ಭಾರತೀಯ ವ್ಯಾಪಾರಿಯ ಮನೆಯಲ್ಲಿ ಬಿಟ್ಟು ಬಂದರು. ಅವರನ್ನು ಟಾಲ್‌ಸ್ಟಾಯ್ ಫಾರಂಗೆ ಹೋಗಲು ಸರ್ಕಾರ ಅನುಮತಿಸಿದರೆ ಅಲ್ಲಿಗೆ; ಹಾಗಲ್ಲದೆ ಅವರ ಬಂಧನವಾದರೆ ಅವರ ಮನೆಗಳಿಗೆ ಕಳುಹಿಸಲು ವ್ಯಾಪಾರಿ ವಾಗ್ದಾನ ಮಾಡಿದನು.

ಮಧ್ಯರಾತ್ರಿಯಾಗುತ್ತ ಬಂದಂತೆ ಎಲ್ಲ ನಿಶ್ಶಬ್ದವಾಯಿತು. ಗಾಂಧಿ ಮಲಗಲು ಸಿದ್ಧರಾಗುತ್ತಿದ್ದರು. ಆಗ, ಒಬ್ಬ ಯೂರೋಪಿಯನ್ನನು ಕೈಯಲ್ಲಿ ಲಾಂದ್ರ ಹಿಡಿದು ಬರುತ್ತಿರುವುದು ಕಾಣಿಸಿತು. ಅವನು ಗಾಂಧಿಯ ಬಂಧನಕ್ಕಾಗಿ ವಾರಂಟು ತಂದಿದ್ದನು. ಗಾಂಧಿ, ಯೂರೋಪಿಯನ್ ಆಫೀಸರನ ಕೈವಶರಾದರು. ಸಹ ಕೆಲಸಗಾರರಾದ ನಾಯಿಡು ಎಂಬುವರಿಗೆ "ಬೆಳಗಾದ ಮೇಲೆ ಯಾತ್ರೆಯನ್ನು ಮುಂದುವರಿಸಬೇಕು. ಸೂರ್ಯೋದಯಕ್ಕೆ ಮುಂಚೆ ಯಾತ್ರೆಯನ್ನು ಪ್ರಾರಂಭಿಸಬೇಕು. ದಿನದ ಆಹಾರಕ್ಕೆ ನಿಂತಾಗ, ನನ್ನ ಬಂಧನದ ವಿಷಯವನ್ನು ಯಾತ್ರಿಕರಿಗೆ ತಿಳಿಸಬೇಕು. ಯಾತ್ರಿಕರ ಬಂಧನವಾದರೆ ಒಪ್ಪಬೇಕು. ಇಲ್ಲದಿದ್ದರೆ ಯೋಜನೆಯಂತೆ ಯಾತ್ರೆ ಮುಂದುವರಿಯಬೇಕು" ಎಂದು ಹೇಳಿದರು.

ಗಾಂಧಿಯವರನ್ನು ವೋಲ್ಕ್‌ಸ್ರುಸ್ಟ್‌ಗೆ ರೈಲಿನಲ್ಲಿ ಕರೆದುಕೊಂಡು ಹೋಗಿ. ಮರುದಿನ ಬೆಳಿಗ್ಗೆ ನ್ಯಾಯಸ್ಥಾನದಲ್ಲಿ ನಿಲ್ಲಿಸಿದರು. ಆದರೆ ಪಬ್ಲಿಕ್ ಪ್ರಾಸಿಕ್ಯೂಟರು. ತಾನು

ಸಾಕ್ಷ್ಯಗಳೊಂದಿಗೆ ಸಿದ್ಧವಾಗಿಲ್ಲದಿದ್ದ ಕಾರಣದಿಂದ ೧೪ನೆ ತಾರೀಖಿನ ವರೆಗೆ ರಿಮಾಂಡ್‌ಗೆ ಕೇಳಿದನು. ಗಾಂಧೀಜಿಯನ್ನು ೫೦ ಪೌಂಡುಗಳ ಜಾಮೀನು ಮೇಲೆ ಬಿಡುಗಡೆ ಮಾಡಿದರು. ಗಾಂಧಿ ಮೋಟಾರಿನಲ್ಲಿ ಬಂದು ಯಾತ್ರಿಕರನ್ನು ಕೂಡಿಕೊಂಡರು. ಅವರ ಜೊತೆ ಕಾಲೆನ್ ಬಾಕರೂ 'ಟ್ರಾನ್ಸ್‌ವಾಲ್ ಲೀಡರ್' ಪತ್ರಿಕೆಯ ಒಬ್ಬ ವಿಶೇಷ ಬಾತ್ಮೀದಾರರೂ ಬಂದಿದ್ದರು.

ಯೋಜನೆಯಂತೆ, ಬೆಳಗಾದ ಕೂಡಲೆ ಯಾತ್ರೆ ಮುಂದುವರಿಯಿತು. ಗಾಂಧೀಜಿ ಅವರ ಜೊತೆ ಸೇರಿಕೊಂಡರು. ಸ್ಟಾಂಡರ್ಡ್‌ಟನ್‌ನಲ್ಲಿ ಭಾರತೀಯ ವ್ಯಾಪಾರಿಗಳು ಯಾತ್ರಿಕರಿಗೆ ಕೆಲವು ಡಬ್ಬ ಹಣ್ಣಿನ ಮುರಬ್ಬವನ್ನು ಕೊಟ್ಟರು. ಹಂಚುವಿಕೆಗೆ ಸ್ವಲ್ಪ ಹೊತ್ತು ಹಿಡಿಯಿತು. ಆ ವೇಳೆಗೆ ಮ್ಯಾಜಿಸ್ಟ್ರೇಟರು ಬಂದು, ಆಹಾರವನ್ನು ಹಂಚುತ್ತಿದ್ದ ಗಾಂಧೀಜಿಯ ಮಗ್ಗುಲಲ್ಲಿ ನಿಂತರು. ಹಂಚುವಿಕೆ ಮುಗಿದ ಕೂಡಲೇ ಅವರು ಗಾಂಧೀಜಿಗೆ ನೀವು "ಸೆರೆಯಾಳು" ಎಂದು ಹೇಳಿದರು. ಗಾಂಧೀಜಿ, ತಮ್ಮ ಅನುಯಾಯಿಗಳಿಗೆ ಯಾತ್ರೆಯನ್ನು ಮುಂದುವರಿಸಬೇಕೆಂದು ಹೇಳಿ, ಮ್ಯಾಜಿಸ್ಟ್ರೇಟರೊಂದಿಗೆ ಹೋದರು.

ನವಂಬರ್ ೮ ರಂದು ಮ್ಯಾಜಿಸ್ಟ್ರೇಟರು ಗಾಂಧೀಜಿಯನ್ನು, ಕೋರ್ಟ್ ಇನ್ನೂ ನಡೆಯುತ್ತಿರುವಾಗಲೇ ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ಗಾಂಧಿಜಿಗೆ ತನ್ನ ಐವರು ಸಹಕೆಲಸಗಾರರು–ನಾಯಿಡು ಸಹ– ಬಂಧಿತರಾಗಿರುವುದು ಗೊತ್ತಾಯಿತು. ಗಾಂಧಿ ಜಾಮೀನು ಬಿಡುಗಡೆಗಾಗಿ ಕೇಳಿಕೊಂಡರು. ಅವರನ್ನು ಅವರ ಸ್ವಂತ ಜಾಮೀನಿನ ಮೇಲೆ–ಐವತ್ತು ಪೌಂಡು–೨೧ನೆ ತಾರೀಖಿನವರೆಗೆ ಬಿಡುಗಡೆ ಮಾಡಿದರು. ಭಾರತೀಯ ವ್ಯಾಪಾರಿಗಳು ಗಾಂಧಿಗಾಗಿ ಒಂದು ವಾಹನವನ್ನು ಸಿದ್ಧವಾಗಿಟ್ಟಿದ್ದರು. ಗಾಂಧಿ, ಯಾತ್ರಿಕರು ಇನ್ನೂ ಮೂರುಮೈಲಿ ನಡೆದು ಹೋಗುವುದರೊಳಗಾಗಿ ಅವರನ್ನು ಬಂದು ಸೇರಿದರು.

ಯಾತ್ರಿಕರು ಈಗ ಜೊಹಾನ್ಸ್‌ಬರ್ಗ್ ಸಮೀಪಕ್ಕೆ ಬಂದಿದ್ದರು. ಪೂರ್ಣ ಯಾತ್ರೆಯನ್ನು ಎಂಟು ಹಂತಗಳಾಗಿ ವಿಭಾಗಿಸಲಾಗಿತ್ತು. ಇಲ್ಲಿಯ ವರೆಗೆ ಎಲ್ಲವೂ ಪೂರ್ವ ಯೋಜನೆಯಂತೆ ನಡೆದಿದ್ದಿತು. ಇನ್ನೂ ನಾಲ್ಕುದಿನಗಳಲ್ಲಿ ಯಾತ್ರೆ ಮುಗಿಯಬೇಕಾಗಿತ್ತು. ಯಾತ್ರಿಕರ ಉತ್ಸಾಹ ಹೆಚ್ಚುತ್ತಾ ಇತ್ತು. ಸರ್ಕಾರ ಯೋಚನೆಗೀಡಾಗಿತ್ತು.

ಪೋಲಕ್‌ರವರು ಭಾರತಕ್ಕೆ ಬಂದು ಇಲ್ಲಿನ ಸಂಗತಿಗಳನ್ನೆಲ್ಲ ಭಾರತ ಸರ್ಕಾರ ಮತ್ತು ಸಾಮ್ರಾಜ್ಯ ಸರ್ಕಾರದ ಮುಂದೆ ಇಡಲು ತಮಗೆ ಸಹಾಯ ಮಾಡಬೇಕೆಂದು ಗೋಖಲೆಯವರು ಕೇಬಲ್ ಕಳುಹಿಸಿದರು. ನವಂಬರ್ ೯ರಂದು ಪೋಲಕ್‌ರು ಗಾಂಧೀಜಿಯನ್ನು ಬೀಳ್ಕೊಳ್ಳಲು ಟೀಕ್‌ವರ್ತ್‌ಗೆ ಹೋದರು

ಆಗ ಮಧ್ಯಾಹ್ನ ೩ ಗಂಟೆ ಗಾಂಧಿ ಮತ್ತು ಪೋಲಕ್ ಯಾತ್ರಿಕರ ಮುಂದೆ ಮಾತನಾಡುತ್ತ ಹೋಗುತ್ತಿದ್ದರು. ಅವರು ಸಂಭಾಷಣೆಯನ್ನು ಇನ್ನೇನು ಮುಗಿಸಬೇಕು ಎನ್ನುವಷ್ಟರಲ್ಲಿ ಒಂದು ಗಾಡಿ ಬಂದು ಅವರ ಮುಂದೆ ನಿಂತಿತು. ಮುಖ್ಯ ವಲಸೆ ಆಫೀಸರಾದ ಮಿ. ಚಾಮ್ನಿ ಎಂಬುವನು ಗಾಂಧಿಯನ್ನು ಬೇರೆ ಕಡೆ ಕರೆದುಕೊಂಡು

ಹೋಗಿ, ಅವರನ್ನು ಬಂಧಿಸಲಾಗಿದೆ ಎಂದನು. ಗಾಂಧಿ ಪೋಲಕ್‌ರಿಗೆ “ನೀವು ಇದನ್ನು ಮುಂದುವರಿಸಿ” ಎಂದು ಹೇಳಿದರು. ಯಾತ್ರಿಕರಿಗೆ ಶಾಂತರಾಗಿ ಮುಂದುವರಿಯಿರಿ ಎಂದು ಗಾಂಧೀ ಹೇಳುವಷ್ಟರಲ್ಲಿಯೇ ಅಧಿಕಾರಿ, ಅವರು ಮಾತನಾಡಗೊಡದೆ ಗಾಡಿಯನ್ನು ವೇಗವಾಗಿ ಓಡಿಸಿಕೊಂಡು ಹೋಗುವಂತೆ ಡ್ರೈವರ್‌ಗೆ ಹೇಳಿದನು.

ಗಾಂಧಿ, ೯ನೆ ತಾರೀಖು–ನಾಲ್ಕು ದಿನಗಳೊಳಗೆ ಮೂರನೆಯ ಸಲ– ಬಂಧಿತರಾದರು. ಅವರನ್ನು ಗ್ರೇಲಿಂಗ್ ಸ್ಟಾಡ್‌ಗೆ ಕರೆದುಕೊಂಡು ಹೋಗಿ, ಅಲ್ಲಿಂದ ಬಾಲ್‌ಫೂರ್ ಮಾರ್ಗವಾಗಿ ಹೈಡಲ್‌ಬರ್ಗ್‌ಗೆ ಕರೆದುಕೊಂಡು ಹೋದರು. ಹೈಡಲ್‌ಬರ್ಗ್‌ನಲ್ಲಿ ಗಾಂಧಿ, ರಾತ್ರಿಯನ್ನು ಕಳೆದರು. ಪೋಲಕ್‌ರು ಯಾತ್ರಿಕರ ಮುಖಂಡತ್ವವನ್ನು ವಹಿಸಿಕೊಂಡು ಯಾತ್ರೆಯನ್ನು ಮುಂದುವರಿಸಿದರು. ಅವರು ರಾತ್ರಿ ಗ್ರೇಲಿಂಗ್ ಸ್ಟಾಡ್‌ನಲ್ಲಿ ಉಳಿದರು. ಅಲ್ಲಿ ಅವರನ್ನು ಸಂಧಿಸಿದ ಕಚಾಲಿಯಾ ಮತ್ತು ಭಾಯಾತ್‌ರು ಎಲ್ಲ ಯಾತ್ರಿಕರನ್ನೂ ಬಂಧಿಸುವ ಏರ್ಪಾಡು ಪೂರ್ಣವಾಗಿದೆಯೆಂದು ತಮಗೆ ತಿಳಿದಿರುವುದಾಗಿ ಹೇಳಿದರು. ನವಂಬರ್ ೧೦ರಂದು ಬೆಳಗಿನ ೯ ಗಂಟೆಗೆ ಯಾತ್ರಿಕರು ಹದಿಮೂರು ಮೈಲಿ ದೂರದ ಬಾಲ್‌ಫುರ್‌ಅನ್ನು ತಲಪಿದರು. ಅಲ್ಲಿ ಅವರನ್ನು ನೇಟಾಲಿಗೆ ಗಡೀಪಾರು ಮಾಡಲು ಮೂರು ವಿಶೇಷ ರೈಲುಗಳು ಸಿದ್ಧವಾಗಿದ್ದುದನ್ನು ನೋಡಿದರು. ಯಾತ್ರಿಕರು “ಗಾಂಧೀಬೇಕು” ಎಂದರು. ಪೊಂಡು ಹಿಡಿದರು. “ಗಾಂಧಿಭಾಯಿ ಸಲಹೆ ಮಾಡಿದರೆ ನಾವು ಬಂಧಿತರಾಗಿ ರೈಲು ಹತ್ತುತ್ತೇವೆ” ಎಂದರು. ಆದರೆ ಪೋಲಕ್ ಮತ್ತು ಕಚಾಲಿಯ, ಅವರಿಗೆ ಪೋಲೀಸರ ವಶರಾಗುವಂತೆಯೂ ಬಂಧಿತರಾಗಿ ಶಾಂತವಾಗಿ ರೈಲು ಹತ್ತಬೇಕೆಂದೂ ಹೇಳಿ ಮನವೊಲಿಸಿದರು. ಕೊನೆಯಲ್ಲಿ ಯಾತ್ರಿಕರು ಅವರ ಮಾತಿನಂತೆ ನಡೆದರು.

ಎರಡು ಸಾವಿರ ನಮ್ರ ಧೀರರು; ಮನೆಯಿಲ್ಲ ಉದ್ಯೋಗವಿಲ್ಲ. ಈಗ ಅವರ ಮುಖಂಡರೂ ಇಲ್ಲ. ದಾರಿಯಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಅವರು ನೇಟಾಲನ್ನು ಸೇರಿದ ಮೇಲೆ, ಅವರ ಮೇಲೆ ಮೊಖದ್ದಮೆ ಹೂಡಿ ಸೆರೆಮನೆಗೆ ಅಟ್ಟಿದರು.

ಪೋಲಕ್, ಕಾರಿಡರ್ ರೈಲಿಗಾಗಿ ಕಾಯುತ್ತಿದ್ದಾಗ ಚಾರ್ಲ್ಸ್‌ಟೌನಿನಲ್ಲಿ ಬಂಧಿತರಾದರು. ಕಾಲೆನ್ ಬಾಕರನ್ನೂ ಬಂಧಿಸಿ ಪೋಲಕ್‌ರೊಂದಿಗೆ ವೋಲ್ಕ್‌ಸ್ರಸ್ಟ್ ಬಂದಿಖಾನೆಯಲ್ಲಿ ಇಟ್ಟರು.

ಯಾತ್ರಿಕರಿಂದ ತಮ್ಮನ್ನು ಬೇರೆ ಮಾಡಿದ ಮೇಲೆ, ನಡೆದುದೇನೆಂಬುದು ಗಾಂಧೀಜಿಗೆ ಗೊತ್ತಿರಲಿಲ್ಲ. ಅವರು ವಿಚಾರಣೆಯನ್ನು ಮತ್ತೊಂದು ಸಲ ಮುಂದಕ್ಕೆ ಹಾಕಬೇಕೆಂದು ಕೇಳಿದರು. “ಸರ್ಕಾರ, ಯಾತ್ರಿಕರನ್ನೆಲ್ಲ ಬಂಧಿಸಬೇಕು. ಅಥವಾ ತಾನು ಅವರನ್ನು ಟಾಲಸ್ಟಾಯ್ ಫಾರಂನಲ್ಲಿ ಸುರಕ್ಷಿತವಾಗಿ ಸೇರಿಸಲು ತನಗೆ ಅವಕಾಶ ಕೊಡಬೇಕು” ಎಂದು ಕೇಳಿದರು. ಈ ಸಲ ನ್ಯಾಯಾಧಿಪತಿಗಳು ಅವರ ಕೋರಿಕೆಯನ್ನು ಮನ್ನಿಸಲಿಲ್ಲ.

ನವೆಂಬರ್ ೧೧ರಂದು ದಂಡಿ ನ್ಯಾಯಾಧೀಶರ ಮುಂದೆ, ಮೂರು ಅಪಾದನೆಗಳ ಮೇಲೆ ಗಾಂಧೀಜಿಯ ವಿಚಾರಣೆ ನಡೆಯಿತು. ನ್ಯಾಯಸ್ಥಾನ. ಭಾರತೀಯರಿಂದಲೂ ಯೂರೋಪಿಯನ್ನರಿಂದಲೂ ತುಂಬಿತ್ತು. ಗಾಂಧಿಯ ವಕೀಲರಾಗಿ ಅಡ್ವೊಕೇಟ್ ಗಾಡ್‌ಫ್ರೆ ಅವರು ಬಂದರು. ಪ್ರಾಸಿಕ್ಯೂಟರು, ಕಾನೂನು ವಿಧಿಗಳನ್ನು ಓದಿ, ಜಡ್ಜರ ತೀರ್ಪಿಗೆ ಬಿಟ್ಟರು. ಗಾಂಧಿಯ ವಕೀಲರು, "ನಾನು ಪ್ರತಿವಾದಿಯ ಪರವಾಗಿ ಅವರ ತಪ್ಪನ್ನು ಕಡಿಮೆ ಮಾಡುವ ಯಾವ ವಾದವನ್ನೂ ಮಾಡಲಾರದವನಾಗಿದ್ದೇನೆ. ನ್ಯಾಯಾಧಿಪತಿ, ತನ್ನ ಕರ್ತವ್ಯವನ್ನು ಮಾಡಬೇಕಾಗಿದೆ. ಆದುದರಿಂದ ಅವರು, ಈ ಮೊಖದ್ದಮೆಯಲ್ಲಿ ಅದು ನ್ಯಾಯವೆಂದು ತೋರಿದರೆ, ನಿಯಮಿತವಾದ ಅತಿ ಹೆಚ್ಚಿನ ಶಿಕ್ಷೆಯನ್ನು ಕೊಡಬೇಕು ಎಂಬ ಪ್ರತಿವಾದಿಯ ಇಚ್ಛೆಯನ್ನು ಮಾತ್ರ ನಾನು ವ್ಯಕ್ತಪಡಿಸುತ್ತಿದ್ದೇನೆ" ಎಂದು ಹೇಳಿದರು.

ಕೋರ್ಟಿನ ಅಪ್ಪಣೆ ಪಡೆದು, ಗಾಂಧೀಜಿ, ಮುಂದಿನ ಹೇಳಿಕೆ ಕೊಟ್ಟರು. "ನಾನೂ ವಕೀಲಿ ವೃತ್ತಿಯವನಾಗಿದ್ದು ನೇಟಾಲಿನ ಹಳೆಯ ವಾಸಸ್ಥನಾಗಿ, ನನ್ನ ಮತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ಹೀಗೆ ಹೇಳುತ್ತೇನೆ. ನನ್ನ ಮೇಲೆ ಹೊರಿಸಿಸಿರುವ ಆಪಾದನೆಗಳು, ಅವುಗಳಿಗಾಗಿ ಹೊಣೆಯನ್ನೆಲ್ಲ ನಾನೇ ವಹಿಸಿಕೊಳ್ಳುವ ಸ್ವಭಾವವುಳ್ಳವಾಗಿವೆ. ಏಕೆಂದರೆ ಯಾವ ಮೆರವಣಿಗೆಗಾಗಿ ಈ ಜನರನ್ನು ಕಲ್ಲಿದ್ದಲು ವಾಸಸ್ಥಾನಗಳಿಂದ ಹೊರಡಿಸಿಕೊಂಡು ಹೋದೆವೊ ಅದು ಬಹು ಯೋಗ್ಯವಾದ ಉತ್ತಮವಾದ ಕಾರ್ಯವಾಗಿತ್ತು. ನನಗೆ ಕಲ್ಲಿದ್ದಲು ಒಡೆಯರ ಮೇಲೆ ಯಾವ ಅಸಮಾಧಾನವೂ ಇಲ್ಲ. ಮತ್ತು ಈ ಹೋರಾಟದಿಂದ ಅವರಿಗೆ ತುಂಬ ನಷ್ಟ ಸಂಭವಿಸುತ್ತಿರುವುದಕ್ಕೂ ನನಗೆ ವಿಷಾದವಾಗಿದೆ. ಮಿ. ಗೋಖಲೆ ಮತ್ತು ಮಿ. ಸ್ಮಟ್ಸರ ಸಂಬಂಧದ ದೃಷ್ಟಿಯಿಂದಲೂ ಆಕರ್ಷಣೀಯವಾದ ದೊಡ್ಡ ಪ್ರದರ್ಶನವನ್ನು ಏರ್ಪಡಿಸುವುದು ನನ್ನ ಹೊಣೆಗಾರಿಕೆಯಾಗಿದ್ದಿತು. ಪುರುಷರಿಗೂ ಸ್ತ್ರೀಯರಿಗೂ, ಕಂಕುಳಲ್ಲಿ ಎತ್ತಿಕೊಂಡ ಮಕ್ಕಳಿಗೂ ಆಗುತ್ತಿದ್ದ ದುಃಖ, ನನಗೆ ಗೊತ್ತಿತ್ತು. ನಮ್ಮ ದೇಶಬಾಂಧವರಿಗೆ ಹೀಗೆ ಸಲಹೆ ಕೊಡುವುದರಲ್ಲಿ ನಾನು ನನ್ನ ಕರ್ತವ್ಯವನ್ನು ಮಾತ್ರ ಮಾಡಿದ್ದೇನೆ. ಮೂರು ಪೌಂಡಿನ ತಲೆಗಂದಾಯವನ್ನು ಹಿಂದೆಗೆದುಕೊಳ್ಳುವವರೆಗೆ ಕೆಲಸವನ್ನು ಬಿಟ್ಟು, ದಾನವಾಗಿ ಬಂದ ಆಹಾರ ಪದಾರ್ಥಗಳಿಂದ ಜೀವಿಸಬೇಕೆಂದು ಅವರಿಗೆ ಮತ್ತೆ ಸಲಹೆ ಕೊಡುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಕಷ್ಟ ದುಃಖಗಳನ್ನು ಅನುಭವಿಸದೆ, ತಮ್ಮ ತೊಂದರೆಗಳಿಗೆ ಪರಿಹಾರವನ್ನು ಹೊಂದುವುದು ಅವರಿಗೆ ಸಾಧ್ಯವಿಲ್ಲವೆಂಬುದು ನನಗೆ ಖಂಡಿತವಾಗಿದೆ".

ಗಾಂಧಿ ತಪ್ಪಿತಸ್ಥರೆಂದು ಒಪ್ಪಿಕೊಂಡುದರಿಂದ ನ್ಯಾಯಾಧಿಪತಿಗಳು ಗಾಂಧೀಜಿಗೆ ೬೦ ಪೌಂಡು ದಂಡ, ತಪ್ಪಿದರೆ ೯ ತಿಂಗಳ ಸಜ ವಿಧಿಸಿದರು. "ನಾನು ಸೆರೆಮನೆವಾಸವನ್ನೇ ಆರಿಸಿಕೊಳ್ಳುತ್ತೇನೆ ಎಂದರು ಗಾಂಧಿ. ಮುಷ್ಕರಕಾರರಿಗೆ ಅವರ ಕೊನೆಯ ಬೀಳ್ಕೊಡುಗೆಯ ಸಂದೇಶ ಹೀಗಿತ್ತು. "ಮೂರು ಪೌಂಡು ತೆರಿಗೆಯನ್ನು ಹಿಂದಕ್ಕೆ

ತೆಗೆದುಕೊಂಡಲ್ಲದೆ ಮುಷ್ಕರದ ನಿಲುಗಡೆಯಿಲ್ಲ. ಈಗ ನನ್ನನ್ನು ಜೈಲಿಗೆ ಅಟ್ಟಿದ ಮೇಲಾದರೂ ಮರ್ಯಾದೆಯಿಂದ, ತೆರಿಗೆಯನ್ನು ಹಿಂತೆಗೆದುಕೊಳ್ಳುವ ಘೋಷಣೆ ಮಾಡಬಹುದು".

ಗಾಂಧೀಜಿಯ ಸೆರೆವಾಸ ಒಂದು ಮಹಾ ಪ್ರಚೋದನೆಯಾಗಿ ನೇಟಾಲಿನಲ್ಲಿ ಇಪ್ಪತ್ತು ಸಾವಿರ ಕೂಲಿಗಳು ಮುಷ್ಕರ ಹೂಡಿದರು. ಮುಷ್ಕರ ಮತ್ತು ಬಂಧನಗಳ ಸುದ್ದಿ ಎಲ್ಲೆಡೆಯೂ ಹರಡಿ, ನೇಟಾಲಿನ ದಕ್ಷಿಣ ಸಮುದ್ರ ತೀರ, ದರ್ಬಾನ್‌ನಿಂದ ಇಸಿಪಿಂಗ್ ವರೆಗಿನ ಪ್ರದೇಶ ಉತ್ತರ ಸಮುದ್ರ ತೀರ ಎಲ್ಲೆಡೆಯೂ ಸಾವಿರಾರು ಜನ ಕೂಲಿಗಳು ಸ್ವಪ್ರೇರಣೆಯಿಂದ ಹೊರಬಂದರು.

ಈಗ ಸರ್ಕಾರ, ರಕ್ತ ಮತ್ತು ಕಬ್ಬಿಣದ (ಹಿಂಸೆ ಕ್ರೌರ್ಯ) ನೀತಿಯನ್ನು ಅವಲಂಬಿಸಿತು. ಮಿಲಿಟರಿ ಪೋಲೀಸರು ಕುದುರೆಯೇರಿ, ಮುಷ್ಕರಕಾರರನ್ನು ಬೇಟೆ ಯಾಡಿದರು. ಆದರೆ ಮುಷ್ಕರಕಾರರು ತಗ್ಗಲಿಲ್ಲ. ಸರ್ಕಾರ ಗುಂಡು ಹಾರಿಸಿತು. ಮುಷ್ಕರಕಾರರು ಧೀರತನದಿಂದ ಅದರ ಕಡೆಗೇ ಮುಖಮಾಡಿದರು. ಅವರ ಧೈರ್ಯಕ್ಕೆ ಬಿಳಿಯರ ಸಹಾನುಭೂತಿ ಸಹ ಪ್ರಾಪ್ತವಾಯಿತು. ಡರ್ಬಾನ್‌ನ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷವು, ಭಾರತೀಯರಿಗೆ ಸಹಾನುಭೂತಿ ತೋರಿಸುವ ನಿರ್ಣಯವನ್ನು ಮಾಡಿ, "ಈ ನಿರುಪಯೋಗಿ ಮತ್ತು ಹೀನವಾದ ಮೂರು ಪೌಂಡಿನ ತೆರಿಗೆಯ ವಿರೋಧವನ್ನು ಸಮರ್ಥಿಸಿ, ಈಗ ಇದರ ಸಾಧನೆಗೆ ಭಾರತೀಯರಿಗೆ ಉಳಿದಿರುವ ಏಕೈಕಮಾರ್ಗ ಮುಷ್ಕರವೊಂದೇ" ಎಂದು ಹೇಳಿತು.

ಗಾಂಧೀಜಿಯ ಮೇಲೆ, ಎರಡನೆಯ ಮೊಖದ್ದಮೆಯ ವಿಚಾರಣೆ ಇನ್ನೂ ಆಗುವುದಿತ್ತು. ನವಂಬರ್ ೧೩ರಂದು ಅವರನ್ನು ವೋಲ್ಕ್‌ಸ್ರಸ್ಟ್ ಸೆರೆಮನೆಗೆ ವರ್ಗಾ ಯಿಸಿದರು. ಕಾಲೆನ್‌ಬಾಕ್ ಮತ್ತು ಪೋಲಕ್ ಅಲ್ಲಿಯೇ ಇದ್ದರು. ನವಂಬರ್ ೧೪ ರಂದು ಅವರು ಕೋರ್ಟಿನಲ್ಲಿ ಹಾಜರಾದರು. ಸಾಕ್ಷಿಗಳನ್ನು ಹುಡುಕುವುದು ಪೋಲೀ ಸರಿಗೆ ಕಷ್ಟವಾಯಿತು. ಗಾಂಧೀಜಿಯ ಮೇಲಿನ ಆಪಾದನೆಗಳು ಅವರೇ ಒದಗಿಸಿದ ಸಾಕ್ಷಿಗಳಿಂದ ರುಜುವಾತಾದವು.

ಆದರೆ ಕಾಲೆನ್‌ಬಾಕ್ ಮತ್ತು ಪೋಲಕ್‌ರ ವಿರುದ್ಧವಾಗಿ ಸಾಕ್ಷಿ ಯಾರು ಹೇಳುತ್ತಾರೆ. ಕಾಲೆನ್‌ಬಾಕರೂ ಪೋಲಕರೂ, ಸಾಕ್ಷಿಗಳ ಅಭಾವಕ್ಕಾಗಿ ಕೇಸು ನಿಧಾನವಾಗುವುದನ್ನು ಬಯಸಲಿಲ್ಲವಾಗಿ ಗಾಂಧೀಜಿಯೇ ಸರ್ಕಾರಕ್ಕೆ ಸಹಾಯಕರಾದರು. ಅದರಂತೆ ಗಾಂಧೀಜಿ, ಕಾಲೆನ್‌ಬಾಕರಿಗಾಗಿ ಸಾಕ್ಷಿಗಳನ್ನು ಒದಗಿಸಿಕೊಟ್ಟು, ಪೋಲಕರಿಗೆ ವಿರುದ್ಧವಾಗಿ ತಾವೇ ಸಾಕ್ಷಿಯಾದರು. ಗಾಂಧಿಜಿ ಮೇಲಿನ ಮೊಖದ್ದಮೆ ನವಂಬರ್ ೧೪ರಂದು, ಕಾಲೆನ್‌ಬಾಕರದು ೧೫ರಂದು, ಪೋಲಕರದು ೧೭ರಂದು ಮುಗಿಯಿತು. ನ್ಯಾಯಾಧಿಪತಿ ಮೂವರಿಗೂ ಮೂರು ಮೂರು ತಿಂಗಳು ಸಜ ವಿಧಿಸಿದರು.

ಗಾಂಧೀಜಿ, ತಮ್ಮ ಸ್ನೇಹಿತರ ಸಹವಾಸದಲ್ಲಿ ಕೆಲವು ದಿನಗಳನ್ನು ಕಳೆದರು. ನಿತ್ಯ ಹೊಸ ಸೆರೆಯಾಳುಗಳೂ ಹೊಸ ಸುದ್ದಿಗಳೂ ಹೊರಗಿನಿಂದ ಬರುತ್ತಿದ್ದುವು.

ಸರ್ಕಾರ, ಆಗ ಕಾಲೆನ್ ಬಾಕ್, ಪೋಲಕ್ ಮತ್ತು ಗಾಂಧೀಜಿಯನ್ನು ಬೇರೆ ಬೇರೆ ಮಾಡಿ ವೋಲ್ಕ್‌ಸ್ರಸ್ಟ್‌ನಿಂದ ಕಳುಹಿಸಲು ನಿಶ್ಚಯಿಸಿತು. ಗಾಂಧೀಜಿಯನ್ನು ಬೋಮ್ ಫಾಂಟೆನ್ ಎಂಬಲ್ಲಿಗೆ ಕಳುಹಿಸಿದರು. ಅಲ್ಲಿ ಅವರನ್ನು ನೋಡಲು ಯಾರಿಗೂ ಅವ ಕಾಶವಿರಲಿಲ್ಲ. ಅಲ್ಲಿ ಭಾರತೀಯ ಖೈದಿ ಅವರೊಬ್ಬರೇ. ಉಳಿದವರು ಯೂರೋಪಿ ಯನ್ನರೂ ನೀಗ್ರೋಗಳೂ ಆಗಿದ್ದರು.

ಗಾಂಧೀಜಿಯೂ ಮತ್ತು ಅವರ ಸಾವಿರಾರು ಅನುಯಾಯಿಗಳೂ ಸೆರೆಮನೆ ಯಲ್ಲಿ ಕೊಳೆಯುತ್ತಿರುವಾಗ ಭಾರತದಲ್ಲಿ ಜನ, ಗೋಖಲೆಯವರ ನೇತೃತ್ವದಲ್ಲಿ ಸತ್ಯಾಗ್ರಹಿಗಳಿಗೆ ಸಾಧ್ಯವಾದ ಸಹಾಯವನ್ನೆಲ್ಲ ಮುಂದುವರಿಸುತ್ತಿದ್ದರು. ನವಂಬರಿ ನಲ್ಲಿ ಗೋಖಲೆಯವರ ನಿಯೋಗಕ್ಕೆ ಶುಭಾಶಯವನ್ನು ಕೋರುತ್ತ "ಭಾರತವ ಹಾರ್ದಿಕ ಸಹಾನುಭೂತಿಯೂ ಮತ್ತು ನನ್ನಂತಹ ಭಾರತ ಪ್ರೇಮಿಗಳೆಲ್ಲರ ಸಹಾನು ಭೂತಿಯೂ, ದಕ್ಷಿಣ ಆಫ್ರಿಕದಲ್ಲಿ ಅನ್ಯಾಯ ಮತ್ತು ರೋಷಪೂರಿತ ಕಾನೂನು ಗಳಿಗೆ ವಿರೋಧವಾಗಿ ಹೋರಾಡುತ್ತಿರುವ ನಮ್ಮ ಬಾಂಧವರೆಲ್ಲರಿಗೂ ಇದೆ" ಎಂದು ಹೇಳುವ ಯೋಗ, ಲಾರ್ಡ್ ಹಾರ್ಡಿಂಜರಿಗೆ ಒದಗಿತು.

ಬ್ರಿಟಿಷ್ ಪತ್ರಿಕೆಗಳು ಭಾರತೀಯರ ಹೋರಾಟದಲ್ಲಿ ಹೆಚ್ಚು ಹೆಚ್ಚು ಸಹಾನು ಭೂತಿ ತೋರಿಸಿದವು. ಟೈಂಸ್ ಪತ್ರಿಕೆ "ಭಾರತೀಯ ಕೂಲಿಗಾರರ ಪಾದಯಾತ್ರೆ, ಸತ್ಯಾಗ್ರಹ ಇತಿಹಾಸದ ವಿಶಿಷ್ಟವಾದ ಪ್ರದರ್ಶನವಾಗಿ ಜನರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ" ಎಂದು ಹೇಳಿತು.

ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಸಹ ಚುರುಕಾದರು. ದಕ್ಷಿಣ ಆಫ್ರಿಕ ಯೂನಿಯನ್ ಸರ್ಕಾರ ತನ್ನ ಮಾನ ಉಳಿಸಿಕೊಳ್ಳುವುದಕ್ಕಾಗಿ, ಜಡ್ಜ್ ಸರ್, ಡಬ್ಲ್ಯು ಸಾಲೋಮನ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಿತು. ನೇಟಾಲ್ ಭಾರತೀಯರ ಮುಷ್ಕರವನ್ನು ಕುರಿತು ವರದಿ ಮಾಡುವುದು ಅದರ ಕೆಲಸವಾಗಿತ್ತು. ಸಮಿತಿಯು, ಭಾರತ ಸರ್ಕಾರ ಸಾಕ್ಷ್ಯ ಕೊಡಬೇಕೆಂದು ಕರೆಕೊಟ್ಟು ಗಾಂಧೀಜಿಯ ಬಿಡುಗಡೆಗೆ ಶಿಫಾರಸು ಮಾಡಿತು.

ಗಾಂಧಿಜಿಯನ್ನು ಡಿಸೆಂಬರ್ ೧೮ರಂದು ಬಿಡುಗಡೆ ಮಾಡಿದರು. ವಿಚಾರಣಾ ಸಮಿತಿಯ ಸದಸ್ಯರ ವಿಷಯದಲ್ಲಿ ಗಾಂಧೀಜಿ ಅಸಮಾಧಾನವನ್ನು ವ್ಯಕ್ತಪಡಿಸಿದರು. ಸಮಿತಿಯಲ್ಲಿ ಭಾರತೀಯರಿಗೆ ಪ್ರಾತಿನಿಧ್ಯವಿರಲಿಲ್ಲ. ಅಲ್ಲದೆ, ಇಬ್ಬರು ಭಾರತೀಯರ ಕಟ್ಟಾ ವಿರೋಧಿ ಕರ್ನಲ್‌ಗಳು, ಭಾರತೀಯರ ಮೇಲೆ ಜಡ್ಜಿಗಳಾಗಿ ನಿಯಮಿತರಾಗಿದ್ದರು. ಗಾಂಧೀಜಿ ಸಮಿತಿಯನ್ನು ಬಹಿಷ್ಕರಿಸಲು ನಿರ್ಣಯಿಸಿದರು.

ನಿರಪರಾಧಿ ಭಾರತೀಯರನ್ನು, ಮುಷ್ಕರ ಕಾಲದಲ್ಲಿ ಗುಂಡಿಟ್ಟುಕೊಂದುದು ಗಾಂಧೀಜಿಗೆ ತುಂಬ ನೋವನ್ನುಂಟು ಮಾಡಿತು. ಅವರು ಮೂರು ಪೌಂಡಿನ ತೆರಿಗೆ ಯನ್ನು ಹಿಂತೆಗೆದುಕೊಳ್ಳುವವರೆಗೆ, ತಮ್ಮ ಮೇಲೆಯೇ ಒಂದು ಶಿಕ್ಷೆಯನ್ನು ವಿಧಿಸಿ ಕೊಂಡರು: ಕೂಲಿಗಳ ಉಡುಪು, ತಲೆಗೆ ವಸ್ತ್ರವಿಲ್ಲ. ತುಂಡುಪಂಚೆ ಮತ್ತು ಕುಡ್ತ; ಬರಿಕಾಲು ನಡಿಗೆ; ದಿನಕ್ಕೆ ಒಂದೇ ಊಟ.

ನೇಟಾಲ್ ಇಂಡಿಯನ್ ಅಸೋಸಿಯೇಶನ್ ಸಭೆಯಲ್ಲಿ ಗಾಂಧಿ, ಹೀಗೆ ಹೇಳಿದರು. "ಗುಂಡಿಟ್ಟು ಕೊಂದುದು ನ್ಯಾಯವೇ ಅಲ್ಲವೇ ಅದು ಮುಖ್ಯವಲ್ಲ. ಹಾಸ್ತಹಾಂಶ ಅವರು ಗುಂಡಿನಿಂದ ಹೊಡೆಯಲ್ಪಟ್ಟರೆಂಬುದು. ಆ ಗುಂಡುಗಳು ನನ್ನ ಹೃದಯವನ್ನೂ ಛೇದಿಸಿದವು. ನಾವೆಲ್ಲರೂ ಕೆಲವು ಕಾಲ ದುಃಖವನ್ನು ಆಚರಿಸಬೇಕು. ಕೊನೆಯ ಪಕ್ಷ ಎಲ್ಲಿಯ ವರೆಗೆ ನಮ್ಮ ಚಳುವಳಿ ನಡೆಯುತ್ತದೆಯೋ ಅಲ್ಲಿಯ ವರೆಗಾದರೂ. ನನ್ನ ಮಟ್ಟಿಗೆ ಅಂತರಂಗವಾಗಿಯೂ ಬಹಿರಂಗವಾಗಿಯೂ, ನಮ್ಮ ಸಹೋದರರ ತ್ಯಾಗದ ನಮ್ರ ಮೇಲುಪಂಕ್ತಿಯಿಂದ ಶೋಕಗ್ರಸ್ತರಾಗಬೇಕು. ಸರ್ಕಾರ ತೊಂದರೆಗಳನ್ನು ಪರಿಹರಿಸದಿದ್ದರೆ ಭಾರತೀಯರ ಹೊಸ ವರ್ಷದ ಪ್ರಾರಂಭದ ದಿನ ನಾವೆಲ್ಲ ಮತ್ತೆ ಯುದ್ಧಭೂಮಿಗೆ ಇಳಿದು ಮತ್ತೆ ಸೆರೆಮನೆ ಸೇರಲು ಹೊರಡಬೇಕು" ಎಂದು ಹೇಳಿದರು.

ಡಿಸೆಂಬರ್ ೧೯೧೩ರಲ್ಲಿ ಕರಾಚಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಗಾಂಧೀ ಮತ್ತು ಅವರ ಸಹ ಕೆಲಸಗಾರರ ಧೀರ ಹೋರಾಟಕ್ಕೆ ಹಾರ್ದಿಕವಾಗಿದ ಕೃತಜ್ಞತೆಯ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಎಲ್ಲ ಭಾರತೀಯರೂ ಜಾತಿಮತಗಳ ಬೇಧವಿಲ್ಲದೆ ಅವರಿಗೆ ಧನ ಸಹಾಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಿರ್ಣಯಿಸಿತು.

ಟಾಗೂರರು ಗಾಂಧೀಜಿಗೆ ಒಂದು ಕಾಗದವನ್ನು ಬರೆದು "ದಕ್ಷಿಣ ಆಫ್ರಿಕದ ಹೋರಾಟ ಮನುಷ್ಯತ್ವದ ಉನ್ನತ ಶಿಖರಸಾಧನೆ; ಹಿಂಸೆಯ ರಕ್ತ ಮಾರ್ಗದಿಂದಲ್ಲ; ಆದರೆ ವೀರ ಸ್ವಾರ್ಥ ತ್ಯಾಗ ಮತ್ತು ಗಂಭೀರವಾದ ತಾಳ್ಮೆಯ ಮಾರ್ಗದಿಂದ" ಎಂದು ವರ್ಣಿಸಿದರು.

ದಕ್ಷಿಣ ಆಫ್ರಿಕಕ್ಕೆ ಸ್ವಸ್ತಿ

೧೯೪೪

ಎರಡನೆಯ ಪಾದಯಾತ್ರೆಯ ಯೋಚನೆ ಕೇಳಿ ಗೋಖಲೆ ಅಂತಹ ಹೆಜ್ಜೆ ಲಾರ್ಡ್ ಹಾರ್ಡಿಂಜ್‌ರನ್ನೂ ತಮ್ಮನ್ನೂ ಬಹಳ ಸಂದಿಗ್ಧ ಪರಿಸ್ಥಿತಿಗೆ ತಂದೊಡ್ಡು ವುದೆಂದು ಒಂದು ಉಗ್ರವಾದ ಕೇಬಲ್‌ಗ್ರಾಂಅನ್ನು ಗಾಂಧೀಜಿಗೆ ಕಳುಹಿಸಿದರು. ಗೋಖಲೆ ಯವರ ರಾಯಭಾರಿಗಳಾದ ಆಂಡ್ರೂಸ್ ಮತ್ತು ಪಿಯರ್‌ಸನ್ನರು ಜೂನ್ ೭,೧೯೧೪ ರಂದು ದಕ್ಷಿಣ ಆಫ್ರಿಕಕ್ಕೆ ಬಂದರು. ಆಂಡ್ರೂಸರು ಗಾಂಧೀಜಿಗೆ "ಗೋಖಲೆಯವರ ಭಾವನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ಅವರು ರೋಗಿಷ್ಟರಾಗಿ ಹಾಸಿಗೆ ಹಿಡಿದಿದ್ದಾರೆ" ಎಂದು ಬೇಡಿದರು. ಗೋಖಲೆಯವರ ಮೇಲೆ ಗೌರವ ಪ್ರೀತಿ ಗಾಂಧೀಜಿಯ ಮನಸ್ಸಿ ನಿಂದ ಯಾವಾಗಲೂ ಮರೆಯಾಗಿರಲಿಲ್ಲ. ಆದರೆ ಅವರು "ನಮ್ಮ ಪ್ರತಿಜ್ಞೆಯಿಂದ ನಾವು ಹಿಂದಕ್ಕೆ ಹೋಗುವುದು ಹೇಗೆ ಸಾಧ್ಯ?" ಎಂದರು. ಮುಖಂಡರೆಲ್ಲ ಸಭೆ ನಡೆಸಿ, ಒಂದು ತೀರ್ಮಾನಕ್ಕೆ ಬಂದರು. "ವಿಚಾರಣಾ ಸಮಿತಿಗೆ ಇನ್ನೂ ಹೆಚ್ಚು ಸದಸ್ಯರನ್ನು ಸೇರಿಸಿಕೊಳ್ಳದಿದ್ದರೆ, ಏನಾದರೂ ಸರಿಯೇ ಅದನ್ನು ಬಹಿಷ್ಕರಿಸಬೇಕು" ಎಂದು ನಿರ್ಣಯಿಸಿದರು.

ಗಾಂಧೀಜಿ, ಗೋಖಲೆಗೆ ಒಂದು ಉದ್ದವಾದ ಟೆಲಿಗ್ರಾಂ (೧೦೦ ಪೌಂಡು ಖರ್ಚು) ಕಳುಹಿಸಿ ಲಾರ್ಡ್ ಹಾರ್ಡಿಂಜ್‌ರಿಗೂ ಅದನ್ನು ತೋರಿಸಬೇಕೆಂದು ಕೇಳಿ ಕೊಂಡರು. "ಈ ಪೂರ್ಣ ಹೋರಾಟ ಚೆನ್ನಾಗಿ ಯೋಚನೆ ಮಾಡಿದ ನಂತರ ಅಂಗೀಕರಿಸಿದ ಪ್ರತಿಜ್ಞೆ ವಾಗ್ದಾನಗಳ ಮೇಲೆಯೇ ಆಧರಿಸಿದೆ. ಆದುದರಿಂದ ನೀವು, ಸಮಿತಿಯನ್ನು ಬಹಿಷ್ಕರಿಸುವ ವಿಷಯದಲ್ಲಿ ತೆಗೆದುಕೊಂಡಿರುವ ಪ್ರತಿಜ್ಞೆಯನ್ನು ಬಿಡಕೂಡದೆಂದು ಸಲಹೆ ಮಾಡಬೇಕು" ಎಂದು ಗೋಖಲೆಗೆ ತಿಳಿಸಿದರು. "ನಾವು ಹಿರಿಯರ ಮತ್ತು ದೊಡ್ಡ ಮನುಷ್ಯರ ಸಹಾಯವನ್ನು ಬಯಸುತ್ತೇವೆ; ಅದನ್ನು ಪಡೆಯಲು, ನಿಗಧಿ ಮಾಡಿಕೊಳ್ಳಲು, ಆಶಿಸುತ್ತೇವೆ. ಅವು ದೊರೆತಾಗ ಸಂತೋಷ ಪಡುತ್ತೇವೆ. ಆದರೆ ಅಂತಹ ಸಹಾಯ ದೊರೆಯಲಿ, ದೊರೆಯದಿರಲಿ ಪ್ರತಿಜ್ಞೆಗಳನ್ನು ಚಾಚೂತಪ್ಪದೆ ಪಾಲಿಸಬೇಕೆಂಬುದು ನಮ್ಮ ನಮ್ರ ಅಭಿಪ್ರಾಯ". ಇಂತಹ ಆಚರಣೆಯಲ್ಲಿ ಸತ್ಯಾಗ್ರಹವನ್ನು ಆಶೀರ್ವದಿಸಿ ಅದಕ್ಕೆ ಬೆಂಬಲ ಕೊಡಬೇಕೆಂದು ಗೋಖಲೆಯವರನ್ನು ಕೇಳಿಕೊಂಡರು.

ಗೋಖಲೆ ಗಾಂಧೀಜಿಯ ವಾದವನ್ನು ಒಪ್ಪಲಿಲ್ಲ. ಆದರೆ ಅವರ ಸ್ನೇಹ, ಮುಂದುವರಿಯಿತು. ಅವರು ಲಾರ್ಡ್ ಹಾರ್ಡಿಂಜ್‌ರಿಗೆ ವಿಷಯವನ್ನು ತಿಳಿಸಿ

ತಂತಿ ಕೊಟ್ಟರು. ಭಾರತೀಯರ ವಾದವನ್ನು ಹಾರ್ಡಿಂಜ್ ಒಪ್ಪಿದರೂ ಅನುಸರಿಸ ಬೇಕಾದ ಮಾರ್ಗದ ವಿಷಯದಲ್ಲಿ ಅವರಿಗೂ ಗಾಂಧೀಜಿಗೂ ವ್ಯತ್ಯಾಸವಿತ್ತು. ಅವರಿಬ್ಬರಿಗೂ ಒಮ್ಮತವನ್ನು ತರುವುದು ಗೋಖಲೆಯವರಿಗೆ ಮುಖ್ಯ ಕೆಲಸವಾಯಿತು. ಕೊನೆಗೆ ವೈಸರಾಯರು ಭಾರತದ ವಲಸೆಗಾರರ ಪರವಾಗಿ ವಾದಮಾಡಲು ದಕ್ಷಿಣ ಆಫ್ರಿಕಕ್ಕೆ ಸರ್ ಬೆಂಜಾಮಿನ್ ರಾಬರ್ಟ್‌ಸನ್‌ರನ್ನು ಕಳುಹಿಸಿದರು.

ಗೋಖಲೆಯವರ ಆಸಕ್ತಿ ಸಹಾನುಭೂತಿಗಳು ಭಾರತದಿಂದ ಉದಾರ ಸಹಾಯವನ್ನು ತಂದವು. ದಕ್ಷಿಣ ಆಫ್ರಿಕದ ಸತ್ಯಾಗ್ರಹಕ್ಕೆ ಧನಸಹಾಯ ಮಾಡಿದ ಪ್ರಮುಖರ ಪೈಕಿ ಗೊಂಡಾಲಿನ ಠಾಕೂರರು ಮತ್ತು ರಾಣಿ ಸಾಹೇಬರು, ನೈಜಾಮ್, ಗಾಯಕವಾಡ ಮತ್ತು ಇತರ ದೇಶೀಯ ರಾಜರು ಇದ್ದರು. ರಾಮಸೆ ಮಾಕ್‌ಡೊನಾಲ್ಡ್ ಮತ್ತು ಸರ್ ವ್ಯಾಲೆಂಟೈನ್ ಶಿರೋಲ್ ಸತ್ಯಾಗ್ರಹನಿಧಿಗೆ ಹಣಕೊಟ್ಟರು. ಶಿರೋಲರು ಗೋಖಲೆಯವರಿಗೆ ಹೀಗೆ ಬರೆದರು. "ಭಾರತದ ಕಲ್ಯಾಣದಲ್ಲಿ ನಿಜವಾದ ಆಸಕ್ತಿಯಿದ್ದು ಬ್ರಿಟಿಷರು ಮತ್ತು ಭಾರತೀಯರ ಈ ಸಂಬಂಧದಿಂದ ಭಾರತಕ್ಕೂ ಸಾಮ್ರಾಜ್ಯಕ್ಕೂ ಏನು ಬೆಲೆ ಎಂದರಿತ ಬಹುಪಾಲು ಬ್ರಿಟಿಷರು, ನೀವು ಬೊಂಬಾಯಿನಲ್ಲಿ ಕೊಟ್ಟ ಹೇಳಿಕೆಯಿಂದ ಮನಃ ಪರಿವರ್ತನೆ ಹೊಂದದಿರಲು ಸಾಧ್ಯವೇ ಇಲ್ಲ"

ಗಾಂಧೀ, ಆಂಡ್ರೂಸ್‌ರೊಂದಿಗೆ, ಜನರಲ್ ಸ್ಮಟ್ಸರನ್ನು ಭೆಟ್ಟಿಯಾಗಲು ಪ್ರಿಟೋರಿಯಾಕ್ಕೆ ಹೋದರು. ಆ ವೇಳೆಯಲ್ಲಿ ಯೂನಿಯನ್ ರೈಲ್ವೆಯ ಯೂರೋಪಿಯನ್ ನೌಕರರ ದೊಡ್ಡ ಮುಷ್ಕರ ನಡೆದಿತ್ತು. ಸರ್ಕಾರದ ಪರಿಸ್ಥಿತಿ, ತುಂಬ ಕಷ್ಟಕರವಾಗಿತ್ತು. ಇಂತಹ ಕಷ್ಟಕಾಲದಲ್ಲಿ ಸರ್ಕಾರವನ್ನು ಪೇಚಿಗೆ ಸಿಕ್ಕಿಸಲು ಇಷ್ಟವಿಲ್ಲದುದರಿಂದ ಗಾಂಧಿ, ಯೋಜಿತ ಪಾದಯಾತ್ರೆಯನ್ನು ಸದ್ಯಕ್ಕೆ ಕೈಬಿಟ್ಟರು. ಈ ತೀರ್ಮಾನದಿಂದ ವಾತಾವರಣ ಸ್ವಲ್ಪ ಸುಗಮವಾಯಿತು. ಲಾರ್ಡ್ ಆಂಪ್‌ಹಿಲ್ಲರು ಗಾಂಧೀಜಿಗೆ, ತಮ್ಮ ಕಟ್ಟಾ ವಿರೋಧಿಗೆ ಸಹ ಸಹಾಯಕ ಮನೋಭಾವವನ್ನು ತೋರಿಸಿದುದಕ್ಕಾಗಿ ಅಭಿನಂದಿಸಿ ತಂತಿ ಕಳುಹಿಸಿದರು.

ಜನರಲ್ ಸ್ಮಟ್ಸರು ಸಹ ಗಾಂಧೀಜಿಯ "ಸ್ವಯಂ ಪ್ರೇರಿತ ವಿನಯ ಮತ್ತು ಶೌರ್ಯದಿಂದ" ಪ್ರಭಾವಿತರಾದರು. ಅವರ ಸೆಕ್ರೆಟರಿ ಗಾಂಧೀಜಿಗೆ ವಿನೋದವಾಗಿ ಹೀಗೆ ಹೇಳಿದರು. "ನಿಮ್ಮ ಜನರು ನನಗೆ ಪ್ರಿಯರಲ್ಲ. ಅವರಿಗೆ ಸಹಾಯ ಮಾಡಲು ನನಗೆ ಖಂಡಿತ ಬೇಕಿಲ್ಲ. ಆದರೆ ನಾನು ಏನು ಮಾಡಲಿ? ನೀವು ನಮ್ಮ ಕಷ್ಟಕಾಲದಲ್ಲಿ ನಮಗೆ ಸಹಾಯಮಾಡುವಿರಿ. ನಿಮ್ಮ ಮೇಲೆ ನಾವು ಹೇಗೆ ಕೈಮಾಡುವುದು? ನೀವೂ ಇಂಗ್ಲಿಷ್ ಮುಷ್ಕರಕಾರರಂತೆ ಹಿಂಸೆಯ ಮಾರ್ಗಕ್ಕೆ ಇಳಿದರೆ ಆದೀತಲ್ಲ ಎಂದು ನಾನು ಅನೇಕ ಸಲ ಬಯಸುತ್ತೇನೆ. ಆಗ ನಿಮ್ಮನ್ನು ಹೇಗೆ ಮುಗಿಸಬಹುದೆಂಬುದು ನಮಗೆ ತತ್‌ಕ್ಷಣ ಗೊತ್ತಾಗುತ್ತದೆ" ಎಂದರು.

ನೇಟಾಲ್ ಮರ್ಕ್ಯುರಿ ಎಂಬ ಪತ್ರಿಕೆ, ಪಾದಯಾತ್ರೆಯನ್ನು ಮುಂದುವರಿಸಿದುದಕ್ಕೆ ಉದ್ದೇಶವನ್ನು ಆರೋಪಿಸಿತು. "ಸ್ಥಳೀಯ ಭಾರತೀಯರಲ್ಲಿ ಬಹು ಸಂಖ್ಯಾತರು,

ತಮ್ಮ ಮೇಲೆಯೇ ತಿರುಗಿ ತಮಗೆ ಬಹಳ ಹಿಂಸೆಯನ್ನೂ ಕಷ್ಟವನ್ನೂ ಉಂಟುಮಾಡಿದ ಈ ಬಗೆಯ ಹೋರಾಟದ ಪುನರಾವರ್ತನೆಯಲ್ಲಿ ಮತ್ತೆ ಭಾಗವಹಿಸುವರೆಂದು ನಂಬುವುದು ಸಾಧ್ಯವಿಲ್ಲ" ಎಂದು ಬರೆಯಿತು. ಇತರ ಊಹೆಗಳೂ ಇದ್ದವು. ಗಾಂಧೀಜಿ ಅದಕ್ಕೆ ಜವಾಬುಕೊಟ್ಟರು. ಸ್ಥಳೀಯ ಭಾರತೀಯರ ಬಹುಭಾಗ, ಪಾದಯಾತ್ರೆಯಲ್ಲಿ ಸೇರುವರೆಂದು ನಂಬುವುದಕ್ಕಾಗುವುದಿಲ್ಲ ಎಂದು ಪತ್ರಿಕೆಗೆ ಯಾರಾದರೂ ವರದಿ ಕೊಟ್ಟಿದ್ದರೆ, ಅದು ತಪ್ಪು ವರದಿ. ಅದಕ್ಕೆ ಬದಲಾಗಿ ಇವತ್ತಿರುವ ಕಷ್ಟ, ಪಾದಯಾತ್ರೆಯನ್ನು ನಿಧಾನ ಮಾಡುತ್ತಿರುವುದಕ್ಕಾಗಿ. ನನ್ನ ಸಹಕೆಲಸಗಾರರೂ ನಾನೂ. ಜನರಿಗೆ ಸದ್ಯಕ್ಕೆ ಪಾದಯಾತ್ರೆ ಮುಂದಕ್ಕೆ ಹಾಕಲ್ಪಡಬೇಕು ಎಂದು ಸಲಹೆ ಕೊಟ್ಟು—ವಿಶೇಷ ಸುದ್ದಿಗಾರರನ್ನೂ ಕರಪತ್ರಗಳನ್ನೂ ಕಳುಹಿಸಬೇಕಾಯಿತು. ಸ್ಥಳೀಯ ಭಾರತೀಯರ ಬಹುಭಾಗ, ಪಾದಯಾತ್ರೆಯಲ್ಲಿ ಸೇರುತ್ತದೆಯೇ ಇಲ್ಲವೇ ಎಂದು ಅಂದಾಜು ಮಾಡುವುದು ಪ್ರಯೋಜನಕಾರಿಯಲ್ಲ ಎಂದು ನಾನೂ ಒಪ್ಪುತ್ತೇನೆ. ಏಕೆಂದರೆ ಇದು ಬಹಳ ಬೇಗವೇ—ಈಗಾಗಲೇಆಗದೆ ಹೋಗಿದ್ದರೆ—ಸ್ಪಷ್ಟವಾಗಿ ಪ್ರತ್ಯಕ್ಷವಾಗುವುದು." 'ನೇಟಾಲ್ ಮರ್‍ಯ್ಕುರಿ' ಪತ್ರಿಕೆಯಸಂಪಾದಕರಿಗೆ ಬರೆದ ಪತ್ರದಲ್ಲಿ ಗಾಂಧೀಜಿ ಹೇಗೆ ಹೇಳಿದರು :

"ನಿಮ್ಮ ಒಳ್ಳೆತನದ ಉಪಯೋಗ ಮಾಡಿಕೊಳ್ಳಲು ಮುಖ್ಯ ಕಾರಣವೇನೆಂದರೆ, ನಿಮ್ಮ ಪತ್ರಿಕೆಯ ಮೂಲಕ ಜನರಿಗೆ ಮುಂದಿನ ವಿಷಯವನ್ನು ತಿಳಿಯಪಡಿಸುವುದಕ್ಕಾಗಿ. ಈಗ ತಾನೇ ಕರಾಚಿಯಲ್ಲಿ ತನ್ನ ಅಧಿವೇಶನವನ್ನು ಮುಗಿಸಿದ ಮಹಾನ್ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್, ಬ್ರಿಟಿಷ್ ವಸಾಹತು (ಡೊಮಿನಿಯನ್)ಗಳಲ್ಲಿ ಇರುವ ಸಮಸ್ತ ಚಕ್ರವರ್ತಿಯ ಪ್ರಜೆಗಳಿಗೂ ಜಾತಿ ಬಣ್ಣ ಮತಗಳ ವ್ಯತ್ಯಾಸವಿಲ್ಲದೆ ಪೌರಹಕ್ಕುಗಳನ್ನು ಕೊಡಬೇಕೆಂದು ಕೇಳಿ ತೀರ್ಮಾನಿಸಿರುವುದು ಅದಕ್ಕೆ ನ್ಯಾಯವಾಗಿದೆ. ಕಾಂಗ್ರೆಸ್ ನಂತಹ ವಿಶಾಲ ಸಂಸ್ಥೆ, ಸ್ಥಳೀಯ ಪರಿಸ್ಥಿತಿಗಳನ್ನು ಪರಿಗಣಿಸಬೇಕಾಗಿದುದಿಲ್ಲ. ಆದರೆ ದಕ್ಷಿಣ ಆಫ್ರಿಕದಲ್ಲಿರುವ ನಾವು ಬುದ್ಧಿಯುಳ್ಳ ಜನರಂತೆ, ನಮ್ಮ ಆಸೆಗಳನ್ನು ಸ್ಥಳೀಯ ಪರಿಸ್ಥಿತಿಯ ಮಿತಿಯೊಳಗೆ ಇಡುವುದು ಆವಶ್ಯಕ. ವಿರೋಧಗಳಿರುವುದನ್ನು—ಅದು ಎಷ್ಟೇ ಅನ್ಯಾಯವಾಗಿರಲಿ—ನಾವು ಪರಿಗಣಿಸಬೇಕು. ನಾವು ಹೀಗೆ ಮಾಡಿದ್ದೇವೆ; ನಿಮ್ಮ ಪತ್ರಿಕೆಯ ಮೂಲಕ ಹೀಗೆ ಘೋಷಿಸುತ್ತೇವೆ: ನಾನೂ ಮತ್ತೂ ನನ್ನ ಸಹಕೆಲಸಗಾರರೂ ಬ್ರಿಟಿಷ್ ಇಂಡಿಯನ್ನರು ಅನಿರ್ಬಂಧವಾಗಿ ಯೂನಿಯನ್ನಿಗೆ ಬರಬೇಕೆಂಬುದಕ್ಕಾಗಿಯಾಗಲೀ ಅಥವಾ ಅವರಿಗೆ ಶೀಘ್ರದಲ್ಲಿ ಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಕೊಡಬೇಕೆಂಬುದಕ್ಕಾಗಿಯಾಗಲೀ ನಡೆಯುವ ಯಾವ ಚಳುವಳಿಗೂ ನಾವು ಭಾಗಸ್ಥರಾಗುವುದಿಲ್ಲ. ಈ ಹಕ್ಕುಗಳು ಕಾಲ ಬಂದಾಗ, ದೊರೆಯುವುದೆಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ನಂಬುತ್ತೇವೆ. ಅದು ಬರುವುದಾದರೆ, ಬಲಾತ್ಕಾರದಿಂದ ಬರುವುದಿಲ್ಲ. ಅದರ ಬದಲು ಸತ್ಯಾಗ್ರಹದಿಂದ ಜನಾಭಿಪ್ರಾಯ ರೂಪಿತವಾಗಿ ಆಫ್ರಿಕದ ಭಾರತೀಯರು ಬ್ರಿಟಿಷ್ ಚಕ್ರಾಧಿಪತ್ಯದ ಪ್ರಜೆಗಳಾಗುವುದರಿಂದ ಹೊಂದುವ

ಜವಾಬ್ದಾರಿಗಳನ್ನೆಲ್ಲ ನಿರ್ವಹಿಸಲು ಅರ್ಹರಾದಾಗ, ಆ ಹಕ್ಕುಗಳು ಇವರಿಗೆ ಸ್ವಾಭಾವಿಕವಾಗಿ ತಾನಾಗಿಯೇ ದೊರೆಯುತ್ತವೆ. ಈ ಮಧ್ಯೆ ಆಫ್ರಿಕದಲ್ಲಿ ಭಾರತೀಯ ಜನಾಂಗದ ಪ್ರಯತ್ನಗಳು ಒಂದೊಂದು ಪೌರ ಹಕ್ಕನ್ನು ಸಂಪಾದಿಸುವುದಕ್ಕಾಗಿ, ಅಥವ ಪುನರ್ ಸಂಪಾದಿಸುವುದಕ್ಕಾಗಿ, ಮತ್ತು ಇವರಿಗೆ ಈ ವರೆಗೆ ಕೊಡದೆ ಹಿಡಿದಿಟ್ಟಿರುವ ಹಕ್ಕುಗಳಿಗಾಗಿ ಕೇಂದ್ರೀಕೃತವಾಗಬೇಕು. ಇದೂ ಕೂಡ ನಮ್ಮ ಸತ್ಯಾಗ್ರಹದಿಂದ ಪೌರಹಕ್ಕುಗಳ ವಿನಾಶಕ್ಕೆ ವಿರುದ್ಧವಾಗಿ ಪರಿಣಾಮಕಾರಿಯಾದ ಪ್ರತಿಭಟನೆಯನ್ನು ತೋರಿಸದಿದ್ದರೆ ಆಗುವುದಿಲ್ಲವೆಂದು ನನ್ನ ಮತ. ನಾವು ಕಷ್ಟ ಸಹಿಷ್ಣುತೆಯಿಂದ ಯೂರೋಪಿಯನ್ ಜನಾಂಗಕ್ಕೆ, ನಾವೂ ಸಹ ಜಗತ್ತಿನ ಇತರ ಜನಾಂಗಗಳಂತೆ ನಮ್ಮ ಮರ್ಯಾದೆಯನ್ನೂ ಆತ್ಮಗೌರವವನ್ನೂ ರಕ್ಷಿಸಿಕೊಳ್ಳಬಲ್ಲೆವೆಂದು ತೋರಿಸಿಕೊಡದಿದ್ದರೆ ಇದು ಸಿದ್ಧಿಸುವುದಿಲ್ಲ.

ಗಾಂಧೀಜಿಯ ತೀವ್ರವಾದ ಮತ್ತು ಸರಿಯಾದ ಈ ನಿಲುವು ಜನರಲ್ ಸ್ಮಟ್ಸರ ಮೇಲೆ ಪರಿಣಾಮವುಂಟು ಮಾಡಿತು. ಆಗ ತಾನೇ ನಡೆದಿದ್ದ ಸತ್ಯಾಗ್ರಹ ಚಳುವಳಿ ಜನತೆಯ ಕಣ್ಣನ್ನು ತೆರೆಯಿಸಿತು. ಅವರು, ಪ್ರಶ್ನೆಯ ಶೀಘ್ರ ಇತ್ಯರ್ಥಕ್ಕೆ ಕಾತರತೆಯನ್ನು ತೋರಿದರು.

ಜನರಲ್ ಸ್ಮಟ್ಸರೊಂದಿಗೆ ಇದು ಗಾಂಧೀಜಿಯ ಪ್ರಥಮ ಭೇಟಿ, ರೈಲ್ವೆ ಮುಷ್ಕರದಲ್ಲಿ ಜನರಲ್ ಲೀನರಾಗಿದ್ದುದರಿಂದ, ಸ್ವಲ್ಪ ಕಾಲದ್ದು ಮಾತ್ರವಾಗಿತ್ತು. ರೈಲ್ವೆ ಮುಷ್ಕರ ಎಷ್ಟು ಗಂಭೀರ ಸ್ವರೂಪದ್ದಾಗಿತ್ತೆಂದರೆ ಯೂನಿಯನ್ ಸರ್ಕಾರ. ಮಾರ್ಷಲ್ ಲಾವನ್ನು ಜಾರಿ ಮಾಡಿತ್ತು. ಈಗ ಜನರಲ್ ಸ್ಮಟ್ಸರು ಹಿಂದೆ ಮಾಡಿದಂತೆ ದೊಡ್ಡ ಕುದುರೆ ಸವಾರಿ ಮಾಡಲಿಲ್ಲ. "ನಾವು ನಿಮ್ಮ ಕೇಳಿಕೆಗಳನ್ನು ಮಂಜೂರು ಮಾಡಲು ತೀರ್ಮಾನಿಸಿದ್ದೇವೆ. ಆದರೆ ಅದಕ್ಕೆ ಸಮಿತಿ, ತನ್ನ ಶಿಫಾರಸನ್ನು ಕೊಡಬೇಕು" ಎಂದರು. ಸಮಿತಿಯ ಮುಂದೆ ಯಾರೂ ಸಾಕ್ಷ್ಯ ಕೊಡದಂತೆ ಚಳುವಳಿ ಮಾಡಬಾರದೆಂದೂ, ಈ ಮಧ್ಯದಲ್ಲಿ ಗಾಂಧೀಜಿ ಸತ್ಯಾಗ್ರಹವನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದೂ ಸ್ಮಟ್ಸರು ಕೇಳಿಕೊಂಡರು. "ಹೀಗೆ ಮಾಡುವುದರಿಂದ ನಿಮ್ಮ ಕಾರ್ಯಕ್ಕೂ ಸಹಾಯವಾಗುತ್ತದೆ. ನನಗೂ ಸ್ವಲ್ಪ ಬಿಡುವು ದೊರೆತಂತಾಗುತ್ತದೆ" ಎಂದರು.

ಒಟ್ಟಿನಲ್ಲಿ ಗಾಂಧೀಜಿ, ಜನರಲ್‌ರವರ ಸೂಚನೆಯನ್ನು ಒಪ್ಪುವ ಮನೋಭಾವವುಳ್ಳವರಾಗಿದ್ದರು. ಗಾಂಧಿ ಮತ್ತು ಸ್ಮಟ್ಸರ ಅನೇಕ ಭೇಟಿಗಳ ಫಲವಾಗಿ ಉಂಟಾದ ಒಮ್ಮತವನ್ನು ಒಳಗೊಂಡ ಕಾಗದ ಪತ್ರಗಳು ಇಬ್ಬರಿಂದಲೂ ಅಂಗೀಕೃತವಾದವು. ಈ ಮಧ್ಯೆ ವೈಸರಾಯರ ಪ್ರತಿನಿಧಿಯಾಗಿ ಸರ್ ಬೆಂಜಾಮಿನ್ ರಾಬರ್ಟ್‌ಸನ್ ಅವರು ಪ್ರಿಟೋರಿಯಾಕ್ಕೆ ಆಗಮಿಸಿದರು. ಆದರೆ ಅವರ ಮನೋಭಾವ. ಸಾಧಾರಣವಾದ ಇಂಗ್ಲಿಷ್ ಅಧಿಕಾರಿಯ ಮನೋಭಾವ. ಭಾರತೀಯರಿಗೆ ಸಹಾಯ ಮಾಡುವುದಕ್ಕಿಂತ ಹೆಚ್ಚಾಗಿ ಅವರು, ಅವರ ಮೇಲೆ ಜಬರದಸ್ತು ಮಾಡಿದರು.

ಜನವರಿ ೨೧–೨೪ರಂದು ಗಾಂಧೀಜಿಗೂ ಜನರಲ್ ಸ್ಮಟ್ಸರಿಗೂ ಒಂದು

ತಾತ್ಕಾಲಿಕ ಒಪ್ಪಂದವಾಯಿತು. ಸತ್ಯಾಗ್ರಹ ಪೂರ್ಣವಾಗಿ ನಿಂತಿತು. ಸತ್ಯಾಗ್ರಹಿಗಳನ್ನು ಕ್ರಮಕ್ರಮವಾಗಿ ಬಿಡುಗಡೆ ಮಾಡಿದರು. ಸ್ತ್ರೀ ಮತ್ತು ಪುರುಷ ಸತ್ಯಾಗ್ರಹಿಗಳು ತುಂಬ ಕಠಿಣ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದರು. ಅವರನ್ನು ಕ್ರಿಮಿನಲ್ ಖೈದಿಗಳಿಗಿಂತ ಉತ್ತಮವಾಗಿ ಕಾಣುತ್ತಿರಲಿಲ್ಲ. ಜೈಲಿನ ಕಷ್ಟ ಜೀವನದಿಂದ ಸತ್ತವರ ಪೈಕಿ ಎಪ್ಪತ್ತೈದು ವರ್ಷ ವಯಸ್ಸಿನ ಹರಬತ್‌ಸಿಂಗ್ ಮತ್ತು ಹದಿನಾರು ವರುಷದ ಹುಡುಗಿ ವಲಿಯಮ್ಮ ಇವ್ವರು. ಹರಬತ್‌ಸಿಂಗ್ ದರ್ಬಾನ್ ಸೆರೆಮನೆಯಲ್ಲಿ ಸತ್ತರು. ವಲಿಯಮ್ಮ ಬಿಡುಗಡೆ ಹೊಂದಿದ ಕೆಲವೇ ದಿನಗಳೊಳಗೆ ತೀರಿಕೊಂಡಳು. ಅವಳು ಜೈಲಿನಲ್ಲಿ ಎರಡು ತಿಂಗಳು ಇದ್ದಳು. ಅವಳು ಅವಳ ತಾಯಿ ಇಬ್ಬರೂ ಶಿಕ್ಷೆಗೊಳಗಾಗಿದ್ದರು.

ವಲಿಯಮ್ಮ ಚಿಕ್ಕ ವಯಸ್ಸಿನ ವೀರ ತರುಣಿ. ಭಯಂಕರ ಜ್ವರದಲ್ಲಿ ಆಕೆ ಹಾಸಿಗೆ ಹಿಡಿದಿದ್ದಾಗ ಗಾಂಧಿ ಅವಳನ್ನು "ವಲಿಯಮ್ಮ ಜೈಲಿಗೆ ಹೋದದ್ದಕ್ಕಾಗಿ ನಿನಗೆ ಪಶ್ಚಾತ್ತಾಪವಾಗಿಲ್ಲವೆ?" ಎಂದು ಕೇಳಿದರು. "ಪಶ್ಚಾತ್ತಾಪವೆ? ಈಗ ನಾನು ಮತ್ತೆ, ಹಿಡಿದುಕೊಂಡು ಹೋದರೆ, ಸೆರೆಮನೆಗೆ ಹೋಗಲು ಸಿದ್ಧಳಾಗಿದ್ದೇನೆ" ಎಂದಳು ಆಕೆ. ಗಾಂಧೀಜಿ "ಆದರೆ ಅದರಿಂದ ನಿನಗೆ ಸಾವೇ ಬಂದರೆ? ಎಂದು ಕೇಳಿದರು. ವಲಿಯಮ್ಮ "ನನಗೆ ಅದು ಲಕ್ಷ್ಯವಿಲ್ಲ. ತಾಯಿನಾಡಿಗಾಗಿ ಸಾಯಲು ಯಾರಿಗೆ ತಾನೇ ಪ್ರೀತಿಯಿಲ್ಲ?" ಎಂದಳು.

ದುಃಖ ಸಹಾನುಭೂತಿಯ ಸಭೆಗಳು ನಡೆದವು. ಭಾರತದ ಈ ವೀರರಮಣಿಯ ಬಲಿದಾನವನ್ನು ಸ್ಮಾರಕವಾಗಿಸಲು, "ವಲಿಯಮ್ಮ ಭವನ"ವೊಂದನ್ನು ನಿರ್ಮಿಸಲು ಭಾರತೀಯರು ನಿರ್ಣಯಿಸಿದರು. "ಅವಳು ತನ್ನ ಸೇವಾಮಂದಿರವನ್ನು ತನ್ನ ಕೈಯಿಂದಲೇ ನಿರ್ಮಿಸಿದಳು. ಇಂದಿಗೂ ಸಹ ಅವಳ ನಿರ್ಮಲ ಯಶಸ್ಸಿನ ವಿಗ್ರಹ, ಅನೇಕ ಹೃದಯದಲ್ಲಿ ಶಾಶ್ವತವಾಗಿ ನಿಂತಿದೆ. ವಲಿಯಮ್ಮನ ಹೆಸರು, ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲಿ, ಭಾರತ ಬದುಕಿರುವ ವರೆಗೆ ಬದುಕಿರುತ್ತದೆ".

ಒಂದೆ ಜನರಲ್ ಸ್ಮಟ್ಸ್, ವಾಗ್ದಾನ ಭ್ರಷ್ಟರಾದ ದೃಷ್ಟಿಯಿಂದ, ೧೯೧೪ನೆ ಸಂವತ್ಸರದ ಸ್ಮಟ್ಸ್ ಗಾಂಧೀ ಒಪ್ಪಂದವೆಂದು ಹೆಸರಾದ ತಾತ್ಕಾಲಿಕ ಒಪ್ಪಂದಕ್ಕೆ ದಕ್ಷಿಣ ಆಫ್ರಿಕದ ಭಾರತೀಯರ ಒಪ್ಪಿಗೆಯನ್ನು ಪಡೆಯುವುದು ತುಂಬ ಕಷ್ಟವಾಯಿತು. "ಎಷ್ಟೆ ಬಾರಿ ಸತ್ಯಾಗ್ರಹಿಗೆ ಮೋಸವಾದರೂ, ಅವನು ಅಪನಂಬಿಕೆಗೆ ಎಲ್ಲಿಯವರೆಗೆ ಕಾರಣವಿಲ್ಲವೋ ಅಲ್ಲಿಯವರೆಗೆ, ತನ್ನ ವಿರೋಧಿಯಲ್ಲಿ ನಂಬಿಕೆಯಿಟ್ಟೇ ಇಡುತ್ತಾನೆ" ಎಂದು ಗಾಂಧೀ ಹೇಳಿದರು. ನಾನಾ ಕಡೆಗಳಲ್ಲಿ ಸಭೆಗಳು ನಡೆದು ಕೊನೆಗೆ ಗಾಂಧೀಜಿಗೆ, ಭಾರತೀಯರು ಒಪ್ಪಂದ ಶರತ್ತುಗಳನ್ನು ಅಂಗೀಕರಿಸುವಂತೆ ಮನವೊಲಿಸಲು ಸಾಧ್ಯವಾಯಿತು.

ಈ ಮಧ್ಯೆ ವಿಚಾರಣಾ ನಿಯೋಗ, ತನ್ನ ಕೆಲಸವನ್ನು ಪ್ರಾರಂಭಿಸಿತು. ಭಾರತೀಯರ ಪರವಾಗಿ ಅವರ ಮುಂದೆ ಬಹಳ ಕಡಿಮೆ ಜನ, ಸಾಕ್ಷ್ಯ ನೀಡಿದರು. ಸರ್ ಬೆಂಜಾಮಿನ್ ರಾಬರ್ಟ್ಸನ್ನರು ಅನೇಕರನ್ನು ಸಾಕ್ಷ್ಯ ಕೊಡುವಂತೆ ಮನವೊಲಿಸಲು

ಪ್ರಯತ್ನಿಸಿದರು. ಆದರೆ ಜಯಶಾಲಿಯಾಗಲಿಲ್ಲ. ನಿಯೋಗದ ಬಹಿಷ್ಕಾರದಿಂದ ಅದಕ್ಕೆ ಕೆಲಸವೇ ಕಡಿಮೆಯಾಯಿತು. ತಮ್ಮ ಸಹಾಯವನ್ನು ಕೊಡದೆ ತಡೆಹಿಡಿದು ದಕ್ಕಾಗಿ ನಿಯೋಗವು ಭಾರತೀಯರನ್ನು ಕಟುವಾಗಿ ಟೀಕಿಸಿತು. ಬಿಳಿಯ ಸಿಪಾಯಿಗಳ ದುರಾಚಾರದ ಆಪಾದನೆಗಳನ್ನು ನಿರಾಕರಿಸಿತು. ಆದರೆ ಭಾರತೀಯ ಜನಾಂಗದವರ ಕೇಳಿಕೆಗಳನ್ನೆಲ್ಲ ಒಪ್ಪಬೇಕೆಂದು ಶಿಫಾರಸು ಮಾಡಿತು. ಮೂರು ಪೌಂಡು ತೆರಿಗೆ ಕಾನೂನು ರದ್ದತಿ, ಭಾರತೀಯ ವಿವಾಹಗಳ ಅಂಗೀಕಾರ, ಜೊತೆಗೆ ಕೆಲವು ಅಲ್ಪಸ್ವಲ್ಪ ರಿಯಾಯತಿಗಳು; ಒಟ್ಟಿನಲ್ಲಿ ಸಾಲೊಮನ್ ನಿಯೋಗದ ವರದಿ, ಜನರಲ್ ಸ್ಮಟ್ಸರು ತಿಳಿಸಿದ್ದಂತೆ ಭಾರತೀಯರಿಗೆ ಅನುಕೂಲಕರವಾಗಿದ್ದಿತು.

ದಕ್ಷಿಣ ಆಫ್ರಿಕದ ಯೂನಿಯನ್ ಸರ್ಕಾರ, ಸಾಲೊಮನ್ ವಿಚಾರಣಾ ಆಯೋಗದ ಶಿಫಾರಸುಗಳನ್ನೆಲ್ಲ ಒಪ್ಪಿ ಇಂಡಿಯಾ ರಿಲೀಫ್ ಬಿಲ್ (ಭಾರತೀಯರ ಸಹಾಯಕ ಮಸೂದೆ) ಅಳವಡಿಸಿತು. ಮೂರು ಪೌಂಡು ತೆರಿಗೆ ರದ್ದು, ಭಾರತದಲ್ಲಿ ನ್ಯಾಯ ಬದ್ಧವೆಂದು ಪರಿಗಣಿತವಾದ ವಿವಾಹಗಳನ್ನೆಲ್ಲ ನ್ಯಾಯಬದ್ಧವೆಂದು ಪರಿಗಣಿಸುವುದು; ತನ್ನ ಹೆಬ್ಬೆಟ್ಟಿನ ಗುರುತು ಇರುವ ಪ್ರಜೆಯ (ಡೊಮಿಸೈಲ್) ಚೀಟಿಯೇ, ಯೂನಿಯನ್ ಪ್ರವೇಶಕ್ಕೆ ಸಾಕೆಂದು ಪರಿಗಣಿಸುವುದು ಈ ಅಂಶಗಳನ್ನೊಳಗೊಂಡ ಮಸೂದೆ ೧೯೧೪ನೆ ಜೂನ್ ೨೬ರಂದು ೨೪–೬೦ ಮತಗಳಿಂದ ಅಂಗೀಕೃತವಾಯಿತು. ಭಾರತೀಯ ವಲಸೆಗಾರರ ಕಷ್ಟ ಪರಿಹಾರಕ್ಕಾಗಿ ಉದ್ದೇಶಿತವಾದ, ದಕ್ಷಿಣ ಆಫ್ರಿಕದ ಪ್ರಥಮ ಕಾನೂನು ಅದು. ಮಸೂದೆಯಲ್ಲಿ ಸೇರಿಸಲ್ಪಡದೆ ಇದ್ದ ಆಡಳಿತ ವಿಷಯಗಳು, ಉದಾಹರಣೆಗೆ ವಿದ್ಯಾವಂತ ಭಾರತೀಯರಿಗೆ ದಕ್ಷಿಣ ಆಫ್ರಿಕಕ್ಕೆ ಪ್ರವೇಶಿಸುವ ಹಕ್ಕು, ಈಗಾಗಲೇ ಭಾರತೀಯರಿಗಿರುವ ಹೆಂಡತಿ ಅಥವಾ ಹೆಂಡತಿಯರಿಗೆ ಆಫ್ರಿಕದಲ್ಲಿರುವ ಗಂಡಂದಿರನ್ನು ಸೇರಿಕೊಳ್ಳಲು ಅವಕಾಶ– ಮುಂದಾವುಗಳೆಲ್ಲ, ಜನರಲ್ ಸ್ಮಟ್ಸ್ ಮತ್ತು ಗಾಂಧೀಜಿ ನಡುವೆ ಪತ್ರವ್ಯವಹಾರದಿಂದ ತೀರ್ಮಾನವಾದುವು.

ಜನರಲ್ ಸ್ಮಟ್ಸ್‌ರು ತಮ್ಮ ೩೦ನೆ ಜೂನ್ ಪತ್ರವಲ್ಲಿ ಹೀಗೆ ಹೇಳಿದರು. "ಈಗ ಇರುವ ಕಾನೂನುಗಳನ್ನು ಚಲಾವಣೆ ಮಾಡುವುದರಲ್ಲಿ, ಕಾನೂನುಗಳನ್ನು ನ್ಯಾಯವಾಗಿಯೂ ಮತ್ತು ವಿಶಿಷ್ಟ ಹಿತಾಸಕ್ತಿಗಳಿಗೆ (Vested interested) ಸರಿಯಾದ ಗಮನವಿಟ್ಟೂ ನಡೆಸಲಾಗುವುದು."

ಇದಕ್ಕೆ ಗಾಂಧೀಜಿ, ಹೀಗೆ ಜವಾಬು ಕೊಟ್ಟರು. "ಇಂಡಿಯಾ ರಿಲೀಫ್ ಬಿಲ್ಲಿಗೆ ಮಂಜೂರಾತಿ ದೊರೆತುದು, ೧೯೦೬ರ ಸಪ್ಟಂಬರ್‌ನಲ್ಲಿ ಪ್ರಾರಂಭವಾದ ಸತ್ಯಾಗ್ರಹ ಹೋರಾಟವನ್ನು ಪೂರ್ಣವಾಗಿ ಮುಕ್ತಾಯಗೊಳಿಸಿದೆ. ಈ ಹೋರಾಟದಿಂದ ಭಾರ ತೀಯ ಜನಾಂಗಕ್ಕೆ ತುಂಬ ದೈಹಿಕ ಕಷ್ಟಗಳೂ ಮತ್ತು ಹಣನಷ್ಟ. ಸರ್ಕಾರಕ್ಕೆ ಕಾತರ ಮತ್ತು ತೀವ್ರಾಲೋಚನೆಗಳು ಉಂಟಾದುವು".

ಗಾಂಧೀಜಿಯ ಸಾರ್ವಜನಿಕ ಕಾರ್ಯಗಳು ಅವರ ಕಾಲವನ್ನೆಲ್ಲ ತೆಗೆದುಕೊಂಡಿದ್ದುವು. ಆದರೆ ಅವರು ಸಾಧ್ಯವಾದಷ್ಟು ಬೇಗ ಭಾರತಕ್ಕೆ ಹಿಂದಿರುಗಿ ರೋಗಿಷ್ಠರಾಗಿದ್ದ

ತಮ್ಮ ಹಿರಿಯಣ್ಣ ಲಕ್ಷ್ಮೀದಾಸರನ್ನು ಉಪಚರಿಸಲು ಆತುರರಾಗಿದ್ದರು. ಆದರೆ ಲಕ್ಷ್ಮೀದಾಸರು ಗಾಂಧಿ, ಭಾರತಕ್ಕೆ ಬರುವ ಬಹುಕಾಲದ ಹಿಂದೆಯೇ ತೀರಿಕೊಂಡರು. ಕಾಲೆನ್‌ಬಾಕರಿಗೆ ಗಾಂಧಿ, ತಮ್ಮ ಅಂತರಾಳದ ವೇದನೆಯನ್ನು ಹೀಗೆ ತಿಳಿಸಿದರು:

"ಊಹಿಸಬಹುದಾದ ಅತಿ ದೊಡ್ಡದುಃಖ ನನಗೆ ಉಂಟಾಗಿದೆ. ನಮ್ಮ ಅಣ್ಣ ನೆನ್ನೆ ತೀರಿಕೊಂಡ. ಪ್ರಾಯಶಃ ಕೊನೆಯ ಉಸಿರಿನವರೆಗೆ ನನ್ನನ್ನೇ ಕುರಿತು ಯೋಚಿಸು ತ್ತಿರಬಹುದು. ನನ್ನನ್ನು ಸಂಧಿಸಬೇಕೆಂದು ಅವರ ಮನಸ್ಸಿನಲ್ಲಿ ಎಷ್ಟೊಂದು ಕಾತರದ ಆಸೆಯಿತ್ತು! ನಾನು ಸಾಧ್ಯವಾದಷ್ಟು ಬೇಗ ಭಾರತಕ್ಕೆ ಹೋಗಿ, ಅವರ ಕಾಲ ಮೇಲೆ ಬಿದ್ದು ಅವರ ಶುಶ್ರೂಷೆ ಮಾಡಬೇಕೆಂದು ಎಲ್ಲ ಕಾರ್ಯಗಳನೂ ಆತುರದಿಂದ ಮಾಡುತ್ತಿದ್ದೆ. ಆದರೆ ಅದು ನಡೆಯಲಿಲ್ಲ. ಈಗ ಆ ಸಂಸಾರಕ್ಕೆ ಬಡಪಾಯಿ ಯಾದ ನಾನೇ ಮನೆಯ ಯಜಮಾನನಾಗಿ ಹೋಗಬೇಕು. ಭಾರತೀಯರ ಒಟ್ಟು ಕುಟುಂಬದ ಆಧಿಪತ್ಯ ಪದ್ಧತಿಯನ್ನು ಅರಿಯದ ನಿಮಗೆ, ಇದರ ಪರಿಣಾಮ ಗೊತ್ತಾ ಗದು. ಹೇಗೂ ಭಾರತಕ್ಕೆ ಹೋಗಲು ನನ್ನ ಆಸೆ, ಎಂದಿಗಿಂತ ಈಗ ಚುರುಕಾಗಿದೆ. ಆದರೂ ಯಾರಿಗೆ ಗೊತ್ತು? ನನ ಈ ಆಶೆ ಎಂದಿಗಾದರೂ ಪೂರ್ಣವಾಗುತ್ತದೆಯೇ ಎಂದು ನನಗೆ ಸಂಶಯ. ಹೇಗಾದರೂ ನಾನು ಯಾತ್ರೆಗೆ ಸಿದ್ಧಮಾಡಿಕೊಂಡು, ಶಾಂತ ನಾಗಿ ಸರ್ವಶಕ್ತನಾದ ದೇವರ ಕೈಯಲ್ಲಿ ಮುಂದಿನದನ್ನು ಬಿಡಬೇಕು. ಈ ಹೊಡೆತಗಳು ಸಾವಿನ ವಿಷಯದ ನಿರ್ಭೀತಿಯನ್ನು ನನ್ನಲ್ಲಿ ಇನ್ನೂ ಹೆಚ್ಚು ತೀವ್ರಗೊಳಿಸುತ್ತಿವೆ. ಈ ವಿಷಯ ನನ್ನನ್ನು ಯಾಕೆ ವಿಚಲಿತಗೊಳಿಸಬೇಕು? ಈ ದುಃಖದಲ್ಲಿಯೇ ಒಂದು ಸ್ವಾರ್ಥತೆಯ ಸ್ಪರ್ಶವಿದೆ. ನಮ್ಮಣ್ಣ ತೀರಿಕೊಂಡ. ನಾನೂ ಸಹ, ಮರಣವು ಜೀವನದ ಅತ್ಯುಚ್ಚ ಸ್ವಾಗತ ಸತ್ವ ಪರೀಕ್ಷೆಯ ಕಾಲ ಎಂದು ಅರಿತು ಅದನ್ನು ಸ್ವಾಗತಿಸಲು ಸಿದ್ಧನಾದರೆ, ಮರಣವು ದುಃಖ ಪ್ರಸಂಗವಲ್ಲ. ನಮ್ಮ ಮರಣಕ್ಕೆ ನಾವು ಅತಿಯಾಗಿ ಹೆದರುವುದರಿಂದ ಇತರರ ಮರಣಕ್ಕಾಗಿಯೂ ಅಳುತ್ತೇವೆ. ದೇಹವು ನಾಶವಾಗ ತಕ್ಕುದ್ದು; ಆತ್ಮ ಅವಿನಾಶಿ ಎಂದು ತಿಳಿದ ನಾನು ದೇಹವೂ ಆತ್ಮನೂ ಬೇರೆಯಾದ ಮಾತ್ರಕ್ಕೆ ಹೇಗೆ ದುಃಖಿತನಾಗಲಿ? ನಿಜವಾದ ನಂಬಿಕೆ ಮತ್ತು ದುಃಖವನ್ನು ಸಂತೈಸುವ ತತ್ವಕ್ಕೆ ಸೇರಿದುದು, ಈ ಮನೋಧರ್ಮ. ಇದರಲ್ಲಿ ನಂಬಿಕೆಯಿರುವವರು ದೇಹವನ್ನು ಅತಿಯಾಗಿ ಮುದ್ದಿಸಬಾರದು. ಅದನ್ನು ಆಳಬೇಕು. ಆತನು ತನ್ನ ಆವಶ್ಯಕತೆಗಳನ್ನು ಒಳಗಿರುವವನ ಸೇವೆಗೆ ಅನುಕೂಲವಾಗುವಂತೆ ರೂಪಿಸಬೇಕು. ದೇಹವು ತನ್ನ ಯಜ ಮಾನನಾಗಲು ಬಿಡಬಾರದು. ಇತರರ ಮರಣಕ್ಕಾಗಿ ಸಂತಾಪಿಸದಿರುವುದು ಸದಾ ದುಃಖಿಯ ನಿಲುವನ್ನು ಅಂಗೀಕರಿಸಿದಂತೆ. ದೇಹಕ್ಕೂ ಆತ್ಮಕ್ಕೂ ಇರುವ ಈ ಸಂಬಂಧವೇ ದುಃಖಕರವಾದುದು.

"ಈಗ ನನ್ನನ್ನು ಆಳುತ್ತಿರುವುದು ಈ ಆಲೋಚನೆಗಳು. ಈಗ ಇನ್ನೊಂದು ಕಾಗದವನ್ನು ಬರೆಯುತ್ತೇನೆ. ಈ ಕಾಗದ, ತನ್ನನ್ನು ತಾನೇ ಬರೆದುಕೊಂಡಿದೆ."

ಗಾಂಧೀಜಿಗೆ, ಮತ್ತೊಂದು ಆಘಾತ ಕಾದಿತ್ತು. ಫೀನಿಕ್ಸ್‌ನಲ್ಲಿ ಇಬ್ಬರು ವಿದ್ಯಾರ್ಥಿ

ಗಳು, ಇಪ್ಪತ್ತು ವರ್ಷದ ಒಬ್ಬ ತರುಣಿಯ ಮೇಲೆ ದುರಾಚಾರವೆಸಗಿದ್ದರು. ಈ ಸುದ್ದಿ ತಿಳಿದಾಗ ಗಾಂಧಿ, ಕಾಲೆನ್‌ಬಾಕರ ಜೊತೆಯಲ್ಲಿ, ಜೊಹಾನ್ಸ್ ಬರ್ಗ್‌ನಿಂದ ಫೀನಿಕ್ಸ್‌ಗೆ ಧಾವಿಸಿದರು. ತಪ್ಪಿತಸ್ಥರು ತಮ್ಮ ಅಧೋಗತಿಯ ಆಳವನ್ನೂ, ಮತ್ತು ತಮಗೆ (ಗಾಂಧೀಜಿಗೆ) ಉಂಟಾಗಿದ್ದ ದುಃಖವನ್ನೂ ಅರಿಯಲು ಒಂದೇ ಮಾರ್ಗ ತಾವು ಏನಾದರೂ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಎಂದು ಗಾಂಧೀಜಿ ಭಾವಿಸಿದರು. ಆದುದರಿಂದ ಗಾಂಧೀಜಿ ತಮ್ಮ ಮೇಲೆ ಏಳುದಿನಗಳ ಉಪವಾಸವನ್ನೂ ಮತ್ತು ನಾಲ್ಕೂವರೆ ತಿಂಗಳ ಕಾಲ ಒಂದೇ ಊಟದ ಪ್ರಾಯಶ್ಚಿತ್ತವನ್ನೂ ವಿಧಿಸಿಕೊಂಡರು. "ಇದು ಬೇಡ" ಎಂದು ಕಾಲೆನ್‌ಬಾಕ್ ಎಷ್ಟೇ ಹೇಳಿದರೂ ಅದು ಫಲಕಾರಿಯಾಗಲಿಲ್ಲ.

ಹುಡುಗಿಯೂ ತನ್ನ ಒಡವೆಗಳನ್ನೆಲ್ಲ ಬಿಟ್ಟು ತಾನೂ ಗಾಂಧೀಜಿಯೊಂದಿಗೆ ಉಪವಾಸ ಮಾಡಿದಳು. ದುಃಖಿತರ ಉಡುಪನ್ನು ತೊಟ್ಟಳು. ಅಪರಾಧ ಮತ್ತು ತಪ್ಪಿನ ಗುರುತಿಗಾಗಿ ತನ್ನ ತಲೆಗೂದಲನ್ನು ಮೊಟಕು ಮಾಡಿಕೊಂಡಳು.

ಅದಾದ ಸ್ವಲ್ಪ ಕಾಲದ ನಂತರ, ಅಂತಹುದೇ ಮತ್ತೊಂದು ಸಂಗತಿ, ನಡೆಯಿತು. ಅದರಲ್ಲಿ ಗಾಂಧೀಜಿಯ ಮಗ ಸೇರಿದ್ದನು. ಹದಿನಾಲ್ಕು ದಿನಗಳ ಉಪವಾಸವನ್ನು ಕಡ್ಡಾಯವಾಗಿ ಗಾಂಧಿ ತಮ್ಮ ಮೇಲೆ ವಿಧಿಸಿಕೊಂಡರು.

ಈ ಉಪವಾಸಗಳ ಪರಿಣಾಮವಾಗಿ ಗಾಂಧೀಜಿಯ ಆರೋಗ್ಯ ಬಹಳ ಕೆಟ್ಟಿತು. ಆದರೆ ಅವರ ಸಾರ್ವಜನಿಕ ಕಾರ್ಯಗಳು ಮೊದಲಿನಂತೆ ಪೂರ್ಣಭರದಿಂದ ನಡೆಯುತ್ತಿದ್ದವು. ಸತ್ಯಾಗ್ರಹದ ಅಂತ್ಯದ ನಂತರ, ಲಂಡನ್ನಿನಲ್ಲಿ ಕಾಹಿಲೆ ಮಲಗಿದ್ದ ಗೋಖಲೆ, ಗಾಂಧೀಜಿಗೆ ಲಂಡನ್ ಮಾರ್ಗವಾಗಿ ಭಾರತಕ್ಕೆ ಹಿಂದಿರುಗಬೇಕೆಂದು ತಿಳಿಸಿದ್ದರು.

ತನ್ನ ಉದ್ದಿಷ್ಟ ಕಾರ್ಯ, ದಕ್ಷಿಣ ಆಫ್ರಿಕದಲ್ಲಿ ಮುಗಿಯಿತೆಂದು ಭಾವಿಸಿ ಗಾಂಧಿ, ತನ್ನ ಸಹ ಕೆಲಸಗಾರರಿಂದ ಬೀಳ್ಕೊಡಲು ನಿರ್ಣಯಿಸಿದರು. ಬೀಳ್ಕೊಡುಗೆಯ ಸಮಾರಂಭಗಳು–ಭೋಜನಕೂಟಗಳು ಸಭೆಗಳು ಸನ್ಮಾನ ನಿವೇದನ ಪತ್ರಿಕೆಗಳು ಇವುಗಳಲ್ಲಿ ಹದಿನೈದು ದಿನ ಕಳೆಯಿತು. ದಕ್ಷಿಣ ಆಫ್ರಿಕದ ವೃತ್ತಪತ್ರಿಕೆಗಳೂ ಸಹ, ಅವರಿಗೆ ನಿಸ್ಸಂಕೋಚವಾದ ಪ್ರಶಂಸೆಗಳನ್ನು ಪ್ರಕಟಿಸಿದವು. ಆಫ್ರಿಕದ ಅನೇಕ ಮುಖಂಡರೂ ಸಂತೋಷ ಸಮಾರಂಭಗಳಲ್ಲಿ ಸೇರಿದರು. ಗಾಂಧೀಜಿ ಹೊರಡಬೇಕಾದ ದಿನ (ಜುಲೈ ೧೮ ರಂದು) ಅವರನ್ನೂ ಮತ್ತು ಕಸ್ತೂರಿ ಬಾರನ್ನು ಡರ್ಬಾನ್ ಟೌನ್ ಹಾಲಿನಲ್ಲಿ ಸತ್ಕರಿಸಿದರು. ಸಭೆಗೆ ಮೇಯರ್ ಅಧ್ಯಕ್ಷರಾಗಿದ್ದರು. ನೇಟಾಲಿನ ಬಿಷಪ್, ಜನರಲ್ ಬೋತಾ ಮತ್ತು ಜನರಲ್ ಸ್ಮಟ್ಸರಿಂದ ಅಭಿನಂದನಾ ಸಂದೇಶಗಳು ಬಂದವು.ಈ ಎಲ್ಲ ಆದರಣೆಯಿಂದ ಗಾಂಧೀಜಿಯ ಹೃದಯ ತುಂಬಿಹೋಯಿತು. ಅವರು ಭಾವಪೂರ್ಣರಾಗಿ ಯೂರೋಪಿಯನ್ನರು ತಮಗೆ ಕೊಟ್ಟ ಸಹಾಯವನ್ನುಸ್ಮರಿಸಿ. ದಕ್ಷಿಣ ಆಫ್ರಿಕದ ಪವಿತ್ರ ಸ್ಮರಣೆಗಳನ್ನು ತಾವು ಎಂದಿಗೂ ಇಟ್ಟುಕೊಳ್ಳುವುದಾಗಿ ಹೇಳಿದರು.

ದಕ್ಷಿಣ ಆಫ್ರಿಕದಲ್ಲಿ ಉಂಟಾದ ಜಯಕ್ಕೆ ತಾವು ಕೀರ್ತಿಯನ್ನು ತೆಗೆದುಕೊಳ್ಳಲು ಗಾಂಧೀಜಿಗೆ ಒಪ್ಪಿಗೆಯಿರಲಿಲ್ಲ. "ನಾನೇ ಪ್ರಶಂಸೆಗೆ ಅರ್ಹನಾದರೆ, ಯುದ್ಧದಲ್ಲಿ

ಅಕೃತ್ರಿಮ ಭಕ್ತಿಯಿಂದ ಕೀರ್ತಿಯ ಯೋಚನೆಯೇ ಇಲ್ಲದೆ ಸೇರಿದವರು ಇನ್ನೆಷ್ಟು ಅರ್ಹರಾಗಿರಬೇಕು?" ಅನಂತರ ಅವರು ಹರಭತ್‌ಸಿಂಗ್ ನಾರಾಯಣಸ್ವಾಮಿ ನಾಗಪ್ಪ ವಲಿಯಮ್ಮ ಇವರ ವಿಷಯ ಹೇಳಿದರು.

ಗಾಂಧೀ ಹೀಗೆ ಹೇಳಿದರು "ಭಾರತಕ್ಕೆ ನಾನ ಪ್ರಯಾಣ ಮಾಡುವ ಕಾರಣಗಳ ಪೈಕಿ ಒಂದು "ಸತ್ಯಾಗ್ರಹಿಯಾಗಿ ನನ್ನ ದೋಷಗಳನ್ನು" ಇನ್ನೂ ಹೆಚ್ಚಾಗಿ ಅರಿತು–ಈಗಾಗಲೇ ಸ್ವಲ್ಪ ಭಾಗ ಅರಿತಿದ್ದೇನೆ–ನನ್ನನ್ನು ನಿರ್ದೋಷನನ್ನಾಗಿ ಮಾಡಿಕೊಳ್ಳುವುದಕ್ಕಾಗಿ. ಏಕೆಂದರೆ ಭಾರತದಲ್ಲಿ ಪರಿಪೂರ್ಣತೆಯ ಸಮೀಪಕ್ಕೆ ಮುಟ್ಟಲು ಸಾಧ್ಯವೆಂದು ನಾನು ನಂಬುತ್ತೇನೆ".

ಮುಂದೆ ಜನರಲ್ ಸ್ಮಟ್ಸರು ಗಾಂಧೀಜಿಯ ಎಪ್ಪತ್ತನೆ ಜನ್ಮೋತ್ಸವದಂದು ಆ ಘಟನೆಗಳಿಂದ ತುಂಬಿದ ವರ್ಷಗಳ ಸ್ಮರಣೆ ಮಾಡುತ್ತ ಹೀಗೆ ಹೇಳಿದರು:

"ಆಗಲೇ ಅವರ ಮೇಲೆ ನನಗೆ ಅತ್ಯಂತ ಗೌರವವಿದ್ದರೂ ಅಂಥವರ ಎದುರಾಳಿಯಾಗಬೇಕಾದುದು ನನ್ನ ಅದೃಷ್ಟವಾಗಿತ್ತು. ಆ ಕಾಲದಲ್ಲಿ ಅವರ ಚಟುವಟಿಕೆಗಳು ನನಗೆ ಬಹಳ ಕಷ್ಟವನ್ನು ಕೊಟ್ಟವು. ಅವರ ಮಟ್ಟಿಗೆ ಕೆಲಸಗಳೆಲ್ಲ ಯೋಜನೆಗೆ ಅನುಸಾರವಾಗಿ ನಡೆಯುತ್ತಿದ್ದವು. ಆದರೆ ನನಗೆ–ಶಿಸ್ತು ಕಾನೂನಿನ ಹೊಣೆಗಾರನಾದ ನನಗೆ—ಬಹಳ ಕಷ್ಟದ ಪರಿಸ್ಥಿತಿಯುಂಟಾಗಿತ್ತು. ಸಾರ್ವಜನಿಕರ ಹೆಚ್ಚು ಬೆಂಬಲವಿಲ್ಲದ ಕಾನೂನನ್ನು ಜಾರಿ ಮಾಡುವ ಜಿಗುಪ್ಸೆ ಮತ್ತು ಕೊನೆಯಲ್ಲಿ ಆ ಕಾನೂನನ್ನು ಹಿಂದೆಗೆದುಕೊಳ್ಳುವ ಮುಖಭಂಗ ಇವು ನನಗೆ; ಅದು ಅವರಿಗೆ ಜಯಶಾಲಿಯಾದ ಹೋರಾಟ. ವೈಯಕ್ತಿಕ ಬಾಂಧವ್ಯಕ್ಕೂ ಕಡಿಮೆ ಇರಲಿಲ್ಲ. ಸೆರೆಮನೆಯಲ್ಲಿ ಅವರು ನನಗಾಗಿ ಒಂದು ಜೊತೆ ಪಾದರಕ್ಷೆಗಳನ್ನು ಮಾಡಿ, ಬಿಡುಗಡೆಯಾದ ಮೇಲೆ ಒಪ್ಪಿಸಿದರು. ಅಂದಿನಿಂದ ಇಂದಿನ ವರೆಗೆ ನಾನು ಆ ಪಾದರಕ್ಷೆಯನ್ನು, ಅಂತಹ ಮಹಾತ್ಮರ ಪಾದರಕ್ಷೆಯಲ್ಲಿ ನಿಲ್ಲಲು ನನಗೆ ಯೋಗ್ಯತೆಯಿಲ್ಲವೆಂದು ನಾನು ಭಾವಿಸಿದರೂ, ಅನೇಕ ಬೇಸಿಗೆಗಳಲ್ಲಿ ಧರಿಸಿದ್ದೇನೆ.

ಗಿಲ್ಬರ್ಟ್ ಮರ್ರೆಯವರು ೧೯೧೪ರಲ್ಲಿ ಗಾಂಧೀಜಿಯ ಮೇಲೆ ಹಿಬ್ಬರ್ಟ್ ಜರ್ನಲ್‌ನಲ್ಲಿ ಹೀಗೆ ಹೇಳಿದರು.

"ಅಧಿಕಾರದಲ್ಲಿರುವವರು, ಇಂದ್ರಿಯ ಸುಖಗಳಿಗೂ ಐಶ್ವರ್ಯಕ್ಕೂ, ಸೌಖ್ಯಕ್ಕೂ ಹೊಗಳಿಕೆ ಬಡ್ತಿಗಳಿಗೂ ಲಕ್ಷ್ಯ ಮಾಡದೆ, ತನಗೆ ಯಾವುದು ಸರಿಯೆಂದು ತೋರುತ್ತದೋ ಅದನ್ನು ಮಾಡಲು ದೃಢಸಂಕಲ್ಪನಾದ ಮನುಷ್ಯನ ವಿಷಯದಲ್ಲಿ ವ್ಯವಹರಿಸುವಾಗ ಬಹಳ ಎಚ್ಚರಿಕೆಯಿಂದಿರಬೇಕು. ಅವನು ಅಪಾಯದ ಮನುಷ್ಯ ಮತ್ತು ಅಸುಖಿಯಾದ ಶತ್ರು. ಏಕೆಂದರೆ ನೀವು ಯಾವಾಗಬೇಕಾದರೂ ಜಯಿಸಬಲ್ಲ ಅವನ ದೇಹ, ಅವನ ಆತ್ಮದ ಮೇಲೆ ನಿಮಗೇನೂ ಅಧಿಕಾರ ಕೊಡುವುದಿಲ್ಲ"

ಪ್ರಪಂಚ ಯುದ್ಧ

೧೯೧೪

೧೯೧೪–ಜುಲೈ ೧೪ರಂದು ಕಸ್ತೂರಿಬಾ ಮತ್ತು ಕಲೆನ್‌ಬಾಕರೊಡಗೂಡಿ, ಗಾಂಧಿ ಇಂಗ್ಲೆಂಡಿಗೆ, ಮೂರನೆಯ ತರಗತಿ ಪ್ರಯಾಣಿಕರಾಗಿ ಹೊರಟರು. ಹಡಗಿನ ಅಧಿಕಾರಿಗಳು ಹಣ್ಣುಗಳು, ನೆಲಗಡಲೆ ಮುಂತಾದ ಸಾಮಗ್ರಿಗಳೂ ಸೇರಿದಂತೆ ಅನೇಕ ಸೌಕರ್ಯಗಳನ್ನು ಒದಗಿಸಿದ್ದುದರಿಂದ ಪ್ರಯಾಣ ಸುಖಕರವಾಗಿತ್ತು.

ಒಂದ ದಿನ ಗಾಂಧಿ, ಕಾಲೆನ್‌ಬಾಕರನ್ನು ಅವರ ಏಳು ಪೌಂಡು ಬೆಲೆಯ ಬೈನಾಕುಲರನ್ನು (ದೂರದರ್ಶಕ) ಸಮುದ್ರಕ್ಕೆ ಎಸೆಯುವಂತೆ ಪ್ರೇರಿಸಿ ಒಪ್ಪಿಸಿದರು. ಜರ್ಮನ್ ಸ್ನೇಹಿತನು ಅಷ್ಟೊಂದು ಮೆಚ್ಚಿ, ಬೆಲೆಕೊಟ್ಟಿದ್ದ ವಸ್ತುಸಂಗ್ರಹಣೆ ಅವರು ಮುಟ್ಟಬೇಕೆಂದಿದ್ದ ಸರಳ ಜೀವನಕ್ಕೆ ಅನುಗುಣವಾಗಿರಲಿಲ್ಲವೆಂಬುದು ಗಾಂಧಿಜಿಯ ಅಭಿಪ್ರಾಯವಾಗಿತ್ತು.

ಗಾಂಧೀಜಿ, ಆಗ ತಾನೇ ಮುಗಿಸಿದ್ದ ತಮ್ಮ ಉಪವಾಸದನಂತರ ಸ್ವಲ್ಪ ವಿಶ್ರಾಂತಿ ಯನ್ನು ಬಯಸಿದ್ದರು. ಅವರು ಸ್ವಲ್ಪ ವ್ಯಾಯಾಮಕ್ಕಾಗಿ, ಡೆಕ್‌ನ (ಹಡಗಿನ ಅಟ್ಟ) ಮೇಲೆ ತಿರುಗಾಡುತ್ತಿದ್ದರು. ಆದರೆ ಅದೂ ಅವರಿಗೆ ಆಯಾಸವಾಗುತ್ತಿದ್ದಿತು. ಯುದ್ಧ ಸನ್ನಿಹಿತವಾಗುತ್ತಿದೆಯೆಂದು ಮಡಿರಿಯಾದಲ್ಲಿರುವಾಗ ಅವರಿಗೆ ತಿಳಿಯಿತು. ಆಗಸ್ಟ್ ೪ರಂದು–ಅವರು ಲಂಡನ್ ತಲಪುವುದಕ್ಕೆ ಎರಡು ದಿನ ಮುಂಚಿತವಾಗಿ–ಯುದ್ಧ ಪ್ರಾರಂಭವಾಯಿತು.

ಆರೋಗ್ಯದ ನಿಮಿತ್ತವಾಗಿ ಪ್ಯಾರಿಸ್ಸಿಗೆಹೋಗಿದ್ದ ಗೋಖಲೆ, ಅಲ್ಲಿ ಸಿಕ್ಕು ಹಾಕಿ ಕೊಂಡಿರುವರೆಂಬುದು ಗಾಂಧೀಜಿ ಲಂಡನ್ನಿಗೆ ಹೋದಮೇಲೆ, ತಿಳಿಯಿತು. ಪ್ಯಾರಿಸಿಗೂ ಲಂಡನ್ನಿಗೂ ನಡುವೆ, ಸುದ್ದಿ ವಾಹಕಗಳೆಲ್ಲ ನಿಂತು ಹೋಗಿದ್ದುದರಿಂದ, ಗೋಖಲೆ ಯಾವಾಗ ಹಿಂದಿರುಗುವರೆಂಬುದು ಸ್ಪಷ್ಟವಾಗಿರಲಿಲ್ಲ. ಈಗ ಅವರು, ಗೋಖಲೆ ಯವರನ್ನು ನೋಡಿದ ಹೊರತು ಭಾರತಕ್ಕೆ ಹಿಂದಿರುಗುವುದಿಲ್ಲವೆಂದೂ, ಈ ಮಧ್ಯೆ ಯುದ್ಧದ ಈ ಕಷ್ಟಕಾಲದಲ್ಲಿ ಬ್ರಿಟಿಷರಿಗೆ ಸಹಾಯ ಮಾಡುವ ಮಾರ್ಗವಾವುದನ್ನಾದರೂ ಕಂಡುಹಿಡಿಯಬೇಕೆಂದೂ ನಿಶ್ಚಯಿಸಿದರು.

ಇಂಡಿಯನ್ ಕೌನ್ಸಿಲ್ಲಿನ ಸೂಚಿತ ಸುಧಾರಣೆಯ ಸಂಬಂಧವಲ್ಲಿ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಒಂದು ನಿಯೋಗ—ಭೂಪೇಂದ್ರನಾಥ ಬಸು, ಜಿನ್ನಾ. ಲಜಪತ್ ರಾಯ್ ಮತ್ತು ಇತರ ಮೂವರನ್ನೊಳಗೊಂಡು– ಆಗ ಲಂಡನ್ನಿನಲ್ಲಿತ್ತು. ಯುದ್ಧ ಪ್ರಾರಂಭವಾದ ಕೂಡಲೆ. ಅವರೂ ಇತರ ಪ್ರಮುಖ ಭಾರತ ಮುಖಂಡರೂ.

ಭಾರತದ ಸೆಕ್ರಟರಿ ಆಫ್ ಸ್ಟೇಟ್ ಅವರಿಗೆ ಒಂದು ಪತ್ರವನ್ನು ಬರೆದು, ಅದನ್ನು ಬ್ರಿಟಿಷ್ ರಾಜರಿಗೆ ಅರ್ಪಿಸಬೇಕೆಂದು ಕಳುಹಿಸಿದರು. "ಹಿಂದಿನ ಸಂದರ್ಭಗಳಲ್ಲಿ, ಬ್ರಿಟಿಷ್ ಸೈನ್ಯ, ಸಾಮ್ರಾಜ್ಯದ ಹಿತಾಸಕ್ತಿಗಳನ್ನು ರಕ್ಷಿಸುವಾಗ ಅದಕ್ಕೆ ಮಾಡಿದಂತೆ ಈಗಲೂ ಸಹ ಭಾರತದ ಜನತೆಯೂ ದೇಶೀಯ ರಾಜರೂ ಸಂತೋಷದಿಂದ ತಮ್ಮ ಶಕ್ತಿ ಗನುಸಾರವಾಗಿ ಸಹಕರಿಸುವರೆಂಬುದರಲ್ಲಿ ನಮಗೆ ಸಂದೇಹವಿಲ್ಲ" ಎಂದು ಬರೆದರು.

ಆಗಸ್ಟ್ ೮ರಲ್ಲಿ ಸೆಸಿಲ್ ಹೋಟೇಲಿನಲ್ಲಿ ಗಾಂಧೀಜಿಯ ಬ್ರಿಟಿಷ್ ಮತ್ತು ಇಂಡಿಯನ್ ಮಿತ್ರರು ಅವರಿಗೆ ಒಂದು ಸತ್ಕಾರವನ್ನು ಕೊಟ್ಟರು. ಡಾಕ್ಟರ್ ಆನಂದ ಕುಮಾರಸ್ವಾಮಿ, ಜಿನ್ನಾ, ಶ್ರೀಮತಿ ಸರೋಜಿನಿ ನಾಯಿಡು, ದಕ್ಷಿಣ ಆಫ್ರಿಕದ ಹೋರಾಟದ ಧೀರನಿಗೆ ಗೌರವಗಳನ್ನು ಅರ್ಪಿಸಿದರು. ಅನಿವಾರ್ಯವಾಗಿ ಬರಲಾಗದಿದ್ದವರಿಂದ, ವಿಷಾದ ವ್ಯಕ್ತಪಡಿಸಿ ಪತ್ರಗಳು ಬಂದಿದ್ದವು. ಪ್ರಧಾನಮಂತ್ರಿ, ಭಾರತದ ಸೆಕ್ರಟರಿ ಆಫ್ ಸ್ಟೇಟ್, ಗ್ಲಾಡಸ್ಟನ್, ಕರ್ಜನ್, ಆಂಪಿಹಿಲ್, ಹಾರಿಸ್ ಕೇರ್ ಹಾರ್ಡಿ ರಾಮಸೆ ಮಾಕ್ಡೊನಾಲ್ಡ್ ಮತ್ತು ಗೋಖಲೆಯವರಿಂದ ಬಂದಿದ್ದವು. ಗಾಂಧೀಜಿ ತನ್ನ ಪ್ರತ್ಯುತ್ತರದಲ್ಲಿ ಎಲ್ಲರನ್ನೂ ವಂದಿಸಿ, ಮುಂಬರುವ ಯುದ್ಧದ ವಿಷಯವನ್ನು ಪ್ರಸ್ತಾಪಿಸಿ ತಮ್ಮ ಭಾರತೀಯ ಮಿತ್ರರು ಸಾಮ್ರಾಜ್ಯದ ಉತ್ತಮ ಅರ್ಥದಲ್ಲಿ ಯೋಚಿಸಿ ತಮ್ಮ ಕರ್ತವ್ಯವನ್ನು ಮಾಡುವರೆಂದು ನಂಬುವುದಾಗಿ ಹೇಳಿದರು.

ಶೀಘ್ರವಾಗಿ ಗಾಂಧೀಜಿ, ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು. ಅವರ ಸಲಹೆಯೊಂದಿಗೆ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನ ಭಾರತೀಯ ವಾಸಿಗಳ ಸಭೆ ಕರೆದು, ತಮ್ಮ ಅಭಿಪ್ರಾಯಗಳನ್ನು ಅವರ ಮುಂದೆ ಇಟ್ಟರು. ಭಾರತೀಯರ ಕೇಳಿಕೆಯನ್ನು ಧೈರ್ಯವಾಗಿ ಘೋಷಿಸಲು ಅದೇ ಸರಿಯಾದ ಕಾಲವೆಂದು ಭಾವಿಸಿದವರಿಂದ ಗಾಂಧೀಜಿಯ ಸಲಹೆಗಳಿಗೆ ತೀವ್ರ ವಿರೋಧ ಬಂದಿತು. ಗಾಂಧೀಜಿ "'ಇಂಗ್ಲೆಂಡಿನ ಕಷ್ಟ' ಇಂಡಿಯದ ಲಾಭಕ್ಕೆ ಆಗಬಾರದೆಂದು" ಹೇಳಿದರು.

ಈ ಕೆಳಗಿನ ಕಾಗದ, ಗಾಂಧೀಜಿ ಕಸ್ತೂರಿ ಬಾ ಮತ್ತು ಐವತ್ತು ಭಾರತೀಯರ ರಜುಗಳೊಂದಿಗೆ ಇಂಡಿಯ ಸೆಕ್ರಟರಿ ಆಫ್ ಸ್ಟೇಟ್ ಅವರಿಗೆ ಕಳುಹಿಸಲ್ಪಟ್ಟಿತು.

"ಸಾಮ್ರಾಜ್ಯಕ್ಕೆ ಒದಗಿರುವ ಈ ಸಂದಿಗ್ಧ ಸಮಯದಲ್ಲಿ ಅನೇಕ ಆಂಗ್ಲೇಯರು ತಮ್ಮ ಸಾಮಾನ್ಯ ಕಾರ್ಯಗಳನ್ನೆಲ್ಲ ಬಿಟ್ಟು, ಸಾಮ್ರಾಜ್ಯದ ಕರೆಗೆ ಓಗೊಟ್ಟು ನಿಂದಿರುವಾಗ, ಯೂನೈಟೆಡ್ ಕಿಂಗ್‌ಡಂನಲ್ಲಿ ವಾಸಿಸುತ್ತಿರುವ ಭಾರತೀಯರು–ಸಾಧ್ಯವಾದವರು–ತಮ್ಮನ್ನು ಪೂರ್ಣವಾಗಿ ಬೇಷರತ್ತಾಗಿ ಸರ್ಕಾರಕ್ಕೆ ಅರ್ಪಿಸಿಕೊಳ್ಳುವುದು ಇಷ್ಟವಾದು ದೆಂದು ನಮ್ಮಲ್ಲಿ ಅನೇಕರು ಯೋಚಿಸುತ್ತೇವೆ.

"ಇಂಗ್ಲೆಂಡಿನಲ್ಲಿ ವಾಸಿಸುತ್ತಿರುವ ಭಾರತೀಯ ಜನತೆಯ ಮನೋಭಾವವನ್ನು ತಿಳಿಯುವ ಉದ್ದೇಶದಿಂದ ಕೆಳಗೆ ರುಜುಮಾಡಿರುವವರು, ವ್ಯವಸ್ಥಾಪಕರು ಇಟ್ಟು ಕೊಂಡ ೪೮ ಘಂಟೆ ಅವಧಿಯೊಳಗೆ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಎಷ್ಟು ಜನ ಇಂಡಿಯದವರ ಸಂಪರ್ಕ ಸಾಧ್ಯವೋ ಅವರಿಗೆಲ್ಲ ಒಂದು ಸುತ್ತೋಲೆಯನ್ನು ಕಳು

ಹಿಸಿದರು. ಕೆಳಗೆ ರುಜುಮಾಡಿರುವ 'ಯುನೈಟೆಡ್ ಕಿಂಗ್‌ಡಂ'ನ ನಾನಾ ಭಾಗ ದಲ್ಲಿರುವ ಸಾಮ್ರಾಜ್ಯದ ಪ್ರಜೆಗಳ ಅಭಿಪ್ರಾಯದಲ್ಲಿ ಅವರ ಪ್ರತಿಕ್ರಿಯೆ ಉದಾರವೂ ತತ್‌ಕ್ಷಣದ್ದೂ ಆಗಿದೆ.

"ಈ ಪಟ್ಟಿಯಲ್ಲಿ ರುಜು ಹಾಕಿರುವವರ ಪರವಾಗಿ, ನಾವು ಸರ್ಕಾರಕ್ಕೆ ನಮ್ಮ ಸೇವೆಯನ್ನು ಅರ್ಪಿಸಲು ಬೇಡುತ್ತೇವೆ. ರೈಟ್ ಆನರಬಲ್ ಮಾರ್ಕ್ವಿಸ್ ಆಫ್ ಕ್ರೀವ್‌ರು ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ, ಸರಿಯಾದ ಅಧಿಕಾರಿಗಳ ಒಪ್ಪಿಗೆಯನ್ನು ತರಿಸು ವರೆಂದು ನಂಬುವ ಧೈರ್ಯ ಮಾಡುತ್ತೇವೆ. ನಮ್ಮನ್ನು ಪ್ರೇರೇಪಿಸುತ್ತಿರುವ ಮುಖ್ಯ ಭಾವನೆ, ನಾವು ಸಾಮ್ರಾಜ್ಯದ ಪ್ರಜೆಗಳಾಗಿ, ಸೌಕರ್ಯವನ್ನು ಅನುಭವಿಸುತ್ತಿರುವಂತೆ, ಜವಾಬ್ದಾರಿಯನ್ನೂ ಅಂಗೀಕರಿಸುವ ನಮ್ಮ ಭಾಗದ ಹೊಣೆಗಾರಿಕೆ–ಇದರ ಗುರುತಾಗಿ, ನಮ್ಮಿಂದ ಸಾಧ್ಯವಾದ ಅಲ್ಪಸೇವೆಯನ್ನು ಸಲ್ಲಿಸಬೇಕೆಂಬ ಮುಖ್ಯ ಭಾವನೆಯೇ ನಮ್ಮ ಉದ್ದೇಶ. ಈ ಅಂಶವನ್ನು ನಿಮ್ಮ ಗಮನಕ್ಕೆ ಗೌರವಪೂರ್ವಕವಾಗಿ ತರಲಿಚ್ಛಿಸುತ್ತೇವೆ".

ಸ್ವಲ್ಪ ಅನುಮಾನಿಸಿದನಂತರ ಲಾರ್ಡ್ ಕ್ರೀವರು ಪ್ರಾರ್ಥನೆಯನ್ನು ಅಂಗೀ ಕರಿಸಿದರು. ಐವತ್ತು ಸ್ವಯಂಸೇವಕರೊಂದಿಗೆ ಗಾಂಧೀಜಿ ಪ್ರಥಮ ಚಿಕಿತ್ಸೆಯಲ್ಲಿ ಆರುವಾರದ ತರಪೇತಿ ಪಡೆದರು. ಕಸ್ತೂರಿಬಾ ಮತ್ತು ಶ್ರೀಮತಿ ಸರೋಜಿನಿ ನಾಯಿಡು ಸೇರಿದಂತೆ ಸ್ವಯಂಸೇವಕಿಯರು, ಸಿಪಾಯಿಗಳಿಗೆ ಉಡುಪನ್ನು ತಯಾರಿಸಲು ಒಪ್ಪಿಕೊಂಡರು.

ಗಾಂಧೀಜಿ, ಯುದ್ಧದಲ್ಲಿ ಕರ್ತವ್ಯ ಭಾವನೆಯಿಂದ ಭಾಗವಹಿಸಿದರೂ, ಅಲ್ಲಿಯೂ ಅವರು ಒಂದು ಸಣ್ಣ ಸತ್ಯಾಗ್ರಹವನ್ನು ಆಚರಿಸಬೇಕಾಯಿತು. ಇದು, ಎಲ್ಲ ವಿಷಯ ಗಳಲ್ಲಿಯೂ ಸರ್ವಾಧಿಕಾರಿಯಾಗಿ ಭಾರತೀಯರ ಮೇಲೆ ಪ್ರಭುತ್ವ ನಡೆಸಿ, ಈಗಲೂ ಅವರ ಮೇಲೆ ಇಂಗ್ಲಿಷ್ ವಿದ್ಯಾರ್ಥಿಗಳನ್ನು 'ಸೆಕ್ಷನ್ ಲೀಡರ್' (ವಿಭಾಗದ ನಾಯಕ) ಆಗಿ ನಿಯಮಿಸಿದ ಕಮಾಂಡಿಂಗ್ ಆಫೀಸರ ವಿರುದ್ಧವಾಗಿ. ಈ ಕ್ರಮವನ್ನು ಗಾಂಧಿ ತೀವ್ರವಾಗಿ ವಿರೋಧಿಸಿದರು. ಅಧಿಕಾರಿಗಳೊಂದಿಗೆ ಅನೇಕ ಸಭೆಗಳು ಹೇರಳ ಪತ್ರ ವ್ಯವಹಾರಗಳು ಆದನಂತರ ಸಂಧಾನವೇರ್ಪಟ್ಟು ವಿಷಯಗಳು ಸಮರಸವಾದವು.

ಗಾಂಧೀಜಿಯ ಆರೋಗ್ಯ ಉತ್ತಮವಾಗಿರಲಿಲ್ಲ. ಆದರೂ ಅವರು ಡ್ರಿಲ್‌ನಲ್ಲಿ ಭಾಗ ವಹಿಸುತ್ತಿದ್ದರು. ಅನೇಕ ವೇಳೆ ಎರಡು ಮೈಲಿದೂರವಿದ್ದ ಜಾಗಕ್ಕೆ ನಡೆದುಕೊಂಡು ಹೋಗು ತ್ತಿದ್ದರು. ಇದರ ಫಲ ಪ್ಲೂರಸಿ. ಆದರೆ ಆ ಸ್ಥಿತಿಯಲ್ಲಿಯೂ ಅವರು ಕೆಲವು ಭಾರತೀಯ ಸ್ವಯಂ ಸೇವಕರ ದೂರುಗಳನ್ನು ಗಮನಿಸಲು ಒಂದು ವಾರಾಂತ್ಯದ ಶಿಬಿರಕ್ಕೆ ಹೋದರು.

ಗೋಖಲೆ ಅಕ್ಟೋಬರ್ ವೇಳೆಗೆ ಲಂಡನ್ನಿಗೆ ಹಿಂದಿರುಗಿದರು. ಗಾಂಧೀಜಿಯೂ ಕಾಲಿನ್ ಬಾಕರೂ ಅವರನ್ನು ಅನೇಕ ಬಾರಿ ಸಂಧಿಸಿ. ಯುದ್ಧದ ವಿಷಯವನ್ನು ಕುರಿತು ಚರ್ಚಿಸುತ್ತಿದ್ದರು. ಗೋಖಲೆ ಗಾಂಧಿಜಿಯ ಆರೋಗ್ಯದ ವಿಷಯವನ್ನು ಬಹಳವಾಗಿ ಗಮನಿಸಿದರು. ತಮ್ಮ ಮೊಂಡಶಿಷ್ಯ, ಪ್ಲೂರಸಿ ಇದ್ದರೂ ಆಹಾರದ ಪ್ರಯೋಗಗಳನ್ನು

ನಡೆಸುತ್ತಿದ್ದುದನ್ನು ಕೇಳಿ ಅವರಿಗೆ ನೋವಾಯಿತು. ಆಗ ಗಾಂಧೀಜಿಯ ಆಹಾರ ಮುಖ್ಯವಾಗಿ ನೆಲಗಡಲೆ ಬಾಳೆಹಣ್ಣು ಬಾಳೆಕಾಯಿ, ನಿಂಬೆಹಣ್ಣು, ಆಲಿವ್‌ಎಣ್ಣೆ ಟೊಮಾಟೊ ದ್ರಾಕ್ಷಿ ಇವುಗಳೇ ಆಗಿತ್ತು. ಅವರು ಪೂರ್ಣವಾಗಿ ಹಾಲು ಬೇಳೆಗಳು ಕಾಳುಗಳು ಇವನ್ನು ಬಿಟ್ಟಿದ್ದರು. ಡಾಕ್ಟರ್ ಜೀವರಾಜ ಮೆಹ್ತಾ ಅವರಿಗೆ ಚಿಕಿತ್ಸೆ ಮಾಡುತ್ತ, ಹಾಲು ಮತ್ತು ಕಾಳುಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದರೂ ಫಲವಾಗಲಿಲ್ಲ. ವಿಷಯ. ಗೋಖಲೆಯ ಕಿವಿಗೆ ಬಿದ್ದಾಗ ಅವರು ಗಾಂಧೀಜಿಗೆ, ಆರೋಗ್ಯಕ್ಕೆ ವೈದ್ಯರು ಸಲಹೆಮಾಡಿದುದನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಕಾಲೆನ್‌ಬಾಕರೊಂದಿಗೆ ತುಂಬ ಚರ್ಚಿಸಿದನಂತರ ಹಾಲು ಮತ್ತು ಮಾಂಸದ ಹೊರತು, ಉಳಿದ ವಿಷಯದಲ್ಲಿ ವೈದ್ಯರ ಸಲಹೆಯಂತೆ ನಡೆಯುವುದಾಗಿ ಒಪ್ಪಿದರು. ಆದರೆ ಗೋಖಲೆ ಇಂಗ್ಲೆಂಡ್ ಬಿಟ್ಟ ಕೂಡಲೇ ಮತ್ತೆ ನೆಲಗಡಲೆ ಮತ್ತು ಹಣ್ಣು ಗಳಿಗೇ ಹಿಂದಿರುಗಿದರು.

ಪ್ಲೂರಸಿ ಇದ್ದೇ ಇತ್ತು. ಗಾಂಧೀಜಿ ಡಾ. ಆಲಿನ್‌ಸನ್ ಎಂಬುವವರ ಸಲಹೆಯನ್ನು ಕೇಳಿದರು. ಆಲಿನ್‌ಸನ್ನರು ಆಹಾರದ ವ್ಯತ್ಯಾಸದೊಡನೆ ಔಷಧೋಪಚಾರ ಮಾಡು ತ್ತಿದ್ದರು. ಅವರು ಗಾಂಧೀಜಿಯನ್ನು ಬ್ರೌನ್‌ಬ್ರೆಡ್, ಹಸಿ ಬೀಟ್‌ರೂಟ್ ಮೂಲಂಗಿ ಈರುಳ್ಳಿ ಮತ್ತು ಇತರ ಗೆಡ್ಡೆ ಗೆಣಸು ಹಸಿರು ತರಕಾರಿ ಹೊಸಹಣ್ಣು–ಮುಖ್ಯವಾಗಿ ಕಿತ್ತಳೆ–ಇವುಗಳಲ್ಲಿ ಇಟ್ಟರು. ನಿಶ್ಶಕ್ತಿಯ ಕಾರಣದಿಂದ ಗಾಂಧೀಜಿ ಪ್ರಯೋಗವನ್ನು ಹೆಚ್ಚುಕಾಲ ನಡೆಸಲಾರದೆ ಹೋದರು. ಡಾಕ್ಟರು ಅವರಿಗೆ ನೆಲಗಡಲೆ ಮೊಸರು ಆಲೀವ್‌ಎಣ್ಣೆ ಬೇಯಿಸಿದ ತರಕಾರಿ ಮತ್ತು ಅನ್ನ ಇವುಗಳನ್ನು ತಿನ್ನಲು ಅನುಮತಿ ಯಿತ್ತರು.

ಅನೇಕ ದಿನಗಳು ಗಾಂಧೀಜಿ ಹಾಸಿಗೆಯಲ್ಲಿಯೇ ಇರಬೇಕಾಯಿತು. ರಾಬರ್ಟರು (ಭಾರತದ ಅಂಡರ್ ಸೆಕ್ರಟರಿ) ಗಾಂಧೀಜಿಯನ್ನು ಹೋಗಿ ನೋಡಿ ಅವರಿಗೆ ಹೀಗೆ ಸಲಹೆ ಮಾಡಿದರು. "ಭಾರತಕ್ಕೆ ಹೋಗಿ. ನನ್ನ ಮಾತು ಕೇಳಿ. ನಿಮಗೆ ಪೂರ್ಣವಾಗಿ ಗುಣವಾಗಬೇಕಾದರೆ ಅಲ್ಲಿ ಮಾತ್ರ. ಗುಣವಾದನಂತರ ಯುದ್ಧ ಇನ್ನೂ ನಡೆಯುತ್ತಿದ್ದರೆ, ಅಲ್ಲಿಯೇ ನಿಮಗೆ ಸಹಾಯ ಮಾಡಲು ಅನೇಕ ಅವಕಾಶಗಳು ದೊರೆಯುತ್ತವೆ, ಈಗಾಗಲೇ ನೀವು ಮಾಡಿರುವ ಕೆಲಸ ಕಡಿಮೆಯದೆಂದು ನಾನು ಭಾವಿಸುವುದಿಲ್ಲ". ಎಂದರು.

ತನ್ನ ಆರೋಗ್ಯ ಕೆಟ್ಟುದು, ಮತ್ತು ಕಸ್ತೂರಿ ಬಾರವರ ಮರುಕಳಿಸಿದ ರೋಗ ಇವುಗಳ ಕಾರಣದಿಂದ ಗಾಂಧೀಜಿ ರಾಬರ್ಟರ ಸಲಹೆಯನ್ನು ಅಂಗೀಕರಿಸಿ ಭಾರತಕ್ಕೆ ಹಿಂದಿರುಗಲು ಸಿದ್ಧತೆ ಮಾಡತೊಡಗಿದರು.

ಗಾಂಧೀಜಿಯ ಜೊತೆ, ಭಾರತಕ್ಕೆ ಹೋಗುವ ಉದ್ದೇಶದಿಂದ ಇಂಗ್ಲೆಂಡಿಗೆ ಹೋಗಿದ್ದ ಕಾಲೆನ್‌ಬಾಕರಿಗೆ, ಅವರು ಜರ್ಮನರಾದುದರಿಂದ ದುರದೃಷ್ಟವಶಾತ್ ಪಾಸ್‌ಪೋರ್ಟ್ ದೊರಕಲಿಲ್ಲ. ಗಾಂಧೀಜಿಯ ಪ್ರಾರ್ಥನೆಗೆ ಲಾರ್ಡ್ ಹಾರ್ಡಿಂಜ್

ಹೀಗೆ ಕೇಬಲ್ ಮಾಡಿದರು. "ಭಾರತ ಸರ್ಕಾರ ಇಂತಹ ಅಪಾಯವನ್ನು ತೆಗೆದು ಕೊಳ್ಳಲು ಸಿದ್ಧವಿಲ್ಲದುದಕ್ಕೆ ವಿಷಾದಿಸುತ್ತೇನೆ". ಇದು ಗಾಂಧಿಗೂ ಕಾಲೆನ್‌ಬಾಕರಿಗೂ ದೊಡ್ಡ ಆಘಾತವಾಯಿತು. ಮತ್ತೆ ಸಂಧಿಸುವ ಕಾಲವನ್ನು ಅವರು ನಿರೀಕ್ಷಿಸ ತೊಡಗಿದರು. ಇಪ್ಪತ್ತು ವರ್ಷಗಳನಂತರ ಮತ್ತೆ ಭಾರತದಲ್ಲಿ ಇಬ್ಬರೂ ಸಂಧಿಸಿದರು. ಆದರೆ ಒಟ್ಟಿಗೆ ಇರಲು ಸಾಧ್ಯವಾಗಲಿಲ್ಲ. ಹರ್ಮನ್ ಕಲೆನ್‌ಬಾಕ್ ೧೯೪೫ರಲ್ಲಿ ದಕ್ಷಿಣ ಆಫ್ರಿಕದಲ್ಲಿ ತಿರಿಕೊಂಡರು.

ಭಾರತಕ್ಕೆ ಹೊರಡುವುದಕ್ಕೆ ಮುಂಚೆ, ಗಾಂಧಿ ಮತ್ತು ಕಸ್ತೂರಿ ಬಾ ವೆಸ್ಟ್ ಮಿನಿಸ್ಟರ್ ಪ್ಯಾಲೇಸ್‌ನಲ್ಲಿ ಬೀಳ್ಕೊಡುಗೆ ಸಮಾರಂಭದಲ್ಲಿ ಸತ್ಕರಿಸಲ್ಪಟ್ಟರು. ತಮ್ಮ ಪ್ರತ್ಯುತ್ತರದಲ್ಲಿ ಗಾಂಧಿ ಹೀಗೆ ಹೇಳಿದರು: "ನಾನೂ ನನ್ನ ಹೆಂಡತಿಯೂ ನಮ್ಮ ಮಾತೃಭೂಮಿಗೆ ಹಿಂದಿರುಗುತ್ತಿದ್ದೇವೆ. ನಮ್ಮ ಕಾರ್ಯ ಮುಗಿದಿಲ್ಲ. ಆರೋಗ್ಯ ಕೆಟ್ಟಿದೆ. ಆದರೂ ಆಶೆಯ ಭಾಷೆಯನ್ನು ಉಪಯೋಗಿಸ ಬಯಸುತ್ತೇನೆ. ಸೇವೆಗಾಗಿ ನನಗೆ ಒಂದು ಸ್ಥಳವನ್ನು ಕೊಡಬೇಕೆಂದು ನಾನು ಮಿ ರಾಬರ್ಟ್ಸ್‌ರಿಗೆ ಬಹಳ ಹೇಳಿಕೊಂಡೆ. ಆದರೆ ನನ್ನ ಅನಾರೋಗ್ಯ, ಅದಕ್ಕೆ ಅವಕಾಶ ಕೊಡುತ್ತಿಲ್ಲ. ವೈದ್ಯರು ಹಠಗಾರರಾಗಿದ್ದಾರೆ. ನಾನು ಸ್ವಯಂ ಸೇವಕದಳಕ್ಕೆ ರಾಜೀನಾಮೆ ಕೊಟ್ಟಿಲ್ಲ. ಮಾತೃಭೂಮಿಯಲ್ಲಿ ನನ್ನ ಆರೋಗ್ಯ, ದೇಹಶಕ್ತಿ ಹಿಂದಿರುಗಿದರೆ, ಯುದ್ಧ ಇನ್ನೂ ನಡೆಯುತ್ತಲೇ ಇದ್ದರೆ, ನನಗೆ ಕರೆ ಬಂದ ಕೂಡಲೇ ನಾನು ಮತ್ತೆ ಬರುತ್ತೇನೆ. ಆಫ್ರಿಕದಲ್ಲಿ ನನ್ನ ಕೆಲಸ ಕುರಿತು ಹೇಳುವುದಾದರೆ ಅದು ನನ್ನ ಕರ್ತವ್ಯ. ಅದಕ್ಕಾಗಿ ನನಗೇನೂ ಗೌರವ ಸಲ್ಲಬೇಕಾದ್ದಿಲ್ಲ. ಮಾತೃಭೂಮಿಗೆ ಹಿಂದಿರುಗಿದ ಮೇಲೆ ಅಲ್ಲಿಯೂ ನನ್ನ ಕರ್ತವ್ಯವನ್ನು ಮಾಡಬೇಕೆಂಬುದೇ ನನ್ನ ಹಿರಿಯಾಸೆ. ನಾನು ೨೫ ವರ್ಷಗಳಿಂದ ದೇಶಬಿಟ್ಟವನಾಗಿದ್ದೇನೆ. ನನ್ನ ಮಿತ್ರರೂ ಗುರುಗಳೂ ಆದ ಗೋಖಲೆ, "ಭಾರತ ನಿನಗೆ ಪರದೇಶ. ಭಾರತದ ಪ್ರಶ್ನೆಗಳ ಮೇಲೆ ಮಾತನಾಡಬೇಡ". ಎಂದು ಎಚ್ಚರಿಸಿದ್ದಾರೆ. ಆದರೆ ನನ್ನ ಕಲ್ಪನೆಯ ಇಂಡಿಯ, ಜಗತ್ತಿನಲ್ಲಿ ಅದ್ವಿತೀಯ; ಆಧ್ಯಾತ್ಮನಿಧಿಯ ತವರೂರು. ಇಂಡಿಯಕ್ಕೂ ಇಂಗ್ಲೆಂಡಿಗೂ ಇರುವ ಸಂಬಂಧ, ವಿಶಾಲ ಜಗತ್ತಿಗೆ ಆಧ್ಯಾತ್ಮ ಸಮೃದ್ಧಿ ಮತ್ತು ಉತ್ತಮ ಆದರ್ಶದ ಮೂಲವಾಗಲೆಂಬುದು ನನ್ನ ಕನಸು ಮತ್ತು ನಂಬಿಕೆ".

ಡಿಸೆಂಬರ್ ೧೯ರಂದು ಗಾಂಧೀ ಮತ್ತು ಕಸ್ತೂರಿ ಬಾ ಹಡಗಿನಲ್ಲಿ ಎರಡನೆ ದರ್ಜೆ ಪ್ರಯಾಣಿಕರಾಗಿ ಭಾರತಕ್ಕೆ ಹೊರಟರು. ಯಾಕೆಂದರೆ ಪಿ.ಅಂಡ್ ಓ ಹಡಗುಗಳಲ್ಲಿ ಮೂರನೆಯ ದರ್ಜೆ ಇರಲಿಲ್ಲ. ಅಂಟುಪ್ಲಾಸ್ಟರ್‌ನಲ್ಲಿ ಪಕ್ಕೆಲುಬುಗಳಿಗೆ ರಕ್ಷಣೆ ಕಟ್ಟಿಸಿಕೊಂಡು ಗಾಂಧಿಜಿ ಹಡಗನ್ನು ಏರಿದರು.

ಅವರು ಹಿಂದಿರುಗಿದ ಕಾಲದಲ್ಲಿ, ಭಾರತದಲ್ಲಿನ ಸ್ಥಿತಿ ನಿರಾಶಾದಾಯಕವಾಗಿತ್ತು. ದೇಶದಲ್ಲಿ ಒಂದು ವಿಧವಾದ ಮೌನ ನಿಶ್ಶಬ್ದತೆ ಕವಿದಿತ್ತು. ಎಲ್ಲೆಡೆಯಿಂದಲೂ ಒಂದೇ ಪ್ರಶ್ನೆ "ಏನು ಮಾಡೋಣ" ಎಂದು.

ಆರು ವರುಷಗಳ ದೀರ್ಘಕಾಲದ ಗಡೀಪಾರಿನ ನಂತರ, ತಿಲಕರು, ಡೆಲ್ಲಿ ದರ್ಬಾರ್

ಗಾಗಿ ಕಡಿಮೆಯಾದ ಶಿಕ್ಷೆ, ಇತರ ಸಾಧಾರಣವಾದ ಶಿಕ್ಷೆಯ ಮಾಫಿ, ಯಾವುದನ್ನೂ ಪೊಂದದೆ ಕೊನೆಗೆ ರಹಸ್ಯವಾಗಿ ಮಾಂಡಲೆಯಿಂದ ಕರೆ ಕರೆತರಲ್ಪಟ್ಟು, ಪೂನಾದಲ್ಲಿ ತಮ್ಮ ಮನೆಯ ಮುಂದೆ ೧೯೧೪ನೆ ಇಸವಿ ಜೂನ್ ೧೬ನೆ ತಾರೀಖಿನಂದು ಬಿಡಲ್ಪಟ್ಟರು. ಜೂನ್ ೨೧ರಂದು ತಮ್ಮನ್ನು ಸ್ವಾಗತಿಸಲು ಸೇರಿದ ಸಭೆಯಲ್ಲಿ ತಿಲಕರು ಹೀಗೆ ಹೇಳಿದರು. "ಆರು ವರುಷಗಳ ನಂತರ, ನಾನು ಮನೆಗೆ ಹಿಂದಿರುಗಿ ಪ್ರಪಂಚದೊಂದಿಗೆ ಹೊಸದಾಗಿ ನನ್ನ ಸಂಪರ್ಕವನ್ನು ಮತ್ತೆ ಪ್ರಾರಂಭಿಸುವಾಗ ನನ್ನ ಸ್ಥಿತಿ ರಿಪ್‌ವ್ಯಾನ್ ವಿಂಕಲನ ಸ್ಥಿತಿಯಂತಾಗಿದೆ. ನಾನು ಸರ್ಕಾರದಿಂದ ಬಹಳ ಕಠಿಣವಾದ ಏಕಾಂತದಲ್ಲಿ ಇಡಲ್ಪಟ್ಟಿದ್ದೆ. ಅವರು ಜನತೆ ನನ್ನನ್ನು ಮರೆಯಬೇಕು, ಮರೆಯುತ್ತಾರೆ, ಎಂದು ಆಶಿಸಿದಂತೆ ತೋರುತ್ತಿತ್ತು. ಹೇಗೂ ನಾನು ಜನತೆಯನ್ನು ಮರೆತಿಲ್ಲ. ಜನರೂ ನನ್ನನ್ನು ಮರೆತಿಲ್ಲವೆಂಬುದನ್ನು ನೋಡಲು ನನಗೆ ಸಂತೋಷವಾಗುತ್ತದೆ. ನಾನು ಜನರಿಗೆ ಇಷ್ಟು ಆಶ್ವಾಸನೆ ಕೊಡಬಲ್ಲೆ; ಆರು ವರುಷಗಳಷ್ಟು ದೀರ್ಘಕಾಲ ಬೇರೆಯಾಗಿದ್ದುದು, ಅವರಲ್ಲಿ ನನ್ನ ಪ್ರೀತಿಯನ್ನು ಕಡಿಮೆ ಮಾಡಲಾರದಾಯಿತು. ನಾನು ಅವರನ್ನು ಆರುವರುಷಗಳ ಹಿಂದೆ ನನಗೆ ಇದ್ದ ಅದೇ ಶಕ್ತಿಯಿಂದ ಅದೇ ರೀತಿಯಲ್ಲಿ ಸೇವೆಸಲ್ಲಿಸಲು ಸಿದ್ಧನೂ ಇಷ್ಟವುಳ್ಳವನೂ ಆಗಿದ್ದೇನೆ. ಪ್ರಾಯಶಃ ನನ್ನ ಮಾರ್ಗವನ್ನು, ನಾನು ಅಲ್ಪಸ್ವಲ್ಪ ತಿದ್ದಿಕೊಳ್ಳಬೇಕಾಗಬಹುದು".

ಶ್ರೀಮತಿ ಬೆಸೆಂಟರು ಭಾರತಕ್ಕೆ ಹೋಂರೂಲನ್ನು ಪ್ರತಿಪಾದಿಸಲು ಇಂಗ್ಲೆಂಡಿಗೆ ಹೋಗಿದ್ದರು. ಅವರ ಕಾರ್ಯಕ್ಕೆ ಜಯ ದೊರೆಯಲಿಲ್ಲ. ಆಕೆ ಹೋಮ್ ರೂಲಿಗಾಗಿ ಚಳುವಳಿ ನಡೆಸಲು ಭಾರತಕ್ಕೆ ಹಿಂದಿರುಗಿದರು. ಭಾರತದ "ರಾಜಭಕ್ತಿಯ ಬೆಲೆ ಭಾರತ ಸ್ವಾತಂತ್ರ್ಯ" ಎಂಬುದು ಅವರ ಘೋಷಣೆಯಾಯಿತು. ಲಾಲಾ ಲಜಪತರಾಯರು ಮತ್ತು ಜಿನ್ನಾ, ಅವರಿಗೆ ಬೆಂಬಲ ಕೊಟ್ಟರು.

ಯುದ್ಧ ಪ್ರಾರಂಭವಾದಾಗ, ಭಾರತದ ಎಲ್ಲ ಪಕ್ಷಗಳೂ–ಕ್ರಾಂತಿಕಾರರ ಹೊರತು–ಬ್ರಿಟಿಷ್ ಸರ್ಕಾರಕ್ಕೆ ರಾಜಭಕ್ತಿ ಮತ್ತ ಬೆಂಬಲವನ್ನು ಘೋಷಿಸಿದವು. "ಇಂತಹ ವಿಷಮ ಸನ್ನಿವೇಶದಲ್ಲಿ ಪ್ರತಿಯೊಬ್ಬ ಭಾರತೀಯನೂ–ಅವನು ದೊಡ್ಡವನಾಗಿರಲಿ ಸಣ್ಣವನಾಗಿರಲಿ, ಧನಿಕನಾಗಿರಲಿ ಬಡವನಾಗಿರಲಿ–ಬ್ರಿಟಿಷ್ ಸರ್ಕಾರಕ್ಕೆ ತನ್ನ ಶಕ್ತಿಯಿದ್ದಷ್ಟು ಸೇವೆ ಮತ್ತು ಬೆಂಬಲ ಕೊಡುವುದು ಅವನ ಕರ್ತವ್ಯ" ಎಂದು ತಿಲಕರು ಹೇಳಿದರು.

ಶ್ರೀಮತಿ ಬೆಸೆಂಟರು, ಮಂದಗಾಮಿಗಳನ್ನೂ ತೀವ್ರಗಾಮಿಗಳನ್ನೂ ಒಟ್ಟಾಗಿಸಲು ಇದೊಂದು ಅತ್ಯಂತ ಅನುಕೂಲ ಅವಕಾಶವೆಂದು ಯೋಚಿಸಿದರು. ಆದರೂ ಕಾಂಗ್ರೆಸ್‌ಪರಿಷತ್ತಿನಲ್ಲಿ ರಾಜಿ ಮಾಡಿಸಲು ನಡೆಸಿದ ಮಾತುಕಥೆಗಳು ತಾತ್ಕಾಲಿಕವಾಗಿ ವಿಫಲವಾದವು. ಅಖಿಲ ಭಾರತದ ಇಬ್ಬರು ಮಹಾನ್‌ಮುಖಂಡರು. ಗೋಖಲೆ ಮತ್ತು ತಿಲಕರು, ಒಬ್ಬರನ್ನೊಬ್ಬರು ವಿರೋಧಿಸಿದರು. ಮಂದಗಾಮಿಗಳು, ತಿಲಕರು ಕಾಂಗ್ರೆಸನ್ನು ಆಕ್ರಮಿಸಿ ಭಾರತಕ್ಕೆ ಹೊಂರೂಲನ್ನು ಪ್ರತಿಪಾದಿಸುವರೆಂದು ಹೆದರಿದರು.

ತಿಲಕರು ತಮ್ಮ "ಅಗ್ನಿ ಭಕ್ಷಕರೊಂದಿಗೆ" ಕಾಂಗ್ರೆಸ್ ಸೇರುವುದನ್ನು ಸರ್ ಫಿರೋಜಾ ವಿರೋಧಿಸಿದರು.

ಕಾಂಗ್ರೆಸ್ ಮದ್ರಾಸಿನಲ್ಲಿ ಡಿಸೆಂಬರ್ ೧೯೧೪ರಲ್ಲಿ ಸೇರಿತು. ಸಭಾಭವನ ಚಕ್ರವರ್ತಿ ಚಕ್ರವರ್ತಿನಿಯವರ ಭಾವಚಿತ್ರಗಳಿಂದಲೂ ರಾಜವಂಶಲಾಂಛನ ಆಯುಧ ಮುದ್ರೆಗಳಿಂದಲೂ ಅಲಂಕೃತವಾಗಿತ್ತು. ಮದ್ರಾಸ್ ಗವರ್ನರ್ ಲಾರ್ಡ್ ಪೆಂಟ್ಲೆಂಡ್. ಕಾಂಗ್ರೆಸ್ಸಿಗೆ ಭೇಟಿ ಕೊಟ್ಟಾಗ ಅವನನ್ನು ಘೋಷಣೆಗಳಿಂದ ಎದುರುಗೊಂಡರು.

ಕಾಂಗ್ರೆಸ್ಸು ಬ್ರಿಟಿಷ್ ಸಿಂಹಾಸನಕ್ಕೆ ಭಕ್ತಿಯ ನಿರ್ಣಯವನ್ನು ಅಂಗೀಕರಿಸಿತು. ಎಲ್ಲರಿಗೂ ಸಮಾನ ಪೌರಹಕ್ಕು ಜನಾಂಗ ವರ್ಗ ಭೇದಗಳಿಲ್ಲದೆ ಸಾಮ್ರಾಜ್ಯದ ಪೌರಯೋಧರ ಸೇರ್ಪಡೆ ಇವುಗಳನ್ನು ಒತ್ತಿ ಹೇಳಿತು. ಗುಂಡಿನ ಕಾಳಗದಲ್ಲಿ ಭಾರತದ ಯೋಧ ಪಡೆಯ ಪಾತ್ರವನ್ನು ಹೆಮ್ಮೆಯಿಂದ ಹೃತ್ಪೂರ್ವಕವಾಗಿ ಪ್ರಶಂಸಿಸಿತು.

ಶ್ರೀಮತಿ ಬೆಸೆಂಟ್ ಹೀಗೆ ಘೋಷಿಸಿದರು. "ಭಾರತವು ತನ್ನ ಹೆಮ್ಮೆಯ ಧೀರ ಹೆಣ್ಣು ಗಂಡುಗಳ ರಕ್ತವನ್ನು, ಇಷ್ಟು ಸ್ವಾತಂತ್ರ್ಯ ಧೀರ ಮತ್ತು ರಾಜಕೀಯ ಹಕ್ಕುಗಳಿಗೆ ಪ್ರತಿಫಲವೆಂದು ಕೊಸರಾಡುವುದಿಲ್ಲ. ಭಾರತ ಒಂದು ರಾಷ್ಟ್ರವಾಗಿ ಸಾಮ್ರಾಜ್ಯದ ಜನತೆಯಲ್ಲಿ ನ್ಯಾಯಕ್ಕಾಗಿ ಹಕ್ಕು ಕೇಳುತ್ತದೆ. ಯುದ್ಧಕ್ಕೆ ಮುಂಚೆಯೂ ಇದನ್ನು ಕೇಳಿತು; ಯುದ್ಧವಾದ ಮೇಲೆಯೂ ಕೇಳುತ್ತದೆ. ಆದರೆ ಬಹುಮಾನವಾಗಿ ಅಲ್ಲ, ತನ್ನ ಹಕ್ಕುದಾರಿಯಾಗಿ ಕೇಳುತ್ತದೆ. ಈ ವಿಷಯದಲ್ಲಿ ಯಾರೂ ತಪ್ಪು ತಿಳಿಯದಿರಲಿ."

ಕಾಂಗ್ರೆಸ್ಸು, ಗಾಂಧಿ ಮತ್ತು ಅವರ ಅನುಯಾಯಿಗಳನ್ನು ಅವರ ವೀರ ಕಾರ್ಯಗಳಿಗಾಗಿಯೂ, ಭಾರತೀಯರ ಕಷ್ಟ ಪರಿಹಾರಕ್ಕಾಗಿಯೂ. ಮತ್ತು ಭಾರತದ ಆತ್ಮಗೌರವ ರಕ್ಷಣಕ್ಕಾಗಿ, ಅವರು ತೋರಿಸಿದ ಅದ್ವಿತೀಯ ತ್ಯಾಗ ದುಃಖ ಸಹಿಷ್ಣುತೆಯ ಹೋರಾಟಕ್ಕಾಗಿಯೂ ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಿತು.

ಗಾಂಧೀ, ಇನ್ನೂ ಸಮುದ್ರಯಾನದಲ್ಲಿದ್ದುದರಿಂದ ಕಾಂಗ್ರೆಸ್ಸಿನಲ್ಲಿರಲು ಅವರಿಗೆ ಅವಕಾಶ ದೊರಕಲಿಲ್ಲ. ಅವರು ಭಾರತಕ್ಕೆ ಬರುವುದಕ್ಕೆ ಮುಂಚಿತವಾಗಿಯೇ.ಮಗನ್ ಲಾಲರ ನೇತೃತ್ವದಲ್ಲಿ ಫೀನಿಕ್ಸ್‌ನಿಂದ ಹೊರಟಿದ್ದ ತಂಡ. ಭಾರತದಲ್ಲಿ ಬಂದು ಇಳಿದಿತ್ತು. ಮೊದಲಿನ ಲೆಕ್ಕಾಚಾರದಂತೆ ಗಾಂಧಿ ಅವರಿಗಿಂತ ಮುಂಚಿತವಾಗಿ ಭಾರತದಲ್ಲಿರಬೇಕಾಗಿತ್ತು. ಆದರೆ ಇಂಗ್ಲೆಂಡಿನಲ್ಲಿ ಅವರ ಕೆಲಸಗಳಿಂದಾಗಿ ಅವರ ಕಾರ್ಯಕ್ರಮ ತಲೆ ಕೆಳಕಾಗಿತ್ತು. ಅವರನ್ನು ಒಟ್ಟಿಗೆ ಒಂದೆಡೆ ನಿಲ್ಲಿಸಲು ಯೋಗ್ಯವಾದ ಸ್ಥಳಕ್ಕಾಗಿ ಗಾಂಧಿ. ಆಂಡ್ರೂಸರ ಸಹಾಯ ಬಯಸಿದರು. ಅವರು ಮೊದಲು ಕಾಂಗ್ರಿ ಗುರುಕುಲದಲ್ಲಿ ನಿಂತರು. ಸ್ವಾಮಿ ಶ್ರದ್ಧಾನಂದರು ಅವರನ್ನು ಔದಾರ್ಯದಿಂದ ನೋಡಿಕೊಂಡರು. ಅನಂತರ ಅವರನ್ನು ಶಾಂತಿನಿಕೇತನದಲ್ಲಿ ಸೇರಿಸಿದರು. ಅಲ್ಲಿ ಟಾಗೋರರು ಅವರ ಮೇಲೆ ಪ್ರೇಮ ಮತ್ತು ಆತಿಥ್ಯದ ಮಳೆಗರೆದರು. ಗಾಂಧಿಗೆ ಬರೆದ ಪತ್ರದಲ್ಲಿ ಟಾಗೂರ್ ಹೀಗೆ ಹೇಳಿದರು:

"ನಿಮ್ಮ ಫೀನಿಕ್ಸ್ ಬಾಲಕರು, ಭಾರತದಲ್ಲಿರುವಾಗ ವಾಸಿಸಲು ನನ್ನ ಶಾಲೆ ಸರಿಯಾದ ಮತ್ತು ಅರ್ಹವಾದ ಸ್ಥಳವೆಂದು ನೀವು ಯೋಚಿಸಿದುದು, ನನಗೆ ತುಂಬ ಸಂತೋಷವುಂಟು ಮಾಡಿದೆ. ಆ ಪ್ರಿಯಬಾಲಕರನ್ನು ನಾನು ಕಣ್ಣಾರೆ ನೋಡಿದಾಗ ಆ ಸಂತೋಷ ಇನ್ನೂ ಹೆಚ್ಚಾಯಿತು. ಅವರ ಪ್ರಭಾವ, ನಮ್ಮ ಬಾಲಕರಿಗೆ ತುಂಬ ಬೆಲೆಯುಳ್ಳದುವಾಗಿರುವುದೆಂದು ನಾವೆಲ್ಲ ಭಾವಿಸುತ್ತೇವೆ. ಹಾಗೆಯೇ ಅವರೂ ಶಾಂತಿ ನಿಕೇತನದಲ್ಲಿ ತಮ್ಮ ಇರುವಿಕೆ ಸಾರ್ಥಕವಾಗುವಂತೆ ಏನನ್ನಾದರೂ ಕಲಿಯುವರೆಂದು ನಂಬುತ್ತೇನೆ. ನಿಮ್ಮ ಬಾಲಕರು ನಮ್ಮ ಬಾಲಕರಾಗಲು ನೀವು ಒಪ್ಪಿ ಹೀಗೆ ನಮ್ಮಿಬ್ಬರ ಬಾಳಿನ ಸಾಧನೆಯಲ್ಲಿ ಒಂದು ಸಜೀವ ಕೊಂಡಿಯನ್ನು ಸ್ಥಾಪಿಸಿರುವುದಕ್ಕಾಗಿ, ನಾನು ನಿಮ್ಮನ್ನು ವಂದಿಸುತ್ತೇನೆ".

ವೀರನ ಪುನರಾಗಮನ

೧೯೧೫

ಗಾಂಧಿ, ಬೊಂಬಾಯಿನಲ್ಲಿ ೧೯೧೫ ನೆ ಜನವರಿ ೯ ರಂದು ಬಂದಿಳಿದರು. ಭಾರತ ನಾಯಕರು ಹೋಗಿ ಅವರನ್ನು ಹಡಗಿನಲ್ಲಿ ಸಂಧಿಸಿದರು. ಸರ್ಕಾರದ ಅಪ್ಪಣೆಯಂತೆ ಅವರು ಹಡಗಿನಿಂದ ಇಳಿದುದು ಅಪಲೊ ಬಂದರಿನಲ್ಲಿ. ಇದೊಂದು ದೊಡ್ಡ ಗೌರವ; ರಾಜಮನೆತನದವರು ವೈಸರಾಯ್ ಮತ್ತು ಭಾರತದ ಅತ್ಯಂತ ಪ್ರಸಿದ್ಧರಿಗೆ ಮಾತ್ರ ಮೀಸಲಾದುದು. ಅವರನ್ನು ಹಡಗಿನ ಮೇಲೆ, ಒಂದು ನಿಯೋಗ–ಅದರಲ್ಲಿ ನರೋತ್ತಮ್ ಮುರಾರ್ಜಿ, ಜೆ. ಬಿ. ಪೆಟಿಟ್. ಬಿ. ಜಿ. ಹಾರ್ನಿಮನ್ ಮತ್ತು ಇತರರನೇಕರು ಇದ್ದರು–ಸಂಧಿಸಿತು. ನಿಲ್ದಾಣದಲ್ಲಿ ನೂರಾರು ಮಂದಿ, ಅವರನ್ನು ಸ್ವಾಗತಿಸಿದರು. ಅಪಲೊ ಬಂದರಿನಲ್ಲಿ ಸಾರ್ವಜನಿಕ ಸ್ವಾಗತವನ್ನಿತ್ತು, ಅನಂತರ ಗಾಂಧಿ ಮತ್ತು ಕಸ್ತೂರಿ ಬಾರನ್ನು ಮೆರವಣಿಗೆಯಲ್ಲಿಯೂ ಕರೆದುಕೊಂಡು ಹೋಗಬೇಕೆಂದು ಮೊದಲು ಏರ್ಪಾಡಾಗಿತ್ತು. ಆದರೆ ಸರ್ಕಾರ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಸ್ವಾಗತದ ಏರ್ಪಾಡುಗಳನ್ನು ಬದಲಾಯಿಸಬೇಕಾಯಿತು.

ಗಾಂಧಿ ಭಾರತವನ್ನು ಮುಟ್ಟಿದ ಕೂಡಲೇ ಸ್ವದೇಶೀ ಉಡುಪನ್ನು ಅಂಗೀಕರಿಸಿದರು; ಕಾಥಿಯವಾಡದ ಅಂಗಿ ರುಮಾಲು ಮತ್ತು ಧೋತಿ. ಎಲ್ಲವೂ ಭಾರತದ ಮಿಲ್ ಬಟ್ಟೆಯಿಂದ ಮಾಡಿದುವು. ಅವರ ಆಗಮನ ಎಲ್ಲಕಡೆಗೂ ಪ್ರಚಾರವಾಯಿತು ಒಂದು ಪತ್ರಿಕಾ ಸಂದರ್ಶನದಲ್ಲಿ ಅವರು ಹೀಗೆ ಹೇಳಿದರು "ಸದ್ಯಕ್ಕೆ ಮಿ. ಗೋಖಲೆ ಸರಿಯಾಗಿ ಹೇಳಿರುವಂತೆ, ನಾನು ಭಾರತದಿಂದ ಇಷ್ಟೊಂದು ಕಾಲ ಹೊರಗಡೆ ಇದ್ದುದರಿಂದ, ಭಾರತದ ಮುಖ್ಯ ವಿಷಯಗಳನ್ನು ಕುರಿತು ಯಾವ ನಿಶ್ಚಿತ ತೀರ್ಮಾನಕ್ಕೂ ಬರಲು ನನಗೆ ಸಾಧ್ಯವಿಲ್ಲ. ನಾನು ವಿದ್ಯಾರ್ಥಿಯಂತೆ ನೋಟಕನಂತೆ ಇಲ್ಲಿ ಕೆಲವು ಕಾಲ ಕಳೆಯಬೇಕು. ಹಾಗೆ ಮಾಡುವುದಾಗಿ ನಾನು ವಾಗ್ದಾನ ಮಾಡಿದ್ದೇನೆ. ವಾಗ್ದಾನದಂತೆ ನಡೆಯಲು ಬಯಸುತ್ತೇನೆ".

ಗಾಂಧಿ ಸಾಂತಾಕ್ರೂಸ್‌ನಲ್ಲಿ ರವಿಶಂಕರ್ ಜವೇರಿಯವರ ಮನೆಯಲ್ಲಿ ಉಳಿದರು. ಅವರು ಬೊಂಬಾಯಿನ ಒಂದು ಬಡಾವಣೆಯಲ್ಲಿ ವಾಸಿಸುತ್ತಿದ್ದರೂ, ಪತ್ರಿಕಾ ಕರ್ತರು ಅವರನ್ನು ಬಿಡಲೊಲ್ಲರು. "ನಾನು ಭಾರತದಲ್ಲಿ ಇದ್ದುಕೊಂಡು. ಉಳಿದ ನನ್ನ ಕಾಲವನ್ನು ಭಾರತದ ಸೇವೆಯಲ್ಲಿ ಕಳೆಯುವುದು ನನ್ನ ಉದ್ದೇಶ" ಎಂದು ಗಾಂಧಿ ಹೇಳಿದರು. ಬೊಂಬಾಯಿನಲ್ಲಿ ಸ್ವಾಗತಸಭೆಗಳು ಬಹಳವಾಗಿ ಏರ್ಪಟ್ಟುವು. ಅವುಗಳೆಲ್ಲ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಗಾಂಧೀಜಿಗೆ ಅವಕಾಶ ಒದಗಿಸಿದವು. ಅವರಲ್ಲಿ ಯಾವಾಗಲೂ ಏನೋ ಒಂದು ಅಸಾಧಾರಣ ವಿಶೇಷತೆಯಿರುತ್ತಿತ್ತು.

ಜನವರಿ ೧೨ರಂದು ಗಾಂಧಿ ಮತ್ತು ಕಸ್ತೂರಿ ಬಾರನ್ನು ಗೌರವಿಸಲು ಜಹಾಂಗಿರ್ ಪೆಟಿಟ್‌ರ ಮನೆಯಲ್ಲಿ ಒಂದು ದೊಡ್ಡ ಸಭೆ ಸೇರಿತು. ಬೊಂಬಾಯಿನ ನೂರಾರು ನಾಗರಿಕರು ಆಹ್ವಾನವನ್ನು ಅಂಗೀಕರಿಸಿ ಬಂದಿದ್ದರು. ಅದಲ್ಲದೆ ಇನ್ನೂರು ಮಂದಿ, ಜಹಾಂಗಿರ್ ಪೆಟಿಟ್ಟರ ಮನೆಯೊಳಕ್ಕೆ ಹೇಗೋ ನುಗ್ಗಿ ಬಂದಿದ್ದರು. ಆ ಅರಮನೆಯ ಕೋರೈಸುವ ವೈಭವದಲ್ಲಿ, ಕಾಥಿಯವಾಡಾ ಉಡುಪು ಧರಿಸಿದ್ದ ಗಾಂಧಿ, ಅಲ್ಲಿಗೆ ಹೊಂದಿಕೊಳ್ಳದ ವಿಚಿತ್ರ ಪುರುಷರಾಗಿ ತೋರಿದರು. ಸರ್ ಫಿರೋಸ್ ಷಾ, "ಗಾಂಧೀಜಿಯ ಕಾರ್ಯ ಮತ್ತು ಜೀವನ ಕುರಿತು ಸಭಾಸದರಿಗೆ ಏನನ್ನೂ ಹೇಳುವುದು ಅವಶ್ಯಕವಲ್ಲವೆಂದು" ಭಾವಿಸಿರುವುದಾಗಿ ಹೇಳಿದರು. "ಕಳೆದ ಕೆಲವು ವರ್ಷಗಳಿಂದ ದೇಶದಲ್ಲಿ ಗಾಂಧೀಜಿಯ ಮಹತ್ಕಾರ್ಯದ ಕಥೆ ಮೊಳಗಿದೆ. ದಕ್ಷಿಣಆಫ್ರಿಕದಲ್ಲಿ ನಡೆದ ಹೋರಾಟದಲ್ಲಿ ಭಾರತೀಯರ ಮತ್ತು ತಮ್ಮ ಮರ್ಯಾದೆಯನ್ನೂ ಆತ್ಮಗೌರವವನ್ನೂ ಉಳಿಸಿಕೊಳ್ಳುವುದಕ್ಕಾಗಿ ಗಾಂಧೀಜಿಪ್ರಕಟಿಸಿದ ಧೈರ್ಯ ಆತ್ಮಶಕ್ತಿಗಳು ಸರ್ವವಿದಿತವಾಗಿವೆ. ಆದುದರಿಂದ ಅವರಿಗೆಲ್ಲ ಹೆಮ್ಮೆ. ಶ್ರೀಮತಿ ಗಾಂಧಿಯವರಿಂದ ನಮಗೆ ಇನ್ನೂ ಹೆಚ್ಚಿನ ಹೆಮ್ಮೆ ಎಂದು ಹೇಳುತ್ತೇನೆ. ಗಾಂಧಿ, ದಕ್ಷಿಣ ಆಫ್ರಿಕದಲ್ಲಿ ಹೂಡಿದ ಹೋರಾಟದಲ್ಲಿ ಶ್ರೀಮತಿ ಗಾಂಧಿ ತಾನೂ ಗಂಡನೊಂದಿಗೆ ಹೆಗಲುಕೊಟ್ಟು ಅವರ ಕಷ್ಟ ಮತ್ತು ಹಿಂಸಾಸಹಿಷ್ಣುತೆಯಲ್ಲಿ ಭಾಗಿಯಾದುದಕ್ಕಿಂತ ಬೇರೆ ಭಾವಪೂರಿತ ಕರುಣಾಜನಕ ಕಥೆ ಇಲ್ಲ. ಗಾಂಧೀ ಈಗಾಗಲೇ ತಮ್ಮ ಬಾಳಿನ ಉಳಿದ ಕಾಲವನ್ನು ಇಲ್ಲಿ ಭಾರತದ ಸೇವೆಯಲ್ಲಿ ವಿನಿಯೋಗಿಸುವುದಾಗಿ ಹೇಳಿದ್ದಾರೆ. ಅವರು ಅತ್ಯಂತ ಹೆಚ್ಚಾದ ಧೈರ್ಯ ಸ್ಥೈರ್ಯ ವೀರತ್ವವನ್ನೂ ಅಷ್ಟೇ ಹೆಚ್ಚಾದ ರಾಜಭಕ್ತಿಯನ್ನೂ ಒಟ್ಟಿಗೇ ತಮ್ಮ ಬಾಳಿನಲ್ಲಿ ತೋರಿಸಿದ್ದಾರೆ. ಈ ವೇಳೆಯಲ್ಲಿ ಅವರು ದಕ್ಷಿಣ ಆಫ್ರಿಕದಲ್ಲಿ ಮಾಡಿದ ಕಾರ್ಯದಿಂದ, ಅಲ್ಲಿಯ ನಮ್ಮ ಭಾರತೀಯರು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ರಾಜಭಕ್ತಿಯನ್ನು ತೋರಿಸುವುದರಲ್ಲಿ ಇತರರೊಂದಿಗೆ ಸಮಾನವಾಗಿ ನಿಲ್ಲುವ ಪರಿಸ್ಥಿತಿಯುಂಟಾಗುವಂತೆ ಮಾಡಿರುವುದೇನೂ ಕಡಿಮೆವಿಷಯವಲ್ಲ".

ಭಾಷಣಕ್ಕೆ ಪ್ರತ್ಯುತ್ತರ ಕೊಡುತ್ತ ಗಾಂಧಿ, ಹೀಗೆ ಹೇಳಿದರು. "ನನ್ನ ಮಾತೃಭೂಮಿಯಲ್ಲಿ ನಾನು ದಕ್ಷಿಣ ಆಫ್ರಿಕದಲ್ಲಿದ್ದುದಕ್ಕಿಂತ ಹೆಚ್ಚು ಹೊಂದಿಕೊಳ್ಳುವೆನೆಂದು ಯಾವಾಗಲೂ ಯೋಚಿಸುತ್ತಿದ್ದೆ. ಆದರೆ ಬೊಂಬಾಯಿನಲ್ಲಿರುವ ಈ ಮೂರು ದಿನಗಳಲ್ಲಿ ನಾವು (ನನ್ನ ಹೆಂಡತಿಯ ಅಭಿಪ್ರಾಯವೂ ಇದೇ ಎಂದು ನಾನು ಯೋಚಿಸುತ್ತೇನೆ) ಆಫ್ರಿಕದಲ್ಲಿ ಕರಾರು ಬದ್ಧ ಕೂಲಿಗಳ ಜೊತೆ ಹೆಚ್ಚು ಹೆಚ್ಚು ಹೊಂದಿಕೊಂಡಿದ್ದೆವೆಂದು ಭಾವಿಸುತ್ತೇವೆ. ಅವರು ಭಾರತದ ನಿಜವಾದ ಧೀರರು. ಬೊಂಬಾಯಿ ನಗರದಲ್ಲಿ ನಾವು ನಿಜವಾಗಿ ಅಪರಿಚಿತರ ಸಹವಾಸದಲ್ಲಿರುವಂತೆ ಭಾವಿಸುತ್ತೇವೆ".

ಅನೇಕ ಕೂಟಗಳಲ್ಲಿ ಗಾಂಧೀಜಿ, ಸಾಧಾರಣವಾಗಿ ಹೀಗೆ ಹೇಳುತ್ತಿದ್ದರು. "ನೀವು ಕಸ್ತೂರಿ ಬಾರನ್ನು 'ಮಹಾತ್ಮ ಗಾಂಧೀ ಹೆಂಡತಿ' ಎಂದು ಹೇಳಿದ್ದೀರಿ. ಆದರೆ ನನಗೆ 'ಮಹಾತ್ಮ ಗಾಂಧಿ' ವಿಚಾರ ಗೊತ್ತಿಲ್ಲ. ಭಾರತದಲ್ಲಿರುವವರಿಗೆ ನನ್ನ

ದೌರ್ಬಲ್ಯಗಳ ಪರಿಚಯವಿಲ್ಲ. ಅಪಜಯಗಳ ಪರಿಚಯವಿಲ್ಲ. ಅವರಿಗೆ ಗೊತ್ತಾಗಿದ್ದ ಸುದ್ದಿಗಳೆಲ್ಲ ನಮ್ಮ ಜಯಕ್ಕೆ ಸಂಬಂಧಿಸಿದ್ದುದಾಗಿದ್ದಿತು. ಇಲ್ಲಿ ಜನ ಆ ದೋಷಗಳನ್ನು ಇನ್ನು ನಗ್ನ ಬೆಳಕಿನಲ್ಲಿ ಕಾಣುವರು. ನಮ್ಮ ತಪ್ಪುಗಳನ್ನೂ ಕಾಣುವರು. ಅಂತಹ ತಪ್ಪುಗಳನ್ನೂ ಅಪಜಯಗಳನ್ನೂ ಊಹಿಸಿಯೇ, ಅವನ್ನು ನೀವು ಮನ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪ್ರಾರ್ಥನೆಯೊಂದಿಗೆ, ಮಾತೃಭೂಮಿಯ ಸೇವೆಯನ್ನು. ನಮ್ರ ಸೇವಕನಾಗಿ ಪ್ರಾರಂಭಿಸುತ್ತೇನೆ".

ಗುಜರಾತಿನ ಜನತೆ. ಗಾಂಧೀಜಿಗೆ ಒಂದು ಪ್ರತ್ಯೇಕ ಸತ್ಕಾರವನ್ನು ಕೊಟ್ಟಿತು. ಜಿನ್ನಾ, ಇಂಗ್ಲಿಷಿನಲ್ಲಿ ಸ್ವಾಗತ ಭಾಷಣ ಮಾಡಿದರು. ಗಾಂಧೀ ತಮ್ಮ ವಂದನೆಗಳನ್ನು ಗುಜರಾತಿಯಲ್ಲಿ ಹೇಳಿದರು. ಗುಜರಾತಿಗೂ ಹಿಂದಿಗೂ ತಮ್ಮ ಪಕ್ಷಪಾತವಿದೆಯೆಂದು ಹೇಳಿ, ಗುಜರಾತಿಗಳ ಸಭೆಯಲ್ಲಿ ಇಂಗ್ಲಿಷ್ ಪ್ರವೇಶಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು.

ಬೊಂಬಾಯಿನ ಗವರ್ನರ್ ಲಾರ್ಡ್ ವೆಲಿಂಗ್ಡನ್ನರು ಗಾಂಧಿಯನ್ನು ಸಂಧಿಸಲು ತೀವ್ರ ಆಶೆಯನ್ನು ಗೋಖಲೆಗೆ ವಿವರಿಸಿದರು. ನಗರವನ್ನು ಬಿಡುವುದಕ್ಕೆ ಮುಂಚೆ. ಗಾಂಧಿ ಗವರ್ನರನ್ನು ಭೆಟ್ಟಿಯಾದರು. ಪ್ರಾರಂಭದ ಯೋಗಕ್ಷೇಮಗಳ ನಂತರ ಗವರ್ನರು "ನಿಮ್ಮನ್ನು ಒಂದು ವಿಷಯ ಕೇಳುತ್ತೇನೆ. ಸರ್ಕಾರಕ್ಕೆ ಸಂಬಂಧಿಸಿದಂತೆ, ಯಾವ ಕಾರ್ಯವನ್ನೂ ನೀವು ಪ್ರಾರಂಭಿಸುವುದಕ್ಕೆ ಮುಂಚೆ, ನನ್ನನ್ನು ಬಂದು ನೋಡಬೇಕೆಂದು ಬಯಸುತ್ತೇನೆ" ಎಂದು ಹೇಳಿದರು. ಗಾಂಧೀಜಿ "ನಾನು ಆ ವಾಗ್ದಾನವನ್ನು ಸುಖವಾಗಿ ಕೊಡಬಲ್ಲೆ. ಸತ್ಯಾಗ್ರಹಿಯಾಗಿ, ನಾನು ಯಾರ ಸಂಗಡ ಕೆಲಸ ಮಾಡಬೇಕೋ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು, ಅವರೊಂದಿಗೆ ಸಾಧ್ಯವಾದಷ್ಟು ಸಹಮತವನ್ನು ಹೊಂದಲು ಪ್ರಯತ್ನಿಸುವುದು, ಇದು ನನ್ನ ನಿಯಮ". ಎಂದರು.

ಗವರ್ನರು ಗಾಂಧೀಜಿಯನ್ನು ವಂದಿಸಿ ಮತ್ತೂ ಹೇಳಿದರು. "ನಿಮಗೆ ಬೇಕಾದಾಗ ನೀವು ನನ್ನಲ್ಲಿಗೆ ಬರಬಹುದು. ನನ್ನ ಸರ್ಕಾರ, ಉದ್ದೇಶಪೂರ್ವಕವಾಗಿ ಯಾವ ಕೆಟ್ಟ ಕಾರ್ಯವನ್ನೂ ಮಾಡುವುದಿಲ್ಲವೆಂಬುದನ್ನು ನೀವು ನೋಡುವಿರಿ".

ಗಾಂಧಿ, ಅನಂತರ ಗೋಖಲೆಯವರನ್ನು ನೋಡಲು ಪೂಣೆಗೆ ಹೋದರು. ಅವರು ಜನವರಿಗ೯ರಿಂದು ಭಾರತಸೇವಾ ಸಮಾಜದಲ್ಲಿ (Servents of India Society) ಗೋಖಲೆ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ (ಹಣ್ಣು ನೆಲಗಡಲೆ ಮುಂತಾದವು) ಸ್ವಲ್ಪ ಕಾಲ ಕಳೆದರು. ಗಾಂಧಿ. ಸೊಸೈಟಿಯನ್ನು ಸೇರಬೇಕೆಂಬುದು ಗೋಖಲೆಯ ತೀವ್ರ ಆಸಕ್ತಿಯಾಗಿದ್ದಿತು. .ಗಾಂಧೀಜಿಗೂ ಹಾಗೆಯೇ ಇತ್ತು. ಆದರೆ ಇತರ ಸದಸ್ಯರು ಗಾಂಧೀಜಿಯ ಧ್ಯೇಯ ಕಾರ್ಯಕ್ರಮಗಳಿಗೂ ತಮ್ಮ ಕಾರ್ಯಕ್ರಮಗಳಿಗೂ ವ್ಯತ್ಯಾಸವಿದ್ದುದರಿಂದ, ತತ್‌ಕ್ಷಣ ಸೊಸೈಟಿಯನ್ನು ಸೇರುವುದು ಸೂಕ್ತವಾಗದೆಂದು ಭಾವಿಸಿದರು. "ಅವರು ನಿಮ್ಮನ್ನು ಅಂಗೀಕರಿಸುತ್ತಾರೆಂದು ನಾನು ನಂಬುತ್ತೇನೆ. ಹಾಗೆ ಮಾಡದಿದ್ದರೆ ನಿಮ್ಮಲ್ಲಿ ಅವರಿಗೆ ಗೌರವ ಅಥವಾ ಪ್ರೇಮ ಕಡಿಮೆ ಎಂದು ಒಂದು ನಿಮಿಷವೂ ಯೋಚಿಸಬೇಡಿ"ಎಂದರು

ಗೋಖಲೆ. "ಅವರು ಯಾವ ಸಂದಿಗ್ಧ ಹೆಜ್ಜೆಯನ್ನೂ ಇಡಲು ಹಿಂದು ಮುಂದು ನೋಡುತ್ತಿದ್ದಾರೆ; ನಿಮ್ಮಲ್ಲಿ ಅವರಿಗಿರುವ ಪೂರ್ಣ ವಿಶ್ವಾಸಕ್ಕೆ ಎಲ್ಲಿ ಧಕ್ಕೆ ಬಂದೀತೋ ಎಂದು. ನೀವು ಔಪಚಾರಿಕವಾಗಿ ಸದಸ್ಯಾಗಿ ಸೇರಿಸಲ್ಪಡಲಿ ಅಥವಾ ಬಿಡಲಿ, ನಾನಂತೂ ನಿಮ್ಮನ್ನು ಸದಸ್ಯನೆಂದು ತಿಳಿಯುತ್ತೇನೆ" ಎಂದು ಹೇಳಿದರು ಗೋಖಲೆ.

ಗಾಂಧೀಜಿ, ಭಾರತ ಸೇವಾ ಸಮಾಜದಲ್ಲಿ ಪ್ರೊಬೇಶನರ್ ಆಗಿ ತಮ್ಮ ಕೆಲಸವನ್ನು ಸಂಘದ ಪಾಯಖಾನೆ ಗೃಹಗಳನ್ನು ಶುದ್ಧಿ ಮಾಡುವುದರೊಂದಿಗೆ ಪ್ರಾರಂಭಿಸಿದರು. ಈ ಕಾರ್ಯ, ಸಂಘದ ಇತರ ಅನೇಕ ಸದಸ್ಯರಿಗೆ ಇಷ್ಟವಾಗಲಿಲ್ಲ. ಅದನ್ನು ಬಿಟ್ಟು ಬಿಡ ಬೇಕೆಂದು ಗೋಖಲೆ ಗಾಂಧೀಜಿಗೆ ಸಲಹೆ ಮಾಡಿದರು.

ಗೋಖಲೆ, ಗಾಂಧೀಜಿಯನ್ನು ತಮ್ಮ ರಕ್ಷಣೆಯಲ್ಲಿ ತೆಗೆದುಕೊಂಡರು. ಗಾಂಧೀಜಿ, ತಾವೇ ಒಂದು ಆಶ್ರಮವನ್ನು ಸ್ಥಾಪಿಸಿ ಅದರಲ್ಲಿ ತಮ್ಮ ಫೀನಿಕ್ಸ್ ಮಿತ್ರ ರೊಂದಿಗೆ ಇರಬೇಕೆಂಬುದು ತಮ್ಮ ಆಸೆ ಎಂದು ಹೇಳಿದ ಕೂಡಲೇ ಗೋಖಲೆ ಅವರಿಗೆ ವಾಗ್ದಾನ ಕೊಟ್ಟರು. "ಭಾರತ ಸೇವಾ ಸದೂಜದ ಸದಸ್ಯರೊಂದಿಗೆ ನಿಮ್ಮ ಸಮಾಲೋಚನೆಯ ಫಲಿತಾಂಶ ಏನಾದರೂ ಆಗಲಿ, ಆದರೆ ನಿಮ್ಮ ಆಶ್ರಮದ ಖರ್ಚಿಗೆ ನೀವು ನನ್ನ ಮೇಲೆ ಅವಲಂಬಿಸಬೇಕು. ಅದು ನನ್ನದೆಂದೇ ನಾನು ಭಾವಿಸು ತ್ತೇನೆ". ಗೋಖಲೆ ತಮ್ಮ ಸಹ ಕೆಲಸಗಾರನೊಬ್ಬನನ್ನು, ಭಾರತ ಸೇವಾ ಸಮಾಜದ ಲೆಕ್ಕದ ಪುಸ್ತಕಗಳಲ್ಲಿ ಗಾಂಧೀಜಿಗೆ ಒಂದು ಖಾತೆಯನ್ನು ತೆಗೆದು, ಅವರಿಗೆ ಆಶ್ರಮಕ್ಕೂ ಇತರ ಸಾರ್ವಜನಿಕ ಕೆಲಸಗಳಿಗೂ ಬೇಕಾದ ಹಣವನ್ನು ಕೊಡುವಂತೆ ಹೇಳಿದರು. ಮುಂದೆ ಗಾಂಧಿ ಹೀಗೆ ಬರೆದರು. "ಸರ್ ಫಿರೋಸ್ ಷಾ, ನನಗೆ ಹಿಮಾಲಯದಂತೆ ತೋರಿದರು. ಲೋಕಮಾನ್ಯ ತಿಲಕರು ಸಮುದ್ರದಂತೆ. ಆದರೆ ಗೋಖಲೆ ಗಂಗಾನದಿ. ಹಿಮಾಲಯವನ್ನು ಏರುವುದು ಕಷ್ಟ. ಸಮುದ್ರದಲ್ಲಿ ಹೋಗುವುದು ಸುಲಭವಲ್ಲ.ಆದರೆ ಗಂಗಾನದಿ, ಜನರನ್ನು ತನ್ನ ಹೃದಯಕ್ಕೆ ಆಹ್ವಾನಿಸುತ್ತದೆ".

ಜನವರಿಯ ಕೊನೆಯಲ್ಲಿ ಗಾಂಧಿ, ತನ್ನ ಬಂಧುಗಳನ್ನು ನೋಡಲು ರಾಜ ಕೋಟೆಗೂ ಪೋರ್‌ಬಂದರಿಗೂ ಹೋದರು. ದಾರಿಯ ವಾದ್ವಾನ್ ಎಂಬ ಸ್ಟೇಷನ್ ನಲ್ಲಿ ಮೋತಿಲಾಲ್ ಎಂಬ ಸಾರ್ವಜನಿಕ ಸೇವಕ (ಉದ್ಯೋಗದಿಂದ ದರ್ಜಿ) ಗಾಂಧಿ ಯನ್ನು ಸಂಧಿಸಿ, ವೀರಮ್‌ಗಾಮ್‌ನ ಕರಾಳ ತೆರಿಗೆಯ ಕಾರಣದಿಂದ ರೈಲು ಪ್ರಯಾಣಿ ಕರಿಗೆ ಆಗುತ್ತಿದ್ದ ಕಷ್ಟಗಳನ್ನು ವಿವರಿಸಿದನು.

"ನೀನು ಸೆರೆಮನೆಗೆ ಹೋಗಲು ಸಿದ್ಧನಾಗಿದ್ದೀಯಾ?" ಎಂದು ಗಾಂಧಿ ಅವನನ್ನು ಇದ್ದಕ್ಕಿದ್ದಂತೆ ಕೇಳಿದರು. ಮೋತಿಲಾಲ್‌ನು "ನೀವು ಕರೆದುಕೊಂಡು ಹೋದರೆ ಖಂಡಿತವಾಗಿಯೂ" ಎಂದನು. ಕಾಥಿಯವಾಡಿನವರಾಗಿ ನಮಗೆ ನಿಮ್ಮ ಮೇಲೆ ಮೊದಲ ಹಕ್ಕು ಇದೆ. ಈಗೇನೋ ನಾವು ನಿಮ್ಮನ್ನು ನಿಲ್ಲಿಸಲು ಇಷ್ಟಪಡುವುದಿಲ್ಲ. ಆದರೆ ನಿಮ್ಮ ಹಿಂದಿರುಗುವ ಪ್ರಯಾಣದಲ್ಲಿ ಇಲ್ಲಿ ನಿಲ್ಲುವುದಾಗಿ ವಾಗ್ದಾನ ಮಾಡಬೇಕು. ನೀವು ಕರೆ ಕೊಟ್ಟ ಕೂಡಲೇ ನಾವು ಅದನ್ನು ಮನ್ನಿಸುತ್ತೇವೆ. ನಮ್ಮನ್ನು ನೀವು ನಂಬ ಬಹುದು" ಎಂದ ಮೋತಿಲಾಲ್.

ಗಾಂಧಿ, "ಕಾಥಿಯವಾಡದಲ್ಲಿ ಹೋದೆಡೆಗಳಲ್ಲೆಲ್ಲ ವೀರಂಗಾಂ ಕರಾಳ ತೆರಿಗೆಯನ್ನು ಕುರಿತು ದೂರನ್ನು ಕೇಳಿದರು. ಅವರು ಆ ವಿಷಯದ ಮೇಲೆ ದೊರೆತ ಸಾಹಿತ್ಯವನ್ನು ಓದಿ, ಜನತೆಯ ದೂರು ನಿಜವಾದುದು ಎಂದು ತಿಳಿದ ಮೇಲೆ, ಬೊಂಬಾಯಿ ಸರ್ಕಾರದೊಂದಿಗೆ ಪತ್ರವ್ಯವಹಾರವನ್ನು ಪ್ರಾರಂಭಿಸಿದರು. ಅದು ನಮ್ಮ ಕೈಯಲ್ಲಿದ್ದಿದ್ದರೆ, ನಾವು ಬಹಳ ಹಿಂದೆಯೇ ಈ ಕಾವಲು ತೆರಿಗೆಯನ್ನು ತೆಗೆದು ಹಾಕಿಬಿಡುತ್ತಿದ್ದೆವು. ನೀವು ಭಾರತ ಸರ್ಕಾರವನ್ನು ಕೇಳಬೇಕು" ಎಂದು ಬೊಂಬಾಯಿ ಗವರ್ನರು ಜವಾಬು ಕೊಟ್ಟರು. ಗವರ್ನರ ಆಪ್ತ ಕಾರ್ಯದರ್ಶಿಗಳು, ಗಾಂಧಿ ತಮ್ಮ ಬಗಸರ (ಕಾಥಿಯವಾಡ) ಭಾಷಣದಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸುವ ವಿಷಯ ಹೇಳಿದುದಕ್ಕೆ ವಿಷಾದಿಸಿದರು. ಗಾಂಧಿ "ಅದು ಹೆದರಿಸುವ ಮಾತಲ್ಲ. ಜನರಿಗೆ ತಿಳಿವಳಿಕೆ ಕೊಡುವ ಮಾತು. ಜನರ ಮುಂದೆ, ಅವರ ಕಷ್ಟ ಪರಿಹಾರಕ್ಕೆ ಇರುವ ಎಲ್ಲ ನ್ಯಾಯವಾದ ಮಾರ್ಗಗಳನ್ನೂ ಇಡುವುದು ನನ್ನ ಕರ್ತವ್ಯ. ತನ್ನ ಸ್ವಾತಂತ್ರ್ಯವನ್ನು ತಾನು ಗಳಿಸಬೇಕಾದ ರಾಷ್ಟ್ರ, ಸ್ವಾತಂತ್ರ್ಯಕ್ಕೆ ಎಲ್ಲ ಮಾರ್ಗಗಳನ್ನೂ ಸಾಧನಗಳನ್ನೂ ಅರಿಯಬೇಕು. ಸಾಮಾನ್ಯವಾಗಿ ಅದರಲ್ಲಿ ಹಿಂಸೆಯೂ ಕೊನೆಯ ಮಾರ್ಗವಾಗಿರುತ್ತದೆ. ಆದರೆ ಅದಕ್ಕೆ ಬದಲಾಗಿ ಸತ್ಯಾಗ್ರಹ, ಪೂರ್ಣ ಅಹಿಂಸೆಯ ಆಯುಧ. ಅದರ ಆಚರಣೆ, ಅದರ ಮಿತಿ ಇವುಗಳನ್ನು ಜನತೆಗೆ ಬೋಧಿಸುವುದು ನನ್ನ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಬ್ರಿಟಿಷ್ ಸರ್ಕಾರ ಪ್ರಬಲ ಸರ್ಕಾರವೆಂಬುದರಲ್ಲಿ ನನಗೆ ಸಂಶಯವಿಲ್ಲ. ಆದರೆ ಸತ್ಯಾಗ್ರಹ, ಔಷಧಗಳಲ್ಲಿ ಪರಮಶ್ರೇಷ್ಠ ಎಂಬುದರಲ್ಲಿಯೂ ನನಗೆ ಸಂಶಯವಿಲ್ಲ."

ಗಾಂಧಿ ಭಾರತ ಸರ್ಕಾರಕ್ಕೆ ಬರೆದರು. ಕಾಗದ ತಲಪಿತೆಂದು ಉತ್ತರ ಬರುವುದರ ಹೊರತು ಮತ್ತೇನೂ ಆಗಲಿಲ್ಲ. ಗಾಂಧಿ ೧೯೧೭ರಲ್ಲಿ ಲಾರ್ಡ್ ಚೆಲ್ಮ್ಸ್ ಫರ್ಡ್‌ರನ್ನು ಸಂಧಿಸುವ ಅವಕಾಶ ದೊರೆತಾಗಲೇ, ಪರಿಹಾರ ಸಿಕ್ಕಿದುದ್ದು. ಈ ಭೇಟಿಯಾದ ಕೆಲವೇ ದಿನಗಳೊಳಗೆ ವೀರಂಗಾಂ ಕಾವಲು ತೆರಿಗೆ ವಜಾ ಆಯಿತು.

ರಾಜಕೋಟೆಯಿಂದ ಗಾಂಧಿ ತಮ್ಮ ಫೀನಿಕ್ಸ್ ಶಿಷ್ಯರನ್ನೂ ಮಿತ್ರರನ್ನೂ ಸಂಧಿಸಲು ಬೋಲ್ಪುರಕ್ಕೆ ಹೊರಟರು. ಅವರೂ ಕಸ್ತೂರಿಬಾರೂ ಫೆಬ್ರುವರಿ ೧೭ರಂದು ಶಾಂತಿನಿಕೇತನಕ್ಕೆ ಹೋದರು. ಆದರೆ ಟಾಗೂರರು ಪ್ರವಾಸ ಹೊರಟಿದ್ದುದರಿಂದ ಅವರನ್ನು ನೋಡಲು ಆಗಲಿಲ್ಲ. ಕವಿ, ಬೇಗ ಹಿಂದಿರುಗುವವರಾಗಿದ್ದರು. ಆಂಡ್ರೂಸ್‌ಗೆ ಬರೆದ ಕಾಗದದಲ್ಲಿ ಟಾಗೂರ್ ಹೀಗೆ ಹೇಳಿದರು "ಮಹಾತ್ಮರೂ ಮತ್ತು ಶ್ರೀಮತಿ ಗಾಂಧಿಯವರೂ ಬೋಲ್ಪುರಕೆ ಬಂದಿದ್ದಾರೆಂದು ನಂಬುತ್ತೇನೆ"

ಉಪಾಧ್ಯಾಯರೂ ವಿದ್ಯಾರ್ಥಿಗಳೂ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ಗಾಂಧೀ ಹೀಗೆ ಹೇಳಿದರು. "ಈ ದಿವಸ ನನಗೆ ಉಂಟಾಗಿರುವ ಆನಂದದಂತಹ ಆನಂದವನ್ನು ನಾನು ಹಿಂದೆಂದೂ ಅನುಭವಿಸಿಲ್ಲ. ಗುರುದೇವ ರವೀಂದ್ರನಾಥರು ಇಲ್ಲಿ ಈಗ ಇಲ್ಲದಿದ್ದರೂ, ಅವರ ಇರುವಿಕೆ ನಮಗೆ ಅನುಭವವಾಗುತ್ತಿದೆ. ನೀವು ಭಾರತೀಯ ಪದ್ಧತಿಯಂತೆ ಸ್ವಾಗತ ಕೂಟವನ್ನು ಏರ್ಪಡಿಸಿರುವುದನ್ನು ನೋಡಿ. ನನಗೆ ವಿಶೇಷ

ಸಂತೋಷವುಂಟಾಗಿದೆ. ಬೊಂಬಾಯಿನಲ್ಲಿ ನಮ್ಮನ್ನು ತುಂಬ ವೈಭವದಿಂದ ಸ್ವಾಗತಿಸಿದರು. ಆದರೆ ಅವರಲ್ಲಿ ನಮ್ಮನ್ನು ಸಂತೋಷಪಡಿಸುವುದೇನೂ ಇರಲಿಲ್ಲ. ಏಕೆಂದರೆ ಅಲ್ಲಿ ಪಾಶ್ಚಾತ್ಯ ಪದ್ಧತಿಗಳನ್ನೆಲ್ಲ ಚಾಚೂ ತಪ್ಪದೆ ಅನುಕರಿಸಿದ್ದರು. ನಾವು ನಮ್ಮ ಗುರಿಗೆ ಪೌರ್ವಾತ್ಯರ ಮಾರ್ಗದಿಂದ ಮುಟ್ಟುತ್ತೇವೆಯೇ ಹೊರತು ಪಾಶ್ಚಾತ್ಯರ ಮಾರ್ಗದಿಂದಲ್ಲ. ಏಕೆಂದರೆ ನಾವು ಪೂರ್ವದವರು. ನಾವು ಭಾರತದ ಸುಂದರ ಪದ್ಧತಿ ರೀತಿಗಳಲ್ಲಿ ಬೆಳೆಯುವೆವು, ಅದರ ಆತ್ಮಕ್ಕೆ ಅನುಗುಣವಾಗಿ ಬೇರೆ ಬೇರೆ ಧ್ಯೇಯಗಳುಳ್ಳ ಎಲ್ಲ ರಾಷ್ಟ್ರಗಳೊಂದಿಗೂ ಮೈತ್ರಿಯನ್ನು ಬೆಳೆಸುತ್ತೇವೆ. ನಿಜವಾಗಿಯೂ ತನ್ನ ಪೌರ್ವಾತ್ಯ ಸಂಸ್ಕೃತಿಯ ಮೂಲಕ ಭಾರತವು ಪೂರ್ವ ಮತ್ತು ಪಶ್ಚಿಮ ಜಗತ್ತಿನೊಂದಿಗೆ ಸ್ನೇಹ ಬಾಂಧವ್ಯವನ್ನು ಬೆಳೆಸುವುದು. ಇಂದು ನಾನು ಬಂಗಾಳದಲ್ಲಿ ಈ ಆಶ್ರಮದೊಂದಿಗೆ ನಿಮ್ಮ ಅತ್ಯಂತ ನಿಕಟ ಬಾಂಧವ್ಯವನ್ನು ಬೆಳೆಸಿದ್ದೇನೆ. ನಾನು ನಿಮಗೆ ಅಪರಿಚಿತನಲ್ಲ. ನಾನು ದೂರದ ಆಫ್ರಿಕವನ್ನು ಪ್ರೀತಿಸಿದೆ. ಏಕೆಂದರೆ ಅವರು ಅಲ್ಲಿಯೂ ತಮ್ಮ ಭಾರತೀಯ ಪದ್ಧತಿ ರೀತಿಗಳನ್ನು ಬಿಟ್ಟಿಲ್ಲ".

ಶಾಂತಿನಿಕೇತನದಲ್ಲಿ ಗಾಂಧಿ, ಮುಂದೆ ತಮ್ಮ ಸಹೋದ್ಯೋಗಿಗಳಾಗಲಿದ್ದ ಕೆಲವರನ್ನು ಸಂಧಿಸಿದರು. ಅವರು ಕಾಕಾ ಕಾಳೇಳ್ಕರ್ ಚಿಂತಾಮಣಿ ಶಾಸ್ತ್ರಿ ಮುಂತಾದವರು. ಗಾಂಧಿ, ಶಾಂತಿನಿಕೇತನದಲ್ಲಿ ಎರಡು ದಿನಗಳಿರುವುದರೊಳಗಾಗಿ, ಗೋಖಲೆಯವರು ಮರಣ ಹೊಂದಿದ ಸುದ್ದಿಯ ಟೆಲಿಗ್ರಾಂ ಅವರಿಗೆ ಬಂದಿತು. ದುಃಖ ಪ್ರದರ್ಶನಕ್ಕಾಗಿ, ತತ್‌ಕ್ಷಣ ಒಂದು ಸಭೆ ಕರೆಯಲ್ಪಟ್ಟಿತು. ಗಾಂಧಿ ಹೀಗೆ ಹೇಳಿದರು. "ನಿಜವಾದ ವೀರನನ್ನು ಹುಡುಕಲು ನಾನು ಹೊರಟೆ. ಅಖಿಲ ಭಾರತದಲ್ಲೆಲ್ಲ ನಮಗೆ ಒಬ್ಬರೇ ವೀರರು ಸಿಕ್ಕಿದರು. ಆ ವೀರರೇ ಗೋಖಲೆ." ದುಃಖದ ಗುರುತಿಗಾಗಿ ಅವರು ಒಂದು ವರುಷ ಬರಿಕಾಲಲ್ಲಿರುವುದನ್ನು ನಿರ್ಧರಿಸಿದರು. ಸಭೆ ಮುಗಿದ ಮೇಲೆ ಗಾಂಧಿ, ಕಸ್ತೂರಿ ಬಾ ಮತ್ತು ಮಗನ್ ಲಾಲ್‌ರೊಂದಿಗೆ ಪುಣೆಗೆ ಹೊರಟರು.

ಫೆಬ್ರುವರಿ ೨೨ರಂದು ಅವರು ಪುಣೆಗೆ ಬಂದು, ನೇರವಾಗಿ ಭಾರತ ಸೇವಾ ಸಮಾಜದ ಕಛೇರಿಗೆ ಹೋದರು. ತಾವು ಸೊಸೈಟಿಗೆ ಸೇರುವ ಇಚ್ಛೆಯನ್ನು ಮತ್ತೆ ವ್ಯಕ್ತಪಡಿಸಿದರು. ಗೋಖಲೆ ಇದ್ದಾಗ ಸದಸ್ಯನಾಗಿ ಸೇರಬೇಕಾಗಿರಲಿಲ್ಲ. ಈಗ ಅವರು ಹೊರಟು ಹೋದರು. ಗಾಂಧಿ ತನ್ನ ಕಾಲಮೇಲೆ ತಾನು ನಿಲ್ಲಬೇಕಾಯಿತು. ಸೊಸೈಟಿಯ ಸದಸ್ಯತ್ವವನ್ನು ಪಡೆಯುವುದು ತಮ್ಮ ಕರ್ತವ್ಯವೆಂದು ಗಾಂಧೀ ಭಾವಿಸಿದರು. ಅದು ಗೋಖಲೆಯ ಆತ್ಮಕ್ಕೆ ಸಂತೋಷವುಂಟು ಮಾಡುವುದೆಂದು ಯೋಚಿಸಿದರು. ಸೊಸೈಟಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯವಿತ್ತು. ಒಂದು ಪಂಗಡ ಗಾಂಧಿಜಿ ಸೇರ್ಪಡೆಯ ಪರವಾಗಿದ್ದರು. ಮತ್ತೊಂದು ಪಂಗಡ ಅದಕ್ಕೆ ತೀರ ವಿರೋಧವಾಗಿತ್ತು. ದೀರ್ಘ ಕಾಲ ಚರ್ಚೆ ಮಾಡಿ ಸದಸ್ಯರು ತೆರಳಿದರು. ಅಂತ್ಯ ನಿರ್ಣಯವನ್ನು ಮುಂದಿನ ದಿನಕ್ಕೆ ಹಾಕಿದರು. ಅಭಿಪ್ರಾಯ ಭೇದವಿರುವುದರಿಂದ, ದೀರ್ಘಚರ್ಚೆಯ ಅನಂತರ ಮತ್ತು ಗಾಂಧಿಯವರ ಪ್ರಾರ್ಥನೆಯಂತೆ ಮತ್ತು ಗೋಖಲೆಯವರ ಉದ್ದೇಶಕ್ಕನುಗುಣವಾಗಿ

ಸೊಸೈಟಿಯ ಹದಿನೇಳನೆಯ ನಿಯಮದಂತೆ, ಸೊಸೈಟಿಯನ್ನು ಸೇರುವ ವಿಷಯ ಅಂತ್ಯವಾಗಿ ತೀರ್ಮಾನವಾಗುವುದಕ್ಕೆ ಮುಂಚೆ ಗಾಂಧೀ ಒಂದು ವರ್ಷ ದೇಶದಲ್ಲಿ ಪ್ರವಾಸ ಮಾಡಬೇಕೆಂದು ನಿರ್ಣಯಿಸಲಾಯಿತು.

ಹೀಗೆ ಸೊಸೈಟಿಯ ಸದಸ್ಯರಲ್ಲಿ ತೀವ್ರ ಭೇದವಿದ್ದುದರಿಂದ, ಗಾಂಧೀ ಸದಸ್ಯತ್ವಕ್ಕಾಗಿ ಸಲ್ಲಿಸಿದ್ದ ತಮ್ಮ ಅರ್ಜಿಯನ್ನು ಹಿಂದೆಗೆದುಕೊಳ್ಳುವುದೆಂದು ನಿರ್ಣಯಿಸಿದರು. "ಗೋಖಲೆಗೂ ಭಾರತ ಸೇವಾ ಸಮಾಜಕ್ಕೂ ನನ್ನ ನಿಷ್ಠೆ ಇರುವುದು ಇವರಲ್ಲಿ" ಅವರು ಸಂಘದ ಅಧ್ಯಕ್ಷರಾದ ಶ್ರೀನಿವಾಸ ಶಾಸ್ತ್ರಿಗಳಿಗೆ ಮುಂದುವರಿದ ಸಭೆಯನ್ನು ನಡೆಸಬೇಕಾದುದಿಲ್ಲವೆಂದು ಬರೆದರು. "ಈ ದಿವಸ ನನ್ನ ಅರ್ಜಿಯನ್ನು ಹಿಂದೆಗೆದುಕೊಂಡುದು ನಿಜವಾಗಿ ನನ್ನನ್ನು ಸಂಘದ ಸದಸ್ಯನನ್ನಾಗಿಸಿದೆ" ಎಂದು ಗಾಂಧಿ ಯೋಚಿಸಿದರು.

ಭಾರತದ ವಿಷಯವನ್ನು ಕಣ್ಣಾರೆ ಕಂಡು ಪ್ರತ್ಯಕ್ಷವಾಗಿ ಅರಿಯಲು, ಗಾಂಧೀಜಿ ಮೂರನೆಯ ತರಗತಿಯಲ್ಲಿ ಮೂರನೆ ತರಗತಿಯ ಪ್ರಯಾಣಿಕರ ಉಡುಪನ್ನು ಧರಿಸಿ ಪ್ರಯಾಣ ಮಾಡಿದರು. ಅವರು ತೊಡಕಾದ ವಸ್ತ್ರಗಳನ್ನು ಬಿಟ್ಟು ಬಿಳಿ ಅಂಗವಸ್ತ್ರವನ್ನು ತೊರೆದು, ಶರ್ಟು ಧೋತಿ ಅಗ್ಗವಾದ ಕಾಶ್ಮೀರ ಟೋಪಿ ಇವುಗಳನ್ನು ಧರಿಸಿದರು. ರಂಗೂನಿಗೆ ಹೋಗುವ ದಾರಿಯಲ್ಲಿ ಅವರು ಕಲ್ಕತ್ತದಲ್ಲಿ ತಂಗಿ ಭೂಪೇಂದ್ರನಾಥ್ ಬಸುರವರ ಅತಿಥಿಯಾಗಿದ್ದರು. ಆತಿಥ್ಯಕಾರರು, ಕಟ್ಟಾ ಫಲಾಹಾರಿಯಾಗಿದ್ದ ಗಾಂಧೀಜಿಗೆ ಅನುಕೂಲವಾಗುವಂತೆ ತಮ್ಮ ಊಟದ ವಿಧಾನವನ್ನೂ ಸರಿಪಡಿಸಿಕೊಳ್ಳಬೇಕಾಯಿತು.

ಕಲ್ಕತ್ತದಲ್ಲಿ ಗಾಂಧೀ, ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಒಂದು ವರುಷ ತಾನು ಕಣ್ಣು ಕಿವಿ ಬಿಟ್ಟುಕೊಂಡು ಬಾಯಿಮುಚ್ಚಿಕೊಂಡಿರಬೇಕೆಂಬುದು ಗೋಖಲೆಯವರ ಅಪ್ಪಣೆಯಾದರೂ ವಿದ್ಯಾರ್ಥಿಗಳನ್ನು ಕುರಿತು ಮಾತನಾಡುವ ಆಸೆಯನ್ನು ಅಡಗಿಸಲಾರೆನೆಂದು ಹೇಳಿದರು. ರಾಜಕೀಯ, ವಿದ್ಯಾರ್ಥಿಗಳಿಗೆ ಸಂಬಂಧಪಡದ ವಿಷಯವಾಗಿರಬಾರದು, ರಾಜಕೀಯ ಧರ್ಮದಿಂದ ಬಹಿಷ್ಕೃತವಾಗಿರಬಾರದು. ಈ ದೇಶದ ಕೆಲವು ವಿದ್ಯಾರ್ಥಿಗಳು ಅತೀವ ದೇಶಭಕ್ತಿ ಪೂರಿತರಾಗಿದ್ದಾರೆಂಬುದು ನನಗೆ ಗೊತ್ತು. ಆದರೆ ಭಾರತವನ್ನು ಹೇಗೆ ಅತ್ಯುತ್ತಮವಾಗಿ ಪ್ರೀತಿಸಬೇಕೆಂಬುದು ಅವರಿಗೆ ತಿಳಿಯದು. ಅವರಲ್ಲಿ ಕೆಲವರಿಗೆ ದುಷ್ಟಮಾರ್ಗದಲ್ಲಿ ನಂಬಿಕೆಯಿದೆ. ಯಾಕೆಂದರೆ ಅವರು ದೇವರ ಭಯದಿಂದ ಕೆಲಸಮಾಡುತ್ತಿಲ್ಲ. ಮನುಷ್ಯರ ಭಯದಿಂದ ಮಾಡುತ್ತಿದ್ದಾರೆ. "ನಾನು ನಿಮಗೆ ಹೀಗೆ ಹೇಳುತ್ತೇನೆ. ರಾಜದ್ರೋಹ. ನಿಮಗೆ ಇಷ್ಟವಾದರೆ, ರಾಜದ್ರೋಹವನ್ನು ಧೈರ್ಯವಾಗಿ ಮಾತನಾಡಬೇಕು. ಗಟ್ಟಿಯಾಗಿ ಯೋಚಿಸಬೇಕು. ಪರಿಣಾಮವನ್ನು ಅಂಗೀಕರಿಸಬೇಕು. ಯುವಕರ ಒಂದು ಕಾರ್ಯಕ್ರಮವಿದ್ದರೆ. ಅದನ್ನು ಧೈರ್ಯವಾಗಿ ಜನತೆಯ ಮುಂದೆ ಇಡಬೇಕು. ಯುವಕರು ಧರ್ಮಮಾರ್ಗಿಗಳಾಗಬೇಕು. ಧರ್ಮನೀತಿ ಅವರಿಗೆ ದೀವಿಗೆಯಾಗಬೇಕು" ಎಂದು ಭಾವಪೂರ್ಣರಾಗಿ ತಮ್ಮ ಭಾಷಣವನ್ನು ಮುಗಿಸಿದರು. "ನಾನೂ ಸಹ ನಿಮ್ಮ ಮಾರ್ಗದರ್ಶನವನ್ನು ಅಂಗೀಕರಿಸಿ ನಿಮ್ಮೊಂದಿಗೆ ಸಾಯಲೂ ಸಿದ್ಧ. ಆದರೆ ನೀವು ದೇಶದಲ್ಲಿ ಭಯೋತ್ಪಾದನೆ ಯುಂಟು ಮಾಡಲು ಬಯಸಿದರೆ, ಆಗ ನಿಮ್ಮನ್ನು ಎದುರಿಸುತ್ತೇನೆ".

ಗಾಂಧೀ. ಡೆಕ್ ಪ್ರಯಾಣಿಕರಾಗಿ ರಂಗೂನಿಗೆ ಹಡಗಿನಲ್ಲಿ ಹೋದರು. ಎರಡು ದಿನಗಳ ಪ್ರಯಾಣ ತುಂಬ ಕಷ್ಟದಾಯಕವಾಗಿತ್ತು. ಅವರು ಅಧಿಕಾರಿಗಳಿಗೆ ಕೊಳಕು ಅಸೌಕರ್ಯಗಳನ್ನು ಕುರಿತು ದೂರಿತ್ತರು. ಹಿಂದಿರುಗುವ ಪ್ರಯಾಣ ಸ್ವಲ್ಪ ಉತ್ತಮ ವಾಗಿತ್ತು.

ಮಾರ್ಚಿ ೬ ರಂದು ಗಾಂಧಿ, ಎರಡನೆಯ ಬಾರಿ, ಶಾಂತಿನಿಕೇತನಕ್ಕೆ ಭೆಟ್ಟಿ ಕೊಟ್ಟರು. ಆಗ ಟಾಗೂರರೇ ಇದ್ದು ಅವರನ್ನು ಸ್ವಾಗತಿಸಿದರು.

ಹನ್ನೆರಡು ವರುಷಕ್ಕೊಂದು ಸಲ ಹರಿದ್ವಾರದಲ್ಲಿ ನಡೆಯುವ ಕುಂಭಮೇಳ ೧೯೧೫ರಲ್ಲಿ ಸೇರಿತು. ಅದರಲ್ಲಿ ಭಾಗವಹಿಸಲು ಗಾಂಧೀಜಿಗೆ ಅಷ್ಟೇನೂ ಇಷ್ಟವಿರಲಿಲ್ಲ. ಆದರೆ ಮಹಾತ್ಮ ಮುನಷಿರಾಮ್‌ರನ್ನು (ಅನಂತರ ಸ್ವಾಮಿಶ್ರದ್ಧಾನಂದರೆಂದು ಹೆಸರಾದವರು)–ನೋಡಲು ಅವರು ಆತುರರಾಗಿದ್ದರು. ಕುಂಭಮೇಳದಲ್ಲಿ ಸೇವೆಸಲ್ಲಿಸಲು, ಭಾರತ ಸೇವಾ ಸಮಾಜ, ಪಂಡಿತ್ ಕುಂಜ್ರುರವರ ನೇತೃತ್ವದಲ್ಲಿ ಒಂದು ಸ್ವಯಂ ಸೇವಕ ದಳವನ್ನು ಕಳುಹಿಸಿತ್ತು. ಮಗನ್‌ಲಾಲರ ಮೇಲ್ವಿಚಾರಣೆಯಲ್ಲಿ ಫೀನಿಕ್ಸ್ ಮಂಡಳಿಯ ಸದಸ್ಯರು ಅವರಿಗೆ ಸಹಾಯ ಮಾಡಲು ಅಲ್ಲಿ ಬಂದಿದ್ದರು. ಗಾಂಧೀಜಿ ಆ ಗುಂಪಿನ ಜೊತೆ ಸೇರಿದರು.

ಹರಿದ್ವಾರದಲ್ಲಿ ಯಾತ್ರಿಕರ ಭಕ್ತಿಗಿಂತ ಹೆಚ್ಚಾಗಿ ಬೂಟಾಟಿಕೆ ಕೊಳಕು ಇವೇ ಹೆಚ್ಚಾಗಿ ಗಾಂಧೀಜಿಯ ದೃಷ್ಟಿಗೆ ಬೀಳತೊಡಗಿತು. ಸಾಧುಗಳೆನಿಸಿಕೊಂಡವರೂ ಸಹ ಇದೇ ವರ್ಗಕ್ಕೆ ಸೇರಿದವರಾಗಿದ್ದರು. ಐದು ಕಾಲಿನ ಹಸು ಮುಂತಾದ, ಅಜ್ಞಾನಿಗಳನ್ನು ಲೂಟಿ ಮಾಡುವ ಉದ್ದೇಶದ ನೋಟಗಳು, ಗಾಂಧೀಜಿಗೆ ಜಿಗುಪ್ಸೆಯನ್ನುಂಟು ಮಾಡಿದವು. ಅಲ್ಲಿ ನಡೆಯುತ್ತಿದ್ದ ಆ ಅಕ್ರಮಗಳಿಗೆ ವಿರುದ್ಧವಾಗಿಯೂ ಮತ್ತು ಭಾರತೀಯ ಅತಿಥಿಕಾರರು ತಮಗೆ ಕೊಡುತ್ತಿದ್ದ ಅತಿಭೋಗಪೂರಿತ ಔತಣಗಳಿಗೆ ವಿರುದ್ಧವಾಗಿಯೂ, ತಮ್ಮ ಮೇಲೆ ಯಾವುದಾದರೂ ಸಂಯಮವನ್ನು ವಿಧಿಸಿಕೊಳ್ಳಲು ಗಾಂಧೀಜಿ ಬಯಸಿದರು. ಆದುದರಿಂದ ಅವರು ತಮ್ಮ ಆಹಾರವನ್ನು, ಸಂಬಾರವೂ ಸೇರಿ ಐದು ಬಗೆಯ ಆಹಾರಕ್ಕೆ ಮಿತಗೊಳಿಸಿ, ದಿನದ ಕೊನೆಯ ಊಟ ಸೂರ್ಯಾಸ್ತಕ್ಕೆ ಮುಂಚಿತವಾಗಿ ಎಂದು ನಿರ್ಣಯಿಸಿದರು.

ಗಾಂಧೀಜಿ, ಮಹಾತ್ಮ ಮುನಷಿರಾಮ್‌ರನ್ನು ಭೆಟ್ಟಿಯಾಗಲು ಗುರುಕುಲಕ್ಕೆ ಹೋದರು. ಅವರ ವಿದ್ಯಾಶಾಲೆಯಲ್ಲಿ ಕೈಗಾರಿಕಾ ಶಿಕ್ಷಣವನ್ನು ಕೊಡುವ ವಿಷಯದಲ್ಲಿ ಗಾಂಧೀಜಿ ಉಪಾಧ್ಯಾಯರೊಂದಿಗೆ ಸಮಾಲೋಚನೆ ನಡೆಸಿದರು. ಮುನಷಿರಾಮ್‌ರೊಂದಿಗೆ ಅವರ ಪರಿಚಯ ಆಳವಾದ ಸ್ನೇಹವಾಗಿ ಫಲಗೊಂಡಿತು.

ಗುರುಕುಲದಿಂದ ಗಾಂಧೀಜಿ, ಲಕ್ಷ್ಮಣ ಝೂಲಕ್ಕೆ (ಗಂಗಾನದಿಯ ಮೇಲಿನ ತೂಗುಸೇತುವೆ) ನಡೆದುಕೊಂಡೇ ಎರಡು ಮಜಲಿನಲ್ಲಿ ಹೋದರು. ದಾರಿಯಲ್ಲಿ ಅನೇಕ ಸನ್ಯಾಸಿಗಳು ಅವರನ್ನು ಸಂಧಿಸಿದರು. ಅವರಲ್ಲಿ ಒಬ್ಬರು ಗಾಂಧೀಜಿಯಿಂದ ತುಂಬ ಆಕರ್ಷಿತರಾದರು. ಗಾಂಧೀಜಿಗೆ ಶಿಖೆಯೂ ಯಜ್ಞೋಪವೀತವೂ ಇಲ್ಲದು

ದರಿಂದ ಅವರಿಗೆ ತುಂಬಾ ನೋವಾಯಿತು. ಸನ್ಯಾಸಿಯು "ಹಿಂದೂ ಧರ್ಮದ ಈ ಎರಡು ಬಾಹ್ಯ ಚಿಹ್ನೆಗಳನ್ನು" ಎಲ್ಲ ಹಿಂದುಗಳೂ ಧರಿಸಬೇಕಾದುದು ಅಗತ್ಯವೆಂದು ಹೇಳಿದರು.

ವೈಷ್ಣವರಾದುದರಿಂದ, ಗಾಂಧೀಜಿ ಶಿಖೆಯನ್ನು ಇಟ್ಟುಕೊಂಡಿದ್ದರು. ಆದರೆ ಇಂಗ್ಲೆಂಡಿಗೆ ಹೊರಡುವ ಕಾಲದಲ್ಲಿ ಅದನ್ನು ಕತ್ತರಿಸಿ ಹಾಕಿದ್ದರು; ಇಂಗ್ಲಿಷಿನವರ ದೃಷ್ಟಿಯಲ್ಲಿ "ಕಾಡುಮನುಷ್ಯನಾಗಿ ತೋರದಿರಲು" ಅವರು ಹಾಗೆ ಮಾಡಿದರು. ಆದುದರಿಂದ, ಶಿಖೆಯನ್ನು ತಾನು ನಾಚಿಕೆಯ ತಪ್ಪು ಕಲ್ಪನೆಯಿಂದ ತೆಗೆದು ಹಾಕಿದ್ದುದರಿಂದ, ಮತ್ತೆ ಬೆಳೆಸಿಕೊಳ್ಳುವುದಾಗಿ ಗಾಂಧೀ ಸನ್ಯಾಸಿಗೆ ವಾಗ್ದಾನ ಮಾಡಿದರು. ಆದರೆ ಅಸಂಖ್ಯಾತ "ಹಿಂದುಗಳು ಯಜ್ಞೋಪವೀತವಿಲ್ಲದಿದ್ದರೂ ಹಿಂದುಗಳಾಗಿ ಉಳಿದಿರುವುದರಿಂದ" ತಾನು ಅದನ್ನು ಧರಿಸುವುದಕ್ಕೆ ಒಪ್ಪಲಿಲ್ಲ.

ಹಿಮಾಲಯದ ಪ್ರಕೃತಿ ಸೌಂದರ್ಯದಿಂದ ಅವರು ತುಂಬ ಆನಂದಿತರಾದರು. "ನಮ್ಮ ಪೂರ್ವಿಕರಿಗೆ ಅವರ ಸೌಂದರ್ಯ ದೃಷ್ಟಿಗಾಗಿಯೂ, ಮತ್ತು ಪ್ರಕೃತಿಯ ಸೌಂದರ್ಯ ಪ್ರಕಟಣೆಗೆ ಧಾರ್ಮಿಕ ಸಂಕೇತವನ್ನು ಸಂಬಂಧಿಸಿದ ದೀರ್ಘದರ್ಶಿತ್ವಕ್ಕಾಗಿಯೂ ನಾನು ಭಕ್ತಿಯಿಂದ ತಲೆಬಾಗುತ್ತೇನೆ." ಅಂತಹ ಋಷಿಗಳ ಸಂತಾನ, ಆ ಸೌಂದರ್ಯ ಪ್ರದೇಶಗಳನ್ನು ಕಲುಷಿತಗೊಳಿಸುತ್ತಿರುವುದನ್ನು ಕಂಡು ಅವರಿಗೆ ತುಂಬ ನೋವಾಯಿತು. ಜನರು, ನದಿಯ ತೀರದ ಜನ ಸಂದಣಿಯ ನಡುವೆಯೇ ದೇಹಭಾಧೆಗಳನ್ನು ತೀರಿಸಿಕೊಳ್ಳುವುದನ್ನು ಕಂಡು ಅವರು ವ್ಯಥೆಯಿಂದ ಕೂಡಿದರು. ಅವರು ಸುಲಭವಾಗಿ ಜನಸಂಪರ್ಕವಿಲ್ಲದೆಡೆ, ಸ್ವಲ್ಪದೂರದಲ್ಲಿ ತಮ್ಮ ಕೆಲಸವನ್ನು ಮುಗಿಸಿಕೊಳ್ಳಬಹುದಾಗಿದ್ದಿತು.

ಗಂಗಾನದಿಯ ಮೇಲೆ, ಆಧುನಿಕ, ಕಬ್ಬಿಣದ ತೂಗು ಸೇತುವೆ (ಲಕ್ಷ್ಮಣ ಝೂಲದ ಸೊಗಸಾದ ಹಗ್ಗದ ಸೇತುವೆಯಂತಲ್ಲದೆ)ಗಾಂಧೀಜಿಗೆ ಪ್ರಿಯವಾಗಿರಲಿಲ್ಲ. "ಇಂತಹ ಸನ್ನಿವೇಶದಲ್ಲಿ ಕಬ್ಬಿಣದ ಸೇತುವೆ ಅಸಂಬದ್ಧ; ಅದು ಸೌಂದರ್ಯವನ್ನೇ ಕೆಡಿಸುತ್ತದೆ" ಸೇತುವೆಯ ಮೇಲೆ ಜಿಂಕ್‌ಷೀಟ್‌ನ ಕೆಲವು ಮುರುಕಲು ಗುಡಿಸಲುಗಳಿದ್ದುದನ್ನು ನೋಡಿ ಗಾಂಧೀಜಿಗೆ ನಿರಾಶೆಯಾಯಿತು.

ಗಾಂಧೀಜಿ, ಕಸ್ತೂರಿ ಬಾ ಸಮೇತರಾಗಿ ಏಪ್ರಿಲ್‌ನಲ್ಲಿ ಮದ್ರಾಸಿಗೆ ಬಂದರು. ಇಬ್ಬರೂ ಮೂರನೆಯ ದರ್ಜೆಯ ಗಾಡಿಯಿಂದ, ಒಡರ್ರೈತರಂತೆ ತಮ್ಮ ಉಡುಪುಗಳ ಒಂದು ಗಂಟಿನೊಂದಿಗೆ ಕೆಳಗಿಳಿದರು. ಪ್ಲಾಟ್‌ಫಾರಂನಲ್ಲಿ ಪ್ರಮುಖ ಪುರಜನರ ಸಮೂಹ ಅವರಿಗೆ ಹಾರ ಅರ್ಪಿಸಿದರು. ಜನಗುಂಪು ಉತ್ಸಾಹದಿಂದ ಜಯಕಾರ ಮಾಡಿತು. ನಟೇಶನ್, ಅವರ ಅತಿಥಿಕಾರರಾಗಿದ್ದರು. ಗಾಂಧೀ ಮತ್ತು ಕಸ್ತೂರಿ ಬಾರನ್ನು ಅವರ ಕೊಠಡಿಗಳಿಗೆ ಕರೆದುಕೊಂಡು ಹೋದರು. ಆ ಕೊಠಡಿಗಳಲ್ಲಿ—ಅತಿಥಿಕಾರರಿಗೆ ಅತ್ಯಂತ ಕಡಿಮೆ ಎಂದು ತೋರಿದ ಸೌಕರ್ಯ—ಎರಡು ಮಂಚ ಒಂದು ಕುರ್ಚಿ ಒಂದು ಮೇಜು. ಕಾಲುಮಣೆ—ಇದ್ದವು. ಗಾಂಧೀಜಿ, ಆ ಸೌಖ್ಯದ ಸಾಧನಗಳನ್ನು ಅಲ್ಲಿಂದ ಸಾಗಿಸಲು ಹೇಳಿದರು. ಅವರಿಗೆ ಕುರ್ಚಿ ಮೇಜುಗಳಿಲ್ಲದ ಬರಿಯ ಕೊಠಡಿ ಸಾಕಾಗಿತ್ತು.

ಮದರಾಸಿನ ನಾಗರಿಕರು, ಏಪ್ರಿಲ್ ೨೧ರಂದು ವಿಕ್ಟೋರಿಯಾ ಹಾಲಿನಲ್ಲಿ ಗಾಂಧೀಜಿಯನ್ನು ಗೌರವವಿಸಲು ಸಭೆ ಸೇರಿದರು. ಇಂಡಿಯಾ ಲೀಗ್ ಕಾರ್ಯದರ್ಶಿ ನಟೇಶನ್ನರು ಪೌರಬಿನ್ನವತ್ತಳೆಯನ್ನು ಅರ್ಪಿಸಿದರು. "ನಮ್ಮ ಈ ಮಾತೃಭೂಮಿಯು ಸೇವೆಮಾಡಿರುವ ವಿಶಾಲ ಮಹನೀಯರ ಪಂಕ್ತಿಯಲ್ಲಿ, ಕಾರ್ಯಸಾಧನೆಯಲ್ಲಿ ನಿಮ್ಮನ್ನು ಸಮ ನಿಲ್ಲಬಲ್ಲವರು ಎಲ್ಲಿಯೋ ಕೆಲವರು ಮಾತ್ರ. ನಿಮ್ಮನ್ನು ಮೀರಿಸಿರುವವರು ಯಾರೂ ಇಲ್ಲ. ಇಂದಿನ ತಲೆಮಾರಿನವರಿಗೆ, ನೀವು ಪೂರ್ವದ ಋಷಿಗಳ ದೈವತ್ವ ಮತ್ತು ಪೂರ್ಣ ಜ್ಞಾನದ ಪ್ರತೀಕವಾಗಿದ್ದೀರಿ. ಶ್ರೀಮತಿ ಗಾಂಧೀ, ನಮಗೆ ಸತೀ ಧರ್ಮದ ಪುನರವ ತಾರವೇ ಆಗಿದ್ದಾರೆ; ಪತಿಗಾಗಿ ಬಾಳುತ್ತಾರೆ; ಐಶ್ವರ್ಯದಲ್ಲಿಯೂ ಬಡತನದಲ್ಲಿಯೂ ಸಂತೋಷದಲ್ಲಿಯೂ ಕ್ಲೇಶಗಳಲ್ಲಿಯೂ ಮನೆಯಲ್ಲಿಯೂ ಸೆರೆಮನೆಯಲ್ಲಿಯೂ ರಾಜ ಕೀಯ ಪಾದಯಾತ್ರೆಯಲ್ಲಿಯೂ ನೆರಳಿನಂತೆ ಪತಿಯನ್ನು ಅನುಸರಿಸುತ್ತಾಳೆ".

ಬಿನ್ನವತ್ತಳೆಗೆ ಉತ್ತರ ಕೊಡುತ್ತ ಗಾಂಧೀಜಿ ಹೀಗೆ ಹೇಳಿದರು "ನಮ್ಮನ್ನು ನೀವು ಹೊಗಳಿರುವ ಈ ಮಾತುಗಳ ಹತ್ತರಲ್ಲಿ ಒಂದು ಭಾಗಕ್ಕೆ ನಾವು ಅರ್ಹರಾಗಿದ್ದಾ ದರೆ, ದಕ್ಷಿಣ ಆಫ್ರಿಕದಲ್ಲಿ ನಮ್ಮ ದೇಶದ ದುಃಖಿತರಿಗಾಗಿ ತಮ್ಮ ಪ್ರಾಣವನ್ನೇ ತೆತ್ತು ಆ ಮೂಲಕ ಅಲ್ಲಿಯ ಕಾರ್ಯವನ್ನು ಸಾಧಿಸಿದ ನಿಮ್ಮ ದೇಶಬಾಂಧವರಿಗೆ ಯಾವ ಮಾತು ಉಪಯೋಗಿಸುತ್ತೀರಿ? ತಮ್ಮ ಮಾತೃಭೂಮಿಯ ಗೌರವಕ್ಕಾಗಿ ಅಪ್ರತಿಮ ಭಕ್ತಿ ಯಿಂದ ಎಲ್ಲ ಹಿಂಸೆಗಳನ್ನೂ ಕಷ್ಟಗಳನ್ನೂ ಅವಮಾನಗಳನ್ನೂ ಸಹಿಸಿದ ನಾಗಪ್ಪನ್ ನಾರಾಯಣಸ್ವಾಮಿ ಇವರಿಗೆ ಯಾವಮಾತುಗಳನ್ನು ಉಪಯೋಗಿಸುತ್ತೀರಿ? ವಲಿಯಮ್ಮ –ಹದಿನಾರು ವರ್ಷದ ಕೋಮಲ ಹುಡುಗಿ–ಮಾರಿಟ್ಬರ್ಗ್ ಸೆರೆಮನೆಯಿಂದ ಮೂಳೆ ಚಕ್ಕಳವಾಗಿ ಜ್ವರದೊಂದಿಗೆ ಬಿಡುಗಡೆ ಹೊಂದಿ ಒಂದು ತಿಂಗಳೊಳಗೆ ತೀರಿ ಕೊಂಡ ವಲಿಯಮ್ಮನಿಗೆ ಯಾವ ಮಾತುಗಳನ್ನು ಉಪಯೋಗಿಸುತ್ತೀರಿ? ನಾನು ಆ ಮಹಾನ್ ಸ್ತ್ರೀ ಪುರುಷರನ್ನು ಸ್ಫೂರ್ತಿಗೊಳಿಸಿದೆಎಂದು ನೀವು ಹೇಳುತ್ತೀರಿ. ಈ ಸೂಚನೆಯನ್ನು ನಾನು ಅಂಗೀಕರಿಸಲಾರೆ. ಆ ಸರಳ ಹೃದಯದ ಜನ, ಭಕ್ತಿಯಿಂದ ಕೆಲಸಮಾಡುತ್ತ, ಅಲ್ಪ ಪ್ರತಿಫಲವನ್ನು ಕೂಡ ಬಯಸದೆ ನನ್ನನ್ನು ಅರ್ಹವಾದ ಮೇಲುಪಟ್ಟಕ್ಕೆ ಏರಿಸಿದರು. ತಮ್ಮ ಮಹತ್ತರತ್ಯಾಗ ಅತೀವಶ್ರದ್ಧೆ ದೇವರಲ್ಲಿ ಪೂರ್ಣ ನಂಬಿಕೆ ಇವುಗಳಿಂದ, ನನ್ನಿಂದ ಸಾಧ್ಯವಾದ ಕಾರ್ಯವನ್ನು ಮಾಡಲು ನನ್ನನ್ನು ಸ್ಫೂರ್ತಿ ಗೊಳಿಸಿದರು. ನಾನೂ ನನ್ನ ಹೆಂಡತಿಯೂ ಪ್ರಸಿದ್ಧಿಯ ಬೆಳಕಿನಲ್ಲಿ ಕೆಲಸ ಮಾಡ ಬೇಕಾದುದು ನಮ್ಮ ದುರದೃಷ್ಟ. ನಾವು ಮಾಡಿದ ಈ ಸಣ್ಣ ಕಾರ್ಯವನ್ನು ನೀವು ಅಳತೆ ಮೀರಿ ದೊಡ್ಡದು ಮಾಡಿದ್ದೀರಿ.

"ನಮಗೆ ನೀವು ಬಲಾತ್ಕಾರಿಸಲಿಚ್ಛಿಸುವ ಕಿರೀಟಕ್ಕೆ ಅವರು ಅರ್ಹರು. ನೀವು ಪ್ರೇಮದಿಂದ–ಆದರೆ ಕುರುಡಾಗಿ–ನಮ್ಮ ಮೇಲೆ ವರ್ಷಿಸಿರುವ ಗುಣವಾಚಕಗಳೆಲ್ಲ ಅವರಿಗೆ ಅನ್ವಯಿಸುತ್ತವೆ. ಹೋರಾಟದಲ್ಲಿ ಕೆಲಸ ಮಾಡಿದವರು ಹಿಂದುಗಳು ಮಾತ್ರ ವಲ್ಲ. ಅಲ್ಲಿ ಮುಸಲ್ಮಾನರು ಪಾರಸಿಕರು ಕ್ರಿಶ್ಚಿಯನ್‌ರು–ಭಾರತದ ಎಲ್ಲ ಭಾಗದವರು

ಹೆಚ್ಚು ಕಡಿಮೆ–ಅಲ್ಲಿದ್ದರು. ಅವರು, ಎಲ್ಲರಿಗೂ ಅಪಾಯ ಸಮಾನವಾಗಿದೆಯೆಂಬುದನ್ನು ಅರಿತರು. ತಮ್ಮ ಜೀವನ ಮರಣ ಭಾರತೀಯರಾಗಿಯೇ ಎಂಬುದನ್ನು ಮನಗಂಡರು. ದೈಹಿಕ ಬಲಕ್ಕೆ ಎದುರಾಗಿ ಆತ್ಮಬಲವನ್ನು ಒಡ್ಡಿದವರು ಅವರು, ಅವರು ಮಾತ್ರವೇ".

ಪ್ರತಿಯೊಂದು ಸಂದರ್ಭದಲ್ಲಿಯೂ ಗಾಂಧೀಜಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಬ್ರಿಟಿಷ್ ಚಕ್ರವರ್ತಿಗೆ ಆರೋಗ್ಯ ಭಾಗ್ಯವನ್ನು ಸೂಚಿಸುತ್ತ ಹೀಗೆ ಹೇಳಿದರು. "ಸತ್ಯಾಗ್ರಹಿಯು ತಾನು ಯಾವುದೇ ಪರಿಸ್ಥಿತಿಯಲ್ಲಿರಲಿ ತಾನು ಸತ್ಯಾಗ್ರಹಿಯಾಗಬಲ್ಲೆನೆಂಬುದನ್ನು ಸಾಕ್ಷೀಕರಿಸಬೇಕೆಂಬುದನ್ನು ನಾನು ಕಂಡುಹಿಡಿದಿದ್ದೇನೆ. ಮತ್ತು ಬ್ರಿಟಿಷ್ ಸರ್ಕಾರ, ಅನೇಕ ಧ್ಯೇಯಗಳನ್ನುಳ್ಳದುದಾಗಿದೆ ಎಂಬುದನ್ನು ಕಂಡುಹಿಡಿದಿದ್ದೇನೆ. ಆ ಧ್ಯೇಯಗಳನ್ನು ನಾನು ಪ್ರೀತಿಸುತ್ತೇನೆ. ಆ ಧ್ಯೇಯಗಳ ಪೈಕಿ ಒಂದು, ಬ್ರಿಟಿಷ್ ಸಾಮ್ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ತನ್ನ ಶಕ್ತಿ ಮತ್ತು ಗೌರವಕ್ಕೆ ಈ ಸಾಮ್ರಾಜ್ಯದಲ್ಲಿ ಅತ್ಯಂತ ಸ್ವತಂತ್ರ ಅವಕಾಶವನ್ನು ಹೊಂದಿದ್ದಾನೆಂಬುದು. ಬ್ರಿಟಿಷ್ ಸರ್ಕಾರದ ವಿಷಯದಲ್ಲಿ ಇದು ನಿಜ; ಮತ್ತಾವ ಸರ್ಕಾರದ ವಿಷಯದಲ್ಲಿಯೂ ನಿಜವಲ್ಲ ಎಂದು ನಾನು ಯೋಚಿಸುತ್ತೇನೆ. ನಿಮಗೆ ತಿಳಿದಿರುವಂತೆ ನಾನು ಯಾವ ಸರ್ಕಾರದ ಪ್ರೇಮಿಯೂ ಅಲ್ಲ. ಯಾವ ಸರ್ಕಾರ ಅತಿಕಡಿಮೆ ಆಳ್ವಿಕೆ ಮಾಡುತ್ತದೆಯೋ ಅದೇ ಉತ್ತಮ ಸರ್ಕಾರವೆಂದು ನಾನು ಅನೇಕ ಬಾರಿ ಹೇಳಿದ್ದೇನೆ. ಬ್ರಿಟಿಷ್ ಸರ್ಕಾರದಲ್ಲಿ ಅತಿ ಕಡಿಮೆ ಆಳಿಸಿಕೊಳ್ಳಲ್ಪಡಲು ಸಾಧ್ಯವೆಂದು ನಾನು ಕಂಡುಕೊಂಡಿದ್ದೇನೆ. ಆದುದರಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ನನ್ನ ರಾಜಭಕ್ತಿ".

ಏಪ್ರಿಲ್ ೨೭ರಂದು ಗಾಂಧೀಜಿ ವೈ.ಎಂ.ಸಿ.ಎ.ಯ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಶ್ರೀನಿವಾಸಶಾಸ್ತ್ರಿ ಅಧ್ಯಕ್ಷರಾಗಿದ್ದರು.

"ಮದ್ರಾಸು, ನನ್ನ ಮತ್ತು ನನ್ನ ಹೆಂಡತಿಯ ಗುಣಗಳನ್ನು ವಿವರಿಸುವುದರಲ್ಲಿ ಇಂಗ್ಲಿಷ್ ಭಾಷೆಯಲ್ಲಿರುವ ಗುಣವಾಚಕಗಳನ್ನೆಲ್ಲ ಬಹುಪಾಲು ಮುಗಿಸಿ ಬಿಟ್ಟಿದೆ. ನನ್ನನ್ನು ಎಲ್ಲಿ ಪ್ರೇಮ ಅಭಿಮಾನಗಳಿಂದ ಮುಳುಗಿಸಿ ಬಿಟ್ಟಿದ್ದಾರೆಂದು ಕೇಳಿದರೆ, ಮದ್ರಾಸಿನಲ್ಲಿ ಎಂದೇ ಹೇಳಬೇಕಾಗುತ್ತದೆ. ಆದರೆ ನಾನು ಅನೇಕ ಸಲ ಹೇಳಿರುವಂತೆ ಮದ್ರಾಸು ಹೀಗೆಯೇ ಮಾಡುತ್ತದೆಂಬುದು ನನ್ನ ನಂಬಿಕೆ. ಆದುದರಿಂದ ನೀವು ಈ ಕರುಣೆಯನ್ನು, ಸಾಟಿಯಿಲ್ಲದ ಔದಾರ್ಯದಿಂದ ನಮ್ಮ ಮೇಲೆ ಸುರಿಸುತ್ತಿರುವುದು ಏನೂ ಆಶ್ಚರ್ಯವಲ್ಲ. ಈಗ ಭಾರತ ಸೇವಾ ಸಮಾಜದ ಅಧ್ಯಕ್ಷರು–ಈ ಸಂಘದ ಅಧೀನದಲ್ಲಿ ನಾನು ಈ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದೇನೆ–ಇದರ ಮೇಲೆ ಕಿರೀಟ ವಿಟ್ಟಿದ್ದಾರೆ. ಈ ಎಲ್ಲದಕ್ಕೂ ನಾನು ಅರ್ಹನೇ? ನನ್ನ ಉತ್ತರ ಖಂಡಿತವಾಗಿ 'ಅಲ್ಲ' ಎಂದು. ಆದರೆ ನಾನು ನೀವು ಉಪಯೋಗಿಸುವ ಎಲ್ಲ ಗುಣವಾಚಕಗಳಿಗೂ ಅರ್ಹನಾಗಲು ಭಾರತಕ್ಕೆ ಬಂದಿದ್ದೇನೆ. ಮತ್ತು ನನ್ನ ಜೀವಮಾನವೆಲ್ಲ, ನಾನು ಅರ್ಹನಾದ ಸೇವಕನಾಗಲು ವಿನಿಯೋಗಿಸಲ್ಪಡುವುದು.

"ನೀವು ಕವಿ ಹಾಡಿದ ಸೊಗಸಾದ ರಾಷ್ಟ್ರಗೀತೆಯನ್ನು ಹಾಡಿದಿರಿ. ಅದನ್ನು ಕೇಳಿದ ತತ್‌ಕ್ಷಣ ನಾವೆಲ್ಲ ಎದ್ದು ನಿಂತೆವು. ಕವಿಯು ಭಾರತವನ್ನು ವರ್ಣಿಸಲು ತಾನು ಹೇಳಬಹುದಾದ ಎಲ್ಲ ಗುಣವಾಚಕ ಶಬ್ದಗಳನ್ನೂ ಉಪಯೋಗಿಸಿದ್ದಾನೆ. ಸುಗಂಧಿನಿ, ಮಧುರಭಾಷಿಣಿ, ಸುವಾಸಿನಿ, ಸರ್ವಶಕ್ತೆ ಸರ್ವಶುಭೆ, ಸತ್ಯವಂತೆ ಹಾಲುಜೇನು ಹರಿವನಾಡು, ಮಾಗಿದ ಪೈರು ಬಯಲು, ಫಲಗಳು ಧಾನ್ಯದ ಕಾಳುಗಳು ತುಂಬಿದ ಮಹತ್ ಸುವರ್ಣ ಯುಗದಲ್ಲಿ ನಮ್ಮ ಕಣ್ಣಿಗೆ ಬೀಳುವ ಮಹನೀಯ ವ್ಯಕ್ತಿಗಳಿಂದ ತುಂಬಿದ ನಾಡು. ಕವಿಯು ತನ್ನ ಸ್ವಾಧೀನದಲ್ಲಿ ಅಖಿಲ ಪ್ರಪಂಚವನ್ನು, ಮಾನವ ಜನಾಂಗವನ್ನೆಲ್ಲ, ದೇಹ ಶಕ್ತಿಯಿಂದಲ್ಲ ಆತ್ಮಶಕ್ತಿಯಿಂದ, ಆಲಂಗಿಸುವ ನಾಡನ್ನು ನಮ್ಮ ಕಣ್ಮುಂದೆ ಚಿತ್ರಿಸುತ್ತಾನೆ. 'ನಾವು ಆ ಹಾಡನ್ನು ಹಾಡಬಲ್ಲೆವೆ?' ನನ್ನನ್ನೇ ನಾನು ಕೇಳಿಕೊಂಡೆ. ಆ ಹಾಡನ್ನು ಕೇಳಿದಾಗ ನಾನು ಯಾವುದಾದರೂ ಹಕ್ಕಿನಿಂದ ನಿಂತುಕೊಳ್ಳಬಲ್ಲೆನೆ? ಕವಿಯು ನಿಸ್ಸಂದೇಹವಾಗಿ, ನಾವು ಸಿದ್ಧಿಸಿಕೊಳ್ಳಲು ನಮಗೆ ಒಂದು ಚಿತ್ರವನ್ನು ಕೊಟ್ಟನು. ಆ ಮಾತುಗಳು ಭವಿಷ್ಯವಾಣಿ. ಭಾರತದ ಮುಂದಿನ ಭರವಸೆಯಾದ ನೀವು, ಕವಿ ನಮ್ಮ ಮಾತೃಭೂಮಿಯನ್ನು ವರ್ಣಿಸುವುದರಲ್ಲಿ ಉಪಯೋಗಿಸಿದ ಪ್ರತಿಯೊಂದು ಮಾತನ್ನೂ ಸಿದ್ಧಿಸಿಕೊಳ್ಳಬೇಕು. ಈ ದಿನ, ನಮ್ಮ ಮಾತೃಭೂಮಿಯನ್ನು ವಿವರಿಸುವಲ್ಲಿ ಈ ಗುಣವಾಚಕಗಳು ಬಹುಮಟ್ಟಿಗೆ ಹೊಂದಿಕೊಳ್ಳುವುದಿಲ್ಲ. ಮಾತೃಭೂಮಿಯ ಪರವಾಗಿ ಕವಿ ಮುಂದಿಟ್ಟಿರುವ ಅರ್ಹತೆಗಳನ್ನು ನಿಶ್ಚಯವಾಗಿ ಮಾಡುವುದು ನನ್ನ ಮತ್ತು ನಿಮ್ಮ ಕರ್ತವ್ಯವಾಗಿದೆ.

"ನೀವು, ಮದ್ರಾಸಿನಲ್ಲಿರುವ ವಿದ್ಯಾರ್ಥಿಗಳು, ಭಾರತದಲ್ಲಿ ಎಲ್ಲೆಡೆಯೂ ಇರುವ ವಿದ್ಯಾರ್ಥಿಗಳು–ನಿಮ್ಮಲ್ಲಿರುವ ಅತ್ಯುತ್ತಮ ಗುಣಗಳನ್ನು ವಿಕಾಸಗೊಳಿಸುವ ವಿದ್ಯೆ ನಿಮಗೆ ದೊರಕುತ್ತಿದೆಯೇ? ಅಥವಾ ಈ ವಿದ್ಯೆ ಸರ್ಕಾರೀ ನೌಕರರನ್ನೂ ವ್ಯಾಪಾರೀ ಆಫೀಸುಗಳಲ್ಲಿ ಗುಮಾಸ್ತರನ್ನೂ ಸೃಷ್ಟಿಸುವ ಕಾರ್ಖಾನೆಯೆ? ನೀವು ಹೊಂದುತ್ತಿರುವ ವಿದ್ಯೆಯ ಗುರಿ ಸರ್ಕಾರದಲ್ಲಿಯಾಗಲೀ ಅಥವಾ ಇತರ ಇಲಾಖೆಗಳಲ್ಲಾಗಲೀ ಬರಿಯ ನೌಕರಿ, ಬರಿಯ ಉದ್ಯೋಗವೆ? ಅದು ನಿಮ್ಮ ಶಿಕ್ಷಣದ ಗುರಿಯಾದರೆ, ನಿಮ್ಮ ಮುಂದೆ ನೀವು ಇಟ್ಟುಕೊಂಡಿರುವ ಗುರಿ ಅದೇ ಆದರೆ. ಕವಿ ತನ್ನ ಮುಂದೆ ಚಿತ್ರಿಸಿಕೊಂಡ ದೃಶ್ಯ ಎಂದಿಗೂ ಸಿದ್ಧಿಸುವುದಿಲ್ಲವೆಂದು ನಾನು ಹೆದರುತ್ತೇನೆ. ನನ್ನ ಮಾತನ್ನು ನೀವು ಕೇಳಿರಬಹುದು. ಅಥವಾ ಓದಿರಬಹುದು. ನಾನೊಬ್ಬ ಆಧುನಿಕ ನಾಗರಿಕತೆಯ ದೃಢ ವಿರೋಧಿ. ನಿಮ್ಮ ದೃಷ್ಟಿಯನ್ನು ಇಂದು ಯೂರೋಪಿನಲ್ಲಿ ಏನು ನಡೆಯುತ್ತಿದೆ ಎಂಬುದರ ಕಡೆ ತಿರುಗಿಸಿ. ಇಂದು ಯೂರೋಪು ಆಧುನಿಕ ನಾಗರಿಕತೆಯ ಹಿಮ್ಮಡಿಯಲ್ಲಿ ಸಿಕ್ಕಿ ನರಳುತ್ತಿದೆ ಎಂಬ ತೀರ್ಮಾನಕ್ಕೆ ನೀವು ಬಂದರೆ, ಆಗ ನೀವೂ ನಿಮ್ಮ ಹಿರಿಯರೂ ಈ ನಾಗರಿಕತೆಯನ್ನು ನಮ್ಮ ಮಾತೃಭೂಮಿಯಲ್ಲಿಯೂ ಅನುಕರಿಸುವುದಕ್ಕೆ ಮುಂಚಿತವಾಗಿ ಬಹಳ ಯೋಚಿಸಬೇಕಾಗುವುದು. ಆದರೆ ನನಗೆ ಹೇಳುತ್ತಾರೆ "ನಮ್ಮ ಆಡಳಿತಗಾರರು ಆ ಸಂಸ್ಕೃತಿಯನ್ನು ನಮ್ಮ ತಾಯಿ ನಾಡಿಗೆ ತರುತ್ತಿರುವಾಗ

ನಾವೇನು ಮಾಡಲಿಕ್ಕಾಗುತ್ತದೆ?" ಆ ತಪ್ಪನ್ನು ಎಂದಿಗೂ ಮಾಡಬೇಡಿ. ನೀವು ಸ್ವೀಕರಿಸಲು ಸಿದ್ಧವಾಗಿಲ್ಲದಿದ್ದಲ್ಲಿ ಯಾವ ಆಳ್ವಿಕೆದಾರರೂ ಆ ಸಂಸ್ಕೃತಿಯನ್ನು ನಿಮ್ಮ ಮೇಲೆ ಹೇರಬಲ್ಲರೆಂದು ನಾನು ಒಂದು ಕ್ಷಣವೂ ಯೋಚಿಸುವುದಿಲ್ಲ. ಆಳ್ವಿಕೆದಾರರು ಆ ಸಂಸ್ಕೃತಿಯನ್ನು ನಮ್ಮ ಮುಂದೆ ತಂದರೆ, ನಾವು ಆಳ್ವಿಕೆದಾರರನ್ನೂ ತಿರಸ್ಕರಿಸದೆ ಆ ಸಂಸ್ಕೃತಿಯನ್ನು ತಿರಸ್ಕರಿಸಬಲ್ಲ ಶಕ್ತಿ ನಮ್ಮಲ್ಲಿದೆಯೆಂದು ನಾನು ಯೋಚಿಸುತ್ತೇನೆ. ನಾನು ಅನೇಕ ಸಭೆಗಳಲ್ಲಿ ಬ್ರಿಟಿಷ್ ಜನಾಂಗ ನಮ್ಮ ಮಿತ್ರರು ಎಂದು ಹೇಳಿದ್ದೇನೆ. ಅವರು ಯಾಕೆ ನಮ್ಮೊಂದಿಗಿದ್ದಾರೆ ಎಂಬುದರ ಕಾರಣಗಳಿಗೆ ಈಗ ನಾನು ಹೋಗ ಬಯಸುವುದಿಲ್ಲ. ಆದರೆ, ನಮ್ಮ ಮಾನ್ಯ ಅಧ್ಯಕ್ಷರು ಹೇಳಿದ ಪರಂಪರೆಗನುಗುಣವಾಗಿ ನಾವು ಜೀವಿಸುವುದಾದರೆ, ಈ ದೊಡ್ಡ ಜನಾಂಗ ಒಂದು ಸಂದೇಶವನ್ನು. ದೈಹಿಕ ಬಲದ ಸಂದೇಶವಲ್ಲ, ಪ್ರೇಮ ಸಂದೇಶವನ್ನು ಪ್ರಕಟಿಸುವುದು ಸಾಧ್ಯ. ಆಗ ವಿಜೇತರನ್ನು ಜಯಿಸುವುದು ನಿಮ್ಮ ಹಕ್ಕು ಆಗುತ್ತದೆ; ರಕ್ತವನ್ನು ಸುರಿಸಿ ಅಲ್ಲ ಆತ್ಮಬಲದ ಪ್ರಾಧಾನ್ಯದಿಂದ. ಇಂದು ಭಾರತದಲ್ಲಿ ನಡೆಯುತ್ತಿರುವುದನ್ನು ಗಮನಿಸುವಾಗ, ರಾಜಕೀಯ ಕೊಲೆ ಮತ್ತು ಡಕಾಯಿತಿಗಳನ್ನು ಕುರಿತು ನಮ್ಮ ಅಭಿಪ್ರಾಯವನ್ನು ಹೇಳುವುದು ಆವಶ್ಯಕವೆಂದು ನಾನು ಯೋಚಿಸುತ್ತೇನೆ. ಇವು ಪೂರ್ಣವಾಗಿ ಹೊರಗಿನಿಂದ ಆಮದಾದುವು. ಈ ನೆಲದಲ್ಲಿ ಅವು ಬೇರು ಬಿಡಲಾರವು. ಆದರೆ ನೀವು, ವಿದ್ಯಾರ್ಥಿ ಪ್ರಪಂಚ, ಎಚ್ಚರಿಕೆಯಿಂದಿರಬೇಕು. ಮಾನಸಿಕವಾಗಿಯಾಗಲಿ ನೈತಿಕವಾಗಿಯಾಗಲೀ, ಈ ಬಗೆಯ ಭಯೋತ್ಪಾತಕ ಕೃತ್ಯಗಳಿಗೆ ನೀವು ಎಂದಿಗಾದರೂ ಒಪ್ಪಿಗೆ ಕೊಡಬಾರದು. ಸತ್ಯಾಗ್ರಹಿಯಾದ ನಾನು ಅದರ ಬದಲು ನಿಮಗೆ ಬೇರೊಂದು ಸಾರವತ್ತಾದುದನ್ನು ಕೊಡುತ್ತೇನೆ. ನಿಮ್ಮನ್ನೇ ಭಯಗೊಳಿಸಿಕೊಳ್ಳಿ, ನಿಮ್ಮ ಅಂತರಂಗವನ್ನು ಹುಡುಕಿ, ದಬ್ಬಾಳಿಕೆ ಎಲ್ಲಿದ್ದರೂ ಅದನ್ನು ಪ್ರತಿಭಟಿಸಿ. ನಿಸ್ಸಂದೇಹವಾಗಿ ನಿಮ್ಮ ಸ್ವಾತಂತ್ರ್ಯದ ಮೇಲೆ ಆಕ್ರಮಣವನ್ನು ಎದುರಿಸಿ; ಆದರೆ ಆಕ್ರಮಣಕಾರರ ರಕ್ತವನ್ನು ಚೆಲ್ಲುವುದರಿಂದಲ್ಲ. ನಮ್ಮ ಧರ್ಮಬೋಧನೆ ಇದಲ್ಲ. ನಮ್ಮ ಧರ್ಮ, ಅಹಿಂಸೆಯ ಮೇಲೆ ಕಟ್ಟಿದುದಾಗಿದೆ. ಅದರ ಕಾರ್ಯಕಾರೀ ಸ್ವರೂಪ, ಪ್ರೇಮವೇ ಹೊರತು ಬೇರೇನೂ ಅಲ್ಲ; ನಮ್ಮ ನೆರೆಹೊರೆಯವರ ವಿಷಯದಲ್ಲಿ, ಮಿತ್ರರ ವಿಷಯದಲ್ಲಿ ಮಾತ್ರವೇ ಪ್ರೇಮವಲ್ಲ, ನಮ್ಮ ಶತ್ರುಗಳಾಗಿರಬಹುದಾದವರಲ್ಲಿಯೂ ಪ್ರೇಮ.

"ಇದೇ ವಿಷಯದಲ್ಲಿಮತ್ತೊಂದು ಮಾತು. ನಾವು ಸತ್ಯವನ್ನು ಅಭ್ಯಾಸ ಮಾಡುವವರಾದರೆ, ಅಹಿಂಸೆಯನ್ನು ಆಚರಿಸುವವರಾದರೆ, ನಾವು ನಿರ್ಭೀತಿಯನ್ನೂ ಆಚರಿಸಬೇಕೆಂಬುದು ನಮಗೆ ಕೂಡಲೆ ಸ್ಪಷ್ಟವಾಗಿ ಕಾಣುವುದು. ನಮ್ಮ ಆಳ್ವಿಕೆದಾರರು. ನಮ್ಮ ಅಭಿಪ್ರಾಯದಂತೆ ತಪ್ಪು ಮಾಡುತ್ತಿದ್ದರೆ, ನಮ್ಮ ಸಲಹೆಯು ಅವರ ಕಿವಿಗೆ ಬೀಳುವಂತೆ ಮಾಡುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸುವುದಾದರೆ—ಅದು ರಾಜ್ಯದ್ರೋಹವೆಂದು ಪರಿಗಣಿತವಾದರೂ, ರಾಜದ್ರೋಹವನ್ನೇ ಮಾತನಾಡಿ ಎಂದು ಹೇಳುತ್ತೇನೆ. ಆದರೆ ನಿಮಗೆ ಅಪಾಯವೆಂದು ತಿಳಿದೇ ಮಾತನಾಡಿ, ಪರಿಣಾಮವನ್ನು

ಅನುಭವಿಸಲು ನೀವು ಸಿದ್ಧವಾಗಿರಬೇಕು. ನೀವು ಪರಿಣಾಮವನ್ನು ಅನುಭವಿಸಲು ಸಿದ್ಧರಾಗಿ ಮೋಸದಿಂದ ಹೊಡೆಯುವುದನ್ನು ಬಿಟ್ಟರೆ, ಆಗ ನೀವು ಸರ್ಕಾರಕ್ಕೆ ಸಲಹೆ ಕೊಡುವ ನಿಮ್ಮ ಹಕ್ಕನ್ನು ಸಂಪಾದಿಸುತ್ತೀರಿ ಎಂದು ಹೇಳಬಹುದು.

"ನಾನು ಬ್ರಿಟಿಷ್ ಸರ್ಕಾರದೊಂದಿಗೆ ಸಹಕಾರಿಯಾಗುತ್ತೇನೆ. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯದ ಪ್ರತಿಪ್ರಜೆಯೊಂದಿಗೂ ಸಮಾನವಾದ ಹಕ್ಕುಬಾಧ್ಯತೆಯನ್ನು ಸ್ಥಾಪಿಸಲು ಸಾಧ್ಯ. ಇಂದು ನಾನು ಸಮಾನ ಪಾಲುಗಾರ. ನಾನು ಅಧೀನ ಜನಾಂಗಕ್ಕೆ ಸೇರಿದವನೆಂದು ಹೇಳಿಕೊಳ್ಳುವುದಿಲ್ಲ. ಸೇರಿದವನಲ್ಲ. ಆದರೆ ಒಂದು ಸಂಗತಿ, ಸ್ವಾತಂತ್ರ್ಯ ಬ್ರಿಟಿಷ್ ಆಳ್ವಿಕೆಗಾರರು ಕೊಡುವುದಲ್ಲ; ನೀವು ತೆಗೆದುಕೊಳ್ಳಬೇಕು. ನನಗೆ ಬೇಕು; ತೆಗೆದುಕೊಳ್ಳಬಲ್ಲೆ. ನನ್ನ ಕರ್ತವ್ಯಗಳನ್ನು ಮಾಡಿದ ಮೇಲೆಯೇ ನಾನು ಅದನ್ನು ಬಯಸುತ್ತೇನೆ. ಮ್ಯಾಕ್ಸಮುಲ್ಲರ್ ಹೇಳಿದ್ದಾರೆ (ನಮ್ಮ ಧರ್ಮ ಏನು ಹೇಳುತ್ತದೆ ಎಂಬುದನ್ನು ತಿಳಿಯಲು ನಾವು ಮಾಕ್ಸ್‌ಮುಲರ್‌ಗೆ ಹೋಗಬೇಕಾದದ್ದಿಲ್ಲ ಆದರೆ ಅವರು ಹೇಳಿದ್ದಾರೆ) ನಮ್ಮ ಧರ್ಮ ನಾಲ್ಕು ಅಕ್ಷರದಲ್ಲಿದೆ Duty (ಕರ್ತವ್ಯ); ಐದು ಅಕ್ಷರದಲ್ಲಿಲ್ಲ Right (ಹಕ್ಕು ಬಾಧ್ಯತೆ). ನಮಗೆ ಬೇಕಾದುದೆಲ್ಲ ನಮ್ಮ ಕರ್ತವ್ಯವನ್ನು ಉತ್ತಮವಾಗಿ ಮಾಡುವುದರಿಂದಲೇ ಪ್ರವಹಿಸುತ್ತದೆ ಎಂದು ನೀವು ನಂಬುವುದಾದರೆ, ಆಗ ಯಾವಾಗಲೂ ನಿಮ್ಮ ಕರ್ತವ್ಯವನ್ನೇ ಕುರಿತು ಯೋಚನೆಮಾಡಿ. ಮತ್ತು ಆ ಮಾರ್ಗದಲ್ಲಿ ನೀವು ಹೋರಾಡುತ್ತಿದ್ದರೆ ನೀವು ಯಾವ ಮನುಷ್ಯನನ್ನೂ ಕುರಿತು ಬೆದರ ಬೇಕಾದುದಿಲ್ಲ. ದೇವರಿಗೆ ಮಾತ್ರ ಬೆದರುತ್ತೀರಿ. ನನ್ನ ಗುರುಗಳಾದ–ನಿಮ್ಮ ಗುರು ಸಹ–ಗೋಖಲೆ ನಮಗೆ ಕೊಟ್ಟಿರುವ ಸಂದೇಶ ಇದು. ಹಾಗಾದರೆ ಆ ಸಂದೇಶವೇನು? ಅದು ಭಾರತ ಸೇವಾ ಸಮಾಜ ಸಂವಿಧಾನದಲ್ಲಿದೆ. ಆ ಸಂದೇಶವೇ ನನ್ನ ಬಾಳಿನಲ್ಲೆಲ್ಲ ಮಾರ್ಗದರ್ಶಕವಾಗಿರಲೆಂದು ನಾನು ಬಯಸುತ್ತೇನೆ. ಆ ಸಂದೇಶ, ದೇಶದ ರಾಜಕೀಯ ಜೀವನವನ್ನೂ ರಾಜಕೀಯ ಸಂಸ್ಥೆಗಳನ್ನೂ ಧರ್ಮೀಕರಿಸಬೇಕೆಂಬುದು. ಇದನ್ನು ಕಾರ್ಯಗತ ಮಾಡಲು ನಾವು ತತ್‌ಕ್ಷಣ ತೊಡಗಬೇಕು. ಆಗ ವಿದ್ಯಾರ್ಥಿಗಳು, ರಾಜಕೀಯದಿಂದ ದೂರವಿರಲಾರರು. ಅವರಿಗೆ ರಾಜಕೀಯ, ಧರ್ಮದಷ್ಟೇ ಆವಶ್ಯಕವಾಗುತ್ತದೆ. ರಾಜಕೀಯ, ಧರ್ಮದಿಂದ ಬೇರೆಯಾಗಿರಲಾರದು. ನನ್ನ ಅಭಿಪ್ರಾಯ, ನಿಮಗೆ ಒಪ್ಪಿಗೆಯಾಗದಿರಬಹುದು. ನನಗೆ ಗೊತ್ತು ಆದರೆ ನಾನು ನಿಮಗೆ ನನ್ನ ಹೃದಯಾಂತರಾಳದಲ್ಲಿ ಚೇತನಗೊಂಡಿರುವುದನ್ನು ಮಾತ್ರ ಹೇಳಬಲ್ಲೆ. ದಕ್ಷಿಣ ಆಫ್ರಿಕದ ನನ್ನ ಅನುಭವದಿಂದ ನಾನು ಇಷ್ಟನ್ನು ಹೇಳಬಲ್ಲೆ. ಈ ಆಧುನಿಕ ನಾಗರಿಕತೆಯ ಗಂಧವನ್ನೇ ಅರಿಯದ ಅಲ್ಲಿಯ ನಿಮ್ಮ ದೇಶಬಾಂಧವರು, ಹಿಂದಿನ ಋಷಿಗಳ ಶಕ್ತಿಯನ್ನೂ ಋಷಿಗಳು ಆಚರಿಸಿದ ತಪಶ್ಚರ್ಯವನ್ನೂ ಪಿತ್ರಾರ್ಜಿತವಾಗಿ ಪಡೆದು, ಇಂಗ್ಲಿಷ್ ಸಾಹಿತ್ಯದ ಒಂದು ಪದವನ್ನೂ ತಿಳಿಯದವರಾಗಿ, ಇಂದಿನ ನವನಾಗರಿಕತೆಯ ಲವಲೇಶ ಜ್ಞಾನವೂ ಇಲ್ಲದೆ ತಮ್ಮ ಪೂರ್ಣ ಮಹತ್ವಕ್ಕೆ ಏರಬಲ್ಲವರಾದರು. ಅವಿದ್ಯಾವಂತರೂ ಅನಕ್ಷರಸ್ಥರೂ ಆದ ನಮ್ಮ ದಕ್ಷಿಣ ಆಫ್ರಿಕದ ಬಂಧುಗಳು ಅಲ್ಲಿ ಸಾಧಿಸಿದ ಕಾರ್ಯ ನನಗೂ ನಿಮಗೂ ನಮ್ಮ ಈ ಪವಿತ್ರ ನಾಡಿನಲ್ಲಿ ಅದರ ಹತ್ತರಷ್ಟು ಸಾಧ್ಯ. ಅದು ನಿಮ್ಮ ಸುಯೋಗವಾಗಲಿ; ನನ್ನ ಸುಯೋಗವಾಗಲಿ".

ಗಾಂಧೀಜಿ ಮತ್ತು ಕಸ್ತೂರಿ ಬಾ ಶ್ರೀಮತಿ ಬೆಸೆಂಟ್‌ರನ್ನು ನೋಡಲು ಅಡಯಾರ್‌ಗೆ ಹೋದರು. ಬೆಸೆಂಟರು ತಮ್ಮ ದಿನಚರಿಯನ್ನು ಹೀಗೆ ಬರೆದರು. "ಗಾಂಧೀಜಿ ನಮ್ಮ ಪಂಚಮರ ಶಾಲೆಯೊಂದಕ್ಕೆ ಭೇಟಿ ಕೊಟ್ಟರು. ಅವರ ನಮ್ಮ ಮುದ್ರಣಾಲಯವನ್ನು ಅನುಭವಿಯ ದೃಷ್ಟಿಯಿಂದ ನೋಡಿದರು. ದೊಡ್ಡ ಆಲದ ಮರದ ಕೆಳಗೆ ನಮ್ಮ ಸಭೆ, ನಡೆಯಿತು. ಇನ್ನೂರಕ್ಕಿಂತಲೂ ಹೆಚ್ಚು ಅತಿಥಿಗಳು ಸೇರಿದ್ದರು. ನಾವೆಲ್ಲ ತುಂಬ ಸಂತೋಷಗೊಂಡೆವು".

ಗಾಂಧೀಜಿ, ದಕ್ಷಿಣ ಭಾರತದಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ಪ್ರವಾಸ ಮಾಡಿದರು. ಹೋದೆಡೆಗಳಲ್ಲೆಲ್ಲ ಅವರನ್ನು ತುಂಬ ಉತ್ಸಾಹದಿಂದ ಜನ ಸ್ವಾಗತಿಸಿದರು. ಅವರು ಬರಿಯ ಮೃದುವಾದ ಮಾತುಗಳನ್ನೇ ಆಡುತ್ತಿದ್ದರೆಂದಲ್ಲ. ವೈದಿಕರ ಕೋಟೆಯನ್ನೂ ಅವರು ಅಪ್ಪಳಿಸಿದರು. ಮಾಯಾವರದಲ್ಲಿ ಅವರು ಒಂದು ಕೋಲಾಹಲಕಾರೀ ಭಾಷಣವನ್ನೇ ಮಾಡಿದರು. "ಆಕಸ್ಮಿಕವಾಗಿ. ಹರಿಜನ ಬಂಧುಗಳಿಂದ ಒಂದು ಬಿನ್ನವತ್ತಲೆ ಸ್ವೀಕರಿಸುವ ಸಂತೋಷ ನನಗೆ ಲಭಿಸಿತು. ಆಗ ಅವರು ತಮಗೆ ಕುಡಿಯುವನೀರಿನ ಸೌಕರ್ಯವಿಲ್ಲ, ಆಹಾರವಸ್ತುಗಳ ಸೌಕರ್ಯವಿಲ್ಲ, ಜಮೀನು ಕೊಳ್ಳಲು, ಇಟ್ಟುಕೊಳ್ಳಲು ಸಾಧ್ಯವಿಲ್ಲ. ಕೋರ್ಟಿಗೆ ಹೋಗುವುದಕ್ಕೆ ಕಷ್ಟವಾಗಿದೆ. ಬಹುಶಃ ಭಯದ ಕಾರಣವಿರಬಹುದು. ಆ ಭಯಕ್ಕೆ ಅವರದು ಹೊಣೆಗಾರಿಕೆಯಲ್ಲ–ಎಂದೆಲ್ಲ ತಿಳಿಸಿದರು. ಹಾಗಾದಮೇಲೆ ಈ ಪರಿಸ್ಥಿತಿಗೆ ಕಾರಣರು ಯಾರು? ಈ ಪರಿಸ್ಥಿತಿಯನ್ನು ಮುಂದುವರಿಸುವುದು ನಮ್ಮ ಇಷ್ಟವೆ? ಇದು ಹಿಂದೂ ಧರ್ಮದ ಭಾಗವೇ. ನನಗೆ ತಿಳಿಯದು. ಹಿಂದೂಧರ್ಮ ನಿಜವಾಗಿ ಏನು ಎಂಬುದನ್ನು ನಾನು ಈಗ ಕಲಿಯಬೇಕಾಗಿದೆ. ನಾನು ಹಿಂದು ಧರ್ಮವನ್ನು ಭಾರತದ ಹೊರಗಡೆ ವ್ಯಾಸಂಗ ಮಾಡಿರುವುವರಲ್ಲಿ. ಆ ಧರ್ಮ ಒಂದು ಭಾಗ–ಜನತೆಯ ಒಂದು ಭಾಗವನ್ನು ಅಸ್ಪೃಶ್ಯರು ಎಂದು ಹೊರಗಿಡುವುದು–ಹಿಂದು ಧರ್ಮದ ಭಾಗವಲ್ಲವೆಂದು ಭಾವಿಸಿದ್ದೇನೆ. ಅಸ್ಪೃಶ್ಯತೆ ಹಿಂದುಧರ್ಮದ ಒಂದು ಮುಖ್ಯ ಭಾಗ ಎಂದು ರುಜುವಾತು ಮಾಡಿಕೊಟ್ಟರೆ, ನಾನು ಹಿಂದೂ ಧರ್ಮದ ಬಹಿರಂಗ ದಂಗೆಕೋರನೆಂದು ಘೋಷಿಸುತ್ತೇನೆ.

"ನನಗೆ ದೇಶದ ಮುಖಂಡರೊಂದಿಗೆ ಅನೇಕ ಅಂಶಗಳಲ್ಲಿಸಹ–ಮತವಿಲ್ಲವೆಂದು" ಗಾಂಧಿ ಹೇಳಿದರು. "ಅವರು ತಮ್ಮ ಹೆಗಲ ಮೇಲೆ ಹೊತ್ತ ಪವಿತ್ರ ಹೊಣೆಗಾರಿಕೆಯನ್ನು ಬಹುಶಃ ನಿರ್ವಹಿಸುತ್ತಿಲ್ಲವೆಂದು ನನಗೆ ಅನಿಸುತ್ತದೆ. ಆದರೆ ಅವರಿಂದ ಜ್ಞಾನವನ್ನು ಪಡೆಯಬೇಕೆಂದು ನಿಜವಾಗಿ ಪ್ರಯತ್ನಿಸುತ್ತಿದ್ದೇನೆ. ಆ ಜ್ಞಾನವನ್ನು ಪಡೆಯಲು ನನಗೆ ಸಾಧ್ಯವಾಗಿಲ್ಲ. ಅವರು ಏನೇ ಮಾಡಲಿ, ಏನೇ ಹೇಳಲಿ ಏಕೋ ನನ್ನ ಮನಸ್ಸಿಗೆ ಒಪ್ಪಿಗೆಯಾಗುವುದಿಲ್ಲ. ಇಲ್ಲಿ ಸ್ವಾಗತದ ಮಾತುಗಳು ಇಂಗ್ಲಿಷ್ ಭಾಷೆಯಲ್ಲಿವೆ. ಕಾಂಗ್ರೆಸ್ ಕಾರ್ಯಕ್ರಮದಲ್ಲಿ, ಸ್ವದೇಶಿಯ ಮೇಲೆ ಒಂದು ನಿರ್ಣಯವಿದೆ. ಸ್ವದೇಶಿ ಎಂದು ಹೇಳಿಕೊಂಡು ಇಂಗ್ಲಿಷಿನಲ್ಲಿ ಪ್ರಕಟಿಸುವುದಾದರೆ ಆಗ ಅದು ಸ್ವದೇಶೀಯಲ್ಲ: ನನಗೆ ಅದು ಪೂರ್ವಾಪರ ವಿರೋಧವಾಗಿ ಕಾಣುತ್ತದೆ. ಇಂಗ್ಲಿಷ್ ಭಾಷೆಗೆ ವಿರೋಧ

ವಾಗಿ ಹೇಳುವುದೇನೂ ನನಗೆ ಇಲ್ಲ. ಆದರೆ ನೀವು ಪ್ರಾಂತಭಾಷೆಗಳನ್ನು ಕೊಂದು ಅವುಗಳ ಸಮಾಧಿಯ ಮೇಲೆ ಇಂಗ್ಲಿಷನ್ನು ಏಳಿಸುವುದಾದರೆ, ನೀವು ನಿಜವಾದ ಅರ್ಥ ವಲ್ಲಿ ಸ್ವದೇಶಿಯನ್ನು ಪ್ರೋತ್ಸಾಹಿಸುವುದಿಲ್ಲವೆಂದು ನಾನು ಹೇಳುತ್ತೇನೆ. ನನಗೆ ತಮಿಳು ತಿಳಿಯುವುದಿಲ್ಲ ಎಂದು ನೀವು ಭಾವಿಸುವುದಾದರೆ, ನೀವು ನನ್ನನ್ನು ಮನ್ನಿಸಿ ನನಗೆ ತಮಿಳನ್ನು ಹೇಳಿಕೊಟ್ಟು ಕಲಿಸಬೇಕು. ನಾನು ಆ ಸೊಗಸಾದ ಭಾಷೆಯಲ್ಲಿ (ತಮಿಳು) ನಿಮ್ಮ ಸ್ವಾಗತವನ್ನು ಪಡೆದು, ಅದನ್ನು ಭಾಷಾಂತರ ಮಾಡಿ ಹೇಳಿದರೆ ಆಗ ಹೊಂದಿ, ಕಾಂಗ್ರೆಸ್ ಕಾರ್ಯಕ್ರಮದ ಕೆಲವು ಭಾಗವನ್ನು ನೀವು ಅನುಸರಿಸುತ್ತಿದ್ದೀರೆಂದು ತಿಳಿಯು ತ್ತೇನೆ. ಆಗ ಮಾತ್ರ ನನಗೆ ನಿಜವಾದ ಸ್ವದೇಶಿಯಬೋಧನೆಯಾಗುತ್ತಿದೆಯೆಂದು ನಾನು ಯೋಚಿಸುತ್ತೇನೆ.

ಗಾಂಧೀಜಿ ತಮ್ಮ ಭಾಷಣವನ್ನು "ಸ್ತ್ರೀಯರಿಗೆ ಮಾತ್ರ ಸೀರೆಯನ್ನು ನೇಯಿದು ಒದಗಿಸುತ್ತಿದ್ದ ಸಾವಿರ ಕೈಮಗ್ಗದ ಪ್ರಸ್ತಾಪಮಾಡಿ" ಮುಗಿಸಿದರು. "ಸ್ವದೇಶೀ ಬರಿಯ ಸ್ತ್ರೀಯರಿಗೆ ಮಾತ್ರವೆ ಮುಡುಪಾಗಬೇಕೆ? ಎಂದರು. ಈ ಕೈಮಗ್ಗಗಳನ್ನು ಎರಡರಷ್ಟು ಹೆಚ್ಚಿಸಿ ಎಂದು ಅವರು ಮಾಯಾವರಂ ಜನತೆಯನ್ನು ಪ್ರಾರ್ಥಿಸಿದರು. "ನಿಮ್ಮ ಎಲ್ಲ ಆವಶ್ಯಕತೆಗಳನ್ನೂ ನಮ್ಮ ನೇಕಾರರೇ ಒದಗಿಸುತ್ತಾರೆ. ದೇಶದಲ್ಲಿ ದಾರಿದ್ರ್ಯ ವಿರುವುದಿಲ್ಲ". ಗಾಂಧೀಜಿ ಅಧ್ಯಕ್ಷರನ್ನೂ ಬಿಡಲಿಲ್ಲ. ಶ್ರೋತೃಗಳನ್ನೂ ಬಿಡಲಿಲ್ಲ. "ನಾನು ನಿಮ್ಮನ್ನು ಕೇಳುತ್ತೇನೆ. ಅಧ್ಯಕ್ಷ ಮಿತ್ರರನ್ನೂ ಕೇಳುತ್ತೇನೆ. ನಿಮ್ಮ ಉಡುಪಿ ಗಾಗಿ ನೀವು ಎಷ್ಟರಮಟ್ಟಿಗೆ ಪರದೇಶಿ ವಸ್ತುಗಳಿಗೆ ಎರವಲುಗಾರರಾಗಿದ್ದೀರಿ? ನೀವು ಸರ್ವ ಪ್ರಯತ್ನವನ್ನೂ ಮಾಡಿಯೂ, ಸ್ವದೇಶೀಯಿಂದ ಸಾಧ್ಯವಾಗಲಿಲ್ಲ ಎಂದು ಹೇಳುವುದಾದರೆ ಆಗ ನಾನು ಅವರ ಕಾಲಬಳಿ ಕುಳಿತು ಪಾಠ ಕಲಿಯುವೆ. ನಾನು ಈಗ ತಿಳಿಯುವುದೇನೆಂದರೆ ಹೆಚ್ಚು ಖರ್ಚು ಮಾಡದೆ ಸ್ವದೇಶೀ ವಸ್ತುಗಳಿಂದಲೇ ನಮ್ಮ ಉಡುಪನ್ನುವ ಾಡಿಕೊಳ್ಳುವುದು ಪೂರ್ಣವಾಗಿ ಸಾಧ್ಯ ಎಂದು."

ಬೆಂಗಳೂರಿನಲ್ಲಿ ಗಾಂಧೀಜಿಯನ್ನು ಒಂದು ರಾಜ ಬೀದಿಯ ಗಾಡಿಯಲ್ಲಿ ಎಳೆದು ಕೊಂಡು ಹೋದರು. ಆಗ ಅವರು ಹೀಗೆ ಕೇಳಿಕೊಂಡರು. "ನಮ್ಮ ಸಾರ್ವಜನಿಕ ನಾಯಕ ರನ್ನು ಗಾಡಿಯಲ್ಲಿ ಎಳೆದುಕೊಂಡು ಹೋಗಿ ಕೆಡಿಸುವುದು ಬೇಡ. ದೇಶದ ಕೆಲಸ ಮಾಡಿದರೆ ಇಂತಹ ಗೌರವ ದೊರಕುತ್ತದೆ. ಆದುದರಿಂದ ಕೆಲಸ ಮಾಡಬೇಕು" ಎಂಬ ಆಲೋಚನೆಯನ್ನು ನಾವು ಪ್ರೋತ್ಸಾಹಿಸಬಾರದು. 'ನಮಗೆ ಕಲ್ಲಿನೇಟು ಬೀಳುತ್ತದೆ; ನಮ್ಮನ್ನು ಉದಾಸೀನ ಮಾಡುತ್ತಾರೆ' ಸಾರ್ವಜನಿಕರಲ್ಲಿ ಉಂಟಾಗಲಿ ಎಂಬ ಭಾವ. ಆದರೂ ಅವರು ದೇಶವನ್ನು ಪ್ರೀತಿಸಲಿ. ಏಕೆಂದರೆ ಸೇವೆಗೆ ಅದೇ ಬಹುಮಾನ.

ನೆಲ್ಲೂರಿನ ಸಾಮಾಜಿಕ ಸಮ್ಮೇಳನದಲ್ಲಿ ಗಾಂಧೀಜಿ ಹೀಗೆ ಹೇಳಿದರು. "ಗೋಖಲೆ ಯವರ ಬಾಳು, ಅವರ ಸಂದೇಶ, ಅವರ ಮಾತುಗಳು ಅವರ ಕಾರ್ಯವಿಧಾನ ಇವೆಲ್ಲ ನನಗೆ ದಾರಿತೋರಿಸುವ ನಕ್ಷತ್ರಗಳಾಗಿವೆ. ಇನ್ನೂ ಅವು ನನಗೆ ಮುಖ್ಯ ಮಾರ್ಗ ದರ್ಶಕವಾಗಿ ಉಳಿಯುತ್ತವೆ. ನಾವು, ಅವರ ಬಾಳಿನ ಕೆಲವು ಭಾಗವನ್ನು, ನಮ್ಮ

ಬಾಳಿಗೆ ತಂದುಕೊಂಡು ಅವರ ನೆನಪಿಗೆ ಗೌರವವನ್ನು ಸಲ್ಲಿಸಬಲ್ಲೆವು. ನನ್ನ ಬಾಳು, ಅದಕ್ಕಾಗಿ ಅರ್ಪಿತವಾಗಿದೆ. ಆದುದರಿಂದ ದೇಶಬಾಂಧವರೇ ನಿಮ್ಮನ್ನು ಹೀಗೆ ಪ್ರಾರ್ಥಿಸುತ್ತೇನೆ. "ನಮ್ಮನ್ನು ಕೆಡಿಸಬೇಡಿ; ಸೇವಕರೆಂದು ನಮ್ಮನ್ನು ಬೇರೆ ಮಾಡಬೇಡಿ. ನಾವು ದಕ್ಷಿಣ ಆಫ್ರಿಕದಲ್ಲಿ ಮಾಡಿದುದನ್ನು ಅತಿಶಯೋಕ್ತಿ ಮಾಡಬೇಡಿ. ಇದು ನನ್ನ ನಮ್ರ ಪ್ರಾರ್ಥನೆ. ದಕ್ಷಿಣ ಆಫ್ರಿಕದಲ್ಲಿ ನಾನು ಏನು ಮಾಡಿದೇನೋ ಅದು ಅಲ್ಲಿ ಹೂತು ಹೋಗಲಿ. ದಕ್ಷಿಣ ಆಫ್ರಿಕದಲ್ಲಿ ನಾವು ಸಂಪಾದಿಸಿದ ಪ್ರಸಿದ್ಧಿಯ ಮೇಲೆ ಇಲ್ಲಿ ನಿಲ್ಲುವುದು ಸಾಧ್ಯವಿಲ್ಲ. ಎರಡು ಕಾರಣಗಳಿಂದ ನೀವು ನಮ್ಮನ್ನು ಕೆಡಿಸಬಹುದು. ನಮಗೆ ತಲೆತಿರುಗಿ ದೇಶಕ್ಕೆ ನಾವು ನಿರುಪಯೋಗಿಗಳಾಗಬಹುದು. ಎರಡನೆಯದು ನೀವು ನಮ್ಮನ್ನು ಕುರಿತು ಅಗಾಧವಾದ ನಿರೀಕ್ಷಣೆಯನ್ನು ಬೆಳೆಸಿಕೊಂಡು ಕೊನೆಗೆ ನಿರಾಶೆಯೇ ಫಲವಾಗಬಹುದು".

ಗಾಂಧೀಜಿ, ದಕ್ಷಿಣ ಭಾರತದಲ್ಲಿ ಎಲ್ಲೆಡೆಯೂ ತಿರುಗಿದರು. ಅವರು ಮುಡುಕಿಕೊಂಡು ಹೋಗಿ ಇಬ್ಬರು ವಿಧವೆಯರನ್ನು ಹೋಗಿ ಭೇಟಿಯಾದರು. ಅವರ ಗಂಡಂದಿರು ದಕ್ಷಿಣ ಆಫ್ರಿಕದ ಹೋರಾಟದಲ್ಲಿ ಗುಂಡಿನ ಏಟು ತಿಂದು ಮಡಿದಿದ್ದರು. ಮದ್ರಾಸ್ ಪ್ರಾಂತದಲ್ಲಿ ಗಾಂಧೀಜಿಗೆ ತಾವು ದಕ್ಷಿಣ ಆಫ್ರಿಕದ ಸಹ ಕೆಲಸಗಾರರೊಂದಿಗಿರುವ ಭಾವನೆ ಉಂಟಾಯಿತು. ಅವರ ಮಾತುಗಳು ಸರಾಗವಾಗಿ ಹರಿಯುತ್ತಿದ್ದವು. ತಮ್ಮ ಮುಂದಿನ ಕಾರ್ಯಕ್ರಮದ ಬೀಗದ ಕೈ ಅವರಿಗೆ ದೊರೆತಂತೆ ತೋರಿತು.

ಸತ್ಯಾಗ್ರಹದ ಆಶ್ರಮ

೧೯೧೫

ಅನೇಕ ಪ್ರಾಂತಗಳು ಗಾಂಧೀಜಿಯನ್ನು ಬಯಸಿದವು. ಸ್ವಾಮಿ ಶ್ರದ್ಧಾನಂದರು ಅವರು ಹರಿದ್ವಾರದಲ್ಲಿರಬೇಕೆಂದು ಇಚ್ಛಿಸಿದರು. ಬಂಗಾಳದಲ್ಲಿನ ಸ್ನೇಹಿತರು ವೈದ್ಯನಾಥ ಧಾಮವನ್ನು ತೀವ್ರವಾಗಿ ಶಿಫಾರಸು ಮಾಡಿದರು. ರಾಜಕೋಟೆ ಅವರನ್ನು ಆಹ್ವಾನಿಸಿತು. ಕೆಲವು ಸ್ನೇಹಿತರು ಅವರು ಅಹಮದಾಬಾದಿನಲ್ಲಿ ನಿಲ್ಲಬೇಕೆಂದು ಬಯಸಿದರು. ಮತ್ತು ಎಲ್ಲ ಸಾಧ್ಯವಾದ ರೀತಿಯಲ್ಲಿಯೂ ಸಹಾಯ ಮಾಡುವುದಾಗಿ ಮುಂದೆ ಬಂದರು. ಗುಜರಾತಿಯಾದುದರಿಂದ ಅದರ ಜೀವನಾಡಿಕೇಂದ್ರವಾದ ಅಹಮದಾಬಾದನ್ನು ಗಾಂಧೀಜಿ ಆರಿಸಿಕೊಂಡರು.

ಅಹಮ್ಮದಾಬಾದು, ಅನೇಕ ವಿಧಗಳಲ್ಲಿ ಅವರ ಚಟುವಟಿಕೆಗಳಿಗೆ ಅನುಕೂಲವಾದ ಸ್ಥಳವಾಗಿತ್ತು. ಅವರ ಮುಖ್ಯಕಾರ್ಯಕ್ರಮ ಸ್ವದೇಶಿಯಾಗಿದ್ದುದರಿಂದಲೂ ಅಹಮದಾಬಾದು ಪ್ರಾಚೀನ ಕೈಮಗ್ಗದ ನೆಯ್ಗೆಯ ಕೇಂದ್ರವಾಗಿದ್ದುದರಿಂದಲೂ, ಗೃಹಕೈಗಾರಿಕೆಯ ಪುನರುಜ್ಜೀವನ ಕಾರ್ಯಕ್ಕೆ ಅದು ಅತ್ಯಂತ ಸುಗಮವಾದ ಕ್ಷೇತ್ರವಾಗುವ ಸಂಭವವಿದ್ದಿತು. ಅವರು, ತಮ್ಮ ಮಾತೃಭಾಷೆಯಾದ ಗುಜರಾತಿಯ ಮೂಲಕ, ಜನರ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವವನ್ನು ಬೀರಬಹುದೆಂದು ಯೋಚಿಸಿದರು. ಕಡಿಮೆಯಲ್ಲದ ಮತ್ತೊಂದು ಅಂಶವೆಂದರೆ ಹಣದ ವಿಷಯ. ಅಹಮ್ಮದಾಬಾದು ಗುಜರಾತಿನಲ್ಲೆಲ್ಲ ಹಣಸಮೃದ್ಧಿಯ ವ್ಯಾಪಾರೀ ಕೇಂದ್ರವಾದುದರಿಂದ, ಅದರ ಧನಿಕ ಪೌರರು, ಒಂದು ಹೊಸ ಕಾರ್ಯಕ್ರಮಕ್ಕೆ ಹಣವನ್ನು ಕೊಡಲು ಸುಲಭವಾಗಿ ಪ್ರೇರಿತರಾಗಬಹುದೆಂದು ಗಾಂಧಿ ಯೋಚಿಸಿದರು.

ಗಾಂಧೀಜಿಗೆ, ತನ್ನ ಕಾರ್ಯಕ್ರಮ, ತತ್ತ್ವ ಇವುಗಳ ವಿಷಯದಲ್ಲಿ ಅಸ್ಪಷ್ಟ ಸಂದಿಗ್ಧ ಸ್ಥಿತಿ ಇಷ್ಟವಿರಲಿಲ್ಲ. ಅವರು ತಮ್ಮ ಸ್ನೇಹಿತರಿಗೆ, ತಮ್ಮ ಸಂಸ್ಥೆಗೆ ಸೇರಲು ಬಂದ ಮೊದಲನೆಯ ಹರಿಜನನನ್ನು ಸೇರಿಸಿಕೊಳ್ಳುವುದಾಗಿ ಸ್ಪಷ್ಟಪಡಿಸಿದರು. ದಕ್ಷಿಣ ಆಫ್ರಿಕದಲ್ಲಿ ಮಾಡಿದಂತೆ ಇಲ್ಲಿಯೂ ಕೆಲಸಗಾರರನ್ನು ತಯಾರು ಮಾಡಲು ಒಂದು ಸಂಸ್ಥೆಯನ್ನು (ಆಶ್ರಮವನ್ನು) ಸ್ಥಾಪಿಸಬೇಕೆಂದು ಅವರು ನಿರ್ಣಯಿಸಿದರು. ಜೀವನಲಾಲ್ ದೇಸಾಯಿ ಎಂಬ ಹೆಸರಿನ ಗಾಂಧೀಜಿಯ ಬ್ಯಾರಿಸ್ಟರ್ ಮಿತ್ರರು, ಅಹಮ್ಮದಾಬಾದ್ ಸಮೀಪದ ಕೊಚರಾಬ್ ಎಂಬಲ್ಲಿದ್ದ ತಮ್ಮ ಮಹಡಿಮನೆಯನ್ನು ಕೊಡಲು ಒಪ್ಪಿದರು. ಗಾಂಧೀಜಿ ಅದನ್ನು ಬಾಡಿಗೆಗೆ ಹಿಡಿದರು.

ಮೇ ೨೫–೧೯೧೫ರಂದು ಕೊಚರಾಬ್‌ನಲ್ಲಿ ಆಶ್ರಮದ ಸ್ಥಾಪನೆಯಾಯಿತು.

ಗಾಂಧೀಜಿಯ ಮಿತ್ರರು ಸೇವಾಶ್ರಮ ತಪೋವನ ಮುಂತಾದ ಅನೇಕ ಹೆಸರುಗಳನ್ನು ಸೂಚಿಸಿದರು. ಆದರೆ ಗಾಂಧೀಜಿ "ಸತ್ಯಾಗ್ರಹ ಆಶ್ರಮ" ಎಂದು ಕರೆಯಲು ತೀರ್ಮಾನಿಸಿದರು. ಅದು ಅವರ ಗುರಿ ಮತ್ತು ಸೇವಾಕ್ರಮ ಎರಡನ್ನೂ ಸೂಚಿಸುವುದಾಗಿದ್ದಿತು. "ನಮ್ಮ ಧರ್ಮ, ಸತ್ಯಕ್ಕೆ ನಿಷ್ಠೆ. ನಮ್ಮ ಕಾರ್ಯ, ಸತ್ಯಕ್ಕಾಗಿ ಅನ್ವೇಷಣೆ". ಒಟ್ಟು ಇಪ್ಪತ್ತೈದು ಜನ ಸ್ತ್ರೀ ಪುರುಷರು ಆಶ್ರಮವಾಸಿಗಳಾಗಿದ್ದರು. ಅವರ ಪೈಕಿ ಹದಿಮೂರು ಜನ ತಮಿಳುನಾಡಿನವರು; ಉಳಿದವರು ಭಾರತದ ನಾನಾ ಭಾಗಗಳಿಂದ ಬಂದವರು. ಎಲ್ಲರೂ ಒಂದೇ ಸಂಸಾರದಂತೆ ಜೀವಿಸುತ್ತಿದ್ದರು. ಒಂದೇ ಅಡಿಗೆ ಮನೆಯಲ್ಲಿ ಎಲ್ಲರಿಗೂ ಊಟ. ಅವರನ್ನು ಮೂರು ವಿಧವಾಗಿ ವಿಂಗಡಿಸಿದ್ದರು; ಮ್ಯಾನೇಜರುಗಳು, ಉಮೇದುವಾರರು ವಿದ್ಯಾರ್ಥಿಗಳು ಎಂಬುದಾಗಿ. ಆಶ್ರಮದ ಗುರಿ ಮಾತೃಭೂಮಿಯ ಸೇವೆ. ಸತ್ಯ ಅಹಿಂಸೆ ಬ್ರಹ್ಮಚರ್ಯ ಕದಿಯದಿರುವುದು (ಅಸ್ತೇಯ) ಮುಂತಾದ ನಿಯಮಗಳನ್ನು ಅನುಸರಿಸುವುದು ಆವಶ್ಯಕವೆಂದು ಪರಿಗಣಿಸಲ್ಪಟ್ಟಿದ್ದಿತು. ಗಾಂಧಿ ನಿಯಮಗಳನ್ನು (ಇವುಗಳಿಗೆ ವ್ರತಗಳೆಂದೂ ಹೆಸರು) ಹೀಗೆ ವಿವರಿಸುತ್ತಿದ್ದರು.

ಸತ್ಯದವ್ರತ: ಮನುಷ್ಯ ಸಾಧಾರಣವಾಗಿ ಅಸತ್ಯವನ್ನು ಅನುಸರಿಸುವುದಿಲ್ಲವೆಂಬುದಷ್ಟೇ ಸಾಲದು. ಯಾವ ಸಂದರ್ಭದಲ್ಲಿಯೂ ಮೋಸವನ್ನು ಮಾಡಬಾರದು. ತಂದೆತಾಯಿಗಳನ್ನು ಎದುರಿಸುವುದಕ್ಕೂ ಸಿದ್ಧನಾಗಬೇಕು. ಪ್ರಹ್ಲಾದನನ್ನು ಸ್ಮರಿಸಿಕೊಳ್ಳಿ.

ಅಹಿಂಸಾವ್ರತ ಈ ವ್ರತದ ಅನುಯಾಯಿ, ಇತರರು ಅನ್ಯಾಯ ಮಾಡುತ್ತಿದ್ದಾರೆ ಎಂದು ತಿಳಿದರೂ, ಅವರಿಗೆ ಕೇಡನ್ನು ಬಗೆಯಲಾಗದು; ಅವರೊಂದಿಗೆ ಕೋಪಿಸಿಕೊಳ್ಳಬಾರದು. ಅವರನ್ನು ಪ್ರೀತಿಸಬೇಕು. ಹೀಗೆ ಅವನು ಪೋಷಕರ ಸರ್ಕಾರಗಳ ಅಥವಾ ಇತರರ ಹಿಂಸೆಯನ್ನು ಎದುರಿಸುವನು. ಆದರೆ ಪೀಡಕನನ್ನು ಎಂದಿಗೂ ನೋಯಿಸುವುದಿಲ್ಲ. ಸತ್ಯ ಮತ್ತು ಅಹಿಂಸೆಯ ಅನುಯಾಯಿ, ಪೀಡಕನನ್ನು ಪ್ರೇಮದಿಂದ ಜಯಿಸುವನು. ಪೀಡಕನ ಅಪ್ಪಣೆಯನ್ನು ಅವನು ಪಾಲಿಸುವುದಿಲ್ಲ. ಪೀಡಕನ ಇಚ್ಛೆಯನ್ನು ವಿರೋಧಿಸಿದುದಕ್ಕಾಗಿ ಯಾವ ಶಿಕ್ಷೆಯನ್ನೂ, ಮರಣವನ್ನೂ ಸಹ, ಪೀಡಕನನ್ನೇ ಜಯಿಸುವವರೆಗೆ ಅವನು ಅನುಭವಿಸುವನು.

ಬ್ರಹ್ಮಚರ್ಯ: ಮೇಲಿನ ಎರಡು ವ್ರತಗಳನ್ನೂ (ಸತ್ಯ ಅಹಿಂಸೆ) ಬ್ರಹ್ಮಚರ್ಯ ಪಾಲನೆಯಿಲ್ಲದೆ ಅನುಸರಿಸುವುದು ಸಾಧ್ಯವಿಲ್ಲ. ಬ್ರಹ್ಮಚರ್ಯ ಪಾಲನೆ, ಮನುಷ್ಯ ಕಾಮಪೂರಿತ ಕಣ್ಣುಗಳಿಂದ ಪರಸ್ತ್ರೀಯನ್ನು ನೋಡದಿದ್ದ ಮಾತ್ರಕ್ಕೆ ಸಾಲದು. ಅವನು ಕನಸಿನಲ್ಲಿ ಸಹ ಕಾಮಪ್ರವೃತ್ತಿ ಸುಳಿಯದಂತೆ ಪಾಶವೀಪ್ರವೃತ್ತಿಗಳನ್ನು ಹತೋಟಿಯಲ್ಲಿಡಬೇಕಾಗುತ್ತದೆ. ಅವನಿಗೆ ಮದುವೆಯಾಗಿದ್ದರೆ ಅವನು ತನ್ನ ಹೆಂಡತಿಯ ವಿಷಯದಲ್ಲಿಯೂ ಇಂದ್ರಿಯ ಲಂಪಟ ಮನೋಭಾವನೆಯನ್ನು ಹೊಂದಲಾರ. ಆದರೆ ಅವಳನ್ನು ತನ್ನ ಆಜೀವ ಸಂಗಾತಿಯನ್ನಾಗಿ ಪರಿಗಣಿಸಿ ಅವಳೊಂದಿಗೆ ನಿರ್ದುಷ್ಟ ಪರಿಶುದ್ಧ ಬಾಂಧವ್ಯವನ್ನು ಬೆಳೆಸಿಕೊಳ್ಳುವನು.

ನಾಲಗೆಯ ಮೇಲಿನ ಹತೋಟಿಯೇ ಅಸ್ವಾದ ಮನುಷ್ಯ ಹೊಟ್ಟೆಯ ಆನಂದ ವನ್ನು ಜಯಿಸಿದ ಹೊರತು, ಹಿಂದೆ ಹೇಳಿದ ವ್ರತಗಳನ್ನು-ಅದರಲ್ಲಿಯೂ ವಿಶೇಷವಾಗಿ ಬ್ರಹ್ಮಚರ್ಯ ವ್ರತವನ್ನು ಆಚರಿಸುವುದು ಕಷ್ಟವಾಗುತ್ತದೆ. ಆದುದರಿಂದ ಅಸ್ವಾದವೇ ಬೇರೆ ಒಂದು ವ್ರತವಾಗಿ ಪರಿಗಣಿಸಲ್ಪಟ್ಟಿದೆ. ದೇಶಸೇವೆ ಮಾಡುವ ಆಸೆಯುಳ್ಳವನು, ದೇಹವನ್ನು ಉಳಿಸಿಕೊಳ್ಳುವುದಕ್ಕಾಗಿ ಮಾತ್ರ ತಿನ್ನುವುದು ಅವಶ್ಯಕವೆಂದು ನಂಬು ತ್ತಾನೆ. ಆದುದರಿಂದ ಅವನು ತನ್ನ ಆಹಾರವನ್ನು ನಿತ್ಯ ತನ್ನ ಶಕ್ತಿಗನುಗುಣವಾಗಿ ನಿಯಮಿತಗೊಳಿಸುತ್ತಾನೆ, ಅಥವಾ ಶುದ್ಧಿಗೊಳಿಸುತ್ತಾನೆ. ಮತ್ತು ನಿಧಾನವಾಗಿ ಅಥವಾ ತತ್‌ಕ್ಷಣ ಪಾಶವೀ ಪ್ರವೃತ್ತಿಗಳನ್ನು ಉದ್ರೇಕಗೊಳಿಸುವ ಅಥವಾ ಬೇರೆ ದೃಷ್ಟಿ ಯಿಂದ ಅನಾವಶ್ಯಕವಾದ ಆಹಾರವನ್ನು ಬಿಟ್ಟುಬಿಡುತ್ತಾನೆ.

ಕದಿಯದಿರುವ ವ್ರತ: ಇತರರ ಸ್ವತ್ತು ಎಂದು ಸಾಧಾರಣವಾಗಿ ಭಾವಿಸಿರುವ ವಸ್ತುಗಳನ್ನು ಕದಿಯದಿರುವುದಷ್ಟೇ ಸಾಲದು. ಅದಂತೂ ಕಳವೇ ಹೌದು. ನನಗೆ ನಿಜವಾಗಿ ಅವಶ್ಯಕವಲ್ಲದ ವಸ್ತುಗಳನ್ನು ನಾವು ಉಪಯೋಗಿಸಿದರೆ ಅದೂ ಕಳವು. ಪ್ರಕೃತಿ ದಿನದಿನಕ್ಕೆ ಅವಶ್ಯಕವಾದಷ್ಟನ್ನು ಒದಗಿಸುತ್ತದೆಯೇ ಹೊರತು ಹೆಚ್ಚಿಗೆ ಇಲ್ಲ.

ಏನನ್ನೂ ಸಂಗ್ರಹಿಸದಿರುವುದು, ಅಸಂಗ್ರಹ ವ್ರತ-ಬಹಳಷ್ಟನ್ನು ಸಂಗ್ರಹಿಸಿ ಇಟ್ಟುಕೊಳ್ಳದಿರುವುದಷ್ಟೇ ಸಾಲದು. ಆದರೆ ನಮ್ಮ ದೈಹಿಕ ಅವಶ್ಯಕತೆಗಳಿಗೆ ಬೇಡ ವಾದ ವಸ್ತುಗಳನ್ನು ಇಟ್ಟುಕೊಳ್ಳಲೇ ಕೂಡದು. ಆದುದರಿಂದ ಈ ವ್ರತದ ಅನು ಯಾಯಿ, ಬಾಳನ್ನು ಸರಳಗೊಳಿಸುವುದನ್ನು ಕುರಿತು ಯಾವಾಗಲೂ ಚಿಂತಿಸುತ್ತಿರುತ್ತಾನೆ.

ಮೇಲೆ ಹೇಳಿದ ವ್ರತಗಳ ಆಚರಣೆಯ ಜೊತೆಗೆ ಸ್ವದೇಶಿ, ನಿರ್ಭೀತಿ, ಇವು ಅವಶ್ಯಕ.

ಸ್ವದೇಶಿ-ನಾವು ಉಪಯೋಗಿಸುವ ವಸ್ತುಗಳ ವಿಷಯದಲ್ಲಿ ಮೋಸದ ಸಂಪರ್ಕ ವಿರುವುದಾದರೆ ಆ ವಸ್ತುಗಳನ್ನು ಉಪಯೋಗಿಸುವುದು ಸತ್ಯಕ್ಕೆ ವಿರೋಧವಾದುದು. ಉದಾಹರಣೆಗೆ ಸತ್ಯದ ಆರಾಧಕನು ಮ್ಯಾಂಚೆಸ್ಟರ್ ಜರ್ಮನಿ ಅಥವಾ ಭಾರತದ ಗಿರಣಿಗಳಲ್ಲಿ ತಯಾರಾದ ವಸ್ತ್ರಗಳನ್ನು ಉಪಯೋಗಿಸುವುದಿಲ್ಲ. ಏಕೆಂದರೆ ಅವುಗಳ ವಿಷಯದಲ್ಲಿ ಮೋಸವಿಲ್ಲ ಎಂಬುದು ಅವನಿಗೆ ತಿಳಿಯದು. ಅಲ್ಲದೆ ಗಿರಣಿಗಳಲ್ಲಿ ಕೂಲಿ ಗಳಿಗೆ ಬಹಳ ಕಷ್ಟವಾಗುತ್ತಿದೆ. ಗಿರಣಿಗಳಲ್ಲಿ ಬೆಂಕಿಯ ಉಪಯೋಗದಿಂದ ಅನೇಕ ಜೀವ ಗಳ ನಾಶವಾಗುವುದಲ್ಲದೆ, ಕೂಲಿಗಳನ್ನು ಅಕಾಲದಲ್ಲಿ ಕೊಲ್ಲುತ್ತದೆ. ಪರದೇಶಿ ವಸ್ತು ಗಳು ಮತ್ತು ಅತ್ಯಾಧುನಿಕ ಸೂಕ್ಷ್ಮ ಯಂತ್ರಗಳಿಂದ ಮಾಡಿದ ವಸ್ತುಗಳು, ಸತ್ಯ ಆರಾಧಕನಿಗೆ ನಿಷಿದ್ಧ. ಇನ್ನೂ ಹೆಚ್ಚು ಯೋಚನೆ ಮಾಡಿ ನೋಡಿದರೆ ಅಂತಹ ಪದಾರ್ಥಗಳ ಉಪಯೋಗ, ಕದಿಯದಿರುವುದು (ಅಸ್ತೇಯ) ಮತ್ತು ಸಂಗ್ರಹಿಸ ದಿರುವುದು (ಅಪರಿಗ್ರಹ) ಈ ವ್ರತಕ್ಕೆ ಭಂಗವನ್ನು ತರುವುದೆಂಬುದು ಗೊತ್ತಾಗುವುದು. ನಾವು, ಕೈಮಗ್ಗದಲ್ಲಿ ತಯಾರಾದ ವಸ್ತ್ರಗಳನ್ನು ಬಿಟ್ಟು ಪರದೇಶಿ ವಸ್ತ್ರಗಳನ್ನು ತೊಡು ತ್ತೇವೆ. ಏಕೆಂದರೆ ಅದು ಹೆಚ್ಚು ಸುಂದರ ಎಂದು ಹೇಳುವುದು ಪದ್ಧತಿಯಾಗಿದೆ.

ದೇಹವನ್ನು ಕೃತಕ ವಿಧಾನಗಳಿಂದ ಅಲಂಕರಿಸುವುದು ಬ್ರಹ್ಮಚರ್ಯಕ್ಕೆ ಆತಂಕಕಾರಿ. ಆದುದರಿಂದ ಬ್ರಹ್ಮಚಾರಿ, ಅತ್ಯಂತ ಸರಳವಾದುದರ ಹೊರತು ಇತರ ವಸ್ತುಗಳನ್ನು ಬಿಡುತ್ತಾನೆ. ಆದುದರಿಂದ ಸ್ವದೇಶಿವ್ರತದಲ್ಲಿ, ಸರಳವಾದ ಮತ್ತು ಸರಳವಾಗಿ ಮಾಡಿದ ವಸ್ತುಗಳದೇ ಉಪಯೋಗ. ಉಡುಪಿನಲ್ಲಿ ಪರದೇಶಿ ನಮೂನೆ, ಗುಂಡಿಗಳು ಇವೂ ಸಹ ನಿಷಿದ್ಧ. ಹೀಗೆ ಬಾಳಿನಲ್ಲಿ ಎಲ್ಲ ಅಂಶಗಳಿಗೂ ಸ್ವದೇಶಿ ವ್ರತವನ್ನು ಅನ್ವಯಿಸಬೇಕು.

"ಭಯದಿಂದ ಕಾರ್ಯಮಾಡುವವನು, ಅಹಿಂಸೆ ಅಥವ ಸತ್ಯದ ಮಾರ್ಗವನ್ನು ಅನುಸರಿಸುವುದು ಕಷ್ಟ" ಎಂದುಹೇಳಿದರು ಗಾಂಧೀಜಿ. ಆದುದರಿಂದ "ಮ್ಯಾನೇಜರು ಗಳು (ವ್ಯವಸ್ಥಾಪಕರು) ರಾಜರ, ಜನರ, ಜಾತಿಯವರ, ಕುಟುಂಬದವರ, ಕಳ್ಳರ. ಹುಲಿ ಯಂತ ಕ್ರೂರಪ್ರಾಣಿಗಳ ಕೊನೆಗೆ ಮರಣದ ಭಯವನ್ನೂ ಕೂಡ ತೊರೆಯಲು ಪ್ರಯತ್ನಿಸಬೇಕು. ನಿಜವಾಗಿ ಭಯರಹಿತನಾದ ಮನುಷ್ಯ, ಸತ್ಯದಶಕ್ತಿ ಅಥವಾ ಆತ್ಮದ ಶಕ್ತಿಯಿಂದ ಇತರರನ್ನು ಎದುರಿಸುವನು.

ಆಶ್ರಮದಲ್ಲಿ ಬೋಧನೆ, ಭಾರತೀಯ ಭಾಷೆಯೊಂದರಲ್ಲಿ ಕೊಡಲ್ಪಡುತ್ತಿದ್ದಿತು. ಗಾಂಧಿ ಹೀಗೆ ಪ್ರಕಟಿಸಿದರು "ಯಾವ ರಾಷ್ಟ್ರವೂ ತನ್ನ ಭಾಷೆಗಳನ್ನು ಬಹಿಷ್ಕರಿಸಿ ನಿಜವಾದ ಪ್ರಗತಿಯನ್ನು ಸಾಧಿಸಲಾರದೆಂಬುದು ವ್ಯವಸ್ಥಾಪಕರ ನಂಬಿಕೆ. ಆದುದರಿಂದ ಅವರು ತಮ್ಮ ತಮ್ಮ ಪ್ರಾಂತ ಭಾಷೆಯಲ್ಲಿ ತರಪೇತಿ ಪಡೆಯುವರು. ಮತ್ತು ಅವರು ಭಾರತದ ಎಲ್ಲ ಭಾಗದ ದೇಶ ಬಾಂಧವರೊಂದಿಗೂ, ಅಣ್ಣತಮ್ಮಂದಿರಂತೆ ಜೀವಿಸಲು ಬಯಸುವವರರಾದುದರಿಂದ ಭಾರತದ ಮುಖ್ಯಭಾಷೆಯನ್ನು ಕಲಿಯುವರು. ಮತ್ತು ಸಂಸ್ಕೃತವು ಭಾರತದ ಭಾಷೆಗಳಿಗೆಲ್ಲ ಬೀಗದ ಕೈ ಆದುದರಿಂದ ಅವರು ಅದನ್ನೂ ಕಲಿಯುವರು.

ದೇಹಶ್ರಮದ ಕೆಲಸವನ್ನು ಮಾಡುವುದು ಕೀಳು ಎಂಬ ಮನೋಭಾವವಿದ್ದ ದೇಶದಲ್ಲಿ, ಗಾಂಧಿ ಉಪಾಧ್ಯಾಯರಿಗೆ ಮೊದಲು ಬೋಧಿಸಲು ಪ್ರಾರಂಭಿಸಿದರು. "ಪ್ರಕೃತಿಯು ಮಾನವ ಜನಾಂಗದ ಮೇಲೆ ಹೊರಿಸುವ ಕರ್ತವ್ಯ ದೈಹಿಕ ಪರಿಶ್ರಮ ಎಂದು ವ್ಯವಸ್ಥಾಪಕರು ನಂಬುತ್ತಾರೆ. ಆದುದರಿಂದ ನಮ್ಮ ಜೀವಿತಕ್ಕಾಗಿ ನಾವು ದೇಹಶ್ರಮವನ್ನು ಅಂಗೀಕರಿಸಬೇಕು. ನಮ್ಮ ಆತ್ಮದ ಮತ್ತು ಬುದ್ಧಿಯ ಬಲವನ್ನು ಜನತೆಯ ಒಳಿತಿಗಾಗಿ ವಿನಿಯೋಗಿಸಬೇಕು. ಮತ್ತು ಜಗತ್ತಿನ ಜನಸಂಖ್ಯೆಯ ಬಹು ಭಾಗ, ವ್ಯವಸಾಯದಿಂದ ಜೀವಿಸುವುದರಿಂದ, ವ್ಯವಸ್ಥಾಪಕರು ತಮ್ಮ ಕಾಲದಲ್ಲಿ ಸ್ವಲ್ಪ ಭಾಗವನ್ನು ಭೂಮಿಯ ವ್ಯವಸಾಯಕ್ಕೆ ಉಪಯೋಗಿಸಬೇಕು. ಅದು ಸಾಧ್ಯ ವಾಗದಿದ್ದರೆ, ಮತ್ತಾವುದಾದರೂ ದೇಹಶ್ರಮದ ಕಾರ್ಯವನ್ನು ಮಾಡಬೇಕು. ನಮ್ಮ ದೇಶದಲ್ಲಿ ಬಡತನಕ್ಕೆ ಮುಖ್ಯ ಕಾರಣ, ನಮ್ಮ ಕೈಮಗ್ಗಗಳು ಮತ್ತು ರಾಟೆಗಳು ಪೂರ್ಣವಾಗಿ ಅದೃಶ್ಯವಾದುದೇ ಆಗಿದೆ. ಆದುದರಿಂದ ವ್ಯವಸ್ಥಾಪಕರು ತಾವೇ ಕೈ ಮಗ್ಗದಲ್ಲಿ ಕೆಲಸ ಮಾಡಿ ಈ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಲು ಸರ್ವ ಪ್ರಯತ್ನವನ್ನು ಮಾಡುವರು".

ಆಶ್ರಮದ ವ್ರತಗಳನ್ನೆಲ್ಲ ಅಂಗೀಕರಿಸಿದ ಹೊರತು ಯಾರಿಗೂ ವ್ಯವಸ್ಥಾಪಕ ಸ್ಥಾನವನ್ನು ಹೊಂದಲು ಅರ್ಹತೆಯಿರಲಿಲ್ಲ. ಉಮೇದುವಾರರೂ ಸಹ ಆಶ್ರಮ ನಿಯಮಗಳನ್ನು ಅನುಸರಿಸಬೇಕೆಂಬ ನಿರೀಕ್ಷಣೆಯಿದ್ದಿತು. ಆದರೆ ಅವರು ವ್ರತಗಳನ್ನು ಅಂಗೀಕರಿಸಬೇಕಾದುದಿರಲಿಲ್ಲ. ನಾಲ್ಕು ವರುಷಗಳಿಗೆ ಮೇಲುಪಟ್ಟ ಹುಡುಗರೂ ಹುಡುಗಿಯರೂ ಆಶ್ರಮಕ್ಕೆ ಸೇರಿಸಲ್ಪಡುತ್ತಿದ್ದರು. ಆದರೆ ಪೋಷಕರು ಅವರ ಮೇಲಿನ ಹತೋಟಿಯನ್ನು ಪೂರ್ಣವಾಗಿ ಬಿಟ್ಟುಕೊಡಬೇಕಾಗಿದ್ದಿತು. ವಿದ್ಯಾರ್ಥಿಗಳಿಗೆ ವ್ರತಗಳನ್ನು ಪಾಲಿಸಲು ಬೋಧಿಸುತ್ತಿದ್ದರು. ಅವರಿಗೆ ಧರ್ಮ ವ್ಯವಸಾಯ ಕೈಮಗ್ಗದನೆಯ್ಗೆ, ಸಾಹಿತ್ಯ—ಇವುಗಳ ಮುಖ್ಯಾಂಶಗಳನ್ನು ಕಲಿಸುತ್ತಿದ್ದರು. ಅಕ್ಷರ ಮತ್ತು ಸಾಹಿತ್ಯ ಜ್ಞಾನವನ್ನು ಪ್ರಾದೇಶಿಕ ಭಾಷೆಯಲ್ಲಿ ಬೋಧಿಸುತ್ತಿದ್ದರು. ಪಠ್ಯ ವಿಷಯಗಳಲ್ಲಿ ಇತಿಹಾಸ ಭೂಗೋಳ ಗಣಿತ ಅರ್ಥಶಾಸ್ತ್ರ ಇವು ಸೇರಿದ್ದವು. ಸಂಸ್ಕೃತ ಹಿಂದಿ ಮತ್ತು ಒಂದಾದರೂ ದ್ರಾವಿಡ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕಾಗಿತ್ತು. ಉರ್ದು, ಬಂಗಾಳಿ ತಮಿಳು ತೆಲುಗು ಲಿಪಿಗಳನ್ನು ಕಲಿಸುತ್ತಿದ್ದರು. ವಿದ್ಯಾಭ್ಯಾಸದ ಪೂರ್ಣ ಅವಧಿ ಹತ್ತು ವರುಷಗಳೆಂದು ಯೋಜಿಸಲಾಗಿತ್ತು. ಪ್ರಾರಂಭದಿಂದಲೂ "ನಾನು ಸ್ವತಂತ್ರನಾದ ಮೇಲೆ ಅಥವಾ ಆದಾಗ ಜೀವನಕ್ಕೆ ಏನು ಮಾಡಲಿ?" ಎಂಬ ಪ್ರಶ್ನೆಯನ್ನು ಕುರಿತು ಚಿಂತಿಸದಿರಲು ಸರ್ವಪ್ರಯತ್ನಗಳೂ ಮಾಡಲ್ಪಡುತ್ತಿದ್ದವು.

ಪ್ರಾಪ್ತ ವಯಸ್ಕನಾದ ಮೇಲೆ, ವಿದ್ಯಾರ್ಥಿ ಆಶ್ರಮ ವ್ರತವನ್ನು ಅಂಗೀಕರಿಸಲು ಇಲ್ಲವೆ ಆಶ್ರಮದಿಂದ ಬಿಟ್ಟು ಹೋಗಲು ಅವಕಾಶವಿದ್ದಿತು. ಶಿಕ್ಷಣ ಮುಗಿಯುವ ವರೆಗೆ ವಿದ್ಯಾರ್ಥಿಗಳಿಗೆ ತಮ್ಮ ಪೋಷಕರನ್ನು ಹೋಗಿ ನೋಡಲು ಅವಕಾಶವಿರಲಿಲ್ಲ.

ಎಲ್ಲರೂ ಸರಳವಾದ ಸಮವಸ್ತ್ರದ ರೀತಿಯ ಉಡುಪನ್ನು ಧರಿಸುತ್ತಿದ್ದರು. ಊಟ ದಿನಕ್ಕೆ ಮೂರು ಸಲ. ಅದೂ ತೀರ ಸರಳ, ಸಾದಾ. ಮೆಣಸಿನಕಾಯಿ ಪೂರ್ಣ ವರ್ಜ್ಯ. ಹಾಲು ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳು "ಕ್ಷಯ ರೋಗಕ್ಕೆ ಕಾರಣವಾದುದರಿಂದಲೂ ಮಾಂಸದಂತೆ ಉದ್ರೇಕಕಾರಿಯಾದುದರಿಂದಲೂ" ಅವನ್ನು ತೀರ ಅಪರೂಪವಾಗಿ ಉಪಯೋಗಿಸುತ್ತಿದ್ದರು. ಆದರೆ ಒಣಗಿದ ಮತ್ತು ಹೊಸ ಹಸಿಯ ಹಣ್ಣುಗಳನ್ನು ಬೇಕಾದಂತೆ ಕೊಡುತ್ತಿದ್ದರು. ಆಹಾರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರವನ್ನು ಪೂರ್ಣವಾಗಿ ಬೋಧಿಸಿ ಅಭ್ಯಾಸ ಮಾಡಿಸುತ್ತಿದ್ದರು. ಆಶ್ರಮದಲ್ಲಿ ಸೂಟಿಯ ಕಾಲವಾಗಲೀ ರಜಾದಿನಗಳಾಗಲೀ ಇರಲಿಲ್ಲ. ಆದರೆ ವಾರದಲ್ಲಿ ಎರಡು ದಿನ ನಿಯಮಿತ ಕಾರ್ಯಕ್ರಮದಲ್ಲಿ ಬದಲಾವಣೆ ಇರುತ್ತಿದ್ದಿತು. ವಿದ್ಯಾರ್ಥಿಗಳು ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಳ್ಳಲು ಅವಕಾಶವಿದ್ದಿತು. ವರುಷಕ್ಕೆ ಮೂರು ತಿಂಗಳಕಾಲ. ದೃಢಕಾಯರಾಗಿದ್ದವರಿಗೆ ಪ್ರವಾಸ (ಬಹುಪಾಲು ಕಾಲು ನಡಿಗೆ) ಮಾಡಲು ಅನುಮತಿ ಸಿಕ್ಕುತ್ತಿತ್ತು

ವಿದ್ಯಾರ್ಥಿಗಳನ್ನು,ಅವರ ನೈತಿಕ ಮತ್ತು ಬೌದ್ಧಿಕ ಪರಿಸ್ಥಿತಿಯನ್ನು ಪೂರ್ಣವಾಗಿ

ಪರೀಕ್ಷೆ ಮಾಡಿಸಿದ ಹೊರತು ಆಶ್ರಮಕ್ಕೆ ಸೇರಿಸುತ್ತಿರಲಿಲ್ಲ. ವಿದ್ಯಾರ್ಥಿಗಳಿಗಾಗಲೀ ಉಮೇದುವಾರರಿಗಾಗಲೀ ಯಾವ ಶುಲ್ಕವನ್ನೂ ವಿಧಿಸುತ್ತಿರಲಿಲ್ಲ. ಆದರೆ ಪೋಷಕರು, ಸದಸ್ಯರು ಆಶ್ರಮದ ವೆಚ್ಚಕ್ಕೆ ಹಣ ಸಹಾಯ ಮಾಡುವರೆಂಬ ನಿರೀಕ್ಷಣೆ ಇದ್ದಿತು. ಸಹಾನುಭೂತಿಯುಳ್ಳವರು ಚಂದಾಹಣವನ್ನು ಕೊಟ್ಟು, ಆಶ್ರಮ ನಡೆಯಲು ಸಹಾಯ ಮಾಡುತ್ತಿದ್ದರು.

ಪ್ರೇಕ್ಷಕರಿಗೆ ಆಶ್ರಮದೊಳಕ್ಕೆ ಪ್ರವೇಶವಿದ್ದಿತು. ಆದರೆ ಆಶ್ರಮದಲ್ಲಿರುವ ಕಾಲದಲ್ಲಿ ಆಶ್ರಮ ನಿಯಮಗಳನ್ನು ಪಾಲಿಸಬೇಕೆಂದು ಅವರನ್ನು ಕೋರಲಾಗುತ್ತಿತ್ತು. ವಿದ್ಯಾರ್ಥಿಗಳ ಪೋಷಕರಿಗೆ ಸ್ವಾಗತವಿದ್ದಿತು. ಆದರೆ ಅವರು ಊಟದ ತಟ್ಟೆಬಟ್ಟಲುಗಳನ್ನೂ ತಮ್ಮ ಹಾಸಿಗೆಯನ್ನೂ ತರಬೇಕಾಗಿದ್ದಿತು.

ಆಶ್ರಮ, ಸ್ಥಾಪನೆಯಾಗಿ ಇನ್ನೂ ಕೆಲವೇ ತಿಂಗಳುಗಳಾಗಿದ್ದಾಗ, ಗಾಂಧೀಜಿಗೆ ಅನಿರೀಕ್ಷಿತ ಪರೀಕ್ಷಾ ಸಮಯ ಒದಗಿತು. ಅಮೃತಲಾಲ್ ಥಕ್ಕರ್, ಗಾಂಧೀಜಿಗೆ ಒಂದು ಬಡ, ಪ್ರಾಮಾಣಿಕ, ಅಸ್ಪೃಶ್ಯ ಕುಟುಂಬ ಆಶ್ರಮವನ್ನು ಸೇರಲು ಬಯಸುತ್ತದೆಂದು ಬರೆದರು. ಗಾಂಧೀ, ತಮ್ಮ ಸಹಕೆಲಸಗಾರರ ಸಲಹೆಯನ್ನು ಪಡೆದು ಹರಿಜನ ಕುಟುಂಬವನ್ನು ಅಂಗೀಕರಿಸುವುದೆಂದೂ, ಕುಟುಂಬದ ಎಲ್ಲ ಸದಸ್ಯರೂ ಆಶ್ರಮದ ನಿಯಮಗಳಿಗೆ ಬದ್ಧರಾಗಿರಬೇಕೆಂದೂ ಪ್ರತ್ಯುತ್ತರವಿತ್ತರು. ಆ ಸಂಸಾರದಲ್ಲಿ ದುದಾಭಾಯ್ (ಆತ ಬೊಂಬಾಯಿನಲ್ಲಿ ಉಪಾಧ್ಯಾಯನಾಗಿದ್ದ) ಅವನ ಹೆಂಡತಿ ಧಾನಿ ಬೆನ್ ಮತ್ತು ಅವರ ಮಗಳು ಲಕ್ಷ್ಮಿ ಇದ್ದರು. ಅವರೆಲ್ಲ ಆಶ್ರಮ ನಿಯಮದಂತೆ ನಡೆಯಲು ಒಪ್ಪಿದುದರಿಂದ ಅವರನ್ನು ಸೇರಿಸಿಕೊಳ್ಳಲಾಯಿತು.

ಅವರ ಪ್ರವೇಶ, ಆಶ್ರಮದ ಸಹಾನುಭೂತಿಯುಳ್ಳವರಲ್ಲಿ ಕಳವಳವನ್ನುಂಟು ಮಾಡಿತು. ಭಾವಿಯ ನೀರಿನ ಉಪಯೋಗದ ವಿಷಯದಲ್ಲಿಯೇ ಮೊದಲನೆಯ ಕಷ್ಟ ಪ್ರಾರಂಭವಾಯಿತು.

ಭಾವಿಯಿಂದ ನೀರೆತ್ತಿ ಒದಗಿಸುತ್ತಿದ್ದ ಮನುಷ್ಯ, ಆಶ್ರಮದಲ್ಲಿದ್ದವರೆಲ್ಲ ಅಸ್ಪೃಶ್ಯರೇ ಎಂಬ ಭಾವನೆಯಿಂದ ವಕ್ರದೃಷ್ಟಿಯಿಂದ ನೋಡತೊಡಗಿದ. ಆಶ್ರಮವಾಸಿಗಳ ಬಕೆಟ್ಟಿನ ನೀರಹನಿ, ತನ್ನನು ಅಶುದ್ಧಗೊಳಿಸುವುದೆಂದು ಅವನು ಆಕ್ಷೇಪಿಸಿದ. ಹೀಗೆ ಅವನು ಆಶ್ರಮವಾಸಿಗಳನ್ನು ಬೈಯುವುದಕ್ಕೂ ದುದಾಭಾಯ್‌ಯನ್ನು ವಿರೋಧಿಸುವುದಕ್ಕೂ ಪ್ರಾರಂಭಿಸಿದ.

ಗಾಂಧೀಜಿ, ಬಹಳ ಕಷ್ಟಕ್ಕೆ ಸಿಕ್ಕಿಕೊಂಡರು. ಅವರು, ಏನಾದರೂ ಸರಿಯೆ, ಬೈಗಳವನ್ನು ಶಾಂತವಾಗಿ ಸಹಿಸಿಕೊಂಡಿರಬೇಕೆಂದು ಎಲ್ಲ ಆಶ್ರಮವಾಸಿಗಳಿಗೂ ಹೇಳಿದರು. ಇಲ್ಲಿ ಸತ್ಯಾಗ್ರಹಕ್ಕೆ ಜಯವಾಯಿತು. ಆ ಮನುಷ್ಯ ನಾಚಿ ಅವರಿಗೆ ಕಿರುಕುಳ ಕೊಡುವುದನ್ನು ಬಿಟ್ಟು ಸುಮ್ಮನಾದ. ಆದರೆ ಆಶ್ರಮಕ್ಕೆ ಬರುತ್ತಿದ್ದ ಹಣ ಸಹಾಯವೆಲ್ಲ ನಿಂತು ಹೋಯಿತು. ಸಾಮಾಜಿಕ ಬಹಿಷ್ಕಾರದ ಸುದ್ದಿಯೂ ಹೊರಟಿತು. ಆದರೆ ಗಾಂಧೀ ಅಹಮ್ಮದಾಬಾದ್‌ನಲ್ಲಿಯೇ ನಿಲ್ಲುವುದೆಂದು ದೃಢ ನಿಶ್ಚಯ ಮಾಡಿ

ಕೊಂಡಿದ್ದರು. ಅವಶ್ಯಕವಾದರೆ ಅಸ್ಪೃಶ್ಯರ ಕೇರಿಗೇ ಆಶ್ರಮವನ್ನು ಸಾಗಿಸಿಕೊಂಡು ಹೋಗಿ ದೇಹಶ್ರಮದಿಂದಲೇ ಜೀವಿಸಲು ನಿಶ್ಚಯಿಸಿದರು.

ಸತ್ಯಾಗ್ರಹ ಆಶ್ರಮದಲ್ಲಿದ್ದ ಹಣವೆಲ್ಲ ಬೇಗ ಖರ್ಚಾಗಿ ಹೋಯಿತು. ಒಂದು ದಿನ ಒಬ್ಬ ಧನಿಕ ಗೃಹಸ್ಥರು, ಆಶ್ರಮದ ಮುಂದೆ ತಮ್ಮ ಕಾರನ್ನು ನಿಲ್ಲಿಸಿ ಸ್ವಲ್ಪ ಹಣವನ್ನು ಕೊಡಲು ಬಯಸಿದುದು ಗಾಂಧೀಜಿಗೆ ಅತ್ಯಂತ ಆಶ್ಚರ್ಯವಾಯಿತು. ಗಾಂಧೀಜಿ ಸಂತೋಷದಿಂದ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಮರುದಿನ ಆ ಅಪರಿಚಿತರು ಹದಿಮೂರು ಸಾವಿರ ರೂಪಾಯಿಗಳನ್ನು ತಂದು ಗಾಂಧೀಜಿಯ ಕೈಗೆ ಕೊಟ್ಟರು. ಈ ಅಪರಿಚಿತ ದಾನಿ ಗಿರಣಿಮಾಲಿಕ ಅಂಬಾಲಾಲ್ ಸಾರಾಭಾಯ್.

ಒಂದು ವರ್ಷದ ಮಟ್ಟಿಗಾದರೂ ಹಣದ ತೊಂದರೆ ತಪ್ಪಿತು. ಅಸ್ಪೃಶ್ಯ ಕುಟುಂಬವನ್ನು ಸೇರಿಸಿಕೊಂಡುದರಿಂದ ಕೆಲವು ಆಂತರಂಗಿಕ ಅಸಮಾಧಾನಗಳೂ ಉಂಟಾದವು. ಕೊನೆಯಲ್ಲಿ ಗಾಂಧೀಜಿಯೇ ಗೆದ್ದರು. ಕಸ್ತೂರಿ ಬಾ, ಮಗನ್‌ಲಾಲ್ ಗಾಂಧೀ ಇವರಿಗೆ ಅಸ್ಪೃಶ್ಯ ಕುಟುಂಬನೊಂದಿಗಿರಲು ಕೆಲವು ಆಕ್ಷೇಪಣೆಗಳಿದ್ದವು. ಒಂದು ಸಲ ಪರಿಸ್ಥಿತಿ ಎಲ್ಲಿಯ ವರೆಗೆ ಹೋಯಿತೆಂದರೆ ಕಸ್ತೂರಿಬಾ, ಆಶ್ರಮದ ನಿಯಮಗಳನ್ನು ಪಾಲಿಸಬೇಕು, ಇಲ್ಲವಾದರೆ ಆಶ್ರಮವನ್ನೇ ಬಿಡಬೇಕು ಎಂಬ ಘಟ್ಟ ಬಂದಿತು. ಆದರೆ ಗಂಡನ ಅನುಯಾಯಿಯಾದ ಸ್ತ್ರೀಗೆ ಯಾವ ಪಾಪವೂ ಉಂಟಾಗುವುದಿಲ್ಲ ಎಂಬ ವಾದ ಅವಳ ಮನಸ್ಸಿಗೆ ಹಿಡಿದು ಅವಳು ಶಾಂತಳಾದಳು. ಮಗನ್‌ಲಾಲ್‌ನು ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಾಗಿ ಚಿಂತಿಸಲು ಮತ್ತು ನೆಯ್ಗೆಯನ್ನು ಚೆನ್ನಾಗಿ ಕಲಿಯಲು ಮದ್ರಾಸಿಗೆ ಹೋದನು.

ಸತ್ಯಾಗ್ರಹ ಆಶ್ರಮದಲ್ಲಿ ಕೈಮಗ್ಗದ ಇತಿಹಾಸದ ಕಥೆಯನ್ನು ಮಗನ್‌ಲಾಲ್ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

"ಪ್ರಾರಂಭದ ಪ್ರಯೋಗ, ಸತ್ಯಾಗ್ರಹ ಆಶ್ರಮದಲ್ಲಿ ೧೯೧೫ರಲ್ಲಿ ಪ್ರಾರಂಭವಾಯಿತು. ಸುಮಾರು ಹತ್ತು ತಿಂಗಳ ಕಾಲ ನಾವು ಬರಿಯ ಖಾದಿಯನ್ನೇ ಧರಿಸುತ್ತಿದ್ದೆವು. ಅನಂತರ ಹೊರಗಡೆ ಹೋಗಿ ನೇಯ್ಗೆಯ ಅನುಭವವನ್ನು ಪಡೆದು ಬಂದವರು ಹಾರುವ ಲಾಳಿಯನ್ನು ಸ್ಥಾಪಿಸಿ ಹೆಚ್ಚು ಅಗಲವಾದ ಮತ್ತು ನವಿರಾದ ಬಟ್ಟೆಗಳನ್ನು, ಮದರಾಸು ಮಾದರಿಯ ಮಗ್ಗಗಳಲ್ಲಿ ನೇಯತೊಡಗಿದರು. ನೂಲನ್ನು ಊಕೆ ಮಾಡುವುದನ್ನೂ ಮದರಾಸು ಮಾದರಿಯಲ್ಲಿಯೇ ಮಾಡತೊಡಗಿದರು. ಆದರೆ ಅದೆಲ್ಲ ಕಲಿಕೆಯವರ ಕಾರ್ಯವಾಗಿತ್ತು. ಹುಟ್ಟು ಕಸಬುದಾರರ ಮಟ್ಟಕ್ಕೆ ಬರಲಿಲ್ಲ. ನೇಯಿಗೆಯಲ್ಲಿ ಕಷ್ಟಗಳು ನಮಗೆ ತೋರತೊಡಗಿದವು. ಸ್ತ್ರೀಯರಿಗೆ ಅನುಕೂಲವಾಗುವ ಬಟ್ಟೆಯನ್ನು ನಾವು ತಯಾರಿಸಿರಲಿಲ್ಲ. ಆಶ್ರಮ ಭಗಿನಿಯೊಬ್ಬಳಿಗೆ ವಸ್ತ್ರ ಆವಶ್ಯಕವಾಗಿತ್ತು. ಅಂಗಡಿಗಳಲ್ಲಿ ಕೈಮಗ್ಗದ ಸೀರೆ ಸುಲಭವಾಗಿ ಸಿಕ್ಕುತ್ತಿರಲಿಲ್ಲ. ಗಿರಣಿಯಲ್ಲಿ ತಯಾರಾದ ಸೀರೆಯನ್ನು ಧರಿಸಲು ಅನುಮತಿ ದೊರೆಯಬಹುದೆಂದು ಅವಳು ನಿರೀಕ್ಷಿಸಿದ್ದಳು. ಆದರೆ ಅವಳಿಗೆ ನಿರಾಸೆಯಾಯಿತು. "ನಿಮಗೆ ಬೇಕಾದುದನ್ನು ನೀವು ನೇಯಿದುಕೊಳ್ಳಿ ಇಲ್ಲದಿದ್ದರೆ ಹಾಗೇ

ಇರಿ". ಅವಳ ಗಂಡನಿಗೂ ಕೋಪ ಬಂದಿತು. ಆದರೆ ಆ ನಿರಾಸೆ ಮತ್ತು ನೋವು ತಾತ್ಕಾಲಿಕ ಮಾತ್ರವಾಗಿತ್ತು. ಒಳ್ಳೆಯದಾದ ಆ ಬೈಗಳದಿಂದ, ನಿರೀಕ್ಷಿಸಿದ್ದ ಪರಿಣಾಮ ವುಂಟಾಯಿತು. ಮರುದಿನ ಗಂಡನು ನಗರಕ್ಕೆ ಹೋಗಿ ಊಕೆ ಮಾಡುವ ಆವಶ್ಯಕತೆ ಯಿಲ್ಲದ ಹುರಿ ಮಾಡಿದ ನೂಲನ್ನು ತಂದು, ಐವತ್ತು ಅಂಗುಲ ಅಗಲದ ಬಟ್ಟೆಯನ್ನು ನೇಯ ತೊಡಗಿದನು. ಪ್ರಯೋಗ ಜಯಶಾಲಿಯಾಯಿತು. ಉದ್ಯೋಗಕ್ಕೆ ಉತ್ತೇಜನ ದೊರೆಯಿತು. ೧೯೧೬ನೆ ಇಸವಿಯ ಕೊನೆ ವೇಳೆಗೆ ಆಶ್ರಮದಲ್ಲಿ ಮೂರು ಕೈಮಗ್ಗ ಗಳೂ ಮೂರು ಹಾರುವ ಲಾಳಿಮಗ್ಗಗಳೂ ಕೆಲಸ ಮಾಡುತ್ತಿದ್ದವು. ಯುಗಾದಿ ಹಬ್ಬದಂದು ನಾವು ಹಿಂದಿನ ವರುಷ ಮಾಡಿದ ಕಾರ್ಯಗಳ ಲೆಕ್ಕಾಚಾರವನ್ನು ಪರಾಮರ್ಶಿ ಸಿದೆವು. ನಾವು ಮಾಡುತ್ತಿದ್ದ ಕಾರ್ಯ, ಬರಿಯ ನೇಯ್ಗೆ ಮಾತ್ರ. ಆದರೆ ಹದಿನೈದು ತಿಂಗಳಿನನಂತರ ಕಾರ್ಯ ಮೆಚ್ಚುವಂತಹುದಾಗಿರಲಿಲ್ಲ. ಆದುದರಿಂದ ಹೊಸವರುಷ ಮುಗಿ ಯುವುದರೊಳಗಾಗಿ, ಪ್ರತಿಯೊಬ್ಬರೂ ಬಟ್ಟೆಯನ್ನು ತಾವೇ ನೇಯುವುದನ್ನು ಕಲಿತು, ತಮಗೆ ಆವಶ್ಯಕವಾದಷ್ಟನ್ನು ನೇಯಿದುಕೊಳ್ಳಬೇಕೆಂದು ತೀರ್ಮಾನವಾಯಿತು. ಎಲ್ಲರೂ ಆ ಕಾರ್ಯಕ್ಕೆ ತಮ್ಮ ಶಕ್ತಿಯನ್ನು ವಿನಿಯೋಗಿಸಿದರು. ಇನ್ನು ನಾಲ್ಕು ತಿಂಗಳಿಗೊಳಗಾಗಿ ಇನ್ನೂ ನಾಲ್ಕು ಹಾರುವಲಾಳಿ ಮಗ್ಗಗಳು ಸ್ಥಾಪಿತವಾದುವು. ಹೀಗೆ ಆ ಕಾಲದಲ್ಲಿ ಹತ್ತು ಮಗ್ಗಗಳು ಕೆಲಸ ಮಾಡುತ್ತಿದ್ದವು. ನಾವು ನಿತ್ಯ ಎಂಟು ಗಂಟೆ, ಮಗ್ಗದಲ್ಲಿ ಕೆಲಸ ಮಾಡುತ್ತಿದ್ದೆವು. ಗಾಂಧೀಜಿ ನಿತ್ಯ ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ಮಗ್ಗದಲ್ಲಿ ಕೆಲಸಮಾಡುತ್ತಿದ್ದರು. ಮೂರು ಹಾರುವ ಲಾಳಿಮಗ್ಗಗಳು ನಲವತ್ತೈದ ರಿಂದ ಐವತ್ತು ಅಂಗುಲ ಅಗಲದ ವಸ್ತ್ರಗಳನ್ನು ಮಾಡತೊಡಗಿದವು. ಪ್ರತಿಮಗ್ಗವೂ ದಿನಕ್ಕೆ ಮೂರರಿಂದ ಐದು ಗಜ ಬಟ್ಟೆ ಮಾಡುತ್ತಿದ್ದವು. ಕಡಿಮೆ ಅಗಲದ ಬಟ್ಟೆಗಳನ್ನು ಗಂಟೆಗೆ ಒಂದು ಗಜದಂತೆ ಮಾಡುತ್ತಿದ್ದೆವು. ಅಂದರೆ, ನಮ್ಮಲ್ಲಿ ಅನೇಕರು. ದಿನಕ್ಕೆ, ಅಂಗಡಿ ಬೀದಿಯಲ್ಲಿ ಎಂಟರಿಂದ ಹನ್ನೆರಡಾಣೆ ಬೆಲೆಬಾಳುವ ಕೂಲಿಯನ್ನು ಮಾಡು ತ್ತಿದ್ದೆವು".

ಹೀಗೆ ಕೈಮಗ್ಗದ ನೆಯ್ಗೆ ಪ್ರಯೋಗ ಹೆಚ್ಚು ಹೆಚ್ಚಾಗಿ ಮುಂದುವರಿಯುತ್ತಿರಲು, ಕೈರಾಟೆಯಲ್ಲಿ ನೂಲುವುದು ಪ್ರಾರಂಭವಾಯಿತು. ಖಾದಿಯ ಜನನ. ಗಾಂಧೀಜಿ ಯಿಂದ ಹೀಗೆ ಕಣ್ಣುಕಟ್ಟುವಂತೆ ವರ್ಣಿಸಲ್ಪಟ್ಟಿದೆ.

"ಖಾದಿ ಚಳುವಳಿಯ ಪ್ರಾರಂಭ, ಹೆಚ್ಚು ಹೆಚ್ಚಾಗಿ ನನ್ನ ಲಕ್ಷ್ಯವನ್ನೆಲ್ಲ ಆಕ್ರಮಿಸಿತ್ತು. ನಾನು ೧೯೦೯ರಲ್ಲಿ ಬರೆದ ಹಿಂದ್ ಸ್ವರಾಜ್ಯದಲ್ಲಿ, ಭಾರತದ ಬೆಳೆಯುತ್ತಿರುವ ದಾರಿದ್ರ್ಯಕ್ಕೆ ಕೈರಾಟೆ ಕೈಮಗ್ಗ ಸರ್ವೌಷಧವೆಂದು ವಿವರಿಸಿದಾಗ. ಅವುಗಳನ್ನು ನೋಡಿದ ಜ್ಞಾಪಕ ವಿಲ್ಲ. ಆ ಪುಸ್ತಕದಲ್ಲಿ ನಾನು ಭಾರತೀಯರ ಅತೀವ ದಾರಿದ್ರ್ಯವನ್ನು ಪರಿಹರಿಸಲು ಸಹಾಯಕವಾಗುವ ಎಲ್ಲ ವಿಷಯಗಳೂ ಅದೇ ಸಂದರ್ಭವಲ್ಲಿ ಸ್ವರಾಜ್ಯವನ್ನೂ ಸ್ಥಾಪಿಸುವುದಕ್ಕೂ ನೆರವಾಗುತ್ತವೆಂಬುದನ್ನು ಅಂಗೀಕರಿಸಿದ್ದೆ. ನಾನು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿದಾಗ ಸಹ (೧೯೧೫ರಲ್ಲಿ) ನಾನು ನೂಲುವ ರಾಟೆಯನ್ನು ಪ್ರತ್ಯಕ್ಷ

ವಾಗಿ ನೋಡಿರಲಿಲ್ಲ. ಸಾಬರಮತಿಯಲ್ಲಿ ಸತ್ಯಾಗ್ರಹ ಆಶ್ರಮ ಪ್ರಾರಂಭವಾದಾಗ ನಾವು ಅಲ್ಲಿ ಕೆಲವು ಕೈಮಗ್ಗಗಳನ್ನು ಪ್ರಾರಂಭಿಸಿದೆವು. ಅವನ್ನು ಮಾಡಿದ ಕೂಡಲೇ ನಾವು ಇನ್ನೊಂದು ಕಷ್ಟವನ್ನು ಎದುರಿಸಬೇಕಾಯಿತು. ನಾವೆಲ್ಲ ಉದ್ಯೋಗ ಅಥವಾ ವ್ಯಾಪಾರ ಕಸುಬಗಳಿಗೆ ಸೇರಿದವರಾಗಿದ್ದೆವು. ನಮ್ಮಲ್ಲಿ ಕುಶಲಕರ್ಮಿಗಳು ಯಾರೂ ಇರಲಿಲ್ಲ. ನಮಗೆ ಹೇಗೆ ನೇಯ ಬೇಕು ಎಂಬುದನ್ನು ಕಲಿಸಲು ಒಬ್ಬ ನೆಯ್ಗೆ ನಿಪುಣ ಬೇಕಾಗಿತ್ತು. ಕೊನೆಗೆ ಪಾಲನ್‌ಪ್ಪುರದಿಂದ ಒಬ್ಬ ದೊರಕಿದ. ಆದರೆ ಅವನು ನಮಗೆ ತನ್ನ ವಿದ್ಯೆವೆಲ್ಲ ಪೂರ್ಣವಾಗಿ ಹೇಳಿಕೊಡಲಿಲ್ಲ. ಮಗನ್‌ಲಾಲ್ ಸುಲಭವಾಗಿ ಹೆದರುವವನಲ್ಲ. ಅವನಿಗೆ ಸ್ವಾಭಾವಿಕವಾಗಿ ಯಂತ್ರಜ್ಞಾನವಿದ್ದುದರಿಂದ ಅವನು, ವಿದ್ಯೆಯಲ್ಲಿ ಜಾಗ್ರತೆ ನಿಪುಣನಾಗಿ. ಆಶ್ರಮದಲ್ಲಿ ಅತ್ಯಲ್ಪಕಾಲದಲ್ಲಿಯೇ ಅನೇಕ ನೇಯ್ಗೆಯವರನ್ನು ತರಪೇತು ಮಾಡಿದ.

"ನಮ್ಮ ಮುಂದೆ ಇಟ್ಟುಕೊಂಡಿದ್ದ ಗುರಿ ನಾವು ತಯಾರಿಸಿದ ವಸ್ತ್ರಗಳಿಂದಲೇ ನಮ್ಮ ಉಡುಪನ್ನು ಮಾಡಿಕೊಳ್ಳುವುದಾಗಿದ್ದಿತು. ಆದುದರಿಂದ ನಾವು ಭಾರತದ ಗಿರಣಿಗಳ ನೂಲಿನಿಂದ ತಯಾರಿಸಿದ ಗಿರಣಿಬಟ್ಟೆಗಳನ್ನು ಬಹಿಷ್ಕರಿಸಿದೆವು. ಈ ಪದ್ಧತಿಯ ಅಂಗೀಕಾರದಿಂದ ನಮಗೆ ಒಂದು ಹೊಸ ಪ್ರಪಂಚವೇ ಅನುಭವವಾಯಿತು. ಅದರಿಂದ ನಮಗೆ ನೆಯ್ಗೆಯವರೊಂದಿಗೆ ಪ್ರತ್ಯಕ್ಷ ಸಂಬಂಧವುಂಟಾಗಿ ಅವರ ಜೀವಕ್ರಮ, ಅವರು ತಯಾರಿಸುತ್ತಿದ್ದ ವಸ್ತ್ರಗಳ ಮೊತ್ತ, ಅವರಿಗೆ ನೂಲು ಸಿಕುವುದರಲ್ಲಿ ಆಗುತ್ತಿದ್ದ ಕಷ್ಟಗಳು, ಅವರಿಗೆ ಆಗುತ್ತಿದ್ದ ಮೋಸದ ಮಾರ್ಗಗಳು, ಅವರ ಎಂದೆಂದಿಗೂ ಬೆಳೆಯುತ್ತಿರುವ ಸಾಲ ಇವೆಲ್ಲ ತಿಳಿದವು. ನಮಗೆ ಬೇಕಾದ ಬಟ್ಟೆಗಳನ್ನು ನಾವು ತತ್‌ಕ್ಷಣ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆದುದರಿಂದ ಕಾಲ ಕಳೆಯುತ್ತಿದ್ದಿತು. ನನ್ನ ಆತುರ ಹೆಚ್ಚುತ್ತಿದ್ದಿತು. ನನ್ನನ್ನು ನೋಡಲು ಬಂದವರಿಗೆಲ್ಲ, ಅವರಿಗೆ ಕೈ ನೂಲಿನ ವಿಷಯ ಏನಾದರೂ ತಿಳಿದಿರಬಹುದೆಂದು ನನಗೆ ತೋರಿದರೆ ನಾನು ಆ ಕಲೆಗೆ ಸಂಬಂಧಪಟ್ಟ ಪ್ರಶ್ನೆಗಳ ಸುರಿಮಳೆಯನ್ನೇ ಹಾಕುತ್ತಿದ್ದೆ. ಸ್ತ್ರೀಯರಿಗೆ ಮಾತ್ರ ಅದು ಮೀಸಲಾಗಿತ್ತು. ದೇಶದ ಯಾವುದಾದರೂ ಮೂಲೆಯಲ್ಲಿ ಎಲ್ಲಿಯಾದರೂ ಒಬ್ಬ ನೂಲುವವಳು ಇನ್ನೂ ಉಳಿದಿದ್ದರೆ, ಸ್ತ್ರೀಯರು ಮಾತ್ರ ಪತ್ತೆ ಮಾಡಬಲ್ಲವರಾಗಿದ್ದರು.

"೧೯೧೭ರಲ್ಲಿ ನನ್ನ ಗುಜರಾತಿ ಮಿತ್ರರು, ಶಿಕ್ಷಣ ಸಮ್ಮೇಳನದಲ್ಲಿ ಅಧ್ಯಕ್ಷನಾಗಲು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ನಾನು ಆ ಅಸಾಧಾರಣ ಮಹಿಳೆಯಾದ ಗಂಗಾಬೆನ್ ಮಜುಂದಾರಳನ್ನು ಕಂಡೆ. ಅವಳು ವಿಧವೆಯಾಗಿದ್ದಳು. ಆದರೆ ಅವಳ ಚಟುವಟಿಕೆಗಳಿಗೆ ಕೊನೆಯೇ ಇರಲಿಲ್ಲ. ಅವಳ ವಿದ್ಯೆ–ಆ ಮಾತಿಗೆ ಇರುವ ಅರ್ಥದಲ್ಲಿ–ಹೆಚ್ಚಾಗಿರಲಿಲ್ಲ. ಆದರೆ ಧೈರ್ಯ ವಿವೇಕಗಳಲ್ಲಿ ಅವಳು ವಿದ್ಯಾವತಿಯರಾದ ನಮ್ಮ ಸ್ತ್ರೀ ಸಮುದಾಯವನ್ನು ಸಾಧಾರಣವಾಗಿಯೇ ಮೀರಿದ್ದಳು. ಅವಳು ನಿರ್ಭಯವಾಗಿ ಎಲ್ಲೆಡೆಯೂ ಸಂಚರಿಸಿ ದೀನದಲಿತರ ಸೇವೆ ಮಾಡುತ್ತಿದ್ದಳು. ಅವಳಿಗೆ ಸ್ವಂತ

ಹಣಕಾಸು ಇತ್ತು. ಅವಳ ಅವಶ್ಯಕತೆಗಳೂ ಕಡಿಮೆಯಾಗಿದ್ದವು. ಅವಳು ಕಟ್ಟು ಮಸ್ತಾದ ಆಳಾಗಿದ್ದು ಎಲ್ಲೆಡೆಯೂ ಒಂಟಿಯಾಗಿಯೇ ಹೋಗುತ್ತಿದ್ದಳು. ಅವಳು ಸರಾಗವಾಗಿ ಕುದುರೆ ಸವಾರಿ, ಮಾಡುತ್ತಿದ್ದಳು. ಗೋಧ್ರ ಸಮ್ಮೇಳನದಲ್ಲಿ ನನಗೆ ಅವಳು ಹೆಚ್ಚು ಆತ್ಮೀಯಳಾಗಿ ಪರಿಚಿತಳಾದಳು. ನಾನು ಚರಕದ ವಿಷಯದಲ್ಲಿ ನನ್ನ ಕೊರಗನ್ನು ಅವಳ ಮುಂದೆ ತೋಡಿಕೊಂಡೆ. ಆಕೆ ತಾನು ರಾಟೆಗಾಗಿ ಶ್ರದ್ಧೆಯಿಂದ ಅವಿಚ್ಛಿನ್ನ ಅನ್ವೇಷಣೆ ನಡೆಸುವುದಾಗಿ ವಾಗ್ದಾನ ಮಾಡಿದಳು.

"ಕೊನೆಗೆ, ಗುಜರಾತಿನಲ್ಲಿ ಸರ್ವತ್ರ ತಿರುಗಾಡಿ ಗಂಗಾಬೆಹನ್ ಬರೋಡರಾಜ್ಯದ ವಿಜಾಪುರ್‌ನಲ್ಲಿ ನೂಲುವ ರಾಟೆಯನ್ನು ಪತ್ತೆಹಚ್ಚಿದಳು. ಅಲ್ಲಿ ಅನೇಕರ ಬಳಿ ರಾಟೆ ಇದ್ದಿತು. ಆದರೆ ಅವನ್ನು ಅನುಪಯುಕ್ತ ಕಸವೆಂದು ಮೂಲೆಗೆ ಹಾಕಿದ್ದರು. ಅವರು ತಮಗೆ ನೂಲಿನ ಹಂಜಿಗಳನ್ನು ಕ್ರಮವಾಗಿ ಒದಗಿಸಿ, ನೂತ ನೂಲನ್ನು ಕೊಳ್ಳುವ ಏರ್ಪಾಟು ಮಾಡಿದರೆ, ನೂಲುವುದನ್ನು ಮತ್ತೆ ಆರಂಭಿಸುವುದಾಗಿ ಗಂಗಾಬೆಹನ್‌ಳಿಗೆ, ಹೇಳಿದರು. ಗಂಗಾಬೆನ್.ಈ ಸಂತೋಷ ಸಮಾಚಾರವನ್ನು ನನಗೆ ತಿಳಿಸಿದಳು. ಹಂಜಿಗಳನ್ನು ಒದಗಿಸಿ ಕೊಡುವುದು ಕಷ್ಟವಾದ ಕಾರ್ಯವಾಗಿ ಕಂಡಿತು. ಉಮರ್ ಸೊಹಾನಿಯವರಿಗೆ ಈ ವಿಷಯವನ್ನು ಹೇಳಿದಾಗ, ಅವರು ತತ್‌ಕ್ಷಣ, ತಮ್ಮ ಗಿರಣಿಯಿಂದ ಅವಶ್ಯಕ ವಾದಷ್ಟು ಹಂಜಿಗಳನ್ನು ಒದಗಿಸುವುದಾಗಿ ಹೇಳಿದರು. ನಾನು ಗಂಗಾಬೆನ್ನರಿಗೆ ಉಮರ್ ಸೊಬಾನಿಯಿಂದ ಬಂದ ಹಂಜಿಗಳನ್ನು ಕಳುಹಿಸಿದೆ. ನೂಲು ಬರುವುದಕ್ಕೆ ಪ್ರಾರಂಭಿಸಿತು. ಅದನ್ನು ಏನು ಮಾಡಬೇಕು ಎಂಬುದೇ ಕಷ್ಟವಾಗುವಷ್ಟು ವೇಗವಾಗಿ ನೂಲು ಬರತೊಡಗಿತು.

"ಹಂಜಿಯನ್ನು ಒಂದೇ ಸಮನಾಗಿ ಉಮರ್ ಸೋಬಾನಿಯಿಂದ ತರಿಸುವುದ ರಿಂದ ನನಗೆ ಮನಃಕ್ಲೇಶವುಂಟಾಯಿತು. ಮತ್ತು ಗಿರಣಿಯ ಹಂಜಿಗಳನ್ನು ಉಪ ಯೋಗಿಸುವುದು ನನಗೆ ಮೂಲತಃ ತಪ್ಪಾಗಿ ಕಂಡಿತು. ಆದುದರಿಂದ ನಾನು ಗಂಗಾ ಬೆನ್‌ಗೆ, ಹಂಜಿಯನ್ನು ತಯಾರಿಸುವ ಹತ್ತಿ ಎಕ್ಕುವವರನ್ನು ಕಂಡುಹಿಡಿಯಬೇಕೆಂದು ಹೇಳಿದೆ. ಆಕೆ ದೃಢ ವಿಶ್ವಾಸದಿಂದ ಕೆಲಸವನ್ನು ವಹಿಸಿಕೊಂಡು ಒಬ್ಬ ಹತ್ತಿ ಎಕ್ಕಿ ಹಂಜಿ ಮಾಡುವವನ್ನು ಗೊತ್ತುಮಾಡಿದಳು. ಅವನು ತಿಂಗಳಿಗೆ ಮುವತ್ತೈದು ರೂಪಾಯಿ ಮಜೂರಿ ಕೇಳಿದ. ಆಗ ನನಗೆ ಎಷ್ಟು ಹಣವೂ ಹೆಚ್ಚಾಗಿ ತೋರಲಿಲ್ಲ. ಅವಳು ಕೆಲವು ಯುವಕರನ್ನು, ಹತ್ತಿಯಿಂದ ಹಂಜಿ ಮಾಡಲು ತಯಾರು ಮಾಡಿದಳು. ಗಂಗಾ ಬೆನ್ನರ ಸಾಹಸ, ಊಹೆಯನ್ನೂ ಮೀರಿ ಬೆಳೆಯಿತು. ಅವಳು. ವಿಜಾಪುರದಲ್ಲಿ ನೂತ ನೂಲನ್ನು ನೇಯಲು ನೇಕಾರರನ್ನು ಕಂಡು ಹಿಡಿದಳು. ಬೇಗ ವಿಜಾಪುರ ಜಿಲ್ಲೆಯ ಖಾದಿ ಎಲ್ಲೆಡೆಯೂ ಪ್ರಸಿದ್ಧವಾಯಿತು.

ವಿಜಾಪುರದಲ್ಲಿ ಈ ಬೆಳವಣಿಗೆಗಳು ಆಗುತ್ತಿರುವಾಗ. ಆಶ್ರಮದಲ್ಲಿ ನೂಲಿನ ರಾಟೆಗೆ ಭಾದ್ರವಾದ ಬುನಾದಿ ದೊರೆಯಿತು. ಮಗನ್‌ಲಾಲನು ತನ್ನ ಉತ್ತಮವಾದ ಯಾಂತ್ರಿಕ ಕೌಶಲವನ್ನು ರಾಟೆಯಲ್ಲಿ ಪ್ರಯೋಗಿಸಿ. ಅದರಲ್ಲಿ ಅನೇಕ ಸುಧಾರಣೆಗಳನ್ನು

ಮಾಡಿದನು. ಆಶ್ರಮದಲ್ಲಿ ರಾಟೆಗಳೂ ಅದರ ಉಪಭಾಗಗಳೂ ತಯಾರಾಗಲು ಪ್ರಾರಂಭವಾದವು. ಆಶ್ರಮದಲ್ಲಿ ತಯಾರಾದ ಮೊದಲನೆ ಖಾದಿಗೆ, ಗಜಕ್ಕೆ ಹದಿನೇಳು ಆಣೆ ಬೆಲೆಯಾಯಿತು. ಈ ಒರಟು ಖಾದಿಯನ್ನು ಆ ದರದಲ್ಲಿ ನಾನು ನನ್ನ ಮಿತ್ರರಿಗೆ ಶಿಫಾರಸು ಮಾಡಲು ಹಿಂದೆಗೆಯಲಿಲ್ಲ. ಅವರು ಅದನ್ನು ಸಂತೋಷದಿಂದ ಕೊಟ್ಟು ಕೊಂಡುಕೊಂಡರು.

ಆದುದರಿಂದ ಈಗ ನಾನು ನನ್ನ ಲಕ್ಷ್ಯವನ್ನೆಲ್ಲ ಖಾದಿ ತಯಾರಿಕೆಯ ಮೇಲೆ ಕೇಂದ್ರೀಕರಿಸಿದ್ದೇನೆ. ನಾನು ಸ್ವದೇಶೀಯ ಈ ವಿಭಾಗದ ಮೇಲೆ ಆಣೆಯಿಟ್ಟು ಹೇಳು ತ್ತೇನೆ. ಯಾಕೆಂದರೆ ಇದರ ಮೂಲಕ ಭಾರತದ ಅರ ಹೊಟ್ಟೆಯ ಅರೆ ಉದ್ಯೋಗದ ಮಹಿಳೆಯರಿಗೆ ನಾನು ಉದ್ಯೋಗವನ್ನು ಕಲ್ಪಿಸ ಬಲ್ಲೆ. ಈ ಮಹಿಳೆಯರಿಂದ ನೂಲನ್ನು ನೂಲಿಸಿ. ಆ ನೂಲಿನಿಂದ ತಯಾರಿಸಿದ ಖಾದಿಯಿಂದ ಜನರ ಉಡುಪನ್ನು ಒದಗಿಸು ವುದು ನನ್ನ ಗುರಿ. ಈ ಚಳವಳಿ ಎಷ್ಟು ದೂರ ಜಯಶಾಲಿಯಾಗುವುದೆಂದು ನಾನು ಹೇಳಲಾರೆ. ಈಗ ಇನ್ನೂ ಅದರ ಪ್ರಾರಂಭ ಮಾತ್ರ. ಆದರೆ ನನಗೆ ಅದರಲ್ಲಿ ಪೂರ್ಣ ನಂಬಿಕೆಯಿದೆ.

ವರ್ಷ ಮುಗಿಯುವುದಕ್ಕೆ ಮುಂಚೆ

೧೯೧೫

೧೯೧೫ನೆ ಜೂನ್ ೩ ರಂದು ಚಕ್ರವರ್ತಿಯ ಜನ್ಮೋತ್ಸವ ಗೌರವದಲ್ಲಿ, ಗಾಂಧೀಜಿಯ ಸಾರ್ವಜನಿಕ ಸೇವೆಗಾಗಿ ಅವರಿಗೆ ಕೈಸರ್-ಇ-ಹಿಂದ್ ಪದಕವು ಕೊಡಲ್ಪಟ್ಟಿತು. ಗೌರವಿಸಲ್ಪಟ್ಟ ಮತ್ತೊಬ್ಬ ಭಾರತೀಯರೆಂದರೆ ರವೀಂದ್ರ ನಾಥ ಠಾಕೂರರು. ಅವರಿಗೆ ಸರ್ ಬಿರುದು ಕೊಡಲ್ಪಟ್ಟಿತು.

ಯೂರೋಪಿನ ಯುದ್ಧ ಬ್ರಿಟಿಷರಿಗೆ ಅನುಕೂಲವಾಗಿ ಮುಂದುವರಿಯುತ್ತಿರಲಿಲ್ಲ. ಭಾರತ ಸರ್ಕಾರ ರಾಜಕೀಯ ಆಂದೋಳನವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿತ್ತು. ಭಾರತ ರಕ್ಷಣಾ ಕಾನೂನು ರಾಜಕೀಯ ತಪ್ಪಿತಗಳಿಗೆ ತ್ವರಿತವಾಗಿ ವಿಚಾರಣೆ ನಡೆಸಲು ವಿಶೇಷ ಅಧಿಕಾರಿಗಳನ್ನು ಒದಗಿಸಿತು ಆಲಿ ಸಹೋದರರು ಮೌಲಾನಾ ಆಜಾದ್ ಹಜರತ್ ಮೋಹಾನಿ ಇವರ ಮೇಲೆ, ಪ್ರವೇಶ ನಿರ್ಬಂಧಾಜ್ಞೆಯನ್ನು ಜಾರಿಮಾಡಿದರು. ಪೋಲೀಸರು ರಾಜಕೀಯ ಮುಖಂಡರನ್ನು ಬೆನ್ನು ಹತ್ತಿದ್ದರು. ರಾಜಕೀಯ ಕ್ಷೇತ್ರ, ತೋರಿಕೆಗೆ ಶಾಂತವಾಗಿಯೇ ಇತ್ತು.

ಆ ವರುಷ ಗಾಂಧೀ, ಯಾವ ರಾಜಕೀಯ ಭಾಷಣವನ್ನೂ ಮಾಡಲಿಲ್ಲ. ಆದರೆ ಸಾಮಾಜಿಕ ಸುಧಾರಣೆಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಅಕ್ಟೋಬರ್ ೨೮ರಲ್ಲಿ ಅವರು ಕರಾರುಬದ್ಧ ಕೂಲಿ ಕಾನೂನಿನ ವಿರುದ್ಧ ತಮ್ಮ ಹೋರಾಟವನ್ನು ಪ್ರಾರಂಭಿಸಿ ಬೊಂಬಾಯಿನಲ್ಲಿ ಮೊದಲನೆಯ ಭಾಷಣವನ್ನು ಕೊಟ್ಟರು.

ಆ ಕಾಲದಲ್ಲಿ ರಾಜಕೀಯ ಕ್ಷೇತ್ರದಲ್ಲಿ ತಿಲಕರೂ ಸಹ ಬಹಳ ಚಟುವಟಿಕೆಯುಳ್ಳವರಾಗಿದ್ದರು. ಅವರು ಆರು ವರ್ಷಗಳಿಂದ ದೇಶದೂರರಾಗಿದ್ದುದರಿಂದ. ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಅವರು ಕಾತರರಾಗಿದ್ದರು. ೧೯೧೫ನೆ ಇಸವಿಯ ಮಧ್ಯಭಾಗದಲ್ಲಿ, ಅವರು ತಮ್ಮ, ಯುಗಸೃಷ್ಟಿಯಾದ ಭಗವದ್ಗೀತೆಯ ವ್ಯಾಖ್ಯಾನವನ್ನು ಪ್ರಕಟಿಸಿದರು. ಪ್ರಕಟಣೆಯಾದ ಒಂದೇ ವಾರದೊಳಗೆ. ಸುಮಾರು ೫ ಸಾವಿರ ಪ್ರತಿಗಳ ಮಾರಾಟವಾದವು. ಒಬ್ಬರಿಗೆ ಒಂದಕ್ಕಿಂತ ಹೆಚ್ಚು ಪ್ರತಿ ಕೊಡುತ್ತಿರಲಿಲ್ಲ. ತಿಲಕರು ಅದನ್ನು ಕರ್ಮಯೋಗ ಗ್ರಂಥವಾಗಿ ಮಾಡಿದರು.

ಡಿಸೆಂಬರ್‌ನಲ್ಲಿ ಕಾಂಗ್ರೆಸ್, ಬೊಂಬಾಯಿನಲ್ಲಿ ಅಂಧಕಾರದ ಮೋಡಗಳ ನೆರಳಿನಲ್ಲಿ ಸೇರಿತು. ಯುದ್ಧದ ತಿರುವನ್ನು ಕುರಿತು ಸುದ್ದಿಗಳೂ ಗಾಬರಿಯ ಸಂಗತಿಗಳೂ ಹರಡಿದ್ದುವು. ಆ ವರ್ಷ ಕಾಂಗ್ರೆಸ್ಸು ತನ್ನ ಮೂವರು ನೇತಾರರನ್ನು ಫಿರೋಸ್‌ಷಾ

ಮೆಹ್ತಾ, ಗೋಖಲೆ, ಹೆನ್ರಿ ಕಾಟನ್‌ರನ್ನು ಕಳೆದುಕೊಂಡಿತ್ತು. ಕಾಮನ್ಸ್‌ಸಭೆಯಲ್ಲಿಯೂ ಭಾರತಕ್ಕೆ ಅಮೂಲ್ಯ ಸಹಾಯ ಮಾಡುತ್ತಿದ್ದ ಕೇರ್‌ಹಾರ್ಡಿ ಅವರ ಮರಣದಿಂದ ಭಾರತೀಯರಿಗೆ ದುಃಖವುಂಟಾಗಿತ್ತು.

ವೈಸರಾಯರ ಕಾರ್ಯಕಾರೀ ಸಮಿತಿಯ ಸದಸ್ಯರಾಗಿದ್ದ ಸರ್ ಎಸ್. ಪಿ. ಸಿನ್ಹ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. ಅವರು ತಮ್ಮ ಭಾಷಣದಲ್ಲಿ "ಬ್ರಿಟಿಷ್ ಸರ್ಕಾರ, ಭಾರತಕ್ಕೆ ತತ್‌ಕ್ಷಣ ಆಳ್ವಿಕಾ ಸ್ವಾತಂತ್ರ್ಯವನ್ನು (ಹೋಮ್‌ರೂಲ್) ವಹಿಸಿಕೊಡಲು ಒಪ್ಪಿದರೂ, ಆ ವರ, ಸ್ವೀಕಾರಕ್ಕೆ ಅರ್ಹವಾಗಿದೆಯೇ ಎಂಬುದು ಸಂಶಯಾತ್ಮಕ. ಭಾರತ ಒಂದು ರೋಗಿ; ಇದರ ಅವಯವಗಳನ್ನೆಲ್ಲ ಮುರಿದು ಪಟ್ಟಿ ಹಾಕಿ ಕಟ್ಟಿದ್ದಾಗಿದೆ" ಎಂಬ ಮಾತುಗಳು ಬಹಳ ವಿವಾದಕ್ಕೆ ಅವಕಾಶ ಮಾಡಿಕೊಟ್ಟವು. ಸುರೇಂದ್ರನಾಥ ಬ್ಯಾನರ್ಜಿಯವರ ಸಲಹೆಯಂತೆ ಕಾಂಗ್ರೆಸ್ಸು ಒಂದು ನಿರ್ಣಯವನ್ನು ಅಂಗೀಕರಿಸಿತು. ಹೋಮ್‌ರೂಲ್ ಸ್ಥಾಪನೆಗೆ ಆವಶ್ಯಕವಾದ ಪೂರ್ಣ ಸುಧಾರಣೆಗಳನೂ ಕೊಟ್ಟು ಸರ್ಕಾರದ ಮೇಲೆ ಜನತೆಗೆ ಪೂರ್ಣ ಹತೋಟಿಯನ್ನೂ ಪ್ರಾಂತೀಯ ಸ್ವಾತಂತ್ರ್ಯವನ್ನೂ, ತಮ್ಮ ದೇಶದ ಮೇಲೆ ಹಣಕಾಸಿನ ಯಜಮಾನ್ಯವನ್ನೂ ನೀಡುವ ಉದಾರ ಆಳ್ವಿಕಾ ನೀತಿಯನ್ನು ಅನುಸರಿಸುವ ಕಾಲ ಸನ್ನಿಹಿತವಾಗಿದೆ. ಲೆಜಿಸ್ಲೆಟಿವ್ ಕೌನ್ಸಿಲ್‌ಗಳನ್ನು ವಿಸ್ತರಿಸಿ, ಅವು ನಿಜವಾಗಿಯೂ, ಎಲ್ಲ ವರ್ಗದ ಜನತೆಯ ನಿಜವಾದ ಮತ್ತು ಪೂರ್ಣವಾದ ಪ್ರತಿನಿಧಿಗಳಾಗುವಂತೆ ಮಾಡಬೇಕು. ನಾನಾ ಆಳ್ವಿಕಾ ಸಮಿತಿಗಳ ಪುನರ್ರಚನೆ, ಯಾವ ಯಾವ ಪ್ರಾಂತಗಳಲ್ಲಿ ಅಂತಹ ಸಮಿತಿಗಳಿಲ್ಲವೋ ಅಲ್ಲೆಲ್ಲ ಅವುಗಳ ರಚನೆ, ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಸಮಿತಿಯ ರದ್ದು ಅಥವಾ ಪುನರ್ರಚನೆ, ಮತ್ತು ಭಾರತಕ್ಕೆ ಸ್ಥಳೀಯ ಸ್ವರಾಜ್ಯದ ಉದಾರ ಕೊಡುಗೆ—ಇವು ಆಗಬೇಕು. ನಿರ್ಣಯವು ಸುಧಾರಣೆಗಳ ಒಂದು ಯೋಜನೆಯನ್ನು ನಿರ್ಮಿಸಲು ಕಾಂಗ್ರೆಸಿಗೆ ಅಧಿಕಾರ ಕೊಟ್ಟಿತು. ನಿರ್ಣಯವನ್ನು ಅನುಮೋದಿಸಿದ ಶ್ರೀಮತಿ ಬೆಸೆಂಟರು "ಕಾಂಗ್ರೆಸಿನ ಮುವತ್ತು ವರ್ಷಗಳ ಉತ್ತಮ ಇತಿಹಾಸದಲ್ಲಿ ಈ ನಿರ್ಣಯ ಅತ್ಯಂತ ಸಕಾಲಿಕವೂ ಮಹತ್ವದ್ದೂ ಆಗಿದೆ"ಯೆಂದು ಹೇಳಿದರು.

ತಿಲಕ್ ಮತ್ತು ಗಾಂಧಿ, ಹಿಂಬದಿಯಲ್ಲಿದ್ದರು. ಅಧ್ಯಕ್ಷರಾಗ ಬೇಕಾಗಿದ್ದ ಲೋಕಮಾನ್ಯರು, ದುರದೃಷ್ಟಕರವಾದ ಕೆಲವು ಶಕ್ತಿಗಳ ಒಕ್ಕೂಟದಿಂದ ಹಿಂದಕ್ಕೆ ತಳ್ಳಲ್ಪಟ್ಟರು. ಗಾಂಧೀಜಿ, ವಿಷಯ ನಿಯಾಮಕ ಸಮಿತಿಗೆ ಆಯ್ಕೆಯಾಗಲು ಆಗಲಿಲ್ಲ. ಅವರನ್ನು ಕಾಂಗ್ರೆಸ್ ಅಧ್ಯಕ್ಷರು ನಾಮಕರಣ ಮಾಡಿದರು.

ಬೊಂಬಾಯಿ ಕಾಂಗ್ರೆಸ್‌ನ ಒಂದು ಸಾಧನೆಯೆಂದರೆ, ಕಾಂಗ್ರೆಸ್ ಸಂವಿಧಾನ, ತೀವ್ರವಾಗಿ ಕಾಂಗ್ರೆಸ್ಸಿನೊಳಗೆ ಪ್ರವೇಶಿಸಲು ಸಾಧ್ಯವಾಗುವಂತೆ ಬದಲಾವಣೆ ಹೊಂದಿದುದು. ಪ್ರತಿನಿಧಿಗಳ ಆರಿಸುವಿಕೆ, ೧೯೧೫ನೆ ಡಿಸೆಂಬರ್ ೩೧ನೆ ತಾರೀಖಿನ ವೇಳೆಗೆ, ಎರಡು ವರುಷ ಅಸ್ತಿತ್ವದಲ್ಲಿದ್ದ ಯಾವ ಸಭೆ ಅಥವಾ ಸಮಿತಿಯಿಂದಲಾದರೂ ಆಗಬಹುದಾಗಿದ್ದಿತು. ಆದರೆ ಅದರ ಗುರಿ, ಬ್ರಿಟಿಷ್ ಸಾಮ್ರಾಜ್ಯದೊಳಗೆ, ಸಂವಿಧಾನ

ಮಾರ್ಗದಿಂದ ಹೋಮ್‌ರೂಲ್ ಸ್ಥಾಪನೆಯ ಗುರಿಯಾಗಿರಬೇಕು. ಅನಂತರ ತಿಲಕರು ಈ ಅರ್ಧ ತೆರೆದ ಬಾಗಿಲಿನಿಂದ, ತಮ್ಮ ಪಕ್ಷ ಕಾಂಗ್ರೆಸ್ಸನ್ನು ಪುನರ್‌ಪ್ರವೇಶಿಸಲು ಸಿದ್ಧವಾಗಿದೆಯೆಂದು ಸಾರ್ವಜನಿಕವಾಗಿ ಘೋಷಿಸಿದರು. ಈಗ ಒಮ್ಮುಖದ ಕಾಂಗ್ರೆಸ್ ಸಾಧ್ಯವಾಗುವ ಸಂಭವಗಳಿದ್ದವು.

ಹಿಂದಿನ ಮೂರು ವರುಷಗಳಿಂದ ಭಾರತದ ಮುಸಲ್ಮಾನರಲ್ಲಿ ಜಾಗೃತಿಯುಂಟಾಗಿತ್ತು. ಮೌಲಾನ ಶಿಬ್ಲಿ–ವಿದ್ವಾಂಸರು ದೇಶಭಕ್ತರು, ಮತ್ತು ಸರ್ ಸೈಯದ್ ಅಹಮದ್ ಖಾನರ ಸಹ ಕೆಲಸಗಾರರು–ಮುಸ್ಲಿಂರ ಬುದ್ಧಿ ಮತ್ತು ಆಲೋಚನೆಯ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಲು ಪ್ರಾರಂಭಿಸಿದ್ದರು. ಎನ್ವರ್ ಪಾಷಾರ ನಾಯಕತ್ವದಲ್ಲಿ ಯಂಗ್‌ಟರ್ಕ್ ಚಳುವಳಿ, ಭಾರತದಲ್ಲಿ ಪ್ರಭಾವವನ್ನು ಬೀರಿತು. ಹೊಸ ನಕ್ಷತ್ರಗಳು ಆಗಸದಲ್ಲಿ ಏಳುತ್ತಿದ್ದವು. ಯುವ ಅಬುಲ್ ಕಲಾಂ ಆಜಾದರು (ಮಕ್ಕದಲ್ಲಿ ೧೮೮೮ರಲ್ಲಿ ಜನಿಸಿದರು. ಅವರ ಮನೆತನದವರು ಮೊಗಲ್ ಬಾದಷಾ ಅಕ್ಬರನ ದರ್ಬಾರಿನಲ್ಲಿ ಪ್ರಸಿದ್ಧ ವಿದ್ವಾಂಸರಾಗಿದ್ದರು) ಅಲ್ ಹಿಲಾಲ್ ಪತ್ರಿಕೆಯನ್ನು ಪ್ರಾರಂಭಿಸಿದರು. ಪತ್ರಿಕೆ ಉರ್ದು ಮಾತನಾಡುವ ಜಗತ್ತಿನ ಭಾವನೆಗಳನ್ನು ಆಕರ್ಷಿಸಿತು. ಆಜಾದ್ ಮತ್ತು ಮಹಮ್ಮದಾಲಿ ತಮ್ಮ ಪತ್ರಿಕೆಗಳ ಮೂಲಕ ಮುಸ್ಲಿಂ ರಾಜಕೀಯದಲ್ಲಿ ಒಂದು ಮೂಲಭೂತ ಬದಲಾವಣೆಯನ್ನೇ ಮಾಡಿದರು.

ಅಲಿಘರ್‌ನಲ್ಲಿಯೂ ಬದಲಾವಣೆಯಾಗುತ್ತಿದ್ದಿತು. ಮುಸ್ಲಿಂಲೀಗ್ ಕಾರ್ಯದರ್ಶಿಗೂ ಕಾಲೇಜು ಪ್ರಿನ್ಸಿಪಾಲ್ ಮಿ. ಆರ್ಚಿಬಾಲ್ಡ್‌ರಿಗೂ ನಡುವೆ ಉಂಟಾದ ಭಿನ್ನಾಭಿಪ್ರಾಯದಿಂದ, ಆಗಾಖಾನರು ತಮ್ಮ ಕಛೇರಿಯನ್ನು ಅಲಿಘರ್‌ನಿಂದ ಲಕ್ನೋಗೆ ಬದಲಾಯಿಸಿದರು. ಈ ಬದಲಾವಣೆ ಮುಸ್ಲಿಂ ರಾಜಕೀಯದಲ್ಲಿ ಯೂರೋಪಿಯನ್ ಪ್ರಿನ್ಸಿಪಾಲರ ಪ್ರಾಬಲ್ಯವನ್ನು ಮುಕ್ತಾಯಗೊಳಿಸಿತು.

೧೯೧೨ರಲ್ಲಿ ಪಠಾಣರಲ್ಲಿ, ಖಾನ್ ಅಬ್ದುಲ್ ಗಫಾರ್‌ಖಾನರ ಚಟುವಟಿಕೆಗಳು ಪ್ರಾರಂಭವಾದುವು. ಖಾನರು ಜನಿಸಿದ್ದು ೧೮೯೦ರಲ್ಲಿ; ಪೆಷಾವರ್ ಜಿಲ್ಲೆಯ ಉತ್ಮಾಂಜಿ ಎಂಬ ಹಳ್ಳಿಯಲ್ಲಿ. ಅವರು ತಮ್ಮ ಇಪ್ಪತ್ತೆರಡನೆ ವಯಸ್ಸಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಪ್ರಾರಂಭಿಸಿ, ತುರಂಗ್ ಜೈನ ಹಾಜಿ ಸಾಹೇಬರ ಪ್ರಭಾವಕ್ಕೆ ಬೇಗ ಒಳಗಾದರು. ಹಳ್ಳಿಗರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡುವ, ಹಾಜೀಸಾಹೇಬರ ಕಾರ್ಯದೊಡನೆ ಖಾನರು ಪೂರ್ಣವಾಗಿ ಸಹಕರಿಸಿದರು.

೧೯೧೩ರಿಂದ ಹಿಂದು ಮುಸಲ್ಮಾನರ ಸಂಬಂಧ ಉತ್ತಮಗೊಳ್ಳಲು ಪ್ರಾರಂಭವಾಗಿತ್ತು. ಮುಸ್ಲಿಂಲೀಗ್ ಒಂದು ಹೊಸ ಸಂವಿಧಾನವನ್ನು ಅಂಗೀಕರಿಸಿತು. "ಬ್ರಿಟಿಷ್ ಸಿಂಹಾಸನಕ್ಕೆ ಇಂಡಿಯದವರ ರಾಜಭಕ್ತಿಯ ಅಭಿವೃದ್ಧಿ ಮುಸಲ್ಮಾನರ ಹಕ್ಕುಗಳ ರಕ್ಷಣೆ; ಈ ಮೇಲಿನ ಎರಡು ಧ್ಯೇಯಗಳಿಗೆ ವಿರೋಧವಿಲ್ಲದಂತೆ, ಭಾರತಕ್ಕೆ ಹೊಂದಿಕೆಯಾಗುವ ಸ್ವಯಮಾಡಳಿತ" ಆಗಾಖಾನರ ಹಳೆ ಪಂಗಡಕ್ಕೆ ಇದು ಜೀರ್ಣಿಸದ ತುತ್ತಾಯಿತು. ಜಿನ್ನಾ ಹೊರಗಡೆ ಇದ್ದುಕೊಂಡೇ ತಮ್ಮ ಅನೌಪಚಾರಿಕ ಬೆಂಬಲವನ್ನು

ಕೊಟ್ಟರು. ಮುಸ್ಲಿಂ ಲೀಗಿನ ಈ ಸಭೆಯಲ್ಲಿ ಡಾ. ಅನ್ಸಾರಿ, ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಹಕೀಂ ಅಜ್ಮಲ್‌ಖಾನರು ಭಾಗವಹಿಸಿದರು. ಆಗಾಖಾನರು ಲೀಗಿನ ಖಾಯಂ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯಿತ್ತರು.

೧೯೧೫ರ ಮುಸ್ಲಿಂಲೀಗ್, ಹಿಂದೂ ಮುಸ್ಲಿಂ ಪಂಗಡಗಳ ಮಧುರಬಾಂಧವ್ಯಕ್ಕೆ ಮತ್ತೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿತು. ಯುದ್ಧದ ಪ್ರಾರಂಭ, ಮುಸ್ಲಿಂ ಅಭಿಪ್ರಾಯವನ್ನು ಹಿಂದೆಂದೂ ಇಲ್ಲದಷ್ಟು ಮೂಲಭೂತವಾಗಿ ಬದಲಾಯಿಸಿತು.

೧೯೧೬ ಭಾರತದ ರಾಜಕೀಯ ಇತಿಹಾಸದಲ್ಲಿ ಎದ್ದು ಕಾಣುವ ಇಸವಿ. ಅದೇ ಮೊದಲ ಸಲವಾಗಿ ಮುಸ್ಲಿಂಲೀಗ್ ಮತ್ತು ಕಾಂಗ್ರೆಸ್ಸು, ತಮ್ಮ ಅಧಿವೇಶನಗಳನ್ನು ಏಕಕಾಲದಲ್ಲಿ ನಡೆಸಿದವು. ಅನೇಕ ಕಾಂಗ್ರೆಸ್ ಪ್ರಮುಖರು–ಸುರೇಂದ್ರನಾಥ ಬ್ಯಾನರ್ಜಿ, ಪಂಡಿತ ಮಾಲವೀಯ, ಡಿ. ಇ. ವಾಛಾ, ಶ್ರೀಮತಿ ಬೆಸೆಂಟ್, ಬಿ. ಜಿ. ಹಾರ್ನಿಮನ್ ಶ್ರೀಮತಿ ಸರೋಜಿನಿ ನಾಯಿಡು ಮತ್ತು ಗಾಂಧೀಜಿ ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಹಾಜರಿದ್ದರು. ರಾಷ್ಟ್ರೀಯ ಮುಸಲ್ಮಾನರು ಕೊನೆಗೆ ಗೆದ್ದರು. ಮುಸ್ಲಿಂಲೀಗ್ ತನ್ನ ಹಳೆಯ ನೀತಿಗಳನ್ನು ತ್ಯಜಿಸಿ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು. ಜಿನ್ನರವರ ನಿರ್ಣಯದಂತೆ ಮುಸ್ಲಿಂಲೀಗ್, ಕಾಂಗ್ರೆಸ್‌ನೊಂದಿಗೆ ಸೇರಿ ಭಾರತದ ಸುಧಾರಣೆಗಳ ಯೋಜನೆಯನ್ನು ರಚಿಸಲು ಒಂದು ಸಮಿತಿಯನ್ನು ನಿಯಮಿಸಿತು.

ಮೊದಲನೆಯ ಮುಳುಗು

೧೯೧೬

೧೯೧೬ರಲ್ಲಿ, ಭಾರತದ ರಾಜಕೀಯವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸ ಬಾರದೆಂಬ ಗಾಂಧಿಯವರ ವಾಗ್ದಾನದ ವಾಯಿದೆ ಮುಗಿಯಿತು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವದಲ್ಲಿ ಮಾಲವೀಯ, ಗಾಂಧೀಜಿಯನ್ನು ಭಾಷಣ ಮಾಡಲು ಆಹ್ವಾನಿಸಿದರು. ಒಂದಂ ವಿಲಕ್ಷಣ ಸಹಘಟನೆಯಾಯಿತು. ವೈಸರಾಯ್ ಲಾರ್ಡ್ ಹಾರ್ಡಿಂಜರು, ವಿಶ್ವವಿದ್ಯಾನಿಲಯದ ಅಸ್ತಿಭಾರ ಶಿಲೆಯನ್ನು ಹಾಕಲು. ಅದಕ್ಕಾಗಿಯೇ ಬಂದಿದ್ದರು. ಅವರ ಜೀವರಕ್ಷಣೆಗಾಗಿ ಪೋಲೀಸರು ಕಟ್ಟುನಿಟ್ಟಾದ ರಕ್ಷಣಾ ಕ್ರಮಗಳನ್ನು ತೆಗೆದುಕೊಂಡಿದ್ದರು. ಅವರು ಸರ್ವತ್ರ ಇದ್ದರು. ಮಾರ್ಗದ ಉದ್ದಕ್ಕೂ ಎಲ್ಲ ಮನೆಗಳೂ ಪೋಲೀಸ್ ಕಾವಲಿನಲ್ಲಿದ್ದವು. ಕಾಶಿ, ಸೈನ್ಯದಿಂದ ಆವೃತವಾದಂತೆ ತೋರಿತು.

ಭಾರತದ ನಾನಾ ಭಾಗಗಳಿಂದ ಪ್ರಮುಖರು ಆಗಮಿಸಿದ್ದರು. ಅವರಲ್ಲಿ ಅನೇಕರು ಭಾಷಣಗಳನ್ನು ಮಾಡಿದರು. ಫೆಬ್ರುವರಿ ೪, ಗಾಂಧೀಜಿ ಮಾತನಾಡ ಬೇಕಾದ ದಿನವಾಗಿತ್ತು. ಅವರ ಶ್ರೋತೃಗಳು ಹೆಚ್ಚಾಗಿ ಚಿಕ್ಕವಯಸ್ಸಿನ ಭಾವನಾ ಪೂರಿತ ಯುವಕರು. ದೇಶೀಯ ರಾಜರ ಹೊಳೆಯುವ ತೇಜಸ್ಸಿನ ಒಂದು ಪಂಕ್ತಿ ಅಲಂಕೃತವಾಗಿ ವಜ್ರವೈಢೂರ್ಯ ಧರಿಸಿ ವೇದಿಕೆಯ ಮೇಲೆ ಮಂಡಿಸಿತ್ತು. ದರ್ಭಾಂಗ ರಾಜರು, ಅಧ್ಯಕ್ಷರಾಗಿದ್ದರು.

ಗಾಂಧೀಜಿ, ಒರಟಾದ ತುಂಡು ಧೋತಿ, ಕಾಥಿಯವಾಡಕವಚ ಮತ್ತು ರುಮಾಲನ್ನು ಧರಿಸಿ ಮಾತನಾಡಲು ಎದ್ದರು. ಮಿತಿಮೀರಿದ ಪೋಲಿಸು ಬಂದೋಬಸ್ತು ಮತ್ತು ಮಿತಿಮೀರಿ ವೈಭವ ಅವರಿಗೆ ತುಂಬ ನೋವನ್ನುಂಟುಮಾಡಿತು. ಶ್ರೋತೃಗಳಕಡೆ ತಿರುಗಿ ಅವರು ತಾವು ಗಟ್ಟಿಯಾಗಿ ಯೋಚಿಸಬಯಸಿರುವುದಾಗಿಯೂ ಯಾವ ಸಂಕೋಚವೂ ಇಲ್ಲದೆ ಮನಬಿಚ್ಚಿ ಮಾತನಾಡುವುದಾಗಿಯೂ ತಿಳಿಸಿದರು.

"ನಾನು ಇಲ್ಲಿಗೆ ಬರಲು ಸಂಭವಿಸಿದ ಕಾಲವಿಳಂಬಕ್ಕಾಗಿ ನನ್ನ ನಮ್ರ ಕ್ಷಮಾಪಣೆ ಯನ್ನು ಅರ್ಪಿಸುತ್ತೇನೆ. ಈ ವಿಳಂಬಕ್ಕೆ ನಾನು ಹೊಣೆಗಾರನಲ್ಲ. ಮನುಷ್ಯ ನಿರ್ಮಿತ ಯಾವ ಕಾರಣವೂ ಹೊಣೆಯಲ್ಲ ಎಂದು ನಾನು ಹೇಳುವಾಗ ನೀವು ಕ್ಷಮಾಪಣೆಯನ್ನು ಸುಲಭವಾಗಿ ಅಂಗೀಕರಿಸಲೇ ಬೇಕು. ಇರುವ ಸಂಗತಿ ಏನೆಂದರೆ ನಾನು ಪ್ರದರ್ಶನ ಕ್ಕಾಗಿರುವ ಒಂದು ಪ್ರಾಣಿಯಾಗಿದ್ದೇನೆ. ಮತ್ತು ನನ್ನನ್ನು ಹಿಡಿದು ಇಟ್ಟಿರುವವರು ತಮ್ಮ ಅತಿದಯೆಯಿಂದ, ಈ ಬಾಳಿನ ಒಂದು ಮುಖ್ಯ ಅಧ್ಯಾಯವನ್ನೇ ಮರೆತು

ಬಿಡುತ್ತಾರೆ. ಅದೇ ಆಕಸ್ಮಿಕ ಎಂಬುದು. ಈ ಸಂದರ್ಭದಲ್ಲಿ ನನಗೆ, ನನ್ನ ಉಸ್ತುವಾರಿ ನೋಡಿಕೊಳ್ಳುವವರಿಗೆ, ನನ್ನ ಸಾಮಾನು ಸಾಗಿಸುವವರಿಗೆ ಸಂಭವಿಸಿದ ಅನೇಕ ಆಕಸ್ಮಿಕಗಳಿಗೆ, ಅವರು ಅವಕಾಶವನ್ನು ಒದಗಿಸಲಿಲ್ಲ. ಆದುದರಿಂದ ಈ ಸಾವಕಾಶ.

"ಮಿತ್ರರೇ ಈಗ ತಾನೆ ಭಾಷಣ ಮುಗಿಸಿದ ಶ್ರೀಮತಿ ಬೆಸೆಂಟರ ಅದ್ವಿತೀಯ ವಾಗ್ಝರಿಯ ಪ್ರಭಾವದಲ್ಲಿ ಸಿಕ್ಕಿ 'ನಮ್ಮ ವಿಶ್ವವಿದ್ಯಾನಿಲಯ ಆಗಲೇ ಕಟ್ಟಿಮುಗಿಸಿ ಸಿದ್ಧವಾಗಿದೆ' ಎಂದು ನಂಬಬೇಡಿ. ಈ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಯುವಕರೆಲ್ಲ ಬಂದು ಆಗಿದೆ ಮತ್ತು ಇಲ್ಲಿಂದ ಈ ಮಹಾನ್ ಚಕ್ರಾಧಿಪತ್ಯದ ಪರಿಪೂರ್ಣ ಪ್ರಜೆಗಳಾಗಿ ಹೊರಟು ಹೋಗಿದ್ದಾರೆ ಎಂಬಂತಹ ಮನೋಭಾವದಿಂದ ಹೋಗಬೇಡಿ. ಮತ್ತು ನೀವು, ವಿದ್ಯಾರ್ಥಿಗಳು–ಯಾರಿಗೆ ನಾನು ಈ ದಿನ ಉಪನ್ಯಾಸ ಕೊಡಬೇಕಾಗಿದೆಯೋ ಅವರು–ಒಂದು ಗಳಿಗೆಯಾದರೂ ಯಾವುದಕ್ಕಾಗಿ ಈ ರಾಷ್ಟ್ರ ಪ್ರಸಿದ್ಧವಾಗಿದೆಯೋ ಮತ್ತು ಈ ರಾಷ್ಟ್ರಕ್ಕೆ ಸಮಾನವಾದುದಾವುದು ಬೇರೆಲ್ಲಿಯೂ ಇಲ್ಲವೋ ಅಂತಹ ಆಧ್ಯಾತ್ಮ ಜೀವನವನ್ನು, ಬಾಯಿ ಮಾತಿನಿಂದ ಹೇಳಿಕೊಡಬಹುದೆಂದು ಭಾವಿಸುವುದಾದರೆ, ದಯವಿಟ್ಟು ನಂಬಿ, ನೀವು ತಪ್ಪು ಮಾಡುತ್ತಿದ್ದೀರಿ. ಭಾರತವು ಜಗತ್ತಿಗೆ ಒಂದುದಿನ ಕೊಡುವುದೆಂದು ನಾನು ನಂಬಿರುವ ಸಂದೇಶವನ್ನು, ನೀವು ಬರಿಯ ಬಾಯಿಮಾತಿನಿಂದ ಎಂದೂ ಕೊಡಲಾರಿರಿ. ನನಗೇ ಭಾಷಣ ಉಪನ್ಯಾಸಗಳಿಂದ ತಲೆಚಿಟ್ಟುಗಟ್ಟಿ ಹೋಗಿದೆ. ಕಳೆದ ಎರಡು ದಿನಗಳಿಂದ ಇಲ್ಲಿ ನಡೆಯುತ್ತಿರುವ ಭಾಷಣಗಳನ್ನು ನಾನು ಈ ಮಾತಿನಿಂದ ವಿನಾಯಿಸುತ್ತೇನೆ. ಏಕೆಂದರೆ ಅವು ಇಲ್ಲಿ ಆವಶ್ಯಕವಾಗಿವೆ. ಆದರೆ ಈಗ ನಾನು ನಿಮಗೆ ಹೀಗೆ ಹೇಳುವ ಧೈರ್ಯ ಮಾಡುತ್ತೇನೆ. 'ಈಗ ನಾವು ಭಾಷಣ ಮಾಡುವುದರಲ್ಲಿ ನಮ್ಮ ಸರ್ವಶಕ್ತಿಯ ಕೊನೆಯನ್ನೂ ಮುಟ್ಟಿದ್ದೇವೆ. ಮತ್ತು ನಮ್ಮ ಕಿವಿಗೆ ಹಬ್ಬವಾದರೆ ಸಾಲದು; ಕಣ್ಣಿಗೆ ಹಬ್ಬವಾದರೆ ಸಾಲದು, ಆದರೆ ನಮ್ಮ ಹೃದಯಗಳನ್ನು ಮುಟ್ಟುವುದು ಆವಶ್ಯಕ. ನಮ್ಮ ಕೈಕಾಲುಗಳು ಚಲಿಸುವಂತೆ ಮಾಡುವುದೂ ಆವಶ್ಯಕ.

"ಕಳೆದ ಎರಡು ದಿನಗಳಲ್ಲಿ ನಾವು, ಭಾರತೀಯ ಸ್ವಭಾವದ ಸರಳರೀತಿಯನ್ನು ಉಳಿಸಿಕೊಳ್ಳಬೇಕಾದರೆ, ಹೇಗೆ ನಮ್ಮ ಕೈಕಾಲುಗಳೂ ಹೃದಯವೂ ಸಮರಸದಲ್ಲಿ ಚಲಿಸಬೇಕೆಂಬುದನ್ನು ಕೇಳಿದ್ದೇವೆ. ಆದರೆ ಇದು ಬರಿಯ ಉಪೋದ್ಘಾತ ಮಾತ್ರ ವಾಯಿತು. ನಾನು ದುಃಖ ದೈನ್ಯ ಮತ್ತು ನಾಚಿಕೆಯಿಂದ ಹೇಳಬೇಕಾಗಿದೆ. ನಾನು ಈ ದಿನ ಈ ಬೃಹದ್ ಕಾಲೇಜಿನ ನೆರಳಿನಲ್ಲಿ ಈ ಪವಿತ್ರ ನಗರದಲ್ಲಿ ನನ್ನ ದೇಶಬಾಂಧವರಿಗೆ ಪರಭಾಷೆಯ ಮೂಲಕ ಹೇಳುವ ಬಲಾತ್ಕಾರಕ್ಕೆ ಒಳಗಾಗಿದ್ದೇನೆ. ಕಳೆದ ಎರಡು ದಿನಗಳಿಂದ ಇಲ್ಲಿ ನಡೆಯುತ್ತಿರುವ ಭಾಷಣಗಳನ್ನು ಕೇಳಿದವರಿಗೆ ನನ್ನನ್ನು ಪರೀಕ್ಷಕನನ್ನಾಗಿ ನಿಯಾಮಿಸಿದರೆ, ಬಹುಸಂಖ್ಯೆಯ ಜನ ತೇರ್ಗಡೆಯಾಗುವುದಿಲ್ಲವೆಂದು ನನಗೆ ಗೊತ್ತು. ಏಕೆ? ಉಪನ್ಯಾಸ ಅವರ ಹೃದಯಗಳನ್ನು ಮುಟ್ಟಿಲ್ಲ.

"ನಾನು ಭಾರತ ಮಹಾಕಾಂಗ್ರೆಸ್ ಅಧಿವೇಶನದಲ್ಲಿ ಕಳೆದ ಡಿಸೆಂಬರ್ ತಿಂಗಳಲ್ಲಿ

ಹಾಜರಿದ್ದೆ. ಅಲ್ಲಿ ಇನ್ನೂ ಬಹು ದೊಡ್ಡ ಶ್ರೋತೃ ಸಮೂಹವಿದ್ದಿತು. ಹೇಳಿದರೆ ನಂಬುವಿರಾ? ಆ ಬೃಹತ್ ಜನಸ್ತೋಮದ ಹೃದಯವನ್ನು ಮುಟ್ಟಿದುವು ಹಿಂದುಸ್ತಾನಿಯಲ್ಲಿ ಹೇಳಿದ ಭಾಷಣಗಳು ಮಾತ್ರ. ಇದು ಬೊಂಬಾಯಿನಲ್ಲಿ; ನೆನಪಿಡಿ. ಎಲ್ಲರೂ ಹಿಂದಿ ಮಾತನಾಡುವ ಬನಾರಸ್‌ನಲ್ಲಿ ಅಲ್ಲ. ಆದರೆ ಬೊಂಬಾಯಿನ ಪ್ರಾಂತಿಯ ಭಾಷೆಗೂ ಹಿಂದಿಗೂ, ಭಾರತದ ಇತರ ಸೋದರ ಭಾಷೆಗಳಿಗೂ ಇಂಗ್ಲಿಷಿಗೂ ಇರುವಷ್ಟು ವ್ಯತ್ಯಾಸವ ಇರುವುದಿಲ್ಲ. ಕಾಂಗ್ರೆಸ್ ಶ್ರೋತೃಗಳು ಹಿಂದೀ ಭಾಷಣಕಾರರನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡರು. ನಾನು ಹೀಗೆ ಆಶಿಸುತ್ತೇನೆ: ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಅವರ ಪ್ರಾಂತ ಭಾಷೆಗಳಲ್ಲಿ ಶಿಕ್ಷಣ ದೊರೆಯುವಂತೆ ವಿಶ್ವವಿದ್ಯಾನಿಲಯ ವ್ಯವಸ್ಥೆ ಮಾಡುವುದೆಂದು. ನಮ್ಮ ಭಾಷೆ, ನಮ್ಮ ಪ್ರತಿಬಿಂಬ. ನಮ್ಮ ಭಾಷೆ ಅತ್ಯುತ್ತಮ ಆಲೋಚನೆಗಳನ್ನು ವಿವರಿಸಲು ಶಕ್ತವಲ್ಲ, ದರಿದ್ರವಾಗಿದೆ ಎಂದು ನೀವು ಹೇಳುವುದಾದರೆ ಈ ಭೂಮಿಯಿಂದ ನಾವು ಎಷ್ಟು ಬೇಗ ಅಳಿಸಿ ಹೋದರೆ ನಮಗೆ ಅಷ್ಟು ಒಳ್ಳೆಯದೆಂದು ಹೇಳಿ. ಇಂಗ್ಲಿಷು ಎಂದಿಗಾದರೂ ಭಾರತದ ರಾಷ್ಟ್ರಭಾಷೆಯಾಗಬಲ್ಲದು ಎಂದು ಕನಸುಕಾಣುವ ಮನುಷ್ಯ ಒಬ್ಬನಾದರೂ ಇದ್ದಾನೆಯೆ? ಈ ರಾಷ್ಟ್ರಕ್ಕೆ ಈ ಪ್ರತಿಕೂಲ ಹೊರೆ ಏಕೆ? ಒಂದು ಕ್ಷಣ ಯೋಚಿಸಿ. ನಮ್ಮ ಯುವಕರು ಪ್ರತಿಯೊಬ್ಬ ಇಂಗ್ಲಿಷ್ ಯುವಕನೊಂದಿಗೂ ಎಂತಹ ಅಸಮಾನ ಪೈಪೋಟಿಯಲ್ಲಿ ಓಡಬೇಕಾಗಿದೆ.

"ಕೆಲವು ಪುಣೆಯ ಪ್ರೊಫೆಸರ್‌ರೊಂದಿಗೆ ನನಗೆ ಆತ್ಮೀಯ ಸಂಭಾಷಣೆಯ ಸುಯೋಗ ದೊರಕಿತ್ತು. ಅವರು ನನಗೆ, ಪ್ರತಿಭಾರತೀಯ ಯುವಕನೂ, ತನ್ನ ಜ್ಞಾನಾರ್ಜನೆಯನ್ನು ಇಂಗ್ಲಿಷ್ ಭಾಷೆಯ ಮೂಲಕ ಮಾಡಬೇಕಾಗಿರುವುದರಿಂದ ಅವನಿಗೆ ಆರು ವರ್ಷ ವ್ಯರ್ಥವಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಅದನ್ನು ನಮ್ಮ ಕಾಲೇಜುಗಳಿಂದಲೂ ಶಾಲೆಗಳಿಂದಲೂ ಹೊರಬರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಿಂದ ಗುಣಿಸಿ ಈ ರಾಷ್ಟ್ರಕ್ಕೆ ಎಷ್ಟು ಸಾವಿರ ವರುಷಗಳು ನಷ್ಟವಾಗಿವೆ ಎಂಬುದನ್ನು ಕಂಡುಹಿಡಿಯಿರಿ. ನಮಗೆ ವಿರೋಧವಾಗಿರುವ ಆಕ್ಷೇಪಣೆ. ನಮಗೆ ಆರಂಭಶಕ್ತಿ ಇಲ್ಲವೆಂಬುದು. ನಮ್ಮ ಅತ್ಯಂತ ಅಮೂಲ್ಯವಾದ ವರುಷಗಳನ್ನೆಲ್ಲ ನಾವು ಒಂದು ಪರಭಾಷೆಯ ನೈಪುಣ್ಯಕ್ಕಾಗಿಯೇ ವಿನಿಯೋಗಿಸಬೇಕಾಗಿರುವಾಗ ನಮಗೆ ಆರಂಭಶಕ್ತಿ ಎಲ್ಲಿಂದ ಬರಬೇಕು. ಈ ಪ್ರಯತ್ನದಲ್ಲಿಯೂ ನಾವು ಅಪಜಯ ಹೊಂದುತ್ತೇವೆ. ನೆನ್ನೆ ಮತ್ತು ಇವತ್ತು ಶ್ರೋತೃಗಳನ್ನು, ಶ್ರೋತೃಗಳ ಗಮನವನ್ನು. ಸೆಳೆದಿಡಲು ಯಾವ ಭಾಷಣಕಾರರಿಗಾದರೂ, ಮಿ. ಹಿಗಿನ್ ಬಾತಮ್ಸ್‌ರಿಗೆ ಸಾಧ್ಯವಾದಂತೆ, ಸಾಧ್ಯವಾಯಿತೆ? ಜನರನ್ನು ಆಕರ್ಷಿಸಲು ಸಾಧ್ಯವಾಗದುದಕ್ಕೆ ಹಿಂದಿನ ಭಾಷಣಕಾರರದು ತಪ್ಪಲ್ಲ. ಅವರ ಭಾಷಣಗಳಲ್ಲಿ ತಿರುಳು, ನಮಗೆ ಬೇಕಾದಷ್ಟು ಅಥವಾ ಹೆಚ್ಚಾಗಿಯೇ ಇದ್ದಿತು. ಆದರೆ ಅವರ ಭಾಷಣಗಳು ನಮ್ಮ ತಲೆಗೆ ಹತ್ತಲಿಲ್ಲ. ನಾನು ಈ ಮಾತನ್ನು ಕೇಳಿದ್ದೇನೆ: ಇಂದು ರಾಷ್ಟ್ರವನ್ನು ನಡೆಸಿಕೊಂಡು ಹೋಗುತ್ತಿರುವುದೂ ರಾಷ್ಟ್ರಕ್ಕೆ ಎಲ್ಲವನ್ನೂ ಮಾಡುತ್ತಿರುವುದೂ ಇಂಗ್ಲಿಷ್ ಶಿಕ್ಷಣ ಹೊಂದಿದ ಇಂಡಿಯ—ಎಂದು. ಹಾಗಿಲ್ಲದೆ

ಇದ್ದಿದ್ದರೆ ಘೋರಕೃತ್ಯವಾಗುತ್ತಿತ್ತೆಂಬುದು ಅವರ ಅಭಿಪ್ರಾಯ ನಮಗೆ ದೊರೆಯುತ್ತಿರುವ ವಿದ್ಯಾಭ್ಯಾಸವೇದರೆ ಇಂಗ್ಲಿಷ್ ವಿದ್ಯಾಭ್ಯಾಸವೆ. ಅಂದಮೇಲೆ ಅದಕ್ಕಾಗಿ ನಾವು ಏನನ್ನಾದರೂ ತೋರಿಸಲೇ ಬೇಕಷ್ಟೆ. ಆದರೆ ನಾವು ಕಳೆದ ಐವತ್ತು ವರುಷಗಳಲ್ಲಿ ನಮ್ಮ ಪ್ರಾಂತಭಾಷೆಗಳ ಮೂಲಕ ಶಿಕ್ಷಣವನ್ನು ಹೊಂದಿದ್ದೆವೆಂದು ಭಾವಿಸಿ. ಆಗ, ಈ ದಿನ ನಾವು ಏನಾಗಿರಬೇಕಾಗಿತ್ತು? ಇಂದು ನಾವು ಸ್ವತಂತ್ರಭಾರತವನ್ನು ಹೊಂದಿರುತ್ತಿದ್ದೆವು. ನಮ್ಮ ವಿದ್ಯಾವಂತರು ತಮ್ಮ ರಾಷ್ಟ್ರದಲ್ಲಿಯೇ ಪರಕೀಯರಂತಲ್ಲದೆ, ದೇಶದ ಹೃದಯಕ್ಕೆ ತಮ್ಮ ಮಾತುಗಳನ್ನು ಹೇಳುತ್ತಿದ್ದರು. ಅವರು ಬಡವರೊಳಗೆ ಬಡವರೊಂದಿಗೆ ಕೆಲಸ ಮಾಡುತ್ತಿದ್ದರು. ಈ ಐವತ್ತು ವರುಷಗಳಲ್ಲಿ ಅವರು ಏನು ಸಂಪಾದಿಸಿದ್ದರೋ (ಜ್ಞಾನ) ಅದು ರಾಷ್ಟ್ರದ ಆಸ್ತಿಯಾಗಿರುತ್ತಿದ್ದಿತು. ಇಂದು ನಮ್ಮ ಹೆಂಡತಿಯರು ಸಹ, ನಮ್ಮ ಅತ್ಯುತ್ತಮ ಆಲೋಚನೆಗಳಲ್ಲಿ ಭಾಗಿಗಳಲ್ಲ. ಪ್ರೊಫೆಸರ್ ಬೋಸ್, ಪ್ರೊಫೆಸರ್ ರೇ ಇವರ ಅದ್ಭುತ ಪರಿಶೋಧನೆಗಳನ್ನು ನೋಡಿ. ಅವರ ಪರಿಶೋಧನೆಗಳು ಜನತೆಯ ಸಾಮಾನ್ಯ ಆಸ್ತಿ ಆಗದಿರುವುದು ಅವಮಾನಕರವಲ್ಲವೆ?

"ಈಗ ಮತ್ತೊಂದು ವಿಷಯಕ್ಕೆ ತಿರುಗೋಣ. ಕಾಂಗ್ರೆಸ್ಸು, ಸ್ವಯಮಾಡಳಿತವನ್ನು ಕುರಿತು ಒಂದು ನಿರ್ಣಯವನ್ನು ಅಂಗೀಕರಿಸಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಮುಸ್ಲಿಂಲೀಗ್ ಸಂಸ್ಥೆಯೂ ತಮ್ಮ ಕರ್ತವ್ಯವನ್ನು ಮಾಡಿ ನಿಷ್ಕೃಷ್ಟವಾದ ಸೂಚನೆಯೊಂದಿಗೆ ದೇಶದ ಮುಂದೆ ಬರುವುದರಲ್ಲಿ ನನಗೆ ಸಂದೇಹವಿಲ್ಲ. ಆದರೆ ನನಗೆ, ಅವರು ಏನು ಮಾಡುತ್ತಾರೆ ಎಂಬುದರಲ್ಲಿ, ಅಷ್ಟು ಶ್ರದ್ಧೆಯಿಲ್ಲವೆಂದೂ, ವಿದ್ಯಾರ್ಥಿ ಪ್ರಪಂಚವೂ ಜನತೆಯೂ ಏನನ್ನು ಮಾಡಬಲ್ಲರೋ ಅದರಲ್ಲಿ ನನಗೆ ಆಸಕ್ತಿಯಿದೆಯೆಂದೂ ಹೇಳುವುದರಲ್ಲಿ ನನಗೆ ಸಂಕೋಚವಿಲ್ಲ. ಕಾಗದದ ಮೇಲೆ ಮಾಡುವ ಯಾವುದರಿಂದಲೂ ನಮಗೆ ಸ್ವಯಮಾಡಳಿತ ಸಿಕ್ಕುವುದಿಲ್ಲ. ಎಷ್ಟೊಂದು ಭಾಷಣಗಳನ್ನು ಮಾಡಿದರೂ ನಾವು ಸ್ವಯಮಾಡಳಿತಕ್ಕೆ ಅರ್ಹರಾಗಲಾರೆವು. ಅದಕ್ಕೆ ನಮ್ಮನ್ನು ಅರ್ಹರನ್ನಾಗಿ ಮಾಡುವುದು ನಮ್ಮ ಚಾರಿತ್ರ್ಯವೊಂದೇ; ಮತ್ತು ನಮ್ಮನ್ನು ನಾವು ಹೇಗೆ ಆಳಿಕೊಳ್ಳುತ್ತೇವೆ? ಎಂಬುದು.

"ಈ ಸಂಜೆ, ನಾನು ಗಟ್ಟಿಯಾಗಿ ಯೋಚಿಸಲು ಬಯಸುತ್ತೇನೆ. ಭಾಷಣ ಮಾಡುವುದು ನನ್ನ ಇಷ್ಟವಲ್ಲ. ಈ ಸಂಜೆ ನಾನು ಸಂಕೋಚವಿಲ್ಲದೆ ಮಾತನಾಡಿದರೆ, ಗಟ್ಟಿಯಾಗಿ ಯೋಚನೆ ಮಾಡುತ್ತಿರುವ ಮನುಷ್ಯನ ಆಲೋಚನೆಗಳಲ್ಲಿ ನೀವೂ ಭಾಗಿಯಾಗುತ್ತಿದ್ದೀರೆಂದು ಭಾವಿಸಿದ್ದೇನೆ. ನಾನು ಸಭ್ಯತನದ ಮಿತಿಯನ್ನು ಮೀರುತ್ತಿದ್ದೇನೆಂದು ನಿಮಗೆ ತೋರಿದರೆ ನನ್ನ ಸ್ವಾತಂತ್ರ್ಯಕ್ಕಾಗಿ ನನ್ನನ್ನು ಮನ್ನಿಸಿ. ನಾನು ನೆನ್ನೆ ಸಂಜೆ, ಕಾಶೀ ವಿಶ್ವನಾಥ ದೇವಾಲಯಕ್ಕೆ ಭೇಟಿಕೊಟ್ಟೆ. ಆ ಗಲ್ಲಿಗಳಲ್ಲಿ ಹೋಗುತ್ತಿರುವಾಗ ಈ ಆಲೋಚನೆಗಳು ನನ್ನಮನದಲ್ಲಿ ಉಂಟಾದವು. ಒಬ್ಬ ಹೊಸಬ, ಅಂತರಿಕ್ಷದಿಂದ ಈ ದಿವ್ಯದೇವಾಲಯಕ್ಕೆ ಇಳಿದರೆ, ನಾವು ಹಿಂದುಗಳು ಎಂಥವರೆಂದು ಅವನು ಪರಿಗಣಿಸಿಸುವುದಾದರೆ, ನಮ್ಮನ್ನು ಖಂಡಿಸಿದರೆ ಅದು ನ್ಯಾಯವಾಗುವುದಿಲ್ಲವೆ? ಈ ಬೃಹತ್

ದೇವಾಲಯ ನಮ್ಮ ಚಾರಿತ್ರ್ಯದ ಒಂದು ಪ್ರತಿಬಿಂಬವಲ್ಲವೆ? ನಾನು ಹಿಂದುವಾಗಿ ಭಾವನಾಪರತೆಯಿಂದ ಮಾತನಾಡುತ್ತೇನೆ. ನಮ್ಮ ಪವಿತ್ರ ದೇವಾಲಯಗಳ ಓಣಿಗಳು ಅಷ್ಟು ಕೊಳಕಾಗಿರುವುದು ಸರಿಯೆ? ಸುತ್ತ ಹೇಗೆ ಹೇಗೋ ಮನೆಗಳನ್ನು ಕಟ್ಟಿದ್ದಾರೆ. ಓಣಿಗಳು ಬಹಳ ತಿರುವುಗಳುಳ್ಳವಾಗಿ ಇಕ್ಕಟ್ಟಾಗಿವೆ. ನಮ್ಮ ದೇವಾಲಯಗಳು ಸಹ ವೈಶಾಲ್ಯ ಮತ್ತು ಪರಿಶುದ್ಧತೆಯ ಮಾದರಿಗಳಾಗದಿದ್ದಲ್ಲಿ ನಮ್ಮ ಸ್ವಯಮಾಡಳಿತ ಏನಾಗಬಲ್ಲದು? ಆಂಗ್ಲೇಯರು, ತಮ್ಮ ಇಚ್ಛೆಯಿಂದಲೇ ಆಗಲೀ ಅಥವಾ ಬಲಾತ್ಕಾರ ದಿಂದಲೇ ಆಗಲೀ ಪೂರ್ಣವಾಗಿ ಭಾರತವನ್ನು ಬಿಟ್ಟು ಹೊರಟ ಕೂಡಲೇ, ನಮ್ಮ ದೇವಾಲಯಗಳು ಪವಿತ್ರತೆಯ ಸ್ಥಾನಗಳಾಗುತ್ತವೆಯೆ?

"ನಾವು ಸ್ವಯಮಾಡಳಿತವನ್ನು ಕುರಿತು ಯೋಚಿಸುವುದಕ್ಕೆ ಮುಂಚೆ ಆವಶ್ಯಕ ವಾದ ಕಷ್ಟದುಡಿಮೆಯನ್ನು ಮಾಡಬೇಕಾಗಿದೆ. ಪ್ರತಿನಗರದಲ್ಲಿಯೂ ಎರಡು ಭಾಗ ಗಳಿವೆ; ಕಂಟೋನ್ಮೆಂಟ್ ಮತ್ತು ನಗರ ಭಾಗ. ನಗರ, ಬಹುಪಾಲು ಕೊಳಕು ಗುಂಡಿ. ಆದರೆ ನಾವು ನಗರ ಜೀವನ ಅಭ್ಯಾಸವಿಲ್ಲದ ಜನ. ನಮಗೆ ನಗರಜೀವನ ಬೇಕಾದರೆ, ನಾವು ನಿರಾಯಾಸವಾಗಿ ಗುಡಿಸಲು ಜೀವನದ ಪುನರಾವರ್ತನೆ ಮಾಡಲಾರೆವು. ಭಾರತದ ಬೊಂಬಾಯಿನ ಬೀದಿಗಳಲ್ಲಿ ಜನ, ಮಹಡಿ ಮನೆಗಳಲ್ಲಿರುವವರು ಯಾವಾಗ ತಮ್ಮ ತಲೆಯ ಮೇಲೆ ಉಗುಳುತ್ತಾರೋ ಎಂದು ಸದಾ ಹೆದರುತ್ತ ಜೀವಿಸುವುದನ್ನು ಯೋಚಿಸುವುದು ಸುಖಕರವಲ್ಲ. ನಾನು ತುಂಬ ರೈಲು ಪ್ರಯಾಣ ಮಾಡುತ್ತೇನೆ. ಮೂರನೆಯ ದರ್ಜೆಯ ಪ್ರಯಾಣಿಕರ ಕಷ್ಟವನ್ನು ನಾನು ನೋಡುತ್ತೇನೆ. ಆದರೆ ಅವರ ಕಷ್ಟಗಳಿಗೆಲ್ಲ ರೈಲ್ವೆ ಆಡಳಿತವನ್ನು ತೆಗಳುವುದು ಸರಿಯಲ್ಲ. ನಮಗೆ ಪರಿ ಶುದ್ಧತೆಯ ಪ್ರಾಥಮಿಕ ನಿಯಮಗಳು ಸಹ ತಿಳಿಯವು. ನಾವು ರೈಲುಗಾಡಿಯ ನೆಲದ ಮೇಲೆ ಎಲ್ಲಿಯಾದರೂ ಉಗುಳಿ ಬಿಡುತ್ತೇವೆ. ಆ ಸ್ಥಳ ಅನೇಕ ವೇಳೆ ಮಲಗಲು ಉಪಯೋಗವಾಗುತ್ತದೆ ಎಂಬುದನ್ನು ಯೋಚಿಸುವುದೇ ಇಲ್ಲ. ನಾವು ಆ ಸ್ಥಳವನ್ನು ಹೇಗೆ ಉಪಯೋಗಿಸುತ್ತೇವೆ ಎಂದು ಯೋಚಿಸುವುದಿಲ್ಲ. ಪರಿಣಾಮ, ಗಾಡಿಯಲ್ಲಿ ಅವರ್ಣನೀಯ ಕೊಳಕು. ಮೇಲುದರ್ಜೆಯ ಪ್ರಯಾಣಿಕರೆನಿಸಿಕೊಳ್ಳುವವರು ತಮಗಿಂತ ಬಡವರಾದ ತಮ್ಮ ಸಹೋದರರನ್ನು ಹೆದರಿಸಿಯೇ ಬಿಡುತ್ತಾರೆ. ಅವರ ಜೊತೆ ನಾನು ವಿದ್ಯಾರ್ಥಿ ಪ್ರಪಂಚವನ್ನೂ ನೋಡಿದ್ದೇನೆ. ಕೆಲವು ವೇಳೆ ಅವರೂ ಉತ್ತಮರಾಗಿ ನಡೆಯುವುದಿಲ್ಲ. ವಿದ್ಯಾರ್ಥಿಗಳು ಇಂಗ್ಲಿಷು ಮಾತನಾಡಬಲ್ಲರು. ನಾರ್ಫೋಕ್ ಜಾಕೆಟ್ ತೊಟ್ಟಿರುತ್ತಾರೆ. ಆದುದರಿಂದ ಬಲಪ್ರಯೋಗದಿಂದ ಒಳಕ್ಕೆ ನುಗ್ಗಿ ಸ್ಥಳವನ್ನು ಆಕ್ರಮಿಸುತ್ತಾರೆ.

"ಎಲ್ಲಕಡೆಗೂ ಶೋಧನದೀಪವನ್ನು ತಿರುಗಿಸಿದ್ದೇನೆ. ಭಾಷಣಮಾಡಲು ನನಗೆ ಅಧಿಕಾರ ಕೊಟ್ಟಿರುವುದರಿಂದ, ನನ್ನ ಹೃದಯವನ್ನು ನಿಮ್ಮ ಮುಂದೆ ಬಿಚ್ಚಿಡುತ್ತಿದ್ದೇನೆ. ಸ್ವಯಮಾಡಳಿತಕ್ಕೆ ಮುಂದುವರಿಯುವುದರ ಜೊತೆಯಲ್ಲಿ ಈ ದೋಷಗಳನ್ನೆಲ್ಲ ನಾವು ತಪ್ಪದೆ ಸರಿಪಡಿಸಬೇಕು. ಈಗ ನಿಮ್ಮನ್ನು ಮತ್ತೊಂದು ದೃಶ್ಯಕ್ಕೆ ಪ್ರವೇಶಗೊಳಿಸುತ್ತೇನೆ.

ನೆನ್ನೆ ನಮ್ಮ ಕಾರ್ಯಕ್ರಮಗಳ ಅಧ್ಯಕ್ಷರಾಗಿದ್ದ ಮಹಾರಾಜರು, ಭಾರತದ ದಾರಿದ್ರ್ಯವನ್ನು ಕುರಿತು ಮಾತನಾಡಿದರು. ಉಳಿದ ಭಾಷಣಕಾರರೂ ಆ ವಿಷಯದ ಮೇಲೆ ತುಂಬ ಒತ್ತಿ ಹೇಳಿದರು. ಆದರೆ ಅಸ್ತಿಭಾರ ಶಿಲಾ ಸ್ಥಾಪನೆಯ ಸಮಾರಂಭದಲ್ಲಿ, ವೈಸರಾಯರಿಂದ ನಡೆದ ವಿಶಾಲ ಹಸಿರು ಚಪ್ಪರದಲ್ಲಿ, ನಾವು ನೋಡಿದುದೇನು? ನಿಜವಾಗಿ ಅತ್ಯಂತ ವೈಭವಯುಕ್ತವಾದ ಪ್ರದರ್ಶನ. ವಜ್ರವೈಢೂರ್ಯಗಳ ಮೆರವಣಿಗೆ. ಪ್ಯಾರಿಸ್ಸಿನಿಂದ ಬಂದ ಎಂತಹ ದೊಡ್ಡ ರತ್ನಪಡಿ ವ್ಯಾಪಾರಿಯ ಕಣ್ಣಿಗೂ ಸೊಗಸಾದ ಹಬ್ಬ. ಹೀಗೆ ವೈಭವ ಅಲಂಕೃತರಾದ ಶ್ರೀಮಂತ ವರ್ಗವನ್ನು ನಾನು ಭಾರತದ ಬಡವರೊಂದಿಗೆ ಹೋಲಿಸುತ್ತೇನೆ. ಈ ಶ್ರೀಮಂತರಿಗೆ ಹೀಗೆ ಹೇಳಬೇಕೆಂದು ನನಗೆ ಅನಿಸಿತು. 'ನೀವು ಈ ವಜ್ರ ವೈಢೂರ್ಯಗಳನ್ನು ತೆಗೆದು ಅವನ್ನೆಲ್ಲ ಭಾರತದ ನಿಮ್ಮ ಬಡ ಜನರಿಗಾಗಿ ವಿಶ್ವಸ್ಥರಾಗಿ ಇಟ್ಟುಕೊಂಡಲ್ಲದೆ ಭಾರತಕ್ಕೆ ಮೋಕ್ಷವಿಲ್ಲ. ಬ್ರಿಟಿಷ್ ಚಕ್ರವರ್ತಿಗೂ, ವೈಸ್ರಾಯ್ ಲಾರ್ಡ್ ಹಾರ್ಡಿಂಜರಿಗೂ ನಮ್ಮ ಪ್ರಾಮಾಣಿಕ ರಾಜಭಕ್ತಿಯನ್ನು ತೋರಿಸುವುದಕ್ಕಾಗಿ, ನಮ್ಮ ವಜ್ರದ ಪೆಟ್ಟಿಗೆಗಳನ್ನೆಲ್ಲ ಬರಿದು ಮಾಡಿ ಕಾಲಿನಿಂದ ತಲೆಯ ವರೆಗೆ ಭೂಷಿತರಾಗಬೇಕೆಂಬುದು ಅವರ ಇಷ್ಟವೂ ಅಲ್ಲವೆಂದು ನಾನು ನಂಬುತ್ತೇನೆ. ಚಕ್ರವರ್ತಿ ಜಾರ್ಜರೇ ಅಂತಹುದೇನನ್ನೂ ನಿರೀಕ್ಷಿಸುವುದಿಲ್ಲವೆಂಬ ಸಂದೇಶವನ್ನು ನನ್ನ ಜೀವವನ್ನು ಒತ್ತೆಯಿಟ್ಟು ನಿಮಗೆ ಕೊಡಲು ನಾನು ಒಪ್ಪುತ್ತೇನೆ.

"ಸ್ವಾಮಿ, ಭಾರತ ಯಾವುದಾದರೂ ದೊಡ್ಡ ನಗರದಲ್ಲಿ—ಅದು ಬ್ರಿಟಿಷ್ ಇಂಡಿಯ ಆಗಲೀ ಅಥವ ದೇಶೀಯ ರಾಜರು ಆಳುತ್ತಿರುವ ಭಾಗವಾಗಲಿ—ಒಂದು ದೊಡ್ಡ ಅರಮನೆಏಳುತ್ತಿರುವುದೆಂದು ನಾನು ಕೇಳಿದಾಗ ನನಗೆ ತತ್ಕ್ಷಣ ಅಸೂಯೆಯುಂಟಾಗುತ್ತದೆ. 'ಹಾ! ಇದು ವ್ಯವಸಾಯಗಾರರಿಂದ ಬಂದಿರುವ ಹಣ'. ನೂರರಲ್ಲಿ ೭೫ ಜನ ವ್ಯವಸಾಯಗಾರರಾಗಿದ್ದಾರೆ. ನೆನ್ನೆ ರಾತ್ರಿ ಮಿ. ಹಿಗ್ಗನ್‌ಬಾತರವರು ತಮ್ಮ ಹಿತವಾದ ಭಾಷೆಯಲ್ಲಿ, ವ್ಯವಸಾಯಗಾರರು, ಒಂದು ಗರಿಕೆ ಬೆಳೆಯುವೆಡೆ, ಎರಡು ಗರಿಕೆ ಬೆಳೆಯುವವರೆಂದರು. ಆದರೆ ಅವರ ಪರಿಶ್ರಮದ ಫಲವನ್ನು ಪೂರ್ತಿ ನಾವು ತೆಗೆದುಕೊಳ್ಳುವುದಾದರೆ, ಅಥವಾ ಇತರರು ತೆಗೆದುಕೊಳ್ಳಲು ಅವಕಾಶ ಕೊಡುವುದಾದರೆ, ನಮ್ಮಲ್ಲಿ ಹೆಚ್ಚಾಗಿ ಸ್ವಯಮಾಡಳಿತ ಮನೋಭಾವ ಇರಲಾರದು. ನಮ್ಮ ಮುಕ್ತಿ, ರೈತನಿಂದಮಾತ್ರವೇ ಸಾಧ್ಯ. ಲಾಯರುಗಳಾಗಲೀ ಡಾಕ್ಟರುಗಳಾಗಲೀ ಧನಿಕ ಜಮೀನ್ದಾರರಾಗಲೀ ಅದನ್ನು ಸಂಪಾದಿಸಲಾರರು.

"ಈಗ ಕೊನೆಯದು—ಆದರೆ ಕೀಳಲ್ಲದುದು—ಕಳೆದ ಎರಡು ಮೂರು ದಿನಗಳಿಂದ ನಮ್ಮ ಮನಸ್ಸನ್ನು ಕ್ಷೋಭೆಗೊಳಿಸಿದ ವಿಷಯವನ್ನು ಪ್ರಸ್ತಾಪಿಸುವುದು ನನ್ನ ಅವಶ್ಯ ಕರ್ತವ್ಯ. ವೈಸರಾಯರು ಬನಾರಸ್ ಬೀದಿಗಳಲ್ಲಿ ಹೋಗುತ್ತಿರುವಾಗ ನಾವೆಲ್ಲ ತುಂಬ ಕಾತರದ ಕ್ಷಣಗಳನ್ನು ಅನುಭವಿಸಿದೆವು. ಅನೇಕ ಕಡೆ ಗೂಢಚಾರರನ್ನು ನಿಯಮಿಸಿದ್ದರು. ನಮಗೆಲ್ಲ ಅತ್ಯಂತ ಗಾಬರಿಯಾಯಿತು. ನಮ್ಮನ್ನೇ ನಾವು ಕೇಳಿಕೊಂಡೆವು ಯಾಕೆ ಈ ಅಪನಂಬಿಕೆ? ಲಾರ್ಡ್ ಹಾರ್ಡಿಂಜರೂ ಸಹ ಬದುಕಿ ಸಾಯು

ತ್ತಿರುವುದಕ್ಕಿಂತ ಸತ್ತು ಬದುಕುವುದು ಉತ್ತಮವಲ್ಲವೆ? ಒಬ್ಬ ಪ್ರಬಲ ಚಕ್ರವರ್ತಿಯ ಪ್ರತಿನಿಧಿ ಹಾಗೆ ಮಾಡಲಾರ. ಬದುಕಿ ಸಾಯುತ್ತಿರುವುದೂ ಅವನಿಗೆ ಅವಶ್ಯಕವಾಗಿ ತೋರಬಹುದು. ಆದರೆ ಈ ಗುಪ್ತಚಾರರನ್ನು ನಮ್ಮ ಮೇಲೆ ಹೇರುವ ಆವಶ್ಯಕತೆ ಏನಿತ್ತು? ನಾವು ಪೊರೆಯಬಹುದು, ಕೆರಳಬಹುದು, ತೀವ್ರ ಅಸಮಾಧಾನಗೊಳ್ಳ ಬಹುದು. ಆದರೆ ಇಂದು ಭಾರತ, ತನ್ನ ಅತೃಪ್ತಿಯಿಂದ ದೊಡ್ಡ ಕ್ರಾಂತಿಕಾರರ ಸೈನ್ಯ ವನ್ನೇ ಸೃಷ್ಟಿಸಿದೆ ಎಂಬುದನ್ನು ನಾವು ಮರೆಯಬಾರದು. ನಾನೇ ಒಬ್ಬ ಅರಾಜಕತಾ ವಾದಿ; ಆದರೆ ಬೇರೆ ಬಗೆ ನಮ್ಮಲ್ಲಿ ಒಂದು ವರ್ಗದ ಕ್ರಾಂತಿಕಾರರಿದ್ದಾರೆ. ಅವರನ್ನು ನಾನು ಸಂಧಿಸುವುದು ಸಾಧ್ಯವಾದರೆ ಅವರಿಗೆ ಹೀಗೆ ಹೇಳುತ್ತೇನೆ: ಭಾರತ ವಿಜೇತರನ್ನು ಜಯಿಸುವುದಾದರೆ ನಿಮ್ಮ ಅರಾಜಕತೆಗೆ ಇಲ್ಲಿ ಸ್ಥಾನವಿಲ್ಲ. ಅದೊಂದು ಭಯದ ಚಿಹ್ನೆ. ನಾವು ದೇವರನ್ನು ನಂಬಿ, ಅವನಿಗೆ ಭಯಪಡುವವರಾದರೆ ಇನ್ನಾರಿಗೂ ಹೆದರ ಬೇಕಾದುದಿಲ್ಲ. ರಾಜರಿಗೂ ವೈಸರಾಯರಿಗೂ ಗುಪ್ತಚಾರರಿಗೂ ಚಕ್ರವರ್ತಿ ಜಾರ್ಜ್‌ರಿಗೂ ಸಹ–ಭಯಪಡಬೇಕಾದುದಿಲ್ಲ.

"ಅರಜಕತಾವಾದಿಯನ್ನು ಅವನ ದೇಶಪ್ರೇಮಕ್ಕಾಗಿ ನಾನು ಗೌರವಿಸುತ್ತೇನೆ. ದೇಶಕ್ಕಾಗಿ ಸಾಯಲು ಸಿದ್ಧವಾಗಿರುವ ಧೈರ್ಯಕ್ಕಾಗಿ ಅವನನ್ನು ಗೌರವಿಸುತ್ತೇನೆ. ಆದರೆ ನಾನು ಅವನನ್ನು ಕೇಳುತ್ತೇನೆ: 'ಕೊಲ್ಲುವುದು ಗೌರವವೆ? ಕೊಲೆಪಾತಕಿಯ ಬಾಕು, ಗೌರವಾರ್ಹ ಮರಣದ ಮುನ್‌ಸೂಚನೆಯಾಗಲು ಅರ್ಹವೆ?' ಅಲ್ಲ ಎನ್ನುತ್ತೇನೆ ನಾನು. ಇಂತಹ ಮಾರ್ಗಕ್ಕೆ ಯಾವ ಧರ್ಮಗ್ರಂಥಗಳಲ್ಲಿಯೂ ಆಧಾರವಿಲ್ಲ. ಭಾರತದ ಮುಕ್ತಿಗೆ, ಇಂಗ್ಲಿಷರು ನಿವೃತ್ತರಾಗಬೇಕು, ಅವರನ್ನು ಓಡಿಸಬೇಕು ಎಂದು ನನಗೆ ತೋರಿದರೆ ಅವರು ಹೋಗಬೇಕೆಂದು ಘೋಷಿಸಲು ನಾನು ಹಿಂದೆಗೆಯುವುದಿಲ್ಲ. ಆ ನಂಬಿಕೆಯ ರಕ್ಷಣೆಯಲ್ಲಿ ಸಾಯುವುದಕ್ಕೂ ಸಿದ್ಧನಾಗಿರುತ್ತೇನೆ. ಇದು ನನ್ನ ಅಭಿಪ್ರಾಯವಲ್ಲಿ ಗೌರವದ ಮರಣ. ಬಾಂಬು ಎಸೆಯುವವನು ರಹಸ್ಯ ಪಿತೂರಿ ನಡೆಸುತ್ತಾನೆ, ಬಹಿರಂಗ ವಾಗಿ ಬರಲು ಹೆದರುತ್ತಾನೆ; ಸಿಕ್ಕಿ ಬಿದ್ದಾಗ, ತನ್ನ ತಪ್ಪುದಾರಿಯ ಉತ್ಸಾಹಕ್ಕಾಗಿ ದಂಡನೆ ಅನುಭವಿಸುತ್ತಾನೆ.

"ಹೀಗೆ ನಾವು ಮಾಡದೆ ಹೋಗಿದ್ದರೆ, ಕೆಲವರು ಬಾಂಬುಗಳನ್ನು ಎಸೆಯದೆ ಹೋಗಿದ್ದರೆ (ವಂಗ ವಿಭಜನೆಯ ಸಂದರ್ಭದಲ್ಲಿ), ನಾವು ಇದುವರೆಗೆ ಹೊಂದಿರುವುದನ್ನು ಎಂದಿಗೂ ಹೊಂದುತ್ತಿರಲಿಲ್ಲ–ಎಂದು ನನಗೆ ಹೇಳುತ್ತಾರೆ (ಶ್ರೀಮತಿ ಬೆಸೆಂಟ್-ದಯವಿಟ್ಟು ನಿಲ್ಲಿಸಿ). ಬಂಗಾಳದ ಒಂದು ಸಭೆಯಲ್ಲಿ ನಾನು ಇದೇ ಮಾತನ್ನು ಹೇಳಿದೆ. ಮಿ. ಲಿಯನ್ ಅಧ್ಯಕ್ಷತೆ ವಹಿಸಿದ್ದರು. ನಾನು ಹೇಳುತ್ತಿರುವುದು ಅವಶ್ಯಕವೆಂದು ಭಾವಿಸುತ್ತೇನೆ. ನಾನು ಭಾಷಣ ನಿಲ್ಲಿಸಬೇಕೆಂದು ಹೇಳುವುದಾದರೆ ನಿಲ್ಲಿಸುತ್ತೇನೆ. (ಅಧ್ಯಕ್ಷರ ಕಡೆ ತಿರುಗಿ) ನಿಮ್ಮ ಅಪ್ಪಣೆ ಕೇಳುತ್ತೇನೆ. ನಾನು ಮಾತನಾಡುತ್ತಿರುವಂತೆ ಮುಂದುವರಿಸುವುದರಿಂದ ನಾನು ದೇಶದ ಮತ್ತು ಸಾಮ್ರಾಜ್ಯದ ಸೇವೆ ಮಾಡು ತ್ತಿಲ್ಲವೆಂದು ನೀವು ಭಾವಿಸುವುದಾದರೆ, ನಾನು ಖಂಡಿತ ನಿಲ್ಲಿಸುತ್ತೇನೆ. (ಮುಂದುವರಿಸಿ

ಎಂಬ ಕೂಗು) (ಅಧ್ಯಕ್ಷರು 'ನಿಮ್ಮ ಉದ್ದೇಶವನ್ನು ದಯವಿಟ್ಟು ವಿವರಿಸಿ') "ನಾನು ಇಷ್ಟು ಮಾತ್ರ..." (ಮತ್ತೆ ಗದ್ದಲ) ಮಿತ್ರರೇ ಈ ಗದ್ದಲಕ್ಕಾಗಿ ಕೋಪಿಸಿಕೊಳ್ಳಬೇಡಿ. ಶ್ರೀಮತಿ ಬೆಸೆಂಟರು ಈ ಸಂಜೆ, ನಾನು ಭಾಷಣವನ್ನು ನಿಲ್ಲಿಸಬೇಕೆಂದು ಹೇಳುತ್ತಿರುವುದರ ಕಾರಣ, ಯುವಜನರಾದ ನಿಮ್ಮ ಮುಂದೆ ಗಟ್ಟಿಯಾಗಿ ಯೋಚಿಸಿ ನಾನು ತಪ್ಪುಮಾಡುತ್ತಿದ್ದೇನೆಂದು. ಹಾಗಿದ್ದರೂ ಸಹ ನಾನು ಸರಳವಾಗಿ ಇಷ್ಟು ಹೇಳುತ್ತೇನೆ. ನಾವು ನಮ್ಮ ಗುರಿಯನ್ನು ಮುಟ್ಟಬೇಕಾದರೆ ಎರಡು ಕಡೆಯೂ ಭಾರತದಲ್ಲಿ ಈ ಸಂಶಯ ವಾತಾವರಣವನ್ನು ತೊಲಗಿಸಬೇಕಾಗಿದೆ. ನಾವು ಹೊಂದಿರುವ ಸಾಮ್ರಾಜ್ಯ ಪರಸ್ಪರ ಪ್ರೇಮ ಮತ್ತು ನಂಬಿಕೆಯ ಮೇಲೆ ಆಧಾರಿತವಾಗಿರಬೇಕು. ನಾವು ನಮ್ಮ ಮನೆಗಳಲ್ಲಿ ಬೇಜವಾಬ್ದಾರಿಯಿಂದ ಮಾತನಾಡುವ ಬದಲು ಈ ಕಾಲೇಜಿನ ನೆರಳಿನಲ್ಲಿ ಮಾತನಾಡುವುದು ಉತ್ತಮವಲ್ಲವೆ? ಈ ವಿಷಯಗಳನ್ನು ನಾವು ಬಹಿರಂಗವಾಗಿ ಮಾತನಾಡುವುದು ಹೆಚ್ಚು ಉತ್ತಮವೆಂದು ನಾನು ಭಾವಿಸುತ್ತೇನೆ. ಈ ಮುಂಚೆ ನಾನು ಹೀಗೆ ಮಾಡಿ ಉತ್ತಮ ಫಲಿತಾಂಶಗಳನ್ನು ಪಡೆದಿದ್ದೇನೆ. ವಿದ್ಯಾರ್ಥಿಗಳು ಚರ್ಚಿಸದಿರುವ ಸಂಗತಿಗಳು ಯಾವುವೂ ಇಲ್ಲವೆಂಬುದು ನನಗೆ ಗೊತ್ತು. ವಿದ್ಯಾರ್ಥಿಗಳಿಗೆ ತಿಳಿಯದ ವಿಷಯ ಯಾವುದೂ ಇಲ್ಲ. ಆದುದರಿಂದ ನಾನು ಶೋಧನದೀಪವನ್ನು ನಿಮ್ಮ ಕಡೆಗೇ ತಿರುಗಿಸುತ್ತಿದ್ದೇನೆ. ಈ ದೇಶದ ಹೆಸರನ್ನು ನಾನು ತುಂಬ ಪ್ರೀತಿಸುತ್ತೇನೆ. ಆದರಿಂದಲೇ ನಿಮ್ಮೊಂದಿಗೆ ಈ ವಿಚಾರ ವಿನಿಮಯ ಮಾಡುತ್ತಿದ್ದೇನೆ. ಭಾರತವಲ್ಲಿ ಅರಾಜಕತೆಗೆ ಸ್ಥಾನವಿಲ್ಲವೆಂದು ನಿಮ್ಮಲ್ಲಿ ನಿವೇದಿಸುತ್ತೇನೆ. ನಾವು ಆಳ್ವಿಕೆಗಾರರಿಗೆ ಹೇಳ ಬಯಸುವುದನ್ನು ಸ್ಪಷ್ಟವಾಗಿ ನಿಸ್ಸಂಕೋಚವಾಗಿ ಬಹಿರಂಗವಾಗಿ ಹೇಳೋಣ. ನಾವು ಹೇಳಬೇಕಾಗಿರುವುದು ಅವರಿಗೆ ಪ್ರಿಯವಾಗದಿದ್ದರೆ, ಪರಿಣಾಮವನ್ನೂ ಎದುರಿಸೋಣ. ಆದರೆ ಬೈಯುವುದು ಬೇಡ.

"ಆ ದಿನ ನಾನು, ತುಂಬ ತೆಗಳಿಕೆಗೆ ಪಾತ್ರರಾದ ಸಿವಿಲ್ ಸರ್ವಿಸ್‌ನ ಸದಸ್ಯರೊಬ್ಬರೊಂದಿಗೆ ಮಾತನಾಡುತ್ತಿದ್ದೆ. ಸಿವಿಲ್ ಸರ್ವಿಸ್ ಸದಸ್ಯರ ಜೊತೆ, ನನಗೆ ಸಹಮತವಿರುವ ವಿಷಯಗಳು ಬಹಳ ಇಲ್ಲ. ಆದರೆ ನನ್ನೊಂದಿಗೆ ಅವರು ಮಾತನಾಡುತ್ತಿದ್ದ ಕ್ರಮವನ್ನು ಮೆಚ್ಚದಿರುವುದು ನನಗೆ ಸಾಧ್ಯವಾಗಲಿಲ್ಲ. ಅವರು ಹೀಗೆ ಹೇಳಿದರು. 'ಮಿ. ಗಾಂಧೀ ನೀವು ಒಂದು ಗಳಿಗೆಯಾದರೂ ನಾವೆಲ್ಲ–ಸಿವಿಲ್ ಸರ್ವೆಂಟರು–ಒಂದು ಕೆಟ್ಟ ಗುಂಪು. ಯಾರನ್ನು ಆಳಲು ನಾವು ಬಂದಿದ್ದೇವೆಯೋ ಅವರನ್ನು ತುಳಿಯುವುದೇ ನಮ್ಮ ಗುರಿ–ಎಂದು ನೀವು ಭಾವಿಸುತ್ತೀರಾ?' ನಾನು 'ಇಲ್ಲ'ವೆಂದು ಹೇಳಿದೆ. ಆತ 'ಹಾಗಾದರೆ ನಿಮಗೆ ಅವಕಾಶ ಸಿಕ್ಕಿದರೆ ನಮ್ಮ ಪರವಾಗಿ ಒಂದು ಮಾತು ಹಾಕಿ' ಎಂದರು. ಆ ಮಾತನ್ನು ಹೇಳಲು ನಾನು ಇಲ್ಲಿದ್ದೇನೆ. ಹೌದು ಸಿವಿಲ್ ಸರ್ವಿಸ್‌ನ ಅನೇಕ ಅಧಿಕಾರಿಗಳು ನಿಸ್ಸಂದೇಹವಾಗಿ ಉದ್ಧತರು ಹಿಂಸಾಚಾರಿಗಳು ಮತ್ತು ಕೆಲವು ವೇಳೆ ಆಲೋಚನಾರಹಿತರು, ಇನ್ನೂ ಅನೇಕ ಗುಣವಾಚಕಗಳನ್ನು ಉಪಯೋಗಿಸಬಹುದು. ಇದೆಲ್ಲ ನಿಜವೆಂದು ಒಪ್ಪುತ್ತೇನೆ. ಭಾರತದಲ್ಲಿ ಕೆಲವು ವರುಷ ವಾಸಿಸಿದ

ಮೇಲೆ, ಅವರು, ಅವನತಿಗಿಳಿಯುತ್ತಾರೆಂದೂ ಒಪ್ಪುತ್ತೇನೆ. ಇದರ ಅರ್ಥವೇನು? ಇಲ್ಲಿಗೆ ಬರುವುದಕ್ಕೆ ಮುಂಚೆ, ಅವರು ಸದ್‌ಗೃಸ್ಥರಾಗಿದ್ದರು. ಅವರು ಇಲ್ಲಿ ತಮ್ಮ ನೈತಿಕ ಸತ್ವವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿರಬಹುದಾದರೆ, ನಮ್ಮ ಮೇಲೆಯೂ ಅದೊಂದು ಟೀಕೆಯೆ.

"ನಿಮ್ಮಷ್ಟಕೆ ಯೋಚಿಸಿ ನೋಡಿ. ನೆನ್ನೆ ಯೋಗ್ಯನಾಗಿದ್ದ ಮನುಷ್ಯ, ನನ್ನ ಸಹವಾಸಕ್ಕೆ ಬಂದ ಮೇಲೆ ಕೆಟ್ಟವನಾದರೆ, ಅವನು ಕೆಟ್ಟವನಾಗಲು ಕಾರಣ, ನಾನೇ ಅಥವಾ ಅವನೇ? ಅವರು ಭಾರತಕ್ಕೆ ಬಂದ ಮೇಲೆ ಅವರನ್ನು ಸುತ್ತುವರಿಯುವ ಹೊಗಳು ಭಟ್ಟರು ಮತ್ತು ಸುಳ್ಳಿನ ವಾತಾವರಣ ಅವರನ್ನು ಅನೀತಿಗೆಳೆಯುತ್ತದೆ. ಬಹುಶಃ ನಮ್ಮನ್ನೂ ಎಳೆಯಬಹುದು. ಕೆಲವು ವೇಳೆ ಬೈಗಳವನ್ನು ನಮ್ಮ ಮೇಲೆ ತೆಗೆದುಕೊಳ್ಳುವುದು ಒಳ್ಳೆಯದು. ನಾವು ಸ್ವಯಮಾಡಳಿತವನ್ನು ಹೊಂದಬೇಕಾದರೆ ತೆಗೆದುಕೊಳ್ಳಬೇಕು. ಸ್ವಯಮಾಡಳಿತ ನಮಗೆ ಎಂದಿಗೂ ಕೊಡಲ್ಪಡುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಮತ್ತು ಬ್ರಿಟಿಷ್ ಜನಾಂಗದ ಚರಿತ್ರೆಯನ್ನು ನೋಡಿ. ಅವರು ಸ್ವಾತಂತ್ರ್ಯ ಪ್ರೇಮಿ ಗಳಾದರೂ, ಸ್ವಾತಂತ್ರ್ಯವನ್ನು ತೆಗೆದುಕೊಳ್ಳದವರಿಗೆ ಅದನ್ನು ಕೊಡುವುದರಲ್ಲಿ ಎಂದೂ ಭಾಗಿಯಾಗುವುದಿಲ್ಲ. ನಿಮಗೆ ಬೇಕಾದರೆ ಬೋಯರ್ ಯುದ್ಧದಿಂದ ಪಾಠ ಕಲಿಯಿರಿ. ಸಾಮ್ರಾಜ್ಯದ ಆ ಇಬ್ಬರು (ಇಂಗ್ಲಿಷರು, ಬೋಯರರು) ಕೆಲವು ವರ್ಷಗಳ ಕೆಳಗೆ ಶತ್ರುಗಳಾಗಿದ್ದರು. ಈಗ ಮಿತ್ರರಾಗಿದ್ದಾರೆ..."

ಈ ಸಂದರ್ಭದಲ್ಲಿ ಗೊಂದಲವಾಗಿ ವೇದಿಕೆಯನ್ನು ಬಿಡಲು ಜನ ಚಲಿಸಿದರು. ಆದುದರಿಂದ ಭಾಷಣ ಇದ್ದಕ್ಕಿದ್ದಂತೆ ನಿಂತು ಹೋಯಿತು. ತುಂಬ ಗದ್ದಲವೂ ಕೂಗಾಟವೂ ಆಯಿತು. ಕೊನೆಗೆ ಅಧ್ಯಕ್ಷರೂ ಹೊರಟು ಹೋದರು. ಗಾಂಧಿ, ಒಬ್ಬ ಮಿತ್ರರಿಗೆ "ಬೇಸರಿಕೆಯಿಂದ ಶ್ರೋತೃಗಳು ಹೋಗುವುದನ್ನು ನಾನು ನೋಡಿದ್ದೇನೆ. ಭಾಷಣಗಾರರನ್ನು ಕೂರಿಸಿರುವುದನ್ನೂ ನಾನು ನೋಡಿದ್ದೇನೆ. ಆದರೆ ಅಧ್ಯಕ್ಷನೆ ಸಭೆ ಬಿಟ್ಟು ಹೋಗುವುದನ್ನು ನಾನು ಎಂದೂ ನೋಡಿಲ್ಲ". ಎಂದರು.

ಆ ರಾತ್ರಿ ಬಹಳ ಹೊತ್ತಿನ ಮೇಲೆ ಪೋಲಿಸ್ ಕಮಿಷನರು, ಗಾಂಧೀಯನ್ನು ತತ್‌ಕ್ಷಣ ಬನಾರಸ್‌ನಿಂದ ಹೊರ ಹೋಗುವಂತೆ ಆಜ್ಞೆ ಕಳಿಸಿದರು. ಪಂಡಿತ ಮಾಳವೀಯ ಅವರು ಆಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಪೋಲೀಸ್ ಕಮಿಷನರ ಮನವೊಲಿಸಿದರು. ಆದರೆ ಗಾಂಧೀಜಿ ಮಾರನೆ ಬೆಳಿಗ್ಗೆ ಬನಾರಸ್ ಬಿಟ್ಟರು.

ಶ್ರೀಮತಿ ಬೆಸೆಂಟರು ಗಾಂಧೀಜಿಯ ಭಾಷಣವನ್ನು ಕಟುವಾಗಿ ಟೀಕಿಸಿದರು. ಗಾಂಧಿ ಹೀಗೆ ಹೇಳಿದರು. "ಇಪ್ಪತ್ತು ವರ್ಷದ ಸಾರ್ವಜನಿಕ ಜೀವನದಲ್ಲಿ ನಾನು ಅಸಂಖ್ಯಾತ ಗದ್ದಲ ಮಾಡುವ ಶ್ರೋತೃಗಳ ಸಭೆಯಲ್ಲಿ ಮಾತನಾಡಬೇಕಾಗಿತ್ತು. ಆ ಅನುಭವದಿಂದ ನನಗೆ ಸಾರ್ವಜನಿಕ ಸಭೆಯಲ್ಲಿ ಶ್ರೋತೃಗಳ ನಾಡಿಯ ಮಿಡಿತ ಗೊತ್ತಾಗಿದೆ. ನಾನು, ನನ್ನ ಭಾಷಣದ ಪರಿಣಾಮವೇನೆಂಬುದನ್ನು ಎಚ್ಚರಿಕೆಯಿಂದ ಪರೀಕ್ಷಿಸುತ್ತಿದ್ದೆ. ವಿದ್ಯಾರ್ಥಿ ಪ್ರಪಂಚದಲ್ಲಿ ವಿರೋಧಭಾವ ತೋರಲಿಲ್ಲ. ಶ್ರೀಮತಿ

ಬೆಸೆಂಟರು ಅಡ್ಡಿ ಮಾಡದೆ ಇದ್ದಿದ್ದರೆ ನಾನು ಕೆಲವೇ ನಿಮಿಷಗಳಲ್ಲಿ ನನ್ನ ಭಾಷಣ ವನ್ನು ಮುಗಿಸಿರುತ್ತಿದ್ದೆ. ಕ್ರಾಂತಿಕಾರರನ್ನು ಕುರಿತ ನನ್ನ ಅಭಿಪ್ರಾಯದ ವಿಷಯದಲ್ಲಿ ತಪ್ಪು ಕಲ್ಪನೆ ಉಂಟಾಗುತ್ತಿರಲಿಲ್ಲ."

ಗಾಂಧೀಜಿ, ಗೋಖಲೆಯವರ ಮರಣ ವಾರ್ಷಿಕ ತಿಥಿಯಲ್ಲಿ ಮಾತನಾಡಲು ಪುಣೆಗೆ ಹೋದರು. ಮತ್ತು ಅವರು ಹೋದ ಕಡೆಗಳಲ್ಲೆಲ್ಲ ತಮ್ಮ ಗುರುಗಳನ್ನು ಕುರಿತ ಪ್ರೇಮಪೂರ್ಣ ನೆನಪುಗಳನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಅವರು ಹರಿದ್ವಾರ ಕರಾಚಿ ಮದರಾಸ್‍ಗಳಲ್ಲಿ ಭಾಷಣ ಮಾಡಿದರು. ಸಾಧ್ಯವಾದೆಡೆಗಳಲ್ಲೆಲ್ಲ ಅವರು ಹಿಂದಿಯಲ್ಲಿ ಮಾತನಾಡುತ್ತಿದ್ದರು. ಮತ್ತು ಸ್ವದೇಶಿಯನ್ನು ಹುರುಪಿನಿಂದ ಪ್ರಚಾರಿಸುತ್ತಿದ್ದರು.

ಫೆಬ್ರುವರಿ ೧೪ರಂದು ಗಾಂಧೀ, ಮದರಾಸಿನಲ್ಲಿ ಮಿಶನರಿ ಸಮ್ಮೇಳನದಲ್ಲಿ ಸ್ವದೇಶಿ ಯನ್ನು ಕುರಿತು 'ಕೊನೆಯ ಮಾತನ್ನು' ಹೇಳಿದರು.

"ಸ್ವದೇಶಿ ಎಂಬುದು ದೂರದಲ್ಲಿರುವುದನ್ನು ಬಿಟ್ಟು ಸುತ್ತಲ ಪರಿಸರದ ಉಪಯೋಗಕ್ಕೆ ಮತ್ತು ಸೇವೆಗೆ ಮಿತಿಗೊಳಿಸುವ ನಮ್ಮ ಭಾವನೆ. ಉದಾಹರಣೆಗೆ ಧರ್ಮದ ವಿಷಯದಲ್ಲಿ ಈ ಲಕ್ಷಣವನ್ನು ಅನ್ವಯಿಸಬೇಕಾದರೆ ನಾನು ನನ್ನ ಪೂರ್ವೀಕರ ಧರ್ಮಕ್ಕೆ–ನನ್ನ ಹತ್ತಿರದ ಧಾರ್ಮಿಕ ಪರಿಸರಕ್ಕೆ–ಮಿತಿಗೊಳಿಸಿಕೊಳ್ಳಬೇಕು. ಅದು ದೋಷಪೂರಿತವಾಗಿದೆಯೆಂದು ನನಗೆ ತೋರಿದರೆ ನಾನು ಅದರ ದೋಷಗಳನ್ನು ತೊಡೆದು ಹಾಕಿ ಅದರ ಸೇವೆ ಮಾಡಬೇಕು. ರಾಜಕೀಯದಲ್ಲಿ ನಾನು ದೇಶೀಯ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಅವುಗಳ ಸ್ಪಷ್ಟ ವಾದ ದೋಷಗಳನ್ನೆಲ್ಲ ತೊಡೆದು ಹಾಕಿ ಅದಕ್ಕೆ ಸೇವೆ ಸಲ್ಲಿಸಬೇಕು. ಆರ್ಥಿಕರಂಗದಲ್ಲಿ, ನನ್ನ ತೀರ ನೆರೆ ಹೊರೆಯವರು ತಯಾರಿಸುವ ವಸ್ತುಗಳನ್ನು ಉಪಯೋಗಿಸಿ ದೋಷಗಳಿರುವೆಡೆ ಅವುಗಳನ್ನು ದಕ್ಷವೂ ಪರಿಪೂರ್ಣವೂ ಆಗುವಂತೆ ಮಾಡಬೇಕು. ಅಂತಹ ಸ್ವದೇಶಿಯನ್ನು ನಾವು ಕಾರ್ಯದಲ್ಲಿ ಅನುಸರಿಸಿದರೆ ಸಹಸ್ರಾರು ವರ್ಷಗಳಾಗಬಹುದೆನ್ನುವ ವಾದವಿದೆ. ನಮ್ಮ ಜೀವಿತ ಕಾಲದಲ್ಲಿ ಗುರಿಯನ್ನು ಮುಟ್ಟುವುದು ಸಾಧ್ಯವಿಲ್ಲ. ಹಾಗೆಯೇ ನಾವು ಸ್ವದೇಶಿಯನ್ನೂ ಅದು ಅನೇಕ ತಲೆಮಾರುಗಳವರೆಗೆ ಸಾಧ್ಯವಾಗವುದಿಲ್ಲವೆಂದು ತಿಳಿದರೂ ಬಿಡಲಾಗದು.

"ಧರ್ಮಕ್ಕೆ ರಾಜಕೀಯದೊಡನೆ ಏನೂ ಸಂಬಂಧವಿಲ್ಲವೆಂದು ನಾನು ನಂಬು ವುದಿಲ್ಲ. ಧರ್ಮದಿಂದ ಬಿಡಲ್ಪಟ್ಟ ರಾಜಕೀಯ ಹೂಳುವುದಕ್ಕೆ ಮಾತ್ರ ಅರ್ಹವಾದ ಹೆಣ. ಧರ್ಮವನ್ನೂ ರಾಜಕೀಯವನ್ನು ಬೇರೆ ಬೇರೆ ಮಾಡುವ ಪ್ರಯತ್ನ ಮಾಡಲ್ಪಡದೆ ಇದ್ದಿದ್ದರೆ –ಈಗಲೂ ಮಾಡುತ್ತಿದ್ದಾರೆ–ಅವು ಈಗಿಳಿದಿರುವಂತೆ ಅಧೋಗತಿಗೆ ಇಳಿಯುತ್ತಿರಲಿಲ್ಲ. ರಾಷ್ಟ್ರದ ರಾಜಕೀಯ ಜೀವನ ಸುಗಮವಾದ ಸ್ಥಿತಿಯಲ್ಲಿದೆಯೆಂದು ಯಾರೂ ಭಾವಿಸಿಲ್ಲ. ಸ್ವದೇಶಿ ಭಾವನೆಯನ್ನು ಅನುಸರಿ ಸುವುದರಿಂದ ದೇಶೀಯ ಸಂಸ್ಥೆಗಳೂ ಗ್ರಾಮ ಪಂಚಾಯ್ತಿಗಳೂ ನನ್ನನ್ನು ಆಕರ್ಷಿಸುತ್ತವೆ. ಭಾರತ ನಿಜವಾಗಿ ಪ್ರಜಾರಾಜ್ಯದ ರಾಷ್ಟ್ರ. ಹಾಗಿರುವುದರಿಂದಲೇ ಅದು ಇಲ್ಲಿಯವರೆಗೆ ತನಗೆ ಬಿದ್ದ ಹೊಡೆತಗಳನ್ನೆಲ್ಲ ಸಹಿಸಿಕೊಂಡಿದೆ ಮತ್ತು ಉಳಿದುಕೊಂಡಿದೆ. ರಾಜರೂ ಸರ್ವಾ

ಧಿಕಾರಿಗಳೂ–ದೇಶೀಯರಾಗಲೀ ಪರಕೀಯರಾಗಲೀ–ತೆರಿಗೆಗಳನ್ನು ವಸೂಲು ಮಾಡಲು ಹೊರತು ಜನಸಾಮಾನ್ಯರ ಸಂಪರ್ಕವನ್ನು ಹೊಂದಲೇ ಇಲ್ಲ. ಜನಸಾಮಾನ್ಯರು ತಮ್ಮ ಪಾಡಿಗೆ ಸೀಜರನಿಗೆ ಸಲ್ಲಿಸಬೇಕಾದುದನ್ನು ಸೀಜರನಿಗೆ ಸಲ್ಲಿಸಿ ಉಳಿದ ವಿಷಯಗಳಲ್ಲೆಲ್ಲ ಬಹುಪಾಲು ತನಗೆ ಇಷ್ಟವಾದುದನ್ನು ಮಾಡಿಕೊಂಡಿದ್ದಾರೆ. ಜಾತಿಯ ವಿಶಾಲ ಸಂವಿಧಾನ ಜನತೆಯ ಧಾರ್ಮಿಕ ಆವಶ್ಯಕತೆಗಳನ್ನು ಮಾತ್ರ ಪೂರೈಸಿದುದಲ್ಲದೆ ರಾಜಕೀಯ ಆವಶ್ಯಕತೆಯನ್ನು ಪೂರೈಸಿತು. ಗ್ರಾಮಸ್ಥರು, ತಮ್ಮ ಅಂತರಂಗಿಕ ವಿಷಯ ಗಳನ್ನು ಜಾತಿ ಪದ್ಧತಿಯಿಂದ ಪರಿಹರಿಸಿ ಕೊಳ್ಳುತ್ತಿದ್ದರು. ಅದರಿಂದಲೇ ಆಳ್ವಿಕೆಗಾರರ ದಬ್ಬಾಳಿಕೆಯನ್ನೂ ಎದುರಿಸುತ್ತಿದ್ದರು. ಜಾತಿ ಪದ್ಧತಿಯಿಂದ, ಅದ್ಭುತ ಸಂಘಟನೆ ಯನ್ನು ರಚಿಸಬಲ್ಲುದಾದ ರಾಷ್ಟ್ರವನ್ನು ತಿರಸ್ಕರಿಸುವುದು ಸಾಧ್ಯವಿಲ್ಲ.

"ನಾವು ಆತ್ಮಘಾತಕವಾದ ರೀತಿಯಲ್ಲಿ ಸ್ವದೇಶೀ ಭಾವನೆಗೆ ವಿರೋಧವಾಗಿ ನಡೆ ದುದರಿಂದ ಭಯಂಕರ ಪ್ರತಿಕೂಲ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇವೆ. ನಾವು–ವಿದ್ಯಾವಂತ ವರ್ಗ–ಪರಕೀಯ ಭಾಷೆಯಿಂದ ನಮ್ಮ ಶಿಕ್ಷಣವನ್ನು ಪಡೆದೆವು. ಆದುದರಿಂದ ನಾವು ಜನತೆಯ ಮೇಲೆ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ನಾವು ಜನತೆಯನ್ನು ಪ್ರತಿನಿಧಿಸಲು ಬಯಸುತ್ತೇವೆ. ಆದರೆ ಅಪಜಯ ಹೊಂದುತ್ತೇವೆ. ಇಂಗ್ಲಿಷ್ ಅಧಿಕಾರಿ ಗಳನ್ನು ಕಂಡರೆ ಹೇಗೋ ನಮ್ಮನ್ನು ಕಂಡರೂ ಜನರಿಗೆ ಹಾಗೆಯೇ. ಅವರ ಹೃದಯ, ಇಬ್ಬರಿಗೂ ತಿಳಿದಿಲ್ಲ. ಅವರ ಆಶೋತ್ತರಗಳು ನಮ್ಮ ಆಶೋತ್ತರಗಳಲ್ಲ. ಆದುದ ರಿಂದಲೇ ಭೇದ ಉಂಟಾಗಿದೆ. ವಾಸ್ತವವಾಗಿ ನಮಗೆ ಕಾಣುವುದು ಸಂಘಟನಾ ಪ್ರಯತ್ನದ ಅಭಾವವಲ್ಲ. ಪ್ರತಿನಿಧಿಗಳಿಗೂ ಪ್ರತಿನಿಧಿಸಬೇಕಾದವರಿಗೂ ನಡುವಣ ಸಹಯೋಗದ ಅಭಾವ. ಕಳೆದ ಐವತ್ತು ವರ್ಷಗಳಿಂದ ನಾವು ನಮ್ಮ ದೇಶ ಭಾಷೆಗಳಲ್ಲಿ ಶಿಕ್ಷಣವನ್ನು ಪಡೆದಿದ್ದಿದ್ದರೆ, ನಮ್ಮ ಹಿರಿಯರು ನಮ್ಮ ಸೇವಕರು ನಮ್ಮ ನೆರೆಹೊರೆಯವರು ನಮ್ಮ ಜ್ಞಾನದ ಲಾಭವನ್ನು ಹೊಂದುತ್ತಿದ್ದರು. ಬೋಸ್ ಅಥವಾ ರೇ ಇವರ ಪರಿ ಶೋಧನೆಗಳು ರಾಮಾಯಣ ಮಹಾಭಾರತಗಳಂತೆ ಮನೆಮನೆಯ ಐಶ್ವರ್ಯವಾಗಿ ರುತ್ತಿದ್ದವು. ಆದರೆ ಈಗ ಜನತೆಯ ಮಟ್ಟಿಗೆ, ಈ ಪರಿಶೋಧನೆಗಳನ್ನು ಪರಕೀಯರು ಮಾಡಿದ್ದರೆ ಹೇಗೋ ಹಾಗೆ ಆಗಿದೆ. ಎಲ್ಲ ಶಾಖೆಗಳಲ್ಲಿಯೂ ಬೋಧನೆಯನ್ನು ದೇಶ ಭಾಷೆಗಳ ಮೂಲಕ ಕೊಟ್ಟಿದ್ದರೆ, ಆ ಭಾಷೆಗಳು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಸಂಪದ್ಯುಕ್ತವಾಗುತ್ತಿದ್ದುವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಗ್ರಾಮನೈರ್ಮಲ್ಯ ಮುಂತಾದ ಪ್ರಶ್ನೆಗಳು ಬಹುಕಾಲಕ್ಕೆ ಹಿಂದೆಯೇ ತೀರ್ಮಾನವಾಗಿ ಬಿಡುತ್ತಿದ್ದವು. ಗ್ರಾಮ ಪಂಚಾಯ್ತಿಗಳು ವಿಶೇಷವಾದ ರೀತಿಯಲ್ಲಿ ಸಜೀವ ಶಕ್ತಿಯಾಗಿರುತ್ತಿದ್ದವು. ಇಂದು ಭಾರತ ತನ್ನ ಆವಶ್ಯಕತೆಗಳಿಗೆ ಅನುಗುಣವಾದ ಸ್ವಯಮಾಡಳಿತವನ್ನು ಅನು ಭವಿಸುತ್ತಿದ್ದಿತು. ಮತ್ತು ಅದರ ಪವಿತ್ರ ನೆಲದಲ್ಲಿ, ವ್ಯವಸ್ಥಿತ ಕೊಲೆಪಾತಕರ ನಾಚಿಕೆ ಗೇಡಿನ ದೃಶ್ಯವನ್ನು ನೋಡಬೇಕಾದುದಿರಲಿಲ್ಲ. ಈಗಲೂ ತಿದ್ದಿಕೊಳ್ಳಲು ಕಾಲ ಮೀರಿ ಹೋಗಿಲ್ಲ.

"ಜನತೆಯ ಆಳವಾದ ದಾರಿದ್ರ್ಯಕ್ಕೆ, ಆರ್ಥಿಕ ಮತ್ತು ಕೈಗಾರಿಕೋದ್ಯಮದ ಜೀವನದಲ್ಲಿ ಸ್ವದೇಶಿಯನ್ನು ಕೈ ಬಿಟ್ಟಿರುವುದೇ ಬಹುಮಟ್ಟಿಗೆ ಕಾರಣವಾಗಿದೆ. ಭಾರತದ ಹೊರಗಿನಿಂದ ಒಂದೇ ಒಂದು ವ್ಯಾಪಾರದ ವಸ್ತುವೂ ಭಾರತದೊಳಕ್ಕೆ ಬರದೇ ಇದ್ದಿದ್ದರೆ ಇಂದು ಭಾರತ ಹಾಲುಜೇನು ಹರಿಯುತ್ತಿರುವ ನಾಡಾಗಿರುತ್ತಿದ್ದಿತು. ಆದರೆ ಹಾಗಾಗಲಿಲ್ಲ. ನಾವೂ ದುರಾಶಾ ಪೀಡಿತರಾಗಿದ್ದೆವು; ಇಂಗ್ಲೆಂಡು ಸಹ ಹಾಗೆಯೇ ಇದ್ದಿತು. ಭಾರತಕ್ಕೂ ಇಂಗ್ಲೆಂಡಿಗೂ ಸಂಬಂಧ, ಒಂದು ತಪ್ಪು ಕಲ್ಪನೆಯ ಮೇಲೆ ಆಯಿತು. ಆದರೆ ಇಂಗ್ಲೆಂಡು ಆ ತಪ್ಪುಕಲ್ಪನೆಯ ಮೇಲೆಯೇ ಉಳಿದಿಲ್ಲ. ಭಾರತವನ್ನು ತನ್ನ ಜನಗಳ ವಿಶ್ವಸ್ತರಾಗಿ (ಟ್ರಸ್ಟ್) ನಾವು ಇಟ್ಟುಕೊಂಡಿರುವುದು ಅದರ ಘೋಷಿತ ನೀತಿಯಾಗಿದೆ. ಇದು ನಿಜವಾದರೆ ಲಾಂಕಷೈರು, ದಾರಿ ಬಿಡಬೇಕು. ಸ್ವದೇಶಿತತ್ವ, ಒಳ್ಳೆಯ ತತ್ವವಾದರೆ, ಲಾಂಕಷೈರು, ಹೆಚ್ಚು ಅಪಾಯಕ್ಕೆ ಒಳಗಾಗದೆ ದಾರಿಬಿಡಬಲ್ಲದು. ತಾತ್ಕಾಲಿಕವಾಗಿ ಅದಕ್ಕೆ ಸ್ವಲ್ಪ ಆಘಾತವಾಗಬಹುದು.

"ನಾನು ಸ್ವದೇಶಿಯನ್ನು ಪ್ರತೀಕಾರ ರೂಪವಾದ ಬಹಿಷ್ಕಾರ ಚಳುವಳಿಯೆಂದು ಭಾವಿಸುವುದಿಲ್ಲ. ಅದು ಎಲ್ಲರೂ ಅನುಸರಿಸಬೇಕಾದ ಧಾರ್ಮಿಕ ನೀತಿಯೆಂದು ನಾನು ತಿಳಿಯುತ್ತೇನೆ. ನಾನು ಅರ್ಥಶಾಸ್ತ್ರಜ್ಞನಲ್ಲ. ಆದರೆ, ಇಂಗ್ಲೆಂಡು ತನಗೆ ಬೇಕಾದುದನ್ನೆಲ್ಲ ತಾನೇ ಬೆಳೆದು ಸುಲಭವಾಗಿ ಸ್ವಪರಿಪೂರ್ಣ ದೇಶವಾಗಬಲ್ಲದೆಂದು ತೋರಿಸುವ ಕೆಲವು ಗ್ರಂಥಗಳನ್ನು ಓದಿದ್ದೇನೆ. ಇದ ಹಾಸ್ಯಾಸ್ಪದ ಸೂಚನೆಯಾಗಿರಬಹುದು. ಇದು ಪ್ರಾಯಶಃ ನಿಜವಾಗಿರಲಾರದೆಂಬುದಕ್ಕೆ ಸಾಕ್ಷ್ಯ, ಇಂಗ್ಲೆಂಡು ಜಗತ್ತಿನಲ್ಲಿ ಒಂದು ದೊಡ್ಡ ಆಮದು ಮಾಡಿಕೊಳ್ಳುವ ರಾಷ್ಟ್ರ. ಆದರೆ ಭಾರತ, ತನ್ನ ಹಿತಕ್ಕಾಗಿ ತಾನು ಜೀವಿಸಲು ಸಾಧ್ಯ ವಾಗುವುದಕ್ಕೆ ಮುಂಚೆ ಲ್ಯಾಂಕಷೈರ್‌ಗಾಗಲೀ ಅಥವಾ ಮತ್ತಾವುದೇ ರಾಷ್ಟ್ರಕ್ಕಾಗಲೀ ಜೀವಿಸಲಾರದು. ಮತ್ತು ಅದು ತನಗೆ ಅವಶ್ಯಕವಾದುದನ್ನೆಲ್ಲ ತನ್ನಲ್ಲಿ ತಾನೆ ತಯಾರಿಸಿದರೆ–ತಯಾರಿಸಲು ಅದಕ್ಕೆ ಸಹಾಯ ದೊರೆತರೆ–ಆಗ ಮಾತ್ರ ಅದು ತನಗಾಗಿ ತಾನು ಜೀವಿಸಬಲ್ಲದು.

"ಇದು ಅಸಂಬದ್ಧತೆಯೆಂದು ತೋರಬಹುದು. ಆದರೆ ಭಾರತ, ಅಸಂಬದ್ಧತೆಯ ನಾಡು. ದಯಾಶಾಲಿಯಾದ ಮುಸಲ್ಮಾನ ನೀರು ಕೊಡಲು ಸಿದ್ಧನಾಗಿದ್ದರೂ ಬಾಯಾರಿಕೆಯಿಂದ ಗಂಟಲು ಒಣಗಿಸಿಕೊಳ್ಳುತ್ತಿರುವುದು ಅಸಂಬದ್ಧತೆಯಲ್ಲವೆ? ಆದರೂ ಸಾವಿರಾರು ಹಿಂದುಗಳು ಮುಸಲ್ಮಾನರ ಮನೆಯ ನೀರನ್ನು ಕುಡಿಯುವುದಕ್ಕಿಂತ ಸಾಯುವುದಕ್ಕೇ ಸಿದ್ಧರಾಗಿದ್ದಾರೆ. ಈ ಅಸಂಬದ್ಧ ಜನ, 'ಭಾರತದಲ್ಲಿ ತಯಾರಾದ ವಸ್ತ್ರಗಳನ್ನೇ ತೊಡಬೇಕು. ಭಾರತದಲ್ಲಿ ಬೆಳೆದ ಆಹಾರವನ್ನೇ ತಿನ್ನಬೇಕು' ಎಂಬುದು ತಮ್ಮ ಧರ್ಮದ ಆದೇಶ ಎಂದು ಮನಗಂಡಕೂಡಲೇ ಬೇರೆ ಬೇರೆ ಬಟ್ಟೆಗಳನ್ನು ತೊಡಲೂ ಬೇರೆ ಆಹಾರವನ್ನು ತಿನ್ನಲೂ ನಿರಾಕರಿಸುತ್ತಾರೆ. ಲಾರ್ಡ್ ಕರ್ಜನ್‌ರು ಟೀ ಕುಡಿಯುವ ಪದ್ಧತಿಯನ್ನು ಪ್ರಾರಂಭಿಸಿದರು. ಆ ದುಷ್ಟ ಕುಡಿತ, ರಾಷ್ಟ್ರವನ್ನೆಲ್ಲ ನುಂಗುವುದರಲ್ಲಿದೆ. ಇದು ಆಗಲೇ ಲಕ್ಷಾಂತರ ಜನರ ಜೀರ್ಣಶಕ್ತಿಯನ್ನು ನಾಶ

ಮಾಡಿ ಅವರ ದಾರಿದ್ರ್ಯದ ಆರ್ಥಿಕ ಸ್ಥಿತಿಗೆ ಮತ್ತಷ್ಟು ಹೊರೆಯಾಗಿದೆ. ಲಾರ್ಡ್ ಹಾರ್ಡಿಂಜರು, ಸ್ವದೇಶೀ ಪದ್ಧತಿಯನ್ನು ಪ್ರಾರಂಭಿಸಬಹುದು. ಆಗ ಭಾರತೀಯರೆಲ್ಲರೂ ಪರಕೀಯ ವಸ್ತುಗಳನ್ನು ಬಹಿಷ್ಕರಿಸುವರು. ಗೀತೆಯಲ್ಲಿ ಒಂದು ಶ್ಲೋಕವಿದೆ. ಅದರ ಸಾರಾಂಶ ಇಷ್ಟು: 'ಶ್ರೇಷ್ಠರು ಮಾಡುವುದನ್ನು ಇತರರೂ ಅನುಸರಿಸುತ್ತಾರೆ.' ಈಗಾಗಲೇ ಆಗಿರುವ ಕೇಡನ್ನು, ಸಮಾಜದ ಬುದ್ಧಿವಂತರು ಸ್ವದೇಶೀಯನ್ನು ಅನುಸರಿಸಿದರೆ ಪರಿಹರಿಸಬಹುದು. ಅದರಿಂದ ತಾತ್ಕಾಲಿಕವಾಗಿ ಸ್ವಲ್ಪ ಕಷ್ಟವಾಗಬಹುದು, ಅಷ್ಟೇ.

"ಭಾರತ–ಹೇಗೂ ಆರ್ಥಿಕ ಜೀವನದಲ್ಲಿ–ಸ್ವದೇಶಿಯನ್ನು ಅಂಗೀಕರಿಸಲಾರದು ಎಂಬ ಮಾತನ್ನು ಆಗಾಗ ಕೇಳುತ್ತೇವೆ. ಈ ಆಕ್ಷೇಪಣೆಯನ್ನು ಮುಂದೊಡ್ಡುವವರು ಸ್ವದೇಶಿಯನ್ನು ಬಾಳಿನ ಒಂದು ನಿಯಮವಾಗಿ ಅಂಗೀಕರಿಸಿದವರಲ್ಲ. ಅವರಿಗೆ ಇದು ಬರಿಯ ದೇಶಭಕ್ತಿಯ ಪ್ರಯತ್ನ ಮಾತ್ರ, ಅದರಿಂದ ಕಷ್ಟವಾಗುವುದಾದರೆ ಬಿಡಬಹುದು. ಆದರೆ ಇಲ್ಲಿ ವಿವರಿಸಿದಂತೆ ಸ್ವದೇಶಿ, ಒಂದು ಧಾರ್ಮಿಕ ಸಾಧನೆ; ವ್ಯಕ್ತಿಗೆ ಅದರಿಂದ ಎಷ್ಟೇ ಕಷ್ಟವಾದರೂ, ಸಾಧನೆಯನ್ನು ನಡೆಸಬೇಕು. ಸ್ವದೇಶಿ ಮಂತ್ರದಲ್ಲಿ, ಭಾರತದಲ್ಲಿ ತಯಾರಾಗದಿರುವ ಗುಂಡುಸೂಜಿ ಅಥವ ಸೂಜಿಯ ಅಭಾವ ಮೈನಡುಕವುಂಟು ಮಾಡುವುದಿಲ್ಲ. ಸ್ವದೇಶಿ ವ್ರತಧಾರಿ, ಇಂದು ತಾನು ಅವಶ್ಯಕವೆಂದು ತಿಳಿದಿರುವ ನೂರಾರು ವಸ್ತುಗಳಿಲ್ಲದೆ ಜೀವಿಸಲು ಕಲಿಯುತ್ತಾನೆ. ಅಸಾಧ್ಯವಾದ ವಾದಗಳನ್ನು ಮಾಡಿ, ಸ್ವದೇಶಿಯನ್ನು ತಮ್ಮ ಮನಸ್ಸಿನಿಂದ ಬಹಿಷ್ಕರಿಸುವವರು, ಹೇಗಾದರೂ ಸ್ವದೇಶಿ ಧೃಢವಾದ ಪ್ರಯತ್ನದಿಂದ ಸಾಧ್ಯವಾಗುವ ಗುರಿ ಎಂಬುದನ್ನು ಮರೆಯುತ್ತಾರೆ. ನಮ್ರತೆ ಮತ್ತು ಪ್ರೇಮದ ಧರ್ಮದೊಂದಿಗೆ ಸಹಜೀವಿಯಾಗಬಲ್ಲ ತತ್ವ ಸ್ವದೇಶಿಯೊಂದೇ".

ಕಾಂಗ್ರೆಸ್ ಲೀಗ್ ಒಪ್ಪಂದ

೧೯೧೬

೧೯೧೬ನೆ ಸಂವತ್ಸರದ ಎರಡನೆಯ ಅರ್ಧಭಾಗದಲ್ಲಿ ದೇಶದಲ್ಲಿ ಅನೇಕ ಸಮ್ಮೇಳನಗಳು ನಡೆದವು. ತಿಲಕ್ ಶ್ರೀಮತಿ ಬೆಸೆಂಟ್ ಮತ್ತು ಜಿನ್ನಾರ ನೇತೃತ್ವದಲ್ಲಿ ದೇಶದಲ್ಲಿ ಹೊಸ ರಾಜಕೀಯ ಜೀವನದ ಅಲೆಯೆದ್ದಿತು.

ತಿಲಕರಿಗೆ ಇನ್ನೂ ಕಾಂಗ್ರೆಸ್‌ನಲ್ಲಿ ಸ್ಥಾನ ಸಿಕ್ಕಿರಲಿಲ್ಲ. ಏಕೆಂದರೆ ಬೊಂಬಾಯಿ ಅಧಿವೇಶನದಲ್ಲಿ ಉಂಟಾದ ಸಂಧಾನದಂತೆ, ಕಾಂಗ್ರೆಸ್‌ನಲ್ಲಿ ಪ್ರಭಾವವನ್ನು ಸ್ಥಾಪಿಸಲು ತಿಲಕರು ಇನ್ನೂ ಒಂದು ವರುಷ, ಕಾಯಬೇಕಾಗಿದ್ದಿತು. ಆದುದರಿಂದ ಅವರು ತಮ್ಮ ಹಿಂದಿನ ಅಭಿಪ್ರಾಯವಾದ–ಹೋಮ್‌ರೂಲ್ ಲೀಗನ್ನು ಹಿಡಿದು ೧೯೧೬ನೆ ಏಪ್ರಿಲ್‌ನಲ್ಲಿ ಅದನ್ನು ಸ್ಥಾಪಿಸಿದರು. ಇದು ನಡೆದುದ ಶ್ರೀಮತಿ ಬೆಸೆಂಟರು ತಮ್ಮ ಹೋಮ್‌ರೂಲ್ ಲೀಗನ್ನು ಸ್ಥಾಪಿಸಲು ಆರು ತಿಂಗಳ ಮುಂಚಿತವಾಗಿ, ಶ್ರೀಮತಿ ಬೆಸೆಂಟ್ ಹೀಗೆ ಬರೆದರು."ತಿಲಕ್ ಒಂದು ಲೀಗ್ ಸ್ಥಾಪಿಸಿದರು; ನಾನು ಮತ್ತೊಂದನ್ನು ಸ್ಥಾಪಿಸಿದೆ. ಕಾರಣ ಕೆಲವರು ಅವರನ್ನು ಪ್ರೀತಿಸಿದರು ಮತ್ತು ನನ್ನನ್ನು ದ್ವೇಷಿಸಿದರು. ಮತ್ತು ಇತರರು ಅವರನ್ನು ದ್ವೇಷಿಸಿದರು ಮತ್ತು ನನ್ನನ್ನು ಪ್ರೀತಿಸಿದರು. ಆದುದರಿಂದ ಜೊತೆಯಾಗಿ ಮತ್ತು ಬೇರೆಯಾಗಿ ಕೆಲಸಮಾಡುವುದು ಉತ್ತಮ ಕಾರ್ಯವಿಧಾನ" ತಿಲಕರ ಹೋಮ್‌ರೂಲ್ ಲೀಗ್, ನ್ಯಾಷನಲ್ ಕಾಂಗ್ರೆಸ್‌ನ ಧ್ಯೇಯವನ್ನು ಒಪ್ಪಿದರೂ, ಶ್ರೀನಿವಾಸ ಶಾಸ್ತ್ರಿಗಳಿಗೂ ಅದರಲ್ಲಿ ಸಂತೋಷವಾದರೂ ಸರ್ಕಾರ ಮಾತ್ರ ತಿಲಕರ ಚಟುವಟಿಕೆಗಳನ್ನು ತುಂಬ ಸಂಶಯದಿಂದ ನೋಡುತ್ತಿತ್ತು.

ಮೇ ೧ರಂದು ಬೆಳಗಾಮಿನಲ್ಲಿ ಪ್ರಾಂತೀಯವಾದ ರಾಜಕೀಯ ಸಮ್ಮೇಳನ ನಡೆಯಿತು. ಅದರಲ್ಲಿ ತಿಲಕರು ಉಗ್ರಗಾಮಿಗಳಿಗೂ ಮಂದಗಾಮಿಗಳಿಗೂ ಸಹಮತವನ್ನು ಕೋರಿ ಒಂದು ಸಂಧಿಯ ನಿರ್ಣಯವನ್ನು ಸಭೆಯ ಮುಂದೆ ಇಟ್ಟರು. ಗಾಂಧೀಜಿ, ಆ ಸಮ್ಮೇಳನಕ್ಕೆ ಬಂದಿದ್ದು ಹಿಂದಿಯಲ್ಲಿ ಮಾತನಾಡಿದರು. ಪ್ರಾಮಾಣಿಕವಾದ ರಾಜಿಗೆ ಅವರ ಒಪ್ಪಿಗೆಯಿದ್ದಿತು. "ಕಾಂಗ್ರೆಸ್ಸನ್ನು ಸೇರಿಕೊಂಡನಂತರ, ವಿರೋಧಿಗಳನ್ನು ಅಲ್ಲಿಂದ ಓಡಿಸುವ ಉದ್ದೇಶದಿಂದ ಸೇರಿದರೆ, ಕಾಂಗ್ರೆಸಿಗೂ ಲಾಭವಿಲ್ಲ, ತೀವ್ರಗಾಮಿಗಳಿಗೂ ಲಾಭವಿಲ್ಲ, ದೇಶಕ್ಕೂ ಲಾಭವಿಲ್ಲ" ಎಂದು ಹೇಳಿದರು. ಗಾಂಧಿ "ನಾನು ಮಂದಗಾಮಿಯೂ ಅಲ್ಲ ತೀವ್ರಗಾಮಿಯೂ ಅಲ್ಲ" ಎಂದರು.

ಸರ್ಕಾರ, ತಿಲಕರನ್ನು ಮೌನವಾಗಿಸಲು ಬಯಸಿತು. ಅದು ತಿಲಕರು ಬೆಳಗಾಂ, ಅಹಮದ್‌ನಗರಗಳಲ್ಲಿ ಮಾಡಿದ ಮೂರು ಭಾಷಣಗಳನ್ನು ಆರಿಸಿಕೊಂಡು ಅವರ

ಮೇಲೆ ಫಿರ್ಯಾದು ಮಾಡಿತು. ಮೇ ೭ರಂದು ಪುಣೆಯ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಖದ್ದಮೆಯನ್ನು ಪ್ರಾರಂಭಿಸುತ್ತ ಮಿ. ಬಿನ್‌ರು (ಪಬ್ಲಿಕ್ ಪ್ರಾಸೆಕ್ಯೂಟರು) ತಿಲಕರ ರಾಜಭಕ್ತಿಯ ಅಂಗೀಕಾರವನ್ನು, ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುವ ಮುಸುಕು ಎಂದು ಹೇಳಲೂ ಸಹ ಹಿಂಜರಿಯಲಿಲ್ಲ. ಮ್ಯಾಜಿಸ್ಟ್ರೇಟರು, "ತಿಲಕರು ತಮ್ಮ ಶ್ರೋತೃಗಳು, ಸರ್ಕಾರವನ್ನು ದ್ವೇಷಿಸುವಂತೆ ಮಾಡಲು ಬಯಸಿದರು" ಎಂಬ ಅಭಿಪ್ರಾಯವುಳ್ಳವರಾಗಿದ್ದರು. ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೦೮ರ ಪ್ರಕಾರ ತಿಲಕರು ಒಳ್ಳೆಯ ನಡತೆಗಾಗಿ ಇಪ್ಪತ್ತು ಸಾವಿರ ರೂಪಾಯಿನ ಒಂದು ಸ್ವಂತ ಮುಚ್ಚಳಿಕೆಯನ್ನೂ ಇತರ ಇಬ್ಬರು ಜಾಮೀನುದಾರರಿಂದ ಹತ್ತು ಸಾವಿರದ ಒಂದೊಂದು ಮುಚ್ಚಳಿಕೆಯನ್ನೂ ಒದಗಿಸಬೇಕೆಂದು ತೀರ್ಮಾನವಿತ್ತರು.

ಈ ತೀರ್ಮಾನವನ್ನು ಹೇಗೂ ಹೈಕೋರ್ಟು ಮುಂದಿನ ಕೆಲವು ತಿಂಗಳುಗಳಲ್ಲಿ ವಜಾ ಮಾಡಿತು. ಸರ್ಕಾರದ ದಮನನೀತಿಯಿಂದ ತಿಲಕರಲ್ಲಿ ಜನಾನುರಾಗ ಹೆಚ್ಚಿತು. ಜನವರಿ ೨೩, ತಮ್ಮ ೬೧ನೆ ಜನ್ಮದಿನ, ಅಖಿಲರಾಷ್ಟ್ರವೂ ಅವರನ್ನು ಸನ್ಮಾನಿಸಿತು. ಜನತೆ ಒಪ್ಪಿಸಿದ ಒಂದು ಲಕ್ಷ ರೂಪಾಯಿನ ನಿಧಿಯನ್ನು ತಿಲಕರು ಅಂಗೀಕರಿಸಿದರು. ಅದರ ಜೊತೆಗೆ ತಮ್ಮ ಭಾಗದ ಹಣವನ್ನೂ ಸೇರಿಸಿ ಕಾನೂನುಬದ್ಧ ಮಾರ್ಗದಲ್ಲಿ ರಾಷ್ಟ್ರೀಯ ಕಾರ್ಯಕ್ಕೆ ವಿನಿಯೋಗಿಸುವುದಾಗಿ ತಿಳಿಸಿದರು. ಅವರ ಮನೋನೇತ್ರದ ಮುಂದೆ ಕಷ್ಟ ಬಿರುಗಾಳಿಗಳ ನೆನಪು–ಸುಖಗಳಿಗಿಂತ ಹೆಚ್ಚಾಗಿ ಎದ್ದು ನಿಂತಿತು.

ವರ್ಷದ ಮಧ್ಯಭಾಗದಲ್ಲಿ ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗ್, ರಾಜಕೀಯ ಸುಧಾರಣೆಗಳ ಜಂಟಿ ಯೋಜನೆಯೊಂದನ್ನು ಸಿದ್ಧಗೊಳಿಸುವುದರಲ್ಲಿ ತತ್ಪರರಾಗಿದ್ದರು. ಕೌನ್ಸಿಲ್‌ನಲ್ಲಿ ಚುನಾಯಿತ ಭಾಗಕ್ಕೆ ಸರ್ಕಾರಿ ಅಧಿಕಾರದ ಶೀಘ್ರ ಮತ್ತು ಪೂರ್ಣ ಅಧೀನವನ್ನು, ಗುರಿಯಾಗಿ, ಯೋಜನೆ ಹೊಂದಿತ್ತು. ಸಮಿತಿಯ ಸದಸ್ಯರಲ್ಲೊಬ್ಬರಾದ ಮೋತಿಲಾಲ್ ನೆಹ್ರುರವರ ಮನೆಯಲ್ಲಿ ಅಲಹಾಬಾದಿನಲ್ಲಿ, ಸಮಿತಿಯ ಸಭೆ ಏಪ್ರಿಲ್‌ನಲ್ಲಿ ನಡೆಯಿತು. ಅಲಹಾಬಾದಿನಲ್ಲಿ ತಾತ್ಕಾಲಿಕವಾಗಿ ಅಂಗೀಕರಿಸಲ್ಪಟ್ಟ ನಿರ್ಣಯಗಳು, ಕಲ್ಕತ್ತದಲ್ಲಿ ಏ.ಐ.ಸಿ.ಸಿ. ಮತ್ತು ಮುಸ್ಲಿಂ ಲೀಗ್‌ನ ಜಂಟಿ ಅಧಿವೇಶನದಲ್ಲಿ ಚರ್ಚಿತವಾಗಿ ಹಿಂದೂ ಮುಸ್ಲಿಂ ಐಕ್ಯ ಸ್ಥಾಪನೆಯಾಯಿತು.

ಡಿಸೆಂಬರಿನಲ್ಲಿ, ಕಾಂಗ್ರೆಸು, ಮುಸ್ಲಿಂ ಲೀಗು ಜಂಟಿಯಾಗಿ ಒಪ್ಪಿರುವ ರಾಜಕೀಯ ಸುಧಾರಣೆಗಳಿಗೆ ಬೆಂಬಲ ಕೊಡಲು ಅಹಮದಾಬಾದಿನಲ್ಲಿ ಜಿನ್ನಾರವರ ಅಧ್ಯಕ್ಷತೆಯಲ್ಲಿ ಒಂದು ಪ್ರಾಂತಸಮ್ಮೇಳನ ನಡೆಯಿತು. ಸಮ್ಮೇಳನಕ್ಕೆ ಆಗಮಿಸಿದ ತಿಲಕರಿಗೆ ಹಾರ್ದಿಕ ಸ್ವಾಗತ ದೊರೆತು ಅವರು ಮುಖ್ಯ ನಿರ್ಣಯವನ್ನು ಸಮರ್ಥಿಸಿದರು. ಗಾಂಧೀ, ಭಾರತ ರಕ್ಷಣಾ ಕಾನೂನಿಗೆ, ತಡೆಗಳನ್ನು ಕೇಳುವ ನಿರ್ಣಯವನ್ನು ಮಂಡಿಸಿದರು. ಭಾರತದ ಪರಿಸ್ಥಿತಿ ಮತ್ತು ಅದರ ನೈತಿಕ ಮತ್ತು ಭೌತ ಅಭಿವೃದ್ಧಿ ಎಂಬ ಹೆಸರಿನ (Moral and meterial progress and condition of India) ಒಂದು ಸರ್ಕಾರಿ ಪ್ರಕಟಣೆಯಲ್ಲಿ ಹೀಗೆ ನಮೂದಾಗಿದ್ದಿತು:

"ಹಿಂದು ಮುಸ್ಲಿಮರ ಸಂಬಂಧವ ಪ್ರಶ್ನೆ ಸಾಮ್ರಾಜ್ಯದ ಆಸಕ್ತಿಯು ಪ್ರಶ್ನೆ. ಆದರೆ ಅದು ಬೊಂಬಾಯಿ ಪ್ರಾಂತಕ್ಕೆ ಒಂದು ಸ್ಥಳೀಯ ವಿಶಿಷ್ಟ ಆಸಕ್ತಿಯಾಗಿದೆ. ಏಕೆಂದರೆ ೧೯೧೫ನೆ ಡಿಸೆಂಬರ್‌ನಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸು, ಮುಸ್ಲಿಂ ಲೀಗ್ ಸಂಸ್ಥೆಯೂ ಬೊಂಬಾಯಿನಲ್ಲಿ ಸಭೆ ಸೇರಿದಾಗ, ಮೊದಲ ಬಾರಿಗೆ ಹಿಂದು ಮುಸಲ್ಮಾನರ ಮೈತ್ರಿ ರೂಪುಗೊಳ್ಳತೊಡಗಿತು. ಇದು ಅಕ್ಟೋಬರ್ ೧೯೧೬ರಲ್ಲಿ ನಡೆದ ಅಹಮದಾಬಾದಿನ ಪ್ರಾಂತೀಯ ಸಮ್ಮೇಳನದಲ್ಲಿ ಇನ್ನೂ ಹೆಚ್ಚಾಗಿ ಬಲ ಗೊಂಡಿತು. ಅಹಮ್ಮದಾಬಾದ್ ಸಮ್ಮೇಳನಕ್ಕೆ ಮಿ. ಜಿನ್ನಾ ಅಧ್ಯಕ್ಷರಾಗಿದ್ದರು. ಅವರೇ ಮುಂಬರುವ ಮುಸ್ಲಿಂಲೀಗ್ ಸಭೆಗೂ ನಿಯೋಜಿತ ಅಧ್ಯಕ್ಷರು. ಇದುವರೆಗೆ ಬರಿಯ ಹಿಂದುಗಳೇ ಆಗಿದ್ದ ಕಾಂಗ್ರೆಸ್ ಸಮ್ಮೇಳನದಲ್ಲಿ ಮಿ. ಜಿನ್ನಾ ಅಧ್ಯಕ್ಷರಾದರು. ಅಹಮ್ಮದಾಬಾದ್ ಕಾಂಗ್ರೆಸ್ಸು, ಗಣನೀಯ ಸಮ್ಮೇಳನ. ಏಕೆಂದರೆ ಕಾಂಗ್ರೆಸ್ಸಿನ ತೀವ್ರಗಾಮಿಗಳು ೧೯೦೭ರಲ್ಲಿ ಸೂರತ್‌ನಲ್ಲಿ ಗೊಂದಲದನಂತರ ಬೇರೆಯಾದ ಮೇಲೆ, ಇದೇ ಮೊದಲನೆಯ ಸಲವಾಗಿ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿದರು. ಒಟ್ಟಿನಲ್ಲಿ ಇನ್ನೂ ಹೆಚ್ಚಾಗಿ ಸ್ವಯಾಮಾಡಳಿತವನ್ನು ಬಯಸುವ, ಮುಖ್ಯ ರಾಜಕೀಯ ಪಕ್ಷಗಳ ಒಂದು ಒಕ್ಕೂಟವನ್ನೂ, ಈ ಎರಡೂ ಪಕ್ಷಗಳ (ಹಿಂದು ಮತ್ತು ಮುಸ್ಲಿಂ) ಮುಂದು ವರಿದ ಜನವರ್ಗಕ್ಕೆ ಗಣನೀಯ ಪ್ರಮಾಣದ ಅಧಿಕ ಬಲವನ್ನೂ ಈ ವರುಷ ಈಕ್ಷಿಸಿತು."

ಡಿಸೆಂಬರ್‌ನಲ್ಲಿ ನಡೆದ ಲಕ್ನೋ ಕಾಂಗ್ರೆಸ್ ಅಧಿವೇಶನ, ಅನೇಕ ಅಂಶಗಳಲ್ಲಿ ಐತಿಹಾಸಿಕವಾಗಿತ್ತು. ಅಧ್ಯಕ್ಷರು ಹೀಗೆ ಹೇಳಿದರು. "ಒಂಬತ್ತು ವರುಷಗಳ ಹಿಂದೆ ಅವಿಭಾಜ್ಯ ಕಾಂಗ್ರೆಸ್, ಸೂರತ್ತಿನಲ್ಲಿ ಫ್ರೆಂಚ್ ಉದ್ಯಾನದಲ್ಲಿ ಹೂಳಲ್ಪಟ್ಟಿತ್ತು. ಅದು ಈ ದಿನ ಲಕ್ನೋದಲ್ಲಿ ಕೈಸರ್‌ಬಾಗ್‌ನಲ್ಲಿ ಪುನರ್ಜನ್ಮವನ್ನು ಪಡೆಯಿತು. ಭಾರತೀಯ ರಾಷ್ಟ್ರೀಯ ಪಕ್ಷದ ಎರಡು ಭಾಗದವರೂ ಒಟ್ಟಾಗಿ ಸೇರಿ, ತಮ್ಮ ನಿಜವಾದ ಸ್ಥಾನ ಮತ್ತು ಹೊಣೆಗಾರಿಕೆಯನ್ನು ಮನಗಂಡವು."

ಯುದ್ಧದಿಂದ ದೇಶದಲ್ಲಿ ಹೊಸಶಕ್ತಿಗಳು ಹುಟ್ಟಿಕೊಂಡಿದ್ದುವೆಂಬುದು ಸ್ಪಷ್ಟ ವಾಗಿತ್ತು. ಮುಂದಗಾಮಿಗಳ ದೃಷ್ಟಿ, ವಿಶಾಲವಾಗಿತ್ತು. ತೀವ್ರಗಾಮಿಗಳಿಗೆ, ಕಾಂಗ್ರೆಸಿನ ಸಮಾಲೋಚನೆಗಳಿಂದ ಹೊರಗಿರಲು ಇಷ್ಟವಿರಲಿಲ್ಲ. ಬಿಪಿನ್ ಚಂದ್ರಪಾಲ್, ತಿಲಕ್, ಶ್ರೀಮತಿ ಬೆಸೆಂಟ್, ಎಲ್ಲರೂ ಭಾಗವಹಿಸಲು ಕಾಂಗ್ರೆಸ್ ಅಧಿವೇಶನಕ್ಕೆ ಬಂದಿದ್ದರು. ಬೊಂಬಾಯಿ ಪ್ರಾಂತದಿಂದ ತಮ್ಮ ಅನುಯಾಯಿಗಳ ದೊಡ್ಡಸಂಬೆ, ಲಕ್ನೋ ಅಧಿ ವೇಶನಕ್ಕೆ ಪ್ರತಿನಿಧಿಗಳಾಗಿ ಆಯ್ಕೆ ಹೊಂದುವುದರಲ್ಲಿ ತಿಲಕರು ಜಯಶೀಲರಾಗಿದ್ದರು.

ಕಾಂಗ್ರೆಸ್ಸಿಗೆ ಅಂಬಿಕಾಚರಣ ಮಜುಂದಾರರು ಅಧ್ಯಕ್ಷರಾಗಿದ್ದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು "ಈಗ ಆಳ್ವಿಕೆ ಮಾಡುತ್ತಿರುವ ನೌಕರಷಾಹಿ, ಛಟ್ಟಿ ಯಿಳಿಸಿದ ನಿರಂಕುಶ ಪ್ರಭುತ್ವ. ಆದರೆ ಜನರು ಹೇಗೂ ಈ ಪದ್ಧತಿಯನ್ನು ಮೀರಿ ಬೆಳೆದಿದ್ದಾರೆ. ದೇಶದಲ್ಲಿ ಹೊಸ ಜಾಗ್ರುತಿ ಉಂಟಾಗಿದೆ. ಅದನ್ನು ಕಲ್ಪನೆಯೆನ್ನಿ ಅತೃಪ್ತ ಆದರ್ಶವಾದವನ್ನಿ. ಅದು ಹಳೆಯ ಜಗತ್ತಿನ ಅದೃಷ್ಟಗಳನ್ನು ಹೊಸದಾಗಿ ಬದ

ಲಾಯಿಸುವ ಪ್ರಜಾಪ್ರಭುತ್ವ ಮನೋಭಾವದ ಚೈತನ್ಯ. ಈ ಅದಮ್ಯ ಶಕ್ತಿಯ ಹೊಡೆತದಲ್ಲಿ ಪ್ರಾಚೀನ ಕಾಲದಿಂದ ಬಂದಿರುವ ರಾಜ್ಯಗಳು ಧೂಳಿನಲ್ಲಿ ಉರುಳುತ್ತಿವೆ. ದೀರ್ಘ ಕಾಲದ ಮತ್ತು ದೈವಸಂಭೂತ ಮೂಲದಿಂದ ಉದ್ಭವವಾದ ಅಜಸ್ರ ಚಕ್ರವರ್ತಿಗಳುಸಹ ಒಂದು ತೊಟ್ಟು ಕಣ್ಣೀರನ್ನಾಗಲೀ ರಕ್ತವನ್ನಾಗಲೀ ಹರಿಸದೆ ಮರೆಯಾಗುತ್ತಿದ್ದಾರೆ. ಹಳೆಯ ಅಭಿಪ್ರಾಯಗಳೆಲ್ಲ ಬಹುಬೇಗ ಮರೆಯಾಗುತ್ತಿವೆ. ಭಾರತೀಯರು 'ಮಾ ಬಾಪ್' (ಸರ್ಕಾರವೇ ತಾಯಿ ತಂದೆ) ಎಂಬ ಭಾವನೆಗೆ ಹೊಂದಿಕೊಳ್ಳಲು ಅಶಕ್ತರಾದರೆ ಅದು ಅವರ ತಪ್ಪಲ್ಲ. ಇಂದಿನ ಸರ್ಕಾರ, ನಿಯಮ ಮತ್ತು ಶಿಸ್ತುಬದ್ಧ ಆಳ್ವಿಕೆಗೆ ಎಷ್ಟೇ ಹೆಸರನ್ನು ಸಂಪಾದಿಸಿದ್ದರೂ, ಗತಕಾಲಕ್ಕೆ ಸೇರಿದುದು. ಅದು ಜನರನ್ನು ಪೂರ್ಣವಾಗಿ ಸುಖಿಗಳನ್ನಾಗಿ ಮಾಡಬಹುದು. ಆದರೆ ಬುದ್ಧಿಶಾಲಿಗಳನ್ನಾಗಿಯೂ ತೃಪ್ತರನ್ನಾಗಿಯೂ ಸ್ವಾವಲಂಬಿಗಳನ್ನಾಗಿಯೂ ಬಾಳು ಮತ್ತು ನಡತೆಯಲ್ಲಿ ಧೀರರನ್ನಾಗಿಯೂ ಮಾಡಲಾರದು".

ಕಲ್ಕತ್ತದಲ್ಲಿ. ಹತ್ತು ವರುಷಗಳ ಕೆಳಗೆ ದಾದಾಭಾಯಿ ನವರೋಜಿ ಬಾರಿಸಿದ್ದ ಸ್ವರಾಜ್ಯ ಗಂಟೆಯನ್ನು ಅಧ್ಯಕ್ಷ ಮುಜುಂದಾರರು ಮತ್ತೆ ಬಾರಿಸಿದರು. "ಭಾರತ ಪ್ರಜಾಜನರು ಪ್ರಾಚೀನ ನಾಗರೀಕತೆಯ ಉತ್ತರಾಧಿಕಾರಿಗಳು. ಬ್ರಿಟಿಷ್ ಆಳ್ವಿಕೆಯ ಶತಮಾನ ಕಾಲದಲ್ಲಿ ಸರ್ಕಾರವನ್ನೂ ಆಳ್ವಿಕೆಯನ್ನೂ ನಡೆಸುವುದರಲ್ಲಿಯೂ ಶಿಕ್ಷಣ ಸಾರ್ವಜನಿಕ ಕಾರ್ಯಗಳಲ್ಲಿಯೂ ಅಧಿಕ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಇಂದಿನ ಆಡಳಿತಕ್ರಮ ಜನರ ನ್ಯಾಯವಾದ ಆಶೋತ್ತರಗಳನ್ನು ಪೂರೈಸುವವುದಿಲ್ಲ. ಅದು ಇಂದಿನ ಪರಿಸ್ಥಿತಿಗೂ ಆವಶ್ಯಕತೆಗಳಿಗೂ ಹೊಂದಿಕೆಯಾಗುವುದಿಲ್ಲ. ಇವೆಲ್ಲವನ್ನೂ ಪರಿಗಣಿಸಿ ಕಾಂಗ್ರೆಸ್ಸು ಈ ರೀತಿ ಅಭಿಪ್ರಾಯ ಪಡುತ್ತದೆ. "ಚಕ್ರವರ್ತಿಗಳು ಅಲ್ಪ ಕಾಲದೊಳಗೆ ಭಾರತಕ್ಕೆ ಸ್ವಯಮಾಧಿಕಾರವನ್ನು ಕೊಡುವುದು ಬ್ರಿಟಿಷ್ ಸರ್ಕಾರದ ನೀತಿ" ಎಂದು ಒಂದು ಘೋಷಣೆಯನ್ನು ಹೊರಡಿಸುವ ಕಾಲ ಸನ್ನಿಹಿತವಾಗಿದೆ. ಕಾಂಗ್ರೆಸ್ಸು ಹೀಗೆ ಕೇಳುತ್ತದೆ "ಅಖಿಲ ಭಾರತ ಕಾಂಗ್ರೆಸ್ ಸಮಿತಿ ತಯಾರಿಸಿ, ಅಖಿಲ ಭಾರತ ಮುಸ್ಲಿಂಲೀಗ್ ಸಹ ಒಪ್ಪಿರುವ ಯೋಜನೆಯಲ್ಲಿ ನಮೂದಿಸಿರುವಂತೆ, ಭಾರತಕ್ಕೆ ಸ್ವಯಮಾಡಳಿತವನ್ನು ಕೊಡಲು ಬ್ರಿಟಿಷ್ ಸರ್ಕಾರ ಒಂದು ಸ್ಪಷ್ಟವಾದ ಹೆಜ್ಜೆಯನ್ನು ತೆಗೆದುಕೊಳ್ಳಬೇಕು. ಮತ್ತು ಸಾಮ್ರಾಜ್ಯದ ವ್ಯವಸ್ಥೆಯಲ್ಲಿ. ಭಾರತವು. ಅಧೀನರಾಜ್ಯವಾಗಿರುವ ಬದಲು, ಇತರ ಸ್ವಯಮಾಡಳಿತ ಪ್ರದೇಶಗಳಂತೆ ಸಾಮ್ರಾಜ್ಯದ ಸಮಾನ ಭಾಗಸ್ಥನಾಗಿ, ಮೇಲೆತ್ತಲ್ಪಡಬೇಕೆಂದೂ ಕಾಂಗ್ರೆಸ್ಸು ಕೇಳುತ್ತದೆ."

ಅನಂತರ ಕಾಂಗ್ರೆಸ್ ನಾಯಕರೂ ಮುಸ್ಲಿಂ ಲೀಗ್ ನಾಯಕರೂ ಮುಂದೆ ಲಕ್ನೋ ಒಪ್ಪಂದ ಎಂದು ಹೆಸರಾದ ಒಂದು ಒಪ್ಪಂದಕ್ಕೆ ಬಂದರು. ಕಾಂಗ್ರೆಸ್, ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣಾ ಸ್ಥಾನಗಳನ್ನು ಒಪ್ಪಿತು. ಅಲ್ಲಿಯ ವರೆಗೆ ಇಲ್ಲದಿದ್ದ ಪಂಜಾಬ್ ಮತ್ತು ಸಿಂಧ್‌ನಲ್ಲಿಯೂ ಪ್ರತ್ಯೇಕ ಚುನಾವಣೆ ಒಪ್ಪಲ್ಪಟ್ಟಿತು. ಹಾಗೆ ಚುನಾಯಿತರಾದವರಿಗೆ ಕೌನ್ಸಿಲ್‌ಗಳಲ್ಲಿ ಉದಾರವಾಗಿಹೆಚ್ಚು ಸ್ಥಾನಗಳು

ಕೊಡಲ್ಪಟ್ಟವು. ಮುಸಲ್ಮಾನ ಚುನಾಯಿತ ಸದಸ್ಯರ ಒಟ್ಟುಸಂಖ್ಯೆ ಇನ್ನೂ ಹೆಚ್ಚಾಗಿ ಏರಿಸಲ್ಪಟ್ಟಿತು. ಬಂಗಾಳದಲ್ಲಿ ಮುಸ್ಲಿಂ ಪ್ರಾತಿನಿಧ್ಯ ಶೇಕಡ ೧೦ರಿಂದ ೪೦ಕ್ಕೆ ಏರಿತು. ಇನ್ನೂ ಇತರ ಅನೇಕ ಪ್ರಾಂತಗಳಲ್ಲಿ, ಮುಸಲ್ಮಾನರಿಗೆ, ಆಗ ಇದ್ದುದಕ್ಕಿಂತಲೂ ಮತ್ತು ಅವರ ಜನಸಂಖ್ಯೆಗೆ ದೊರಕುತ್ತಿದ್ದುದಕ್ಕಿಂತಲೂಹೆಚ್ಚು ಸ್ಥಾನಕೊಡಲ್ಪಟ್ಟಿತು. ಮೂರನೆ ಒಂದು ಭಾಗದ ಕೌನ್ಸಿಲ್ ಸದಸ್ಯರನ್ನುಮುಸ್ಲಿಮ್ ಪ್ರತ್ಯೇಕ ಚುನಾವಣಾ ಕ್ರಮದಿಂದ ಕೌನ್ಸಿಲಿಗೆ ಆರಿಸುವುದರ ಮೂಲಕ, ಕೇಂದ್ರದಲ್ಲಿಯೂ ಮುಸ್ಲಿಮರ ಪ್ರಭಾವ, ಹೆಚ್ಚಾಯಿತು. ಪ್ರತಿಯಾಗಿ ಮುಸಲ್ಮಾನರು ಸಾಮಾನ್ಯ ಮತ್ತು ಪ್ರತ್ಯೇಕ ಚುನಾವಣೆಗಳಲ್ಲಿ ಮತ ನೀಡುವ ತಮ್ಮ ಆಗಿನ ಹಕ್ಕನ್ನು ಬಿಟ್ಟುಕೊಟ್ಟರು.

ಕಾಂಗ್ರೆಸ್ ಮತ್ತು ಮುಸ್ಲಿಂಲೀಗಿನ ಯೋಜನೆಯ ಪ್ರಮುಖ ಅಂಶಗಳನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು. (೧) ಪ್ರಾಂತಗಳನ್ನು ಆರ್ಥಿಕವಾಗಿ ಮತ್ತು ಆಳ್ವಿಕೆಯ ದೃಷ್ಟಿಯಿಂದ ಸಾಧ್ಯವಾದಷ್ಟು ಕೇಂದ್ರದ ಹತೋಟಿಯಿಂದ ಬಿಡುಗಡೆ ಮಾಡಬೇಕು. (೨) ಕೇಂದ್ರೀಯ ಮತ್ತು ಪ್ರಾಂತಗಳ ಲೆಜಿಸ್ಲಟೇವ್ ಕೌನ್ಸಿಲ್‌ನ ಸದಸ್ಯರಲ್ಲಿ ಐದರಲ್ಲಿ ನಾಲ್ಕು ಪಾಲು, ಚುನಾಯಿತರಾಗಿರಬೇಕು. (೩) ಕೇಂದ್ರ ಮತ್ತು ಪ್ರಾಂತ ಸರ್ಕಾರಗಳ ಆಡಳಿತವರ್ಗದಲ್ಲಿ, ಅರ್ಧಕ್ಕೆ ಕಡಿಮೆ ಇಲ್ಲದಷ್ಟು ಜನ, ಲೆಜಿಸ್ಲಟೇವ್ ಕೌನ್ಸಿಲ್‌ನ ಚುನಾಯಿತ ಸದಸ್ಯರಿಂದ ಆರಿಸಲ್ಪಡಬೇಕು (೪) ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು, ತಮ್ಮ ಲೆಜಿಸ್ಲಟೇವ್ ಕೌನ್ಸಿಲ್‌ಗಳು ಮಾಡಿದ ತೀರ್ಮಾನಗಳನ್ನು–ಗವರ್ನರ್ ಜನರಲ್ ಆಗಲಿ ಗವರ್ನರ್ ಆಗಲಿ (ಸಂದರ್ಭಕ್ಕನುಗುಣವಾಗಿ) ವಿಟೋ ಮಾಡಿದ ಹೊರತು–ಜಾರಿಗೆ ಕೊಡಬೇಕು. ಒಂದು ವರುಷದ ನಂತರ ಅವೇ ನಿರ್ಣಯಗಳು ಮತ್ತೆ ಕೌನ್ಸಿಲ್‌ನಲ್ಲಿ ಅಂಗೀಕೃತವಾದರೆ, ಹೇಗಿದ್ದರೂ ಕಾರ್ಯಗತ ಮಾಡಲೇ ಬೇಕು. (೫) ಹೊರರಾಷ್ಟ್ರಗಳೊಂದಿಗೆ ಸಂಬಂಧ ಮತ್ತು ರಕ್ಷಣೆ ಇವು, ನ್ಯಾಯ ವಿಧಾಯಕ ಸಭೆಗಳ ಸಂಪರ್ಕವಿಲ್ಲದೆ ಕೇಂದ್ರದ ಹತೋಟಿಗೆ ಸೇರಿದುವು (೬) ಅಂತರ ಸಾಮ್ರಾಜ್ಯ ವ್ಯವಹಾರಗಳಲ್ಲಿ, ಭಾರತಕ್ಕೆ ಇತರ ಡೊಮಿನಿಯನ್‌ಗಳಿಗೆ ಇರುವ ಅಂತಸ್ತು ಇರಬೇಕು. ಭಾರತದ ಸೆಕ್ರಟರಿ ಆಫ್ ಸ್ಟೇಟರಿಗೂ ಭಾರತ ಸರ್ಕಾರಕ್ಕೂ, ಡೊಮಿನಿಯನ್‌ಗಳಿಗೂ ಕಲೋನಿಯಲ್ ಸೆಕ್ರಟರಿಗೂ ಇರುವಂತಹ ಸಂಬಂಧವೇ ಇರಬೇಕು.

ದೇಶ, ರಾಜಕೀಯವಾಗಿ ದೊಡ್ಡ ಮುನ್ನಡೆಯನ್ನು ನಿರೀಕ್ಷಿಸುತ್ತಿದ್ದಿತು. ಲಕ್ನೋ ಕಾಂಗ್ರೆಸಿಗೆ ಜನ ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ೨೩೦೧ ಪ್ರತಿನಿಧಿಗಳು ಬಂದಿದ್ದರು. ಜೊತೆಗೆ ಅಪಾರ ಪ್ರೇಕ್ಷಕರು; ವಿಶಾಲವಾದ ಸಭಾಮಂಟಪ ತುಂಬಿ ಕಿಕ್ಕಿರಿಯುತ್ತಿದ್ದಿತು. ಕಾಂಗ್ರೆಸ್ಸು, ನಾಲ್ಕು ದಿವಸ ಅಧಿವೇಶನ ನಡೆಸಿ ಅನೇಕ ವಿಷಯಗಳ ಮೇಲೆ ಠರಾವುಗಳನ್ನು ಮಂಜೂರು ಮಾಡಿತು.

೯ ವರುಷಗಳ ದೀರ್ಘ ಪ್ರತ್ಯೇಕತೆಯನಂತರ ತಿಲಕರು ಲಕ್ನೋ ಕಾಂಗ್ರೆಸ್‌ನಲ್ಲಿ ತಮ್ಮ ಹಳೆಮಿತ್ರರನ್ನು ಕೂಡಿಕೊಂಡರು. ವಿಸ್ತಾರವಾದ ಜನಸ್ತೋಮಕ್ಕೆ, ಭಾಷಣ ಮಾಡಲು ಅವರು ನಿಂತಾಗ, ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಅವರು

ಹೀಗೆ ಹೇಳಿದರು "ಈ ಸ್ವಾಗತ ನಮ್ರನಾದ ನನಗಾಗಿ ಕೊಡಲ್ಪಟ್ಟಿದೆಯೆಂದು ತಿಳಿಯುವಷ್ಟು ನಾನು ಮೂರ್ಖನಲ್ಲ. ನಾನು ಸರಿಯಾಗಿ ಅರ್ಥಮಾಡಿಕೊಳ್ಳುವುದಾದರೆ ಇದು ನಾನು ಹೋರಾಡುತ್ತಿರುವ ತತ್ವಗಳಿಗಾಗಿ. ಆ ತತ್ವಗಳು ನಾನು ಅನುಮೋದಿಸುವ ಠರಾವಿನಲ್ಲಿ ನಮೂದಾಗಿವೆ. ನಾವು ನಮ್ಮ ಧ್ವನಿಗಳನ್ನೆಲ್ಲ ಒಟ್ಟುಗೂಡಿಸಿ ಹೆಗಲುಗಳನ್ನೆಲ್ಲ ಸೇರಿಸಿ ಸ್ವಯಮಾಡಳಿತ ಯೋಜನೆಯನ್ನು ಮುಂದುವರಿಸುವುದನ್ನು-ನೋಡಲು ನಾನು ಈ ಹತ್ತು ವರುಷ ಬದುಕಿರುವುದಕ್ಕೆ ಸಂತೋಷ ಪಡುತ್ತೇನೆ. ನಾವು ಈಗ ಎಲ್ಲ ವಿಧದಲ್ಲಿಯೂ ಸಂಯುಕ್ತ ಪ್ರಾಂತದಲ್ಲಿ ಸಂಯುಕ್ತರಾಗಿದ್ದೇವೆ

ಲಕ್ನೋ ಒಪ್ಪಂದವನ್ನು ಸ್ವಾಗತಿಸಿ ತಿಲಕರು "ಹಿಂದುಗಳಾದ ನಾವು ನಮ್ಮ ಮುಸಲ್ಮಾನ ಬಾಂಧವರಿಗೆ ತುಂಬ ಸೋತು ಬಿಟ್ಟುಕೊಟ್ಟಿದ್ದೇವೆ–ಎಂದು ಹೇಳುತ್ತಾರೆ. ನಾವು ಎಷ್ಟು ಬಿಟ್ಟುಕೊಟ್ಟರೂ ಹೆಚ್ಚಲ್ಲ ಎಂಬುದು ಹಿಂದುಗಳ ಅಭಿಪ್ರಾಯವೆಂದು ಭಾರತದಲ್ಲಿರುವ ಎಲ್ಲ ಹಿಂದುಗಳ ಪ್ರತಿನಿಧಿಯಾದ ನಾನು ಹೇಳುತ್ತೇನೆ. ಸ್ವಯಮಾಡಳಿತದ ಹಕ್ಕು ಬರಿ ಮುಸಲ್ಮಾನ ಮತದವರಿಗೇ ಕೊಡಲ್ಪಟ್ಟರೂ ನನಗೆ ಚಿಂತೆ ಇಲ್ಲ. ಅವು ರಾಜಪುತ್ರರಿಗೆ ಕೊಡಲ್ಪಟ್ಟರೂ ನನಗೆ ಚಿಂತೆಯಿಲ್ಲ. ಹಿಂದು ಸಮಾಜದ ಕೆಳದರ್ಜೆಯವರಿಗೆ ಅವು ಕೊಡಲ್ಪಟ್ಟರೂ ನನಗೆ ಚಿಂತೆಯಿಲ್ಲ. ಆಗ ಈಗಿರುವಂತೆ ಹೋರಾಟ ತ್ರಿಕೋಣವಾಗಿರುವುದಿಲ್ಲ."

ಒಂದೇ ವಿಷಯದಲ್ಲಿ ತಿಲಕರಿಗೆ ಭಿನ್ನಾಭಿಪ್ರಾಯವಿದ್ದಿತು. ಅವರು, ಸ್ವಯಮಾಧಿಕಾರದ ಮುಂದಿನ ಕಂತುಗಳನ್ನು ಸ್ಪಷ್ಟವಾಗಿ ನಿರ್ಣಯಿಸಿ, ಅದನ್ನೂ ಮತ್ತು ಎಲ್ಲ ಆಶೋತ್ತರಗಳ ಪೂರ್ಣ ಪೂರೈಕೆಗೆ ಕಾಲಮಿತಿಯನ್ನೂ ಜೊತೆಯಲ್ಲಿಯೇ ಪ್ರಕಟಿಸುವುದು ಆವಶ್ಯಕವೆಂದು ಬಯಸಿದರು. ಈ ಕಾಲಮಿತಿಯನ್ನು ಸ್ವಯಮಧಿಕಾರದ ನಿರ್ಣಯದಲ್ಲಿ ಸೇರಿಸಬೇಕೆಂದು ಅವರು ಒತ್ತಾಯಿಸಲು ಬಹಳ ಪ್ರಯತ್ನ ಮಾಡಿದರು. ಆದರೆ ಹಿರಿಯ ನಾಯಕರು, ಒಗ್ಗಟ್ಟಿನ ದೃಷ್ಟಿಯಿಂದ ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ತಿಲಕರು ವಿಷಯವನ್ನು ಕೈಬಿಟ್ಟರು. ಇದೇ ಕಾರಣಕ್ಕಾಗಿಯೇ ಚಿಕ್ಕದಾದ ಮತ್ತು ಅಡಕವಾದ ಕಾಂಗ್ರೆಸ್‌ಕಾರ್ಯಕಾರೀ ಸಮಿತಿಯ ತಮ್ಮ ಯೋಜನೆಯನ್ನೂ ಹಿಂಬದಿಗಿಟ್ಟರು.

ಕಾಂಗ್ರೆಸ್ಸು, ಹೋಮ್‌ರೂಲ್‌ಲೀಗ್ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಅವಿಚ್ಛಿನ್ನವಾಗಿ ತೀವ್ರ ಚಳುವಳಿ ಹೂಡಲು ಕರೆಕೊಡಬೇಕೆಂದು ತಿಲಕರು ಬಯಸಿದರು. ಮಂದಗಾಮಿಗಳು ನಿರ್ಣಯ ಮಂಜೂರಾಗಲು ತೀರ ಅಸಮಾಧಾನದಿಂದ ಒಪ್ಪಿಗೆ ಕೊಟ್ಟರು. ಜಿನ್ನಾ ಮತ್ತು ಪಂಡಿತ ಮಾಲವೀಯ ಸಹ ನಿರ್ಣಯಕ್ಕೆ ವಿರೋಧವಾಗಿ ಮತವಿತ್ತರು.

ಕಾಂಗ್ರೆಸ್ ಮತ್ತೊಂದು ನಿರ್ಣಯವನ್ನು ಅಂಗೀಕರಿಸಿತು. ಅದರಲ್ಲಿ ಉತ್ತರ ಬಿಹಾರದಲ್ಲಿ ಯೂರೋಪಿಯನ್ ಪ್ಲಾಂಟರುಗಳಿಗೂ ಭಾರತದ ರೈತರಿಗೂ ಇರುವ ಸಂಬಂಧವನ್ನು ಕುರಿತು ವಿಚಾರಿಸುವುದು; ಮತ್ತು ಭೂಹಿಡುವಳಿ ವಗೈರೆ ತೊಂದರೆ

ಗಳ ಕಾರಣಗಳನ್ನು ವಿಚಾರಿಸಲು ಅಧಿಕಾರಿಗಳ ಮತ್ತು ಸಾರ್ವಜನಿಕರ ಒಂದು ಸಮಿತಿಯನ್ನು ರಚಿಸುವುದು ಇವು ಸೇರಿದ್ದವು.

ಈ 'ಕಾಂಗ್ರೆಸ್ ವಾರ'ದಲ್ಲಿ ಹಿಂದು ಮುಸ್ಲಿಂರಲ್ಲಿ ಅಭೂತಪೂರ್ವ ಮೈತ್ರಿ ಏರ್ಪಟಿತು. ಏಕಕಾಲದಲ್ಲಿ ಏಕ ಸ್ಥಳದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ನ ಸಮ್ಮೇಳನಗಳನ್ನು ನಡೆಸುವ ಪದ್ಧತಿ, ಲಕ್ನೋದಲ್ಲಿಯೂ ಮುಂದುವರಿಯಿತು. ಲೀಗಿನವರು ತಮಗೆ ತೋರಿಸಿದ ಮರ್ಯಾದೆಗಾಗಿ, ಕಾಂಗ್ರೆಸ್ ಮುಖಂಡರೂ ದೊಡ್ಡಸಂಖ್ಯೆಯಲ್ಲಿ ಲೀಗಿನ ಸಭೆಯಲ್ಲಿ ಹಾಜರಿದ್ದು ವಿಶ್ವಾಸ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಲೀಗಿನ ಅಧ್ಯಕ್ಷ ಜಿನ್ನ ಹೀಗೆ ಹೇಳಿದರು "ಅಖಿಲ ಭಾರತ ಮುಸ್ಲಿಂ ಪ್ರಥಮ ರಾಜಕೀಯ ಸಂಸ್ಥೆಯ ಮುಖ್ಯ ತಳಪಾಯ, ಭಾರತದ ರಾಜಕೀಯ ಬೆಳವಣಿಗೆಯ ಸರ್ವಕಾಲದಲ್ಲಿಯೂ ಮಾಡಲ್ಪಡಬಹುದಾದ ಎಲ್ಲ ರಾಜಕೀಯ ಹೊಂದಾಣಿಕೆಯಲ್ಲಿಯೂ, ಮುಸ್ಲಿಂ ಜನಾಂಗದ ವೈಶಿಷ್ಟ್ಯವನ್ನು ಸುಭದ್ರವಾಗಿಯೂ ಕುಂದಿಲ್ಲದಂತೆಯೂ ಉಳಿಸಿಕೊಳ್ಳುವುದು. ಈ ಧ್ಯೇಯ, ಮುಸ್ಲಿಂ ಜನಾಂಗದ ರಾಜಕೀಯ ಜೀವನ ಮತ್ತು ಆಲೋಚನೆಗಳ ಜೊತೆ ಬೆಳೆದು ವಿಶಾಲಗೊಂಡಿದೆ. ಭವಿಷ್ಯದ ವಿಷಯದಲ್ಲಿ ಸಾಮಾನ್ಯ ದೃಷ್ಟಿ ಮತ್ತು ಧ್ಯೇಯಗಳಲ್ಲಿ ಅಖಿಲ ಭಾರತ ಮುಸ್ಲಿಂಲೀಗ್, ಇಂಡಿಯನ್ ನ್ಯಾಷನಲ್ ಕಾಂಗ್ರೆಸಿನ ಸರಿಸಮದಲ್ಲಿ ನಿಂತು ಇಡೀ ದೇಶದ ಮುನ್ನಡೆಗೆ, ಯಾವ ದೇಶಪ್ರೇಮದ ಉದ್ಯಮದಲ್ಲಿಯೂ ಸಿದ್ಧವಾಗಿದೆ".

ನಿಜವಾದ ಅರ್ಥಶಾಸ್ತ್ರ

೧೯೧೬

ರಾಜಕೀಯದಲ್ಲಿ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ಮಾತ್ರವೇ ಅಲ್ಲದೆ ಅರ್ಥಶಾಸ್ತ್ರದಲ್ಲಿಯೂ ಸಹ ಗಾಂಧೀಜಿ ವೈಶಿಷ್ಟವುಳ್ಳವರಾದರು. ಡಿಸೆಂಬರ್ ೨೨–೧೯೧೬ರಲ್ಲಿ ಅಲಹಾಬಾದಿನ ಮೂಯಿರ್ ಕಾಲೇಜಿನ ಆರ್ಥಿಕ ಸಂಘದಲ್ಲಿ (ಎಕನಾಮಿಕ್ ಸೊಸೈಟಿ) ಅವರು ಮಾಡಿದ ಭಾಷಣ, ಚಿರಸ್ಮರಣೀಯವಾಗಿತ್ತು:

"ಈ ಸಂಜೆಯ ವಿಷಯದ ಮೇಲೆ ನಿಮಗೆ ಭಾಷಣ ಮಾಡಲು ನಾನು ಶ್ರೀ ಕಪಿಲದೇವ ಮಾಲವೀಯರ ಆಹ್ವಾನವನ್ನು ಅಂಗೀಕರಿಸಿದಾಗ, ನನ್ನ ಮಿತಿ ನನಗೆ ಅರಿವಾಗಿ ನೋವಾಯಿತು. ನೀವು ಒಂದು ಆರ್ಥಿಕ ಸಂಘ. ನೀವು, ನಿಮ್ಮ ಪಾಠಕ್ರಮ ದಲ್ಲಿ ಸೇರಿರುವ ವಿಷಯಗಳಿಗೆ ಈ ವರುಷಕ್ಕೂ ಮುಂದಿನ ವರುಷಕ್ಕೂ ಪ್ರಸಿದ್ಧ ಶಾಸ್ತ್ರ ವಿದ್ವಾಂಸರನ್ನು ಆರಿಸಿದ್ದೀರಿ. ನನಗೆ ವಹಿಸಿರುವ ಕಾರ್ಯಕ್ಕೆ ತಕ್ಕವನಲ್ಲದ ಭಾಷಣ ಕಾರ ನಾನೊಬ್ಬನೇ ಎಂದು ತೋರುತ್ತದೆ. ನಿಸ್ಸಂಕೋಚವಾಗಿ ಮತ್ತು ನಿಜವಾಗಿ, ನಿಮಗೆ ಸ್ವಾಭಾವಿಕವಾಗಿ ತಿಳಿಯುವಂತೆ ನನಗೆ ಅರ್ಥಶಾಸ್ತ್ರ ತಿಳಿದಿರುವುದು ಬಹಳ ಕಡಿಮೆ. ಆ ದಿವಸ ಸಂಜೆ ಊಟಕ್ಕೆ ಕುಳಿತಾಗ ಒಬ್ಬ ಸರ್ಕಾರಿ ನೌಕರ ಮಿತ್ರನು ನನ್ನ ವಿಚಿತ್ರ ಸ್ವಭಾವವನ್ನು ಕುರಿತು ಪ್ರಶ್ನೆಗಳ ಸುರಿಮಳೆ ಕರೆದನು. ತನ್ನ ಪಾಟಿ ಸವಾಲನ್ನು ಅವನು ಮುಂದುವರಿಸುತ್ತ ಹೋದಂತೆ, ನಾನೂ ಅದಕ್ಕೆ ಒಪ್ಪಿದುದರಿಂದ, ವಿಷಯಗಳ ಮೇಲೆ ನನ್ನ ಪೂರ್ಣ ಅಜ್ಞಾನವನ್ನು ಕಂಡು ಹಿಡಿಯಲು ಅವನಿಗೆ ಕಷ್ಟವಾಗಲಿಲ್ಲ. ತಾನು ಅಜ್ಞಾನಿ ಎಂಬುದನ್ನೂ ಸಹ ತಿಳಿಯದಿರುವ ಮನುಷ್ಯನ ಪ್ರಾಜ್ಞತೆಯಿಂದ ನಾನು ವಿಷಯಗಳನ್ನು ಪರಿಗಣಿಸುತ್ತಿರುವುದಾಗಿ ಆತನಿಗೆ ತೋರಿತು. ನಾನು ಅರ್ಥಶಾಸ್ತ್ರದ ಮೇಲೆ ಮಿಲ್, ಮಾರ್ಷಲ್, ಆಡಂಸ್ಮಿತ್ ಮುಂತಾದ ಅಧಿಕಾರವಾಣಿಯನ್ನು ಅರ್ಥ ಶಾಸ್ತ್ರ ಲೇಖಕರ ಗ್ರಂಥಗಳನ್ನೂ ಇನ್ನೂ ಅನೇಕ ನೂರಾರು ಗ್ರಂಥಕರ್ತರ ಕೃತಿಗಳನ್ನೂ ಓದಿಲ್ಲವೆಂದು ಕೇಳಿ ಅವನಿಗೆ ಗಾಬರಿ ಮತ್ತು ಕೋಪ ಸಹ. ಉಂಟಾಯಿತು. ನಿರಾಶೆ ಯಿಂದ ಅವನ ನನಗೆ, ಆರ್ಥಿಕ ವಿಷಯದ ಮೇಲೆ ಪ್ರಯೋಗ ನಡೆಸುವುದಕ್ಕಿಂತ ಮುಂಚಿತವಾಗಿ ನೆಚ್ಚಿನ ಮಿತ್ರರ ವಿಶ್ವಾಸದ ಉಪಯೋಗ ಮಾಡಿಕೊಂಡು ಆ ಗ್ರಂಥಗಳನು ವ್ಯಾಸಂಗ ಮಾಡುವಂತೆ ಬೋಧಿಸಿದನು. ನಮ್ಮ ಬಾಳಿನಲ್ಲಿ ನಮಗೆ ಕೆಲವು ಸಂದರ್ಭಗಳು ಒದಗುತ್ತವೆ. ಅವುಗಳಿಗಾಗಿ ಹೊರಗಿನ ಯಾವ ಸಾಕ್ಷ್ಯವೂ ನಮಗೆ ಬೇಕಾಗುವುದಿಲ್ಲ. ನಮ್ಮ ಅಂತರಂಗದ ಸಣ್ಣದನಿ ಹೇಳುತ್ತದೆ. 'ನೀನು ಸರಿಯಾದ ದಾರಿಯಲ್ಲಿದ್ದೀಯೆ. ಬಲಕ್ಕೂ ತಿರುಗಬೇಡ, ಎಡಕ್ಕೂ ತಿರುಗಬೇಡ ನೇರವಾದ

ಇಕ್ಕಟ್ಟಾದ ದಾರಿಯಲ್ಲಿಯೇ ಹೋಗು'. ಅಂತಹ ಸಹಾಯದಿಂದ ನಾವು ಮುಂದು ವರಿಯುತ್ತೇವೆ. ನಿಧಾನವಾಗಿಯೇ ಆದರೆ ಖಂಡಿತವಾಗಿ ಎಡಬಿಡದೆ ಮುಂದುವರಿ ಯುತ್ತೇವೆ. ನನ್ನ ಸ್ಥಿತಿ, ಅದಾಗಿದೆ.

"ಇದು ನನಗೆ ಸಮಾಧಾನಕರವಾಗಿರಬಹುದು. ಆದರೆ ಅದು ನಿಮ್ಮ ಸಂಘದಂತಹ ಸಂಘದ ಆವಶ್ಯಕತೆಗಳಿಗೆ ಎಂದಿಗೂ ಉತ್ತರವಾಗಲಾರದು. ಆದರೂ ನಾನು ಶ್ರೀ ಕಪಿಲದೇವ ಮಾಳವೀಯರೊಂದಿಗೆ ಹೋರಾಡುವುದು ಪ್ರಯೋಜನವಿರಲಿಲ್ಲ. ಒಂದು ಸಂಜೆ ನಾನು ನಿಮ್ಮ ಗಮನವನ್ನು ನನ್ನ ಕಾರ್ಯಕ್ರಮದಲ್ಲಿ ಸೆಳೆದಿಡಬೇಕೆಂದು ಅವರು ನಿರ್ಣಯಿಸಿದ್ದರೆಂಬುದು ನನಗೆ ಗೊತ್ತು. ಬಹುಶಃ ನೀವು ನನ್ನ ಕಾರ್ಯವನ್ನು, ಸವೆದ ಮಾರ್ಗಕ್ರಮಣದಿಂದ ಒಂದು ಪ್ರಿಯವಾದ ಬದಲಾವಣೆಯೆಂದು ಸ್ವಾಗತಿಸಬಹುದು. ಸಮೃದ್ಧವಾದ ಅನೇಕ ಔತಣ ಕೂಟಗಳ ನಂತರ, ಒಂದು ಅಪರೂಪ ಉಪವಾಸ ಅನೇಕವೇಳೆ ಆವಶ್ಯಕ. ಮತ್ತು ದೇಹಕ್ಕೆ ಹೇಗೋ ಬುದ್ಧಿಗೂ ಹಾಗೇ ಎಂದು ನಾನು ಊಹಿಸುತ್ತೇನೆ.

"ನನ್ನ ಅನುಭವ ಮತ್ತು ಪ್ರಯೋಗಗಳ ಕ್ಷೇತ್ರವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ಈ ಸಂಜೆಯ ಭಾಷಣದ ವಿಷಯದಲ್ಲಿ ಪರಸ್ಪರ ತಿಳಿವಳಿಕೆ ಹೊಂದುವುದು ಉತ್ತಮ. 'ಆರ್ಥಿಕ ಅಭಿವೃದ್ಧಿ, ನಿಜವಾದ ಅಭಿವೃದ್ಧಿಗೆ ವಿರೋಧವಾದುದೇ?' ಆರ್ಥಿಕ ಅಭಿವೃದ್ಧಿ ಎಂದರೆ ನಮ್ಮ ಅಭಿಪ್ರಾಯದಲ್ಲಿ ಮಿತಿಯಿಲ್ಲದ ಭೌತ ಮುನ್ನಡೆ ಎಂದು ಅರ್ಥ. ಮತ್ತು ನಿಜವಾದ ಅಭಿವೃದ್ಧಿ ಎಂದರೆ ನೈತಿಕ ಅಭಿವೃದ್ಧಿ; ಅಂದರೆ ನಮ್ಮಲ್ಲಿರುವ ಶಾಶ್ವತ ಮೂಲಾಂಶಗಳ ಅಭಿವೃದ್ಧಿ. ಆದುದರಿಂದ ವಿಷಯವನ್ನು ಹೀಗೆ ಹೇಳಬಹುದು. 'ಭೌತ ಅಭಿವೃದ್ಧಿಯ ಪ್ರಮಾಣಕ್ಕನುಗುಣವಾಗಿ ನೈತಿಕ ಅಭಿವೃದ್ಧಿ ಹೆಚ್ಚುವುದಿಲ್ಲವೆ? ನಮ್ಮ ಮುಂದೆ ಇರುವುದಕ್ಕಿಂತ ಇದು ಇನ್ನೂ ವಿಸ್ತಾರ ವಾದ ಸೂಚನೆ ಎಂಬುದು ನನಗೆ ಗೊತ್ತು. ನಾವು ಚಿಕ್ಕದನ್ನು ಹೇಳುವಾಗಲೂ ದೊಡ್ಡ ದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತೇವೆಂದು ಯೋಚಿಸುತ್ತೇನೆ. ಏಕೆಂದರೆ ನಮ್ಮ ಈ ಪ್ರತ್ಯಕ್ಷ ಜಗತ್ತಿನಲ್ಲಿ ನಿರ್ದುಷ್ಟ ವಿಶ್ರಾಂತಿ ಅಥವ ಶಾಂತಿ ಎಂಬುದಿಲ್ಲವೆಂಬುದನು ತಿಳಿಯುವಷ್ಟು ವಿಜ್ಞಾನ ನಮಗೆ ಗೊತ್ತಿದೆ. ಆದುದರಿಂದ ಭೌತಅಭಿವೃದ್ಧಿ, ನೈತಿಕ ಅಭಿವೃದ್ಧಿಗೆ ವಿರೋಧವಾಗುವುದಿಲ್ಲವಾದರೆ, ಆಗ ಅದು ನೈತಿಕ ಅಭಿವೃದ್ಧಿಯನ್ನು ಆವಶ್ಯಕವಾಗಿ ಮುನ್ನಡೆಸಬೇಕು. ಅಥವಾ ವಿಶಾಲವಾದ ಸೂಚನೆಯನ್ನು ಪ್ರತಿಪಾದಿಸ ಲಾಗದವರು ತಮ್ಮ ವಾದವನ್ನು ಪುಷ್ಟೀಕರಿಸುವ ಚಾತುರ್ಯ ರಹಿತವಾದ ಮಾರ್ಗ ದಿಂದ ನಮಗೆ ತೃಪ್ತಿಯಾಗದು. ಅವರು ದಿವಂಗತ ಸರ್ ವಿಲಿಯಂ ಹಂಟ್ ಹೇಳಿದ "ಮೂರು ಕೋಟಿ ಭಾರತೀಯರು ದಿನವೂ ಒಂದೇ ಊಟ ಮಾಡಿ ಜೀವಿಸುತ್ತಾರೆ" ಎಂಬ ಭೂತದಿಂದ ಪೀಡಿತರಾಗಿರುವಂತೆ ಕಾಣುತ್ತದೆ. ಅವರು 'ನಾವು ಅವರ ಧಾರ್ಮಿಕ ಯೋಗಕ್ಷೇಮವನ್ನು ನೋಡುವುದಕ್ಕೆ ಮುಂಚಿತವಾಗಿ, ನಿತ್ಯದ ಆವಶ್ಯಕತೆಗಳನ್ನು ನೋಡಬೇಕೆಂದು' ಹೇಳುತ್ತಾರೆ. ಅನಂತರ ಒಂದು ದೊಡ್ಡ ನೆಗತವನ್ನು ನೆಗೆಯುತ್ತಾರೆ.

'ಮೂರು ಕೋಟಿ ಜನರ ವಿಷಯದಲ್ಲಿ ಯಾವುದು ನಿಜವೋ ಅಖಿಲ ಜಗತ್ತಿನ ವಿಷಯು ದಲ್ಲಿಯೂ ಅದೇ ನಿಜ ಎನ್ನುತ್ತಾರೆ. ಕಠಿಣವಾದ ಉದಾಹರಣೆಗಳು ಒಳ್ಳೆಯ ಕಾನೂನಿಗೆ ಸಹಕಾರಿಗಳಲ್ಲವೆಂಬುದನ್ನು ಮರೆಯುತ್ತಾರೆ. ಹೀಗೆ ಲೆಕ್ಕಾಚಾರ ಹಾಕುವುದು ಎಷ್ಟು ಹಾಸ್ಯಾಸ್ಪದ ಅಸಂಬದ್ಧತೆ ಎಂದು ನಾನು ನಿಮಗೆ ಹೇಳಬೇಕಾದುದಿಲ್ಲ. ವಿನಾಶಕಾರಕ ದಾರಿದ್ರ್ಯದಿಂದ, ನೈತಿಕ ಅವನತಿಯು ಹೊರತು ಮತ್ತೇನೂ ಇಲ್ಲ ಎಂದು ಹೇಳದಿರು ವವರು ಯಾರೂ ಇಲ್ಲ.

"ಪ್ರತಿಯೊಬ್ಬ ಮನುಷ್ಯನಿಗೂ ಜೀವಿಸಲು ಹಕ್ಕಿದೆ. ಆಹಾರವನ್ನು ಸಂಪಾದಿಸುವ ಮಾರ್ಗವನ್ನು ಸಾಧಿಸಲು ಹಕ್ಕಿದೆ. ಅವಶ್ಯಕವಾದ ವಸ್ತ್ರ ವಸತಿಗಳನ್ನು ಹೊಂದುವ ಹಕ್ಕಿದೆ. ಆದರೆ ಈ ಸರಳ ಆಚರಣೆಗೆ ನಮಗೆ ಅರ್ಥಶಾಸ್ತ್ರಜ್ಞರೂ ಅವರ ತತ್ವಗಳೂ ಅವಶ್ಯಕವಿಲ್ಲ. 'ನಾಳೆಯನ್ನು ಕುರಿತು ಯೋಚಿಸಬೇಡ' ಎಂಬುದು ಜಗತ್ತಿನ ಎಲ್ಲ ಧರ್ಮಗ್ರಂಥಗಳಲ್ಲಿಯೂ ದೊರಕುವ ಆಜ್ಞೆ. ಚೆನ್ನಾಗಿ ವ್ಯವಸ್ಥಿತವಾದ ಸಮಾಜದಲ್ಲಿ ತನ್ನ ಜೀವನವನ್ನು ಸಂಪಾದಿಸಿಕೊಳ್ಳುವುದು, ಜಗತ್ತಿನಲ್ಲೆಲ್ಲ ಅತ್ಯಂತ ಸುಲಭವಾದ ಕಾರ್ಯವಾಗಬೇಕು. ಹಾಗೆ ಆಗಿದೆ. ಒಂದು ದೇಶದ ಸುವ್ಯವಸ್ಥೆಯ ಒರೆಗಲ್ಲು ಯಾವು ದೆಂದರೆ ಅಲ್ಲಿ ಎಷ್ಟು ಜನ ಲಕ್ಷಾಧಿಪತಿಗಳು ಇದ್ದಾರೆಂಬುದಲ್ಲ, ಎಲ್ಲ ಸಾಮಾನ್ಯ ಜನತೆಯೂ ಹಸಿದುಕೊಂಡಿಲ್ಲ ಎಂಬುದು. ನಾವು ಪರೀಕ್ಷಿಸಬೇಕಾದ ಒಂದೇ ಅಂಶ, 'ಭೌತ ಅಭಿವೃದ್ಧಿಯೇ ನೈತಿಕ ಅಭಿವೃದ್ಧಿ' ಇದು ಸರ್ವತ್ರ ಅನ್ವಯವಾಗುವ ಒಂದು ಸೂತ್ರವಾಗಬಲ್ಲದೆ? ಎಂಬುದು.

"ಈಗ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳೋಣ. ರೋಮ್, ಭೌತ ವೈಭವದ ಅತ್ಯುಚ್ಚ ಶಿಖರವನ್ನು ಏರಿದಾಗ ನೈತಿಕ ಪತನವನ್ನು ಅನುಭವಿಸಿತು. ಈಜಿಪ್ಟಿನಲ್ಲಿಯೂ ಹಾಗೆಯೇ ಆಯಿತು. ಚರಿತ್ರೆಯಲ್ಲಿ ನಮೂದಿಸಿರುವ ಇನ್ನೂ ಅನೇಕ ರಾಷ್ಟ್ರಗಳು ಅದೇ ಗತಿಯನ್ನು ಹೊಂದಿದವು. ಪ್ರಭುವಾದ ಶ್ರೀಕೃಷ್ಣನ ಸಂತಾನದವರೂ ಬಂಧುಗಳೂ ಐಶ್ವರ್ಯದಲ್ಲಿ ಉರುಳಾಡುತ್ತಿರುವಾಗಲೇ ನಾಶಹೊಂದಿದರು. ರಾಕ್‌ಫೆಲ್ಲರ್‌ಗೂ ನೀತಿಯ ಮನೋಭಾವನೆ ಇಲ್ಲವೆನ್ನುವುದಿಲ್ಲ. ಆದರೆ ನಾವು ಅವರನ್ನು ಸಂತೋಷದಿಂದಲೇ ಉದಾರವಾಗಿ ಪರಿಗಣಿಸುತ್ತೇವೆ. ಅವರು ಉಚ್ಚ ದರ್ಜೆಯ ಧರ್ಮನೀತಿಗಳನ್ನು ಅನುಸರಿಸಬೇಕೆಂದು ಸಹ ನಾವು ನಿರೀಕ್ಷಿಸು ವೆಂಬುದು ನನ್ನ ಅಭಿಪ್ರಾಯ. ಅವರ ವಿಷಯದಲ್ಲಿ ಭೌತವೈಭವ ಅನಿವಾರ್ಯವಾಗಿ ಮಾನಸಿಕ ಶ್ರೀಮಂತಿಕೆಗೆ ಕಾರಣವಾಗಿಲ್ಲ. ನನಗೆ ದಕ್ಷಿಣ ಆಫ್ರಿಕದಲ್ಲಿ ನಮ್ಮ ದೇಶದ ಸಾವಿರಾರು ಜನರೊಂದಿಗೆ ಅತ್ಯಂತ ಆತ್ಮೀಯ ಮಿಳನವಾಗುವ ಸಂಯೋಗ ದೊರಕಿತ್ತು. ಅಲ್ಲಿ ನನಗೆ ಕಂಡುದೇನೆಂದರೆ ಐಶ್ವರ್ಯ ಹೆಚ್ಚಾಗಿದ್ದೆಡೆ ಹೆಚ್ಚು ನೈತಿಕ ಪತನ. ಕೊನೆಯ ಪಕ್ಷ ನಮ್ಮ ಧನಿಕರು ಬಡವರು ಮಾಡಿದಷ್ಟೂ ಸಹ ಧಾರ್ಮಿಕ ಹೋರಾಟವಾದ ಸತ್ಯಾಗ್ರಹಕ್ಕೆ ಬೆಂಬಲ ಕೊಡಲಿಲ್ಲ. ಧನಿಕರ ಆತ್ಮಗೌರವ. ಬಡವರ ಆತ್ಮಗೌರವದಷ್ಟು ಧಕ್ಕೆ ಹೊಂದಲೇ ಇಲ್ಲ. ಅಪಾಯದ ಗೆರೆಯನ್ನು ಮುಟ್ಟುವ ಭಯವಿಲ್ಲದಿದ್ದಲ್ಲಿ, ನನ್ನ ಸುತ್ತಮುತ್ತಲೂ

ಸಹ ನಿಜವಾದ ಬೆಳವಣಿಗೆಗೆ ಐಶ್ವರ್ಯ ಹೇಗೆ ಅಡ್ಡಿಯಾಗುತ್ತದೆ ಎಂಬುವನ್ನು ತೋರಿಸಬಲ್ಲೆ.

"ಜಗತ್ತಿನ ಧಾರ್ಮಿಕ ಗ್ರಂಥಗಳು, ಅನೇಕ ಆಧುನಿಕ ಗ್ರಂಥಗಳಿಗಿಂತ ನಿಬಂಧಗಳಿಗಿಂತ, ಹೆಚ್ಚು ಸುರಕ್ಷಿತವಾದ ಆರ್ಥಿಕ ನಿಯಮಗಳನ್ನೊಳಗೊಂಡಿವೆಂದು ಯೋಚಿಸುವ ಧೈರ್ಯ ಮಾಡುತ್ತೇನೆ. ನಮ್ಮನ್ನೇ ಕುರಿತು ನಾವು ಕೇಳುತ್ತಿರುವ ಈ ಪ್ರಶ್ನೆಯೇನೂ ಹೊಸದಲ್ಲ. ಇದನ್ನು ಎರಡು ಸಾವಿರ ವರ್ಷಗಳ ಕೆಳಗೆ ಜೀಸಸ್‌ನನ್ನು ಕೇಳಿದ್ದರು.

"ಸಂತನಾದ ಮಾರ್ಕ್, ಈ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಜೀಸಸ್, ತನ್ನ ಗಂಭೀರ ಮುದ್ರೆಯಲ್ಲಿದ್ದಾನೆ. ಅವನು ಶ್ರದ್ಧಾಪೂರಿತನಾಗಿದ್ದಾನೆ. ಅವನು ಶಾಶ್ವತ ತತ್ವಗಳನ್ನು ಕುರಿತು ಮಾತನಾಡುತ್ತಾನೆ. ಜಗತ್ತು ಅವನಿಗೆ ಚೆನ್ನಾಗಿ ಅರ್ಥವಾಗಿದೆ. ಅವನೇ, ತನ್ನ ಕಾಲದ ಅತ್ಯಂತ ದೊಡ್ಡ ಅರ್ಥಶಾಸ್ತ್ರಜ್ಞ. ಅವನು ಕಾಲವನ್ನೂ ದೇಶವನ್ನೂ ಮಿತಗೊಳಿಸುವುದರಲ್ಲಿ ಜಯಶಾಲಿಯಾದನು. ಅವನು ಅವೆಲ್ಲವನ್ನೂ ಮೀರಿದನು. ಇಂತಹವನ ಅತ್ಯುಚ್ಚ ಧ್ಯಾನ ಸಮಯದಲ್ಲಿ ಒಬ್ಬ ಓಡುತ್ತ ಬಂದು ಮೊಣಕಾಲೂರಿ ಕೇಳುತ್ತಾನೆ. 'ಪ್ರಿಯ ಗುರುವೆ, ಶಾಶ್ವತ ಬಾಳನ್ನು ಸಂಪಾದಿಸಲು ನಾನು ಏನು ಮಾಡಲಿ?' "ಆಗ ಏಸು ಅವನಿಗೆ ಹೇಳುತ್ತಾನೆ 'ನನ್ನನ್ನು ಯಾಕೆ ಒಳ್ಳೆಯವ ಎಂದು ಕರೆಯುತ್ತಿ? ಒಳ್ಳೆಯವನು, ಒಬ್ಬನಲ್ಲದೆ ಬೇರಾರೂ ಇಲ್ಲ. ಅವನೇ ದೇವರು. ನಿನಗೆ ಹತ್ತು ಉಪದೇಶಗಳು (Ten Commandments) ಗೊತ್ತು. ವ್ಯಭಿಚಾರ ಮಾಡಬೇಡ ಕೊಲ್ಲಬೇಡ, ಕದಿಯ ಬೇಡ, ಸುಳ್ಳು ಸಾಕ್ಷ್ಯ ಹೇಳಬೇಡ. ಮೋಸ ಮಾಡಬೇಡ. ನಿನ್ನ ತಂದೆ, ತಾಯಿಯರನ್ನು ಪೂಜಿಸು'. ಅವನು ಏಸುವಿಗೆ ಹೇಳುತ್ತಾನೆ 'ಗುರುವೆ ಇವನ್ನೆಲ್ಲ ನಾನು ನನ್ನ ಯವ್ವನ ಕಾಲದಿಂದಲೇ ಆಚರಿಸುತ್ತ ಬಂದಿದ್ದೇನೆ'. ಅವನನ್ನು ನೋಡಿ ಏಸುವಿಗೆ ಅವನಲ್ಲಿ ಪ್ರೀತಿಯುಂಟಾಯಿತು. ಹೇಳಿದನು 'ನಿನ್ನ ದಾರಿ ಹಿಡಿದು ಹೋಗು ನಿನ್ನಲ್ಲಿರುವುದನ್ನೆಲ್ಲ ಮಾರಿ ಬಡವರಿಗೆ ಕೊಡು. ನಿನಗೆ ಸ್ವರ್ಗದಲ್ಲಿ ಐಶ್ವರ್ಯ, ಸಿಕ್ಕುತ್ತದೆ. ಹಿಂದಿರುಗಿ ಬಾ. ಶಿಲುಬೆಯನ್ನು ಎತ್ತಿಕೊಂಡು ನನ್ನನ್ನು ಅನುಸರಿಸು' ಆ ಮಾತನ್ನು ಕೇಳಿ ಅವನಿಗೆ ದುಃಖವುಂಟಾಯಿತು. ಅವನು ಸಂಕಟಪಡುತ್ತ ಹೋದನು. ಯಾಕೆಂದರೆ ಅವನಲ್ಲಿ ತುಂಬ ಐಶ್ವರ್ಯವಿತ್ತು. ಏಸುವು ಸುತ್ತ ನೋಡಿ ತನ್ನ ಶಿಷ್ಯರಿಗೆ ಹೀಗೆ ಹೇಳಿದನು. 'ಐಶ್ವರ್ಯವಿರುವವರು ದೇವರ ರಾಜ್ಯಕ್ಕೆ ಹೋಗುವುದು ತುಂಬ ಕಷ್ಟ' ಆದರೆ ಶಿಷ್ಯರು ಅವನ ಮಾತನ್ನು ಕೇಳಿ ಆಶ್ಚರ್ಯಭರಿತರಾದರು. ಆದರೆ ಏಸು ಮತ್ತೆ ಉತ್ತರ ಕೊಟ್ಟು ಹೇಳಿದನು. 'ಮಕ್ಕಳೇ ಐಶ್ವರ್ಯವನ್ನು ನೆಚ್ಚುವವರಿಗೆ ದೇವರ ರಾಜ್ಯಕ್ಕೆ ಪ್ರವೇಶಿಸಲು ಎಷ್ಟು ಕಷ್ಟ. ಐಶ್ವರ್ಯವಂತನಿಗೆ ದೇವರ ರಾಜ್ಯವನ್ನು ಪ್ರವೇಶಿಸುವುದಕ್ಕಿಂತ, ಒಂಟೆಗೆ ಸೂಜಿಯ ಕಣ್ಣಿನಲ್ಲಿ ದಾಟುವುದು ಸುಲಭ'.

"ಜೀವದ ಒಂದು ಶಾಶ್ವತ ತತ್ವ, ಇಂಗ್ಲಿಷ್ ಭಾಷೆ ಹೇಳಬಲ್ಲ ಅತಿ ಮಹತ್ವದ ಪದಗಳಲ್ಲಿ ಹೇಳಿರುವುದು ಇಲ್ಲಿ ಸಿಗುತ್ತದೆ. ಆದರೆ ಶಿಷ್ಯರು ಅಪನಂಬಿಕೆಯನ್ನು

ತಲೆಯಲ್ಲಾಡಿಸಿ ತೋರಿಸಿದರು–ಇಂದಿಗೂ ನಾವು ಮಾಡುತ್ತಿರುವಂತೆ. ಇವತ್ತಿಗೂ ನಾವು ಹೇಳುತ್ತಿರುವಂತೆ ಏಸುವಿಗೆ ಅವರು ಹೀಗೆ ಹೇಳಿದರು ನೋಡಿ. ಈ 'ನಿಯಮ ಆಚರಣೆಯಲ್ಲಿ ನಿಷ್ಪ್ರಯೋಜನವಾಗುತ್ತದೆ. ನಾವು ನಮ್ಮದನ್ನೆಲ್ಲ ಮಾರಿ, ಏನನ್ನೂ ಇಟ್ಟುಕೊಳ್ಳದೆ ಹೋದರೆ, ನಮ್ಮ ಊಟಕ್ಕೇನು? ನಮ್ಮ ಬಳಿ ಸ್ವಲ್ಪವಾದರೂ ಹಣ ವಿರಬೇಕು. ಇಲ್ಲದಿದ್ದರೆ ನಾವು ಕೆಲವು ಮಟ್ಟಿಗಾದರೂ ನೀತಿಯುಕ್ತರಾಗಿರುವುದು ಸಾಧ್ಯವಿಲ್ಲ'. ಹೀಗೆ ತಮ್ಮ ವಾದವನ್ನು ಅವರು ಮಂಡಿಸಿದರು. ಅವರಿಗೆ ಮಿತಿಮೀರಿದ ಆಶ್ಚರ್ಯವುಂಟಾಯಿತು. ತಮ್ಮಲ್ಲಿಯೇ ಕೇಳಿಕೊಂಡರು 'ಹಾಗಾದರೆ ಯಾರು ತಾನೇ ರಕ್ಷಿತರಾಗುತ್ತಾರೆ?' ಆಗ ಏಸು ಅವರನ್ನು ನೋಡಿ ಹೀಗೆ ಹೇಳಿದನು. "ಮನುಷ್ಯರಿಗೆ ಅದು ಅಸಾಧ್ಯವಾಗಬಹುದು. ಆದರೆ ದೇವರಿಗಲ್ಲ. ದೇವರಿಗೆ ಎಲ್ಲವೂ ಸಾಧ್ಯ".

"ಆಗ ಪೀಟರ್ ಜೀಸಸ್‌ಗೆ ಹೀಗೆ ಹೇಳಿದನು. 'ನೋಡಿ ನಾವು ಎಲ್ಲವನ್ನೂ ಬಿಟ್ಟು ನಿಮ್ಮನ್ನು ಅನುಸರಿಸುತ್ತಿದ್ದೇವೆ'. ಏಸು ಅವನಿಗೆ ಹೀಗೆ ಪ್ರತ್ಯುತ್ತರವಿತ್ತನು. 'ನಾನು ನಿಜವಾಗಿ ನಿಮಗೆ ಹೀಗೆ ಹೇಳುತ್ತೇನೆ. ಮನೆ ಬಿಟ್ಟವನು, ಅಥವಾ ಸಹೋದರ ರನ್ನೂ ಸಹೋದರಿಯರನ್ನೂ ಬಿಟ್ಟವನು, ತಂದೆಯನ್ನು ಅಥವಾ ತಾಯಿಯನ್ನು ಬಿಟ್ಟವನು, ಅಥವಾ ಜಮೀನುಗಳನ್ನು ಬಿಟ್ಟವನು; ನನಗಾಗಿಯೂ ಮತ್ತು ಬೈಬಲ್ ಗಾಗಿಯೂ ಬಿಟ್ಟವನು; ಈಗಲೇ ಇದೇ ಕಾಲದಲ್ಲಿಯೇ ನೂರುಮಡಿಯಾಗಿ ಮನೆ ಗಳನ್ನೂ ಅಣ್ಣ ತಮ್ಮಂದಿರನ್ನೂ ಅಕ್ಕತಂಗಿಯರನ್ನೂ ತಾಯಿಯರನ್ನೂ ಮಕ್ಕಳನ್ನೂ ಭೂಮಿಯನ್ನೂ ಹೊಂದುವನು. ಮತ್ತು ಮುಂದಿನ ಪ್ರಪಂಚದಲ್ಲಿ ಶಾಶ್ವತ ಜೀವನ ವನ್ನು ಹೊಂದುವನು. ಆದರೆ ಈಗ ಮೊದಲನೆಯವರಾಗಿರುವ ಅನೇಕರು ಆಗ ಕಡೆಯುವ ರಾಗುತ್ತಾರೆ. ಆಗ ಕಡೆಯುವರಾಗಿರುವವರು ಈಗ ಮೊದಲನೆಯವರಾಗುತ್ತಾರೆ'.

"ಇಲ್ಲಿ ನೀವು ಧರ್ಮವನ್ನು ಅನುಸರಿಸಿದರೆ ದೊರೆಯುವ ಫಲ–ಪ್ರತಿಫಲ–ಇದೆ. ಹಿಂದುಗಳಲ್ಲದ ಇತರ ಧರ್ಮದವರ ಗ್ರಂಥಗಳಿಂದ ಉದಹರಿಸುವ ತೊಂದರೆಯನ್ನೂ ನಾನು ತೆಗೆದುಕೊಂಡಿಲ್ಲ. ನಾನು ಉದಹರಿಸಿರುವ ಬೈಬಲ್ ವಾಕ್ಯಗಳಿಗಿಂತಲೂ ಹೆಚ್ಚು ತೀವ್ರವಾದ ನಮ್ಮ ಋಷಿಗಳ ವಾಕ್ಯಗಳನ್ನು ಉದಹರಿಸಿಲ್ಲ. ಈ ಪ್ರಶ್ನೆಗೆ ಹೌದು ಎಂದು ಉತ್ತರ ಕೊಡುವ ಸಾಕ್ಷ್ಯಗಳಲ್ಲಿ ಅತ್ಯಂತ ಪ್ರಬಲವಾದುವು, ಜಗತ್ತಿನ ಅತ್ಯುತ್ಕೃಷ್ಟ ಗುರುಗಳ ಜೀವನಗಳು. ಜೀಸಸ್, ಮಹಮದ್ ಬುದ್ಧ ನಾನಕ್ ಕಬೀರ್ ಚೈತನ್ಯ ಶಂಕರ ದಯಾನಂದ ರಾಮಕೃಷ್ಣಪರಮಹಂಸ ಇವರೆಲ್ಲರೂ ಜನರ ಮೇಲೆ ಅತ್ಯಂತ ಪ್ರಭಾವವನ್ನು ಬೀರಿ ಸಾವಿರಾರು ಮಂದಿಯ ಚಾರಿತ್ರ್ಯವನ್ನು ರೂಪಿಸಿದರು. ಅವರೆಲ್ಲ ಜಗತ್ತಿನಲ್ಲಿ ಬದುಕಿದ್ದುದರಿಂದ ಜಗತ್ತು ಹೆಚ್ಚು ಸಂಪದ್ಯುಕ್ತವಾಗಿದೆ. ಮತ್ತು ಅವರೆಲ್ಲ ತಮ್ಮ ಭಾಗಕ್ಕೆ ದಾರಿದ್ರ್ಯವನ್ನು ಸ್ವಂತ ಇಚ್ಛೆಯಿಂದ ಆಲಿಂಗಿಸಿ ಕೊಂಡವರಾಗಿದ್ದರು.

"ನಾವು ಆಧುನಿಕ ಭೌತಭೋಗದ ಹುಚ್ಚನ್ನು ಎಷ್ಟರ ಮಟ್ಟಿಗೆ ನಮ್ಮ ಗುರಿ ಯಾಗಿ ಮಾಡಿಕೊಳ್ಳುತ್ತೇವೆಯೋ ಅಷ್ಟರಮಟ್ಟಿಗೆ ನಾವು ಅಭಿವೃದ್ಧಿಯಲ್ಲಿ ಅಧೋ ಗತಿಗೆ ಇಳಿಯುತ್ತಿದ್ದೇವೆ ಎಂದು ನನಗೆ ನಂಬಿಕೆಯಾಗಿಲ್ಲದೆ ಹೋಗಿದ್ದರೆ ಈ ಅಂಶ

ವನ್ನು ನಾನು ಇಷ್ಟು ಕಷ್ಟಪಟ್ಟು ಒತ್ತಿ ಹೇಳುತ್ತಿರಲಿಲ್ಲ. ಆದುದರಿಂದಲೇ ಪ್ರಾಚೀನ ಧ್ಯೇಯ, ಐಶ್ವರ್ಯಸಂಪಾದನೆಯ ಚಟುವಟಿಕೆಗಳಿಗೆ ಒಂದು ಮಿತಿಯನ್ನು ಕಲ್ಪಿಸುವು ದಾಗಿದೆ. ಇದರಿಂದ ಪ್ರಾಪಂಚಿಕ ಆಶೋತ್ತರಗಳಿಗೆಲ್ಲ ಒಂದು ಕೊನೆಯಾಗುವುದಿಲ್ಲ. ಆಗಲೂ ಸಹ ನಮ್ಮ ಮಧ್ಯೆ ಐಶ್ವರ್ಯ ಸಂಪಾದನೆಯನ್ನೇ ಜೀವನದ ಧ್ಯೇಯವನ್ನಾಗಿ ಇಟ್ಟುಕೊಂಡಿರುವ ಜನರು ಈಗಿರುವಂತೆ ಇದ್ದೇ ಇರುತ್ತಾರೆ. ಆದರೆ ಆದು ಧ್ಯೇಯ ದಿಂದ ಒಂದು ಹೆಜ್ಜೆ ಅವನತಿ ಎಂಬುದನ್ನು ನಾವು ಯಾವಾಗಲೂ ಮನಗಂಡಿದ್ದೇವೆ. ನಮ್ಮಲ್ಲಿ ಅತ್ಯಂತ ಧನಿಕರಾದವರೂ ಸಹ, ಅನೇಕ ವೇಳೆ, 'ಸ್ವಂತ ಇಚ್ಛೆಯಿಂದ ಬಡವ ರಾಗಿ ಉಳಿದಿದ್ದರೆ ನಾವು ಇನ್ನೂ ಉತ್ತಮರಾಗಿರುತ್ತಿದ್ದೆವು' ಎನ್ನುವುದನ್ನು ಅರಿಯು ವುದು ಅತ್ಯಂತ ಸುಂದರ ವಿಷಯ.

"ನೀವು ದೇವರನ್ನೂ ಧನವನ್ನೂ ಒಟ್ಟಿಗೆ ಸೇವಿಸಲಾರಿರಿ' ಎಂಬುದು ಅತ್ಯಮೂಲ್ಯ ವಾದ ಆರ್ಥಿಕ ಸತ್ಯ. ನಾವು ನಮ್ಮ ಆಯ್ಕೆಯನ್ನು ಮಾಡಬೇಕು. ಪಾಶ್ಚಾತ್ಯ ರಾಷ್ಟ್ರ ಗಳು ರಾಕ್ಷಸನ–ಭೌತಭೋಗದ ದೇವರ–ಹೆಜ್ಜೆಯ ಕೆಳಗೆ ನರಳುತ್ತಿವೆ. ಅವುಗಳ ಧಾರ್ಮಿಕ ಬೆಳವಣಿಗೆ ಕುಂಠಿತವಾಗಿದೆ. ಅವರು ಇಂದು ತಮ್ಮ ಅಭಿವೃದ್ಧಿಯನ್ನು ಪೌಂಡು ಷಿಲಿಂಗ್ ಪೆನ್ನಿಯಲ್ಲಿ ಅಳೆಯುತ್ತಾರೆ. ಅಮೆರಿಕದ ಐಶ್ವರ್ಯವೇ ಒಂದು ಮಟ್ಟದಾಗಿದೆ. ಅದನ್ನು ಕಂಡರೆ ಇತರ ರಾಷ್ಟ್ರಗಳಿಗೆಲ್ಲ ಹೊಟ್ಟೆಕಿಚ್ಚು. ಅಮೆರಿಕದ ಸಮಕ್ಕೆ ಬರಬೇಕೆಂಬ ಪ್ರಯತ್ನವನ್ನು ನಾವು ಮಾಡಿದರೆ ಅದರಲ್ಲಿಯೇ ಅಪಜಯದ ಮೂಲ ಅಡಗಿದೆಯೆಂದು ನಾನು ಭವಿಷ್ಯ ಹೇಳುವ ಧೈರ್ಯಮಾಡುತ್ತೇನೆ. ನಾವು ಒಂದೇ ಗಳಿಗೆ ಯಲ್ಲಿ ಬುದ್ಧಿವಂತರೂ ಸಂಯಮಿಗಳೂ ರಭಸವುಳ್ಳವರೂ ಆಗಲಾರೆವು. ನಮ್ಮ ಮುಖಂಡರು. ನಾವು ಜಗತ್ತಿನಲ್ಲಿ ಧರ್ಮ ನೀತಿಗಳಲ್ಲಿ ಅತ್ಯುತ್ಕೃಷ್ಟರಾಗಿರಲು ಬೋಧಿಸ ಬೇಕೆಂಬುದು ನನ್ನ ಆಸೆ.

"ನಮ್ಮ ಈ ನಾಡು, ಒಂದು ಕಾಲದಲ್ಲಿ ದೇವತೆಗಳ ವಾಸಸ್ಥಾನವಾಗಿದ್ದಿತೆಂದು ಕೇಳಿದ್ದೇವೆ. ಗಿರಣಿ ಕೊಳವೆಗಳ ಹೊಗೆಯಿಂದಲೂ ಭಯಂಕರ ಶಬ್ದಗಳಿಂದಲೂ ಕುರೂಪವಾದ ಮತ್ತು ರಸ್ತೆಗಳ ಎಂಜಿನ್‌ಗಳ ಕಿರುಚಾಟದಿಂದಲೂ ಹೊಗೆ ಉಗುಳು ವಿಕೆಯಿಂದಲೂ ಮತ್ತು ತಮಗೆ ಏನು ಬೇಕು ಎಂಬುದೇ ಗೊತ್ತಿರದ ಉದಾಸೀನ ಚಿತ್ತರಾದ, ಪೆಟ್ಟಿಗೆಗಳಲ್ಲಿ ಮೀನುಗಳಂತೆ ತುಂಬಿರುವ ಕಾರುಗಳಲ್ಲಿ ವಾಹನಗಳಲ್ಲಿ, ಪರಸ್ಪರ ನೂಕಾಟ ತಿಕ್ಕಾಟ ಮಾಡುತ್ತ ಇವರನ್ನು ಅವರು ಆಚೆಗೆ ತಳ್ಳಲು, ಅವರನ್ನು ಇವರು ತಳ್ಳಲು ಸಿದ್ಧರಾಗಿರುವ ಜನ ಜಂಗುಳಿಯಿಂದ ಕೂಡಿರುವ ರಸ್ತೆಗಳ ಈ ನಾಡಿ ನಲ್ಲಿ ಈಗ ದೇವತೆಗಳು ವಾಸಿಸುವುದನ್ನು ಯೋಚಿಸುವುದೂ ಕಷ್ಟ.

"ಈ ವಿಷಯಗಳನ್ನು ಕುರಿತು ನಾನೇಕೆ ಹೇಳುತ್ತೇನೆಂದರೆ ಇವುಗಳು ಭೌತ ಅಭಿವೃದ್ಧಿಯ ಗುರುತಗಳೆಂದು ಪರಿಗಣಿಸಲ್ಪಟ್ಟಿವೆ. ಆದರೆ ಅವು ನಮ್ಮ ಸೌಖ್ಯಕ್ಕೆ ಒಂದು ಅಣುವಿನಷ್ಟು ಸಹಾಯಕವಾಗುವುದಿಲ್ಲ. ಖ್ಯಾತ ವಿಜ್ಞಾನಿಯಾದ ವ್ಯಾಲೇಸ್‌ರು ಈ ವಿಷಯದಲ್ಲಿ ತಮ್ಮ ದೀರ್ಘ ಆಲೋಚಿತ ತೀರ್ಮಾನವನ್ನು ಹೇಳಿದ್ದಾರೆ.

“ಅನಂತರ ಅವರು ಮುಂದೆ ಕಾರ್ಖಾನೆಗಳು ಹೇಗೆ ಪುರುಷರ, ಸ್ತ್ರೀಯರ ಮಕ್ಕಳ ಶವಗಳ ಮೇಲೆ ಎದ್ದಿವೆ; ಮತ್ತು ಹೇಗೆ ದೇಶ ಐಶ್ವರ್ಯದಲ್ಲಿ ಮುಂದುವರಿದಂತೆ ನೀತಿಯಲ್ಲಿ ಅವನತಿಯನ್ನು ಹೊಂದಿದೆ ಎಂಬುದನ್ನು ತೋರಿಸಿದ್ದಾರೆ. ಇನ್ನು ಮುಂದುವರಿದು ಅನಾರೋಗ್ಯ ಸ್ಥಿತಿ. ಜೀವನವನ್ನೇ ನಾಶಮಾಡುವ ವ್ಯಾಪಾರಗಳು, ಎಲ್ಲದರಲ್ಲಿಯೂ ಬೆರಕೆ ಲಂಚ ಜೂಜು ಇವುಗಳನ್ನು ಹೇಳುತ್ತಾರೆ. ಮತ್ತು ಹೇಗೆ ಐಶ್ವರ್ಯವು ಹೆಚ್ಚಿದಂತೆ, ನ್ಯಾಯದಲ್ಲಿ ಅನೀತಿ ತುಂಬಿದೆ, ಅತಿಯಾದ ಮದ್ಯಸೇವನೆ ಮತ್ತು ಆತ್ಮಹತ್ಯೆಗಳಿಂದ ಮರಣ ಸಂಖೆ ಹೆಚ್ಚಿದೆ, ಕಾಲಕ್ಕೆ ಮುಂಚಿನ ಮಕ್ಕಳ ಜನನ ಮತ್ತು ಆಗರ್ಭದೋಷಗಳ ಮಕ್ಕಳ ಜನನ ಇವು ಹೇಗೆ ಹೆಚ್ಚಾಗಿವೆ ಮತ್ತು ಹೇಗೆ ವ್ಯಭಿಚಾರ ಒಂದು ಆಚಾರವೇ ಆಗಿದೆ ಎಂಬುದನ್ನು ತೋರಿಸಿದ್ದಾರೆ. ತಮ್ಮ ಪರಾಮರ್ಶೆಯನ್ನು ಅವರು ಈ ಅರ್ಥಪೂರ್ಣ ವಾಕ್ಯದೊಂದಿಗೆ ಮುಗಿಸುತ್ತಾರೆ. ‘ವಿವಾಹ ವಿಚ್ಛೇದದ ನ್ಯಾಯಸ್ಥಾನಗಳ ನಡವಳಿಕೆಗಳು, ಐಶ್ವರ್ಯ ಮತ್ತು ವಿರಾಮದ ಫಲಗಳ ಬೇರೆ ಮುಖಗಳನ್ನು ತೋರಿಸುತ್ತವೆ. ಲಂಡನ್ ಸಭ್ಯ ಸಮಾಜದಲ್ಲಿ ಹೆಚ್ಚುಕಾಲ ಇದ್ದ ಸ್ನೇಹಿತನೊಬ್ಬನು ಗ್ರಾಮಾಂತರದ ಮತ್ತು ಲಂಡನ್ ನಗರದ ಕೆಲವು ಮನೆಗಳಲ್ಲಿ, ವಿಷಯಲಂಪಟ ರೋಮನ್ ಚಕ್ರವರ್ತಿಯ ಅರಮನೆಯಲ್ಲಿ ನಡೆಯುವ ಸ್ವಚ್ಛಂದ ಕಾಮಕೇಳಿಗೆ ಕಡಿಮೆಯಿಲ್ಲದ ಕೇಳಿಗಳು, ಆಗಾಗ ನಡೆಯುತ್ತಿದ್ದವೆಂದು ಖಾತರಿಯಾಗಿ ಹೇಳಿದನು. ಯುದ್ಧದ ವಿಷಯವನ್ನಂತೂ ಏನೂ ಹೇಳಬೇಕಾದುದೇ ಇಲ್ಲ. ರೋಮನ್ ಚಕ್ರಾಧಿಪತ್ಯದ ಜನನ ಕಾಲದಿಂದಲೂ ಯುದ್ಧ ಬೇರೂರಿ ಬಂದಿದೆ. ಆದರೆ ಈಚೆಗೆ ಎಲ್ಲ ನಾಗರಿಕರಾಷ್ಟ್ರದ ಜನತೆಗಳಲ್ಲಿಯೂ ನಿಸ್ಸಂದೇಹವಾಗಿ ಯುದ್ಧ ವಿರೋಧ ಮನೋಭಾವವಿದೆ. ಆದರೆ ಶಾಂತಿಯನ್ನು ಕುರಿತು ಮಾಡುತ್ತಿರುವ ಶ್ರದ್ಧಾಪೂರ್ವಕ ಘೋಷಣೆಗಳು, ಜೊತೆಯಲ್ಲಿಯೇ ದಿನದಿನವೂ ಹೆಚ್ಚಿಸಿಕೊಳ್ಳುತ್ತಿರುವ ಯುದ್ಧ ಸಾಮಗ್ರಿಗಳು ಇವುಗಳೆಲ್ಲ ಆಳ್ವಿಕೆದಾರರಲ್ಲಿ, ನೀತಿಯ ಮಾರ್ಗದರ್ಶನ ಪೂರ್ತಿಯಾಗಿ ಮರೆಯಾಗಿದೆಯೆಂದು ತೋರಿಸಲು ಸಹಾಯಕವಾಗಿವೆ.”

“ಬ್ರಿಟಿಷರ ಆಶ್ರಯದಲ್ಲಿ ನಾವು ಬಹಳ ಕಲಿತಿದ್ದೇವೆ. ಆದರೆ ನಾವು ಎಚ್ಚರಿಕೆಯಿಂದಿರದಿದ್ದರೆ ಬ್ರಿಟನ್, ಭೌತವೈಭವದ ರೋಗದಿಂದ ಅನುಭವಿಸುತ್ತಿರುವ ಎಲ್ಲ ದುಷ್ಪಟಗಳನ್ನೂ ನಮ್ಮಲ್ಲಿಯೂ ಪ್ರವೇಶಗೊಳಿಸುತ್ತೇವೆ. ನಾವು ಆ ಸಂಪರ್ಕದಿಂದ ಲಾಭ ಪಡೆಯುವುದು, ನಮ್ಮ ನಾಗರಿಕತೆಯನ್ನೂ ನಮ್ಮ ನೀತಿಯನ್ನೂ ಸ್ವಚ್ಛವಾಗಿ ಇಟ್ಟುಕೊಂಡಾಗ ಮಾತ್ರ; ಅಂದರೆ ನಮ್ಮ ಪ್ರಾಚೀನ ವೈಭವವನ್ನು ನಾವು ಹೆಮ್ಮೆಯಿಂದ ಹೊಗಳಿಕೊಳ್ಳುವುದನ್ನು ಬಿಟ್ಟು, ಅದನ್ನು ನಮ್ಮ ಜೀವಿತದಲ್ಲಿ ಆಚರಿಸಿ, ನಮ್ಮ ಬಾಳ್ವೆಯೇ ನಮ್ಮ ಪ್ರಾಚೀನ ವೈಭವಕ್ಕೆ ಸಾಕ್ಷಿಯಾಗುವಂತೆ ತೋರಿಸಬೇಕು. ಇಂಗ್ಲೆಂಡು ನಮ್ಮ ಆಳ್ವಿಕೆಗಾರರನ್ನು ಒದಗಿಸುತ್ತದೆಂದು ನಾವು ಅದನ್ನು ಅನುಕರಿಸಿದರೆ, ನಾವೂ ಅದೂ ಇಬ್ಬರೂ ಅಧೋಗತಿಗಿಳಿಯುತ್ತೇವೆ.

“ನಮ್ಮ ಧ್ಯೇಯಗಳಿಗಾಗಲೀ ಅಥವಾ ಅವುಗಳನ್ನು ಪೂರ್ಣವಾಗಿ ಆಚರಣೆಗೆ

ತರುವುದಕ್ಕಾಗಲೀ ನಾವು ಹೆದರಬೇಕಾದುದಿಲ್ಲ. ನಾವು ಸುವರ್ಣಕ್ಕಿಂತ ಹೆಚ್ಚಾಗಿ ಸತ್ಯ; ಅಧಿಕಾರ ಮತ್ತು ಐಶ್ವರ್ಯದ ಅಟ್ಟಹಾಸಕ್ಕಿಂತ ಹೆಚ್ಚಾಗಿ ಅಭಯ; ಸ್ವಪ್ರೀತಿಗಿಂತ ಹೆಚ್ಚಾಗಿ ಪರೋಪಕಾರ–ಇವನ್ನು ತೋರಿಸಿದಾಗ ಮಾತ್ರವೇ ನಮ್ಮ ದೇಶ, ನಿಜವಾಗಿ ಆಧ್ಯಾತ್ಮ ದೇಶವಾಗುತ್ತದೆ. ನಾವು ನಮ್ಮ ಮನೆಗಳನ್ನು ಶುದ್ಧಿಮಾಡಿ, ನಮ್ಮ ಅರಮನೆಗಳನ್ನೂ ದೇವಾಲಯಗಳನ್ನೂ, ಐಶ್ವರ್ಯ ಮತ್ತು ಪ್ರದರ್ಶನದಿಂದ ಬಿಡುಗಡೆ ಮಾಡಿ ಅವುಗಳಲ್ಲಿ ನೀತಿಯ ಗುಣಗಳನ್ನೆಲ್ಲ ತುಂಬಿದರೆ, ನಾವು ದೊಡ್ಡ ಸೈನ್ಯದ ಹೊರೆಯನ್ನು ವಹಿಸದೆಯೇ, ಯಾವ ಶತ್ರು ಸೈನ್ಯಗಳ ಒಕ್ಕೂಟದೊಂದಿಗೂ ಯುದ್ಧ ಮಾಡಬಹುದು. ನಾವು ಮೊದಲು ದೇವರ ರಾಜ್ಯವನ್ನೂ ಅವನ ಧರ್ಮಮಾರ್ಗವನ್ನೂ ಹುಡುಕೋಣ; ನಮಗೆ ಸಮಸ್ತವೂ ಒಳ್ಳೆಯದಾಗುವುದೆಂಬ ಪರಮಾತ್ಮನ ವಾಗ್ದಾನ ನಮಗೆ ಸಿದ್ಧಿಸುವುದು. ಇವೇ ನಿಜವಾದ ಅರ್ಥಶಾಸ್ತ್ರ. ನೀವೂ ನಾನೂ ಇವನ್ನು ರಕ್ಷಿಸಿಕೊಂಡು. ನಮ್ಮ ನಿತ್ಯ ಜೀವನದಲ್ಲಿ ಆಚರಿಸೋಣ.

ಚಂಪಾರಣ್ಯ

೧೯೧೭

ಎರಡು ವರುಷಗಳ ದೀರ್ಘಕಾಲ ಗಾಂಧಿ, ವಿಶಾಲವಾಗಿ ಪ್ರಯಾಣ ಮಾಡಿ, ಕೆಲವು ಭಾಷಣಗಳನ್ನು ಮಾಡಿದ್ದರು. ಈಗ ಅವರು ಕೂಲಿಗಾರರಿಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಕೂಲಿಗಾರರ ಸಂಗಡ, ದಕ್ಷಿಣ ಆಫ್ರಿಕದಲ್ಲಿ ಅಷ್ಟು ಚೆನ್ನಾದ ಹೋರಾಟವನ್ನು ನಡೆಸಿತ್ತು. ಅದರಿಂದ ಗಾಂಧೀಜಿ, ಕರಾರುಬದ್ಧ ಕೂಲಿಗಳ ಸಮಸ್ಯೆಗಳನ್ನು ಮೊದಲು ಕೈಗೆತ್ತಿಕೊಂಡುದು ಸ್ವಾಭಾವಿಕವಾಗಿತ್ತು.

ಬಡ, ಅವಿದ್ಯಾವಂತ ಕೂಲಿಗಳನ್ನು ಬ್ರಿಟಿಷ್ ವಸಾಹತುಗಳಲ್ಲಿ ಐದು ವರ್ಷದ ಕರಾರುಬದ್ಧ ಕೂಲಿಗಳಾಗಿ ಕೆಲಸ ಮಾಡಲು ಮೋಸದಿಂದ ಕೊಂಡು ಹೋಗಿದ್ದರು. ೧೮೩೩ರಲ್ಲಿ ಗುಲಾಮಗಿರಿಯನ್ನು ಕಾನೂನಿನಿಂದ ನಿಲ್ಲಿಸಿದ ಮೇಲೆ, ಅದರ ಫಲವಾಗಿ ಮತ್ತು ಅದಕ್ಕೆ ಬದಲಾಗಿ ಭಾರತೀಯರನ್ನು ಕರಾರುಬದ್ಧಕೂಲಿಗಳಾಗಿ ರಫ್ತುಮಾಡುವ ಪದ್ಧತಿ ಜಾರಿಗೆ ಬಂದಿತ್ತು. ಬ್ರಿಟಿಷ್ ಕ್ರೌನ್ ಕಾಲೋನಿಗಳಲ್ಲಿ (ವಸಾಹತು) ವ್ಯವಸಾಯಗಾರರು ಗುಲಾಮರಿಗೆ ಬದಲಾಗಿ ಕರಾರುಬದ್ಧ ಕೂಲಿಗಳ ಉಪಾಯವನ್ನು ಹುಡುಕಿದರು. ಕರಾರಿನ ಅವಧಿಯಲ್ಲಿ, ಕೂಲಿಗಾರರು ತಮ್ಮ ಪರದೇಶಿ ಯಜಮಾನನಿಗೇ ಕೆಲಸ ಮಾಡಲು ಬದ್ಧರಾಗಿದ್ದರು. ಕೆಲಸ ಎಷ್ಟೇ ಕಠಿಣವಾಗಲೀ ಜೀವನ ಸ್ಥಿತಿ ಕಷ್ಟಕರವಾಗಲೀ ಅವರನ್ನು ಬಿಟ್ಟು ಬಿಡಲು ಅವಕಾಶವಿರಲಿಲ್ಲ. ಅವರ ಕಷ್ಟ. ಭಾರತದಲ್ಲೆಲ್ಲ ಗೊತ್ತಾಗಿದ್ದಿತು. ಭಾರತದ ಮುಖಂಡರು ಈ ನಾಚಿಕೆಕೇಡಿನ ಪದ್ಧತಿಯ ವಿರುದ್ಧವಾಗಿ ಅನೇಕ ವರುಷಗಳಿಂದ ನ್ಯಾಯವಿಧಾಯಕ ಸಭೆಗಳಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ. ಸಾರ್ವಜನಿಕ ಸಭೆಗಳಲ್ಲೆಲ್ಲ ಪ್ರತಿಭಟನೆಯನ್ನು ಮಾಡುತ್ತಲೇ ಇದ್ದರು. ಆದರೆ ಎಲ್ಲ ವ್ಯರ್ಥವಾದಂತೆಯೇ ತೋರಿತು.

೧೯೧೬ನೆ ಮಾರ್ಚಿ ತಿಂಗಳಿನಲ್ಲಿ ಕರಾರು ಬದ್ಧಕೂಲಿ ಪದ್ಧತಿಯ ನಿಲುಗಡೆಗಾಗಿ ಒಂದು ನಿರ್ಣಯವನ್ನು ಇಂಪೀರಿಯಲ್ ಲೆಜಿಸ್ಲೆಟೀವ್ ಕೌನ್ಸಿಲ್‌ನಲ್ಲಿ ಮಂಡಿಸಿದರು. ನಿರ್ಣಯವನ್ನು ಅಂಗೀಕರಿಸುತ್ತಾ ವೈಸರಾಯ್ ಲಾರ್ಡ್ ಹಾರ್ಡಿಂಜರು ಸರಿಯಾದ ಕಾಲದಲ್ಲಿ ಪದ್ಧತಿಯನ್ನು ನಿಲ್ಲಿಸುವುದಾಗಿ ಚಕ್ರವರ್ತಿಗಳ ಸರ್ಕಾರದಿಂದ ತಮಗೆ ವಾಗ್ದಾನ ಬಂದಿದೆಯೆಂದು ಹೇಳಿದರು. ಬಹಳ ಕಾಲದಿಂದ ಇರುವ ಸಹಿಸಲಸಾಧ್ಯವಾದ ಕಷ್ಟದ ವಿಷಯದಲ್ಲಿ ಇಂತಹ ಅಸ್ಪಷ್ಟ ವಾಗ್ದಾನ ಅತ್ಯಂತ ಅಸಮರ್ಪಕ ಎಂದು ಗಾಂಧೀಜಿಗೆ ತೋರಿತು. ಸತ್ಯಾಗ್ರಹವನ್ನು ಆಚರಿಸಲು ಇದು ಅರ್ಹವಾದ ವಿಷಯವಾಗಬಹುದೆ? ಎಂದು ಸಹ ಗಾಂಧೀ ಯೋಚಿಸಿದರು.

ಈ ಮಧ್ಯೆ ವೈಸರಾಯರು "ಕರಾರುಬದ್ಧ ಕೂಲಿಗಳ ಮುಖ್ಯವಾದ ನಿಲುಗಡೆ" ಎಂದರೆ, ಬೇರೆ ಇದಕ್ಕೆ ಪ್ರತಿಯಾದ ಏರ್ಪಾಡು ಮಾಡಲು ಆವಶ್ಯಕವಾದ ತಕ್ಕಷ್ಟು ಕಾಲಾವಕಾಶ ಎಂದು ವಿವರಿಸಿದರು. ಮುಂದಿನ ವೈಸರಾಯರಾದ ಲಾರ್ಡ್ ಚೆಲ್ಮ್ಸ್ ಫರ್ಡರು "ಅಸಂದಿಗ್ಧ ಆಶ್ವಾಸನೆ" ಕೊಡುವುದು ಸಹ ಆವಶ್ಯಕವೆಂದು ಭಾವಿಸಲಿಲ್ಲ. ಆದುದರಿಂದ ೧೯೧೭ನೆ ಫೆಬ್ರುವರಿಯಲ್ಲಿ ಮಸೂದೆಯನ್ನು ಮತ್ತೆ ಸಭೆಯ ಮುಂದಿಡಲು ಅನುಮತಿ ಕೇಳಿದಾಗ ವೈಸರಾಯರು ಒರಟಾಗಿಯೇ ತಿರಸ್ಕರಿಸಿದರು. ಗಾಂಧಿ, ಅಖಿಲ ಭಾರತ ಚಳುವಳಿಗಾಗಿ ದೇಶದ ಪ್ರವಾಸವನ್ನು ಕೈಕೊಳ್ಳುವ ಕಾಲ ಒದಗಿದೆಯೆಂದು ಭಾವಿಸಿದರು.

ಚಳುವಳಿಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಗಾಂಧಿ, ವೈಸರಾಯರೊಂದಿಗೆ ಒಂದು ಭೆಟ್ಟಿಗಾಗಿ ಕೋರಿ ಬರೆದರು. ತತ್‌ಕ್ಷಣ ವೈಸರಾಯರು ಭೆಟ್ಟಿಗೆ ಒಪ್ಪಿದರು. ಲಾರ್ಡ್ ಚೆಲ್ಮ್ಸ್‌ಫರ್ಡರು ಸಹಾನುಭೂತಿಯನ್ನು ವಾಗ್ದಾನ ಮಾಡಿದರೇ ಹೊರತು ಸ್ಪಷ್ಟವಾದ ಆಶ್ವಾಸನವನ್ನಲ್ಲ. ಗಾಂಧೀ, ಬೊಂಬಾಯಿಃನಿಂದಲೇ ತಮ್ಮ ಪ್ರವಾಸವನ್ನು ಪ್ರಾರಂಭಿಸಿದರು. ಫೆಬ್ರುವರಿ ೯–೧೯೧೭ರಂದು ಇಂಪೀರಿಯಲ್ 'ಸಿಟಿಜನ್‌ಷಿಪ್ ಅಸೋಸಿಯೇಶನ್'(ಸಾಮ್ರಾಜ್ಯ ಪೌರರಸಮಿತಿ)–ಇದರ ಆಶ್ರಯದಲ್ಲಿ ಸಭೆ ನಡೆದು ಪಾಶವೀ ಕರಾರುಬದ್ಧ ಕೂಲಿ ಪದ್ಧತಿಯನ್ನು ಖಂಡಿಸಿತು. ಆ ಸಮಿತಿ, ೧೯೧೭ನೇ ಮೇ ೩೧ರೊಳಗೆ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ನಿರ್ಣಯವನ್ನು ಮಾಡಿತು. ಅನಂತರ ಭಾರತದ ಎಲ್ಲೆಡೆಯೂ ಸಭೆಗಳಲ್ಲಿ ಆ ನಿರ್ಣಯ ಅಂಗೀಕೃತವಾಯಿತು.

ಗಾಂಧೀಜಿ ಕರಾಚಿ ಕಲ್ಕತ್ತ ಮತ್ತು ಇತರ ಸ್ಥಳಗಳಿಗೆಲ್ಲ ಪ್ರವಾಸಮಾಡಿ, ಉತ್ಸಾಹಿಗಳಾದ ಸಾರ್ವಜನಿಕರ ಸಭೆಗಳಲ್ಲಿ ಭಾಷಣ ಮಾಡಿದರು. ಒಂಟಿಯಾಗಿ ಪ್ರವಾಸ ಮಾಡುತ್ತಿದ್ದ ಅವರನ್ನು ಪೋಲೀಸರು ಹಿಂಬಾಲಿಸುತ್ತಿದ್ದರು. ಜೊತೆ ಪ್ರಯಾಣಿಕರು ಗಾಂಧಿಯನ್ನು ಸಾಧುವೆಂದು ಭಾವಿಸಿ, ಆ ನಿರಪರಾಧಿಯಮೇಲೆ, ಪೋಲೀಸರ ಕಿರುಕುಳವನ್ನು ಪ್ರತಿಭಟಿಸುತ್ತಿದ್ದರು. ಗಾಂಧಿ , ಕಷ್ಟಪಟ್ಟು ಅವರನ್ನು ಸಮಾಧಾನ ಪಡಿಸುತ್ತಿದ್ದರು. ಆಗ ಇನ್ನೂ ಅವರಿಗೆ 'ಮಹಾತ್ಮ ಪದವಿ' ಬಂದಿರಲಿಲ್ಲ. ಆದರೆ ಅವರನ್ನು ತಿಳಿದಿದ್ದ ಜನವಿದ್ದೆಡೆ, ಆ ಹೆಸರಿನಿಂದ ಘೋಷಿಸುವುದು ಸಾಮಾನ್ಯವಾಗಿದ್ದಿತು.

ಗಾಂಧೀಜಿಯವರ ಚಳುವಳಿಯ ಜೊತೆಯಲ್ಲಿಯೇ ಒಂದು ಮಹಿಳಾ ನಿಯೋಗ–ಇದರಲ್ಲಿ ಶ್ರೀಮತಿ ತಾತಾ, ಪೆಟಿಟ್, ದಿಲ್‌ಷದ್ ಬೇಗಂ ಮತ್ತು ಇತರ ಪ್ರಮುಖ ಮಹಿಳಾ ಮುಂದಾಳುಗಳಿದ್ದರು–ವೈಸರಾಯರನ್ನು ಭೇಟಿ ಮಾಡಿದರು. ವೈಸರಾಯರು ಅವರಿಗೆ ಪ್ರೋತ್ಸಾಹಕರವಾದ ಉತ್ತರವನ್ನು ಕೊಟ್ಟರು. ಸಾರ್ವಜನಿಕ ಚಳುವಳಿ, ಮತ್ತು ಸತ್ಯಾಗ್ರಹದ ಸಿದ್ಧತೆ, ವೈಸರಾಯರ ಮೇಲೆ ಪ್ರಭಾವ ಬೀರಿದವು. ಅವರು ಏಪ್ರಿಲ್ ೧೨ರಿಂದ ಕರಾರುಬದ್ಧ ಕೂಲಿ ಪದ್ಧತಿಯನ್ನು ನಿಲ್ಲಿಸಿದರು. ಯುದ್ಧದ ಅವಧಿಯವರೆಗೆ ಆ ಪ್ರತಿಬಂಧಕ ಎಂದು ಅರ್ಥವಿದ್ದರೂ, ಆ ಪದ್ಧತಿ ಜೂನ್ ೧–೧೯೨೦ರಂದು ಪೂರ್ಣವಾಗಿ ನಿಂತುಹೋಯಿತು. ಬಹಳ ಕಾಲದ ಹಿಂದೆ–೧೮೯೪ರಂದು ಗಾಂಧೀಜಿ

ಈ ಪದ್ಧತಿಗೆ ವಿರೋಧವಾಗಿ. ಮನವಿಯನ್ನು ಬರೆದುಸಲ್ಲಿಸಿದ್ದರು. ಈ ಅರ್ಧಗುಲಾಮ ಗಿರಿಯ ಪದ್ಧತಿ ಎಂದಾದರೊಂದು ದಿನ ಕೊನೆಗೊಳ್ಳುವುದೆಂದು ಅವರು ಆಶಿಸಿದ್ದರು.

ಭಾರತದ ತೋಟಗಳಲ್ಲಿ, ಮತ್ತೊಂದು ಹೀನವಾದ ಕೂಲಿಪದ್ಧತಿಯಿದ್ದಿತು. ಗಾಂಧಿ, ನೀಲಿಯ ಪೊಟ್ಟಣಗಳನ್ನು ನೋಡಿದ್ದರು. ಆದರೆ ಅದು ಸಾವಿರಾರು ನಿಸ್ಸಹಾಯಕ ಕೂಲಿಗಳ ಅಧಿಕಶ್ರಮದಿಂದ ಬೆಳೆದು ತಯಾರಾದುದೆಂಬುದು ಅವರಿಗೆ ತಿಳಿದಿರಲಿಲ್ಲ. ನೀಲಿ ವ್ಯವಸಾಯಗಾರರ ಕ್ಲೇಶವನ್ನು ಗಾಂಧಿ, ಮೊದಲಬಾರಿಗೆ ೧೯೧೬ನೆ ಸಂವತ್ಸರದ ಕಾಂಗ್ರೆಸ್ ಅಧಿವೇಶನದಲ್ಲಿ ಕೇಳಿದರು. ಬಿಹಾರ್ ವ್ಯವಸಾಯಗಾರ ರಾಜಕುಮಾರ ಶುಕ್ಲ ಎಂಬುವವನು "ನೀಲಿಯ ಕಲೆಯನ್ನು ತೊಡೆದು ಹಾಕಲು" ತೀವ್ರ ಸಂಕಲ್ಪದಿಂದ ಪ್ರೇರಿತನಾಗಿ, ಲಕ್ನೊದಲ್ಲಿ ಗಾಂಧಿಯನ್ನು ಸಂಧಿಸಿದನು. ಅವನು ದಕ್ಷಿಣ ಆಫ್ರಿಕದ ಕೂಲಿಗಳ ಮಿತ್ರ, ಕಾಂಗ್ರೆಸ್ ವೇದಿಕೆಯಿಂದ ನಿರ್ಣಯವನ್ನು ಮಂಡಿಸಬೇಕೆಂದು ಒತ್ತಾಯ ಪಡಿಸಿದನು. ಗಾಂಧೀಜಿಗೆ, ವಿಷಯಗಳೆಲ್ಲ ಪೂರ್ಣವಾಗಿ ಸ್ಪಷ್ಟವಾಗಿ ತಿಳಿದಿಲ್ಲದುದರಿಂದ ಅವರು ಅದಕ್ಕೆ ಒಪ್ಪಲಿಲ್ಲ. "ಪರಿಸ್ಥಿತಿಯನ್ನು ನೋಡದೆ ನಾನು ಯಾವ ಅಭಿಪ್ರಾಯ ವನ್ನೂ ಕೊಡಲಾರೆ" ಎಂದರು. ತಮ್ಮ ಪ್ರವಾಸದಲ್ಲಿ ಚಂಪಾರಣ್ಯವನ್ನೂ ಸೇರಿಸಿ ಕೊಂಡು. ಅದಕ್ಕೆ ಒಂದೆರಡು ದಿನಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಶುಕ್ಲ ಗಾಂಧೀಜಿಯನ್ನು ಸ್ಥಳದಿಂದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಕೊನೆಗೆ ಚಂಪಾ-ರಣ್ಯದ ಭೇಟಿಗೆ ದಿವಸವನ್ನು ನಿಗದಿಮಾಡಿಕೊಂಡನು. ಗಾಂಧೀಜಿ ಅದರ ಹೆಸರನ್ನು ಕೇಳಿರಲಿಲ್ಲ. ಮತ್ತು ಅದು ಎಲ್ಲಿ ಎಂಬುದೂ ಅವರಿಗೆ ಗೊತ್ತಿರಲಿಲ್ಲ.

ಚಂಪಾರಣ್ಯ ಬಿಹಾರದ ವಾಯವ್ಯ ಮೂಲೆಯಲ್ಲಿದೆ. ಜಿಲ್ಲೆಯ ಅತಿ ದೊಡ್ಡನದಿ. ಗಂಡಕ್, ಇದು ಹಿಂದಿನ ಕಾಲದಲ್ಲಿ ಜಿಲ್ಲೆಯ ನಡುಮಧ್ಯದಲ್ಲಿ ಹರಿದು ಹೋಗುತ್ತಿದ್ದಿತು. ಈಗ ಗಂಡಕ್‌ನದಿ, ತನ್ನ ಮಾರ್ಗವನ್ನು ಬದಲಾಯಿಸಿದೆ. ಆದರೂ ಅದರ ಹಳೆಯ ಮಾರ್ಗದ ಗುರುತುಗಳು–ಜಿಲ್ಲೆಯಲ್ಲೆಲ್ಲ ಸುಮಾರು ನಲವತ್ತು ಕೆರೆಗಳಲ್ಲಿ–ಕಾಣುತ್ತದೆ. ಈ ಕೆರಗಳಲ್ಲಿ ಅನೇಕವು ಆಳವಾಗಿವೆ. ಆದರೆ ನೀರು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ. ನೀರು, ಕೆರೆಗಳ ದಡದಲ್ಲಿ ನಿರ್ಮಿತವಾಗಿರುವ ನೀಲಿಯ ಕಾರ್ಖಾನೆಗಳಿಗಾಗಿ ಉಪ ಯೋಗವಾಗುತ್ತಿದ್ದಿತು.

ಚಂಪಾರಣ್ಯದಲ್ಲಿ ಎರಡೇ ನಗರಗಳಿವೆ. ಜಿಲ್ಲೆಯ ಮುಖ್ಯಪಟ್ಟಣವಾದ ಮೋತಿಹಾರಿ ಮತ್ತು ಬೆಟ್ಟಿಯ ಎಂಬುವು. ಜಿಲ್ಲೆಯಲ್ಲಿ ೨೮೪೧ ಹಳ್ಳಿಗಳಿವೆ. ಜನಸಂಖ್ಯೆ ಸುಮಾರು ೨೦ ಲಕ್ಷ. ಅವರ ಪೈಕಿ ಶೇಕಡ ೯೦ರಷ್ಟು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಬಿಹಾರಿನ ಇತರ ಜಿಲ್ಲೆಗಳಲ್ಲಿರುವಂತೆ, ಚಂಪಾರಣ್ಯದಲ್ಲಿ ಹಿಂದುಗಳ ಸಂಖ್ಯೆ ಹೆಚ್ಚು. ಹಿಂದಿಯ ಒಂದು ಉಪಭಾಷೆ ಭೋಜಪುರಿ ಎಂಬುದನ್ನು ಹಿಂದೂಗಳೂ ಮುಸಲ್ಮಾ ನರೂ ಮಾತನಾಡುತ್ತಾರೆ.

ಚಂಪಾರಣ್ಯದಲ್ಲಿ ನೀಲಿ ವ್ಯವಸಾಯ, ಎರಡು ಶತಮಾನಗಳ ಹಿಂದಿನಿಂದ ಬಂದುದು ಪ್ರಾರಂಭದಲ್ಲಿ ಎಲ್ಲ ಅನುಭವದಾರರೂ ೧೭೯೩ನೆ ಸಂವತ್ಸರದಿಂದಲೂ ಭಾರತೀಯರೇ

ಆಗಿದ್ದರು. ಅನಂತರ ಯೂರೋಪಿಯನ್ನರು ನೀಲಿ ಮತ್ತು ಕಬ್ಬಿನ ವ್ಯವಸಾಯವನ್ನು ಆಕ್ರಮಿಸಿಕೊಂಡು, ನಿಧಾನವಾಗಿ ತಮ್ಮ ಬಲೆಯನ್ನು ಚಂಪಾರಣ್ ಜಿಲ್ಲೆಯಲ್ಲೆಲ್ಲಾ ಬೀಸಿದರು. ಬಡವ್ಯವಸಾಯಗಾರರನ್ನೂ ಮೋಸದಿಂದ ಉಪಾಯದಿಂದ ಬಲಾತ್ಕಾರ ದಿಂದ, ತಮ್ಮ ಜಮೀನಿನಲ್ಲಿ ನೀಲಿಯನ್ನು ಬೆಳೆಯಲು ಒಪ್ಪುವಂತೆ ಮಾಡಿದರು.

ಗಾಂಧೀ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಕಲಕತ್ತಕ್ಕೆ ಹೋಗಿದ್ದವರು ಏಪ್ರಿಲ್ ೯. ೧೯೧೭ರಂದು ಶುಕ್ಲರೊಡನೆ ಹೊರಟು ಏಪ್ರಿಲ್ ೧೦ ರಂದು ಪಾಟ್ನಾ ಸೇರಿದರು. ಶುಕ್ಲ, ಅವರನ್ನು ನೇರವಾಗಿ ರಾಜೇಂದ್ರ ಪ್ರಸಾದರ ಮನೆಗೆ ಕರೆದುಕೊಂಡು ಹೋದರು. ಪ್ರಸಾದರು ಪೂರಿಗೆ ಹೋಗಿದ್ದುದರಿಂದ, ಅವರ ಸೇವಕನಿಗೆ ಬಂದವರು ಗಾಂಧೀ ಎಂದು ತಿಳಿಯದೆ, ಅವನು ಅವರನ್ನು ಒಬ್ಬ ಸಾಮಾನ್ಯ ಅತಿಥಿ ಯಂತೆ ನೋಡಿಕೊಂಡಿದ್ದನು. ಗಾಂಧೀಜಿ, ಸ್ವಲ್ಪಕಾಲ ರಾಜೇಂದ್ರ ಪ್ರಸಾದರ ಮನೆ ಯಲ್ಲಿ ಉಳಿದಿದ್ದರು. ಆಗ ಲಂಡನ್ನಿನಲ್ಲಿ ಅವರ ಸಹಾಧ್ಯಾಯಿಯೂ, ಮುಸ್ಲಿಂಲೀಗ್ ಮಾಜಿ ಅಧ್ಯಕ್ಷರೂ ಆದ ಮಜಹರತ್ ಹಕ್ ರವರು, ಗಾಂಧೀಜಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು.

ಅದೇ ಸಂಜೆ. ಗಾಂಧೀ, ರಾಜಕುಮಾರ್ ಶುಕ್ಲರೊಡಗೂಡಿ ಮುಜಫರ್‌ಪುರಕ್ಕೆ ಹೊರಟು ರಾತ್ರಿ ಹತ್ತುಗಂಟೆಗೆ ಆ ನಗರವನ್ನು ತಲಪಿದರು. ಮುಜಫರ್‌ಪುರದ ಗವರ್ನಮೆಂಟ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಜೆ. ಬಿ. ಕೃಪಲಾನಿಯವರು ತಮ್ಮ ಕೆಲವು ವಿದ್ಯಾರ್ಥಿಗಳೊಂದಿಗೆ ಗಾಂಧಿಯನ್ನು ಎದುರುಗೊಳ್ಳಲು ರೈಲ್ವೆ ಸ್ಟೇಷನ್ನಿಗೆ ಬಂದಿದ್ದರು. ಅವರು ಗಾಂಧೀಜಿಯೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದರೂ ಅವರನ್ನು ಸಂಧಿಸಿರಲಿಲ್ಲ. ಗಾಂಧೀಜಿಯನ್ನು ಎದುರುಗೊಳ್ಳಲು ಸ್ಟೇಷನ್ನಿಗೆ ಬಂದಿದ್ದ ದೊಡ್ಡ ಜನಸಮೂಹ, ಅವರಿಗೆ ಆರತಿ ಎತ್ತಿ, ಅವರ ಗಾಡಿಯನ್ನು ಎಳೆದುಕೊಂಡು ಹೊರಟರು.

ಗಾಂಧೀ, ಆ ರಾತ್ರಿ, ಕೃಪಲಾನಿಯವರೊಂದಿಗೆ ಅವರ ಹಾಸ್ಟಲಿನಲ್ಲಿ ಉಳಿದರು. ಪ್ರಾತಃಕಾಲ, ಕೆಲವು ವಕೀಲರು ಗಾಂಧೀಜಿಯನ್ನು ಬಂದು ನೋಡಿ, ಅವರನ್ನು ಗಯಾ ಬಾಬುವಿನ ಮನೆಗೆ ಕರೆದುಕೊಂಡು ಹೋದರು.

ಆ ವೇಳೆಗೆ ದರ್ಭಾಂಗದಿಂದ ಬ್ರಜಕಿಶೋರ್ ಬಾಬು ಮತ್ತು ಪುರಿಯಿಂದ ರಾಜೇಂದ್ರ ಪ್ರಸಾದ್ ಇಬ್ಬರೂ ಬಂದರು. ಅವರಿಬ್ಬರೂ ವಕೀಲಿವೃತ್ತಿ ನಡೆಸುತ್ತಿದ್ದರು. ಅವರ ಸೌಜನ್ಯ ಮತ್ತು ನಮ್ರತೆ ಗಾಂಧೀಯವರ ಮನಸ್ಸಿಗೆ ಬಹಳ ಹಿಡಿಯಿತು.

ಬೀಹಾರಿನ ರಾಜಕೀಯ ವಕೀಲರು, ಬಡರೈತರ ಮೊಖದ್ದಮೆಗಳಲ್ಲಿ ಹೋರಾಡಿ, ಬಡವರಿಗೆ ಸಹಾಯ ಮಾಡುತ್ತಿದ್ದೇವೆಂದು ಮನಸ್ಸಿಗೆ ಸಮಾಧಾನ ಮಾಡಿಕೊಳ್ಳು ತ್ತಿದ್ದರು. ಕಕ್ಷಿಗಾರರಿಂದ ಹಣವನ್ನೇನೋ ತೆಗೆದುಕೊಳ್ಳುತ್ತಿದ್ದರು. ಬಂಗಾಳದಲ್ಲಿಯೂ ಬೀಹಾರ್‌ನಲ್ಲಿಯೂ ಬ್ಯಾರಿಸ್ಟರ್ ಶುಲ್ಕದ ಮಟ್ಟ, ಗಾಂಧೀಜಿಯನ್ನು ದಿಗ್ಭ್ರಾಂತ ರನ್ನಾಗಿ ಮಾಡಿತು. ಬ್ಯಾರಿಸ್ಟರ ಸಾಧಾರಣ ಶುಲ್ಕ ಸಾವಿರಕ್ಕೆ ಕಡಿಮೆ ಇರಲಿಲ್ಲ.

ನೀಲಿ ಕೆಲಸಗಾರರ ವಿಷಯವನ್ನು ಅಧ್ಯಯನ ಮಾಡಿದನಂತರ ಗಾಂಧೀಜಿ, ಇಂತಹ ಸಂದರ್ಭಗಳಲ್ಲಿ ಕೋರ್ಟಿಗೆ ಹೋಗುವುದು ವ್ಯರ್ಥವೆಂದು ಹೇಳಿದರು.ರೈತರು ಮೊದಲು ನಿರ್ಭೀತರಾಗಬೇಕೆಂದು ಅವರು ಬಯಸಿದರು. "ಬೀಹಾರಿನಿಂದ ತೀನ್ ಕಠಿಯಾ (ರೈತರನ್ನು ಸುಲಿಗೆ ಮಾಡುತ್ತಿದ್ದ ವ್ಯವಸಾಯ ಪದ್ಧತಿ)ವನ್ನು ಓಡಿಸುವ ವರೆಗೆ ನಾವು ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ" ಎಂದರು ಗಾಂಧೀಜಿ. "ನಾನು ಎರಡು ದಿನಗಳೊಳಗೆ ಇಲ್ಲಿಂದ ಹೊರಡಬಹುದೆಂದು ಯೋಚಿಸಿದೆ ಆದರೆ ಈಗ ನನಗೆ ಗೊತ್ತಾಗುತ್ತಿದೆ; ಕೆಲಸ ಎರಡು ವರ್ಷ ಬೇಕಾದರೂ ಹಿಡಿಯಬಹುದು. ಆವಶ್ಯಕವಾದರೆ ಅಷ್ಟು ಕಾಲವನ್ನು ಇದಕ್ಕಾಗಿ ಕೊಡಲೂ ನಾನು ಸಿದ್ಧ" ಎಂದರು.

ಗಾಂಧೀ ವಕೀಲ ಮಿತ್ರರಿಗೆ, ಅವರ ಸಹಾಯ ತನಗೆ ಬೇಕೆಂದೂ ಆದರೆ ಅವರ ಕಾನೂನು ಜ್ಞಾನ ತಮಗೆ ಪ್ರಯೋಜನವಿಲ್ಲವೆಂದೂ ಹೇಳಿದರು "ನನಗೆ ಗುಮಾಸ್ತರ ಸಹಾಯವೂ ದ್ವಿಭಾಷಿಗಳ ಸಹಾಯವೂ ಬೇಕಾಗಿದೆ ಸೆರೆವಾಸವನ್ನು ಅನುಭವಿಸುವುದೂ ಆವಶ್ಯಕವಾಗಬಹುದು. ಆ ಅಪಾಯವನ್ನು ನೀವು ಎದುರಿಸಬೇಕೆಂಬುದು ನನ್ನ ಇಷ್ಟ. ಆದರೆ ಎಷ್ಟುದೂರ ಹೋಗಲು ನಿಮಗೆ ಶಕ್ತಿಯಿದೆಯೆಂದು ತೋರುತ್ತದೋ ಅಷ್ಟು ದೂರ ಮಾತ್ರ ಹೋಗಿ, ನನಗೆ ಸ್ಥಳೀಯ ಹಿಂದಿ ಉಪಭಾಷೆ, ಅರ್ಥವಾಗುತ್ತಿಲ್ಲ. ಕೇಠಿ ಅಥವಾ ಉರ್ದುವಿನಲ್ಲಿ ಬರೆದ ಪತ್ರಗಳನ್ನು ಓದಲು ನನಗೆ ಸಾಧ್ಯವಿಲ್ಲ ಅವುಗಳನ್ನು ನನಗಾಗಿ ನೀವು ಅನುವಾದಿಸಬೇಕು. ಇದಕ್ಕೆಲ್ಲ ಕೊಡಲು ನಮ್ಮಲ್ಲಿ ಹಣವಿಲ್ಲ. ಸೇವಾ ಬುದ್ಧಿಯಿಂದಲೂ ಪ್ರೇಮದಿಂದಲೂ ಈ ಕೆಲಸ ಆಗಬೇಕು".

ವಕೀಲರಿಗೆ ಗಾಬರಿಯಾಯಿತು. ತಮ್ಮಿಂದ ಸಾಧ್ಯವಾದಷ್ಟು ಮಾಡುವುದಾಗಿ ಅವರು ಹೇಳಿದರು. ಸೆರೆಮನೆಗೆ ಹೋಗುವುದಕ್ಕೆ ಹೊಂದಿಸಿಕೊಳ್ಳುವುದು ಅವರಿಗೆ ಹೊಸದಾಗಿತ್ತು. ಆದರೆ ಅದಕ್ಕೂ ಒಗ್ಗಿಕೊಳ್ಳಲು ಅವರು ಸರ್ವಪ್ರಯತ್ನವನ್ನೂ ಮಾಡುವುದಾಗಿ ಹೇಳಿದರು.

ಏಪ್ರಿಲ್ ೧೧ರಂದು ಗಾಂಧೀ, ತೋಟಗಾರರ ಸಂಘದ ಕಾರ್ಯದರ್ಶಿಗಳಾದ ಮಿ. ವಿಲ್ಸನ್ನರನ್ನು ಭೆಟ್ಟಿ ಮಾಡಿ ತಮ್ಮ ಕಾರ‍್ಯದ ಉದ್ದೇಶವನ್ನು ಅವರಿಗೆ ವಿವರಿಸಿದರು. ಕಾರ್ಯದರ್ಶಿ, ತನ್ನ ಸಂತ ಜವಾಬ್ದಾರಿಯಿಂದ, ಸಾಧ್ಯವಾದಷ್ಟು ಸಹಾಯವನ್ನು ಮಾಡುವುದಾಗಿಯೂ, ತೋಟಗಾರರ ಸಂಘದ ಪರವಾಗಿ ತಾನು ಯಾವ ಜವಾಬ್ದಾರಿಯನ್ನೂ ತೆಗೆದುಕೊಳ್ಳಲಾರೆನೆಂದೂ ಹೇಳಿದನು. ಮತ್ತು ಗಾಂಧೀ ಒಬ್ಬ ಹೊರಗಿನವರೆಂದೂ, ತೋಟಗಾರರಿಗೂ ರೈತರಿಗೂ ನಡುವೆ ಪ್ರವೇಶಿಸಲು ಅವರಿಗೇನೂ ಹಕ್ಕು ಇಲ್ಲವೆಂದೂ ಹೇಳಿದನು.

ಅದೇ ಸಂಜೆ, ಮುಜಫರ್‌ಪುರದ ಅನೇಕ ವಕೀಲರು ಬಂದು ಗಾಂಧೀಜಿಯನ್ನು ಕಂಡರು. ಅವರ ಪೈಕಿ ಒಬ್ಬರು ಚಂಪಾರಣ್ಯಕ್ಕೆ ಗಾಂಧೀ ತತ್‌ಕ್ಷಣ ಹೊರಡಬೇಕೆಂದು ಅವರಿಗೆ ಒತ್ತಾಯ ಮಾಡಿದರು. ಗಾಂಧೀ, ಅದಕ್ಕೆ ಒಪ್ಪಿದರು. ೧೨ನೆ ತಾರೀಖು ಗಾಂಧೀಜಿ ತಮ್ಮ ಆಗಮನದ ಸುದ್ದಿಯನ್ನು ತಿರ್‌ಹಟ್ ವಿಭಾಗದ ಕಮಿಷನರ್ ಆದ ಮಿ. ಮಾರ್ಸ್ ಹೆಡ್‌ರವರಿಗೆ ತಿಳುಹಿಸಿ ಅವರೊಂದಿಗೆ ಭೇಟಿಯನ್ನು ಅಪೇಕ್ಷಿಸಿದರು.

ಕಮಿಷನರು ಏಪ್ರಿಲ್ ೧೩ರಂದು ಗಾಂಧೀಜಿಗೆ ಭೆಟ್ಟಿಯನ್ನು ಕೊಟ್ಟರು. ಆದರೆ ಬೀಹಾರಿಗೆ ಗಾಂಧೀಜಿಯ ಆಗಮನವನ್ನು ಅವರು ಒಪ್ಪಲಿಲ್ಲ. "ನಿಮ್ಮನ್ನು ಇಲ್ಲಿಗೆ ಯಾರು ಕರೆತಂದವರು?" ಎಂದು ಕೇಳಿದರು. ಅವರು ಗಾಂಧೀಜಿಗೆ, ಸರ್ಕಾರದ ಪರವಾಗಿ ವಿಚಾರಣೆ ನಡೆಯುವುದೆಂದು ಆಶ್ವಾಸನೆಯಿತ್ತು, ಗಾಂಧೀಜಿ ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂದೂ ತಿಳಿಸಿದರು. ಗಾಂಧೀಜಿ ತಮಗೆ ಬಹುಕಾಲದಿಂದ, ನೀಲಿ ಕೆಲಸಗಾರರ ಕಷ್ಟಗಳನ್ನು ವಿವರಿಸುವ ಪತ್ರಗಳು ಬರುತ್ತಿದ್ದವೆಂದೂ, ಆದುದರಿಂದ ಪರಿಸ್ಥಿತಿಯನ್ನು ತಮ್ಮ ಕಣ್ಣಿನಿಂದಲೇ ನೋಡಲು ಬಂದಿರುವುದಾಗಿಯೂ ಹೇಳಿದರು.

ಕಮಿಷನರ ಭವನದಿಂದ ಹಿಂದಿರುಗಿದ ನಂತರ, ಗಾಂಧೀಜಿ ಕೆಲವು ವಕೀಲರಿಗೆ "ನಾನು ಚಂಪಾರಣ್ಯದಲ್ಲಿ ಒಂದು ವಿಚಾರಣೆಯನ್ನು ಮಾಡಬೇಕೆಂದು ನೀವು ಒಂದು ಅರ್ಜಿ ಬರೆದು ಕೊಡಿ" ಎಂದು ಕೇಳಿದರು. ಅನಂತರ ಗಾಂಧೀಜಿ ಆ ಕಾಗದವನ್ನೂ ಅವರ ಜೊತೆ, "ರೈತರಿಗೂ ತೋಟಗಾರರಿಗೂ ನಡುವಿನ ಸಂಬಂಧವನ್ನು ಅರಿಯು ವುದಕ್ಕಾಗಿ ತಾನು ಬಂದಿದ್ದೇನೆ" ಎಂದು ಮತ್ತೊಂದು ಪತ್ರವನ್ನೂ ಬರೆದು, ಕಮಿಷನರಿಗೆ ಕಳುಹಿಸಿದರು "ನನಗೆ ಬೇಕಾಗಿರುವುದು ಗೌರವಪೂರ್ವಕ ಶಾಂತಿ" ಎಂದೂ ಬರೆದರು.

ಗಾಂಧೀಜಿ, ಸಹ ಕೆಲಸಗಾರರಿಗೆ, ತಮ್ಮನ್ನು ಮುಂದುವರಿಯದಂತೆ ಸರ್ಕಾರ ತಡೆಯಬಹುದೆಂದೂ ತಾವು ನಿರೀಕ್ಷಿಸಿದುದಕ್ಕಿಂತ ಮುಂಚಿತವಾಗಿಯೇ ಸೆರೆಮನೆಗೆ ಹೋಗಬೇಕಾಗಬಹುದೆಂದೂ ಎಚ್ಚರಿಸಿದರು "ನನ್ನ ಬಂಧನ ಮೋತಿಹಾರಿಯಲ್ಲಿಯೋ ಅಥವಾ ಚಿಟ್ಟಿಯದಲ್ಲಿಯೋ ನಡೆದರೆ ಉತ್ತಮ"ವೆಂದರು.

ಏಪ್ರಿಲ್ ೧೪ರ ಸಂಜೆ, ಗಾಂಧೀ, ಸಮೀಪದ ಒಂದು ಹಳ್ಳಿಗೆ ಹೋದರು. ಕೆಲವು ಬಡರೈತರ ಗುಡಿಸಲುಗಳಿಗೆ ಹೋಗಿ ಮಕ್ಕಳೊಂದಿಗೂ ಹೆಣ್ಣು ಮಕ್ಕಳೊಂದಿಗೂ ಮಾತನಾಡಿದರು. ಹಳ್ಳಿಯನ್ನು ಬಿಡುವಾಗ ಗಾಂಧೀಜಿ ಈ ಜನಗಳ ಪರಿಸ್ಥಿತಿ ಉತ್ತಮ ವಾದಾಗ ಮಾತ್ರ ಭಾರತಕ್ಕೆ ಸ್ವರಾಜ್ಯ ಬರುವುದೆಂದರು.

ರಾತ್ರಿ, ಗಾಂಧೀಜಿ ಸಹಕೆಲಸಗಾರರೊಂದಿಗೆ ಮಾತುಕಥೆಯಾಡಿದರು ಅವರು ಅವರಿಗೆ ದಕ್ಷಿಣ ಆಫ್ರಿಕದ ತಮ್ಮ ಅನುಭವಗಳನ್ನೂ ಮತ್ತು ಸೆರೆಮನೆಗೆ ಹೋಗಲು ಅಲ್ಲಿಯ ಜನದ ಉತ್ಸಾಹವನ್ನೂ ವರ್ಣಿಸಿದರು ಆದರೆ ಬೀಹಾರಿನವರು ಎಲ್ಲವನ್ನೂ ಒಂದೇ ಸಲಕ್ಕೆ ತ್ಯಾಗಮಾಡಲು ತಾವು ಕೇಳುವುದಿಲ್ಲವೆಂದು ಹೇಳಿದರು.

ಗಾಂಧೀಜಿಯ ಆಗಮನದ ಸುದ್ದಿ ಚಂಪಾರಣ್ಯದಲ್ಲೆಲ್ಲ ಹರಡಿತು. ರೈತರು ದೊಡ್ಡ ಸಂಖ್ಯೆಯಲ್ಲಿ ಅವರನ್ನು ನೋಡಲು ಬಂದರು. ಗಾಂಧೀಜಿ ಅವರು ಕೊಟ್ಟ ದೂರುಗಳ ನ್ನೆಲ್ಲ ಕೇಳಿದರು. ತಮಗೆ ಸಿಕ್ಕಿದ ಕಾಗದ ಪತ್ರಗಳನ್ನೆಲ್ಲ ವ್ಯಾಸಂಗ ಮಾಡಿದರು. ಅವರಿಗೆ ಬಂದ ವರದಿಗಳು ಎಷ್ಟು ಕರುಣಾಜನಕವಾಗಿದ್ದ ವೆಂದರೆ, ಚಂಪಾರಣ್ಯಕ್ಕೆ ಭೆಟ್ಟಿ ಕೊಡಲು ಅವರ ನಿರ್ಣಯ ಹೆಚ್ಚು ಹೆಚ್ಚು ದೃಢವಾಗ ತೊಡಗಿತು.

ಏಪ್ರಿಲ್ ೧೫ರಂದು, ಗಾಂಧೀಜಿ, ಧರಣೀಧರ್ ಮತ್ತು ರಾಮನವಮಿ ಪ್ರಸಾದ್ ಎಂಬ ಇಬ್ಬರು ಸ್ಥಳೀಯ ದ್ವಿಭಾಷಿಗಳೊಂದಿಗೆ ಮಧ್ಯಾಹ್ನದ ರೈಲಿನಲ್ಲಿ ಮೋತಿಹಾರಿಗೆ

ಹೊರಟರು. ಅವರು ಯಾವ ಗಳಿಗೆಯಲ್ಲಾದರೂ ಸೆರೆಯಾಗುವುದನ್ನು ನಿರೀಕ್ಷಿಸುತ್ತಿದ್ದುದರಿಂದ, ತಮಗೆ ಆವಶ್ಯಕವಾಗಿ ಬೇಕಾದ ಕೆಲವು ವಸ್ತುಗಳ ಹೊರತು, ಉಳಿದುವನ್ನೆಲ್ಲ ಒಂದು ಟ್ರಂಕ್‌ನಲ್ಲಿ ಹಾಕಿದ್ದರು. ಅನೇಕ ಜನ ಅವರನ್ನು ಸ್ಟೇಷನ್ನಿನಲ್ಲಿ ಬೀಳ್ಕೊಟ್ಟರು ದಾರಿಯಲ್ಲಿ ಪ್ರತಿಸ್ಟೇಷನ್ನಿನಲ್ಲಿಯೂ ಅವರನ್ನು ಸ್ವಾಗತಿಸಲು ನೂರಾರು ರೈತರು ಸೇರಿದ್ದರು. ಅವರು ಮೋತಿಹಾರಿಗೆ ಮೂರುಗಂಟೆಗೆ ತಲುಪಿ, ನೆಟ್ಟಗೆ ಗೋರಕ್ ಪ್ರಸಾದರ ಮನೆಗೆ ಹೋದರು. ಅಲ್ಲಿ ಅವರ ದರ್ಶನಕ್ಕಾಗಿ ದೊಡ್ಡಗುಂಪು, ಆ ಮನೆಗೆ ಮುತ್ತಿಗೆ ಹಾಕಿದ್ದಿತು.

ಏಪ್ರಿಲ್ ೧೬ರ ಬೆಳಿಗ್ಗೆ ಒಂಬತ್ತುಗಂಟೆಗೆ ಗಾಂಧೀಜಿಯೂ ಅವರ ಇಬ್ಬರು ದ್ವಿಭಾಷಿಗಳೂ ಆನೆಯ ಮೇಲೆ ಕುಳಿತು ಜಸೌಲಿಪಟ್ಟಿ ಎಂಬ ಊರಿಗೆ ಹೊರಟರು. ಬೀಹಾರಿನಲ್ಲಿ ಅದೇ ಸಾಮಾನ್ಯ ಪ್ರಯಾಣ ವಾಹನ. ಗಾಂಧೀಜಿಗೆ ಆನೆಯ ಮೇಲೆ ಕುಳಿತು ಅಭ್ಯಾಸವಿರಲಿಲ್ಲ ಪಶ್ಚಿಮದಿಕ್ಕಿನ ಬಿರುಗಾಳಿ ಧೂಳು ಮರಳನ್ನು ಚೆಲ್ಲುತ್ತ ಬಲವಾಗಿ ಬೀಸುತ್ತಿದ್ದಿತು. ಸೂರ್ಯ, ಉರಿಯುತ್ತಿದ್ದ; ಪ್ರಯಾಣ ತುಂಬ ಕಷ್ಟಕರವಾಗಿದ್ದಿತು. ಗಾಂಧೀಜಿ, ದಾರಿಯಲ್ಲಿ ಬೀಹಾರ್‌ನ ಘರದಾ ಪದ್ಧತಿಯನ್ನು ಕುರಿತು ಚರ್ಚಿಸಿದರು ಅವರು ಹೀಗೆ ಹೇಳಿದರು "ನಮ್ಮ ಮಹಿಳೆಯರು ಪಾಶ್ಚಾತ್ಯರ ಜೀವನ ಕ್ರಮವನ್ನು ಅನುಸರಿಸಬೇಕೆಂಬುದು ನನ್ನ ಇಷ್ಟವಲ್ಲ. ಆದರೆ ಈ ದುಷ್ಟಪದ್ಧತಿ ಅವರ ಆರೋಗ್ಯಕ್ಕೆ ಎಷ್ಟು ಕೆಡಕನ್ನುಂಟು ಮಾಡಿದೆ ಮತ್ತು ಗಂಡಂದಿರಿಗೆ ಸಹಾಯಮಾಡುವ ಎಷ್ಟೊಂದು ಮಾರ್ಗಗಳಿಂದ ಅವರು ವಂಚಿತರಾಗಿದ್ದಾರೆ?".

ಮಧ್ಯಾಹ್ನದ ವೇಳೆಗೆ ಅವರು ೮ ಮೈಲಿ ಪ್ರಯಾಣಮಾಡಿ ಚಂದ್ರಾಹಿಯಾ ಎಂಬ ಊರನ್ನು ತಲುಪಿದರು. ಮೋತಿಹಾರಿ ಕಾರ್ಖಾನೆಗೆ ನೀಲಿಗಿಡಗಳನ್ನು ಒದಗಿಸುತ್ತಿದ್ದ ಒಂದು ಹಳ್ಳಿ ಅದು. ಒಬ್ಬ ದಾರಿಗ ಹಳ್ಳಿಯ ಪರಿಸ್ಥಿತಿಯನ್ನು ವಿವರಿಸುತ್ತಿದ್ದುದನ್ನು ಗಾಂಧೀಜಿ ಕೇಳುತ್ತಿದ್ದಾಗ ಬೈಸಿಕಲ್ ಮೇಲೆ ಸವಾರಿ ಮಾಡುತ್ತ ಒಬ್ಬ ಪೊಲೀಸ್ ಸಬ್ ಇನಿಸ್ಪೆಕ್ಟರು ಅಲ್ಲಿಗೆ ಬಂದನು. ಅವನು ಗಾಂಧೀಜಿಗೆ ಕಲೆಕ್ಟರರು ನಮಸ್ಕಾರವನ್ನು ಹೇಳಿ ಕಳುಹಿಸಿದ್ದಾರೆಂದು ಹೇಳಿದನು. ಗಾಂಧೀಜಿ ಪೊಲೀಸ್ ಅಧಿಕಾರಿಗೆ, ಒಂದು ವಾಹನವನ್ನು ಗೊತ್ತು ಮಾಡುವಂತೆ ಹೇಳಿ, ತನ್ನ ಜೊತೆಯಲ್ಲಿದ್ದವರಿಗೆ, ಕಾರ್ಯಕ್ರಮದಂತೆ ಪ್ರಯಾಣವನ್ನು ಮುಂದುವರೆಸಿ ಗುರಿಮುಟ್ಟಿ ಅಲ್ಲಿಯ ಕೆಲಸವನ್ನು ಮಾಡಬೇಕೆಂದು ಹೇಳಿದರು. "ಇಂತಹುದು ಏನಾದರೂ ಸಂಭವಿಸುತ್ತೆ ಎಂದು ನಾನು ನಿರೀಕ್ಷಿಸುತ್ತಿದ್ದೆ" ಎಂದರು. ಪೊಲೀಸ್ ಸಬ್‌ಇನಿಸ್ಪೆಕ್ಟರು ಒಂದು ಎತ್ತಿನ ಗಾಡಿಯನ್ನು ತಂದರು. ಗಾಂಧಿ ಅದರಲ್ಲಿ ಮೋತಿಹಾರಿಗೆ ಹೊರಟರು. ಅವರ ಜೊತೆಗಾರರು ಜಸೌಲಿಪಟ್ಟಿಗೆ ಮುಂದುವರಿದರು.

ದಾರಿಯಲ್ಲಿ ಪೊಲೀಸ್ ಅಧಿಕಾರಿ, ಗಾಂಧೀಜಿಯನ್ನು "ಗಾಡಿಯಿಂದ ಇಳಿದು ಎಕ್ಕದಲ್ಲಿ ಕುಳಿತುಕೊಳ್ಳಿ" ಎಂದು ಹೇಳಿದನು. ಅವರು ಕೆಲವು ದೂರ ಹೋದಮೇಲೆ ಒಬ್ಬ ಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರು ಒಂದು ಏಕಸಾಲು ಕುದುರೆ ಬಂಡಿಯಲ್ಲಿ

ಬಂದು, ಗಾಂಧೀಜಿಯನ್ನು ತಮ್ಮ ಗಾಡಿಗೆ ಕೂರಿಸಿದರು. ಇನ್ನೂ ಸ್ವಲ್ಪದೂರ ಹೋದಮೇಲೆ, ಅವನು ಏಪ್ರಿಲ್ ೧೬ನೆ ತಾರೀಖಿನ ಒಂದು ನೋಟೀಸನ್ನು ಗಾಂಧೀಜಿಗೆ ತೋರಿಸಿದನು. ಗಾಂಧೀಜಿ ಅದನ್ನು ಶಾಂತವಾಗಿ ಓದಿದರು. ಆ ಅಪ್ಪಣೆಚೀಟಿಯಲ್ಲಿ ಗಾಂಧೀಜಿ ಚಂಪಾರಣ್ಯ ಜಿಲ್ಲೆಯಲ್ಲಿ ಇರಕೂಡದೆಂದೂ ಈ ಕೂಡಲೇ ಮುಂದಿನ ರೈಲಿನಲ್ಲಿಯೇ ಹೊರಡಬೇಕೆಂದೂ ಇದ್ದಿತು. ಆ ಅಪ್ಪಣೆಚೀಟಿಗೆ, ಚಂಪಾರಣ್ಯದ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಕಮಿಷನರು ಬರೆದಿದ್ದ ಒಂದು ಪತ್ರದ ನಕಲೂ ಸೇರಿದಂತಿತ್ತು. "ನಾವು ಈ ಪ್ರಶ್ನೆಯನ್ನು ಪರಿಹರಿಸುತ್ತಿರುವಾಗ, ಈ ಮಧ್ಯೆ ಒಬ್ಬ ಹೊಸಬರ ಪ್ರವೇಶ ಗೊಂದಲವನ್ನೆಬ್ಬಿಸಬಹುದು. ಆದುದರಿಂದ ಗಾಂಧೀ ಚಂಪಾರಣ್ಯದಲ್ಲಿ ಮುಖ ತೋರಿಸಿದರೆ ಅವರನ್ನು ತತ್‌ಕ್ಷಣ, ಸ್ಥಳಬಿಡುವಂತೆ ತಾವು ನಿರ್ದೇಶಿಸಬೇಕು".

ಗಾಂಧೀ ಮೋತಿಹಾರಿಗೆ ತಲಪಿದ ಕೂಡಲೇ ಮ್ಯಾಜಿಸ್ಟ್ರೇಟರಿಗೆ ಒಂದು ಪ್ರತ್ಯುತ್ತರ ಕಳುಹಿಸಿದರು. "ಸಾರ್ವಜನಿಕ ಕರ್ತವ್ಯ ಜವಾಬ್ದಾರಿಯಿಂದ, ನಾನು ಜಿಲ್ಲೆಯನ್ನು ಬಿಡಲು, ಅಶಕ್ತನಾಗಿದ್ದೇನೆಂದು ಹೇಳುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಆದರೆ ಸರ್ಕಾರಕ್ಕೆ ಇಷ್ಟವಾಗುವುದಾದರೆ, ಸರ್ಕಾರದ ಅಪ್ಪಣೆ ಮೀರಿದುದಕ್ಕೆ ದೊರೆಯಬಹುದಾದ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾಗಿದ್ದೇನೆ. ನನ್ನ ಇಷ್ಟ, ವಿಷಯಜ್ಞಾನ ಸಂಪಾದನೆಗಾಗಿ ಸರಳವಾದ ಮತ್ತು ಶುದ್ಧವಾದ ಅನ್ವೇಷಣೆ. ಇದನ್ನು, ನಾನು ಎಲ್ಲಿಯವರೆಗೆ ಸ್ವತಂತ್ರನಾಗಿರುತ್ತೇನೆಯೋ ಅಲ್ಲಿಯವರೆಗೆ ಮುಂದುವರಿಸುತ್ತೇನೆ".

ಗಾಂಧೀಜಿ, ರಾತ್ರಿಯೆಲ್ಲ ಪತ್ರಗಳನ್ನು ಬರೆಯುವುದರಲ್ಲಿಯೂ ಬಾಬು ಬ್ರಜ ಕಿಶೋರ್ ಪ್ರಸಾದ್‌ರಿಗೆ ಸಲಹೆಗಳನ್ನು ಕೊಡುವುದರಲ್ಲಿಯೂ ಕಳೆದರು. ತಮ್ಮ ಗೈರು ಹಾಜರಿಯಲ್ಲಿ ಕೆಲಸವನ್ನು ಮುಂದುವರಿಸುವವರಿಗಾಗಿ ಅವರು ಯೋಜನೆಯನ್ನೂ ಸಿದ್ಧಮಾಡಿದರು.

ಭಾರತದ ಎಲ್ಲೆಡೆಗಳಿಂದಲೂ ತಂತಿಗಳು ಬರುತ್ತಿದ್ದವು. ಮಜಹರಾಲ್ ಹಕ್ಕರು, ಆವಶ್ಯಕವಾದರೆ ತಾವೂ ಬರುವುದಾಗಿ ಬರೆದರು. ಮಾಳವೀಯ, ಹಿಂದೂ ವಿಶ್ವ ವಿದ್ಯಾನಿಲಯವನ್ನು ಬಿಟ್ಟು ಬರುವುದಾಗಿ ತಿಳಿಸಿದರು. ರಾಜೇಂದ್ರ ಪ್ರಸಾದರಿಗೆ ಸ್ವಯಂ ಸೇವಕರೊಂದಿಗೆ ಕೂಡಲೇ ಬರಬೇಕೆಂದು ಕರೆ ಹೋಯಿತು. ಆಂಡ್ರೂಸರೂ ಕಾರ್ಯ ಕರ್ತರೊಡನೆ ಸೇರಿದರು; ಕಲೆಕ್ಟರನ್ನು ನೋಡಲು ಅವರು ಹೋದಾಗ, ಕಲೆಕ್ಟರು ಅವರಿಗೆ ಸಿಕ್ಕಲಿಲ್ಲ.

ಏಪ್ರಿಲ್ ೧೭ರಂದು ಅನೇಕ ರೈತರು ಮೋತಿಹಾರಿಗೆ ಬಂದು ತಮ್ಮ ಹೇಳಿಕೆಗಳನ್ನು ಬರೆಯಿಸಿದರು. ಪೊಲೀಸ್ ಸಬ್ ಇನಿಸ್ಪೆಕ್ಟರು ಬಂದು, ಅಲ್ಲಿದ್ದವರ ಹೆಸರುಗಳನ್ನೆಲ್ಲ ಬರೆದುಕೊಂಡರು ಗಾಂಧೀ ಅವಿಚಲಿತರಾಗಿ ತಮ್ಮ ಕೆಲಸವನ್ನು ಮುಂದುವರಿಸಿದರು.

ರೈತರ ಹೇಳಿಕೆಗಳನ್ನು ಬರೆದುಕೊಳ್ಳುವ ಕಾರ್ಯ ಇಡೀದಿನ ನಡೆಯಿತು. ಸಂಜೆಯವರಗೆ ಗಾಂಧೀಜಿಗೆ ಮ್ಯಾಜಿಸ್ಟ್ರೇಟ್‌ರಿಂದ ಯಾವ ಕರೆಯೂ ಬರದುದರಿಂದ ಗಾಂಧೀಜಿ,

ಮ್ಯಾಜಿಸ್ಟ್ರೇಟರಿಗೆ, ತಾವು ಮೋತಿಹಾರಿಯಿಂದ ೧೭ ಮೈಲಿದೂರವಿರುವ ಒಂದು ಹಳ್ಳಿಗೆ ಭೇಟಿ ಕೊಡುವುದಾಗಿ ತಿಳಿಸಿದರು. ಮತ್ತೂ ತಾವು ಯಾವ ಕಾರ್ಯವನ್ನೂ ರಹಸ್ಯ ವಾಗಿ ಮಾಡುವ ಇಚ್ಛೆಯುಳ್ಳವರಲ್ಲವಾದುದರಿಂದ, ಒಬ್ಬ ಪೋಲೀಸ್ ಅಧಿಕಾರಿ, ತಮ್ಮ ಸಂಗಡ ಬಂದರೆ ಉತ್ತಮವೆಂದೂ ತಿಳಿಸಿದರು. ಮ್ಯಾಜಿಸ್ಟ್ರೇಟರು ಗಾಂಧೀಜಿಗೆ, ಅವರ ಮೇಲೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೮೮ರ ಪ್ರಕಾರ ತಪ್ಪಿತವನ್ನು ಹೊರಿಸಿ ಸಮನ್ ಕಳುಹಿಸಲ್ಪಡುವುದೆಂದೂ, ಗಾಂಧೀಜಿ ಮೋತಿಹಾರಿಯನ್ನು ಬಿಡುವುದಿಲ್ಲ ವೆಂದು ತಾವು ಆಶಿಸುವುದಾಗಿಯೂ ತಿಳಿಸಿದರು.

ಗಾಂಧೀ, ಏಪ್ರಿಲ್ ೧೮ರಂದು ಸಬ್‌ಡಿವಿಷನ್ ಆಫೀಸರ ಸಮಕ್ಷಮ ಹಾಜ ರಾಗಬೇಕೆಂದು ಸಮನ್ ಬಂದಿತು. ಈ ಪರಿಸ್ಥಿತಿಯನ್ನು ಸಹ ಕೆಲಸಗಾರರೊಂದಿಗೆ ಗಾಂಧೀ ಚರ್ಚಿಸಿದರು. "ನನ್ನನ್ನು ಜೈಲಿಗೆ ಕಳುಹಿಸಿದ ಮೇಲೆ ನೀವು ಏನು ಮಾಡು ವಿರಿ?" ಎಂದು ಅವರನ್ನು ಕೇಳಿದರು. ಕೆಲಸಗಾರರಿಗೆ ಏನೂ ತೋಚಲಿಲ್ಲ. ರಾತ್ರಿ ಯೆಲ್ಲ ಚರ್ಚೆ, ನಡೆಯಿತು. ಗಾಂಧೀ, ನ್ಯಾಯಸ್ಥಾನದ ಮುಂದೆ ಓದಲು ಒಂದು ಹೇಳಿಕೆ ಸಿದ್ಧಮಾಡಿಕೊಂಡರು. ಅವರು ತೋಟಗಾರರ ಕಾರ್ಯದರ್ಶಿಗಳಿಗೂ ಕಮಿಷನರಿಗೂ, ರೈತರ ಕಷ್ಟಗಳನ್ನು ವಿವರಿಸಿ ಪರಿಹಾರಗಳನ್ನು ಸೂಚಿಸಿ ಕಾಗದ ಬರೆದರು. ಆ ಕಾಗದ ಗಳನ್ನೂ ಉಳಿದ ಕೆಲವು ಕಾಗದಗಳನ್ನೂ ತಾವು ಸೆರೆಮನೆಗೆ ಸೇರಿದನಂತರ ಟಪಾಲಿಗೆ ಹಾಕಬೇಕೆಂದು ತಮ್ಮ ಕಾರ್ಯದರ್ಶಿಗೆ ತಿಳಿಸಿದರು.

ದೇಶದ ದೃಷ್ಟಿಯೆಲ್ಲ ಈಗ ಚಂಪಾರಣ್ಯದತ್ತ ತಿರುಗಿತ್ತು. ಏಪ್ರಿಲ್ ೧೮ರಂದು ಮಧ್ಯಾಹ್ನ ಹನ್ನೆರಡು ಗಂಟೆಗೆ ಗಾಂಧೀ, ಬೀಹಾರಿನ ದೀನ ಮತ್ತು ದಬ್ಬಾಳಿಕೆಗೊಳಗಾದ ಕೂಲಿಗಳಿಗಾಗಿ–ಸೆರೆವಾಸವನ್ನು ಅನುಭವಿಸಲು ಸಿದ್ಧರಾಗುತ್ತಿದ್ದರು. ರೈತರ ಹೇಳಿಕೆ ಗಳನ್ನು ಬರೆದುಕೊಳ್ಳುವುದು ಅಂದಿಗೆ ನಿಂತಿತು; ಮರುದಿನ ಮತ್ತೆ ಪ್ರಾರಂಭಿಸುವುದಾಗಿ ರೈತರಿಗೆ ತಿಳಿಸಿದುದಾಯಿತು. ಹನ್ನೆರಡುಕಾಲು ಗಂಟೆಗೆ ಗಾಂಧೀಜಿ, ಇಬ್ಬರು ದ್ವಿಭಾಷಿಗಳೊಡಗೂಡಿ, ಒಂದು ಗಾಡಿಯಲ್ಲಿ ಕುಳಿತು ಕೋರ್ಟಿಗೆ ಹೊರಟರು. ಅವರ ಜೊತೆಗಾರರು "ನಾವೂ ನಿಮ್ಮನ್ನು ಜೈಲಿಗೆ ಅನುಸರಿಸುತ್ತೇವೆ" ಎಂದು ಹೇಳಿದರು. ಗಾಂಧಿ ಸಂತೋಷದಿಂದ "ಈಗ ನನಗೆ ಗೊತ್ತಾಯಿತು. ನಾವು ಖಂಡಿತ ಜಯಿಸುತ್ತೇವೆ" ಎಂದರು.

ರೈತರಿಗೆ ಸುದ್ದಿಯನ್ನು ತಿಳಿಸಿರಲಿಲ್ಲವಾದರೂ ವಿಷಯ, ಹೇಗೋ ದೂರದ ಹಳ್ಳಿಗಳಿಗೆ ಸಹ ಗೊತ್ತಾಗಿದ್ದಿತು. ಅನೇಕ ಸಹಸ್ರ ರೈತರು ನ್ಯಾಯಾಲಯದ ಆವರಣ ದೊಳಗೆ ಸೇರಿದ್ದರು. ಗಾಂಧಿ ಕೋರ್ಟನ್ನು ಪ್ರವೇಶಿಸಿದಾಗ ಅವರ ಜೊತೆ ಸುಮಾರು ಎರಡುಸಾವಿರ ರೈತರು ಕೋರ್ಟಿನೊಳಕ್ಕೆ ಬಂದರು. ಒಳಕ್ಕೆ ನುಗ್ಗುವ ಆತುರದಲ್ಲಿ ಅವರು ಬಾಗಿಲುಗಳ ಗಾಜಿನ ಕಿಟಕಿಗಳನ್ನು ಒಡೆದರು. ನ್ಯಾಯಾಧೀಶರು ಗಾಂಧೀಜಿಗೆ, ಮೊಕ್ತಿಯಾರರ ಪುಸ್ತಕಭಂಡಾರದಲ್ಲಿರುವಂತೆ ಹೇಳಿ, ಜನ ಕೋರ್ಟ್‌ಭವನಕ್ಕೆ ನುಗ್ಗದಂತೆ ತಡೆಯಲು ಸಶಸ್ತ್ರ ಪೋಲೀಸರಿಗೆ ಹೇಳಿ ಕಳುಹಿಸಿದರು.

ಗಾಂಧೀಜಿಯನ್ನು ನ್ಯಾಯಸ್ಥಾನಕ್ಕೆ ಕರೆತಂದರು. ಸರ್ಕಾರಿ ವಕೀಲರು ಈ ಬ್ಯಾರಿಸ್ಟರನ್ನು ಎದುರಿಸಲು ಕಾನೂನು ಪುಸ್ತಕಗಳ ಸಮೇತ ಸಿದ್ಧರಾಗಿದ್ದರು. ಮೊಖದ್ದಮೆಯನ್ನು ಮುಂದಕ್ಕೆ ಹಾಕುವಂತೆ ಮ್ಯಾಜಿಸ್ಟ್ರೇಟರಿಗೆ ಪ್ರೇರಿಸಲು ಅವರು ಪ್ರಯತ್ನಿಸಿದರು. ಆದರೆ ಗಾಂಧೀಜಿ "ಚಂಪಾರಣ್ಯವನ್ನು ಬಿಡಬೇಕೆಂಬ ಸರ್ಕಾರಿ ಅಪ್ಪಣೆಗೆ ನಾನು ವಿರೋಧವಾಗಿ ನಡೆದಿರುವ ತಪ್ಪನ್ನು ಒಪ್ಪಿಕೊಳ್ಳುವುದೇ ನನ್ನ ಇಷ್ಟ. ಮೊಖದ್ದಮೆಯನ್ನು ಮುಂದಕ್ಕೆ ಹಾಕಬೇಕಾದುದಿಲ್ಲ" ಎಂದು ಹೇಳಿ ತಮ್ಮ ಹೇಳಿಕೆಯನ್ನು ಓದಿದರು.

"ಕೋರ್ಟಿನವರ ಅಪ್ಪಣೆ ಪಡೆದು, ನಾನು ಏಕೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೪೪ನೆ ಸೆಕ್ಷನ್‌ನಂತೆ ನನ್ನ ಮೇಲೆ ಜಾರಿಯಾಗಿರುವ ಆಜ್ಞೆಯನ್ನು ತಿರಸ್ಕರಿಸುವಂತೆ ತೋರುವ ಈ ಹೆಜ್ಜೆಯನ್ನು ಇಟ್ಟಿದ್ದೇನೆ ಎಂಬುದನು ತೋರಿಸಲು ಒಂದು ಚಿಕ್ಕ ಹೇಳಿಕೆಯನ್ನು ಕೊಡಬಯಸುತ್ತೇನೆ. ನನ್ನ ನಮ್ರ ಅಭಿಪ್ರಾಯದಲ್ಲಿ ಇದು ನನಗೂ ಸ್ಥಳೀಯ ಅಧಿಕಾರಿಗಳಿಗೂ ಅಭಿಪ್ರಾಯ ಭೇದದ ಪ್ರಶ್ನೆ. ನಾನು ಮಾನವೀಯ ಮತ್ತು ರಾಷ್ಟ್ರೀಯ ಸೇವೆಯನ್ನು ಸಲ್ಲಿಸುವ ಉದ್ದೇಶದಿಂದ ಈ ಪ್ರಾಂತಕ್ಕೆ ಪ್ರವೇಶಿಸಿದೇನೆ. ನಾನು ರೈತರ ಒತ್ತಾಯದ ಮೊರೆಯನ್ನು ಕೇಳಿ ಹೀಗೆ ಮಾಡಿದೇನೆ. ತಮ್ಮನು ನೀಲಿ ತೋಟಗಾರರು ನ್ಯಾಯವಾಗಿ ನಡೆಸಿಕೊಳ್ಳುವುದಿಲ್ಲವೆಂದು ರೈತರ ಆಪಾದನೆ. ಪ್ರಶ್ನೆಯನ್ನು ಅಧ್ಯಯನ ಮಾಡದೆ ಯಾವ ಸಹಾಯವನ್ನೂ ಮಾಡಲು ನನಗೆ ಸಾಧ್ಯವಿರಲಿಲ್ಲ. ಆದುದರಿಂದ ನಾನು ಪರಿಸ್ಥಿತಿಯನ್ನು, ಸಾಧ್ಯವಾದರೆ ಸರ್ಕಾರದ ಮತ್ತು ತೋಟಗಾರರ ಸಹಾಯದಿಂದ ವ್ಯಾಸಂಗ ಮಾಡಲು ಬಂದಿದೇನೆ. ನನಗೆ ಮತ್ತೇನೂ ಉದ್ದೇಶವಿಲ್ಲ. ನನ್ನ ಬರುವಿಕೆಯಿಂದ ಸಾರ್ವಜನಿಕ ಶಾಂತಿಗೆ ಯಾವ ರೀತಿಯಲ್ಲಾದರೂ ಭಂಗವುಂಟಾಗಬಹುದೆಂದಾಗಲೀ ಜೀವಹಾನಿಯಾಗುವುದೆಂದಾಗಲೀ ನಾನು ನಂಬುವುದಿಲ್ಲ. ಇಂತಹ ವಿಷಯಗಳಲ್ಲಿ ನನಗೆ ಗಣನೀಯವಾದ ಅನುಭವವಿದೆಯೆಂದು ಹೇಳಿಕೊಳ್ಳುತ್ತೇನೆ. ಆದರೆ ಅಧಿಕಾರವರ್ಗ, ಬೇರೆಯಾಗಿ ಯೋಚಿಸಿದ್ದಾರೆ. ಅವರ ಕಷ್ಟ, ನನಗೆ ಅರ್ಥವಾಗುತ್ತದೆ. ಅವರು ತಮಗೆ ಬಂದ ಸುದ್ದಿಯ ಆಧಾರದ ಮೇಲೆ ಮಾತ್ರ ಕೆಲಸ ಮಾಡಬಲ್ಲರೆಂಬುದನ್ನು ಅರ್ಥಮಾಡಿಕೊಳ್ಳುತ್ತೇನೆ. ಕಾನೂನಿಗನುಗುಣವಾಗಿ ನಡೆಯುವ ಪ್ರಜೆಯಾದುದುರಿಂದ ನನ್ನ ಮೇಲೆ ಜಾರಿಮಾಡುವ ಅಪ್ಪಣೆಯನ್ನು ಪಾಲಿಸುವುದು ನನ್ನ ಮೊದಲ ಪ್ರತಿಕ್ರಿಯೆ. ಆದರೆ, ಹೀಗೆ ಮಾಡಿದರೆ ಯಾರಿಗೋಸ್ಕರವಾಗಿ ನಾನು ಇಲ್ಲಿಗೆ ಬಂದೆನೊ ಅವರ ವಿಷಯದಲ್ಲಿ ಕರ್ತವ್ಯಚ್ಯುತಿ ಮಾಡಿದಂತಾಗುತ್ತದೆ. ಈಗ ನಾನು ಅವರ ಜೊತೆಯಲ್ಲಿ ಅವರಮಧ್ಯೆ ಇದ್ದರೆ ಮಾತ್ರ ಅವರ ಸೇವೆ ಮಾಡಬಹುದೆಂದು ಭಾವಿಸುತ್ತೇನೆ. ಆದುದರಿಂದ ನಾನಾಗಿಯೇ, ಬಂದ ಕರ್ತವ್ಯದಿಂದ ನಿವೃತ್ತನಾಗುವಂತಿಲ್ಲ. ಈ ಕರ್ತವ್ಯದಗೊಂದಲದಲ್ಲಿ, ನನನು ಬೇರೆಡೆಗೆ ಸಾಗಿಸುವ ಹೊಣೆಗಾರಿಕೆಯನ್ನು ನಾನು ಸರ್ಕಾರದ ಮೇಲೆಯೇ ಹೊರಿಸಿದ್ದೇನೆ. ಭಾರತದ ಸಾರ್ವಜನಿಕ ಜೀವನದಲ್ಲಿ ನನಗಿರುವ ಸ್ಥಾನವನ್ನು ಹೊಂದಿರುವ ಒಬ್ಬ ಮನುಷ್ಯ ಉದಾಹರಣೆಗಳನ್ನು ನಿರ್ಮಿಸುವುದರಲ್ಲಿತುಂಬ ಎಚ್ಚರಿಕೆ ತೆಗೆದುಕೊಳ್ಳಬೇಕೆಂಬುದು

ನನಗೆ ಚೆನ್ನಾಗಿ ಮನದಟ್ಟಾಗಿದೆ. ನನ್ನ ದೃಢ ನಂಬಿಕೆ ಏನೆಂದರೆ, ನಾವು ಜೀವಿಸುತ್ತಿರುವ ಈ ಗೊಂದಲಮಯ ಸಂವಿಧಾನದಲ್ಲಿ, ಆತ್ಮಗೌರವವುಳ್ಳ ಮನುಷ್ಯನಿಗೆ ಇರುವ ಗೌರವಯುತವಾದ ಮತ್ತು ಸುರಕ್ಷಿತವಾದ ಒಂದೇ ಮಾರ್ಗವೆಂದರೆ, ನಾನು ಏನನ್ನು ಮಾಡಲು ನಿರ್ಧರಿಸಿದ್ದೇನೆಯೋ ಅದನ್ನು ಮಾಡುವುದು, ಅಂದರೆ ಕಾನೂನು ಭಂಗ ಮಾಡಿ ಅದರ ಶಿಕ್ಷೆಯನ್ನು ಅನುಭವಿಸುವುದು.

"ನಾನು ಈ ಹೇಳಿಕೆಯನ್ನು ಕೊಡುತ್ತಿರುವುದು ನನಗೆ ಕೊಡಬಹುದಾದ ಶಿಕ್ಷೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿಯಲ್ಲ. ಆದರೆ ನಾನು ಕಾನೂನುಬದ್ಧ ಅಧಿಕಾರದ ಅಪ್ಪಣೆಯನ್ನು ತಿರಸ್ಕರಿಸಿರುವುದು ಕಾನೂನಿನಲ್ಲಿ ಗೌರವ ಇಲ್ಲದೆ ಅಲ್ಲ. ಆದರೆ ನಮ್ಮ ಬಾಳಿನ ಇನ್ನೂ ಹೆಚ್ಚಾದ ಕಾನೂನಿನ ಆಜ್ಞೆಗನುಗುಣವಾಗಿ; ಅದೇ ನಮ್ಮ ನಮ್ಮ ಮನಸ್ಸಾಕ್ಷಿಯ ವಾಣಿ".

ಆ ಮೊಖದ್ದಮೆಯಲ್ಲಿ ೧೪೪ನೆ ಸೆಕ್ಷನ್ನಿನ ಅಪ್ಪಣೆ, ತೀರ ಕಾನೂನು ಬಾಹಿರವಾಗಿದ್ದಿತು. ಮುಂದೆ ಏನು ಮಾಡಬೇಕೆಂಬುದನ್ನು ಮ್ಯಾಜಿಸ್ಟ್ರೇಟರು ನಿರ್ಣಯಿಸಲಾರದಾದರು. "ನಿಮ್ಮದು ತಪ್ಪೆಂದು ನೀವು ವಾದಿಸುತ್ತಿರಾ?" ಎಂದು ಅವರು ಗಾಂಧೀಜಿಯನ್ನು ಪದೆ ಪದೆ ಕೇಳಿದರು. ಗಾಂಧೀಜಿ "ನಾನು ಹೇಳಬೇಕಾದುದನ್ನೆಲ್ಲ ಹೇಳಿಕೆಯಲ್ಲಿ ಹೇಳಿದ್ದೇನೆ" ಎಂದು ಉತ್ತರವಿತ್ತರು. ಮ್ಯಾಜಿಸ್ಟ್ರೇಟರು ಅದರಲ್ಲಿ "ತಪ್ಪಿತಸ್ಥರೆಂದು ಸ್ಪಷ್ಟವಾಗಿ ಹೇಳಿಲ್ಲವಲ್ಲ" ಎಂದರು. ಗಾಂಧೀಜಿ "ಕೋರ್ಟಿನ ಕಾಲವನ್ನು ವ್ಯರ್ಥಮಾಡುವುದು ನನ್ನ ಇಷ್ಟವಲ್ಲ. ನಾನು ತಪ್ಪಿತಸ್ಥನೆಂದು ಹೇಳುತ್ತೇನೆ" ಎಂದರು. ಮಾಜಿಸ್ಟ್ರೇಟರು "ಈಗ ನೀವು ಜಿಲ್ಲೆಯನ್ನು ಬಿಟ್ಟು ಹೋಗಿ, ಮತ್ತೆ ಹಿಂದಿರುಗುವುದಿಲ್ಲವೆಂದು ವಾಗ್ದಾನ ಮಾಡಿದರೆ ನಿಮ್ಮಮೇಲಿನ ಮೊಖದ್ದಮೆ ಹಿಂದಕ್ಕೆ ತೆಗೆದುಕೊಳ್ಳಲ್ಪಡುವುದು" ಎಂದು ಹೇಳಿದರು. ಗಾಂಧೀಜಿ "ಅದು ಸಾಧ್ಯವಿಲ್ಲ ಈಗ ಹಿಂದಕ್ಕೆ ಹೋಗುವುದಿರಲಿ. ಜೈಲಿನಿಂದ ಹೊರಬಂದ ಮೇಲೆಯೂ ಚಂಪಾರಣ್ಯವನ್ನೇ ನಾನು ನನ್ನ ಮನೆಯಾಗಿ ಮಾಡಿಕೊಳ್ಳುತ್ತೇನೆ" ಎಂದರು.

ಮ್ಯಾಜಿಸ್ಟ್ರೇಟರಿಗೆ ಚಿಂತೆಯುಂಟಾಯಿತು. ಅವರು "ವಿಷಯವನ್ನು ಯೋಚಿಸಬೇಕಾಗಿದೆ ಮೂರು ಗಂಟೆಗೆ ನಿರ್ಣಯವನ್ನು ಹೇಳುತ್ತೇನೆ" ಎಂದರು. ವಿಚಾರಣೆಗೆ ಅರ್ಧಗಂಟೆ ಮಾತ್ರ ಹಿಡಿದಿತ್ತು. ಗಾಂಧೀ ತಮ್ಮ ನಿವಾಸಕ್ಕೆ ಬಂದು. ವೈಸರಾಯರಿಗೂ ಪಾಟ್ನದ ಮಿತ್ರರಿಗೂ ಪಂಡಿತ ಮಾಲವೀಯ ಮತ್ತು ಇತರರಿಗೂ ತಂತಿ ಕಳುಹಿಸಿದರು.

ಗಾಂಧೀಜಿ, ಮ್ಯಾಜಿಸ್ಟ್ರೇಟರ ಮುಂದೆ ಮೂರು ಗಂಟೆಗೆ ಸ್ವಲ್ಪ ಮುಂಚಿತವಾಗಿ ಹಾಜರಾದರು. ಮಾಜಿಸ್ಟ್ರೇಟರು ಏಪ್ರಿಲ್ ೨೧ರಂದು ತೀರ್ಮಾನವನ್ನು ಹೇಳುವುದಾಗಿಯೂ ನೂರು ರೂಪಾಯಿನ ಜಾಮೀನಿನ ಮೇಲೆ ಗಾಂಧೀಜಿಯನ್ನು ಬಿಡುವುದಾಗಿಯೂ ಹೇಳಿದರು. ಗಾಂಧೀ, ಜಾಮೀನುದಾರರು ಇಲ್ಲವೆಂದೂ ಜಾಮೀನು ಕೊಡಲಾರನೆಂದೂ ಹೇಳಿದರು. ಆಗ ಮ್ಯಾಜಿಸ್ಟ್ರೇಟರು ಗಾಂಧೀಜಿಯನ್ನು ಅವರ ಸ್ವಂತ ಜಾಮೀನು ಮುಚ್ಚಳಿಕೆಯ ಮೇಲೆ ಬಿಡುಗಡೆ ಮಾಡುವುದಾಗಿ ಹೇಳಿದರು. ಗಾಂಧಿ ತಮ್ಮ

ನಿವಾಸಕ್ಕೆ ಹಿಂದಿರುಗಿದರು. ಸ್ನೇಹಿತರಿಗೂ ವರ್ತಮಾನ ಪತ್ರಿಕೆಗಳವರಿಗೂ ಸುದ್ದಿಯನ್ನು
ತಿಳಿಸಿದರು. ಮತ್ತು ಸರ್ಕಾರದ ಅಪ್ಪಣೆ ತಿಳಿಯುವವರಿಗೆ, ಪತ್ರಿಕೆಗಳಲ್ಲಿ ಯಾವ
ಚಳವಳಿಯನ್ನೂ ಮಾಡಕೂಡದೆಂದು ಮಿತ್ರರನ್ನು ಕೇಳಿಕೊಂಡರು.

ಈ ಮಧ್ಯೆ ಮಜಹರಲ್ ಹಕ್, ಬ್ರಜಕಿಶೋರ್ ಬಾಬು, ಅನುಗ್ರಹನಾರಾಯಣ,
ಶಂಭುಶರಣ, ರಾಜೇಂದ್ರಪ್ರಸಾದ ಮತ್ತು ಪೋಲಕರು ಮೋತಿಹಾರಿಗೆ ಬಂದರು.
ಅವರು ಸಮಾಲೋಚನೆ ನಡೆಸಿ, ಗಾಂಧೀಜಿಯನ್ನು ಸೆರೆಗಟ್ಟಿದರೆ ಹಕ್ಕರೂ ಬ್ರಜ-
ಕಿಶೋರರರೂ ನಾಯಕತ್ವವನ್ನು ವಹಿಸಬೇಕೆಂದು ತೀರ್ಮಾನಿಸಿದರು. ಅವರನ್ನೂ ಸೆರೆಗೆ
ಕಳುಹಿಸಿದರೆ ಇತರರು ಕೆಲಸವನ್ನು ಮುಂದುವರಿಸುವವರಾಗಿದ್ದರು.

ಏಪ್ರಿಲ್ ೧೯ರಿಂದ ರೈತರು ಗುಂಪುಗುಂಪಾಗಿ ಬರತೊಡಗಿದರು. ಗಾಂಧೀಜಿಯೂ
ಅವರ ಸಹ ಕೆಲಸಗಾರರೂ ಬೆಳಗ್ಗೆ ೬ಗಂಟೆಯಿಂದ ಸಂಜೆ ಆರುವರೆ ಗಂಟೆಯವರೆಗೆ
ಅವರ ಹೇಳಿಕೆಗಳನ್ನು ಬರೆದುಕೊಳ್ಳತೊಡಗಿದರು. ಕಾಗದದ ಮೇಲೆ ಬರೆಯುವುದಕ್ಕೆ
ಮುಂಚಿತವಾಗಿ, ಸುಳ್ಳು ಬರದಂತೆ ರೈತರನ್ನು ಪಾಟಿಸವಾಲು ಮಾಡುತ್ತಿದ್ದರು. ಈ
ಕಾರ್ಯದಲ್ಲಿ ಸಹಾಯ ಮಾಡುವುದಕ್ಕಾಗಿ ಅನೇಕ ಸ್ವಯಂಸೇವಕರು ಬಂದಿದ್ದು ಅವರನ್ನೆಲ್ಲ
ಇಳಿಸಲು ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರು.

ಗಾಂಧೀಜಿಗೆ ಶಿಕ್ಷೆಯಾಗುವುದಕ್ಕೆ ಮುಂಚಿತವಾಗಿ, ಮಾಜಿಸ್ಟ್ರೇಟರು ಗಾಂಧೀಗೆ
"ಲೆಫ್ಟಿನೆಂಟ್ ಗವರ್ನರು ನಿಮ್ಮ ಮೇಲಿನ ಮೊಖದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ
ಬೇಕೆಂದು ಅಪ್ಪಣೆ ಮಾಡಿದ್ದಾರೆಂದು" ಬರೆದು ಕಳುಹಿಸಿದರು. ಕಲೆಕ್ಟರು ಸಹ "ನೀವು
ವಿಚಾರಣೆ ನಡೆಸಲು ಸ್ವತಂತ್ರರಾಗಿದ್ದೀರಿ. ಅಧಿಕಾರಿಗಳಿಂದ ಯಾವ ಸಹಾಯ ನಿಮಗೆ
ಬೇಕಾದರೂ ದೊರೆಯುವುದೆಂದು ನೀವು ನಂಬಬಹುದು" ಎಂದು ಬರೆದರು.

ಏಪ್ರಿಲ್ ೨೨ರಂದು ಗಾಂಧೀಜಿ, ಚಿಟ್ಟಿಯಕ್ಕೆ ಹೊರಟರು. ಜನ ಅವರಿಗೆ ಜಯಕಾರ
ಮಾಡಿ ಹೂವುಗಳನ್ನು ಅರ್ಪಿಸಿದರು. ಚಿಟ್ಟಿಯ ರೈಲ್ವೆ ನಿಲ್ದಾಣ ಜನರಿಂದ ಕಿಕ್ಕಿರಿದು
ಹೋಗಿತ್ತು. ಆಕಸ್ಮಿಕವನ್ನು ತಪ್ಪಿಸಲು ರೈಲನ್ನು ನಿಲ್ದಾಣದಿಂದ ಸ್ವಲ್ಪ ದೂರದಲ್ಲಿಯೇ
ನಿಲ್ಲಿಸಬೇಕಾಯಿತು. ಗಾಂಧೀಜಿ ಮೂರನೆಯ ತರಗತಿಯ ಗಾಡಿಯಿಂದಿಳಿದು ಒಂದು
ಕುದುರೆ ಗಾಡಿಯನ್ನು ಹತ್ತಿದರು. ಜನ, ಕುದುರೆಯನ್ನು ಬಿಚ್ಚಿ, ತಾವೇ ಗಾಡಿ ಎಳೆ
ಯಲು ಪ್ರಾರಂಭಿಸಿದರು. ಗಾಂಧೀಜಿ, ಅದಕ್ಕೆ ಅವಕಾಶ ಕೊಡಲಿಲ್ಲ.

ಏಪ್ರಿಲ್ ೨೩ರಂದು ಗಾಂಧೀಜಿ ಚಿಟ್ಟಿಯ ಸಬ್‌ಡಿವಿಜನ್ ಆಫೀಸರಾದ ಲೂಯಿಸ್
ರವರನ್ನೂ ಚಿಟ್ಟಿಯ ರಾಸರ ಮ್ಯಾನೇಜರನ್ನೂ ಸಂಧಿಸಿದರು. ಅಲ್ಲಿ ಗಾಂಧೀಜಿ,
ಹಳ್ಳಿಗರೊಂದಿಗೆ ಸಂಭಾಷಿಸಿ, ಅವರ ಕೂಲಿದರ ಮುಂತಾದುವನ್ನು ವಿಚಾರಿಸಿದರು.
ಮುಂಚೆ ಎಂದೂ ರೈತರೊಂದಿಗೆ ಸೇರದಿದ್ದ ಲೂಯಿಸ್‌ರು, ಹೇಳಿಕೆಗಳನ್ನು ಬರೆದು
ಕೊಳ್ಳುತ್ತಿದ್ದ ಸ್ಥಳಕ್ಕೆ ತಾವೂ ಹೋದರು. ರೈತರು ನಿರ್ಭೀತಿಯಿಂದ ತಮ್ಮ ಕಷ್ಟಗಳನ್ನು
ಕುರಿತು ಮಾತನಾಡುತ್ತಿದ್ದರು. ಗಾಂಧೀಜಿ, ಎರಡು ದಿನಗಳನ್ನು ಹಳ್ಳಿಗಳಲ್ಲಿ ಕಳೆದು
ಏಪ್ರಿಲ್ ೨೫ರಂದು ಲೌಕಾರಿಯಾದಿಂದ ಚಿಟ್ಟಿಯಗೆ ಅಷ್ಟು ದೂರವನ್ನೂ ನಡೆದು
ಕೊಂಡೇ ಬಂದರು.

ಏಪ್ರಿಲ್ ೨೭ರಂದು ಬೆಳಿಗ್ಗೆ ಹೊತ್ತಿಗೆ ಮುಂಚೆ ಗಾಂಧೀಜಿಯೂ ಅವರ ಪಂಗಡದವರೂ ನರಕತಿಯಾಗಂಜ್ ಸ್ಟೇಷನ್ನಿನಿಂದ ಮುರಲೀ ಬರಹ್ವಗೆ ನಡೆದುಕೊಂಡೇ ಹೊರಟರು. ಅವರು ಹತ್ತು ಗಂಟೆ ವೇಳೆಗೆ ರಾಜಕುಮಾರ ಶುಕ್ಲನ ಹಳ್ಳಿಯನ್ನು ಸೇರಲು ಸಾಧ್ಯವಾಯಿತು. ಶುಕ್ಲನ ಮನೆ, ಅಸ್ತವ್ಯಸ್ತವಾಗಿ ಮುರಿದಿದ್ದುದು ಗಾಂಧೀಜಿಯ ಕಣ್ಣಿಗೆ ಬಿದ್ದಿತು. ಅದನ್ನು ಕಾರ್ಖಾನೆಯ ಒಡೆಯರ ಕೆಲಸಗಾರರು ಲೂಟಿಮಾಡಿದ್ದರು. ಹಳ್ಳಿಯವರನೇಕರು ಕೊಟ್ಟ ಸಾಕ್ಷ್ಯವನ್ನು ಗಾಂಧೀಜಿ, ಬರೆದುಕೊಂಡರು. ರಾತ್ರಿ, ಅವರು ಬೆಲ್ವ ಎಂಬ ಹಳ್ಳಿಯಲ್ಲಿ ತಂಗಿದ್ದು ಮರುದಿನ ಬೆಳಿಗ್ಗೆ ಚಿಟ್ಟಿಯಗೆ ಹಿಂದಿರುಗಿದರು.

ಗಾಂಧೀ, ಸಾವಿರಾರು ರೈತರ ಹೇಳಿಕೆಗಳನ್ನು ಪೂರ್ಣವಾಗಿ ಬರೆದುಕೊಂಡಿದ್ದರು. ಸ್ಥಳೀಯ ಅಧಿಕಾರಿಗಳು ತಮ್ಮ ದರ್ಪ ಕಡಿಮೆಯಾಗುವುದೆಂದು ತುಂಬ ಕ್ಷೋಭೆಗೊಂಡರು. ಬೀಹಾರ್ ಕೆಲಸಗಾರರು, ಸರ್ಕಾರ ಎಲ್ಲ ಕಾಗದ ಪತ್ರಗಳನ್ನೂ ನಾಶಮಾಡಹುದೆಂದೂ, ಕೆಲಸಗಾರನ್ನೆಲ್ಲ ಭಾರತ ರಕ್ಷಣಾ ಕಾನೂನಿನಗನುಗುಣವಾಗಿ ಚಂಪಾರಣ್ಯದಿಂದ ಗಡೀಪಾರು ಮಾಡಬಹುದೆಂದೂ ಹೆದರಿದರು. ರಾತ್ರಿ ಬಹಳ ಹೊತ್ತಿನ ವರೆಗೆ ಚರ್ಚೆ ಮುಂದುವರಿಯಿತು. ಏಪ್ರಿಲ್ ೨೮ರ ಸಂಜೆ, ಲೂಯಿಸ್‌ರು, ತಾವು ಸರ್ಕಾರಕ್ಕೆ ಸಲ್ಲಿಸಬೇಕೆಂದಿದ್ದ ವರದಿಯ ಒಂದು ಪ್ರತಿಯನ್ನು ಗಾಂಧೀಜಿಯ ಅವಗಾಹನೆಗೆ ಕಳುಹಿಸಿದರು. ಗಾಂಧೀಜಿ, ತಮ್ಮ ಟಿಪ್ಪಣಿಗಳೊಂದಿಗೆ ವರದಿಯನ್ನು ಅದೇ ರಾತ್ರಿ ಹಿಂದಿರುಗಿಸಿದರು.

ಮೇ ೧ರಂದು ಗಾಂಧೀ, ಬ್ರಜಕಿಶೋರ್ ಬಾಬುವಿನೊಂದಿಗೆ ಮೋತಿಹಾರಿಗೆ ಹೋದರು. ಮರುದಿನ ಅವರು ತೋಟಗಾರರ ಒಂದು ಸಭೆಯನ್ನು ಕೂಡಿಸಿ ಮಾತನಾಡಿದರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಮೇ ೬ರಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮತ್ತು ಸೆಟ್ಲಮೆಂಟ್ ಅಧಿಕಾರಿಗಳನ್ನು ನೋಡಿದನಂತರ ಅವರು ಚಿಟ್ಟಿಯಾಕ್ಕೆ ಹಿಂದಿರುಗಿದರು.

ಬೀಹಾರ್‌ನ ಯೂರೋಪಿಯನ್ ಜನಾಂಗ ಸರ್ಕಾರದ ಮೇಲೆ ಪ್ರಭಾವವನ್ನು ಬೀರಲು ಬಯಸಿದರು. ಸ್ಥಳೀಯ ಅಧಿಕಾರಿಗಳು ಅತಿಶಯೋಕ್ತಿಯ ವರದಿಗಳನ್ನು ಕಳುಹಿಸಿದ್ದರು. ತೋಟಗಾರರು, ಸರ್ಕಾರಕ್ಕೆ, ಗಾಂಧೀಜಿಯ ಚಟುವಟಿಕೆಗಳನ್ನು ನಿಲ್ಲಿಸುವಂತೆ ಒತ್ತಾಯಪಡಿಸಲು ಒಂದು ನಿಯೋಗವನ್ನು ಕಳುಹಿಸಿದರು. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ಗಾಂಧೀಜಿ, ಪಾಟ್ನಾದಲ್ಲಿ ಮಿ. ಮಾಡ್‌ರವರನ್ನು ಮೇ ೧೦ರಂದು ಹೋಗಿ ನೋಡಬೇಕೆಂದು ಗಾಂಧೀಜಿಗೆ ತಂತಿ ಕಳುಹಿಸಿದರು.

ಮಿ. ಮಾಡ್‌ರವರು, ಗಾಂಧೀಜಿ, ತಮ್ಮ ಸಹಾಯಕ ಕೆಲಸಗಾರರನ್ನೆಲ್ಲ ಚಂಪಾರಣ್ಯದಿಂದ ಹೊರಕ್ಕೆ ಕಳುಹಿಸಬೇಕೆಂದು ಒತ್ತಾಯಿಸಿದರು. ಗಾಂಧೀಜಿ ಈ ಪ್ರಾರ್ಥನೆಯನ್ನು ಅಂಗೀಕರಿಸಲು ತಿರಸ್ಕರಿಸಿದರು. ಆದರೆ ಸಾಧ್ಯವಾದಷ್ಟು ಬೇಗ ತಮ್ಮ ವಿಚಾರಣೆಯ ವರದಿಯನ್ನು ಕಳುಹಿಸುವುದಾಗಿಯೂ ತಮ್ಮ ವಿಚಾರಣೆಯ ಕ್ರಮದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡುವುದಾಗಿಯೂ ಹೇಳಿದರು. ಮೇ ೧೧ರಂದು ಗಾಂಧೀ ಚಿಟ್ಟಿಯಾಗೆ ಹಿಂದಿರುಗಿದರು. ಮರುದಿವಸ, ರೈತರ ಮುಖ್ಯ ಕಷ್ಟಗಳನ್ನು ಬೇರೆ ಬೇರೆ ಭಾಗವಾಗಿ

ವಿಂಗಡಿಸಿ ಪಟ್ಟಿ ಮಾಡಿ, ಅದರ ಪ್ರತಿಗಳನ್ನು ಮಾಡ್‌ರಿಗೂ ಡಿಸ್ಟ್ರಿಕ್ಟ್ ಆಫೀಸರ್‌ರಿಗೂ ಚೆಟ್ಟಿಯ ರಾಜ್‌ನ ಮ್ಯಾನೇಜರಿಗೂ ತೋಟಗಾರರ ಸಂಘದ ಕಾರ್ಯದರ್ಶಿಗಳಿಗೂ ಇತರ ಭಾರತ ನಾಯಕರಿಗೂ ಕಳುಹಿಸಿದರು.

ಸುಮಾರು ೨.೨೫೦ ಪದಗಳಲ್ಲಿ ಗಾಂಧೀಜಿ, ಚಂಪಾರಣ್ಯ ಹೋರಾಟದ ನಿಪುಣ ಸಮೀಕ್ಷೆಯನ್ನು ಸಿದ್ಧಗೊಳಿಸಿದರು. ಸುಮಾರು ನಾಲ್ಕು ಸಾವಿರ ರೈತರನ್ನು ಪರೀಕ್ಷಿಸಿ, ಅವರ ಹೇಳಿಕೆಗಳನ್ನು ಎಚ್ಚರಿಕೆಯ ಪಾಟಿ ಸವಾಲಿನ ಅನಂತರ ತೆಗೆದುಕೊಂಡಿದ್ದರು. ಅನೇಕ ಹಳ್ಳಿಗಳಿಗೆ ಭೆಟ್ಟಿಕೊಟ್ಟಿದ್ದು, ಅನೇಕ ಕೋರ್ಟ್ ತೀರ್ಮಾನಗಳನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿದ್ದರು.

ಗಾಂಧೀಜಿ ಮಾಡಿದ ಕೆಲವು ದೋಷಾರೋಪಣೆಗಳು ಈ ರೀತಿ ಇದ್ದವು; ರೈತರು ಈ ಅನ್ಯಾಯಗಳಿಗೆ ವಿರುದ್ಧವಾಗಿ ಯಾವಾಗಲೂ ಹೋರಾಡಿದ್ದಾರೆ. ದಬ್ಬಾಳಿಕೆಗೆ ಮಾತ್ರವೇ ಅವರು ಬಗ್ಗಿರುವುದು. ಅವರ ಸೇವೆಗೆ, ಸರಿಯಾದ ಪ್ರತಿಫಲ ಅವರಿಗೆ ದೊರಕಿಲ್ಲ. ಕೃತಕ ನೀಲಿಯ ಪ್ರವೇಶದಿಂದ, ಸ್ಥಳದ ನೀಲಿಯ ಬೆಲೆ, ಕಡಿಮೆಯಾದಾಗ, ತೋಟಗಾರರು ನಷ್ಟವನ್ನು ರೈತರ ಮೇಲೆ ಹೊರಿಸುವ ಉಪಾಯಗಳನ್ನು ಕಂಡು ಹಿಡಿದರು. ರೈತರಿಗೆ ಹಣತೆರಲು ಸಾಧ್ಯವಾಗದಾಗ ಕಂತು ಪ್ರಕಾರ ಹಣಕೊಡಲು ರೈತರಿಂದ ಪ್ರಾಮಿಸರಿ ನೋಟು ಮತ್ತು ಆಧಾರ ಪತ್ರಗಳನ್ನು ಶೇಕಡ ೧೨ರೂ. ಬಡ್ಡಿಯಂತೆ ಬರೆಸಿಕೊಂಡರು. ತೀನ್‌ಕತಿಯಾ ಪದ್ಧತಿಯಂತೆ, ರೈತ, ತನ್ನ ಅತ್ಯುತ್ತಮ ಜಮೀನನ್ನು ಜಮೀನ್ದಾರನ ಪೈರಿಗಾಗಿ ಕೊಡುವ ಬಲಾತ್ಕಾರಕ್ಕೆ ಒಳಗಾಗಿದ್ದನು. ಅದೇ ಜಮೀನಿನ ಸಾಗುವಳಿಗೆ ತನ್ನ ಎಲ್ಲ ಕಾಲ ಮತ್ತು ಶಕ್ತಿಗಳನ್ನೂ ಉಪಯೋಗಿಸಬೇಕಾಗಿದೆ. ತನ್ನ ಜೀವನಕ್ಕೆ ಪೈರು ಬೆಳೆದುಕೊಳ್ಳಲು ಅವನಿಗೆ ಕಾಲವೇ ದೊರೆಯುವುದಿಲ್ಲ. ಕಾರ್ಖಾನೆಗಳಿಗೆ ಸಾಮಾನು ಹೇರಲು ಗಾಡಿಗಳನ್ನು ಬಲಾತ್ಕಾರವಾಗಿ ರೈತರಿಂದ ಹಿಡಿಯುತ್ತಾರೆ. ಕೊಡುವ ದರ ಅಸಲು ಖರ್ಚಿಗೂ ಸಾಕಾಗುವುದಿಲ್ಲ. ರೈತರನ್ನು ಬಲಾತ್ಕರಿಸಿ ಕೆಲಸಕ್ಕೆ ಸೇರಿಸಿದಾಗ ಅತಿಕಡಿಮೆ ಕೂಲಿ ಕೊಡುತ್ತಾರೆ. ಚಿಕ್ಕವಯಸ್ಸಿನ ಬಾಲಕರನ್ನೂ ಸಹ, ಅವರ ಇಷ್ಟಕ್ಕೆ ವಿರೋಧವಾಗಿ ಕೆಲಸಕ್ಕೆ ಬಲಾತ್ಕಾರದಿಂದ ಸೇರಿಸುತ್ತಾರೆ. ರೈತರ ನೇಗಿಲುಗಳನ್ನು ಬಲಾತ್ಕಾರವಾಗಿ ಕೊಂಡುಹೋಗಿ ಕಾರ್ಖಾನೆಯಲ್ಲಿಡುತ್ತಾರೆ. ಇದಕ್ಕೆ 'ಸತ್ತಾ' ಎಂದು ಹೆಸರು. ಅಲ್ಲಿ ರೈತರು ಕಡಿಮೆ ಕೂಲಿಗೆ ಅನೇಕ ದಿನ ಕಾರ್ಖಾನೆ ಜಮೀನುಗಳನ್ನು ಉಳಬೇಕಾಗುತ್ತದೆ. ಅದೇ ಸಮಯದಲ್ಲಿ ರೈತರೂ ತಮ್ಮ ಜಮೀನುಗಳನ್ನು ಉಳಬೇಕಾದರೂ ಅವಕಾಶವಿಲ್ಲ. ಕಾರ್ಖಾನೆಯ ಅತಿಕಡಿಮೆ ಕೂಲಿ ತೆಗೆಯುವ ಅಮಾಲಿಗಳು, ರೈತರ ಕೂಲಿಯಿಂದಲೂ ಗಾಡಿಬಾಡಿಗೆಯಿಂದಲೂ, ಕೆಲವು ವೇಳೆ ಐದರಲ್ಲಿ ಒಂದು ಭಾಗದಷ್ಟು 'ದಸ್ತೂರಿ'ಯನ್ನು ವಸೂಲಿ ಮಾಡುತ್ತಾರೆ. ಇನ್ನು ಕೆಲವು ಹಳ್ಳಿಗಳಲ್ಲಿ ಚಮ್ಮಾರರು, ರೈತರ ಸತ್ತ ದನಕರುಗಳನ್ನು ಕಾರ್ಖಾನೆಗೆ ಬಲಾತ್ಕಾರದಿಂದ ಕೊಡುತ್ತಿದ್ದಾರೆ. ಕಾನೂನು ಬಾಹಿರ ಜುಲ್ಮಾನೆಗಳು—ಅನೇಕ ವೇಳೆ ದೊಡ್ಡಮೊತ್ತದಲ್ಲಿ—ಕಾರ್ಖಾನೆಯವರಿಂದ ರೈತರಿಗೆ ವಿಧಿಸಲ್ಪಟ್ಟಿವೆ. ರೈತರನ್ನು ತಮ್ಮ ಇಷ್ಟದಂತೆ ಬಗ್ಗಿಸಲು

ಯೂರೋಪಿಯನ್ ತೋಟಗಾರರು ಅನುಸರಿಸುವ ಇತರ ಮಾರ್ಗಗಳೆಂದರೆ: ರೈತರ ದನಗಳನ್ನು ಹಿಡಿದಿಡುವುದು, ಅವರ ಮನೆಗಳಲ್ಲಿ ತಮ್ಮ ಸೇವಕರನ್ನು ಇಡುವುದು (ರೈತ ಅವರಿಗೆ ಊಟ ತಿಂಡಿ ಕೊಡಬೇಕು). ರೈತರಿಗೆ ಕ್ಷೌರಿಕ, ಅಗಸ, ಬಡಗಿ, ಕಮ್ಮಾರ ಇವರ ಸೇವೆ ದೊರಕದಂತೆ ಮಾಡುವುದು. ಭಾವಿಯ ನೀರು ಸಿಕ್ಕದಂತೆ ಮಾಡುವುದು ಮನೆಯ ಮುಂದೆ, ಸುತ್ತ ಮುತ್ತ ಭೂಮಿಯನ್ನೆಲ್ಲ ಉತ್ತು, ದಾರಿಯನ್ನೆಲ್ಲ ಉತ್ತು, ಮೇವಿನ ಜಮೀನಿನ ದಾರಿಯನ್ನೆಲ್ಲ ತಡೆಹಾಕುವುದು, ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಹಾಕುವುದು, ಹಾಕಿಸುವುದು; ಹೊಡೆಯುವುದು ಬಡಿಯುವುದು, ಬಲಾತ್ಕಾರದಿಂದ ಬಂಧನದಲ್ಲಿಡುವುದು—ಮುಂತಾದವು. ತೋಟಗಾರರು, ತಮ್ಮ ಇಚ್ಛೆಯನ್ನು ನಡೆಸಲು ದೇಶದ ಸಂಸ್ಥೆಗಳನ್ನೆಲ್ಲ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಜೊತೆಗೆ ಇತರ ಕ್ರಮಗಳನ್ನೂ ಅನುಸರಿಸಿ, ಕಾನೂನನ್ನು ತಮ್ಮ ಕೈಗೇ ತೆಗೆದುಕೊಳ್ಳಲು ಹಿಂದೆಗಿಲ್ಲ. ಪರಿಣಾಮವಾಗಿ ರೈತರು ಅತ್ಯಂತ ನಿರುಪಾಯರೂ ದೀನರೂ ನಿಸ್ಸಹಾಯಕರೂ ಆಗಿದ್ದಾರೆ. ನಾನು ಪ್ರವಾಸ ಮಾಡಿರುವ ಭಾರತ ಭಾಗದಲ್ಲಿ ಎಲ್ಲಿಯೂ ಇಂತಹ ಸ್ಥಿತಿಯನ್ನು ನೋಡಿಲ್ಲ. ಕೆಲವು ಭಾರತೀಯ ಜಮೀನ್ದಾರರೂ ಮೇಲಿನ ಆಪಾದನೆಗಳಿಗೆ ಒಳಗಾಗುತ್ತಾರೆಂಬುದನ್ನು ಬಲ್ಲೆ. ಅವರಿಂದಲೂ, ಟೀತೋಟಗಾರರಿಂದ ಬಯಸುವಂತೆ ಪರಿಹಾರವನ್ನು ಬಯಸುತ್ತೇವೆ. ಯೂರೋಪಿಯನ್ ಪ್ಲಾಂಟರುಗಳು ಕೆಟ್ಟ ಪದ್ಧತಿಗೆ ಹಕ್ಕುದಾರರಾಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಜೊತೆಗೆ ಅವರು ತಮ್ಮ ತರಬೇತಿ ಹೊಂದಿದ ಬುದ್ಧಿ, ಉನ್ನತ ಅಧಿಕಾರ, ಇವುಗಳಿಂದ ಈ ಪದ್ಧತಿಯನ್ನು ಒಂದು ವಿಜ್ಞಾನವಾಗಿ ಬೆಳೆಸಿದ್ದಾರೆ. ಇದರಿಂದ ರೈತನಿಗೆ, ಸರ್ಕಾರ ಕೆಲವಾದರೂ ರಕ್ಷಣೆಗಳನ್ನು ಕೊಡದೆ ಇದ್ದಿದ್ದರೆ, ಅವನು ಮೇಲಕ್ಕೆ ತಲೆಯೆತ್ತಲು ಸಾಧ್ಯವಾಗುತ್ತಿರಲಿಲ್ಲ. ಅದರ ಬದಲು ಅವನು ಇನ್ನೂ ಆಳಕ್ಕೆ ಮುಳುಗಿ ಹೋಗುತ್ತಿದ್ದನು. ಆದರೆ ಆ ರಕ್ಷಣೆ ಅತ್ಯಂತ ಅಲ್ಪ, ರೇಗಿಸುವಷ್ಟು ನಿಧಾನ, ರೈತರು ಅದನ್ನು ಅನುಭವಿಸುವುದಕ್ಕೂ ಸಾಧ್ಯವಿಲ್ಲದಷ್ಟು ನಿಧಾನವಾಗಿ ಬಂದಿದೆ. ನಾವು ವಿವರಿಸುವ ಈ ಕಷ್ಟಗಳನ್ನು ಯಾರೂ ಇಲ್ಲವೆನ್ನುವಂತೆ ಇಲ್ಲ. ಅವು ತತ್‌ಕ್ಷಣ, ಪರಿಹರಿಸಲ್ಪಡಬೇಕಾದಷ್ಟು ಗಂಭೀರವೂ ಆಗಿವೆ".

ಕೊನೆಯಲ್ಲಿ ಗಾಂಧೀ, ಹೀಗೆ ಹೇಳಿದರು "ಯೂರೋಪಿಯನ್ ಪ್ಲಾಂಟರುಗಳ ಮನನೋಯಿಸಲು ನನಗೆ ಅಪೇಕ್ಷೆಯಿಲ್ಲ. ಅವರು ನನಗೆ ಎಲ್ಲ ಸಭ್ಯತೆಯನ್ನೂ ತೋರಿಸಿದ್ದಾರೆ. ತುಂಬ ಕಷ್ಟಕ್ಕೆ ಸಿಕ್ಕಿರುವ ಕೂಲಿಗಾರರು ಕೂಡಲೆ ಆ ಕಷ್ಟಗಳಿಂದ ಬಿಡುಗಡೆ ಹೊಂದಬೇಕೆಂಬುದು ನನ್ನ ಆಶೆ. ತೋಟಗಾರರು ಕಾರ್ಯಗತಗೊಳಿಸುತ್ತಿರುವ ಈ ಪದ್ಧತಿಯ ವಿಷಯದಲ್ಲಿ ನಾನು ನನಗೆ ಸಾಧ್ಯವಾದಷ್ಟೂ ಶಾಂತಿಯಿಂದ ವ್ಯವಹರಿಸಿದ್ದೇನೆ. ಪ್ಲಾಂಟರುಗಳು ಇಂಗ್ಲಿಷ್ ಜನರಾಗಿ ಜನಿಸಿ, ಎಲ್ಲ ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸ್ವಾತಂತ್ರ್ಯವನ್ನು ಅನುಭವಿಸುತ್ತಿರುವಂತೆ, ಚಂಪಾರಣ್ಯದ ರೈತರಿಗೂ ಅಷ್ಟೇ ಮಟ್ಟಿನ ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸ್ವಾತಂತ್ರ್ಯವನ್ನು ಕೊಡಲು ಅಡ್ಡಿಪಡಿಸುವುದಿಲ್ಲವೆಂಬ ನಂಬಿಕೆಯಿಂದ ನಾನು ಈ ಕಾರ್ಯದಲ್ಲಿ ತೊಡಗಿದ್ದೇನೆ".

ಚಿಟ್ಟಿಯವ ಹಜಾರಿಮಹಲ್ ಧರ್ಮಶಾಲೆಯ ಮಹಡಿಯ ಮೇಲಿನ ಒಂದು ಕೊಠಡಿಯನ್ನು ಗಾಂಧೀಜಿ ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡಿದ್ದರು. ಅವರ ಸಹಾಯಕರು ಕೆಳ ಅಂತಸ್ತಿನಲ್ಲಿದ್ದು ರೈತರ ಹೇಳಿಕೆಗಳನ್ನು ಬರೆದುಕೊಳ್ಳುತ್ತಿದ್ದರು. ಅಲ್ಲಿಗೆ ಬರುವ ರೈತರ ಸಂಖ್ಯೆ ಎಷ್ಟು ಹೆಚ್ಚಾಗಿದ್ದಿತೆಂದರೆ, ಧರ್ಮಶಾಲೆಯ ಹೊರ ಬಾಗಿಲನ್ನು ಮುಚ್ಚಿರಬೇಕಾಗಿದ್ದಿತು. ಯಾರ ಹೇಳಿಕೆಗೆ ಗಾಂಧೀಜಿಯ ಲಕ್ಷ್ಯ ಆವಶ್ಯಕ ವಾಗಿದ್ದಿತೋ, ಅಂತಹವರನ್ನು ಮಾತ್ರ, ಗಾಂಧೀ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು. ಹೇಗಾದರೂ ಅನೇಕ ರೈತರು, ಗಾಂಧೀಜಿಯನ್ನು ನೋಡದೆ ಹೋಗಲು ಒಪ್ಪುತ್ತಿರಲಿಲ್ಲ. ಧರ್ಮಶಾಲೆಯ ಬಾಗಿಲು ಮಧ್ಯಾಹ್ನದ ನಂತರ ಯಾವಾಗಲೂ ತೆರೆದೇ ಇರುತ್ತಿದ್ದಿತು. ಅವರು ವಿಶಾಲವಾದ ಸೂರಿನ ಮಹಡಿಗೆ ಹೋಗಲು ಅವಕಾಶ ವಿದ್ದಿತು.

ಗಾಂಧೀಜಿಯ ಜನಪ್ರಿಯತೆ ಪ್ಲಾಂಟರುಗಳ ಮನಸ್ಸಿಗೆ ಕಿರಿಕಿರಿಯುಂಟು ಮಾಡಿತು. ಅವರು ವರ್ತಮಾನ ಪತ್ರಿಕೆಗಳಲ್ಲಿ ಗಾಂಧೀಜಿಯ ಮೇಲೂ ಅವರ ಸಹಾಯಕ ಕಾರ್ಯ ಕರ್ತರ ಮೇಲೆಯೂ ಅಪಪ್ರಚಾರವನ್ನು ಪ್ರಯತ್ನಿಸಿದರು. ಗಾಂಧೀಜಿ, ಆಗಾಗ್ಗೆ, ದೊರೆತ ಎಲ್ಲ ವಿಷಯಗಳನ್ನೂ ಚಂಪಾರಣ್ಯದಲ್ಲಿ ನಡೆಯುತ್ತಿದ್ದ ಸಂಗತಿಗಳನ್ನೂ ಕುರಿತು ಸರ್ಕಾರಿ ಅಧಿಕಾರಿಗಳಿಗೂ, ದೇಶದ ಮುಖಂಡರಿಗೂ ತಿಳಿಸುತ್ತಿದ್ದರು. ಆದರೆ ಸುದ್ದಿ ಪತ್ರಗಳಾಗಲೀ, ಅಥವಾ ಅವುಗಳಲ್ಲಿನ ಸಂಗತಿಗಳಾಗಲಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗಲು ಅವಕಾಶ ಕೊಡಲಿಲ್ಲ.

ಗಾಂಧೀಜಿಯ ವರದಿ ತಮಗೆ ತಲುಪಿದ ನಂತರ ಸರ್ಕಾರದವರು ಜಿಲ್ಲಾ ಅಧಿಕಾರಿ ಗಳಿಂದಲೂ, ಸೆಟ್ಲಮೆಂಟ್ ಆಫೀಸರಿಂದಲೂ, ಪ್ಲಾಂಟರುಗಳಿಂದಲೂ, ಜೂನ್ ೩೦ಕ್ಕೆ ಮುಂಚಿತವಾಗಿಯೇ ವರದಿಗಳನ್ನು ಕೇಳಿದರು. ಈ ನಡುವೆ ಪ್ಲಾಂಟರುಗಳು ರೈತರನ್ನು ಅದಷ್ಟು ಹಿಂಸಿಸಲು ಪ್ರಯತ್ನಿಸಿದರು. ಪ್ರೇರಿತವಾದ ಒಂದು ವೃತ್ತ ಪತ್ರಿಕೆಯ ಸುದ್ದಿ ಯಲ್ಲಿ ಒಲಾಹಾ ಕಾರ್ಖಾನೆಗೆ ಬೆಂಕಿ ಬಿದ್ದು ಯಜಮಾನನಿಗೆ ಅನೇಕ ಸಹಸ್ರ ರೂಪಾಯಿ ಗಳು ನಷ್ಟವಾಯಿತೆಂದೂ ಅದು ಉದ್ದೇಶಪೂರ್ವಕವಾಗಿ ಬೆಂಕಿಯಿಟ್ಟ ಪ್ರಕರಣವೆಂದು ಪ್ಲಾಂಟರುಗಳು ಸಂದೇಹಿಸುತ್ತಿರುವುದಾಗಿಯೂ ತಿಳಿಸಿತು. ಪಟ್ಟಭದ್ರ ಹಿತಾಸಕ್ತಿಗಳು ಮಾಡಬಹುದಾದುದನ್ನೆಲ್ಲ ಮಾಡಿದರು.

ದೊಕ್ರಾಹ ಕಾರ್ಖಾನೆಯ ಮ್ಯಾನೇಜರು ತನ್ನ ತೋಟವನ್ನು ಸಂದರ್ಶಿಸಲು, ಗಾಂಧೀಜಿಯನ್ನು ಆಹ್ವಾನಿಸಿದರು. ಗಾಂಧೀಜಿ ರಾಜೇಂದ್ರ ಪ್ರಸಾದ್ ಮತ್ತು ಪ್ರೊಫೆಸರ್ ಕೃಪಲಾನಿಯೊಂದಿಗೆ ಹೋದರು.

ತೋಟದಲ್ಲಿ, ಮುನ್ನೂರು ಜನ ರೈತರು ಗಾಂಧೀಜಿಯನ್ನು ಸಂಧಿಸಿದರು, ಸಬ್–ಡಿವಿಜನ್ ಮ್ಯಾಜಿಸ್ಟ್ರೇಟರೂ ಮ್ಯಾನೇಜರೂ ಅಲ್ಲಿದ್ದರು. ಮಾನೇಜರು ಗಾಂಧೀಜಿಗೆ ಒಬ್ಬ ರೈತನ ಪರಿಚಯ ಮಾಡಿಸಿದರು. ಅವನು "ಕಾರ್ಖಾನೆಯಲ್ಲಿ ಎಲ್ಲರೂ ಪೂರ್ಣ ಸೌಖ್ಯದಲ್ಲಿದ್ದಾರೆ. ಅವರಿಗೆ ಎಲ್ಲ ಸೌಲಭ್ಯಗಳೂ ದೊರಕುತ್ತಿವೆ" ಎಂದು ಹೇಳಿದನು.

ಕೂಡಲೇ ಉಳಿದ ರೈತರೆಲ್ಲ "ಇವನೊಬ್ಬ ದೇಶದ್ರೋಹಿ. ಸಾಹೇಬರು ಹೇಳಿಕೊಟ್ಟ ಮಾತನ್ನು ಹೇಳುತ್ತಿದ್ದಾನೆ" ಎಂದು ಕೂಗಿದರು.

ಗಾಂಧೀಜಿ, ಸೇರಿದ್ದ ರೈತರಿಗೆ "ನೀವು ನಿಮ್ಮ ಸ್ವಂತ ಇಚ್ಛೆಯಿಂದಲೇ "ಹುಂಡ" ಏರ್ಪಾಡನ್ನು ಒಪ್ಪಿದ್ದೀರೆಂದು ಮ್ಯಾನೇಜರು ಹೇಳಿದರು. ನಿಮಗೆ ಜಿರಾಯತ್ ಜಮೀನು ಬೇಡವಾದರೆ, ನೀವು ಅದನ್ನು ಹಿಂದಕ್ಕೆ ಕೊಡಬಹುದು ಎಂದು ಹೇಳಿದರು. ಆ ಮಾತನ್ನು ಕೇಳಿದ ಕ್ಷಣವೇ ರೈತರೆಲ್ಲ ಒಂದೇ ಕೊರಲಿನಲ್ಲಿ "ನಾವು ಜಿರಾಯತ್ ಭೂಮಿಯನ್ನು ಹಿಂದಕ್ಕೆ ಕೊಡುತ್ತೇವೆ. ನಮಗೆ ಅವು ಬೇಡ. ಸಾಹೇಬನೇ ಅದರಲ್ಲಿ ತನಗೆ ಬೇಕಾದುದನ್ನು ಬೆಳೆಯಲಿ" ಎಂದು ಕೂಗಿದರು.

ಮ್ಯಾನೇಜರು ಮಧ್ಯಪ್ರವೇಶಿಸಿ ಕೋಪದಿಂದ ಕೂಗಿದ "ಇದು ಅವರಿಗೆ ಬೇಡವಾದರೆ, ಅವರನ್ನು ನೀಲಿ ಬೆಳೆಯುವಂತೆ ಮಾಡುತ್ತೇನೆ" ಎಂದನು. ಗಾಂಧೀಜಿ ನಕ್ಕು ಹೀಗೆ ಹೇಳಿದರು. "ಒಂದು ನಿಮಿಷದ ಹಿಂದೆ ನೀವು 'ಹುಂಡ' ವ್ಯವಸ್ಥೆಗೂ ನೀಲಿಗೂ ಏನೂ ಸಂಬಂಧವಿಲ್ಲವೆಂದೂ, ಜಿರಾಯಿತ್ ಜಮೀನನ್ನು ಬೇಸಾಯ ಮಾಡಿ ನೀವೇ ಈಗ ಸಂಪಾದಿಸುತ್ತಿರುವುದಕ್ಕಿಂತ ಹೆಚ್ಚು ಲಾಭ ಸಂಪಾದಿಸುವಿರೆಂದೂ ಹೇಳುತ್ತಿದ್ದಿರಿ. ಈ ಪರಿಸ್ಥಿತಿಯಲ್ಲಿ ನೀವು ಈ ಜಮೀನುಗಳನ್ನು ಹಿಂದಕ್ಕೆ ತೆಗೆದುಕೊಂಡು, ಅವರಿಗೆ ಬೇಡವಾದ ಹೊರೆಯಿಂದ ರೈತರಿಗೆ ಬಿಡುಗಡೆ ಮಾಡಿದರೆ ನಿಮಗೆ ಒಳ್ಳೆಯ ಹೆಸರೂ ಹೆಚ್ಚು ಲಾಭವೂ ಬರುತ್ತದೆ".

ಈಗ ರೈತರು ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟರಿಗೇ ವಿರೋಧವಾಗಿ ದೂರು ಹೇಳತೊಡಗಿದರು. ಸಾಹೇಬರು, ಅಲ್ಲಿಂದ ಹೋದಮೇಲೆ, ಗಾಂಧೀಜಿ, ಹುಂಡ ಜಮೀನನ್ನು ಬಿಟ್ಟುಕೊಡಲು ಸಿದ್ಧರಾಗಿರುವವರ ಹೆಸರುಗಳನ್ನು ಬರೆದುಕೊಳ್ಳುವಂತೆ ಹೇಳಿದರು. ಕೆಲಸ ಮುಗಿಯ ಬೇಕಾದರೆ ಅನೇಕ ಗಂಟೆ ಹಿಡಿಯಿತು. ಗಾಂಧೀಜಿಯೂ ಅವರ ಪಂಗಡದವರೂ ರಾತ್ರಿ ೯ ಗಂಟೆ ವೇಳೆಗೆ ಚಿಟ್ಟಿಯುವನ್ನು ತಲಪಿದರು.

ಧೋಕ್ರಹ ಮತ್ತು ಲೊಹೆರಿಯ ಒಂದೇ ಆಡಳಿತಕ್ಕೆ ಸೇರಿದ ಎರಡು ಕಾರ್ಖಾನೆಗಳಾಗಿದ್ದವು. ಮೇ ೧೭ರಂದು, ಈ ಕಾರ್ಖಾನೆಗಳಿಂದ ರೈತರು, ತಮ್ಮ 'ಹುಂಡ' ಜಮೀನುಗಳನ್ನು ಬಿಟ್ಟುಕೊಡಲು ಚಿಟ್ಟಿಯಕ್ಕೆ ಬಂದರು. ಗಾಂಧೀಜಿ, ನಡೆದ ವಿಷಯಗಳನ್ನೆಲ್ಲ ವಿವರಿಸಿ, ಜಮೀನನ್ನು ಹಿಂದಕ್ಕೆ ಕೊಡಲು ಬಯಸಿದವರ ಹೆಸರನ್ನೆಲ್ಲ ತಿಳಿಸಿ ಮ್ಯಾನೇಜರಿಗೆ ಕಾಗದ ಬರೆದರು. ಎರಡೇ ದಿನಗಳೊಳಗೆ ಸುಮಾರು ೫೦೦ ಜನರು, ಪೈರಿನೊಂದಿಗೆ ತಮ್ಮ ಜಮೀನನ್ನು ಬಿಟ್ಟುಕೊಟ್ಟರು.

ಪ್ಲಾಂಟರುಗಳು ಗೊಂದಲವುಂಟು ಮಾಡಿ ವಿಚಾರಣೆ ತಡೆಗಟ್ಟಲು ನಾನಾ ರೀತಿಯಲ್ಲಿ ಪ್ರಯತ್ನಿಸಿದರು.

ಮೇ ೨೦ರಂದು ಗಾಂಧೀ, ಹೀಗೆ ಹೇಳಿದರು: "ನಾನೂ ನನ್ನ ಮಿತ್ರರೂ ನಮ್ಮ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬಾರದೆಂಬುದು ಪ್ಲಾಂಟರುಗಳ ಇಷ್ಟವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸರ್ಕಾರದ ದೈಹಿಕವಾದ ಬಲಾತ್ಕಾರ,

ಅಥವಾ ರೈತರ ಅಂಗೀಕೃತವಾದ ಮತ್ತು ಸರ್ವವಿದಿತವಾದ ಕಷ್ಟಗಳನ್ನು ಪೂರ್ಣವಾಗಿ ಪರಿಹರಿಸುವ ಖಚಿತವಾದ ವಾಗ್ದಾನ, ಇವುಗಳ ಹೊರತು, ಮತ್ತಾವುದೂ ನಮ್ಮನ್ನು ಜಿಲ್ಲೆಯಿಂದ ಹೊರಕ್ಕೆ ಸಾಗಿಸಲಾರದೆಂದು ನಾನು ಹೇಳಬಲ್ಲೆ. ನಾನು ನೋಡಿರುವ ರೈತರ ಸ್ಥಿತಿಯಿಂದ ನಮಗೆ ಒಂದು ವಿಷಯ ಸ್ಪಷ್ಟವಾಗಿದೆ. ಈ ಮಟ್ಟದಲ್ಲಿ ನಾವು ಹಿಂದಕ್ಕೆ ಹೋದರೆ ನಾವು ಮನುಷ್ಯನ ಮುಂದೆಯೂ ದೇವರ ಮುಂದೆಯೂ ಅಪರಾಧಿಗಳಾಗಿ ನಿಲ್ಲುತ್ತೇವೆ. ಮತ್ತು ಅದಕ್ಕಿಂತ ಹೆಚ್ಚು ಮುಖ್ಯವಾದುದೆಂದರೆ, ನಮ್ಮನ್ನೇ ನಾವು ಕ್ಷಮಿಸಿಕೊಳ್ಳಲು ಎಂದಿಗೂ ಸಾಧ್ಯವಾಗುವುದಿಲ್ಲ". ಗಾಂಧೀ ತಮ್ಮ ಹೇಳಿಕೆಯಲ್ಲಿ ತಮ್ಮ ಕಾರ್ಯದ ಶಾಂತ ಸ್ವಭಾವವನ್ನು ಪ್ಲಾಂಟರುಗಳಿಗೆ ಮತ್ತೆ ಖಾತರಿ ಮಾಡಿ ಕೊಟ್ಟು, ಪ್ಲಾಂಟರುಗಳು ಒಡ್ಡುವ ಬೆದರಿಕೆಗೆ ಸರ್ಕಾರ ಸೂಕ್ತವಾದ ಸಹಾಯವನ್ನು ಒದಗಿಸಬೇಕೆಂದು ಮನವಿಮಾಡಿ ಮುಗಿಸಿದರು.

ಜೂನ್ ೪ನೆ ತಾರೀಖು, ರಾಂಚಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಸರ್ ಎಡ್ವರ್ಡ್ ಗಯೆಟ್‌ರನ್ನು ನೋಡಬೇಕೆಂದು ಗಾಂಧೀಜಿಗೆ ಕರೆ ಬಂದಿತು. ರಾಂಚಿಯಿಂದ ಹಿಂದಿರು ಗಲು ಅವರಿಗೆ ಅವಕಾಶ ನಿರಾಕರಣೆಯಾದರೂ ಆಗಬಹುದೆಂದು ಗಾಂಧೀಜಿಯ ಸಹ ಕಾರ್ಯಕರ್ತರು ಹೆದರಿದರು. ಅದೇನಾದರೂ ಸಂಭವಿಸಿದರೆ ಮುಂದಿನ ಕಾರ್ಯ ವಿಧಾನ ವನ್ನು ಅವರು ಚರ್ಚಿಸಿದರು.

ಪಾಟ್ನಾದಲ್ಲಿ ಚಟುವಟಿಕೆ ಹೆಚ್ಚಾಯಿತು. ಕೆಲಸಗಾರರ ಸಭೆ ನಡೆದು, ಗಾಂಧೀಜಿಯ ಮೇಲೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡರೆ ಹಕ್ ಅಥವಾ ಮಾಲವೀಯ, ಚಂಪಾರಣ್ಯದ ಕೆಲಸವನ್ನು ವಹಿಸಿಕೊಳ್ಳಬೇಕೆಂದು ನಿರ್ಣಯವಾಯಿತು. ಮುಖಂಡ ರೊಂದಿಗೆ ಪತ್ರವ್ಯವಹಾರ ಪ್ರಾರಂಭವಾಯಿತು. ಗಾಂಧೀಜಿಯೂ ಬ್ರಜಕಿಶೋರ್ ಬಾಬುವೂ ರಾಂಚಿಗೆ ಹೊರಟರು. ವಿಶೇಷವಾಗಿ ಪಾಟ್ನಾಕ್ಕೆ ಬಂದಿದ್ದ ಮಾಲವೀಯರು ಅಲಹಾಬಾದಿಗೆ ಹಿಂದಿರುಗಿದರು.

ಲೆಫ್ಟಿನೆಂಟ್ ಗವರ್ನರೊಂದಿಗೆ ಗಾಂಧೀಜಿಯ ಭೆಟ್ಟಿಯ ತರುಣದಲ್ಲಿ, ಪಾಯಿನಿ-ಯರ್ ಪತ್ರಿಕೆ, ಮೋತಿಹಾರಿ ಕಾರ್ಖಾನೆಯ ಮಾನೇಜರು ಮಿ. ಇರ್ವಿನ್‌ರು ಬರೆದಿದ್ದ ಒಂದು ದೊಡ್ಡ ಪತ್ರವನ್ನು ಪ್ರಕಟಿಸಿತು. "ಗಾಂಧೀ, ಸದುದ್ದೇಶವುಳ್ಳ ಲೋಕೋಪ ಕಾರಿ ಎಂದು ನಾನು ನಂಬುತ್ತೇನೆ. ಆದರೆ ಅವನು ಒಬ್ಬ ವಕ್ರ ಪುರುಷ; ಧರ್ಮಾಂಧ. ದಕ್ಷಿಣ ಆಫ್ರಿಕದ ತನ್ನ ಭಾಗಶಃ ಜಯದಿಂದಲೂ ಮತ್ತು ತಾನು ದೇವರಿಂದ ತಪ್ಪು ಗಳನ್ನೆಲ್ಲ ಸರಿಪಡಿಸಲು ನಿಯಮಿಸಲ್ಪಟ್ಟವನೆಂಬ ನಂಬಿಕೆಯಿಂದಲೂ ಪೀಡಿತನಾಗಿ ದ್ದಾನೆ". ಮುಂದೆ ಪತ್ರ ಗಾಂಧೀಜಿಯ ಸಹಕಾರ್ಯಕರ್ತರ ಮೇಲೆ ಪ್ರತ್ಯಕ್ಷವಾಗಿ ಆಕ್ರೋಶ ಕಾರಿತು. "ಈ ಜನರಿಗೆ ರೈತರಮೇಲೆ ಯಾವ ಪ್ರೇಮವಿದೆ? ತಮ್ಮ ಲಾಭಕ್ಕಾಗಿ ಇವರನ್ನು ಉಪಯೋಗಿಸಿಕೊಳ್ಳುವುದಷ್ಟೆ." 'ಅಧಿಕಾರಿಗಳೂ ಅನಧಿಕಾರಿಗಳೂ ಜನತೆಯ ಮೇಲೆ ದಬ್ಬಾಳಿಕೆ ಮಾಡುವುದರಲ್ಲಿ ಒಂದಾಗಿದ್ದಾರೆ. ಜಿಲ್ಲೆ, ಭಾರತದ ಒಂದು ಮಾದರಿ. ಬ್ರಿಟಿಷ್ ರಾಜರ ಕೆಳಗೆ ಅಖಿಲ ಭಾರತವೂ ಹೀಗೆಯೇ ಇದೆ' ಎಂದು ಚಂಪಾರಣ್ಯದ ಸುಖವಾದ

ಬೇಟೆಯ ಬಯಲಿನಲ್ಲಿ ತೋರಿಸಿ ಕೊಡಲು ಕಾತುರರಾಗಿರುವ ಹೋಂ ರೂಲ್ ಚಳವಳಿಗಾರರ ಕೈಗೊಂಬೆ ಗಾಂಧೀ" ಎಂದೂ ಪತ್ರದಲ್ಲಿ ನಮೂದಾಗಿದ್ದಿತು.

ಜೂನ್ ೪ರ ವೇಳೆಗೆ ಗಾಂಧೀ ಅನುಯಾಯಿಗಳೆಲ್ಲ, ರಾಂಚಿಯಿಂದ ಸುದ್ದಿಯನ್ನು ನಿರೀಕ್ಷಿಸುತ್ತ, ತಮ್ಮ ತಮ್ಮ ಸ್ಥಳಗಳಲ್ಲಿ ಸಿದ್ಧರಾಗಿದ್ದರು. ಜೂನ್ ೫ರ ಸಂಜೆ ಗಾಂಧೀಜಿಯಿಂದ "ಇಂದಿನ ಭೆಟ್ಟಿ, ಸಮರ್ಪಕವಾಗಿತ್ತು. ನಾಳೆ ಮತ್ತೆ ಇದೆ" ಎಂಬ ಟೆಲಿಗ್ರಾಂ ಬಂದಿತು. ಅನಂತರ ಮೂರು ದಿನಗಳು ಗಾಂಧೀಜಿ ಸರ್ ಎಡ್ವರ್ಡ್ ಗಯಟ್ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ದೀರ್ಘಕಾಲದ ಭೆಟ್ಟಿಯನ್ನು ನಡೆಸಿದರು. ಅದರ ಫಲವಾಗಿ ಒಂದು ವಿಚಾರಣಾ ಸಮಿತಿ ನೇಮಿಸಲ್ಪಡಬೇಕೆಂದೂ ಅದರಲ್ಲಿ ಗಾಂಧೀಜಿ ಸಹ, ಒಬ್ಬ ಸದಸ್ಯರಾಗಿರಬೇಕೆಂದೂ ತೀರ್ಮಾನವಾಯಿತು. ಜೂನ್ ೭ರಂದು ಗಾಂಧೀಜಿ ಕಸ್ತೂರಿ ಬಾ, ದೇವದಾಸ್ ಬ್ರಜಕಿಶೋರ್ ಅವರೊಡಗೂಡಿ ಪಾಟ್ಣಕ್ಕೆ ಬಂದು, ಮರುದಿನ ಬೆಟ್ಟಿಯಗೆ ತಲಪಿದರು.

ಜೂನ್ ೧೩ರಂದು ಸರ್ಕಾರ ಒಂದು ವಿಚಾರಣಾ ಸಮಿತಿಯ ನೇಮಕವನ್ನೂ, ಅದಕ್ಕೆ ಸೆಂಟ್ರಲ್ ಪ್ರಾವಿನ್ಸಿನ ಕಮಿಷನರ್ ಮಿ. ಎಫ್.ಜಿ. ಸ್ಲೈರವರ ಅಧ್ಯಕ್ಷತೆಯನ್ನೂ ಘೋಷಿಸಿತು. ಕಮಿಟಿಯು ಸುಮಾರು ಜುಲೈ ೧೫ರಂದು ಸೇರಿ, ಮೂರು ತಿಂಗಳಿನೊಳಗೆ ತನ್ನ ಕಾರ್ಯವನ್ನು ಮುಗಿಸುವುದಾಗಿದ್ದಿತು.

ಸಮಿತಿಯ ಕಾರ್ಯ ಪ್ರಾರಂಭವಾಗುವುದಕ್ಕೆ ಮುಂಚೆ, ಗಾಂಧೀ ಬೊಂಬಾಯಿಗೆ ಭೇಟಿಕೊಡಲು ನಿರ್ಣಯಿಸಿದರು. ಅವರ ಸಹೋದ್ಯೋಗಿಗಳಿಗೂ ಬಿಡುವು ಕೊಡಲ್ಪಟ್ಟಿತು. ರೈತರಿಂದ ಹೇಳಿಕೆಗಳನ್ನು ಬರೆದುಕೊಳ್ಳುವುದು ಜೂನ್ ೧೨ರಿಂದಲೇ ನಿಂತು ಹೋಯಿತು. ಆವರೆಗೆ ಎಂಟು ಸಾವಿರಕ್ಕಿಂತಲೂ ಹೆಚ್ಚಾಗಿ ಹೇಳಿಕೆಗಳು ಬರೆದುಕೊಳ್ಳಲ್ಪಟ್ಟಿದ್ದವು. ಗೇಣಿದಾರರು ಇನ್ನೂ ಹೆಚ್ಚು ಹೆಚ್ಚಾಗಿ ಬರತೊಡಗಿದರು. ಆದರೆ ಇನ್ನು ಹೆಚ್ಚು ಹೇಳಿಕೆಗಳನ್ನು ಬರೆದುಕೊಳ್ಳುವುದಿಲ್ಲವೆಂದೂ, ಅವರ ತೊಂದರೆಗಳನ್ನೆಲ್ಲ ವಿಚಾರಣಾ ನಿಯೋಗ, ಪರಿಶೀಲಿಸುವುದೆಂದೂ ಹೇಳಲಾಯಿತು. ಆದರೂ ಹೇಳಿಕೆಗಳು, ಪೋಸ್ಟಿನಲ್ಲಿ ಬರತೊಡಗಿದವು.

ಗಾಂಧೀಜಿಯ ಗೈರುಹಾಜರಿಯಲ್ಲಿ, ಎರಡು ವಾರಗಳ ಕಾಲ, ಬೀಹಾರಿನ ಕೆಲಸಗಾರರು ಕಾಗದ ಪತ್ರಗಳನ್ನೆಲ್ಲ ವ್ಯಾಸಂಗಮಾಡಿ, ನಿಯೋಗದಲ್ಲಿ ಗಾಂಧೀಜಿಯ ಕಾರ್ಯಕ್ಕೆ ತಳಪಾಯವನ್ನು ಸಿದ್ಧಮಾಡಿಕೊಟ್ಟರು. ಗಾಂಧೀ ಸರ್ವೆಂಟ್ ಆಫ್ ಇಂಡಿಯ ಸೊಸೈಟಿಯ ಡಾ. ದೇವರೊಡಗೂಡಿ ಮೋತಿಹಾರಿಗೆ ಜೂನ್ ೨೮ರಂದು ಹಿಂದಿರುಗಿದರು.

ಸಂಗ್ರಹಿಸಲಾದ ಸಾಕ್ಷ್ಯಗಳನ್ನೆಲ್ಲ ವ್ಯಾಸಂಗ ಮಾಡಲು ಗಾಂಧಿ ಒಂದು ವಾರವನ್ನು ವಿನಿಯೋಗಿಸಿದರು. ೫ನೇ ಜುಲೈ, ಅವರು ಮೋತಿಹಾರಿಯನ್ನು ಬಿಟ್ಟು ಏಳರಂದು ರಾಂಚಿಯನ್ನು ಸೇರಿದರು. ಸಮಿತಿ, ಜುಲೈ ೧೧ರಲ್ಲಿ ಸೇರಿ ಬೆಟ್ಟಿಯ ಮೋತಿಹಾರಿ ಮತ್ತು ಇತರ ಸ್ಥಳಗಳಲ್ಲಿ ಜುಲೈ ೧೭ರಿಂದ ಸಭೆ ಸೇರಬೇಕೆಂದು ನಿರ್ಣಯಿಸಿತು.

ಸಮಿತಿಯಲ್ಲಿ ಗಾಂಧೀಜಿಯ ಹೆಸರನ್ನು ಸೇರಿಸಿದ್ದುದರಿಂದ ರೈತರ ಮನಸ್ಸಿನಲ್ಲಿ ದೊಡ್ಡ ಆಸೆಗಳು ಉಂಟಾಗಿದ್ದವು. ಜನಗುಂಪು ಅಧಿಕವಾಗಿ ಬೆಟ್ಟಿಯಗೆ ಬಂದಿತು.

ಜುಲೈ ೧೬ರ ವೇಳೆಗೆ ಹತ್ತು ಸಾವಿರಕ್ಕೆ ಕಡಿಮೆ ಇಲ್ಲದಷ್ಟು ರೈತರು ಸೇರಿದರು. ಎಲ್ಲ ಸದಸ್ಯರೂ, ಸಮಿತಿಯ ಕಾರ್ಯದಲ್ಲಿ ಮಗ್ನರಾಗಿದ್ದರು. ಆದರೆ ಗಾಂಧೀಜಿ, ಮಧ್ಯಾಹ್ನದ ಮೇಲೆ ತಪ್ಪದೆ ಹೊರಗಡೆ ಬಂದು, ಕಾತುರರಾಗಿದ್ದ ಹಳ್ಳಿಗರನ್ನು ಸಂಧಿಸುತ್ತಿದ್ದರು. "ನಿಮ್ಮ ಕಷ್ಟಗಳನ್ನೆಲ್ಲ ಪರಿಹರಿಸುವುದಕ್ಕಾಗಿಯೇ ಸಮಿತಿ ನಿಯಾಮಕವಾಗಿದೆ. ಸಮಿತಿಯ ಸಭಾಸ್ಥಾನಕ್ಕೆ ನೀವು ಗುಂಪಿನಲ್ಲಿ ನುಗ್ಗಬಾರದು. ಏನಾದರೂ ದೂರು ಹೇಳುವುದಿದ್ದರೆ ನನ್ನ ಸಹಾಯಕ ಕೆಲಸಗಾರರಲ್ಲಿ ಹೇಳಿ" ಎಂದು ಹೇಳಿದರು.

ಜುಲೈ ೧೭ರಂದು ಬೆಟ್ಟಿಯದಲ್ಲಿ ಸಾಕ್ಷಿಗಳ ವಿಚಾರಣೆ ಪ್ರಾರಂಭವಾಯಿತು. ಪ್ಲಾಂಟರುಗಳ ಪರವಾಗಿ ಮಿ. ಕೆನೆಡಿಯವರು (ಮುಜಫರ್‌ಪುರದ ಪ್ರಸಿದ್ಧ ವಕೀಲರು) ನಡವಳಿಕೆಗಳನ್ನು ನಿರೀಕ್ಷಿಸುತ್ತಿದ್ದರು. ಗಾಂಧೀಜಿಯ ಸಹಾಯಕರನ್ನೂ ಗೇಣಿದಾರರನ್ನೂ ಸಮಿತಿಯ ಸಭೆಗೆ, ಟಿಕೆಟ್‌ಗಳ ಮೂಲಕ ಬಿಡುತ್ತಿದ್ದರು. ಸೆಟ್ಲಮೆಂಟ್ ಆಫೀಸರರಾದ ಮಿ. ಸ್ವೀನಿ ಎಂಬುವರು ಮೊದಲ ಸಾಕ್ಷಿಯಾಗಿದ್ದರು. ಅವರ ವಿಚಾರಣೆಗೆ ದಿನವೆಲ್ಲ ಹಿಡಿಯಿತು. ಜುಲೈ ೧೮ರಂದು ಬೆಟ್ಟಿಯ ರಾಜ್‌ನ ಮ್ಯಾನೇಜರು ಮತ್ತು ಒಬ್ಬ ಅಧಿಕಾರಿಯ ವಿಚಾರಣೆಯಾಯಿತು. ಮರುದಿನ, ರಾಜಕುಮಾರ್ ಶುಕ್ಲನು, ಗೇಣಿದಾರರ ಪರ ವಾದವನ್ನು ಮುಂದಿಟ್ಟನು. ಒಟ್ಟು ಬೆಟ್ಟಿಯದಲ್ಲಿ ಸಮಿತಿಯ ಐದು ಸಭೆಗಳು ನಡೆದವು.

ಸಮಿತಿಯ ಆರನೆಯ ಸಭೆಯು, ಮೋತಿಹಾರಿಯಲ್ಲಿ ಜುಲೈ ೨೫ರಂದು ನಡೆಯಿತು. ಅಲ್ಲಿಯೂ ಕೂಡ ಗೇಣಿದಾರರು ದೊಡ್ಡ ಸಂಖ್ಯೆಯಲ್ಲಿ ಬಂದರು. ಎರಡು ಸಭೆಗಳ ನಂತರ, ಸಮಿತಿಯ ಸದಸ್ಯರು, ಬೆಟ್ಟಿಯಾಗೆ ಹಿಂದಿರುಗಿದರು.

ಆಗಸ್ಟ್ ೧೪ರ ವೇಳೆಗೆ ಕೊನೆಯ ಸಾಕ್ಷ್ಯ, ಬೆಟ್ಟಿಯದಲ್ಲಿ ಬರೆದುಕೊಳ್ಳಲ್ಪಟ್ಟಿತು. ಗಾಂಧೀಜಿ, ಸಮಿತಿಯ ಮುಂದೆ ಅನೇಕ ಗೇಣಿದಾರರ ಹೇಳಿಕೆಗಳನ್ನೂ ಕೋರ್ಟ್‌ಗಳ ಅನೇಕ ಜಡ್ಜ್‌ಮೆಂಟುಗಳನ್ನೂ ಇಟ್ಟರು. ಸಮಿತಿಯ ಕೆಲಸ ತಾತ್ಕಾಲಿಕವಾಗಿ ಮುಕ್ತಾಯವಾಯಿತು. ಮುಂದಲಸಭೆ ಸೆಪ್ಟಂಬರ್ ಅಂತ್ಯಕ್ಕೆ ನಿಶ್ಚಿತವಾಯಿತು. ಗಾಂಧೀಜಿ, ಆಗಸ್ಟ್ ೧೬ರಂದು ಅಹಮದಾಬಾದಿಗೆ ಹೊರಟರು. ರಾಜೇಂದ್ರ ಪ್ರಸಾದರು ಚಂಪಾರಣ್ಯದ ಕೆಲಸವನ್ನು ವಹಿಸಿಕೊಂಡರು.

ಸೆಪ್ಟಂಬರ್ ೨೨ರಂದು, ಗಾಂಧೀ, ರಾಂಚಿಗೆ ಬಂದರು. ದೀರ್ಘಕಾಲದ ಚರ್ಚೆಯ ನಂತರ, ಸಮಿತಿಯ ಸದಸ್ಯರು ಸಮಿತಿಯ ಶಿಫಾರಸುಗಳನ್ನೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಒಪ್ಪಿ ಏಕಾಭಿಪ್ರಾಯದ ವರದಿಗೆ ಅಕ್ಟೋಬರ್ ೭ರಂದು ರುಜು ಹಾಕಿದರು. ನವಂಬರ್ ೨೯ರಂದು ಮಿ. ಮಾಡ್‌ರು ಸಭೆಯಲ್ಲಿ ಮಂಡಿಸಿದ ಚಂಪಾರಣ್ಯ ವ್ಯವಸಾಯಗಾರರ ಮಸೂದೆ ಅಂಗೀಕಾರವಾಗಿ, ಕೆಲವೇ ತಿಂಗಳುಗಳಲ್ಲಿ ಮಸೂದೆ. ಕಾನೂನು ಆಯಿತು.

ರಾಂಚಿಯಿಂದ ಗಾಂಧೀ, ಚಂಪಾರಣ್ಯಕ್ಕೆ ಹಿಂದಿರುಗಿ ಅಲ್ಲಿ ಅಕ್ಟೋಬರ್ ೧೨ರ ವರೆಗೆ ಉಳಿದರು. ಅಲ್ಲಿಂದ ಅವರು ಗೇಣಿದಾರರ ಯೋಗಕ್ಷೇಮವನ್ನು ಬೀಹಾರ್ ಮುಖಂಡರಿಗೆ ವಹಿಸಿ, ಬೊಂಬಾಯಿಗೆ ಹೋದರು.

ಚಂಪಾರಣ್ಯದಲ್ಲಿ ಅವರ ಕಾರ್ಯ, ಇನ್ನೂ ಮುಗಿದಿರಲಿಲ್ಲ. ಬಡಗೇಣಿದಾರರ ಕಷ್ಟ ಮತ್ತು ದುಃಖಗಳಿಗೆ ಅವರ ಅಜ್ಞಾನವೇ ಕಾರಣವೆಂಬುದು ಗಾಂಧೀಜಿಯ ಅಭಿಪ್ರಾಯವಾಗಿತ್ತು. ಅವರು ಸ್ವಯಂಸೇವಕ ಉಪಾಧ್ಯಾಯರನ್ನು ಆಹ್ವಾನಿಸಿ ಒಂದು ಸಾರ್ವಜನಿಕ ಕರೆಯನ್ನು ಕೊಟ್ಟರು. ಕರ್ಣಾಟಕದಿಂದ ಬಾಬಾ ಸಾಹೇಬ್ ಸೋಮನ್ ಮತ್ತು ಪುಂಡಲೀಕ, ಬೊಂಬಾಯಿನಿಂದ ಅವಂತಿಕಾ ಬಾಯಿ ಗೋಖಲೆ, ಪುಣೆಯಿಂದ ಆನಂದಿಬಾಯಿ ವೈಶಂಪಾಯನ ಮತ್ತು ಶಂಕರರಾವ್ ದೇವ್ ತಮ್ಮ ಸೇವೆಯನ್ನು ಕೊಡಲು ಮುಂದೆ ಬಂದರು. ಗಾಂಧೀಜಿ ಚೋಟೆಲಾಲ್ ಸುರೇಂದ್ರನಾಥ್ ಮತ್ತು ದೇವದಾಸರನ್ನು, ಕೆಲಸದಲ್ಲಿ ಸಹಾಯಕರಾಗಲು ಆಶ್ರಮದಿಂದ ಕರೆತಂದರು. ಈ ತರುಣದಲ್ಲಿಯೇ ಮಹದೇವ ದೇಸಾಯಿ ಮತ್ತು ನರಹರಿ ಪರೇಕ್‌ರು ತಮ್ಮ ಹೆಂಡತಿಯರೊಂದಿಗೆ, ಗಾಂಧೀಜಿಯ ಬಾಳಿನೊಂದಿಗೆ ತಮ್ಮ ಬಾಳನ್ನು ಒಂದುಗೂಡಿಸಿದರು. ಕಸ್ತೂರಿ ಬಾ ಸಹ, ಈ ದಳವನ್ನು ಬಂದು ಕೂಡಿದರು.

ನವಂಬರ್ ೮ ರಂದು ಗಾಂಧೀ, ತಮ್ಮ ಸ್ವಯಂಸೇವಕರೊಡನೆ ಚಂಪಾರಣ್ಯಕ್ಕೆ ಬಂದರು. ಮೊದಲ ಪಾಠಶಾಲೆಯನ್ನು, ಮೋತಿಹಾರಿಯಿಂದ ಪೂರ್ವಕ್ಕೆ ಸುಮಾರು ೨೦ ಮೈಲಿ ದೂರದ, ಬೆಟ್ಟಿಯರಾಜ್‌ನ ಒಂದು ಹಳ್ಳಿಯಲ್ಲಿ ನವಂಬರ್ ೧೪ರಂದು ತೆರೆದರು. ಮುಂದಲ ವಾರದೊಳಗಾಗಿ ಚಿಟ್ಟಿಯದಿಂದ ವಾಯುವ್ಯಕ್ಕೆ ೪೦ ಮೈಲಿದೂರದ ಹಳ್ಳಿಯಲ್ಲಿಯೊಂದರಲ್ಲಿ ಎರಡನೆಯ ಶಾಲೆ ಪ್ರಾರಂಭವಾಯಿತು. ಒಬ್ಬ ಸಾಧು, ದೇವಸ್ಥಾನದ ಒಂದು ಜಮೀನನ್ನು, ಉಚಿತವಾಗಿ ಕೊಟ್ಟನು. ಅದರಲ್ಲಿ ಒಂದು ಹುಲ್ಲಿನ ಗುಡಿಸಲನ್ನು ಕಟ್ಟಿ ಅಲ್ಲಿಯೇ ಪಾಠಶಾಲೆಯನ್ನು ನವೆಂಬರ್ ೨೦ರಂದು ಪ್ರಾರಂಭಿಸಿದರು. ಸೋಮನ್, ಡಾಕ್ಟರ್ ದೇವ್, ಕಸ್ತೂರಿ ಬಾ ಇವರು ಈ ಶಾಲೆಯ ವ್ಯವಸ್ಥೆಯನ್ನು ವಹಿಸಿಕೊಂಡರು. ಮುಂದಿನ ಮೂರು ವಾರಗಳೊಳಗಾಗಿ ಮಧುಬನಿಯಲ್ಲಿ ಮೂರನೆಯ ಶಾಲೆ, ಪ್ರಾರಂಭವಾಯಿತು. ಮಹದೇವ ದೇಸಾಯಿ, ನರಹರಿ ಪರೇಕ್ ಮತ್ತು ಕೃಪಲಾನಿ ಈ ಶಾಲೆಯನ್ನು ನಡೆಸತೊಡಗಿದರು.

ಈ ಶಾಲೆಗಳ ವಿಷಯದಲ್ಲಿ ಗಾಂಧೀಜಿ ಹೀಗೆ ಬರೆದರು: “ನಾವು ತೆರೆಯುತ್ತಿರುವ ಈ ಶಾಲೆಗಳಲ್ಲಿ, ಹನ್ನೆರಡು ವರುಷಗಳಿಗಿಂತ ಕೆಳಗಿನವರನ್ನು ಮಾತ್ರ ಸೇರಿಸಿಕೊಳ್ಳುತ್ತಿದ್ದೇವೆ. ಸಾಧ್ಯವಾದಷ್ಟು ವಿದ್ಯಾರ್ಥಿಗಳನ್ನು ಸೇರಿಸಿ ಅವರಿಗೆ ಎಲ್ಲ ವಿಷಯಗಳಲ್ಲಿಯೂ ಜ್ಞಾನ ಬೋಧೆ ಮಾಡುವುದು, ಹಿಂದಿ ಅಥವಾ ಉರ್ದುವಿನ ತಕ್ಕ ಮಟ್ಟಿನ ತಿಳಿವಳಿಕೆ ಅದರ ಮೂಲಕ ಗಣಿತ ಚರಿತ್ರೆ ಭೂಗೋಳ ಇವುಗಳ ಸಾಮಾನ್ಯ ಜ್ಞಾನ. ಪ್ರಾಥಮಿಕ ವೈಜ್ಞಾನಿಕ ತತ್ವಗಳು, ಸ್ವಲ್ಪ ಕೈಗಾರಿಕಾ ಶಿಕ್ಷಣ ಇವು ನಮ್ಮ ಗುರಿ. ಖಚಿತ ಪಠ್ಯಕ್ರಮ ಇನ್ನೂ ತಯಾರಾಗಿಲ್ಲ. ಏಕೆಂದರೆ ನಾನು ಸವೆದಿಲ್ಲದ ದಾರಿಯಲ್ಲಿ ಹೋಗುತ್ತಿದ್ದೇನೆ. ನಮ್ಮ ಇಂದಿನ ವಿದ್ಯಾಪದ್ಧತಿಯನ್ನು ಕಂಡರೆ ನನಗೆ ಜಿಗುಪ್ಸೆ ಮತ್ತು ಅಪನಂಬಿಕೆ. ಚಿಕ್ಕಮಕ್ಕಳ ನೈತಿಕ ಮತ್ತು ಬೌದ್ಧಿಕ ಶಕ್ತಿಗಳನ್ನು ಬೆಳೆಸುವ ಬದಲು. ಅದು ಅವುಗಳನ್ನು ಕುಗಿಸುತ್ತದೆ. ನನ್ನ ಪ್ರಯೋಗದಲ್ಲಿ ನಾನು, ಇಂದಿನ ಶಿಕ್ಷಣಕ್ರಮದಲ್ಲಿರುವ ಒಳ್ಳೆಯದನ್ನು

ತೆಗೆದುಕೊಳ್ಳುವುದಲ್ಲದೆ, ಅದರ ದೋಷಗಳನ್ನು ಬಿಡುವ ಗುರಿಯನ್ನು ಹೋದಿದ್ದೇನೆ. ಮುಖ್ಯವಾದ ಗುರಿ, ಮಕ್ಕಳಿಗೆ, ಸುಸಂಸ್ಕೃತರಾದ ಮತ್ತು ಅತ್ಯುತ್ತಮ ನೀತಿವಂತರಾದ ಸ್ತ್ರೀ ಪುರುಷರ ಸಹವಾಸ ಇವೇ ನಮ್ಮ ಮುಖ್ಯಗುರಿ. ನನ್ನ ಮಟ್ಟಿಗೆ ಅದೇಶಿಕ್ಷಣ. ಆ ಗುರಿಯನ್ನು ಸಾಧಿಸಲು ಅಕ್ಷರಜ್ಞಾನ ಒಂದು ಸಾಧನೆ ಮಾತ್ರ. ಕೈಗಾರಿಕಾ ಶಿಕ್ಷಣ. ನಮ್ಮಲ್ಲಿಗೆ ಜೀವನೋಪಾಯದ ಸಹಾಯಕ ಮಾರ್ಗವನ್ನು ಹುಡುಕಿಕೊಂಡು ಬರುವ ಬಾಲಕ ಬಾಲಕಿಯರಿಗಾಗಿ. ಈ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಇಲ್ಲಿ ಮುಗಿಸಿದ ನಂತರ, ತಮ್ಮ ಕುಲಕಸಬನ್ನು ಬಿಡಬೇಕೆಂಬ ಉದ್ದೇಶವಿಲ್ಲ. ಅವರು ಶಾಲೆಯಲ್ಲಿ ಕಲಿತ ವಿದ್ಯೆಯನ್ನು ವ್ಯವಸಾಯ ಮತ್ತು ವ್ಯಾವಸಾಯಿಕ ಜೀವನವನ್ನು ಹೆಚ್ಚು ಪರಿಷ್ಕಾರವೂ ಸುಸಂಸ್ಕೃತವೂ ಆಗಿ ಮಾಡಲು ಉಪಯೋಗಿಸಬೇಕೆಂಬುದು. ನಮ್ಮ ಉಪಾಧ್ಯಾಯರು ವಯಸ್ಕರ ಸಂಪರ್ಕವನ್ನೂ ಹೊಂದುವರು, ಸಾಧ್ಯವಾದರೆ ಘರದಾ ಪದ್ಧತಿಯನ್ನೂ ಸಡಿಲಗೊಳಿಸಲು ಪ್ರಯತ್ನಿಸುವರು. ವಯಸ್ಕರಿಗೆ ಆರೋಗ್ಯ ನಿಯಮಗಳು, ಒಗ್ಗಟ್ಟಿನಲ್ಲಿ ಕೆಲಸಮಾಡುವ ಪ್ರಯೋಜನ, ಹಳ್ಳಿಯ ರಸ್ತೆ ನಿರ್ಮಾಣ ಬಾವಿ ನಿರ್ಮಾಣ ಮುಂತಾದ ಸಾಮಾಜಿಕ ಕಲ್ಯಾಣಕಾರ್ಯಗಳು ಇವುಗಳಲ್ಲಿ ಶಿಕ್ಷಣ ಕೊಡಲ್ಪಡುವುದು. ಮತ್ತು ನಮ್ಮ ಶಾಲೆಯಲ್ಲಿ ಸರಿಯಾದ ತರಪೇತಿ ಪಡೆಯದ ಪುರುಷ ಅಥವಾ ಸ್ತ್ರೀ ಉಪಾಧ್ಯಾಯರು ಇಲ್ಲದಿರುವುದರಿಂದ, ನಾವು ಸಾಧ್ಯವಾದ ಮಟ್ಟಿಗೆ ವೈದ್ಯೋಪಚಾರವನ್ನೂ ಉಚಿತವಾಗಿ ಕೊಡಲು ಯೋಚಿಸುತ್ತೇವೆ."

ಬರ್ಹರ್ವಾ ಹಳ್ಳಿಶಾಲೆಯಲ್ಲಿ ೧೪೦ ಬಾಲಕ ಬಾಲಕಿಯರಿಗೆ ಶಿಕ್ಷಣ ಕೊಡಲ್ಪಡುತ್ತಿದ್ದಿತು. ಇಲ್ಲಿ ನೆಯಿಗೆಯನ್ನು ಕಲಿಸುತ್ತಿದ್ದರು. ಜನರಿಗೆ ತಮ್ಮ ಗುಡಿಸಲುಗಳು ಬಾವಿಗಳು ರಸ್ತೆಗಳು ಹಳ್ಳಿಗಳನ್ನು ಶುದ್ಧವಾಗಿಡಲು ಸಾಮಾಜಿಕ ಕಾರ್ಯದಲ್ಲಿ ತರಪೇತಿ ಕೊಡಲಾಗುತ್ತಿದ್ದಿತು. ಪೋಷಕರಿಗೆ, ಮಕ್ಕಳನ್ನು ಶುದ್ಧವಾಗಿಯೂ ಅಚ್ಚುಕಟ್ಟಾಗಿಯೂ ಇರಿಸಲು ಕಲಿಲಾಗುತ್ತಿತ್ತು.

ಬಿತ್‌ವಾರಾ ಶಾಲೆ, ಮೊದಲು ಪೂರ್ಣ ಅಜ್ಞಾನ ತುಂಬಿದ್ದ ಊರಿನಲ್ಲಿ ಸ್ಥಾಪಿತವಾಗಿತ್ತು. ಇಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಯಾವಾಗಲೂ ೪೦ಕ್ಕೆ ಮೀರಲಿಲ್ಲ. ಅಲ್ಲಿಯ ಹವಾಗುಣ ತುಂಬ, ಅನಾರೋಗ್ಯಕರವಾಗಿತ್ತು. ಡಾ. ದೇರವರು ಹಳ್ಳಿಯವರಿಗೆ ಆರೋಗ್ಯ ಮತ್ತು ಔಷಧಿಗಳ ಪ್ರಾಥಮಿಕ ಜ್ಞಾನವನ್ನು ಪ್ರತ್ಯಕ್ಷಕಾರ್ಯದಿಂದ ತೋರಿಸಿ ಬೋಧಿಸಿದರು; ಔಷಧಿ ಕೊಡುತ್ತಿದ್ದರು.

ಈ ಹಳ್ಳಿಯ ಶಾಲೆಗಳನ್ನು ತುಂಬ ಮಿತವ್ಯಯದಿಂದ ನಡೆಸುತ್ತಿದ್ದರು. ಹಳ್ಳಿಗರು ಉಪಾಧ್ಯಾಯರಿಗೆ ಆಹಾರ ಮತ್ತು ವಸತಿಗಳನ್ನು ಒದಗಿಸಬೇಕೆಂಬುದು ಒಂದು ನಿಯಮವಾಗಿತ್ತು. ಹಳ್ಳಿಗರು ಸಂತೋಷದಿಂದ ಕಾಳು ಮತ್ತು ಇತರ ಹಸಿ ಪದಾರ್ಥಗಳನ್ನು ಕೊಡುತ್ತಿದ್ದರು. ವೈದ್ಯ ಸೌಲಭ್ಯ ಸುಲಭವಾದ ವಿಚಾರವಾಗಿತ್ತು. ಕೈಯೆಣ್ಣೆ, ಕೊಯಿನ ಮತ್ತು ಗಂಧಕದ ಮುಲಾಮು ಇವುಗಳೇ ಸ್ವಯಂಸೇವಕರಿಗೆ ಕೊಡುವ ಔಷಧಿಗಳಾಗಿದ್ದವು. ಯಾವ ರೋಗಿಗೂ ಔಷಧಿಯನ್ನು ಮನೆಗೆ ಕೊಡುತ್ತಿರಲಿಲ್ಲ.

ಶಾಲೆಯಲ್ಲಿಯೇ ಅವನಿಗೆ ಔಷಧೋಪಚಾರ ನಡೆಸಲ್ಪಡುತ್ತಿದ್ದಿತು. ಡಾ. ದೇ ಅವರು ಪ್ರತಿ ಕೇಂದ್ರವನ್ನೂ (ಶಾಲೆ) ನಿಗದಿಯಾದ ದಿನದಂದು ಸಂದರ್ಶಿಸುತ್ತಿದ್ದನು. ಅನೇಕರು ವೈದ್ಯಕೀಯ ಸೌಲಭ್ಯವನ್ನು ಪಡೆಯುತ್ತಿದ್ದರು. ಶುಚಿತ್ವ ಒಂದು ಕಷ್ಟವಾದ ಸಮಸ್ಯೆಯಾಗಿತ್ತು. ಜನ, ತಮಗಾಗಿ ಏನನ್ನೂ ಮಾಡಿಕೊಳ್ಳಲು ಸಿದ್ಧರಾಗಿರಲಿಲ್ಲ. ವ್ಯವಸಾಯದ ಕೂಲಿಗಳೂ ಸಹ ತಮ್ಮ ಸ್ವಂತ ಝಾಡಮಾಲಿಗಳಾಗಲು ಸಿದ್ಧರಾಗಿರಲಿಲ್ಲ. ಆದರೆ ಗಾಂಧೀ ಅನುಯಾಯಿಗಳು ಇದಾವುದರಿಂದಲೂ ನಿರುತ್ಸಾಹಿಗಳಾಗುವ ಮನುಷ್ಯರಾಗಿರಲಿಲ್ಲ. ಅವರು ಬೀದಿಗಳನ್ನೆಲ್ಲ ಗುಡಿಸಿದರು. ಬಾವಿಗಳನ್ನೆಲ್ಲ ಶೋಧಿಸಿದರು, ಗುಂಡಿಗಳನ್ನೆಲ್ಲ ತುಂಬಿದರು. ಹಳ್ಳಿಯವರು ತಮ್ಮಲ್ಲಿಯೇ ಸ್ವಯಂಸೇವಕರನ್ನು ತಯಾರು ಮಾಡಲು ಪ್ರೇರಿಸಿದರು.

ಗಾಂಧೀ ಕಸ್ತೂರಿ ಬಾಗೆ "ಹಳ್ಳಿಯವರು ತಮ್ಮ ಬಟ್ಟೆಗಳನ್ನು ಏಕೆ ಒಗೆದುಕೊಳ್ಳುವುದಿಲ್ಲ. ಕೇಳು" ಎಂದು ಹೇಳಿದರು. ಕಸ್ತೂರಿ ಬಾ, ಸ್ತ್ರೀಯರೊಡನೆ ಆ ವಿಚಾರವಾಗಿ ಮಾತನಾಡಿದಾಗ ಒಬ್ಬ ಮಹಿಳೆ ಅವರನ್ನು ತನ್ನ ಗುಡಿಸಿಲಿಗೆ ಕರೆದುಕೊಂಡು ಹೋಗಿ ಹೀಗೆ ಹೇಳಿದಳು "ನೋಡಿ ಇಲ್ಲಿ ಬೇರೆ ಪೆಟ್ಟಿಗೆಯಾಗಲಿ ಬೀರುವಾಗಲೀ ಇಲ್ಲ. ಅವುಗಳಲ್ಲಿ ಬಟ್ಟೆಗಳೂ ಇಲ್ಲ. ಇರುವ ಒಂದೇ ಸೀರೆಯನ್ನು ನಾನು ಧರಿಸಿದ್ದೇನೆ. ನಾನು ಸೀರೆ ಒಗೆಯುವುದು ಹೇಗೆ? ನನಗೆ ಮತ್ತೊಂದು ಸೀರೆ ಕೊಡುವಂತೆ ಗಾಂಧೀಜಿಗೆ ಹೇಳಿ ಆಗ ನಾನು ನಿತ್ಯ ಸ್ನಾನಮಾಡಿ ಶುಭ್ರವಾದ ಬಟ್ಟೆಯನ್ನು ಧರಿಸುತ್ತೇನೆ" ಆ ದಿನಗಳಲ್ಲಿ ಒಬ್ಬ ಗಂಡುಕೂಲಿಯ ಕೂಲಿ ಹತ್ತು ಪೈಸಕ್ಕೆ, ಹೆಣ್ಣು ಕೂಲಿಯದು ಆರು ಪೈಸಕ್ಕೆ, ಮಗುವಿನದು ೩ ಪೈಸಕ್ಕೆ ಹೆಚ್ಚಿರಲಿಲ್ಲ. (ಒಂದು ರೂಪಾಯಿಗೆ ೧೯೨ ಪೈಸಗಳು)

ದೀನ ಗ್ರಾಮವಾಸಿಗಳಿಗೆ ಜ್ಞಾನ ಪ್ರಚಾರ ಮಾಡುವುದರಲ್ಲಿ ಗಾಂಧೀಜಿ, ಪ್ಲಾಂಟರುಗಳ ಸಹಕಾರವನ್ನೂ ಬಯಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಅವರು ಅಡ್ಡಿ ಸಹ ಮಾಡಿದರು. ಆದುದರಿಂದ ಶಾಲೆಗಳನ್ನು ಕಾರ್ಖಾನೆ ಬಿಟ್ಟು, ಬೇರೆ ಸ್ಥಳಗಳಲ್ಲಿ ಸ್ಥಾಪಿಸಬೇಕಾಯಿತು. ಆದರೂ ಸಹ, ಪ್ಲಾಂಟರುಗಳು ಗಾಂಧೀಜಿಯ ಕಾರ್ಯಕ್ರಮಗಳಿಗಾಗಿ ರೇಗುತ್ತಿದ್ದರು. ಬಿತರ್ವಾ ಶಾಲೆಗೆ ಅದರ ಸ್ಥಾಪನೆಯಾದ ಕೂಡಲೇ ಬೆಂಕಿ ಹಾಕಿದರು. ತತ್‌ಕ್ಷಣ ಕೆಲಸಗಾರರು, ತಮ್ಮ ತಲೆಯ ಮೇಲೆಯೇ ಇಟ್ಟಿಗೆಗಳನ್ನು ಹೊತ್ತು ಹೊಸ ಕಟ್ಟಡವನ್ನು ಕಟ್ಟಿದರು. ಗಾಂಧೀ, ಸರದಿವಾರಾಗಿ ಶಾಲೆಗಳನ್ನು ಪರೀಕ್ಷಿಸಿ ಅವುಗಳ ಅಭಿವೃದ್ಧಿಗೆ ಸಲಹೆಗಳನ್ನು ಕೊಡುತ್ತಿದ್ದರು. ಆರು ತಿಂಗಳು ಕೆಲಸಮಾಡಿದ ನಂತರ ಸ್ವಯಂಸೇವಕರ ಮೊದಲ ತಂಡವನ್ನು ಬಿಡುಗಡೆ ಮಾಡಿ ಎರಡನೆಯ ತಂಡದವರು ವಹಿಸಿಕೊಂಡರು.

ಚಂಪಾರಣ್ಯದಲ್ಲಿ ಹಿಂದೆ ಋಷಿಗಳು ತಪಸ್ಸು ಮಾಡುತ್ತಿದ್ದ ಸ್ಥಳದಲ್ಲಿ, ಗಾಂಧೀಜಿ ದೇವರು ತಮಗೆ ನಿಯಮಿಸಿರುವ ಕಾರ್ಯವೇನೆಂಬುದನ್ನು ಅರಿತರು. ಮತ್ತು ಭಾರತವನ್ನು ಸ್ವತಂತ್ರವಾಗಿ ಮಾಡುವ ಒಂದು ಆಯುಧವನ್ನು ಸಿದ್ಧಪಡಿಸಿಕೊಂಡರು.

ಹೊಸ ಹುಮ್ಮಸ್ಸು

೧೯೧೭

೧೯೧೭ನೆ ಸಂವತ್ಸರದ ಬಹುಭಾಗವನ್ನು ಗಾಂಧೀಜಿ ಚಂಪಾರಣ್ಯದಲ್ಲಿ ಕಳೆದರು. ಅದರ ಜೊತೆಯಲ್ಲಿ ಅವರು ಇನ್ನೂ ಅನೇಕ ಕೆಲಸಗಳನ್ನು ಗಮನಿಸಬೇಕಾಗಿತ್ತು. ಅವರ ಆಶ್ರಮವಿದ್ದ ಕೊಚ್ರಾಬ್‌ನಲ್ಲಿ ವರ್ಷದ ಮಧ್ಯದಲ್ಲಿ ಪ್ಲೇಗು ತಲೆದೋರಿತು. ಆ ಪರಿಸರ ಗಾಂಧೀಜಿಗೆ ಇಷ್ಟವಾಗಿರಲಿಲ್ಲ. ಆಶ್ರಮ, ಹಳ್ಳಿಯಿಂದಲೂ ಪಟ್ಟಣದಿಂದಲೂ ತಕ್ಕಷ್ಟು ದೂರದಲ್ಲಿದೆ–ಆದರೆ ಅಲ್ಲಿಂದ ಕಾರ್ಯವನ್ನು ನಿರ್ವಹಿಸುವಷ್ಟುದೂರದಲ್ಲಿ–ಇರಬೇಕೆಂಬುದು ಅವರ ಇಷ್ಟವಾಗಿತ್ತು. ಕೊಚರಾಬ್‌ನ್ನು ಬಿಡಲು ಪ್ಲೇಗು, ಸರಿಯಾದ ಎಚ್ಚರಿಕೆ ಎಂದು ಗಾಂಧೀ, ಭಾವಿಸಿದರು, ಒಬ್ಬ ವ್ಯಾಪಾರಿ ಮಿತ್ರರ ಸಹಾಯದಿಂದ ಅವರು ಸಾಬರಮತಿ ನದಿ ತೀರದಲ್ಲಿ ಒಂದು ಸರಿಯಾದ ಜಮೀನನ್ನು ಸಂಪಾದಿಸಿಕೊಂಡರು. ಸಾಬರಮತಿ ಜೈಲು, ಅದರ ಸಮೀಪದಲ್ಲಿದ್ದುದು ಗಾಂಧೀಜಿಗೆ ಒಂದು ವಿಶೇಷ ಆಕರ್ಷಣೆಯಾಯಿತು.

ಜಮೀನಿನಲ್ಲಿ ಕಟ್ಟಡವಾಗಲಿ: ಮರಗಿಡಗಳಾಗಲೀ ಇರಲಿಲ್ಲ. ಅದರ ಸನ್ನಿವೇಶ ಮತ್ತು ನಿರ್ಜನತೆ ಆಕರ್ಷಣೀಯವಾಗಿತ್ತು. ಆಶ್ರಮವಾಸಿಗಳು ಕಟ್ಟಡಗಳು ಪ್ರಾರಂಭ ವಾಗುವ ವರೆಗೆ ಡೇರೆಗಳನ್ನು ಕಟ್ಟಿಕೊಂಡು, ಅಡಿಗೆ ಮನೆಯುನ್ನು ಜಿಂಕ್‌ಷೀಟ್‌ನಿಂದ ನಿರ್ಮಿಸಿ ವಾಸಿಸತೊಡಗಿದರು. ಸುಮಾರು ಇಪ್ಪತ್ತು ಎಕರೆ ವಿಸ್ತೀರ್ಣದ ವಿಶಾಲ ಭೂಮಿ ಯಲ್ಲಿ ಹಾವುಗಳ ಕಾಟವಿತ್ತು. ಅವುಗಳನ್ನು ಕೊಲ್ಲಕೂಡದೆಂಬುದು ಸಾಮಾನ್ಯ ನಿಯಮ ವಾಗಿತ್ತು. ಗಾಂಧೀಜಿ, ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ತೊಡಗಿದ್ದುದರಿಂದ, ಮಗನ್ ಲಾಲರು ಆಶ್ರಮದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು.

ಶ್ರೀಮತಿ ಬೆಸೆಂಟ್, ತಿಲಕ್, ಮತ್ತು ಗಾಂಧೀಜಿ ತುಂಬ ಪ್ರಮುಖರಾಗಿದ್ದರು. ಎಲ್ಲಿ ನೋಡಿದರೂ ಹೋಂರೂಲ್ ಎಂಬುದು ರಾಜಕೀಯ ಘೋಷಣೆಯಾಗಿತ್ತು. ಹೊಸ ಚೈತನ್ಯ ಮಿಡಿಯ ತೊಡಗಿತು.

ತಿಲಕರು ವಿಪುಲವಾಗಿ ಪ್ರವಾಸಮಾಡಿ ಡಿಲ್ಲಿ, ಮಥುರ, ನಾಗಪುರ, ಅಕೋಲ, ಗೋಧ್ರ, ಸೂರತ್, ಧುಲಿಯಾ, ಶೋಲಾಪುರ್ ಮತ್ತು ಇತರ ಸ್ಥಳಗಳಲ್ಲಿ ಸ್ಫೂರ್ತಿ ದಾಯಕವಾದ ಭಾಷಣಗಳನ್ನು ಮಾಡಿದರು. ಅವರ ಸಂದೇಶ ಹೀಗಿತ್ತು. "ನೀವು ಹೋಮ್‌ಲೀಗ್‌ಗೆ ಸೇರಿದವರೆಂದು ಹೇಳಲು ಸಿದ್ಧರಾಗಿರಿ. ನಿಮಗೆ ಹೋಂರೂಲ್ ಬೇಕೆಂದು ಹೇಳಿ. ನೀವು ಅದಕ್ಕೆ ಸಿದ್ಧರಾದಾಗ ನಿಮಗೆ ಅದು ದೊರೆಯುವುದೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಆ ಶ್ರದ್ಧೆಯಿಂದ ನೀವು ಒಂದು ವರುಷ ಎರಡು ವರುಷ ಗಳೊಳಗೆ ನಿಮ್ಮ ಗುರಿಯುನ್ನು ಸಾಧಿಸಲು ಸಾಧ್ಯವೆಂದು ನಾನು ನಂಬುತ್ತೇನೆ."

ತಿಲಕರು ಜನಸಾಮಾನ್ಯರನ್ನು ಸಂಧಿಸಿದರು. ವಿದ್ಯಾರ್ಥಿಗಳಿಗೆ, ಕೆಲಸಗಾರರಿಗೆ ರೈತರಿಗೆ ಭಾಷಣ ಮಾಡಿದರು.

ಮಾರ್ಚಿ ೧೯೧೭ರಲ್ಲಿ ಭಾರತ ಸರ್ಕಾರ, ಪ್ರಾಂತ ಸರ್ಕಾರಗಳು ಹೋಂರೂಲ್ ಚಳವಳಿಯ ವಿಷಯದಲ್ಲಿ ಅನುಸರಿಸಬೇಕಾದ ನೀತಿಯನ್ನು ಕುರಿತು, ಅವುಗಳಿಗೆಲ್ಲ ಒಂದು ಸುತ್ತೋಲೆಯನ್ನು ಕಳುಹಿಸಿದರು. ಹೋಂರೂಲನ್ನು ಪ್ರಚಾರ ಮಾಡುವ ಸಂಭವವಿರಬಹುದಾದ ಸಭೆಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಪ್ರತಿಬಂಧಿಸಲಾಗಿತ್ತು. ಭಾರತೀಯರ ಕೇಳಿಕೆಗಳನ್ನು ಸರ್ಕಾರ ಅತಿಯಾಗಿ ಮಾಡಿ ಹೇಳಿ ಕಠಿಣ ಭಾಷೆಯಲ್ಲಿ ತಿರಸ್ಕರಿಸಿ, ಜನರು ಅಂತಹ ಕಡೆ ಹೋಗಕೂಡದೆಂದು ನಿಷೇಧಿಸಿ, ದಮನ ಕ್ರಮಗಳನ್ನು ಕೈಗೊಂಡರು.

ಮಹಾರಾಷ್ಟ್ರವನ್ನು ಬಿಟ್ಟರೆ, ಮದರಾಸು ತುಂಬು ಚಳುವಳಿಯ ಪ್ರಾಂತವಾಗಿತ್ತು. ಶ್ರೀಮತಿ ಬೆಸೆಂಟರು ಅದರ ಹಿನ್ನೆಲೆಯಲ್ಲಿ ಶಕ್ತಿಯಾಗಿದ್ದರು, ಆ ಐರಿಷ್ ಮಹಿಳೆ, ತಮ್ಮ ವಾಕ್ ಚಾತುರ್ಯದಿಂದಲೂ ನ್ಯೂ ಇಂಡಿಯ ಪತ್ರಿಕೆಯಲ್ಲಿ ಚೈತನ್ಯಪೂರ್ಣ ಲೇಖನಗಳಿಂದಲೂ, ಹೋಂರೂಲಿಗೆ ಕಹಳೆಯ ಕರೆಯನ್ನು ಕೊಟ್ಟಳು. ಅವಳ ಪತ್ರಿಕೆ ಮದರಾಸ್ ದಬ್ಬಾಳಿಕೆಯ ಕೋಪಕ್ಕೆ ತುತ್ತಾಯಿತು. ಆಕೆ, ಹೆದರದೆ ಸರ್ಕಾರವನ್ನು ಎದುರಿಸಿದಳು. ಸರ್ಕಾರ ದಕ್ಷಿಣ ಭಾರತದಲ್ಲಿ ಜಸ್ಟಿಸ್ ಪಾರ್ಟಿಗೆ ಸಹಾಯಮಾಡಿದರು. ಆ ಪಾರ್ಟಿಯಲ್ಲಿ ಬ್ರಾಹ್ಮಣೇತರ ಜಮೀನುದಾರರು, ಧನಿಕ ವರ್ತಕರು ಇದ್ದರು. ಅವರೆ ತಾವು ಹೋಂರೂಲಿಗೆ ವಿರೋಧಿಗಳೆಂದು ಘೋಷಿಸಿ, ಬ್ರಿಟಿಷ್ ಸರ್ವಾಧಿಕಾರವನ್ನು ಬಲಗೊಳಿಸಿ, ಕಾಂಗ್ರೆಸ್ ಧ್ಯೇಯಕ್ಕೆ ಹೋರಾಡುತ್ತಿದ್ದವರನ್ನೆಲ್ಲ ಎದುರಿಸಲು ಪ್ರಾರಂಭಿಸಿದರು.

ಜೂನ್ ೧೬ರಂದು, ಮದರಾಸ್ ಗೌರ್ನರ್ ಲಾರ್ಡ್ ಪೆಂಟ್ಲೆಂಡ್‌ರು ಶ್ರೀಮತಿ ಬೆಸಂಟರ ಮೇಲೆಯೂ ಅವರ ಸಹ ಕೆಲಸಗಾರರ ಮೇಲೆಯೂ ಒಂದು ಪ್ರತಿಬಂಧಕಾಜ್ಞೆಯನ್ನು (ಪ್ರದೇಶ ನಿರ್ಬಂಧಾಜ್ಞೆಯನ್ನೂ) ಜಾರಿ ಮಾಡುವುದರ ಮೂಲಕ, ಅವರ ಬಾಯಿ ಮುಚ್ಚಲು ಪ್ರಯತ್ನಿಸಿದರು. ಪ್ರತಿಬಂಧಾಜ್ಞೆಯ ವಿರುದ್ಧ ದೇಶದಲ್ಲೆಲ್ಲ ಚಳುವಳಿ ಎದ್ದಿತು. ಅಧಿಕಾರಶಾಹಿಯ ನಿರೀಕ್ಷಣೆಗೆ ವಿರೋಧವಾಗಿ, ಹೋಂರೂಲ್ ಚಳುವಳಿ ಮುಂದುವರಿಯುತ್ತಲೇ ಹೋಯಿತು.

ಹೋಂ ರೂಲ್ ಎಂಬ ಸಂಕ್ಷೇಪ ಪದಗಳೇ ಜನಪ್ರಿಯ ಘೋಷಣೆಯಾಯಿತು. "ಇದು ಬ್ರಿಟನ್‌ನಿಂದ ಬೇರೆಯಾಗುವ ಚಳುವಳಿಯಲ್ಲ; ಸಾಮ್ರಾಜ್ಯದೊಳಗೇ ಸ್ವಾತಂತ್ರ್ಯ" ಎಂಬುದು ಸ್ಪಷ್ಟವಾಗಿ ಘೋಷಿಸಲ್ಪಟ್ಟಿತು. ತೀವ್ರವಾದಿಗಳು, ಮಂದಗಾಮಿಗಳು, ಕಾಂಗ್ರೆಸ್‌ನವರು ಮುಸ್ಲಿಂಲೀಗ್ ಎಲ್ಲರ ಕೇಳಿಕೆಯೂ ಅದೇ ಆಗಿತ್ತು. ಯುದ್ಧ ಪ್ರಯತ್ನಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಪ್ರತಿಯಾಗಿ ನಾಯಕರೆಲ್ಲ, ಜನತೆ ಬ್ರಿಟನ್ನಿಗೆ ಸಹಾಯ ಮಾಡಬೇಕೆಂದು ಹೇಳಿದರು. ತಿಲಕರು ಸೈನ್ಯದಲ್ಲಿ ಸೇರುವಂತೆ ಜನರಿಗೆ ಹೇಳಿದರು. "ನಮ್ಮ ಸ್ವಂತ ಹಿತರಕ್ಷಣೆಗಾಗಿಯಾದರೂ, ನಮಗೆ ಇಂಗ್ಲೆಂಡಿನ ರಕ್ಷಣೆ

ಬೇಕು. ಹೋಂರೂಲಿನ ಹಾಡನ್ನು ಈ ಮಟ್ಟಿಗೆ ನಾವು ತಿರುಗಿಸಬೇಕು. ಇಂಗ್ಲೆಂಡಿನೊಂದಿಗೆ ನಮ್ಮ ಸಂಪರ್ಕ ಮತ್ತು ಅದು ನಮಗೆ ಕಲಿಸಿದ ಶಿಕ್ಷಣ ಇವುಗಳೇ ಇಂದು ನಿಮ್ಮ ಹೃದಯವನ್ನು ತುಂಬುತ್ತಿರುವ ಮಹತ್ವಾಕಾಂಕ್ಷೆಗೆ ಅವಕಾಶ ಮಾಡಿಕೊಟ್ಟವು ಎಂಬುದನ್ನು ನೀವು ಮರೆಯಬಾರದು".

ಜುಲೈ ೨೮ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಮತ್ತು ಮುಸ್ಲಿಂಲೀಗಿನ ಒಂದು ಜಂಟಿಸಭೆ, ನಡೆಯಿತು. ಲಕ್ನೋದಲ್ಲಿ ಅಂಗೀಕರಿಸಿದ ರಾಜಕೀಯ ಸುಧಾರಣೆಗಳನ್ನು ವಿವರಿಸಲು, ಇಂಗ್ಲೆಂಡಿಗೆ ಮಿ. ಜಿನ್ನಾ, ಸಪ್ರು, ಮತ್ತು ವಜೀರ್ ಅಹಮ್ಮದ್ ಅವರ ಒಂದು ಸಣ್ಣ ನಿಯೋಗವನ್ನು ಗೊತ್ತು ಪಡಿಸಲಾಯಿತು. ನಿಯೋಗವು, ಸಾಮ್ರಾಜ್ಯ ಸರ್ಕಾರ. ಇಂಡಿಯವನ್ನು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸ್ವಯಮಾಡಳಿತದ ದೇಶವನ್ನಾಗಿ ಒಪ್ಪುವ ಸ್ಪಷ್ಟ ಹೇಳಿಕೆಗೆ, ಬ್ರಿಟಿಷ್ ಸರ್ಕಾರದ ಘೋಷಣೆಗಾಗಿ ಕೇಳಿತು. ಈ ಜಂಟಿ ಸಭೆಯಲ್ಲಿ ತಿಲಕರ ಅಭಿಪ್ರಾಯ ಮಹತ್ವಪೂರ್ಣವಾಗಿ ಮೊಳಗಿತು.

ಶ್ರೀಮತಿ ಬೆಸೆಂಟ್ ಮತ್ತು ಅವರ ಸಹ ಕೆಲಸಗಾರರ ಮೇಲಿನ ಪತಿಬಂಧಕಾಜ್ಞೆಯನ್ನು ತೆಗೆಸಬೇಕೆಂದೂ, ಆಲಿ ಸಹೋದರರು ಮೌಲಾನಾ ಆಜಾದ್ ಇವರ ಬಿಡುಗಡೆಗೆ ಪ್ರಯತ್ನಿಸಲು ಅಹಿಂಸಾತ್ಮಕ ಅಸಹಕಾರ ಚಳುವಳಿಯ ಕ್ರಮವನ್ನು ಅನುಸರಿಸಬೇಕೆಂದು ಜಂಟಿಸಭೆ ನಿರ್ಣಯಿಸಿತು. ಶ್ರೀಮತಿ ಬೆಸೆಂಟರ ಬಿಡುಗಡೆಗಾಗಿ ಬರಿಯ ಪ್ರಾರ್ಥನೆ ಅಥವಾ ಅರ್ಜಿಗಳನ್ನು ಅರ್ಪಿಸಬೇಕೆನ್ನುವವರ ವಾದವನ್ನು ತಿಲಕರು ವಿರೋಧಿಸಿದರು. "ಆಕೆಯನ್ನು ನಾವು ಎಷ್ಟರಮಟ್ಟಿಗೆ ಪ್ರೀತಿಸಿ ಗೌರವಿಸುತ್ತೇವೆಂಬುದರ ಗುರುತಿಗಾಗಿ ಆಕೆಯನ್ನು ಮುಂದಿನ ಕಾಂಗ್ರೆಸ್ ಅಧ್ಯಕ್ಷಿಣಿಯಾಗಿ ಆರಿಸೋಣ" ಎಂದರು.

ಜಾಗತಿಕ ಸಂಗತಿಗಳು ಮತ್ತು ಭಾರತೀಯರ ಮನೋಭಾವ, ಇವುಗಳಿಂದ ಸರ್ಕಾರಕ್ಕೆ ಸ್ವಲ್ಪ ಬುದ್ಧಿ ಬಂದಿತು. ಮೆಸಪೊಟೋಮಿಯಾದಲ್ಲಿ ಯುದ್ಧದಲ್ಲಿ ಇಂಗ್ಲಿಷರಿಗೆ ಅಪಜಯವಾಯಿತು. ಮತ್ತು ಮಾಂಟೆಗುರವರು ಭಾರತದ ಸೆಕ್ರುಟರಿಯಾದ ಆಸ್ಟಿನ್ ಚೇಂಬರ್‌ಲೇನರನ್ನು ನಿರ್ದಯವಾಗಿ ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ಭಾರತದಿಂದ ಯುದ್ಧ ಪ್ರಯತ್ನಕ್ಕೆ ತಕ್ಕಷ್ಟು ಜನರನ್ನೂ ಹಣವನ್ನೂ ಒದಗಿಸದೆ ಉಂಟುಮಾಡಿರುವ ಗೊಂದಲಕ್ಕಾಗಿ ಕಟುವಾಗಿ ಟೀಕಿಸಿದರು. ಮಾಂಟೆಗುರವರು ಭಾರತ ಸರ್ಕಾರವನ್ನು "ಅದೊಂದು ಮರದ ಕೊರಡು, ಕಬ್ಬಿಣದ ತುಂಡು, ಹಳೆಕಂದಾಚಾರ; ಇಂದಿನ ಯುಗದ ಕಾರ್ಯಗಳಿಗೆ ನಿರುಪಯುಕ್ತ" ಎಂದು ವರ್ಣಿಸಿದರು. ಪರಿಣಾಮ ಚೇಂಬರ್‌ಲೇನ್‌ರ ರಾಜಿನಾಮೆ; ಮಾಂಟೆಗೂ ಇಂಡಿಯಾ ಸೆಕ್ರುಟರಿಯಾಗಿ ಅಧಿಕಾರ ಸ್ವೀಕಾರ. ಅಧಿಕಾರವನ್ನು ವಹಿಸಿಕೊಂಡ ತರುಣದಲ್ಲಿಯೇ ಆಗಸ್ಟ್ ೧೭ರಂದು ಮಾಂಟೆಗೂ ಈ ಘೋಷಣೆಯನ್ನು ಹೊರಡಿಸಿದರು.

"ಬ್ರಿಟಿಷ್ ಸರ್ಕಾರದ ರಾಜನೀತಿ–ಭಾರತ ಸರ್ಕಾರವೂ ಅದನು ಪೂರ್ಣವಾಗಿ ಒಪ್ಪುತ್ತದೆ–ಭಾರತೀಯರ ಸಹಕಾರವನ್ನು ಆಡಳಿತದ ಎಲ್ಲ ಬಾಬುಗಳಲ್ಲಿಯೂ

ಹೆಚ್ಚಿಸಿಕೊಂಡು ಹೋಗಿ, ಸ್ವಯಮಾಡಳಿತವುಳ್ಳ ಸಂಸ್ಥೆಗಳನ್ನು ಕ್ರಮಶಃ ಬೆಳಸಿ,ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಭಾರತ ಒಂದು ಸ್ವಯಮಾಡಳಿತದ ಆಂತರಿಕ ಭಾಗವಾಗುವಂತೆ ಮೆಟ್ಟಲು ಮೆಟ್ಟಲಾಗಿ ಸಾಧಿಸುವುದೇ ಆಗಿದೆ. ಈ ಮಾರ್ಗದಲ್ಲಿ ಆದಷ್ಟು ಜಾಗ್ರತೆ ಪರಿಣಾಮಕಾರಿಯಾದ ಹೆಜ್ಜೆಗಳನ್ನಿಡಬೇಕೆಂದು ಅವರು ನಿರ್ಣಯಿಸಿದ್ದಾರೆ.

"ಈ ನೀತಿಯಲ್ಲಿ, ಅಭಿವೃದ್ಧಿ, ಹಂತಹಂತವಾಗಿ ಮಾತ್ರ ಸಾಧ್ಯವೆಂದು ನಾನು ಹೇಳುತ್ತೇನೆ. ಬ್ರಿಟಿಷ್ ಸರ್ಕಾರ ಮತ್ತು ಭಾರತ ಸರ್ಕಾರದ ಮೇಲೆ ಭಾರತೀಯ ಜನತೆಯ ಕಲ್ಯಾಣ ಮತ್ತು ಪುರೋಭಿವೃದ್ಧಿಯ ಹೊಣೆಗಾರಿಕೆ ನಿಂತಿದೆ. ಅವರೇ ಈ ಸುಧಾರಣೆಗಳ ಪ್ರತಿಯೊಂದು ಹೆಜ್ಜೆಯ ಕಾಲ ಮತ್ತು ಪ್ರಮಾಣದ ನಿರ್ಣಯಕಾರರಾಗಬೇಕು. ಮತ್ತು ಅವರು ಈ ಬಗೆಯ ಸೇವಾಸೌಲಭ್ಯಗಳನ್ನು ಅನುಭವಿಸುವ ಜನತೆಯಿಂದ ಸಿಕ್ಕುವ ಸಹಕಾರದಿಂದಲೂ ಮಾರ್ಗದರ್ಶನ ಪಡೆಯುತ್ತಾರೆ. ಮತ್ತು ಸುಧಾರಣೆಗಳನ್ನು ಸ್ವೀಕರಿಸುವ ಈ ಜನರ ಜವಾಬ್ದಾರಿಯ ಬುದ್ಧಿಯ ಮೇಲೆ ಎಷ್ಟರಮಟ್ಟಿಗೆ ಸರ್ಕಾರ ನಂಬಬಹುದು ಎಂಬುದರ ಮೇಲೆಯೂ ಸುಧಾರಣೆಗಳ ಕಾಲ ಮತ್ತು ಪ್ರಮಾಣ ನಿರ್ಣಯವಾಗುತ್ತದೆ. ಪಾರ್ಲಿಮೆಂಟಿಗೆ ಸಕಾಲದಲ್ಲಿ ಅರ್ಪಿಸುವ ಸಲಹೆಗಳ ಮೇಲೆ ಚರ್ಚಿಸಲು ಬೇಕಾದಷ್ಟು ಅವಕಾಶವನ್ನು ಸಾರ್ವಜನಿಕರಿಗೆ ಒದಗಿಸಲಾಗುವುದು"

ಈ ಹೊಸ ಕಾರ್ಯನೀತಿಗನುಗುಣವಾಗಿ ಶ್ರೀಮತಿ ಬೆಸೆಂಟ್ ಮತ್ತು ಆಕೆಯ ಸಹೋದ್ಯೋಗಿಗಳನ್ನು ಸಪ್ಟಂಬರ್‌ನಲ್ಲಿ ಬಿಡುಗಡೆ ಮಾಡಲಾಯಿತು. ಅಕ್ಟೋಬರ್ ೬ರಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮತ್ತು ಮುಸ್ಲಿಂಲೀಗ್‌ನ ಜಂಟಿಸಭೆ ಅಲಹಾಬಾದಿನಲ್ಲಿ ನಡೆಯಿತು. ಅದರಲ್ಲಿ ವೈಸರಾಯರಲ್ಲಿಗೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಲ್ಲಿಗೂ ಒಂದು ನಿಯೋಗವನ್ನು ಕಳುಹಿಸಬೇಕೆಂದೂ ಅವರು ಕಾಂಗ್ರೆಸ್-ಲೀಗ್ ಸುಧಾರಣಾ ಯೋಜನೆಯನ್ನು ಅವರ ಮುಂದೆ ಪ್ರತಿಪಾದಿಸಬೇಕೆಂದೂ ತೀರ್ಮಾನಿಸಲಾಯಿತು. ಅಂತೆಯೇ ನವಂಬರ್ ೨೬ರಂದು ತಿಲಕ್, ಗಾಂಧೀ, ಜಿನ್ನಾ, ಸಪ್ರು, ಮೋತಿಲಾಲ್ ಇವರೊಡಗೂಡಿದ ನಿಯೋಗ ಚೆಲ್ಮ್ಸ್ ಫರ್ಡ್‌ರನ್ನೂ ಭಾರತಕ್ಕೆ ಆಗಮಿಸಿದ ಮೊದಲನೆಯ ಸ್ಟೇಟ್ ಸೆಕ್ರೆಟರಿ ಮಾಂಟೆಗುರವರನ್ನೂ ಭೇಟಿ ಮಾಡಿತು.

ಮಾಂಟೆಗುರ ಭಾರತದ ಭೇಟಿಯಿಂದಲೂ ಘೋಷಣೆಯಿಂದಲೂ ತಮ್ಮ ಕಾರ್ಯಕ್ರಮವನ್ನು ಸ್ವಲ್ಪವೂ ಬದಲಾಯಿಸದ ಭಾರತದ ಒಬ್ಬರೇ ಮುಖಂಡರೆಂದರೆ ತಿಲಕರು. ಕಾಂಗ್ರೆಸ್ ಲೀಗ್ ಕೇಳಿಕೆಯ ಪ್ರಾಮುಖ್ಯತೆಗೆ ಜನರನ್ನು ಜಾಗೃತಿಗೊಳಿಸಲು ತಿಲಕರು ತಮ್ಮ ಕಾರ್ಯವನ್ನು ಮುಂದುವರಿಸಿದರು. ನವಂಬರ್ ೨೭ರಂದು ತಿಲಕರು ಮಾಂಟೆಗೂರೊಂದಿಗೆ ದೀರ್ಘ ಕಾಲದ ಸಂದರ್ಶನ ನಡೆಸಿದರು. ತಿಲಕರನ್ನು ಕುರಿತು ಮಾಂಟೆಗು ತಮ್ಮ ಡೈರಿಯಲ್ಲಿ ಹೀಗೆ ಬರೆದರು. "ಅವರು ಈ ಗಳಿಗೆಯಲ್ಲಿ ಭಾರತದಲ್ಲಿ ಅತ್ಯಂತ ಶಕ್ತ ಪ್ರಭಾವಾನ್ವಿತ ವ್ಯಕ್ತಿ. ಅವರು ಮನಸ್ಸು ಮಾಡಿದರೆ ಯುದ್ಧ ಪ್ರಯತ್ನದಲ್ಲಿ ಪರಿಣಾಮಕಾರಿಯಾಗಿ ಸಹಾಯ ಮಾಡಬಲ್ಲರು."

ಕಾಂಗ್ರೆಸ್–ಲೀಗ್ ರಾಜಕೀಯ ಸುಧಾರಣಾ ಯೋಜನೆಯ ರಚನೆಯಲ್ಲಿ ಗಾಂಧೀಜಿಯ, ಕೈವಾಡವಿಲ್ಲದಿದ್ದರೂ ಅವರು ಅದಕ್ಕೆ ಗುಜರಾತಿನಲ್ಲಿ ಸಾವಿರಾರು ಹಸ್ತಾಕ್ಷರಗಳನ್ನು ಸಂಪಾದಿಸಿ ಅದನ್ನು ಪ್ರಚಾರ ಮಾಡಿದರು. ಆ ಅರ್ಜಿಯನ್ನು ಅನಂತರ ಮಾಂಟೆಗುರಿಗೆ ಅರ್ಪಿಸಲಾಯಿತು. ಜನರು ರುಜು ಹಾಕುವುದಕ್ಕೆ ಮುಂಚೆ ಯೋಜನೆಯ ಅರ್ಥವ್ಯಾಪ್ತಿ ಇವುಗಳನ್ನೆಲ್ಲ ಅವರಿಗೆ ಸರಿಯಾಗಿ ವಿವರಿಸಿ ಅನಂತರ ಅವರು ರುಜುವನ್ನು ಪಡೆಯಬೇಕೆಂದು ಗಾಂಧೀ ಒತ್ತಾಯ ಮಾಡಿದರು.

ನವಂಬರ್‌ನಲ್ಲಿ ಗುಜರಾತ್ ರಾಜಕೀಯ ಕಾರ್ಯಕ್ರಮದ ಪ್ರಾರಂಭ–ತಿಲಕರು ಬರುವವರೆಗೆ–ಸ್ವಲ್ಪ ನಿಧಾನವಾಯಿತು.ಗಾಂಧೀಜಿ ವಿಳಂಬಕ್ಕಾಗಿ ಕ್ಷಮಾಯಾಚನೆಯ ಕೆಲವು ಮಾತುಗಳನ್ನು ಹೇಳಿ ತಾವು ಅದಕ್ಕೆ ಜವಾಬ್ದಾರರಲ್ಲವೆಂದು ಹೇಳಿ, ಸ್ವಲ್ಪ ವಿನೋದವಾಗಿ "ನಾವು ಹೋಂರೂಲನ್ನು ಕೇಳುತ್ತಿದ್ದೇವೆ. ೪೫ ನಿಮಿಷ ಸಾವಕಾಶವಾಗಿ ಅದು ಬಂದರೆ ಅದಕ್ಕಾಗಿ ಕೊರಗಬೇಕಾದುದಿಲ್ಲ"ವೆಂದು ಹೇಳಿದರು. ಕಾಲಮೀರಿದುದಕ್ಕೆ ಅವರು ತಿಲಕರನ್ನೂ ಸಹ ಬಿಡಲಿಲ್ಲ.

ಮೊದಲನೆಯ ನಿರ್ಣಯ ಹೀಗಿತ್ತು. "ನಾವು ಚಕ್ರವರ್ತಿಗಳಿಗೆ ರಾಜಭಕ್ತಿಯನ್ನು ಈ ಮೂಲಕ ಸೂಚಿಸುತ್ತೇವೆ". ಗಾಂಧೀ, ನಿರ್ಣಯವನ್ನು ಓದಿ, ಅದನ್ನು ಹರಿದು ಎಸೆದರು. "ಇಂತಹ ನಿರ್ಣಯವನ್ನು ಅಂಗೀಕರಿಸುವುದು ಕೇವಲ ಅಸಭ್ಯತೆಯಾದೀತು. ಎಲ್ಲಿಯವರೆಗೆ ನಾವು ದಂಗೆ ಏಳುವುದಿಲ್ಲವೋ ಅಲ್ಲಿಯ ವರೆಗೆ ನಾವು ರಾಜಭಕ್ತಿಯುತ ಪ್ರಜೆಗಳೆಂದೇ ಅರ್ಥ. ರಾಜಸಮ್ಮೇಳನದಲ್ಲಿ ರಾಜಭಕ್ತಿಯ ನಿರ್ಣಯ ಯಾಕೆ ಮಾಡಲಿಲ್ಲ ಎಂದು ಪ್ರಶ್ನೆ ಕೇಳಿದರೆ, ಅವರಿಗೆ ನಿಸ್ಸಂಕೋಚವಾಗಿ "ಅದೆಲ್ಲ ಗಾಂಧೀ ಮಾಡಿದ್ದು ಎಂದು ಹೇಳಿ" ಎಂದರು.

ತಿಲಕರು ಮರಾಠಿಯಲ್ಲಿ ಭಾವೋದ್ರೇಕಕರವಾದ ಭಾಷಣ ಮಾಡಿದರು. ವಿಷಯ ಹೋಮ್‌ರೂಲ್. ಅವರು ಹೀಗೆ ಹೇಳಿದರು:"ಸರ್ಕಾರ, ಭಾರತವನ್ನು ತಾವು ಉಚ್ಛ್ರಾಯ ಸ್ಥಿತಿಗೆ ತಂದೆವೆಂದು ಹೇಳಿಕೊಳ್ಳುತ್ತಾರೆ. ಅದನ್ನು ಒಪ್ಪಬೇಕೆಂದು ನನಗೂ ಇಷ್ಟ. ಆದರೆ ವಸ್ತುಸ್ಥಿತಿ, ಅದಕ್ಕೆ ವಿರೋಧವಾಗಿದೆ. ಅವರ ಭಾರತದ ಮುನ್ನೂರು ವರುಷಗಳ ಕೆಲಸದಲ್ಲಿ ಜನರನ್ನು ಕೈಗಾರಿಕೆಯಲ್ಲಿ ತಯಾರಿಸುವುದಕ್ಕಾಗಿಯಾಗಲೀ, ಇತರ ವಿಧದಲ್ಲಿ ಸ್ವಾವಲಂಬಿಯಾಗುವುದಕ್ಕಾಗಲೀ ಏನು ಕಾರ್ಯ ಮಾಡಿದ್ದಾರೆಂದು ನಾನು ತಿಳಿಯಬಯಸುತ್ತೇನೆ." ತಿಲಕರು, ಬ್ರಿಟಿಷ್ ಆಳ್ವಿಕೆಯನ್ನು ದಾದಾಭಾಯಿ ನವರೋಜಿ ತೆಗಳಿರುವುದನ್ನು ಪ್ರಸ್ತಾಪಿಸಿ. ಆ ದಿವಂಗತ ದೇಶಭಕ್ತರ ಉತ್ತಮಕಾರ್ಯಕ್ಕಾಗಿ ಹೃತ್ಪೂರ್ವಕ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು ಇಂಗ್ಲಿಷರ ಸೋಲನ್ನು ಪ್ರಸ್ತಾಪಿಸಿ ಅವರು "ಬೇಕಾಗಿರುವುದೇನೆಂದರೆ, ಭಾರತೀಯರ ಹೃದಯವನ್ನು ಮುಟ್ಟಬೇಕಾದುದು. ಅದು ಆಗುವ ವರೆಗೆ ಭಾರತದಿಂದ ಹೆಚ್ಚು ಸಹಾಯವನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಜನರಿಗೆ ಸ್ವಯಮಾಡಳಿತ ಬೇಕಾಗಿರುವುದು, ತಮಗಾಗಿ ಮಾತ್ರವಲ್ಲ; ಚಕ್ರಾಧಿಪತ್ಯದ ಒಳಿತಿಗಾಗಿ ಸಹ" ಎಂದು ಹೇಳಿದರು.

ತಿಲಕ್ ಇನ್ನೂ ಹೀಗೆ ಹೇಳಿದರು. "ಯಾವುದೇ ಹೋರಾಟದಲ್ಲಿ ಅಥವಾ ಉತ್ಕಟ ಪರಿಸ್ಥಿತಿಯಲ್ಲಿ, ತೃಪ್ತವಾದ ಮತ್ತು ಸ್ವಯಮಾಡಳಿತವುಳ್ಳ ಇಂಡಿಯ, ಚಕ್ರಾಧಿಪತ್ಯಕ್ಕೆ ಮಹತ್ವವಾದ ನಂಬಲರ್ಹವಾದ ಆಸ್ತಿ. ಪ್ರಪಂಚದಲ್ಲೆಲ್ಲ ಪ್ರಜಾಪ್ರಭುತ್ವದ ಪ್ರಬಲಗಾಳಿ ಹಾಯ್ದು ಹೋಗುತ್ತಿದೆ. ಬ್ರಿಟಿಷ್ ಸರ್ಕಾರ ಸಹ, ರಷ್ಯಾದ ಕ್ರಾಂತಿಯನ್ನು ಈ ಯುದ್ಧದ ಪ್ರಥಮ ಮಹತ್ ಜಯವೆಂದು ಸ್ವಾಗತಿಸಿತು. ಲಾರ್ಡ್ ಸಿಡನ್‌ಹ್ಯಾಂರು, 'ನಾವು ಭಾರತದಲ್ಲಿ ಬ್ರಿಟಿಷರ ಕಷ್ಟಗಳಿಂದ ಲಾಭಪಡೆಯಲು ಸ್ವಯಮಾಡಳಿತದ ಚಳುವಳಿ ಮಾಡುತ್ತಿದ್ದೇವೆನ್ನುವುದು' ಸುಳ್ಳು. ನಾವು ಮೂವತ್ತು ವರುಷಗಳಿಗಿಂತ ಹೆಚ್ಚು ಕಾಲದಿಂದ ಸ್ವಯಮಾಡಳಿತಕ್ಕಾಗಿ ಚಳುವಳಿ ಮಾಡುತ್ತಿದ್ದೇವೆ. ಪ್ರಪಂಚದಲ್ಲೆಲ್ಲ ಸ್ವಯಮಾಡಳಿತ ಪ್ರಚಾರದಲ್ಲಿ ಬರುತ್ತಿದೆ. ಭಾರತ ಮಾತ್ರ, ತೆಪ್ಪಗೆ ಕುಳಿತಿರಬೇಕೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ."

ಅದೇ ಡಿಸೆಂಬರ್ ಕೊನೆಯಲ್ಲಿ ನಡೆದ ಕಲ್ಕತ್ತ ಕಾಂಗ್ರೆಸ್‌ನಲ್ಲಿ ತಿಲಕರು ಅತ್ಯಂತ ಪ್ರಮುಖ ವ್ಯಕ್ತಿಯಾಗಿದ್ದರು. ಅವರೊಡನೆ ೫೦೦ ಜನ ದೇಶಭಕ್ತರಿದ್ದರು. ಅವರು ಹೋಮ್‌ರೂಲ್ ಕೇಳಿಕೆಯ ಹತ್ತು ಲಕ್ಷ ಜನರ ಹಸ್ತಾಕ್ಷರದ ಒಂದು ಬೇಡಿಕೆಯ ಅರ್ಜಿಯನ್ನು ಕಾಂಗ್ರೆಸ್‌ಗೆ ತೆಗೆದುಕೊಂಡು ಹೋಗಿದ್ದರು. ತಿಲಕರು ತಾವಾಗಿಯೇ ಕಾಂಗ್ರೆಸ್ ಅಧ್ಯಕ್ಷ ಗಿರಿಯನ್ನು ಬಿಟ್ಟುಕೊಟ್ಟು ಶ್ರೀಮತಿ ಬೆಸೆಂಟರ ಹೆಸರನ್ನು ಸೂಚಿಸಿದರು. ರವೀಂದ್ರನಾಥ ಠಾಕೂರರು ಹೃತ್ಪೂರ್ವಕವಾಗಿ ಅದನ್ನು ಅಭಿನಂದಿಸಿದರು. ಮಂದಗಾಮಿಗಳು ಅದನ್ನು ವಿರೋಧಿಸಿದರು. ಕವಿ, ಕಾಂಗ್ರೆಸಿನ ಮೊದಲ ದಿನ ಸಭೆಗೆ ಬಂದು 'ಭಾರತದ ಪ್ರಾರ್ಥನೆ' ಎಂಬ ಕವನವನ್ನು ಪಠಿಸಿದರು. ಕಾಂಗ್ರೆಸ್‌ವಾರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅವರು ಪೋಸ್ಟ್‌ಆಫೀಸ್ ಎಂಬ ನಾಟಕವನ್ನು ಅಭಿನಯಿಸಿದರು. ಅದನ್ನು ತಿಲಕ್, ಶ್ರೀಮತಿ ಬೆಸೆಂಟ್, ಗಾಂಧೀ ಮತ್ತು ಇತರ ಪ್ರಮುಖರೆಲ್ಲ ವೀಕ್ಷಿಸಿದರು.

ಬೆಸೆಂಟರ ಭಾಷಣ, ಸ್ವಯಮಾಡಳಿತದ ಮೇಲೆ ದೊಡ್ಡ ಪ್ರಬಂಧ. ಆಕೆ ಹೀಗೆ ಹೇಳಿದರು. "ಇಂದು ಭಾರತ, ನೆಟ್ಟಗೆ ನಿಂತಿದೆ. ಬೇಡುವ ಜನತೆಯಲ್ಲ. ಅದರ ಕೈ, ಬ್ರಿಟನ್ನಿಗೆ ನೀಡಿರುವ ಸ್ನೇಹದ ಹಸ್ತ; ಗುಲಾಮಗಿರಿಯ ಹಸ್ತವಲ್ಲ. ಸಹಕಾರದ ಹಸ್ತ. ಅಧೀನ ಹಸ್ತವಲ್ಲ. ನಾಲ್ಕನೆಯ ವರುಷದಲ್ಲಿ ಕಾಲಿಟ್ಟಿರುವ ಯುದ್ಧದ ನಿಜವಾದ ಗುರಿ. ಸರ್ವಾಧಿಕಾರದ ನಾಶ ಮತ್ತು ಪ್ರತಿರಾಷ್ಟ್ರಕ್ಕೂ ದೈವದತ್ತವಾದ ಸ್ವಯಮಾಡಳಿತ ಮತ್ತು ಸ್ವಯಂ ಅಭಿವೃದ್ಧಿಯ ಅವಕಾಶ ಸ್ಥಾಪನೆಯೇ ಆಗಿದೆ. ನಿರಂಕುಶ ಪ್ರಭುತ್ವದ ನೌಕರಶಾಹಿಯ ಸರ್ವಾಧಿಕಾರ ಪೂರ್ವದಲ್ಲಿಯೂ ಪಶ್ಚಿಮದಲ್ಲಿಯೂ ಪೂರ್ಣವಾಗಿ ನಾಶವಾಗಬೇಕು."

ಆ ಪ್ರಮುಖ ಕಾಂಗ್ರೆಸ್ ಅಧಿವೇಶನಕ್ಕೆ ೪,೯೬೭ ಪ್ರತಿನಿಧಿಗಳು ಬಂದಿದ್ದರು. ೪೦೦ ಮಹಿಳೆಯರೂ ಸೇರಿದಂತೆ ೫.೦೦೦ ಪ್ರೇಕ್ಷಕರೂ ಬಂದಿದ್ದರು. ತೀವ್ರವಾದಿಗಳೇ ಪ್ರಬಲರಾಗಿದ್ದರೂ ಕಾಂಗ್ರೆಸು ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿತು "ಈ ಅಧಿವೇಶನ ಅಖಿಲಭಾರತದ ಸಮಸ್ತಪ್ರಜೆಗಳ ಪರವಾಗಿ, ಚಕ್ರವರ್ತಿ

ಯುವರಿಗೆ ತಮ್ಮ ದೃಢ ರಾಜಭಕ್ತಿಯನ್ನೂ ಸಿಂಹಾಸನಕ್ಕೆ ನಿಕಟಬಾಂಧವ್ಯವನ್ನೂ ಬ್ರಿಟಿಷ್ ಸಂಪರ್ಕವಲ್ಲಿ ಚ್ಯುತಿಯಿಲ್ಲದ ಶ್ರದ್ಧಾಭಕ್ತಿಗಳನ್ನೂ ಎಷ್ಟೇ ಕಷ್ಟಬರಲಿ, ಏನೇ ಆಗಲಿ ಸಾಮ್ರಾಜ್ಯದ ಬೆಂಬಲಕ್ಕೆ ನಿಲಲ್ಲು ಭಾರತೀಯರ ದೃಢನಿರ್ಧಾರವನ್ನೂ, ಗೌರವ ಪೂರ್ವಕವಾಗಿ ತಿಳಿಸಲು ಅಪ್ಪಣೆ ಬೇಡುತ್ತದೆ."

ತಿಲಕರು ಕಾಂಗ್ರೆಸ್ಸನ್ನು ಬಹಳ ಬುದ್ಧಿವಂತಿಕೆಯಿಂದ ನಡೆಸಿದರು ಮಾಂಟೆಗುರವರ ಘೋಷಣೆ ಒಂದು ಅರ್ಥವಲ್ಲಿ ಮುಖಂಡರ ಮನಸ್ಸಿನಲ್ಲಿ ಗೊಂದಲವನ್ನುಂಟು ಮಾಡಿತ್ತು. ಸರ್ಕಾರದ ಸುಧಾರಣಾ ಶಿಫಾರಸುಗಳು ಪ್ರಕಟವಾಗುವವರೆಗೆ, ಕಾಂಗ್ರೆಸ್ಸು ಜನತೆಯ ಒಮ್ಮತದ ಅಂಗೀಕಾರವನ್ನು ಪಡೆದಿದ್ದ ಲಕ್ನೊ ಒಪ್ಪಂದಕ್ಕೆ ಅಂಟಿಕೊಳ್ಳಬೇಕೆಂದು ತಿಲಕರು ಸೂಚಿಸಿದರು. ಸರ್ಕಾರ, ತನ್ನ ರಾಜಕೀಯ ಸುಧಾರಣೆಗಳ ರೂಪರೇಖೆಯನ್ನು ಪ್ರಕಟಿಸಿದ ನಂತರ, ಲಕ್ನೋ ಕಾಂಗ್ರೆಸ್ ಲೀಗ್ ಒಪ್ಪಂದವನ್ನು ತಿದ್ದುಪಡಿ ಮಾಡಬೇಕೆ ಬಿಡಬೇಕೆ ಎಂಬುದನ್ನು ನಿರ್ಣಯಿಸಲು ಬೇಕಾದಷ್ಟು ಕಾಲಾವಕಾಶ ಇದೆಯೆಂದು ಅವರು ವಾದಿಸಿದರು. ಕಾಂಗ್ರೆಸ್ ಸಾಧಿಸಿದ ಮತ್ತೊಂದು ಹೆಜ್ಜೆ, ಸ್ವರಾಜ್ಯವನ್ನು ಒಂದು ಕಾಲಮಿತಿಯೊಳಗೆ ಕೊಡಬೇಕೆಂಬ ಅಂಶವನ್ನು ನಿರ್ಣಯದಲ್ಲಿ ಸೇರಿಸಿದುದು. ಇದಕ್ಕಾಗಿ ತಿಲಕರು ಲಕ್ನೋ ಕಾಂಗ್ರೆಸ್‌ನಲ್ಲಿ ಪ್ರಯತ್ನಿಸಿ ವಿಫಲರಾಗಿದ್ದರು. ಸ್ವಯಮಾ ಡಳಿತದ ಮೇಲಿನ ನಿರ್ಣಯ, ಐದು ಗಂಟೆಕಾಲ ಚರ್ಚೆಯಾಯಿತು. ಹತ್ತು ಭಾಷಣ ಕಾರರು ಭಾಗವಹಿಸಿದ್ದರು. ಅವರ ಪೈಕಿ ಸುರೇಂದ್ರನಾಥ ಬ್ಯಾನರ್ಜಿ, ಜಿನ್ನ, ಜಯಕರ್ ಬಿಪಿನ್‌ಚಂದ್ರಪಾಲ್. ಮಾಳವೀಯ ಮತ್ತು ಡಾಕ್ಟರ್ ಅನ್ಸಾರಿ ಇದ್ದರು.

ದಾದಾಭಾಯಿ ನವರೋಜಿಯವರ ಮರಣದಿಂದ ದೇಶಕ್ಕೆಉಂಟಾದ ದುಃಖವನ್ನು ವ್ಯಕ್ತಗೊಳಿಸುವ ನಿರ್ಣಯದನಂತರ, ಬ್ರಿಟಿಷ್ ಸಿಂಹಾಸನಕ್ಕೆ ಭಾರತದ ರಾಜ ಭಕ್ತಿ, ಮಾಂಟೆಗುರಿಗೆ ಸ್ವಾಗತ ಕೋರಿ, ಬಂಧಿತ ಸ್ವರಾಜ್ಯ ಚಳುವಳಿಯಲ್ಲಿ ಬಂಧಿತ ರಾದವರ ಬಿಡುಗಡೆಯನ್ನು ಕೇಳುವ ನಿರ್ಣಯವನ್ನು ಕಾಂಗ್ರೆಸ್ಸು ಅಂಗೀಕರಿಸಿತು. ಅಲಿ ಸಹೋದರರು ಮತ್ತು ಮೌಲಾನಾ ಆಜಾದರ ಬಿಡುಗಡೆಯನ್ನು ಕೇಳುವ ನಿರ್ಣಯವನ್ನು ತಿಲಕರು ಸಭೆಯ ಮುಂದಿಟ್ಟರು.

ಸಾಮಾಜಿಕ ಮತ್ತು ಧಾರ್ಮಿಕ ಪ್ರಶ್ನೆಗಳಲ್ಲಿ ಕಾಂಗ್ರೆಸ್ ಪ್ರವೇಶಿಸಬಾರದೆಂಬ ತತ್ವಕ್ಕೆ. ತಿದ್ದುಪಡಿ ಮಾಡಲ್ಪಟ್ಟಿತು. ಕಾಂಗ್ರೆಸ್ಸು ಹರಿಜನರು, ಗಿರಿಜನರರಿಗೆ ದುಷ್ಟಪದ್ಧತಿಯಿಂದ ಉಂಟಾಗಿರುವ ಎಲ್ಲ ತೊಂದರೆಗಳನ್ನೂ ನಿರ್ಮೂಲ ಮಾಡುವ ಆವಶ್ಯಕತೆ, ನ್ಯಾಯ ಮತ್ತು ಧರ್ಮವನ್ನು ಭಾರತದ ಜನತೆಗೆ ಮನದಟ್ಟು ಮಾಡಿಕೊಡುವ ಸ್ಪಷ್ಟ ನಿರ್ಣಯವನ್ನು ಮಾಡಿತು.

ಮುಸ್ಲಿಂಲೀಗ್ ಅಧಿವೇಶನವೂ, ಕಾಂಗ್ರೆಸಿನ ಜೊತೆಯಲ್ಲಿಯೇ ಕಲ್ಕತ್ತದಲ್ಲಿ ನೆರವೇರಿತು. ತನ್ನ ಅಧ್ಯಕ್ಷ ಭಾಷಣದಲ್ಲಿ ಮಹಮುದಾಬಾದ್ ರಾಜರು ಹೀಗೆ ಹೇಳಿದರು:

" ದೇಶದ ಹಿತ, ಅತ್ಯಂತ ಮುಖ್ಯವಾದುದು. ನಾವು ಮೊದಲು ಮುಸಲ್ಮಾನರೇ, ಮೊದಲು ಭಾರತೀಯರೇ ಎಂದು ಚರ್ಚಿಸುತ್ತ ಕೂರಬೇಕಾದುದಿಲ್ಲ ವಸ್ತುಸ್ಥಿತಿ ಎಂದರೆ

ನಾವು ಎರಡೂ ಆಗಿದ್ದೇವೆ. ಯಾವುದು ಮೊದಲು, ಯಾವುದು ಎರಡನೆಯದು ಎಂಬು ಎಂಬುದಕ್ಕೆ ಅರ್ಥವಿಲ್ಲ. ಮುಸ್ಲಿಂಲೀಗ್, ಮುಸಲ್ಮಾನರ ಮನಸ್ಸಿನಲ್ಲಿ, ತಮ್ಮ ಧರ್ಮಕ್ಕೆ ಹೇಗೋ ಹಾಗೆ ಈ ದೇಶಕ್ಕಾಗಿಯೂ ತ್ಯಾಗ ಮನೋಭಾವನೆಯನ್ನು ಪ್ರಚೋದಿಸಿದೆ.”

ರೈತರು ಮತ್ತು ಕಾರ್ಮಿಕರೊಡನೆ

೧೯೧೮

ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೆ, ರಚನಾತ್ಮಕ ಕಾರ್ಯಕ್ರಮವನ್ನು ಮುಂದುವರಿಸಲು ಗಾಂಧೀಜಿ ಚಂಪಾರಣ್ಯಕ್ಕೆ ಹೋದರು. ಆದರೆ ಆ ಕೆಲಸವನ್ನು ಇತರರಿಗೆ ವಹಿಸಿ ಅವರು ೧೯೧೮ರ ಫೆಬ್ರುವರಿಯಲ್ಲಿ ಅಹಮದಾಬಾದಿಗೆ ಧಾವಿಸಿ ಬರಬೇಕಾಯಿತು. ಅದಕ್ಕೆ ಕಾರಣ ಗಿರಣಿ ಕಾರ್ಮಿಕರ ಪರವಾಗಿ ಅನುಸೂಯಾ ಬಹೆನ್ ಮಾಡಿಕೊಂಡ ಕೋರಿಕೆ.

೧೯೧೭ರ ಉತ್ತರಾರ್ಧದಲ್ಲಿ ತೀವ್ರ ಸ್ವರೂಪದ ಪ್ಲೇಗು ಅಹಮದಾಬಾದಿನಲ್ಲಿ ಹರಡಿತ್ತು. ಕಾರ್ಮಿಕರು ಅಲ್ಲೇ ಇದ್ದು ಕೆಲಸ ಮಾಡುವಂತೆ ಪ್ರೋತ್ಸಾಹಿಸಲು ಮಿಲ್ ಮಾಲಿಕರು ಅವರಿಗೆ ದಿನಕ್ಕೆ ರೂಪಾಯಿಯಲ್ಲಿ ಹನ್ನೆರಡಾಣೆ ಬೋನಸ್ ಕೊಡುತ್ತಿದ್ದರು. ಇದು ಸಿಕ್ಕುತ್ತಿದ್ದುದು ತಿಂಗಳ ಸರಾಸರಿ ಸಂಬಳವಾದ ಇಪ್ಪತ್ತಮೂರು ರೂಪಾಯಿ ಜೊತೆಗೆ. ಪ್ಲೇಗಿನ ಉಪದ್ರವ ಕಡಿಮೆಯಾದ ಮೇಲೆ ಮಾಲಿಕರು ಬೋನಸ್ಸನ್ನು ತೆಗೆದು ಹಾಕಲು ಪ್ರಯತ್ನಿಸಿದರು. ಆದರೆ ಸಾಮಾನುಗಳ ಬೆಲೆ ಸಾಕಷ್ಟು ಏರಿಯೇ ಇತ್ತು. ಗಾಂಧೀಜಿಗೆ ಸಂದಿಗ್ಧ ಪರಿಸ್ಥಿತಿಯುಂಟಾಯಿತು. ಅಹಮದಾಬಾದಿನ ಶ್ರೀಮಂತರು ಆಶ್ರಮದ ಖರ್ಚು ವೆಚ್ಚಗಳಿಗೆಂದು ಸಹಾಯ ನೀಡುತ್ತಿದ್ದರು. ಅಹಮದಾಬಾದಿನ ಗಿರಣಿಮಾಲಿಕರ ನಾಯಕತ್ವ ವಹಿಸಿದ್ದ ಅಂಬಾಲಾಲ್ ಸಾರಾಭಾಯಿ ಅವರಿಗೂ ಗಾಂಧೀಜಿಗೂ ಸ್ನೇಹವಿತ್ತು. ಆಗಿನ ಒಂದೇ ಒಂದು ರಕ್ಷಕ ಅಂಶವೆಂದರೆ ಸಾರಾಭಾಯಿ ಅವರ ಸೋದರಿ ಅನಸೂಯಾ ಬಹೆನ್ ಸಾರಾಭಾಯಿಯವರ ಪ್ರತಿಪಕ್ಷದಲ್ಲಿ ನಿಂತು ಕಾರ್ಮಿಕರ ಕುಂದುಕೊರತೆಗಳನ್ನು ನಿವಾರಿಸಲು ಬದ್ಧಕಂಕಣರಾಗಿದ್ದುದು.

ವಿವಾದವನ್ನು ಪಂಚಾಯಿತಿಗೆ ಒಪ್ಪಿಸಲಾಯಿತು. ಗಾಂಧೀಜಿ, ಶಂಕರಲಾಲ್ ಬ್ಯಾಂಕರ್ ಮತ್ತು ವಲ್ಲಭಭಾಯಿ ಪಟೇಲ್—ಇವರು ನೇಯ್ಗೆಕಾರ್ಮಿಕರ ಪ್ರತಿನಿಧಿಗಳು. ಶೇಠ್ ಅಂಬಾಲಾಲ್ ಸಾರಾಭಾಯಿ, ಜಗಭಾಯಿ ಮತ್ತು ಚಂದುಲಾಲ್ ಚಿಮನ್‌ಲಾಲ್—ಇವರು ಮಿಲ್ ಮಾಲಿಕರ ಪ್ರತಿನಿಧಿಗಳು. ಕಲೆಕ್ಟರ್ ಚಾಟ್‌ಫೀಲ್ಡ್ ಅವರನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಿದರು. ಆದರೆ ಒಪ್ಪಂದ ಏರ್ಪಡುವುದು ಇಷ್ಟವಿಲ್ಲದಿದ್ದ ಮಿಲ್ ಮಾಲಿಕರು ಸಮಿತಿಯು ಕೆಲಸವನ್ನು ಪ್ರಾರಂಭಿಸುವ ಮುನ್ನವೇ,ಫೆಬ್ರುವರಿ ೨೨ರಂದು ಲಾಕ್‌ಔಟ್ ಘೋಷಿಸಿದರು. ಮಾರ್ಚಿ ೧೧ರ ವರೆಗೂ ಅದು ಮುಂದುವರಿಯಿತು. ಅವರು ಮಿಲ್ಲುಗಳನ್ನು ತೆರೆದಾಗ ಕಾರ್ಮಿಕರು ಮುಷ್ಕರ ಹೂಡುವ ಸರದಿಯನ್ನು ವಹಿಸಿಕೊಂಡರು. ಕೂಲಿ ಶೇಕಡಾ ಐವತ್ತರಷ್ಟು ಹೆಚ್ಚಬೇಕು ಎಂಬುದು

ಅವರ ಬೇಡಿಕೆ. ಆದರೆ ಮಿಲ್ ಮಾಲಿಕರು ಶೇಕಡಾ ಇಪ್ಪತ್ತೈದರಷ್ಟು ಏರಿಕೆಗೆ ಮಾತ್ರ ಒಪ್ಪಿದ್ದರು. ಅವರ ವಾದ ಬೊಂಬಾಯಿಯಲ್ಲಿ ಗಿರಣಿ ಕಾರ್ಮಿಕರ ಸರಾಸರಿ ಆದಾಯ ಇಪ್ಪತ್ತೆಂಟು ರೂಪಾಯಿಗಿಂತ ಹೆಚ್ಚಾಗಿರಲಿಲ್ಲ ಎಂಬುದು. ಗಾಂಧೀಜಿ ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಿ, ನ್ಯಾಯವಾದ ಮಧ್ಯಮಾರ್ಗವೆಂದರೆ ಶೇಕಡಾ ಮೂವತ್ತೈದು ಎಂದು ನಿರ್ಧರಿಸಿದರು. ಕಾರ್ಮಿಕರು ಒಪ್ಪಿದರು. ಆದರೆ ಮಾಲಿಕರು ಹಟ ಹಿಡಿದು ಕುಳಿತರು.

ಕಾರ್ಮಿಕರ ಪರವಾಗಿ ಹೋರಾಟವನ್ನು ಪ್ರಾರಂಭಿಸಲು ಗಾಂಧೀಜಿ ಮುಂದಾದರು. ಆದರೆ ತಾವು ಅವರ ನಾಯಕತ್ವ ವಹಿಸುವ ಮುನ್ನ ಶಂಕರಲಾಲ್ ಬ್ಯಾಂಕರ್ ಅವರು ಕಾರ್ಮಿಕರ ಜೀವನದ ಸ್ಥಿತಿಗತಿಗಳನ್ನು ಪರಿಶೀಲಿಸಬೇಕು ಎಂದು ಕೇಳಿಕೊಂಡರು.

ಮುಷ್ಕರವನ್ನು ಯಶಸ್ವಿಗೊಳಿಸಲು ಗಾಂಧೀಜಿ ಒಂದು ಹೊಸ ವಿಧಾನವನ್ನು ಕಂಡುಹಿಡಿದರು. ಮೂರು ಷರತ್ತುಗಳನ್ನು ಅವರು ವಿಧಿಸಿದರು: ಎಂದೂ ಹಿಂಸೆಯನ್ನು ಅವಲಂಬಿಸಕೂಡದು; ಮುಷ್ಕರದಲ್ಲಿ ಭಾಗವಹಿಸದವರನ್ನು ಎಂದೂ ಪೀಡಿಸ ಕೂಡದು; ಎಂದೂ ಭಿಕ್ಷೆಯನ್ನು ಅವಲಂಬಿಸಬಾರದು. ಮುಷ್ಕರವು ಎಷ್ಟೇ ದೀರ್ಘಕಾಲ ಮುಂದುವರಿದರೂ ದೃಢ ಮನಸ್ಕರಾಗಿರತಕ್ಕದ್ದು. ಇದಕ್ಕಾಗಿ ಮುಷ್ಕರದ ಕಾಲದಲ್ಲಿ ಯಾವುದೇ ಪ್ರಾಮಾಣಿಕ ದುಡಿಮೆಯಿಂದಾದರೂ ಅನ್ನ ಸಂಪಾದಿಸಿಕೊಳ್ಳಬಹುದು.

ತಮ್ಮ ಷರತ್ತುಗಳನ್ನು ಮಾಲಿಕರು ಒಪ್ಪಿಕೊಳ್ಳುವವರೆಗೆ ಅಥವಾ ಈ ವಿವಾದ ವನ್ನು ಪಂಚಾಯಿತಿಗೆ ಒಪ್ಪಿಸುವವರೆಗೆ ತಾವು ಕೆಲಸಕ್ಕೆ ಪುನಃ ಹಾಜರಾಗುವುದಿಲ್ಲ ಎಂದು ಕಾರ್ಮಿಕರು ಒಂದು ಸಾರ್ವಜನಿಕ ಸಭೆಯಲ್ಲಿ ಪ್ರತಿಜ್ಞೆ ಮಾಡಿದರು. ಗಾಂಧೀಜಿ ಸಬರ್ಮತೀ ನದೀ ತೀರದಲ್ಲಿ ಒಂದು ಮರದ ನೆರಳಿನಲ್ಲಿ ಪ್ರತಿದಿನವೂ ಕಾರ್ಮಿಕರ ಸಭೆ ಸೇರಿಸಿ ಹಸ್ತಪ್ರತಿಗಳನ್ನು ಹಂಚುತ್ತಿದ್ದರು. ಸಹಸ್ರ ಸಂಖ್ಯೆಯಲ್ಲಿ ಕಾರ್ಮಿಕರು ಸಭೆಗಳಿಗೆ ಬರುತ್ತಿದ್ದರು. ಗಾಂಧೀಜಿಯು ಅವರಿಗೆ ಪ್ರತಿಜ್ಞೆಯನ್ನು ನೆನಪು ಮಾಡಿ ಕೊಟ್ಟು, ಶಾಂತಿ, ಆತ್ಮಗೌರವಗಳನ್ನು ಕಾಪಾಡಿಕೊಳ್ಳುವುದು ಅವರ ಕರ್ತವ್ಯ ಎಂಬು ದನ್ನು ಮನದಟ್ಟು ಮಾಡುತ್ತಿದ್ದರು. "ಏಕ್ ಟೇಕ್" "ಪ್ರತಿಜ್ಞೆಯನ್ನು ಕಾಪಾಡಿ" ಎಂಬ ಬರಹವುಳ್ಳ ಪತಾಕೆಯನ್ನು ಹೊತ್ತು ಕಾರ್ಮಿಕರು ಅಹಮದಾಬಾದಿನ ಬೀದಿ ಗಳಲ್ಲಿ ಶಾಂತಿಯುತವಾದ ಮೆರವಣಿಗೆಗಳನ್ನು ದಿನವೂ ಒಯ್ಯುತ್ತಿದ್ದರು.

ಮುಷ್ಕರವು ತೀವ್ರವಾದ ಸ್ವರೂಪವನ್ನು ಪಡೆಯ ತೊಡಗಿತು. ದಾನಧರ್ಮ ಗಳನ್ನು ಪಡೆದು ಜೀವನ ಸಾಗಿಸಿ ಕಾರ್ಮಿಕರು ಹೀನಾಯತಂದುಕೊಳ್ಳುವುದಕ್ಕೆ ಗಾಂಧೀಜಿ ಅವಕಾಶ ಕೊಡಲಿಲ್ಲ. ಆದರೆ ಸಹಸ್ರಾರು ಜನರಿಗೆ ಕೆಲಸವೊದಗಿಸುವುದೂ ಸುಲಭ ವಾಗಿರಲಿಲ್ಲ. ಮೊದಲೆರಡು ವಾರಗಳು ಕಾರ್ಮಿಕರು ಧೈರ್ಯ. ಸಂಯಮಗಳನ್ನು ಪ್ರದರ್ಶಿಸಿದರು. ದಿನವೂ ಭಾರೀ ಸಭೆಗಳನ್ನು ನಡೆಸಿದರು. ಆದರೆ ಕೊನೆಗೆ ಅವರು ಎದೆಗೆಡುವ ಚಿಹ್ನೆಗಳನ್ನು ತೋರಿಸತೊಡಗಿದರು. ಗೂಂಪಾಗಿರಿ ತಲೆಹಾಕಿ ಅವರ ಉದ್ದೇಶವೇ ಭಂಗವಾಗಬಹುದು ಎಂದು ಗಾಂಧೀಜಿ ಹೆದರಿದರು. ದೈನಂದಿನ ಸಭೆಗಳಲ್ಲಿ

ಹಾಜರಿ ಕುಗ್ಗತೊಡಗಿತು. ಹಾಜರಾಗುತ್ತಿದ್ದವರ ಮುಖದಲ್ಲಿ ದುಃಖದ ಹತಾಶೆಗಳು ಎದ್ದು ಕಾಣುತ್ತಿದ್ದುವು.

ಮುಷ್ಕರ ಕಾಲದಲ್ಲಿ ಗಾಂಧೀಜಿ ಆಗಿಂದಾಗ್ಗೆ ಗಿರಣಿ ಮಾಲಿಕರೊಡನೆ ಸಮಾಲೋಚಿಸುತ್ತಿದ್ದರು. ಕಾರ್ಮಿಕರಿಗೆ ನ್ಯಾಯ ಸಲ್ಲಿಸುವಂತೆ ಅವರನ್ನು ಕೇಳಿಕೊಳ್ಳುತ್ತಿದ್ದರು. "ನಮ್ಮ ಪ್ರತಿಜ್ಞೆಯೂ ಉಂಟು" ಎನ್ನುತ್ತಿದ್ದರು ಅವರು. "ನಮಗೂ ಕಾರ್ಮಿಕರಿಗೂ ಇರುವ ಸಂಬಂಧ ತಂದೆ ಮಕ್ಕಳದ್ದು. ಮೂರನೆಯವರೊಬ್ಬರು ಮಧ್ಯೆ ಪ್ರವೇಶಿಸುವುದನ್ನು ಸಹಿಸುವುದು ಹೇಗೆ? ಮಧ್ಯಸ್ಥಿಕೆಗೆ ಅವಕಾಶ ಎಲ್ಲಿದೆ?"

ಲಾಕ್ ಔಟ್ ಮುಗಿದು, ಶೇಕಡ ಇಪ್ಪತ್ತರ ಹೆಚ್ಚಳವನ್ನು ಒಪ್ಪುವ ಯಾರೂ ಕೆಲಸಕ್ಕೆ ಹಾಜರಾಗಬಹುದು ಎಂದು ಘೋಷಿಸಿದಂದು ಪರಿಸ್ಥಿತಿಯು ಹೊಸ ತಿರುವನ್ನು ಪಡೆಯಿತು. ಅದು ಮಾರ್ಚಿ ೧೨ರಂದು. ಕಾರ್ಮಿಕರು ತಮ್ಮ ಪ್ರತಿಜ್ಞೆಯಂತೆ ನಡೆದುಕೊಳ್ಳಬೇಕು ಎಂಬುದು ಗಾಂಧಿಜೀಯವರ ಅಪೇಕ್ಷೆ.

ಗಾಂಧೀಯವರ ಮಾತುಗಳನ್ನೇ ಕೇಳೋಣ: "ಇಪ್ಪತ್ತೆರಡು ದಿನಗಳು ಉರುಳಿದುವು. ಹಸಿವು ಮತ್ತು ಮಾಲಿಕರ ದೂತರು ತಮ್ಮ ಪರಿಣಾಮವನ್ನು ಬೀರಿದ್ದರು. ತಮಗೆ ನೆರವು ನೀಡುವ ಭಗವಂತ ಎಂಬುವವನು ಯಾರೂ ಇಲ್ಲ. ಪ್ರತಿಜ್ಞೆ ಎಂದರೆ ದುರ್ಬಲರು ಅವಲಂಬಿಸುವ ವಿಳಂಬಸೂತ್ರ ಎಂದು ಸೈತಾನನು ಕಾರ್ಮಿಕರ ಕಿವಿಯಲ್ಲಿ ಪಿಸುಗುಟ್ಟುತ್ತಿದ್ದ". ಕಾರ್ಮಿಕರ ಗೊಣಗಾಟದ ಸಾರಾಂಶ ಇಷ್ಟು: "ಸಾಯುವವರೆಗೂ ಹೋರಾಡಬೇಕು ಎಂದು ಗಾಂಧೀ ಸಾಹೇಬರೇನೋ ಭಾಷಣ ಬಿಗಿಯಬಹುದು. ಆದರೆ ಉಪವಾಸ ಇರಬೇಕಾದವರು ನಾವು ತಾನೆ?"

ಮಾರ್ಚಿ ಮಧ್ಯಭಾಗದಲ್ಲಿ ಕೆಲಸಗಾರರ ಸಭೆ ನಡೆಯುತ್ತಿದೆ, ಗಾಂಧೀಜಿ ಇನ್ನೂ ಪರಿಹಾರಕ್ಕಾಗಿ ಹುಡುಕಾಡುತ್ತಿದ್ದಾರೆ. ಆಗ ಒಂದು ಭಾವನೆ ಅವರಿಗೆ ಹೊಳೆಯಿತು. "ನಿಮ್ಮ ಪ್ರತಿಜ್ಞೆಯನ್ನು ಕಾಪಾಡಲು ನಾವಿಬ್ಬರೂ ಉಪವಾಸವಿರೋಣ" ಎಂದರು ಅವರು. ಅವರ ಬಾಯಿಂದ ಈ ಮಾತುಗಳು ತಮಗೆ ತಾವೇ ಹೊಮ್ಮಿದುವು: "ಮುಷ್ಕರ ಹೂಡಿರುವ ಎಲ್ಲ ಕಾರ್ಮಿಕರೂ ಒಟ್ಟಾಗಿ ಸೇರಿ ಪರಿಹಾರ ದೊರಕುವವರೆಗೂ ಮುಷ್ಕರವನ್ನು ಮುಂದುವರಿಸಬೇಕು, ಇಲ್ಲವೇ ಎಲ್ಲರೂ ಒಟ್ಟಾಗಿ ಗಿರಣಿಗಳನ್ನು ಬಿಟ್ಟು ಬಿಡಬೇಕು. ಅಲ್ಲಿಯವರೆಗೆ ನಾನು ಆಹಾರವನ್ನೇ ಮುಟ್ಟುವುದಿಲ್ಲ".

ಕಾರ್ಮಿಕರು ಈ ಮಾತುಗಳನ್ನು ಕೇಳಲು ಸಿದ್ಧರಾಗಿರಲಿಲ್ಲ. "ನೀವಲ್ಲ ಉಪವಾಸ ಮಾಡಬೇಕಾದವರು, ನಾವು. ನೀವು ಉಪವಾಸ ಮಾಡಿದರೆ ಅದು ಅಮಾನುಷವಾಗುತ್ತದೆ. ನಮ್ಮ ಲೋಪವನ್ನು ಕ್ಷಮಿಸಿ. ಕೊನೆಯ ವರೆಗೂ ಪ್ರತಿಜ್ಞೆಯನ್ನು ಕಾಪಾಡುತ್ತೇವೆ."

"ನೀವು ಉಪವಾಸ ಮಾಡಬೇಕಾದ ಅಗತ್ಯವಿಲ್ಲ" ಎಂದರು ಗಾಂಧೀಜಿ. "ಪ್ರತಿಜ್ಞೆಯನ್ನು ಕಾಪಾಡಿದರೆ ಸಾಕು. ನಮ್ಮ ಹತ್ತಿರ ಹಣವಿಲ್ಲ ಎಂಬುದು ನಿಮಗೆ ಗೊತ್ತು. ಸಾರ್ವಜನಿಕರ ದಾನಧರ್ಮಗಳಿಂದ ಜೀವನ ನಡೆಸಿ ಮುಷ್ಕರವನ್ನು ಮುಂದುವರಿಸುವ ಇಷ್ಟ ನಮಗಿಲ್ಲ. ಆದ್ದರಿಂದ ಉಸಿರಾಡಲು ಸಾಕಾಗುವಷ್ಟನ್ನಾದರೂ ಸಂಪಾದಿಸಲು

ನೀವು ಯಾವುದೇ ರೀತಿಯ ದುಡಿಮೆಯನ್ನಾದರೂ ಕೈಗೊಳ್ಳಿ. ಹೀಗಾದರೆ ಮುಷ್ಕರ ಎಷ್ಟೇ ಕಾಲ ನಡೆಯಲಿ. ನಿಮಗೆ ಯಾವುದೇ ಕಾಳಜಿ ಇರುವುದಿಲ್ಲ. ಇನ್ನು ನನ್ನ ಉಪವಾಸ, ಮುಷ್ಕರದ ಬಗ್ಗೆ ಒಂದು ತೀರ್ಮಾನವಾದ ಮೇಲೆ ಅದು ನಿಲ್ಲುವುದು".

ಅಹಮದಾಬಾದಿನ ಪುರಸಭೆಯ ವತಿಯಿಂದ ಕಾರ್ಮಿಕರಿಗೆ ಏನಾದರೂ ಉದ್ಯೋಗ ದೊರಕಿಸಿಕೊಡುವ ಪ್ರಯತ್ನದಲ್ಲಿ ವಲಭಭಾಯಿ ಪಟೇಲರು ಸೋತರು. ಆಶ್ರಮದ ನೇಯ್ಗೆಶಾಲೆಯ ಅಡಿಪಾಯಕ್ಕೆ ಮಣ್ಣುತುಂಬುವ ಕೆಲಸವನ್ನು ಕೆಲವು ಜನ ಕಾರ್ಮಿಕರು ಮಾಡಬಹುದು ಎಂದು ಮಗನ್‌ಲಾಲರು ಸೂಚಿಸಿದರು. ತಲೆಯ ಮೇಲೆ ಬುಟ್ಟಿಯನ್ನು ಹೊತ್ತು ಅನಸೂಯಾ ಬಹೆನ್ ಮುಂದೆ ನಡೆದರು. ನದೀ ತೀರದ ಹಳ್ಳದಿಂದ ಅಸಂಖ್ಯಾತ ಕಾರ್ಮಿಕರು ತಲೆಯ ಮೇಲೆ ಮರುಳುತುಂಬಿದ ಬುಟ್ಟಿಯನ್ನು ಹೊತ್ತು ಪ್ರವಾಹದಂತೆ ಹರಿದು ಬರುವ ದೃಶ್ಯ ಕಾಣತೊಡಗಿತು.

ಮಿಲ್ ಮಾಲಿಕರನ್ನೂ ನಿರಾತಂಕವಾಗಿರುವಂತೆ ಮಾಡಲು ಗಾಂಧೀಜಿ ಪ್ರಯತ್ನಿಸಿದರು: "ನಿಮ್ಮ ನಿಲುವನ್ನು ಸ್ವಲ್ಪವೂ ಬದಲಾಯಿಸುವ ಅಗತ್ಯವಿಲ್ಲ." ಅವರು ಈ ಮಾತುಗಳ ಬಗ್ಗೆ ಔದಾಸೀನ್ಯ ತೋರಿದ್ದು ಮಾತ್ರವಲ್ಲ, ಸೂಕ್ಷ್ಮವಾದ ಅಣಕು ನುಡಿಗಳನ್ನೂ ಆಡಿದರು.

ಮೊದಲದಿನ ಅನಸೂಯಾ ಬಹೆನ್ ಮತ್ತು ಅನೇಕ ಜನ ಕಾರ್ಮಿಕರು ಗಾಂಧೀಜಿಯವರೊಂದಿಗೆ ಉಪವಾಸ ಮಾಡಿದರು. ಆದರೆ ಉಪವಾಸವನ್ನು ಮುಂದುವರಿಸದಂತೆ ಗಾಂಧೀಜಿ ಅವರೆಲ್ಲರ ಮನಸ್ಸನ್ನು ಒಲಿಸಿದರು. ಉಪವಾಸದಿಂದಾಗಿ ಕಾರ್ಮಿಕರಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅವರ ಧೈರ್ಯ ಸ್ಥೈರ್ಯಗಳು ಹೆಚ್ಚಿದುವು. ಮಿಲ್ ಮಾಲಿಕರ ಹೃದಯವೂ ಕರಗಿತು. ಮೂರನೆಯ ದಿನದ ಕೊನೆಯಲ್ಲಿ ಅವರು ಮಧ್ಯಸ್ಥಿಕೆಗೆ ಒಪ್ಪಿದರು. ಗಾಂಧೀಯವರು ಉಪವಾಸವನ್ನು ಮುಕ್ತಾಯಗೊಳಿಸಿದರು. ಮಾಲಿಕರು ಕಾರ್ಮಿಕರಿಗೆ ಸಿಹಿ ಹಂಚುವುದರ ಮೂಲಕ ಈ ಸಮಾರಂಭವನ್ನು ಉತ್ಸವದಂತೆ ಆಚರಿಸಿದರು. ಮಾರ್ಚ್ ೧೯ರಂದು ಒಪ್ಪಂದವಾಯಿತು. ಯಾವ ಮರದಕೆಳಗೆ ಪ್ರತಿಜ್ಞೆ ಕೈಕೊಳ್ಳಲಾಗಿತ್ತೋ ಅದೇ ಮರದ ಕೆಳಗೆ ಒಪ್ಪಂದವನ್ನು ಹಬ್ಬದಂತೆ ಆಚರಿಸಲು ಮಿಲ್ ಮಾಲಿಕರೂ ಕಮಿಷನರ್ ಅವರೂ ಹಾಜರಿದ್ದರು. ಮುಷ್ಕರಕಾರರಿಗೆ ಕಮಿಷನರ್ ಅವರು ಈ ಹಿತವಚನವನ್ನು ನೀಡಿದರು: "ಗಾಂಧೀಜಿಯವರ ಹಿತೋಕ್ತಿಯಂತೆಯೇ ನೀವು ಯಾವಾಗಲೂ ನಡೆದುಕೊಳ್ಳತಕ್ಕದ್ದು".

ಗಾಂಧೀಜಿಯವರ ಪಾಲಿಗೆ ಉಸಿರಾಡಲು ಸಹ ಅವಕಾಶ ಸಿಗಲಿಲ್ಲ. ನೆಯ್ಗೆ ಕಾರ್ಮಿಕರ ಮುಷ್ಕರ ಮುಗಿಯಿತೋ ಇಲ್ಲವೋ ಎನ್ನುವಷ್ಟರಲ್ಲೇ ಖೇಡಾ ಜಿಲ್ಲೆಯ ರೈತರ ಕುಂದು ಕೊರತೆಗಳಿಗೆ ಅವರು ಗಮನ ಕೊಡಬೇಕಾಯಿತು.

ವ್ಯಾಪಕವಾದ ಬೆಳೆ ಹಾನಿಯಿಂದಾಗಿ ಖೇಡಾ ಜಿಲ್ಲೆಯ ಸ್ಥಿತಿ ಕ್ಷಾಮದ ಹತ್ತಿರ ಹತ್ತಿರ ಬಂದಿತ್ತು. ಖೇಡಾದ ಪಟ್ಟೇದಾರರು ಆ ವರ್ಷದ ಕಂದಾಯಕ್ಕೆ ತಾತ್ಕಾಲಿಕವಾಗಿ ತಡೆ ಆಜ್ಞೆ ಪಡೆಯುವ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದರು. ಗಾಂಧೀಯವರು

ಬೇಸಾಯಗಾರರಿಗೆ ಯಾವುದೇ ಖಚಿತವಾದ ಸಲಹೆಯನ್ನು ನೀಡುವ ಮುನ್ನವೇ ಭಾರತಸೇವಾ ಸಮಾಜದ ಅಮೃತಲಾಲ್ ಥಕ್ಕರ್, ಜಿ.ಕೆ. ದೇವಧರ್ ಮತ್ತು ಎನ್. ಎಂ. ಜೋಷಿ ಅವರು ಪರಿಸ್ಥಿತಿಯನ್ನು ಪರಿಶೀಲಿಸಿ ಕಮಿಷನರಿಗೆ ವರದಿ ಸಲ್ಲಿಸಿದ್ದರು. ಮೋಹನಲಾಲ್ ಪಾಂಡ್ಯ ಮತ್ತು ಶಂಕರಲಾಲ್ ಪರೀಖ್ ಅವರು ಹೋರಾಟಕ್ಕೆ ಧುಮುಕಿದ್ದರು. ಬೊಂಬಾಯಿನ ವಿಧಾನ ಪರಿಷತ್ತಿನಲ್ಲಿ ವಿಠಲಭಾಯಿ ಪಟೇಲರು ಆಂದೋಳನವನ್ನು ಆರಂಭಿಸಿದ್ದರು. ಈ ಸಂದರ್ಭದಲ್ಲಿ ಒಂದಲ್ಲ, ಹಲವು ನಿಯೋಗಗಳು ಗವರ್ನರ್ ಅವರನ್ನು ಭೇಟಿ ಮಾಡಿದ್ದುವು.

ಬೇಸಾಯಗಾರರ ಬೇಡಿಕೆ ಎಷ್ಟು ಮಧ್ಯಮಾರ್ಗದ್ದಾಗಿತ್ತು ಎಂದರೆ ಅದು ಒಪ್ಪಲು ಯೋಗ್ಯವಾದದ್ದೆಂಬ ಬಲವಾದ ವಾದದಂತೆ ಕಾಣುತ್ತಿತ್ತು. ಭೂ ಕಂದಾಯದ ನಿಯಮಗಳ ಪ್ರಕಾರ ಬೆಳೆ ನಾಲ್ಕಾಣೆಯಷ್ಟು ಅಥವಾ ಅದಕ್ಕಿಂತ ಕಡಮೆ ಆಗಿದ್ದರೆ ಬೇಸಾಯಗಾರರು ಆ ವರ್ಷದ ಕಂದಾಯದ ಪಾವತಿಯನ್ನು ಪೂರ್ಣವಾಗಿ ತಡೆಹಿಡಿದು ಕೊಳ್ಳಬಹುದಾಗಿತ್ತು. ಅಧಿಕೃತ ಅಂಕಿ ಅಂಶಗಳ ಪ್ರಕಾರ ಬೆಳೆ ನಾಲ್ಕಾಣೆಗಿಂತ ಹೆಚ್ಚಾಗಿತ್ತು. ಆದರೆ ರೈತರ ಪ್ರಕಾರ ಅದು ನಾಲ್ಕಾಣೆಗಿಂತ ಕಡಿಮೆಯಾಗಿತ್ತು.

ಗಾಂಧಿಜಿಯವರು ಖುದ್ದಾಗಿ ಐವತ್ತಕ್ಕೂ ಹೆಚ್ಚಿನ ಹಳ್ಳಿಗಳಿಗೆ ಭೇಟಿಕೊಟ್ಟರು. ಸಾಧ್ಯವಾದಷ್ಟು ಜನದ ಜೊತೆ ಮಾತನಾಡಿದರು, ಅವರ ಜಮೀನನ್ನು ನೋಡಿದರು. ಹಳ್ಳಿಗರನ್ನು ತೀವ್ರವಾದ ಪಾಟೀಸವಾಲಿಗೆ ಗುರಿಮಾಡಿ ಕೊನೆಗೆ ಅವರಿಗೆ ಬಂದಿದ್ದ ಬೆಳೆ ನಾಲ್ಕಾಣೆಗಿಂತ ಕಡಮೆಯಾಗಿತ್ತು ಎಂಬುದನ್ನು ಖಚಿತ ಪಡಿಸಿಕೊಂಡರು. ನಿಷ್ಪಕ್ಷಪಾತ ವಾದ ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕು ಎಂದು ಅವರು ಸಲಹೆ ಮಾಡಿದರು. ಸರ್ಕಾರವು ಅವರ ಸಲಹೆಯನ್ನು ತಳ್ಳಿಹಾಕಿತು. ಬಲಪ್ರಯೋಗ ಮಾಡಿ ಕಂದಾಯವನ್ನು ವಸೂಲಿಮಾಡಬೇಕು ಎಂದು ಹಟ ಹಿಡಿಯಿತು. ಗಾಂಧಿಜಿ ಅಂತಿಮವಾಗಿ ನೀಡಿದ ಸಲಹೆ ಇದು: ಇಡೀ ಜಿಲ್ಲೆಯಲ್ಲಿ ಕಂದಾಯದ ಪಾವತಿಯನ್ನು ಪೂರ್ಣವಾಗಿ ತಡೆಹಿಡಿಯುವುದು ನ್ಯಾಯ. ಆದರೂ ಎಲ್ಲರೂ ಒಪ್ಪುವಂತೆ ಎಲ್ಲಿ ಆರಾಣೆಗಿಂತ ಹೆಚ್ಚಿಗೆ ಬೆಳೆ ಆಗಿದೆಯೋ ಆ ಹಳ್ಳಿಗಳನ್ನು ಬಿಟ್ಟು ಉಳಿದ ಕಡೆ ಅರ್ಧ ಕಂದಾಯದ ಪಾವತಿಯನ್ನು ತಡೆಹಿಡಿಯಬೇಕು.

ಸರ್ಕಾರವು ಈ ನ್ಯಾಯವಾದ ಬೇಡಿಕೆಯನ್ನು ತಿರಸ್ಕರಿಸಿತು. ಆದ್ದರಿಂದ ೧೯೧೮ರ ಮಾರ್ಚಿ ೨೨ರಂದು ಪಟ್ಟೇದಾರರು ಸತ್ಯಾಗ್ರಹ ಹೂಡುವಂತೆ ಗಾಂಧಿಜಿ ಸಲಹೆ ಮಾಡಿದರು.

ಖೇಡಾ ಜಿಲ್ಲೆಯ ಸ್ವಯಂ ಸೇವಕರ ಜೊತೆಗೆ ಈ ಹೋರಾಟದಲ್ಲಿ ಗಾಂಧೀಜಿಗೆ ಬೆಂಬಲವಾಗಿ ನಿಂತ ಕಾರ್ಯಕರ್ತರೆಂದರೆ ವಲ್ಲಭಭಾಯಿ ಪಟೇಲ್, ಶಂಕರಲಾಲ್ ಬ್ಯಾಂಕರ್, ಅನಸೂಯಾ ಬಹೆನ್, ಇಂದುಲಾಲ್ ಯಾಜ್ಞಿಕ್ ಮತ್ತು ಮಹಾದೇವ ದೇಸಾಯಿ. ನಾದಿಯದ್ ಅನಾಥಾಶ್ರಮವನ್ನು ಗಾಂಧಿಜಿ ತಮ್ಮ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡರು.

ಸತ್ಯಾಗ್ರಹಿಗಳು ಗಂಭೀರವಾಗಿ ಘೋಷಿಸಿದರು : "ನಮ್ಮ ಹಳ್ಳಿಗಳಲ್ಲಿ ಬೆಳೆ ನಾಲ್ಕಾಣೆಗಿಂತ ಕಡಮೆ ಎಂದು ತಿಳಿದು ಮುಂದಿನ ವರ್ಷದ ವರೆಗೆ ಕಂದಾಯವನ್ನು ವಸೂಲಿ ಮಾಡಕೂಡದು ಎಂದು ಸರ್ಕಾರವನ್ನು ಪ್ರಾರ್ಥಿಸಿಕೊಂಡೆವು. ಆದರೆ ಸರ್ಕಾರವು ನಮ್ಮ ಪ್ರಾರ್ಥನೆಯನ್ನು ಮನ್ನಿಸಿಲ್ಲ. ಆದ್ದರಿಂದ, ಈ ಕೆಳಗೆ ಸಹಿಮಾಡಿರುವ ನಾವು, ಸರ್ಕಾರಕ್ಕೆ ನಾವಾಗಿಯೇ ಪೂರಾ ಅಥವಾ ಬಾಕಿ ಇರುವ ಕಂದಾಯವನ್ನು ಪಾವತಿ ಮಾಡುವುದಿಲ್ಲ. ಸರ್ಕಾರವು ಯಾವುದೇ ಕಾನೂನಿನ ಕ್ರಮವನ್ನು ಬೇಕಾದರೂ ತೆಗೆದು ಕೊಳ್ಳಬಹುದು. ಕಂದಾಯದ ಬೇಪಾವತಿಯಿಂದ ಒದಗುವ ಎಲ್ಲ ಫಲಗಳನ್ನೂ ನಾವು ಸಂತೋಷವಾಗಿ ಅನುಭವಿಸುತ್ತೇವೆ. ನಾವಾಗಿಯೇ ಕಂದಾಯ ಕಟ್ಟಿ ನಮ್ಮದು ಸುಳ್ಳುವಾದ ಎನ್ನಿಸಿಕೊಳ್ಳುವುದಕ್ಕಿಂತ, ಆತ್ಮಗೌರವವನ್ನು ಬಲಿಕೊಡುವುದಕ್ಕಿಂತ ನಮ್ಮ ಜಮೀನನ್ನು ಕಳೆದುಕೊಳ್ಳುವುದೇ ಲೇಸು. ಆದರೆ, ಒಂದು ವೇಳೆ ಸರ್ಕಾರವು ಇಡೀ ಜಿಲ್ಲೆಯಲ್ಲಿ ಕಂದಾಯದ ಎರಡನೆಯ ಕಂತಿನ ವಸೂಲಿಯನ್ನು ಕೈಬಿಡುವುದಾದರೆ ನಮ್ಮಲ್ಲಿ ಚೈತನ್ಯವುಳ್ಳವರು ಇಡೀ ಕಂದಾಯವನ್ನಾಗಲಿ, ಬಾಕಿ ಇರುವಷ್ಟನ್ನಾಗಲಿ ಕೊಟ್ಟು ಬಿಡುತ್ತೇವೆ. ಕಂದಾಯ ಕೊಡುವ ಚೈತನ್ಯ ಇರುವವರು ಕೂಡ ಏಕೆ ಕೊಡುತ್ತಿಲ್ಲ ಎಂದರೆ ಬಡವರಾಗಿರುವ ರೈತರು ಗಾಬರಿಯಾಗಿ ಕಂದಾಯ ಕಟ್ಟಲು ಇದ್ದುಬಿದ್ದದ್ದನ್ನು ಮಾರಿ ಸಾಲ ಸೋಲಕ್ಕೆ ಸಿಕ್ಕಿ ಹಾಳಾಗುತ್ತಾರಲ್ಲಾ ಎಂದು. ಈ ಪರಿಸ್ಥಿತಿಯಲ್ಲಿ ಬಡವರಿಗಾಗಿ ಇದ್ದವರು ಕೂಡ ತಮ್ಮ ಕಂದಾಯವನ್ನು ಕಟ್ಟದೇ ಇರುವುದು ಕರ್ತವ್ಯ ಎಂದು ನಮ್ಮ ಭಾವನೆ". ಸತ್ಯಾಗ್ರಹಿಗಳ ಸಂಖ್ಯೆ ೩೦೦೦ವನ್ನು ಮೀರಿತು.

ಯುದ್ಧವು ವಿಷಮ ಸ್ಥಿತಿಯನ್ನು ಮುಟ್ಟಿದ ಸಮಯದಲ್ಲಿ ಈ ಚಳುವಳಿಯನ್ನು ಆರಂಭಿಸಿದ್ದಕ್ಕಾಗಿ ಕಮಿಷನರ್ ಗಾಂಧಿಜಿಯನ್ನು ದೂಷಿಸಿದರು. ಏಪ್ರಿಲ್ ೧೫ರಂದು ಗಾಂಧಿಜಿ ಉತ್ತರ ಕೊಟ್ಟರು:

"ಈ ವಿಷಮ ಸ್ಥಿತಿಯನ್ನು ಕಮಿಷನರ್ ಅವರೇ ಆಹ್ವಾನಿಸಿಕೊಂಡಿದ್ದಾರೆ. ಇವನ್ನು ಎಂಥ ಅಂಧಮಂತ್ರವನ್ನಾಗಿ ಮಾಡಿ ಕೂರಿಸಿದ್ದಾರೆ ಎಂದರೆ ಮೊದಲೇ ಅವರು ಲಾರ್ಡ್ ವಿಲಿಂಗ್‌ಡನ್ ಅವರ ತೀರ್ಮಾನದ ವಿರುದ್ಧ ಏನೂ ಮಾಡುವಂತಿಲ್ಲ. ಇದೇ ಕಮಿಷನರ್ ಕೈಯ್ಯಲ್ಲಿರುವ ಆಯುಧ. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಅವರು ಯುದ್ಧದ ಹೆಸರು ಹೇಳುತ್ತಾರೆ. ಸಾಮ್ರಾಜ್ಯಕ್ಕೆ ಇಂಥ ಅಪಾಯ ಒದಗಿರುವಾಗ ರೈತರೂ ನಾನೂ ನಮ್ಮ ಧ್ಯೇಯವನ್ನು ಕೈಬಿಡಬೇಕು ಎನ್ನುತ್ತಿದ್ದಾರೆ. ಆದರೆ ಕಮಿಷನರ್ ಅವರ ಈ ಮನೋಭಾವ ಜರ್ಮನ್ ಅಪಾಯಕ್ಕಿಂತ ಹೆಚ್ಚಿನ ಅಪಾಯವನ್ನು ಒಡ್ಡುವಂಥದು ಎಂದು ಸೂಚಿಸುವ ಸಾಹಸ ಮಾಡುತ್ತಿದ್ದೇನೆ. ಒಳಗಿನ ಈ ಅಪಾಯದಿಂದ ಸಾಮ್ರಾಜ್ಯ ವನ್ನು ರಕ್ಷಿಸಿ ನಾನು ಅದಕ್ಕೆ ಸೇವೆ ಸಲ್ಲಿಸುತ್ತಿದ್ದೇನೆ. ಭರತಖಂಡವು ತನ್ನ ದೀರ್ಘ ನಿದ್ರೆ ಯಿಂದ ಎಚ್ಚೆತ್ತುಕೊಳ್ಳುತ್ತಿದೆ ಎಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ತಮ್ಮ ಹಕ್ಕುಗಳೇನು, ಕರ್ತವ್ಯಗಳೇನು ಎಂಬುದನ್ನು ಅರಿಯಲು ರೈತರು ಅಕ್ಷರಸ್ಥರೇನೂ ಆಗಿರಬೇಕಾಗಿಲ್ಲ, ತಮ್ಮ ಶಕ್ತಿ ಅಭೇದ್ಯವಾದದ್ದು ಎಂದು ಅವರು ಮನಗಾಣಬೇಕು

ಅಷ್ಟೆ. ಆಗ ಯಾವ ಸರ್ಕಾರವೂ, ಅದು ಎಷ್ಟೇ ಬಲಿಷ್ಠವಾದದ್ದಾದರೂ, ಅವರ ಸಂಕಲ್ಪಕ್ಕೆ ವಿರುದ್ಧವಾಗಿ ನಿಲ್ಲಲಾರದು. ಖೇಡಾ ರೈತರು ಭಾರತದಲ್ಲಿ ಮಹತ್ತ್ವಮಾಣದ ಸಾರ್ವಭೌಮ ಸಮಸ್ಯೆಯನ್ನು ಬಿಡಿಸುತ್ತಿದ್ದಾರೆ. ತಮ್ಮ ಒಪ್ಪಿಗೆಯಿಲ್ಲದೆ ತಮ್ಮನ್ನು ಆಳುವುದು ಅಸಾಧ್ಯ ಎಂಬುದನ್ನು ಅವರು ತೋರಿಸಿಯೇ ತೀರುತ್ತಾರೆ. ಸರ್ಕಾರದ ಅಪ್ಪಣೆಗಳು ವಿಚಾರರಹಿತ ಹಾಗೂ ಅನ್ಯಾಯ ಎಂದು ಅವರ ವಿವೇಚನೆಗೆ ಕಂಡಾಗಲೂ ಅವುಗಳನ್ನು ಪಾಲಿಸುವಂತೆ ರೈತರನ್ನು ಒತ್ತಾಯಿಸಲು ಯುದ್ಧವು ಪರವಾನಗಿಯನ್ನು ಕೊಡುವುದಿಲ್ಲ".

ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ಕಮಿಷನರ್ ಬೆದರಿಕೆ ಹಾಕಿದರು: "ಅವಿಧೇಯರಾಗಿರುವವರಿಗೆ ಇನ್ನು ಮುಂದೆ ಜಮೀನು ದೊರಕುವುದಿಲ್ಲ. ಹಕ್ಕಿನ ದಾಖಲೆಗಳಲ್ಲಿ ಅವರ ಹೆಸರುಗಳಿರುವುದು ಸರ್ಕಾರಕ್ಕೆ ಇಷ್ಟವಿಲ್ಲ. ಹೆಸರು ವಜಾ ಆದವರನ್ನು ಮತ್ತೆ ಎಂದಿಗೂ ಸೇರಿಸಿಕೊಳ್ಳುವುದೇ ಇಲ್ಲ".

ಪ್ರಾರಂಭದಲ್ಲಿ ಸರ್ಕಾರವು ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆದರೆ ಯಾವಾಗ ರೈತರು ಬಗ್ಗುವ ಚಿಹ್ನೆಗಳು ಕಾಣಲಿಲ್ಲವೋ ಆಗ ಅಧಿಕಾರಿಗಳು ಬಲ ಪ್ರಯೋಗಕ್ಕೆ ತೊಡಗಿದರು. ಅಧಿಕಾರಿಗಳು ರೈತರ ದನಕರುಗಳನ್ನು ಮಾರಿದರು, ಕೈಗೆ ಸಿಕ್ಕಿದ ಚರಾಸ್ತಿಯನ್ನೆಲ್ಲಾ ವಶಪಡಿಸಿಕೊಂಡರು. ಜುಲ್ಮಾನೆಯ ನೋಟೀಸುಗಳನ್ನು ಜಾರಿ ಮಾಡಿದರು. ಕೊಯ್ಲಿಗೆ ಬಂದಿದ್ದ ಬೆಳೆಗಳನ್ನು ಜಫ್ತಿ ಮಾಡಿದರು. ಇದೆಲ್ಲದರಿಂದ ರೈತರು ಬೆದರಿದರು. ಕೆಲವರು ಕಂದಾಯದ ಬಾಕಿಯನ್ನು ಪಾವತಿ ಮಾಡಿದರು ಮತ್ತು ಕೆಲವರು ಸುಲಭವಾದ ಚರಾಸ್ತಿಯನ್ನು ಅಧಿಕಾರಿಗಳಿಗೆ ಒಪ್ಪಿಸಿದರು. ಅವನ್ನೇ ಜಫ್ತಿ ಮಾಡಿ ಬಾಕಿಗೆ ವಜಾ ಹಾಕಿಕೊಳ್ಳಲಿ ಎಂಬುದು ಅವರ ಉದ್ದೇಶ.

ಹೆದರಿದ್ದ ರೈತರ ಹೃದಯವನ್ನು ಉಕ್ಕಾಗಿಸುವ ದೃಷ್ಟಿಯಿಂದ ಗಾಂಧೀಜಿ, ಅಕ್ರಮವಾಗಿ ಜಫ್ತಿಮಾಡಿದ್ದ ಈರುಳ್ಳಿ ಬೆಳೆಯನ್ನೂ ಒಂದು ಹೊಲದಲ್ಲಿ ಕಟಾವು ಮಾಡುವಂತೆ ಜನರಿಗೆ ಹೇಳಿದರು. ಹಾಗೆ ಮಾಡಲು ಮೋಹನಲಾಲ ಪಾಂಡ್ಯರು ಮುಂದೆ ಬಂದರು. ಏಳೆಂಟು ಜನ ಅವರ ನೆರವಿಗೆ ನಿಂತರು. ಅವರ ಮೇಲೆ ಅಪರಾಧ ಹೊರಿಸಿ ಶಿಕ್ಷೆ ವಿಧಿಸಲಾಯಿತು. ವಿಚಾರಣೆಯ ದಿನ ಜನ ಕೋರ್ಟನ್ನು ಮುತ್ತಿ ಬಿಟ್ಟರು. ಶಿಕ್ಷೆಗೆ ಗುರಿಯಾಗಿದ್ದ ಸತ್ಯಾಗ್ರಹಿಗಳನ್ನು ಜೈಲಿಗೆ ಒಯ್ಯುವಾಗ ಜನರೂ ಅವರ ಜೊತೆ ಮೆರವಣಿಗೆ ಹೋದರು. 'ಧುಂಗ್ಲೀ ಚೋರ್' ಅಥವಾ ಈರುಳ್ಳಿ ಕಳ್ಳ' ಎಂಬ ಗೌರವದ ಬಿರುದನ್ನು ಅಂದು ಮೋಹನಲಾಲ ಪಾಂಡ್ಯರಿಗೆ ಜನರು ಕೊಟ್ಟರು.

ಸುಮಾರು ನಾಲ್ಕು ತಿಂಗಳ ಹೋರಾಟದ ನಂತರ ಚಳುವಳಿ ಅನಿರೀಕ್ಷಿತವಾಗಿ ಮುಕ್ತಾಯಗೊಂಡಿತು. ನಾದಿಯದ್ ತಾಲ್ಲೂಕಿನ ಮಾಮ್ಲತ್‌ದಾರರು ಗಾಂಧೀಜಿಗೆ ಬರೆದರು–ದುಡ್ಡುಳ್ಳ ಪಟ್ಟೇದಾರರು ಕಂದಾಯ ಪಾವತಿ ಮಾಡಿಬಿಟ್ಟರೆ ಬಡವರಿಗೆ ಕಂದಾಯದ ಪಾವತಿಯನ್ನು ತಡೆಹಿಡಿಯುತ್ತೇವೆ ಎಂದು. ಮಾಮ್ಲತ್‌ದಾರರ ಕಾಗದದಲ್ಲಿ ಸಮೂದಿಸಿದ್ದ ಷರತ್ತಿನಂತೆ ಕಂದಾಯದ ತಡೆಯಾಜ್ಞೆಯನ್ನು ಈಗಾಗಲೇ ಹೊರಡಿಸ ಲಾಗಿದೆ ಎಂದು ಗಾಂಧೀಜಿಗೆ ಕಲೆಕ್ಟರ್ ತಿಳಿಸಿದರು.

ಸರ್ಕಾರದ ಷರತ್ತುಗಳನ್ನು ಗಾಂಧಿಜಿ ಒಪ್ಪಿಕೊಂಡರು. ಜನರ ಪ್ರತಿಜ್ಞೆಯ ಗುರಿ ಇದೇ. ಆದ್ದರಿಂದ ಅದು ಪೂರೈಸಿದಂತೆಯೇ ಆಯಿತು. ಸಭೆಗಳು ನಡೆದುವು–ಜೈಲಿನಿಂದ ಬಿಡುಗಡೆಗೊಂಡ ಸತ್ಯಾಗ್ರಹಿಗಳನ್ನು ಸ್ವಾಗತಿಸಲು ಕೆಲವು; ವಿಜಯವನ್ನು ಆಚರಿಸಲು ಕೆಲವು; ಗಾಂಧೀಜಿಯನ್ನು ಗೌರವಿಸಲು ಹಲವು. ಜೂಲೈ ೨೭ರ ಒಂದು ಸಭೆಯಲ್ಲಿ ಬಿಡುಗಡೆಗೊಂಡ ಸತ್ಯಾಗ್ರಹಿಗಳನ್ನು ಸ್ವಾಗತಿಸುತ್ತಾ ಗಾಂಧಿಜಿ ಹೀಗೆಂದರು: "ಒಂದು ಸಂಧ್ಯಾಕಾಲದ ಹೊಸ್ತಿಲಿನಲ್ಲಿ ನಾವಿದ್ದೇವೆ. ಅದು ಬೆಳಗಿನದೋ ಸಂಜೆಯದೋ ತಿಳಿಯದು. ಒಂದರ ಅನಂತರ ರಾತ್ರಿ ಬರುತ್ತದೆ. ಮತ್ತೊಂದು ಉಷೆಯ ಮುನ್ಸೂಚನೆ. ಸಂಧ್ಯೆಯ ಅನಂತರ ದುಃಖಪೂರ್ಣವಾದ ರಾತ್ರಿಯನ್ನಲ್ಲದೆ ಹಗಲ ಬೆಳಕನ್ನು ಕಾಣಬೇಕು ಎಂಬುದು ನಮ್ಮ ಅಪೇಕ್ಷೆಯಾದರೆ ಹೋಂ ರೂಲಿನವರಾದ ನಮ್ಮಲ್ಲಿ ಪ್ರತಿಯೊಬ್ಬರೂ ಈ ಸಂಧಿಕಾಲದಲ್ಲಿ ಸತ್ಯವನ್ನು ಅರಿಯಬೇಕಾದದ್ದು, ಏನೇ ಅಡ್ಡಿ ಆತಂಕಗಳು ಒದಗಿದರೂ ಅದನ್ನು ಎತ್ತಿ ಹಿಡಿಯಬೇಕಾದದ್ದು. ಏನೇ ಆಗಲಿ ಹಿಂಜರಿಯದೆ ಅದನ್ನು ಆಚರಿಸಿ ಬೋಧಿಸಬೇಕಾದದ್ದೂ ಅತ್ಯವಶ್ಯ. ಸತ್ಯ ಮತ್ತು ಸರಿಯಾದ ಆಚರಣೆಗಳೇ ನಮ್ಮನ್ನು ಹೋಂ ರೂಲಿನವರು ಎಂಬ ಹೆಸರಿಗೆ ಅರ್ಹರನ್ನಾಗಿಸುವುದು"

ತಮಗಿತ್ತ ಮಾನಪತ್ರಕ್ಕೆ ಉತ್ತರವಾಗಿ ಜುಲೈ ೨೯ರಂದು ಗಾಂಧಿಜಿ ಹೇಳಿದರು: "ಜನತೆಯ ಸೇವಕನಾದವನು ಗೌರವಗಳನ್ನು ಒಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಸೇವೆಯನ್ನೇ ಧರ್ಮವನ್ನಾಗಿ ಸ್ವೀಕರಿಸಿದವನು ಗೌರವಕ್ಕಾಗಿ ದುರ್ಮೋಹಗೊಳ್ಳುವುದು ಸಾಧ್ಯವಿಲ್ಲ. ಹಾಗೆ ಮಾಡಿದ ಕ್ಷಣವೇ ಅವನ ಸರ್ವನಾಶ ಸಿದ್ಧ. ನನ್ನನ್ನು ನಿಜವಾಗಿ ಗೌರವಿಸುವುದು ನಿಮ್ಮ ಉದ್ದೇಶವಾಗಿದ್ದರೆ ಗೌರವಗಳನ್ನೂ ಮಾನಪತ್ರಗಳನ್ನೂ ನನ್ನ ಮೇಲೆ ಮಳೆಗರೆಯಬೇಡಿ. ನನ್ನನ್ನು ಗೌರವಿಸುವ ಅತ್ಯುತ್ತಮ ವಿಧಾನವೆಂದರೆ ನನ್ನ ಅಪ್ಪಣೆಯನ್ನು ಪರಿಪಾಲಿಸುವುದು, ನನ್ನ ತತ್ವಗಳನ್ನು ಅನುಷ್ಠಾನಕ್ಕೆ ತರುವುದು".

"ಈ ಚಳುವಳಿಯಲ್ಲಿ ನಾನು ಮಾಡಿದ್ದಾದರೂ ಏನು?" ಎಂದು ಅವರು ಕೇಳಿದರು. "ಏನಾದರೂ ಮಾಡಿದ್ದರೆ ಅದು ಇಷ್ಟೇ: ತನ್ನ ಚಳುವಳಿಗೆ ಅಗತ್ಯವಾದ ಜನರನ್ನು ಆರಿಸಲು ನಾಯಕನಿಗಿರಬೇಕಾದ ಜಾಣ್ಮೆಯನ್ನು ತೋರಿಸಿದ್ದಷ್ಟೇ. ಹಾಗೆ ಆರಿಸುವುದರಲ್ಲಿ ನಾನು ತಕ್ಕಷ್ಟು ಜಾಣತನವನ್ನೇನೋ ತೋರಿಸಿದೆ. ಆದರೆ ನೀವು ಕರ್ತವ್ಯವನ್ನು ಚನ್ನಾಗಿ ನಿರ್ವಹಿಸದೆ ಹೋಗಿದ್ದಿದ್ದರೆ ನಾನು ಏನನ್ನೂ ಸಾಧಿಸುವುದಕ್ಕೆ ಆಗುತ್ತಿರಲಿಲ್ಲ. ವಲ್ಲಭಭಾಯಿ ಪಟೇಲರ ಸಹಾಯ ಇಲ್ಲದೇ ಹೋಗಿದ್ದರೆ ಈ ಚಳುವಳಿಯಲ್ಲಿ ನಾವು ಜಯಗಳಿಸುತ್ತಿರಲಿಲ್ಲ. ಅವರ ವಕೀಲಿ ವೃತ್ತಿಯಲ್ಲಿ ಉತ್ಪಾದನೆ ಹೇರಳವಾಗಿತ್ತು. ಅವರಿಗೆ ಪುರಸಭೆಯ ಕೆಲಸವಿತ್ತು. ಆದರೆ ಅವರು ಎಲ್ಲವನ್ನೂ ತ್ಯಜಿಸಿ ಚಳುವಳಿಯಲ್ಲಿ ಮುಳುಗಿ ಬಿಟ್ಟರು. ಮುಗಿಸುವ ಮುನ್ನ ನಾನು ಹೇಳಬೇಕಾದ ಅಂಶವೊಂದುಂಟು. ಅದು ಬಹುಶಃ ಎಂದೆಂದೂ ನಿಮ್ಮ ಗೌರವಾನ್ವಿತರ ಪಟ್ಟಿಯಲ್ಲಿ ಕಾಣಿಸಿಕೊಳ್ಳಲಾರದಂಥವರಿಗೆ ನನ್ನ ಸ್ತುತಿ ಕಾಣಿಕೆಯನ್ನು ಸಲ್ಲಿಸಬೇಕಾದದ್ದು. ಉಳಿದೆಲ್ಲರಿಗಿಂತಲೂ ಅರ್ಹರಾಗಿರುವ ಆ ಜನ–ಅನಾಥಾಶ್ರಮದ ಭಂಗಿ ಮತ್ತು ಸ್ವಲ್ಪವೂ ಬೇಸರಪಡದೆ ನನಗೆ ಸೇವೆಸಲ್ಲಿಸಿದ ಆಶ್ರಮದ ಮಕ್ಕಳು".

ಸೈನ್ಯದ ಜಮಾವಣಾಧಿಕಾರಿ

೧೯೧೮

ಗಾಂಧೀಜಿ ಅನೇಕ ರಾಷ್ಟ್ರನಿರ್ಮಾಪಕ ಚಟುವಟಿಕೆಗಳಲ್ಲಿ ಆಸಕ್ತರಾದರು. ಅಲ್ಲದೆ ತೀವ್ರವಾದ ಉತ್ಸಾಹದಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಸ್ವದೇಶಿ ಎಂಬುದು ಅವರಲ್ಲಿ ಉರಿಯುತ್ತಿರುವ ಕಟ್ಟಾಸೆಯಾಗಿತ್ತು. ಭಾಷೆ, ಉಡುಪು, ಚಿಂತನೆಗಳಲ್ಲಿ ಸ್ವದೇಶಿತನ ಇರಬೇಕು ಎಂದು ಅವರು ಏಕಪ್ರಕಾರವಾಗಿ ಬರೆದರು, ನುಡಿದರು. "ವಿದೇಶೀ ಉಡುಪನ್ನು ತೊಟ್ಟರೆ ಸ್ವದೇಶಿತನಕ್ಕೆ ಖಂಡಿತ ಭಂಗ ತಂದಂತೆ" ಎಂದರು ಗಾಂಧೀಜಿ, "ಆದರೆ ಉಡುಪಿನಲ್ಲಿ ವಿದೇಶೀ ಫ್ಯಾಷನ್ನನ್ನು ಅನುಸರಿಸಿದರೆ ಆಗಲೂ ಅದಕ್ಕೆ ಭಂಗ ತಂದಂತೆಯೇ. ನಮ್ಮ ಉಡುಪಿನ ಶೈಲಿಗೂ ನಮ್ಮ ಆವರಣಕ್ಕೂ ಸಂಬಂಧ ಇದ್ದೇ ಇದೆ. ಸೊಗಸು ಸದಭಿರುಚಿಗಳ ದೃಷ್ಟಿಯಿಂದ ಷರ್ಟು ಷರಾಯಿಗಳಿಗಿಂತ ನಮ್ಮದು ಅನಂತಪಾಲು ಉತ್ತಮ. ಪೈಜಾಮಾ ಮೇಲೆ ಷರ್ಟನ್ನು ಇಳಿಬಿಟ್ಟು,ಹಿಂದೆ ಅರುಗುಗಳನ್ನು ನೇತಾಡಿಸುತ್ತ ವೇಸ್ಟ್ ಕೋಟ್ ತೊಟ್ಟು, ಟೈ ರಹಿತನಾಗಿ ಓಡಾಡುತ್ತಿರುವ ಭಾರತೀಯನು ನೋಡಲು ಅಷ್ಟೇನೂ ಗಂಭೀರ ನೋಟವಲ್ಲ".

ಹಿಂದಿ ರಾಷ್ಟ್ರಭಾಷೆಯಾಗಬೇಕು ಎಂದು ಅವರು ಒತ್ತಿ ಹೇಳಿದರು: "ಹಿಂದಿಯೊಡನೆ ಸ್ಪರ್ಧಿಸುವಷ್ಟು ಶಕ್ತಿಯಿರುವ ಭಾಷೆ ಬೇರೊಂದಿಲ್ಲ. ಹಿಂದಿಯನ್ನು ಬಿಟ್ಟರೆ ಬಂಗಾಳಿಯೇ ಸಶಕ್ತವಾದದ್ದು. ಆದರೆ ಬಂಗಾಳದ ಹೊರಗೆ ಬಂಗಾಳಿಗಳೇ ಹಿಂದಿಯನ್ನು ಬಳಸುತ್ತಾರೆ. ಹಿಂದಿ ಮಾತನಾಡುವವರು ಎಲ್ಲೇ ಹೋಗಲಿ ಹಿಂದಿಯನ್ನು ಬಳಸುತ್ತಾರೆ. ಅದನ್ನು ನೋಡಿದರೆ ಏನೂ ಆಶ್ಚರ್ಯವಾಗುವುದಿಲ್ಲ. ಭಾರತಾದ್ಯಂತ ಹಿಂದೂ ಉಪದೇಶಕರೂ ಮುಸ್ಲಿಂ ಮೌಲ್ವಿಗಳೂ ಧಾರ್ಮಿಕ ಬೋಧನೆಗಳನ್ನು ನೀಡುವುದು ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ. ಅನಕ್ಷರಸ್ಥರಿಗೆ ಕೂಡ ಅವು ಅರ್ಥವಾಗುತ್ತವೆ. ಉತ್ತರಕ್ಕೆ ಹೋದಾಗ ಅನಕ್ಷರಸ್ಥ ಗುಜರಾತಿ ಕೂಡ ಕೆಲವು ಹಿಂದಿ ಪದಗಳನ್ನು ಬಳಸಲು ಪ್ರಯತ್ನಿಸುತ್ತಾನೆ. ಆದರೆ ಉತ್ತರದಿಂದ ಬಂದ ದರ್ವಾನ ಕೂಡ ತನ್ನ ಸಾಹುಕಾರನೊಂದಿಗೆ ಗುಜರಾತಿಯಲ್ಲಿ ಮಾತನಾಡಲು ಒಪ್ಪುವುದಿಲ್ಲ. ಪರಿಣಾಮವಾಗಿ ಸಾಹುಕಾರನೇ ಅವನೊಂದಿಗೆ ಹರಕು ಮುರುಕು ಹಿಂದಿಯಲ್ಲಿ ಮಾತನಾಡಬೇಕಾಗುತ್ತದೆ. ದ್ರಾವಿಡ ಪ್ರದೇಶದಲ್ಲಿ ಹಿಂದಿ ಮಾತನಾಡುವುದನ್ನು ಕೇಳಿದ್ದೇನೆ. ಮದರಾಸಿನಲ್ಲಿ ಇಂಗ್ಲಿಷ್ ಭಾಷೆಯನ್ನು ಬಳಸಿ ನಿರ್ವಹಿಸಬಹುದು ಎಂಬುದು ನಿಜವಲ್ಲ. ಅಲ್ಲಿ ಕೂಡ ನನಗೆ ಹಿಂದಿ ಉಪಯೋಗಕ್ಕೆ ಬಂದಿದೆ. ಮದರಾಸಿನ ಪ್ರಯಾಣಿಕರು ರೈಲುಗಳಲ್ಲಿ ಹಿಂದಿಯನ್ನು ಬಳಸುವುದನ್ನು ಕೇಳಿದ್ದೇನೆ. ಭಾರತಾದ್ಯಂತ ಮುಸಲ್ಮಾನರು

ಉರ್ದು ಬಳಸುತ್ತಾರೆ, ಅವರು ಎಲ್ಲ ಪ್ರಾಂತಗಳಲ್ಲೂ ಇದ್ದಾರೆ ಎಂಬುದು ಗಮನಾರ್ಹ ಸಂಗತಿ. ಹೀಗಾಗಿ ಹಿಂದಿಯು ರಾಷ್ಟ್ರಭಾಷೆಯಾಗುವುದು ಕಟ್ಟಿಟ್ಟದ್ದು. ಹಿಂದಿನ ಕಾಲದಲ್ಲಿ ಹಿಂದಿಯನ್ನು ಹಾಗೆ ಬಳಸಿದ್ದೇವೆ. ಉರ್ದು ಅಸ್ತಿತ್ವಕ್ಕೆ ಬಂದದ್ದೇ ಆ ಕಾರಣದಿಂದ. ಪರ್ಷಿಯನ್ ಅಥವಾ ಅರಾಬಿಕ್ ಭಾಷೆಯನ್ನು ಭಾರತದ ರಾಷ್ಟ್ರಭಾಷೆ ಯನ್ನಾಗಿ ಮಾಡುವುದು ಮುಸ್ಲಿಂ ರಾಜರಿಗೆ ಸಾಧ್ಯವಾಗಲಿಲ್ಲ. ಅವರು ಹಿಂದಿ ವ್ಯಾಕರಣವನ್ನು ಒಪ್ಪಿಕೊಂಡರು. ಆದರೆ ಬರಹಕ್ಕೆ ಉರ್ದು ಲಿಪಿಯನ್ನೂ ಮಾತಿಗೆ ಪರ್ಷಿಯನ್ ಪದಗಳನ್ನು ಬಳಸಿಕೊಂಡರು".

ಲಿಪಿಯ ಪ್ರಶ್ನೆಯನ್ನು ಕುರಿತು ಗಾಂಧೀಜಿ ಹೇಳಿದರು: "ಮುಸ್ಲಿಮರ ಮಕ್ಕಳು ಸದ್ಯಕ್ಕೆ ಉರ್ದು ಲಿಪಿಯಲ್ಲಿ ಬರೆಯುತ್ತಾರೆ, ನಿಜ. ಹಿಂದುಗಳು ಬಹುಪಾಲು ದೇವನಾಗರಿ ಲಿಪಿಯಲ್ಲಿ ಬರೆಯುತ್ತಾರೆ. ಬಹುಪಾಲು ಎಂದು ಏಕೆ ಹೇಳುತ್ತೇನೆ ಎಂದರೆ ಸಹಸ್ರಾರು ಜನ ಹಿಂದುಗಳು ಉರ್ದು ಲಿಪಿಯನ್ನು ಬಳಸುತ್ತಾರೆ. ಕೆಲವರಿಗೆ ದೇವನಾಗರಿ ಲಿಪಿ ಗೊತ್ತೇ ಇಲ್ಲ. ಆದರೆ, ಹಿಂದೂ ಮುಸ್ಲಿಮರೂ ಒಬ್ಬರನೊಬ್ಬರು ಸಂಶಯವಿಲ್ಲದೆ ನೋಡಲು ಕಲಿತಾಗ, ಸಂಶಯಕ್ಕೆ ಕಾರಣಗಳು ಮಾಯವಾದಾಗ ಹೆಚ್ಚು ಶಕ್ತಿಯುತವಾದ ಲಿಪಿಯನ್ನು ಸಾರ್ವತ್ರಿಕವಾಗಿ ಬಳಸುತ್ತಾರೆ. ಆದ್ದರಿಂದ ಅದು ರಾಷ್ಟ್ರಲಿಪಿಯಾಗುತ್ತದೆ".

ತೀವ್ರವಾದ ಸಾಮಾಜಿಕ ಸುಧಾರಣೆಯಿಂದ ಸ್ವರಾಜ್ಯ ಸ್ಥಾಪಿತವಾಗುತ್ತದೆ ಎಂದು ಗಾಂಧೀಜಿ ನಂಬಿದ್ದರು. ಸ್ತ್ರೀಯರು ಪುರುಷರಿಗೆ ಹೆಗಲೆಣೆಯಾಗಿ ಕೆಲಸ ಮಾಡ ಬೇಕು ಎಂದು ಅವರು ಬಯಸಿದರು. ಬೊಂಬಾಯಿಯ ಭಗಿನೀ ಸಮಾಜದ ವಾರ್ಷಿಕ ಸಭೆಯನ್ನುದ್ದೇಶಿಸಿ ಅವರು ಹೀಗೆ ಹೇಳಿದರು; "ಗಂಡಿನ ಒಡನಾಡಿ ಹೆಣ್ಣು. ಗಂಡಿನಷ್ಟೇ ಬುದ್ಧಿಶಕ್ತಿಗಳು ಅವಳಿಗುಂಟು. ಗಂಡಿನ ಸಮಸ್ತ ಚಟುವಟಿಕೆಗಳ ಪ್ರತಿಯೊಂದು ಸೂಕ್ಷ್ಮಾತಿಸೂಕ್ಷ್ಮ ವಿವರದಲ್ಲೂ ಭಾಗವಹಿಸುವ ಹಕ್ಕು ಅವಳಿಗುಂಟು. ಅವನಿಗೆ ಸಮಾನವಾದ ಸ್ವಾತಂತ್ರ್ಯ, ಬಿಡುಗಡೆಗಳ ಹಕ್ಕು ಅವಳಿಗುಂಟು. ತನ್ನ ಚಟುವಟಿಕೆಯ ಕ್ಷೇತ್ರದಲ್ಲಿ ಪುರುಷನಿಗೆ ಹೇಗೆ ಪರಮಾಧಿಕಾರವುಂಟೋ ಹಾಗೆಯೇ ತನ್ನದರಲ್ಲಿ ಸ್ತ್ರೀಗೆ. ಓದುಬರಹದ ಪರಿಣಾಮವಾಗಿ ಮಾತ್ರ ಆಗತಕ್ಕದ್ದಲ್ಲ ಇದು. ಸಹಜವಾದ ವಸ್ತುಸ್ಥಿತಿಯೇ ಹಾಗಿರಬೇಕು. ಕೇವಲ ದುಷ್ಟ ವ್ಯವಸ್ಥೆಯ ಪರಿಣಾಮವಾಗಿ ಅತ್ಯಂತ ಅಜ್ಞಾನಿಗಳೂ ಅಯೋಗ್ಯರೂ ಆದ ಪುರುಷರು ಸ್ತ್ರೀಯರಿಗಿಂತ ಮೇಲುಗೈತನವನ್ನು ಪಡೆದಿದ್ದಾರೆ. ಅದನ್ನು ಪಡೆಯಲು ಅವರು ಅರ್ಹರಲ್ಲ, ಪಡೆಯಲೂ ಕೂಡದು. ನಮ್ಮ ಅನೇಕ ಚಟುವಟಿಕೆಗಳು ಅರ್ಧದಲ್ಲಿಯೇ ತಣ್ಣಗಾಗುತ್ತವೆ, ಕಾರಣ ನಮ್ಮ ಸ್ತ್ರೀಯರಿರುವ ಸ್ಥಿತಿ. ನಮ್ಮ ಬಹುಪಾಲು ಚಟುವಟಿಕೆಗಳಿಗೆ ಸರಿಯಾದ ಫಲ ದೊರಕುತ್ತಿಲ್ಲ: ನಮ್ಮ ಸ್ಥಿತಿ ಇರುವುದು ಸಾಕಷ್ಟು ಬಂಡವಾಳ ಹೂಡದ ಕಾಸಿಗೆ ಜಾಣ ರೂಪಾಯಿಗೆ ಮೂರ್ಖ ಎನ್ನುವ ವರ್ತಕನ ಹಾಗೆ".

ಬಡ ಪ್ರಯಾಣಿಕರ ಪರವಾಗಿ ಚಳುವಳಿ ಹೂಡಲು ಅವರಿಗೆ ಸಾಕಷ್ಟು ಕಾಲಾವಕಾಶ ದೊರಕಿತು: "ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿ ಎರಡು ವರ್ಷಗಳ ಮೇಲಾಯಿತು. ಅದರಲ್ಲಿ ಕಾಲು ಭಾಗದಷ್ಟನ್ನು ಸ್ವಂತ ಇಚ್ಛೆಯಿಂದ ಮೂರನೆಯ ತರಗತಿಯಲ್ಲೇ ಪ್ರಯಾಣ ಮಾಡುತ್ತಾ ರೈಲುಗಳಲ್ಲೇ ಕಳೆದಿದ್ದೇನೆ. ಉತ್ತರದಲ್ಲಿ ಲಾಹೋರಿನ ವರೆಗೆ ದಕ್ಷಿಣದಲ್ಲಿ ಟ್ರಾಂಕ್ವಿಬಾರ್ ವರೆಗೆ, ಇತ್ತ ಕರಾಚಿಯಿಂದ ಅತ್ತ ಕಲ್ಕತ್ತದ ವರೆಗೆ ಪ್ರಯಾಣ ಮಾಡಿದ್ದೇನೆ. ಮೂರನೆಯ ದರ್ಜೆಯ ಪ್ರಯಾಣಿಕರ ಸ್ಥಿತಿಗತಿಗಳೇನು ಎಂಬುದನ್ನು ಕಂಡು ಹಿಡಿಯುವುದೂ ಒಂದು ಕಾರಣ ಈ ದರ್ಜೆಯಲ್ಲಿ ನಾನು ಪ್ರಯಾಣ ಮಾಡುವುದಕ್ಕೆ. ಹೀಗಾಗಿ ಸಹಜವಾಗಿಯೇ ಸಾಕಷ್ಟು ತೀಕ್ಷ್ಣವಾದ ವೀಕ್ಷಣವನ್ನು ನಾನು ಮಾಡಿದ್ದೇನೆ. ಬಹಳಕಾಲ ಪರಿಹಾರ ದೊರಕದೇ ಹೋಗಿರುವ ಒಂದು ಅನ್ಯಾಯದ ವಿರುದ್ಧ ಧರ್ಮಯುದ್ಧವನ್ನು ಹೂಡಲು ಪತ್ರಿಕೆಗಳನ್ನು ಸಾರ್ವಜನಿಕರನ್ನೂ ಕರೆಯಬೇಕಾದ ಕಾಲ ಈಗ ಬಂದಿದೆ".

ಮುಂದುವರಿದು ಗಾಂಧಿಜಿ ಹೇಳಿದರು: "ಮೂರನೆಯ ದರ್ಜೆಯ ಪ್ರಯಾಣಿಕರನ್ನು ಉಪೇಕ್ಷಿಸಿದ್ದರಿಂದ ಲಕ್ಷಾಂತರ ಜನರಿಗೆ ಕ್ರಮನಿಷ್ಠೆ, ಸ್ವಚ್ಛತೆ, ಸಜ್ಜನಶೀಲ ಸಹಬಾಳ್ವೆಗಳಲ್ಲಿ ಸೊಗಸಾದ ಶಿಕ್ಷಣ ನೀಡುವ, ಸರಳವೂ ಶುಚಿಯೂ ಆದ ಅಭಿರುಚಿಗಳನ್ನು ಬೆಳಸುವ ಅವಕಾಶ ಕಳೆದು ಹೋಗುತ್ತಿದೆ." ಅವರು ನೀಡಿದ ಅನೇಕ ಸಲಹೆಗಳಲ್ಲಿ ಇವು ಕೆಲವು: "ಉನ್ನತವಾದ ಅಧಿಕಾರಗಳಲ್ಲಿ ಇರುವ ಹಾಗೂ ಸಾಮಾನ್ಯವಾಗಿ ಉನ್ನತ ದರ್ಜೆಗಳಲ್ಲೇ ಪ್ರಯಾಣ ಮಾಡುವ ವೈಸರಾಯ್, ಕಮಾಂಡರ್–ಇನ್–ಚೀಫ್ ಮತ್ತು ರಾಜ ಮಹಾರಾಜರು, ಸರಕಾರದ ಉನ್ನತ ಕೌನ್ಸಿಲರುಗಳು ಮತ್ತಿತರರು ಯಾವ ಪೂರ್ವಭಾವಿ ಎಚ್ಚರಿಕೆಗಳನ್ನೂ ನೀಡದೆ ಆಗಾಗ ಈ ಮೂರನೆಯ ದರ್ಜೆಯ ಪ್ರಯಾಣದ ಅನುಭವಗಳನ್ನು ಪಡೆಯಲಿ. ಹಾಗಾದಲ್ಲಿ ಮೂರನೆಯ ದರ್ಜೆಯ ಪ್ರಯಾಣದ ಸ್ಥಿತಿಗತಿಗಳಲ್ಲಿ ಗಮನ ಸೆಳೆಯುವ ಬದಲಾವಣೆಯನ್ನು ಬಹುಬೇಗ ಕಾಣುತ್ತೇವೆ".

ಏಪ್ರಿಲ್ ೧೭ರಂದು ವೈಸರಾಯಿಯ ಆಪ್ತ ಕಾರ್ಯದರ್ಶಿಯು ಗೃಹಸಚಿವನಿಗೆ ಬರೆದ: "ತಮ್ಮನ್ನು ಭೇಟಿ ಮಾಡುವಂತೆ ಗಾಂಧೀಜಿಗೆ ಆಹ್ವಾನ ನೀಡುವುದು ಒಳ್ಳೆಯದೇ ಅಲ್ಲವೇ ಎಂಬ ವಿಷಯದಲ್ಲಿ ವೈಸರಾಯ್ ನಿಮ್ಮ ಅಭಿಪ್ರಾಯವನ್ನು ತಿಳಿಯ ಬಯಸುತ್ತಾರೆ. ಅವರ ಅಶಾಂತಿಯುತ ಚಟುವಟಿಕೆಗಳನ್ನು ಪ್ರಯೋಜನಕಾರಿಯಾದ ವಾಹಿನಿಗೆ ಹರಿಸುವುದು ಸಾಧ್ಯ ಎಂದು ತೋರುತ್ತದೆ. ಹಾಗೆ ಮಾಡದೆ ಅವರ ತಂತ್ರಕ್ಕವರನ್ನು ಬಿಟ್ಟರೆ, ಅವರ ಚಲನವಲನಗಳೂ ಶಕ್ತಿಗಳೂ ಸದಾ ತೊಂದರೆಗೇ ಒಯ್ಯುತ್ತವೆ." ಗೃಹ ಸಚಿವನಿಂದ ಉತ್ತರ ಬಂತು: "ಗಾಂಧೀಜಿಗೆ ಮೆಸಪಟೋಮಿಯಾ ಅಥವಾ ಫ್ರಾನ್ಸಿಗೆ ಹೋಗಿ ಯುದ್ಧದಲ್ಲಿ ಸೇವೆ ಸಲ್ಲಿಸುವ ಕಾತರ ಇರುವುದು ನನ್ನ ಗಮನಕ್ಕೆ ಬಂದಿದೆ. ಯಾವುದೇ ಅಧಿಕಾರವನ್ನಾದರೂ ಕೊಟ್ಟು ಅವರನ್ನು ಮೆಸಪಟೋಮಿಯಾಕ್ಕೆ ಕಳುಹಿ ಬಿಟ್ಟರೆ, ಎಷ್ಟೋ ತೊಂದರೆ ತಪ್ಪುತ್ತದೆ".

ಏಪ್ರಿಲ್ ಕೊನೆಯಲ್ಲಿ ದೆಹಲಿಯಲ್ಲಿ ಯುದ್ಧ ಸಮ್ಮೇಳನದಲ್ಲಿ ಭಾಗವಹಿಸುವಂತೆ ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್‌ಫರ್ಡನಿಂದ ಗಾಂಧೀಜಿಗೆ ಆಹ್ವಾನ ಬಂತು. ಗಾಂಧೀಜಿ ಆಹ್ವಾನಕ್ಕೆ ಓಗೊಟ್ಟರು, ಆದರೆ ಯುದ್ಧ ಸಭೆಯಲ್ಲಿ ಭಾಗವಹಿಸಲು ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ಅವುಗಳಲ್ಲಿ ಮುಖ್ಯವಾದದ್ದು ನಾಯಕರಾದ ತಿಲಕರು, ಶ್ರೀಮತಿ ಬೆಸೆಂಟ್ ಮತ್ತು ಆಲಿ ಸಹೋದರರು ಮುಂತಾದವರನ್ನು ಆಹ್ವಾನಿಸದೆ ಬಿಟ್ಟಿದ್ದದ್ದು. ದೆಹಲಿಯನ್ನು ಸೇರಿ ಗಾಂಧೀಜಿ ಸಭೆಯಲ್ಲಿ ಭಾಗವಹಿಸಲು ತಾವು ಹಿಂದುಮುಂದು ನೋಡುತ್ತಿರುವ ಕಾರಣವನ್ನು ವಿವರಿಸಿ ಕಾಗದ ಬರೆದರು. ವೈಸರಾಯಿಯು ಗಾಂಧೀಜಿಯನ್ನು ಮಾತುಕತೆಗೆ ಕರೆದು ಹೇಳಿದ: ಸಾಮ್ರಾಜ್ಯವು ಒಟ್ಟಿನಲ್ಲಿ ಒಳಿತನ್ನೇ ಸಾಧಿಸುತ್ತಿರುವ ಶಕ್ತಿಯಾಗಿ ವರ್ತಿಸುತ್ತ ಬಂದಿದೆ ಎಂದು ಗಾಂಧೀಜಿ ಒಪ್ಪುವುದಾದರೆ ಈ ಸಂಕಷ್ಟದ ವರ್ಷದಲ್ಲಿ ಅವರು ಬ್ರಿಟಿಷರಿಗೆ ನೆರವು ನೀಡತಕ್ಕದ್ದು, ಎಂದು. ವೈಸ್‌ರಾಯಿ ವಾದಿಸಿದ: "ನೀವು ಯಾವುದೇ ನೈತಿಕ ಪ್ರಶ್ನೆಗಳನ್ನು ಎತ್ತಬಹುದು, ನಿಮಗೆ ಇಷ್ಟ ಬಂದಷ್ಟು ಸವಾಲುಗಳನ್ನು ನಮ್ಮ ಮೇಲೆ ಒಡ್ಡಬಹುದು, ಆದರೆ ಅವೆಲ್ಲ ಯುದ್ಧ ಮುಗಿದ ಮೇಲೆ, ಇಂದಲ್ಲ".

ಸಮ್ಮೇಳನ ನಡೆಯುತ್ತಿದ್ದಾಗ ಜನರನ್ನು ಸೈನ್ಯಕ್ಕೆ ಸೇರಿಸುವ ನಿರ್ಣಯಕ್ಕೆ ಗಾಂಧೀಜಿ ಬೆಂಬಲ ನೀಡಬೇಕೆಂದು ವೈಸ್‌ರಾಯ್ ಕೇಳಿಕೊಂಡರು. ಹಿಂದೂಸ್ತಾನಿಯಲ್ಲೇ ಮಾತನಾಡಲು ತಮಗೆ ಅವಕಾಶ ನೀಡಬೇಕೆಂದು ಗಾಂಧೀಜಿ ಒತ್ತಾಯ ಮಾಡಿದರು. ವೈಸ್‌ರಾಯ್ ಒಪ್ಪಿದರು. ಈ ಅರ್ಥ ಬರುವಂತೆ ಒಂದೇ ಒಂದು ವಾಕ್ಯವನ್ನು ಗಾಂಧಿ ಹೇಳಿದರು: "ನನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅರಿತವನಾಗಿ ಈ ನಿರ್ಣಯಕ್ಕೆ ಬೆಂಬಲ ನೀಡಲು ನಾನು ಅಪ್ಪಣೆ ಬೇಡುತ್ತಿದ್ದೇನೆ".

ಯುದ್ಧ ಸಮ್ಮೇಳನ ಮುಗಿದ ಮೇಲೆ ವೈಸ್‌ರಾಯರಿಂದ ಜನ ಏನನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ತಿಳಿಸಿ ಗಾಂಧೀಜಿ ಅವರಿಗೆ ಪತ್ರ ಬರೆದರು. ಸಮ್ಮೇಳನ ಮುಗಿದ ಕೂಡಲೇ ವೈಸ್‌ರಾಯ್ ಸಿಮ್ಲಾಕ್ಕೆ ಹೋಗಿದ್ದರು. ಕಾಗದವನ್ನು ಅಲ್ಲಿಗೇ ಕಳುಹಿಸಬೇಕಾಯಿತು. ಗಾಂಧೀಜಿಯವರ ಅಭಿಪ್ರಾಯದಲ್ಲಿ ಆ ಕಾಗದ ತುಂಬ ಮಹತ್ವದ್ದು. ಆದ್ದರಿಂದ ಅದನ್ನು ಅಂಚೆಯಲ್ಲಿ ಕಳುಹಿಸಲು ಅವರು ಇಷ್ಟಪಡಲಿಲ್ಲ. ವೈಸ್‌ರೀಗಲ್ ಲಾಡ್ಜಿಗೆ ಅದನ್ನು ತಲುಪಿಸುವ ಭಾರವನ್ನು ಗಾಂಧೀಜಿ ಕೇಂಬ್ರಿಜ್ ಮಿಷನ್ನಿನ ರೆವರೆಂಡ್ ಐರ್ಲೆಂಡ್ ಅವರಿಗೆ ವಹಿಸಿದರು.

ಗಾಂಧಿಜೀ ಬರೆದ ಏಪ್ರಿಲ್ ೩೦ರ ಪತ್ರವನ್ನು ವೈಸರಾಯರ ಅಪ್ಪಣೆ ಪಡೆದು ಪ್ರಕಟಿಸಲಾಯಿತು:

"ಸಾಮ್ರಾಜ್ಯಕ್ಕೆ ಈ ಹೊತ್ತಿನಲ್ಲಿ ಒದಗಿರುವ ಗಂಡಾಂತರವನ್ನು ಗಮನಿಸಿ ನಾವು ಈಗ ನಿರ್ಣಯಿಸಿರುವಂತೆ ಸ್ವಲ್ಪವೂ ಹಿಂಜರಿಯದೆ ಸಂಪೂರ್ಣ ಬೆಂಬಲವನ್ನು ನೀಡಲೇ ಬೇಕು. ಕಡಲಾಚೆಯ ಡೊಮಿನಿಯನ್ನುಗಳು ಹೇಗೋ ಹಾಗೆ ನಾವೂ ಬೇಗನೇ ಈ ಸಾಮ್ರಾಜ್ಯದಲ್ಲಿ ಸಹಭಾಗಿಗಳಾಗುವ ಅಪೇಕ್ಷೆ ನಮ್ಮದು. ನಾವು ಈಗ ಬೆಂಬಲ ನೀಡಲು

ನಿರ್ಣಯಿಸಿರುವುದು ನಮ್ಮ ಗುರಿಯನ್ನು ನಾವು ಶೀಘ್ರತರವಾಗಿ ಸೇರುತ್ತೇವೆ ಎಂಬ ನಿರೀಕ್ಷೆಯಿಂದ ಎಂಬುದು ಸರಳ ಸತ್ಯ. ನಿಮ್ಮ ಭಾಷಣದಲ್ಲಿ ನೀವು ಸೂಚಿಸಿದ ಸುಧಾರಣೆಗಳು ಕಾಂಗ್ರೆಸ್–ಲೀಗ್ ಯೋಜನೆಯ ಮುಖ್ಯವಾದ ಸಾಮಾನ್ಯ ಸೂತ್ರಗಳಾಗುತ್ತವೆ ಎಂದು ಜನರು ನಂಬಿರುವುದು ಸಹಜವಾಗಿಯೇ ಇದೆ. ಏಕೆಂದರೆ ಕರ್ತವ್ಯ ನಿರ್ವಹಣೆಯಿಂದ ಅದಕ್ಕೆ ಉತ್ತರವಾದ ಹಕ್ಕು ತನಗೆ ತಾನೇ ಪ್ರಾಪ್ತವಾಗಿಯೇ ತೀರುತ್ತದೆ. ಈ ನಂಬಿಕೆಯಿಂದಲೇ ಸಮ್ಮೇಳನಕ್ಕೆ ಬಂದಿದ್ದ ಅನೇಕ ಸದಸ್ಯರು ಹೃತ್ಪೂರ್ವಕವಾದ ಸಹಕಾರವನ್ನು ನೀಡಿ ಎಂಬುದು ನನ್ನ ನಂಬಿಕೆ. ನನ್ನ ದೇಶ ಬಾಂಧವರ ಮತ್ತೆ ಹಿಂದಕ್ಕೆ ಸರಿಯುವಂತೆ ಮಾಡಬಲ್ಲೆನಾದರೆ ಕಾಂಗ್ರೆಸ್ಸಿನ ಎಲ್ಲ ನಿರ್ಣಯಗಳನ್ನೂ ಹಿಂದಕ್ಕೆ ತೆಗೆಸುತ್ತೇನೆ; ಯುದ್ಧ ನಡೆಯುತ್ತಿರುವಷ್ಟು ಕಾಲವೂ 'ಹೋಂ ರೂಲು' ಅಥವಾ 'ಜವಾಬ್ದಾರಿ ಸರ್ಕಾರ' ಎಂದು ಪಿಸುಗುಟ್ಟದಂತೆ ಕೂಡ ನೋಡಿಕೊಳ್ಳುತ್ತೇನೆ. ಸಾಮ್ರಾಜ್ಯದ ಈ ಸಂಕಷ್ಟ ಕ್ಷಣದಲ್ಲಿ ದೇಹದಾರ್ಢ್ಯವುಳ್ಳ ತನ್ನ ಎಲ್ಲ ಪುತ್ರರನ್ನೂ ಭಾರತವು ಸಾಮ್ರಾಜ್ಯಕ್ಕೆ ಬಲಿಯಾಗಿ ಒಪ್ಪಿಸುವಂತೆ ಮಾಡುವ ಅಪೇಕ್ಷೆ ನನ್ನದು. ಹೀಗೆ ಮಾಡುವುದರಿಂದ ಭಾರತವು ಸಾಮ್ರಾಜ್ಯದಲ್ಲಿ ಅತ್ಯಂತ ಕೃಪಾಪಾತ್ರ ಪಾಲುದಾರನಾಗುತ್ತದೆ ಎಂಬುದನ್ನು ನಾನು ಬಲ್ಲೆ. ಅಲ್ಲದೆ ವರ್ಣಭೇದಗಳು ಗತಕಾಲದ ವಿಷಯವಾಗುತ್ತದೆ. ಆದರೆ ಸುಶಿಕ್ಷಿತ ಭಾರತವೆಲ್ಲ ಹೆಚ್ಚು ಕಡಮೆ ಇಷ್ಟು ಪರಿಣಾಮಕಾರಿಯಲ್ಲದ ದಾರಿಯನ್ನು ಹಿಡಿಯಲು ತೀರ್ಮಾನಿಸಿದೆ. ಸುಶಿಕ್ಷಿತ ಭಾರತ ಜನಸಾಮಾನ್ಯದ ಮೇಲೆ ಏನೂ ಪ್ರಭಾವ ಬೀರುವುದಿಲ್ಲವೆಂದು ಇನ್ನು ಮುಂದೆ ಹೇಳುವಂತಿಲ್ಲ. ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿದಾಗಿನಿಂದಲೂ ನಾನೂ ರೈತರೊಂದಿಗೆ ಆತ್ಮೀಯವಾದ ಸಂಪರ್ಕವನ್ನು ಹೊಂದುತ್ತ ಬಂದಿದ್ದೇನೆ. ಹೋಂ ರೂಲಿನ ಅಪೇಕ್ಷೆ ಅವರಲ್ಲಿ ವ್ಯಾಪಕವಾಗಿ ಒಳಹೊಕ್ಕಿದೆ ಎಂದೆಬುದನ್ನು ನಿಮಗೆ ಭರವಸೆ ಕೊಡಬಯಸುತ್ತೇನೆ. ಕಳೆದ ಕಾಂಗ್ರೆಸ್ ಅಧಿವೇಶನದಲ್ಲಿ ನಾನು ಹಾಜರಿದ್ದೆ. ಪಾರ್ಲಿಮೆಂಟಿನ ಶಾಸನವೊಂದು ಶಾಸನದ ಮೂಲಕ ನಿರ್ಣಯಿಸಿದ ಅವಧಿಯೊಳಗಾಗಿ ಬ್ರಿಟಿಷ್ ಇಂಡಿಯಾಕ್ಕೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ನೀಡಬೇಕು ಎಂದು ಅಲ್ಲಿ ಮಾಡಿದ ನಿರ್ಣಯದಲ್ಲಿ ನಾನೂ ಭಾಗಿಯಾಗಿದ್ದೆ. ಅದೊಂದು ದಿಟ್ಟ ಹೆಜ್ಜೆ ಎಂಬುದನ್ನು ಒಪ್ಪುತ್ತೇನೆ. ಆದರೆ ಅತ್ಯಂತ ಕಡಮೆ ಕಾಲದಲ್ಲಿ 'ಹೋಂ ರೂಲ'ನ್ನು ಪಡೆಯುವೆವೆಂಬ ನಿಶ್ಚಿತ ಕಾಣ್ಕೆಯಲ್ಲದೆ ಬೇರೇನೂ ಭಾರತೀಯ ಜನತೆಗೆ ತೃಪ್ತಿಯನ್ನು ನೀಡುವುದಿಲ್ಲ ಎಂಬುದು ನನಗೆ ಖಚಿತವಾಗಿದೆ. ಆ ಗುರಿಯನ್ನು ಸಾಧಿಸಲು ಮಾಡಬೇಕಾದ ಯಾವುದೇ ತ್ಯಾಗವೂ ಅತಿಯಲ್ಲ ಎಂದು ಭಾವಿಸುವ ಜನ ಭಾರತದಲ್ಲಿ ಬೇಕಾದಷ್ಟಿದ್ದಾರೆ ಎಂಬುದು ನನಗೆ ಗೊತ್ತು. ತಮ್ಮ ಅಂತಿಮ ಸ್ಥಾನಮಾನಗಳನ್ನು ಪಡೆಯಲು ನೆರವಾಗುವುದೆಂಬ ನಂಬಿಕೆ ಆಸೆಗಳನ್ನಿಟ್ಟಿರುವ ಸಾಮ್ರಾಜ್ಯಕ್ಕಾಗಿ ತಮ್ಮನ್ನು ತಾವು ಬಲಿಯಾಗಿ ಅರ್ಪಿಸಲೂ ತಾವು ಅಷ್ಟೇ ಸಿದ್ಧರಾಗಿರಬೇಕು ಎಂಬುದನ್ನೂ ಅರಿಯುವಷ್ಟರ ಮಟ್ಟಿಗೆ ಅವರು ಜಾಗ್ರತರಾಗಿದ್ದಾರೆ. ಈಗ ಭಯಗೊಳಿ

ಸುತ್ತಿರುವ ಅಪಾಯದಿಂದ ಸಾಮ್ರಾಜ್ಯವನ್ನು ಮುಕ್ತಗೊಳಿಸಲು ನಮ್ಮನ್ನು ನಾವು ಮೌನವಾಗಿ, ನಿರಾಡಂಬರವಾಗಿ ಸಮರ್ಪಿಸಿಕೊಂಡು ಗುರಿಯತ್ತ ಯಾತ್ರೆಯನ್ನು ತ್ವರಿತಗೊಳಿಸಬೇಕು ಎಂದು ಹೇಳಿದಂತೆಯೇ ಆಯಿತು. ಈ ಬಾಲಿಶ ಸತ್ಯವನ್ನು ಅರಿಯದೇ ಹೋಗುವುದು ರಾಷ್ಟ್ರೀಯ ಆತ್ಮಹತ್ಯೆಯಾಗುತ್ತದೆ. ಸಾಮ್ರಾಜ್ಯವನ್ನು ರಕ್ಷಿಸಲು ನಾವು ಸೇವೆಗೈಯುವುದಾದರೆ ಹಾಗೆ ಮಾಡುವುದರಿಂದಲೇ ಹೋಂ ರೂಲು ದೊರೆಯುವುದನ್ನು ಖಂಡಿತಮಾಡಿಕೊಂಡಿದ್ದೇವೆ ಎಂಬುದನ್ನು ನಾವು ಅರಿಯಬೇಕು.

"ಆದ್ದರಿಂದ ನಮ್ಮಲ್ಲಿ ದೊರೆಯುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಸಾಮ್ರಾಜ್ಯದ ರಕ್ಷಣೆಗೆ ನೀಡಬೇಕು ಎಂಬುದು ನನಗೆ ಸ್ಪಷ್ಟವಾಗಿದೆ. ಆದರೆ ಆರ್ಥಿಕ ನೆರವಿನ ವಿಷಯದಲ್ಲೂ ಈ ಮಾತನ್ನೇ ನಾನು ಹೇಳಲಾರೆ. ಭಾರತದ ರೈತರೊಂದಿಗೆ ನನಗಿರುವ ಆತ್ಮೀಯ ಸಂಬಂಧದಿಂದ ಈ ಅಂಶವನ್ನು ನಾನು ಮನಗಂಡಿದ್ದೇನೆ–ಭಾರತವು ಈಗಾಗಲೇ ತನ್ನ ಚೈತನ್ಯಕ್ಕೆ ಮೀರಿದಷ್ಟನ್ನು ಸಾಮ್ರಾಜ್ಯದ ಬೊಕ್ಕಸಕ್ಕೆ ದಾನಮಾಡಿದೆ. ಈ ಮಾತನ್ನು ಹೇಳುವಾಗ ನಮ್ಮ ದೇಶಬಾಂಧವರಲ್ಲಿ ಹೆಚ್ಚು ಪಾಲಿನವರ ಅಭಿಪ್ರಾಯಕ್ಕೆ ನಾನು ವಾಣಿಯಾಗಿದ್ದೇನೆ ಎಂಬುದನ್ನು ನಾನು ಬಲ್ಲೆ".

"ನನಗೂ ನಮ್ಮಲ್ಲಿ ಅನೇಕರಿಗೂ, ಈ ಸಮ್ಮೇಳನವೆಂದರೆ, ಸಮಾನ ಧ್ಯೇಯವೊಂದಕ್ಕೆ ನಮ್ಮ ಬದುಕುಗಳನ್ನು ಮುಡಿಪುಗಟ್ಟುವುದರಲ್ಲಿ ಒಂದು ಸ್ಪಷ್ಟ ಹೆಜ್ಜೆ. ಆದರೆ ನಮ್ಮದು ಒಂದು ವಿಚಿತ್ರ ಪರಿಸ್ಥಿತಿಯಾಗಿದೆ, ನಾವಿಂದು ಪಾಲುದಾರಿಕೆಯ ಹೊರಗಿದ್ದೇವೆ. ಉತ್ತಮವಾದ ಭವಿಷ್ಯದ ಮೇಲೆ ಆಸೆಯಿಟ್ಟು ಮಾಡುತ್ತಿರುವ ಅರ್ಪಣೆ ಇದು. ಆ ಆಸೆ ಏನು ಎಂಬುದನ್ನು ಸ್ಪಷ್ಟವಾಗಿಯೂ, ಅಸಂದಿಗ್ಧವಾಗಿಯೂ ಹೇಳದಿದ್ದರೆ ನಿಮ್ಮ ವಿಷಯಕ್ಕೂ ನನ್ನ ದೇಶದ ವಿಷಯಕ್ಕೂ ಪ್ರಾಮಾಣಿಕತೆಯಿಂದ ಇದ್ದಂತಾಗುವುದಿಲ್ಲ. ಆ ಆಸೆಗಾಗಿ ನಾನು ಕೊಸರಾಡುವುದಿಲ್ಲ. ಆದರೆ ಆಶಾಭಂಗದಿಂದ ನಂಬಿಕೆಯೇ ಹೋಗುವುದೆಂಬುದನ್ನು ನೀವೇ ಬಲ್ಲಿರಿ. ಒಂದು ವಿಷಯವನ್ನಂತೂ ನಾನು ಹೇಳದೆ ಬಿಡಬಾರದು. ಆಂತರಿಕ ಭಿನ್ನಾಭಿಪ್ರಾಯಗಳನ್ನು ನಾವು ಮರೆಯಬೇಕು ಎಂದು ನೀವು ಕೇಳಿಕೊಂಡಿದ್ದೀರಿ. ಎಂದರೆ ನಿಮ್ಮ ಅಧಿಕಾರಿಗಳ ದಬ್ಬಾಳಿಕೆ, ಅನ್ಯಾಯಗಳನ್ನು ನಾವು ಸಹಿಸಿಕೊಳ್ಳಬೇಕು ಎಂಬುದು ನಿಮ್ಮ ಕೋರಿಕೆಯ ಅರ್ಥವಾಗಿದ್ದಲ್ಲಿ ಅದನ್ನು ಒಪ್ಪಿಕೊಳ್ಳುವ ಅಧಿಕಾರ ನನಗಿಲ್ಲ. ವ್ಯವಸ್ಥಿತ ದಬ್ಬಾಳಿಕೆಯನ್ನು ನಾನು ಪರಮಾವಧಿ ಪ್ರತಿಭಟಿಸುತ್ತೇನೆ. ಒಬ್ಬನೇ ಒಬ್ಬ ವ್ಯಕ್ತಿಯನ್ನು ಕೆಟ್ಟದಾಗಿ ನಡೆಸಿಕೊಳ್ಳಕೂಡದು, ಹಿಂದೆಂದೂ ನಡೆಯದ ರೀತಿಯಲ್ಲಿ ಜನಸಾಮಾನ್ಯರ ಅಭಿಪ್ರಾಯಕ್ಕೆ ಕಿವಿಗೊಟ್ಟು ಅದಕ್ಕೆ ಮನ್ನಣೆ ನೀಡಬೇಕು ಎಂಬ ಕೋರಿಕೆಯನ್ನು ನೀವು ನಿಮ್ಮ ನೌಕರರಿಗೆ ಮಾಡಿಕೊಳ್ಳಬೇಕು. ಚಂಪಾರಣ್ಯದಲ್ಲಿ ಯುಗಾಂತರದ ದಬ್ಬಾಳಿಕೆಯನ್ನು ಪ್ರತಿಭಟಿಸಿ ಬ್ರಿಟಿಷ್ ನ್ಯಾಯವು ಸಾರ್ವಭೌಮವಾದದ್ದು ಎಂಬುದನ್ನು ತೋರಿಸಿದ್ದೇನೆ. ಖೇಡಾದ ಜನತೆ ಒಂದು ಕಾಲಕ್ಕೆ ಸರ್ಕಾರವನ್ನು ಶಪಿಸುತ್ತಿತ್ತಷ್ಟೆ. ಈಗ ಅದಕ್ಕೆ ಅರಿವಾಗಿದೆ ಯಾವ ಸತ್ಯಕ್ಕಾಗಿ ತಾವು ಹೋರಾಡುತ್ತಿದ್ದೇವೆಯೋ

ಅದಕ್ಕಾಗಿ ಯಾವುದೇ ಕಷ್ಟವನ್ನು ಸಹಿಸಲು ಸಿದ್ಧವಾದಲ್ಲಿ ಆಗ ನಿಜವಾದ ಅಧಿಕಾರ ಇರುವುದು ತನ್ನಲ್ಲೇ ಹೊರತು ಸರ್ಕಾರದಲ್ಲಲ್ಲ ಎಂದು. ಆದ್ದರಿಂದ ಈಗ ಜನತೆಯ ಮನಸ್ಸಿನಿಂದ ಕಹಿ ತೊಲಗುತ್ತಿದೆ. ಜನ ತಮಗೆ ತಾವೇ ಹೇಳಿಕೊಳ್ಳುತ್ತಿದ್ದಾರೆ. ಸರ್ಕಾರ ಎಂದರೆ ಅದು ಜನರಿಗೋಸ್ಕರ ಇರುವ ಸರ್ಕಾರವಾಗಿರಬೇಕು. ಏಕೆಂದರೆ ಆಗಲೀಗ ಅದು ಅನ್ಯಾಯವನ್ನು ಎಲ್ಲೇ ಆದರೂ ಅನುಭವಿಸುವವರು ಕ್ರಮಬದ್ಧವಾಗಿ, ಗೌರವ ಪೂರ್ವಕವಾಗಿ ಪ್ರತಿಭಟಿಸುವುದನ್ನು ಸಹಿಸುತ್ತದೆ. ಹೀಗೆ ಚಂಪಾರಣ್ಯ ಮತ್ತು ಖೇಡಾ ವ್ಯವಹಾರಗಳು. ನಾನು ಯುದ್ಧಕ್ಕೆ ನೇರವಾಗಿ, ಖಚಿತವಾಗಿ ನೀಡಿರುವ ವಿಶೇಷ ಕಾಣಿಕೆಗಳು. ಆ ದಿಕ್ಕಿನಲ್ಲಿ ನನ್ನ ಚಟುವಟಿಕೆಗಳನ್ನು ನಿಲ್ಲಿಸು ಎಂದು ಹೇಳುವುದೂ ಬದುಕುವುದನ್ನು ಸ್ವಲ್ಪ ನಿಲ್ಲಿಸು ಎಂದು ಹೇಳುವುದೂ ಎರಡೂ ಒಂದೇ. ಪ್ರೇಮದ ಶಕ್ತಿ ಎಂಬುದಕ್ಕೇ ಇನ್ನೊಂದು ಹೆಸರು ಆತ್ಮಶಕ್ತಿ ಎಂಬುದು. ಪಾಶವೀ ಶಕ್ತಿಯ ಬದಲಿಗೆ ಆತ್ಮಶಕ್ತಿಯನ್ನು ಬಳಸುವುದನ್ನು ನಾನು ಜನಪ್ರಿಯಗೊಳಿಸಬಲ್ಲೆನಾದರೆ ಇಡೀ ಜಗತ್ತನ್ನು ಏನೇ ಬರಲಿ ಪ್ರತಿಭಟಿಸಬಲ್ಲ ಭಾರತವೊಂದನ್ನು ನಿಮಗೆ ನೀಡಬಲ್ಲೆ ಎಂಬುದು ನನಗೆ ಗೊತ್ತು. ಹಿಂಸೆಯನ್ನು ತಾಳಿಕೊಳ್ಳುವ ಈ ಶಾಶ್ವತ ನಿಯಮವನ್ನು ನನ್ನ ಬದುಕಿನಲ್ಲಿ ಹೊರಹೊಮ್ಮಿಸಲು ಹೊತ್ತುಗೊತ್ತಿಲ್ಲದೆ ಸದಾ ನನಗೆ ನಾನೇ ಶಿಕ್ಷಣ ನೀಡಿಕೊಳ್ಳುತ್ತೇನೆ, ಅದರಲ್ಲಿ ಒಲವಿರುವ ಇತರರಿಗೂ ಅದನ್ನೇ ಅಂಗೀಕರಿಸಿರೆಂದು ನೀಡುತ್ತೇನೆ. ಬೇರೆ ಯಾವುದೇ ಚಟುವಟಿಕೆಯಲ್ಲಿ ನಾನು ಭಾಗವಹಿಸಿದರೂ ನನ್ನ ಉದ್ದೇಶ ಆ ನಿಯಮದ ಅನುಪಮ ಶ್ರೇಷ್ಠತೆಯನ್ನು ತೋರಿಸುವುದೇ.

"ಕೊನೆಯದಾಗಿ, ಮುಸ್ಲಿಂ ರಾಷ್ಟ್ರಗಳ ಬಗ್ಗೆ ನಿಶ್ಚಿತವಾದ ಭರವಸೆಯನ್ನು ಕೊಡಬೇಕೆಂದು ಸಾರ್ವಭೌಮ ಸರ್ಕಾರದ ಮಂತ್ರಿಗಳನ್ನು ನೀವು ಕೇಳಿಕೊಳ್ಳಬೇಕು. ಪ್ರತಿಯೊಬ್ಬ ಮುಸ್ಲಿಮನಿಗೂ ಅದರಲ್ಲಿ ತೀವ್ರ ಆಸಕ್ತಿ ಇದೆ ಎಂಬುದು ನಿಮಗೆ ಗೊತ್ತೆಂದು ನನ್ನ ಭರವಸೆ. ನಾನು ಹಿಂದೂ, ಹೀಗಾಗಿ ಅವರ ಧ್ಯೇಯವನ್ನು ಉಪೇಕ್ಷಿಸಲಾರೆ. ಅವರ ಸಂಕಟಗಳು ನಮ್ಮ ಸಂಕಟಗಳೇ ಆಗಬೇಕು. ಆ ರಾಷ್ಟ್ರಗಳ ಹಕ್ಕುಗಳನ್ನೂ ಮುಸ್ಲಿಮರ ಪೂಜಾಸ್ಥಾನಗಳ ಬಗ್ಗೆ ಅವರಿಗಿರುವ ಭಾವನೆಗಳನ್ನೂ ಅತ್ಯಂತ ಗೌರವದಿಂದ ನೋಡಿಕೊಳ್ಳುವುದರಲ್ಲೆ ಮತ್ತು ಹೋಂ ರೂಲಿನ ಬಗ್ಗೆ ಭಾರತೀಯರ ಹಕ್ಕನ್ನು ನ್ಯಾಯವಾಗಿಯೂ ಸಕಾಲಿಕವಾಗಿಯೂ ಗೌರವಿಸುವುದರಲ್ಲೆ ಸಾಮ್ರಾಜ್ಯದ ಭದ್ರತೆ ಇರುವುದು. ಇಂಗ್ಲಿಷ್ ಜನಾಂಗವನ್ನು ನಾನು ಪ್ರೀತಿಸುವುದರಿಂದಲೇ ಇದನ್ನು ಬರೆಯುತ್ತಿದ್ದೇನೆ. ಇಂಗ್ಲಿಷ್ ಜನರಿಗಿರುವ ನಿಷ್ಠೆಯು ಪ್ರತಿಯೊಬ್ಬ ಭಾರತೀಯನಲ್ಲೂ ಮೂಡಿಸಬೇಕೆಂಬುದೇ ನನ್ನ ಅಪೇಕ್ಷೆ".

ಜೂನ್ ಹತ್ತರಂದು ಬೊಂಬಾಯಲ್ಲಿ, ಗವರ್ನರ್ ಲಾರ್ಡ್ ವಿಲಿಂಗ್‌ಡನ್ ಅವರ ಅಧ್ಯಕ್ಷತೆಯಲ್ಲಿ ಒಂದು ಯುದ್ಧ ಸಮ್ಮೇಳನ ನಡೆಯಿತು. ಹೋಂ ರೂಲ್ ಚಳುವಳಿಗಾರರ ಬಗ್ಗೆ, ಆತ ಕಟುವಾದ ಉಪದೇಶ ಭಾಷಣ ಮಾಡಿ ಸಭಿಕರನ್ನು ಶಿಕ್ಷಿಸಿದ. ಅವರ ಪ್ರಾಮಾಣಿಕತೆಯನ್ನೇ ಆತ ಪ್ರಶ್ನಿಸಿದ. ತಿಲಕರನ್ನು ಭಾಷಣ ಮಾಡಲು ಕರೆದರು.

ಆದರೆ ಹೋಂ ರೂಲನ್ನು ಅವರು ಪ್ರಸ್ತಾಪಿಸಲೂ ಬಿಡಲಿಲ್ಲ. ಆದ್ದರಿಂದ ಅವರು ಜಿನ್ನಾ, ಹಾರ್ನಿಮನ್, ಕೇಳ್ಕರ್ ಮತ್ತು ಕರಂಡಿಕರ್ ಇವರೆಲ್ಲರೊಡನೆ ಸಭಾತ್ಯಾಗ ಮಾಡಿದರು. ಹೋಂ ರೂಲಿನ ಹೆಸರೆತ್ತಿದ ಕೂಡಲೇ ಇವರನ್ನು ಸಹ ಗೌರ್ನರ್ ತಡೆದಿದ್ದ.

ಸಮ್ಮೇಳನದಲ್ಲಿ ಗೌರ್ನರ್ ನಡೆದುಕೊಂಡ ರೀತಿಯನ್ನು ಪ್ರತಿಭಟಿಸಲು ಜೂನ್ ೧೬ರಂದು ಬೊಂಬಾಯಿಯಲ್ಲಿ ಕರೆದಿದ್ದ ಸಭೆಯ ಅಧ್ಯಕ್ಷತೆಯನ್ನು ಗಾಂಧೀಜಿ ವಹಿಸಿದರು. ಹೋಂ ರೂಲ್ ಚಳುವಳಿಕಾರರನ್ನು ಲಾರ್ಡ್‌ವಿಲಿಂಗ್‌ಡನ್ ನಿಷ್ಕಾರಣವಾಗಿ ಅಪ ಮಾನಿಸಿದ್ದನ್ನು ಅವರು ಖಂಡಿಸಿದರು. ಗವರ್ನರನ ನಡತೆ ಔದಾರ್ಯ ರಹಿತವಾದದ್ದು, ಹಾಗೂ ದೂಷ್ಯವಾದದ್ದು ಎಂದವರು ಟೀಕಿಸಿದರು. ತಿಲಕರಿಗೆ ಮಾಡಿದ ಅವಮಾನ ಯುದ್ಧೋದ್ಯಮದ ವಿನಾಶವೇ ಆಗಿತ್ತು. ಆದರೆ ಬ್ರಿಟನ್ನಿನ ಈ ಸಂಕಷ್ಟದ ಸಮಯ ದಲ್ಲಿ ಆ ದೇಶಕ್ಕೆ ನೆರವು ನೀಡಬೇಕಾದದ್ದು ಅಗತ್ಯ ಎಂದು ಅವರು ಶ್ರೋತೃಗಳಿಗೆ ಒತ್ತಿ ಹೇಳಿದರು.

ಆ ಸಂದರ್ಭದಲ್ಲಿ ತಿಲಕರು ಅತ್ಯಂತ ಕೆಚ್ಚಿನ ಭಾಷಣ ಮಾಡಿದರು: "ಸರ್ಕಾರ ನಮ್ಮನ್ನು ಅಪ್ರಾಮಾಣಿಕರು ಎನ್ನುತ್ತದೆ. ಆದರೆ ಈ ಆಪಾದನೆಗಳು ನಮಗಿಂತ ಹೆಚ್ಚಾಗಿ ಸರ್ಕಾರಕ್ಕೆ ಸಲ್ಲುತ್ತವೆ ಎನ್ನಲು ನನ್ನಲ್ಲಿ ಬೇಕಾದಷ್ಟು ಪುರಾವೆಗಳಿವೆ. ಅಲ್ಲದೆ, ಯುದ್ಧಮುಗಿದ ಮೇಲೆ ದೇಶದ ಈ ಸರ್ಕಾರ ಭಾರತದ ಸಂಕೋಲೆಯನ್ನು ಸಡಿಲ ಮಾಡುವುದರ ಬದಲು ಬಿಗಿಮಾಡುವ ಸಂಭವವೇ ಹೆಚ್ಚು ಎಂಬುದು ಸ್ಪಷ್ಟವಾಗಿ ಕಾಣುತ್ತಿದ್ದರೆ, ಯಾರು ತಾನೆ ಈ ಸರ್ಕಾರಕ್ಕೆ ನೆರವಾಗುತ್ತಾರೆ! ಸರ್ಕಾರವು ಭಾರತೀ ಯರಿಗೆ ಸೈನ್ಯದಲ್ಲಿ ಉನ್ನತ ಹುದ್ದೆಗಳನ್ನು ನೀಡುವ ಭರವಸೆ ನೀಡಲಿ, ತಕ್ಷಣ ೫,೦೦೦ ಜನರನ್ನು ಸೈನ್ಯಕ್ಕೆ ಸೇರಿಸುವ ಹೊಣೆ ನನ್ನದು. ಹಾಗೆ ಮಾಡುವುದರಲ್ಲಿ ನಾನು ವಿಫಲ ನಾದರೆ ಒಂದೊಂದು ಸೋಲಿಗೂ ೧೦೦.ರೂ.ಯಂತೆ ಜುಲ್ಮಾನೆ ತೆರುತ್ತೇನೆ. ಈ ವಿಷಯದಲ್ಲಿ ಒತ್ತೆಯಾಗಿ (ಗ್ಯಾರಂಟಿಯಾಗಿ) ೫೦,೦೦೦ ರೂಪಾಯಿಗಳನ್ನು ಗಾಂಧಿ ಯವರ ಕೈಯಲ್ಲಿ ಕೊಡಲು ನಾನು ಸಿದ್ಧ".

ಜೂನ್ ೨೨ರಂದು ಗಾಂಧಿಜಿ ಮುಖ್ಯವಾಗಿ ಖೇಡಾದ ಜನರಿಗೆ, ಒಟ್ಟಿನಲ್ಲಿ ಗುಜರಾತಿನ ಜನರಿಗೆ, ನಾಥಿಯಡ್‌ನಿಂದ ಒಂದು ಕೋರಿಕೆಯನ್ನು ಮಾಡಿಕೊಂಡರು:

"ಶಸ್ತ್ರಾಸ್ತ್ರಗಳನ್ನು ಬಳಸುವುದನ್ನು ನಾವು ಅತ್ಯಂತ ಶೀಘ್ರವಾಗಿ ಕಲಿಯಬೇಕೆಂದು ಬಯಸುವ ಪಕ್ಷಕ್ಕೆ ಸೈನ್ಯಕ್ಕೆ ಸೇರಿಕೊಳ್ಳುವುದು ನಮ್ಮ ಕರ್ತವ್ಯ. ಧೀರರಿಗೂ ಹೆಣ್ಣಿ ಗರಿಗೂ ಸಖ್ಯ ಸಾಧ್ಯವಿಲ್ಲ. ನಮ್ಮನ್ನು ಹೇಡಿಗಳು ಎಂದು ಭಾವಿಸಲಾಗಿವೆ. ಈ ನಿಂದೆ ಯನ್ನು ತಪ್ಪಿಸಿಕೊಳ್ಳಬೇಕಾದರೆ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ನಾವು ಕಲಿಯ ಬೇಕು. ಆದ್ದರಿಂದ ಸ್ವರಾಜ್ಯವನ್ನು ಗಳಿಸಲು ಅತ್ಯಂತ ಸುಲಭವೂ ನೇರವೂ ಆದ ದಾರಿ ಯೆಂದರೆ ಸಾಮ್ರಾಜ್ಯದ ರಕ್ಷಣೆಯಲ್ಲಿ ಭಾಗವಹಿಸುವುದು. ಸಾಮ್ರಾಜ್ಯವು ಧೂಳೀ ಪಟವಾದರೆ ನಮ್ಮ ಆಸೆ ಆಕಾಂಕ್ಷೆಗಳೂ ಅದರೊಡನೆ ಹುಡಿಯಾದಂತೆ. ನಮ್ಮ ಹಕ್ಕು ಗಳನ್ನು ಈಗಲೇ ನಾವು ಪಡೆದುಕೊಳ್ಳದೇ ಹೋದರೆ ಆಮೇಲೆ ನಮಗೆ ಮೋಸಮಾಡು

ತ್ತಾರೆ ಎಂದು ಕೆಲವರು ಹೇಳುತ್ತಾರೆ. ಈ ಸಾಮ್ರಾಜ್ಯವನ್ನು ರಕ್ಷಿಸುವುದಕ್ಕೆಂದು ನಾವು ಗಳಿಸುವ ಶಕ್ತಿಯು ಆ ಹಕ್ಕುಗಳನ್ನು ಸಾಧಿಸುವ ಶಕ್ತಿಯಾಗುತ್ತದೆ."

ಸಹಸ್ರ ಸಹಸ್ರ ಸಂಖ್ಯೆಯಲ್ಲಿ ತಮ್ಮ ಧ್ವಜವಡಿಯಲ್ಲಿ ನೆರೆಯುವಂತೆ ಗಾಂಧೀಜಿ ಜನತೆಗೆ ಕರೆ ನೀಡಿದರು; "ಖೇಡಾ ಜಿಲ್ಲೆಯಲ್ಲಿ ೬೦೦ ಹಳ್ಳಿಗಳಿವೆ. ಪ್ರತಿ ಹಳ್ಳಿಯ ಸರಾಸರಿ ಜನಸಂಖ್ಯೆ, ೧,೦೦೦. ಪ್ರತಿ ಹಳ್ಳಿಯೂ ಕನಿಷ್ಠ ೨೦ ಜನರನ್ನು ನೀಡಿದರೆ ಖೇಡಾಜಿಲ್ಲೆಯು ೧೨,೦೦೦ ಜನರ ಸೇನೆಯನ್ನು ಕೂಡಿಸಿದಂತಾಗುತ್ತದೆ. ಇಡೀ ಜಿಲ್ಲೆಯ ಜನಸಂಖ್ಯೆ ಏಳು ಲಕ್ಷ. ಆದ್ದರಿಂದ ಈ ಸಂಖ್ಯೆ ಸುಮಾರು ಶೇಕಡಾ ಹದಿನೇಳಾಗುತ್ತದೆ.–ಇದು ಸಾವಿನ ದರಕ್ಕಿಂತ ಕಡಮೆ. ಸಾಮ್ರಾಜ್ಯ ಮತ್ತು ಸ್ವರಾಜ್ಯಗಳಿಗಾಗಿ ನಾವು ಇಷ್ಟು ತ್ಯಾಗವನ್ನೂ ಮಾಡಲಾರದೇ ಹೋದರೆ ಸ್ವರಾಜ್ಯಕ್ಕೆ ನಾವು ಅರ್ಹರಲ್ಲ ಎಂದು (ಸರ್ಕಾರ) ಭಾವಿಸುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರತಿ ಹಳ್ಳಿಯೂ ಕನಿಷ್ಠ ಪಕ್ಷ ಇಪ್ಪತ್ತು ಜನರನ್ನಾದರೂ ನೀಡಿದರೆ ಅವರು ಯುದ್ಧದಿಂದ ಹಿಂದಿರುಗಿ ಆ ಹಳ್ಳಿಯ ಸಜೀವ ಕೋಟೆಕೊತ್ತಳಗಳಾಗಿರುತ್ತಾರೆ. ಒಂದು ವೇಳೆ ಅವರು ಯುದ್ಧರಂಗದಲ್ಲಿ ಮಡಿದುರುಳಿದರೆ ತಮ್ಮನ್ನು, ತಮ್ಮ ಹಳ್ಳಿಗಳನ್ನೂ ದೇಶವನ್ನೂ ಅಮರಗೊಳಿಸುತ್ತಾರೆ. ಇನ್ನೂ ಇಪ್ಪತ್ತು ಜನ ಅವರನ್ನನುಸರಿಸಿ ರಾಷ್ಟ್ರ ರಕ್ಷಣೆಯ ಕಾರ್ಯಕ್ಕೆ ಮುಂದೆ ಬರುವೆವೆನ್ನುತ್ತಾರೆ.

ಖೇಡಾದ ಜನ ತಮ್ಮ ಮಾತನ್ನು ಕೇಳಿ ಸೈನ್ಯಕ್ಕೆ ಸೇರಿಕೊಳ್ಳುತ್ತಾರೆ ಎಂದು ಅವರು ಅಂದುಕೊಂಡಿದ್ದರು. ಅಧಿಕಾರಿಗಳಿಂದ ತಮಗೆ ಒದಗಿದ್ದ ಕಟ್ಟು ಅನುಭವ ಜನತೆಯ ಮನಸ್ಸಿನಲ್ಲಿನ್ನೂ ಹೊಸದಾಗಿಯೇ ಇತ್ತು. ಸತ್ಯಾಗ್ರಹ ಚಳುವಳಿಯ ಸಮಯದಲ್ಲಿ ಅವರು ಬಾಡಿಗೆ ಇಲ್ಲದೆಯೇ ತಮ್ಮ ಗಾಡಿಗಳನ್ನು ಸಂತೋಷದಿಂದ ಒದಗಿಸಿದ್ದರು; ಒಬ್ಬ ಸ್ವಯಂಸೇವಕನ ಅಗತ್ಯವಿದ್ದಲ್ಲಿ ಇಬ್ಬರು ಮುಂದೆ ಬಂದಿದ್ದರು. ಈಗಲೋ ಎಂದರೆ ಸ್ವಯಂ ಸೇವಕರ ಮಾತಿರಲಿ, ಬಾಡಿಗೆಗೆ ಕೂಡ ಒಂದು ಗಾಡಿಯೂ ದೊರಕುವುದು ಕಷ್ಟವಾಯಿತು. ಕಾಲ್ನಡಗೆಯಲ್ಲೇ ಸಂಚಾರವನ್ನು ಪೂರೈಸಲು ನಿರ್ಧರಿಸಿ ಗಾಂಧೀಜಿ ಮತ್ತು ವಲ್ಲಭಭಾಯಿಯವರು ಪ್ರತಿದಿನವೂ ಇಪ್ಪತ್ತು ಮೈಲಿ ತುಳಿಯ ತೊಡಗಿದರು. ತಮ್ಮ ಆಹಾರವನ್ನು ಕೈಚೀಲದಲ್ಲಿ ಹಾಕಿಕೊಂಡು ಹೊತ್ತರು, ಧರ್ಮ ಶಾಲೆಗಳಲ್ಲಿ ಮಲಗಿದರು. ಅವರ ಕೆಲಸ ಜನರಿಗೆ ಎಷ್ಟು ಅಪ್ರಿಯವಾಗಿತ್ತು ಎಂದರೆ ಸಾರ್ವಜನಿಕ ಸಭೆಗಳಲ್ಲಲ್ಲದೆ ಯಾರೂ ಅವರ ಸಂಪರ್ಕವನ್ನೂ ಬಯಸಲಿಲ್ಲ.

ಗಾಂಧೀಜಿ ಬೇರೆ ಬೇರೆ ಕಡೆಗಳಲ್ಲಿ ಸಭೆಗಳನ್ನು ನಡೆಸಿದರು. ಅವರ ಭಾಷಣ ಗಳನ್ನು ಕೇಳಲು ಜನರೇನೋ ಸೇರುತ್ತಿದ್ದರು. ಆದರೆ ಸೈನ್ಯಕ್ಕೆ ಸೇರಲು ಒಬ್ಬಿಬ್ಬರೂ ಬಂದರೋ ಇಲ್ಲವೋ ಎನ್ನುವಂತಿತ್ತು. "ನೀವು ಅಹಿಂಸೆಯ ಭಕ್ತರು. ಹೀಗಿರುವಾಗ ಆಯುಧವನ್ನು ಹಿಡಿಯಿರಿ ಎಂದು ಹೇಗೆ ತಾನೆ ನಮಗೆ ಹೇಳುತ್ತೀರಿ?" ಎಂದು ಅವರು ನಾಟುವಂತೆ ಕೇಳುತ್ತಿದ್ದರು. "ನಮ್ಮ ಸಹಕಾರ ಪಡೆಯಲು ಅರ್ಹವಾಗುವಂತೆ ಈ ಸರ್ಕಾರ ಯಾವ ಒಳಿತನ್ನು ತಾನೆ ಭಾರತಕ್ಕೆ ಮಾಡಿದೆ?"

ಶ್ರೀಮತಿ ಬೆಸೆಂಟರಿಗೆ ಬರೆದ ಜೂಲೈ ೪ರ ಪತ್ರದಲ್ಲಿ ಗಾಂಧೀಜಿ ಹೀಗೆಂದರು:

"ಬೇಷರತ್ತಾಗಿ ಸೈನ್ಯಕ್ಕೆ ಸೇರಿ ಎಂದು ನೀವು ಒತ್ತಿ ಹೇಳುತ್ತೀರಿ ಎಂದು 'ನ್ಯೂ ಇಂಡಿಯಾ'ದ ಪ್ರತಿಗಳನ್ನು ಹುಡುಕಿ ನೋಡಿ ನಿರಾಶನಾಗಿದ್ದೇನೆ. ಹೋಂ ರೂಲ್ ಲೀಗಿನ ಪ್ರತಿಯೊಬ್ಬರೂ ಸೈನ್ಯ ಜಮಾಯಿಸುವ ಸಕ್ರಿಯ ಕೇಂದ್ರವಾಗುವುದಾದರೆ ಕಾಂಗ್ರೆಸ್–ಲೀಗ್ ಯೋಜನೆಯು, ನಾವು ಒಪ್ಪುವ ಬದಲಾವಣೆಗಳೊಂದಿಗೆ ಮಾತ್ರ ಅಂಗೀಕೃತವಾಗುವುದನ್ನು ಖಂಡಿತ ಮಾಡಿಕೊಂಡಂತಾಗುತ್ತದೆಂಬುದು ಸ್ಪಷ್ಟವಾಗಿರಲೇಬೇಕು. ಜನರ ಅಭಿಪ್ರಾಯಕ್ಕೆ ಕಾಯದೆ ಅವರಿಗೆ ನಾವೇ ಮಾರ್ಗದರ್ಶನ ನೀಡಬೇಕಾದ ಕಾಲ ಇದು ಎಂದು ನನ್ನ ಭಾವನೆ. ಹೆಚ್ಚು ಪ್ರಜ್ವಲಿಸಬೇಕಾದ ವಿರೋಧಕ್ಕೆದುರಾಗಿ ನಿಮ್ಮ ಹಳೆಯ ಉತ್ಸಾಹ ಜ್ಯೋತಿಯು ಇನ್ನೂ ಉಜ್ವಲಿಸುವುದನ್ನು ಕಾಣಬೇಕೆಂಬುದು ನನ್ನ ಆಸೆ. ಸೈನ್ಯಕ್ಕೆ ಜನರನ್ನು ಒದಗಿಸಬಲ್ಲೆವಾದರೆ ನಾವು ಷರತ್ತುಗಳನ್ನು ವಿಧಿಸಬಹುದು. ಆದರೆ ಷರತ್ತುಗಳಿಗಾಗಿ ನಾವು ಕಾದರೆ ಯುದ್ಧ ಮುಗಿದೇ ಹೋಗಬಹುದು, ನಿಜವಾದ ಸೈನ್ಯ ಶಿಕ್ಷಣ ನಮಗೆ ದೊರೆಯದೇ ಹೋಗಿಬಿಡಬಹುದು, ಸೈನಿಕ ಸರ್ವಾಧಿಕಾರ ನಮ್ಮೆದುರು ನಿಲ್ಲಬಹುದು. ಈ ನನ್ನ ದೃಷ್ಟಿ ಪರಿಸ್ಥಿತಿಯನ್ನು ನೋಡುವ ಅತ್ಯಂತ ಸ್ವಾರ್ಥ ದೃಷ್ಟಿ. ದೇಶಕ್ಕೆ ನಾನು ನೀಡುತ್ತಿರುವ ಈ ದಾರಿಯೇ ಪರಿಣಾಮಕಾರಿಯಾದ ಏಕೈಕ ಮಾರ್ಗ ಎಂದು ಸ್ವಹಿತದ ಆಸಕ್ತಿಯೇ ಸೂಚಿಸುತ್ತದೆ".

ಅಂದೇ ಜಿನ್ನಾರಿಗೂ ಅವರು ಬರೆದರು:

"ಜನರನ್ನು ಸೈನ್ಯಕ್ಕೆ ಜಮಾಯಿಸುವುದರ ಬಗ್ಗೆ ಅತ್ಯಂತ ಒತ್ತಾಯಪೂರ್ವಕವಾದ ಘೋಷಣೆಯನ್ನು ನೀವು ಹೊರಡಿಸಬೇಕು. ಪ್ರತಿಯೊಬ್ಬ ಹೋಂ ರೂಲ್ ಲೀಗಿನವನೂ ಸೈನ್ಯಕ್ಕೆ ಜನರನ್ನು ಜಮಾಯಿಸುವ ಶಕ್ತಿಶಾಲಿಯಾದ ಕೇಂದ್ರವಾಗುವುದಾದರೆ, ಜೊತೆ ಜೊತೆಯಲ್ಲೇ ಸಂವಿಧಾನಬದ್ಧ ಹಕ್ಕುಗಳಿಗಾಗಿ ಹೋರಾಡುತ್ತಿದ್ದರೆ, ನಾವು ಒಪ್ಪುವಂಥ ಬದಲಾವಣೆಗಳೊಂದಿಗೆ, ಕಾಂಗ್ರೆಸ್–ಲೀಗ್ ಯೋಜನೆಯು ಅಂಗೀಕೃತವಾಗುವಂತೆ ಮಾಡಬಹುದು ಎಂಬುದು ನಿಮಗೆ ಕಾಣುವುದಿಲ್ಲವೆ? ಆಗ ನಾವು ಇತರರಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಮಾತನಾಡಬಹುದು. 'ಮೊದಲು ನೀವು ಸೈನ್ಯದ ಜಮಾವಣಾ ಕೇಂದ್ರವನ್ನು ಹುಡುಕಿ.ಎಲ್ಲವೂ ನಿಮಗೆ ತಾವಾಗಿಯೇ ಕೂಡಿಬರುತ್ತವೆ. ನಾವು ಜನರಿಗೆ ಮಾರ್ಗದರ್ಶನ ನೀಡಬೇಕು. ನಾವು ಹೇಳಿದ್ದಕ್ಕೆ ಜನ ಏನೆಂದುಕೊಳ್ಳುತ್ತಾರೋ ಎಂದು ಯೋಚಿಸಬಾರದು. ನಾನು ಹೇಳುತ್ತಿರುವುದು ಒತ್ತಾಯಪೂರ್ವಕವಾದ ಘೋಷಣೆಯನ್ನು, ಅರೆಮನಸ್ಸಿನ ಹೇಳಿಕೆಯನ್ನಲ್ಲ".

ಸೈನ್ಯಕ್ಕೆ ಜನರು ಸೇರುವಂತೆ ಬರೆದ ಕರಪತ್ರಗಳನ್ನು ಗಾಂಧೀಜಿ ಹೊರಡಿಸಿದರು. ಆದರೆ ಕಮಿಷನರಿಗೆ ಅಪ್ರಿಯವಾದಂಥ ಕಠಿಣ ಶಬ್ದಗಳನ್ನೂ ಅವರು ಹೇಳಿದರು. "ಭಾರತದಲ್ಲಿ ಬ್ರಿಟಿಷ್‌ಶಾಹಿಯ ಅನೇಕ ಅಕೃತ್ಯಗಳಲ್ಲಿ ಇಡೀ ಜನಾಂಗದ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡದ್ದು ಅತ್ಯಂತ ಹೇಯವಾದದ್ದು ಎಂಬುದಾಗಿ ಇತಿಹಾಸವು ಭಾವಿಸುವುದು. ಶಸ್ತ್ರ ಕಾಯಿದೆಯ ರದ್ದಿಯಾತಿಯನ್ನು ನಾವು ಬಯಸುವುದಾದರೆ,

ಆಯುಧಗಳ ಪ್ರಯೋಗವನ್ನು ನಾವು ಕಲಿಯ ಬಯಸಿದರೆ, ಇಗೋ ಒದಗಿದೆ ಸುವರ್ಣಾವಕಾಶ. ಸರ್ಕಾರಕ್ಕೆ ಒದಗಿರುವ ಈ ಪರೀಕ್ಷೆಯ ಸಮಯದಲ್ಲಿ ಮಧ್ಯಮ ವರ್ಗದ ಜನ ತಾವಾಗಿ ಮುಂದೆ ಬಂದು ಸೇವೆ ಸಲ್ಲಿಸಿದರೆ ಅಪನಂಬಿಕೆ ಮಾಯವಾಗುತ್ತದೆ, ಆಯುಧಗಳ ನಿಷೇಧಾಜ್ಞೆ ರದ್ದಾಗುತ್ತದೆ,"

ಸೈನ್ಯ ಜಮಾಯಿಸುವ ಕೆಲಸ ಗಾಂಧೀಜಿಯವರಿಗೆ ತುಂಬ ಶ್ರಮದಾಯಕವಾಗಿತ್ತು. ಹೀಗಾಗಿ ಅವರ ಆರೋಗ್ಯ ತೀರ ಕೆಟ್ಟಿತು. ಅವರ ಆಹಾರವೆಂದರೆ ಮುಖ್ಯವಾಗಿ ಕಡಲೇಕಾಯಿ, ಬಾಳೆಹಣ್ಣು, ನಿಂಬೆಹಣ್ಣು, ಶ್ರಮದ ಕೆಲಸ, ಜೊತೆಗೆ ಬೇಯಿಸದ ಆಹಾರ ಈ ಎರಡೂ ಸೇರಿ ತೀವ್ರವಾದ ಆಮಶಂಕೆ ಶುರುವಾಯಿತು. ನಾಡಿಯಡ್‌ನಲ್ಲಿ ಅವರ ಅನಾರೋಗ್ಯ ಉಲ್ಬಣಕ್ಕೆ ತಿರುಗಿ ಇಪ್ಪತ್ತುನಾಲ್ಕು ಘಂಟೆಗಳಲ್ಲಿ ಅವರಿಗೆ ಮೂವತ್ತು ನಲವತ್ತು ಸಲ ಭೇದಿಯಾಯಿತು.

ತಿಲಕರು ಗಾಂಧೀಜಿಗೆ ಕಾತರದ ಧ್ವನಿಯಲ್ಲಿ ಕಾಗದ ಬರೆದು ಕಾಂಗ್ರೆಸ್ ಅಧಿವೇಶನಕ್ಕೆ ಬರುವಂತೆ ಕೇಳಿಕೊಂಡರು. ಉತ್ತರವಾಗಿ ಗಾಂಧೀಜಿ ಆಗಸ್ಟ್ ೨೫ರಂದು ಬರೆದರು:

"ನಿಮ್ಮ ಸಹಾನುಭೂತಿಗಾಗಿ ವಂದನೆಗಳು. ನನ್ನ ಆರೋಗ್ಯದ ಬಗ್ಗೆ ನಿಮಗೆ ಕಳವಳವಾಗಿರುವುದು ಸಹಜವೇ. ಭಗವಂತನ ಕೃಪೆಯಿಂದ ನನಗೀಗ ಉತ್ತಮವಾಗಿದೆ. ಆದರೆ ಕೆಲವು ದಿನಗಳ ವರೆಗೆ ಹಾಸಿಗೆ ಬಿಟ್ಟು ಏಳಲಾರೆ. ಯಾತನೆ ತೀವ್ರವಾಗಿತ್ತು. ಈಗ ಇಳಿದಿದೆ.

"ಕಾಂಗ್ರೆಸ್ ಅಧಿವೇಶನಕ್ಕೆ ಬರುವ ಉದ್ದೇಶ ನನಗಿಲ್ಲ. ಅಲ್ಲದೆ ಮಂದಗಾಮಿಗಳ (Moderates) ಸಮ್ಮೇಳನದಲ್ಲಿ ಭಾಗವಹಿಸುವ ಉದ್ದೇಶ ನನಗಿಲ್ಲ. ಆ ಎರಡೂ ಪಕ್ಷಗಳ ದೃಷ್ಟಿಗಿಂತ ನನ್ನದು ಬೇರೆ ಎಂಬುದನ್ನು ನಾನು ಬಲ್ಲೆ. ಇದನ್ನು ಈಗಾಗಲೇ ನಿಮಗೆ ಹೇಳಿದ್ದೇನೆ. ಸೈನ್ಯಕ್ಕೆ ಜನರನ್ನು ಸೇರಿಸಿ ಲಕ್ಷಾಂತರ ಜನರನ್ನು ನಮ್ಮೊಡನೆ ಒಯ್ಯುವುದರಿಂದ ಭಾರತಕ್ಕೆ ಮಹತ್ತಾದ ಸೇವೆಯನ್ನು ಸಲ್ಲಿಸಬಹುದು ಎಂಬುದು ನನ್ನ ನಂಬಿಕೆ. ಶ್ರೀಮತಿ ಬೆಸೆಂಟ್ ಅವರೂ ನೀವೂ ನನ್ನ ಈ ದೃಷ್ಟಿಯನ್ನು ಒಪ್ಪುವುದಿಲ್ಲ. ಮಂದಗಾಮಿಗಳೂ ಈ ಕಾರ್ಯದಲ್ಲಿ ಸೇರಿಕೊಳ್ಳಲು ಆತುರರಾಗಿಲ್ಲ. ಎಂಬುದನ್ನೂ ನಾನು ಬಲ್ಲೆ. ಇದು ಒಂದು, ಎರಡನೆಯದು ನಾವು ಮಾಂಟೆಗೂ ಚೆಲ್ಮ್ಸ್‌ಫರ್ಡ್ ಯೋಜನೆಯ ತತ್ವವನ್ನು ಒಪ್ಪಿಕೊಳ್ಳಬೇಕು. ಮತ್ತು ನಾವು ಸೂಚಿಸಬಯಸುವ ಬದಲಾವಣೆಗಳೇನು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಬೇಕು. ಆ ಬದಲಾವಣೆಗಳು ಅಂಗೀಕೃತವಾಗಲು ನಾವು ಸಾಯುವ ವರೆಗೂ ಹೋರಾಡಬೇಕು. ಮಂದಗಾಮಿಗಳು ಈ ಭಾವನೆಯನ್ನು ಒಪ್ಪುವುದಿಲ್ಲ ಎಂಬುದು ಸ್ಪಷ್ಟವೇ ಆಗಿದೆ. ಶ್ರೀಮತಿ ಬೆಸೆಂಟರೂ ನೀವೂ ಇದನ್ನೊಂದು ವೇಳೆ ಒಪ್ಪಿದರೂ ನಾನು ಹೋರಾಡಬಯಸುವ ರೀತಿಯಲ್ಲಿ ನೀವು ಹೋರಾಡುವುದಿಲ್ಲ. ತಾವು ಸತ್ಯಾಗ್ರಹಿಯಲ್ಲ ಎಂದು ಬೆಸೆಂಟ್ ಹೇಳಿದ್ದಾರೆ. ಸತ್ಯಾಗ್ರಹವನ್ನು ನೀವು ಅಂಗೀಕರಿಸಿದ್ದೀರಿ. ಆದರೆ ದುರ್ಬಲರ ಆಯುಧವೆಂದು ಭ್ರಾಂತಿ

ಯಲ್ಲಿರುವುದು ನನಗಿಷ್ಟವಿಲ್ಲ. ಹಾಗೆಯೇ ನಿಮ್ಮಿಬ್ಬರ ಸಹವಾಸ ಕಡಿದುಕೊಂಡು ಕಾಂಗ್ರೆಸ್ಸಿನಲ್ಲಿ ಗೊಂದಲವನ್ನುಂಟುಮಾಡುವ ಬಯಕೆಯೂ ನನಗಿಲ್ಲ. ನನ್ನ ತಪಸ್ಸು ಪರಿಪೂರ್ಣವಾಗಿರುವುದು ನಿಜವಾಗಿದ್ದರೆ, ನೀವೂ ಮತ್ತು ಬೆಸೆಂಟ್ ಅವರೂ ನನ್ನ ತತ್ವವನ್ನು ಒಪ್ಪಿಕೊಳ್ಳುತ್ತೀರಿ ಎಂಬ ಶ್ರದ್ಧೆ ನನಗಿದೆ. ನಾನು ತಾಳ್ಮೆಯಿಂದಿರಬಲ್ಲೆ.

"ಮಂದಗಾಮಿಗಳೂ ತೀವ್ರಗಾಮಿಗಳೂ ತಮ್ಮ ತತ್ವಗಳನ್ನು ತ್ಯಜಿಸಿ ಒಂದಾಗಲು ಪ್ರಯತ್ನಿಸುವುದು ನನಗೆ ಕಿಂಚಿತ್ತೂ ಇಷ್ಟವಿಲ್ಲ. ದೇಶದಲ್ಲಿ ಎರಡು ಪಕ್ಷಗಳಿವೆ. ಎರಡೂ ಪಕ್ಷಗಳ ಅಭಿಪ್ರಾಯಗಳನ್ನು ಸರ್ಕಾರ ಹಾಗೂ ಜನತೆಯ ಮುಂದೆ ಸ್ಪಷ್ಟವಾಗಿ ಇಡುವುದರಲ್ಲಿ ಏನೂ ತೊಂದರೆಯಾಗುವುದಿಲ್ಲ ಎಂಬುದು ನನ್ನ ಭಾವನೆ".

ಸುರೇಂದ್ರನಾಥ ಬ್ಯಾನರ್ಜಿಯವರಿಗೆ ಬರೆದ ಪತ್ರದಲ್ಲಿ ಹೀಗೆಂದರು: "ನಾನೀಗ ಅಹಮದಾಬಾದಿನಲ್ಲಿ ಸೈನ್ಯ ಜಮಾಯಿಸುತ್ತಿದ್ದೇನೆ. ನಿಮ್ಮ ತಂತಿ ಇಲ್ಲಿಗೆ ಬಂದಿದೆ. ಕಲ್ಕತ್ತೆಗೆ ಭೇಟಿ ಎಂದರೆ ಹೋಗಿ ಬರುವುದಕ್ಕೇ ಕನಿಷ್ಠಪಕ್ಷ ಒಂದು ವಾರಬೇಕು. ಸ್ವಲ್ಪವಾದರೂ ನನ್ನ ಕೆಲಸವನ್ನು ನಾನು ನಿರ್ವಹಿಸಬೇಕು ಎಂದರೆ ಅಷ್ಟೊಂದು ದೀರ್ಘಕಾಲ ಇಲ್ಲಿಲ್ಲದಿರುವುದು ಅಸಾಧ್ಯ. ಸದ್ಯಕ್ಕೆ ಹಾಗೆ ಮಾಡುವ ಧೈರ್ಯವೂ ನನಗಿಲ್ಲ. ಏಕೆಂದರೆ ಗುಜರಾತಿನಲ್ಲಿ ಒಂದು ಸೈನಿಕ ಶಿಕ್ಷಣ ಶಿಬಿರವನ್ನು ತೆರೆದು ಗುಜರಾತ್ ದಳವೊಂದನ್ನು ನಿರ್ಮಿಸಬೇಕು ಎನ್ನುವ ನನ್ನ ಸಲಹೆಗಳನ್ನು ಒಪ್ಪಿಕೊಂಡಿರುವುದಾಗಿ ಈಗ ತಾನೆ ಸರ್ಕಾರ ನನಗೆ ತಿಳಿಸಿದೆ. ಈ ಕೆಲಸವನ್ನು ನಾನು ಬಿಡಲಾಗುವುದಿಲ್ಲ ಎಂಬುದನ್ನು ನೀವು ಒಪ್ಪುತ್ತೀರಿ".

"ಒಂದು ವೇಳೆ ಬರುವುದು ಸಾಧ್ಯವಾಗಿದ್ದಿದ್ದರೂ ನನ್ನಿಂದ ಹೆಚ್ಚಿನ ಸಹಾಯವಾಗುತ್ತಿತ್ತೋ ಹೇಗೋ ತಿಳಿಯದು. ನನ್ನವು ಬಲವಾದ ಬಹುಶಃ ವಿಚಿತ್ರವಾದ ಅಭಿಪ್ರಾಯಗಳು. ನಾಯಕರಲ್ಲಿ ಬಹುಮಂದಿ ಒಪ್ಪದವು. ಸೈನ್ಯ ಜಮಾಯಿಸುವುದಕ್ಕೆ ನಮ್ಮ ಗಮನವನ್ನು ನಾವು ಪೂರ್ಣವಾಗಿ ಮೀಸಲಿಡುವುದಾದರೆ, ಹೆಚ್ಚೆಂದರೆ ಒಂದು ವರ್ಷದೊಳಗೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಪಡೆಯಬಹುದು ಎಂದು ನಾನು ನಿಸ್ಸಂದೇಹವಾಗಿ ನಂಬಿದ್ದೇನೆ. ಶುದ್ಧಾಂಗವಾಗಿ ಅಜ್ಞಾನಿಗಳಾಗಿರುವ ನಮ್ಮ ದೇಶಬಾಂಧವರನ್ನು ಅವರಿಗೆ ಇಷ್ಟವಿರಲಿ ಬಿಡಲಿ ಸೈನ್ಯಕ್ಕೆ ಜಮಾಯಿಸುವುದರ ಬದಲು ತಮ್ಮ ದೇಶಕ್ಕಾಗಿ ಯುದ್ಧ ಮಾಡುತ್ತಿದ್ದೇವೆ ಎಂಬ ಅರಿವಿರುವ, ಸ್ವಂತ ಇಚ್ಛೆಯಿಂದ ಸೈನಿಕರಾಗುವ, ಹೋಂರೂಲಿಗರ ಸೇನೆಯನ್ನು ತಯಾರು ಮಾಡಬೇಕು. ಹಾಗೆಯೇ ಅಸಂದಿಗ್ಧವಾದ ಮಾತುಗಳಲ್ಲಿ ಮಾಂಟೆಗೂ–ಚೆಲ್ಮ್ಸ್‌ಫರ್ಡ್ ಯೋಜನೆಯನ್ನು ಕುರಿತು ನಮ್ಮ ಅಭಿಪ್ರಾಯವನ್ನು ಘೋಷಿಸಬೇಕೆಂದೂ ನಾನು ನಂಬಿಲ್ಲ. ನಮ್ಮ ಕನಿಷ್ಠ ಬೇಡಿಕೆಗಳು ಏನು ಎಂಬುದನ್ನು ನಿರ್ಧರಿಸಿ, ಏನೇ ಬರಲಿ ಅವುಗಳಿಗಾಗಿ ಒತ್ತಾಯ ಪಡಿಸಬೇಕು. ಈ ಯೋಜನೆಯು ಅದರ ಕಲ್ಪನೆಯಲ್ಲಿ ಸರಿಯಾಗಿಯೇ ಇದೆ ಎಂಬುದು ನನ್ನ ಭಾವನೆ. ಅದರಲ್ಲಿ ತುಂಬ ಬದಲಾವಣೆಯಾಗಬೇಕಾದ ಅಗತ್ಯ ಇದೆ. ಸರ್ವಾನುಮತದ ತೀರ್ಮಾನಕ್ಕೆ ಬರುವುದರಲ್ಲಿ ನಮಗೆ ಏನೂ ತೊಂದರೆ ಬರಲಾರದು. ಸುಮ್ಮನೆ

ಈ ಎರಡು ಪ್ರತಿಜ್ಞೆಗಳನ್ನು ಕೈಗೊಳ್ಳುವ ಪಕ್ಷವೊಂದು ಆಗಬೇಕು ಎಂಬುದು ನನ್ನ ಅಪೇಕ್ಷೆ. ಸರ್ಕಾರಕ್ಕೆ ಯುದ್ಧದಲ್ಲಿ ಸಹಾಯ ಮಾಡುವುದು ಒಂದು, ರಾಷ್ಟ್ರೀಯ ಬೇಡಿಕೆಯನ್ನು ಒತ್ತಾಯಪಡಿಸುವುದು ಮತ್ತೊಂದು.

"ಇಂಥ ಸಂದಿಗ್ಧ ಸಮಯದಲ್ಲಿ ತೀವ್ರಗಾಮಿಗಳು ಮತ್ತು ಮಂದಗಾಮಿಗಳು ಎನಿಸಿಕೊಂಡವರ ನಡುವೆ, ಒಬ್ಬರು ಮತ್ತೊಬ್ಬರಿಗೆ ಅಲ್ಪಸ್ವಲ್ಪ ಬಿಟ್ಟುಕೊಟ್ಟು, ತೇಪೆ ಹಾಕದ ಸಂಧಾನದಿಂದ ಸಮಾಧಾನಪಟ್ಟುಕೊಳ್ಳಬೇಕೆಂದು ನಾನು ನಂಬಿಲ್ಲ. ಪ್ರತಿಯೊಂದು ಗುಂಪೂ ಅಥವಾ ಪಕ್ಷವೂ ತನ್ನ ನೀತಿಯನ್ನು ಸ್ಪಷ್ಟವಾಗಿ ಪ್ರತಿಪಾದಿಸಬೇಕು. ಯಾರ ವಾದದಲ್ಲಿ ಅರ್ಹತೆ ಇದೆಯೋ ಮತ್ತು ಯಾರು ಎಡೆಬಿಡದ ಹೋರಾಟದಿಂದ ಈ ದೇಶದಲ್ಲಿ ನಿಜವಾದ ಶಕ್ತಿಯಾಗುತ್ತಾರೋ ಅವರು ಕಾಮನ್ಸ್‌ಸಭೆಯಲ್ಲೂ ಜಯಗಳಿಸುವರು".

ಸ್ವಲ್ಪ ಸಮಯದಲ್ಲೇ ಗಾಂಧೀಜಿಯನ್ನು ಸಬರ್ಮತಿ ಆಶ್ರಮಕ್ಕೆ ಒಯ್ದರು. ಇಲ್ಲಿ ಅವರು ಜಲಚಿಕಿತ್ಸೆಯನ್ನು ತಾವೇ ಮಾಡಿಕೊಂಡರು. ಆದರಿಂದ ಸ್ವಲ್ಪ ಉತ್ತಮವಾಯಿತು. ಆದರೆ ಮೈಕೈ ತುಂಬಿಕೊಳ್ಳುವುದು ಕಠಿಣವಾಯಿತು. ವೈದ್ಯರು ಮಾಂಸದ ಸಾರು ಅಥವಾ ಮೊಟ್ಟೆಗಳನ್ನು ತೆಗೆದುಕೊಳ್ಳುವಂತೆ ಸಲಹೆ ಮಾಡಿದರು. ಆದರೆ ಅವರು ಒಪ್ಪಲಿಲ್ಲ.

ಒಂದು ರಾತ್ರಿ ಗಾಂಧೀಜಿ ಹತಾಶರಾದರು. ತಾನು ಸಾವಿನ ಬಾಗಿಲಲ್ಲಿದ್ದೇನೆಂದು ಭಾವಿಸಿದರು. ಅನಸೂಯಾ ಬಹೆನ್‌ಗೆ ಹೇಳಿ ಕಳುಹಿಸಿದರು. ಆಕೆ ಡಾ. ಕನೂಗ ಅವರನ್ನು ಕರೆತಂದರು. ನರಗಳ ದೌರ್ಬಲ್ಯದಿಂದಾದ ಶುನಿತ ಇದು ಎಂದರು ವೈದ್ಯರು. ಆದರೆ ಏನೂ ಅಪಾಯವಿಲ್ಲ ಎಂದು ಭರವಸೆ ಕೊಟ್ಟರು. ಆದರೆ ಗಾಂಧೀಜಿಗೆ ಮಾತ್ರ ಇದು ತಮ್ಮ ಅಂತ್ಯಕಾಲ ಎಂಬ ಭಾಪನೆ ದೂರವಾಗಲಿಲ್ಲ. ಎಚ್ಚರದ ಎಲ್ಲ ಕ್ಷಣಗಳನ್ನು ಗೀತಾಶ್ರವಣಕ್ಕೆ ಮೀಸಲಿಟ್ಟರು. ಅವರು ಪೂರ್ತಿ ಸೋತು, ತಮ್ಮ ದೇಹ ನಶಿಸುತ್ತಿರುವುದನ್ನು ನೋಡುತ್ತಾ ಮಲಗಿದ್ದರು. ಜರ್ಮನಿಯನ್ನು ಸೋಲಿಸಲಾಗಿದೆ, ಇನ್ನು ಸೈನ್ಯಕ್ಕೆ ಜನರನ್ನು ಜಮಾಯಿಸುವ ಅಗತ್ಯವಿಲ್ಲ ಎಂದು ಕಮಿಷನರ್ ಹೇಳಿ ಕಳಿಸಿದ್ದಾರೆ ಎಂಬ ಸುದ್ದಿಯನ್ನು ತಂದರು ವಲಭ ಭಾಯಿ. ಗಾಂಧೀಜಿಗೆ ದೊಡ್ಡ ಹೊರೆ ಇಳಿಯಿತು.

ನವೆಂಬರ್ ತಿಂಗಳ ಉತ್ತರಾರ್ಧವನ್ನು ಗಾಂಧೀಜಿ ಮಾಥೆರಾನ್ ಎಂಬ ಪರ್ವತಧಾಮದಲ್ಲಿ ಕಳೆದರು. ಡಿಸೆಂಬರ್ ಮಧ್ಯಭಾಗದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಮುಂಬಯಿಗೆ ಬಂದರು. ಅವರ ದೇಹ ತುಂಬಿಕೊಳ್ಳಲು ಹಾಲಲ್ಲದೆ ಬೇರೇನೂ ದಾರಿ ಇರಲಿಲ್ಲ. ಆದರೆ ಹಾಲು ಕುಡಿಯುವುದಿಲ್ಲ ಎಂಬ ಅವರ ಪ್ರತಿಜ್ಞೆ ಅದಕ್ಕೆ ಅಡ್ಡಿಯಾಯಿತು. ತಜ್ಞರ ಸಲಹೆಯಂತೆ ಅವರು ಹಾಲಿಗೆ ಬದಲು ಹೆಸರು ಬೇಳೆ ನೀರು, ಬಾದಾಮಿ ರಸ ಮತ್ತು ಓಪ್ಸೆ ಎಣ್ಣೆಗಳನ್ನು ತೆಗೆದುಕೊಂಡು ಪ್ರಯೋಗಮಾಡಿಕೊಂಡರು.ಆದರೆ ಫಲಕಾರಿಯಾಗದೆ ಅವರು ಇನ್ನೂ ದುರ್ಬಲರಾದರು. ಅವರ ಪ್ರತಿಜ್ಞೆ ಹಸು ಅಥವಾ ಎಮ್ಮೆಯ ಹಾಲಿಗೆ ಮಾತ್ರ ಅನ್ವಯಿಸುತ್ತದೆಯೆಂದು ಕಸ್ತೂರ್ ಬಾ ಹಠ ಹಿಡಿದು

ಹೇಳಿದರು; (ಏಕೆಂದರೆ ಪ್ರತಿಜ್ಞೆ ಮಾಡಿದಾಗ, ಗಾಂಧೀಜಿಯ ಮನಸ್ಸಿನಲ್ಲಿದ್ದದ್ದು ಆ ಎರಡು ಪ್ರಾಣಿಗಳು ಮಾತ್ರ.) ಆದ್ದರಿಂದ ಅವರು ಆಡಿನ ಹಾಲು ತೆಗೆದುಕೊಳ್ಳಬಹುದು ಎಂದು ಆಕೆ ಸೂಚಿಸಿದರು. ಬದುಕಬೇಕೆಂಬ ಇಚ್ಛೆ ಇದ್ದುದರಿಂದ ಗಾಂಧೀಜಿ ಪ್ರತಿಜ್ಞೆಯ ಅಕ್ಷರ ಸತ್ಯವನ್ನು ಮಾತ್ರ ಅನುಸರಿಸುವಷ್ಟು 'ಹೇಗೋ ತಮ್ಮನ್ನು ತಾವೇ ವಂಚಿಸಿ'ಕೊಂಡರು. ಆಡಿನ ಹಾಲನ್ನು ಸ್ವೀಕರಿಸಲು ತೀರ್ಮಾನಿಸಿದರು. ೧೯೧೯ರ ಜನವರಿ ೨೧ರಂದು ಡಾ. ದಲಾಲ್ ಅವರು ಗಾಂಧೀಜಿಯ ಮೂಲವ್ಯಾಧಿಗೆ (fissure) ಯಶಸ್ವಿಯಾಗಿ ಶಸ್ತ್ರಕ್ರಿಯೆ ಮಾಡಿದರು. ಗಾಂಧೀಜಿಯ ಆರೋಗ್ಯ ಕ್ರಮವಾಗಿ ಉತ್ತಮಗೊಳ್ಳತೊಡಗಿತು. ಬೊಂಬಾಯಿಯಲ್ಲಿ ಚೇತರಿಸಿಕೊಳ್ಳುತ್ತಿರುವಾಗ ನೂಲುವುದನ್ನು ಕಲಿತು ಅಭ್ಯಾಸ ಮಾಡಿಕೊಂಡರು. "ರಾಟೆ ಸಂತಸದಿಂದ ಗುಂಯ್‌ಗುಟ್ಟತೊಡಗಿತು. ನನ್ನ ಆರೋಗ್ಯಲಾಭದಲ್ಲಿ ಅದರ ಪಾಲು ಕಡಮೆಯೇನಲ್ಲ" ಎಂದರು ಅವರು.

ಅವರ ಅನೇಕ ಮಿತ್ರರಿಗೂ ಮೆಚ್ಚುಗರಿಗೂ ಯುದ್ಧದಲ್ಲಿ ಇವರು ಪಾಲುಗೊಂಡದ್ದು ಒಗಟೆಯಾಗಿತ್ತು. ಕೆಲವು ವರ್ಷಗಳ ಅನಂತರ ಗಾಂಧೀಜಿ ತಮ್ಮ ದೃಷ್ಟಿಯನ್ನು ವಿವರಿಸಿದರು.

"ಯುದ್ಧದಲ್ಲಿ ಭಾಗವಹಿಸಲು ನನ್ನನ್ನು ಪ್ರೇರಿಸಿದ ಉದ್ದೇಶ ಮಿಶ್ರವಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ಎರಡು ವಿಷಯಗಳು ನೆನಪಾಗುತ್ತಿವೆ. ವೈಯಕ್ತಿಕವಾಗಿ ನಾನು ಯುದ್ಧ ವಿರೋಧಿಯಾಗಿದ್ದರೂ ಪರಿಣಾಮಕಾರಿಯಾದ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲು ಬೇಕಾದ ಅಧಿಕಾರ ನನಗಿರಲಿಲ್ಲ. ಅಹಿಂಸಾತ್ಮಕ ಸತ್ಯಾಗ್ರಹವು ನಿಜವಾದ ಯಾವುದಾದರೂ ಅನಾಸಕ್ತ ಸೇವೆ ಮಾಡಿದ ಬಳಿಕ, ಯಾವುದೇ ಹೃತ್ಪೂರ್ವಕ ಪ್ರೇಮದ ಪ್ರಕಾಶನದ ಬಳಿಕ, ಮಾತ್ರವೇ ಬರಬಲ್ಲುದು. ಉದಾಹರಣೆಗೆ, ಯಾವನಾದರೂ ಕಾಡು ಮನುಷ್ಯ ಪ್ರಾಣಿಬಲಿಯನ್ನು ನೀಡುತ್ತಿದ್ದರೆ ಅದನ್ನು ತಡೆಯಲು ನನಗಿರಬೇಕಾದ ಅಧಿಕಾರವೆಂದರೆ ಆತ ನನ್ನನ್ನು ತನ್ನ ಸ್ನೇಹಿತನೆಂದು ಎಣಿಸಬೇಕು. ಹಾಗೆ ಎಣಿಸಲು ನಾನು ಒಂದಲ್ಲ ಒಂದು ಪ್ರೇಮ ಪೂರ್ವಕ ಸೇವೆಯನ್ನು ಅವನಿಗೆ ಸಲ್ಲಿಸಿರಬೇಕು. ಜಗತ್ತು ಅನೇಕ ಅಕೃತ್ಯಗಳನ್ನು ಮಾಡಬಹುದು. ಅದರ ಮೇಲೆ ತೀರ್ಪು ನೀಡುವ ಇಷ್ಟ ನನಗಿಲ್ಲ. ನಾನೇ ಅಪೂರ್ಣ ವ್ಯಕ್ತಿಯಾಗಿದ್ದು ಸಹನೆ ಔದಾರ್ಯಗಳ ಅಗತ್ಯ ನನಗೇ ಇದೆ. ಫಲಕಾರಿ ಪ್ರೇಮದಿಂದ ಬುದ್ಧಿವಾದ ನೀಡುವ ಅವಕಾಶ ನನಗೆ ದೊರೆಯುವ ವರೆಗೂ ಅಥವಾ ಅಂಥದೊಂದನ್ನು ನಾನೇ ಕಲ್ಪಿಸಿಕೊಳ್ಳುವವರೆಗೂ ಜಗತ್ತಿನ ಅಪರಿಪೂರ್ಣತೆಗಳನ್ನು ನಾನು ಸಹಿಸಿಕೊಳ್ಳುತ್ತೇನೆ. ಸಾಮ್ರಾಜ್ಯದ ಸಮರಗಳನ್ನೂ ಸಮರಸಿದ್ಧತೆಗಳನ್ನೂ ಪ್ರತಿಭಟಿಸಲು ತಕ್ಕ ಶಕ್ತಿಯನ್ನೂ ಶ್ರದ್ಧೆಯನ್ನೂ ಸಾಕಷ್ಟು ಸೇವೆಯ ಮೂಲಕ ಪಡೆಯಬಲ್ಲೆನಾದರೆ, ನನ್ನ ಸ್ವಂತ ಜೀವನದಲ್ಲಿ ಅಹಿಂಸೆಯನ್ನು ವಿಧಿಸಿಕೊಳ್ಳಬಯಸುತ್ತಿದ್ದ ನಾನು, ಜನತೆಯಲ್ಲಿ ಅದು ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ಪರೀಕ್ಷಿಸುವುದು ಒಳ್ಳೆಯದು ಎಂದು ನನಗೆ ಆಗ ತೋರಿತು".

"ಇನ್ನೊಂದು ಉದ್ದೇಶವೆಂದರೆ ಸಾಮ್ರಾಜ್ಯದ ರಾಜತಂತ್ರಪಟುಗಳ ಉಪಕಾರದಿಂದ ಸ್ವರಾಜ್ಯಪಡೆಯಲು ನಾವು ಅರ್ಹರಾಗಬೇಕೆಂಬುದು. ಸಾಮ್ರಾಜ್ಯದ ಸಾವು ಬದುಕುಗಳ ಹೋರಾಟದಲ್ಲಿ ಅದಕ್ಕೆ ಸೇವೆ ಸಲ್ಲಿಸಿದ್ದಲ್ಲದೆ ಹಾಗೆ ಅರ್ಹನಾಗುವುದು ಸಾಧ್ಯವಿರಲಿಲ್ಲ. ೧೯೧೪ರಲ್ಲಿದ್ದ ನನ್ನ ಮನಸ್ಥಿತಿಯನ್ನು ತಿಳಿಸುತ್ತಿದ್ದೇನೆ ಎಂಬುದನ್ನು ಇಲ್ಲಿ ಅರಿಯಬೇಕು. ಆಗ ನನಗೆ ಸಾಮ್ರಾಜ್ಯದಲ್ಲೂ ಭಾರತವು ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟದಲ್ಲಿ ಅದಕ್ಕೆ ನೆರವು ನೀಡಲು ಮನಃಪೂರ್ವಕವಾದ ಸಾಮರ್ಥ್ಯ ಇದೆಯೆಂದೂ ನಂಬಿಕೆಯಿತ್ತು. ಇಂದು ನಾನಾಗಿರುವಂತೆ ಅಂದೂ ನಾನು ಅಹಿಂಸಾತ್ಮಕ ಬಂಡಾಯಗಾರನಾಗಿದ್ದಿದ್ದರೆ ಖಂಡಿತವಾಗಿಯೂ ನಾನು ಸಾಮ್ರಾಜ್ಯಕ್ಕೆ ನೆರವಾಗುತ್ತಿರಲಿಲ್ಲ. ಬದಲಿಗೆ, ಅಹಿಂಸಾತ್ಮಕವಾಗಿ ಸಾಧ್ಯವಾದ ಎಲ್ಲ ಬಗೆಯ ಯತ್ನದಿಂದಲೂ ಸಾಮ್ರಾಜ್ಯದ ಉದ್ದೇಶವನ್ನು ಸೋಲಿಸಲು ಪ್ರಯತ್ನಿಸುತ್ತಿದ್ದೆ.

"ಯುದ್ಧಕ್ಕೆ ನನ್ನ ವಿರೋಧ, ಅದರಲ್ಲಿ ಅಪನಂಬಿಕೆ ಇವೆರಡೂ ಅಂದೂ ಇಂದಿನಷ್ಟೇ ಪ್ರಬಲವಾಗಿತ್ತು. ಆದರೆ ಒಂದು ಮಾತು ಒಪ್ಪಿಕೊಳ್ಳಬೇಕು. ಈ ಜಗತ್ತಿನಲ್ಲಿ ಎಷ್ಟೋ ವಿಷಯಗಳಿಗೆ ನಾವು ವಿರೋಧವಾಗಿದ್ದರೂ ಅವನ್ನು ನಾವು ಮಾಡುತ್ತೇವೆ. ಯುದ್ಧಕ್ಕೆ ನಾನು ಎಷ್ಟರಮಟ್ಟಿಗೆ ವಿರೋಧಿಯೋ ಅಷ್ಟೇ ಮಟ್ಟಿಗೆ ಅತ್ಯಂತ ಕಿರಿದಾದ ಜೀವಿಯ ಜೀವವನ್ನು ತೆಗೆಯುವುದಕ್ಕೂ ನಾನು ವಿರೋಧಿಯೇ. ಬದುಕುವ ಶಕ್ತಿ ಎಂದೋ ಒಂದು ದಿನ ಬರುತ್ತದೆ ಎಂಬ ನಿರೀಕ್ಷೆಯಲ್ಲಿ ನಿರಂತರವಾಗಿ ಅಂಥ ಜೀವವನ್ನು ತೆಗೆಯುತ್ತಲೇ ಇದ್ದೇನೆ. ಹಾಗಿದ್ದರೂ ಅಹಿಂಸೆಯ ಭಕ್ತ ಎಂದು ಕರೆಸಿಕೊಳ್ಳಲುಅರ್ಹನಾಗಬೇಕಾದರೆ, ನನ್ನ ಪ್ರಯತ್ನ ಪ್ರಾಮಾಣಿಕವಾಗಿರಬೇಕು, ಶ್ರಮಪೂರ್ಣವಾಗಿರಬೇಕು, ಅವಿಚ್ಛಿನ್ನವಾಗಿರಬೇಕು. ಮೋಕ್ಷ ಅಥವಾ ಸದೇಹವಾಗಿರುವ ಸ್ಥಿತಿಯಿಂದ ಬಿಡುಗಡೆ ಎಂಬ ಕಲ್ಪನೆಯು, ಪರಿಪೂರ್ಣರಾದ ಸ್ತ್ರೀ ಪುರುಷರು ಸಂಪೂರ್ಣವಾಗಿ ಅಹಿಂಸಾನಿಷ್ಠರೇ ಆಗಿರಬೇಕೆಂಬ ಅಗತ್ಯವನ್ನು ಅವಲಂಬಿಸಿದೆ. ದೇಹವನ್ನು ಪಡೆದಿರುವುದು ಇನ್ನಾವುದೇ ಪಡೆದಿರುವುದರಂತೆಯೇ, ಅಲ್ಪಸ್ವಲ್ಪವಾದರೂ ಹಿಂಸೆ ಮಾಡುವುದನ್ನು ಅನಿವಾರ್ಯಗೊಳಿಸುತ್ತದೆ. ವಾಸ್ತವಾಂಶವೆಂದರೆ, ಪರಸ್ಪರ ವಿರುದ್ಧವೆಂದು ತೋರುವ ಪ್ರೇರಕ ಶಕ್ತಿಗಳ ನಡುವೆ ಕರ್ತವ್ಯದ ಪಥ ಕಾಣುವುದು ಸರ್ವದಾ ಸುಲಭವಲ್ಲ.

ಶಾಂತಿ ಸಂಧ್ಯೆ

೧೯೧೮

ಯುದ್ಧವು ಭಾರತವನ್ನು ಸೋಂಕಲಿಲ್ಲ ನಿಜ. ಆದರೂ ಅದರ ಪರಿಣಾಮಗಳು ಸ್ಪಷ್ಟವಾಗಿ ಕಾಣಿಸಿಕೊಂಡುವು. ಜನರ ನಿರೀಕ್ಷಣೆಗಳು ಎತ್ತರಕ್ಕೇರಿದ್ದುವು. ದೇಶವನ್ನೆಲ್ಲ ಹೋರಾಡುವ ಮನೋಭಾವ ಆವರಿಸಿದ್ದು ಅದು ಅನೇಕ ರೀತಿಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು.

ಮಾಂಟೆಗೂ-ಚೆಲ್ಮ್ಸ್‌ಫರ್ಡ್ ವರದಿ ೧೯೧೮ರ ಜೂಲೈ ತಿಂಗಳಲ್ಲಿ ಹೊರ ಬಂತು. ಭಾರತದಲ್ಲಿ ಅದು ದೊಡ್ಡ ಆಂದೋಳನವನ್ನೇ ಎಬ್ಬಿಸಿತು. ಕಲಹ ಬೀಜವೇ ಆಗಿ ಪರಿಣಮಿಸಿತು. ಯೋಜನೆಯ ಹಂಚಿಕೆಗೆ ಮಂದಗಾಮಿಗಳು ಬಲಿಯಾದರು. ಅವರು ಹೇಳಿದರು: "ಸರ್ಕಾರದ ವಿಷಯದಲ್ಲಿ ಸೌಹಾರ್ದವಿಲ್ಲದ ತೀವ್ರಗಾಮಿಗಳನ್ನು ಸೌಹಾರ್ದ ಇರುವವರಿಂದ ಬೇರೆ ಮಾಡಲೇಬೇಕು" ಮಂದಗಾಮೀನಾಯಕರುಗಳಲ್ಲಿ ಕೆಲವರನ್ನಾದರೂ ಒಲಿಸಿಕೊಳ್ಳುವ ಹೂಟವೂ ಬಂದಿತ್ತು. ಮಾಂಟೆಗೂ ಅವರ ಪ್ರಕಾರ "ನಮ್ಮ ಯೋಜನೆಗಳ ಪರವಾಗಿ ಪ್ರಚಾರ ನಡೆಸಲು, ಇಂಗ್ಲೆಂಡಿಗೆ ಒಂದು ನಿಯೋಗ ಕಳುಹಿಸಿ ನಮಗೆ ನೆರವಾಗಲು ಸರ್ಕಾರದಿಂದ ಸರ್ವವಿಧದಿಂದಲೂ ನೆರವು ಪಡೆದ ಭಾರತೀಯರ ಹೊಸ ಸಂಸ್ಥೆಯೊಂದನ್ನು ಸಂಘಟಿಸುವುದರ ಪರವಾಗಿ ನಮ್ಮದೊಂದು ಸಲಹೆಯೂ ಇತ್ತು".

ತೀವ್ರಗಾಮಿಗಳು ತಮಗೆ ನಿಶ್ಚಿತವಾಗಿ ಬೇಕಾದದ್ದೇನು ಎಂಬುದರ ವಿಷಯದಲ್ಲಿ ಮಾಂಟೆಗೂ ಸಂದೇಹಕ್ಕೆಡೆಗೊಡಲಿಲ್ಲ. ತಿಲಕರು ಮಾಂಟೆಗೂ-ಚೆಲ್ಮ್ಸ್‌ಫರ್ಡ್ ವರದಿಯನ್ನು "ನಿಷ್ಪ್ರಯೋಜಕ ಯೋಜನೆಯೊಂದರ ಉತ್ತಮ ವರದಿ" ಎಂದು ವರ್ಣಿಸಿದರು. ದ್ವಿವಿಧ ಆಡಳಿತವು ಯಶಸ್ವಿಯಾಗುವುದಿಲ್ಲ ಎಂಬುದನ್ನು ಮುಂಗಂಡು ಸಿ. ಆರ್. ದಾಸರು ಐದು ವರ್ಷಗಳಲ್ಲಿ ನಿಜವಾದ ಜವಾಬ್ದಾರಿ ಸರ್ಕಾರ ಬರಬೇಕು ಮತ್ತು ಈ ಕೂಡಲೇ ಆ ಬಗ್ಗೆ ಮಾತುಕೊಡಬೇಕು ಎಂದು ಒತ್ತಾಯ ಪಡಿಸಿದರು. ಶ್ರೀಮತಿ ಬೆಸೆಂಟ್ ಹೀಗೆಂದರು; "ವರದಿಯಲ್ಲಿ ಸೂಚಿಸಿರುವ ಸುಧಾರಣೆಗಳು, ಇಂಗ್ಲೆಂಡಿಗೆ ಕೊಡಲು ತಕ್ಕವಲ್ಲ, ಭಾರತಕ್ಕೆ ಪಡೆಯಲು ತಕ್ಕವಲ್ಲ".

ಸುರೇಂದ್ರನಾಥ ಬ್ಯಾನರ್ಜಿಯವರ ಬೆಂಬಲವನ್ನು ಮಾಂಟೆಗೂ ಪಡೆದುಕೊಂಡಿದ್ದರು. ತಾವು ತರಲಿರುವ ತಿದ್ದುಪಡಿಗಳನ್ನು ಮುಂದಿನ ಸಂಧಾನಕ್ಕೆ ಬಿಟ್ಟು ಯೋಜನೆಯನ್ನು ಒಪ್ಪಿಕೊಳ್ಳುವ ನಿರ್ಣಯವೊಂದನ್ನು ಕಾಂಗ್ರೆಸ್ ಅಂಗೀಕರಿಸುವುದೆಂದು ತಾವು ಭಾವಿಸುವುದಾಗಿ ಭೂಪೇಂದ್ರನಾಥ ಬಸು ಹೇಳಿದರು. ಒಪ್ಪಿಕೊಳ್ಳಲು ಕಾರಣ, ಹಾಗೆ ಮಾಡದಿದ್ದರೆ "ತಾವೆಲ್ಲ ಮಾತಿಗೆ ಸಿಕ್ಕಿಸಿಕೊಳ್ಳಬಯಸುವ ಕಪಟಿಗಳು ಎಂಬ ಅಪವಾದ

ವನ್ನು ತಮ್ಮ ಮೇಲೆ ಹೊರಿಸಲು ತಮ್ಮ ಶತ್ರುಗಳಿಗೆ ತಾವೇ ಹಿಡಿತ ಕೊಟ್ಟಂತಾಗುತ್ತದೆ" ಎಂಬುದು. ಗಾಂಧೀಜಿ ಹೇಳಿದರು; "ಏಕ್‌ದಮ್ ನಿರಾಕರಿಸುವ ಬದಲು ಈ ಯೋಜನೆ ಸಹಾನುಭೂತಿಯಿಂದ ಪರಿಶೀಲಿಸಲು ಅರ್ಹವಾಗಿದೆ. ಬ್ರಿಟನ್ನಿನ ಜಯಕ್ಕಾಗಿ ಬೇಷ ರತ್ತಾಗಿ ಸಾಯುವ ತನಕ ಹೋರಾಡಿ. ಹಾಗೆಯೇ, ಜೊತೆ ಜೊತೆಗೇ ಅಗತ್ಯವಾದರೆ ಸಾಯುವ ತನಕ, ನಮಗೆ ಅರ್ಹವಾದ ಸುಧಾರಣೆಗಳಿಗಾಗಿಯೂ ಸಹ ಹೋರಾಡಿ".

ಈ ಯೋಜನೆಯ ವಿಷಯಕ್ಕೆ ಕಾಂಗ್ರೆಸ್ಸಿಗರ ಭಿನ್ನಾಭಿಪ್ರಾಯಗಳು ತೀವ್ರರೂಪ ತಾಳಿದ್ದುವು. ಮಾಂಟೆಗೂ–ಚೆಲ್ಮ್ಸ್‌ಫರ್ಡ್ ವರದಿಯನ್ನು ಚರ್ಚಿಸಲು ೧೯೧೮ರ ಆಗಸ್ಟ್ ೨೯ರಂದು ಕಾಂಗ್ರೆಸಿನ ವಿಶೇಷ ಅಧಿವೇಶನವೊಂದು ಬೊಂಬಾಯಿಯಲ್ಲಿ ಸೈಯದ್ ಹಸನ್ ಇಮಾಂ ಅವರ ಅಧ್ಯಕ್ಷತೆಯಲ್ಲಿ ಸೇರಿತು. ವಾಛಾ, ಸುರೇಂದ್ರನಾಥ ಬ್ಯಾನರ್ಜಿ, ಭೂಪೇಂದ್ರನಾಥ ಬಸು, ಅಂಬಿಕಾ ಚರಣ ಮುಜುಂದಾರ್, ಇವರು ಸಮ್ಮೇಳನಕ್ಕೆ ಗೈರ್‌ಹಾಜರಾದರು. ನಾಲ್ಕು ದಿನಗಳ ಕಾಲ ಚರ್ಚೆ ನಡೆಸಿದ ಬಳಿಕ ಕಾಂಗ್ರೆಸ್ಸು, ೧೯೧೬ರ ಡಿಸೆಂಬರ್‌ನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಲಕ್ನೋದಲ್ಲೂ, ೧೯೧೭ರ ಡಿಸೆಂಬರಿನಲ್ಲಿ ಕಲ್ಕತ್ತೆಯಲ್ಲೂ ಸ್ವಪ್ರಭುತ್ವಕ್ಕೆ ಸಂಬಂಧಿಸಿದಂತೆ ಅಂಗೀಕರಿಸಿದ್ದ ಠರಾವುಗಳಲ್ಲಿ ಅಡಕವಾಗಿದ್ದ ಸುಧಾರಣೆಯ ತತ್ವಗಳನ್ನೇ ಮತ್ತೆ ಪ್ರತಿಪಾದಿಸಿತು. ಮತ್ತೂ ಹೀಗೆ ಘೋಷಿಸಿತು; "ಸಾಮ್ರಾಜ್ಯದೊಳಗೆ ಸ್ವಪ್ರಭುತ್ವಕ್ಕೆ ಕಡಮೆಯಾದ ಯಾವುದೂ ಭಾರತೀಯರಿಗೆ ತೃಪ್ತಿಯನ್ನು ನೀಡಲಾರದು. ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಸ್ವತಂತ್ರವೂ ಸ್ವಯಮಾಡಳಿತ ಮಾಡಿಕೊಳ್ಳುವಂಥದೂ ಆದ ರಾಷ್ಟ್ರವಾಗಿ ಅದು ತನ್ನ ನ್ಯಾಯ ಬದ್ಧ ಸ್ಥಾನವನ್ನು ಪಡೆಯಲು ನೆರವಾಗುವುದರ ಮೂಲಕ ಗ್ರೇಟ್ ಬ್ರಿಟನ್ ಮತ್ತು ಭಾರತಗಳ ಸಂಬಂಧವನ್ನು ಬಲಪಡಿಸಿರಿ".

ಈ ಕಾಂಗ್ರೆಸ್ಸು ಪುನಃ ಘೋಷಿಸಿತು; "ಭಾರತದ ಜನತೆ ಜವಾಬ್ದಾರಿ ಸರ್ಕಾರಕ್ಕೆ ಅರ್ಹರಾಗಿದ್ದಾರೆ. ಭಾರತದ ಸಂವಿಧಾನದ ಸುಧಾರಣೆಗಳ ವರದಿಯಲ್ಲಿರುವ ತದ್ವಿರುದ್ಧ ಕಲ್ಪನೆಯನ್ನು ಭಾರತದ ಜನತೆ ಖಂಡಿಸುತ್ತದೆ".

ನಾಲ್ಕನೆಯ ಗೊತ್ತುವಳಿಯಲ್ಲಿ ವ್ಯಾಪಕವಾದ ಸಲಹೆಗಳಿದ್ದುವು:

"ಈ ದೇಶದ ಶಾಂತಿ, ಸಮಾಧಾನ ಮತ್ತು ರಕ್ಷಣೆಗಳಿಗೆ ನೇರವಾಗಿ ಸಂಬಂಧಿಸಿದ ವಿಷಯಗಳಲ್ಲಿ ಭಾರತ ಸರ್ಕಾರಕ್ಕೆ ಅವಿಭಾಜ್ಯವಾದ ಆಡಳಿತಾಧಿಕಾರವಿರತಕ್ಕದ್ದು. ಹಾಗೆ ಇರುವುದು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು:

ಪಾರ್ಲಿಮೆಂಟು ಅಂಗೀಕರಿಸಲಿರುವ ಕಾನೂನು ಭಾರತದ ಜನರಿಗೆ ಬ್ರಿಟಿಷ್ ಪೌರರಾಗಿ ಸಲ್ಲಬೇಕಾದ ಹಕ್ಕುಗಳ ಘೋಷಣೆಯನ್ನೂ ಒಳಗೊಳ್ಳತಕ್ಕದ್ದು.

"(ಅ) ಸಾರ್ವಭೌಮರ ಎಲ್ಲ ಭಾರತೀಯ ಪ್ರಜೆಗಳೂ, ಭಾರತದಲ್ಲಿ ನೆಲೆಸಿ ಭಾರತದ ಪ್ರಜೆಗಳಾದವರೂ ಅಥವಾ ಭಾರತದಲ್ಲಿ ವಾಸಿಸುವವರೂ ಕಾನೂನಿನ ದೃಷ್ಟಿಯಲ್ಲಿ ಸಮಾನ ಎಂದು ಪರಿಗಣಿಸತಕ್ಕದ್ದು; ಮತ್ತು ಈ ದೇಶದಲ್ಲಿ ದಂಡನೆಗೋ ಆಡಳಿತಕ್ಕೋ ಸಂಬಂಧಪಟ್ಟ ಯಾವುದೇ ಪಕ್ಷಪಾತ ಸ್ವರೂಪದ ಕಾನೂನು, ಅದು

ಮೂಲಭೂತವಾದದ್ದೇ ಆಗಲಿ ಇಲ್ಲವೆ ವ್ಯಾವಹಾರಿಕ ಕ್ರಮದ್ದೇ ಆಗಲಿ, ಇರತಕ್ಕದ್ದಲ್ಲ.

(ಆ) ಸಾರ್ವಭೌಮರ ಯಾವನೇ ಭಾರತೀಯ ಪ್ರಜೆಯೂ, ಕಾನೂನು ಬದ್ಧವಾದ ಬಹಿರಂಗ ವಿಚಾರಣೆಯಿಂದ ದಂಡನೆಗೊಳಪಟ್ಟಾಗ ಹೊರತು, ಸ್ವಾತಂತ್ರ್ಯ ಜೀವ, ಆಸ್ತಿಪಾಸ್ತಿಗಳ ವಿಷಯದಲ್ಲೋ ವಾಕ್ ಮತ್ತು ಬರಹಗಳ ಸ್ವಾತಂತ್ರ್ಯ ವಿಷಯದಲ್ಲೋ ಅಥವಾ ಪರಸ್ಪರ ಒಟ್ಟುಗೂಡುವ ವಿಷಯದಲ್ಲೋ ಅನ್ಯಾಯಕ್ಕೆ ಒಳಗಾಗಕೂಡದು.

(ಇ) ಗ್ರೇಟ್ ಬ್ರಿಟನ್ನಿನಲ್ಲಿ ಹೇಗೋ ಹಾಗೆ, ಲೈಸೆನ್ಸ್ ಕೊಂಡಿರುವ ಪ್ರತಿಯೊಬ್ಬ ಭಾರತೀಯನಿಗೂ ಆಯುಧಧಾರಿಯಾಗಿರುವ ಹಕ್ಕು ಇರತಕ್ಕದ್ದು. ಸಾಮಾನ್ಯ ನ್ಯಾಯಾಲಯವು ಕೊಡುವ ದಂಡನೆಯ ಮೂಲಕವಲ್ಲದೆ ಆ ಹಕ್ಕನ್ನು ಅವನಿಂದ ಕಸಿಯಕೂಡದು

(ಈ) ಪತ್ರಿಕೆಗಳು ಸ್ವತಂತ್ರವಾಗಿರತಕ್ಕದ್ದು. ಯಾವುದೇ ಮುದ್ರಣಾಲಯ. ಅಥವಾ ಪತ್ರಿಕೆಯನ್ನು ರೆಜಿಸ್ಟರ್ ಮಾಡಿಸುವಾಗ ಲೈಸೆನ್ಸನ್ನಾಗಲಿ, ಠೇವಣಿಯನ್ನಾಗಲಿ ಕೇಳಕೂಡದು.

(ಉ) ಸಾರ್ವಭೌಮರ ಯಾವನೇ ಭಾರತೀಯ ಪ್ರಜೆಗೂ, ಉಳಿದೆಲ್ಲ ಬ್ರಿಟಿಷ್ ಪ್ರಜೆಗಳಿಗೂ ಅನ್ವಯಿಸುವ ಸಂದರ್ಭಗಳ ಹೊರತು, ದೇಹ ದಂಡನೆಯ ಶಿಕ್ಷೆಯನ್ನು ವಿಧಿಸತಕ್ಕದ್ದಲ್ಲ".

ಈ ಮೂಲಭೂತ ಹಕ್ಕುಗಳನ್ನು ನಿರೂಪಿಸಿದ ಮೇಲೆ ಐದನೆಯ ಗೊತ್ತುವಳಿಯೊಂದು ಅಂಗೀಕೃತವಾಯಿತು. ಮಾಂಟೆಗೂ–ಚೆಲ್ಮ್ಸ್‌ಫರ್ಡ್ ವರದಿಯಲ್ಲಿ ಇದ್ದಂಥ ಸುಧಾರಣೆಯ ಸಲಹೆಗಳಿಗೆ ಸಂಬಂಧಿಸಿದ್ದು ಅದು: "ರೈಟ್ ಆನರಬಲ್ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಸನ್ಮಾನ್ಯ ವೈಸರಾಯ್ ಅವರು ಭಾರತದಲ್ಲಿ ಜವಾಬ್ದಾರೀ ಸರ್ಕಾರ ವ್ಯವಸ್ಥೆಯನ್ನು ಉಪಕ್ರಮಿಸಲು ಮಾಡಿರುವ ಶ್ರದ್ಧಾಪೂರ್ವಕ ಪ್ರಯತ್ನವನ್ನು ಈ ಕಾಂಗ್ರೆಸ್ ಮೆಚ್ಚಿದೆ. ಕೆಲವು ಸಲಹೆಗಳು ಸದಸ್ಯದ ಪರಿಸ್ಥಿತಿಗಿಂತ ಕೆಲವು ದಿಕ್ಕುಗಳಲ್ಲಿ ಪ್ರಗತಿಪರವಾಗಿವೆಯೆಂದು ಪರಿಗಣಿಸಿದರೂ, ಒಟ್ಟಿನಲ್ಲಿ ಈ ಸಲಹೆಗಳು ನಿರಾಶಾದಾಯಕವಾಗಿಯೂ ಅಸಮರ್ಪಕವಾಗಿಯೂ ಇವೆ ಎಂಬುದು ಈ ಕಾಂಗ್ರೆಸ್ಸಿನ ಅಭಿಪ್ರಾಯ."

ಪ್ರಾಂತಗಳಲ್ಲೂ ಕೇಂದ್ರಗಳಲ್ಲೂ ಏಕಕಾಲದಲ್ಲೇ ಪ್ರಗತಿಯಾಗಬೇಕಾದದ್ದು ಅನಿವಾರ್ಯ ಎಂಬುದು ಕಾಂಗ್ರೆಸ್ಸಿನ ಅಭಿಪ್ರಾಯವಾಗಿತ್ತು. ಪಾರ್ಲಿಮೆಂಟ್ ಸೆಕ್ರೆಟರಿ ಆಫ್ ಸ್ಟೇಟ್ ಮೂಲಕ ಇಟ್ಟುಕೊಂಡಿದ್ದ ಹತೋಟಿಯಲ್ಲಿ ತೀವ್ರ ಬದಲಾವಣೆಗಳಾಗಬೇಕು ಎಂದು ಅದು ಸೂಚಿಸಿತು. ಭಾರತೀಯ ಜನತೆಯ ಸಹಜಸಿದ್ಧ ಹಕ್ಕಾಗಿ ಆರ್ಥಿಕ ಸ್ವಾಯತ್ತತೆ ಇರಬೇಕು, ಕೇಂದ್ರ ಶಾಸಕಾಂಗದ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಲಂಡನ್ನಿನ ಇಂಡಿಯಾ ಕೌನ್ಸಿಲ್‌ಗಳು ರದ್ದಾಗಬೇಕು ಎಂದು ಅದು ಒತ್ತಾಯ

ಮಾಡಿತು. ಹೊಸ ರಾಜ್ಯಾಂಗವನ್ನು ಸಾಧ್ಯವಾದಷ್ಟು ಪ್ರಜಾಸತ್ತಾತ್ಮಕವಾಗಿ ಮಾಡಬೇಕೆಂಬುದೇ ಈ ಸಲಹೆಗಳ ಹಿಂದಿದ್ದ ಭಾವನೆ.

ಕಾಂಗ್ರೆಸ್ಸಿನ ಈ ವಿಶೇಷ ಅಧಿವೇಶನ, ಮೊದಮೊದಲು ಸುಧಾರಣೆಗಳ ವಿಷಯದಲ್ಲಿ ಒಡಕನ್ನು ತರುತ್ತದೆ ಎಂದು ತೋರುತ್ತಿದ್ದದ್ದು, ಸುಸೂತ್ರವಾಗಿ ನಡೆದುಹೋಯಿತು. ಸುಧಾರಣೆಯ ಯೋಜನೆಯನ್ನು ಕುರಿತ ನಿರ್ಣಯವನ್ನು ಪಂಡಿತ ಮಾಳವೀಯರು ಅದ್ಭುತವಾದ ಭಾಷಣ ಮಾಡಿ ಮಂಡಿಸಿದರು. ತಿಲಕರು, ಬಿಪಿನ್‌ಚಂದ್ರಪಾಲ್, ಮೋತಿಲಾಲ್ ನೆಹ್ರು ಮತ್ತು ಎಂ.ಆರ್. ಜಯಕರ್ ಅವರು ನಿರ್ಣಯದ ಪರವಾಗಿ ಅತ್ಯಂತ ಉತ್ಸಾಹದಿಂದ ಮಾತನಾಡಿದರು. ಜಯಕಾರ, ಚಪ್ಪಾಳೆಗಳ ನಡುವೆ ಶ್ರೀಮತಿ ಬೆಸೆಂಟರು ಚರ್ಚೆಯನ್ನು ಮುಕ್ತಾಯ ಮಾಡಿದರು.

ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದ ಮಂದಗಾಮಿಗಳು ನವೆಂಬರ್ ೧ರಂದು ಬೊಂಬಾಯಲ್ಲಿ ತಮ್ಮದೇ ಒಂದು ಸಮ್ಮೇಳನ ನಡೆಸಿದರು. ಸುರೇಂದ್ರನಾಥ ಬ್ಯಾನರ್ಜಿ ಅದರ ಅಧ್ಯಕ್ಷರು. ಅದನ್ನು 'ಮಂದಗಾಮಿ ಪಕ್ಷದ ಅಖಿಲ ಭಾರತೀಯ ಸಮ್ಮೇಳನ' ಎಂದು ಕರೆದರು. ಅದೇ ಭಾರತದ ನ್ಯಾಷನಲ್ ಲಿಬರಲ್ ಫೆಡರೇಷನ್ನಿಗೆ ಬೀಜವಾಯಿತು.

ಕಾಂಗ್ರೆಸ್ಸು ಎಷ್ಟು ಜನಪ್ರಿಯವಾಗಿತ್ತು ಎಂದರೆ ಮಂದಗಾಮಿಗಳು ತಮ್ಮ ಹೊಸಸಂಸ್ಥೆ ಕಾಂಗ್ರೆಸ್ ಪರಂಪರೆಯ ಮುಂದುವರಿಕೆ ಎಂದು ಘೋಷಿಸಬೇಕಾಯಿತು. ಸಿ. ವೈ. ಚಿಂತಾಮಣಿ ಹೇಳಿದರು: "ಕಾಂಗ್ರೆಸ್ಸಿನ ಹಿರಿಯ ಅಧ್ಯಕ್ಷರೊಬ್ಬರು ನಮ್ಮ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದಾರೆ, ನಿಮ್ಮ ಮುಂದಿರುವ ಠರಾವನ್ನು ಕಾಂಗ್ರೆಸ್ಸಿನ ಮಾಜೀ ಅಧ್ಯಕ್ಷರೊಬ್ಬರು ಮಂಡಿಸಿದ್ದಾರೆ, ಕಾಂಗ್ರೆಸ್ಸಿನ ಮತ್ತೊಬ್ಬ ಮಾಜೀ ಅಧ್ಯಕ್ಷರು ಅದನ್ನು ಅನುಮೋದಿಸಿದ್ದಾರೆ; ಹೀಗಿದ್ದೂ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದಿಂದ ದೂರವಿದ್ದುದಕ್ಕಾಗಿ ನಮ್ಮನ್ನು ಟೀಕಿಸುವವರನ್ನು, ಹಂಗಿಸುವವರನ್ನು, ನಾವು ಕೇಳಬೇಕಾಗಿದೆ, ಕಾಂಗ್ರೆಸ್ಸಿನ ಸಂಪ್ರದಾಯಗಳಿಗೆ, ನೀತಿಗಳಿಗೆ, ನಾವು ಪ್ರಾಮಾಣಿಕರಾಗಿಲ್ಲವೆ, ಅವುಗಳಲ್ಲಿ ನಮಗೆ ನಿಷ್ಠೆಯಿಲ್ಲವೆ ಎಂದು". ಸುರೇಂದ್ರನಾಥ ಬ್ಯಾನರ್ಜಿಯವರು ಹೀಗೆಂದರು: "ಇತ್ತೀಚಿನ ಒಡೆಯರ ಕೈಯಲ್ಲಿರುವ ಕಾಂಗ್ರೆಸ್ಸು, ಯಾವ ಭಾವನೆಗಳು ಮತ್ತು ತತ್ವಗಳ ಮುಂದೆ ರಾಷ್ಟ್ರೀಯ ಸ್ಪರ್ಧೆಗಳು ಮಾಯವಾಗುತ್ತವೆಯೋ ಅಂತಹವನ್ನು ಪ್ರತಿನಿಧಿಸುತ್ತಿಲ್ಲ".

ಮಂದಗಾಮಿಗಳ ಸಮ್ಮೇಳನವು ಸುಧಾರಣಾ ಸಲಹೆಗಳನ್ನು ಸ್ವಾಗತಿಸುವ ಒಂದು ನಿರ್ಣಯವನ್ನು ಅಂಗೀಕರಿಸಿತು. ಅವುಗಳ ಮೂಲಕ ಭಾರತ ಸರ್ಕಾರ ಮತ್ತು ಪ್ರಾಂತ ಸರ್ಕಾರಗಳೆರಡರ ಪ್ರಗತಿಯಷ್ಟೇ ಅಲ್ಲದೆ, ಪ್ರಾಂತಗಳಲ್ಲಿ 'ಜವಾಬ್ದಾರೀ ಸರ್ಕಾರ'ವನ್ನು ಕ್ರಮೇಣ ಸಾಧಿಸುವುದರಲ್ಲಿಯೂ ನಿಜವಾದ ಹಾಗೂ ದೃಢವಾದ ಹೆಜ್ಜೆಯಿಟ್ಟಂತಾಗಿದೆ ಎಂದು ನಿರ್ಣಯವು ಹೇಳಿತು. ಮಂದಗಾಮಿಗಳು ಆ ಸಲಹೆಗಳಿಗೆ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಸೂಚಿಸಿದರು. ಇಂಗ್ಲೆಂಡಿಗೆ ಹೋಗಿ 'ಮಾಂಟೆಗೂ

ಚೆಲ್ಮ್ಸ್‌ಫರ್ಡ್ ಸುಧಾರಣಾ ಯೋಜನೆಯನ್ನು ಬೆಂಬಲಿಸುವುದು ವಿವೇಕ ಹಾಗೂ ಅಗತ್ಯ" ಎಂಬ ಬಗ್ಗೆ ಬ್ರಿಟಿಷ್ ರಾಜನೀತಿಪಟುಗಳನ್ನೂ ಬ್ರಿಟಿಷ್ ಸಾರ್ವಜನಿಕರನ್ನೂ ಒತ್ತಾಯಪಡಿಸಲು ಒಂದು ನಿಯೋಗವನ್ನು ಚುನಾಯಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿದರು.

ಭಾರತ ವಿರೋಧಿ ಪ್ರಚಾರವನ್ನು ತಡೆಗಟ್ಟಲು ತಮ್ಮದೇ ಆದ ಹೋಂ ರೂಲ್ ನಿಯೋಗವನ್ನು ಇಂಗ್ಲೆಂಡಿಗೆ ಕಳುಹಿಸಬೇಕು ಎಂದು ತಿಲಕರೂ ಶ್ರೀಮತಿ ಬೆಸೆಂಟರೂ ತೀರ್ಮಾನಿಸಿದ್ದರು. ಮೂರು ವಾರಗಳಷ್ಟು ಅಲ್ಪ ಅವಧಿಯಲ್ಲಿ ತಿಲಕರು ಸುಮಾರು ಮೂವತ್ತು ಸ್ಥಳಗಳಲ್ಲಿ ಉಪನ್ಯಾಸಮಾಡಿ ನಿಯೋಗಕ್ಕಾಗಿ ಎರಡು ಲಕ್ಷ ರೂಪಾಯಿ ಸಂಗ್ರಹಿಸಿದರು. ಅವರು ಸಾವಿರ ಮೈಲಿಗಳನ್ನು ಕಾರಿನಲ್ಲೂ ಅಷ್ಟೇ ದೂರವನ್ನು ರೈಲಿನಲ್ಲೂ ಪ್ರಯಾಣಮಾಡಿದರು. ಒಬ್ಬ ಶ್ರೀಮಂತನ ಭಾರೀ ದಾನಕ್ಕಿಂತ ಬಹು ಜನರಿಂದ ಅಲ್ಪ ಕಾಣಿಕೆಗಳು ದೊರಕಿದರೆ ಲೇಸು ಎಂದವರು ಹೇಳಿದರು: "ಒಬ್ಬನಿಂದ ಒಂದು ರೂಪಾಯಿಗೆ ಬದಲು ಅರವತ್ತು ನಾಲ್ಕು ಜನರಿಂದ ಅರವತ್ತು ನಾಲ್ಕು ಪೈಸೆ* ನನಗೆ ಬೇಕು". ಯುದ್ಧ ನಡೆಯುತ್ತಿದ್ದಾಗ, ಅಪಾಯಕರವಾಗಿದ್ದ ಕಡಲಿನ ದೀರ್ಘ ಯಾನವನ್ನು ಕೈಗೊಳ್ಳಲು ಅರವತ್ತೊಂದನೆಯ ವಯಸ್ಸಿನಲ್ಲೂ ಅವರು ಹಿಂಜರಿಯಲಿಲ್ಲ. ಏಪ್ರಿಲ್ ತಿಂಗಳಲ್ಲಿ ತಿಲಕರೂ ಅವರ ಸಹೋದ್ಯೋಗಿಗಳೂ ಇಂಗ್ಲೆಂಡಿಗೆ ನಿಯೋಗ ಹೊರಡಬೇಕಾಗಿತ್ತು. ಆದರೆ ಯುದ್ಧ ಸಂಪುಟದ ನಿರ್ದೇಶಗಳ ಮೇರೆಗೆ ಅವರ ರಹದಾರಿಯನ್ನು ರದ್ದುಗೊಳಿಸಲಾಯಿತು.

ಈ ಮಧ್ಯೆ ಸರ್ ವ್ಯಾಲೆಂಟೈನ್ ಚಿರಾಲ್‌ರ ವಿರುದ್ಧ ತಿಲಕರು ಹೂಡಿದ್ದ ಮಾನನಷ್ಟ ಮೊಕದ್ದಮೆಯ ವಿಚಾರಣೆ ಬಹುಕಾಲದಿಂದ ಕಾದಿತ್ತು. ಇನ್ನದನ್ನು ಸಕಾರಣವಾಗಿ ಮುಂದೂಡುವುದು ಸಾಧ್ಯವಿಲ್ಲ ಎಂದು ಕಂಡು ಸರ್ಕಾರವು ತಿಲಕರು ಇಂಗ್ಲೆಂಡಿಗೆ ಹೋಗಲು ಅನುಮತಿ ನೀಡಿತು. ಆದರೆ ಅವರಿಗೆ ವಾಗ್ಬಂಧನ ವಿಧಿಸಲಾಯಿತು. ಇಂಗ್ಲೆಂಡಿನಲ್ಲಿರುವಾಗ ಯಾವುದೇ ಸಭೆಗಳಲ್ಲೂ ಮಾತನಾಡುವುದಿಲ್ಲ ಎಂದು ಭಾಷೆ ಕೊಡಬೇಕೆಂದು ಕೇಳಲಾಯಿತು. ತಿಲಕರು ಸೆಪ್ಟೆಂಬರ್ ತಿಂಗಳಲ್ಲಿ ಇಂಗ್ಲೆಂಡಿಗೆ ಹೊರಟರು. ಅಲ್ಲಿ ಅವರು ಮಾಡಿದ ಮೊದಲ ಕೆಲಸವೆಂದರೆ ತಾವು ಮೌನವಾಗಿರುತ್ತೇವೆಂದು ಕೊಟ್ಟಿದ್ದ ವಚನಕ್ಕೆ ರದ್ದಿಯಾತಿ ಪಡೆದುಕೊಂಡದ್ದು. ಆದರೂ ಸ್ವಲ್ಪಕಾಲ ಅವರು ಯಾವ ಸಾರ್ವಜನಿಕ ವೇದಿಕೆಯಲ್ಲೂ ಕಾಣಿಸಿಕೊಳ್ಳಲಿಲ್ಲ. ಕಾರಣ ಚಿರಾಲರ ವಿರುದ್ಧ ತಾವು ಹೂಡಿದ್ದ ಮೊಕದ್ದಮೆಗೆ ನ್ಯಾಯಾಲದಲ್ಲಿ ಏನೂ ಪ್ರತಿಕೂಲ ಆಗದಿರಲಿ ಎಂಬುದು ಇದರ ಕಾರಣ. ಅವರು ಬ್ರಿಟನ್ನಿನ 'ಇಂಡಿಯಾ ಸಮಿತಿ'ಯನ್ನೂ 'ಇಂಡಿಯಾ' ಪತ್ರಿಕೆಯ ಆಡಳಿತವನ್ನೂ ಪುನರ್ವ್ಯವಸ್ಥೆಗೊಳಿಸತೊಡಗಿದರು. ಲೇಬರ್ ನಾಯಕರ ಸ್ನೇಹ ಬೆಳೆಸಿದರು. ಲೇಬರ್ ಪಕ್ಷದ ನಿಧಿಗೆ ವಂತಿಗೆ ನೀಡಿದರು, 'ಹೆರಾಲ್ಡ್' ಎಂಬ ವಾರಪತ್ರಿಕೆಯನ್ನು ದಿನ ಪತ್ರಿಕೆಯಾಗಿ ಪರಿವರ್ತಿಸಲು ಎರಡು ಸಾವಿರ ಪೌಂಡುಗಳ ಚೆಕ್ ನೀಡಿದರು. ಬರ್ನಾರ್ಡ್ ಷಾ, ಸಿಡ್ನಿವೆಬ್‌ಮುಂತಾದ ಅನೇಕ

ಬುದ್ಧಿಜೀವಿಗಳನ್ನು ಭೇಟಿಮಾಡಿದರು. ಭಾಷಣ ಬರೆಹಗಳ ಮೂಲಕ ಬ್ರಿಟನ್ನಿನ ಸಾರ್ವಜನಿಕರಿಗೆ (ಭಾರತದ ಬಗೆಗೆ) ತಿಳಿವಳಿಕೆ ನೀಡಲು ಕೈಲಾದಷ್ಟೂ ಶ್ರಮಿಸಿದರು. ೧೯೧೮ರ ಸಾರ್ವಜನಿಕ ಚುನಾವಣೆಗಳಲ್ಲಿ ಬ್ರಿಟನ್ನಿನ ಗಮನವನ್ನು ಭಾರತದ ಸಮಸ್ಯೆ ಗಳತ್ತ ಸೆಳೆಯುವ ಚಟುವಟಿಕೆಗಳಲ್ಲಿ ತೊಡಗಿದ್ದರು. ಪ್ಯಾರಿಸ್ಸಿಗೆ ಹೋಗಲು ಅವರಿಗೆ ರಹದಾರಿಯನ್ನು ನಿರಾಕರಿಸಲಾಯಿತು. ಆದರೆ ಶಾಂತಿ ಸಮ್ಮೇಳನದ ಅಧ್ಯಕ್ಷರಿಗೆ ಅವರು ಮನವಿ ಪತ್ರ ಕಳುಹಿಸಿದರು. ಅದರಲ್ಲಿ ಮಾಂಟೆಗೂ–ಚೆಲ್ಮ್ಸ್‌ಫರ್ಡ್ ಯೋಜನೆಯ ಮಿತಿಗಳನ್ನು ವಿವರಿಸಿ ಭಾರತದ ಜನತೆಗೆ ಸ್ವಯಂ–ನಿರ್ಧಾರ ತತ್ವವನ್ನು ಅನ್ವಯಿಸಬೇಕೆಂದು ಒತ್ತಾಯಿಸಿದರು.

ಸರ್ಕಾರಕ್ಕೆ ತಿಲಕರ ವಿಷಯದಲ್ಲಿ ಭಯ, ದ್ವೇಷಗಳೆರಡೂ ಇದ್ದುವು. ತಿಲಕರ ಯಶಸ್ಸಿಗೆ ಮಸಿ ಬಳಿಯಲು ಸರ್ಕಾರ ತುಂಬ ಶ್ರಮಿಸಿತು. ಮಾಂಟೆಗೂ ಚೆಲ್ಮ್ಸ್‌ಫರ್ಡ್ ವರದಿ ಪ್ರಕಟವಾದ ಒಂದೇ ವಾರದೊಳಗೆ ಸೆಡಿಷನ್ ಸಮಿತಿ ವರದಿ ಪ್ರಕಟವಾಯಿತು. ರಾಜದ್ರೋಹದ ಪ್ರಶ್ನೆಯನ್ನು ಪರಿಶೀಲಿಸಲು ಭಾರತ ಸರ್ಕಾರವು ಈ ಒಂದು ಸಮಿತಿಯನ್ನು ನೇಮಿಸಿತ್ತು. ಜಸ್ಟಿಸ್ ಕಾಲಟ್ ಅದರ ಅಧ್ಯಕ್ಷರು. ಬಹಿರಂಗ ವಿಚಾರಣೆ ನಡೆಸದೆ ನ್ಯಾಯ ವಿಚಾರಣಾ ಸಮಿತಿಯೊಂದರ ಅಪ್ಪಣೆಯಂತೆ ಸೆರೆಹಿಡಿಯಲು ಮತ್ತು ಸ್ಥಾನ ಬದ್ಧತೆಯಲ್ಲಿಡಲು ಕೆಲವು ಸಲಹೆಗಳು ಆ ಸಮಿತಿಯ ಶಿಫಾರ್ಸಿನಲ್ಲಿದ್ದುವು. ವರದಿಯಲ್ಲಿ ತಿಲಕರಿಗೆ ತುಂಬ ಪ್ರಮುಖ ಸ್ಥಾನವನ್ನು ನೀಡಿದ್ದು ಅವರ ಚಟುವಟಿಕೆಗಳು ಕ್ರಾಂತಿಕಾರಕ ಚಟುವಟಿಕೆಗಳನ್ನು ಪೋಷಿಸಿ ಪ್ರೋತ್ಸಾಹಿಸುತ್ತವೆ ಎಂದು ಚಿತ್ರಿಸಲಾಗಿತ್ತು.

ಸರ್ಕಾರದ ನಿರೀಕ್ಷೆಗೆ ವಿರುದ್ಧವಾಗಿ ತಿಲಕರ ಜನಪ್ರಿಯತೆ ಹೆಚ್ಚಾಯಿತು.ಅವರು ಇಂಗ್ಲೆಂಡಿಗೆ ಹೋಗುವ ದಾರಿಯಲ್ಲಿದ್ದಾಗಲೇ ಬರಲಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗಿ ಆಯ್ಕೆಗೊಂಡರು. ಅವರ ಗೈರುಹಾಜರಿಯಲ್ಲಿ ಪಂಡಿತ ಮಾಳವೀಯರು ಅಧ್ಯಕ್ಷತೆಯಲ್ಲಿ ಡಿಸೆಂಬರಿನಲ್ಲಿ ಕಾಂಗ್ರೆಸ್ ಅಧಿವೇಶನ ದೆಹಲಿಯಲ್ಲಿ ನಡೆಯಿತು.

ಎಂದಿಗಿಂತಲೂ ಹೆಚ್ಚಿನ ದೃಢ ನಿಶ್ಚಯದ ಮನೋಭಾವ, ಹೊಸ ಸಂಕಲ್ಪ ಶಕ್ತಿಗಳು ದೆಹಲಿ ಅಧಿವೇಶನದಲ್ಲಿ ಕಾಣಿಸಿಕೊಂಡುವು. ಸಾಂಪ್ರದಾಯಿಕವಾದ, ಭಾವಮಯವಾದ "ನಿಷ್ಠೆಯ ಗೊತ್ತುವಳಿ"ಗಳನ್ನು ಕೈಬಿಟ್ಟದ್ದು ಕಾಂಗ್ರೆಸ್ಸಿನ ಮನೋಭಾವದಲ್ಲಿ ಆಗಿದ್ದ ಬದಲಾವಣೆಯ ಸೂಚಕವಾಗಿತ್ತು.

ಮೊದಲ ಗೊತ್ತುವಳಿಗಳಲ್ಲಿ ಒಂದು ಕಾಲಟ್ ವರದಿಯನ್ನು ಕುರಿತದ್ದು. "ಕಾಲಟ್ ವರದಿಯ ಶಿಫಾರ್ಸುಗಳನ್ನು ಜಾರಿಗೆ ಕೊಟ್ಟದ್ದೇ ಆದರೆ ಭಾರತೀಯರ ಮೂಲಭೂತ ಹಕ್ಕುಗಳಿಗೆ ಭಂಗ ಬರುತ್ತದೆ".

ಸ್ವಯಂ ನಿರ್ಧಾರವನ್ನು ಕುರಿತ ಗೊತ್ತುವಳಿಯಂತೂ ಕಾಂಗ್ರೆಸ್ಸಿನ ಇತಿಹಾಸದಲ್ಲೇ ಒಂದು ಹೊಸ ಬದಲಾವಣೆಯಾಗಿತ್ತು!

“ಅಧ್ಯಕ್ಷ ವಿಲ್ಸನ್, ಮಿ. ಲಾಯ್ಡ್ ಜಾರ್ಜ್ ಮತ್ತು ಇತರ ರಾಜನೀತಿ ಪಟುಗಳು ಭವಿಷ್ಯದ ವಿಶ್ವಶಾಂತಿಯನ್ನು ಸ್ಥಿರಗೊಳಿಸುವ ಸಲುವಾಗಿ ಸ್ವಯಂ–ನಿರ್ಧಾರದ ತತ್ವವು ಎಲ್ಲ ಪ್ರಗತಿಪರ ರಾಷ್ಟ್ರಗಳಲ್ಲೊಂದು ಅದಕ್ಕೆ ಸ್ವಯಂ ನಿರ್ಧಾರದ ತತ್ವವು ಅನ್ವಯ ವಾಗಬೇಕು ಎಂಬುದಾಗಿ ಬ್ರಿಟಿಷ್ ಪಾರ್ಲಿಮೆಂಟ್ ಮತ್ತು ಶಾಂತಿ ಸಮ್ಮೇಳನಗಳು ಮನ್ನಣೆ ನೀಡಬೇಕು ಎಂದು ಈ ಕಾಂಗ್ರೆಸ್ಸು ಒತ್ತಾಯ ಪಡಿಸುತ್ತದೆ.

“ಭರತ ಖಂಡದಲ್ಲಿ ಈ ತತ್ವವನ್ನು ಕಾರ್ಯಗತಗೊಳಿಸುವ ಮೊದಲ ಹೆಜ್ಜೆ ಯಾಗಿ ಸ್ವತಂತ್ರವಾದ ಚರ್ಚೆಗೆ ಇರುವ ಅಡ್ಡಿಯನ್ನು ತೆಗೆಯಬೇಕು. ಆದ್ದರಿಂದ ರಾಜಕೀಯ ಪ್ರಶ್ನೆಗಳನ್ನು ಸ್ವತಂತ್ರವಾಗಿ ಚರ್ಚಿಸುವುದಕ್ಕೆ ಅಡ್ಡಿಯಾಗಿರುವ ಎಲ್ಲ ಕಾನೂನುಗಳನ್ನೂ ವಿಧಿ ನಿಯಮಗಳನ್ನೂ ವಿಶೇಷ ಆಜ್ಞೆಗಳನ್ನೂ ರದ್ದುಗೊಳಿಸ ಬೇಕು. ಅಲ್ಲದೆ ಸಾಮಾನ್ಯ ಸಿವಿಲ್ ಅಥವಾ ಕ್ರಿಮಿನಲ್ ಕಟ್ಟಳೆಗೆ ಹೊರತಾಗಿ ಭಾರತದ ಯಾವನೇ ಬ್ರಿಟಿಷ್ ಪ್ರಜೆಯನ್ನು ಬಂಧಿಸುವ, ಸ್ಥಾನಬದ್ಧತೆಗೊಳಿಸುವ, ಗಡಿಯಿಂದಾಚೆ ಕಳುಹಿಸುವ, ಅಥವಾ ಸೆರೆಯಲ್ಲಿಡುವ ಅಧಿಕಾರವನ್ನು ಕಾರ್ಯಾಂಗಕ್ಕೆ ನೀಡುವ ಕಾನೂನು ಗಳೂ ವಿಧಿ ನಿಯಮಗಳೂ ವಿಶೇಷಾಜ್ಞೆಗಳೂ ರದ್ದಾಗಬೇಕು. ಇಲ್ಲಿ ರಾಜದ್ರೋಹಕ್ಕೆ ಸಂಬಂಧಿಸಿದ ಕಾನೂನನ್ನು ಇಂಗ್ಲೆಂಡಿನಲ್ಲಿರುವ ಕಾನೂನಿನಲ್ಲೇ ಸೇರಿಸಿಬಿಡಬೇಕು. ಕೊನೆಯದಾಗಿ ಭಾರತದಲ್ಲಿ ಶೀಘ್ರವಾಗಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿ ಸುವ ಶಾಸನವನ್ನು ಪಾರ್ಲಿಮೆಂಟ್ ಅಂಗೀಕರಿಸಬೇಕು. ಹೀಗೆ ಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪಿತವಾದ ಮೇಲೆ ಎಲ್ಲ ಆಂತರಿಕ ವ್ಯವಹಾರಗಳಲ್ಲೂ ಅಂತಿಮ ಅಧಿ ಕಾರವು ಭಾರತ ರಾಷ್ಟ್ರದ ಜನತೆಯ ಇಚ್ಛೆಯನ್ನು ಪ್ರತಿನಿಧಿಸುವ ಪರಮೋಚ್ಚ ಶಾಸನ ಸಭೆಗೇ ಇರತಕ್ಕದ್ದು”.

ಇದನ್ನು ಕಾರ್ಯಗತ ಮಾಡಲು ಕಾಂಗ್ರೆಸ್ಸು ಹೀಗೆ ಒತ್ತಾಯ ಪಡಿಸಿತು; “ಶಾಂತಿಯ ಅಥವಾ ಪುನರ್‌ರಚನೆಯ ಷರತ್ತುಗಳನ್ನು ಚರ್ಚಿಸಲು ಅಥವಾ ತೀರ್ಮಾನಿ ಸಲು ಸಮಾವೇಶಗೊಳಿಸುವ ಯಾವುದೇ ಸಮ್ಮೇಳನದಲ್ಲಿ ಭಾರತಕ್ಕೂ ಕೂಡ ಸ್ವಯ ಮಾಡಳಿತವುಳ್ಳ ಇತರ ಡೊಮಿನಿಯನ್ನುಗಳಷ್ಟೇ ಪ್ರಮಾಣದಲ್ಲಿ, ಚುನಾಯಿತ ಪ್ರತಿ ನಿಧಿಯ ಅಥವಾ ಪ್ರತಿನಿಧಿಗಳ ಮುಖೇನ ಪ್ರಾತಿನಿಧ್ಯ ಇರತಕ್ಕದ್ದು. ಕಾಲಾವಧಿ ಕಡಮೆ ಇರುವುದರಿಂದಲೂ, ಸಾರ್ವಭೌಮ ಸರ್ಕಾರವು ಈ ಕೋರಿಕೆಯನ್ನು ಮನ್ನಿಸುತ್ತದೆ ಎಂಬ ನಿರೀಕ್ಷೆಯಿಂದಲೂ ಈ ಕಾಂಗ್ರೆಸ್ಸು ಲೋಕಮಾನ್ಯ ಬಾಲಗಂಗಾಧರ ತಿಲಕ್, ಎಂ. ಕೆ. ಗಾಂಧೀ ಮತ್ತು ಸೈಯದ್ ಹಸನ್ ಇಮಾಮ್ ಇವರನ್ನು ತನ್ನ ಪ್ರತಿನಿಧಿ ಗಳಾಗಿ ಆಯ್ಕೆ ಮಾಡಿದೆ”.

ತಿಲಕರೂ ಗಾಂಧೀಜಿಯೂ ಕಾಂಗ್ರೆಸಿನ ದೆಹಲಿ ಅಧಿವೇಶನದಲ್ಲಿ ಹಾಜರಿಲ್ಲ ದಿದ್ದುದು ಎಲ್ಲರಿಗೂ ದೊಡ್ಡ ಕೊರತೆಯಾಯಿತು. ಸರ್ ವಾಲೆಂಟೈನ್ ಚಿರೋಲರ ವಿರುದ್ಧ ಮೊಕದ್ದಮೆ ನಡೆಸುವುದರಲ್ಲಿ ತಿಲಕರಿಗೆ ಕೈತುಂಬ ಕೆಲಸವಿತ್ತು. ಗಾಂಧೀಜಿ ಹಾಸಿಗೆ ಹಿಡಿದಿದ್ದರು.

ಗಾಂಧೀಜಿಯ ಆವಿರ್ಭಾವ

೧೯೧೯

ಯೂರೋಪಿನಲ್ಲಿ ಹೋರಾಟ ನಿಂತದ್ದು ಶಾಂತಿಗೆ ಒಯ್ಯಲಿಲ್ಲ. ಬದಲಾಗಿ, ಮಾರುಕಟ್ಟೆಗಳನ್ನು ವಶಪಡಿಸಿಕೊಂಡು ವಿಶ್ವದಲ್ಲಿ ಪ್ರಾಬಲ್ಯ ಪಡೆಯಲು ಒಂದು ಸಾಮ್ರಾಜ್ಯ ಶಾಹಿಯು ಇನ್ನೊಂದರ ವಿರುದ್ಧ ಹೋರಾಡ ತೊಡಗಲು ಕಾರಣ ವಾಯಿತು. ಸ್ವಯಂ ನಿರ್ಧಾರಣದ ಭರವಸೆಗಳೆಲ್ಲ ಬರಿಯ ಪೊಳ್ಳು ಮಾತಾಗಿದ್ದುವು. ತುಳಿತಕ್ಕೆ ಸಿಕ್ಕಿದವರಿಗೂ ಘರ್ಷಣೆ ತೀವ್ರವಾಯಿತು.

ದೂರ ದೂರ ಹರಡಿದ್ದ ವಸಾಹತುಗಳಿದ್ದುದರಿಂದ ಗ್ರೇಟ್ ಬ್ರಿಟನ್ ತನ್ನ ಇತಿಹಾಸದಲ್ಲೇ ಹಿಂದೆಂದೂ ಇಲ್ಲದ ದಂಗೆಗಳನ್ನು ಎದುರಿಸಬೇಕಾಯಿತು. ಸಿನ್‌ಫೀನ್ (Sinn Fein)ರ ನೇತೃತ್ವದಲ್ಲಿ ಐರ್ಲೆಂಡ್ ಭಾರೀ ಕಾಳಗ ಕೊಟ್ಟಿತು. ಈಜಿಪ್ಟಿನಲ್ಲಿ ಬಂಡಾಯ ಎದ್ದಿತು. ಬ್ರಿಟನ್ನಿನ ದುರಾಶೆ ಚೈನಾದ ವರೆಗೂ ತನ್ನ ತೋಳನ್ನು ಚಾಚಿದ್ದಿತಷ್ಟೆ, ಅಲ್ಲೂ ಕಷ್ಟ ಎದುರಾಯಿತು. ಇನ್ನೂ ಶೈಶವದಲ್ಲಿದ್ದ ಸೋವಿಯೆತ್ ದೇಶವನ್ನು ಅರೆದು ಹಾಕಲು ಬ್ರಿಟನ್, ಅಮೇರಿಕಾ, ಫ್ರಾನ್ಸ್ ಮತ್ತು ಜಪಾನುಗಳು ತಮ್ಮ ಸೈನ್ಯಗಳನ್ನು ಕಳುಹಿಸಿದುವು.

೧೯೧೯ ಭಾರತದ ಚರಿತ್ರೆಯಲ್ಲಿ ಅತ್ಯಂತ ಭಾಗ್ಯನಿರ್ಣಾಯಕ ವರ್ಷ. ಎಲ್ಲ ವರ್ಗದ ಜನರೂ ಕಾರ್ಯಾಚರಣೆಗೆ ಸಿದ್ಧರಾಗಿದ್ದರು. ದರಗಳ ಏರಿಕೆಯಿಂದಾಗಿ ರೈತಾಪಿ ಜನ ತೀವ್ರ ಸಂಕಟ ಪಡುತ್ತಿದ್ದರು. ಗಿರಣಿಗಳ ಕಾರ್ಮಿಕರು ತಾವು ದುಡಿಮೆ ಮಾಡ ಬೇಕಾಗಿದ್ದ ಅಸಹನೀಯ ಪದ್ಧತಿಯ ಬಗ್ಗೆ ವಿಕೋಪಗೊಂಡಿದ್ದರು. ವರ್ಷದ ಪ್ರಾರಂಭ ದಿಂದಲೇ ಹಿಂದೆಂದೂ ಕಾಣದಷ್ಟು ಮುಷ್ಕರಗಳು ಸಿಡಿದೆದ್ದುವು. ಸೋತ ಕಲೀಫನ ಬಗೆಗೆ ಬ್ರಿಟನ್ನು ನಡೆದುಕೊಂಡ ರೀತಿಯಿಂದ ಮುಸ್ಲಿಮರು ಕ್ರೋಧಾವಿಷ್ಟರಾಗಿದ್ದರು. ಕಾಂಗ್ರೆಸಿನ ತೀವ್ರಗಾಮಿ ಪಂಗಡವೂ, ಮುಂದಿನ ಭರವಸೆಗಳಿಂದ ರೋಷಗೊಂಡಿದ್ದಿತು.

ತಾನು ಜನತೆಗೆ ಅಪ್ರಿಯವಾಗಿರುವುದನ್ನು ಅರಿತ ಭಾರತ ಸರಕಾರ ಬಂಡಾಯದ ದನಿಯನ್ನು ಅಡಗಿಸಲು ಪ್ರಯತ್ನಿಸಿತು. ರಾಜದ್ರೋಹ ಚಳುವಳಿಯ ವಿರುದ್ಧ ರಚಿಸಿದ್ದ ಸಮಿತಿಯ ಶಿಫಾರಸುಗಳನ್ನು ಒಳಗೊಂಡಿದ್ದ ಹಾಗೂ ಕುಖ್ಯಾತಿ ಪಡೆದ ಕಾಲಟ್ ಮಸೂದೆಗಳು ೧೯೧೯ರ ಫೆಬ್ರುವರಿಯಲ್ಲಿ ಪ್ರಕಟವಾದುವು. ಭಾರತ ರಕ್ಷಣಾ ನಿಯಮಗಳ ಅವಧಿ ಮುಗಿದುದರಿಂದ ಹುಟ್ಟಿದ ಪರಿಸ್ಥಿತಿಯನ್ನೆದುರಿಸಲು ತಯಾರಿಸಿದ ಹಂಗಾಮಿ ಏರ್ಪಾಡು ಅವುಗಳಲ್ಲಿ ಒಂದು. ಎರಡನೆಯದು ಈ ದೇಶದ ಕ್ರಿಮಿನಲ್ ಶಾಸನ ದಲ್ಲಿಯೇ ಒಂದು ಖಾಯಂ ಬದಲಾವಣೆಯನ್ನು ಮಾಡಲು ಉದ್ದೇಶಿತವಾಗಿದ್ದದ್ದು.

ಕೇವಲ ಪ್ರಕಟಿಸುವ ಅಥವಾ ಪ್ರಸಾರಗೊಳಿಸುವ ಸಂಕಲ್ಪದಿಂದಷ್ಟೇ ರಾಜದ್ರೋಹ ಕರವಾದ ಒಂದು ದಾಖಲೆಯನ್ನು ಇಟ್ಟುಕೊಂಡಿದ್ದರೆ ಅದಕ್ಕೆ ಜೈಲು ಶಿಕ್ಷೆ ವಿಧಿಸ ಬೇಕೆಂಬುದೂ ಉದ್ದೇಶವಾಗಿತ್ತು.

ಇಂಪೀರಿಯಲ್ ಲೆಜಿಸ್ಲೇಟರ್ ಕೌನ್ಸಿಲ್‌ನಲ್ಲಿ ಈ ಎರಡು ಮಸೂದೆಗಳನ್ನೂ ಫೆಬ್ರುವರಿ ೬ರಂದು ಮಂಡಿಸಲಾಯಿತು. ಅಹಮದಾಬಾದಿನಲ್ಲಿ ಚೇತರಿಸಿಕೊಳ್ಳುತ್ತಿದ್ದಾಗ ಗಾಂಧೀಜಿ ರಾಲಟ್ ಸಮಿತಿ ವರದಿಯ ಶಿಫಾರಸುಗಳನ್ನು ಓದುವ ಅವಕಾಶ ಸಿಕ್ಕಿತು. ತಮ್ಮ ಶಂಕೆ–ಭಯಗಳನ್ನು ಮೊದಲು ಅವರು ಮೊದಲು ವಲ್ಲಭ ಭಾಯಿ ಪಟೇಲ್ ಅವರಿಗೆ ತಿಳಿಸಿದರು. "ನಾವು ಏನು ತಾನೆ ಮಾಡಬಲ್ಲೆವು?" ಎಂದು ಕೇಳಿದರು ವಲ್ಲಭ ಭಾಯಿ. ಗಾಂಧೀಜಿ ಹೇಳಿದರು. "ಪ್ರತಿಭಟನೆಯ ಶಪಥಕ್ಕೆ ಸಹಿಹಾಕಲು ಕೇವಲ ಬೆರಳಲ್ಲೆಣಿಸುವಷ್ಟು ಜನ ದೊರೆತರೂ ಅದನ್ನು ಲಕ್ಷಿಸದೆಯೇ ಸೂಚಿಸುತ್ತಿರುವ ಕಟ್ಟಳೆಯನ್ನು ಶಾಸನವಾಗಿ ಮಾಡಿದ್ದೇ ಆದರೆ ನಾವು ಒಡನೆಯೇ ಸತ್ಯಾಗ್ರಹ ಹೂಡ ತಕ್ಕದ್ದು. ನಾನು ಹೀಗೆ ಹಾಸಿಗೆ ಹಿಡಿದಿಲ್ಲದಿದ್ದರೆ, ನಾನೊಬ್ಬನೇ ಅದರೆದುರು ಹೋರಾ ಡುತ್ತಿದ್ದೆ, ಇತರರು ನನ್ನನ್ನು ಅನುಸರಿಸುವರೆಂದು ನಿರೀಕ್ಷಿಸುತ್ತಿದ್ದೆ".

ಸ್ವಲ್ಪಕಾಲದಲ್ಲೇ ಸಬರಮತಿ ಆಶ್ರಮದಲ್ಲಿ ಒಂದು ಚಿಕ್ಕಸಭೆ ನೆರೆಯಿತು. ವಲ್ಲಭಭಾಯಿ ಪಟೇಲ್, ಶ್ರೀಮತಿ ನಾಯ್ಡು, ಹಾರ್ನಿಮನ್, ಉಮರ್ ಸೋಬಾನಿ, ಶಂಕರಲಾಲ್ ಬ್ಯಾಂಕರ್ ಮತ್ತು ಇಂದುಲಾಲ್ ಯಾಜ್ಞಿಕ್‌ಇವರೆಲ್ಲ ಇದ್ದರು ಅದರಲ್ಲಿ. ಗಾಂಧೀಜಿ ಒಂದು ಸತ್ಯಾಗ್ರಹ ಪ್ರಮಾಣವಚನದ ಕರಡನ್ನು ರಚಿಸಿದರು. ಅಲ್ಲಿ ನೆರೆದಿದ್ದ ಎಲ್ಲರೂ ೧೯೧೯ರ ಫೆಬ್ರುವರಿ ೨೪ರಂದು ಅದಕ್ಕೆ ಸಹಿ ಹಾಕಿದರು. ಅದು ಹೀಗಿತ್ತು;

"೧೯೧೯ರ ಕ್ರಿಮಿನಲ್ ಶಾಸನ (ತಿದ್ದುಪಡಿ) ಮಸೂದೆ–೧ ಮತ್ತು ೧೯೧೯ರ ಕ್ರಿಮಿನಲ್ ಶಾಸನ (ತುರುತ್ತು ಪರಿಸ್ಥಿತಿ ಅಧಿಕಾರಿಗಳ) ಮಸೂದೆ–೨ ಎಂದು ಹೆಸರಾದ ಎರಡು ಮಸೂದೆಗಳೂ ಅನ್ಯಾಯಕರವಾದುವು, ಸ್ವಾತಂತ್ರ್ಯ ಹಾಗೂ ನ್ಯಾಯದ ತತ್ವಗಳಿಗೆ ವಿನಾಶಕವಾದುವು. ಸಮಗ್ರ ಜನಾಂಗದ ಹಾಗೂ ರಾಷ್ಟ್ರದ ಯೋಗಕ್ಷೇಮವೇ ಯಾವುದನ್ನು ಅವಲಂಬಿಸಿದೆಯೋ ಅಂಥ ವ್ಯಕ್ತಿಗಳ ಮೂಲಹಕ್ಕುಗಳನ್ನೂ ನಾಶ ಪಡಿಸುವಂಥವು–ಎಂದು ಬುದ್ಧಿಪುರಸ್ಸರವಾದ ಅಭಿಪ್ರಾಯ ತಾಳಿ, ನಾವು ಈ ಮಸೂದೆ ಗಳು ಶಾಸನವಾಗುವ ಪಕ್ಷಕ್ಕೆ ಮತ್ತು ಅವುಗಳನ್ನು ತೆಗೆದು ಹಾಕುವವರೆಗೂ. ಈ ಕಾನೂನು ಇನ್ನು ಮುಂದೆ ನೇಮಿಸಲಿರುವ ಒಂದು ಸಮಿತಿಯು ಸೂಕ್ತವೆಂದು ಭಾವಿಸ ಬಹುದಾದ ಇಂತಹವೇ ಇತರ ಕಾನೂನುಗಳನ್ನೂ ಪಾಲಿಸಲು ನಿರಾಕರಿಸುತ್ತೇವೆ. ದೃಢವಾಗಿ ಪ್ರಮಾಣ ಮಾಡುತ್ತೇವೆ. ಮತ್ತು ಈ ಹೋರಾಟವಲ್ಲಿ ನಾವು ನಿಷ್ಠೆ ಯಿಂದ ಸತ್ಯವನ್ನನುಸರಿಸುತ್ತೇವೆ; ಜೀವ ವ್ಯಕ್ತಿ ಅಥವಾ ಆಸ್ತಿಪಾಸ್ತಿ ಇವುಗಳ ವಿಷಯ ದಲ್ಲಿ ಹಿಂಸೆಯನ್ನು ವರ್ಜಿಸುತ್ತೇವೆ ಎಂದೂ ವಿಧಿವತ್ತಾಗಿ ಪ್ರಮಾಣ ಮಾಡುತ್ತೇವೆ".

"ಆಡಳಿತ ಸಂಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟ ರೋಗದ ಲಕ್ಷಣಗಳೇ ಇವು ಎಂಬುದರಲ್ಲಿ ಸಂದೇಹ ಇಲ್ಲ" ಎಂದು ಗಾಂಧೀಜಿ ಈ ಮಸೂದೆಗಳನ್ನು ವರ್ಣಿಸಿದರು. ಸತ್ಯಾಗ್ರಹ ಪ್ರಮಾಣ ವಚನದ ಮೇಲೆ ವ್ಯಾಖ್ಯಾನ ಮಾಡುತ್ತಾ ಅವರು ಬರೆದರು:

ಈಗ ಕೈಗೊಂಡಿರುವ ಕ್ರಮ ಬಹುಶಃ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವಪೂರ್ಣವಾದ ಹೆಜ್ಜೆ. ಅವಸರ ಪಟ್ಟು ಈ ಹೆಜ್ಜೆ ಇಟ್ಟಿಲ್ಲ ಎಂದು ನಾನು ಭರವಸೆ ಕೊಡುತ್ತೇನೆ. ಸ್ವತಃ ನಾನೇ ಅದನ್ನು ಕುರಿತು ಆಲೋಚನೆ ಮಾಡುತ್ತಾ ಎಷ್ಟೋ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದ್ದೇನೆ. ಸರಕಾರದ ನಿಲುವನ್ನು ಅರ್ಥ ಮಾಡಿಕೊಳ್ಳಲು ಶ್ರಮಿಸಿದ್ದೇನೆ. ಆದರೆ ಈ ಅಸಾಧಾರಣ ಮಸೂದೆಗಳಿಗೆ ಯಾವ ಸಮರ್ಥನೆಯನ್ನೂ ಕಾಣಲು ನಾನು ಅಸಮರ್ಥನಾಗಿದ್ದೇನೆ. ರೌಲಟ ಸಮಿತಿಯ ವರದಿಯನ್ನು ನಾನು ಓದಿದ್ದೇನೆ. ಅದರ ನಿರೂಪಣೆಯನ್ನು ಮೆಚ್ಚಿಕೆಯಿಂದ ಆಮೂಲಾಗ್ರವಾಗಿ ನೋಡಿದ್ದೇನೆ. ಅದನ್ನು ಓದಿದ್ದು ಸಮಿತಿಯ ವರದಿಗೆ ತೀರ ವಿರುದ್ಧವಾದ ತೀರ್ಮಾನಗಳಿಗೆ ನನ್ನನ್ನು ದೂಡಿದೆ. ವರದಿಯಿಂದ ನಾನು ಹೀಗೆ ತೀರ್ಮಾನಿಸಬೇಕಾಗಿದೆ: ಗುಪ್ತ ಹಿಂಸಾಕೃತ್ಯಗಳು ಭಾರತದ ಸಣ್ಣಪುಟ್ಟ ಭಾಗಗಳಲ್ಲಿ ತೀರ ಪೃಥಕ್ಕಾದ ಭಾಗಗಳಿಗೆ ಪರಿಮಿತವಾಗಿವೆ. ಹಾಗೂ ಸೂಕ್ಷ್ಮಾತಿಸೂಕ್ಷ್ಮವಾದಷ್ಟು ಸಣ್ಣ ಗುಂಪುಗಳಿಗೆ ಸೀಮಿತವಾಗಿದೆ. ಅಂತಾಗ ಜನರುವುದು ಸಮಾಜಕ್ಕೆ ಅಪಾಯ ನಿಜ. ಆದರೆ ಇಡೀ ಭಾರತಕ್ಕೆ ಮತ್ತು ಅದರ ಜನತೆಗೆ ಸೆಕೆ ತಗುಲಬೇಕೆಂದೇ ಯೋಚಿಸಲಾಗಿರುವ ಈ ಮಸೂದೆಗಳನ್ನು ಅಂಗೀಕರಿಸುವುದರಿಂದಲೂ ಎದುರಿಸಬೇಕಾದ ಪರಿಸ್ಥಿತಿಗಿಂತ ಆಳವೇ ಇಲ್ಲದಷ್ಟು ಮೀರಿದ ಅಧಿಕಾರಗಳನ್ನು ಸರಕಾರದ ಕೈಯನ್ನು ಬಲಪಡಿಸುವುದು ಇನ್ನೂ ಹೆಚ್ಚಿನ ಅಪಾಯ. ಭಾರತದ ಕೋಟ್ಯಂತರ ಜನ ಸ್ವಭಾವತಃ ಇಡೀ ಜಗತ್ತಿನಲ್ಲೇ ಅತ್ಯಂತ ಮೃದು ಸ್ವಭಾವದವರು ಎಂಬ ಐತಿಹಾಸಿಕ ಸತ್ಯವನ್ನು ಸಮಿತಿಯು ಸಂಪೂರ್ಣವಾಗಿ ಉಪೇಕ್ಷಿಸಿದೆ.

"ಮಸೂದೆಗಳ ಚೌಕಟ್ಟನ್ನು ನೋಡಿ. ಅವುಗಳ ಪೀಠಿಕೆಯೊಡನೆ ಸಿವಿಲ್ ಸರ್ವಿಸ್ ಮತ್ತು ಬ್ರಿಟಿಷ್ ವಾಣಿಜ್ಯ ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ವೈಸ್‌ರಾಯ್ ನೀಡಿರುವ ಕೆಲವು ಭರವಸೆಗಳನ್ನೂ ಸೇರಿಸಲಾಗಿದೆ. ವೈಸರಾಯರ ಹೇಳಿಕೆಯ ಬಗೆಗೆ ನಮ್ಮಲ್ಲಿ ಅನೇಕರಿಗೆ ಅತ್ಯಂತ ಶಂಕೆ ಕಳವಳಗಳುಂಟಾಗಿವೆ. ಅದರ ಪೂರ್ಣ ವ್ಯಾಪ್ತಿ ಹಾಗೂ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ ಎಂದು ನಾನು ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳುತ್ತೇನೆ. ಸಿವಿಲ್ ಸರ್ವಿಸ್ ಮತ್ತು ಬ್ರಿಟಿಷ್ ವಾಣಿಜ್ಯ ಹಿತಾಸಕ್ತಿಗಳು ಭಾರತದ ಹಾಗೂ ಇಲ್ಲಿನ ರಾಜಕೀಯ ಮತ್ತು ವಾಣಿಜ್ಯ ಅಗತ್ಯಗಳಿಗಿಂತ ಶ್ರೇಷ್ಠವೆಂದು ಅದರ ಅರ್ಥವಾಗಿದ್ದರೆ ಈ ಸಿದ್ಧಾಂತವನ್ನು ಯಾವ ಭಾರತೀಯನೂ ಒಪ್ಪಿಕೊಳ್ಳಲಾರ. ಸಾಮ್ರಾಜ್ಯದೊಳಗೇ ಭ್ರಾತೃಘಾತಕ ಹೋರಾಟದಲ್ಲೇ ಅದು ಮುಗಿಯಬಲ್ಲದು".

"ಸುಧಾರಣೆಗಳು ಬರಬಹುದು, ಬಾರದಿರಬಹುದು. ಈ ಕ್ಷಣದ ನಮ್ಮ ಅಗತ್ಯ ಈ ಮಹತ್ವದ ಪ್ರಶ್ನೆಯನ್ನು ಸರಿಯಾಗಿ, ನ್ಯಾಯವಾಗಿ ಅರ್ಥಮಾಡಿಕೊಳ್ಳುವುದು.

ಇವನ್ನು ಸುಮ್ಮನೆ ತೇಪೆ ಹಾಕುವುದರಿಂದ ನಿಜವಾದ ತೃಪ್ತಿ ಉಂಟಾಗುವುದಿಲ್ಲ. ಈ ಸಿವಿಲ್ ಸರ್ವಿಸ್ಸಿನ ಮಹಾ ಕಾರ್ಪೊರೇಷನ್ ಭಾರತದಲ್ಲಿ ಉಳಿಯಬೇಕಾದರೆ, ಅದರ ಧರ್ಮದರ್ಶಿಯಾಗಿ, ಸೇವಕನಾಗಿ ಅದೂ ಹೆಸರಿನಲ್ಲಿ ಮಾತ್ರವಲ್ಲ, ಕೃತಿಯಲ್ಲೂ ಹಾಗೆಯೇ ಆಗಿ, ಇರಬೇಕು ಎಂಬುದನ್ನರಿಯಲಿ. ಬ್ರಿಟಿಷ್ ವಾಣಿಜ್ಯ ಸಂಸ್ಥೆಗಳೂ ಕೂಡ ಭಾರತದಲ್ಲಿ ಉಳಿದಿರಬೇಕಾದರೆ ಇಲ್ಲಿನ ಅಗತ್ಯಗಳಿಗೆ ಪೂರಕವಾಗಿಯೇ ಹೊರತು ದೇಶೀಯ ಕಸಬು, ಉದ್ಯೋಗ ತಯಾರಿಕೆಗಳನ್ನೂ ನಾಶಮಾಡಿ ಅಲ್ಲ ಎಂಬುದನ್ನು ಅರಿಯಲಿ. ಅಂದರೆ, ರೌಲಟ್ ಮಸೂದೆಗಳ ಸ್ಥಾನದಲ್ಲಿ ನಿಮಗೆ ಎರಡು ಕಾರ್ಯ ಕ್ರಮಗಳು ದೊರೆತಂತಾಯಿತು.

"ಅವು ರಾಷ್ಟ್ರದ ವಿರುದ್ಧ ಯಾವುದೇ ಒಳಸಂಚನ್ನಾಗಲಿ ಯಶಸ್ವಿಯಾಗಿ ಎದುರಿಸಬಲ್ಲುವೆಂದು ನಾನು ಭರವಸೆ ಕೊಡುತ್ತೇನೆ. ಸರ್ ಜಾರ್ಜ್ ಲಾಂಡಿಸ್ ಜನಾಭಿಪ್ರಾಯವನ್ನು ಧಿಕ್ಕರಿಸಿ ಬೆಂಕಿಗೆ ತುಪ್ಪ ಸುರಿದರು ಅಷ್ಟೆ. ಆತ ತಾನು ಓದಿದ್ದ ಭಾರತದ ಚರಿತ್ರೆಯನ್ನು ಮರೆತಿದ್ದಾರೆ, ಇಲ್ಲದಿದ್ದರೆ ತಾನು ಯಾವ ಸರಕಾರದ ಪ್ರತಿನಿಧಿಯೋ ಅದು ಇದಕ್ಕಿಂತ ಹಿಂದೆ ಸಾರ್ವಜನಿಕ ಅಭಿಪ್ರಾಯಕ್ಕೆ ಬಗ್ಗಿ ತನ್ನ ಪರ್ಯಾಲೋಚಿತ ಅಭಿಪ್ರಾಯವನ್ನು ಬಿಟ್ಟುಕೊಡಬೇಕಾಯಿತು ಎಂಬುದು ಅವರಿಗೆ ತಿಳಿದಿರುತ್ತಿತ್ತು".

"ಈ ಮಸೂದೆಗಳನ್ನೂ ಆಡಳಿತ ಸಂಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿರುವ ರೋಗದ ಚಿಹ್ನೆ ಎಂದು ನಾನು ಏಕೆ ಭಾವಿಸುತ್ತೇನೆಂಬುದನ್ನು ಈಗ ಸುಲಭವಾಗಿ ಕಾಣಬಹುದು. ಆದ್ದರಿಂದ ಇದಕ್ಕೆ ತೀವ್ರವಾದ ಚಿಕಿತ್ಸೆಯನ್ನೇ ಮಾಡುವುದು ಅಗತ್ಯ ವಾಗಿದೆ. ಈ ಮಸೂದೆಗಳ ಹಿಂದಿರುವ ಮನೋಭಾವ ಮತ್ತು ಅವುಗಳನ್ನು ಉಪಕ್ರಮಿ ಸುತ್ತಿರುವ ಪರಿಸ್ಥಿತಿ ಇವುಗಳಿಂದ ತಾಳ್ಮೆಗೆಟ್ಟ, ದುಡುಕು ಸ್ವಭಾವದ, ಬಿಸಿನೆತ್ತರಿನ ತರುಣರು ಪ್ರಯೋಗಿಸುವ ಪರಿಹಾರೋಪಾಯವೆಂದರೆ ಗುಪ್ತಹಿಂಸೆ. ಈ ಮಸೂದೆ ಗಳು ರಾಷ್ಟ್ರ ವಿರುದ್ಧ ದ್ವೇಷ ದುರ್ಭಾವಗಳನ್ನು ಉಲ್ಬಣಗೊಳಿಸಿಯೇ ತೀರುತ್ತವೆ. ಈಗಿನ ಹಿಂಸಾಕೃತ್ಯಗಳೇ ಇದಕ್ಕೆ ಸಾಕ್ಷಿ, ಇದು ನಿಸ್ಸಂಶಯ. ಪ್ರತಿಜ್ಞಾ ಬದ್ಧರಾಗಿರುವ ಭಾರತೀಯರು, ಎಲ್ಲ ಬಗೆಯ ಯಾತನೆಯನ್ನೂ ಸಹಿಸುವ ಸಂಕಲ್ಪದಿಂದಲೇ ಸರಕಾರಕ್ಕೆ ತಳ್ಳಿ ಹಾಕಲಾಗದಂಥ ಮನವಿಯನ್ನು ಮಾಡಿಕೊಳ್ಳುತ್ತಿದ್ದಾರೆ. ಸರಕಾರದ ವಿರುದ್ಧ ವಾಗಿ ಅವರಿಗೆ ಯಾವ ದುರ್ಭಾವನೆಯೂ ಇಲ್ಲ. ಹಿಂಸೆಯೇ ಫಲಕಾರಿಯೆಂದು ನಂಬುವವರಿಗೆ, ಅನ್ಯಾಯಗಳಿಗೆ ಪರಿಹಾರ ಪಡೆಯಲು, ಸೋಲನ್ನೇ ಅರಿಯದ ಒಂದು ಪರಿಹಾರೋಪಾಯವನ್ನು ಒದಗಿಸಿಕೊಡುತ್ತಾರೆ. ಇದೆಂತಹ ಪರಿಹಾರೋ ಪಾಯವೆಂದರೆ, ಇದು ಪ್ರಯೋಗಿಸುವವರನ್ನೂ ಧನ್ಯರನ್ನಾಗಿಸುತ್ತದೆ. ಯಾರ ವಿರುದ್ಧ ಅದನ್ನು ಪ್ರಯೋಗಿಸಲಾಗುವುದೋ ಅವರನ್ನೂ ಧನ್ಯರನ್ನಾಗಿಸುತ್ತದೆ. ಈ ಪರಿಹಾರವನ್ನು ಬಳಸುವ ರೀತಿಯನ್ನು ಪ್ರತಿಜ್ಞಾಬದ್ಧರೆಲ್ಲ ಅರಿತುಬಿಟ್ಟರೆ, ಅವರಿಂದ ಯಾವ ಕೆಡಕೂ ಆಗುವ ಭಯ ನನಗಿಲ್ಲ. ಅವರ ಸಾಮರ್ಥ್ಯವನ್ನು ಶಂಕಿಸಲು ನನಗೇನೂ

ಅಧಿಕಾರವಿಲ್ಲ. ರೋಗವು ಪ್ರಬಲ ಚಿಕಿತ್ಸೆಯನ್ನೇ ಮಾಡುವಷ್ಟು ದೊಡ್ಡದೆ, ಮಿಕ್ಕ ಎಲ್ಲ ಮಿದುವಾದ ಪರಿಹಾರಗಳನ್ನೂ ಪ್ರಯತ್ನಿಸಲಾಗಿದೆಯೆ, ಎಂಬುದನ್ನು ಅವರೇ ಕಂಡು ಹಿಡಿದುಕೊಳ್ಳಬೇಕು. ರೋಗವು ಸಾಕಷ್ಟು ಉಗ್ರವಾದುದೆಂದೂ ಇನ್ನೂ ಮಿದುವಾದ ಉಪಾಯಗಳೆಲ್ಲ ತೀರ ವಿಫಲಗೊಂಡಿವೆಯೆಂದೂ ಅವರು ಮನದಟ್ಟು ಮಾಡಿಕೊಂಡು ಬಿಟ್ಟಿದ್ದಾರೆ. ಉಳಿದದ್ದೆಲ್ಲ ದೈವ ಸಂಕಲ್ಪಕ್ಕೇ ಬಿಟ್ಟದ್ದು".

ಹೊಸ ಚಳುವಳಿಯನ್ನು ಪ್ರಾರಂಭಿಸಲು ಗಾಂಧೀಜಿ ಬೊಂಬಾಯಿಯಲ್ಲಿ ಒಂದು ಸತ್ಯಾಗ್ರಹ ಸಭೆಯನ್ನು ಸ್ಥಾಪಿಸಿದರು. ಶ್ರೀಮತಿ ನಾಯಿಡು, ಹಾರ್ನಿಮನ್, ಜಮ್ನಾದಾಸ್, ದ್ವಾರಕಾದಾಸ್, ಎಲ್. ಆರ್. ಟೈರ್ನಿ, ಶಂಕರಲಾಲ್ ಬ್ಯಾಂಕರ್, ವಲ್ಲಭ ಭಾಯಿ ಪಟೇಲ್ ಮತ್ತು ಇತರ ಇನ್ನೂ ಅನೇಕರನ್ನು ಒಳಗೊಂಡಿತ್ತು ಆ ಸಭೆ. ಪ್ರತಿಜ್ಞೆಗೆ ಸಹಿ ಹಾಕುವವರನ್ನು ಕೂಡಿಸುವ ತೀವ್ರಗತಿಯಿಂದ ನಡೆಯಿತು. ಹದಿನೈದೇ ದಿನಗಳೊಳಗೆ ೧,೨೦೦ರಷ್ಟು ಜನ ದಾಖಲಾದರು. ಎಲ್ಲೆಲ್ಲೂ ಉತ್ಸಾಹಪೂರ್ಣ ಸಭೆಗಳು ನಡೆದುವು. ಭಾರೀ ಸಂಖ್ಯೆಯಲ್ಲಿ ಜನ ಸಹಿ ಹಾಕಿದರು ಸಕ್ರಿಯವಾಗಿ ಪ್ರಕಟಣೆಗಳನ್ನು ಹೊರಡಿಸಲಾಯಿತು.

'ಸತ್ಯಾಗ್ರಹ ಸಭೆ'ಯು ಮಾರ್ಚಿ ತಿಂಗಳಲ್ಲಿ ಈ ಹೇಳಿಕೆಯನ್ನು ಹೊರಡಿಸಿತು: "ಸತ್ಯಾಗ್ರಹ ಪ್ರತಿಜ್ಞೆಯಲ್ಲಿ ಉದ್ದೇಶಿತವಾದ ಸಮಿತಿಯು ಹೀಗೆ ಸಲಹೆ ನೀಡಿದೆ: ನಿಷೇಧಿತ ಸಾಹಿತ್ಯ ಮತ್ತು ವೃತ್ತಪತ್ರಿಕೆಗಳ ರಿಜಿಸ್ಟ್ರೇಷನ್ನಿಗೆ ಸಂಬಂಧಿಸಿದ ಕಾನೂನುಗಳನ್ನು ಮಾತ್ರ ಸದ್ಯಕ್ಕೆ ನಾಗರಿಕ ರೀತಿಯಿಂದ ಉಲ್ಲಂಘಿಸತಕ್ಕದ್ದು".

"ನಿಷೇಧಿತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಮಿತಿಯು ಈ ಕೆಳಕಂಡ ನಿಷೇಧಿತ ಗ್ರಂಥಗಳನ್ನು ಪ್ರಸಾರ ಮಾಡಲು ಆಯ್ಕೆ ಮಾಡಿದೆ. ಎಂ. ಕೆ. ಗಾಂಧಿಯವರ (Hind Swaraj) Unto this last ಕೃತಿಯ ಭಾವಾನುವಾದ. ಎಂ. ಕೆ. ಗಾಂಧಿಯವರ Sarvadaya or Universal Dawn ; ಪ್ಲೇಟೋವಿನ Defence and Death of Socrates ಕೃತಿಯ ಭಾವಾನುವಾದ); ಎಂ. ಕೆ. ಗಾಂಧಿಯವರ The life and address of Mustafa Kemal Pasha (The International printing press phoenix, ನಲ್ಲಿ ಅಚ್ಚಾದದ್ದು).

ಈ ಪುಸ್ತಕಗಳ ಆಯ್ಕೆಯು ಮುಂದೆ ಸೂಚಿಸುವ ವಿಚಾರಗಳಿಂದ ಪ್ರೇರಿತವಾಗಿದೆ: (೧) ಆಳುವವರಿಗೂ ಆಳಲ್ಪಡುವವರಿಗೂ ಕ್ಷೋಭೆ ಹೆಚ್ಚು ಕಡಮೆ ಇಲ್ಲದಂತೆ ಮಾಡುವುದು. (೨) ಸತ್ಯಾಗ್ರಹಿಗಳು ಸೂಕ್ಷ್ಮವಾಗಿ ವ್ಯವಸ್ಥೆಗೊಂಡ ಚಳುವಳಿಯನ್ನು ನಿರ್ವಹಿಸಲು ಸಮರ್ಥರಾಗುವಷ್ಟು ಹದಗೊಂಡು ಶಿಸ್ತಿನ ಸಿಪಾಯಿಗಳಾಗುವವರೆಗೂ ವ್ಯಕ್ತಿಶಃ ಉಲ್ಲಂಘಿಸಬಲ್ಲ ಕಾನೂನುಗಳನ್ನು ಮಾತ್ರ ಆರಿಸಿಕೊಳ್ಳುವುದು. (೩) ಮೊದಲ ಹೆಜ್ಜೆಯಾಗಿ ಜನಸಾಮಾನ್ಯರು ಅಸಮ್ಮತಿಯನ್ನು ಕೆರಳಿಸಿರುವ ಮತ್ತು ಸತ್ಯಾಗ್ರಹದ ದೃಷ್ಟಿಯಿಂದ ಎದುರಿಸಲು ಅತ್ಯಂತ ನಿರಾತಂಕವಾಗಿರುವ ಕಾನೂನುಗಳನ್ನು ಮಾತ್ರ ಆರಿಸಿಕೊಳ್ಳುವುದು. (೪) ಯಾವ ನಿಯಮಗಳನ್ನು ನಾಗರಿಕತೆಯಿಂದ ಮುರಿಯು

ವುದು ಜನರಿಗೆ ಒಂದು ಶಿಕ್ಷಣವಾಗುತ್ತದೆಯೋ, ಸಾರ್ವಜನಿಕ ಕಾರ್ಯ ಮಾಡ ಬಯಸುವ ಪ್ರಾಮಾಣಿಕರಿಗೆ ತಮ್ಮ ಹಾದಿಯಲ್ಲಿ ಅಡ್ಡಬರುವ ಕಷ್ಟನಿಷ್ಠುರಗಳಿಂದ ಪಾರಾಗಲು ಸ್ಪಷ್ಟವಾದ ದಾರಿಯನ್ನು ತೋರಿಸುತ್ತದೆಯೋ ಅಂಥ ಕಾನೂನುಗಳನ್ನೇ ಆರಿಸುವುದು. (೫) ನಿಷೇಧಿತ ಸಾಹಿತ್ಯವನ್ನು ಕುರಿತಂತೆ ಸತ್ಯಾಗ್ರಹ ತತ್ವಕ್ಕೆ ಅಸಂಗತ ವಲ್ಲದ, ಆದ್ದರಿಂದಲೇ ನಿರ್ದಿಷ್ಟ ಸ್ವರೂಪದ ಮತ್ತು ನೇರವಾಗಿಯಾಗಲಿ ಪರೋಕ್ಷ ವಾಗಿಯಾಗಲಿ ಹಿಂಸೆಯನ್ನು ಅನುಮೋದಿಸದ ಇಲ್ಲವೆ ಪ್ರೋತ್ಸಾಹಿಸದ, ಪುಸ್ತಕಗಳನ್ನೂ ಕರಪತ್ರಗಳನ್ನೂ ಆರಿಸುವುದು".

ಗಾಂಧೀಜಿ ಸಾರ್ವಜನಿಕ ಜೀವನದಲ್ಲಿ ಈಗ ಪ್ರಮುಖಸ್ಥಾನದಲ್ಲಿದ್ದರು. ಮುಂಬ ರಲಿದ್ದ ಸುಧಾರಣೆಗಳ ವಿಷಯವು ಹಿನ್ನೆಲೆಗೆ ಬಿದ್ದು ಹೋಗಿ ಈಗ ರೌಲತ್ ಮಸೂದೆ ಗಳೇ ಟೀಕೆಗೆ ಗುರಿಯಾದುವು.

ಒಂದು ಕಡೆ ರೌಲಟ್ ಸಮಿತಿಯ ವಿರುದ್ಧದ ಚಳುವಳಿಯ ಪ್ರಮಾಣದಲ್ಲೂ ತೀವ್ರತೆಯಲ್ಲೂ ಬೆಳೆಯುತ್ತಾ ಹೋದಂತೆ ಇನ್ನೊಂದು ಕಡೆ ಆ ವರದಿಯ ಶಿಫಾರ್ಸು ಗಳನ್ನು ಜಾರಿಗೆ ತರಲು ಸರ್ಕಾರವು ಹೆಚ್ಚು ಹೆಚ್ಚು ದೃಢ ನಿರ್ಧಾರವನ್ನು ಕೈಗೊಂಡಿತು. ಎಲ್ಲ ಚುನಾಯಿತರ ಭಾರತೀಯರ ಸದಸ್ಯರ ಸಂಘಟಿತ ವಿರೋಧ ಇದ್ದರೂ ಕ್ರಿಮಿನಲ್ ಕಾನೂನು (ಎಮರ್ಜನ್ಸಿ ಪವರ್ಸ್) ಮಸೂದೆಯು ಮಾರ್ಚಿ ತಿಂಗಳಲ್ಲಿ ಅಂಗೀಕೃತ ವಾಯಿತು. ಕೌನ್ಸಿಲ್‌ನಲ್ಲಿ ವಲ್ಲಭಭಾಯಿ ಪಟೇಲರು ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸಿ ಮಾತನಾಡುತ್ತಾ ಜಿನ್ನಾರವರು ಆ ಕ್ರಿಮಿನಲ್ ಕಾನೂನು ಮಸೂದೆಯ ದಮನ ಸ್ವರೂಪವನ್ನೂ ಅದು ಒಳಗೊಂಡಿದ್ದ ದುಷ್ಟ ಯೋಜನೆಗಳನ್ನೂ ಪ್ರಬಲ ವಾಗಿ ಖಂಡಿಸಿದರು. ಅವರು ಹೇಳಿದರು. "ಈ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಅಧಿಕಾರಾವಧಿ ಮುಗಿದ ಬಳಿಕ ಆರು ತಿಂಗಳ ವರೆಗೂ ಈ ಮಸೂದೆಗಳ ಪರಿಶೀಲನೆಯನ್ನು ಮುಂದಕ್ಕೆ ಹಾಕಬೇಕು". ಆವೇಶಪೂರ್ಣವಾದ ಒಂದು ಭಾಷಣದಲ್ಲಿ ಶ್ರೀನಿವಾಸಶಾಸ್ತ್ರಿಯವರು ಹೀಗೆ ಟೀಕಿಸಿದರು; "ಒಮ್ಮೆ ಅಂಗೀಕೃತವಾಗಿ ಬಿಟ್ಟರೆ, ಒಂದು ಕೆಟ್ಟ ಕಾನೂನನ್ನು ಕೆಟ್ಟವರ ವಿರುದ್ಧವೇ (ಯಾವಾಗಲೂ) ಬಳಸುತ್ತಾರೆ ಎಂದೇನಿಲ್ಲ. ದುರದೃಷ್ಟದಿಂದ ಎಲ್ಲ ವಿದೇಶಿ ಸರ್ಕಾರಗಳೂ ಗಾಬರಿಗೊಳ್ಳುವಂಥ ಪರಿಸ್ಥಿತಿಗಳಿಗೆ ಸದಾ ಒಳಪಟ್ಟೇ ಇರುತ್ತವೆ. ಅಂಥ ಸಮಯಗಳಲ್ಲಿ ಅವುಗಳ ತಲೆ ಕೆಟ್ಟು ಹೋಗುವುದನ್ನು ನಾನು ಕಂಡಿದ್ದೇನೆ. ಇಂಥ ಉಗ್ರ ಸ್ವರೂಪದ ಅಧಿಕಾರಿಗಳು ಕಾರ್ಯಾಂಗದ ಕೈಯಲ್ಲಿದ್ದರೆ. ದುಷ್ಟರಿಗೆ ಮಾತ್ರ ದಂಡನೆಯಾಗುವುದಿಲ್ಲ. ಆಗ ಎದೆ ಎಷ್ಟು ಕುಗ್ಗಿಹೋಗುತ್ತದೆ ಎಂದರೆ ಜವಾಬ್ದಾರಿ ಸರ್ಕಾರ ಎಂಬ ಮಾತೇ ಬರಿಯ ಅಣಕವಾಗುತ್ತದೆ. ಕೌನ್ಸಿಲ್ಲು ಗಳನ್ನೇನೋ ನೀವು ಬಡಾಯಿಸಬಹುದು. ಆದರೆ ಅವುಗಳನ್ನು ತುಂಬುವವರೆಲ್ಲ ಹೊಗಳು ಭಟ್ಟರು, ಅಂಜುಬುರುಕರು; ಹೀಗಾಗಿ ಪ್ರಜಾಸತ್ತಾತ್ಮಕ ಸರ್ಕಾರದ ಸೋಗಿ ನಲ್ಲಿ ಆಡಳಿತ ವರ್ಗವು ಯಾವ ಲಂಗು ಲಗಾಮು ಇಲ್ಲದೆ ದರ್ಬಾರು ನಡೆಸುತ್ತದೆ.... ಆಂದೋಳನ ಇದೆ ಈಗ. ಈ ಕಾರ್ಯದಲ್ಲಿ ಇದುವರೆಗೂ ನಾವು ಪಾಲುಗೊಂಡಿಲ್ಲ

ಎಂದು ಆಡಳಿತ ವರ್ಗದ ನನ್ನ ಸಹೋದ್ಯೋಗಿಗಳಿಗೆ ಭರವಸೆ ಕೊಡಬಯಸುತ್ತೇನೆ. ಆದರೆ ನಮ್ಮ ಮನವಿಗಳೆಲ್ಲ ನಿರರ್ಥಕವಾದರೆ ಮತ್ತು ಈ ಮಸೂದೆಯು ಕಾನೂನಾಗಿ ಬಿಟ್ಟರೆ ಈ ಆಂದೋಳನಕ್ಕೆ ಸೇರದೆ ಕರ್ತವ್ಯ ಭ್ರಷ್ಟರಾಗುವಂತಹವರು ಯಾರೊಬ್ಬರೂ ಇಲ್ಲಿದ್ದಾರೆಂದು ನಾನು ನಂಬಿಲ್ಲ". ಆದರೆ ಶಾಸ್ತ್ರಿಯವರ ಕಳಕಳಿಯಾಗಲಿ, ಬ್ಯಾನರ್ಜಿಯವರ ವಾಗ್ಮಿತೆಯಾಗಲಿ, ಜಿನ್ನಾರವರ ಕಠೋರ ತರ್ಕವಾಗಲಿ ಏನೇನೂ ಪ್ರಯೋಜನಕ್ಕೆ ಬರಲಿಲ್ಲ.

ಈ ಮಸೂದೆಯ ಮೇಲೆ ಚರ್ಚೆ ನಡೆಯುತ್ತಿದ್ದಾಗ ಗಾಂಧೀಜಿಯವರು ಮೊಟ್ಟಮೊದಲ ಮತ್ತು ಕಟ್ಟಕಡೆಯ ಬಾರಿಗೆ ಭಾರತದ ಕೇಂದ್ರ ಶಾಸಕಾಂಗದ ಕಾರ್ಯಕಲಾಪಗಳಲ್ಲಿ ಹಾಜರಾಗಿದ್ದರು. ಪ್ರೇಕ್ಷಕರ ವೇದಿಕೆಯಲ್ಲಿ ಕುಳಿತು ಅವರು ಶಾಸ್ತ್ರಿಯವರ ವಾಗ್ವೈಖರಿಯನ್ನು ಲಾರ್ಡ್ ಚೆಲ್ಮ್ಸ್‌ಫರ್ಡ್ ಆಲಿಸುವುದನ್ನು ನೋಡಿದರು. ಈ ಅನಿಷ್ಟಕಾರೀ ಮಸೂದೆಗಳನ್ನು ಅಂಗೀಕರಿಸಲು ಶಾಸಕಾಂಗವನ್ನು ಬಲವಂತಪಡಿಸದಂತೆ ಆತನ ಮನವೊಲಿಸಲು ಅವರು ವೈಸರಾಯ್ ಅವರಿಗೆ ಪತ್ರಗಳನ್ನು ಬರೆದಿದ್ದರು. ಇಡೀ ಜನಾಂಗದ ಆತ್ಮಗೌರವಕ್ಕೆ ಧಕ್ಕೆ ತರುವಂತಹ ಕ್ರಮಗಳನ್ನು ಕೈಗೊಳ್ಳದಂತೆ ಸರ್ಕಾರದ ಮೇಲೆ ಪ್ರಭಾವ ಬೀರಲು ಅನೇಕ ನಾಯಕರು ದೆಹಲಿಯಲ್ಲಿ ಹಾಜರಿದ್ದರು. ಆದರೆ ಅದು ನಿಷ್ಫಲವಾಯಿತು.

ಬಿಲ್ ನಂ. ೨. ಶಾಸನವಾಗಿ ಇನ್ನೂ ಗೆಜೆಟ್‌ನಲ್ಲಿ ಪ್ರಕಟಿತವಾಗಿರಲಿಲ್ಲ. ಗಾಂಧೀಜಿ ನಿಶ್ಶಕ್ತರಾಗಿದ್ದರು. ಆದರೂ ಮಾರ್ಚಿ ತಿಂಗಳಲ್ಲಿ ಆಹ್ವಾನ ಬಂದಾಗ ಮದರಾಸಿನಿಂದ ಶ್ರಮಪೂರ್ಣವಾದ ಪ್ರಯಾಣವನ್ನು ಕೈಗೊಳ್ಳಲು ಅವರು ನಿರ್ಧರಿಸಿದರು. ಆಹ್ವಾನ ಬಂದದ್ದು ಕಸ್ತೂರಿರಂಗ ಅಯ್ಯಂಗಾರ್ಯರಿಂದಾದರೂ ಅದರ ಹಿಂದಿದ್ದವರು ಸಿ. ರಾಜಗೋಪಾಲಾಚಾರಿಯವರು. ಸಾರ್ವಜನಿಕ ಕ್ಷೇತ್ರದಲ್ಲಿ ಹೆಚ್ಚು ಸಕ್ರಿಯ ಪಾತ್ರ ವಹಿಸಲು ಅನುಕೂಲವಾಗುವಂತೆ ಮದರಾಸಿನಲ್ಲಿ ವಕೀಲಿ ವೃತ್ತಿಯಲ್ಲಿ ನೆಲೆಸಲು ಅವರು ಸೇಲಂ ಬಿಟ್ಟು ಬಂದಿದ್ದರು. ಗಾಂಧೀಯವರು ಮಹಾದೇವ ದೇಸಾಯಿ ಅವರೊಡಗೂಡಿ ಮದರಾಸಿಗೆ ಬಂದು ರಾಜಗೋಪಾಲಾಚಾರಿಯವರ ಮನೆಯಲ್ಲಿ ತಂಗಿದರು.

ಸರ್ಕಾರದ ವಿರುದ್ಧ ಹೋರಾಡುವ ಉಪಾಯಗಳನ್ನು ಅವರು ದಿನವೂ ಚರ್ಚಿಸಿದರು. ಆದರೆ ಸಭೆಗಳನ್ನು ನಡೆಸುವುದರ ಹೊರತು ಅವರಿಗೆ ಬೇರೆ ಯಾವ ಕಾರ್ಯಕ್ರಮವೂ ಆಗ ಹೊಳೆಯಲಿಲ್ಲ. "ರೌಲಟ್ ಮಸೂದೆಯನ್ನು ಕಟ್ಟಕಡೆಗೆ ಶಾಸನಮಾಡಿಯೇ ಬಿಟ್ಟರೆ ನಾಗರಿಕರೀತಿಯಲ್ಲಿ ಕಾನೂನು ಭಂಗ ಮಾಡುವುದು ಹೇಗೆಂದು ಕಂಡು ಹಿಡಿಯುವುದರಲ್ಲಿ ನಾನು ದಿಕ್ಕು ತೋರದವನಾಗಿದ್ದೆ.

"ಕಾನೂನು ಭಂಗ ಮಾಡಲು (ಸರ್ಕಾರ ಅವಕಾಶ ಕೊಟ್ಟರೇನೋ) ಸಾಧ್ಯವಿತ್ತು, ಹಾಗಾಗದಿದ್ದರೆ. ನಾಗರಿಕರೀತಿಯಲ್ಲಿ ಇತರ ಕಾನೂನುಗಳನ್ನೂ ಮುರಿಯಬಹುದೋ? ಇದಾಗ ಬಹುದಾದರೆ, ಗೆರೆ ಎಲ್ಲಿ ಎಳೆಯುವುದು?"

ಕಸ್ತೂರಿರಂಗ ಅಯ್ಯಂಗಾರ್ಯ ಅವರು ಉಪಾಯವನ್ನು ಕಂಡುಹಿಡಿಯಲು ನಾಯಕರ ಸಣ್ಣ ಒಂದು ಸಭೆಯನ್ನು ಕರೆದರು. ಸತ್ಯಾಗ್ರಹಶಾಸ್ತ್ರದ ಸವಿಸ್ತಾರವಾದ ಕೈಪಿಡಿ ಯೊಂದನ್ನು ರಚಿಸಬೇಕು ಎಂದು ವಿಜಯರಾಘವಾಚಾರ್ಯರು ಗಾಂಧೀಜಿಗೆ ಸೂಚಿಸಿ ದರು. ಅದು ತಮ್ಮ ಶಕ್ತಿಗೆ ಮೀರಿದ್ದು ಎಂದು ಗಾಂಧೀಜಿಗೆ ತೋರಿತು. ತಮ್ಮ ಅಸಾಮರ್ಥ್ಯವನ್ನವರು ಹೇಳಿಕೊಂಡರು.

ಈ ಸಮಾಲೋಚನೆಗಳು ಇನ್ನೂ ನಡೆಯುತ್ತಿರುವಾಗಲೇ ಮಾರ್ಚಿ ೧೮ರಂದು ಬಿಲ್ ನಂ. ೨, ಶಾಸನವಾಗಿ ಪ್ರಕಟವಾಗಿ ಹೋಯಿತು. ಅಂದು ರಾತ್ರಿ ಈ ಸಮಸ್ಯೆ ಯನ್ನು ಕುರಿತು ಚಿಂತಿಸುತ್ತಿರುವಾಗಲೇ ಗಾಂಧೀಜಿಗೆ ನಿದ್ರೆ ಬಂತು. ಬೆಳಗಿನ ಜಾವದ ವೇಳೆಗೆ ಅವರು ಎಂದಿಗಿಂತ ಸ್ವಲ್ಪ ಮುಂಚೆ ಎದ್ದರು. ಅವರಿನ್ನೂ ನಿದ್ರೆ ಎಚ್ಚರಗಳ ನಡುವಣ ಮಬ್ಬಿನಲ್ಲಿರುವಾಗಲೇ ಅವರಿಗೆ ಥಟ್ಟನೆ ಒಂದು ಭಾವನೆ ಮಿಂಚಿತು. ಹೊತ್ತಿನಂತೆಯೇ ಅವರು ರಾಜಗೋಪಾಲಾಚಾರ್ಯರಿಗೆ ತಮ್ಮ ಉಪಾಯವನ್ನು ಪ್ರಕಟಿಸಿದರು.

"ರಾಷ್ಟ್ರಕ್ಕೆ ಸಾರ್ವತ್ರಿಕ ಹರತಾಳ ಆಚರಿಸಲು ಕರೆ ನೀಡಬೇಕೆಂಬ ಭಾವನೆ ರಾತ್ರಿ ಸ್ವಪ್ನದಲ್ಲಿ ನನಗೆ ಬಂತು. ಸತ್ಯಾಗ್ರಹ ಎಂಬುದು ಆತ್ಮಶುದ್ಧೀಕರಣದ ಒಂದು ಪ್ರಕ್ರಿಯೆ. ನಮ್ಮದು ಪವಿತ್ರವಾದ ಹೋರಾಟ. ಆತ್ಮಶುದ್ಧೀಕರಣ, ಒಂದು ಕಾರ್ಯ ದಿಂದಲೇ ಅದು ಆರಂಭವಾಗುವುದು ತೀರ ಉಚಿತವೆಂದು ನನಗೆ ತೋರುತ್ತದೆ. ಆದ್ದರಿಂದ ಆ ದಿನ ಭರತಖಂಡದ ಸಮಸ್ತ ಜನರೂ ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಲಿ, ಉಪವಾಸ ಪ್ರಾರ್ಥನೆಗಳ ದಿನವಾಗಿ ಅದನ್ನು ಆಚರಿಸಲಿ. ಮುಸಲ್ಮಾನರಿಗೆ ಒಂದು ದಿನಕ್ಕಿಂತ ಹೆಚ್ಚಾಗಿ ಉಪವಾಸ ಮಾಡಬಾರದೆಂಬ ನಿಯಮವಿದೆ. ಆದ್ದರಿಂದ ಉಪವಾಸದ ಅವಧಿ ಇಪ್ಪತ್ತನಾಲ್ಕು ಗಂಟೆಯೇ ಆಗಿರಬೇಕು. ಎಲ್ಲ ಪ್ರಾಂತ್ಯಗಳೂ ನಮ್ಮ ಈ ಮನವಿಗೆ ಓಗೊಡುತ್ತವೆಯೋ ಇಲ್ಲವೋ ಹೇಳುವುದು ತುಂಬ ಕಷ್ಟ. ಆದರೆ ಬೊಂಬಾಯಿ, ಮದ್ರಾಸು, ಬಿಹಾರ ಮತ್ತು ಸಿಂಧ್ ಪ್ರಾಂತ್ಯಗಳ ಬಗೆಗೆ ಸಾಕಷ್ಟು ಭರವಸೆ ನನಗಿದೆ. ಉಚಿತರೀತಿಯಲ್ಲಿ ಈ ಎಲ್ಲ ಸ್ಥಳಗಳೂ ಹರತಾಳ ಆಚರಿಸಿದರೆ ನಾವು ತೃಪ್ತಿಪಡಲು ಖಂಡಿತ ಕಾರಣವಿದೆ."

ಮಾರ್ಚಿ ೧೮ನೇ ತಾರೀಖು ಮದ್ರಾಸಿನ ಸಮುದ್ರ ತೀರದಲ್ಲಿ ಗಾಂಧೀಜಿ ಬೃಹತ್ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು. ಹೃದಯ ದುರ್ಬಲವಾಗಿದ್ದುದರಿಂದ ಅವರು ಹೆಚ್ಚು ಆಯಾಸ ಪಡಬಾರದೆಂದು ವೈದ್ಯರು ಸಲಹೆ ಇತ್ತಿದ್ದರು. ಆದ್ದರಿಂದ ಕುರ್ಚಿಯಲ್ಲೇ ಕುಳಿತೇ ಅವರು ನಾಲ್ಕಾರು ಮಾತು ಹೇಳಿದರು. ತಮ್ಮ ಭಾಷಣವನ್ನು ಓದುವಂತೆ ಮಹಾದೇವ ದೇಸಾಯಿಗೆ ಹೇಳುವ ಮುಂಚೆ ಕುತೂಹಲಿಗಳಾಗಿದ್ದ ಶ್ರೋತೃಗಳಿಗೆ ಹೀಗೆಂದರು:

"ಪ್ರತಿಜ್ಞೆಗೆ ರುಜು ಹಾಕುವ ಮುನ್ನ ಜಾಗರೂಕರಾಗಿರಿ. ಆದರೆ ರುಜು ಹಾಕಿದ್ದೇ ಆದರೆ ನಿಮ್ಮ ಪ್ರತಿಜ್ಞೆಗೆ ಎಂದಿಗೂ ಭಂಗ ತಾರದಂತೆ ನೋಡಿಕೊಳ್ಳಬೇಕು. ನಮ್ಮ

ಈ ಪ್ರತಿಜ್ಞೆಯನ್ನು ನೆರವೇರಿಸುವಂತೆ ನಿಮ್ಮನ್ನೂ ನನ್ನನ್ನೂ ಪರಮಾತ್ಮನು ಅನುಗ್ರಹಿಸಲಿ."

ಅನಂತರ, ಬರೆದಿಟ್ಟ ಭಾಷಣವನ್ನು ಮಹಾದೇವ ದೇಸಾಯಿ ಓದಿ ಹೇಳಿದರು: "ಹೃದಯ ದೌರ್ಬಲ್ಯದಿಂದಾಗಿ ಸ್ವತಃ ನಾನೇ ನಿಮ್ಮೊಡನೆ ಮಾತನಾಡಲು ಸಾಧ್ಯವಿಲ್ಲದುದಕ್ಕಾಗಿ ವಿಷಾದಿಸುತ್ತೇನೆ. ಅನೇಕ ಸಭೆಗಳಲ್ಲಿ ನೀವು ಭಾಗವಹಿಸಿದ್ದೀರಿ. ಆದರೆ ಇತ್ತೀಚೆಗೆ ನೀವು ಭಾಗವಹಿಸುತ್ತಿರುವ ಸಭೆಗಳು ಉಳಿದವುಗಳಿಗಿಂತ ಬೇರೆ ಬಗೆಯವು. ಹೇಗೆಂದರೆ ರೌಲಟ್ ಬಿಲ್ಲುಗಳು ಎಂದು ಕರೆಯಲಾಗಿರುವ ಶಾಸನರೂಪದಲ್ಲಿ ನಮ್ಮ ಮೇಲೆರಗಿರುವ ಉಗ್ರ ವಿಪತ್ತನ್ನು ತಪ್ಪಿಸಲು ಕೂಡಲೇ ಯಾವುದೋ ಸ್ಪಷ್ಟಗೋಚರವಾದ ಒಂದು ಕ್ರಿಯೆಯನ್ನು ಮಾಡಿತೋರಿಸಬೇಕೆಂದು, ಕೂಡಲೇ ನಿಷ್ಕೃಷ್ಟವಾದ ಒಂದು ತ್ಯಾಗವನ್ನು ಮಾಡಬೇಕೆಂದು ಇತ್ತೀಚಿನ ಸಭೆಗಳಲ್ಲಿ ನಿಮ್ಮನ್ನು ಕೇಳಿಕೊಂಡಿದ್ದೇನೆ. ಆ ಮಸೂದೆಗಳ ಪೈಕಿ ಒಂದರಲ್ಲಿ (ಬಿಲ್ ನಂ. ೧) ವಾಸ್ತವವಾಗಿ ಬದಲಾವಣೆಗಳಾಗಿವೆ. ಹಾಗೂ ಅದರ ಪರಿಶೀಲನವನ್ನು ಮುಂದೂಡಲಾಗಿದೆ. ಬದಲಾವಣೆಯಾಗಿದ್ದರೂ ಅದು ವಿರೋಧವನ್ನು ಕೆಣಕುವಷ್ಟು ಕುಹಕದಿಂದ ಕೂಡಿದೆ. ಬಿಲ್ ನಂ.೨ ಬಹುಶಃ ನಾವು ಇಲ್ಲಿ ನೆರೆದಿರುವ ಈ ಕ್ಷಣದಲ್ಲೇ ಕೌನ್ಸಿಲ್ಲಿನಲ್ಲಿ ಅಂತಿಮವಾಗಿ ಅಂಗೀಕೃತವಾಗಿರಬಹುದು. ಆ ಘನತೆವೆತ್ತ ಸಭೆಯು ಅದನ್ನು ವಾಸ್ತವವಾಗಿ ಅಂಗೀಕರಿಸಿತು ಎಂದು ಹೇಳುವಂತೆಯೇ ಇಲ್ಲ. ಏಕೆಂದರೆ ಅದರ ಎಲ್ಲ ಖಾಸಗೀ ಸದಸ್ಯರೂ ಒಮ್ಮತದಿಂದ ಪ್ರಬಲವಾದ ಮಾತುಗಳಲ್ಲಿ ಅದನ್ನು ವಿರೋಧಿಸಿದ್ದಾರೆ. ಈ ಬಿಲ್ಲುಗಳು ಸ್ವಯಂ ದುಷ್ಟವಾದುವು ಎಂದು ಮಾತ್ರವೇ ಅಲ್ಲ; ಅವುಗಳನ್ನು ಮಂಡಿಸುವ ಹೊಣೆ ಹೊತ್ತಿರುವ ಸರ್ಕಾರವು ಈ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಕಾರ್ಯತಃ ಉಪೇಕ್ಷಿಸುವುದೇ ಸೂಕ್ತವೆಂದು ಭಾವಿಸಿರುವುದಲ್ಲದೆ ಈ ಸರ್ಕಾರದ ಕೆಲವು ಅಧಿಕಾರಿಗಳು ಸಾರ್ವಜನಿಕ ಅಭಿಪ್ರಾಯವನ್ನು ಹೀಗೆಯೇ ಉಪೇಕ್ಷಿಸಬಲ್ಲೆವೆಂದು ಜಂಬಪಡುತ್ತಿದ್ದಾರೆ. ಇದುವರೆಗೂ ಹೇಳಿದುದು ನಮ್ಮ ದೇಶದ ಭಿನ್ನ ಭಿನ್ನ ವಿಚಾರ ಪಂಥಗಳೆಲ್ಲಕ್ಕೂ ಸಮಾನವಾದ ಕಾರಣವಾಯಿತು. ಆದರೂ ಪ್ರಾರ್ಥನಾ ಪೂರ್ಣವಾಗಿ ತುಂಬ ಪರ್ಯಾಲೋಚಿಸಿದ ನಂತರ, ಸರ್ಕಾರದ ನಿಲುವನ್ನು ಎಚ್ಚರಿಕೆಯಿಂದ ಪರೀಕ್ಷಿಸಿದ ನಂತರ, ಈ ಮಸೂದೆಗಳ ವಿರುದ್ಧ ನಾನು ಸತ್ಯಾಗ್ರಹ ಮಾಡಬೇಕೆಂದು ಪ್ರಮಾಣ ಮಾಡಿದ್ದೇನೆ. ಚಿಂತನೆ ಭಾವನೆಗಳಲ್ಲಿ ನನ್ನೊಡನೆಯಿರುವ ಸ್ತ್ರೀಪುರುಷರೆಲ್ಲ ನನ್ನಂತೆಯೇ ಮಾಡಬೇಕೆಂದು ಅವರನ್ನು ಕರೆಯುತ್ತಿದ್ದೇನೆ. ನಮ್ಮ ಅತ್ಯುತ್ತಮ ನಾಯಕರೂ ಸೇರಿದಂತೆ ಕೆಲವು ದೇಶಬಾಂಧವರು ಎಚ್ಚರಿಕೆಯ ಸ್ವರವನ್ನೆತ್ತಿದ್ದಾರೆ. ಅಷ್ಟೇ ಅಲ್ಲ, ಈ ಸತ್ಯಾಗ್ರಹ ಚಳುವಳಿಯು ಈ ದೇಶದ ಹೆಚ್ಚುಪಾಲು ಹಿತಾಸಕ್ತಿಗಳಿಗೆ ವಿರುದ್ಧವಾದದ್ದು ಎಂದೂ ಹೇಳುವಷ್ಟು ದೂರ ಮುಂದುವರಿದಿದ್ದಾರೆ. ಅವರಲ್ಲೂ ಅವರ ಅಭಿಪ್ರಾಯಗಳ ವಿಷಯದಲ್ಲಿ ನನಗೆ ಸಹಜವಾಗಿಯೇ ಅತ್ಯಂತ ಗೌರವವಿದೆ. ಅವರಲ್ಲಿ ಕೆಲವರ ಕೈಕೆಳಗೆ ನಾನು ಕೆಲಸಮಾಡಿದ್ದೇನೆ. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯ

ವನ್ನು ರೂಪುಗೊಳಿಸುವ ನಾಯಕರ ನಡುವೆ ಸರ್ ದಿನ್‌ಷಾ ವಾಛಾ ಮತ್ತು ಸುರೇಂದ್ರ ನಾಥ ಬ್ಯಾನರ್ಜಿಯವರ ಮನ್ನಣೆ ಪಡೆದಿದ್ದಾಗ ನಾನಿನ್ನೂ ಹಸುಗೂಸಾಗಿದ್ದೆ. ಶ್ರೀ ಶಾಸ್ತ್ರಿಯವರು ತಮ್ಮ ಸರ್ವಸ್ವವನ್ನೂ ದೇಶಹಿತಕ್ಕಾಗಿ ಸಮರ್ಪಿಸಿರುವ ರಾಜಕಾರಣಿ. ಅವರ ಪ್ರಾಮಾಣಿಕತೆ, ಸತ್ಯಸಂಧತೆಗಳ ಮೇಲೆ ಅವರ ಸ್ವಾಂತಿಕೆಯ ಮುದ್ರೆಯಿದೆ. ದೇಶಭಕ್ತಿಯ ವಿಷಯದಲ್ಲಿ ಅವರು ಯಾರಿಗೂ ಮಣಿಯುವವರಲ್ಲ. ಪವಿತ್ರವೂ ಅವಿಚ್ಛೇದ್ಯವೂ ಆದ ಒಂದು ಬಂಧನ ನನ್ನನ್ನೂ ಅವರನ್ನೂ ಬಂಧಿಸಿದೆ. ಆದರೂ ನಾನು ಪಡೆದಿರುವ ಶಿಕ್ಷಣ ನನ್ನನ್ನು ಎರಡು ಪ್ರಣಾಳಿಕೆಗಳಿಗೂ ಸಹಿ ಹಾಕಿರುವವರ ಕಡೆಗೇ ಎಳೆಯುತ್ತದೆ. ಆದ್ದರಿಂದ ಈಗ ನಾನು ಅವರ ಇಚ್ಛೆಗಳಿಗೆ ವಿರುದ್ಧವಾಗಿ ನಿಲ್ಲ ಬೇಕಾಗಿ ಬಂದಿರುವುದು ಅತ್ಯಂತ ತೀವ್ರವಾದ ದುಃಖವಿಲ್ಲದೆ ಅಲ್ಲ. ಸುದೀರ್ಘ ಹೃದಯ ಶೋಧನೆಯಿಲ್ಲದೆ ಅಲ್ಲ. ಆದರೆ ಸರ್ವೋನ್ನತವಾದ ಒಂದು ಕರೆಗೆ, ಅಂದರೆ ಅಂತಃಸಾಕ್ಷಿಯ ಕರೆಗೆ, ವಿಧೇಯವಾಗಬೇಕಾದ ಕೆಲವೊಂದು ಸಮಯಗಳಿವೆ. ಅದಕ್ಕೆ ವಿಧೇಯವಾಗಿ ನಡೆದುಕೊಳ್ಳುವುದರಿಂದ ಕಡು ದುಃಖದ ಕಣ್ಣೀರನ್ನೇ ಹರಿಸಬೇಕಾಗ ಬಹುದು, ಅಷ್ಟೇಕೆ, ಅದಕ್ಕಿಂತ ಹೆಚ್ಚಾಗಿ ಗೆಳೆಯರಿಂದ, ಕುಟುಂಬದಿಂದ, ನಾವು ಯಾವ ರಾಷ್ಟ್ರದವರೋ ಅಂಥರಾಷ್ಟ್ರದಿಂದ, ಪ್ರಾಣದಷ್ಟೇ ಪ್ರಿಯವೆಂದು ನೀವು ಅಪ್ಪಿಕೊಂಡಿರುವ ಎಲ್ಲದರಿಂದಲೂ ಅಗಲಿಕೆಯ ವೇದನೆಯನ್ನು ಸಹಿಸಬೇಕಾಗಬಹುದು. ಏಕೆಂದರೆ ವಿಧೇಯತೆಯೇ ನಮ್ಮ ಇರವಿನ ನಿಯಮ. ನನ್ನ ಈ ನಡವಳಿಕೆಗೆ ಇನ್ನೂ ಹೆಚ್ಚಿನ, ಇದಕ್ಕಿಂತ ಬೇರೆಯಾದ ಯಾವ ಸಮರ್ಥನೆಯನ್ನೂ ನಾನು ನೀಡಲಾರೆ. ಪ್ರಣಾಳಿಕೆಗೆ ಸಹಿ ಹಾಕಿರುವವರ ವಿಷಯದಲ್ಲಿ ನನಗಿರುವ ಗೌರವ ಸ್ವಲ್ಪವೂ ಕಡಮೆಯಾಗದೆ ಉಳಿಯುತ್ತದೆ. ಅಲ್ಲದೆ ಸತ್ಯಾಗ್ರಹವು ಫಲಕಾರಿಯಾಗುವ ವಿಷಯದಲ್ಲಿ ನನಗಿರುವ ಶ್ರದ್ಧೆ ಎಷ್ಟು ಮಹತ್ತಾದದ್ದು ಎಂದರೆ ಈ ಪ್ರತಿಜ್ಞೆ ಮಾಡಿರುವವರು ಇದಕ್ಕೆ ನಿಷ್ಠ ರಾಗಿ ನಡೆದುಕೊಂಡರೆ, ನಾವು ಈ ಹೋರಾಟದ ಕೊನೆ ಮುಟ್ಟುವ ವೇಳೆಗೆ ಅವರಿಗೆ ತೋರಿಸಿಕೊಡುವುದು ಸಾಧ್ಯವೆಂದು ನನಗನಿಸುತ್ತದೆ. ಪ್ರಣಾಳಿಕೆಗಳನ್ನು ಕುರಿತು ಕೆಲವು ಸತ್ಯಾಗ್ರಹಿಗಳಿಗೆ ಕೂಡ ಅಸಮಾಧಾನವಿದೆ ಎಂಬುದನ್ನು ನಾನು ಬಲ್ಲೆ. ಅಂಥ ಅಸಮಾ ಧಾನವು ಸತ್ಯಾಗ್ರಹದ ಮನೋವೃತ್ತಿಗೆ ವಿರೋಧಿಯಾದದ್ದು ಎಂದು ನಾನು ಅವರಿಗೆ ಎಚ್ಚರಿಕೆ ನೀಡಲಿಚ್ಛಿಸುತ್ತೇನೆ. ಯಾವುದೇ ಕಡೆಯಿಂದಾಗಲಿ, ಅದರಲ್ಲೂ ಹೆಚ್ಚಾಗಿ ಮಿತ್ರರಿಂದ, ಬರುವ ಭಿನ್ನಾಭಿಪ್ರಾಯಗಳ ಸ್ಪಷ್ಟೋಕ್ತಿಯನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಅದು ನಮ್ಮನ್ನು ಎಚ್ಚರದಲ್ಲಿರಿಸುತ್ತದೆ.

"ನಮ್ಮ ಸಾರ್ವಜನಿಕ ಜೀವನದಲ್ಲಿ ದೋಷಾರೋಪಣೆ, ವ್ಯಂಗ್ಯ, ಅನ್ಯಾಪದೇಶ ಇವೆಲ್ಲ ಅತಿಯಾಗಿವೆ. ಸತ್ಯಾಗ್ರಹ ಚಳುವಳಿಯು ಈ ಉಗ್ರದೋಷವನ್ನು ನಮ್ಮ ಸಾರ್ವಜನಿಕ ಜೀವನದಿಂದ ತೊಳೆದು ಹಾಕುವ ಪಕ್ಷಕ್ಕೆ—ಹಾಗೆ ಮಾಡುವುದೇ ಅದರ ಧರ್ಮ—ತುಂಬ ಅಪೇಕ್ಷಣೀಯವಾದ ಉಪಫಲವೊಂದು ಸಹ ಲಭಿಸಿದಂತಾಗುತ್ತದೆ: ಸತ್ಯಾಗ್ರಹಿಗಳಿಗೆ ಇನ್ನೂ ಒಂದು ಸಲಹೆಯನ್ನು ಕೊಡಬಯಸುತ್ತೇನೆ: ಈ ಎರಡು

ಪ್ರಣಾಳಿಕೆಗಳ ಬಗೆಗೆ ಕೋಪ ತಾಳುವುದು ನಮ್ಮ ಸ್ವಂತ ದೌರ್ಬಲ್ಯದ ಚಿಹ್ನೆಯಾಗುತ್ತದೆ. ಪ್ರತಿಯೊಂದು ಚಳುವಳಿಯೂ, ಎಲ್ಲಕ್ಕಿಂತ ಹೆಚ್ಚಾಗಿ ಸತ್ಯಾಗ್ರಹವು, ಸ್ವಂತ ಅಂತಶ್ಶಕ್ತಿಯನ್ನೇ ಅವಲಂಬಿಸಬೇಕೇ ಹೊರತು ಅದನ್ನು ಟೀಕಿಸುವವರ ದೌರ್ಬಲ್ಯ ಅಥವಾ ಮೌನವನ್ನಲ್ಲ.

"ಆದ್ದರಿಂದ ಸತ್ಯಾಗ್ರಹದ ಬಲ ಇರುವುದೆಲ್ಲಿ ಎಂಬುದನ್ನು ನೋಡೋಣ. ಹೆಸರೇ ಸೂಚಿಸುವಂತೆ ಅದಿರುವುದು ಸತ್ಯವನ್ನು ಕಡ್ಡಾಯವಾಗಿ ವಿಧಿಸುವುದರಲ್ಲಿ. ಸತ್ಯದ ಕ್ರಿಯಾತ್ಮಕ ಸ್ವರೂಪವೇ ಪ್ರೇಮವೆಂಬುದು. ಪ್ರೇಮದ ನಿಯಮದಂತೆ ದ್ವೇಷಕ್ಕೆ ಬದಲು ದ್ವೇಷವನ್ನು, ಹಿಂಸೆಗೆ ಬದಲು ಹಿಂಸೆಯನ್ನು ಹಿಂದಿರುಗಿಸಬಾರದು, ಕೆಡುಕಿನ ಬದಲು ಒಳಿತನ್ನೇ ಮಾಡತಕ್ಕದ್ದು. ಸರೋಜಿನಿ ದೇವಿಯವರು ನಿನ್ನೆ ನಿಮಗೆ ಹೇಳಿದಂತೆ ಬಲ ಇರುವುದು ನಿಜವಾದ ಧಾರ್ಮಿಕ ಮನೋವೃತ್ತಿಯನ್ನು ನಿಶ್ಚಿತವಾಗಿ ಗೌರವಿಸಿ ಅದಕ್ಕೆ ಅನುಗುಣವಾಗಿ ವರ್ತಿಸುವುದರಲ್ಲಿ. ಒಮ್ಮೆ ರಾಜಕೀಯಕ್ಕೆ ಧಾರ್ಮಿಕ ಅಂಶವನ್ನು ಸೇರಿಸಿ ಬಿಟ್ಟರೆ ನಿಮ್ಮ ಇಡೀ ರಾಜಕೀಯ ದೃಷ್ಟಿಯಲ್ಲೇ ಒಂದು ಕ್ರಾಂತಿಯನ್ನುಂಟು ಮಾಡಿದಂತಾಗುತ್ತದೆ. ಆಗ ನೀವು ಸುಧಾರಣೆಯನ್ನು ಸಾಧಿಸುತ್ತೀರಿ. ಸತ್ಯಾಗ್ರಹವನ್ನು ವಿರೋಧಿಸುವವರ ಮೇಲೆ ಯಾತನೆಯನ್ನು ಹೇರುವುದರಿಂದಲ್ಲ, ಯಾತನೆಯನ್ನು ನೀವೇ ವಹಿಸುವುದರಿಂದ. ಈ ರೀತಿ (ನಾವು ತಾಳಿಕೊಳ್ಳುವ ಸಂಕಷ್ಟಗಳ ತೀವ್ರತೆಯಿಂದಲೆ) ಈ ಆಕ್ಷೇಪಣೀಯವಾದ ಮಸೂದೆಗಳನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂಬ ಸರ್ಕಾರದ ಸಂಕಲ್ಪದ ಮೇಲೆ ಪರಿಣಾಮ ಬೀರಿ ಅದನ್ನು ಬದಲಾಯಿಸಬಹುದೆಂದು ನಮ್ಮ ಭರವಸೆ. ಸರ್ಕಾರವು ಈ ಹಿಡಿಯಷ್ಟು ಮಂದಿ ಸತ್ಯಾಗ್ರಹಿಗಳ ತಂಟೆಗೇ ಬರದೆ ಬಿಟ್ಟು ಬಿಡುತ್ತದೆ, ತಾನಾಗಿಯೇ ಅವರನ್ನು ಹುತಾತ್ಮ ಪದವಿಗೇರಿಸುವುದಿಲ್ಲ ಎಂದೂ ಕೆಲವರು ಸೂಚಿಸಿದ್ದಾರೆ, ನಿಜ.

"ಆದರೆ ನನ್ನ ನಮ್ರ ಅಭಿಪ್ರಾಯದಲ್ಲಿ ಇಂಥ ತರ್ಕದಲ್ಲಿ ದೋಷವಿದೆ. ಏಕೆಂದರೆ ಇದು ಮುಂದಾಗಬಹುದೆಂಬ ಸಂಗತಿಯ ನಿರಾಧಾರ ಊಹೆ. ಸತ್ಯಾಗ್ರಹಿಗಳನ್ನು ತಮ್ಮಷ್ಟಕ್ಕೇ ಬಿಟ್ಟುಬಿಡುವುದಾದರೆ ಅವರು ಸಂಪೂರ್ಣ ವಿಜಯವನ್ನು ಸಾಧಿಸಿದಂತೆಯೇ. ಏಕೆಂದರೆ ಅವರು ರೌಲಟ್ ಮಸೂದೆಗಳನ್ನೂ, ಈ ದೇಶದ ಇತರ ಕಾನೂನುಗಳನ್ನೂ ಉಲ್ಲಂಘಿಸಿದಂತೆಯೇ ಆಯಿತು, ಅಲ್ಲದೆ ಒಂದು ಸರ್ಕಾರಕ್ಕೆ ವಿರುದ್ಧ ನಡೆಸುವ ಸವಿನಯ ಆಜ್ಞೋಲ್ಲಂಘನೆ ಸಂಪೂರ್ಣವಾಗಿ ನಿರಪಾಯಕಾರಿಯೆಂದು ಆ ಸರ್ಕಾರ ಭಾವಿಸಿದೆಯೆಂದೂ ತೋರಿಸಿಕೊಟ್ಟಂತಾಯಿತು. ಅಂಥ ಹೇಳಿಕೆಯು ಮುಂದಾಗಬಹುದೆಂಬ ಸಂಗತಿಯ ನಿರಾಧಾರ ಊಹೆಯೆಂದು ನಾನೇಕೆ ಭಾವಿಸಿದ್ದೇನೆಂದರೆ ಈ ಚಳುವಳಿಯಲ್ಲಿ ಪಾತ್ರವಹಿಸುವವರು ಹಿಡಿಯಷ್ಟು ಮಂದಿ ಮಾತ್ರ ಎಂದು. ಅದು ಗೆರೆ ಎಳೆದು ಬಿಟ್ಟಿದೆ. ಸತ್ಯಾಗ್ರಹದಲ್ಲಿ ನನಗಿರುವ ಅನುಭವ ನನ್ನನ್ನು ಈ ನಂಬಿಕೆಗೆ ಒಯ್ದಿದೆ. ಅದು ಎಂಥ ಪ್ರಬಲಶಕ್ತಿ ಎಂದರೆ ಅದನ್ನು ಒಮ್ಮೆ ಚಾಲನಗೊಳಿಸಿದರೆ ಸಾಕು, ಯಾವ ಸಮಾಜದಲ್ಲಿ ಅದನ್ನು ಆಚರಣೆಗೆ ತರುತ್ತೇವೆಯೋ ಅದರಲ್ಲಿ ಅದು

ಕೊನೆಗೆ ಪ್ರಬಲ ಅಂಗವಾಗುವವರೆಗೂ ಸದಾ ಹರಡುತ್ತಲೇ ಹೋಗುತ್ತದೆ. ಅದು ಹಾಗೆ ಹರಡಿದರೆ ಯಾವ ಸರ್ಕಾರವೂ ಅದನ್ನು ನಿರ್ಲಕ್ಷಿಸಲಾರದು. ಸತ್ಯಾಗ್ರಹಕ್ಕೆ ಅದು ಮಣಿಯಲೇಬೇಕು. ಇಲ್ಲವೇ ಆ ಚಳುವಳಿಯ ಕಾರ್ಯಕರ್ತರನ್ನು ಬಂಧಿಸಲೇ ಬೇಕು. ಆದರೆ ನನಗೆ ವಾದ ಮಾಡುವ ಇಚ್ಛೆ ಇಲ್ಲ. ಕಡುಬಿನ ರುಚಿಗೆ ತಿಂದದ್ದೇ ಸಾಕ್ಷಿ ಎಂದೊಂದು ಇಂಗ್ಲಿಷ್ ಗಾದೆ ಇದೆ. ಒಳಿತಿಗೋ ಕೆಡುಕಿಗೋ ಚಳುವಳಿಯನ್ನಂತು ತೊಡಗಿದ್ದಾಗಿದೆ. ನಮ್ಮನ್ನು ತೂಗುವುದು ನಮ್ಮ ಮಾತಿನಿಂದಲ್ಲ. ಕೇವಲ ನಮ್ಮ ಕೆಲಸದಿಂದಲೇ. ಆದ್ದರಿಂದ ಪ್ರತಿಜ್ಞೆಗೆ ನಾವು ರುಜು ಹಾಕಿ ಬಿಟ್ಟರೆ ಸಾಲದು. ನಾವು ರುಜು ಹಾಕುವುದು ಅದರಂತೆ ನಡೆಯುತ್ತೇವೆಂಬ ಸಂಕಲ್ಪದ ಮುಂಗುರುಹು ಮಾತ್ರ. ಈ ಪ್ರತಿಜ್ಞೆಗೆ ಸಹಿಮಾಡಿರುವವರೆಲ್ಲರೂ ಅದರಂತೆ ನಡೆದರೆ ಮಸೂದೆಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಬಹುದೆಂದು ವಚನ ನೀಡುವಷ್ಟು ಧೈರ್ಯ ಮಾಡು ತ್ತೇನೆ. ಸರ್ಕಾರವೇ ಆಗಲಿ ನಮ್ಮನ್ನು ಟೀಕಿಸುತ್ತಿರುವವರೇ ನಮ್ಮ ವಿರುದ್ಧ ಚಕಾರವೆತ್ತುವಂತಾಗುವುದಿಲ್ಲ.

"ಧ್ಯೇಯ ಮಹತ್ತಾದದ್ದು, ಉಪಾಯವೂ ಅಷ್ಟೇ ಮಹತ್ತಾದದ್ದು: ಅವೆರಡಕ್ಕೂ ನಾವು ಅರ್ಹರಾದವರೆಂಬುದನ್ನು ಮಾಡಿತೋರಿಸೋಣ".

ಸಹಸ್ರ ಸಂಖ್ಯೆಯಲ್ಲಿ ಸೇರಿ ಸರ್ಕಾರವು ಸದ್ಯದಲ್ಲೇ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ಅದಕ್ಕೆ ಮನಗಾಣಿಸಬೇಕೆಂದು ಗಾಂಧೀಜಿ ಮಾರ್ಚಿ ೨೩ರಂದು ಭಾರತದ ಜನತೆಗೆ ಕರೆ ನೀಡಿದರು.

"ಅನೇಕ ಸಭೆಗಳಲ್ಲಿ ನಾನು ವಿಧಿಸಲು ಪ್ರಯತ್ನಿಸುವಂತೆ ಸತ್ಯಾಗ್ರಹವು ಸಾರತಃ ಧಾರ್ಮಿಕ ಚಳುವಳಿ. ಅದು ಶುದ್ಧೀಕರಣ ಮತ್ತು ತಪಸ್ಸುಗಳ ಪ್ರಕ್ರಿಯೆ. ನಾವೇ ದಂಡನೆಯನ್ನು ಅನುಭವಿಸುವುದರ ಮೂಲಕ ಸುಧಾರಣೆಗಳನ್ನೋ ಅಥವಾ ಅನ್ಯಾಯ ಗಳ ನಿವಾರಣೆಯನ್ನೋ ಸಾಧಿಸುವುದು ಅದರ ಪ್ರಯತ್ನ.

" ಆದ್ದರಿಂದ ೧೯೧೯ರ ಬಿಲ್ ನಂ. ೨ಕ್ಕೆ ವೈಸ್‌ರಾಯರ ಅನುಮತಿ ಪ್ರಕಟವಾದ ಬಳಿಕ ಬರುವ ಎರಡನೆಯ ಭಾನುವಾರವನ್ನು ಅಪಮಾನದ ಮತ್ತು ಪ್ರಾರ್ಥನೆಯ ದಿನವನ್ನಾಗಿ ಆಚರಿಸಬೇಕು ಎಂದು ಸೂಚಿಸುವ ಸಾಹಸ ಮಾಡುತ್ತಿದ್ದೇನೆ. ಆ ಆಚರಣೆಯ ಸ್ವರೂಪಕ್ಕೆ ಅನುರೂಪವಾದ ರೀತಿಯಲ್ಲಿ ಪರಿಣಾಮಕಾರಿಯಾದ ಸಾರ್ವಜನಿಕ ಪ್ರದರ್ಶನವನ್ನು ನಡೆಸುವುದು ಅಗತ್ಯ. ಆದ್ದರಿಂದ ಈ ಸಲಹೆಗಳನ್ನೆ ನೀಡಲು ತಮ್ಮ ಅನುಮತಿ ಬೇಡುತ್ತೇನೆ:

೧ "ದೊಡ್ಡವರೆಲ್ಲರೂ ಇಪ್ಪತ್ತುನಾಲ್ಕು ಗಂಟೆಗಳ ಕಾಲ ಉಪವಾಸ ಮಾಡತಕ್ಕದ್ದು. ಹಿಂದಿನ ರಾತ್ರಿ ಮಾಡಿದ ಕಡೆಯ ಊಟದಿಂದ ಅವಧಿಯ ನಿರ್ಣಯ. ಧಾರ್ಮಿಕ ಅಥವಾ ಆರೋಗ್ಯ ಕಾರಣಗಳು ಅಡ್ಡಿಬಂದರೆ ಮಾತ್ರ ಇಂಥವರು ಉಪವಾಸ ಮಾಡ ಬೇಕಾಗಿಲ್ಲ. ಈ ಉಪವಾಸವನ್ನು ಯಾವುದೇ ರೀತಿಯ ಅಥವಾ ರೂಪದ ಉಪವಾಸ ಮುಷ್ಕರ ಎಂದು ಭಾವಿಸಬಾರದು. ಅಥವಾ ಸರ್ಕಾರದ ಮೇಲೆ ಯಾವುದೇ ಒತ್ತಡ

ವನ್ನು ತರಲು ಮಾಡಿದ ಉಪವಾಸ ಎಂದೂ ಭಾವಿಸಬಾರದು. ಎಲ್ಲ ಸತ್ಯಾಗ್ರಹಿಗಳೂ ಈ ಉಪವಾಸವು ಪ್ರತಿಜ್ಞೆಯಲ್ಲಿ ಉದ್ದೇಶಿತವಾದ ಸವಿನಯ ಕಾನೂನುಭಂಗಕ್ಕೆ ಅಗತ್ಯವಾದ ಶಿಕ್ಷಣಕ್ಕೆ ತಮ್ಮನ್ನು ಅರ್ಹರನ್ನಾಗಿ ಮಾಡುವಂಥದು ಎಂದು ಭಾವಿಸಬೇಕು. ಉಳಿದೆಲ್ಲರೂ ಅದು ತಮಗಾಗಿರುವ ತೀವ್ರ ಮನೋವೇದನೆಯ ಅಲ್ಪಸ್ವಲ್ಪ ಕುರುಹೆಂದು.

೨. ಸಾರ್ವಜನಿಕ ಹಿತದ ದೃಷ್ಟಿಯಿಂದ ಅಗತ್ಯವಾದ ಕೆಲಸಗಳನ್ನು ಹೊರತು ಉಳಿದೆಲ್ಲವನ್ನು ಅಂದು ಸ್ಥಗಿತಗೊಳಿಸಬೇಕು. ಮಾರ್ಕೆಟ್ಟುಗಳನ್ನೂ ಉಳಿದ ವಾಣಿಜ್ಯ ಸಂಸ್ಥೆಗಳನ್ನೂ ಅಂದು ಮುಚ್ಚಿರತಕ್ಕದ್ದು. ಭಾನುವಾರವೂ ಕೆಲಸ ಮಾಡಬೇಕಾಗಿರುವ ನೌಕರರು ಮೊದಲೇ ತಮ್ಮ ಮಾಲಿಕರಿಂದ ಅಪ್ಪಣೆ ಪಡೆದು ಮಾತ್ರ ತಮ್ಮ ಕೆಲಸವನ್ನು ಸ್ಥಗಿತಗೊಳಿಸಬಹುದು.

"ಸರ್ಕಾರಿ ಉದ್ಯೋಗಸ್ಥರಿಗೆ ಈ ಎರಡು ಸಲಹೆಗಳನ್ನು ಶಿಫಾರ್ಸು ಮಾಡಲು ನಾನು ಹಿಂಜರಿಯುವುದಿಲ್ಲ. ಏಕೆಂದರೆ, ರಾಜಕೀಯ ಚರ್ಚೆಗಳಲ್ಲೂ ಸಭೆಗಳಲ್ಲೂ ಅವರು ಭಾಗವಹಿಸಕೂಡದು ಎಂಬುದು ನಿರ್ವಿವಾದವಾಗಿ ನ್ಯಾಯವೇ ಆದರೂ ಬದುಕು–ಸಾವಿನಂಥ ವಿಷಯಗಳಲ್ಲಿ ಇಲ್ಲಿ ಸೂಚಿಸಿರುವ ಪರಿಮಿತ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಅವರಿಗುಂಟು.

೩. "ಆ ದಿನ ಭಾರತದ ಎಲ್ಲ ಭಾಗಗಳಲ್ಲೂ, ಹಳ್ಳಿಗಳನ್ನೂ ಬಿಡದೆ, ಬಹಿರಂಗ ಸಭೆ ನಡೆಯಬೇಕು. ಸರ್ಕಾರದ ಈ ಎರಡು ಕಾಯಿದೆಗಳನ್ನೂ ಹಿಂತೆಗೆದುಕೊಳ್ಳಬೇಕೆಂದು ಬೇಡುವ ಠರಾವುಗಳನ್ನು ಅಲ್ಲಿ ಅಂಗೀಕರಿಸಬೇಕು.

"ನನ್ನ ಈ ಸಲಹೆ ಒಪ್ಪತಕ್ಕದ್ದೆನಿಸಿದರೆ, ಸಂಘಟನೆಗೆ ಅಗತ್ಯವಾದ ಕೆಲಸವನ್ನು ಕೈಗೊಳ್ಳುವ ಹೊಣೆಗಾರಿಕೆಯು, ಮೊದಲನೆಯದಾಗಿ ವಿವಿಧ ಸತ್ಯಾಗ್ರಹ ಸಂಸ್ಥೆಗಳ ಮೇಲೆ ಬೀಳುತ್ತದೆ. ಮಿಕ್ಕ ಎಲ್ಲ ಸಂಸ್ಥೆಗಳೂ ಈ ಪ್ರದರ್ಶನವನ್ನು ಸಂಪೂರ್ಣ ಯಶಸ್ವಿಯಾಗಿ ಮಾಡಲು ತಮ್ಮ ಸಹಾಯಹಸ್ತ ನೀಡುವುವೆಂದು ಆಶಿಸುತ್ತೇನೆ."

ಮೊದಲು ಹರತಾಳದ ದಿನವನ್ನು ಮಾರ್ಚಿ ೩೦ಎಂದು ತೀರ್ಮಾನಿಸಲಾಗಿತ್ತು. ಆದರೆ ಆಮೇಲೆ ಅದನ್ನು ಏಪ್ರಿಲ್ ೬ಕ್ಕೆ ಬದಲಾಯಿಸಲಾಯಿತು.

ದಕ್ಷಿಣ ಭಾರತದಲ್ಲಿ ಹರತಾಳಕ್ಕೆ ರಂಗವನ್ನು ಸಿದ್ಧಗೊಳಿಸುವುದಕ್ಕಾಗಿ ಗಾಂಧೀಜಿ ತಂಜಾವೂರು, ತಿರುಚನಾಪಳ್ಳಿ, ತೂತ್ತುಕುಡಿ ಮತ್ತು ನಾಗಪಟ್ಟಣಗಳಲ್ಲಿ ನಡೆದ ಸಭೆಗಳಲ್ಲಿ ಭಾಷಣಗಳನ್ನು ಮಾಡಿದರು. ಭಾಷಣಗಳನ್ನು ಓದಲೂ ಅವರಿಗೆ ಶಕ್ತಿಯಿರಲಿಲ್ಲ. ಅವರ ಹೃದಯ ದುರ್ಬಲವಾಗಿತ್ತು. ಅವರ ಸಂದೇಶ ಹೀಗಿತ್ತು: "ವಳ್ಳಿಯಮ್ಮ, ನಾಗಪ್ಪನ್, ನಾರಾಯಣಸ್ವಾಮಿ ಮತ್ತು ಅಹಮದ್ ಮಹಮದ್ ಇವರಿಗೆ ಯಾವುದು ಸಾಧ್ಯವಾಯಿತೋ ಅದು ನಿಮ್ಮ ಒಬ್ಬೊಬ್ಬರಿಗೂ ಇಂದು ಖಂಡಿತವಾಗಿಯೂ ಸಾಧ್ಯ ಎಂಬುದರಲ್ಲಿ ನನಗೆ ಸಂದೇಹವಿಲ್ಲ. ಈ ಸತ್ಯಾಗ್ರಹಿಗಳ ಹೆಜ್ಜೆಯನ್ನನುಸರಿಸಿ, ಪ್ರತಿಜ್ಞೆಗೆ

ಸಹಿಹಾಕಿ ಮತ್ತು ಈ ಕಾಯಿದೆಯನ್ನು ರದ್ದುಗೊಳಿಸಿ ಎಂದು ಈ ಸತ್ಯಾಗ್ರಹಿಗಳ ಹೆಸರಿನಲ್ಲೇ ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ".

ಮಾರ್ಚಿ ೩೦ರಂದು ಮದರಾಸಿನಲ್ಲಿ ಮಾತನಾಡುತ್ತಾ ಅವರು ಹೇಳಿದರು:

"ನಮ್ಮ ಸತ್ಯಾಗ್ರಹ ಚಳುವಳಿಯು, ನಮ್ಮ ಮೇಲೇರಿ ಬರುತ್ತಿರುವ ಬೋಲ್ಷೆವಿಸಂ ಬಗೆಗೆ ನಮಗಿರುವ ಭೀತಿಯನ್ನು ತೀವ್ರಗೊಳಿಸುತ್ತದೆ ಅಷ್ಟೆ ಎಂದು ಕೆಲವರು ಮಿತ್ರರು ವಾದಿಸಿದ್ದಾರೆ. ಸತ್ಯಾಂಶ ಇದು: ಬೋಲ್ಷೆವಿಸಂ ಹರಡುವುದನ್ನು ತಡೆಗಟ್ಟಲು ಯಾವು ದಕ್ಕಾದರೂ ಸಾಧ್ಯವೆಂದರೆ, ಅದು ಸತ್ಯಾಗ್ರಹವೊಂದೇ. ಬೋಲ್ಷೆವಿಸಂ ತತ್ವ, ಭೌತಿಕ ಭೋಗದ ನಾಗರಿಕತೆಯ ಅನಿವಾರ್ಯ ಫಲ. ಭೌತವಸ್ತುಗಳನ್ನೇ ವಿವೇಚನೆಯಿಲ್ಲದೆ ಆರಾಧಿಸುವುದರಿಂದಾಗಿ, ಭೌತಿಕ ಪ್ರಗತಿಯೇ ಏಕಮಾತ್ರ ಗುರಿ ಎಂದು ಭಾವಿಸುವ, ಜೀವನದ ಆತ್ಯಂತಿಕ ವಿಷಯಗಳ ಸಂಬಂಧವನ್ನೇ ಕಳೆದುಕೊಂಡಿರುವ, ಒಂದು ಪಂಥವೇ ಹುಟ್ಟಲು ಈ ನಾಗರಿಕತೆ ಕಾರಣವಾಗಿದೆ. ಭೌತವಸ್ತುವಿಗಿಂತ ಆತ್ಮವೇ ಪಾರಮಾರ್ಥಿಕ ವಾಗಿ ಶ್ರೇಷ್ಠ, ಪಶುಬಲಕ್ಕಿಂತ ಸ್ವಾತಂತ್ರ್ಯ ಮತ್ತು ಪ್ರೇಮಗಳ ಬಲಹಿರಿದು, ಎಂಬ ತತ್ವವನ್ನು ನಾವು ಉಲ್ಲಂಘಿಸಿದರೆ, ಇನ್ನು ಕೆಲವೇ ವರ್ಷಗಳಲ್ಲಿ ಹಿಂದೊಮ್ಮೆ ಅಷ್ಟು ಪವಿತ್ರವಾಗಿದ್ದ ಈ ನಾಡಿನಲ್ಲಿ ಬೋಲ್ಷೆವಿಸಂ ತತ್ವವು ತಾಂಡವವಾಡುವುದನ್ನು ನೋಡು ತ್ತೇವೆಂದು ನಾನು ಖಂಡಿತ ಭವಿಷ್ಯ ಹೇಳುತ್ತೇನೆ."

ಏಪ್ರಿಲ್ ೬ಕ್ಕಿಂತ ಒಂದು ವಾರ ಮುಂಚೆಯೇ, ತಾರೀಖನ್ನು ತಪ್ಪಾಗಿ ತಿಳಿದು ಕೊಂಡು, ದೆಹಲಿಯಲ್ಲಿ ಮಾರ್ಚಿ ೩೦ರಂದೇ ಹರತಾಳವನ್ನು ಆಚರಿಸಲಾಗಿತ್ತು. ಆರ್ಯ ಸಮಾಜದ ಹಿರಿಯ ನಾಯಕರಾಗಿದ್ದ ಸ್ವಾಮಿ ಶ್ರದ್ಧಾನಂದರು, ದೆಹಲಿಯ ಪ್ರಸಿದ್ಧ ಜುಮ್ಮ ಮಸೀದಿಯಲ್ಲಿ ಭಾರೀ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದ್ದರು. ಭಾರೀ ಮೆರವಣಿಗೆಯೊಂದನ್ನು ಚದುರಿಸಲು ಪೊಲೀಸ್ ಮತ್ತು ಮಿಲಿಟರಿ ದಳಗಳು ಪ್ರಯತ್ನಿಸಿ ಅದರ ಮೇಲೆ ಗುಂಡು ಹಾರಿಸಿದುವು, ಕೆಲವು ಜನ ಸತ್ತರು. ಉನ್ನತವೂ ಸನ್ಯಾಸಿಯುಡುಪಿನಲ್ಲಿ ಗಂಭೀರವೂ ಆದ ಆಕಾರದ ಸ್ವಾಮಿ ಶ್ರದ್ಧಾನಂದರು ಚಾಂದನಿ ಚೌಕದಲ್ಲಿ ಗೂರ್ಖಾದಳಗಳ ಬಯೊನೆಟ್‌ಗಳನ್ನು ತೆರೆದೆದೆಯಿಂದ ಎದುರಿಸಿದರು. ಈ ಘಟನೆಯಿಂದ ಭಾರತ ರೋಮಾಂಚನಗೊಂಡಿತು.

ಈ ಘಟನೆಗಳಾದ ಮೇಲೆ ಸ್ಥಳೀಯ ನಾಯಕರು ಗಾಂಧೀಜಿಯವರನ್ನು ದೆಹಲಿಗೆ ಕರೆದರು. ಏಪ್ರಿಲ್ ೬ರ ಹರತಾಳದ ಬಳಿಕ ತಾವು ಅಲ್ಲಿಗೆ ಹೊರಡಲು ಅವರು ಒಪ್ಪಿ ಕೊಂಡರು. ಸತ್ಯಾಗ್ರಹದ ಉದ್ಘಾಟನೆಗಾಗಿ ಬರಬೇಕೆಂದು ಶಂಕರಲಾಲ್ ಬ್ಯಾಂಕರ್ ಅವರಿಂದ ತಂತಿಯು ಬಂದುದರಿಂದ ಗಾಂಧೀಜಿ ಏಪ್ರಿಲ್ ೩ರಂದು ಮುಂಬಯಿ ತಲುಪಿದರು.

ಏಪ್ರಿಲ್ ೬ರ ಬೆಳಗ್ಗೆ ಮುಂಬಯಿ ನಾಗರಿಕರು ಗಾಂಧೀಜಿಯರ ಸುತ್ತ ಸಹಸ್ರಾರು ಸಂಖ್ಯೆಯಲ್ಲಿ ಚೌಪಾತಿಯಲ್ಲಿ ಸೇರಿದರು. ಸಮುದ್ರದಲ್ಲಿ ಸ್ನಾನಮಾಡಿ ಅಲ್ಲಿಂದ ನಿಧಾನ

ವಾಗಿ ಕಣ್ಮನ ಸೆಳೆಯುವಂಥ ಮೆರವಣಿಗೆ ಹೊರಟರು. ಮೆರವಣಿಗೆಯಲ್ಲಿ ಹೆಂಗಸರೂ ಮಕ್ಕಳೂ ಭಾರೀ ಸಂಖ್ಯೆಯಲ್ಲಿ ಸೇರಿದ್ದರು.

ಅಂದು ಗಾಂಧೀಜಿ ಹಲವಾರು ಭಾಷಣಗಳನ್ನು ಮಾಡಿದರು. ದೆಹಲಿಯ ಘಟನೆಗಳ ಬಗೆಗೆ ಭಾವಪೂರ್ಣವಾಗಿ ಮಾತನಾಡಿದರು. ಜನರು ಸಾಕಷ್ಟು ದೃಢ ಮನಸ್ಕರೂ ಸಂಯಮಶೀಲರೂ ಆಗಿ ೪೦,೦೦೦ದಷ್ಟು ಸಂಖ್ಯೆಯಲ್ಲಿ ನೆರೆದು ಸಾಮೂಹಿಕ ಸಭೆ ನಡೆಸಿದ್ದು, ಅದೂ ಈ ಗುಂಡೇಟಿನ ಘಟನೆಗಳಾದ ಮೇಲೆ, ನಿಜವಾಗಿಯೂ ಅಸಾಧಾರಣ ಘಟನೆ. ಅದು ದೆಹಲಿಯ ಜನರಿಗೆ ಕೀರ್ತಿ ತಂದಿತು. "ರೌಲಟ್ ಶಾಸನದ ವಿರುದ್ಧವಾಗಿ ಹೋರಾಟದಲ್ಲಿ ಭಾಗವಹಿಸುವ ಜನರು ಸಂಯಮಿಗಳೂ ಶಾಂತಿ ಶೀಲರೂ ಆಗಿರುತ್ತಾರೆಂದು ನಾನು ಸದಾ ಒತ್ತಿ ಹೇಳುತ್ತ ಬಂದಿದ್ದೇನೆ. ಆದರೆ ಅವರು ಹಿಂಸೆ ಅನುಭವಿಸಬೇಕಾಗುವುದಿಲ್ಲ ಎಂದು ಎಂದೂ ಹೇಳಿಲ್ಲ. ಸತ್ಯಾಗ್ರಹಿಗಳಿಗೆ ಅಂತಹ ಹಿಂಸೆ ಯಾವಾಗಲೂ ಸ್ವಾಗತಾರ್ಹವೆನ್ನಿಸಬೇಕು. ನಾಲ್ಕು ಮುಸ್ಲಿಮರು ಐವರು ಹಿಂದೂಗಳು ಇದುವರೆಗೆ ಮೃತಪಟ್ಟಿದ್ದಾರೆಂದೂ ಸುಮಾರು ಇಪ್ಪತ್ತು ಜನ ಕಾಣೆ ಯಾಗಿದ್ದಾರೆ, ಹದಿಮೂರು ಜನ ತುಂಬ ಗಾಯಪಟ್ಟು ಆಸ್ಪತ್ರೆಯಲ್ಲಿದ್ದಾರೆ ಎಂದೂ ಸ್ವಾಮಿ ಶ್ರದ್ಧಾನಂದರು ನನಗೆ ತಂತಿ ಕೊಟ್ಟಿದ್ದಾರೆ. ಸತ್ಯಾಗ್ರಹಿಗಳಿಗೆ ಇದೇನೂ ಕೆಟ್ಟ ಪ್ರಾರಂಭವಲ್ಲ. ಆತ್ಮಬಲಿದಾನದ ಪ್ರಯೋಗ ಮಾಡದೆ ಇದುವರೆಗೆ ಯಾವ ದೇಶವೂ ಮೇಲೇರಲಿಲ್ಲ, ಯಾವ ರಾಷ್ಟ್ರವೂ ನಿರ್ಮಾಣವಾಗಲಿಲ್ಲ".

ಮುಂಬಯಿಯ ಹರತಾಳ ಸಂಪೂರ್ಣ ಯಶಸ್ವಿಯಾಯಿತು. ಚಳುವಳಿಯನ್ನು ಪ್ರಾರಂಭಿಸಲು ಸಂಪೂರ್ಣ ಸಿದ್ಧತೆಯನ್ನು ಮಾಡಲಾಗಿತ್ತು. ಜನಸಾಮಾನ್ಯರು ಯಾವ ಕಾನೂನುಗಳನ್ನು ಸುಲಭವಾಗಿ ಉಲ್ಲಂಘಿಸಬಹುದೋ ಅಂಥವುಗಳ ವಿರುದ್ಧವಾಗಿ ಮಾತ್ರವೇ ಸತ್ಯಾಗ್ರಹ ಹೂಡಬಹುದೆಂದು ನಿರ್ಧಾರವಾಗಿತ್ತು. ನಿಷೇಧಿತ ಸಾಹಿತ್ಯದ ಮಾರಾಟವನ್ನು ಗಾಂಧೀಜಿ ಸೂಚಿಸಿದರು. ಆಗಲೇ ಬಹಿಷ್ಕೃತವಾಗಿದ್ದ ಗಾಂಧೀಜಿ ಯವರ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯಗಳು' ಈ ಉದ್ದೇಶಕ್ಕೆ ಅನುಕೂಲ ವಾಗಿದ್ದುವು.

ಗಾಂಧೀಜಿ ಮತ್ತು ಶ್ರೀಮತಿ ನಾಯ್ಡು ಪುಸ್ತಕಗಳನ್ನು ಮಾರಲು ಕಾರುಗಳಲ್ಲಿ ಹೊರಟರು. ಬಹು ಬೇಗನೆ ಎಲ್ಲ ಪ್ರತಿಗಳೂ ಮಾರಾಟವಾಗಿ ಹೋದುವು. ಪ್ರಕಟಿತ ಬೆಲೆ ನಾಲ್ಕಾಣೆಯೇ ಆಗಿದ್ದರೂ ಜನ ತಾವೇ ಮನಃಪೂರ್ವಕವಾಗಿ ಹೆಚ್ಚು ಹಣ ಕೊಟ್ಟು ಪುಸ್ತಕವನ್ನು ಕೊಂಡರು. ಗಾಂಧೀಜಿಯವರಿಗೆ ಒಂದೇ ಪ್ರತಿಗೆ ೫೦ ರೂಪಾಯಿ ಯಷ್ಟು ಭಾರೀ ಬೆಲೆ ಕೊಡಲಾಯಿತು. ಕೊಳ್ಳಬೇಕೆಂದು ಬಂದವರಿಗೆ, ಅವರು ನಿಷೇಧಿತ ಸಾಹಿತ್ಯವನ್ನು ಪಡೆದಿರುವ ತಪ್ಪಿತಕ್ಕಾಗಿ ದಸ್ತಗಿರಿ ಆಗಿ, ಸೆರೆಗೆ ಹೋಗಬೇಕಾಗಬಹುದು ಎಂದು ಹೇಳಲಾಯಿತು. ಆದರೆ ಜನ ಜೈಲಿಗೆ ಹೋಗುವ ಭೀತಿಯನ್ನು ಕಳಚಿ ಎಸೆದಿದ್ದರು.

ರಿಜಿಸ್ಟರಾಗದ "ಮೋಹನದಾಸ ಕರಮಚಂದ ಗಾಂಧಿ ಸಂಪಾದಿತ" ಸಾಪ್ತಾಹಿಕ ವಾದ "ಸತ್ಯಾಗ್ರಹ" ಎಂಬ ಪತ್ರಿಕೆ ಪ್ರತಿ ಸೋಮವಾರ ಬೆಳಗ್ಗೆ ೧೦ ಗಂಟೆಗೆ ಪ್ರಕಟ

ವಾಗುತ್ತಿತ್ತು. ಅದನ್ನು ಒಂದು ಪೈಸೆಗೆ ಮಾರಲಾಗುತ್ತಿತ್ತು. ೧೯೧೯ರ ಏಪ್ರಿಲ್ ೭ರ ಮೊದಲನೆಯ ಸಂಚಿಕೆಯಲ್ಲಿ ಗಾಂಧೀಜಿ ಹೀಗೆ ಬರೆದರು:

"ವೃತ್ತಪತ್ರಿಕಾ ಪ್ರಕಟಣೆಯನ್ನು ನಿಯಂತ್ರಿಸುವ ಕಾನೂನನ್ನು ಸವಿನಯವಾಗಿ ಉಲ್ಲಂಘಿಸುವುದರ ಉದ್ದೇಶವೇನೆಂದರೆ, ಪ್ರತಿಯೊಂದು ಸತ್ಯಾಗ್ರಹ ಕೇಂದ್ರದಲ್ಲಿಯೂ ಕೈಬರಹದ ಒಂದೊಂದು ವೃತ್ತಪತ್ರಿಕೆಯನ್ನು ರಿಜಿಸ್ಟರು ಮಾಡದೆ ಪ್ರಕಟಿಸುವುದು. ಅರ್ಧ ಫೂಲ್ಸ್‌ಕ್ಯಾಪ್ ಹಾಳೆಯ ಒಂದು ಮುಖಕ್ಕಿಂತ ದೊಡ್ಡದಾಗಿರಬೇಕಾಗಿಲ್ಲ ಅದು. ಅಂತಹ ಒಂದು ಪತ್ರಿಕೆಯನ್ನು ಸಂಪಾದಿಸಿದಾಗ, ಅರ್ಧಹಾಳೆಯನ್ನು ತುಂಬುವುದು ಎಷ್ಟು ಕಷ್ಟ ಎನ್ನುವುದು ಗೊತ್ತಾಗುತ್ತದೆ. ಅನೇಕ ವೃತ್ತಪತ್ರಿಕೆಗಳಲ್ಲಿ ಬಹುಪಾಲೆಲ್ಲ ಜಾಗತುಂಬುವ ಬರಿಭರ್ತಿ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅಲ್ಲದೆ, ಅತ್ಯಂತ ಕಟ್ಟುನಿಟ್ಟಾದ ಪತ್ರಿಕಾ ಕಾನೂನಿನ ಭೀತಿಗೊಳಪಟ್ಟು ಬರೆದ ಪತ್ರಿಕಾ ಲೇಖನಗಳಿಗೆ ಎರಡೆರಡು ಅರ್ಥಗಳಿರುತ್ತವೆಂಬುದನ್ನು ನಿರಾಕರಿಸಲಾಗುವುದಿಲ್ಲ. ಕಾನೂನಿನಲ್ಲಿ ವಿಧ ಡಿಸಿರುವ ಶಿಕ್ಷೆಗಳ ಸಕಲ ಭೀತಿಯನ್ನೂ ಕಳೆದುಕೊಂಡಿರುವ ಸತ್ಯಾಗ್ರಹಿಯೊಬ್ಬನೇ, ತನ್ನ ಆತ್ಮಸಾಕ್ಷಿಯ ವಿನಾ ಬೇರೆ ಯಾವ ವಿಚಾರದ ಆತಂಕವೂ ಇಲ್ಲದೆ, ರಿಜಿಸ್ಟರಾಗದ ಪತ್ರಿಕೆಯಲ್ಲಿ ತನ್ನ ಆಲೋಚನೆ ಅಭಿಪ್ರಾಯಗಳನ್ನು ನೀಡಬಲ್ಲ. ಆದ್ದರಿಂದ, ಮಿಕ್ಕೆಲ್ಲ ವಿಷಯಗಳಲ್ಲೂ ಉತ್ತಮವಾಗಿ ಸಂಪಾದಿತವಾಗಿದ್ದಲ್ಲಿ, ಅವನ ಪತ್ರಿಕೆ ಅತ್ಯಂತ ಶುದ್ಧ ಭಾವನೆಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಪ್ರಸಾರ ಮಾಡಲು ಅತ್ಯಂತ ಶಕ್ತಿಶಾಲಿಯಾದ ಮಾಧ್ಯಮವಾಗುತ್ತದೆ. ಕೈಬರಹದ ಪತ್ರಿಕೆಯನ್ನು ಹಂಚಲು ಅಸಾಧ್ಯ ವೆಂಬ ಭೀತಿಯೂ ಇರಬೇಕಾಗಿಲ್ಲ. ಏಕೆಂದರೆ ಮೊದಲ ಪ್ರತಿಗಳನ್ನು ಪಡೆದವರಿಗೆ ಮರು ನಕಲುಗಳನ್ನು ಮಾಡಿ ಹಂಚುವುದು ಕರ್ತವ್ಯವಾಗುತ್ತದೆ. ಈ ಪ್ರತೀಕರಣದ ಪ್ರಕ್ರಿಯೆ ಅಗತ್ಯ ಬಂದರೆ, ಭಾರತದ ಸಮಸ್ತ ಜನತೆಯನ್ನೂ ಕಟ್ಟಕಡೆಗೆ ಮುಟ್ಟು ವಷ್ಟಾಗುವವರೆಗೂ ಮುಂದುವರಿಯುತ್ತದೆ. ಭಾರತದಲ್ಲಿ ಮುಖತಃ ಉಪದೇಶದ ಮೂಲಕವೇ ಶಿಕ್ಷಣ ಕೊಡುತ್ತಿದ್ದ ಪರಂಪರೆಯಿತ್ತು ಎಂಬುದನ್ನೂ ಮರೆಯಕೂಡದು."

ಹಂಚಿಕೆಯ ವಿಷಯದಲ್ಲಿಯೂ ಗಾಂಧೀಜಿ ಈ ಒಂದು ಮಾತನ್ನು ಸೇರಿಸಿದರು: "ಸಾಧ್ಯವಾದಷ್ಟು ಮಟ್ಟಿಗೂ, ಸತ್ಯಾಗ್ರಹಿಗಳು ತಮ್ಮ ಹೆಸರುಗಳನ್ನೂ ವಿಳಾಸಗಳನ್ನೂ ಮಾರಾಟಗಾರರೆಂಬುದಾಗಿ ಬರೆಯಬೇಕು. ಅವರ ಮೇಲೆ ಮೊಕದ್ದಮೆ ಹೂಡು ವುದಕ್ಕಾಗಿ ಸರಕಾರಕ್ಕೆ ಅವರು ಬೇಕಾದರೆ ಸುಲಭವಾಗಿ ಅವರ ಸುಳಿವು ಹತ್ತುವಂತಿರ ಬೇಕು. ಈ ಸಾಹಿತ್ಯವನ್ನು ಗುಟ್ಟಾಗಿ ಮಾರುವ ಪ್ರಶ್ನೆಯೇ ಇಲ್ಲ ಎಂಬುದು ಸ್ಪಷ್ಟ. ಇದರೊಡನೆಯೇ ಅದನ್ನು ಹಂಚಲೂ ಸಹ ಮುನ್ನುಗ್ಗಬೇಕಾದ ಅವಶ್ಯಕತೆಯೂ ಇಲ್ಲ. ಸತ್ಯಾಗ್ರಹಿಗಳು ಸ್ತ್ರೀ ಪುರುಷರ ಸಣ್ಣ ಗುಂಪುಗಳನ್ನು ಸೇರಿಸಿ ಅವರಿಗೆ ಈ ಬಗೆಯ ಸಾಹಿತ್ಯವನ್ನು ಓದಿ ಹೇಳಬಹುದು. ನಿಷೇಧಿತ ಸಾಹಿತ್ಯವನ್ನು ಆಯ್ಕೆ ಮಾಡಿಮುವರ ಉದ್ದೇಶ, ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಸವಿನಯವಾಗಿ (ಹಣಕಾಸಿನ ವಿಷಯ ದಲ್ಲಿ ಸತ್ಯಾಗ್ರಹಿಗಳು ಕೂಡಿದ ಮಟ್ಟಿಗೂ ಸ್ವತಂತ್ರರಾಗಿರಬೇಕು) .ಮುರಿಯ

ಬೇಕೆನ್ನುವುದು ಮಾತ್ರವಲ್ಲ, ಉನ್ನತವಾದ ನೈತಿಕ ಮೌಲ್ಯಮಟ್ಟದ ಪರಿಶುದ್ಧ ಸಾಹಿತ್ಯವನ್ನು ಜನರಿಗೆ ಒದಗಿಸುವುದೂ ಕೂಡ. ಸರಕಾರವು ಅಂತಹ ಸಾಹಿತ್ಯವನ್ನು ಮುಟ್ಟುಗೋಲು ಹಾಕಿಕೊಳ್ಳುವುದೆಂದು ನಿರೀಕ್ಷಿಸಿಯೇ ಇದೆ. ಹಣಕಾಸಿನ ವಿಷಯದಲ್ಲಿ ಸತ್ಯಾಗ್ರಹಿಗಳೂ ಕೂಡಿದ ಮಟ್ಟಿಗೂ ಸ್ವತಂತ್ರರಾಗಿರಬೇಕು. ಆದ್ದರಿಂದ ಪತ್ರಿಕೆಗಳನ್ನು ಮುಟ್ಟುಗೋಲು ಹಾಕಿಕೊಂಡಾಗ, ಸತ್ಯಾಗ್ರಹಿಗಳು ನಿಷೇಧಿತ ಸಾಹಿತ್ಯವನ್ನು, ತಾವೇ ಆಗಲಿ ಅಥವಾ ಇಷ್ಟವುಳ್ಳ ಮಿತ್ರರ ನೆರವು ಪಡೆದು ಕೊಂಡಾಗಲಿ, ಮುಟ್ಟುಗೋಲು ಹಾಕಿಕೊಳ್ಳುವವರೆಗೂ ಜನರಿಗೆ ಅದನ್ನು ಓದಿ ಹೇಳುತ್ತಾ, ಹೊಸ ಪ್ರತಿಗಳನ್ನೂ ತಯಾರಿಸಿಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಆ ರೀತಿಯ ವಾಚನಗಳು ನಿಷೇಧಿತ ಸಾಹಿತ್ಯದ ಪ್ರಸರಣಕ್ಕೆ ಸರಿಸಮವಾದದ್ದು ಎಂದು ಹೇಳಲಾಗಿದೆ. ಪ್ರಸರಣದಿಂದಲೋ ಮುಟ್ಟುಗೋಲಿನಿಂದಲೋ ಎಲ್ಲ ಪ್ರತಿಗಳು ಮುಗಿದು ಹೋದಾಗಲೂ ಸತ್ಯಾಗ್ರಹಿಗಳು ತಮಗೆ ಸಿಕ್ಕುವಂತಹ ಪುಸ್ತಕದ ಪ್ರತಿಗಳಿಂದ ಉದ್ಧರಣಗಳನ್ನೆತ್ತಿಕೊಂಡು ನಕಲು ಮಾಡುತ್ತಾ ಸತ್ಯಾಗ್ರಹವನ್ನು ಮುಂದುವರಿಸುತ್ತಿರಬಹುದು."

ಏಪ್ರಿಲ್ ೮ರಂದು ಗಾಂಧೀಜಿ ಮಹಾದೇವ ದೇಸಾಯಿಯವರೊಂದಿಗೆ ದೆಹಲಿ ಮತ್ತು ಅಮೃತಸರಗಳಿಗೆ ಹೊರಟರು. ಮಧುರಾ ತಲುಪುತ್ತಲೇ ಅವರಿಗೆ ತಮ್ಮ ಬಂಧನದ ಸಂಭವವಿದೆ ಎಂಬ ಸೊಲ್ಲು ಮೊದಲಬಾರಿಗೆ ಕೇಳಿ ಬಂದಿತು. ಮುಂದೆ ನಡುದಾರಿಯ ನಿಲ್ದಾಣವಾದ ಪಾಲ್‌ವಾಲ್ ತಲುಪುವುದಕ್ಕೆ ಮುಂಚೆಯೇ ಗಾಂಧೀಜಿಯವರಿಗೆ ಲಿಖಿತ ಆಜ್ಞೆಯೊಂದನ್ನು ಕೊಡಲಾಯಿತು. ಅವರು ಪಂಜಾಬ್ ಮತ್ತು ದೆಹಲಿಗಳನ್ನು ಪ್ರವೇಶಿಸಕೂಡದೆಂದೂ, ಏಕೆಂದರೆ ಅವರು ಅಲ್ಲಿದ್ದರೆ "ಶಾಂತಿಭಂಗದ ಪರಿಣಾಮ ಉಂಟಾಗುವ ಸಂಭವವಿದೆ" ಯೆಂದೂ ತಿಳಿಸುವ ಸೂಚನೆ ಅದರಲ್ಲಿತ್ತು. ಪೊಲೀಸರು ಗಾಂಧೀಜಿಯವರನ್ನು ರೈಲಿನಿಂದ ಇಳಿಯುವಂತೆ ಹೇಳಿದರು. ಗಾಂಧೀಜಿ ಹಾಗೆ ಮಾಡಲು ನಿರಾಕರಿಸಿದರು: "ಒತ್ತಾಯವಾದ ಆಹ್ವಾನ ಬಂದಿರುವುದರಿಂದ ನಾನು ಪಂಜಾಬಿಗೆ ಹೋಗಲೇಬೇಕು. ಅಶಾಂತಿಯನ್ನು ಪ್ರಚೋದಿಸುವುದಕ್ಕಲ್ಲ, ಅದನ್ನು ಉಪಶಮನಗೊಳಿಸುವುದಕ್ಕಾಗಿ" ಎಂದರು.

ಏಪ್ರಿಲ್ ೯ರಂದು ಪಾಲ್‌ವಾಲ್ ನಿಲ್ದಾಣದಲ್ಲಿ ಗಾಂಧೀಜಿಯವರನ್ನು ರೈಲಿನಿಂದ ಹೊರಕ್ಕೆ ಇಳಿಸಿ ಪೊಲೀಸ್ ವಶದಲ್ಲಿರಿಸಲಾಯಿತು. ಸ್ವಲ್ಪ ಹೊತ್ತಿಗೇ ದೆಹಲಿಯಿಂದ ಬರುತ್ತಿದ್ದ ಒಂದು ರೈಲಿನ ಮೂರನೆದರ್ಜೆಯ ಬಂಡಿಗೆ ಹತ್ತಿಸಲಾಯಿತು. ಪೊಲೀಸರೂ ಜೊತೆಯಲ್ಲೇ ಬಂದರು. ಮಥುರಾ ತಲುಪಿದ ಮೇಲೆ ಪೊಲೀಸ್ ಪಾಳೆಯಕ್ಕೆ ಅವರನ್ನು ಒಯ್ಯಲಾಯಿತು. ಮರುದಿನ ಮುಂಜಾನೆ ನಾಲ್ಕುಗಂಟೆಗೇ ಎಬ್ಬಿಸಿ ಅವರನ್ನು ಮುಂಬಯಿ ಕಡೆಗೆ ಹೋಗುತ್ತಿದ್ದ ಒಂದು ಗುಡ್ಸ್ ರೈಲಿನಲ್ಲಿ ಕುಳ್ಳಿರಿಸಿ ಕಳುಹಿಸಲಾಯಿತು. ಮಧ್ಯಾಹ್ನ ಮತ್ತೆ ಸವಾಯ್‌ಮಾಧೋಪುರದಲ್ಲಿ ಇಳಿಸಲಾಯಿತು. ಈ ಬಾರಿ, ಲಾಹೋರಿನಿಂದ ಮೇಲ್ ರೈಲಿನಲ್ಲಿ ಬಂದಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಮಿ. ಬೌರಿಂಗ್, ಗಾಂಧೀಜಿಯವರನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮೊದಲನೆ

ದರ್ಜೆಯ ಗಾಡಿಯಲ್ಲಿ ಕುಳ್ಳಿರಿಸಿ ಆ ಅಧಿಕಾರಿಯು ಅವರನ್ನು ಮುಂಬಯಿಗೆ ಹಿಂದಿರುಗ ಬೇಕೆಂದೂ, ಪಂಜಾಬಿನ ಗಡಿ ದಾಟಬಾರದೆಂದೂ ಪ್ರಾರ್ಥನೆ ಮಾಡಿಕೊಂಡನು. ಗಾಂಧೀಜಿ ಮುಂಬಯಿಗೆ ತಾವಾಗಿಯೇ ಹಿಂದಿರುಗಲು ಸಿದ್ಧವಾಗಿಲ್ಲ ಎಂದು ಹೇಳಿದರು. ಸೂರತ್ತಿನಲ್ಲಿ ಅವರನ್ನು ಬೇರೊಬ್ಬ ಪೊಲೀಸ್ ಅಧಿಕಾರಿಯ ಕೈಗೆ ಬದಲಾಯಿಸ ಲಾಯಿತು. ಏಪ್ರಿಲ್ ೧೧ರಂದು ರೈಲು ಮುಂಬಯಿ ತಲುಪಿದಾಗ "ನಿಮಗೀಗ ಬಿಡು ಗಡೆಯಾಗಿದೆ" ಎಂದು ಅಧಿಕಾರಿಯು ಅವರಿಗೆ ಹೇಳಿದನು.

ಪಾಲ್‌ವಾಲ್‌ನಿಂದ ಮಹಾದೇವ ದೇಸಾಯಿ ಕೊಂಡೊಯ್ದ ಸಂದೇಶ ಹೀಗಿತ್ತು: "ಪಂಜಾಬ್ ಪ್ರಾಂತವನ್ನು ನಾನು ಪ್ರವೇಶಿಸಬಾರದೆಂದು ಆ ಸರಕಾರದಿಂದ ಒಂದು ಆಜ್ಞೆಯೂ, ದೆಹಲಿಯನ್ನು ನಾನು ಹೋಗಕೂಡದೆಂದು ಅಲ್ಲಿಯ ಸರಕಾರದಿಂದ ಮತ್ತೊಂದು ಆಜ್ಞೆಯೂ ನನಗೆ ಬಂದಿದೆ. ಇವುಗಳ ಹಿಂದೆಯೇ ನಾನು ಮುಂಬಯಿ ಯಲ್ಲೇ ಇರತಕ್ಕದೆಂದು ನಿರ್ಬಂಧಿಸುವ ಭಾರತ ಸರಕಾರದ ಆಜ್ಞೆಯನ್ನೂ ನನಗೆ ತಲುಪಿಸಲಾಗಿದೆ. ಇದೆಲ್ಲ ನನಗೆ ಅತೀವ ತೃಪ್ತಿಯನ್ನುಂಟು ಮಾಡುವ ವಿಚಾರ ನಿಮಗೂ ಹಾಗೆಯೇ ಎಂದು ಭಾವಿಸುತ್ತೇನೆ. ಆಜ್ಞೆಯನ್ನು ನನ್ನ ಮೇಲೆ ಜಾರಿ ಮಾಡಿದ ಅಧಿಕಾರಿಗೆ, ನಾನು ಪ್ರತಿಜ್ಞೆಗೆ ಕಟ್ಟುಬಿದ್ದಿರುವುದರಿಂದ, ಅದನ್ನು ನಿರ್ಲಕ್ಷಿಸಲು ಬದ್ಧನಾಗಿದ್ದೇನೆ ಎಂದು ಹೇಳಲು ಹಿಂದುಮುಂದು ನೋಡಲಿಲ್ಲ; ಹಾಗೆಯೇ ಹೇಳಿ ದ್ದೇನೆ. ಸದ್ಯದಲ್ಲೇ ನಾನು ಬಿಡುಗಡೆ ಹೊಂದುವವನಿದ್ದೇನೆ. ಅವರು ತಮ್ಮ ಸ್ವಾಧೀನ ಪಡಿಸಿಕೊಂಡದ್ದು ನನ್ನ ದೇಹವನ್ನು ಮಾತ್ರ. ರೌಲಟ್ ಶಾಸನವು ಶಾಸನ ಸಂಹಿತೆಯನ್ನೇ ವಿಕೃತಗೊಳಿಸಿರುವಾಗ ನಾನು ಸ್ವತಂತ್ರನಾಗಿ ಉಳಿದಿದ್ದುದು ನನಗೆ ತೀರ ವೇದನೆ ಯುಂಟು ಮಾಡಿತ್ತು. ಈಗಲಾದರೂ ನನ್ನ ಬಂಧನ ನನ್ನನ್ನು ಸ್ವತಂತ್ರನನ್ನಾಗಿ ಮಾಡಿದೆ. ಈಗ ನಿಮ್ಮ ಕರ್ತವ್ಯವನ್ನು ನೀವು ಮಾಡುವುದುಳಿದಿದೆ. ಅದೇನೆಂಬುದನ್ನು ಸತ್ಯಾಗ್ರಹ ಪ್ರತಿಜ್ಞೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಅದರಂತೆ ನಡೆಯಿರಿ, ಅದು ನಿಮಗೆ ಕಾಮಧೇನುವಾಗುವುದನ್ನು ಕಾಣುವಿರಿ. ನನ್ನ ಬಂಧನದ ಬಗೆಗೆ ಯಾರೂ ಕ್ರೋಧ ತಾಳುವುದಿಲ್ಲವೆಂದು ಆಶಿಸುತ್ತೇನೆ. ನಾನು ಅರಸುತ್ತಿದ್ದದ್ದೇ ನನಗೀಗ ದೊರೆತಿದೆ, ಇಲ್ಲವೆ ರೌಲಟ್ ಕಾಯಿದೆಯನ್ನು ಸರ್ಕಾರ ತೆಗೆದು ಹಾಕುವಂತೆ ಮಾಡುವುದು, ತಪ್ಪಿದರೆ ನಾನು ಬಂಧನಕ್ಕೊಳಗಾಗುವುದು. ಸತ್ಯದಿಂದ ಕೂದಲೆಳೆಯಷ್ಟಾಗಲಿ ದೂರ ಸರಿ ಯುವುದು ಅಥವಾ ಯಾರನ್ನೇ ಆಗಲಿ, ಇಂಗ್ಲಿಷನವನಿರಬಹುದು ಭಾರತೀಯನಿರ ಬಹುದು, ಹಿಂಸಿಸುವುದು, ಸತ್ಯಾಗ್ರಹಿಗಳು ಕೈಗೊಂಡಿರುವ ಉನ್ನತ ಧ್ಯೇಯಕ್ಕೆ ಖಂಡಿತ ವಾಗಿಯೂ ವಿನಾಶಕಾರಿ. ಇದೀಗ ಜನತೆಯಲ್ಲಿ ದೃಢವಾಗಿ ನೆಲೆಗೊಳ್ಳುತ್ತಿರುವ ಹಿಂದೂ ಮುಸ್ಲಿಂ ಐಕ್ಯತೆಯು ಒಂದು ಸ್ಥಿರವಾದ ಸತ್ಯವಾಗುವುದೆಂದು ನಾನು ಆಶಿಸುತ್ತೇನೆ. ಪತ್ರಿಕೆಗಳಿಗೆ ಕೊಟ್ಟ ಸೂಚನೆಗಳನ್ನು ಕಾರ್ಯಗತಗೊಳಿಸಿದರೆ ಮಾತ್ರ ಅದು ಸತ್ಯವಾಗ ಬಲ್ಲದು ಎಂಬುದು ನನ್ನ ಮನವರಿಕೆ. ಈ ವಿಚಾರದಲ್ಲಿ ಹಿಂದೂಗಳ ಜವಾಬ್ದಾರಿ ಅಲ್ಪಸಂಖ್ಯಾಕರಾಗಿರುವ ಮುಸ್ಲಿಂಮರದಕ್ಕಿಂತ ದೊಡ್ಡದು. ಅವರು ತಮ್ಮ ರಾಷ್ಟ್ರದ

ಘನತೆಗೆ ತಕ್ಕರೀತಿಯಲ್ಲಿ ಆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆಂದು ಆಶಿಸುತ್ತೇನೆ. ಸ್ವದೇಶಿ ವ್ರತವನ್ನು ಕುರಿತು ಸಹ ಕೆಲವು ಸೂಚನೆಗಳನ್ನು ನಾನು ಮಾಡಿದ್ದೇನೆ. ಅವುಗಳ ಕಡೆಗೆ ನಿಮ್ಮ ತೀವ್ರಗಮನ ಹರಿಯಲಿ ಎಂದು ಈಗ ಕೇಳಿಕೊಳ್ಳುತ್ತೇನೆ. ಸತ್ಯಾಗ್ರಹವನ್ನು ಕುರಿತ ನಿಮ್ಮ ಭಾವನೆಗಳು ಪಕ್ವವಾಗುತ್ತ ಹೋದಂತೆಲ್ಲ ಹಿಂದೂ ಮುಸ್ಲಿಂ ಐಕ್ಯತೆಯೂ ಸತ್ಯಾಗ್ರಹದ ಒಂದು ಅಂಶವೇ ಎಂಬುದನ್ನು ನೀವೇ ಕಾಣುತ್ತೀರಿ. ಕೊನೆಯದಾಗಿ ನನ್ನ ದೃಢನಂಬಿಕೆ ಇದು: ನಮಗೆ ವಿಮುಕ್ತತೆ ದೊರಕುವುದು ನಾವೇ ಯಾತನೆಯನ್ನು ಸಹಿಸಿಕೊಳ್ಳುವುದರಿಂದಲೇ ಹೊರತು, ಇಂಗ್ಲೆಂಡಿನಿಂದ ನಮ್ಮ ಮೇಲೆ ಬಂದು ಮಳೆಗರೆಯುವ ಯಾವ ಸುಧಾರಣೆಗಳಿಂದಲೂ ಎಷ್ಟು ಮಾತ್ರಕ್ಕೂ ಅಲ್ಲ, ಎಷ್ಟೇ ಉದಾರವಾಗಿ ಅವುಗಳನ್ನು ಅವರು ಮಂಜೂರು ಮಾಡಿದರೂ ಅಷ್ಟೆ. ಇಂಗ್ಲಿಷರು ಒಂದು ಮಹಾಜನಾಂಗ ನಿಜ, ಆದರೆ ದುರ್ಬಲರಾದವರು ಅವರೊಂದಿಗೆ ಸಂಪರ್ಕ ಪಡೆದರೆ ಅಂಥವರು ಮೂಲೆ ಗುಂಪಾಗುವುದೂ ಖಂಡಿತ. ಇಂಗ್ಲಿಷರು ಸ್ವಯಂ ಧೈರ್ಯಶಾಲಿಗಳು– ಅವರು ಬಣ್ಣಿಸಲಾಗದ ಯಾತನೆಯನ್ನು ಅನುಭವಿಸಿದ್ದಾರೆ, ಧೈರ್ಯ ಕಷ್ಟಸಹಿಷ್ಣುತೆಗಳಿಗೆ ಮಾತ್ರವೇ ಅವರು ಓಗೊಡುತ್ತಾರೆ. ಆದ್ದರಿಂದ ಅವರೊಂದಿಗೆ ಸಹಭಾಗಿತ್ವ ಬರಬೇಕಾದರೆ ಅಪ್ರತಿಮ ಧೈರ್ಯ ಹಾಗೂ ಅಪರಿಮಿತ ಸಹಿಷ್ಣುತೆಗಳನ್ನು ನಾವೂ ಪಡೆದ ಮೇಲೆ ಮಾತ್ರವೇ ಸಾಧ್ಯ. ಅವರ ನಾಗರಿಕತೆಗೂ ನಮ್ಮದಕ್ಕೂ ಮೂಲಭೂತವಾದ ಒಂದು ವ್ಯತ್ಯಾಸವಿದೆ. ಹಿಂಸಾತತ್ವವೇ, ಅಥವಾ ಪಶುಬಲವೇ. ಅಂತಿಮ ದೃಷ್ಟಿಯಲ್ಲಿ ನಿರ್ಣಾಯಕವಾದದ್ದೆಂದು ಅವರ ನಂಬಿಕೆ. ನಾನು ತಿಳಿದಿರುವಂತೆ. ನಮ್ಮ ನಾಗರಿಕತೆಯೆಂದರೆ ಆತ್ಮಶಕ್ತಿಯೇ ಅಥವಾ ನೈತಿಕಶಕ್ತಿಯೇ, ಅಂತಿಮವಾಗಿ ನಿರ್ಣಾಯಕವಾದದ್ದು ಎಂಬ ನಂಬಿಕೆಯನ್ನು ತಾಳಬೇಕೆಂದು ಅದರ ನಿರೀಕ್ಷೆ. ಇದೇ ಸತ್ಯಾಗ್ರಹ. ನಾವು ಈಗ ಯಾತನೆಯಿಂದ ನರಳುತ್ತಿದ್ದೇವೆ–ನಮಗೆ ಸಾಧ್ಯವಿದ್ದರೆ ಅದನ್ನು ನಿವಾರಿಸಿಕೊಳ್ಳುತ್ತಿದ್ದೆವು–ಇದಕ್ಕೆ ಕಾರಣ ನಮ್ಮ ಪ್ರಾಚೀನ ನಾಗರಿಕತೆ ಹಾಕಿಕೊಟ್ಟಿದ್ದ ದಾರಿಬಿಟ್ಟು ನಾವು ಸರಿದಿದ್ದೇವೆ. ಹಿಂದೂಗಳು, ಮುಸ್ಲಿಮರು, ಸಿಖ್ಖರು, ಪಾರ್ಸಿಗಳು, ಕ್ರಿಶ್ಚಿಯನರು, ಯೆಹೂದ್ಯರು ಮತ್ತು ಭಾರತದಲ್ಲೇ ಹುಟ್ಟಿರುವ ಅಥವಾ ಭಾರತವನ್ನೇ ತಮ್ಮ ಸ್ವೀಕೃತ ತಾಯ್ನಾಡನ್ನಾಗಿ ಮಾಡಿಕೊಂಡಿರುವ ಉಳಿದೆಲ್ಲರೂ ಸಹ ಈ ರಾಷ್ಟ್ರೀಯ ಆಚರಣೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸುತ್ತಾರೆಂದು ಆಶಿಸುತ್ತೇನೆ. ಇದರಲ್ಲಿ ಮಹಿಳೆಯರು ಪುರುಷರಷ್ಟೇ ಪೂರ್ಣಪ್ರಮಾಣದಲ್ಲಿ ಭಾಗವಹಿಸುತ್ತಾರೆಂದೂ ಆಶಿಸುತ್ತೇನೆ."

ಗಾಂಧೀಜಿಯನ್ನು ಬಂಧಿಸಿದ ಸುದ್ದಿ ಜನರನ್ನು ಕೆರಳಿಸಿತ್ತು. ಅವರು ಮುಂಬಯಿ ತಲುಪಿದ್ದೇ ತಡ ಉಮರ್ ಸೋಬಾನಿ ಮತ್ತು ಅನಸೂಯ ಬೆಹೆನ್ ಅವರನ್ನು ಕಂಡು ತಕ್ಷಣವೇ ಪೈಧುನಿಗೆ ಧಾವಿಸಬೇಕೆಂದೂ, ಅಲ್ಲಿ ಯಾವುದೇ ಕ್ಷಣದಲ್ಲಿ ಉಗ್ರವಾದ ಹಿಂಸಾಕೃತ್ಯ ಸಿಡಿದೇಳಬಹುದ ಭೀತಿ ಇದೆಯೆಂದೂ ತಿಳಿಸಿದರು. ಗಾಂಧಿಯವರನ್ನು ನೋಡಿ ಜನ ಸಂತೋಷದಿಂದ ಹುಚ್ಚಾದರು. ಒಡನೆಯೆ ಒಂದು ಮೆರವಣಿಗೆ

ಹೊರಟಿತು. "ವಂದೇ ಮಾತರಂ" "ಅಲ್ಲಾಹೋ ಅಕ್ಬರ್" ಘೋಷಣೆಗಳು ಗಗನವನ್ನು ಭೇದಿಸಿದುವು. ಮೆರವಣಿಗೆಯು ಅಬ್ದುಲ್ ರಹಮಾನ್ ಬೀದಿಯಿಂದ ಹೊರಕ್ಕೆ ಬಂದು ಕ್ರಾಫರ್ಡ್ ಮಾರ್ಕೆಟ್ ಕಡೆಗೆ ಮುಂದುವರಿಯುತ್ತಿದ್ದಂತೆ ದಿಢೀರನೆ ಎದುರಾಯಿತು ಅಶ್ವಾರೋಹಿ ಪೊಲೀಸರ ಒಂದು ದಳ. ಕೋಟೆಯ ಕಡೆಗೆ ಮೆರವಣಿಗೆ ಮುಂದು ವರೆಯದಂತೆ ತಡೆಯುವುದಕ್ಕಾಗಿ ಅವರು ಬಂದಿದ್ದರು. ದಟ್ಟವಾದ ಜನಸಮ್ಮರ್ದ. ಅಶ್ವಾರೋಹಿ ಪಡೆಯ ಜವಾಬ್ದಾರಿ ಹೊತ್ತಿದ್ದ ಅಧಿಕಾರಿಯು, ಗುಂಪು ತಕ್ಷಣವೇ ಚದುರಬೇಕೆಂದು ಆಜ್ಞೆಮಾಡಿದನು. ಮರುಕ್ಷಣವೇ ಪೊಲೀಸರು ಈಟಿಗಳನ್ನು ಬೀಸುತ್ತಾ ಗುಂಪಿನ ಮೇಲೆ ನುಗ್ಗಿದರು. ಜನಗಳ ಸಾಲುಗಳು ಮುರಿದುವು, ಎಲ್ಲೆಲ್ಲೂ ಗೊಂದಲ ಉಂಟಾಯಿತು. ಕಾಲತುಳಿತಕ್ಕೆ ಸಿಕ್ಕಿದವರು ಕೆಲವರು. ಛಿದ್ರಛಿದ್ರವಾದ ಗಾಯಗಳಾಗಿ ಜಜ್ಜಿ ಹೋದವರು ಇನ್ನು ಕೆಲವರು. ಈಟಿ ಹಿಡಿದ ಪೊಲೀಸರು ಕಣ್ಣುಮುಚ್ಚಿಕೊಂಡು ಜನಜಂಗುಳಿಯನ್ನು ಸೀಳಿಕೊಂಡು ದಾರಿಮಾಡಿದರು. ಉನ್ಮತ್ತ ಕೋಲಾಹಲದಲ್ಲಿ ಅಶ್ವಾರೋಹಿಗಳೂ ಜನರೂ ಬೆರೆತು ಹೋದರು.

ಗಾಂಧೀಜಿಯ ಕಾರು ಮುಂದೆ ಹೋಗಲು ಅವಕಾಶ ಕೊಡಲಾಯಿತು. ಅವರು ಪೊಲೀಸರ ದುರ್ವರ್ತನೆಯ ಬಗೆಗೆ ದೂರುಕೊಡಲು ಪೊಲೀಸ್ ಕಮೀಷನರ್ ಅವರ ಕಚೇರಿಗೆ ಹೋದರು. "ನಿಮ್ಮ ಉದ್ದೇಶಗಳ ಬಗೆಗೆ ನನಗೆ ಏನೂ ಸಂದೇಹವಿಲ್ಲ, ಆದರೆ ಜನ ಅವುಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ" ಎಂದು ಹೇಳಿ ಪೊಲೀಸ್ ಕಮಿಷನರ್ ಗ್ರಿಫಿತ್, ಪೊಲೀಸರ ವರ್ತನೆಯನ್ನೇ ಸಮರ್ಥಿಸಿದನು. ಇಬ್ಬರೂ ದೀರ್ಘ ಕಾಲ ವಾದ ಮಾಡಿದರು. ಕೊನೆಗೆ ಕಮಿಷನರ್ ಹೇಳಿದರು: "ಒಂದು ವೇಳೆ ಜನರಿಗೆ ನೀವು ಮಾಡುತ್ತಿರುವ ಉಪದೇಶವೆಲ್ಲ ವ್ಯರ್ಥವಾಗಿ ಹೋಯಿತು ಎಂದು ನಿಮಗೆ ಮನದಟ್ಟಾದರೆ ಆಗ ನೀವು ಏನು ಮಾಡುವಿರಿ?" ಗಾಂಧೀಜಿ ದೃಢವಾಗಿ ಉತ್ತರ ಹೇಳಿದರು: "ನನಗೆ ಹಾಗೆ ಮನವರಿಕೆಯಾದರೆ ಸತ್ಯಾಗ್ರಹ ಚಳುವಳಿಯನ್ನು ನಾನು ರದ್ದು ಪಡಿಸುವೆನು." ಈ ಮಧ್ಯೆ ಇನ್ನೊಬ್ಬ ಅಧಿಕಾರಿ ತಲೆಹಾಕಿ ಹೇಳಿದರು: "ಅಹಮದಾ ಬಾದಿನಲ್ಲಿ ಏನಾಗುತ್ತಿದೆ, ಅಮೃತಸರದಲ್ಲಿ ಏನಾಗಿದೆ ಎಂಬುದು ನಿಮಗೆ ಗೊತ್ತಿದೆಯೆ? ಎಲ್ಲೆಲ್ಲೂ ಜನಕ್ಕೆ ಹುಚ್ಚೇರಿದೆ. ಕೆಲವು ಕಡೆ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಲಾಗಿದೆ. ಈ ಎಲ್ಲ ವಿಕ್ಷೋಭೆಗಳ ಹೊಣೆಗಾರಿಕೆಯೂ ನಿಮ್ಮದೆಂದು ನಾನು ನಿಮಗೆ ತಿಳಿಸುತ್ತಿದ್ದೇನೆ."

ಗಾಂಧೀಜಿ ಚೌಪಾತಿಯಲ್ಲಿ ಸಭೆಯೊಂದನ್ನುದ್ದೇಶಿಸಿ ಮಾತನಾಡಲು ತಾವು ಸಂಕಲ್ಪಿಸಿರುವುದಾಗಿ ಹೇಳಿ ಪೊಲೀಸ್ ಕಮಿಷನರಿಂದ ಬೀಳ್ಕೊಂಡರು. ಐತಿಹಾಸಿಕ ವಾದ ಈ ಕಡಲ ಉಸುಬಿನ ಮೇಲೆ ಭಾರೀ ಜನಸ್ತೋಮಕ್ಕೆ ಗಾಂಧೀಜಿ ಅಹಿಂಸಾ ಧರ್ಮ ಹಾಗೂ ಸತ್ಯಾಗ್ರಹದ ಇತಿಮಿತಿಗಳ ವಿಷಯವಾಗಿ ಮಾತನಾಡಿದರು:

"ನನ್ನ ಬಂಧನದ ಹಿಂದೆಯೇ ಇಷ್ಟೊಂದು ತೀವ್ರವಾಗಿ ಉಂಟಾದ ಉದ್ವೇಗ. ಕೋಲಾಹಲಗಳಿಗೆ ಕಾರಣವನ್ನು ಅರಿಯಲು ನಾನು ಅಸಮರ್ಥನಾಗಿದ್ದೇನೆ. ಇದು ಸತ್ಯಾಗ್ರಹವಲ್ಲ. ಇದು ದುರಾಗ್ರಹಕ್ಕಿಂತಲೂ ಕೀಳಾದುದು. ಸತ್ಯಾಗ್ರಹ ಪ್ರದರ್ಶನ

ಗಳಿಗೆ ಸೇರುವವರು, ಹಿಂಸೆಯ ಎಲ್ಲ ಬಗೆಯ ಸಂಭವವನ್ನೂ ವರ್ಜಿಸಲು ಹಾಗೂ ಕಲ್ಲೆಸೆಯುವುದಾಗಲಿ ಇನ್ನೊಬ್ಬರನ್ನು ಯಾವುದೇ ರೀತಿ ನೋಯಿಸುವುದಾಗಲಿ ಮಾಡದಿರಲು ಬದ್ಧರಾಗಿದ್ದರು.

"ಆದರೆ ಮುಂಬಯಿಯಲ್ಲಿ ನಾವು ಕಲ್ಲೆಸೆಯುತ್ತಿದ್ದೇವೆ. ದಾರಿಗೆ ಅಡ್ಡಲಾಗಿ ತಡೆಗಳನ್ನು ಹಾಕಿ ಟ್ರಾಮುಗಳಿಗೆ ಅಡ್ಡಿಯೊಡ್ಡಿದ್ದೇವೆ. ಇದು ಸತ್ಯಾಗ್ರಹ ಅಲ್ಲ. ಹಿಂಸಾ ಕೃತ್ಯಗಳಿಂದ ಬಂಧಿತರಾಗಿದ್ದ ಸುಮಾರು ೫೦ ಜನರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ದಸ್ತಗಿರಿ ಮಾಡಿಸಿಕೊಳ್ಳುವುದೇ ನಮ್ಮ ಕರ್ತವ್ಯ. ಹಿಂಸಾ ಕೃತ್ಯಗಳನ್ನು ಮಾಡಿದ್ದವರ ಬಿಡುಗಡೆಗೆ ಪ್ರಯತ್ನ ಪಡುವುದು ಧಾರ್ಮಿಕ ಕರ್ತವ್ಯದ ಭಂಗ. ಆದ್ದರಿಂದ ಬಂಧಿತರಾದವರ ಬಿಡುಗಡೆಯನ್ನು ಕೇಳುವುದರಲ್ಲಿ ಯಾವ ನ್ಯಾಯವೂ ಇಲ್ಲ. ಸತ್ಯಾಗ್ರಹ ಚಳುವಳಿಯಿಂದ ಉಂಟಾಗುವ ಫಲಿತಾಂಶಗಳಿಗೆಲ್ಲ ಸತ್ಯಾಗ್ರಹಿಯಾದವನು ಹೊಣೆಯೆ ಎಂದು ನನ್ನನ್ನು ಕೇಳಲಾಗಿದೆ. ನಾನು ಹೌದು ಎಂದು ಉತ್ತರ ಕೊಟ್ಟಿದ್ದೇನೆ. ಆದ್ದರಿಂದ, ನಮ್ಮ ಪಕ್ಷದಿಂದ ಎಳ್ಳಷ್ಟಾದರೂ ಹಿಂಸೆಯಿಲ್ಲದೆ ಈ ಚಳುವಳಿಯನ್ನು ನಡೆಸುವುದು ನಮಗೆ ಸಾಧ್ಯವಿಲ್ಲವಾದ ಪಕ್ಷದಲ್ಲಿ, ಚಳುವಳಿಯನ್ನೇ ತ್ಯಜಿಸಬೇಕಾಗಬಹುದು. ಅಥವಾ ಅದಕ್ಕೆ ಬೇರೆಯೇ ಒಂದು ಬಗೆಯ, ಇನ್ನೂ ಪರಿಮಿತವಾದ, ರೂಪು ಕೊಡಬೇಕಾಗುತ್ತದೆ. ಇನ್ನೂ ಮುಂದೆಯೂ ಹೋಗಬೇಕಾಗಬಹುದು. ನಮ್ಮವರ ವಿರುದ್ಧವಾಗಿಯೇ ನಾನು ಸತ್ಯಾಗ್ರಹ ಹೂಡಬೇಕಾದ ಕಾಲವೂ ಬರಬಹುದು.

"ಸತ್ಯಾಗ್ರಹಿಯೊಬ್ಬನ ಮರಣದ ಸುದ್ದಿ ಬಂದರೆ ನನಗೆ ನೋವಾಗುತ್ತದೆ ನಿಜ, ಆದರೆ ಅದು ಹೋರಾಟಕ್ಕಾಗಿ ಅರ್ಪಿತವಾದ ವಿಹಿತವಾದ ಬಲಿದಾನ ಎಂದು ನಾನು ಭಾವಿಸುತ್ತೇನೆ. ಆದರೆ ಸತ್ಯಾಗ್ರಹಿಗಳಲ್ಲದವರು, ಚಳುವಳಿಗೆ ಸೇರದವರು, ಚಳುವಳಿಗೆ ವಿರುದ್ಧವಾಗಿರುವವರು, ಕೂಡ, ಯಾವುದೇ ನೋವಿಗೆ ಗುರಿಯಾದರೂ, ಆ ಪಾಪಕರವಾದ ನೋವಿಗೆ ಪ್ರತಿಯೊಬ್ಬ ಸತ್ಯಾಗ್ರಹಿಯೂ ಹೊಣೆಯಾಗುತ್ತಾನೆ. ನನ್ನ ಹೊಣೆಯಾದರೋ ಕೋಟಿಪಾಲು ಹೆಚ್ಚಾಗಿರುತ್ತದೆ. ನನ್ನ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಅರಿತುಕೊಂಡೆ ನಾನು ಹೋರಾಟಕ್ಕೆ ಇಳಿದಿದ್ದೇನೆ.

"ಕೆಲವು ಇಂಗ್ಲಿಷ್ ಮಹನೀಯರಿಗೆ ಗಾಯವಾಯಿತು ಎಂಬ ಸುದ್ದಿಯನ್ನು ಇದೀಗ ಕೇಳಿದೆ. ಅಂತಹ ಗಾಯಗಳಿಂದ ಕೆಲವರು ಸತ್ತು ಹೋಗಿರಬಹುದು. ಹಾಗೇನಾದರೂ ಆಗಿದ್ದರೆ ಅದು ಸತ್ಯಾಗ್ರಹ ಚಳುವಳಿಗೆ ಭಾರೀ ಕಳಂಕ. ನನ್ನ ಪಾಲಿಗೆ, ಇಂಗ್ಲಿಷರೂ ನಮ್ಮ ಸೋದರರೇ. ಅವರ ವಿರುದ್ಧ ನಮಗೆ ಏನೇನೂ ಹಗೆತನ ಇರಲಾರದು. ನಾನು ಈಗ ತಾನೆ ವರ್ಣಿಸಿದಂತಹ ದೃಶ್ಯಗಳು ಕೇವಲ ಅಸಹನೀಯವಾದುವು. ಆದರೆ ನಮಗೇ ವಿರುದ್ಧ ಸತ್ಯಾಗ್ರಹ ಹೂಡುವುದು ಹೇಗೆಂದು ನಾನು ಬಲ್ಲೆ. ನಮಗೇ ವಿರುದ್ಧವಾದ ಯಾವಬಗೆಯ ಸತ್ಯಾಗ್ರಹವನ್ನು ನಾನು ಹೂಡಬಹುದು? ನಾನು ಉಪವಾಸ ಪ್ರಾಯಶ್ಚಿತ್ತ ಮಾಡುವುದಲ್ಲದೆ ಬೇರೆ ಯಾವ ಬಗೆಯ ದಂಡನೆಯನ್ನು

ವಿಧಿಸಿಕೊಳ್ಳಬಹುದೋ, ನನಗೆ ಕಾಣುತ್ತಿಲ್ಲ. ಹಾಗೆ ಮಾಡಿ (ಅಗತ್ಯ ಬಂದರೆ) ಈ ದೇಹವನ್ನೇ ಅರ್ಪಿಸಿ ಸತ್ಯಾಗ್ರಹದ ಸತ್ಯ ಏನೆಂಬುದನ್ನು ಸಮರ್ಥಿಸಬೇಕೆನಿಸುತ್ತದೆ. ಶಾಂತಿಯುತರಾಗಿ ಇಲ್ಲಿಂದ ಹೊರಟು ಹೋಗಬೇಕು, ಮುಂಬಯಿಯ ಜನತೆಗೆ ಅಪ ಮಾನ ತರುವಂತಹ ಕೃತ್ಯಗಳನ್ನೆಲ್ಲ ವರ್ಜಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ."

ಘಟನೆಗಳು ವೇಗವಾಗಿ ಮುಂಬರಿದುವು. ಅಹಮದಾಬಾದಿನಲ್ಲಿ ಭಾರೀ ಉದ್ವೇಗ ಉಂಟಾಯಿತು. ಅನುಸೂಯ ಬಹೆನ್ ಅವನ ಬಂಧನದ ವದಂತಿಯಿತ್ತು. ಅದು ಉಗ್ರ ವಾದ ಘರ್ಷಣೆಗಳಿಗೆ ಎಡೆಮಾಡಿತು. ಹತ್ತಿ ಗಿರಣಿ ಕಾರ್ಮಿಕರ ಮೇಲೆ ಅನೇಕಬಾರಿ ಗುಂಡುಹಾರಿಸಲಾಯಿತು, ಏಪ್ರಿಲ್ ೧೨ರಂದು ಬೆಳಗ್ಗೆ ಮಿಲಿಟರಿ ಘೋಷಣೆಯನ್ನು ಹೊರಡಿಸಲಾಯಿತು.

ಏಪ್ರಿಲ್ ೧೩ರಂದು ಗಾಂಧೀಜಿ ಅಹಮದಾಬಾದಿಗೆ ಬಂದರು, ಪುನಃ ಶಾಂತಿ ನೆಲೆಸುವಂತೆ ಮಾಡಲು ಅವರಿಗೆ ಅವಕಾಶ ನೀಡಲಾಯಿತು. ಏಪ್ರಿಲ್ ೧೪ರಂದು ಆಶ್ರಮದ ಬಳಿ ಪ್ರಚಂಡ ಸಭೆಯನ್ನುದ್ದೇಶಿಸಿ ಅವರು ಭಾಷಣ ಮಾಡಿದರು. ಜನರನ್ನು ಅವರ ಹಿಂಸಾಕೃತ್ಯಗಳಿಗಾಗಿ ಖಂಡಿಸಿ ಅದಕ್ಕೆ ಪ್ರಾಯಶ್ಚಿತ್ತವಾಗಿ ತಾವು ಮೂರು ದಿನಗಳ ಉಪವಾಸ ವಿಧಿಸಿಕೊಂಡರು, ಜನರೂ ಒಂದು ದಿನದ ಉಪವಾಸ ಪ್ರಾಯಶ್ಚಿತ್ತ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

"ಸೋದರರೇ, ಮುಖ್ಯವಾಗಿ ನಿಮ್ಮನ್ನೇ ಉದ್ದೇಶಿಸಿ ಮಾತನಾಡಬಯಸುತ್ತೇನೆ. ಸೋದರರೇ, ಕಳೆದ ಕೆಲವು ದಿನಗಳಲ್ಲಿ ನಡೆದಿರುವ ಘಟನೆಗಳು ಅಹಮದಾಬಾದಿಗೆ ತೀರಾ ಅವಮಾನ ತರುವಂಥವಾಗಿವೆ. ಆ ಎಲ್ಲ ಘಟನೆಗಳೂ ನನ್ನ ಹೆಸರಿನಲ್ಲೇ ಆಗಿರು ವುದರಿಂದ ನನಗೆ ನಾಚಿಕೆಯಾಗಿದೆ. ಅವುಗಳಿಗೆ ಕಾರಣರಾದವರು ಆ ಮೂಲಕ ನನಗೆ ಗೌರವ ತಂದಿಲ್ಲ, ಅದರ ಬದಲು ಅಪಮಾನ ಉಂಟುಮಾಡಿದ್ದಾರೆ. ನನ್ನ ದೇಹವನ್ನು ಕತ್ತಿಯಿಂದ ಇರಿದಿದ್ದರೂ ನನಗೆ ಇದಕ್ಕಿಂತ ಯಾತನೆಯನ್ನು ಉಂಟು ಮಾಡುತ್ತಿರಲಿಲ್ಲ. ಲೆಕ್ಕವಿಲ್ಲದಷ್ಟು ಸಾರಿ ನಾನು ಹೇಳುತ್ತಲೇ ಬಂದಿದ್ದೇನೆ. ಸತ್ಯಾಗ್ರಹದಲ್ಲಿ ಹಿಂಸೆಗೆ ಎಡೆ ಯಿಲ್ಲ, ಸುಲಿಗೆಗೆ ಅವಕಾಶವಿಲ್ಲ. ಬೆಂಕಿ ಹಚ್ಚಲು ಆಸ್ಪದವಿಲ್ಲ ಎಂಬುದಾಗಿ. ಆದರೂ ಸತ್ಯಾಗ್ರಹದ ಹೆಸರಿನಲ್ಲಿ ನಾವು ಕಟ್ಟಡಗಳನ್ನು ಸುಟ್ಟಿದ್ದೇವೆ, ಬಲ ಪ್ರಯೋಗದಿಂದ ಆಯುಧಗಳನ್ನು ವಶಪಡಿಸಿಕೊಂಡಿದ್ದೇವೆ, ಹಣವನ್ನು ಸುಲಿಗೆ ಮಾಡಿದ್ದೇವೆ. ರೈಲು ಗಳನ್ನು ನಿಲ್ಲಿಸಿದ್ದೇವೆ, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದ್ದೇವೆ, ನಿರ್ದೋಷಿಗಳಾದ ಜನರನ್ನು ಕೊಂದಿದ್ದೇವೆ. ಅಂಗಡಿಗಳನ್ನೂ ಖಾಸಗೀ ಮನೆಗಳನ್ನೂ ಕೊಳ್ಳೆ ಹೊಡದಿದ್ದೇವೆ. ಈ ಬಗೆಯ ಕೃತ್ಯಗಳು ನನ್ನನ್ನು ಜೈಲಿನಿಂದಲೋ. ಗಲ್ಲಿ ನಿಂದಲೋ ಉಳಿಸಬಲ್ಲುವಾದರೆ, ಹಾಗೆ ಉಳಿದುಕೊಳ್ಳಲು ನಾನು ಸುತರಾಂ ಇಚ್ಛಿಸು ವುದಿಲ್ಲ. ಸಂಪೂರ್ಣ ಕಳಕಳಿಯಿಂದ ಹೇಳಬಯಸುತ್ತೇನೆ–ಹಿಂಸೆಯು ನನ್ನ ಬಿಡುಗಡೆ ಯನ್ನು ಸಾಧಿಸಿಲ್ಲ ಎಂದು. ಅನಸೂಯ ಬಹೆನ್ ಬಂಧಿತರಾದರು ಎಂಬ ಪಾಶವೀ ಲಕ್ಷಣ ತೋರಿಸುವ ಪೊಳ್ಳುಸುದ್ದಿಯನ್ನು ಹುಟ್ಟಿಸಿ ಹರಡಲಾಯಿತು. ಅದರಿಂದ

ಜನರು ಉದ್ರಿಕ್ತರಾದರು, ಕ್ಷೋಭೆ ಹೆಚ್ಚಾಯಿತು. ಇದರಿಂದ ನೀವು ಅನಸೂಯ ಬೆಹೆನ್ ಅವರಿಗೆ ಅಪಮಾನ ತಂದಿದ್ದೀರಿ. ಅವರ ಬಂಧನದ ಮುಸುಕಿನಲ್ಲಿ ಹೇಯ ಕೃತ್ಯಗಳನ್ನು ಮಾಡಲಾಗಿದೆ.

ಈ ಕೃತ್ಯಗಳು ಜನರಿಗೆ ಯಾವ ರೀತಿಯಲ್ಲಿಯೂ ಉಪಕಾರ ಮಾಡಿಲ್ಲ. ಅವುಗಳಿಂದಾಗಿರುವುದು ಕೆಡುಕು ಮಾತ್ರವೇ. ಸುಟ್ಟ ಕಟ್ಟಡಗಳು ಸಾರ್ವಜನಿಕ ಸೊತ್ತುಗಳು. ನಮ್ಮ ಖರ್ಚಿನಲ್ಲೇ ಅವನ್ನು ಮತ್ತೆ ಕಟ್ಟಬೇಕಾಗುತ್ತದೆ, ಇದು ಸಹಜವಾದದ್ದೇ. ಅಂಗಡಿಗಳನ್ನು ಮುಚ್ಚಿರುವುದರಿಂದಾಗುತ್ತಿರುವ ನಷ್ಟವೂ ನಮ್ಮದೇ. ನಗರದಲ್ಲಿ ಮಾರ್ಷಲ್ ಲಾ ಜಾರಿಗೊಳಿಸಿರುವುದರಿಂದ ಹಲವು ನಿರಪರಾಧಿ ಜೀವಗಳೂ ನಷ್ಟವಾಗಿವೆಯೆಂದು ಹೇಳಲಾಗಿದೆ. ಇದು ನಿಜವಾಗಿದ್ದರೆ, ಅದಕ್ಕೂ ಮೇಲೆ ವಿವರಿಸಿದ ಕೃತ್ಯಗಳೇ ಕಾರಣ. ಇದರಿಂದಾಗಿ ಇಲ್ಲಿ ಸಂಭವಿಸಿರುವ ಘಟನೆಗಳು ನಮಗೆ ಕೆಡುಕನ್ನಲ್ಲದೆ ಬೇರೇನನ್ನೂ ಮಾಡಿಲ್ಲ ಎಂಬುದು ಗೋಚರವಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಸತ್ಯಾಗ್ರಹ ಚಳುವಳಿಗೆ ಅವು ಬಹುದೊಡ್ಡ ಹಾನಿ ಉಂಟುಮಾಡಿವೆ. ನನ್ನ ಬಂಧನವಾದಾಗ ಶಾಂತಿಯುತವಾದ ಪ್ರತಿಭಟನೆ ಪಡೆದಿದ್ದ ಪಕ್ಷದಲ್ಲಿ, ರೌಲಟ್ ಶಾಸನವು ಕಾನೂನು ಕಡತದಿಂದ ತೊಲಗಿ ಹೋಗುತ್ತಿತ್ತು, ಅಥವಾ ಈ ಹೊತ್ತಿಗೆ ತೊಲಗಿ ಹೋಗುವ ಸ್ಥಿತಿಯಲ್ಲಿರುತ್ತಿತ್ತು. ಈಗ ಆ ಶಾಸನವನ್ನು ತೆಗೆದುಹಾಕುವ ವಿಚಾರ ವಿಳಂಬವಾದರೆ ಆಶ್ಚರ್ಯವೇನಲ್ಲ. ಶುಕ್ರವಾರ ನನ್ನನ್ನು ಬಿಡುಗಡೆ ಮಾಡಿದಾಗ ನನ್ನ ಯೋಜನೆ ಇದ್ದದ್ದು, ಮತ್ತೆ ದಸ್ತಗಿರಿಯಾಗಲು ದೆಹಲಿಗೆ ಶನಿವಾರ ಹೊರಟುಬಿಡಬೇಕು ಎಂಬುದಾಗಿ. ಹಾಗೆ ಮಾಡಿದ್ದರೆ ಅದು ಚಳುವಳಿಯ ಶಕ್ತಿಯನ್ನು ವರ್ಧಿಸುತ್ತಿತ್ತು. ಈಗ ದೆಹಲಿಗೆ ಹೋಗುವುದಕ್ಕೆ ಬದಲಾಗಿ ನಮ್ಮ ಜನದ ವಿರುದ್ಧವಾಗಿಯೇ ನಾನು ಸತ್ಯಾಗ್ರಹ ಹೂಡಬೇಕಾಗಿದೆ. ರೌಲಟ್ ಶಾಸನವನ್ನು ತೆಗೆದು ಹಾಕಿಸಲು ಪ್ರಾಣ ಹೋಗುವವರೆಗೂ ಬೇಕಾದರೂ ಸತ್ಯಾಗ್ರಹ ಆಚರಿಸುವುದು ಹೇಗೆ ನನ್ನ ದೃಢನಿರ್ಧಾರವಾಗಿದೆಯೇ, ಹಾಗೆಯೇ ಈಗ ನಡೆದುಹೋಗಿರುವ ಹಿಂಸಾಚರಣೆಗಳಿಗಾಗಿ ನಮ್ಮ ವಿರುದ್ಧವಾಗಿಯೇ ಸತ್ಯಾಗ್ರಹ ಹೂಡಿಕೊಳ್ಳಲೇಬೇಕಾದ ಸಂದರ್ಭ ಇದೀಗ ಒದಗಿದೆ ಎಂದು ನಾವು ಭಾವಿಸುತ್ತೇನೆ. ಎಲ್ಲಿಯವರೆಗೆ ನಾವು ಸಂಪೂರ್ಣ ಶಾಂತಿಯನ್ನು ಪಾಲಿಸುವುದಿಲ್ಲವೋ, ದೇಹಕ್ಕೂ ಆಸ್ತಿಪಾಸ್ತಿಗೂ ಹಿಂಸೆ ಎಸಗುವುದನ್ನು ನಿಲ್ಲಿಸುವುದಿಲ್ಲವೋ, ಅಲ್ಲಿಯ ವರೆಗೂ ನನ್ನ ದೇಹವನ್ನು ಬಲಿಗೊಟ್ಟಾದರೂ ಅದನ್ನು ನಾನು ನಡೆಸುತ್ತೇನೆ. ಇನ್ನು ಮುಂದೆ ನಾವು ಇಂಥಹ ತಪ್ಪುಗಳನ್ನು ಮಾಡುವುದಿಲ್ಲ ಎಂದು ನನಗೆ ನಂಬಿಕೆ ಇಲ್ಲದಿದ್ದರೆ ನಾನು ಹೇಗೆ ತಾನೆ ಬಂಧನವನ್ನು ಅರಸಿಕೊಂಡು ಹೋಗಲಾದೀತು? ಸತ್ಯಾಗ್ರಹ ಚಳುವಳಿಯನ್ನು ಸೇರಲು ಬಯಸುವವರು ಅಥವಾ ಅದಕ್ಕೆ ನೆರವಾಗಬೇಕೆನ್ನುವವರು ಹಿಂಸೆಯಿಂದ ಸಂಪೂರ್ಣವಾಗಿ ದೂರವಾಗಬೇಕು. ನನ್ನನ್ನು ಮತ್ತೆ ಬಂಧಿಸುವುದೋ ಅಥವಾ ಅಂಥಹ ಇನ್ನೂ ಯಾವುದೇ ಘಟನೆಗಳು ಸಂಭವಿಸಿದರೂ ಅವರು ಹಿಂಸಾಕೃತ್ಯಕ್ಕೆ ಶರಣಾಗಬಾರದು. ಬ್ರಿಟಿಷರು, ಹೆಂಗಸರು

ಗಂಡಸರು ಸಹ, ತಮ್ಮ ಮನೆಗಳನ್ನು ಬಿಟ್ಟು ಹೋಗಿ ಸಾರ್ವಜನಿಕ ರಕ್ಷಣಾ ಸ್ಥಳಗಳಲ್ಲಿ ಅಡಗಿರಬೇಕಾಗಿ ಬಂದಿದೆ: ಏಕೆಂದರೆ ನಮ್ಮಿಂದ ಅಪಾಯವಿಲ್ಲ ಎಂದು ಅವರಿಗಿದ್ದ ನಂಬಿಕೆಗೆ ತೀವ್ರ ಆಘಾತ ಉಂಟಾಗಿದೆ. ಸ್ವಲ್ಪವೇ ಸ್ವಲ್ಪ ಆಲೋಚಿಸಿದರೂ ಗೊತ್ತಾಗುತ್ತದೆ, ಇದು ನಮಗೆ ತಲೆತಗ್ಗಿಸುವ ವಿಚಾರ ಎನ್ನುವುದು. ಈ ಪರಿಸ್ಥಿತಿ ಎಷ್ಟು ಬೇಗ ನಿಂತರೆ ಅಷ್ಟೂ ನಮಗೆ ಒಳ್ಳೆಯದು. ಅವರೂ ನಮ್ಮ ಸಹೋದರರು, ನಮ್ಮ ದೇಹದಷ್ಟೇ ಅವರ ದೇಹವೂ ಪವಿತ್ರ ಎಂಬ ನಂಬಿಕೆಯನ್ನು ಅವರಲ್ಲಿ ನಾನು ಪ್ರಚೋದಿಸಬೇಕು. ಇದನ್ನೇ ನಾವು ಅಭಯದಾನ ಎನ್ನುವುದು. ನಿಜವಾದ ಧರ್ಮದ ಮೊದಲ ಅಗತ್ಯ ಇದೇಯೆ. ಇದಿಲ್ಲದ ಸತ್ಯಾಗ್ರಹ ಕೇವಲ ದುರಾಗ್ರಹ."

"ನಮ್ಮ ಮುಂದೆ ಈಗ ಎರಡು ವಿಭಿನ್ನ ಕರ್ತವ್ಯಗಳಿವೆ. ನಾವು ಎಲ್ಲ ಬಗೆಯ ಹಿಂಸಾಚರಣೆಗಳಿಂದಲೂ ದೂರವಿರುತ್ತೇವೆ ಎಂದು ದೃಢ ಸಂಕಲ್ಪ ಮಾಡುವುದು ಒಂದು. ಇನ್ನೊಂದು, ನಾವು ಮಾಡಿದ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳುವುದು. ಪಶ್ಚಾತ್ತಾಪ ಪಟ್ಟು ನಮ್ಮ ದೋಷಗಳೇನೆಂಬುದನ್ನು ಅರ್ಥ ಮಾಡಿಕೊಂಡು, ಬಹಿರಂಗವಾಗಿ ಅವುಗಳನ್ನು ಒಪ್ಪಿಕೊಳ್ಳದೆ, ನಾವು ನಮ್ಮ ಮಾರ್ಗವನ್ನು ನಿಜವಾಗಿ ಬದಲಾಯಿಸಿಕೊಳ್ಳುವುದಿಲ್ಲ. ಮೊದಲನೆಯ ಹೆಜ್ಜೆಯಾಗಿ ನಮ್ಮಲ್ಲಿ ಯಾರು ಆಯುಧಗಳನ್ನು ಅಪಹರಿಸಿದ್ದಾರೋ ಅವರು ಅವುಗಳನ್ನು ಒಡನೆಯೇ ಹಿಂದಿರುಗಿ ಒಪ್ಪಿಸಿಬಿಡಬೇಕು. ನಾವು ನಿಜಕ್ಕೂ ಪಶ್ಚಾತ್ತಾಪ ಪಡುತ್ತಿದ್ದೇವೆ ಎಂಬುದನ್ನು ತೋರಿಸುವ ಸಲುವಾಗಿ ನಮ್ಮ ಕೃತ್ಯಗಳಿಂದ ಕೊಲೆಗೆ ತುತ್ತಾದವರ ಕುಟುಂಬಗಳ ನೆರವಿಗಾಗಿ ತಲಾ ಎಂಟಾಣೆಗೆ ಕಡಮೆಯಿಲ್ಲದಂತೆ ಕಾಣಿಕೆ ಒಪ್ಪಿಸಬೇಕು. ಕಳೆದ ಕೆಲವು ದಿನಗಳಿಂದ ನಡೆದಿರುವ ಭೀಕರ ಕೃತ್ಯಗಳ ಫಲಗಳನ್ನು ಹಣರೂಪದ ಎಷ್ಟೇ ದೊಡ್ಡ ಕಾಣಿಕೆಯನ್ನು ಕೊಟ್ಟರೂ ನಿವಾರಿಸಲಾಗುವುದಿಲ್ಲವಾದರೂ, ನಮ್ಮ ಕಾಣಿಕೆ ನಮ್ಮ ಪ್ರಾಯಶ್ಚಿತ್ತದ ಅಲ್ಪಸ್ವಲ್ಪ ಸಂಕೇತವಾಗಿರುತ್ತದೆ. ಈ ದುಷ್ಟಕೃತ್ಯಗಳಲ್ಲಿ ತನ್ನ ಪಾಲು ಇರಲಿಲ್ಲ ಎಂದು ನೆಪಹೇಳಿ ಈ ಕಾಣಿಕೆ ಕೊಡದೆ ಯಾರೊಬ್ಬರೂ ನುಣಿಚಿಕೊಳ್ಳಲಾರರು ಎಂದು ನಾನು ಆಶಿಸುತ್ತೇನೆ ಮತ್ತು ಪ್ರಾರ್ಥಿಸಿಕೊಳ್ಳುತ್ತೇನೆ. ಏಕೆಂದರೆ ಇವುಗಳಲ್ಲಿ ಪಾಲುಗೊಳ್ಳದಿದ್ದವರು ಧೈರ್ಯಶೌರ್ಯಗಳಿಂದ ಮುನ್ನುಗ್ಗಿ ಅತ್ಯಾಚಾರವನ್ನು ಅಡಗಿಸಲು ಪ್ರಯತ್ನಿಸಿದ್ದಿದ್ದರೆ, ದೊಂಬಿಜನರ ಮುಂದೋಟವನ್ನು ತಡೆಯಬಹುದಾಗಿತ್ತು. ತಮ್ಮ ಕೃತ್ಯಗಳ ದುಷ್ಟತೆಯನ್ನು ಕೂಡಲೆ ಅವರು ಅರಿತುಕೊಳ್ಳುತ್ತಿದ್ದರು. ದೊಂಬಿಜನಕ್ಕೆ ಬೆದರಿಕೊಂಡು ದುಡ್ಡುಕೊಡುವ ಬದಲಾಗಿ, ಸಾವಿನ ಹೆದರಿಕೆಯನ್ನು ಬಿಟ್ಟು, ಕಟ್ಟಡಗಳನ್ನೂ ನಿರಪರಾಧಿಗಳನ್ನೂ ರಕ್ಷಿಸಲು ಧಾವಿಸಿದ್ದಿದ್ದರೆ, ಹಾಗೆ ಮಾಡುವಲ್ಲಿ ನಾವು ನಿಜವಾಗಿಯೂ ಸಫಲರಾಗುತ್ತಿದ್ದೆವೆಂದು ಹೇಳುವ ಸಾಹಸ ಮಾಡುತ್ತಿದ್ದೇನೆ. ಈ ಬಗೆಯ ಧೈರ್ಯ ನಮ್ಮಲ್ಲಿದ್ದ ಹೊರತು, ಗಲಭೆಖೋರರು ಯಾವಾಗಲೂ ನಮ್ಮನ್ನು ತಮ್ಮ ದುಷ್ಕೃತ್ಯಗಳಲ್ಲಿ ಭಾಗಿಗಳಾಗುವಂತೆ ಬೆದರಿಸುತ್ತಲೇ ಇರುತ್ತಾರೆ. ಸಾವಿನ ಭೀತಿ ನಮ್ಮಲ್ಲಿ ನಿಜವಾದ ಧೈರ್ಯ ಧರ್ಮಗಳೆರಡನ್ನೂ ಇಲ್ಲವಾಗಿಸಿಬಿಡುತ್ತದೆ. ಏಕೆಂದರೆ

ಧೈರ್ಯದ ಅಭಾವವೆಂದರೂ ಒಂದೇ, ಧರ್ಮಶ್ರದ್ಧೆಯ ಅಭಾವವೆಂದರೂ ಒಂದೇ. ಹಿಂಸೆಯನ್ನು ತಡೆಯಲು ಏನನ್ನೂ ಮಾಡದೆ, ಈಗ ನಡೆದು ಹೋಗಿರುವ ಪಾಪಕೃತ್ಯಗಳಲ್ಲಿ ನಾವು ಭಾಗಿಗಳಾಗಿದ್ದೇವೆ. ಆದ್ದರಿಂದ ಅದಕ್ಕೆ ನಮ್ಮ ಪಶ್ಚಾತ್ತಾಪ ಸೂಚಕವಾಗಿ ನಮ್ಮ ಅತ್ಯಲ್ಪ ಕಾಣಿಕೆಯನ್ನಾದರೂ ನೀಡಲೇಬೇಕು. ಒಂದೊಂದು ಗುಂಪೂ ಕಾಣಿಕೆಯನ್ನು ಕೂಡಿಸಿ ಸಂಗ್ರಹಿಸುವವರ ಮೂಲಕ ನನಗೆ ತಲಪಿಸಬಹುದು. ಈ ಪಾಪಗಳ ಪರಿಹಾರಕ್ಕಾಗಿ ನಿಮಗೆ ಸಾಧ್ಯವಾದರೆ ಇಪ್ಪತ್ತುನಾಲ್ಕು ಗಂಟೆಗಳ ಉಪವಾಸವನ್ನೂ ಆಚರಿಸಬೇಕೆಂದೂ ನಾನು ಸಲಹೆಕೊಡುತ್ತೇನೆ. ಈ ಉಪವಾಸ ಖಾಸಗಿಯಾಗಿ ನಡೆಯಬೇಕು, ಗುಂಪುಗುಂಪಾಗಿ ಸ್ನಾನಘಟ್ಟಗಳಿಗೆ ಹೋಗಬೇಕಾದ ಅಗತ್ಯವಿಲ್ಲ.

"ಇದುವರೆಗೂ ನಿಮ್ಮ ಕರ್ತವ್ಯ ಎಂದು ನನಗೆ ಏನು ತೋರುತ್ತದೆಯೋ ಅದರ ಕಡೆಗೆ ನಿಮ್ಮ ಗಮನ ಸೆಳೆದಿದ್ದೇನೆ. ನನ್ನ ಸ್ಥಿತಿಯನ್ನು ನಾನು ಈಗ ಪರ್ಯಾಲೋಚಿಸಬೇಕು. ನನ್ನ ಹೊಣೆಗಾರಿಕೆ ನಿಮ್ಮದಕ್ಕಿಂತ ಕೋಟಿಪಾಲು ದೊಡ್ಡದು. ಸತ್ಯಾಗ್ರಹವನ್ನು ಜನರಮುಂದೆ ಅವರ ಒಪ್ಪಿಗೆಗಾಗಿ ನಾನು ಇರಿಸಿದ್ದೇನೆ. ನಿಮ್ಮ ನಡುವೆ ನಾಲ್ಕು ವರ್ಷಕಾಲ ಬದುಕಿದ್ದೇನೆ. ಅಹಮದಾಬಾದಿನ ವಿಶೇಷ ಸೇವೆಗಾಗಿ ನನ್ನ ಅಲ್ಪಸ್ವಲ್ಪ ಕೊಡುಗೆಯನ್ನೂ ಕೊಟ್ಟಿದ್ದೇನೆ. ಇಲ್ಲಿಯ ಪೌರರಿಗೆ ನನ್ನ ವಿಚಾರಗಳು ತೀರ ಅಪರಿಚಿತವೇನಲ್ಲ.

"ನಾನು ಯುಕ್ತಾಯುಕ್ತ ವಿವೇಚನೆಯಿಲ್ಲದೆ ಸಾವಿರಾರು ಜನರನ್ನು ಚಳುವಳಿಗೆ ಸೇರುವಂತೆ ಮನವೊಲಿಸಿದ್ದೇನೆಂದು ನನ್ನ ಮೇಲೆ ಆಪಾದಿಸಲಾಗಿದೆ. ಈ ಆಪಾದನೆ ಸ್ವಲ್ಪಮಟ್ಟಿಗೆ ನಿಜ, ಆದರೆ ಸ್ವಲ್ಪಮಟ್ಟಿಗೆ ಮಾತ್ರ. ಸತ್ಯಾಗ್ರಹ ಚಳುವಳಿಯಿಲ್ಲದೆ ಇದ್ದಿದ್ದರೆ ಈ ಹಿಂಸಾಕೃತ್ಯಗಳು ನಡೆಯುತ್ತಿರಲಿಲ್ಲ ಎಂದು ಹೇಳಲು ಯಾರಿಗಾದರೂ ಹಕ್ಕುಂಟು. ಇದಕ್ಕೆ ನಾನು ಈಗಾಗಲೇ ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇನೆ. ನನಗೆ ನಿಜವಾಗಿಯೂ ಸಹಿಸಲಸಾಧ್ಯದ ಪ್ರಾಯಶ್ಚಿತ್ತವೆಂದರೆ ಮತ್ತೆ ಬಂಧನವನ್ನು ಅರಸಿ ನಾನು ದೆಹಲಿಗೆ ಹೋಗಬೇಕಾಗಿದ್ದದ್ದನ್ನು ಮುಂದೆ ಹಾಕಬೇಕಾಗಿ ಬಂದದ್ದು ಮತ್ತು ಸತ್ಯಾಗ್ರಹವನ್ನು ಸದ್ಯಕ್ಕೆ ಪರಿಮಿತ ಕ್ಷೇತ್ರಕ್ಕೆ ಸೀಮಿತಗೊಳಿಸಬೇಕೆಂಬ ಸಲಹೆ ಕೊಡಬೇಕಾಗಿ ಬಂದದ್ದು. ಇದು ನನಗೆ ಗಾಯಕ್ಕಿಂತಲೂ ಹೆಚ್ಚು ಯಾತನಾ ಪೂರ್ಣವಾಗಿದೆ. ಆದರೆ ಈ ಪ್ರಾಯಶ್ಚಿತ್ತ ಸಾಲದು. ಈಗ ನಾನು ಮೂರುದಿನ ಅಂದರೆ ಎಪ್ಪತ್ತೆರಡು ಗಂಟೆಗಳ ಕಾಲದ ಉಪವಾಸ ವ್ರತ ಕೈಗೊಳ್ಳಲು ನಿರ್ಧರಿಸಿದ್ದೇನೆ. ನನ್ನ ಉಪವಾಸ ಯಾರಿಗೂ ನೋವುಂಟು ಮಾಡುವುದಿಲ್ಲವೆಂದು ಆಶಿಸುತ್ತೇನೆ. ಇಪ್ಪತ್ತನಾಲ್ಕು ಗಂಟೆಗಳ ಉಪವಾಸ ನಿಮಗೆಷ್ಟೋ ಅದಕ್ಕಿಂತ ನನಗೆ ಎಪ್ಪತ್ತೆರಡು ಗಂಟೆಗಳ ಉಪವಾಸ ಸುಲಭ ಎಂದು ನಂಬಿದ್ದೇನೆ. ನಾನು ಸಹಿಸಿಕೊಳ್ಳಬಲ್ಲ ದಂಡನೆಯನ್ನೇ ನನ್ನ ಮೇಲೆ ವಿಧಿಸಿಕೊಂಡಿದ್ದೇನೆ. ನನಗೆ ಆಗುವ ಯಾತನೆಯ ಬಗೆಗೆ ನಿಮಗೆ ಅನುಕಂಪವುಂಟಾದರೆ, ನಾನು ಈಗ ತಾನೆ ಗೋಳಾಡಿದ ಅಪರಾಧಗಳಲ್ಲಿ ನೀವು ಎಂದೆಂದಿಗೂ ಭಾಗಿಗಳಾಗದಿರಲು ಅದು ನಿಮ್ಮನ್ನು ತಡೆಯಬೇಕು. ಹಿಂಸೆಯಿಂದಲಾಗಲಿ, ಭಯೋ

ತ್ಪಾದಕ ಕೃತ್ಯಗಳಿಂದಾಗಲಿ ನಾವು ಸ್ವರಾಜ್ಯವನ್ನು ಪಡೆಯಲಾರೆವು, ನಮ್ಮ ದೇಶಕ್ಕೆ ಯಾವ ಉಪಕಾರವನ್ನೂ ಮಾಡಲಾರೆವು ಎನ್ನುವುದನ್ನು ತಿಳಿದುಕೊಳ್ಳಿ. ಸ್ವರಾಜ್ಯವನ್ನು ಪಡೆಯಲು ಹಿಂಸಾ ಪ್ರವಾಹವನ್ನೇ ನಾವು ಹಾಯಬೇಕಾದ ಪಕ್ಷದಲ್ಲಿ; ಮತ್ತು ನಮಗಾಗಿರುವ ಅನ್ಯಾಯಗಳನ್ನು ಪರಿಹರಿಸಿಕೊಳ್ಳಲು ನಾವು ಇಂಗ್ಲಿಷರ ವಿಷಯದಲ್ಲಿ ದುರ್ಭಾವನೆಯನ್ನು ತಾಳಬೇಕಾದ, ಅವರ ಕಗ್ಗೊಲೆಗೈಯಬೇಕಾದ ಪಕ್ಷದಲ್ಲಿ, ನನಗೆ ಆ ಸ್ವರಾಜ್ಯವೂ ಬೇಡ, ಅನ್ಯಾಯಗಳ ಆ ಪರಿಹಾರವೂ ಬೇಡ. ಅಹಮದಾಬಾದು ಸತ್ಯದ ಹೆಸರಿನಲ್ಲಿ ಹಿಂಸೆಗೆ ಮನ್ನಣೆ ನೀಡುವ ಪಕ್ಷಕ್ಕೆ ನನಗೆ ಬದುಕು. ಬಾಳಲು ಯೋಗ್ಯವೇ ಅಲ್ಲವೆನಿಸುತ್ತದೆ. ಕವಿಯು ಗುಜರಾತನ್ನು 'ಗರ್ವಿ' ಅಂದರೆ ಮಹಾನ್ ಮತ್ತು ವೈಭವೋಪೇತವಾದುದು ಎಂದು ಬಣ್ಣಿಸಿದ್ದಾನೆ. ಅದರ ರಾಜಧಾನಿ ಅಹಮದಾಬಾದು ಧಾರ್ಮಿಕ ಮನೋಭಾವವುಳ್ಳ ಅನೇಕ ಹಿಂದೂ ಮತ್ತು ಮುಸ್ಲಿಮರ ನೆಲೆವೀಡು. ಇಂಥದೊಂದು ನಗರದಲ್ಲಿ ಬಹಿರಂಗವಾಗಿ ಹಿಂಸಾಕೃತ್ಯವನ್ನು ಆಚರಿಸುವುದೆಂದರೆ ಸಾಗರವೇ ಹತ್ತಿಕೊಂಡು ಉರಿಯುವಹಾಗೆ. ಆ ಬೆಂಕಿಯನ್ನು ಆರಿಸಬಲ್ಲವರು ಯಾರು? ನಾನು ಆ ಬೆಂಕಿಯಲ್ಲಿ ದಗ್ಧವಾಗಿ ಹೋಗಲು ನನ್ನನ್ನೇ ಆಹುತಿಯಾಗಿ ಅರ್ಪಿಸಿಕೊಳ್ಳಬಲ್ಲೆ, ಅಷ್ಟೆ. ಆದ್ದರಿಂದ ನನ್ನ ಉಪವಾಸ ವ್ರತದಿಂದ ಯಾವ ಫಲವನ್ನು ನಾನು ನಿರೀಕ್ಷಿಸುತ್ತಿದ್ದೇನೆಯೊ ಅದನ್ನು ಪಡೆಯಲು ನೀವೆಲ್ಲ ಸಹಾಯವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಅಯೋಗ್ಯವಾದ ಕೃತ್ಯಗಳಿಗೆ ನಿಮ್ಮನ್ನೆಳೆದ ಆ ಪ್ರೇಮವೇ ಈಗ ವಾಸ್ತವಿಕತೆಯ ಪ್ರಜ್ಞೆಯನ್ನು ನಿಮ್ಮಲ್ಲಿ ಎಚ್ಚರಗೊಳಿಸಲಿ. ನಿಜಕ್ಕೂ ಆ ಪ್ರೀತಿ ನಿಮ್ಮನ್ನು ಬೋಧಿಸುತ್ತಲೇ ಹೋಗುವ ಪಕ್ಷಕ್ಕೆ ನಾನು ಆಮರಣಾಂತ ಉಪವಾಸ ಕೈಗೊಳ್ಳಬೇಕಾದ ಅಗತ್ಯಬಾರದಂತೆ ಜಾಗರೂಕರಾಗಿರಿ.

"ಮೇಲೆ ನಾನು ಗೋಳಿಟ್ಟ ಹಿಂಸಾಕೃತ್ಯಗಳನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿರುವಂತೆ ತೋರುತ್ತದೆ. ಅವುಗಳಲ್ಲೊಂದು ನಿರ್ದಿಷ್ಟ ಯೋಜನೆ ಇರುವಂತೆ ಕಾಣುತ್ತಿದೆ. ಸುಶಿಕ್ಷಿತ ಹಾಗೂ ಬುದ್ಧಿಶಾಲಿಯಾದ ವ್ಯಕ್ತಿಯೋ ವ್ಯಕ್ತಿಗಳೋ ಅವುಗಳ ಹಿಂದೆ ಇದ್ದಿರಲೇಬೇಕೆಂಬುದು ನನಗೆ ಚೆನ್ನಾಗಿ ಗೊತ್ತು. ಅವರು ವಿದ್ಯಾವಂತರಾಗಿರಬಹುದು, ಆದರೆ ಅವರ ವಿದ್ಯೆ ಅವರಿಗೆ ತಿಳಿವು ತಂದುಕೊಟ್ಟಿಲ್ಲ. ನಿಮ್ಮನ್ನು ಇಂತಹ ದುಷ್ಕೃತ್ಯಗಳನ್ನು ಮಾಡುವಂತೆ ದುರ್ಮಾರ್ಗಕ್ಕೆ ಸೆಳೆದವರು ಅಂತಹ ಜನ. ಅಂಥವರಿಂದ ತಪ್ಪುದಾರಿಗೆ ಬೀಳಬೇಡಿ ಎಂದು ವಿನಂತಿಸಿಕೊಳ್ಳುತ್ತೇನೆ. ಅವರಿಗೂ ತಮ್ಮ ದೃಷ್ಟಿಯನ್ನು ಗಂಭೀರವಾಗಿ ಪುನರ್ವಿಮರ್ಶೆ ಮಾಡಿಕೊಳ್ಳಬೇಕು ಎಂದು ಕೇಳುತ್ತೇನೆ. ಅವರಿಗೂ ನಿಮಗೂ ನನ್ನ 'ಹಿಂದ್ ಸ್ವರಾಜ್' ಪುಸ್ತಕವನ್ನು ಓದಿರೆಂದು ಹೇಳುತ್ತೇನೆ. ಅದನ್ನು ಕಾನೂನು ಉಲ್ಲಂಘನೆ ಆಗದಂತೆಯೇ ಮುದ್ರಿಸಿ ಪ್ರಕಟಿಸಬಹುದು ಎಂದು ತಿಳಿದು ಬರುತ್ತದೆ.

"ಗಿರಣಿ ಕಾರ್ಮಿಕರಲ್ಲಿ ನೂಲುಕಾರರು ಕೆಲವು ದಿನಗಳಿಂದ ಮುಷ್ಕರ ಹೂಡಿದ್ದಾರೆ. ಅವರು ತಕ್ಷಣವೇ ಕೆಲಸಕ್ಕೆ ಹಿಂದಿರುಗಬೇಕು ಎಂದು ಸಲಹೆ ಮಾಡುತ್ತೇನೆ. ಕೆಲಸಕ್ಕೆ

ಹಿಂದಿರುಗಿ ಅವರ ಬೇಡಿಕೆ ಏನಿದೆಯೋ ಅವನ್ನು ನ್ಯಾಯಬದ್ಧವಾಗಿ ಕೇಳಲಿ. ಯಾವುದೋ ಹೆಚ್ಚುವರಿ ಬೇಡಿಕೆಗಾಗಿ ಬಲ ಪ್ರಯೋಗದ ಮಾರ್ಗ ಅನುಸರಿಸುವುದು ಆತ್ಮಘಾತಕ ವಾಗುತ್ತದೆ. ಗಿರಣಿ ನೌಕರರೆಲ್ಲರೂ ಹಿಂಸಾಮಾರ್ಗವನ್ನು ಸಂಪೂರ್ಣವಾಗಿ ತೊರೆಯ ಬೇಕು ಎಂದು ವಿನಂತಿಸಿಕೊಳ್ಳುತ್ತೇನೆ. ಅದು ಅವರಿಗೇ ಹಿತವಾದದ್ದು. ಅವರು ನನಗೂ ಅನಸೂಯ ಬೆಹೆನ್ ಅವರಿಗೂ ಹಿಂಸಾಚರಣೆಯನ್ನು ಸರ್ವದಾ ವರ್ಜಿಸು ವುದಾಗಿ ಮಾತುಕೊಟ್ಟದ್ದನ್ನು ನೆನಪಿಗೆ ತರುತ್ತೇನೆ. ಈಗ ಎಲ್ಲರೂ ಕೆಲಸಕ್ಕೆ ಹಿಂದಿರು ಗುತ್ತಾರೆಂದು ಆಶಿಸುತ್ತೇನೆ."

ಗಾಂಧೀಜಿಯವರ ಭಾಷಣ ತಕ್ಷಣವೇ ಪರಿಣಾಮ ಉಂಟು ಮಾಡಿತು. ಅಹಮದಾ ಬಾದಿನಲ್ಲಿ ಗಲಭೆಗಳು ನಿಂತುವು. ಮಿಲಿಟರಿ ಘೋಷಣೆಯನ್ನು ಹಿಂತೆಗೆದುಕೊಳ್ಳಲಾಯಿತು

'ಇಂಡಿಯಾ ೧೯೧೯' ಎಂಬ ಸರಕಾರೀ ಪ್ರಕಟಣೆಯು ಭಾರತದ ರಾಜಕೀಯ ರಂಗದಲ್ಲಿ ಗಾಂಧೀಜಿಯ ಉದಯವಾದದ್ದನ್ನು ಸಂಕ್ಷೇಪಿಸಿತು:

"ಮಿ. ಗಾಂಧೀಯವರನ್ನು ಉನ್ನತ ಆದರ್ಶಗಳು ಮತ್ತು ಸಂಪೂರ್ಣ ನಿಸ್ವಾರ್ಥತೆ ಯಿರುವ ಟಾಲ್‌ಸ್ಟಾಯಿಯ ಅನುಯಾಯಿ ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಅವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಪರವಾಗಿ ನಿಂತಿದ್ದಾಗಿನಿಂದಲೂ, ಈ ದೇಶದ ಜನರಿಂದ ಅವರು ಸಾಂಪ್ರದಾಯಿಕವಾದ ಸಕಲ ಗೌರವವನ್ನೂ ಪಡೆಯುತ್ತ ಬಂದಿದ್ದಾರೆ. ವೈರಾಗ್ಯಶಾಲಿಯೆಂದು ಸರ್ವಾದರಣೀಯನಾದ ಒಬ್ಬ ಧಾರ್ಮಿಕ ನಾಯಕನಿಗೆ ಭಕ್ತಿ ಅರ್ಪಿಸುವುದು ಪ್ರಾಚ್ಯದ ಪರಂಪರೆಯೇ ಆಗಿದೆ. ಈತನ ವಿಷಯ ದಲ್ಲಿ ಹೇಳುವುದಾದರೆ, ಈತನ ಮೆಚ್ಚುಗರು ಯಾವುದೊಂದೇ ಧಾರ್ಮಿಕ ಪಂಥಕ್ಕೆ ಸೀಮಿತರಾದವರಲ್ಲ. ಅಹಮದಾಬಾದಿನಲ್ಲಿ ಇವರು ವಾಸ ಮಾಡತೊಡಗಿದಂದಿನಿಂದಲೂ ಹಲವು ಬಗೆಯ ಸಮಾಜ ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಆಸಕ್ತಿ ವಹಿಸುತ್ತ ಬಂದಿದ್ದಾರೆ. ದಲಿತರಾದವರೆಂದು ಭಾವಿಸುವ ಯಾವನೇ ಒಬ್ಬ ವ್ಯಕ್ತಿಯ ಪರವಾಗಿ ಅಥವಾ ವರ್ಗದ ಪರವಾಗಿ ತಾವು ಸಶಸ್ತ್ರರಾಗಿ ನಿಲ್ಲಲು ಯಾವಾಗಲೂ ಮುಂದಾಗಿರು ತ್ತಾರೆ. ಇದು ಅವರ ದೇಶಬಾಂಧವರಿಗೆ ಅವರು ಪ್ರಿಯರಾಗುವಂತೆ ಮಾಡಿವೆ. ಮುಂಬಯಿ ಪ್ರೆಸಿಡೆನ್ಸಿಯ ಅನೇಕ ಭಾಗಗಳ ನಗರ ಹಾಗೂ ಗ್ರಾಮೀಣ ಜನತೆಯ ಮೇಲೆ ಅವರ ಪ್ರಭಾವ ಪ್ರಶ್ನಾತೀತವಾಗಿದೆ. ಭಕ್ತಿಗೌರವಗಳಿಂದ ಜನ ಅವರನಲ್ಲಿ ಆದರಿಸುತ್ತಾರೆ. 'ಪೂಜೆ' ಎಂಬ ಶಬ್ದ ಆ ಗೌರವಕ್ಕೆ ಅಷ್ಟೇನೂ ಹೆಚ್ಚಿನ ಶಬ್ದವಲ್ಲ."

ಜಲಿಯನ್‌ವಾಲಾ ಬಾಗ್

೧೯೧೯

೧೯೧೯ರ ಏಪ್ರಿಲ್ ೬ ಭಾನುವಾರದ ಮುಂದಿನ ಒಂದು ವಾರವೆಲ್ಲ ಎಲ್ಲೆಲ್ಲೂ ಹಿಂದೆಂದೂ ಕಾಣದಂತಹ ಉತ್ಸಾಹ ತುಂಬಿತ್ತು. ಅಲ್ಲಿ ಇಲ್ಲಿ ಹಿಂಸಾಕೃತ್ಯಗಳು ಕಂಡು ಬಂದುವು. ಅವನ್ನು ಅಡಗಿಸಲು ಸರ್ಕಾರ ಉಗ್ರವಾದ ಕ್ರಮಗಳನ್ನು ಕೈಗೊಂಡಿತು.

ಪಂಜಾಬಿನಲ್ಲಿ ಎಲ್ಲವೂ ಶಾಂತವಾಗಿತ್ತು. ಲಾಹೋರ್ ಮತ್ತು ಅಮೃತಸರಗಳಲ್ಲಿ ಸಭೆಗಳು ನಡೆದುವು. ಏಪ್ರಿಲ್ ೬ರಂದು ಪ್ರಾಂತ್ಯಾದ್ಯಂತ ಯಶಸ್ವಿಯಾಗಿಯೂ ಶಾಂತಿ ಯುತವಾಗಿಯೂ ಹರತಾಳದ ಆಚರಣೆ ನಡೆಯಿತು. ಮಾರ್ಚಿ ೩೦ರಂದು ಅಮೃತ ಸರದಲ್ಲೂ ಹರತಾಳ ಆಚರಿಸಲಾಯಿತು. ಜನತೆ, ಕಾಂಗ್ರೆಸ್‌ಮನೋಭಾವದವರಾಗು ವುದನ್ನು ತಡೆಯಲು ಲೆಫ್ಟಿನೆಂಟ್ ಗವರ್ನರ್ ಸರ್ ಮೈಕಲ್ ಓ ಡ್ವೈಯರ್ ಪ್ರತಿಜ್ಞೆ ಮಾಡಿದ್ದ. ಏಪ್ರಿಲ್ ೯ರಂದು ಹಿಂದೂಗಳೂ ಮುಸ್ಲಿಮರೂ ಭ್ರಾತೃಭಾವದಿಂದ ಭಾರಿ ಮೆರವಣಿಗೆ ನಡೆಸಿ ರಾಮನವಮಿಯನ್ನು ಶಾಂತಿಯಿಂದ ಆಚರಿಸಿದರು. ಏಪ್ರಿಲ್ ೧೦ರಂದು ಬೆಳಿಗ್ಗೆ ಡಾ. ಸತ್ಯಪಾಲ್ ಮತ್ತು ಡಾ. ಕಿಚ್ಲು ಅವರನ್ನು ಕಾರಿನಲ್ಲಿ ಒಂದು ಧರ್ಮಶಾಲೆಗೆ ಒಯ್ಯಲಾಯಿತು. ಜನರು ನಗರ ಪ್ರದೇಶವನ್ನು ಪ್ರವೇಶಿಸದಂತೆ ತಡೆಯಲು ಸ್ಥಳೀಯ ಅಧಿಕಾರಿಗಳು ಪೊಲೀಸ್ ಮತ್ತು ಮಿಲಿಟರಿ ಬಂದೋಬಸ್ತು ಏರ್ಪಡಿಸಿದರು. ಅವರ ಗಡೀಪಾರು ಮತ್ತು ಸ್ಥಾನಬದ್ಧತೆಗಳಿಗೆ ಭಾರತ ರಕ್ಷಣಾ ಕಾನೂನಿನ ಪ್ರಕಾರ ಆಜ್ಞೆ ಹೊರಟಿತು.

ಏಪ್ರಿಲ್ ೧೦ರ ಮಧ್ಯಾಹ್ನ ನಾಯಕರ ಬಂಧನದ ಸುದ್ದಿ ಅಮೃತಸರ ನಗರದಲ್ಲಿ ಹರಡಿತು. ಹರತಾಳವನ್ನು ಘೋಷಿಸಲಾಯಿತು. ಡಾ. ಸತ್ಯಪಾಲ್ ಮತ್ತು ಡಾ. ಕಿಚ್ಲು ಅವರನ್ನು ಬಿಡುಗಡೆ ಮಾಡುವಂತೆ ಕೇಳಲು ಜನರು ಡೆಪ್ಯುಟಿ ಕಮಿಷನರ್ ಅವರ ನಿವಾಸದತ್ತ ಮೆರವಣಿಗೆ ನಡೆದರು. ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಮೆರವಣಿಗೆಯನ್ನು ತಡೆದು ನಗರದ ಕಡೆಗೆ ಬಲಾತ್ಕಾರದಿಂದ ಹಿಂದಿರುಗಿಸಲಾಯಿತು. ಶಸ್ತ್ರರಹಿತರಾದ ಜನದತ್ತ ಎರಡು ಸಲ ಗುಂಡು ಹಾರಿಸಿದರು. ಅನೇಕರು ಸತ್ತರು. ಕೋಪೋದ್ರಿಕ್ತವಾದ ಗುಂಪು ಹಿಂಸಾಕೃತ್ಯದಲ್ಲಿ ತೊಡಗಿತು. ಐದಾರು ಜನ ಇಂಗ್ಲಿಷರನ್ನು ಕೊಂದು, ಅವರ ಆಫೀಸುಗಳಲ್ಲಿ ಕುಳಿತು, ಅವರ ಬ್ಯಾಂಕುಗಳನ್ನು ಸುಟ್ಟು ಹುಚ್ಚು ಹುಚ್ಚು ಪ್ರತೀಕಾರ ಮಾಡಿತು. ಕೆಲವು ಸಾರ್ವಜನಿಕ ಕಟ್ಟಡಗಳನ್ನು ಸುಟ್ಟು ಟೆಲಿಫೋನ್ ತಂತಿಗಳನ್ನು ಕತ್ತರಿಸಿತು. ಸೇನೆಯ ತುಕಡಿಗಳನ್ನು ನಗರಕ್ಕೆ ಬೇಗ ನುಗ್ಗಿಸಿ ಶಾಂತಿಯನ್ನು ತರಲಾಯಿತು.

ಏಪ್ರಿಲ್ ೧೧ರಂದು ಒಂದು ಭಾರೀ ಸ್ಮಶಾನಯಾತ್ರೆಯ ಮೆರವಣಿಗೆಯು ಶಾಂತಿಯುತವಾಗಿ ನಡೆಯಿತು. ಅಂದೇ ಸಂಜೆ ಜನರಲ್ ಡೈಯರ್ ನಗರಕ್ಕೆ ಬಂದುಮುಟ್ಟಿ ಪಡೆಗಳ ನಾಯಕತ್ವ ವಹಿಸಿದ. ಮರುದಿನ ಅನೇಕ ದಸ್ತಗಿರಿಗಳು ನಡೆದುವು. ಅಮೃತಸರದಲ್ಲಿ ಎಲ್ಲ ಸಭೆ ಸಮಾವೇಶಗಳನ್ನೂ ಬಹಿಷ್ಕರಿಸಿ ಘೋಷಣೆ ಹೊರಟಿತು. ಇಂಗ್ಲಿಷಿನಲ್ಲಿದ್ದ ಆ ಘೋಷಣೆಯನ್ನು ನಗರದ ಅನೇಕ ಭಾಗಗಳಲ್ಲಿ ಓದಲೂ ಇಲ್ಲ.

ಏಪ್ರಿಲ್ ೧೨ರಂದು ಜಲಿಯನ್‌ವಾಲಾಬಾಗಿನಲ್ಲಿ ಮರುದಿನ ಸಂಜೆ ೪.೩೦ಕ್ಕೆ ಒಂದು ಸಭೆ ನಡೆಯುತ್ತದೆ ಎಂದು ಪ್ರಕಟಿಸಲಾಯಿತು. ಸಭೆ ನಡೆಯುವುದನ್ನು ತಡೆಯಲು ಜನರಲ್ ಡೈಯರ್ ಯಾವುದೇ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಆದರೆ ಸಭೆ ಪ್ರಾರಂಭವಾದ ಕೂಡಲೇ ಶಸ್ತ್ರಸಜ್ಜಿತ ಕಾರುಗಳು ಮತ್ತು ಪಡೆಗಳೊಡನೆ ಅಲ್ಲಿಗೆ ಹೋಗಿ, ಯಾವುದೇ ಎಚ್ಚರಿಕೆಯನ್ನೂ ನೀಡದೆ, ಮದ್ದುಗುಂಡುಗಳು ಮುಗಿಯುವವರೆಗೂ ಗುಂಡು ಹಾರಿಸುವಂತೆ ಪಡೆಗಳಿಗೆ ಅಪ್ಪಣೆ ನೀಡಿದ.

ಆಗಿನ ದೃಶ್ಯವನ್ನು ಸರ್ ವ್ಯಾಲೆಂಟೈನ್ ಚಿರಾಲ್ ಹೀಗೆ ವರ್ಣಿಸಿದ್ದಾರೆ: "ಒಮ್ಮೆ ತೋಟವಾಗಿದ್ದು ಈಗ ಸಂತೆಗಳಿಗೂ ಸಾರ್ವಜನಿಕ ಸಭೆಗಳಿಗೂ ಪದೇ ಪದೇ ಉಪಯೋಗವಾಗುತ್ತಿರುವ ಹಾಳು ಬಯಲನ್ನು ನೋಡಿದ ಹೊರತೂ ಅದೆಂಥ ಘೋರ ದೃಶ್ಯ ಎಂಬುದನ್ನು ಅರಿಯುವುದು ಕಷ್ಟ. ಅದರ ವಿಸ್ತೀರ್ಣ ಬಹುಶಃ ಟ್ರಫಾಲ್ಗರ್ ಸ್ಕ್ವೇರಿನಷ್ಟು. ಅದರ ಸುತ್ತ ಗೋಡೆಗಳು. ಉಸಿರಾಡಲೂ ಎಡೆಯಿಲ್ಲದ ನಗರದ ರಸ್ತೆಗಳತ್ತ ಮುಖಮಾಡಿದ ನಾಡು ಮನೆಗಳ ಹಿಂಭಾಗಗಳು ಆ ಗೋಡೆಗಳ ಮೇಲೆದ್ದು ಕಾಣುತ್ತವೆ. ಸುಮಾರು ಐವತ್ತು ಜನ ರೈಫಲ್ ಸೈನಿಕರೊಂದಿಗೆ ಜನರಲ್ ಡೈಯರ್ ಯಾವ ಕಿರು ಓಣಿಯ ಮೂಲಕ ಪ್ರವೇಶಿಸಿದನೋ ಅದರ ಮೂಲಕವೇ ನಾನೂ ಪ್ರವೇಶಿಸಿದೆ. ಅವನು ನಿಂತಿದ್ದ ಎತ್ತರವಾದ ಜಾಗದಲ್ಲೇ ನಾನೂ ನಿಂತೆ. ಅಲ್ಲೇ ಆತ ಒಂದೇ ಒಂದು ಎಚ್ಚರಿಕೆಯ ಮಾತನ್ನೂ ಆಡದೆ ದಟ್ಟವಾದ ಜನಸಂದಣಿಯ ಮೇಲೆ ಸುಮಾರು ನೂರುಗಜ ದೂರದಿಂದ ಗುಂಡು ಹಾರಿಸಲು ತೊಡಗಿದ. ಜನರು ಆ ಆವರಣದಲ್ಲಿ ದೂರದಲ್ಲಿದ್ದ ಕೆಳಮಟ್ಟದಲ್ಲಿದ್ದ ಒಂದು ವೇದಿಕೆಯ ಸುತ್ತ ಸೇರಿದ್ದರು. ಅಲ್ಲಿಂದ ಭಾಷಣಗಳು ನಡೆಯುತ್ತಿದ್ದವು. ಡೈಯರ್ ಪ್ರಕಾರ ಅಲ್ಲಿದ್ದದ್ದು ಸುಮಾರು ೬,೦೦೦ ಜನ. ಇತರರ ಪ್ರಕಾರ ಅದು ೧೦,೦೦೦ಕ್ಕೂ ಹೆಚ್ಚು. ಎಲ್ಲರೂ ಹೆಚ್ಚು ಕಡಿಮೆ ನಿರಾಯುಧರೇ, ಎಲ್ಲರೂ ಅರಕ್ಷಿತರೇ. ಥಟ್ಟನೆ ಬೆದರಿದ ಆ ಗುಂಪು ತಕ್ಷಣವೇ ಚೆದುರಿತು. ಆದರೆ ಹತ್ತು ನಿಮಿಷಗಳ ಕಾಲ ಆತ ಎಡೆಬಿಡದೆ, ಕಿಕ್ಕಿರಿಗೊಂಡಿದ್ದ ಮಾನವಸಮೂಹದ ಮೇಲೆ ನಿಷ್ಕರುಣೆಯಿಂದ ಒಟ್ಟು ೧,೬೫೦ ಸುತ್ತಿನ ಗುಂಡಿನ ಮಳೆಯನ್ನೇ ಸುರಿಸಿಬಿಟ್ಟ. ಎಂಥ ಜನರ ಮೇಲೆ; ಬೋನಿನಲ್ಲಿ ಸಿಕ್ಕಿದ ಇಲಿಗಳಂತೆ ಇದ್ದವರು, ಅತ್ತ ಇತ್ತ ಇದ್ದ ಎಲ್ಲೋ ಕೆಲವು ಕಿರುದಾರಿಗಳಿಗಾಗಿ ನಿಷ್ಫಲವಾಗಿ ಓಡುತ್ತಿದ್ದವರು, ಗುಂಡಿನ ಸುರಿಮಳೆಯನ್ನು ತಪ್ಪಿಸಿಕೊಳ್ಳಲು ನೆಲದ ಮೇಲೆ ಮುಖಅಡಿಯಾಗಿ ಬಿದ್ದವರು. ಎಲ್ಲಿ ಜನಸಂದಣಿ ದಟ್ಟವಾಗಿತ್ತೋ ಅತ್ತ ಕೈತೋರಿಸಿ ಅಲ್ಲಿಗೇ ಗುಂಡು ಹಾರಿಸಬೇಕೆಂದು

ಆತ ಖುದ್ದಾಗಿ ಹೇಳುತ್ತಿದ್ದ. ಅವನದೇ ಮಾತಿನಲ್ಲಿ ಹೇಳಬೇಕಾದರೆ 'ಗುರಿ' ಪಸಂದಾಗಿತ್ತು. ಆ ಹತ್ತು ನಿಮಿಷಗಳ ಬಳಿಕ, ಮದ್ದುಗುಂಡುಗಳು ಹೆಚ್ಚು ಕಡಮೆ ಮುಗಿದು ಹೋದ ಮೇಲೆ ಬಂದ ದಾರಿಯಲ್ಲೇ ತನ್ನ ಸಿಪಾಯಿಗಳನ್ನು ಆತ ಮೆರವಣಿಗೆ ಮಾಡಿಸಿಕೊಂಡು ಹೊರಟು ಹೋದ. ಸರ್ಕಾರಿ ವಕ್ತಾರರಿಂದ ಮುಂದೆ ಹಿಂಡಿ ತೆಗೆದಂತೆ ಸತ್ತವರ ಸಂಖ್ಯೆ ೩೭೯, ಗಾಯಗೊಂಡು ಬಿದ್ದವರು ಸಂಖ್ಯೆ ಸುಮಾರು ೨೦೦. ಡೈಯರನ ಮಾತುಗಳಲ್ಲೇ ಹೇಳಬೇಕಾದರೆ, ಗಾಯಗೊಂಡು ಬಿದ್ದವರ ವಿಷಯಕ್ಕೆ 'ಎಳ್ಳಷ್ಟು ಚಿಂತಿಸುವುದು ಅವನ 'ಕೆಲಸ' ಆಗಿರಲಿಲ್ಲ.

ಅಮೃತಸರ ಎಂಬ ಮಾತೇ ಸಾಮೂಹಿಕ ಕಗ್ಗೊಲೆ ಎಂಬುದಕ್ಕೆ ಸಮಾನಾರ್ಥಕ ವಾಯಿತು. ಇದೇ ಸಾಕಷ್ಟು ಕೆಟ್ಟದಾಗಿತ್ತು. ಆದರೆ ಇನ್ನೂ ಹೆಚ್ಚಿನ ನಾಚಿಕೆಗೇಡಿನ ಘಟನೆಗಳು ಪಂಜಾಬಿನ ಆದ್ಯಂತ ನಡೆದುವು.

ಅಮೃತಸರ ಮತ್ತು ಲಾಹೋರ್ ಜಿಲ್ಲೆಗಳಲ್ಲಿ ಸಾಮಾನ್ಯ ಕ್ರಿಮಿನಲ್ ಕೋರ್ಟು ಗಳ ಕೆಲಸ ಕಾರ್ಯಗಳನ್ನು ನಿಲ್ಲಿಸಲೂ, ಅಲ್ಲಿ ಮಾರ್ಷಲ್ ಲಾ ಜಾರಿಗೆ ತರಲೂ, ಮಿಲಿಟರಿ ಕೋರ್ಟುಗಳ ಮೂಲಕ ೧೮೦೪ರ ರೆಗ್ಯುಲೇಷನ್ನಿನಂತೆ ತಪ್ಪಿತಸ್ಥರನ್ನು ವಿಚಾರಣೆಗೆ ಗುರಿಪಡಿಸಲೂ ತನಗೆ ಆದೇಶ ನೀಡುವಂತೆ ಪಂಜಾಬಿನ ಲೆಫ್ಟಿನೆಂಟ್ ಗೌರ್ನರ್ ಏಪ್ರಿಲ್ ೧೩ರಂದು ವೈಸರಾಯರನ್ನು ಪ್ರಾರ್ಥಿಸಿದ. ಏಪ್ರಿಲ್ ೧೫ರಂದು ಆ ಪ್ರಾರ್ಥನೆಗೆ ಮಂಜೂರಾತಿ ದೊರಕಿತು. ಪ್ರಾಂತಾದ್ಯಂತ ಕೂಡಲೇ ಮಾರ್ಷಲ್ ಲಾ ಎರಗಿ ಬಂತು. ಸುದ್ದಿ ಪ್ರಕಟಣೆಗೆ ಕಟ್ಟುನಿಟ್ಟಾದ ಪ್ರತಿಬಂಧಕ ಹಾಕಿ ಉಳಿದೆಲ್ಲ ಭಾರತದಿಂದ ಪಂಜಾಬಿನ ಸಂಬಂಧವನ್ನು ಕಡಿದು ಹಾಕಲಾಯಿತು. ಹೆಚ್ಚು ಕಡಮೆ ಯಾವುದೇ ಸುದ್ದಿಯನ್ನೂ ಹೊರಕ್ಕೆ ಹೋಗಗೊಡಲಿಲ್ಲ. ಜನರು ಪ್ರಾಂತವನ್ನು ಹೋಗುವುದಕ್ಕಾಗಲಿ ಬಿಡುವುದ ಕ್ಕಾಗಲಿ ಬಹು ಕಷ್ಟವಾಯಿತು. ರೈಲ್ವೆ ಜಮೀನುಗಳ ಹೊರತು ಉಳಿದ ಕಡೆ ಜೂನ್ ೧೧ರಂದು ಮಾರ್ಷಲ್ ಲಾ ರದ್ದಾಯಿತು. ಕಡೆಗೆ ಜೂನ್ ೨೫ರಂದು ಅದನ್ನು ಪೂರ್ಣ ವಾಗಿ ತೆಗೆದುಹಾಕಲಾಯಿತು. ಅನೇಕ ತಿಂಗಳುಗಳ ಯಾತನಾಪೂರ್ಣ ಅನಿಶ್ಚಿತತೆಯ ನಂತರ ನಿಧಾನವಾಗಿ ತೆರೆ ಮೇಲೆದ್ದಿತು. ಘೋರ ಸತ್ಯ ಕಣ್ಣಿಗೆ ಬಿತ್ತು.

ಅಖಿಲ ಭಾರತ ಮಂದಗಾಮಿಗಳ ಸಮ್ಮೇಳನದ ಅಧ್ಯಕ್ಷರಾಗಿ ಮಾತನಾಡುತ್ತಾ ಸರ್. ಪಿ. ಎಸ್. ಶಿವಸ್ವಾಮಿ ಅಯ್ಯರ್‌ರವರು ಡೈಯರನ ಆಡಳಿತಾವಧಿಯ ಘೋರತೆ ಗಳನ್ನು ಹೀಗೆ ಸಂಕ್ಷೇಪಿಸಿದರು:

"ಮಾರ್ಷಲ್ ಲಾ ಆಡಳಿತವು ಪಂಜಾಬಿನಲ್ಲಿ ಮಹಾಭಯದ ಆಳ್ವಿಕೆಯನ್ನು ಉಂಟುಮಾಡಿ, ಜನತೆಯನ್ನು ದಿಗ್ರಮೆಗೊಳಿಸಿರುವಂತಹ ಅನೇಕ ಘಟನೆಗಳು ನಡೆದಿವೆ, ಅವುಗಳಲ್ಲಿ ಕೆಲವು ಇವು: ಜಲಿಯನ್‌ವಾಲಾ ಬಾಗಿನಲ್ಲಿ ಗುಂಪು ಚದುರಲು ಅವಕಾಶ ವನ್ನೇ ಕೊಡದೆ ನಿರಾಯುಧರಾದ ನೂರಾರು ಜನರ ಸಾಮೂಹಿಕ ಕಗ್ಗೊಲೆ; ಚದುರಿದ್ದ. ಅಂಜಿ ಓಡುತ್ತಿದ್ದ ಗುಂಪುಗಳ ಮೇಲೆ ಮೆಷೀನ್ ಗನ್ನುಗಳನ್ನು ಹಾರಿಸಿದ್ದರಿಂದ ನೂರಾರು ಜನ ಗಾಯಗೊಂಡಾಗ ಅವರ ಸ್ಥಿತಿಯ ಬಗ್ಗೆ ಜನರಲ್ ಡೈಯರ್ ತೋರಿಸಿದ

ಉದಾಸೀನತೆ; ಬಹಿರಂಗವಾಗಿ ಜನರನ್ನು ಥಳಿಸಿದ್ದು, ಹಾಜರಿ ನೀಡಲು ಸಾವಿರಾರು ಜನ ವಿದ್ಯಾರ್ಥಿಗಳು ಪ್ರತಿದಿನ ಹದಿನಾರು ಮೈಲಿ ನಡೆದು ಬರಬೇಕೆಂದು ಬಲವಂತ ಪಡಿಸುವ ಆಜ್ಞೆ ಹೊರಡಿಸಿದ್ದು; ಐನೂರು ಜನ ವಿದ್ಯಾರ್ಥಿಗಳನ್ನೂ ಪ್ರಾಧ್ಯಾಪಕರನ್ನೂ ಬಂಧಿಸಿಟ್ಟಿದ್ದು: ಐದರಿಂದ ಏಳು ವರ್ಷದ ವರೆಗಿನ ಶಾಲಾ ಮಕ್ಕಳು ಧ್ವಜ ವಂದನೆಯ ಪೆರೇಡಿಗೆ ಹಾಜರಾಗಬೇಕೆಂದು ಬಲವಂತಪಡಿಸಿದ್ದು; ಯಾರಿಗೆ ಸೇರಿದ ಆಸ್ತಿಯ ಮೇಲೆ ಮಾರ್ಷಲ್ ಲಾ ಪೋಸ್ಟರುಗಳನ್ನು ಅಂಟಿಸಿದ್ದರೋ ಅವರೇ ಅದನ್ನು ರಕ್ಷಿಸಲು ಹೊಣೆ ಎಂದು ಸಾರಿದ್ದು; ಮದುವೆಯ ಗುಂಪೊಂದನ್ನು ಥಳಿಸಿದ್ದು; ಟಪಾಲನ್ನು ಒಡೆದು ನೋಡಿದ್ದು; ಬಾದ್‌ಷಾಹೀ ಮಸೀದಿಯನ್ನು ಆರುವಾರಗಳ ಕಾಲ ಮುಚ್ಚಿದ್ದದ್ದು; ಜನರನ್ನು, ಅದರಲ್ಲೂ ಸರ್ಕಾರಕ್ಕೆ ಸೇವೆ ಸಲ್ಲಿಸಿದ್ದ ಜನರನ್ನು, ಯಾವುದೇ ಪ್ರಬಲವಾದ ಕಾರಣವೂ ಇಲ್ಲದೆ ಬಂಧಿಸಿಟ್ಟಿದ್ದದ್ದು; ಇಸ್ಲಾಮಿಯಾ ಶಾಲೆಯ ಆರು ಜನ ಅತಿದೊಡ್ಡ ಹುಡುಗರನ್ನು ಅವರು ಶಾಲಾ ವಿದ್ಯಾರ್ಥಿಗಳು, ದೊಡ್ಡ ಹುಡುಗರು ಎಂಬ ಅಷ್ಟೇ ಕಾರಣಕ್ಕಾಗಿ ಥಳಿಸಿದ್ದು; ಬಂಧಿಸಿದ ಜನರನ್ನು ಇಡುವುದಕ್ಕೆಂದು ತೆರೆದ ಪಂಜರವನ್ನು ಕಟ್ಟಿಸಿದ್ದು; ತೆವಳುವುದು, ಕುಪ್ಪಳಿಸುವುದು, ಜನರಿಗೆ ಬೇಡಿಹಾಕಿ ಒಟ್ಟಾಗಿ ಸೇರಿಸಿ ಹಗ್ಗಕಟ್ಟಿ ತೆರೆದ ಲಾರಿಯಲ್ಲಿ ಹದಿನೈದು ಗಂಟೆಗಳ ಕಾಲ ಇರಿಸುವುದೇ ಮುಂತಾದ ಹೊಸ ಹೊಸ ಶಿಕ್ಷೆಗಳನ್ನು ಕಂಡುಹಿಡಿದದ್ದು; ನಿರಾಯುಧರಾದ ಪೌರರ ಮೇಲೆ ವಿಮಾನಗಳನ್ನೂ ಲೆವಿಸ್ ಗನ್ನುಗಳನ್ನೂ ಬಳಸಿದ್ದು; ಜನರನ್ನು ಒತ್ತೆಯಾಳುಗಳಾಗಿ ಒಯ್ದದ್ದು; ತಪ್ಪಿಸಿಕೊಂಡವರನ್ನು ಬರಮಾಡಿಕೊಳ್ಳಲು ಆಸ್ತಿಪಾಸಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದು ಮತ್ತು ನಾಶಪಡಿಸಿದ್ದು; ಹಿಂದೂ-ಮುಸ್ಲಿಂ ಐಕ್ಯತೆಗೆ ಒದಗುವ ದುಷ್ಪರಿಣಾಮಗಳನ್ನು ತೋರಿಸಿಕೊಡಲು ಹಿಂದೂ ಮುಸ್ಲಿಮರನ್ನು ಜೋಡಿ ಜೋಡಿ ಕೈಕೋಳ ತೊಡಿಸಿದ್ದು; ಭಾರತೀಯರ ಮನೆಗಳಿಗೆ ವಿದ್ಯುಚ್ಛಕ್ತಿಯನ್ನೂ ನೀರನ್ನೂ ನಿಲ್ಲಿಸಿದ್ದು; ಭಾರತೀಯರ ಗೃಹಗಳಿಂದ ಫ್ಯಾನುಗಳನ್ನು ಕಿತ್ತು ಯೂರೋಪಿಯನರ ಉಪಯೋಗಕ್ಕೆ ಕೊಟ್ಟದ್ದು, ಭಾರತೀಯರ ಒಡೆತನದಲ್ಲಿದ್ದ ಎಲ್ಲ ವಾಹನಗಳನ್ನೂ ಬಲವಂತವಾಗಿ ವಶಪಡಿಸಿಕೊಂಡು ಯೂರೋಪಿಯನರ ಉಪಯೋಗಕ್ಕೆ ವಹಿಸಿದ್ದು; ಮಾರ್ಷಲ್ ಲಾ ಇನ್ನೇನು ಮುಗಿದು ಹೋಗುತ್ತದಲ್ಲ ಎಂದು ಯಮವೇಗದಲ್ಲಿ ಕೇಸುಗಳ ವಿಚಾರಣೆ ಮುಗಿಸಿದ್ದು."

ಭಾರತಾದ್ಯಂತ ಸರ್ಕಾರವು ನಡೆಸಿದ ಘೋರಕೃತ್ಯಗಳನ್ನು ಕಂಡು ಗಾಂಧೀಜಿಗೆ ತೀವ್ರ ಆಘಾತವುಂಟಾಯಿತು. ಆದರೆ ಜನರು ಪ್ರದರ್ಶಿಸಿದ ಹಿಂಸಾ ಮನೋಭಾವವನ್ನು ಕಂಡು ಅವರು ಇನ್ನೂ ಅಧೀರರಾದರು. ತಮ್ಮ ಕಾಲಡಿಯ ನೆಲವೇ ಕುಸಿಯುತ್ತಿದೆ ಎಂದು ಅನೇಕ ಜನ ಪ್ರಸಿದ್ಧ ಭಾರತೀಯರು ಭಾವಿಸಿದರು. ಏಪ್ರಿಲ್ ೧೨ರಂದು ರವೀಂದ್ರನಾಥ ಠಾಕೂರರು ಗಾಂಧೀಜಿಗೆ ಪತ್ರ ಬರೆದು ನಿಧಾನಿಸಿ ಮತ್ತು ಪರ್ಯಾಲೋಚಿಸಿ ಎಂದು ದೈನ್ಯದಿಂದ ಪ್ರಾರ್ಥಿಸಿಕೊಂಡರು:

"ಅಧಿಕಾರ, ಅದರ ಎಲ್ಲ ರೂಪಗಳಲ್ಲೂ, ವಿಚಾರ ರಹಿತವಾದದ್ದು—ಕಣ್ಣು ಮುಚ್ಚಿಕೊಂಡು ಗಾಡಿಯನ್ನೆಳೆಯುವ ಕುದುರೆಯಂತೆ ಅದು. ಅದರ ನೈತಿಕಾಂಶವೇ ನಿದ್ದರೂ ಅದನ್ನು ನಡೆಸುವ ಮನುಷ್ಯನಲ್ಲೇ ಕಾಣತಕ್ಕದ್ದು. ನಿಷ್ಕ್ರಿಯ ಪ್ರತಿಭಟನೆ (Passive resistance) ಎಂದುದು ಸ್ವತಃ ಅನಿವಾರ್ಯವಾಗಿ ನೈತಿಕವಾಗಿರಲೇ ಬೇಕಾದ ಬಲ ಅಲ್ಲ; ಅದನ್ನು ಸತ್ಯದ ಪರವಾಗಿ ಹೇಗೋ ಹಾಗೆಯೇ ವಿರುದ್ಧ ವಾಗಿಯೂ ಉಪಯೋಗಿಸಬಹುದು. ಎಲ್ಲ ಬಗೆಯ ಬಲದಲ್ಲೂ ಅಂತರ್ಗತವಾಗಿರುವ ಅಪಾಯವು, ಅದು ಯಶಸ್ವಿಯಾಗುವ ಸಂಭವ ಹೆಚ್ಚುತ್ತ ಹೋದಂತೆ ಹೆಚ್ಚು ಪ್ರಬಲ ವಾಗುತ್ತಾ ಹೋಗುವುದು; ಏಕೆಂದರೆ ಆಗ ಅದು ಪ್ರಲೋಭನೆಯಾಗುತ್ತದೆ.

"ಒಳಿತರ ನೆರವಿನಿಂದ ಕೆಟ್ಟದರ ವಿರುದ್ಧ ಹೋರಾಡಬೇಕು ಎಂಬುದು ನಿಮ್ಮ ಬೋಧನೆ ಎಂದು ನಾನು ಬಲ್ಲೆ. ಆದರೆ ಅಂಥ ಹೋರಾಟ ಧೀರರಿಗೇ ಹೊರತು ಆಯಾ ಕ್ಷಣದ ಚಾಂಚಲ್ಯಗಳಿಗೆ ವಶರಾಗುವ ಜನರಿಗಲ್ಲ. ಒಂದು ಪಕ್ಷ ಮಾಡುವ ಕೆಡಕು, ಸಹಜ ವಾಗಿಯೇ ಇನ್ನೊಂದು ಪಕ್ಷದಿಂದಾಗುವ ಕೆಡುಕಿಗೆ ಕಾರಣವಾಗುತ್ತದೆ, ಅನ್ಯಾಯವು ಹಿಂಸೆಗೆ ಒಯ್ಯುತ್ತದೆ. ಅಪಮಾನವು ಪ್ರತೀಕಾರವನ್ನು ಕೆರಳಿಸುತ್ತದೆ. ದುರದೃಷ್ಟ ವಶಾತ್ ಅಂಥದೊಂದು ಬಲವನ್ನು ಈಗಾಗಲೇ ಎಬ್ಬಿಸಿಬಿಡಲಾಗಿದೆ. ಭಯದಿಂದಲೋ ಕ್ರೋಧದಿಂದಲೋ ಆಳುವ ವರ್ಗವು ತನ್ನ ಪಂಜಗಳನ್ನು ತೋರಿಸಿದೆ. ಅದರ ಖಚಿತ ವಾದ ಪರಿಣಾಮ ನಮ್ಮಲ್ಲಿ ಕೆಲವರನ್ನು ಕ್ರೋಧ ಪ್ರದರ್ಶನದ ಗುಪ್ತಪಥಕ್ಕೆ ಒಯ್ಯು ವುದು. ಮತ್ತು ಕೆಲವರಲ್ಲಿ ನೈತಿಕ ದಾರ್ಢ್ಯವನ್ನು ಸಂಪೂರ್ಣವಾಗಿ ನಾಶಗೊಳಿಸುವುದು.

"ಇಂಥ ಸಂದಿಗ್ಧ ಸಮಯದಲ್ಲಿ ಜನತೆಯ ಮಹಾನಾಯಕರಾಗಿ ನೀವು ನಮ್ಮ ನಡುವೆ ನಿಂತು ಭಾರತದ ಆದರ್ಶವೆಂದು ನೀವು ತಿಳಿದಿರುವುದನ್ನು ಘೋಷಿಸುತ್ತ ಇದ್ದೀರಿ. ಹುದುಗಿಸಿಟ್ಟ ಪ್ರತೀಕಾರದ ಹೇಡಿತನ ಹಾಗೂ ಭೀತಿಯ ಗರಬಡಿದವರ ವಿಧೇಯತೆ ಇವೆರಡಕ್ಕೂ ವಿರುದ್ಧವಾದ ಆದರ್ಶಗಳು ನಿಮ್ಮವು. ಭಗವಾನ್ ಬುದ್ಧನು ತನ್ನ ಕಾಲದಲ್ಲೇ ಎಲ್ಲರಿಗೂ ಎಲ್ಲ ಕಾಲಕ್ಕೂ ಅನ್ವಯಿಸುವಂತೆ ಹೇಳಿದ ಈ ಮಾತನ್ನೇ ನೀವು ಹೇಳಿದ್ದೀರಿ: 'ರೋಷವನ್ನು ಅರೋಷದ ಶಕ್ತಿಯಿಂದ. ಕೆಡಕನ್ನು ಒಳಿತರ ಶಕ್ತಿ ಯಿಂದ, ಗೆಲ್ಲಿ.

"ಈ ಸತ್ ಶಕ್ತಿ ಎಂಬುದು, ತನ್ನ ನಿರ್ಭಯತೆಯಿಂದ, ತನ್ನ ಯಶಸ್ಸಿಗಾಗಿ ಭಯೋತ್ಪಾದನೆಯನ್ನೇ ಅವಲಂಬಿಸಿರುವ ಯಾವುದೇ ಹೇರಿಕೆಯನ್ನೂ ಒಪ್ಪಲು ನಿರಾಕರಿಸುವುದರಿಂದ, ಸಂಪೂರ್ಣವಾಗಿ ನಿರಾಯುಧರಾಗಿರುವ ಒಂದು ಜನಾಂಗವನ್ನು ಭೀತರನ್ನಾಗಿಸಲಿಕ್ಕಾಗಿ ವಿನಾಶದ ಯಂತ್ರವನ್ನು ಪ್ರಯೋಗಿಸಲು ಹೇಸದಿರುವ ಶಕ್ತಿ ಯನ್ನು ಎದುರಿಸುವುದರ ಮೂಲಕ ತನ್ನ ಸತ್ಯವನ್ನೂ ಸಾಧಿಸಿ ತನ್ನ ಶಕ್ತಿಯನ್ನೂ ತೋರಿಸಬೇಕು. ನೈತಿಕ ವಿಜಯವು ಇರುವುದು ಜಯದಲ್ಲೇ ಅಲ್ಲ. ಸೋಲು ಅವರ ಗಾಂಭೀರ್ಯವನ್ನೂ ಮಹಿಮೆಯನ್ನೂ ಹೋಗಲಾಡಿವಸುವುದಿಲ್ಲ. ಎಂಬುದನ್ನು ನಾವು ಅರಿತುಕೊಳ್ಳಲೇಬೇಕು. ಆಧ್ಯಾತ್ಮಿಕ ಜೀವನದಲ್ಲಿ ನಂಬಿಕೆ ಇರುವವರು ಇದನ್ನೂ ಬಲ್ಲರು.

ತನ್ನ ಹಿಂದೆ ಅಗಾಧವಾದ ಲೌಕಿಕ ಶಕ್ತಿಯನ್ನು ಪಡೆದಿರುವುದರ ವಿರುದ್ಧ ಪ್ರತಿಭಟನೆಯನ್ನು ಸೂಚಿಸುವುದೂ ವಿಜಯವೇ–ಸ್ಪಷ್ಟವಾದ ಸೋಲಿನ ಮುಖದಲ್ಲೂ ನಮ್ಮ ಆದರ್ಶದಲ್ಲಿ ಸಕ್ರಿಯವಾದ ಶ್ರದ್ಧೆಯ ವಿಜಯ ಅದು.

"ಸ್ವಾತಂತ್ರ್ಯ ಎಂಬ ಮಹಾನ್ ವರವು ದಾನವಾಗಿ ನಮಗೆ ಬರುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಹಾಗೆ ನಾನು ಹೇಳಿಯೂ ಇದ್ದೇನೆ. ನಮ್ಮದಾಗುವ ಮುನ್ನ ಅದನ್ನು ಜಯಿಸಿ ಪಡೆಯಬೇಕು. ತನ್ನ ಆಕ್ರಮಣ ಶಕ್ತಿಯಿಂದ ನಮ್ಮನ್ನು ಆಳುತ್ತಿರುವ ಜನತೆಗಿಂತ ನೈತಿಕವಾಗಿ ನಾವು ಉತ್ತಮರು ಎಂಬುದನ್ನು ಸಾಧಿಸಿ ತೋರಿಸಿದಾಗಲೇ ಭಾರತಕ್ಕೆ ಸ್ವಾತಂತ್ರ್ಯವನ್ನು ಪಡೆಯುವ ಅವಕಾಶ ಒದಗುವುದು. ಮಹಾತ್ಮರ ಕಿರೀಟವಾದ ಯಾತನೆಯನ್ನು, ಯಾತನೆಯ ತಪಸ್ಸನ್ನು, ಭಾರತವು ಸ್ವಂತ ಇಚ್ಛೆಯಿಂದ ಒಪ್ಪಿಕೊಳ್ಳಬೇಕು. ಆತ್ಮಶಕ್ತಿಯನ್ನು ಪರಿಹಾಸ ಮಾಡುತ್ತಿರುವ ಅಹಂಕಾರದ ವಿರುದ್ಧ ಸ್ವಲ್ಪವೂ ಹಿಂಜರಿಯದೆ ಭಾರತವು ನಿಲ್ಲಬೇಕು. ಒಳಿತರಲ್ಲಿ ತನಗಿರುವ ಸಂಪೂರ್ಣ ಶ್ರದ್ಧೆಯ ರಕ್ಷಾಕವಚವನ್ನು ಧರಿಸಿ ನಿಲ್ಲಬೇಕು.

"ತನ್ನ ಜೀವಿತೋದ್ದೇಶಗಳು ಏನು ಎಂಬುದನ್ನು ಈ ತಾಯ್ನಾಡಿಗೆ ನೆನಪು ಮಾಡಿಕೊಡುವ ಕಾಲವು ಸನ್ನಿಹಿತವಾಗಿರುವಾಗ ನೀವಿಲ್ಲಿಗೆ ಬಂದಿದ್ದೀರಿ. ಈ ದೇಶವನ್ನು ವಿಜಯದ ನಿಜವಾದ ಪಥದಲ್ಲಿ ಒಯ್ಯಲು, ಇಂದಿನ ರಾಜಕೀಯದಿಂದ ದೌರ್ಬಲ್ಯವನ್ನು ದೂರ ಮಾಡಲು ನೀವು ಬಂದಿದ್ದೀರಿ. ರಾಜಕೀಯದಲ್ಲಿ ಎರವಲು ಪಡೆದ ಅಪ್ರಾಮಾಣಿಕತೆಯನ್ನು ಪ್ರದರ್ಶಿಸಿ ತಾನು ಗುರಿಯನ್ನು ಸಾಧಿಸುತ್ತೇನೆ. ಎಂದು ಭಾರತವು ಭ್ರಮಿಸಿರುವ ಸಮಯದಲ್ಲಿ ನೀವು ಬಂದಿದ್ದೀರಿ.

"ನಮ್ಮ ಮುನ್ನಡೆಗೆ ಅಡ್ಡಿಯುಂಟುಮಾಡುವ, ನಮ್ಮ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಯಾವ ಅಡೆತಡೆಗಳೂ ಒದಗದಿರಲಿ ಎಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಸತ್ಯಸಾಧನೆಯ ಅಧ್ಯಯನಕ್ಕಾಗಿ ನೀಡಬೇಕಾದ ಬಲವು ಕೇವಲ ಮಾತುಗಳ ಅಂಧಪ್ರೇಮವಾಗಿ ಅವನತಿ ಹೊಂದದಿರಲಿ. ಪವಿತ್ರೋದ್ದೇಶಗಳ ಹಿಂದೆ ಹುದುಗಿರುವ ಆತ್ಮವಂಚನೆಯಾಗಿ ಅವನತಿಗೊಳ್ಳದಿರಲಿ ಎಂದು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ".

ಗಾಂಧೀಜಿಯು ಇದೇ ರೀತಿಯಲ್ಲಿ ಆಲೋಚಿಸುತ್ತಿದ್ದರು. ನದಿಯಾದ್‌ನಲ್ಲಿ ವಾಸ್ತವವಾಗಿ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಕಂಡಾಗ, ಖೇಡಾದಲ್ಲಿ ನಡೆದ ಘಟನೆಗಳ ವರದಿಗಳನ್ನು ಕೇಳಿದಾಗ, ಜನತೆ ಸಿದ್ಧವಾಗುವುದಕ್ಕೆ ಮುಂಚೆಯೇ ಸವಿನಯ ಕಾನೂನು ಭಂಗಕ್ಕೆ ಕರೆ ನೀಡಿದ್ದು ಮಹಾಪರಾಧವಾಯಿತು ಎಂಬುದು ಅವರಿಗೆ ದಿಢೀರನೆ ಹೊಳೆಯಿತು: "ಸಮಾಜದ ಕಾನೂನುಗಳನ್ನು ಸತ್ಯಾಗ್ರಹಿಯು ಬುದ್ಧಿವಂತಿಕೆಯಿಂದಲೂ, ತನ್ನ ಸ್ವತಂತ್ರ ಸಂಕಲ್ಪದಿಂದಲೂ ಪರಿಪಾಲಿಸುತ್ತಾನೆ. ಏಕೆಂದರೆ ಹಾಗೆ ಮಾಡುವುದು ತನ್ನ ಕರ್ತವ್ಯ ಎಂಬುದು ಅವನ ಭಾವನೆ. ಹೀಗೆ ಕಟ್ಟುನಿಟ್ಟಾಗಿ ಸಮಾಜದ ಕಾನೂನುಗಳನ್ನು ಒಬ್ಬ ವ್ಯಕ್ತಿಯು ಪರಿಪಾಲಿಸಿದಾಗಲೇ ಅವನಿಗೆ ಯಾವ ಯಾವ ಕಾರ್ಯಗಳು

ಒಳ್ಳೆಯವು ಮತ್ತು ನ್ಯಾಯವಾದುವು ಮತ್ತು ಯಾವುವು ಅನ್ಯಾಯವೂ ಅನೈತಿಕವೂ ಆದುವು ಎಂಬುದು ಗೊತ್ತಾಗುತ್ತದೆ. ಆಗ ಮಾತ್ರ ಅವನಿಗೆ ಸುಸ್ಪಷ್ಟವಾದ ಪರಿಸ್ಥಿತಿಗಳಲ್ಲಿ ಕೆಲವು ಕಾನೂನುಗಳನ್ನು ಸವಿನಯವಾಗಿ ಭಂಗಮಾಡುವ ಹಕ್ಕು ದೊರಕುವುದು. ಅನಿವಾರ್ಯವಾದ ಈ ಮಿತಿಯನ್ನು ಅನುಸರಿಸದೆ ಹೋದದ್ದೇ ನನ್ನ ಸೋಲಿಗೆ ಕಾರಣವಾದ ದೋಷ. ಅರ್ಹತೆಯನ್ನು ಸಂಪಾದಿಸಿಕೊಳ್ಳುವ ಮುನ್ನವೇ ಜನರನ್ನು ಕಾನೂನು ಭಂಗಕ್ಕೆ ನಾನು ಕರೆದೆ. ಈ ನನ್ನ ದೋಷವು ಹಿಮಾಲಯದ ಪ್ರಮಾಣದ್ದಾಗಿದೆ ಎಂದು ನನಗೆ ತೋರಿತು".

ಗಾಂಧೀಜಿ ಬೊಂಬಾಯಿಗೆ ಬಂದರು. ಸತ್ಯಾಗ್ರಹ ಸಭೆಯ ಮೂಲಕ ಸ್ವಯಂ ಸೇವಕರ ದಳವನ್ನು ಕಟ್ಟಿದರು. ಅವರ ನೆರವಿನಿಂದ ಜನರಿಗೆ ಸತ್ಯಾಗ್ರಹದ ಅರ್ಥವನ್ನೂ, ಅದರ ಹಿಂದೆ ಅಡಗಿರುವ ಮಹತ್ವವನ್ನು ವಿವರಿಸುವ ಕೆಲಸವನ್ನೂ ಪ್ರಾರಂಭಿಸಿದರು ಪತ್ರಪತ್ರಿಕೆಗಳ ಮೂಲಕ ಮುಖ್ಯವಾಗಿ ಇದನ್ನು ಮಾಡಿದರು. ಸತ್ಯಾಗ್ರಹದ ಶಾಂತಿಯುತ ಮುಖದಲ್ಲಿ ಜನರಿಗೆ ಆಸಕ್ತಿಯನ್ನು ಹುಟ್ಟಿಸುವುದು ಕಷ್ಟ ಎಂಬುದನ್ನು ಕಂಡುಕೊಂಡರು. ಸವಿನಯ ಕಾನೂನು ಭಂಗದಲ್ಲಿ ಶಿಕ್ಷಣವನ್ನು ನೀಡುವುದು ಮಂದಗತಿಯಿಂದ ಆಗತಕ್ಕದ್ದು ಎಂಬುದನ್ನು ಅವರು ಅರಿತರು. ಆದ್ದರಿಂದ ಏಪ್ರಿಲ್ ೧೮ರಂದು ಅವರು ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ಸಲಹೆ ಮಾಡಿದರು:

"ಸವಿನಯ ಕಾನೂನು ಭಂಗವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ಸಲಹೆ ನೀಡುವುದು ಅನಿವಾರ್ಯವಾಗಿದೆ. ದುಃಖದಿಂದಲೇ ಹಾಗೆ ಮಾಡುತ್ತಿದ್ದೇನೆ. ಈ ಸಲಹೆಯನ್ನು ನಾನು ನೀಡುತ್ತಿರುವುದಕ್ಕೆ ಕಾರಣ, ಅದರ ಸಾಮರ್ಥ್ಯದಲ್ಲಿ ಈಗ ನನ್ನ ಶ್ರದ್ಧೆ ಕಡಮೆಯಾಗಿದೆ ಎಂದಲ್ಲ. ಹಿಂದಿಗಿಂತಲೂ ಅದರಲ್ಲಿ ಹೆಚ್ಚು ಶ್ರದ್ಧೆ ನನಗೆ ಉಂಟು. ಹಾಗೆ ನಿಲ್ಲಿಸಬೇಕೆಂದು ನಾನು ಸೂಚಿಸುವುದಕ್ಕೆ ಕಾರಣ ಸತ್ಯಾಗ್ರಹದ ನಿಯಮವನು ನಾನು ಅರಿತಿರುವುದು. ಭಾರಿ ಪ್ರಮಾಣದ ಚಳುವಳಿಯನ್ನು ನಾನು ಪ್ರಾರಂಭಿಸುವಾಗ ದುಷ್ಕೃತ್ಯಗಳಿಗೆ ಅಷ್ಟು ಪ್ರಾಬಲ್ಯ ಇರಬಹುದು ಎಂಬುದನ್ನು ನಾನು ಸರಿಯಾಗಿ ಲೆಕ್ಕ ಹಾಕಲಿಲ್ಲ. ಇದರಿಂದ ನನಗೆ ದುಃಖವಾಗಿದೆ. ಪರಿಸ್ಥಿತಿಯನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಎದುರಿಸುವುದು ಹೇಗೆ ಎಂಬುದನ್ನು ನಾನು ನಿಂತು ಯೋಚಿಸಬೇಕಾಗಿದೆ. ಆದರೆ ಹಾಗೆ ಮಾಡುತ್ತಿರುವಾಗಲೇ ಈ ವಿಷಯವನ್ನು ನಾನು ಹೇಳಬೇಕು: ಅಹಮದಾಬಾದ್ ಮತ್ತು ವೀರಮ್‌ಗಾಮ್‌ಗಳಲ್ಲಿ ನಡೆದ ದುರಂತವನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ಸತ್ಯಾಗ್ರಹಕ್ಕೂ ದೊಂಬಿ ಜನರ ಹಿಂಸಾಕೃತ್ಯಗಳಿಗೂ ಯಾವ ಸಂಬಂಧವೂ ಇಲ್ಲ ಎಂಬುದು ನನಗೆ ಮನವರಿಕೆಯಾಗಿದೆ. ಅನಸೂಯಾ ಬಹೆನ್ ಮತ್ತು ನನ್ನಲ್ಲಿ ಜನತೆಗಿರುವ ಪ್ರೇಮದಿಂದಾಗಿ ಬಹುಜನ ಹಿಂಸೆಯ ಪತಾಕೆಯಡಿಯಲ್ಲಿ ನೆರೆದರು. ಸರ್ಕಾರವು ತಿಳಿಗೇಡಿತನದಿಂದ ನನ್ನ ದೆಹಲಿ ಪ್ರವೇಶವನ್ನು ತಡೆದು, ಅದರ ಅಪ್ಪಣೆಯನ್ನು ಮೀರುವಂತೆ ಬಲಾತ್ಕರಿಸದಿದ್ದರೆ, ಕಳೆದ ವಾರ ಅಹಮದಾಬಾದ್ ಮತ್ತು ವೀರಮ್‌ಗಾಮ್‌ಗಳಲ್ಲಿ ಅಂಥಹ ಭಯಾನಕ ಘಟನೆಗಳು ನಡೆಯುತ್ತಿರಲಿಲ್ಲ ಎಂಬುದು

ಖಂಡಿತ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸತ್ಯಾಗ್ರಹವು ಆ ದೊಂಬಿಗೆ ಕಾರಣವೂ ಅಲ್ಲ, ಪ್ರೇರಕವೂ ಅಲ್ಲ; ಬದಲಿಗೆ, ಸತ್ಯಾಗ್ರಹವು ಮೊದಲಿದ್ದ ಅನಾಯಕತ್ವದ ಪರಿಸ್ಥಿತಿಗೆ, ಅಲ್ಪ ಪ್ರಮಾಣವಲ್ಲಾದರೂ, ತಡೆಯಾಗಿಯೇ ವರ್ತಿಸಿದೆ ಎಂದು ಹೇಳಬೇಕು.

"ಪಂಜಾಬಿನ ಘಟನೆಗಳನ್ನು ಕುರಿತು ಹೇಳುವುದಾದರೆ, ಸತ್ಯಾಗ್ರಹಚಳುವಳಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ದಕ್ಷಿಣ ಆಫ್ರಿಕಾದ ಸತ್ಯಾಗ್ರಹದ ಸಮಯದಲ್ಲಿ ಸಹಸ್ರಾರು ಜನ ಕರಾರುಬದ್ಧ ಭಾರತೀಯರು ಮುಷ್ಕರ ಹೂಡಿದ್ದರು. ಅದು ಸತ್ಯಾಗ್ರಹದ ಮುಷ್ಕರ, ಆದ್ದರಿಂದ ಸಂಪೂರ್ಣವಾಗಿ ಶಾಂತಿಯುತವೂ, ಸ್ವಂತ ಇಚ್ಛೆಯಿಂದ ಕೂಡಿದ್ದೂ ಆಗಿತ್ತು. ಮುಷ್ಕರವು ನಡೆಯು ತ್ತಿದ್ದಾಗಲೇ ಯೂರೋಪಿಯನ್ ಗಣಿ ಕೆಲಸಗಾರರೂ, ರೈಲ್ವೆ ನೌಕರರೂ ಮುಷ್ಕರ ವನ್ನು ಘೋಷಿಸಿದರು. ಯೂರೋಪಿಯನ್ ಮುಷ್ಕರಗಾರರ ಉದ್ದೇಶವೂ ನಮ್ಮದೂ ಒಂದೇ ಎಂದು ಭಾವಿಸಬೇಕು ಎಂದು ನನ್ನೊಡನೆ ಸಂಧಾನ ನಡೆಸಲಾಯಿತು. ಸತ್ಯಾ-ಗ್ರಹಿಯಾಗಿ ನಾನು ಅದನ್ನು ನಿರಾಕರಿಸಲು ಒಂದೇ ಒಂದು ಕ್ಷಣವನ್ನೂ ಕೂಡ ಯೋಚಿಸ ಬೇಕಾಗಲಿಲ್ಲ. ಇನ್ನೂ ಮುಂದೆ ಹೋಗಿ, ನಾನು ನಮ್ಮ ಸತ್ಯಾಗ್ರಹವನ್ನು ತಾತ್ಕಾಲಿಕ ವಾಗಿ ನಿಲ್ಲಿಸಿದೆ. ಅದಕ್ಕೆ ಕಾರಣ ಹಿಂಸೆ ಮತ್ತು ಆಯುಧಗಳ ಬಳಕೆಯೇ ಪ್ರಧಾನವಾಗಿದ್ದ ಯೂರೋಪಿಯನರ ಮುಷ್ಕರವೂ ನಮ್ಮದೂ ಒಂದೇ ವರ್ಗಕ್ಕೆ ಸೇರಿದವು ಎಂದು ಭಾವಿಸಲ್ಪಡುವ ಸಂಭವವಿದ್ದುದು. ದಕ್ಷಿಣ ಆಫ್ರಿಕದ ಯೂರೋಪಿಯನ್ನರು ಸತ್ಯಾ-ಗ್ರಹವನ್ನು ಆಕ್ಷಣದಿಂದಲೇ ಗೌರವಾನ್ವಿತವೂ, ಪ್ರಾಮಾಣಿಕವೂ ಆದ ಚಳುವಳಿ ಎಂದು ಆದರಿಸುವಂತಾಯಿತು. ಜನರಲ್ ಸ್ಮಟ್ಸ್‌ರ ಮಾತುಗಳಲ್ಲಿ ಅದು 'ಸಂವಿಧಾ-ನಾತ್ಮಕ ಚಳುವಳಿ' ಎಂದಾಯಿತು. ಪ್ರಸ್ತುತ ಸಂಕಟದ ಸಮಯದಲ್ಲಿ ಅದಕ್ಕಿಂತ ಕಡಮೆ ಏನನ್ನೂ ನಾನು ಮಾಡಲಾರೆ. ಹಿಂಸೆಗೆ ಆಹಾರವನ್ನೊದಗಿಸುವ ಬ್ರಿಟಿಷರಿಗೂ, ಭಾರತೀಯರಿಗೂ ಇರುವ ಸಂಬಂಧವನ್ನು ಕಹಿಗೊಳಿಸುವ ಸಂದರ್ಭವನ್ನಾಗಿ ನನ್ನ ಯಾವುದೇ ಕ್ರಿಯೆಯಿಂದ ಸತ್ಯಾಗ್ರಹವು ಪರಿಣಮಿಸುವ ಪಕ್ಷಕ್ಕೆ ಸತ್ಯಾಗ್ರಹಕ್ಕೆ ನಾನು ನಿಷ್ಠೆಯನ್ನು ತೋರಿದಂತಾಗುವುದಿಲ್ಲ. ಆದ್ದರಿಂದ, ನಮ್ಮ ಸತ್ಯಾಗ್ರಹವು ಅಧಿಕಾರಿ ಗಳಿಗೆ ಎಲ್ಲ ವಿಧದಲ್ಲೂ ಸುವ್ಯವಸ್ಥೆಯನ್ನು ಜಾರಿಗೆ ತರಲು, ಅನಾಯಕತ್ವವನ್ನು ತುಳಿ ಯಲು ನೆರವು ನೀಡುವಂತಾಗಬೇಕು. ಸತ್ಯಾಗ್ರಹದ ಮೂಲಭೂತ ತತ್ವಗಳಿಗೆ ಜನ ಸಮೂಹವು ಅಂಟಿಕೊಳ್ಳುವಂತೆ ಮಾಡುವುದರಲ್ಲಿ ನಾವು ಯಶಸ್ವಿಗಳಾದರೆ ನಮ್ಮ ಕಣ್ಣೆದುರಿಗೇ ನಡೆಯುತ್ತಿರುವ ಈ ದುರಂತಗಳನ್ನು ತಪ್ಪಿಸುವುದು ಸಾಧ್ಯವಾಗುತ್ತದೆ. ಅಸಂಖ್ಯಾತ ಶಾಖೆಗಳುಳ್ಳ ಆಲದ ಮರದಂತೆ ಸತ್ಯಾಗ್ರಹ ಎಂಬುದು. ಸವಿನಯ ಕಾನೂನು ಭಂಗವೂ ಅಂಥ ಶಾಖೆಗಳಲ್ಲಿ ಒಂದು. ಸತ್ಯ, ಅಹಿಂಸೆಗಳೆರಡೂ ಸೇರಿ ಮಾತ್ರ ಕಾಂಡವಾಗುತ್ತದೆ. ಈ ಕಾಂಡದಲ್ಲಿ ಅಸಂಖ್ಯಾತ ಶಾಖೆಗಳು ಹೊರಚಾಚಿರುತ್ತವೆ. ಅನಾಯಕತ್ವದ ವಾತಾವರಣದಲ್ಲಿ ಸವಿನಯ ಕಾನೂನುಭಂಗವನ್ನು ಜನ ತಕ್ಷಣ ಒಪ್ಪಿ ಕೊಂಡರು. ಆದರೆ ಯಾವುದರಿಂದ ಮಾತ್ರವೇ ಸವಿನಯ ಕಾನೂನುಭಂಗವು ಯೋಗ್ಯ

ರೀತಿಯಲ್ಲಿ ಹೊಮ್ಮಬಹುದೋ ಆ ಸತ್ಯ ಮತ್ತು ಅಹಿಂಸೆಗಳಿಗೆ ಏನೇನೂ ಗೌರವ ದೊರಕಲಿಲ್ಲ. ಇದನ್ನೀಗ ಕಹಿಯಾದ ಅನುಭವದಿಂದ ಕಂಡುಕೊಂಡಿದ್ದೇನೆ. ಆದ್ದರಿಂದ ನಮ್ಮದು ಭಗೀರಥ ಪ್ರಯತ್ನ. ಅಂದಮಾತ್ರಕ್ಕೆ ಹಿಂದೆ ಸರಿಯುವಂತಿಲ್ಲ. ನಿರ್ಭಯ ವಾಗಿ ನಾವು ಸತ್ಯ ಮತ್ತು ಅಹಿಂಸೆಯ ಸಿದ್ಧಾಂತವನ್ನು ಪರಿಚಯ ಮಾಡಿಕೊಡಬೇಕು. ಆಗ ಮಾತ್ರವೇ, ಸಾಮೂಹಿಕ ಸತ್ಯಾಗ್ರಹವನ್ನು ಪ್ರಾರಂಭಿಸಲು ನಮಗೆ ಸಾಧ್ಯವಾಗು ವುದು. ರೌಲಟ್ ಶಾಸನದ ವಿಷಯದಲ್ಲಿ ನನ್ನ ಮನೋಭಾವವೇನೂ ಬದಲಾಯಿಸಿಲ್ಲ. ಸದ್ಯದ ಕ್ಷೋಭೆಯ ಅನೇಕ ಕಾರಣಗಳ ಪೈಕಿ ರೌಲಟ್ ಶಾಸನವೂ ಒಂದೆಂದು ನನ್ನ ಖಚಿತವಾದ ಭಾವನೆ. ಆದರೆ ಈ ಕ್ಷೋಭೆಯ ವಾತಾವರಣದಲ್ಲಿ ಈ ಕಾರಣಗಳನ್ನೆಲ್ಲ ಪರಿಶೀಲಿಸುವುದನ್ನು ನಾನು ವರ್ಜಿಸಬೇಕು. ಈ ಪತ್ರದ ಮುಖ್ಯವಾದ ಮತ್ತು ಏಕೈಕ ಉದ್ದೇಶ ಎಂದರೆ ಸವಿನಯ ಕಾನೂನು ಭಂಗವನ್ನು ಎಲ್ಲ ಸತ್ಯಾಗ್ರಹಿಗಳಗೂ ತಾತ್ಕಾ ಲಿಕವಾಗಿ ನಿಲ್ಲಿಸಬೇಕು, ಸುವ್ಯವಸ್ಥೆಯನ್ನು ಸ್ಥಾಪಿಸಲು ಸರ್ಕಾರಕ್ಕೆ ಅಗತ್ಯವಾದ ಎಲ್ಲ ರೀತಿಯ ಪರಿಣಾಮಕಾರಿ ಸಹಕಾರವನ್ನು ಸತ್ಯಾಗ್ರಹಿಗಳು ನೀಡತಕ್ಕದ್ದು, ಅಲ್ಲದೆ ಬೋಧನೆ ಮತ್ತು ಅನುಷ್ಠಾನಗಳಿಂದ ಮೇಲಿನ ತತ್ವಗಳಿಗೆ ಜನರನ್ನು ಬದ್ಧರಾಗುವಂತೆ ಮಾಡಲು ಪ್ರಯತ್ನಿಸ ತಕ್ಕದ್ದು ಎಂಬ ಸಲಹೆಯನ್ನು ನೀಡುವುದು".

ಪಂಜಾಬಿನಲ್ಲಿ ನಡೆದ ಅನ್ಯಾಯಗಳನ್ನು ಕುರಿತು ವಿಚಾರಣೆ ಏರ್ಪಡಿಸಬೇಕೆಂದು ಒತ್ತಾಯಪಡಿಸಲು ಏಪ್ರಿಲ್ ೨೦ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಪರಿಣಾಮಗಳೇನೇ ಆಗಲಿ, ಲೆಕ್ಕಿಸದೆ, ಗಾಂಧೀಯವರು ತಕ್ಷಣವೇ ಪಂಜಾಬಿಗೆ ಹೋಗಬೇಕೆಂದು ಒತ್ತಾಯಪಡಿಸಲಾಯಿತು. ಗಾಂಧೀಜಿ ವೈಸ್‌ರಾಯರಿಗೆ ಅಪ್ಪಣೆ ಯನ್ನು ಕೋರಿ ಕಾಗದ ಬರೆದರು. ತಂತಿ ಕಳುಹಿಸಿದರು. ಆದರೆ ಏನೂ ಪ್ರಯೋಜನ ವಾಗಲಿಲ್ಲ. ಗಾಂಧೀಜಿ ಯೋಚಿಸಿದರು, "ಅಗತ್ಯವಾದ ಅಪ್ಪಣೆ ಇಲ್ಲದೆ ನಾನು ಹೊರಟರೆ ಪಂಜಾಬಿನ ಎಲ್ಲೆಯೊಳಕ್ಕೆ ನನ್ನನ್ನು ಬಿಡುವುದಿಲ್ಲ. ಸವಿನಯ ಕಾನೂನುಭಂಗದಿಂದ ಒದಗುವ ತೃಪ್ತಿ ಮಾತ್ರವೇ ನನಗೆ ದೊರಕುವುದು". ತಾವು ಬಯಸಿದ ಶಾಂತಿಯ ವಾತಾವರಣ ಅವರಿಗೆ ಕಾಣಲಿಲ್ಲ. ಆದ್ದರಿಂದ ಸದ್ಯಕ್ಕೆ ಪಂಜಾಬಿಗೆ ಹೋಗುವ ವಿಷಯ ವನ್ನು ಅವರು ಕೈಬಿಟ್ಟರು.

ಮೇ ೧೧ರಂದು ಅವರು ವೈಸ್‌ರಾಯರ ಆಪ್ತ ಕಾರ್ಯದರ್ಶಿಗೆ ಒಂದು ಕಾಗದ ಬರೆದರು. "ನನ್ನ ಸಮಸ್ತ ಪ್ರಭಾವವೂ ಶಾಂತಿ ರಕ್ಷಣೆಗಾಗಿ ಎಂದು ನಿಮಗೆ ಭರವಸೆ ಕೊಡುವುದು ಅನವಶ್ಯ. ಅಷ್ಟನ್ನಾದರೂ ಮಾಡಿಯೇ ಮಾಡುತ್ತೇನೆ ಎಂದು ವೈಸ್ ರಾಯರು ನನ್ನನ್ನು ಅವಲಂಬಿಸುವ ಹಕ್ಕು ಅವರಿಗುಂಟು. ಆದರೆ ಸರ್ಕಾರದ ನೆರವು ದೊರೆಯದೇ ಹೋದರೆ ನನ್ನ ಪ್ರಭಾವವೆಲ್ಲ ನಿಷ್ಫಲವಾಗುತ್ತದೆ. ಮಹಮದೀಯರ ಪ್ರಶ್ನೆ ಮತ್ತು ರೌಲಟ್ ಶಾಸನವನ್ನು ತೆಗೆದು ಹಾಕುವ ಬಗ್ಗೆ ತೃಪ್ತಿಕರವಾದ ಘೋಷಣೆಯೇ ನನಗೆ ಅಗತ್ಯವಾಗಿರುವ ಬೆಂಬಲ. ಈ ಬೆಂಬಲವನ್ನು ಕೊಡುವುದು

ಸಾಧ್ಯವಿದ್ದರೆ, ತೃಪ್ತಿಗೊಂಡ ಭಾರತವನ್ನು ನೀವು ಕಾಣುವಿರಿ. ಈ ವಿಷಯದಲ್ಲಿ ಯಾವುದೇ ಸಂದೇಹವೂ ಇರಬೇಕಾಗಿಲ್ಲ".

ಪರಿಸ್ಥಿತಿಯನ್ನು ತಹಬಂದಿಗೆ ತರಲು ನೆರವು ನೀಡುವುದಕ್ಕೆ ತಾವು ಸಿದ್ಧರಾಗಿದ್ದೇವೆ ಎಂಬುದನ್ನು ಗಾಂಧೀಜಿ ಘೋಷಿಸಿದರೆ, ಅತ್ತ ಲಾರ್ಡ್ ಚೆಲ್ಮ್ಸ್‌ಫರ್ಡ್ ಸರ್ಕಾರದ ಸಂಕಲ್ಪವನ್ನು ಪ್ರಕಟಿಸಿದರು. ತಮಗೆ ದೊರೆಯುವ ಎಲ್ಲ ಬಲವನ್ನೂ ಪ್ರಯೋಗಿಸಿ ರಾಷ್ಟ್ರೀಯ ಚಳುವಳಿಯನ್ನು ದಮನಗೊಳಿಸುವುದು ತಮ್ಮ ಉದ್ದೇಶ ಎಂಬುದನ್ನು ಸ್ಪಷ್ಟವಾದ ಮಾತುಗಳಲ್ಲಿ ಘೋಷಿಸಿದರು.

ಪಂಜಾಬಿಗೆ ಮಾಡಿದ ಅನ್ಯಾಯ ಮತ್ತು ಕ್ರೌರ್ಯಗಳ ವಿರುದ್ಧ ಭಾರತದ ಎಲ್ಲೆಡೆಯೂ ಅಸಹನೆ ಮೂಡಿತ್ತು. ರವೀಂದ್ರನಾಥ ಠಾಕೂರರು ರಾಷ್ಟ್ರೀಯ ಪ್ರತಿಭಟನೆಯ ವಾಣಿಯಾದರು. ಭಾರತ ಸರ್ಕಾರವು ನೀಡಿದ್ದ ನೈಟ್ ಪದವಿಯನ್ನು ಅವರು ಹಿಂದಿರುಗಿಸಿದರು. ಮೇ ೩೦ನೇ ತಾರೀಖು ವೈಸ್‌ರಾಯರಿಗೆ ಬರೆದ ಪತ್ರದಲ್ಲಿ ದೌರ್ಜನ್ಯಗಳನ್ನು ಅವರು ಖಂಡಿಸಿದರು. ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಲು ಷಿಲ್ಲಾಂಗಿಗೆ ಹೋಗಿದ್ದವರು ಕಲ್ಕತ್ತಾಕ್ಕೆ ಬಂದರು. ಪ್ರತಿಭಟನೆಯನ್ನು ಸೂಚಿಸಲು ಒಂದು ಸಾರ್ವಜನಿಕಸಭೆಯನ್ನು ಕರೆಯುವಂತೆ ರಾಜಕೀಯ ನಾಯಕರಿಗೆ ಅವರು ಮಾಡಿದ ಮನವಿ ವಿಫಲವಾಯಿತು. ಆದ್ದರಿಂದ ಆ ಕಾರ್ಯವನ್ನು ಕೈಗೊಳ್ಳುವ ತೀರ್ಮಾನವನ್ನು ಅವರೇ ತೆಗೆದುಕೊಂಡರು. ಠಾಕೂರರು ಲಾರ್ಡ್ ಚೆಲ್ಮ್ಸ್‌ಫರ್ಡ್‌ರಿಗೆ ಬರೆದರು:

"ಯಾವುದೋ ಸ್ಥಳೀಯವಾದ ಗಲಭೆಗಳನ್ನು ದಮನಗೊಳಿಸಲು ಪಂಜಾಬಿನ ಸರ್ಕಾರವು ಕೈಗೊಂಡ ಕಾರ್ಯಕ್ರಮಗಳ ಘೋರತೆಯನ್ನು ನೋಡಿ ನಮಗೆ ಭೀಕರವಾದ ಆಘಾತ ಉಂಟಾಗಿದೆ. ಭಾರತದಲ್ಲಿ ಬ್ರಿಟಿಷರ ಪ್ರಜೆಗಳಾಗಿರುವ ನಮ್ಮ ಅಸಹಾಯಕ ಪರಿಸ್ಥಿತಿಯನ್ನು ಅದು ನಮಗೆ ಮನವರಿಕೆ ಮಾಡಿದೆ. ನಿರ್ಭಾಗ್ಯರಾದ ಜನತೆಗೆ ಕೊಟ್ಟ ಶಿಕ್ಷೆಗಳ ಪ್ರಮಾಣಮೀರಿದ ಉಗ್ರತೆ, ಅವುಗಳನ್ನು ನೀಡಿದ ಕ್ರಮಗಳು ಎಲ್ಲವೂ, ಅಲ್ಲೊಂದಿಲ್ಲೊಂದು ಎದ್ದು ಕಾಣುವ ಅಪವಾದಗಳನ್ನು ಬಿಟ್ಟರೆ, ಯಾವುದೇ ನಾಗರಿಕ ಸರ್ಕಾರವು—ಈಚಿನದಾಗಲೀ, ಬಹು ಹಿಂದಿನದಾಗಲೀ—ಎಂದೂ ನೀಡದಂಥವು. ನಿರಾಯುಧರೂ ಅಸಹಾಯಕರೂ ಆದ ಒಂದು ಜನತೆಗೆ ಮಾನವ ಜೀವಗಳನ್ನು ವಿನಾಶಗೊಳಿಸಲು ಬೇಕಾದ ಅಗಾಧ ದಕ್ಷತೆಯುಳ್ಳ ವ್ಯವಸ್ಥೆಯೊಂದು ಅಂಥ ಶಿಕ್ಷೆಯೊಂದನ್ನು ನೀಡಿತು ಎಂಬುದನ್ನು ಗಮನಿಸಿದರೆ ಅದು ರಾಜಕೀಯ ಔಚಿತ್ಯವಾಗಲೀ, ನೈತಿಕ ಸಮರ್ಥನೆಯಾಗಲೀ ತನಗಿದೆಯೆಂದು ಹೇಳಿಕೊಳ್ಳಲಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಪಂಜಾಬಿನ ನಮ್ಮ ಸೋದರರರು ಅನುಭವಿಸಿದ ಅಪಮಾನ, ಮತ್ತು ಯಾತನೆಗಳ ಸುದ್ದಿ ಬಲವಂತದ ಬಾಯಿಕಟ್ಟಿನ ಮೂಲಕ ಹೇಗೋ ಸೋರಿ ಹರಿದು ಭಾರತದ ಮೂಲೆ ಮೂಲೆಗಳಿಗೂ ಮುಟ್ಟಿದೆ. ಜನತೆಯ ಹೃದಯಗಳಲ್ಲಿ ಮೂಡಿದ ಸಾರ್ವತ್ರಿಕ ರೋಷದ ಯಾತನೆಯನ್ನು ನಮ್ಮ ಆಳರಸರು ಉಪೇಕ್ಷಿಸಿದ್ದಾರೆ. ಬಹುಶಃ ಅವರು ತಾವು ಒಳ್ಳೆಯ ಪರಿಣಾಮಕಾರಿಯಾದ ಪಾಠ ಕಲಿಸುತ್ತಿರು

ವೆಂದು ಭಾವಿಸಿ ತಮ್ಮನ್ನು ತಾವೇ ಅಭಿನಂದಿಸಿಕೊಳ್ಳುತ್ತಲೂ ಇರಬಹುದು. ನಮ್ಮ ಮನವಿಗಳೆಲ್ಲ ವ್ಯರ್ಥವಾಗಿವೆ. ತನ್ನ ಭೌತಿಕ ಶಕ್ತಿ ಮತ್ತು ನೈತಿಕ ಪರಂಪರೆಗಳಿಗೆ ತಕ್ಕ ಔದಾರ್ಯವನ್ನು ನಮ್ಮ ಸರ್ಕಾರವು ತೋರಬಹುದಾಗಿತ್ತು. ಆದರೆ ನಮ್ಮ ಸರ್ಕಾರದ ರಾಜಕೀಯ ನಿಪುಣತೆಯ ಉದಾತ್ತ ದೃಷ್ಟಿಯನ್ನು ಪ್ರತೀಕಾರದ ತೀವ್ರತೆಯು ಕುರುಡು ಗೊಳಿಸಿದೆ. ಇಂಥ ಸಮಯದಲ್ಲಿ ನನ್ನ ದೇಶಕ್ಕಾಗಿ ನಾನು ಮಾಡಬಹುದಾದ ಅತ್ಯಲ್ಪ ಸೇವೆ ಎಂದರೆ ಭೀಕರವಾದ ಯಾತನೆಯಿಂದ ಚಕಿತರಾಗಿ ಮೂಕರಾಗಿರುವ ಲಕ್ಷೋಪ ಲಕ್ಷ ದೇಶಬಾಂಧವರ ಪ್ರತಿಭಟನೆಗೆ ನಾನೇ ವಾಣಿಯಾಗುವ ಹೊಣೆಯನ್ನು ಹೊರು ವುದು. ಗೌರವ ಸೂಚಕ ಬಿರುದುಗಳು ತೇಜೋವಧೆಯ ಇಂಥ ಅಸಂಗತ ಪರಿಸ್ಥಿತಿ ಯಲ್ಲಿ ನಮ್ಮ ಅಪಮಾನಗಳನ್ನು ಕಣ್ಣು ಕುಕ್ಕುವಂತೆ ತೋರಿಸುತ್ತಿವೆ. ಪ್ರಮುಖರಲ್ಲ ದವರು ಎನಿಸಿಕೊಂಡಿರುವ ಕಾರಣಕ್ಕಾಗಿಯೇ ನಮ್ಮ ದೇಶಬಾಂಧವರು ಮಾನವ ಜೀವಿಗಳಿಗೆ ಯೋಗ್ಯವಲ್ಲದ ಅವನತಿಯನ್ನು ಸಹಿಸಬೇಕಾಗಿದೆ. ನಾನಾದರೋ ನನಗಿತ್ತಿ ರುವ ಎಲ್ಲ ವಿಶಿಷ್ಟ ಗೌರವಗಳನ್ನೂ ಕಿತ್ತೆಸೆದು ಅಂಥ ಜನತೆಯ ಪಕ್ಕದಲ್ಲಿ ನಿಲ್ಲಬಯಸು ತ್ತೇನೆ. ಈ ಕಾರಣಗಳಿಗಾಗಿ ನನ್ನನ್ನು ನೈಟ್‌ಹುಡ್ ಪದವಿಯಿಂದ ಬಿಡುಗಡೆ ಮಾಡ ಬೇಕೆಂದು ನಿಮಗೆ ಸಲ್ಲಬೇಕಾದ ಗೌರವ ಸಲ್ಲಿಸಿದರೂ ವಿಷಾದದಿಂದ ನಿಮ್ಮನ್ನು ಕೇಳಿ ಕೊಳ್ಳಲೇಬೇಕಾಗಿದೆ. ನಿಮ್ಮ ಹಿಂದಿನ ವೈಸ್‌ರಾಯ್ ಅವರಿಂದ ಚಕ್ರವರ್ತಿಯವರು ನನಗೆ ನೀಡಿದ ಈ ನೈಟ್ ಪದವಿಯನ್ನು ಪಡೆಯುವ ಗೌರವ ನನ್ನದಾಗಿತ್ತು. ಅವರ ಹೃದಯದ ಔದಾರ್ಯಕ್ಕಾಗಿ ಈಗಲೂ ನನಗೆ ತುಂಬ ಮೆಚ್ಚಿಕೆ ಇದೆ."

ಪಂಜಾಬಿನಲ್ಲಿ ಸೈನಿಕ ಕಾನೂನು ನಡೆಸಿದ ಭೀಕರ ಕೃತ್ಯಗಳನ್ನು ಕುರಿತು ವಿಚಾರಣೆ ನಡೆಸಬೇಕೆಂದು ಅಲಹಾಬಾದ್‌ನಲ್ಲಿ ಸಭೆ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಕೇಳಿತು. ಪಂಜಾಬಿನ ಘಟನೆಗಳ ವಿಚಾರಣೆಯನ್ನು ನಡೆಸಲು, ಭಾರತದಲ್ಲಿ ಅಥವಾ ಇಂಗ್ಲೆಂಡಿನಲ್ಲಿ ಈ ಬಗ್ಗೆ ಅಗತ್ಯವಾದ ನಡವಳಿಕೆಗಳನ್ನು ನಡೆಸಲು ಮತ್ತು ಇವುಗಳಿಗೆ ಬೇಕಾಗುವ ನಿಧಿಯನ್ನು ಸಂಗ್ರಹಿಸಲು ಒಂದು ಸಮಿತಿ ರಚಿತವಾಯಿತು. ಇಂಗ್ಲೆಂಡಿನ ಪ್ರಧಾನಿ, ಭಾರತದ ಸೆಕ್ರೆಟರಿ ಆಫ್ ಸ್ಟೇಟ್ (ರಾಜ್ಯ ಕಾರ್ಯದರ್ಶಿ) ಮತ್ತು ಲಾರ್ಡ್ ಸಿನ್ಹಾ ಇವರೆಲ್ಲರಿಗೂ ಕೇಬಲ್ ಕಳುಹಿಸಿ ಈ ವಿಚಾರಣೆಯು ನಡೆಯುವವರೆಗೆ ಲಷ್ಕರಿ ಕಾನೂನಿನ ಪ್ರಕಾರ ಕೊಟ್ಟಿದ್ದ ಎಲ್ಲ ಶಿಕ್ಷೆಗಳನ್ನೂ ಸ್ಥಗಿತಗೊಳಿಸಬೇಕೆಂದು ಕೇಳಿ ಕೊಳ್ಳಲಾಯಿತು.

ಸವಿನಯ ಪ್ರತಿಭಟನೆಯನ್ನು ಸದ್ಯಕ್ಕೆ ನಿಲ್ಲಿಸುವುದರ ಮೂಲಕ "ದೇಶ, ಸರ್ಕಾರ ಹಾಗೂ ಪಂಜಾಬಿನ ನಾಯಕರುಗಳಿಗೆ" ಹೆಚ್ಚಿನ ಸೇವೆಯನ್ನು ಸಲ್ಲಿಸಬಹುದು ಎಂದು ಗಾಂಧೀಜಿ ಭಾವಿಸಿದರು. ಜುಲೈ ೨೧ರಂದು ಅವರು ಒಂದು ಹೇಳಿಕೆ ನೀಡಿದರು: "ಸವಿನಯ ಕಾನೂನು ಭಂಗವು ಸಾರ್ವಜನಿಕರ ಭದ್ರತೆಗೆ ತೀವ್ರ ತರವಾದ ಅಪಾಯ ವನ್ನು ಉಂಟು ಮಾಡುತ್ತದೆ ಎಂದು ಬೊಂಬಾಯಿಯ ಗವರ್ನರ್ ಮೂಲಕ ಭಾರತ ಸರ್ಕಾರವು ನನಗೆ ಉಗ್ರವಾದ ಎಚ್ಚರಿಕೆಯನ್ನು ನೀಡಿದೆ. ನನ್ನನ್ನು ಆಹ್ವಾನಿಸಿ ಗವರ್ನರರೇ

ಸ್ವತಃ ಇವನ್ನು ಪ್ರಸ್ತಾಪಿಸಿದ್ದಾರೆ. ಈ ಎಚ್ಚರಿಕೆಗಳು ಹಾಗೂ ದಿವಾನ್ ಬಹಾದುರ್ ಗೋವಿಂದ ರಾಘವ ಅಯ್ಯರ್, ಸರ್ ನಾರಾಯಣ ಚಂದಾವರ್ಕರ್ ಮತ್ತು ಅನೇಕ ಪತ್ರಿಕಾ ಸಂಪಾದಕರು ಸಾರ್ವಜನಿಕವಾಗಿ ವ್ಯಕ್ತಪಡಿಸಿರುವ ತುರ್ತು ಅಪೇಕ್ಷೆ–ಇವು ಗಳಿಗೆ ಓಗೊಟ್ಟು ಆಲೋಚನೆಯ ಅನಂತರ ಸದ್ಯಕ್ಕೆ ಸವಿನಯ ಪ್ರತಿಭಟನೆಯನ್ನು ಮುಂದುವರಿಸಕೂಡದು ಎಂದು ತೀರ್ಮಾನಿಸಿದ್ದೇನೆ. ಸವಿನಯ ಪ್ರತಿಭಟನೆಯ ತತ್ತ್ವ ವನ್ನು ಅರಿಯದಿರಬಹುದಾದವರು ಹಿಂಸೆಯಲ್ಲಿ ತೊಡಗಬಹುದು ಎಂಬ ಏಕೈಕ ಕಾರಣ ವನ್ನು ಮುಂದೊಡ್ಡಿ ತೀವ್ರಗಾಮಿ ಪಕ್ಷದ ಕೆಲವು ಪ್ರಮುಖ ಮಿತ್ರರು ಇದೇ ಸಲಹೆ ಯನ್ನು ನನಗೆ ನೀಡಿದರು ಎಂದೂ ಹೇಳಬೇಕಾಗಿದೆ. ಇತರ ಅನೇಕ ಸತ್ಯಾಗ್ರಹಿಗಳ ಅಭಿಪ್ರಾಯಕ್ಕೆ ಅನುಗುಣವಾಗಿ ಸತ್ಯಾಗ್ರಹದ ಒಂದು ಅಂಶವಾದ ಸವಿನಯ ಪ್ರತಿ ಭಟನೆಗೆ ಕಾಲವು ಪಕ್ವವಾಗಿದೆ ಎಂಬ ನಿರ್ಣಯಕ್ಕೆ ನಾನು ಬಂದಿದ್ದೆ. ಆಗ ವೈಸ್‌ರಾಯರಿಗೆ ಗೌರವಪೂರ್ವಕವಾದ ಒಂದು ಕಾಗದವನ್ನು ನಾನು ಬರೆದೆ. ನನ್ನ ಉದ್ದೇಶ ಏನು ಎಂಬುದನ್ನು ಅವರಿಗೆ ತಿಳಿಸಿದೆ. ರೌಲಟ್ ಕಾನೂನುನನ್ನು ತೆಗೆದು ಹಾಕಬೇಕು, ಪಂಜಾಬಿನ ಗಲಭೆಗಳನ್ನು ಕುರಿತು ವಿಚಾರಣೆ ನಡೆಸಲು ಶಕ್ತಿಯುತವೂ, ನಿಷ್ಪಕ್ಷಪಾತವೂ ಆದ ಸಮಿತಿಯೊಂದನ್ನು ಏರ್ಪಡಿಸಬೇಕು. ಈಗ ವಿಧಿಸಿರುವ ಶಿಕ್ಷೆಗಳನ್ನು ಬದಲಾಯಿಸುವ ಅಧಿಕಾರ ಅದಕ್ಕೆ ಇರಬೇಕು ಎಂದು ನಾನು ಹೇಳಿದ್ದೆ. ನಾನು ಒತ್ತಾಯ ಪಡಿಸಿರುವಂಥ ವಿಚಾರಣಾ ಸಮಿತಿಯನ್ನು ಸದ್ಯದಲ್ಲೇ ನೇಮಕ ಮಾಡಲಾಗುವುದೆಂದು ನನಗೆ ಭರವಸೆ ನೀಡಲಾಗಿದೆ. ಸೌಹಾರ್ದದ ಈ ಸೂಚನೆಗಳನ್ನು ಸರ್ಕಾರ ನೀಡಿದ ಮೇಲೆ ಅದರ ಎಚ್ಚರಿಕೆಗೆ ನಾನು ಕಿವಿಗೊಡದೆ ಹೋದರೆ ವಿವೇಕವಲ್ಲ. ವಾಸ್ತವವಾಗಿ ಸರ್ಕಾರದ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತಿರುವುದು ಸವಿನಯ ಪ್ರತಿಭಟನೆಯ ಸ್ವರೂಪ ಎಂಥಹದು ಎಂಬುದನ್ನು ಇನೂ ಚೆನ್ನಾಗಿ ತೋರಿಸುತ್ತದೆ ಸವಿನಯ ಪ್ರತಿಭಟನೆ ಮಾಡುವವನು ಸರ್ಕಾರವನ್ನು ಇರುಕಿಗೆ ಸಿಲುಕಿಸಲು ಎಂದೂ ಬಯಸುವುದಿಲ್ಲ.”

ಆದರೆ ಅವರು ಈ ಎಚ್ಚರಿಕೆಯನ್ನು ನೀಡಿದರು: “ಎಲ್ಲೋ ಒಮ್ಮೊಮ್ಮೆ ನಾನು ಮಾಡುವ ಪ್ರತಿಭಟನೆಯೇ ಹೊತ್ತಿಸಿದ ಬೆಂಕಿ ಕಡ್ಡಿಯಾಗುವ ಪಕ್ಷಕ್ಕೆ ರೌಲಟ್ ಶಾಸನವೂ ಮತ್ತು ಅದನ್ನು ಶಾಸನಗಳ ಕಡತದಲ್ಲಿ ಉಳಿಸಿಕೊಳ್ಳಲೇ ಬೇಕು ಎಂಬ ಹಟವೂ ಭಾರತಾ ದ್ಯಂತ ಎರಚಿದ ಅಂಥ ಸಹಸ್ರಸಹಸ್ರ ಬೆಂಕಿ ಕಡ್ಡಿಗಳಾಗುತ್ತವೆ. ಸವಿನಯ ಪ್ರತಿಭಟನೆ ಯನ್ನು ಸಂಪೂರ್ಣವಾಗಿ ತಪ್ಪಿಸಬೇಕಾದರೆ ಆ ಶಾಸನವನ್ನು ತೆಗೆದು ಹಾಕುವುದೊಂದೇ ಮಾರ್ಗ.”

ಕಾಂಗ್ರೆಸ್ ನಿರ್ಣಯಕ್ಕೆ ಅನುಗುಣವಾಗಿ ಸ್ವಾಮಿ ಶ್ರದ್ಧಾನಂದರು, ಮೋತಿಲಾಲ್ ನೆಹರು ಮತ್ತು ಮಾಳವೀಯರು ವಿಚಾರಣೆಯನ್ನು ನಡೆಸಲು ಜುಲೈ ತಿಂಗಳಲ್ಲಿ ಪಂಜಾಬಿಗೆ ಹೋದರು.

ಅಕ್ಟೋಬರ್ ತಿಂಗಳಲ್ಲಿ ಭಾರತ ಸರ್ಕಾರವು ತನ್ನ ವಿಚಾರಣಾ ಸಮಿತಿಯ ಸದಸ್ಯರನ್ನು ಹೆಸರಿಸಿತು. ಲಾರ್ಡ್ ಜಸ್ಟಿಸ್ ಹಂಟರ್ ಅದರ ಅಧ್ಯಕ್ಷರಾಗಿದ್ದರು.

ಅದರ ಎಂಟು ಜನ ಸದಸ್ಯರಲ್ಲಿ ಮೂವರು ಭಾರತೀಯರು: ಅವರುಗಳೆಂದರೆ, ಸರ್ ಸುಲ್ತಾನ್ ಅಹಮದ್, ಸರ್ ಚಿಮನ್‌ಲಾಲ್ ಸೆಟಲ್‌ವಾಡ್ ಮತ್ತು ಪಂಡಿತ ಜಗತ್ ನಾರಾಯಣ್. ಅದೇ ಕಾಲಕ್ಕೆ ಭಾರತ ಸರ್ಕಾರವು ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಸ್ಥಾಪಿಸಲು ತಾವು ಏನೇ ಕಾರ್ಯಕ್ರಮಗಳನ್ನು ಕೈಗೊಂಡರೂ ತಮಗೆ ರಕ್ಷಣೆ ನೀಡುತ್ತೇವೆ, ಶಿಕ್ಷೆ, ಜುಲ್ಮಾನೆ ಮುಂತಾದುವುಗಳಿಂದ ವಿನಾಯಿತಿ ನೀಡುತ್ತೇವೆ ಎಂದು ಭರವಸೆ ಕೊಡುವ ಮಸೂದೆ (indemnity bill)ಯನ್ನು ಮಂಡಿಸಿ ಅಂಗೀಕರಿಸಿದರು.

ಕಾಂಗ್ರೆಸ್ ನಾಯಕರು ಈ ಸಮಿತಿಯ ರಚನಾ ಕ್ರಮವನ್ನು ತೀವ್ರವಾಗಿ ವಿರೋಧಿಸಿದರು. ಭಾರತ ಸರ್ಕಾರವೇ ಆರೋಪಿಯಾಗಿರುವಾಗ ವಿಚಾರಣಾ ಸಮಿತಿಯನ್ನು ಭಾರತ ಸರ್ಕಾರವೇ ನೇಮಿಸಬಾರದಾಗಿತ್ತು ಎಂಬ ಮುಖ್ಯ ವಾದವನ್ನು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮಾಳವೀಯರು ಎತ್ತಿದರು.

ಯಂಗ್ ಇಂಡಿಯಾ

೧೯೧೯

ದಾರುಣವಾದ ಅನ್ಯಾಯ ಮತ್ತು ದಮನಗಳ ಕತೆಗಳು ಪ್ರತಿದಿನ ಪಂಜಾಬಿನಿಂದಲೂ ಹರಿಯತೊಡಗಿದವು. ಉರಿ ಕಾರುವ ಲೇಖನಗಳನ್ನು ಬರೆಯುತ್ತಿದ್ದ ಬಿ.ಜಿ. ಹಾರ್ನಿಮನ್ ಅವರನ್ನು (ಬಾಂಬೇ ಕ್ರಾನಿಕಲ್ ಪತ್ರಿಕೆಯ ಸಂಪಾದಕರು) ಇದ್ದಕ್ಕಿದ್ದಂತೆ ಇಂಗ್ಲೆಂಡಿಗೆ ಹಾರಿಸಿಕೊಂಡೊಯ್ಯಲಾಯಿತು. ಬಾಂಬೆ ಕ್ರಾನಿಕಲ್ ಪತ್ರಿಕೆಯನ್ನೂ ಅದರ ಮುದ್ರಣಾಲಯವನ್ನೂ ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸಲಾಯಿತು, ಈ ಬೆಳವಣಿಗೆಗಳಿಂದಾಗಿ ಬಾಂಬೇ ಕ್ರಾನಿಕಲ್ ಪತ್ರಿಕೆಯ ಡೈರೆಕ್ಟರುಗಳು ಈ ಪತ್ರಿಕೆಯ ಜವಾಬ್ದಾರಿಯನ್ನು ಹೊರುವಂತೆ ಗಾಂಧೀಜಿಯನ್ನು ಕೇಳಿಕೊಂಡರು. ಇವರು ಹಾಗೆ ಮಾಡುವ ಮುನ್ನವೇ ಪತ್ರಿಕೆಯನ್ನು ಸ್ಥಗಿತಗೊಳಿಸಬೇಕಾಯಿತು. ಕಾರಣ, ಸರ್ಕಾರವು ಕೈಗೊಂಡ ಉಗ್ರ ಕ್ರಮ.

ಬಾಂಬೇ ಕ್ರಾನಿಕಲ್ ಪತ್ರಿಕೆಯೊಂದಿಗೆ ಸಂಬಂಧವನ್ನು ಹೊಂದಿದ್ದ ಜಮ್ನಾದಾಸ್ ದ್ವಾರಕಾದಾಸ್, ಉಮರ್ ಸೋಬಾನಿ ಮತ್ತು ಶಂಕರಲಾಲ್ ಬ್ಯಾಂಕರ್ ಅವರುಗಳು 'ಯಂಗ್ ಇಂಡಿಯಾ' ಪತ್ರಿಕೆಯ ಹತೋಟಿಯನ್ನು ಹೊಂದಿದ್ದರು. ಬಾಂಬೇ ಕ್ರಾನಿಕಲ್‌ನ ಬಾಯಿ ಮುಚ್ಚಿ ಬಿಟ್ಟದ್ದರಿಂದ ಗಾಂಧೀಜಿಯು ಯಂಗ್ ಇಂಡಿಯಾದ ಸಂಪಾದಕತ್ವವನ್ನು ಒಪ್ಪಿಕೊಳ್ಳಬೇಕೆಂದು ಅವರು ಕೇಳಿಕೊಂಡರು. ಬಾಂಬೇ ಕ್ರಾನಿಕಲ್ ಪತ್ರಿಕೆಯನ್ನು ನಿಲ್ಲಿಸಿದ್ದರಿಂದ ಆಗಿದ್ದ ತೆರಪನ್ನು ತುಂಬಲು ಸಾಪ್ತಾಹಿಕವಾಗಿದ್ದ ಯಂಗ್ ಇಂಡಿಯಾವನ್ನು ಅರ್ಧ ಸಾಪ್ತಾಹಿಕವಾಗಿ ಹೊರಡಿಸಬೇಕೆಂದೂ ತೀರ್ಮಾನಿಸಲಾಯಿತು. ಗಾಂಧೀಜಿ ತಕ್ಷಣವೇ ಆ ಸಲಹೆಯನ್ನು ಒಪ್ಪಿಕೊಂಡರು. ಇಂಗ್ಲಿಷ್ ಪತ್ರಿಕೆಯ ಜೊತೆಗೆ ಗುಜರಾತಿಯಲ್ಲೂ ಒಂದು ಪತ್ರಿಕೆ ನಡೆಸಬೇಕು ಎಂಬುದು ಗಾಂಧೀಜಿ ಅವರ ತೀವ್ರವಾದ ಅಪೇಕ್ಷೆಯಾಗಿತ್ತು. ಅದಕ್ಕೆ ಅವಕಾಶವೂ ಬಂದೊದಗಿತು. ಇಂದುಲಾಲ್ ಯಾಜ್ಞಿಕ್, ಉಮರ್ ಸೋಬಾನಿ ಮತ್ತು ಶಂಕರಲಾಲ್ ಬ್ಯಾಂಕರ್ ಅವರುಗಳು ನಡೆಸುತ್ತಿದ್ದ ನವಜೀವನ್ ಎಂಬ ಗುಜರಾತಿ ಮಾಸಿಕೆಯನ್ನು ಗಾಂಧೀಜಿಯವರ ವಶಕ್ಕೆ ಒಪ್ಪಿಸಲಾಯಿತು. ಅವರು ಅದನ್ನು ಸಾಪ್ತಾಹಿಕವನ್ನಾಗಿ ಮಾಡಿದರು.

ಇಷ್ಟರಲ್ಲಿ ಬಾಂಬೇ ಕ್ರಾನಿಕಲ್ ಪತ್ರಿಕೆಯ ಪ್ರಕಟಣೆ ಮತ್ತೆ ಆರಂಭವಾಯಿತು. ಆದ್ದರಿಂದ ಯಂಗ್ ಇಂಡಿಯಾ ಮತ್ತೆ ಮೊದಲಿನಂತೆ ಸಾಪ್ತಾಹಿಕವಾಯಿತು. ಎರಡು ಸಾಪ್ತಾಹಿಕಗಳನ್ನು ಬೇರೆ ಬೇರೆ ಕಡೆಗಳಿಂದ ಪ್ರಕಟಿಸುವುದು ಗಾಂಧೀಜಿಗೆ ತುಂಬ ಅನಾನುಕೂಲವಾಗುತ್ತಿತ್ತು. ನವಜೀವನ್ ಪತ್ರಿಕೆ ಈಗಾಗಲೇ ಅಹಮದಾಬಾದಿನಿಂದ

ಹೊರಡುತ್ತಿತ್ತು. ಆದ್ದರಿಂದ ಗಾಂಧೀಜಿಯ ಸಲಹೆಯಂತೆ ಯಂಗ್ ಇಂಡಿಯಾವನ್ನೂ ಅಲ್ಲಿಗೆ ಒಯ್ಯಲಾಯಿತು. ಯಾವ ಅಡೆತಡೆಗಳೂ ಇಲ್ಲದ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಯಸಿ ಅವರು ಅಹಮದಾಬಾದಿನಲ್ಲಿ ತಮ್ಮದೇ ಮುದ್ರಣಾಲಯವನ್ನು ಪ್ರಾರಂಭಿಸಿದರು.

ಗಾಂಧೀಜಿಯವರ ಪೂರ್ಣವಾದ ಹತೋಟಿಯಲ್ಲಿ ೧೯೧೯ರ ಅಕ್ಟೋಬರ್ ೭ನೇ ತಾರೀಖು ನವಜೀವನ್ ಪತ್ರಿಕೆಯೂ, ಮಾರನೆಯ ದಿನ ಯಂಗ್ ಇಂಡಿಯಾವು ಪ್ರಕಟವಾದುವು. ಎರಡೂ ಪತ್ರಿಕೆಗಳಿಗೆ ಗಾಂಧೀಜಿ ಸಂಪಾದಕರು. ಮಹಾದೇವ ದೇಸಾಯಿಯವರು ಪ್ರಕಾಶಕರು. ಶಂಕರಲಾಲ್ ಬ್ಯಾಂಕರ್ ಮುದ್ರಕರು. ಸತ್ಯಾಗ್ರಹದ ವಿಷಯಕ್ಕೆ ಸಾರ್ವಜನಿಕರಿಗೆ ತಿಳಿವಳಿಕೆಯನ್ನು ನೀಡುವ ಕೆಲಸವನ್ನು ಗಾಂಧೀಜಿ ಈಗ ಪ್ರಾರಂಭಿಸಿದರು. ಪತ್ರಿಕೆಗೆ ಒಂದು ಆಣೆ ಬೆಲೆ. ಭಾರತದ ಮೂಲೆಮೂಲೆಗಳಲ್ಲಿ ಕೆಲವೊಮ್ಮೆ ಗುಂಪುಗುಂಪಾಗಿ ಅದನ್ನು ಬೇಗನೇ ಜನರು ಓದತೊಡಗಿದರು. ಒಂದು ಕಾಲಕ್ಕೆ ಅವುಗಳ ಪ್ರಸಾರ ೪೦ ಸಾವಿರವನ್ನು ಮುಟ್ಟಿತು. ಹೆಚ್ಚು ಕಡಮೆ ಎಲ್ಲ ಭಾರತೀಯ ಪತ್ರಿಕೆಗಳೂ ಗಾಂಧೀಜಿಯವರ ಲೇಖನಗಳನ್ನು ಎತ್ತಿ ಪ್ರಕಟಿಸಿದುವು.

೧೯೧೯ರ ಅಕ್ಟೋಬರ್ ೮ನೇ ತಾರೀಖು ಬುಧವಾರ ಪ್ರಕಟವಾದ ಯಂಗ್ ಇಂಡಿಯಾದ ಮೊದಲನೆಯ ಸಂಚಿಕೆಯಲ್ಲಿ ಗಾಂಧೀಜಿ ಹೊಸ ಸ್ವರವನ್ನೆತ್ತಿದರು. "ಭದ್ರತೆಯಿಲ್ಲ" ಎಂಬ ಲೇಖನದೊಂದಿಗೆ ಮೊದಲನೆಯ ಪುಟ ಆರಂಭವಾಗಿತ್ತು.

"ನವಜೀವನದ ಮುದ್ರಣದ ವಿಷಯಕ್ಕೆ ಬೇಕಾದಷ್ಟು ತೊಂದರೆಗಳಿದ್ದುವು. ಅಲ್ಲದೆ ಯಂಗ್ ಇಂಡಿಯಾವನ್ನು ಅಹಮದಾಬಾದಿನಲ್ಲಿ ಮುದ್ರಿಸಲು ಏರ್ಪಾಡುಗಳು ನಡೆಯುತ್ತಿದ್ದುವು. ಆದ್ದರಿಂದ ಅಹಮದಾಬಾದಿನ ಮನೋಹರ ಮುದ್ರಣಾಲಯವನ್ನು ಕೊಂಡುಕೊಂಡು ಅದಕ್ಕೆ ನವಜೀವನ ಮುದ್ರಣಾಲಯ ಎಂಬುದಾಗಿ ನಾಮಕರಣ ಮಾಡಲಾಗಿದೆ. ಆದ್ದರಿಂದ ಮೂರು ಹೇಳಿಕೆಗಳನ್ನು ಬರೆದು ಕೊಡಬೇಕಾಯಿತು. ಮೊದಲನೆಯದು ಮುದ್ರಣಾಲಯಕ್ಕೆ ಸಂಬಂಧಿಸಿದ್ದು. ಎರಡನೆಯದು ನವಜೀವನವನ್ನು ಹೊಸ ಮುದ್ರಣಾಲಯಕ್ಕೆ ವರ್ಗಾಯಿಸುವ ಬಗ್ಗೆ. ಮೂರನೆಯದು ಯಂಗ್ ಇಂಡಿಯಾವನ್ನು ಅದೇ ಮುದ್ರಣಾಲಯಕ್ಕೆ ವರ್ಗಾಯಿಸಿದ ಬಗ್ಗೆ. ವಾರಪತ್ರಿಕೆಯಾದ ನವಜೀವನಕ್ಕೆ ಐನೂರು ರೂಪಾಯಿ ಠೇವಣಿ ಇಡಬೇಕಾಯಿತು. ಯಂಗ್ ಇಂಡಿಯಾ ಪತ್ರಿಕೆಯು ಠೇವಣಿಯನ್ನು ತಪ್ಪಿಸಿಕೊಂಡಿತು. ಕಾರಣ, ಮುದ್ರಕನೇ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಮುದ್ರಣಾಲಯದ ಒಡೆಯನೂ ಆಗಿದ್ದದ್ದು. ಬೊಂಬಾಯಿಯಲ್ಲಿ ಮುದ್ರಣಾಲಯವೇ ಠೇವಣಿಗೆ ಒಳಪಟ್ಟಿತ್ತು. ಆದ್ದರಿಂದ ಯಂಗ್ ಇಂಡಿಯಾ, ನವಜೀವನ ಹಾಗೂ ಮುದ್ರಣಾಲಯಗಳ ಗತಿ ಏನಾದೀತು ಎಂಬುದೇ ಒಂದು ಸಮಸ್ಯೆಯಾಗಿತ್ತು. ಆದರೆ ಪಕ್ವವಾದ ಪರ್ಯಾಲೋಚನೆಯ ಫಲವಾಗಿ ಜಿಲ್ಲಾ ನ್ಯಾಯಾಧೀಶರು ಈ ಪತ್ರಿಕೆಗಳ ಪ್ರಕಾಶಕರಿಗಾಗಲೀ, ಮುದ್ರಣಾಲಯದ ಒಡೆಯರಿಗಾಗಲೀ ಯಾವುದೇ ಠೇವಣಿಯನ್ನೂ ವಿಧಿಸಲಿಲ್ಲ. ಪತ್ರಿಕಾಕರ್ತನಿಗೆ ಠೇವಣಿ ಸಲ್ಲಿಸ

ಬೇಕಾದುದರಿಂದೇನೂ ಹೆಚ್ಚು ವ್ಯತ್ಯಾಸವಾಗುವುದಿಲ್ಲವಾದರೂ ಅದನ್ನು ಮಾಫೀ ಮಾಡಿದಾಗ ಅವನ ಜವಾಬ್ದಾರಿ ವಾಸ್ತವವಾಗಿಯೂ ಹೆಚ್ಚಾಗುತ್ತದೆ. ಆದ್ದರಿಂದ ಪತ್ರಿಕಾಶಾಸನದಲ್ಲಿರುವ ಅಂಶಗಳು ಆ ಶಾಸನವನ್ನು ವಿರೂಪಗೊಳಿಸುತ್ತ ಹೋಗುವ ವರೆಗೂ ಠೇವಣಿಯನ್ನು ಮನ್ನಾ ಮಾಡುವುದು ಸರ್ಕಾರಕ್ಕೆ ಗೌರವಾಸ್ಪದವಾದರೂ ಈ ವಿನಾಯಿತಿ ದೊರಕಿರುವ ಯಾವುದೇ ಪತ್ರಿಕೆಯ ಹತೋಟಿಯುಳ್ಳವರಿಗೇ ಆಗಲಿ ಅದು ಅಭಿನಂದನೀಯವಾದ ವಿಷಯವೇನೂ ಆಗುವುದಿಲ್ಲ".

ಗಾಂಧೀಜಿ ಎತ್ತಿದ ಎರಡನೆಯ ಸ್ವರವು: ಕೌನ್ಸಿಲ್ಲಿನಲ್ಲಿ ನಡೆದ ಒಂದು ಸ್ವಾರಸ್ಯ ಕರವಾದ ಘಟನೆಯನ್ನು ಎತ್ತಿಕೊಂಡು ವಿಧಾನ ಸಭೆಗಳಲ್ಲಿ ಭಾರತೀಯ ಭಾಷೆಗಳನ್ನು ಬಳಸುವ ಅಗತ್ಯವನ್ನು ಎತ್ತಿ ತೋರಿಸಿತು.

"ಗೌರವಾನ್ವಿತ ಸದಸ್ಯರಾದ ಶ್ರೀ ಸಿನ್ಹಾ ಅವರು ದಂಡ ವಿನಾಯಿತಿ ಮಸೂದೆ (Indemnity Bill)ಯನ್ನು ಕುರಿತು ಮಾತನಾಡುತ್ತಾ ಪಾರಿಭಾಷಿಕ ಪದಗಳ ಗೊಂದಲದಲ್ಲಿ ಮುಳುಗಿ ಹೋದರು. ಸರ್ ಜಾರ್ಜ್ ಲಾಂಡಿಸ್ ಅವರನ್ನು ಎಚ್ಚರಿಸಿ ದರು. ಶ್ರೀ ಸಿನ್ಹಾ ಬಾಯಿತಪ್ಪಿ ಹಾಗೆ ಹೇಳಿದರೆಂದು ವಾದ ಮಾಡಿ ಅಧ್ಯಕ್ಷರಾದ ವೈಸ್‌ರಾಯರು ಸಿನ್ಹಾ ಪಕ್ಷ ವಹಿಸಿದರು. ಆಗ ಶ್ರೀ ಸಿನ್ಹಾ ಅವರು ಗಂಭೀರವೂ, ಬಿಚ್ಚು ಮನಸ್ಸಿನವೂ ಆದ ಈ ಮಾತುಗಳನ್ನು ಹೇಳಿದರು: ಈ ಪರಿಷತ್ತಿನಲ್ಲಿ ವಿದೇಶೀ ಭಾಷೆಯೊಂದರಲ್ಲಿ ಮಾತನಾಡುವಾಗ ನಮಗಾಗುವ ಕಷ್ಟಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಮಾನ್ಯ ವೈಸ್‌ರಾಯರಿಗೆ ಕಷ್ಟವಾಗುತ್ತದೆ. ನಾವು ತಪ್ಪು ಮಾಡು ವುದು ಸಹಜ. ಇದು ತೀರ ನಿಜವಾದದ್ದು. ನಮ್ಮ ಮಾತೃಭಾಷೆಯಲ್ಲೇ ನಾವು ತಪ್ಪು ಗಳನ್ನು ಮಾಡುವ ಸಂಭವವುಂಟು. ಆದರೆ ಅವು ವಿದೇಶೀ ಭಾಷೆಯೊಂದನ್ನು ಮಾತ ನಾಡುವಾಗ ಆಗುವ ತಪ್ಪುಗಳಷ್ಟು ಹಾಸ್ಯಾಸ್ಪದವಾಗಿರುವುದಿಲ್ಲ. ನಾವು ಇಂಗ್ಲಿಷಿನಲ್ಲಿ ಮಾತನಾಡಬೇಕಾಗಿ ಬಂದಿರುವುದು ನಾವು ಪೂರ್ಣವಾಗಿ ಚೇತರಿಸಿಕೊಳ್ಳಲಾರದಂಥ ಯಮಭಾರವನ್ನು ನಮ್ಮ ಮೇಲೆ ಹೇರುತ್ತದೆ ಎಂದು ಪ್ರೊ. ಜದುನಾಥ ಸರ್ಕಾರ್ ಹೇಳಿ ದ್ದಾರೆ. ಈ ಕೆಡುಕಿಗೆ ಪರಿಹಾರವೆಂದರೆ ನಮ್ಮ ವಿಧಾನಸಭೆಗಳಲ್ಲಿ ನಮ್ಮದೇ ಭಾಷೆ ಗಳನ್ನು ಬಳಸುವುದರಲ್ಲಿ ಸ್ವಪ್ರಭುತ್ವವನ್ನು ಪ್ರಾರಂಭ ಮಾಡಬೇಕು–ಪ್ರಾಂತ ವಿಧಾನ ಸಭೆಗಳಲ್ಲಿ ' ಪ್ರಾಂತ ಭಾಷೆಗಳೂ, ಹಿಂದಿ ಮತ್ತು ಉರ್ದುಗಳಿಂದ ಉತ್ಪನ್ನವಾದ ಹಿಂದೂ ಸ್ತಾನಿಯು ವರಿಷ್ಠ ಪರಿಷತ್ತಿನಲ್ಲೂ (Imperial council) ಬಳಸಲ್ಪಡತಕ್ಕದ್ದು. ಕಾಂಗ್ರೆಸ್ ಮತ್ತು ಇತರ ಸಮ್ಮೇಳನಗಳಲ್ಲಿ ಈ ವಿಷಯಕವಾದ ಬದಲಾವಣೆಗಳನ್ನು ತರುವುದಕ್ಕಿಂತ ಉತ್ತಮವಾದ ಪ್ರಾರಂಭ ಬೇರೊಂದಿಲ್ಲ. ಈ ಸಭೆಗಳಲ್ಲಿ ಇಂಗ್ಲಿಷನ್ನು ಮಾಧ್ಯಮವಾಗಿ ಮಾಡಿಕೊಂಡು ನಮ್ಮ ಜನತೆಗೆ ವಾಸ್ತವವಾದ ಅಪಕಾರವನ್ನೇ ಮಾಡಿದ್ದೇವೆ.. ಏಕೆಂದರೆ, ನಮ್ಮ ವಾರ್ಷಿಕಸಭೆಗಳಲ್ಲಿ ನಡೆಯುತ್ತಿರುವುದೇನು ಎಂಬು ದರ ಬಗ್ಗೆ ಅವರಿಗೆ ತೀರ ಅಸ್ಪಷ್ಟವಾದ ಭಾವನೆ ಮಾತ್ರ ಇದೆ. ಅಲ್ಲಿನ ನಡೆವಳಿಕೆಗಳನ್ನು ಇಂಗ್ಲಿಷಿನಲ್ಲೇ ನಡೆಸಬೇಕೆಂದು ಹಟ ಹಿಡಿದು ಜನಸಾಮಾನ್ಯರಿಗೆ ರಾಜಕೀಯ ಶಿಕ್ಷಣ

ದೊರೆಯುವುದಕ್ಕೆ ನಾವು ಅಡ್ಡಿಯನ್ನೇ ಉಂಟುಮಾಡಿದ್ದೇವೆ. ರಾಷ್ಟ್ರೀಯ ಕಾಂಗ್ರೆಸ್ಸಿನ ೩೫ ವರ್ಷಗಳ ಅಸ್ತಿತ್ವದಲ್ಲಿ ಇಂಗ್ಲಿಷನ್ನು ಬಿಟ್ಟು ಹಿಂದೂಸ್ತಾನಿಯಲ್ಲೇ ಎಲ್ಲಾ ವ್ಯವಹಾರ ಗಳನ್ನೂ ನಡೆಸಿದ್ದಿದ್ದರೆ ಏನಾಗುತ್ತಿತ್ತು ಎಂಬುದರ ಕಲ್ಪನೆ ನನಗಿದೆ. ನಮ್ಮ ಜನತೆಯಲ್ಲಿ ಅತ್ಯಲ್ಪ ಭಾಗಕ್ಕೆ ಮಾತ್ರ ಇಂಗ್ಲಿಷ್ ಅರ್ಥವಾಗುತ್ತದೆ."

ಎರಡನೆಯ ಪುಟದಲ್ಲಿ 'ಚಂದಾದಾರರಿಗೆ ಮತ್ತು ಓದುಗರಿಗೆ' ಎಂಬ ಶೀರ್ಷಿಕೆ ಯಲ್ಲಿ ಗಾಂಧೀಜಿಯ ಸಂಪಾದಕೀಯ ಪ್ರಕಟವಾಗಿತ್ತು.

"ಈ ವಾರದಿಂದ ಯಂಗ್ ಇಂಡಿಯಾ ಒಂದು ಹೊಸ ಘಟ್ಟವನ್ನು ಪ್ರವೇಶಿಸು ತ್ತಿದೆ. ಶ್ರೀ ಹಾರ್ನಿಮನ್ ಅವರನ್ನು ದ್ವೀಪಾಂತರಗೊಳಿಸಿದಾಗ ಯಂಗ್ ಇಂಡಿಯಾವು ಅರ್ಧ ಸಾಪ್ತಾಹಿಕವಾಯಿತು. ಕ್ರಾನಿಕಲ್ ಪತ್ರಿಕೆಯ ಕತ್ತು ಹಿಸುಕಿದರು. ಅದು ಮತ್ತೆ ಪ್ರಕಟವಾಗಲು ಪ್ರಾರಂಭಿಸಿದ ಮೇಲೆ ಅದನ್ನು ವಾರಪತ್ರಿಕೆಯಾಗಿ ಮಾಡುವುದು ಸೂಕ್ತವೇ ಹೇಗೆ ಎಂಬುದನ್ನು ಸಿಂಡಿಕೇಟು ಮತ್ತು ನಾನು ವಿಚಾರಿಸುತ್ತಿದ್ದೇವೆ. ನವ ಜೀವನವನ್ನು ವಾರಪತ್ರಿಕೆಯಾಗಿ ಮಾಡಿ ನನ್ನ ವಶಕ್ಕೆ ಒಪ್ಪಿಸಿರುವುದು ಈ ತೀರ್ಮಾನದ ಅಗತ್ಯವನ್ನು ತುರ್ತುಗೊಳಿಸಿದೆ. ಒಂದು ಅರ್ಧಸಾಪ್ತಾಹಿಕವನ್ನೂ ಒಂದು ಸಾಪ್ತಾಹಿಕ ವನ್ನೂ ಹೊರಡಿಸುವ ಭಾರ ನನಗೆ ತುಂಬ ಶ್ರಮದಾಯಕವಾಗಿದೆ. ಅಂಚೆ ವೆಚ್ಚವನ್ನು ಬಿಟ್ಟು ವಾರ್ಷಿಕ ಚಂದಾ ೮ ರೂ.ಗಳ ಬದಲು ೪ ರೂ. ಆಗುತ್ತದೆ. ಬಿಡಿ ಪ್ರತಿಯ ಬೆಲೆ ೨ ಆಣೆಯ ಬದಲು ೧ ಆಣೆಯಾಗುತ್ತದೆ. ಚಂದಾದಾರರು ಈ ಬದಲಾವಣೆ ಯಿಂದ ತಮಗೆ ಬರಬೇಕಾದ ಉಳಿಕೆ ಹಣವನ್ನು ವಾಪಸ್ ಪಡೆಯಬಹುದು, ಇಲ್ಲವೇ ಮುಂದಿನ ವರ್ಷದ ಲೆಕ್ಕಕ್ಕೆ ಜಮಾ ಮಾಡಿಸಬಹುದು. ಈಗಾದ ಬದಲಾವಣೆಯಿಂದ ಅತೃಪ್ತರಾಗಿರುವ ಚಂದಾದಾರರು ಉಳಿಕೆಯ ಪ್ರಮಾಣದ ಹಣವನ್ನು ಅರ್ಜಿ ಹಾಕಿ ವಾಪಸ್ ಪಡೆಯಬಹುದು.

"ಉತ್ತಮವಾದ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸಲು ಯಂಗ್ ಇಂಡಿಯಾದ ಕೇಂದ್ರ ಕಚೇರಿಯನ್ನು ಅಹಮದಾಬಾದಿಗೆ ವರ್ಗಾಯಿಸಲಾಗಿದೆ. ಅಲ್ಲದೆ ನಾನು ಬಹಳ ಕಾಲ ದೂರ ಇದ್ದುದರಿಂದ ಸ್ವಲ್ಪಮಟ್ಟಿಗೆ ನನ್ನ ಉಪೇಕ್ಷೆಗೆ ಗುರಿಯಾಗಿದ್ದ ಸತ್ಯಾಗ್ರಹ ಆಶ್ರಮಕ್ಕೆ ಸ್ವಲ್ಪ ಕಾಲ ವಿನಿಯೋಗಿಸಲು ನನಗೆ ಅವಕಾಶ ಆಗಬೇಕು ಎಂಬುದು ಅದಕ್ಕೆ ಕಾರಣ, ಅಲ್ಲದೆ ಎರಡು ಪತ್ರಿಕೆಗಳನ್ನು ಬೇರೆ ಬೇರೆ ಸ್ಥಳಗಳಿಂದ ಸಂಪಾದಿಸುವುದು ಎಲ್ಲ ದೃಷ್ಟಿಗಳಿಂದಲೂ ದುಬಾರಿಯಾಗುತ್ತದೆ ಎಂಬುದು ಸುಸ್ಪಷ್ಟ. ಅದರಿಂದಾಗಿ ಇತ್ತೀಚೆಗೆ ನಾನು ಬೊಂಬಾಯಿಯ ಸ್ನೇಹಿತರ ಜೊತೆಯಲ್ಲಿ ಕಳೆದಷ್ಟು ಕಾಲವನ್ನು ಇನ್ನು ಮುಂದೆ ಕಳೆಯುವ ಅವಕಾಶ ತಪ್ಪಿಹೋಗುತ್ತದೆ. ಈ ಹೊಸ ವ್ಯವಸ್ಥೆಯಿಂದ ನಾನು ಆಶಿಸುತ್ತಿರುವಂತೆ ದೇಶಕ್ಕೆ ಹೆಚ್ಚು ಸೇವೆ ಆಗುವ ಪಕ್ಷಕ್ಕೆ ಆ ಮಿತ್ರರು ನನ್ನನ್ನು ಕ್ಷಮಿಸುತ್ತಾರೆ ಎಂದು ನನ್ನ ನಂಬಿಕೆ. ಯಂಗ್ ಇಂಡಿಯಾ ಪತ್ರಿಕೆಯು ಇದುವರೆಗೆ ಪಂಜಾಬಿನ ಘಟನೆಗಳಲ್ಲೇ ಮಗ್ನವಾಗಿದೆ. ಸದ್ಯದಲ್ಲೇ ಅಲ್ಲಿನ ಮೋಡ ಚದುರುತ್ತದೆ ಎಂದು ಸಕಾರಣವಾಗಿ ಆಶಿಸಬಹುದಾಗಿದೆ.

"ಹೀಗಾದಲ್ಲಿ, ಯಂಗ್ ಇಂಡಿಯಾವು ತನ್ನ ಓದುಗರಿಗೆ ನೀಡುವುದು ಏನನ್ನು? ಇಂಗ್ಲಿಷ್ ಭಾಷೆಯ ಒಂದು ಪತ್ರಿಕೆಯನ್ನು ಸಂಪಾದಿಸುವುದು ನನಗೆ ಸಂತಸದ ವಿಷಯ ವಲ್ಲ ಎಂಬುದನ್ನು ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ. ಆ ಕೆಲಸದಲ್ಲಿ ಮುಳುಗು ವುದರಿಂದ ನನ್ನ ಸಮಯವನ್ನು ಸದುಪಯೋಗ ಪಡಿಸಿಕೊಳ್ಳುತ್ತಿಲ್ಲ ಎಂದು ನನಗನಿ ಸುತ್ತದೆ. ಮದ್ರಾಸ್ ಪ್ರಾಂತ್ಯದ ಒತ್ತಾಯವಿಲ್ಲದಿದ್ದರೆ ಯಂಗ್ ಇಂಡಿಯಾದ ಸಂಪಾದ ಕತ್ವವನ್ನು ನಾನು ಕೈಬಿಡುತ್ತಿದ್ದೆ. ಎಲ್ಲರ ಹಿತಗಳ ಬಗ್ಗೆ ನನ್ನ ಅಭಿಪ್ರಾಯಗಳು ಏನು ಎಂಬುದನ್ನು ಕೆಲವು ವೇಳೆ ಸರ್ಕಾರಕ್ಕೆ ತಿಳಿಸಬೇಕು ಎಂಬುದು ನಿಜ. ಆದರೆ ಅಷ್ಟಕ್ಕಾಗಿಯೇ ಒಂದು ಪತ್ರಿಕೆಯ ಹತೋಟಿಯನ್ನೇ ನಾನು ಪಡೆಯಬೇಕಾಗಿಲ್ಲ.

"ನವಜೀವನವನ್ನು ಸಂಪಾದಿಸುವುದರಿಂದ ಸಂಪೂರ್ಣವಾಗಿ ಹೊಸದೇ ಆದ ಒಂದು ಬೋಧೆ ನನಗೆ ತೋರುತ್ತಿದೆ. ಯಂಗ್ ಇಂಡಿಯಾದ ಚಂದಾದಾರರ ಸಂಖ್ಯೆ ೧೨೦೦ನ್ನು ಮಿಕ್ಕಿದ್ದರೆ, ನವಜೀವನದ್ದು ೧೨.೦೦೦ ಇದೆ. ೨೦,೦೦೦ ಪ್ರತಿಗಳನ್ನು ಮುದ್ರಿಸಬಲ್ಲ ಮುದ್ರಕರು ದೊರೆಯುವುದಾದರೆ, ಚಂದಾದಾರರ ಸಂಖ್ಯೆ ಅಷ್ಟಕ್ಕೆ ಏರೀತು. ಮಾತೃಭಾಷೆಯಲ್ಲಿ ಒಂದು ಪತ್ರಿಕೆಯ ಕೊರತೆ ಇತ್ತು ಎಂಬುದನ್ನು ಇದು ತೋರಿಸುತ್ತದೆ. ರೈತರು, ಕಾರ್ಮಿಕರಲ್ಲಿ ಬಹುಸಂಖ್ಯೆಯ ಓದುಗರಿದ್ದಾರೆ ಎಂಬುದು ನನಗೆ ಹೆಮ್ಮೆಯ ವಿಷಯ. ಭಾರತ ಎಂದರೆ ಅವರೇ. ಅವರ ಬಡತನ ಭಾರತದ ಶಾಪ, ಅಪರಾಧ. ಅವರ ಪುರೋಭಿವೃದ್ಧಿ ಮಾತ್ರವೇ ಭಾರತವನ್ನು ಬದುಕಲು ಅರ್ಹವಾದ ದೇಶವನ್ನಾಗಿ ಮಾಡುವುದು. ಭರತಖಂಡದ ಜನಸಂಖ್ಯೆಯ ಸರಿಸುಮಾರು ಶೇ. ೮೦ ಅವರು. ಇಂಗ್ಲಿಷ್ ಪತ್ರಿಕೆಗಳು ಭಾರತದ ಜನಸಾಗರದ ಅಂಚನ್ನು ಮಾತ್ರ ಮುಟ್ಟುತ್ತವೆ".

"ಆದ್ದರಿಂದ, ಜನಸಾಮಾನ್ಯರ ಪ್ರಯೋಜನಕ್ಕಾಗಿ ಇಂಗ್ಲಿಷಿನಲ್ಲಿರುವ ಚಿಂತನೆ ಯಲ್ಲಿ ಅತ್ಯುತ್ತಮವಾದುದನ್ನು ದೇಶಭಾಷೆಗಳಿಗೆ ಅನುವಾದ ಮಾಡುವುದು ಪ್ರತಿ ಯೊಬ್ಬ ಭಾರತೀಯನ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ಹಿಂದೂಸ್ತಾನಿ ಸುಸಂಸ್ಕೃತ ವರ್ಗದ ಮತ್ತು ಸಾಮಾನ್ಯ ಜನರ ಮಾಧ್ಯಮವಾಗುವವರೆಗೆ, ದ್ವಿತೀಯ ಭಾಷೆಯಾಗಿ ಎಲ್ಲ ಶಾಲೆಗಳಲ್ಲೂ ಕಡ್ಡಾಯವಾಗುವವರೆಗೆ, ಸುಶಿಕ್ಷಿತ ಭಾರತಕ್ಕೆ, ಅದರಲ್ಲೂ ಮದರಾಸು ಪ್ರೆಸಿಡೆನ್ಸಿಗೆ, ನಾವು ತಿಳಿಯಪಡಿಸಬೇಕಾದುದನ್ನು ಇಂಗ್ಲಿಷಿ ನಲ್ಲೇ ಹೇಳುವುದು ಅನಿವಾರ್ಯವಾಗುತ್ತದೆ. ಆರ್ಥಿಕವಾಗಿ ತನ್ನ ಹೊರೆಯನ್ನು ತಾನು ಹೊರಲಾರದ ಒಂದು ಪತ್ರಿಕೆಯನ್ನು ನಡೆಸುವುದಕ್ಕೆ ನಾನು ಸಿದ್ಧನಾಗಿಲ್ಲ. ೨,೫೦೦ ಜನ, ಚಂದಾ ಕೊಡುವ ಜನ, ದೊರೆಯುವವರೆಗೆ ಯಂಗ್ ಇಂಡಿಯಾ ತನ್ನ ಹೊರೆಯನ್ನು ತಾನು ಹೊರಲಾರದು. ಯಂಗ್ ಇಂಡಿಯಾ ಮುಂದುವರಿಯಬೇಕಾದರೆ ಅಷ್ಟು ಜನ ಚಂದಾದಾರರನ್ನು ನನ್ನ ತಮಿಳು ಮಿತ್ರರು ದೊರಕಿಸಿಕೊಡಬೇಕೆಂದು ನಾನು ಕೇಳಿ ಕೊಳ್ಳಲೇಬೇಕಾಗಿದೆ".

"ಹಾಗೆ ಮಾಡಬೇಕಾದ ಅಗತ್ಯ ಇದೀಗ ಇನ್ನೂ ಹೆಚ್ಚಾಗಿದೆ. ಏಕೆಂದರೆ ಯಂಗ್ ಇಂಡಿಯಾದ ಮಾಲಿಕರು ಎಲ್ಲ ಜಾಹಿರಾತುಗಳನ್ನೂ ನಿಲ್ಲಿಸಿಬಿಡಬೇಕೆಂದು ತೀರ್ಮಾನಿಸಿ

ದ್ದಾರೆ. ಜಾಹಿರಾತುಗಳು ಇಲ್ಲದೆಯೇ ಒಂದು ಪತ್ರಿಕೆ ನಡೆಯಬೇಕು ಎಂಬ ನನ್ನ ಅಭಿಪ್ರಾಯವನ್ನು ಅವರೂ ಪೂರ್ಣವಾಗಿ ಒಪ್ಪಿದ್ದಾರೆಂದಲ್ಲ. ಆದರೆ ಈ ಪ್ರಯೋಗ ವನ್ನು ನಾನು ಮಾಡಿ ನೋಡಲು ಅವರ ಒಪ್ಪಿಗೆ ಉಂಟು. ಜಾಹಿರಾತುಗಳ ಶಾಪದಿಂದ ಯಂಗ್ ಇಂಡಿಯಾವು ಮುಕ್ತವಾಗಲು ಅಪೇಕ್ಷಿಸುವವರೆಲ್ಲ ಈ ನನ್ನ ಸಾಹಸವು ಯಶಸ್ವಿಯಾಗಲು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜಾಹಿರಾತುಗಳು ಒಂದು ಪತ್ರಿಕೆಯ ಪುಟಗಳನ್ನು ಮಲಿನಗೊಳಿಸದೆ ಪತ್ರಿಕೆಯು ನಡೆಯುವುದು ಸಾಧ್ಯ ಎಂಬುದನ್ನು ಗುಜರಾತಿಯ ನವಜೀವನ ಪ್ರಯೋಗಪೂರ್ವಕವಾಗಿ ತೋರಿಸಿದೆ. ಪ್ರತಿ ಯೊಂದು ಪ್ರಾಂತಕ್ಕೂ ಸಾರ್ವಜನಿಕರಿಗೆ ಉಪಯುಕ್ತವಾಗುವ ಬಣ್ಣ ಕಟ್ಟದ ನಿರ್ದುಷ್ಟ ವಾಗಿರುವ ಪ್ರಕಟಣೆಗಳಿಂದ ಕೂಡಿರುವಂಥ, ವೃತ್ತ ಪತ್ರಿಕೆಯಲ್ಲದ ಜಾಹೀರಾತು ಮಾಧ್ಯಮವೊಂದು ಇದ್ದಿದ್ದರೆ, ಆರ್ಥಿಕವಾಗಿ ದೇಶಕ್ಕೆ ಎಂಥ ಲಾಭ ಆಗುತ್ತಿತ್ತು. ಔದಾಸೀನ್ಯದ ಅಪರಾಧ ನಮ್ಮಲ್ಲಿಲ್ಲದೆ ಹೋಗಿದ್ದರೆ ಈ ಕುಹಕ ಜಾಹಿರಾತುಗಳ ಮೂಲಕ ಅಪಾರವಾದ ಪರೋಕ್ಷ ತೆರಿಗೆಯನ್ನು ತೆರಲು ನಾವು ನಿರಾಕರಿಸುತ್ತಿದ್ದೆವು. ಪತ್ರಿಕೋದ್ಯಮದ ಪವಿತ್ರತೆಯಲ್ಲಿ ಆಸಕ್ತಿ ಉಳ್ಳ ಕೆಲವು ಓದುಗರು ಇತ್ತೀಚೆಗೆ ಸುಪರಿ ಚಿತವಾದ ವಾರ್ತಾಪತ್ರಿಕೆಯೊಂದರಲ್ಲಿ ಪ್ರಕಟವಾದ ಅತ್ಯಂತ ಅಸಭ್ಯ ಜಾಹಿರಾತನ್ನು ತೆಗೆದು ಕಳುಹಿಸಿದ್ದರು. ಅದನ್ನು ಮುದ್ರಿಸಿ ನವಜೀವನದ ಪುಟಗಳನ್ನು ಮಲಿನಗೊಳಿ ಸಲು ನಾನು ನಿರಾಕರಿಸಿದೆ. ಅಗ್ರಗಣ್ಯವೆನಿಸಿಕೊಂಡಿರುವ ಪತ್ರಿಕೆಗಳ ಜಾಹಿರಾತು ಪುಟಗಳನ್ನು ಯಾರು ಬೇಕಾದರೂ ತಿರುವಿಹಾಕಿ ನನ್ನ ಈ ಟೀಕೆ ಎಷ್ಟು ಉಚಿತವಾದುದು ಎಂಬುದನ್ನು ತಾಳೆ ಮಾಡಿಕೊಳ್ಳಬಹುದು.

"ಯಂಗ್ ಇಂಡಿಯಾ ಪತ್ರಿಕೆಯ ನೀತಿಯನ್ನು ಕುರಿತು ಇನ್ನೊಂದು ಮಾತು. ವ್ಯಕ್ತಿಗಳಿಗೆ ಆದ ಅನ್ಯಾಯಗಳತ್ತ ಗಮನ ಸೆಳೆಯುವುದು ಅದರ ಕರ್ತವ್ಯ. ಅಷ್ಟೇ ಅಲ್ಲದೆ ರಚನಾತ್ಮಕವಾದ ಸತ್ಯಾಗ್ರಹದ ಕಡೆಗೂ, ಕೆಲವು ವೇಳೆ ಶುದ್ಧಿಕಾರಕವಾದ ಸತ್ಯಾಗ್ರಹದ ಕಡೆಗೂ ಅದು ಗಮನವನ್ನು ನೀಡುತ್ತದೆ. ಎಲ್ಲಿ ಪ್ರತಿಭಟನೆಯು ರೌಲಟ್ ಶಾಸನದಂಥಹ ಹಟಮಾರಿಯೂ ಅಪಮಾನಕಾರವೂ ಆದ ಅನ್ಯಾಯವನ್ನು ತೆಗೆದು ಹಾಕುವುದರಲ್ಲಿ ಒಂದು ಕರ್ತವ್ಯವಾಗಿ ಪರಿಣಮಿಸುತ್ತದೆಯೋ ಅಂಥಹ ಸವಿನಯ ಪ್ರತಿಭಟನೆಯೇ ಶುದ್ಧಿಕಾರಕ ಸತ್ಯಾಗ್ರಹ".

ಸಮಾಜಸೇವೆಯನ್ನು ಕುರಿತು ಗಾಂಧೀಜಿಯ ಅಭಿಪ್ರಾಯಗಳೇನು ಎಂಬುವರ ಬಗ್ಗೆ ಒಂದು ವರದಿಯು ೪ನೇ ಪುಟದಲ್ಲಿ ಪ್ರಕಟವಾಗಿತ್ತು:

"ಸಮಾಜಸೇವೆಯು ಅತ್ಯಂತ ಚೆನ್ನಾಗಿ ತಿಳಿದಿದ್ದುದು ಯೂರೋಪಿಗೆ ಮಾತ್ರವೇ. ಅಲ್ಲಿ ಇದು ಸುವ್ಯವಸ್ಥಿತವಾಗಿ ಇತ್ತು ಎಂಬ ಭಾವನೆ ವಕ್ತಾರರಿಗೆ ಒಂದು ಕಾಲಕ್ಕೆ ಇತ್ತು. ಅನುಭವದಿಂದ ಅದು ಹಾಗಲ್ಲ ಎಂಬುದು ಅವರಿಗೀಗ ತಿಳಿದಿದೆ. ಭಾರತವನ್ನು ಬಿಟ್ಟು ಉಳಿದ ಯಾವ ದೇಶದವರೂ ಸಮಾಜಸೇವೆಯನ್ನು ಧಾರ್ಮಿಕ ಕರ್ತವ್ಯ ಎಂದು ಭಾವಿ ಸಿರಲಿಲ್ಲ ಎಂಬುದು ಅವರ ಅಭಿಪ್ರಾಯ. ದೃಷ್ಟಾಂತವಾಗಿ, ಹರಿದ್ವಾರದಲ್ಲಿ, ಕುಂಭ

ಮೇಳವನ್ನು ನಡೆಸಿದ ರೀತಿ ಎಷ್ಟು ಅದ್ಭುತವಾಗಿತ್ತು ಎಂಬುದನ್ನು ಅವರು ಹೇಳಿದರು. ನಮ್ಮ ವ್ಯವಸ್ಥಾಪಕ ಸಾಮರ್ಥ್ಯಕ್ಕೂ ಸಮಾಜಸೇವೆಯ ಪ್ರವೃತ್ತಿಗೂ ಹಿಮಾಲಯವು ನಿರಂತರ ಸಾಕ್ಷಿಯಾಗಿದೆ. ಜಮುನೋತ್ರಿಯವರೆಗೆ ಹಿಮಾಲಯವನ್ನೇರಿದ ಸಹಸ್ರಾರು ಜನ ಯಾತ್ರಿಕರಿಗೆ ಯಾವುದೇ ಕಷ್ಟವೂ ಇಲ್ಲದೆ, ಸೇವಾಮನೋಭಾವದಿಂದ, ಆರ್ಥಿಕ ಲಾಭದ ಅಪೇಕ್ಷೆ ಇಲ್ಲದೆ, ಸೌಲಭ್ಯಗಳು ದೊರೆಯುತ್ತಿದ್ದುವು. ಅನ್ಯಾದೃಶವಾದ ಜಾತಿ ವ್ಯವಸ್ಥೆಯು ವಿಶಾಲವಾದ ಸಮಾಜ ಸೇವಾ ವ್ಯವಸ್ಥೆಗೆ ಒಂದು ನಿದರ್ಶನ. ಬಡವರ ಕಾನೂನು (Poor law) ಅಗತ್ಯವೇ ಇಲ್ಲವೆಂಬ ದೃಷ್ಟಿಯಿಂದ ಭಾರತವು ಅಸಾಧಾರಣ ವಾದದ್ದು ಎಂದು ದಿವಂಗತ ಸರ್ ಡಬ್ಲ್ಯು. ಡಬ್ಲ್ಯು. ಹಂಟರ್ ಹೇಳುತ್ತಿದ್ದರು. ರೋಗ, ಸಾವು, ಬಡತನಗಳು ಬಂದಾಗ ಜಾತಿಗಳೇ ಸೇವೆಯನ್ನು ವ್ಯವಸ್ಥೆಗೊಳಿಸುತ್ತಿದ್ದುವು. ಜಾತಿಯನ್ನು ಹೊಗಳುವುದು ವಕ್ತಾರರ ಅಪೇಕ್ಷೆಯಲ್ಲ. ಅದು ಈಗಿರುವ ಸ್ಥಿತಿಯಲ್ಲಿ ಅದರ ದೋಷಗಳನ್ನೂ, ಅದರ ಅತಿರೇಕಗಳನ್ನೂ ಅವರು ಗುರುತಿಸಿದ್ದರು. ಸಮಾಜ ಸೇವೆಯು ಕರ್ತವ್ಯವೆಂದು ಭರತಖಂಡದಲ್ಲಿ ಮನ್ನಣೆ ಪಡೆದಿತ್ತೆಂಬ ತಮ್ಮ ಹೇಳಿಕೆಗೆ ನಿದರ್ಶನವಾಗಿ ಮಾತ್ರ ಅವರು ಈ ಮಾತನ್ನು ಹೇಳಿದರು. ದುರದೃಷ್ಟವಶಾತ್, ನಮ್ಮ ಅನೇಕ ಪ್ರಾಚೀನ ಸಂಸ್ಥೆಗಳು ಜಡವಾಗಿ ಹೋಗಿವೆ. ತಾವು ಹೇಳಬಯಸುವು ದೇನೆಂದರೆ ಆಧುನಿಕ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವುದಕ್ಕೆ ಅಗತ್ಯವಾದಷ್ಟು ಮಟ್ಟಿಗೆ ನಮ್ಮ ಪ್ರಾಚೀನ ಸಂಸ್ಥೆಗಳನ್ನು ಅಧ್ಯಯನ ಮಾಡಬೇಕು, ಪುನರುಜ್ಜೀವನಗೊಳಿಸ ಬೇಕು, ವ್ಯವಸ್ಥೆಗೊಳಿಸಬೇಕು. ಸರಿಯಾಗಿ ಪರೀಕ್ಷಿಸದೆ ಹಳೆಯದನ್ನು ತ್ಯಜಿಸುವುದಾದರೆ ತಪ್ಪಾಗುವ ಸಂಭವ ಇದೆ".

ಭಾರತೀಯ ಬೇಸಾಯಗಾರರ ಸ್ಥಿತಿಯನ್ನೂ, ಅದನ್ನು ಉತ್ತಮಪಡಿಸುವ ವಿಧಿ ಗಳನ್ನೂ ಕುರಿತು ನವಜೀವನದಲ್ಲಿ ಗಾಂಧೀಜಿ ಒಂದು ಲೇಖನ ಮಾಲೆಯನ್ನು ಆರಂಭಿ ಸಿದ್ದರು. ಖೇಡಾ, ಚಂಪಾರಣ್ಯ ಮತ್ತು ಮದ್ರಾಸಿನಲ್ಲಿ ತಾವು ಕಂಡಿದ್ದ ಬೇಸಾಯಗಾರರ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ಮೊದಲ ಲೇಖನದಲ್ಲಿ ಅವರು ನೀಡಿದರು. ಎರಡನೆಯದರಲ್ಲಿ ಹಳ್ಳಿಗಳ ಅಭಿವೃದ್ಧಿಯ ಸಮಸ್ಯೆಯನ್ನು ಅವರು ವಿವೇಚಿಸಿದರು. ಇಂಗ್ಲಿಷ್ ಓದುಗರ ಸೌಕರ್ಯಕ್ಕಾಗಿ, ಅದರ ಅನುವಾದವು ಯಂಗ್ ಇಂಡಿಯಾದಲ್ಲಿ ಪ್ರಕಟವಾಯಿತು.

"ಭಾರತದ ಯಾವುದೇ ಹಳ್ಳಿಯು ತಿಪ್ಪೇರಾಶಿಯ ಮೇಲೆ ಕಟ್ಟಿದ ಅನಾರೋಗ್ಯ ಕರ ಮನೆಗಳ ಗುಂಪು ಎಂದು ಲಯೊನೆಲ್ ಕರ್ಟಿಸ್ ವಿವರಿಸಿರುವುದರಲ್ಲಿ ಅಷ್ಟೇನೂ ಉತ್ಪ್ರೇಕ್ಷೆಯಿಲ್ಲ. ವಾಸ್ತವಾಗಿ ಆತ ನೀಡಿರುವ ವಿವರಗಳಿಗೆ ಕರುಣಾಜನಕವಾದ ಇನ್ನೂ ಎಷ್ಟೋ ಸೇರಿಸಬಹುದು. ಸುವ್ಯವಸ್ಥಿತವಾದ ಹಳ್ಳಿಗಳನ್ನು ಕಟ್ಟುವುದರಲ್ಲಿ ಯಾವು ದಾದರೂ ಕ್ರಮ ಇರಬೇಕು. ಹಳ್ಳಿಯ ಓಣಿಗಳಲ್ಲೂ ಯಾವುದಾದರೂ ವ್ಯವಸ್ಥೆ ಇರಬೇಕು. ಕೋಟ್ಯಂತರ ಜನ ಬರಿಗಾಲಿನ ಪಾದಚಾರಿಗಳು ಇರುವ ಈ ದೇಶದಲ್ಲಿ ರಸ್ತೆಗಳು ಎಷ್ಟು ಶುಚಿಯಾಗಿರಬೇಕು ಎಂದರೆ ಅಲ್ಲಿ ನಡೆಯಲು–ಅಷ್ಟೇಕೆ ಮಲಗಿ ಕೊಳ್ಳಲು ಕೂಡ– ಯಾರೂ ಹಿಂದೆಗೆಯಬಾರದು, ಓಣಿಗಳಿಗೆ ಗಚ್ಚು ಹಾಕಿದ್ದು,

ನೀರನ್ನು ಊರಿಂದಾಚೆಗೆ ಹರಿಸಿಬಿಡಲು ಚರಂಡಿಗಳಿರಬೇಕು. ದೇವಾಲಯಗಳನ್ನೂ, ಮಸೀದಿಗಳನ್ನೂ ಎಷ್ಟು ಸೊಗಸಾಗಿ ಇಟ್ಟಿರಬೇಕು ಎಂದರೆ ಅಲ್ಲಿಗೆ ಬರುವವರಿಗೆ ಶಾಂತವೂ ಪವಿತ್ರವೂ ಆದ ವಾತಾವರಣದ ಅನುಭವವಾಗಬೇಕು. ಹಳ್ಳಿಗಳ ತುಂಬ ಸಾಧ್ಯವಾದಷ್ಟು ಮಟ್ಟಿಗೂ, ನೆರಳು ನೀಡುವ ಮರಗಳೂ, ಹಣ್ಣು ಬಿಡುವ ಮರಗಳೂ ಇರಬೇಕು. ಪ್ರತಿ ಹಳ್ಳಿಯಲ್ಲೂ ಒಂದು ಧರ್ಮಶಾಲೆ, ಪಾಠಶಾಲೆ ಮತ್ತು ಸಣ್ಣ ಆಸ್ಪತ್ರೆ ಇರಬೇಕು. ಬಟ್ಟೆ ಒಗೆಯುವುದು, ಸ್ನಾನ ಮಾಡುವುದು, ಶೌಚ ಇವುಗಳ ವ್ಯವಸ್ಥೆಗಳು ಹೇಗಿರಬೇಕೆಂದರೆ ಹಳ್ಳಿಯ ಗಾಳಿ, ನೀರು, ರಸ್ತೆಗಳನ್ನು ಅವು ಮಲಿನಗೊಳಿಸ ಬಾರದು. ಒಂದು ಕಾಲಕ್ಕೆ ಭಾರತದ ಹಳ್ಳಿಯಲ್ಲಿ ಈ ಎಲ್ಲ ಸ್ಥಿತಿಗತಿಗಳೂ ಇರುತ್ತಿದ್ದವು. ಅನ್ನ ಬಟ್ಟೆಗಳ ಅಗತ್ಯಕ್ಕೆ ತಕ್ಕಂತೆ ಒಂದು ಹಳ್ಳಿಯು ಸ್ವಯಂಪರಿಪೂರ್ಣವಾಗಿರಬೇಕು. ದರೋಡೆಕಾರರು, ಡಕಾಯಿತರು ಅಥವಾ ಕಾಡುಪ್ರಾಣಿಗಳ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವಂತಿರಬೇಕು. ಆದರ್ಶ ಗ್ರಾಮವು ನಾನು ನೀಡಿರುವ ವರ್ಣನೆಗೆ ಹತ್ತಿರ ಹತ್ತಿರವಾದರೂ ಇರಬೇಕು. ಅಂಥ ಹಳ್ಳಿಗಳನ್ನು ಮಾತ್ರವೇ ಸ್ವಯಮಾಡಳಿತವುಳ್ಳವು ಎಂದು ಕರೆಯಬಹುದು. ಭಾರತದ ಎಲ್ಲ ಹಳ್ಳಿಗಳೂ ಆ ಆದರ್ಶವನ್ನು ಸಾಧಿಸ ಬಹುದಾದರೆ ಈ ದೇಶದ ಅನೇಕ ತಾಪತ್ರಯಗಳು ಮಾಯವಾಗುತ್ತವೆ.

"ಈ ಪರಿಸ್ಥಿತಿಯನ್ನು ತರುವುದು ಅಸಾಧ್ಯವೇನೂ ಅಲ್ಲ. ಅಷ್ಟೇ ಅಲ್ಲ.ತುಂಬ ಕಷ್ಟಕರವೂ ಅಲ್ಲ. ಭಾರತದಲ್ಲಿ ಸುಮಾರು ೭ ಲಕ್ಷ ಹಳ್ಳಿಗಳಿವೆ. ಹೀಗಾಗಿ ಒಂದು ಹಳ್ಳಿಯ ಸರಾಸರಿ ಜನಸಂಖ್ಯೆ ೪೦೦. ಸಾವಿರಕ್ಕೂ ಕಡಮೆ ಜನ ಇರುವ ಹಳ್ಳಿಗಳು ನಿಜಕ್ಕೂ ಬೇಕಾದಷ್ಟಿವೆ. ಈ ಸಣ್ಣ ಘಟಕಗಳನ್ನು ಒಂದು ಕ್ರಮಕ್ಕೆ ತರುವುದು, ಸುವ್ಯ ವಸ್ಥೆಗೊಳಿಸುವುದು ಸುಲಭ ಎಂಬುದು ನನ್ನ ದೃಢವಾದ ನಂಬಿಕೆ. ಇದಕ್ಕಾಗಿ ಯಾವ ಭಾಷಣದ ಅಗತ್ಯವೂ ಇಲ್ಲ. ವಿಧಾನ ಪರಿಷತ್ತುಗಳೂ ಅಥವಾ ಶಾಸನಗಳೂ ಬೇಕಾಗಿಲ್ಲ. ಅಗತ್ಯವಾದದ್ದು ಒಂದೇ ಒಂದು. ಸ್ವಾರ್ಥರಹಿತರಾದ ಸ್ತ್ರೀ ಪುರುಷರ ಒಂದು ಸಣ್ಣ ಗುಂಪು. ತಮ್ಮ ಉದಾಹರಣೆಗಳಿಂದಲೂ ಸೇವಾಮನೋಭಾವದಿಂದಲೂ ಅಗತ್ಯವಾದ ಅಭಿವೃದ್ಧಿಗಳನ್ನು ಅವರು ಮಾಡಿಸಬಹುದು. ಈ ಕೆಲಸಕ್ಕಾಗಿ ಅವರು ತಮ್ಮ ಇಪ್ಪತ್ತ ನಾಲ್ಕು ಗಂಟೆಗಳನ್ನೂ ನೀಡಬೇಕು ಎಂದೇನೂ ಅಲ್ಲ. ತಮ್ಮ ಜೀವನಕ್ಕಾಗಿ ದುಡಿಯು ವುದರ ಜೊತೆಗೆ ತಮ್ಮ ಸೇವಾಮನೋಭಾವನೆ ಗ್ರಾಮಸ್ಥರ ಮೇಲೆ ಪರಿಣಾಮವನ್ನು ಬೀರುವಂತೆ ಅವರು ಮಾಡಬಹುದು. ಆದರೆ ಅವರು ಹೆಚ್ಚು ವಿದ್ಯಾವಂತರಾಗಿರ ಬೇಕು ಎಂದೂ ಅಲ್ಲ. ಅಕ್ಷರಜ್ಞಾನ ಇಲ್ಲದೆಯೂ ಹಳ್ಳಿಯ ಬೆಳವಣಿಗೆಗೆ ದುಡಿಯು ಬಹುದು. ಸರ್ಕಾರವಾಗಲೀ, ಪ್ರಾಂತವಾಗಲೀ ಅಡ್ಡಿಬರುತ್ತದೆ ಎಂಬ ಭಯವೂ ಇಲ್ಲ. ಅವರ ಸಹಕಾರದ ಅಗತ್ಯವೂ ಅಷ್ಟು ಹೆಚ್ಚಾಗಿಲ್ಲ. ಕೆಲವು ಜನ ಒಳ್ಳೆಯ ಸ್ವಯಂ ಸೇವಕರು ಪ್ರತಿಯೊಂದು ಹಳ್ಳಿಯಲ್ಲಿಯೂ ಇದ್ದರೆ, ಭಾರತಾದ್ಯಂತ ಹೆಚ್ಚಿನ ಗೊಂದಲ ವಿಲ್ಲದೆ, ತೀವ್ರವಾದ ಯಾವುದೇ ಚಳುವಳಿಯೂ ಇಲ್ಲದೆ, ಅಗತ್ಯವಾದ ಬೆಳವಣಿಗೆಯೂ ಸುಧಾರಣೆಯೂ ನಡೆಯಬಲ್ಲುದು. ನಿರಂತರವಾದ ಅಲ್ಪಮಾತ್ರ ಶ್ರಮದಿಂದ ಅನಿರೀಕ್ಷಿತ

ವಾದ ಫಲಗಳು ದೊರಕುತ್ತವೆ. ಈ ಕೆಲಸಕ್ಕೆ ಹಣವೂ ಅತ್ಯಗತ್ಯವಾದದ್ದಲ್ಲ ಎಂಬುದು ವಾಚಕನಿಗೆ ಗೊತ್ತಾಗುತ್ತದೆ. ಅಗತ್ಯವಾದದ್ದು ಎಂದರೆ, ಪರಮ ಅಗತ್ಯ ಎಂದರೆ, ನಿಸ್ವಾರ್ಥತೆ, ಧಾರ್ಮಿಕ ಮನೋಭಾವ. ಬೇಸಾಯಗಾರರ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಇದೇ ಅತ್ಯಂತ ಸುಲಭ ದಾರಿ ಎಂಬುದು ನನ್ನ ಅನುಭವ. ಈ ದಿಕ್ಕಿನಲ್ಲಿ ಕೆಲಸ ಮಾಡಲು ಇನ್ನೊಬ್ಬನ ಮಾರ್ಗದರ್ಶನಕ್ಕಾಗಿ ಯಾವುದೇ ಹಳ್ಳಿಯಾಗಲೀ, ವ್ಯಕ್ತಿಯಾಗಲೀ ಕಾಯುವ ಅಗತ್ಯವಿಲ್ಲ. ನಿಸ್ವಾರ್ಥ ಸೇವೆಯ ಮನೋಭಾವದಿಂದ ಸ್ಫೂರ್ತಿ ಪಡೆದ ಯಾವ ಸ್ತ್ರೀಯಾಗಲಿ, ಪುರುಷನಾಗಲಿ, ತಕ್ಷಣವೇ ಕೆಲಸಕ್ಕೆ ತೊಡಗಬಹುದು. ಹಾಗೆ ಮಾಡುವುದರಿಂದ ಅವನು ಪೂರ್ಣನಾಗಿ ತನ್ನ ದೇಶಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ".

ಅಮೃತಸರದ ಕಾಂಗ್ರೆಸ್

೧೯೧೯

ಪಂಜಾಬಿಗೆ ಭೇಟಿ ಕೊಡಲು ಅವಕಾಶ ನೀಡಬೇಕೆಂಬ ಗಾಂಧೀಜಿಯವರ ಪ್ರಾರ್ಥನೆಯನ್ನು ಕೊನೆಗೊಮ್ಮೆ ವೈಸರಾಯ್ ಒಪ್ಪಿದರು. ೧೯೧೯ರ ಅಕ್ಟೋಬರ್ ೧೭ರಂದು ಗಾಂಧೀಜಿ ಅಲ್ಲಿ ಸೇರಿದ್ದ ನಾಯಕರೊಂದಿಗೆ ಕೂಡಿಕೊಂಡು ಉತ್ಸಾಹದಿಂದ ಸಂಪೂರ್ಣವಾಗಿ ಕೆಲಸದಲ್ಲಿ ಮುಳುಗಿಬಿಟ್ಟರು. ಪಂಜಾಬಿಗೆ ಅವರು ಭೇಟಿ ನೀಡಿದುದು ಇದೇ ಮೊದಲ ಸಲ. ಆದರೂ ಅವರು ಅಲ್ಲಿರುವುದರಿಂದಲೇ ಜನರಿಗೆ ಆತ್ಮವಿಶ್ವಾಸವನ್ನು ಪುನಃ ತುಂಬಿಕೊಟ್ಟಿತು. ಗಾಂಧೀಜಿ ಮತ್ತು ಕಾಂಗ್ರೆಸ್ ನಾಯಕರು ಒಂದುಗೂಡಿ ಹಂಟರ್ ಸಮಿತಿಗೆ ಮನವಿಮಾಡಿಕೊಂಡರು: "ಸಮಿತಿಯ ವಿಚಾರಣೆಗಿಂಥ ಪೂರ್ವಭಾವಿಯಾಗಿಯೇ ನಾಯಕರನ್ನು ಬಿಡುಗಡೆ ಮಾಡಬೇಕು; ಪುನರ್ವಿಮರ್ಶನಕ್ಕಾಗಿ ನೇಮಿತರಾದ ನ್ಯಾಯಮೂರ್ತಿಗಳ ಪೈಕಿ ಒಬ್ಬರು ಪಂಜಾಬಿನ ಹೊರಗಿನವರಾಗಬೇಕು; ತಮಗೆ ಅಗತ್ಯವೆನಿಸಿದಾಗ ಹೆಚ್ಚಿನ ಸಾಕ್ಷ್ಯವನ್ನು ಕೇಳಿ ಪಡೆಯಲು ಈ ಪುನರ್ವಿಮರ್ಶಕ ನ್ಯಾಯಮೂರ್ತಿಗಳಿಗೆ ಅಧಿಕಾರವಿರಬೇಕು". ಸರಕಾರವು ಈ ಸಲಹೆಗಳನ್ನು ತಳ್ಳಿ ಹಾಕಿತು. ಆದ್ದರಿಂದ ಲಾಹೋರಿನ ಕಾಂಗ್ರೆಸ್ ಉಪಸಮಿತಿಯು ಹಂಟರ್ ಸಮಿತಿಗೆ ಕೊಡಬೇಕೆಂದಿದ್ದ ಸಹಕಾರವನ್ನೂ ಹಿಂತೆಗೆದುಕೊಳ್ಳಲು ನಿರ್ಧರಿಸಿತು. ಗಾಂಧೀಜಿ, ಮೋತಿಲಾಲ್ ನೆಹರೂ, ಸಿ. ಆರ್. ದಾಸ್, ಫಜ್ಲು ಹಕ್ ಮತ್ತು ಅಬ್ಬಾಸ್ ತೈಯಬ್‌ಜೀ ಇವರನ್ನೂ, ಕಾರ್ಯದರ್ಶಿಯಾಗಿ ಕೆ. ಸಂತಾನಂ ಅವರನ್ನೂ ಒಳಗೊಂಡಿದ್ದ ಒಂದು ಸಮಿತಿ ರಚಿಸಿ ಕಾಂಗ್ರೆಸ್ಸು ಪ್ರತ್ಯೇಕ ವಿಚಾರಣೆಯನ್ನೇ ಕೈಗೊಂಡಿತು. ಆದರೆ ಸ್ವಲ್ಪದರಲ್ಲೇ ಮೋತಿಲಾಲ್ ನೆಹರೂ, ಬರಲಿದ್ದ ಕಾಂಗ್ರೆಸಿನ ಅಧ್ಯಕ್ಷರಾಗಿ ಆಯ್ಕೆಗೊಂಡದ್ದರಿಂದ, ಈ ಸಮಿತಿಗೆ ರಾಜೀನಾಮೆ ಕೊಟ್ಟರು, ಅವರ ಸ್ಥಾನಕ್ಕೆ ಜಯಕರ್ ಬಂದರು.

ವಿಚಾರಣಾ ಸಮಿತಿಯ ಕೆಲಸಕಾರ್ಯಗಳನ್ನು ವ್ಯವಸ್ಥೆಗೊಳಿಸುವ ಪ್ರಮುಖ ಹೊಣೆಗಾರಿಕೆ ಗಾಂಧೀಜಿಯ ಮೇಲೆ ಬಿದ್ದಿತು. ವಿಚಾರಣೆಯ ಸಂದರ್ಭದಲ್ಲಿ ಅವರು ಹಲವಾರು ಹಳ್ಳಿಗಳಿಗೆ ಭೇಟಿ ನೀಡಿದರು. ಪಂಜಾಬಿನ ಜನಸಾಮಾನ್ಯರ ಜೀವನವನ್ನು ತೀರ ಹತ್ತಿರದಿಂದ ನೋಡುವ ಅವಕಾಶ ಇದರಿಂದ ಅವರಿಗೆ ದೊರಕಿತು. ಅವರು ಎಲ್ಲೆಲ್ಲಿ ಹೋದರೂ ಜನ ಹಿಂಡು ಹಿಂಡಾಗಿ ಬಂದು ಕೈಯಲ್ಲಿ ನೂತ ನೂಲನ್ನು ರಾಶಿ ರಾಶಿಯಾಗಿ ಅವರ ಮುಂದಿಟ್ಟರು.

ವಿಚಾರಣಾ ಸಮಿತಿಯ ವರದಿಯ ಕರಡು ತಯಾರಿಸುವ ಕೆಲಸವನ್ನು ಗಾಂಧಿಯವರಿಗೇ ವಹಿಸಲಾಯಿತು. ಯಾವ ಹೇಳಿಕೆಗೇ ಆಗಲಿ, ಅವರ ಪ್ರಾಮಾಣ್ಯದ ವಿಷಯ

ದಲ್ಲಿ ಎಳ್ಳಷ್ಟು ಅವಕಾಶವಿದ್ದರೂ, ಆ ವರದಿಯಲ್ಲಿ ಸೇರಲು ಎಡೆಗೊಡಲಿಲ್ಲ. ವರದಿಯಲ್ಲಿ ಸೇರಿಸಿದ ಒಂದೇ ಒಂದು ಹೇಳಿಕೆಯನ್ನೂ ಸುಳ್ಳೆಂದು ಸಮರ್ಥಿಸಲು ಸುತರಾಂ ಸಾಧ್ಯವಾಗಲಿಲ್ಲ.

ಪಂಜಾಬಿನಲ್ಲಿ ಕಾಂಗ್ರೆಸ್ ವಿಚಾರಣಾ ಸಮಿತಿಯ ಕೆಲಸ ಅದೇ ತಾನೇ ಪ್ರಾರಂಭವಾಗಿತ್ತು. ದೆಹಲಿಯಲ್ಲಿ ಸೇರಿ ಖಿಲಾಫತ್ ಸಮಸ್ಯೆಯನ್ನು ಚರ್ಚಿಸಲಿದ್ದ ಹಿಂದೂ ಮತ್ತು ಮುಸ್ಲಿಮರ ಒಂದು ಜಂಟಿ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಬೇಕೆಂದು ಪ್ರಾರ್ಥಿಸುವ ಪತ್ರವೊಂದು ಬಂದಿತು. ಅದಕ್ಕೆ ಸಹಿ ಹಾಕಿದ್ದವರಲ್ಲಿ ಹಕೀಮ್ ಅಜ್ಮಲ್ ಖಾನ್ ಮತ್ತು ಆಸಫ್ ಅಲೀ ಅವರೂ ಇದ್ದರು. ಸ್ವಾಮಿ ಶ್ರದ್ಧಾನಂದರಿಗೆ ಈ ಸಮ್ಮೇಳನದೊಂದಿಗೆ ನಿಕಟ ಸಂಬಂಧವಿತ್ತು.

ನವೆಂಬರ್ ೨೪ರಂದು ಅಖಿಲ ಭಾರತ ಖಿಲಾಫತ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಗಾಂಧೀಜಿ ಉರ್ದುಭಾಷೆಯಲ್ಲಿ ಶ್ರೋತೃಗಳನ್ನುದ್ದೇಶಿಸಿ ಮಾತನಾಡಿದರು;

"ಮುಸ್ಲಿಮರಿಗೆ ಮಾತ್ರವೇ ವಿಶೇಷವಾಗಿ ಸಂಬಂಧಿಸಿದ ಒಂದು ವಿಚಾರದಲ್ಲಿ ಮುಸ್ಲಿಮರ ವೇದಿಕೆಯ ಮೇಲೆಯೇ ಹಿಂದೂಗಳೂ ನಿಲ್ಲುವುದು ವಿಚಿತ್ರವೆನಿಸಬಾರದು. ಏಷ್ಟೇ ಆದರೂ ಸ್ನೇಹದ ಗುರುತೆಂದರೆ ಕಷ್ಟದಲ್ಲಿ ನೆರವಾಗುವುದು. ನಾವು ಯಾರೇ ಆಗಿರಲಿ–ಹಿಂದೂಗಳೋ ಪಾರ್ಸಿಗಳೋ ಕ್ರಿಶ್ಚಿಯನ್ನರೋ ಅಥವಾ ಯಹೂದ್ಯರೋ-ಒಂದೇ ಜನಾಂಗವಾಗಿ ನಾವು ಬದುಕಬೇಕಾಗಿದ್ದರೆ, ನಮ್ಮ ಯಾರೊಬ್ಬರ ಹಿತಾಸಕ್ತಿಯೇ ಆಗಲಿ ಅದು ಎಲ್ಲರ ಹಿತಾಸಕ್ತಿಯೇ ಆಗಬೇಕಲ್ಲವೆ? ನಿರ್ಣಾಯಕವಾದ ವಿಚಾರ ಪ್ರಕೃತ ಉದ್ದೇಶ ನ್ಯಾಯವೇ ಅಲ್ಲವೆ ಎಂಬುದು, ಅಷ್ಟೆ. ಮುಸ್ಲಿಮರ ಈ ಧ್ಯೇಯ ಎಷ್ಟು ನ್ಯಾಯವಾದುದೆಂಬುದಕ್ಕೆ ಇಂಗ್ಲೆಂಡಿನ ಪ್ರಧಾನಿ ಹಾಗೂ ಗೌರವಾನ್ವಿತರಾದ ಮಾಜಿ ಅಧಿಕಾರಿಗಳ ಸೈನ್ಯ ಸಮೂಹವೇ ಸಾಕ್ಷಿ. ಹಿಂದೂ ಮುಸ್ಲಿಂ ಐಕ್ಯವನ್ನು ಕುರಿತು ನಾವು ಮಾತನಾಡುತ್ತೇವೆ. ಮುಸ್ಲಿಮರ ಮಹತ್ವದ ಹಿತಾಸಕ್ತಿಗಳಿಗೆ ಅಪಾಯ ಒದಗಿರುವಾಗ ಹಿಂದೂಗಳು ತಮ್ಮ ಪಕ್ಕಕ್ಕೆ ತಾವು ಇದ್ದು ಬಿಟ್ಟರೆ ಅದು ಪೊಳ್ಳು ಮಾತಾಗುತ್ತದೆ. ಹಿಂದೂಗಳಾದ ನಾವು ಮುಸ್ಲಿಮರಿಗೆ ಕೆಲವೊಂದು ಷರತ್ತುಗಳ ಮೇಲೆ ಮಾತ್ರ ನೆರವು ನೀಡಬೇಕೆಂದು ಕೆಲವರು ಸಲಹೆ ಮಾಡಿದ್ದಾರೆ. ಷರತ್ತಿನಿಂದ ಕೂಡಿದ ನೆರವು ಕಲಬೆರಕೆ ಮಾಡಿದ ಸಿಮೆಂಟಿನಂತೆ; ಅದು ಅಂಟುವುದಿಲ್ಲ. ಆದ್ದರಿಂದ ಈಗಿರುವ ಪ್ರಶ್ನೆ ಒಂದೇ; ನೆರವಾಗುವುದು ಹೇಗೆ ಎಂಬುದು. ಖಿಲಾಫತ್ ಸಮ್ಮೇಳನವು ಬರಲಿರುವ ಶಾಂತಿ ಸಮಾರಂಭಗಳಲ್ಲಿ ಭಾಗವಹಿಸಬಾರದೆಂಬ ತೀರ್ಮಾನಕ್ಕೆ ಬಂದಿದೆ. ಅದು ವಿಹಿತವಾದ ನಿರ್ಧಾರ ಎಂದೇ ನನಗೆ ತೋರುತ್ತದೆ. ಭಾರತದ ಜನತೆಯ ನಾಲ್ಕನೆ ಒಂದು ಭಾಗದ ಮೇಲೆ ಪರಿಣಾಮ ಬೀರುವ ಶಾಂತಿಯ ಜೀವಾಳವಾದ ಅಂಶವನ್ನೇ ಇನ್ನೂ ಘೋಷಿಸಿಲ್ಲದಿರುವಾಗ ಶಾಂತಿ ಸಮಾರಂಭಗಳು ಭಾರತದ ಪಾಲಿಗೆ ಅರ್ಥಶೂನ್ಯ. ಖಿಲಾಫತ್ ಮೇಲೆ ಪರಿಣಾಮ ಮಾಡುವ ಶಾಂತಿ ಷರತ್ತುಗಳಲ್ಲಿ ಎಂಟು ಕೋಟಿ ಜನ ಮುಸ್ಲಿಮರಿಗೆ ತೀವ್ರ ಆಸಕ್ತಿಯಿದೆ. ಖಿಲಾಫತ್‌ನ ಹಣೇಬರಹವೇ ಓಲಾಡುತ್ತಿರುವಾಗ ಶಾಂತಿ

ಸಮಾರಂಭಗಳನ್ನು ಆಚರಿಸಿರೆಂದು ಅವರಿಗೆ ಹೇಳುವುದು ಅನುಚಿತ. ಖಿಲಾಫತ್ ಸಮಸ್ಯೆ ಪರಿಹಾರವಾಗದೆ ಉಳಿದಿರುವಾಗ ಶಾಂತಿಯ ಉತ್ಸವಗಳನ್ನು ಆಚರಿಸಿರೆಂದು ಭಾರತಕ್ಕೆ ಹೇಳುವುದು ಆಲ್ಸೇಸ್-ಲೊರ್ರೇನ್ಸ್ ಸಮಸ್ಯೆ ಇತ್ಯರ್ಥವಾಗುವ ಮುನ್ನವೇ ಫ್ರಾನ್ಸ್‌ದೇಶವು ಶಾಂತಿ ಸಮಾರಂಭಗಳನ್ನು ಆಚರಿಸಬೇಕೆಂದು ನಿರೀಕ್ಷಿಸಿದ ಹಾಗೆ. ಟರ್ಕಿಯು ಭಾರತದ ಹೊರಗಿದೆ ಎಂಬುದು ಈ ಹೋಲಿಕೆಯನ್ನು ಕೆಡಿಸುವುದಿಲ್ಲ. ಇಂಗ್ಲೆಂಡು ಕ್ರಿಶ್ಚಿಯನ್ ರಾಷ್ಟ್ರವಾಗಿರುವಷ್ಟೇ ಹಿಂದೂ ಮತ್ತು ಮುಸ್ಲಿಂ ರಾಷ್ಟ್ರವೂ ಆಗಿದೆ. ಭಾರತವು ಸಾಮ್ರಾಜ್ಯದಲ್ಲಿ ಸಹಭಾಗಿಯಾಗಿರುವ ಪಕ್ಷಕ್ಕೆ ಮುಸ್ಲಿಮರ ಭಾವನೆಗಳನ್ನು ಇತರ ಎಲ್ಲದರಂತೆಯೇ ಸಂತೃಪ್ತಗೊಳಿಸಬೇಕು. ಆದ್ದರಿಂದ ಖಿಲಾಫತ್ ಸಮಸ್ಯೆಯು ಇತ್ಯರ್ಥವಾಗುವವರೆಗೂ ಸಾಮ್ರಾಜ್ಯದ ಶಾಂತಿ ಸಮಾರಂಭಗಳನ್ನು ವೈಸರಾಯ್ ಅವರು ಮುಂದೂಡುವುದೇ ಸೂಕ್ತವಾದ ಕಾರ್ಯ.

"ಇದು ನಿಜಕ್ಕೂ ಇಂಗ್ಲೆಂಡಿನ ಗೌರವಕ್ಕೆ ಸಂಬಂಧಿಸಿದ ಪ್ರಶ್ನೆ. ಇದು ಪ್ರಧಾನ ಮಂತ್ರಿ ಕೊಟ್ಟಿರುವ ಪ್ರಮಾಣ ವಚನದ ಪ್ರಶ್ನೆ. ಆ ಗೌರವಕ್ಕೆ ಕಲಂಕ ತಗುಲಿದರೆ, ಸಂಪತ್ತು, ಅಧಿಕಾರ ಸೇನಾಬಲದ ಖ್ಯಾತಿ ಇವಕ್ಕೆಲ್ಲ ಏನು ಬೆಲೆ? ಆದ್ದರಿಂದ ಪ್ರಧಾನ ಮಂತ್ರಿಯವರ ಭಾಷಣದ ತಂತಿ ಸಂಗ್ರಹವನ್ನು ಓದಿ ನನಗೆ ತುಂಬ ವ್ಯಥೆಯಾಯಿತು. ಮುಸ್ಲಿಮರ ಭಾವನೆಗೆ ಅದು ಅನಾವಶ್ಯಕವಾಗಿ ವೇದನೆಯುಂಟು ಮಾಡುವುದೆಂದು ತೋರಿತು. ಪ್ರಧಾನ ಮಂತ್ರಿಯು ಸೂಕ್ತ ಪರ್ಯಾಲೋಚನೆಯ ಬಳಿಕ ಕೊಟ್ಟ ಗುರುತರವಾದ ವಚನ ಅದು. ತಮ್ಮ ಆ ವಚನಕ್ಕೇ ವಿರುದ್ಧವಾದ ರೀತಿಯಲ್ಲಿ ಖಿಲಾಫತ್ ಸಮಸ್ಯೆಯ ಇತ್ಯರ್ಥವೊಂದನ್ನು ಮುನ್ಸೂಚಿಸುವಂತಿತ್ತು ಅವರ ಭಾಷಣ. ಈಗಲೂ ವಿವೇಕಪೂರ್ಣ ಆಲೋಚನೆಗಳೇ ಜಯಿಸಿ, ಮುಸ್ಲಿಮರ ಹಕ್ಕಿಗೆ ನ್ಯಾಯವನ್ನು ಸಲ್ಲಿಸಲಾಗುತ್ತದೆಂದು ನಾನು ಆಶಿಸುತ್ತಿರುತ್ತೇನೆ. ಆದಾಗ್ಯೂ ಕೆಟ್ಟದ್ದೇ ಆಗಿ ಬಿಡುವ ಪಕ್ಷಕ್ಕೆ, ಮುಸ್ಲಿಮರು ಈಗ ಸರಕಾರಕ್ಕೆ ಕೊಡುತ್ತಿರುವ ಸಹಕಾರವನ್ನು ಇನ್ನು ಮುಂದೆ ಕೊಡದಂತೆ ಅವರಿಗೆ ಸಲಹೆ ನೀಡಬೇಕೆಂದು ನಿನ್ನೆ ರಾತ್ರಿ ಖಿಲಾಫತ್ ಸಮಿತಿಯು ತೀರ್ಮಾನಿಸಿದೆ. ನಾನು ವಿಷಯನಿಯಾಮಕ ಸಾಮಾನ್ಯ ಸಭೆಗಳಲ್ಲೂ ಹಾಜರಿರುವ ಸುಯೋಗ ನನಗೆ ದೊರೆತಿತ್ತು. ಇದೆಷ್ಟು ಗುರುತರವಾದ ಸಂದರ್ಭ ಎಂಬುವನ್ನೂ ಖಿಲಾಫತ್ ಸಮಿತಿಯ ತೀರ್ಮಾನ ಎಷ್ಟು ಉಗ್ರವಾದುದೆಂಬುವನ್ನೂ ಕುರಿತು ಸರಕಾರಕ್ಕೆ ಮುನ್ನೆಚ್ಚರಿಕೆ ಕೊಡುವ ಸ್ವಾತಂತ್ರ್ಯವನ್ನು ನಾನು ವಹಿಸುತ್ತಿದ್ದೇನೆ. ಸಹಕಾರ ಕೊಡುವುದನ್ನು ನಿಲ್ಲಿಸಿಬಿಡುವುದು ಉಗ್ರವಾದ ಕಾರ್ಯವೆಂಬುದನ್ನು ನಾನು ಬಲ್ಲೆ. ದುಃಖ ಸಹಿಸಲು ಸಾಮರ್ಥ್ಯ ಬೇಕು. ಸಹಕಾರ ನೀಡುವುದೇ ಅಪಮಾನವಾಗುವ ಪರಿಸ್ಥಿತಿ ಬಂದರೆ, ರಾಷ್ಟ್ರಕ್ಕೆ ನೀಡುತ್ತಿದ್ದ ಸಹಕಾರವನ್ನು ನಿಲ್ಲಿಸಿಬಿಡುವುದೂ ಪೌರನ ಹಕ್ಕು ಎಂಬುದನ್ನೂ ನಾನು ಬಲ್ಲೆ. ತನ್ನ ಸರಕಾರದ ಅಕೃತ್ಯಗಳಿಂದ ತನಗಾಗಿರುವ ಅಸಮಾಧಾನವನ್ನು ತೋರಿಸುವ ಒಂದು ಸ್ಪಷ್ಟ ರೀತಿ ಅದು.

"ಆದ್ದರಿಂದ ಸಾರ್ವಭೌಮ ಸರಕಾರವು ಪರಿಸ್ಥಿತಿಯು ಎಷ್ಟು ಉಗ್ರವಾಗಿದೆ ಯೆಂಬುದನ್ನು ಅರಿತುಕೊಳ್ಳುತ್ತಾರೆಂದು ಆಶಿಸಬಹುದಾಗಿದೆ. ಆದರೆ ಅಸಹಕಾರದಿಂದ ಬಹಿಷ್ಕಾರಕ್ಕೆ ಇಳಿಯುವುದು ಉದಾತ್ತದಿಂದ ತುಚ್ಛಕ್ಕೆ ಇಳಿದಂತೆ.

"ಖಿಲಾಫತ್ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಹರಿಸದಿದ್ದರೆ ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಬೇಕೆನ್ನುವುದರ ಪರವಾಗಿ ಬಹುಮತದಿಂದ ನಿನ್ನೆ ರಾತ್ರಿ ಸಮಿತಿಯು ಒಂದು ತೀರ್ಮಾನ ಮಾಡಿತು. ಬಹಿಷ್ಕಾರವು ಒಂದು ಬಗೆಯ ಪ್ರತೀಕಾರ. ಅದು ನ್ಯಾಯವಾದ ಪರಿಹಾರವನ್ನು ಪಡೆಯಲು ಅದು ನಮಗೆ ನೀಡುವ ನೆರವೇನೆಂದು ಹೇಳುವುದಾದರೆ, ನಾವು ಈಗ ನ್ಯಾಯದ ಬಗೆಗೆ ವಿಶ್ವಾಭಿಪ್ರಾಯವನ್ನು ರೂಪಿಸಬೇಕು. ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವುದರಿಂದ ವಿಶ್ವಾಭಿಪ್ರಾಯವನ್ನು ತಮ್ಮ ಪರವಾಗಿ ರೂಪಿಸಲಾಗುವುದಿಲ್ಲವೆಂದು ನಾನು ನನ್ನ ಮುಸ್ಲಿಂ ಗೆಳೆಯರಿಗೆ ಸೂಚಿಸುವ ಸಾಹಸ ಮಾಡುತ್ತಿದ್ದೇನೆ. ಕಾರ್ಯಗತ ಮಾಡಲು ಹೋದಾಗ ಬಹಿಷ್ಕಾರವು ಖಂಡಿತ ಮುರಿದು ಬೀಳುತ್ತದೆ. ಈಗ ಸೂಚಿಸಿರುವ ಬಹಿಷ್ಕಾರವು ನಾವೇ ನಮ್ಮ ದೌರ್ಬಲ್ಯವನ್ನೊಪ್ಪಿಕೊಂಡಂತೆ. ಎಲ್ಲ ಸಮಸ್ಯೆಗಳನ್ನೂ ಸಫಲವಾಗಿ ನಿರ್ವಹಿಸಲು ಸಾಧ್ಯವಾಗಬೇಕಾದರೆ, ಬೇಕಾದದ್ದು ಬಲ, ದೌರ್ಬಲ್ಯವಲ್ಲ. ಖಿಲಾಫತ್ ಸಮಿತಿಯವರು ಈಗ ಮುಂದಿಟ್ಟಿರುವ ಹೆಜ್ಜೆಯನ್ನು ಹಿಂದೆಗೆದುಕೊಂಡು, ಪರಿಪಕ್ವ ಬುದ್ಧಿಯಿಂದ ಪರ್ಯಾಲೋಚಿಸಿ ಈ ಬಹಿಷ್ಕಾರದ ನಿರ್ಣಯವನ್ನು ರದ್ದುಪಡಿಸುತ್ತಾರೆಂದು ಆಶಿಸುತ್ತೇನೆ. ಈ ದೊಡ್ಡ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಶಾಂತತೆ, ಸಹನೆ, ಸತ್ಯಾಂಶಗಳಿಗೆ ಕಟ್ಟುನಿಟ್ಟಾಗಿ ಅಂಟಿಕೊಂಡಿರುವುದು—ಇವೆಲ್ಲ ಅಗತ್ಯ, ಹಿಂಸೆಯಲ್ಲ ಎಂಬುದಷ್ಟೆ ಸಾಲದು. ಹಲವೊಮ್ಮೆ ಹಿಂಸಾಯುತ ಭಾಷಣ ಹಿಂಸಾಕೃತ್ಯದಷ್ಟೇ ಹಾನಿಕರ. ಯಾವುದೋ ದುಡುಕಿನ ಮಾತಿನಿಂದಲೋ ಕಾರ್ಯದಿಂದಲೋ ನ್ಯಾಯವೂ ಪವಿತ್ರವೂ ಆದ ಒಂದು ಧ್ಯೇಯವನ್ನು ನೀವು ಕೆಡಿಸುವುದಿಲ್ಲವೆಂದು ನನ್ನ ಭರವಸೆ.

"ಕೆಲವು ಮಿತ್ರರು ಸೂಚಿಸಿರುವ ಒಂದು ನಿಲುವನ್ನು ಪರೀಕ್ಷಿಸುವುದು ಈಗ ಉಳಿದಿರುವ ಕೆಲಸ. ಪಂಜಾಬಿಗಾಗಿರುವ ಅನ್ಯಾಯವೂ ಕೂಡ, ಶಾಂತಿಸಮಾರಂಭಗಳಲ್ಲಿ ಭಾಗವಹಿಸದಿರಲು ಒಂದೊಳ್ಳೆಯ ಕಾರಣವೆಂದು ವಾದಿಸಲಾಗಿದೆ. ನನ್ನ ದೃಷ್ಟಿ ಬೇರೆ. ಪಂಜಾಬಿನಲ್ಲಿ ಆಗಿರುವ ಅನ್ಯಾಯ ಎಷ್ಟೇ ಘೋರವಾದದ್ದಾಗಲಿ, ಅದೇನಿದ್ದರೂ ನಮ್ಮ ಆಂತರಿಕ ವಿಷಯ. ಸಾಮ್ರಾಜ್ಯದ ಶಾಂತಿ ಸಮಾರಂಭಗಳಿಗೆ ಮಾಡುವ ಅಸಹಕಾರವನ್ನು ಸಮರ್ಥಿಸಲು ಪಂಜಾಬಿನ ಅನ್ಯಾಯವನ್ನು ತರುವುದು ನಮ್ಮಲ್ಲಿ ಔಚಿತ್ಯ ಜ್ಞಾನವಿಲ್ಲವೆಂದು ತೋರಿಸಿಕೊಂಡಂತಾಗುತ್ತದೆ.

"ಖಿಲಾಫತ್ ಸಮಸ್ಯೆಯಂತೆ ಪಂಜಾಬಿನ ಅನ್ಯಾಯವು ಶಾಂತಿಯ ಷರತ್ತುಗಳಿಂದ ಹುಟ್ಟಿದ್ದಲ್ಲ. ಖಿಲಾಫತ್ ಸಮಸ್ಯೆಗಳಿಗೆ ಸಲ್ಲಬೇಕಾದ ಸ್ಥಾನ ಮತ್ತು ಬೆಲೆಯನ್ನು ನಾವು ಕೊಡಬೇಕಾದರೆ ಅದನ್ನೇ ಪ್ರತ್ಯೇಕವಾಗಿ ನೋಡಬೇಕು. ಶಾಂತಿಯಿಂದಲೇ ನೇರವಾಗಿ ಹುಟ್ಟಿ ನಮ್ಮ ಜನಾಂಗದ ಇರವಿನ ಜೀವಾಳವಾದ ಅಂಶಗಳಿಗೇ ಸಂಬಂಧಿಸಿ

ದಂಥವುಗಳಲ್ಲದೆ ಬೇರೆ ಕಾರಣಗಳಿಗಾಗಿ ಶಾಂತಿಸಮಾರಂಭಗಳಲ್ಲಿ ಭಾಗವಹಿಸಲು ನಿರಾಕರಿಸುವುದಕ್ಕೆ ನಮಗೆ ಹಕ್ಕಿಲ್ಲವೆಂಬುದು ನನ್ನ ಅಭಿಪ್ರಾಯ. ಈ ಎರಡು ಪರೀಕ್ಷೆಗಳ ಒರೆಗಲ್ಲಿನಲ್ಲೂ ಚೊಕ್ಕಚಿನ್ನವೆಂದು ಕಾಣುವುದು ಖಿಲಾಫತ್ ಸಮಸ್ಯೆಯೊಂದೇ.

"ಸಮ್ಮೇಳನದ ಕಾರ್ಯದರ್ಶಿಯಾದ ಆಸಫ್ ಆಲಿ ಅವರು, ತಾವು ಪ್ರಸಾರ ಮಾಡಿರುವ ಪತ್ರಿಕೆಗಳಲ್ಲಿ ಗೋರಕ್ಷಾ ಸಮಸ್ಯೆ ಮತ್ತು ಪಂಜಾಬಿನ ವಿಚಾರಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ. ಹಿಂದೂಗಳು ಗೋ ರಕ್ಷಾ ಪ್ರಶ್ನೆಯನ್ನು ಇಲ್ಲಿ ಎತ್ತಬಾರದೆಂದು ನಾನು ವಿನಂತಿ ಮಾಡುತ್ತೇನೆ. ಕಷ್ಟದಲ್ಲಿ ನೆರವಾಗುವುದೇ ಗೆಳೆತನದ ಕುರುಹು, ಅದರಲ್ಲೂ ಬೇಷರತ್ತಾಗಿ ನೆರವಾಗುವುದು. ಮುಸ್ಲಿಮರ ಧ್ಯೇಯದಲ್ಲಿ ಹಿಂದೂಗಳ ಕರ್ತವ್ಯ. ಮುಸ್ಲಿಮರು ತಾವಾಗಿಯೇ ಹಿಂದೂಗಳ ಭಾವನೆಗಳಿಗೆ ನೋವಾಗದಂತಿರುವುದು ತಮ್ಮ ಕಟ್ಟಿಟ್ಟ ಕರ್ತವ್ಯವೆಂದರಿತು ಗೋವಧೆಯನ್ನು ನಿಲ್ಲಿಸಿವರೆ ಅವರು ಹಾಗೆ ಮಾಡಬಹುದು, ಹಿಂದೂಗಳು ಸಹಕರಿಸಲಿ ಬಿಡಲಿ ಆ ಮಾತು ಬೇರೆ. ಆದ್ದರಿಂದ ಗೋವನ್ನು ಪೂಜಿಸುವುದರಲ್ಲಿ ನಾನು ಯಾವ ಹಿಂದೂವಿಗೂ ಕಡಮೆಯೇನೂ ಅಲ್ಲ. ಆದರೂ ಗೋವಧೆ ನಿಲ್ಲಿಸುವುದನ್ನು ಮುಸ್ಲಿಮರಿಗೆ ಸಹಕಾರ ನೀಡಲು ಪೂರ್ವಭಾವೀ ಷರತ್ತನ್ನಾಗಿ ಮಾಡಲು ನಾನು ಬಯಸುವುದಿಲ್ಲ. ಬೇಷರತ್ತಾಗಿ ಸಹಕಾರವೆಂದರೆ ಗೋರಕ್ಷಣೆಯೆಂದೇ. ಇನ್ನು ಪಂಜಾಬಿನ ವಿಷಯದಲ್ಲೂ ನಿಮ್ಮಲ್ಲಿ ಹಲವರದಕ್ಕಿಂತ ಬೇರೆ ಅಭಿಪ್ರಾಯಗಳನ್ನು ತಳೆಯುವ ಸಾಹಸ ಮಾಡುತ್ತಿದ್ದೇನೆ. ಪಂಜಾಬಿನ ಘಟನೆಗಳು ಇತರರಿಗೆ ತುಂಬ ವೇದನೆಯನ್ನುಂಟು ಮಾಡಿರಬಹುದು. ಆದರೆ ಇಷ್ಟು ಹೇಳಬಲ್ಲೆ. ಅವು ನನಗೆ ಉಂಟುಮಾಡಿರುವುದಕ್ಕಿಂತ ಹೆಚ್ಚಿನ ನೋವನ್ನು ಯಾರಿಗೂ ಉಂಟು ಮಾಡಿರಲಾರವು. ಆದರೂ ಪಂಜಾಬಿನ ಅನ್ಯಾಯಗಳನ್ನು ಇಲ್ಲಿ ತರಕೂಡದು ಎಂಬುದೇ ನನ್ನ ಭಾವನೆ. ಪಂಜಾಬಿನಲ್ಲಾದ ಅನ್ಯಾಯವನ್ನು ಸರಿಪಡಿಸಿಯೇ ಇಲ್ಲ ಎನ್ನುವಂತೆಯೂ ಇಲ್ಲ. ಹಂಟರ್ ಸಮಿತಿಯು ಇನ್ನೂ ಕಾರ್ಯನಿರತವಾಗಿದೆ. ನಮ್ಮ ಸಮಿತಿ ಕೂಡ ಅಷ್ಟೇಮಟ್ಟಿಗೆ ಕಾರ್ಯದಲ್ಲಿ ಮುಳುಗಿದೆ. ಖಿಲಾಫತ್ ಸಮಸ್ಯೆ ತುಂಬ ತೀವ್ರವಾದದ್ದು. ಅದಕ್ಕೆ ಪರಿಹಾರ ತಕ್ಷಣ ಅಗತ್ಯ. ಸರಿಯಾದ ಸ್ಥಾನ, ಬೆಲೆಗಳನ್ನು ಅದಕ್ಕೆ ನಾವು ಕೊಡಬೇಕಾದರೆ ಅದನ್ನು ಪ್ರತ್ಯೇಕಗೊಳಿಸಲೇಬೇಕು".

ಮೌಲಾನಾ ಅಬ್ದುಲ್ ಬಾರಿ ಅವರು ವಂದನಾರ್ಪಣೆ ಮಾಡುತ್ತಾ, ಹೀಗೆಂದರು: "ಗೋ ರಕ್ಷಣೆಯ ಪ್ರಶ್ನೆಯನ್ನು ಇಲ್ಲಿ ತರುವುದರ ಬಗ್ಗೆ ಗಾಂಧೀಜಿಯವರು ಏನು ಬೇಕಾದರೂ ಹೇಳಬಹುದು, ಅದು ಅವರಿಗೂ ಮತ್ತು ನಮ್ಮ ಹಿಂದೂ ಸೋದರರಿಗೂ ಗೌರವಾಸ್ಪದವಾದ ಮಾತು. ಆದರೆ, ಹಿಂದೂಗಳ ಸಹಕಾರವನ್ನು ಮರೆತರೆ ಮುಸಲ್ಮಾನರ ಗೌರವಕ್ಕೇ ಧಕ್ಕೆಯುಂಟಾಗುವುದು. ನನ್ನ ಮಟ್ಟಿಗೆ ಹೇಳುವುದಾದರೆ, ಹಿಂದೂಗಳ ಸಹಕಾರ ಸಿಗಲಿ ಬಿಡಲಿ, ನಾವು ಗೋಹತ್ಯೆಯನ್ನು ನಿಲ್ಲಿಸಲೇಬೇಕು. ಏಕೆಂದರೆ ನಾವು ಇದೇ ಮಣ್ಣಿನ ಮಕ್ಕಳು. ಗೋಹತ್ಯೆಯನ್ನು ಸ್ವಯಂಪ್ರೇರಿತರಾಗಿ ನಿಲ್ಲಿಸುವುದರಿಂದ ನಮ್ಮ ಧರ್ಮದ ನಿಯಮಗಳಿಗೆ ವಿರೋಧವಾಗಿ ನಡೆದಂತೆ ಆಗುವುದಿಲ್ಲ ಎಂದು

ಮೌಲ್ವಿಯಾಗಿ ನಾನು ಹೇಳುತ್ತಿದ್ದೇನೆ. ಹಿಂದೂ–ಮುಸಲ್ಮಾನ್ ಐಕ್ಯತೆಗೆ ಖಿಲಾಫತ್ ಸಮಸ್ಯೆಯ ವಿಷಯದಲ್ಲಿ ನಮಗೆ ಹಿಂದೂಗಳಿಂದ ದೊರೆತಿರುವ ಸಹಕಾರದಷ್ಟು ಇನ್ನಾವುದೂ ನೆರವಾಗಿಲ್ಲ."

ಉತ್ತರ ದೇಶದ ಮುಸ್ಲಿಂ ವಿದ್ವಾಂಸರೇ ಹೆಚ್ಚಾಗಿದ್ದ ಸಭೆಯೊಂದರಲ್ಲಿ ವಾದಾತ್ಮಕವಾದ ಭಾಷಣವೊಂದನ್ನು ಉರ್ದುವಿನಲ್ಲಿ ಗಾಂಧೀಜಿ ಮಾಡಿದ್ದು ಇದೇ ಮೊದಲ ಸಲ. ಅವರ ಮುಂದೆ ಇದ್ದವರು ತೀರ ವಿಮರ್ಶಾಪರರಾದ ಶ್ರೋತೃಗಳು. ಗಾಂಧೀಜಿ ತಮ್ಮ ದೃಷ್ಟಿಯನ್ನು ಅವರಿಗೆ ವಿವರಿಸಿ ಮನದಟ್ಟು ಮಾಡಬೇಕಾಗಿತ್ತು. ಮೌಲಾನಾ ಹಜರತ್ ಮೋಹಾನಿ ಅವರು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಹಟ ಹಿಡಿದಿದ್ದರು. ಅವರೇ ಮುಖ್ಯವಾಗಿ ಗಾಂಧೀಜಿಯ ಪ್ರತಿವಾದಿ. "ಬ್ರಿಟಿಷರ ಮೇಲೆ ತಕ್ಷಣ ಪರಿಣಾಮವನ್ನು ಉಂಟುಮಾಡುವ ಏನಾದರೊಂದು ನಮಗೆ ಬೇಕು. ವಿದೇಶೀ ವಸ್ತ್ರಗಳ ಬಹಿಷ್ಕಾರವೂ ಇರಲಿ, ಜೊತೆಗೆ ಇನ್ನೂ ಚುರುಕಾದ ವೇಗವಾದ ಏನನ್ನಾದರೂ ಕೊಡಿ" ಎಂದರು, ಮೌಲಾನಾರವರು.

ಮೌಲಾನಾ ಹಜರತ್ ಮೋಹಾನಿ ಅವರ ಮಾತನ್ನು ಕೇಳುತ್ತಾ ಕುಳಿತಿದ್ದ ಗಾಂಧೀಜಿಗೆ ವಿದೇಶೀ ವಸ್ತ್ರದ ಬಹಿಷ್ಕಾರಕ್ಕಿಂತ ಹೆಚ್ಚಾದುದು ಏನೋ ಒಂದು ಅಗತ್ಯ ಎನಿಸಿತು. "ವಿದೇಶೀ ವಸ್ತ್ರವನ್ನು ತಕ್ಷಣ ಬಹಿಷ್ಕರಿಸುವುದು ಆಗ ನನಗೆ ಸ್ಪಷ್ಟವಾಗಿಯೇ ಅಸಾಧ್ಯವೆಂದು ಕಂಡಿತು. ನಮಗೆ ಬೇಕಾದ ಬಟ್ಟೆಯ ಅಗತ್ಯಗಳನ್ನೆಲ್ಲ ಪೂರೈಸುವಷ್ಟು ಖಾದಿಯನ್ನು ನಾವು ಇಚ್ಛೆಪಟ್ಟರೆ ತಯಾರು ಮಾಡಬಹುದು ಎಂಬುದು ಆಗ ನನಗೆ ಗೊತ್ತಿರಲಿಲ್ಲ. ನಾನು ಅದನ್ನು ಕಂಡುಕೊಂಡದ್ದು. ಅನಂತರವೇ. ಇನ್ನೊಂದು ದೃಷ್ಟಿಯಿಂದ ಇನ್ನೊಂದು ವಿಷಯ ಆಗಲೂನನಗೆ ಗೊತ್ತಿತ್ತು. ವಿದೇಶೀ ವಸ್ತ್ರದ ಬಹಿಷ್ಕಾರ ಕಾರ್ಯಗತ ಮಾಡಲು ಮಿಲ್ಲುಗಳನ್ನು ಮಾತ್ರ ನಂಬಿಕೊಂಡಿದ್ದರೆ ಅವುಗಳಿಂದ ನಾವು ಮೋಸ ಹೋಗುವುದು ಖಂಡಿತ ಎಂದು". ಮನ ಕಲಕುವ ಭಾಷಣವನ್ನು ಹಜರತ್ ಮೋಹಾನಿ ಅವರು ಮುಗಿಸಿದಾಗ ಗಾಂಧೀಯ ಮನಸ್ಸು ಇನ್ನೂ ಈ ದ್ವೈವಿಧ್ಯದಲ್ಲೇ ಇತ್ತು.

ತಮ್ಮ ಹೊಸ ಭಾವನೆಗೆ ತಕ್ಕಂತಹ ಹಿಂದಿ ಅಥವಾ ಉರ್ದು ಪದಗಳು ಸಿಕ್ಕದೆ ಗಾಂಧೀಜಿಗೆ ಅನಾನುಕೂಲವಾಯಿತು. ಕೊನೆಗೆ ಅವರು 'ಅಸಹಕಾರ' ಎಂಬ ಮಾತಿನಿಂದ ಅದನ್ನು ವಿವರಿಸಿದರು. ಈ ಸಂದರ್ಭದಲ್ಲೆ ಮೊಟ್ಟಮೊದಲಿಗೆ ಅವರು ಬಳಸಿದ ಪದ ಅದು.ಅನಂತರ ಅವರು ಹೇಳಿದರು: "ಮೌಲಾನಾ ಅವರು ಭಾಷಣ ಮಾಡುತ್ತಿರುವಾಗ್ಗೆ ನನಗೆ ಹೀಗೆ ತೋರಿತು, ಆಯುಧಗಳನ್ನವಲಂಬಿಸುವುದು ಅಸಾಧ್ಯವೋ ಅನಪೇಕ್ಷಣೀಯವೋ ಆದರೆ, ಸರ್ಕಾರವನ್ನು ಪರಿಣಾಮಕಾರಿಯಾಗಿ ಪ್ರತಿಭಟಿಸಬಹುದು ಎಂಬ ಅವರ ಮಾತು ವ್ಯರ್ಥ. ಏಕೆಂದರೆ, ಒಂದಲ್ಲ ಹಲವು ವಿಷಯದಲ್ಲಿ ಅದೇ ಸರ್ಕಾರದೊಂದಿಗೆ ಅವರು ಸಹಕರಿಸುತ್ತಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನಿಜವಾದ ಪ್ರತಿಭಟನೆ ತೋರಿಸುವುದು ಎಂದರೆ ಅದರೊಂದಿಗೆ ಸಹಕರಿಸುವುದನ್ನು ನಿಲ್ಲಿಸಿಬಿಡುವುದು ಎಂದು

ನನಗೆ ತೋರಿತು. ಅಸಹಕಾರ ಎಂಬ ಪದ ನನಗೆ ಸಿಕ್ಕಿದ್ದು ಹೀಗೆ. ಅದರಲ್ಲಡಗಿದ್ದ ಬಹುಮುಖವಾದ ಅರ್ಥಗಳೇನೇನು ಎಂಬುದರ ಬಗ್ಗೆ ಸ್ಪಷ್ಟವಾದ ಭಾವನೆ ಆಗ ನನಗೆ ಇರಲಿಲ್ಲ. ಆದ್ದರಿಂದ, ವಿವರಗಳಿಗೆ ನಾನು ಪ್ರವೇಶಿಸಲಿಲ್ಲ.".

ಗಾಂಧೀಜಿ ಹೀಗೆ ಯೋಚಿಸಿದರು: "ಮುಸ್ಲಿಮರು ಅತ್ಯಂತ ಮುಖ್ಯವಾದ ಠರಾವೊಂದನ್ನು ಅನುಮೋದಿಸಿದ್ದಾರೆ. ಶಾಂತಿ ಷರತ್ತುಗಳು ಅವರಿಗೆ ಅನನುಕೂಲ ವಾಗಿದ್ದರೆ–ದೇವರ ದಯೆಯಿಂದ ಹಾಗಾಗದಿರಲಿ–ಸರ್ಕಾರದೊಂದಿಗೆ ಅವರು ಎಲ್ಲ ವಿಧವಾದ ಸಹಕಾರವನ್ನೂ ನಿಲ್ಲಿಸುತ್ತಾರೆ. ಸಹಕಾರವನ್ನು ಹೀಗೆ ನಿರಾಕರಿಸುವುದು ಜನರಿಂದ ಕಸಿದುಕೊಳ್ಳಲಾರದ ಹಕ್ಕು. ಸರ್ಕಾರೀ ಬಿರುದು ಬಾವಲಿಗಳನ್ನೂ ಗೌರವ ಗಳನ್ನೂ ಇನ್ನೂ ನಾವು ಉಪಯೋಗಿಸಿಕೊಳ್ಳುವುದನ್ನಾಗಲಿ ಸರ್ಕಾರೀಹುದ್ದೆಯಲ್ಲಿ ಮುಂದುವರಿಯುವುದನ್ನಾಗಲಿ ಮಾಡದಿರುವುದು ನಮ್ಮ ಕರ್ತವ್ಯ. ಖಿಲಾಫತ್‌ನಂತಹ ಮಹೋದ್ದೇಶದಲ್ಲೇ ಸರ್ಕಾರವು ನಮಗೆ ದ್ರೋಹ ಮಾಡಿದರೆ, ಅಸಹಕಾರ ಮಾಡದೆ ನಮಗೆ ಬೇರೆ ದಾರಿಯೇ ಇಲ್ಲ. ದ್ರೋಹವಾದಲ್ಲಿ ಸರ್ಕಾರದೊಂದಿಗೆ ಸಹಕರಿಸದಿರು ವುದು ನಮ್ಮ ಹಕ್ಕು".

ಆದರೆ ಅಸಹಕಾರ ಎಂಬ ಪದ ಪ್ರಚಲಿತವಾಗಲು ಕೆಲವು ತಿಂಗಳುಗಳೇ ಕಳೆಯಿತು. ಸದ್ಯಕ್ಕೆ ಸಮ್ಮೇಳನದ ಕಲಾಪಗಳಲ್ಲಿ ಅದೆಲ್ಲೋ ಮುಳುಗಿ ಹೋಯಿತು. ಮತ್ತೆ ಅದು ಪತ್ತೆಯಾಗಲು ಸ್ವಲ್ಪ ಕಾಲ ಬೇಕಾಯಿತು.

ಅಮೃತಸರದಲ್ಲಿ ಸೇರಿದ್ದ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನಕ್ಕೆ ಮುಂಚೆ ಗಾಂಧೀಜಿ ಡಿಸೆಂಬರ್ ೧೦ರ ಯಂಗ್ ಇಂಡಿಯಾದಲ್ಲಿ 'ಸ್ವದೇಶೀಯಲ್ಲಿ ಸ್ವರಾಜ್ಯ'ವನ್ನು ಕುರಿತು ಬರೆದರು:

"ಇನ್ನು ಕೆಲವು ತಿಂಗಳುಗಳಲ್ಲೇ ಬಹಳ ಬಹಳ ಹೇಳಿಕೊಳ್ಳುತ್ತಿರುವ ಸುಧಾರಣಾ ಮಸೂದೆ ಈ ದೇಶದ ಶಾಸನವಾಗುತ್ತದೆ. ಸಕಾಲದಲ್ಲಿ ಹೊಸ ಶಾಸನಸಭೆಗಳು ಹಳೆಯವುಗಳ ಸ್ಥಾನದಲ್ಲಿ ಕೂಡುತ್ತವೆ. ಸಂಯುಕ್ತ ಸಮಿತಿಯ ವರದಿಯನ್ನು ಕುರಿತು ನನ್ನ ಅಭಿಪ್ರಾಯವನ್ನು ಈ ವರೆಗೂ ನಾನು ವ್ಯಕ್ತಪಡಿಸಿಲ್ಲ. ಕಾರಣ, ನನಗೆ ಅದರಲ್ಲಿ ಸಾಕಷ್ಟು ಆಸಕ್ತಿ ಹುಟ್ಟುತ್ತಿಲ್ಲ. ವಿವರವಾಗಿ ಪರಿಶೀಲಿಸಿದಾಗ ಯಾವುದರಿಂದ ಒಂದು ಜನತೆಗೆ ಏನೂ ಪ್ರಯೋಜನ ಇಲ್ಲವೋ ಅಂಥ ವಿಷಯದಲ್ಲಿ ಉತ್ಸಾಹಗೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಸುಧಾರಣಾ ಯೋಜನೆಯನ್ನು ಕುರಿತಂತೆ ನಾನು ಹೇಳು ವುದಿಷ್ಟೆ: ಅದರ ಪೂರ್ಣ ಪ್ರಯೋಜನವನ್ನು ಪಡೆದುಕೊಂಡು ಅದನ್ನು ಯಶಸ್ವಿಗೊಳಿ ಸಲು ನಿಷ್ಠೆಯಿಂದ ಶ್ರಮಿಸಬೇಕು. ಮೊದಲು ರೂಪಿಸಿದ್ದ ಯೋಜನೆಗಿಂತ ಇದು ಉತ್ತಮವೆಂಬುದನ್ನು ಎಲ್ಲರೂ ಒಪ್ಪಿದ್ದಾರೆ.

"ಆದರೆ, ಭಾರತಕ್ಕೆ ಅಗತ್ಯವಾಗಿರುವ ನಿಜವಾದ ಸುಧಾರಣೆ ಎಂದರೆ ಸ್ವದೇಶೀ. ನಮ್ಮ ತಕ್ಷಣದ ಸಮಸ್ಯೆ ಈ ದೇಶದ ಸರ್ಕಾರವನ್ನು ನಡೆಸುವುದು ಹೇಗೆ ಎಂಬುದಲ್ಲ. ನಮಗೆ ಅನ್ನ ಬಟ್ಟೆಗಳನ್ನು ಒದಗಿಸಿಕೊಳ್ಳುವುದು ಹೇಗೆ ಎಂಬುದು. ೧೯೧೮ರಲ್ಲಿ ಬಟ್ಟೆ

ಯನ್ನು ಕೊಳ್ಳುವುದಕ್ಕಾಗಿ ೬೦ ಕೋಟಿ ರೂಪಾಯಿಯನ್ನು ಭಾರತದಿಂದ ಹೊರಕ್ಕೆ ಕಳುಹಿಸಿದೆವು. ಇದೇ ಪ್ರಮಾಣದಲ್ಲಿ ವಿದೇಶೀ ಬಟ್ಟೆಯನ್ನು ಕೊಳ್ಳುತ್ತಾ ಹೋದರೆ ಭಾರತದ ನೇಕಾರ, ನೂಲುಗಾರ ಸ್ತ್ರೀ ಪುರುಷರಿಗೆ ಬೇರಾವ ಕೆಲಸವನ್ನೂ ಬದಲಾಗಿ ಕೊಡದೆ ವರ್ಷೇ ವರ್ಷೇ ಅಷ್ಟು ಮೊತ್ತವನ್ನು ತಪ್ಪಿಸುತ್ತೇವೆ. ನಮ್ಮ ಜನಸಂಖ್ಯೆಯಲ್ಲಿ ಕನಿಷ್ಠಪಕ್ಷ ಹತ್ತನೆಯ ಒಂದು ಭಾಗ ಕ್ರೂರವಾದ ಅರ-ಉಪವಾಸಕ್ಕೆ ಗುರಿಯಾಗಿರುವುದರಲ್ಲಾಗಲಿ, ಉಳಿದವರಲ್ಲಿ ಬಹುಮಂದಿಗೆ ಅಗತ್ಯವಾದಷ್ಟು ಆಹಾರ ದೊರಕದಿರುವುದರಲ್ಲಾಗಲಿ ಏನೂ ಆಶ್ಚರ್ಯವಿಲ್ಲ. ಸುಧಾರಣಾ ಯೋಜನೆಯು, ಎಷ್ಟೇ ಉದಾರವಾಗಿರಲಿ, ಕ್ಷಿಪ್ರವಲ್ಲೇ ಈ ಸಮಸ್ಯೆಯನ್ನು ಪರಿಹರಿಸಲು ನೆರವಾಗುವುದಿಲ್ಲ. ಆದರೆ ಸ್ವದೇಶೀಯು ಅದನ್ನು ಈಗಲೇ ಪರಿಹರಿಸಬಲ್ಲುದು".

"ಪಂಜಾಬು ಈ ಪರಿಹಾರವನ್ನು ನನ್ನ ಪಾಲಿಗೆ ಇನ್ನೂ ಸ್ಪಷ್ಟಗೊಳಿಸಿದೆ. ದೇವರ ದಯೆಯಿಂದ ಪಂಜಾಬಿನ ಸುಂದರಿಯರು ತಮ್ಮ ಬೆರಳುಗಳ ಕೌಶಲವನ್ನು ಇನ್ನೂ ಕಳೆದುಕೊಂಡಿಲ್ಲ. ಮೇಲೋ, ಕೀಳೋ, ಅವರಿಗಿನ್ನೂ ಈ ಕಲೆ ತಿಳಿದಿದೆ. ಅನೇಕ ಗುಜರಾತಿ ಸ್ತ್ರೀಯರು ಮಾಡಿರುವಂತೆ ಅವರಿನ್ನೂ ತಮ್ಮ ರಾಟೆಗಳನ್ನು ಸುಟ್ಟು ಹಾಕಿಲ್ಲ. ನಮ್ಮ ಪೂರ್ವಜರು ಅಲ್ಪ ಪ್ರಯತ್ನವೂ ಇಲ್ಲದೆ ಮತ್ತು ವಿದೇಶೀಮಾರುಕಟ್ಟೆಗಳಲ್ಲಿ ಕೊಳ್ಳುವ ಅಗತ್ಯ ಇಲ್ಲದೆ, ಬಟ್ಟೆಗಳನ್ನು ಅನಾಯಾಸವಾಗಿ ಒದಗಿಸಿಕೊಳ್ಳಲು ಸಮರ್ಥರಾಗಿದ್ದರು.

"ಈ ಸುಂದರವಾದ–ಆದರೆ ಅಷ್ಟೂ ಸರಳವಾದ–ಕಲೆಗೆ, ಕೂಡಲೇ ನಾವು ಎಚ್ಚೆತ್ತುಕೊಳ್ಳದಿದ್ದರೆ. ವಿನಾಶದ ಅಪಾಯ ಇದೆ. ಅದರ ಶಕ್ತಿಸಾಮರ್ಥ್ಯಗಳಿಗೆ ಪಂಜಾಬು ಸಾಕ್ಷ್ಯಗಳನ್ನು ಕೊಡುತ್ತದೆ. ಆದರೆ ಪಂಜಾಬು ಕೂಡ ಬಹು ಬೇಗನೆ ತನಗೆ ಅದರ ಮೇಲಿರುವ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಹಾಗಾದರೆ ನಮ್ಮ ಮನೆಗಳಲ್ಲಿ ಇನ್ನೂ ಬಡತನ, ಇನ್ನೂ ಹೆಚ್ಚಿನ ಸೋಮಾರಿತನ ಉಂಟಾಗುತ್ತದೆ. ನೂಲುವುದನ್ನು ಬಿಟ್ಟಿರುವ ಸ್ತ್ರೀಯರು ಹರಟೆ ಹೊಡೆಯುವುದನ್ನು ಬಿಟ್ಟು ಬೇರಾವ ಉತ್ತಮ ರೀತಿಯಲ್ಲೂ ತಮ್ಮ ಸಮಯವನ್ನು ಉಪಯೋಗಿಸುತ್ತಿಲ್ಲ".

"ಆದರೆ ಈಗಾಗಿರುವ ಹಾನಿಯನ್ನು ಪರಿಹರಿಸಲು ಒಂದರ ಅಗತ್ಯ ಇದೆ. ವಿದ್ಯಾವಂತನಾದ ಪ್ರತಿಯೊಬ್ಬ ಭಾರತೀಯನೂ ತನ್ನ ಸ್ಪಷ್ಟವಾದ ಪ್ರಥಮ ಕರ್ತವ್ಯ ಏನು ಎಂಬುದನ್ನು ಅರಿತುಕೊಂಡರೆ ನೇರವಾಗಿ ಅವನು ತನ್ನ ಮನೆಯ ಸ್ತ್ರೀಯರಿಗೆ ನೂಲುವ ರಾಟೆಯನ್ನು ತಂದುಕೊಟ್ಟು, ನೂಲುವ ಕಲೆಯನ್ನು ಕಲಿಯಲು ಅನುಕೂಲತೆಗಳನ್ನು ಒದಗಿಸುತ್ತಾನೆ. ದಿನದಿನವೂ ಲಕ್ಷಾಂತರ ಗಜ ನೂಲನ್ನು ಉತ್ಪನ್ನ ಮಾಡಬಹುದು. ಪ್ರತಿಯೊಬ್ಬ ವಿದ್ಯಾವಂತ ಭಾರತೀಯನೂ ಅಂಥ ನೂಲಿನಿಂದ ನೇಯ್ದ ಬಟ್ಟೆಯನ್ನೇ ಉಡುವ ಕೃಪೆ ಮಾಡಿದರೆ ಭರತಖಂಡಕ್ಕೆ ಸಾಧ್ಯವಾದ ಏಕೈಕ ಗೃಹ ಕೈಗಾರಿಕೆಯನ್ನು ಪುನರ್ರಚಿಸಲು ಅವನು ಬೆಂಬಲವನ್ನೂ ನೆರವನ್ನೂ ಕೊಟ್ಟಂತಾಗುತ್ತದೆ".

"ಗೃಹ ಕೈಗಾರಿಕೆಯ ಹೊರತು ಭಾರತದ ರೈತನಿಗೆ ವಿನಾಶವೇ ಗತಿ. ಅವನು ಭೂಮಿಯ ಹುಟ್ಟುವಳಿಯಿಂದ ಮಾತ್ರವೇ ಬದುಕಲಾರ. ಅದಕ್ಕೆ ಪೂರಕವಾಗಿ ಒಂದು ಕೈಗಾರಿಕೆ ಅವನಿಗೆ ಬೇಕೇಬೇಕು. ನೇಯ್ಗೆ ಅತ್ಯಂತ ಸುಲಭವೂ, ಅತ್ಯಂತ ಅಗ್ರವೂ, ಅತ್ಯುತ್ತಮವೂ ಆದ ಕೈಗಾರಿಕೆ.

"ಇದರಿಂದ ನಮ್ಮ ದೃಷ್ಟಿಕೋನದಲ್ಲಿ ಒಂದು ಕ್ರಾಂತಿಯೇ ಆಗುತ್ತದೆಂದು ನಾನು ಬಲ್ಲೆ. ಅದೊಂದು ಕ್ರಾಂತಿಯಾದುದರಿಂದಲೇ ನಾನು ಸ್ವರಾಜ್ಯದ ದಾರಿ ಸ್ವದೇಶಿಯ ಮೂಲಕವೇ ಎಂದು ಖಂಡಿತ ಹೇಳುತ್ತೇನೆ. ಪ್ರತಿವರ್ಷವೂ ಅರುವತ್ತು ಕೋಟಿ ರೂಪಾಯಿ ಉಳಿಸಿ ಆ ಭಾರೀ ಮೊತ್ತವನ್ನು ತನ್ನ ನೂಲುಗಾರರಿಗೂ ನೇಕಾರರಿಗೂ ಅವರವರ ಮನೆಗಳಲ್ಲೇ ಹಂಚುವ ಒಂದು ದೇಶವು ಸಾಕಷ್ಟು ಸಂಘಟನಾ ಸಾಮರ್ಥ್ಯ ವನ್ನು ಪರಿಶ್ರಮ ಸಾಮರ್ಥ್ಯವನ್ನೂ ಪಡೆದಿರುತ್ತದೆ. ತನ್ನ ಬೆಳವಣಿಗೆಗಾಗಿ ಬೇರೆ ಏನೇನು ಬೇಕೋ ಅದನ್ನೆಲ್ಲ ಮಾಡುವ ಸಾಮರ್ಥ್ಯ ಇದರಿಂದಲೇ ಬರುತ್ತದೆ".

ಡಿಸೆಂಬರ್ ಕೊನೆಯ ವಾರದಲ್ಲಿ ಅಮೃತಸರದಲ್ಲಿ ಕಾಂಗ್ರೆಸ್ ಸಮ್ಮೇಳನ ನಡೆ ಯಿತು. ಅದು ಅನೇಕರಿಗೆ ಒಂದು ಯಾತ್ರಾಸ್ಥಳವಾಯಿತು. ಸಮ್ಮೇಳನದ ವಾರದಲ್ಲಿ ಸಹಸ್ರಾರು ಜನ ಪ್ರತಿನಿಧಿಗಳೂ ಸಂದರ್ಶಕರೂ ಜಲಿಯನ್‌ವಾಲಾಬಾಗಿಗೆ ಭೇಟಿ ನೀಡಿದರು. ಕೆಲವರು ಅಲ್ಲಿನ ರಕ್ತಸಿಕ್ತ ಮಣ್ಣಿಗೆ ಹಣೆ ಹಚ್ಚಿದರು. ಪವಿತ್ರನಿಧಿಯಂತೆ ಕಾಪಿಟ್ಟುಕೊಳ್ಳಲು ಇನ್ನು ಕೆಲವರು ಆ ಮಣ್ಣಿನಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಹೋದರು. ಮತ್ತೆ ಕೆಲವರು ಅದನ್ನು ಹಣೆಗಿಟ್ಟುಕೊಂಡರು.

ಈ ಕಾಂಗ್ರೆಸ್ ಸಮ್ಮೇಳನದಲ್ಲಿ ಅಂತಹ ಮಹತ್ವದ ಯಾವ ನಿರ್ಣಯವೂ ಆಗಲಿಲ್ಲ. ವಿಚಾರಣೆಗಳ ಫಲಿತಾಂಶಕ್ಕಾಗಿ ಕಾಯಲಾಗಿತ್ತು. ಆದರೆ ನವ ಚೈತನ್ಯವೊಂದು ತಾಂಡವವಾಡುತ್ತಿದ್ದುದು ಸುಸ್ಪಷ್ಟವಾಗಿತ್ತು. ಈಗ ಕಾಂಗ್ರೆಸ್ಸಿಗೆ ಒಂದು ಜನಸಾಮಾನ್ಯದ ಲಕ್ಷಣ ಬಂದಿತ್ತು. ಸಮ್ಮೇಳನದ ನಡವಳಿಕೆಗಳೆಲ್ಲವೂ ಪ್ರಮುಖವಾಗಿ ಹಿಂದೂಸ್ಥಾನಿ ಯಲೇ ನಡೆದುವು. ಕಾಂಗ್ರೆಸ್ ಅಧ್ಯಕ್ಷರಿಗೆ ಮಂದಗಾಮಿಗಳು ಸಂಸ್ಥೆಗೆ ಹಿಂದಿರುಗ ಬೇಕೆಂದು ತೀವ್ರಬಯಕೆ ಇದ್ದರೂ, ಉದಾರ ಪಂಥಿಗಳೆಂದು ತಮ್ಮನ್ನು ತಾವೇ ಕರೆದು ಕೊಳ್ಳುತ್ತಿದ್ದ ಮಂದಗಾಮಿಗಳು ಅದಕ್ಕೆ ಸೇರಲು ನಿರಾಕರಿಸಿದರು. ಇದಕ್ಕೆ ಬದಲು ಅವರು ಕಲ್ಕತ್ತಾದಲ್ಲಿ ಸಭೆ ನೆರೆದರು. ಅವರ ಕಣ್ಣೆಲ್ಲ ಸನ್ನಿಹಿತವಾಗಿದ್ದ ಹೊಸ ಸುದಾರಣೆಗಳ ಮೇಲೆಯೇ ಇತ್ತು.

ಲೋಕಮಾನ್ಯ ತಿಲಕರು ಭಾಗವಹಿಸಿದ್ದರು. ಅದೇ ಅವರ ಪಾಲಿಗೆ ಕೊನೆಯ ಕಾಂಗ್ರೆಸ್ ಆಯಿತು. ಇಂಗ್ಲೆಂಡಿನಿಂದ ನವೆಂಬರಿನಲ್ಲಿ ಹಿಂದಿರುಗಿದಾಗ ಅವರು ಹೇಳಿ ದರು; "ಗಾಂಧೀಜಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದಾಗ ನಾನು ಮುಂಬಯಿ ಯಲ್ಲಿದ್ದರೆ ಚೆನ್ನಾಗಿತ್ತು. ನಾನೂ ಅವರೊಂದಿಗೆ ಕಷ್ಟಗಳನ್ನು ವಹಿಸಿ ಸಂಕಟವನ್ನೆಲ್ಲ ಅನುಭವಿಸುತ್ತಿದ್ದೆ. ಅದಕ್ಕಾಗಿಯೇ ನನಗೆ ಗಾಂಧೀಜಿಯ ಮೇಲೆ ಕೋಪ".

ಇನ್ನು ಗಾಂಧೀಜಿ ಇದ್ದರು. ಅಲ್ಲದೆ ಲಷ್ಕರೀ ಶಾಸನದ ದಿನಗಳಲ್ಲಿ ಮೊಕದ್ದಮೆ ಗಳಿಗೆ ಗುರಿಯಾಗಿ ದೀರ್ಘಾವಧಿ ಸೆರೆವಾಸದಲ್ಲಿದ್ದು ಈಗ ಕ್ಷಮಾದಾನ ಪಡೆದು ಬಿಡು ಗಡೆಯಾಗಿದ್ದ ಪಲವು ನಾಯಕರು ಸಮ್ಮೇಳನಕ್ಕೆ ಸೆರೆಮನೆಯಿಂದ ನೇರವಾಗಿ ಬಂದಿದ್ದರು. ಬಂಧಿತರಲ್ಲಿ ಬಹುಪಾಲು ಜನರನ್ನು ಸಮ್ಮೇಳನ ಪ್ರಾರಂಭವಾಗುವ ಮುಂಚೆ ಬಿಡುಗಡೆ ಮಾಡಲಾಗಿತ್ತು, ಇನ್ನು ಕೆಲವರನ್ನು ಅದು ನಡೆಯುತ್ತಿದ್ದಾಗ, ಆಲಿ ಸಹೋದರರೂ ಜೈಲಿನಿಂದಲೇ ನೇರವಾಗಿ ಅಲ್ಲಿಗೆ ಬಂದರು. ಕಾಂಗ್ರೆಸ್ ಚಪ್ಪರಕ್ಕೆ ಅವರು ಕಾಲಿಡು ತ್ತಿದ್ದಂತೆಯೇ, ಇಡೀ ಸಭೆಗೆ ಸಭೆಯೇ ಒಂದಾಗಿ ಅವರನ್ನು ಸ್ವಾಗತಿಸಲು ಎದ್ದು ನಿಂತಿತು. ವೇದಿಕೆಯ ವರೆಗೆ ನಡೆದು ಬಂದು ಅವರು ತಿಲಕ್ ಮತ್ತು ಇತರ ನಾಯಕರಿಗೆ ತಲೆಬಾಗಿದರು. ಮಹಮದಾಲಿಯವರು ವೇದಿಕೆಯ ಮೇಲೆ ನಿಂತು ತಾವು ಛಿಂದ್ವಾರಾ ಜೈಲಿನಿಂದ ಮರುಟಿಕೆಟ್ಟನ್ನು ಕೊಂಡುಕೊಂಡೇ ಬಂದಿರುವುದಾಗಿ ನುಡಿದರು. ಸ್ವಾಮಿ ಶ್ರದ್ಧಾನಂದರು ಆಲಿ ಸೋದರರಿಗೂ, ಹಿಂದೂ ಮುಸ್ಲಿಂ ಐಕ್ಯಕ್ಕೂ ಜಯಘೋಷ ಮಾಡಬೇಕೆಂದು ಕೋರಿದರು.

ಕಾಂಗ್ರೆಸ್ ಸಮ್ಮೇಳನ ನಾಳೆ ಎನ್ನುವಾಗ ಬ್ರಿಟಿಷ್ ಸರ್ಕಾರವು, ವಾತಾವರಣ ವನ್ನು ಪ್ರಶಾಂತಗೊಳಿಸುವ ಉದ್ದೇಶದಿಂದ, ಪಾರ್ಲಿಮೆಂಟಿನಲ್ಲಿ ಅವಸರವಸರವಾಗಿ ಸುಧಾರಣಾ ಮಸೂದೆಯನ್ನು ಮಂಡಿಸಿ ಶಾಸನರೂಪ ಕೊಟ್ಟಿತು. ಮಸೂದೆಯನ್ನು ಬ್ರಿಟಿಷ್ ಸಾರ್ವಭೌಮರು ಅನುಮತಿಸಿದ ರಾಜಘೋಷಣೆಯನ್ನು ಡಿಸೆಂಬರ್ ೨೪ ರಂದು ಹೊರಡಿಸಲಾಯಿತು. "ಈ ಹೊತ್ತಿನಲ್ಲಿ ನನ್ನ ಪ್ರಜೆಗಳಿಗೂ ನನ್ನ ಸರಕಾರದ ಹೊಣೆಗಾರಿಕೆಗೂ ಕಹಿಭಾವನೆಯ ಯಾವ ಗುರುತೂ, ಸಾಧ್ಯವಾದಷ್ಟು ಮಟ್ಟಿಗೂ ಅಳಿಸಿ ಹೋಗಬೇಕೆಂಬುದು ನನ್ನ ಹೃತ್ಪೂರ್ವಕವಾದ ಬಯಕೆ. ಹೊಸತೊಂದು ಯುಗವೇ ಈಗ ಪ್ರಾರಂಭವಾಗುತ್ತಿದೆ" ಎಂದಿತು ರಾಜಘೋಷಣೆ.

ಕಾಂಗ್ರೆಸ್ ಸಮ್ಮೇಳನದಲ್ಲಿ ೮,೦೦೦ ಪ್ರತಿನಿಧಿಗಳು ಹಾಜರಿದ್ದರು. ಅವರಲ್ಲಿ ೧,೫೦೦ ಜನ ರೈತರು. ೩೦,೦೦೦ ಕ್ಕಿಂತಲೂ ಹೆಚ್ಚು ಜನ ಸಂದರ್ಶಕರು ಈ ಸಂದರ್ಭ ದಲ್ಲಿ ಹಾಜರಿದ್ದರು. ಅಧ್ಯಕ್ಷ ಭಾಷಣದಲ್ಲಿ ಪಂಡಿತ ಮೋತಿಲಾಲ್ ನೆಹರೂ, ತಮ್ಮ ನೂರಾರು ಜನ ಸಹೋದರರ ಕಗ್ಗೊಲೆಗಾಗಿ ಗೋಳಿಡಲು ಎಲ್ಲರೂ ಅಮೃತಸರದಲ್ಲಿ ನೆರೆದಿರುವುವೆಂದು ನುಡಿದರು. ಗೋಳಿಡುವವರಲ್ಲಿ ತಾವೇ ಪ್ರಧಾನರೆಂದವರು ಹೇಳಿ ದರು. ಭಾರತಕ್ಕೆ ನ್ಯಾಯವನ್ನು ಸಲ್ಲಿಸಿರೆಂದು ಬ್ರಿಟಿಷ್ ಜನರಿಗೆ ಮನವಿ ಮಾಡಿಕೊಂಡರು. "ಈಗಾಗಿರುವುದರಿಂದ ಪಾಠ ಕಲಿತು ತನ್ನ ಸ್ವಂತ ಡೊಮಿನಿಯನ್ನುಗಳಲ್ಲಿ ಇಂಥವೇ ಘಟನೆಗಳಿಗೆ ಅವಕಾಶವೀಯುವ ಪರಿಸ್ಥಿತಿಗಳನ್ನು ಕೊನೆಗಾಣಿಸುವುದು ಇಂಗ್ಲೆಂಡಿಗೆ ಸೇರಿದ್ದು. ನಮ್ಮ ಜೀವ, ಗೌರವಗಳು ಬೇಜವಾಬ್ದಾರಿಯ ಆಡಳಿತವರ್ಗ ಮತ್ತು ಸೇನಾವರ್ಗದ ಖುಷಿಗೆ ಬಿಟ್ಟದ್ದಾದರೆ ಮಾನವ ವ್ಯಕ್ತಿಗಳ ಸಾಮಾನ್ಯ ಹಕ್ಕುಗಳೂ ನಮಗಿಲ್ಲವಾದರೆ, ಸುಧಾರಣೆಯ ಮಾತೆಲ್ಲ ಬರಿಯ ಅಣಕ, ಅಷ್ಟೆ".

ಸಾರ್ವಭೌಮರಿಗೆ ಅವರ ಘೋಷಣೆಗಾಗಿ ಕೃತಜ್ಞತೆ ಸಲ್ಲಿಸಿ, ಪ್ರಿನ್ಸ್ ಆಫ್ ವೇಲ್ಸ್‌ರು ಭಾರತಕ್ಕೆ ಭೇಟಿ ನೀಡಲು ನಿಶ್ಚಯಿಸಿರುವರೆಂಬ ಪ್ರಕಟಣೆಯನ್ನು ಕಾಂಗ್ರೆಸ್ಸು ಸ್ವಾಗತಿಸಿತು.

ಜಲಿಯನ್‌ವಾಲಾ ಬಾಗನ್ನು ಕುರಿತ ನಿರ್ಣಯ ಮೃದುವಾದ ದನಿಯಲ್ಲಿತ್ತು; "ಹಂಟರ್ ಸಮಿತಿಯಾಗಲಿ, ಕಾಂಗ್ರೆಸ್ ಸಮಿತಿಯಾಗಲಿ ತನ್ನ ಸಾಕ್ಷಿಗಳ ವಿಚಾರಣೆಯನ್ನು ಇನ್ನೂ ಮುಗಿಸಿಲ್ಲವಾದುದರಿಂದ, ನೂರಾರು ಜನ ನಿರ್ದೋಷಿಗಳಾದ ಪುರುಷರನ್ನೂ ಮಕ್ಕಳನ್ನೂ ಉದ್ದೇಶಪೂರ್ವಕವಾಗಿ ಪೂರ್ವಸಿದ್ಧತೆಯಿಂದ ಕಗ್ಗೊಲೆ ಮಾಡಿರುವುದನ್ನು, ಆಧುನಿಕ ಯುಗದಲ್ಲಿ ಎಂದೂ ಎಲ್ಲಿಯೂ ಹೋಲಿಕೆಯೇ ಇಲ್ಲದ ರೀತಿಯಲ್ಲಿ ಸಾಮೂಹಿಕ ಕೊಲೆ ಮಾಡಿರುವುದನ್ನು ಗಮನಕ್ಕೆ ತಂದುಕೊಂಡು, ಈ ಸಮ್ಮೇಳನವು ಭಾರತ ಸರಕಾರವನ್ನೂ, ಭಾರತದ ಕಾರ್ಯದರ್ಶಿಯನ್ನೂ ಹೀಗೆಂದು ಒತ್ತಾಯ ಮಾಡುತ್ತದೆ; ಜನರಲ್ ಡೈಯರ್‌ನನ್ನು ಆತನ ಮೇಲೆ ನ್ಯಾಯಾಂಗ ಕಾರ್ಯಕ್ರಮ ತೆಗೆದುಕೊಳ್ಳುವ ಮುಂಚೆ, ಈ ಕೂಡಲೇ ಸೈನ್ಯಾಧಿಕಾರದಿಂದ ತೆಗೆದು ಹಾಕಬೇಕು. ಈ ಸಮ್ಮೇಳನವು ಈ ಅಂಶವನ್ನು ದಾಖಲಿಡಬಯಸುತ್ತದೆ; ಉಳಿದುದೆಲ್ಲಾ ಏನೇ ಇರಲಿ, ಜಲಿಯನ್‌ವಾಲಾಬಾಗಿನಲ್ಲಿ ನಡೆದ ಸಾಮೂಹಿಕ ಕಗ್ಗೊಲೆಯ ವಿಷಯವಾದ ಅಧಿಕೃತ ವರದಿಯನ್ನು ಜನತೆಯೆದುರಿಗೂ ಸಾರ್ವಭೌಮ ಸರಕಾರದೆದುರಿಗೂ ಇಡುವುದರಲ್ಲಿ ಆಗಿರುವ ಅಕ್ಷಮ್ಯವಾದ ವಿಳಂಬಕ್ಕೆ ಭಾರತ ಸರಕಾರ ಹಾಗೂ ಪಂಜಾಬ್ ಸರಕಾರಗಳೆರಡೂ ಹೊಣೆಯೆನ್ನಲೇ ಬೇಕೆಂಬುದು ಈ ಸಮ್ಮೇಳನದ ಅಭಿಪ್ರಾಯ".

ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಸರ್ ಮೈಕಲ್ ಓಡ್ವೈಯರ್‌ನನ್ನು ಸೇನಾ ಕಮೀಷನ್ನಿನ ಸದಸ್ಯತ್ವದ ಕಾರ್ಯಭಾರದಿಂದ ತಕ್ಷಣವೇ ತೆಗೆದು ಹಾಕಬೇಕೆಂದು ಬೇಡಿಕೆಗೆ ಸರ್ವಾನುಮತದ ಒತ್ತಾಯ ಬಂದಿತು. "ಈ ದೇಶದ ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದರಿಂದ" ವೈಸರಾಯ್ ಆದ ಲಾರ್ಡ್ ಚೆಲ್ಮ್ಸ್‌ಫರ್ಡ್ ಅವರನ್ನೂ ತಕ್ಷಣವೇ ಹಿಂದಕ್ಕೆ ಕರೆಸಿಕೊಳ್ಳತಕ್ಕದ್ದು ಎಂದೂ ಒತ್ತಾಯವಾಗಿ ಕೋರಲಾಯಿತು.

ಅಳಿದವರ ನೆನಪನ್ನು ಚಿರಕಾಲ ಉಳಿಸುವ ಅತ್ಯುತ್ತಮ ವಿಧಾನವೊಂದನ್ನು ರೂಪಿಸಲು, ಸರಿಯಾದ ನಿಕ್ಷೇಪ ವ್ಯವಸ್ಥೆಯೊಂದನ್ನು ತಯಾರಿಸಲು ಮತ್ತು ಸ್ಮಾರಕೋದ್ದೇಶಕ್ಕಾಗಿ ಕೊಡುಗೆಗಳನ್ನು ಸಂಗ್ರಹಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಅಮೃತಸರದ ಜಲಿಯನ್‌ವಾಲಾ ಬಾಗ್ ಎಂಬ ಹೆಸರು ಹೊತ್ತ ನಿವೇಶನವನ್ನು ರಾಷ್ಟ್ರಕ್ಕಾಗಿ ಪಡೆದುಕೊಳ್ಳಬೇಕೆಂದೂ, ಕಗ್ಗೊಲೆಯ ಕಾಲದಲ್ಲಿ ಸತ್ತವರ ಅಥವಾ ಗಾಯಗೊಂಡವರ ಸ್ಮಾರಕವಾಗಿ ಅದನ್ನು ಬಳಸಬೇಕೆಂದೂ ತೀರ್ಮಾನಿಸಲಾಯಿತು.

ತಮ್ಮ ಆತ್ಮಸಾಕ್ಷಿಗೆ ನಿಷ್ಠರಾಗಿ ಗಾಂಧೀಜಿ ಜನರನ್ನೂ ಸಹ ಆಕ್ಷೇಪಿಸುವ ಒಂದು ನಿರ್ಣಯವನ್ನು ಮಂಡಿಸಿದರು; "ನಿಜವಾದ ಗಂಡುತನ ಇರುವುದು ಗುಂಡುಗಳು

ಮಳೆಗರೆಯುತ್ತಿರುವಾಗಲೂ ಪ್ರತೀಕಾರ ಮಾಡದೆ ಇರುವುದರಲ್ಲಿ; ತಾಳ್ಮೆಯಿಂದ ಕೆಡುಕನ್ನು ಸಹಿಸಿ ಒಳಿತಿನಿಂದಲೇ ಅದನ್ನು ವಿರೋಧಿಸುವುದರಲ್ಲಿ; ಇದೇ ನಿಜವಾದ ವೀರರ ಮನೋವೃತ್ತಿ. ಆದ್ದರಿಂದಲೇ ದೊಂಬಿಗಳ ಅತಿರೇಕವನ್ನು ನೀವು ಖಂಡಿಸಬೇಕೆಂದು ನಾನು ಬಯಸುವುದು. ಈ ಪ್ರಾಯಶ್ಚಿತ್ತ ಕರ್ಮವನ್ನು ಮಾಡುವಂತೆ ನಿಮ್ಮನ್ನು ಕಳಕಳಿಯಿಂದ ಕೋರಲು ನಾನೇ ಉಪಕರಣವಾಗಿರಲು ನನಗೆ ತುಂಬ ಸಂತೋಷವಾಗಿದೆ. ಈ ಸೂತ್ರದ ಗುರುತ್ವವೇನೆಂಬುದನ್ನು ನೀವು ಹೃದಯದಿಂದರಿಯಬೇಕೆಂದು ನಾನು ಎಚ್ಚರಿಸುತ್ತೇನೆ. ಭವಿಷ್ಯದ ಕಾರ್ಯದ ಕೀಲಿಕೈಯೆಲ್ಲ ಇರುವುದು ನಿರ್ಣಯಕ್ಕಾಧಾರವಾದ ಶಾಶ್ವತ, ಸತ್ಯವನ್ನು ನೀವು ಕಂಡುಕೊಳ್ಳುವುದರಲ್ಲಿ. ಹುಚ್ಚಿಗೆ ಹುಚ್ಚನ್ನೇ ಹಿಂದಿರುಗಿಸಬೇಡಿ ಹುಚ್ಚಿಗೆ ಪ್ರತಿಯಾಗಿ ಸಮಬುದ್ಧಿಯನ್ನು ಕೊಡಿ"

ಈ ನಿರ್ಣಯ ಅಂಗೀಕರಿಸುವುದನ್ನು ಅಡ್ಡಿಪಡಿಸದಿರುವಷ್ಟು ಔದಾರ್ಯವನ್ನು ತಿಲಕರು ತೋರಿದರು. ಆದರೆ, ಸುಧಾರಣೆಗಳ ಮಸೂದೆಯನ್ನು ಕುರಿತು ಅವರು ಮಾತನಾಡುವಾಗ ಪ್ರತಿರೋಧದ ದೊಡ್ಡ ಗೋಡೆಯೇ ಗಾಂಧೀಜಿಗೆ ಎದುರಾಯಿತು.

ಸಮ್ಮೇಳನವು ನಡೆಯುತ್ತಿರುವಾಗಲೇ ಬಲಾಬಲಗಳ ಪರೀಕ್ಷೆ ನಡೆಯುತ್ತಿತ್ತು. ಒಂದು ಕಡೆ ಶೀಘ್ರವಾಗಿ ಅದೃಶ್ಯರಾಗುತ್ತಿದ್ದ ಹಳೆಯ ತಲೆಯ ರಾಜಕಾರಣಿಗಳು. ಶ್ರೀಮತಿ ಬೆಸೆಂಟ್ ಅವರ ಪಕ್ಷಕ್ಕೆ ಸೇರಿದ್ದರಿಂದ ಅವರಿಗೆ ಹೊಸ ಬಲ ಒದಗಿತ್ತು. ಇನ್ನೊಂದು ಕಡೆ, ಹೊಸ ರಾಷ್ಟ್ರೀಯವಾದಿಗಳು. ಕಾಂಗ್ರೆಸ್ ಅಧಿವೇಶನದ ಮುಂದಿಟ್ಟ ಸುಧಾರಣಾ ಸಮಿತಿಯ ಕರಡನ್ನು ತಯಾರಿಸಿದವರು ದಾಸ್. ವಿಷಯ ನಿಯಾಮಕ ಸಮಿತಿಯು ಅದನ್ನು ಒಪ್ಪಿತ್ತು. ಸೂಚಿತವಾಗಿದ್ದ ಸುಧಾರಣೆಗಳನ್ನು "ಅಸಮರ್ಪಕ, ಅತೃಪ್ತಿಕರ ಮತ್ತು ಆಶಾಭಂಗಕರ" ಎಂದು ವರ್ಣಿಸಬೇಕೆಂಬುದು ದಾಸ್ ಮತ್ತು ತಿಲಕ್ ಅವರ ಅಪೇಕ್ಷೆ. ಸರ್ಕಾರವು ಎಷ್ಟುಮಟ್ಟಿಗೆ ಜನರೊಂದಿಗೆ ಸಹಕರಿಸುವುದೋ ಅಷ್ಟೇ ಸಹಕಾರ ನೀಡುವ ಆಧಾರದ ಮೇಲೆ ಸುಧಾರಣೆಗಳನ್ನು ಕಾರ್ಯಗತ ಮಾಡಿ ನೋಡಬೇಕು ಎಂಬುದು ಪಂಡಿತ ಮಾಳವೀಯರ ಮತ್ತು ಗಾಂಧೀಜಿಯವರ ಅಪೇಕ್ಷೆ.

ದಾಸ್ ಅವರು ಸುಧಾರಣಾ ಮಸೂದೆಯನ್ನು ಮಂಡಿಸಿದರು. 'ಆಶಾಭಂಗಕರ' ಎಂಬ ಪದವನ್ನು ಅಳಿಸಿಬಿಡಬೇಕೆಂಬುದನ್ನೂ ಒಳಗೊಂಡ ಒಂದು ತಿದ್ದುಪಡಿಯನ್ನು ಸೂಚಿಸಿದ ಗಾಂಧೀಜಿ ಹೀಗೆ ಹೇಳಿದರು:

"ನಮಗೆ ಏನು ದೊರಕುತ್ತಿದೆಯೋ ಅದು ಕಾಂಗ್ರೆಸ್ಸಿನ ಆದರ್ಶಗಳಿಗಿಂತ ತುಂಬ ಕಡಮೆಯಾದದ್ದು ಎಂದು ನಾನೂ ಭಾವಿಸಿದ್ದೇನೆ. ಈ ಸುಧಾರಣೆಗಳು ಆಶಾಭಂಗಕರವೆಂದು ನಾವು ಹೇಳಬಾರದು ಎಂದೂ ನನ್ನ ತಿದ್ದುಪಡಿಯ ಅರ್ಥ. ಅದನ್ನು ಇಲ್ಲಿ ಬಳಸಿರುವ ಅರ್ಥದಲ್ಲಿ ಆಶಾಭಂಗಕರ ಎಂಬ ಪದ ಇರಬಾರದು. ವ್ಯಕ್ತಿಯೊಬ್ಬನು ನನ್ನಲ್ಲಿಗೆ ಬಂದು ನನಗೆ ಆಶಾಭಂಗವುಂಟುಮಾಡಿದರೆ, ಅವನೊಂದಿಗೆ ನಾನು ಸಹಕರಿಸುವುದಿಲ್ಲ ಎಂಬುದನ್ನಿಲ್ಲಿ ನಿಮಗೆ ನಾನು ಸೂಚಿಸುತ್ತಿದ್ದೇನೆ. ಹುಳಿಯಾದ ರೊಟ್ಟಿ ಸಿಕ್ಕಿದರೆ ಅದನ್ನು ನಾನು ನಿರಾಕರಿಸುತ್ತೇನೆ, ಅಂಗೀಕರಿಸುವುದಿಲ್ಲ. ಆದರೆ, ನನಗೆ ಸಿಕ್ಕಿದ

ರೊಟ್ಟಿ ನನಗೆ ಸಾಲದೆ ಹೋದರೆ, ಅದರಲ್ಲಿ ಸಾಕಷ್ಟು ಮಸಾಲೆಯಿಲ್ಲದಿದ್ದರೆ ಅದನ್ನು ನಾನು ಬಳಸುತ್ತೇನೆ, ಮಸಾಲೆ ಸೇರಿಸಿ ಒಂದು ಚೂರನ್ನಾದರೂ ತಿನ್ನುತ್ತೇನೆ. ಆದ್ದರಿಂದ ಇಂದು ನಮ್ಮ ದೇಶದ ಮುಂದೆ ಇರುವ ಪರಿಸ್ಥಿತಿಯನ್ನು ದಿಟ್ಟಿಸಿ ನೋಡಬೇಕೆಂಬುದೇ ನನ್ನ ತಿದ್ದುಪಡಿಯ ಅರ್ಥ. ಅದಕ್ಕಿಂತ ಹೆಚ್ಚೂ ಇಲ್ಲ, ಕಡಮೆಯೂ ಇಲ್ಲ. ತಿಲಕ್ ಮಹಾರಾಜರು ಈ ಸುಧಾರಣೆಯ ಶಾಸನವನ್ನು ಬಳಸಿಕೊಳ್ಳುತ್ತೇವೆ ಎಂದು ನಿಮಗೆ ಹೇಳಿದರೆ–ಹಾಗವರು ಹೇಳಿಯೇ ತೀರುತ್ತಾರೆ–ಈಗಾಗಲೇ ಅವರು ಮಾಂಟೆಗೂರವರಿಗೂ ದೇಶಕ್ಕೂ ಈ ಸುಧಾರಣೆಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದೇವೆ ಎಂದು ಅವರು ಹೇಳಿರುವುದರಿಂದ, ನಿಮ್ಮ ಅಂತರಂಗಕ್ಕೂ ದೇಶಕ್ಕೂ ನೀವು ಪ್ರಾಮಾಣಿಕರಾಗಿ ವರ್ತಿಸಿ ಎನ್ನುತ್ತೇನೆ. ಆದರೆ ಅಲ್ಲಿಗೆ ಹೋದ ಮೇಲೆ ಏನಾದರೂ ಅಡ್ಡಿ ಆತಂಕಗಳನ್ನು ನೀವು ಒಡ್ಡುವಂತಿದ್ದರೆ, ಅದನ್ನೂ ಹೇಳಿ. ಆದರೆ ಔಚಿತ್ಯ ಮತ್ತು ಅಡೆತಡೆಗಳನ್ನು ಕುರಿತು ಹೇಳುವುದಾದರೆ, ನಮಗೆ ಸ್ನೇಹಹಸ್ತವನ್ನು ನೀಡುವವರನ್ನು ನಂಬಬೇಕೆಂದು ಭಾರತೀಯ ಸಂಸ್ಕೃತಿಯು ಕೋರುತ್ತದೆ. ವಿಶ್ವಾಸವನ್ನು, ಪೂರ್ಣ ವಿಶ್ವಾಸವನ್ನು ಭಾರತೀಯ ಸಂಸ್ಕೃತಿಯು ಅಪೇಕ್ಷಿಸುತ್ತದೆ. ಅಲ್ಲದೆ ನಿಮ್ಮಲ್ಲಿ ಸಾಕಷ್ಟು ಪೌರುಷವಿದ್ದರೆ, ಮುಂದಾಗುವುದಕ್ಕೆ ನೀವು ಅಂಜುವುದಿಲ್ಲ. ಪೌರುಷದಿಂದ ಭವಿಷ್ಯವನ್ನು ಎದುರಿಸಿ ಹೀಗೆ ಹೇಳುತ್ತೀರಿ: ಸರಿ, ಮಾಂಟೆಗೂರವರೇ, ಸರಿ ಅಧಿಕಾರಶಾಹಿಯ ಎಲ್ಲ ಅಧಿಕಾರಿಗಳೇ, ನಿಮ್ಮನ್ನು ನಾವು ನಂಬುತ್ತೇವೆ. ಇದರಿಂದ ನಿಮ್ಮನ್ನು ನಮ್ಮ ಕೈಗೆ ಸಿಕ್ಕುವಂತೆ ಮಾಡಿಕೊಳ್ಳುತ್ತೇವೆ. ನೀವೇನಾದರೂ ಪ್ರತಿಭಟಿಸಿದರೆ, ದೇಶದ ಪ್ರಗತಿಗೆ ತಡೆಯೊಡ್ಡಿದರೆ, ಆಗ ನಾವು ಹೇಳುತ್ತೇವೆ, ನೀವು ಮಾಡುತ್ತಿರುವುದು ನಿಮ್ಮ ವಿನಾಶಕ್ಕೆ!" ನಾನು ಸೂಚಿಸುವ ಪೌರುಷದ ಮನೋಭಾವ ಇದೆ".

ಸುಧಾರಣೆಗಳನ್ನು ಒಪ್ಪಿಕೊಳ್ಳುವುದರ ಮೂಲಕ ಸಹಕರಿಸಬೇಕೆಂದು ಗಾಂಧೀಜಿ ಸೂಚಿಸಿದರು. ಅಲ್ಲದೆ ಮನಸ್ಸಿನಲ್ಲಿ ಒಂದಿರುವಾಗ ಬಾಯಲ್ಲಿ ಬೇರೊಂದನ್ನು ಹೇಳಕೂಡದು ಎಂದರು.

ತಿಲಕ್ ಮತ್ತು ದಾಸ್ ಇವರೊಡನೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಭಾವನೆಯೂ ಅವರಿಗೆ ಅಸಹನೀಯವಾಗಿತ್ತು. ಒಗ್ಗಟ್ಟಿನ ಅಗತ್ಯದಿಂದಾಗಿ, ತಿಲಕ್, ದಾಸ್ ಮತ್ತು ಗಾಂಧೀಜಿ ಒಂದು ಒಪ್ಪಂದಕ್ಕೆ ಬರಬೇಕಾಯಿತು. ಸುಧಾರಣೆಗಳ ಠರಾವು ಅಂತಿಮವಾಗಿ ಪಡೆದ ರೂಪ ಇದು:

"ಈ ಕಾಂಗ್ರೆಸ್ಸು (೧) ಕಳೆದ ವರ್ಷ ಮಾಡಿದ್ದ ಪೂರ್ಣ ಜವಾಬ್ದಾರಿ ಸರ್ಕಾರ ಕೋರುವ ಘೋಷಣೆಯನ್ನು ಪುನರುಚ್ಚರಿಸುತ್ತದೆ. ಅಲ್ಲದೆ, ಅದಕ್ಕೆ ವಿರೋಧವಾದ ಸಮಸ್ತ ಊಹನಗಳನ್ನೂ ನಿರಾಕರಿಸುತ್ತದೆ; (೨) ಸಂವಿಧಾನಬದ್ಧ ಸುಧಾರಣೆಗಳನ್ನು ಕುರಿತಂತೆ ದೆಹಲಿ ಕಾಂಗ್ರೆಸ್‌ನಲ್ಲಿ ಅನುಮೋದಿತವಾದ ನಿರ್ಣಯಗಳನ್ನು ಎತ್ತಿ ಹಿಡಿಯುತ್ತದೆ. ಸುಧಾರಣಾ ಶಾಸನವು ಅಸಮರ್ಪಕ, ಅತೃಪ್ತಿಕರ ಹಾಗೂ ಆಶಾ

ಭಂಗಕರ ಎಂಬ ಅಭಿಪ್ರಾಯವನ್ನು ತಳೆದಿದೆ. (೩) ಸ್ವಯಂ ನಿರ್ಧಾರಕ್ಕನುಗುಣ ವಾಗಿ ಪೂರ್ಣವಾದ ಜವಾಬ್ದಾರಿ ಸರ್ಕಾರವನ್ನು ಭಾರತದಲ್ಲಿ ಸ್ಥಾಪಿಸಲು ಪಾರ್ಲಿಮೆಂಟು ಶೀಘ್ರವಾದ ಕ್ರಮವನ್ನು ಕೈಗೊಳ್ಳಬೇಕು ಎಂದು ಒತ್ತಾಯಪಡಿಸುತ್ತದೆ. (೪) ಪೂರ್ಣವಾದ ಜವಾಬ್ದಾರಿ ಸರ್ಕಾರವನ್ನು ಆದಷ್ಟು ಬೇಗ ಪಡೆಯಲು ಸಾಧ್ಯವಾಗುವಂತೆ ಜನತೆಯು ಈ ಸುಧಾರಣೆಗಳನ್ನು ಕಾರ್ಯಗತ ಮಾಡುವುದೆಂದು ಆಶಿಸುತ್ತದೆ, ಮತ್ತು ಸುಧಾರಣೆಗಳ ಸಂಬಂಧದಲ್ಲಿ ರೈಟ್ ಆನರಬಲ್ ಇ. ಎಸ್. ಮಾಂಟೆಗೂ ಅವರು ಪಟ್ಟ ಶ್ರಮಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ".

ವಿಸ್ತಾರವಾದ ವಿಷಯ ವೈವಿಧ್ಯವನ್ನೊಳಗೊಂಡ ಐವತ್ತು ಠರಾವುಗಳನ್ನು ಅಮೃತಸರ ಕಾಂಗ್ರೆಸ್ಸು ಅಂಗೀಕರಿಸಿತು. ಕಾಂಗ್ರೆಸ್ಸಿನ ಇಡೀ ರಚನೆಯನ್ನು ಪರಿಶೀಲಿಸಲು ಉಪಸಮಿತಿಯೊಂದು ರಚಿತವಾಯಿತು. ಹೊಸ ಸಂವಿಧಾನವನ್ನು ರಚಿಸಬೇಕಾಗಿದ್ದ ಗಾಂಧೀಜಿ, ತಿಲಕ್ ಮತ್ತು ದಾಸ್‌ರವರ ಸಹಯೋಗವನ್ನು (Collaboration) ಬಯಸಿದರು. ಆದರೆ ಕೆಲಸದ ಒತ್ತಡದಿಂದಾಗಿ ಅವರಿಬ್ಬರೂ ಇವರೊಂದಿಗೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಬದಲಿಗೆ, ತಿಲಕ್ ಮತ್ತು ದಾಸ್‌ರವರ ಬಲಗೈಗಳಾಗಿದ್ದ ಶ್ರೀ ಎನ್. ಸಿ. ಕೇಳ್ಕರ್ ಮತ್ತು ಪಿ. ಬಿ. ಸೇನ್ ಅವರು ಗಾಂಧೀಜಿಗೆ ನೆರವು ನೀಡಲು ಆಯ್ಕೆಗೊಂಡರು.

ಸ್ವದೇಶಿಯನ್ನು ಕುರಿತ ಠರಾವು ಪ್ರಾಚೀನವಾದ ಕೈನೂಲಿನ ಮತ್ತು ಕೈಮಗ್ಗದ ಕೈಗಾರಿಕೆಯು ಪುನರುಜ್ಜೀವನಗೊಳ್ಳಬೇಕೆಂದು ಶಿಫಾರಸು ಮಾಡಿತ್ತು.

ಕಾಂಗ್ರೆಸ್ಸು, ಮುಸ್ಲಿಂ ಲೀಗ್, ಖಿಲಾಫತ್ ಮತ್ತು ಜಮ್ಮೈತ್–ಉಲ್–ಉಲೇಮಾ. ಎಲ್ಲವೂ ಅಮೃತಸರದಲ್ಲಿ ಏಕಕಾಲದಲ್ಲಿ ತಮ್ಮ ಅಧಿವೇಶನಗಳನ್ನು ನಡೆಸಿದುವು, ಹಕೀಮ್ ಅಜಮಲ್ ಖಾನ್ ಮುಸ್ಲಿಂಲೀಗಿನ ಅಧ್ಯಕ್ಷರಾಗಿದ್ದರು. ಅಮೃತಸರ ಹತ್ಯಾಕಾಂಡ ಮತ್ತು ಟರ್ಕಿಯ ಉದ್ದೇಶಿತ ಅಸದಸ್ಯೀಕರಣ (dismemberment) ವನ್ನು ಪ್ರತಿಭಟಿಸಿ, ಠರಾವುಗಳನ್ನು ಅನುಮೋದಿಸುವುದರ ಜೊತೆಗೆ ಮುಸ್ಲಿಂಲೀಗ್ ಕಾಂಗ್ರೆಸ್ಸಿನ ಹಾದಿಯನ್ನೇ ಹಿಡಿದು ಸುಧಾರಣೆಗಳನ್ನು ಕುರಿತಂತೆಯೂ ಒಂದು ಠರಾವನ್ನು ಅನುಮೋದಿಸಿತು.

ಗಾಂಧೀಜಿಯು ಇದ್ದದ್ದು ಜನರಿಗೆ ಸ್ಫೂರ್ತಿ ನೀಡಿತು. "ಮಹಾತ್ಮಾ ಗಾಂಧೀಕಿ ಜೈ" ಎಂದು ಅವರು ಘೋಷಿಸಿದರು. ಆದರೆ, ಗಾಂಧೀಜಿ ಹೇಳಿದರು: "ಅಮೃತಸರದ ಕಾಂಗ್ರೆಸ್ಸಿನ ನಡವಳಿಕೆಗಳಲ್ಲಿ ನಾನು ಭಾಗವಹಿಸಿದ್ದೇನೆಂದ ಮಾತ್ರಕ್ಕೇ ಕಾಂಗ್ರೆಸ್ಸಿನ ರಾಜಕೀಯಕ್ಕೆ ನಾನು ನಿಜವಾಗಿ ಪ್ರವೇಶಿಸಿದ್ದೇನೆ ಎಂದಲ್ಲ. ಹಿಂದಿನ ಕಾಂಗ್ರೆಸ್ ಅಧಿವೇಶನದಲ್ಲಿನ ನನ್ನ ಹಾಜರಾತಿಯೂ ಅಷ್ಟೇ–ಕಾಂಗ್ರೆಸ್ಸಿನ ಬಗೆಗೆ ನನ್ನ ನಿಷ್ಠೆಯ ವಾರ್ಷಿಕ ನವೀಕರಣಕ್ಕಿಂತ ಬಹುಶಃ ಹೆಚ್ಚಿನದಲ್ಲ. ಕೇವಲ ಖಾಸಗಿ ವ್ಯಕ್ತಿಯಾಗಿರುವುದಕ್ಕಿಂತ ಹೆಚ್ಚಿನದೇನೂ ನನ್ನ ಪಾಲಿನದಲ್ಲ ಎಂಬುದಾಗಿ ಈ ಸಂದರ್ಭದಲ್ಲಿ ನನಗೆ ಎಂದೂ ಅನಿಸಲಿಲ್ಲ. ಅದಕ್ಕಿಂತ ಹೆಚ್ಚಿನದೇನನ್ನೂ ನಾನು ಬಯಸಿಯೂ ಇರಲಿಲ್ಲ".

ಖಿಲಾಫತ್ ಚಳವಳಿ

೧೯೨೦

೧೯೨೦ನೆಯ ಜನವರಿ ೯ನೆಯ ತಾರೀಕು ಗಾಂಧೀಜಿ ಗಲಭೆಗಳ ವಿಚಾರಣಾ ಸಮಿತಿಯ ಮುಂದೆ ಹಾಜರಾದರು. ಆ ಸಮಿತಿ ಲಾರ್ಡ್ ಹಂಟರ್‌ನ ಅಧ್ಯಕ್ಷತೆಯಲ್ಲಿ ಅಹಮದಾಬಾದಿನಲ್ಲಿ ಸೇರಿತು.

"ಗಾಂಧೀಜಿಯವರೆ, ನೀವೇ ಈ ಸತ್ಯಾಗ್ರಹ ಚಳುವಳಿಯ ಪ್ರವರ್ತಕರೆಂದು ಭಾವಿಸುತ್ತೇನೆ". ಎಂದು ಆರಂಭಿಸಿದರು ಲಾರ್ಡ್ ಹಂಟರ್.

ಗಾಂಧೀಜಿ ಹೇಳಿದರು, "ಹೌದು ಸ್ವಾಮಿ".

ಲಾರ್ಡ್ ಹಂಟರ್: ಅದನ್ನು ಸಂಕ್ಷೇಪವಾಗಿ ವಿವರಿಸುತ್ತೀರಾ?

ಗಾಂಧೀಜಿ: ಅದು ಹಿಂಸಾತ್ಮಕ ವಿಧಾನಗಳನ್ನು ಹೋಗಲಾಡಿಸಲು ಉದ್ದೇಶಿಸಿದ ಒಂದು ಚಳುವಳಿ. ಸತ್ಯದ ಆಧಾರದ ಮೇಲೆಯೇ ಸಂಪೂರ್ಣವಾಗಿ ನಿಂತ ಚಳವಳಿ ಅದು. ನಾನು ಭಾವಿಸಿಕೊಂಡಿರುವಂತೆ, ಕುಟುಂಬದ ನಿಯಮವನ್ನೇ ರಾಜಕೀಯ ಕ್ಷೇತ್ರಕ್ಕೂ ವಿಸ್ತರಿಸುವ ಚಳವಳಿ. ನಾಡಿನ ಉದ್ವೇಗಲಕ್ಕೂ ಹಿಂಸೆಯೂ ಹರಡುವ ಸಾಧ್ಯತೆಯನ್ನು ತಪ್ಪಿಸಬಲ್ಲ ಮತ್ತು ಅನ್ಯಾಯಗಳನ್ನೆಲ್ಲ ಪರಿಹರಿಸಬಲ್ಲ ಏಕಮಾತ್ರ ಆಂದೋಳನವೆಂದರೆ, ಸತ್ಯಾಗ್ರಹ.

ಲಾರ್ಡ್ ಹಂಟರ್:ರೌಲಟ್ ಕಾನೂನನ್ನು ವಿರೋಧಿಸುವ ಸಂದರ್ಭದಲ್ಲಿ ನೀವು ಸತ್ಯಾಗ್ರಹವನ್ನು ಪ್ರಯೋಗಿಸಿದಿರಿ. ಆ ಸಂದರ್ಭದಲ್ಲೆ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಮಾಡು ವಂತೆ ಜನರನ್ನು ನೀವು ಕೇಳಿದಿರಿ.

ಗಾಂಧೀಜಿ: ಹೌದು ಸ್ವಾಮಿ.

ಲಾರ್ಡ್ ಹಂಟರ್: ಸಾಧ್ಯವಾದಷ್ಟೂ ಜನರನ್ನು ಚಳುವಳಿಗೆ ಸೇರಿಸಿಕೊಳ್ಳ ಬೇಕೆಂದೋ ನಿಮಗಿದ್ದ ಉದ್ದೇಶ?

ಗಾಂಧೀಜಿ: ಹೌದು, ಸತ್ಯ ಮತ್ತು ಅಹಿಂಸೆಯ ತತ್ವಕ್ಕೆ ಸಮಂಜಸವಾಗುವಂತಿದ್ದರೆ. ಆ ತತ್ವಗಳಂತೆ ವರ್ತಿಸಲು ಸಿದ್ಧರಾದ ಹತ್ತು ಲಕ್ಷ ಜನ ನನಗೆ ಸಿಕ್ಕುವ ಪಕ್ಷಕ್ಕೆ ಅವರೆಲ್ಲ ರನ್ನೂ ಸೇರಿಸಿಕೊಳ್ಳುವುದಕ್ಕೆ ನಾನು ಹಿಂಜರಿಯುತ್ತಿರಲಿಲ್ಲ.

ಲಾರ್ಡ್ ಹಂಟರ್ : ಸರಕಾರದ ಸಂಕಲ್ಪದ ಸ್ಥಾನದಲ್ಲಿ ಸತ್ಯಾಗ್ರಹ ಸಮಿತಿಯ ನಿರ್ಧಾರವನ್ನು ನೀವು ತಂದಿಡುವಿರಲ್ಲ, ಅದು ಸಾರತಃ ಸರಕಾರಕ್ಕೆ ವಿರುದ್ಧವಾದ ಚಳು ವಳಿಯಲ್ಲವೆ?

ಗಾಂಧೀಜಿ: ಈ ಚಳುವಳಿಯನ್ನು ಜನರು ಅರ್ಥಮಾಡಿಕೊಂಡಿರುವುದು ಅಂಥ ಮನೋವೃತ್ತಿಯಿಂದಲ್ಲ.

ಲಾರ್ಡ್ ಹಂಟರ್ : ಸರಕಾರದ ದೃಷ್ಟಿಯಿಂದ ನೀವದನ್ನು ನೋಡಬೇಕು ಎಂದು ಹೇಳುತ್ತೇನೆ. ನೀವೇ ಗವರ್ನರ್ ಆಗಿದ್ದಿರಿ ಎಂದಿಟ್ಟುಕೊಳ್ಳಿ. ನಿಮ್ಮ ಸಮಿತಿಯು ನಿರ್ಧರಿಸಿದ ನಿಯಮಗಳನ್ನು ಮುರಿಯುವ ಉದ್ದೇಶದಿಂದ ಪ್ರಾರಂಭವಾದ ಚಳುವಳಿಯ ಬಗೆಗೆ ನೀವೇನನ್ನುತ್ತಿದ್ದೀರಿ?

ಗಾಂಧೀಜಿ: ಹಾಗೆ ಹೇಳಿದರೆ ಸತ್ಯಾಗ್ರಹ ಸಿದ್ಧಾಂತದ ನಿಲವನ್ನೆಲ್ಲಹೇಳಿದಂತಾಗುವುದಿಲ್ಲ. ಸರಕಾರ ಒಂದು ವೇಳೆ ನನ್ನ ವಶದಲ್ಲಿದ್ದು, ಹಿಂಸೆಯನ್ನೆಸಗದೆಯೆ, ಅನ್ಯಾಯವಾದ ಕಾನೂನುಗಳಿಂದ ಪರಿಹಾರವನ್ನು ಪಡೆಯಬೇಕೆಂದು ಪ್ರತಿಜ್ಞೆಮಾಡಿರುವ, ಸಂಪೂರ್ಣವಾಗಿ ಸತ್ಯಾನ್ವೇಷಿಗಳಾದ ಜನರ ಒಂದು ತಂಡವನ್ನು ನನ್ನ ಎದುರೆದುರಾಗಿ ತಂದು ನಿಲ್ಲಿಸಿದ್ದರೆ, ಆಗ ನಾನದನ್ನು ಸ್ವಾಗತಿಸುತ್ತಿದ್ದೆ. ಅವರೆಲ್ಲ ಅತ್ಯುತ್ತಮ ಕಾಯಿದೆ ಬದ್ಧರೆಂದು ಭಾವಿಸುತ್ತಿದೆ. ಹಾಗೂ ಗವರ್ನರ್ ಆದ ನಾನು, ನನ್ನನ್ನು ಸನ್ಮಾರ್ಗದಲ್ಲಿಡುವ ಸಲಹೆಗಾರರಾಗಿ ಅವರನ್ನು ನನ್ನ ಪಕ್ಕದಲ್ಲೇ ಇಟ್ಟುಕೊಳ್ಳುತ್ತಿದ್ದೆ.

ಲಾರ್ಡ್ ಹಂಟರ್ : ಬೇರೆ ಬೇರೆ ಕಾನೂನುಗಳು ನ್ಯಾಯಾನ್ಯಾಯದ ವಿಷಯದಲ್ಲಿ ಜನರಲ್ಲಿ ಭಿನ್ನಾಭಿಪ್ರಾಯ ವಿರುತ್ತದೆ.

ಗಾಂಧೀಜಿ: ಅದೇ ಪ್ರಮುಖ ಕಾರಣ ಹಿಂಸೆಯನ್ನು ಪರಿತ್ಯಜಿಸಿರುವುದಕ್ಕೆ. ಸತ್ಯಾಗ್ರಹಿಯಾದವನು ತನಗಾಗಿ ಯಾವ ಸ್ವಾತಂತ್ರ್ಯದ ಹಕ್ಕನ್ನೂ ಸ್ವತಂತ್ರ ಭಾವನೆಗಳನ್ನೂ ಕಾಪಿಟ್ಟುಕೊಳ್ಳುವನೋ ಅವುಗಳನ್ನೇ ತನ್ನ ಎದುರಾಳಿಗೂ ಕೊಡುತ್ತಾನೆ. ಮತ್ತು ತನಗೇ ನೋವನ್ನುಂಟುಮಾಡಿಕೊಂಡು ಹೋರಾಡುತ್ತಾನೆ.

ಲಾರ್ಡ್‌ಹಂಟರ್: ಸರಕಾರ ಉಳಿಯುವ ದೃಷ್ಟಿಯಿಂದ ನಾನು ಈ ವಿಷಯವನ್ನು ನೋಡುತ್ತಿದ್ದೆ. ಸರಕಾರದ ದೃಷ್ಟಿಯನ್ನು ಒಪ್ಪದೆ ಸ್ವತಂತ್ರವಾದ ಸಮಿತಿಯೊಂದರ ದೃಷ್ಟಿಯನ್ನು ಒಪ್ಪುವ ತಂಡವೊಂದನ್ನು ಸರ್ಕಾರಕ್ಕೆ ವಿರೋಧವಾಗಿ ಎತ್ತಿಕಟ್ಟಿದರೆ, ಆ ಸರ್ಕಾರ ಉಳಿಯುವುದು ಸಾಧ್ಯವೆ?

ಗಾಂಧೀಜಿ: ದಕ್ಷಿಣ ಆಫ್ರಿಕಾದಲ್ಲಿ ಎಂಟು ವರ್ಷಗಳ ನಿರಂತರ ಹೋರಾಟದ ಸಮಯದಲ್ಲಿ ಹಾಗೆ ಸರಕಾರವನ್ನು ನಡೆಸುತ್ತ ಹೋಗುವುದು ಸಾಧ್ಯ ಎಂಬುದನ್ನು ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ. ಆ ಹೋರಾಟದುದ್ದಕ್ಕೂ ತಮ್ಮ ಪಾತ್ರ ವಹಿಸಿದ ಜನರಲ್ ಸ್ಮಟ್ಸ್‌ರವರು ಅದು ಮುಗಿದಾಗ ಹೀಗೆಂದರು:

"ಈ ಸತ್ಯಾಗ್ರಹಿಗಳಂತೆಯೇ ಎಲ್ಲರೂ ನಡೆದುಕೊಂಡರೆ, ಭಯಕ್ಕೇನೇನೂ ಕಾರಣವಿಲ್ಲ.

ಲಾರ್ಡ್ ಹಂಟರ್: ಸಮಿತಿಯೊಂದು ನಿರ್ಣಯಿಸಬಹುದಾದ ಕಾನೂನುಗಳನ್ನು ಮುರಿಯಬೇಕೆಂಬುದು ನಿಮ್ಮ ವ್ರತದ ಉದ್ದೇಶ ಎಂದು ಅರ್ಥವಾಗುತ್ತದೆ.

ಗಾಂಧೀಜಿ: ಹೌದು ಮಹಾಸ್ವಾಮಿ. ವ್ಯಕ್ತಿ ಸ್ವಾತಂತ್ರ್ಯವನ್ನು ಹತೋಟಿಯಲ್ಲಿಡುವುದೇ ಪ್ರತಿಜ್ಞೆಯ ಆ ಭಾಗದ ಉದ್ದೇಶವೆಂದು ಆ ಸಮಿತಿಗೆ ನಾನು ಸುಸ್ಪಷ್ಟಗೊಳಿಸುತ್ತೇನೆ. ಅದನ್ನು ಜನಸಾಮಾನ್ಯರ ಚಳುವಳಿಯನ್ನಾಗಿ ಮಾಡಬೇಕೆಂಬುದು ನನ್ನ ಉದ್ದೇಶ

ವಾಗಿತ್ತು.ನಾನು ನೇಮಿಸಿದಂತಹ ಸಮಿತಿಯೊಂದರ ರಚನೆ ಅಗತ್ಯವೆಂದು ನನಗೆ ತೋರಿತು. ಏಕೆಂದರೆ ಯಾರೂ ತನಗೆ ತಾನೇ ಕಾನೂನಾಗಿ ಬಿಡಬಾರದು ಎಂಬುದು ನಮ್ಮ ಸಂಕಲ್ಪವಾಗಿತ್ತು. ಆದ್ದರಿಂದಲೇ ಯಾವ ಕಾನೂನುಗಳನ್ನು ಮುರಿಯಬೇಕೆಂಬುದನ್ನು ಸಮಿತಿಯು ತೋರಿಸಲು ಸಾಧ್ಯವಾಗುವಂತಹ ಯೋಜನೆಯೊಂದನ್ನು ನಾವು ಕಲ್ಪಿಸಿದೆವು.

ಲಾರ್ಡ್ ಹಂಟರ್: ವೈದ್ಯರಲ್ಲಿ ಅಭಿಪ್ರಾಯ ಭೇದವಿದೆಯೆನ್ನುತ್ತಾರೆ. ಅಂದಮೇಲೆ ಸತ್ಯಾಗ್ರಹಿಗಳಲ್ಲೂ ಅಭಿಪ್ರಾಯಭೇದವಿದ್ದೇ ಇರಬೇಕಲ್ಲವೆ?

ಗಾಂಧೀಜಿ: ಹೌದು ಸ್ವಾಮಿ. ಅದನ್ನರಿಯಲು ನಾನು ಅತಿ ದೊಡ್ಡ ದಂಡವನ್ನೇ ತೆರಬೇಕಾಯಿತು.

ಲಾರ್ಡ್ ಹಂಟರ್: ಒಂದು ವೇಳೆ ಯಾವುದೋ ಒಂದು ಕಾನೂನು ನ್ಯಾಯವಾದದ್ದೆಂದು ಸತ್ಯಾಗ್ರಹಿಯ ಮನಸ್ಸಿಗೆ ಸಮಾಧಾನವಾಗುತ್ತದೆ ಎನ್ನೋಣ. ಆದರೂ ಸಮಿತಿಯು ಅದನ್ನು ಪಾಲಿಸುವುದಿಲ್ಲವೆನ್ನೋಣ. ಆಗ ಅವನು ಏನು ಮಾಡಬೇಕೆನ್ನುವಿರಿ?

ಗಾಂಧೀಜಿ: ಆಗ ಅವನು ಆ ಕಾನೂನನ್ನು ಮುರಿಯಲು ಬದ್ಧನಲ್ಲ ಅಂತಹ ಸತ್ಯಾಗ್ರಹಿಗಳು ನಮ್ಮಲ್ಲಿ ಸಮೃದ್ಧಿಯಾಗಿದ್ದರು.

ಲಾರ್ಡ್ ಹಂಟರ್: ಇದು ಸ್ವಲ್ಪ ಅಪಾಯಕಾರಿಯಾದ ಹೋರಾಟವಲ್ಲವೆ?

ಗಾಂಧೀಜಿ: ಈ ದೇಶದಿಂದ ಹಿಂಸೆಯನ್ನು ತೊಲಗಿಸಲು ಈ ಚಳುವಳಿ ಯೋಜಿಸಲಾಗಿದೆಯೆಂದು ನೀವು ಭಾವಿಸುವ ಪಕ್ಷಕ್ಕೆ ಅದರ ಬಗೆಗೆ ನನಗಿರುವಂಥ ತೀವ್ರಾಸಕ್ತಿಯಲ್ಲಿ ನೀವೂ ಭಾಗಿಯಾಗುವಿರಿ. ಏನೇ ಆಗಲಿ ಈ ಸ್ವರೂಪದ ಚಳುವಳಿಯು ಇನ್ನೂ ಪರಿಶುದ್ಧಿಗೊಂಡ ಸ್ಥಿತಿಯಲ್ಲಿ ಈ ದೇಶದಲ್ಲಿದ್ದೇ ತೀರಬೇಕು ಎಂಬುದು ನನ್ನ ಭಾವನೆ.

ಲಾರ್ಡ್ ಹಂಟರ್: ನಿಮ್ಮ ಸತ್ಯಾಗ್ರಹದ ಪ್ರತಿಜ್ಞೆಯಿಂದ ವ್ಯಕ್ತಿಯೊಬ್ಬನ ಅಂತಃಸಾಕ್ಷಿಯ ಮೇಲೆ ನೀವು ನಿರ್ಬಂಧ ಹೇರುತ್ತಿಲ್ಲವೆ?

ಗಾಂಧೀಜಿ: ನನ್ನ ವ್ಯಾಖ್ಯಾನ ಪ್ರಕಾರ ಹಾಗೆ ಮಾಡುತ್ತಿಲ್ಲ. ಪ್ರತಿಜ್ಞೆಗೆ ನಾನು ಕೊಟ್ಟಿರುವ ವ್ಯಾಖ್ಯಾನ ತಪ್ಪೆಂದು ಕಂಡು ಬಂದರೆ, ಈ ಚಳುವಳಿಯನ್ನು ಪುನಃ ಆರಂಭಿಸಬೇಕಾದಾಗ ನನ್ನ ತಪ್ಪನ್ನು ತಿದ್ದಿಕೊಳ್ಳುತ್ತೇನೆ.

ಲಾರ್ಡ್ ಹಂಟರ್: ಇಲ್ಲ ಇಲ್ಲ, ನಿಮಗೆ ಸಲಹೆಕೊಡುವ ಹಕ್ಕು ನನಗೇನೂ ಇಲ್ಲ.

ವಕೀಲಿ ಇಂದ್ರಜಾಲದಿಂದ ಗಾಂಧೀಜಿಯನ್ನು ಸಿಕ್ಕಿಸಿಕೊಳ್ಳಬಹುದೆಂದೆಣಿಸಿ ಸರ್. ಚಿಮನ್‌ಲಾಲ್ ಸ್ಟೆಲ್‌ವಾಡರು ಗಾಂಧೀಜಿಯನ್ನು ಪಾಟೀ ಸವಾಲು ಮಾಡಿದರು.

ಸರ್ ಚಿಮನ್‌ಲಾಲ್: ನಾನು ತಿಳಿದುಕೊಂಡಿರುವ ಮಟ್ಟಿಗೂ ನಿಮ್ಮ ಸತ್ಯಾಗ್ರಹ ಸಿದ್ಧಾಂತದಲ್ಲಿ ಸತ್ಯಾನ್ವೇಷಣೆಯು ಅಡಗಿದೆ. ಆ ಅನ್ವೇಷಣೆಯಲ್ಲಿ ಸಂಕಟವನ್ನು ನೀವೇ ಅನುಭವಿಸಲು ಸಿದ್ಧರಾಗಿದ್ದೀರಿ. ಬೇರೆ ಯಾರಿಗೂ ಹಿಂಸೆಯನ್ನು ಉಂಟು ಮಾಡುವುದಿಲ್ಲ. ಅಲ್ಲವೆ?

ಗಾಂಧೀಜಿ: ಹೌದು ಸ್ವಾಮಿ.

ಸರ್ ಚಿಮನ್‌ಲಾಲ್: ಒಬ್ಬ ವ್ಯಕ್ತಿಯು ಸತ್ಯಾನ್ವೇಷಣೆಯಲ್ಲಿ ಎಷ್ಟೇ ಪ್ರಾಮಾಣಿಕವಾಗಿ ಪ್ರಯತ್ನಿಸಿದರೂ ಸತ್ಯವನ್ನು ಕುರಿತು ಅವನಿಗಿರುವ ಭಾವನೆಗಳು ಇತರರ ಭಾವನೆಗಳಿಗಿಂತ ಬೇರೆಯಾಗಿರಬಹುದು ತಾನೆ? ಇದೇ ಸತ್ಯವೆಂದು ನಿರ್ಣಯಿಸುವವರು ಯಾರು?

ಗಾಂಧೀಜಿ: ಆಯಾ ವ್ಯಕ್ತಿಯೇ ಅದನ್ನು ನಿರ್ಣಯಿಸುತ್ತಾನೆ

ಸರ್ ಚಿಮನ್‌ಲಾಲ್: ಬೇರೆ ಬೇರೆ ವ್ಯಕ್ತಿಗಳಿಗೆ ಸತ್ಯದ ವಿಷಯದಲ್ಲಿ ಬೇರೆ ಬೇರೆ ದೃಷ್ಟಿಗಳಿರುತ್ತವೆ. ಅದು ಗೊಂದಲಕ್ಕೆಳೆಯುವುದಿಲ್ಲವೆ?

ಗಾಂಧೀಜಿ: ನನಗೆ ಹಾಗೆನಿಸುವುದಿಲ್ಲ.

ಸರ್ ಚಿಮನ್‌ಲಾಲ್:ಪ್ರಾಮಾಣಿಕ ದೃಷ್ಟಿಯಿಂದ ನೋಡಿದರೆ, ಸತ್ಯಾನ್ವೇಷಣವು ವ್ಯಕ್ತಿ ವ್ಯಕ್ತಿಗೂ ಬೇರೆಯೇ ಆಗಿರುತ್ತದೆ, ಅಲ್ಲವೆ?

ಗಾಂಧೀಜಿ: ಆದ್ದರಿಂದಲೇ ಅಹಿಂಸೆ ಎಂಬ ಅಂಶ ಅದರ ಅನಿವಾರ್ಯವಾದ ಅನುಮಿತವಾಯಿತು. ಅದಿಲ್ಲದಿದ್ದರೆ ಗಲಭೆ ಗೊಂದಲವೂ ಆಗಬಹುದು, ಇನ್ನೂ ಕೆಟ್ಟದ್ದೂ ಆಗಬಹುದು.

ಸರ್ ಚಿಮನ್‌ಲಾಲ್: ಸತ್ಯವನ್ನು ಅನ್ವೇಷಿಸಲು ಬಯಸುವ ಮನುಷ್ಯ ಉನ್ನತವಾದ ನೈತಿಕ ಮತ್ತು ಬೌದ್ಧಿಕ ಶಕ್ತಿಸಾಮರ್ಥ್ಯಗಳನ್ನು ಪಡೆದವನಾಗಿರಬೇಕಲ್ಲವೆ?

ಗಾಂಧೀಜಿ: ಇಲ್ಲ, ಪ್ರತಿಯೊಬ್ಬನಿಂದಲೂ ಅದನ್ನು ನಿರೀಕ್ಷಿಸುವುದು ಅಸಾಧ್ಯ. ಎ ಯು ತನ್ನ ಸ್ವಂತ ಪ್ರಯತ್ನಗಳಿಂದ ಪ್ರಕಾಶ ಪಡಿಸಿದ ಒಂದು ಸತ್ಯವನ್ನು ಕಂಡು ಬಿ, ಸಿ ಮತ್ತು ಇತರರು ಅದನ್ನು ಅಂಗೀಕರಿಸಬೇಕಾದಾಗ ಎಗೆ ಇರುವ ಸಾಮರ್ಥ್ಯ ಉಳಿದವರಿಗೂ ಇರಲೇಬೇಕೆಂದು ನಾನು ಕೋರುವುದಿಲ್ಲ.

ಸರ್ ಚಿಮನ್‌ಲಾಲ್: ಹಾಗಾದಲ್ಲಿ ಒಬ್ಬ ವ್ಯಕ್ತಿಯು ಒಂದು ನಿರ್ಣಯಕ್ಕೆ ಬರುತ್ತಾನೆ, ಅವನಿಗಿಂತ ಕಡಿಮೆ ಬೌದ್ಧಿಕ ಮತ್ತು ನೈತಿಕ ಸಾಮರ್ಥ್ಯವುಳ್ಳವರು ಕಣ್ಣುಮುಚ್ಚಿಕೊಂಡು ಅವನನ್ನು ಹಿಂಬಾಲಿಸಬೇಕು ಎಂದಂತಾಯಿತು.

ಗಾಂಧೀಜಿ: ಕಣ್ಣು ಮುಚ್ಚಿಕೊಂಡಲ್ಲ. ನಾನು ಒತ್ತಾಯ ಪಡಿಸಲು ಬಯಸುವುದಿಷ್ಟೆ: ಪ್ರತಿವ್ಯಕ್ತಿಯೂ ತಾನೇ ಸ್ವತಂತ್ರವಾಗಿ ಸತ್ಯಾನ್ವೆ ಷಣೆಯನ್ನು ನಡೆಸಲು ಬಯಸಿದ ಹೊರತು ಸತ್ಯವನ್ನು ನಿಶ್ಚಯಿಸಿರುವ ಯಾರನ್ನಾದರೂ ಅನುಸರಿಸಬೇಕಾದುದು ಅಗತ್ಯ.

ಸರ್ ಚಿಮನ್‌ಲಾಲ್ ಮುಂದುವರಿದು ಹೇಳಿದರು: ಉನ್ನತವಾದ ನೈತಿಕ ಮತ್ತು ಬೌದ್ಧಿಕ ಸಾಮರ್ಥ್ಯವಿರುವ ಜನರು ಸತ್ಯವನ್ನು ನಿರ್ಣಯಿಸಬೇಕು ಎಂಬುದು ನಿಮ್ಮ ಯೋಜನೆಯಲ್ಲಿ ಅಡಗಿರುವ ತತ್ವ. ಬಹು ಸಂಖ್ಯೆಯ ಜನ ತಮ್ಮ ಬೌದ್ಧಿಕ ಸಾಮರ್ಥ್ಯ ಕೀಳು ಮಟ್ಟದ್ದಾದ್ದರಿಂದ ಅವರನ್ನು ಕಣ್ಣುಮುಚ್ಚಿಕೊಂಡು ಹಿಂಬಾಲಿಸಬಹುದು ತಾನೆ?

ಗಾಂಧೀಜಿ: ಸಾಮಾನ್ಯ ವ್ಯಕ್ತಿಯೊಬ್ಬನಿಂದ ನಿರೀಕ್ಷಿಸಲಾಗದಂಥದೇನನ್ನೂ ನಾನು ಅವರಿಂದ ಬಲಾತ್ಕಾರವಾಗಿ ಪಡೆಯ ಬಯಸುವುದಿಲ್ಲ.

ಸರ್ ಚಿಮನ್‌ಲಾಲ್: ನಿಮ್ಮನ್ನೇ ಇನ್ನೂ ಪರಿಪೂರ್ಣ ಸತ್ಯಾಗ್ರಹಿಯೆಂದು ನೀವು ಭಾವಿಸಿಲ್ಲವೆಂದಿರಿ. ಅಂದಮೇಲೆ ಸಾಮಾನ್ಯ ಜನರ ದೊಡ್ಡ ಸಮೂಹ ಇನ್ನೂ ಕಡಿಮೆ ತಾನೆ?

ಗಾಂಧೀಜಿ: ಹಾಗಲ್ಲ. ನಾನೊಬ್ಬ ಅಸಾಮಾನ್ಯ ಮನುಷ್ಯನೆಂದು ನಾನು ಭಾವಿಸಿಲ್ಲ. ಸತ್ಯವನ್ನು ನಿರ್ಣಯಿಸಲು ನನಗಿಂತ ಹೆಚ್ಚು ಸಮರ್ಥರಿರಬಹುದು. ದಕ್ಷಿಣ ಆಫ್ರಿಕದಲ್ಲಿ ಪೂರ್ಣವಾಗಿ ಅಸಂಸ್ಕೃತರಾದ ನಲವತ್ತು ಸಾವಿರ ಜನ ಭಾರತೀಯರು ತಾವು ಸತ್ಯಾಗ್ರಹಿಗಳಾಗಬಲ್ಲೆವೆಂಬ ನಿರ್ಣಯಕ್ಕೆ ಬಂದರು. ಟ್ರಾನ್ಸ್‌ವಾಲಿನ ರೋಮಾಂಚಕ ದೃಶ್ಯಗಳ ಅನುಭವವು ನಿಮಗಾಗುವಂತೆ ಮಾಡಲು ನನಗೆ ಸಾಧ್ಯವಿದ್ದಿದ್ದರೆ, ದಕ್ಷಿಣ ಆಫ್ರಿಕದಲ್ಲಿ ನಿಮ್ಮ ಸ್ವಂತ ದೇಶಬಾಂಧವರೇ ಎಂಥ ಸಂಯಮವನ್ನು ತೋರಿಸಿದರು ಎಂಬುದನ್ನು ಕೇಳಿ ನಿಮಗೆ ಆಶ್ಚರ್ಯವಾಗುತ್ತಿತ್ತು.

ಸರ್ ಚಿಮನ್‌ಲಾಲ್: ಆದರೆ ಅವರೆಲ್ಲರಲ್ಲಿ ಒಮ್ಮತವಿತ್ತು.

ಗಾಂಧೀಜಿ: ದಕ್ಷಿಣ ಆಫ್ರಿ ದಲ್ಲಿದ್ದುದಕ್ಕಿಂತ ಘನವಾದ ಒಮ್ಮತ ನನಗಿಲ್ಲಿ ದೊರೆತಿದೆ.

ಸರ್ ಚಿಮನ್‌ಲಾಲ್: ಆದರೆ ಅಲ್ಲಿ ನಿಮಗೆ ಸುಸ್ಪಷ್ಟವಾದ ಸಮಸ್ಯೆಯೊಂದಿತ್ತು. ಇಲ್ಲಿ ಹಾಗಲ್ಲವಲ್ಲ.

ಗಾಂಧೀಜಿ: ಇಲ್ಲಿಯೂ ನಮ್ಮ ಮುಂದಿರುವ ವಿಷಯ ಸುಸ್ಪಷ್ಟವಾದದ್ದೇ–ರೌಲಟ್ ಶಾಸನ.

ಸರ್‌ಚಿಮ ನ್‌ಲಾಲ್: ಸಂಕಷ್ಟಗಳನ್ನು ಸಹಿಸುವುದಕ್ಕೂ ಸಹಿಸುತ್ತಲೇ ಹೋಗುವುದಕ್ಕೂ ಅಸಾಧಾರಣ ಆತ್ಮಸಂಯಮ ಬೇಕಲ್ಲವೆ?

ಗಾಂಧೀಜಿ: ಇಲ್ಲ. ಅಸಾಧಾರಣ ಆತ್ಮಸಂಯಮವೇನೂ ಬೇಕಿಲ್ಲ. ಪ್ರತಿಯೊಬ್ಬ ತಾಯಿಯೂ ವೇದನೆಯನ್ನು ಸಹಿಸುತ್ತಾಳೆ. ನಿಮ್ಮ ದೇಶಬಾಂಧವರಲ್ಲಿಯೂ ಅಂತಹ ಸಂಯಮ ಇದೆಯೆಂದು ವಿನಂತಿಮಾಡಿಕೊಳ್ಳುತ್ತೇನೆ. ಅದನ್ನವರು ತೀರ ಅತಿಶಯವಾಗಿ ತೋರಿಸಿಯೂ ಇದ್ದಾರೆ.

ಖಿಲಾಫತ್ ಸಮಸ್ಯೆಯಿಂದಾಗಿ ಭಾರತೀಯರ ಮನಸ್ಸಿನಲ್ಲಿ ಕ್ಷೋಭೆ ಉಂಟಾಗಿದ್ದಿತಷ್ಟೆ. ಅದರ ಸಂದರ್ಭದಲ್ಲೇ ಗಾಂಧೀಜಿ ಅಹಮದಾಬಾದಿನಿಂದ ದೆಹಲಿಗೆ ಹೋದರು. ಟರ್ಕಿಯ ಸುಲ್ತಾನನಾಗಿದ್ದ ಕಲೀಫನ ಲೌಕಿಕ ಅಧಿಕಾರಗಳನ್ನು ಮೊಟಕುಗೊಳಿಸುವ ಸಲಹೆಗಳಿದ್ದುವು, ಶಾಂತಿಯ ಷರತ್ತುಗಳಲ್ಲಿ. ಇದು ತಮ್ಮ ಧರ್ಮಕ್ಕೆ ವಿರುದ್ಧವಾದದ್ದು ಎಂದು ಮುಸ್ಲಿಮರು ಭಾವಿಸಿದರು. ಅಲ್ಲದೆ, ಬ್ರಿಟಿಷ್ ಸರಕಾರವು ವಚನ ಭಂಗ ಮಾಡಿದೆ ಎಂಬುದೂ ಅವರ ಭಾವನೆ.

ಗಾಂಧೀಜಿಯ ಸುತ್ತ ಹೊಸ ಶಕ್ತಿಗಳು ಬಂದು ಕೂಡಿಕೊಳ್ಳುತ್ತಿದ್ದುವು. ೧೮೫೭ರ ದಂಗೆಯ ಅನಂತರ ಭಾರತದ ಮುಸ್ಲಿಂ ಮೌಲ್ವಿಗಳ ಸಂಘಟಿತ ಅಧಿಕಾರ ಪ್ರಭಾವಗಳು ಚೂರುಚೂರಾಗಿ ಹೋಗಿದ್ದುವೆಂದೂ ಅವರು ಈಗ ಮತ್ತೆ ಒಟ್ಟುಗೂಡಬೇಕು ಎಂದೂ ಉಲೇಮಾದ ಮೌಲ್ವಿಗಳು ಭಾವಿಸಿದರು. ಅಗಾಧವಾದ ಪಾಂಡಿತ್ಯ, ಎಣೆಯಿಲ್ಲದ

ವಾಗ್ಮಿತೆ ಜನರನ್ನೊಲಿಸಿಕೊಳ್ಳುವ ಶಕ್ತಿ ಮತ್ತು ಆಧುನಿಕ ದೃಷ್ಟಿಗಳಿಂದ ಕೂಡಿದ್ದ ಮೌಲಾನಾ ಅಬುಲ್ ಕಲಾಂ ಆಜಾದರು ರಂಗಕ್ಕೆ ಪ್ರವೇಶಿಸಿದರು. ಆಗ ತಾನೆ ಸೆರೆಯಿಂದ ಅವರಿಗೆ ಬಿಡುಗಡೆಯಾಗಿತ್ತು. ಮುಸ್ಲಿಂ ನಾಯಕರಲ್ಲೆಲ್ಲ ಅತ್ಯಂತ ಚಿಕ್ಕವರಾಗಿದ್ದರೂ ಅವರೇ ಗಾಂಧೀಜಿಗೆ ಬಲಸ್ತಂಭವಾಗಿದ್ದರು.

ದೆಹಲಿಯಲ್ಲಿ ನಡೆದ ಈ ಮಹತ್ವಪೂರ್ಣವಾದ ಖಿಲಾಫತ್ ಸಭೆಯನ್ನು ಮತ್ತು ಅಸಹಕಾರಕ್ಕೆ ಕಾರಣವಾದ ಘಟನೆಗಳನ್ನೂ ಕುರಿತು ಮೌಲಾನಾ ಆಜಾದ್ ಹೀಗೆಂದಿದ್ದಾರೆ:

"ಗಾಂಧೀಜಿಯವರನ್ನು ಮೊತ್ತಮೊದಲ ಬಾರಿಗೆ ಭೇಟಿ ಮಾಡುವ ಅವಕಾಶ ನನಗೆ ದೊರೆತದ್ದು ೧೯೨೦ರ ಜನವರಿ ೧೮ರಂದು, ದೆಹಲಿಯಲ್ಲಿ. ಎಲ್ಲ ಹಿಂದೂ ಮುಸ್ಲಿಂ ನಾಯಕರೂ ಅಲ್ಲಿ ಸೇರಿದ್ದರು. ಅವರ ಉದ್ದೇಶ ವೈಸ್‌ರಾಯ್ ಅವರಲ್ಲಿಗೆ ನಿಯೋಗ ಹೋಗಿ ಟರ್ಕಿಗೆ ಸಂಬಂಧಿಸಿದಂತೆ–ಭಾರತೀಯ ಮುಸ್ಲಿಮರ ಭಾವನೆಗಳನ್ನು ಸರಕಾರದ ಮುಂದೆ ಇಡುವುದು. ಲೋಕಮಾನ್ಯ ತಿಲಕರೂ ದೆಹಲಿಯಲ್ಲಿದ್ದರು. ನಿಯೋಗದ ಸದಸ್ಯನಾಗಿದ್ದ ನಾನು ವೈಸ್‌ರಾಯ್ ಅವರಿಗೆ ಒಪ್ಪಿಸಬೇಕೆಂದಿದ್ದ ಮನವಿಗೆ ಆಗಲೇ ಸಹಿ ಹಾಕಿದ್ದೆ. ಆದರೆ ನನಗೆ ಸರಕಾರಿ ಭವನಕ್ಕೆ ಹೋಗಲು ಸಮ್ಮತಿಸಲಾಗಲಿಲ್ಲ. ಆ ನಿಯೋಗದಲ್ಲಿ ನಾನೂ ಸೇರಬೇಕೆಂದು ಮೌಲಾನಾ ಮಹಮದಾಲಿ ಮತ್ತು ಇತರ ಮಿತ್ರರು ಒತ್ತಾಯ ಮಾಡುತ್ತಿದ್ದರು. ಆದರೆ ನಿಯೋಗದಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದು ನನ್ನ ಭಾವನೆಯಾಗಿತ್ತು.

"ಆದರೂ ನಿಯೋಗವು ವೈಸರಾಯ್ ಅವರನ್ನು ಭೇಟಿಮಾಡಿಯೇ ಮಾಡಿತು. ಫಲಿತಾಂಶ ಮಾತ್ರ ನಿರೀಕ್ಷಿಸಿದ್ದಂತೆಯೇ, ಏನೇನೂ ಆಗಲಿಲ್ಲ. ವೈಸ್‌ರಾಯ್ ಕೊಟ್ಟ ಒಂದೇ ಒಂದು ಭರವಸೆಯೆಂದರೆ, ಲಂಡನ್ನಿಗೆ ಒಂದು ನಿಯೋಗವನ್ನು ಕಳುಹಿಸಬೇಕೆಂದು ನಿರ್ಣಯಿಸುವ ಪಕ್ಷಕ್ಕೆ ಅದಕ್ಕೆ ಎಲ್ಲ ಅನುಕೂಲಗಳನ್ನೂ ಭಾರತ ಸರಕಾರವು ಒದಗಿಸುತ್ತದೆ ಎಂದು. ಅದರಂತೆ ಮೌಲಾನಾ ಮಹಮದಾಲಿಯವರು ನಿಯೋಗದ ನಾಯಕರಾಗಬೇಕೆಂದು ತೀರ್ಮಾನವಾಯಿತು. ಅವರು ಹೋಗಲು ಸಿದ್ಧರಿದ್ದರು. ಆದರೆ ಈಗ ಇನ್ನೊಂದು ಪ್ರಶ್ನೆ ಹುಟ್ಟಿಕೊಂಡಿತು. ಈ ನಿಯೋಗವನ್ನು ಕಳುಹಿಸುವಷ್ಟರಿಂದಲೇ ಮುಸ್ಲಿಮರು ತೃಪ್ತರಾಗಬೇಕೆ ಅಥವಾ ಮಾಡಬೇಕಾದದ್ದು ಇನ್ನೇನಾದರೂ ಇದೆಯೆ, ಎಂಬುದು. ಬೇಡಿಕೊಳ್ಳುವುದು, ನಿಯೋಗ ಹೋಗುವುದು ಮುಂತಾದ ಈ ಹಳೆಯ ವಿಧಾನಗಳಿಂದ ಹೆಚ್ಚು ಪ್ರಯೋಜನವೇನೂ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿತ್ತು. ನೇರವಾಗಿ ಒತ್ತಡವನ್ನು ಹೇರುವ ಯಾವುದಾದರೂ ವಿಧಾನವನ್ನು ಕಂಡುಹಿಡಿಯಲು ನಾವು ಪ್ರಯತ್ನಿಸಬೇಕಾಗಿತ್ತು. ಆದರೆ ಈ ವಿಚಾರಧಾರೆಗೆ ಬಹುಪಾಲು ಜನ ಹಿಂಜರಿಯುತ್ತಿದ್ದರು. ಏನಾದರೂ ಖಚಿತವಾದ ಸಲಹೆಯನ್ನು ಕೊಟ್ಟರೆ ಅದರಲ್ಲಿ ದೋಷಗಳನ್ನು ಕಂಡುಹಿಡಿಯಲು ಸಿದ್ಧರಾಗಿದ್ದರೇ ಹೊರತು ಯಾವುದೇ ರಚನಾತ್ಮಕ ಸಲಹೆಗಳೂ ಅವರಲ್ಲಿ ಇರಲಿಲ್ಲ.

"ಹಕೀಮ್ ಅಜ್ಮಲ್‌ಖಾನ್ ಅವರ ದಿವಾನಖಾನೆಯಲ್ಲಿ ಆರುಗಂಟೆಗಳಷ್ಟು ದೀರ್ಘಕಾಲ ಈ ವಿಷಯ ಚರ್ಚಿತವಾಯಿತು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇಬ್ಬರು ಮೂವರ ಒಂದು ಉಪಸಮಿತಿ ನೇಮಕವಾಗಲಿ, ಅವರು ತಮ್ಮೊಂದಿಗೆ ಸಮಾಲೋಚಿಸಿ ನಿರ್ಣಯಕ್ಕೆ ಬರಲಿ ಎಂದು ಗಾಂಧೀಜಿ ಸಲಹೆ ನೀಡಿದರು. ಆಮೇಲೆ ಅವರ ನಿರ್ಣಯವನ್ನು ದೊಡ್ಡ ಸಮಿತಿಯ ಮುಂದೆ ಇಡಬೇಕು ಎಂದು ಅವರ ಸಲಹೆ ಉಪಸಮಿತಿಗೆ ಹಕೀಮ್ ಸಾಹೇಬರೂ ನಾನೂ ಸದಸ್ಯರಾಗಿ ನೇಮಕಗೊಂಡೆವು. ಗಾಂಧೀಜಿ ಜೊತೆಗೆ ಪ್ರಿನ್ಸಿಪಲ್‌ರುದ್ರರ ಮನೆಗೆ ಹೋದೆವು. ಅಲ್ಲಿ ಅವರೊಂದಿಗೆ ಮೂರು ಗಂಟೆಗಳ ಕಾಲ ರಹಸ್ಯ ಚರ್ಚೆ ನಡೆಸಿದೆವು. ಅಸಹಕಾರದ ಕಲ್ಪನೆ ರೂಪ ತಳೆದದ್ದು ಅಲ್ಲಿಯೇ. ಗಾಂಧೀಜಿ ನಮ್ಮ ಮುಂದೆ ಒಂದು ವಿವರವಾದ ಕಾರ್ಯಕ್ರಮವನ್ನೇ ಇಟ್ಟರು. ವಿವರ ವಿವರದಲ್ಲೂ ಅವರು ಹೇಳಿದುದನ್ನೊಪ್ಪಲು ನನಗೇನೂ ಕಷ್ಟಕಾಣಿಸಲಿಲ್ಲ. ಇದನ್ನು ಬಿಟ್ಟರೆ ಬೇರೆ ಯಾವುದೇ ಪರಿಣಾಮಕಾರಿಯಾದ ಅಥವಾ ಸರಿಯಾದ ಕಾರ್ಯ ವಿಧಾನ ಇಲ್ಲ ಎಂಬುದು ನನಗೆ ಸುಸ್ಪಷ್ಟವಾಗಿತ್ತು.

"ಮರುದಿನ ನಿಯೋಗದ ಸದಸ್ಯರು ಮತ್ತೆ ಸೇರಿದರು. ಗಾಂಧೀಜಿ ತಮ್ಮ ಸಲಹೆಯನ್ನು ಅವರಿಗೆ ವಿವರಿಸಿದರು, ಆದರೂ ಅವರು ಇನ್ನೂ ಹಿಂದು ಮುಂದು ನೋಡುತ್ತಲೇ ಇದ್ದರು. ಮೌಲಾನಾ ಅಬ್ದುಲ್ ಬಾರಿ, ಮಹಮ್ಮದಾಲಿ ಮತ್ತು ಷಾಕತ್ ಅಲಿ ಇವರೆಲ್ಲ ಇನ್ನೂ ತೀರ್ಮಾನಕ್ಕೆ ಬರಲಾರದೆ ಸ್ವಲ್ಪ ಸಮಯ ಬೇಕು ಎಂದರು. ಹಕೀಮ್ ಸಾಹೇಬರೊಬ್ಬರು ಮಾತ್ರ ನನಗೆ ತಮ್ಮ ಸಂಪೂರ್ಣ ಬೆಂಬಲ ನೀಡಿದರು. ಅದೇ ಸಮಯದಲ್ಲಿ ಮೀರತ್ತಿನಲ್ಲಿ ಖಿಲಾಫತ್ ಸಮ್ಮೇಳನ ನಡೆಯುತ್ತಿತ್ತು. ಆದ್ದರಿಂದ ಗಾಂಧೀಜಿಯೂ ನಾನೂ ದೆಹಲಿಯಿಂದ ಅಲ್ಲಿಗೆ ಹೋದೆವು. ಆ ಸಮ್ಮೇಳನದಲ್ಲೇ ಮೊತ್ತ ಮೊದಲ ಬಾರಿಗೆ ಸಾರ್ವಜನಿಕರ ಮುಂದೆ ಅಸಹಕಾರ ಕಾರ್ಯಕ್ರಮವನ್ನು ಇಟ್ಟದ್ದು. ಎರಡನೆಯ ಖಿಲಾಫತ್ ಸಮ್ಮೇಳನವು ನನ್ನ ಅಧ್ಯಕ್ಷತೆಯಲ್ಲಿ ಕಲ್ಕತ್ತೆಯಲ್ಲಿ ಫೆಬ್ರುವರಿ ತಿಂಗಳ ಕೊನೆಯಲ್ಲಿ ನಡೆಯಿತು. ನನ್ನ ಅಧ್ಯಕ್ಷ ಭಾಷಣದಲ್ಲಿ ಈ ಅಸಹಕಾರ ಯೋಜನೆಯನ್ನೇ ಮುಸ್ಲಿಮರು ಒಪ್ಪಿಕೊಳ್ಳಬೇಕೆಂದು ಶಿಫಾರಸು ಮಾಡಿದೆ".

ಖಿಲಾಫತ್ ಸಮಸ್ಯೆಯು ಹೆಚ್ಚು ಹೆಚ್ಚಾಗಿ ಅಗ್ರಸ್ಥಾನಕ್ಕೆ ಬಂದಿತು. ಮಹಮದಾಲಿಯವರ ನೇತೃತ್ವದಲ್ಲಿ ಹೋಗಿದ್ದ ಖಿಲಾಫತ್ ನಿಯೋಗಕ್ಕೆ ಮಾರ್ಚ್ ೧೭ರಂದು ಲಾಯ್ಡ್ ಜಾರ್ಜ್ ಕೊಟ್ಟ ಉತ್ತರ ಮುಸ್ಲಿಮರ ಕೋಪವನ್ನು ಕೆರಳಿಸಿತು. ಟರ್ಕಿಗೆ ಸೇರಿದ ಭೂಭಾಗಗಳ ಮೇಲೆ ಅದು ತನ್ನ ಲೌಕಿಕ ಅಧಿಕಾರವನ್ನು ನಡೆಸಲು ಅವಕಾಶಕೊಡುವುದಾಗಿಯೂ, ಆದರೆ ಅದರ ಸಾಮ್ರಾಜ್ಯ ಸ್ವಾಮ್ಯಗಳು ಅದಕ್ಕಿಲ್ಲದಂತೆ ಮಾಡುವುದಾಗಿಯೂ ಆತ ಹೇಳಿದ. ಟರ್ಕಿಯ ಸುಲ್ತಾನ್ ಇನ್ನು ಮುಂದೆ ಇಸ್ಲಾಮಿಕ್ ಜಗತ್ತಿನ ಕಲೀಫನಾಗಿರುವುದಿಲ್ಲ ಎಂಬುದೇ ಈ ಷರತ್ತುಗಳ ಅರ್ಥವಾಗಿತ್ತು. ಭಾರತದ ಖಿಲಾಫತ್ ಭಾವನೆಯ ಬುಡಕ್ಕೆ ಇದು ಕೊಡಲಿ ಪೆಟ್ಟಾಗಿತ್ತು. ಮಾರ್ಚಿ ೧೯ನ್ನು ರಾಷ್ಟ್ರೀಯ ಶೋಕ

ದಿನಾಚರಣೆಯ ದಿನ–ಉಪವಾಸ, ಪ್ರಾರ್ಥನೆ ಮತ್ತು ಸಾಮೂಹಿಕ ಹರತಾಳದ ದಿನವಾಗಿ ಆಚರಿಸಬೇಕೆಂದು ನಿರ್ಧಾರವಾಯಿತು.

ಮಾರ್ಚ್ ೧೦ನೆಯ ತಾರೀಖು ಗಾಂಧೀಜಿ ನೀಡಿದ ಚಾರಿತ್ರಿಕ ಹೇಳಿಕೆಯಲ್ಲಿ ಅವರು ಯೋಜಿಸಿದ್ದ ಕಾರ್ಯ ವಿಧಾನವು ಸ್ಪಷ್ಟವಾಗಿ ವ್ಯಕ್ತವಾಗಿತ್ತು:

"ಖಿಲಾಫತ್ತು ಈಗ ಸಮಸ್ಯೆಗಳಲ್ಲಿ ಸಮಸ್ಯೆಯಾಗಿದೆ...ನಮ್ಮ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ನಾವೇನು ಮಾಡಬಹುದು ಎಂಬುದರ ಬಗೆಗೆ ಒಂದು ಮಾತು. ಅನಾಗರಿಕ ವಿಧಾನವೆಂದರೆ ಯುದ್ಧ–ಅದು ಪ್ರತ್ಯಕ್ಷ ಸ್ವರೂಪದ್ದಾಗಿರಬಹುದು; ಇಲ್ಲವೆ ಛದ್ಮ ಸ್ವರೂಪದ್ದಾಗಿರಬಹುದು. ವ್ಯಾವಹಾರಿಕವಲ್ಲ ಎಂಬ ಒಂದೇ ಕಾರಣಕ್ಕಾದರೂ ಈ ಯೋಚನೆಯನ್ನು ತಳ್ಳಿಹಾಕಬೇಕು. ಅದು ಸರ್ವಥಾ ದುಷ್ಟವಾದದ್ದೆಂದು ಪ್ರತಿಯೊಬ್ಬರಿಗೂ ಮನಗಾಣಿಸಲು ನನಗೆ ಶಕ್ಯವಿದ್ದಿದ್ದರೆ, ನ್ಯಾಯಬದ್ಧವಾದ ಎಲ್ಲ ಗುರಿಗಳನ್ನೂ ಇನ್ನೂ ಶೀಘ್ರವಾಗಿ ನಾವು ಸಾಧಿಸಿಕೊಳ್ಳಬಹುದಿತ್ತು. ಹಿಂಸೆಯನ್ನು ತ್ಯಜಿಸುವ ಒಬ್ಬ ವ್ಯಕ್ತಿಯೇ ಆಗಲಿ ಒಂದು ರಾಷ್ಟ್ರವೇ ಆಗಲಿ ಸೃಷ್ಟಿಸಬಹುದಾದ ಶಕ್ತಿ ಅದಮ್ಯವಾದದ್ದು. ಆದರೆ ಇಂದು ನಾನು ಹಿಂಸೆಯ ವಿರುದ್ಧ ಮುಂಡಿಸುವ ವಾದ ಶುದ್ಧಾಂಗವಾಗಿ ಅನುಕೂಲ ಸಿಂಧುವಿಗೆ ಸೇರಿದ್ದು–ಅಂದರೆ ಹಿಂಸೆಯು ಸಂಪೂರ್ಣವಾಗಿ ವ್ಯರ್ಥ ಎಂಬವಾದ, ಅಷ್ಟೆ. ಆದ್ದರಿಂದ ನಮಗೆ ಸಾಧ್ಯವಿರುವ ಏಕೈಕ ಉಪಾಯವೆಂದರೆ ಅಸಹಕಾರವೇ. ಸಂಪೂರ್ಣವಾಗಿ ಹಿಂಸಾ ವಿಮುಕ್ತವಾದಾಗ, ಅದು ಅತ್ಯಂತ ಫಲಕಾರಿಯಾದ ಉಪಾಯ ಹೇಗೋ ಹಾಗೆಯೇ ಅತ್ಯಂತ ಸ್ಪಷ್ಟವಾದ ಉಪಾಯವೂ ಹೌದು. ಸಹಕಾರವೇ ಒಂದು ಹೀನಾಯವೋ ಅಪಮಾನವೋಅಥವಾ ನಾವು ಪೋಷಿಸಿಕೊಂಡು ಬಂದ ಧಾರ್ಮಿಕ ಭಾವನೆಗೆ ಅದು ಹಾನಿಯೋ ಆಗಿಬಿಟ್ಟಾಗ, ಅಸಹಕಾರವೇ ಒಂದು ಕರ್ತವ್ಯವಾಗುತ್ತದೆ. ಮುಸ್ಲಿಮರಿಗೆ ಸಾವು–ಬದುಕಿನ ವಿಷಯ ವಾದಂಥಹಕ್ಕುಗಳನ್ನು ಅನ್ಯಾಯವಾಗಿ ಆಕ್ರಮಿಸಿಕೊಂಡಾಗಲೂ ನಾವು ದೀನರಾಗಿ ತಲೆಬಾಗುತ್ತೇವೆಂದು ಇಂಗ್ಲೆಂಡ್ ನಿರೀಕ್ಷಿಸುವುದು ಶಕ್ಯವಿಲ್ಲ. ಆದ್ದರಿಂದ ನಾವು ತುದಿಯಿಂದಲೂ ತೊಡಗಬಹುದು, ತಲದಿಂದಲೂ ತೊಡಗಬಹುದು. ಗೌರವದ ಅಧಿಕಾರಗಳನ್ನೋ ಸಂಭಾವನೆಗಳನ್ನೋ ಹೊಂದಿರುವವರು ಅವುಗಳನ್ನು ತ್ಯಜಿಸತಕ್ಕದ್ದು. ಸರಕಾರದಲ್ಲಿ ಊಳಿಗ ವೃತ್ತಿಗಳಿಗೆ ಸೇರಿದವರೂ ಸಹ ಹಾಗೆಯೇ ಮಾಡತಕ್ಕದ್ದು. ಖಾಸಗಿ ವ್ಯಕ್ತಿಗಳ ಕೈಕೆಳಗಿನ ಸೇವಾವೃತ್ತಿಗೆ ಅಸಹಕಾರ ತತ್ವವು ಅನ್ವಯಿಸುವುದಿಲ್ಲ. ಅಸಹಕಾರವೆಂಬ ಈ ಉಪಾಯವನ್ನು ಅನುಷ್ಠಾನಕ್ಕೆ ತರದೆ ಹೋಗುವವರ ಮೇಲೆ ಬಹಿಷ್ಕಾರದ ಬೆದರಿಕೆ ಹಾಕುವುದನ್ನು ನಾನು ಒಪ್ಪಲಾರೆ. ಜನತೆಯ ಭಾವನೆ ಮತ್ತು ಅತೃಪ್ತಿಗಳಿಗೆ ಒರೆಗಲ್ಲು ಯಾವುದೆಂದರೆ ಸ್ವಯಂಪ್ರೇರಣೆಯಿಂದ ಹಿಂದೆ ಸರಿಯುವುದು. ಸೈನಿಕರಿಗೆ ಸೇವೆ ಸಲ್ಲಿಸಲು ನಿರಾಕರಿಸಿರೆಂದು ಸಲಹೆ ಕೊಡಲು ಕಾಲವಿನ್ನೂ ಪಕ್ವವಾಗಿಲ್ಲ. ಅದು ಕೊನೆಯ ಹೆಜ್ಜೆ, ಮೊದಲನೆಯದಲ್ಲ. ವೈಸ್‌ರಾಯ್, ಭಾರತ ಸಚಿವ (The Secretary of State) ಮತ್ತು ಪ್ರಧಾನಮಂತ್ರಿ ಇವರು ನಮ್ಮ ಕೈ ಬಿಟ್ಟಾಗ ಆ ಕ್ರಮವನ್ನು ಕೈಗೊಳ್ಳುವ ಹಕ್ಕು ನಮಗಿದ್ದೇ ಇದೆ.

ಸಹಕಾರವನ್ನು ಹಿಂತೆಗೆದುಕೊಳ್ಳುವ ಪ್ರತಿಹೆಜ್ಜೆಯನ್ನೂ ಕೂಲಂಕಷವಾಗಿ ಪರ್ಯಾಲೋಚಿಸಿದ್ದ ಮೇಲೆಯೇ ಇಡತಕ್ಕದ್ದು. ಅತ್ಯುಗ್ರ ತಾಪಕ್ಕೆ ಗುರಿಯಾದಾಗಲೂ ಆತ್ಮ ಸಂಯಮವನ್ನು ಉಳಿಸಿಕೊಳ್ಳಬೇಕಾದರೆ ನಾವು ನಿಧಾನವಾಗಿಯೇ ಮುಂದುವರಿಯಬೇಕು".

ಪ್ರತಿಭಟನಾ ದಿನವಾದ ಮಾರ್ಚ್ ೧೯ ಅತ್ಯಂತ ಯಶಸ್ವಿಯಾಗಿ, ಶಾಂತವಾಗಿ ಕಳೆಯಿತು. ಮುಂಬಯಿಯಲ್ಲಿ ನಡೆದ ಖಿಲಾಫತ್ ಸಮ್ಮೇಳನದಲ್ಲಿ ಚಾರಿತ್ರಿಕವಾದ ಠರಾವನ್ನು ಮಂಡಿಸುತ್ತಾ ಗಾಂಧೀಜಿ ಹೇಳಿದರು: "ನಮ್ಮ ಠರಾವನ್ನು ನಾಲ್ಕು ಭಾಗ ಮಾಡಬಹುದು. ಮೊದಲನೆಯ ಭಾಗವು ಒಂದು ಪ್ರತಿಭಟನೆ ಮತ್ತು ಒಂದು ಕೋರಿಕೆ ಇವುಗಳಿಂದ ಕೂಡಿದೆ. ಖಿಲಾಫತ್ ಸಮಸ್ಯೆಗೆ ಸಂಬಂಧಿಸಿದಂತೆ ಇಂಗ್ಲೆಂಡಿನಲ್ಲಿ ಎತ್ತಿಕಟ್ಟಿದ ಅತ್ಯಂತ ಹಿಂಸಾತ್ಮಕವೂ ಬೇಜವಾಬ್ದಾರಿಯುತವೂ ಆದ ಚಳುವಳಿಯ ವಿರುದ್ಧ ಇಲ್ಲಿ ಪ್ರತಿಭಟಿಸಲಾಗಿದೆ. ಮಂತ್ರಿಗಳೂ ಇತರ ರಾಜಕಾರಣ ಪಟುಗಳೂ ಈ ಚಳುವಳಿಯಿಂದ ದೂರವಿರಬೇಕು ಎಂದು ಇಲ್ಲಿ ತೋರಿಸಿಕೊಳ್ಳಲಾಗಿದೆ. ಭಾರತದ ಮುಸ್ಲಿಮರ ನ್ಯಾಯವಾದ ಧಾರ್ಮಿಕ ಭಾವನೆಗಳಿಗೆ ಅನುಗುಣವಾದ ರೀತಿಯಲ್ಲಿ ಗೌರವಯುತವಾದ ತೀರ್ಮಾನಕ್ಕೆ ಬರುವುದರ ಮೂಲಕ ಬ್ರಿಟನ್ನಿನ ಜನತೆಗೆ ಭಾರತದ ವಿಷಯದಲ್ಲಿ ಸೋದರ ಭಾವನೆಯಿದೆಯೆಂದು ಖಚಿತಪಡಿಸಬೇಕು ಎಂದೂ ಇಲ್ಲಿ ಕೋರಿದೆ. ಇದಕ್ಕೆ ವಿರೋಧವಾದ ಪರಿಹಾರವನ್ನು ನೀಡಿದರೆ ಸರಕಾರಕ್ಕೆ ನೀಡುತ್ತಿರುವ ಸಹಕಾರವನ್ನು ಸಂಪೂರ್ಣವಾಗಿ ಹಿಂದೆಗೆದುಕೊಳ್ಳಬೇಕಾಗಬಹುದೆಂದೂ, ಭಾರತೀಯರ ನಿಷ್ಠೆ ಕುಸಿದು ಬೀಳುವಷ್ಟು ಅವರನ್ನು ಪರೀಕ್ಷಿಸಿದಂತಾಗುವುದೆಂದೂ, ಇಂಥ ಹೆಜ್ಜೆಯನ್ನು ದುರದೃಷ್ಟವಶದಿಂದ ಇಡಲೇ ಬೇಕಾದ ಅಗತ್ಯವುಂಟಾದರೆ ತೀರ ಕೋಲಾಹಲವಾಗುವ ಸಂಭವವಿದೆಯೆಂದೂ ಸಂಬಂಧಪಟ್ಟವರನ್ನು ಎರಡನೆಯ ಭಾಗದಲ್ಲಿ ಎಚ್ಚರಿಸಲಾಗಿದೆ. ಮೂರನೆಯ ಭಾಗವು ಜನತೆಯು ಮಾತಿನಲ್ಲೇ ಆಗಲಿ ಕೃತಿಯಲ್ಲೇ ಆಗಲಿ ಹಿಂಸೆಯನ್ನು ಆಚರಿಸಲೇ ಕೂಡದು ಎಂದು ಅತ್ಯಂತ ಒತ್ತಾಯಪೂರ್ವಕವಾಗಿ ಎಚ್ಚರಿಸುತ್ತದೆ. ಯಾವುದೇ ಹಿಂಸಾಚರಣೆಯು ನಮ್ಮ ಪವಿತ್ರವಾದ ಗುರಿಗೆ ಹಾನಿಕರ ಮತ್ತು ಅದು ಪರಿಹಾರವಾಗದಂಥ ಅಪಾಯವನ್ನುಂಟು ಮಾಡುತ್ತದೆ ಎಂಬುದು ಈ ಮಹಾಸಭೆಯ ಅಭಿಪ್ರಾಯ ಎಂದೂ ಅದು ಹೇಳುತ್ತದೆ. ಇಲ್ಲಿಯವರೆಗೂ ಈ ಠರಾವು ಹಿಂದುಗಳು, ಮುಸ್ಲಿಮರು ಮತ್ತು ಯಾರು ಯಾರಿಗೆ ಈ ಮಹಾದೇಶವು ತಾಯಿನಾಡು ಇಲ್ಲವೆ ನೆಲಸುನಾಡಾಗಿದೆಯೋ ಇಂಥವರೆಲ್ಲರಿಗೂ ಸಂಬಂಧಿಸಿದ ಸಂಯುಕ್ತ ವ್ಯವಹಾರ.

"ಈ ಹೋರಾಟ ನಡೆಯುವಾಗ ಅಹಿಂಸಾನೀತಿಯನ್ನೇ ಅನುಸರಿಸಲು ಈ ಸಂಯುಕ್ತ ಚಳವಳಿಗೆ ಅದು ಕಟ್ಟುಪಾಡು ಮಾಡುತ್ತದೆ. ಆದರೆ ಮುಸ್ಲಿಮರಿಗೆ ಕುರಾನು ವಿಧಿಸಿರುವ ಕೆಲವು ವಿಶೇಷ ಕರ್ತವ್ಯಗಳುಂಟು. ಅವುಗಳಲ್ಲಿ ಹಿಂದುಗಳು ಸೇರಿದರೆ ಸೇರಬಹುದು, ಬಿಟ್ಟರೆ ಬಿಡಬಹುದು. ಹಾಗೂ ಅಹಿಂಸೆಗಳು ಒಂದು ವೇಳೆ ವಿಫಲವಾದಲ್ಲಿ ನ್ಯಾಯವನ್ನು ಒತ್ತಾಯದಿಂದ ಪಡೆಯಲು ಮುಸ್ಲಿಮರು ಇಸ್ಲಾಂ ಧರ್ಮಗ್ರಂಥಗಳಲ್ಲಿ

ವಿಧಿಸಿರುವ ಎಲ್ಲ ವಿಧಾನಗಳನ್ನೂ ಅನುಸರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದಾರೆ. ಈ ನಿರ್ಣಯದಲ್ಲಿ ನಾನೂ ಪೃತ್ಪೂರ್ವಕವಾಗಿ ಸೇರಿಕೊಳ್ಳುವ ಸಾಹಸವನ್ನು ಮಾಡು ತ್ತಿದ್ದೇನೆ. ಈ ಠರಾವಿನ ಧ್ವನಿ ಸಂಪೂರ್ಣವಾಗಿ ಗೌರವಪೂರ್ಣವೂ ಅನತಿರೇಕವೂ ಆಗಿದೆಯೆಂದು ನನ್ನ ಭಾವನೆ. ವೇದಿಕೆಯ ಮೇಲೆ ಷಿಯಾಗಳು, ಸುನ್ನಿಗಳು, ಹಿಂದುಗಳು, ಪಾರ್ಸಿಗಳು ಎಲ್ಲರೂ ಕುಳಿತಿರುವುದು ಕಾಣುತ್ತಿದೆ. ಎಲ್ಲರೂ ಒಂದು ಗೌರವಪೂರ್ಣವಾದ ಪ್ರವರ್ತನದಲ್ಲಿ ಕಲೆತು ಒಂದಾಗಿದ್ದಾರೆ. ತಮ್ಮ ಬಟ್ಟೆಯ ಬಜಾರನ್ನೂ ಹಾಗೂ ತಮ್ಮ ಮನೆಗಳನ್ನೂ ಸಹ ಸಂಪೂರ್ಣವಾಗಿ ಮುಚ್ಚಿಬಿಟ್ಟಿರುವುದೇ ಮುಸ್ಲಿಮರ ಕೋರಿಕೆಯ ಬಗೆಗೆ ಅವರ ಸಮ್ಮತಿಯನ್ನು ಘೋಷಿಸುವ ಸಾಕ್ಷ್ಯ. ಲಂಡನ್ನಿನಲ್ಲಿ ಎತ್ತಿಕಟ್ಟಿದ ಅಪವಿತ್ರ ವಾದ ಚಳುವಳಿಯು ಭಾರತದಲ್ಲಿ ಭಾವೋದ್ವೇಗದ ಸ್ಫೋಟವನ್ನೇ ಕೆರಳಿಸಿದೆ. ನ್ಯಾಯವು ಸಲ್ಲುವವರೆಗೂ ಅದಕ್ಕೆ ಅವಸಾನವೇ ಇರುವುದಿಲ್ಲ. ಭರತಖಂಡದ ಬಗೆಗೆ ಬೇಕಾದಷ್ಟು ತಿಳಿವಳಿಕೆ ಹಾಗೂ ಅನುಭವ ಇದ್ದರೂ ಸಹ, ಲಾರ್ಡ್ ಕರ್ಜನ್‌ರವರೂ ಈ ತಿಳಿಗೇಡಿ ಚಳುವಳಿಯೊಡನೆ ಸೇರಿಕೊಂಡಿರುವುದು ವಿಷಾದಕರವಾದ ಆಶ್ಚರ್ಯ.

"ಇಷ್ಟಾದರೂ , ನೆತ್ತಿಯ ಮೇಲೆ ಕವಿದಿರುವ ಮೋಡದ ಅಂಚಿನಲ್ಲಿ ಒಂದು ರಜತರೇಖೆಯೂ ಇದೆ. ಮಾಂಟೆಗೂ ಅವರು ನಮ್ಮ ಪಕ್ಷವರ್ತಿಗಳಾಗಿದ್ದಾರೆ, ಅವರು ನ್ಯಾಯದ ಪಟ್ಟನ್ನು ಬಿಡುವವರಲ್ಲ. ಕಡೆಗೂ ಲಾಯಡ್ ಜಾರ್ಜ್ ಅವರು ತಮ್ಮ ಸ್ಮರಣೀಯ ಘೋಷಣೆಯನ್ನು ಸ್ವಲ್ಪ ಹಿಂದುಮುಂದು ನೋಡುವ ರೀತಿಯಲ್ಲೇ ಆದರೂ—ಪುನಃದೃಢಪಡಿಸಿದ್ದಾರೆ. ಭಾರತ ಸರ್ಕಾರವು ತುಂಬ ದೃಢವಾದ ನಮ್ಮ ಹಕ್ಕನ್ನು ಒತ್ತಾಯಪಡಿಸುತ್ತಿದೆಯೆಂದು ನಾನಂದು ಕೊಂಡಿದ್ದೇನೆ. ಆಂಗ್ಲೋ—ಇಂಡಿಯನ್ ಪತ್ರಿಕೆ ಗಳೂ ನಮಗೆ ವಿರೋಧವಾಗಿಲ್ಲ. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯೂ ಬೆಂಗಾಲ್ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಯೂ ನಮ್ಮ ಗುರಿಯನ್ನು ಸ್ನೇಹಯುತವಾಗಿಯೇ ಸಮರ್ಥಿಸಿವೆ. ಇಂಗ್ಲಿಷರೆಲ್ಲರೂ ಸತ್ಯದ ಧ್ವಜದಡಿಯಲ್ಲಿ ನೆರೆದು ಬ್ರಿಟಿಷರ ಗೌರವವನ್ನೂ ಬ್ರಿಟಿಷ್ ಪ್ರಧಾನಿಯ ಪ್ರಮಾಣ ವಚನವನ್ನೂ ಎತ್ತಿ ಹಿಡಿಯಬೇಕೆಂದು ಈ ನಮ್ಮ ನಿರ್ಣಯವು ಕರೆ ನೀಡುತ್ತಿದೆ. ಬ್ರಿಟಿಷರ ಹಾಗೂ ನಮ್ಮ ನಡುವಣ ಸಂಬಂಧದ ವಿಷಯ ದಲ್ಲಿ ನನ್ನ ನಿಷ್ಠೆಯು ಇನ್ನಾರದಕ್ಕಿಂತಲೂ ಕಡಿಮೆಯೇನೂ ಅಲ್ಲ. ಆದರೂ ಗೌರವವನ್ನೇ ಬೆಲೆಯಾಗಿ ತೆತ್ತು, ನಮ್ಮ ನಾಡಿನ ಬಾಂಧವರಲ್ಲಿ ಒಂದು ವರ್ಗದವರ ರೂಢಮೂಲ ವಾದ ಧಾರ್ಮಿಕ ಭಾವನೆಗಳನ್ನು ಬಲಿಗೊಟ್ಟು ಆ ನಿಷ್ಠೆಯನ್ನು ಕೊಂಡುಕೊಳ್ಳಲು ನಾನು ಒಪ್ಪಲಾರೆ. ತನ್ನ ಆತ್ಮವನ್ನೇ ಮಾರಿಕೊಳ್ಳುವ ನಿಷ್ಠೆಗೂ ಏನೇನೂ ಬೆಲೆಯಿಲ್ಲ. ಕಳೆದ ಯುದ್ಧದಲ್ಲಿ ಭಾರತೀಯ ಸೈನಿಕರು, ಹಿಂದೂ ಮುಸ್ಲಿಂ ಇಬ್ಬರೂ ಸೇವೆಸಲ್ಲಿಸಿ ದರೆಂದು ಒಪ್ಪಿಕೊಂಡೂ ಕೂಡ ಬ್ರಿಟಿಷ್ ರಾಜಕಾರಣಿಗಳು ನೀಡಿದ್ದ ವಚನಗಳನ್ನು ಮುರಿದರೆ, ಭಾರತದ ನಿಷ್ಠೆಯನ್ನು ಪ್ರಚೋದಿಸುವ ಕಾರಣಗಳೇ ಇಲ್ಲದಂತಾಗುತ್ತದೆ. ಆಸೆಯನ್ನು ನಾನು ಕಳೆದುಕೊಳ್ಳುವುದಿಲ್ಲ, ಆದರೂ ಆಶಾಭಂಗವಾಗಿ ಅತ್ಯಂತ ಕೆಡುಕೇ ಆಗುವ ಪಕ್ಷಕ್ಕೆ, ನಮ್ಮ ಈ ಚೆಲುವಾದ ನಾಡಿಗೇನು ಕಾದಿದೆಯೋ ದೇವರೇ ಬಲ್ಲ.

ಇಷ್ಟಂತು ನಮಗೆ ಗೊತ್ತು: ಅನ್ಯಾಯವನ್ನು ಸರಿಪಡಿಸುವವರೆಗೂ, ಎಂಟು ಕೋಟಿ ಮುಸ್ಲಿಮರ ಭಾವನೆಯನ್ನು ಉಚಿತ ರೀತಿ ಗೌರವಿಸುವವರೆಗೂ ಸರಕಾರಕ್ಕಾಗಲಿ, ಜನತೆಗಾಗಲಿ ಶಾಂತಿಯು ಇರುವುದಿಲ್ಲ, ವಿರಾಮವೂ ಇರುವುದಿಲ್ಲ.

"ತಮ್ಮ ದೇಶಬಾಂಧವರಾದ ಮುಸ್ಲಿಮರ ಜೊತೆ ಜೊತೆಯಲ್ಲೇ ಹೆಜ್ಜೆಯಿಟ್ಟು ಮುನ್ನಡೆಯುವುದು ಹಿಂದೂಗಳ ಕರ್ತವ್ಯ ಎನ್ನುವುದೇಕೆಂಬುದಾಗಿ ತೋರಿಸುವ ಅಗತ್ಯವಿಲ್ಲವೆಂದು ನನ್ನ ಭರವಸೆ. ಹಿಂದುಗಳು ಮುಸ್ಲಿಮರು ಇಬ್ಬರನ್ನೂ ಶಾಶ್ವತವಾಗಿ ಬಿಗಿದಿಡಲು–ಇಬ್ಬರ ದಾರಿಯೂ, ಗುರಿಯೂ ಗೌರವಯುತವಾಗಿರುವವರೆಗೂ–ನಾವು ಮುಸ್ಲಿಮರೊಡನೆ ಸಂಪೂರ್ಣವಾಗಿ ಸೇರಿಕೊಳ್ಳುವುದಕ್ಕಿಂತ ಉತ್ತಮವಾದ ಸ್ನೇಹ ಬಂಧನವಾವುದೂ ನನ್ನ ಕಲ್ಪನೆಗೆ ಬರುವುದಿಲ್ಲ. ಇಷ್ಟು ಪವಿತ್ರವಾದ ಒಂದು ಧ್ಯೇಯವಲ್ಲಿ, ಮಾತಿನಲ್ಲೇ ಆಗಲಿ ಕೃತಿಯಲ್ಲೇ ಆಗಲಿ ಹಿಂಸೆ ಎಂಬುದು ಇರಲಾರದು, ಇರಬಾರದು. ನಾವು ಗೆಲ್ಲಬೇಕಾದದ್ದು ದ್ವೇಷದಿಂದಲ್ಲ, ಪ್ರೇಮದಿಂದ. ಅನ್ಯಾಯ ಮಾಡುವವರ ಮೇಲೆ ಪ್ರೇಮ ತಾಳುವುದು ಕಷ್ಟವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಮತಲವಾದ ನೆಲದಲ್ಲಿ ನಡೆದು ಹೋಗುವುದರಲ್ಲಿಲ್ಲ, ದೃಢ ಸಂಕಲ್ಪದಿಂದ, ಎದೆಗುಂದದಂತೆ, ಅಡ್ಡಿ ಆತಂಕಗಳನ್ನು ದಾಟುವುದರಲ್ಲಿ ವಿಜಯ ಇರುವುದು. ಅಲ್ಲದೆ ಹಿಂಸೆಯು ಮಹೋದ್ದೇಶಕ್ಕೆ ಹಾನಿಯನ್ನು ಮಾತ್ರವೇ ಮಾಡಬಲ್ಲುದು. ಅದು ಕೋಲಾಹಲವನ್ನೇನೋ ಎಬ್ಬಿಸಬಹುದು. ಆದರೆ ಕೋಲಾಹಲಗಳ ಪರಂಪರೆಯನ್ನೇ ಎಬ್ಬಿಸಿದರೂ ತನ್ಮೂಲಕ ಗುರಿಯನ್ನೆಂದಿಗೂ ಸಾಧಿಸಲಾರೆವು. ಆದ್ದರಿಂದ ಈ ಠರಾವಿನ ಅಹಿಂಸೆಗೆ ಸಂಬಂಧಿಸಿದ ಕಲಮು ಆತ್ಮ ಸಂಯಮ ಎಷ್ಟು ವಿವೇಕಯುತವೆಂಬುದನ್ನು ನಿರ್ದಿಷ್ಟವಾಗಿ ಪರಿಗಣಿಸಿದೆ. ಇಲ್ಲಿ ಮಾತನಾಡುವವರೆಲ್ಲರಿಗೂ ಸ್ವಚ್ಛಂದದ ಅಥವಾ ಉತ್ಪ್ರೇಕ್ಷೆಯ ಭಾಷಣಗಳನ್ನು ವರ್ಜಿಸಲು ವಿಧಿಸುತ್ತದೆ. ಏಕೆಂದರೆ ಇವೆಲ್ಲ ನಮ್ಮನ್ನು ದಯಾರಹಿತ ದಮನ ಸರಕಾರ ಮತ್ತು ಜನತೆಯ ಅಪಮಾನಗಳಿಗೆ ಮಾತ್ರ ಒಯ್ಯಬಲ್ಲುವು. ಆದರೆ ಮುಸ್ಲಿಮರು ಸಂಪೂರ್ಣವಾಗಿ ಗೌರವಾನ್ವಿತವಾದ ಕ್ರೀಡೆಯಂತೆ ಈ ಹೋರಾಟವನ್ನು ನಡೆಸ ಲಿಚ್ಛಿಸುತ್ತಾರೆ.

"ಏನನ್ನೂ ಮನಸ್ಸಿನಲ್ಲೇ ಇಟ್ಟುಕೊಳ್ಳಲು ಅಥವಾ ಮರೆಮಾಚಲು ಅವರು ಬಯಸುವುದಿಲ್ಲ. ಆದ್ದರಿಂದಲೇ ಅವರಲ್ಲಿ ಕೆಲವರು ಠರಾವಿನಲ್ಲಿ ಒಂದು ಷರತ್ತಿರಬೇಕೆಂದು ಒತ್ತಾಯ ಪಡಿಸಿದ್ದಾರೆ. ಅವರ ಅರ್ಥ ಅಹಿಂಸೆಯು ಸಫಲವಾಗದೆ ಹೋದರೆ, ಕೊರಾನಿನಲ್ಲಿ ವಿಧಿಸಿರುವ ಇತರ ವಿಧಾನಗಳನ್ನು ಅನುಸರಿಸುವ ಸ್ವಾತಂತ್ರ್ಯ ಅವರಿಗೆ ಇರಬೇಕೆಂಬುದು. ಇಲ್ಲವೆ ತಮ್ಮ ಧರ್ಮದ ಮೇಲೆ ಆಕ್ರಮಣ ನಡೆದಾಗ ಅವರು ಆ ದೇಶವನ್ನೇ ಬಿಟ್ಟು ತೊಲಗಬೇಕು, ಇಲ್ಲವೆ ಆಕ್ರಮಣಕಾರನ ಮೇಲೆ ಯುದ್ಧಹೂಡಬೇಕು–ಇವೇ ಕೊರಾನಿನ ಅನುಶಾಸನಗಳು. ಆದ್ದರಿಂದ ಈ ಮಹಾಚಳುವಳಿಯು ದಾಟಲಿರುವ ಘಟ್ಟಗಳನ್ನು ಈ ಠರಾವು ಅತ್ಯಂತ ಗೌರವಯುತವಾದ ಮತ್ತು ಅಷ್ಟೇ ಅಸಂದಿಗ್ಧವಾದ ರೀತಿಯಲ್ಲಿ ಮುನ್ಸೂಚಿಸುತ್ತದೆ. ಕಟ್ಟಕಡೆಯ ಘಟ್ಟ ರಕ್ತಕ್ರಾಂತಿ

ಎಂಬುದನ್ನೂ ಅವರ ಎಲ್ಲ ಘೋರತೆಗಳನ್ನೂ ಅನುಭವಿಸದಂತೆ ದೇವರು ಈ ದೇಶವನ್ನು ರಕ್ಷಿಸಲಿ. ಆದರೆ ಈ ಖಿಲಾಫತ್ ಪ್ರಶ್ನೆಯ ವಿಷಯದಲ್ಲಿ ಉದ್ರೇಕ ಎಷ್ಟು ಏರಿದೆ, ಎಷ್ಟು ಆಳವಾಗಿದೆಯೆಂದರೆ, ಯಾವುದೇ ಅನ್ಯಾಯವಾದ ಪರಿಹಾರವು ಶಾಂತಿಯುತ ವಿಧಾನವೆಲ್ಲ ವಿಫಲಗೊಂಡರೆ, ಈ ದೇಶವನ್ನು ಹಿಂದೆಂದೂ ನಾವು ಕಂಡಿಲ್ಲದಂತಾದ ಕ್ರಾಂತಿಕಾರಕ ಚಳುವಳಿಯಲ್ಲಿ ತಳ್ಳುತ್ತದೆ. ಅಂತಹ ಕ್ರಾಂತಿ ಒದಗಿದರೆ ಅದರ ಹೊಣೆಯೆಲ್ಲ ಇಂಗ್ಲಿಷರದು, ಹಿಂದೂಗಳದ್ದು ಮತ್ತು ಅಂಜುಬುರುಕ ಮುಸ್ಲಿಮರ ಮೇಲೆ ಬೀಳುತ್ತದೆ. ಈ ಆಳವಾದ ಭಾವನೆಯಿರುವುದನ್ನೂ ನ್ಯಾಯವಾದ ಪರಿಹಾರದ ಅಗತ್ಯವನ್ನೂ ಇಂಗ್ಲಿಷರು ಅರಿತು ಮನ್ನಣೆ ನೀಡಿದರೇನೋ ಎಲ್ಲವೂ ಶುಭವಾಗುತ್ತದೆ. ಹಿಂದೂಗಳು ನೆರೆಹೊರೆಯವರ ಕರ್ತವ್ಯವೇನೆಂದರಿತು ಮುಸ್ಲಿಮ ರೊಡನೆ ಸಕ್ರಿಯವಾಗಿ ಸಹಕರಿಸಿದರೆ, ಐಕ್ಯ ಮತ್ತು ಪರಿಪೂರ್ಣವಾದ ಶಾಂತಿಯುತ ಪ್ರಯತ್ನದಿಂದ ನ್ಯಾಯವಾದ ಪರಿಹಾರವು ಸಿಕ್ಕಿಯೇ ತೀರುವಂತೆ ಒತ್ತಾಯ ಮಾಡ ಬಹುದು. ಅಂಜುಕುಳಿ ಮುಸ್ಲಿಮರೂ ಸಹ, ತಮ್ಮ ಇತಿಹಾಸದ ಇಂಥ ವಿಷಮ ಕ್ಷಣ ದಲ್ಲಿ, ತಮ್ಮ ಅಂಜಿಕೆಯನ್ನು ಕಿತ್ತೊಗೆದರೆ ಇಸ್ಲಾಂ ಧ್ವಜದಡಿಯಲ್ಲಿ ಪಲಾಯನಕಾರರಾರೂ ಇಲ್ಲ ಎಂಬುದನ್ನು ಹಿಂಸಾಮಾರ್ಗದ ಪಕ್ಷಕ್ಕೆ ಅರಿವು ಮಾಡಿಕೊಟ್ಟು, ರಕ್ತಪಾತವಾಗ ದಂತೆ ತಡೆಯಬಹುದು. ಅಂತು ಕ್ರಾಂತಿಯೇ ನಮ್ಮ ಪಾಲು ಎಂದಾಗುವ ಪಕ್ಷಕ್ಕೆ, ಪ್ರಾಮಾಣಿಕರೂ ಪುಣ್ಯಾತ್ಮರೂ ಆದ ಮುಸ್ಲಿಮರ ಕಣ್ಣೆದುರಿನಲ್ಲಿ ಎದ್ದು ನಿಂತಿರುವ ಸಂಪೂರ್ಣ ನಿರಾಶೆಯೇ ಹಾಗಾಗಲು ಕಾರಣವಾಗುತ್ತದೆ. ಈ ನಿರಾಶೆಯಿಂದಲೇ, ಇಂಗ್ಲಿಷರು, ಹಿಂದೂಗಳು ಮತ್ತು ತಮ್ಮ ಸಹಧರ್ಮಿಗಳೂ ಸಹ ತಮ್ಮ ಕೈಬಿಟ್ಟ ರೆನಿಸುತ್ತದೆ. ಆದ್ದರಿಂದ ಸಮಸ್ತ ಭಾರತವೂ ಒಗ್ಗೂಡಿ ಆ ಸರ್ವಶಕ್ತನಿಗೆ ಒಂದು ಪ್ರಾರ್ಥನೆ ಸಲ್ಲಿಸುವುದೆಂದೂ, ಅವನಿಗೆ ಇಲ್ಲವೆನ್ನಲಾಗದ ರೀತಿಯಲ್ಲಿ ನ್ಯಾಯಕ್ಕಾಗಿ ಒಕ್ಕೊರಲಿನಿಂದ ಮೊರೆಯಿಡುವುದೆಂದೂ ನಾನು ಆಶಿಸುತ್ತೇನೆ. ಕೊನೆಯದಾಗಿ ಸರಕಾರವೂ ಸಹ ಯಾವ ಕ್ರಾಂತಿಯೂ ಆಗುವ ಮೊದಲೇ ವಿಚಾರಶೂನ್ಯವೂ ರೋಷ ಪೂರ್ಣವೂ ಆದ ದಮನವನ್ನು ಉಪಕ್ರಮಿಸುವುದಿಲ್ಲವೆಂದೂ ನಾನು ಆಶಿಸುವ ಸಾಹಸ ಮಾಡುತ್ತಿದ್ದೇನೆ. ಭಾರತವು ಇನ್ನೂ ಹಸುಗೂಸೇನೂ ಅಲ್ಲ. ಭಾರತೀಯರಿಗೂ ಇಂಥದೇ ಸಂದರ್ಭಗಳಲ್ಲಿ ಇಂಗ್ಲಿಷರನ್ನು ಪ್ರಚೋದಿಸುವ ಭಾವನೆಗಳೇ ಉಂಟು ಎಂಬುದನ್ನು ಅವರು ಅರಿತುಕೊಳ್ಳುತ್ತಾರೆಂದು ನನ್ನ ಆಶೆ".

ಘಟನೆಗಳು ಒಂದರ ಹಿಂದೊಂದು ಮಿಂಚಿನ ವೇಗದಲ್ಲಿ ನಡೆದು ಹೋದುವು. ಪ್ರಖ್ಯಾತರಾದ ವೈದ್ಯರೂ ಜನಪ್ರಿಯ ನಾಯಕರೂ ಆಗಿದ್ದ ಹಕೀಮ್ ಅಜ್ಮಲ್ ಖಾನ್ ಅವರು ಸರಕಾರದ ಬಿರುದು ಬಾವಲಿಗಳನ್ನು ವಿಸರ್ಜಿಸಿದರು: "ಒಬ್ಬ ದೀನ ಮುಸ್ಲಿಮ್ ಆಗಿ ನಾನು ಸರಕಾರವು ನನಗೆ ನೀಡಿರುವ ಎಲ್ಲ ಗೌರವಗಳ ಹೊರೆಯನ್ನೂ ಇಳಿಸಿಕೊಳ್ಳುವ ತೀರ್ಮಾನವನ್ನು ಕೈಗೊಂಡಿದ್ದೇನೆ. ಈ ಮೂಲಕ ಕೈಸರ್–ಇ–ಹಿಂದ್ ಚಿನ್ನದ ಪದಕವನ್ನೂ, ಇಂಗ್ಲೆಂಡ್ ಮತ್ತು ಇಂಡಿಯಾಗಳ ಕಾರೋನೇಷನ್ ದರ್ಬಾರಿನ

ಎರಡು ಬೆಳ್ಳಿಯ ಪದಕಗಳನ್ನೂ ಹಿಂದಿರುಗಿಸುತ್ತಿದ್ದೇನೆ. ಇನ್ನು ಮುಂದೆ ನನಗಿದ್ದ ಹಾನಿಕ್ ಉಲ್‌ಮುಲ್ಕ್ ಬಿರುದನ್ನು ಬಳಸದೆ ವಿಸರ್ಜಿಸುತ್ತಿದ್ದೇನೆ". ಬ್ರಿಟಿಷ್ ಸರಕಾರಕ್ಕೆ ನೀಡಿದ್ದ ಸಹಕಾರವನ್ನು ಹಿಂತೆಗೆದುಕೊಳ್ಳುವುದಕ್ಕೆ ಇದೇ ಮುನ್ನುಡಿಯಾಯಿತು.

ತೀವ್ರವಾದ ಅಶಾಂತಿ ತುಂಬಿದ್ದ ಒಂದು ವಾತಾವರಣದಲ್ಲಿ ಪಂಜಾಬಿನ ದೌರ್ಜನ್ಯ ಗಳನ್ನು ಕುರಿತ ಕಾಂಗ್ರೆಸ್ ವರದಿಯು ಮಾರ್ಚಿ ೨೫ರಂದು ಪ್ರಕಟವಾಯಿತು. ಸಬರಮತಿ ಆಶ್ರಮದಲ್ಲಿ ಏಕಾಂತದಲ್ಲಿದ್ದು ಹದಿನೈದು ದಿನಗಳ ಕಾಲ ಹಗಲುರಾತ್ರಿ ಶ್ರಮಿಸಿ ಗಾಂಧೀಜಿ ಆ ವರದಿಯನ್ನು ಬರೆದರು.

ಒಗ್ಗೂಡಿ ಕಾರ್ಯಾಚರಣೆ ಮಾಡಲು ಕಾಲವು ಪಕ್ವವಾಗಿತ್ತು. ಏಪ್ರಿಲ್ ೬ರಿಂದ ೧೩ರ ವರೆಗಿನ ವಾರವನ್ನು ಅಮೃತಸರದ ಘಟನೆಗಳ ಸ್ಮಾರಕವಾಗಿ ರಾಷ್ಟ್ರೀಯವಾರವಾಗಿ ಆಚರಿಸಲಾಯಿತು. ರೌಲಟ್ ಶಾಸನವನ್ನು ರದ್ದುಗೊಳಿಸಬೇಕು ಎಂಬುದೇ ಏಪ್ರಿಲ್ ೬ರಂದು ಭಾರತಾದ್ಯಂತ ಮಾಡಿದ ಪ್ರಮುಖ ಬೇಡಿಕೆ. ಸುಧಾರಣೆಗಳನ್ನು ಜಾರಿಗೆ ತರುವ ಮುನ್ನವೇ ಆ ಶಾಸನವನ್ನು ರದ್ದುಗೊಳಿಸದಿದ್ದರೆ ಜನತೆಯ ಸಹಕಾರವನ್ನು ನಿರೀಕ್ಷಿಸುವುದು ವ್ಯರ್ಥ ಎಂದೂ, ತಮ್ಮ ಪಾಲಿಗಂತು ಇನ್ನು ಮುಂದೆ ಸಾಮ್ರಾಜ್ಯ ದೊಡನಿರುವುದು ಅಸಾಧ್ಯವಾಗುವಂತಹ ಪರಿಸ್ಥಿತಿಯು ಒದಗಬಹುದೆಂದೂ ಗಾಂಧೀಜಿ ಮುಂಬಯಿಯಲ್ಲಿ ಘೋಷಿಸಿದರು. ಯಾವುದೇ ರಾಷ್ಟ್ರವೂ ಮೀರಿಸಲಾಗದಂಥ ಒಂದು ಸ್ಥಾನಮಾನವನ್ನು ಜಗತ್ತಿನಲ್ಲಿ ನಾವು ಪಡೆಯುವ ಮೊದಲು ನಿರ್ದೋಷಿಗಳಾದ ಸ್ತ್ರೀ ಪುರುಷರ ಕಗ್ಗೊಲೆಯಾಗುವುದನ್ನು ಸಹಸ್ರ ಸಂಖ್ಯೆಯಲ್ಲಲ್ಲ, ಅನೇಕ ಸಹಸ್ರಗಳ ಸಂಖ್ಯೆಯಲ್ಲಿ ಸಮಚಿತ್ತರಾಗಿ ನೋಡಲು ನಾವು ಸಿದ್ಧರಾಗಿರಬೇಕು. ಆದ್ದರಿಂದ ಸಂಬಂಧ ಪಟ್ಟವರೆಲ್ಲರೂ ಎದೆಗೆಡುವ ಬದಲು ಕೆಚ್ಚೆದೆ ತಾಳುವರೆಂದೂ ಗಲ್ಲಿಗೇರುವುದು ದಿನ ನಿತ್ಯದ ಒಂದು ಸಾಧಾರಣ ಘಟನೆಯೆಂದು ಭಾವಿಸುವರೆಂದೂ ನಮ್ಮ ಭರವಸೆ", ಎಂದವರು ಗಂಭೀರವಾಗಿ ಘೋಷಿಸಿದರು.

ತಮ್ಮ ಜನಪ್ರಿಯತೆಯ ಶಿಖರದಲ್ಲಿದ್ದ ತಿಲಕರು ಗಾಂಧೀಜಿಯ ಅಭಿಪ್ರಾಯ ಗಳನ್ನು ಸಂಪೂರ್ಣವಾಗಿ ಒಪ್ಪಲಿಲ್ಲ. ಇಬ್ಬರು ನಾಯಕರೂ ತಾವು ಸಮರ್ಥಿಸುತ್ತಿದ್ದ ರಾಜಕೀಯ ನೀತಿಯನ್ನು ತಮ್ಮ ತಮ್ಮ ಪ್ರಣಾಳಿಕೆಗಳಲ್ಲಿ ಏಪ್ರಿಲ್ ೩ನೇ ವಾರದಲ್ಲಿ ಪ್ರಕಟಿಸಿದರು. ಅಖಿಲ ಭಾರತ ಹೋಂ ರೂಲು ಲೀಗಿನಿಂದ ಶ್ರೀಮತಿ ಬೆಸೆಂಟ್ ದೂರ ಸರಿದಿದ್ದರು. ಆ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನು ಗಾಂಧೀಜಿ ಆಗ ತಾನೆ ಒಪ್ಪಿಕೊಂಡಿದ್ದರು. ಹಾಗೆ ಮಾಡುವಾಗ ಅವರು ಒಂದು ಹೇಳಿಕೆಯನ್ನು ಪ್ರಕಟಿಸಿದರು. ಹೊಸ ಸುಧಾರಣೆ ಗಳಿಗೆ ಸಂಬಂಧಿಸಿದಂತೆ ತಮ್ಮ ನೀತಿಯನ್ನು ನಿರೂಪಿಸಿ ತಿಲಕರೂ ಒಂದು ಪ್ರಣಾಳಿಕೆ ಪ್ರಕಟಿಸಿದ್ದರು. ಗಾಂಧೀಜಿ ಹೇಳಿದರು:

"ಶುದ್ಧಾಂಗವಾಗಿಯೂ ಪ್ರಕಟವಾಗಿಯೂ ರಾಜಕೀಯವಾಗಿರುವ ಒಂದು ಸಂಸ್ಥೆಗೆ ಸೇರುತ್ತಿರುವುದು ನನ್ನ ಬದುಕಿನ ಸಮತೋಲನ ಧಾಟಿಯನ್ನು ಬಿಟ್ಟು ನಿರ್ದಿಷ್ಟವಾದ ಹೊಸ ಪಥ ಹಿಡಿದಂತೆ. ಆದರೆ ಮಿತ್ರರೊಂದಿಗೆ ಎಚ್ಚರಿಕೆಯಿಂದ ವಿಚಾರ ನಡೆಸಿ ನಾನು

ಅಖಿಲ ಭಾರತ ಹೋಂ ರೂಲ್ ಲೀಗನ್ನು ಸೇರಿದ್ದೇನೆ. ಅದರ ಅಧ್ಯಕ್ಷನ ಅಧಿಕಾರವನ್ನು ಒಪ್ಪಿಕೊಂಡಿದ್ದೇನೆ. ನಾನು ಸಮಾಲೋಚಿಸಿದ ಕೆಲವು ಮಿತ್ರರು ನಾನು ಯಾವುದೇ ರಾಜಕೀಯ ಸಂಸ್ಥೆಯನ್ನೂ ಸೇರಕೂಡದು ಎಂದು ಹೇಳಿದರು. ಹಾಗೆ ಸೇರಿದ್ದೇ ಆದರೆ ಈಗ ನನಗಿರುವ ಅದ್ಭುತವಾದ ಪೃಥಕ್ತ್ವದ ಅನುಕೂಲವನ್ನು ಕಳೆದುಕೊಳ್ಳುತ್ತೇನೆ ಎಂದರು. ಈ ಎಚ್ಚರಿಕೆಯಲ್ಲಿ ತಕ್ಕಷ್ಟು ಸತ್ವವಿರುವಂತೆ ತೋರಿತೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದರೊಡನೆಯೇ ಲೀಗು ನನ್ನನ್ನು—ನಾನು ಇರುವಂತೆಯೇ—ಒಪ್ಪಿಕೊಳ್ಳುವ ಪಕ್ಷಕ್ಕೆ ಅಂಥ ಒಂದು ಸಂಸ್ಥೆಯೊಂದಿಗೆ ಸೇರದಿದ್ದರೆ ತಪ್ಪಾಗುತ್ತಿತ್ತು. ಏಕೆಂದರೆ ನಾನು ವಿಶೇಷ ಪರಿಜ್ಞಾನವನ್ನು ಪಡೆದಿದ್ದ ಒಂದು ಧ್ಯೇಯವನ್ನು ಸಾಧಿಸಲು ಆ ಸಂಸ್ಥೆಯನ್ನು ಉಪಯೋಗಿಸಿಕೊಳ್ಳಬಹುದು. ಅಲ್ಲದೆ ಸಾಮಾನ್ಯವಾಗಿ ಸಂಸ್ಥೆಗಳು ಅನುಸರಿಸುವ ವಿಧಾನಗಳಿಗಿಂತ ಉತ್ತಮವೂ, ಬೇಗನೆ ಫಲಕೊಡುವಂತಹವೂ ಆದ ವಿಧಾನಗಳನ್ನು—ಇದನ್ನೂ ನಾನು ಅನುಭವದಿಂದ ಕಂಡುಕೊಂಡಿದ್ದೇನೆ—ಬಳಸಿಕೊಳ್ಳಲೂ ಈ ಸಂಸ್ಥೆಯನ್ನು ಬಳಸಿಕೊಳ್ಳಬಹುದು, ಲೀಗಿಗೆ ಸೇರುವ ಮುನ್ನ ನಾನು ಪ್ರಾಂತ್ಯದ ಹೊರಗಿದ್ದ ಜನರ ಅಭಿಪ್ರಾಯವನ್ನೂ ತಿಳಿಯಲು ಪ್ರಯತ್ನಿಸಿದೆ. ಬೊಂಬಾಯಿ ಪ್ರಾಂತ್ಯದ ನನ್ನ ಸಹವರ್ತಿಗಳೊಂದಿಗೆ ಹೊಂದಿದ್ದಷ್ಟು ನಿಕಟವಾದ ಸಂಬಂಧವನ್ನು ಆ ಜನರೊಂದಿಗೆ ಪಡೆಯುವ ಸುಯೋಗ ಇದಕ್ಕೆ ಮುಂಚೆ ನನಗೆ ದೊರೆತಿರಲಿಲ್ಲ. ನಾನು ಮೇಲೆ ಪ್ರಸ್ತಾಪಿಸಿದ ಧ್ಯೇಯಗಳು ಇವು: ಸ್ವದೇಶಿ, ಹಿಂದೂ–ಮುಸ್ಲಿಂ ಐಕ್ಯ—-ಅದೂ ಖಿಲಾಫತ್ತಿಗೆ ವಿಶೇಷವಾಗಿ ಸಂಬಂಧಿಸಿದಂತೆ—-ರಾಷ್ಟ್ರಭಾಷೆಯಾಗಿ ಹಿಂದೂಸ್ಥಾನಿಯನ್ನು ಒಪ್ಪಿಕೊಳ್ಳುವುದು, ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳ ಪುನರ್ರಚನೆ. ಲೀಗಿನ ಸದಸ್ಯರ ಮನಸ್ಸನ್ನು ಒಲಿಸಿಕೊಳ್ಳಬಲ್ಲೆನಾದರೆ ಈ ಚಟುವಟಿಕೆಗಳಲ್ಲಿ ಲೀಗು ತೊಡಗುವಂತೆ ಮಾಡಬಯಸುತ್ತೇನೆ. ಇದರಿಂದ ರಾಷ್ಟ್ರದ ಕಾಲ ಮತ್ತು ಗಮನದ ಅಧಿಕಾಂಶ ಭಾಗವನ್ನು ಈ ಚಟುವಟಿಕೆಗಳು ಆಕ್ರಮಿಸಿಕೊಳ್ಳಬಲ್ಲವು.

"ರಾಷ್ಟ್ರೀಯ ಪುನರ್ ವ್ಯವಸ್ಥೆಯ ಯಾವುದೇ ಯೋಜನೆಯಲ್ಲೂ ಸುಧಾರಣೆಗಳ ಸ್ಥಾನ ಎರಡನೆಯದು ಎಂಬುದನ್ನು ಧಾರಾಳವಾಗಿ ಒಪ್ಪುತ್ತೇನೆ. ನಾನು ಆರಿಸಿಕೊಂಡಿರುವ ಈ ಚಟುವಟಿಕೆಗಳು, ರಾಷ್ಟ್ರೀಯ ಶಕ್ತಿಯನ್ನು ಉಪಯೋಗಿಸಿಕೊಳ್ಳಬಲ್ಲುವಾದರೆ ಅತ್ಯಂತ ಉತ್ಸಾಹಶೀಲ ತೀವ್ರಗಾಮಿಯೂ ಸಹ ಬಯಸಬಲ್ಲ ಎಲ್ಲ ಸುಧಾರಣೆಗಳನ್ನು ತರಬಲ್ಲವು ಎಂಬುದು ನನ್ನ ಭಾವನೆ. ಪೂರ್ಣವಾದ ಸ್ವಯಮಾಡಳಿತವನ್ನು ತರುವುದು ಅಪೇಕ್ಷಣೀಯ ಎನ್ನುವುದಾದರೆ ನಾನು ಸೂಚಿಸಿರುವ ಚಟುವಟಿಕೆಗಳನ್ನು ಬೆಳಸಿಕೊಳ್ಳುವುದರಿಂದ ಅದರ ಬರುವಿಕೆಯನ್ನು ಚುರುಕುಗೊಳಿಸಬಹುದು. ರಾಷ್ಟ್ರೀಯ ಕಾರ್ಯಕ್ರಮದಲ್ಲಿ ನನ್ನ ಪ್ರಕಾರ ಅವಕ್ಕೆ ಅಗ್ರಸ್ಥಾನ. ಅಖಿಲ ಭಾರತ ಹೋಂ ರೂಲ್ ಲೀಗನ್ನು ಆ ಪದದ ಯಾವುದೇ ಅರ್ಥದಲ್ಲೂ ಒಂದು ಪಕ್ಷೀಯ ಸಂಸ್ಥೆಯಾಗಿ ನಾನು ಭಾವಿಸುವುದಿಲ್ಲ. ಯಾವುದೇ ಪಕ್ಷಕ್ಕೂ ನಾನು ಸೇರಿದವನಲ್ಲ. ಮುಂದಾದರೂ ಯಾವುದೇ ಪಕ್ಷಕ್ಕೂ ಸೇರುವ ಬಯಕೆಯೂ ನನಗಿಲ್ಲ. ಲೀಗಿನ ಅಂಗ

ರಚನೆಯ ಪ್ರಕಾರ ಅದು ಕಾಂಗ್ರೆಸ್ಸಿಗೆ ನೆರವು ನೀಡಬೇಕು. ಆದರೆ ಕಾಂಗ್ರೆಸ್ಸನ್ನು ಒಂದು ಪಕ್ಷೀಯ ಸಂಸ್ಥೆ ಎಂದು ನಾನು ಭಾವಿಸಿಲ್ಲ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಎಲ್ಲ ಪಕ್ಷಗಳೂ ಇವೆ. ಕಾಲದಿಂದ ಕಾಲಕ್ಕೆ ಯಾವುದಾದರೂ ಒಂದು ಪಕ್ಷದ ಕೈ ಮೇಲಾಗಿರುತ್ತದೆ. ಆದರೂ ಅದು ಯಾವುದೇ ಒಂದು ಪಕ್ಷದ ಸಂಸ್ಥೆಯಲ್ಲ. ಹಾಗೆಯೇ ಇದೂ. ಕಾಂಗ್ರೆಸ್ಸು ಒಂದು ರಾಷ್ಟ್ರೀಯ ಸಂಸ್ಥೆ, ಅದರ ನೀತಿಯನ್ನು ರೂಪಿಸುವ ದೃಷ್ಟಿಯಿಂದ ಎಲ್ಲ ಪಕ್ಷಗಳಿಗೂ ದೇಶಕ್ಕೆ ವನವಿ ಂಸಲ್ಲಿಸಲು ಅಗತ್ಯವಾದ ವೇದಿಕೆಯನ್ನು ಒದಗಿಸುತ್ತದೆಂದು ಎಲ್ಲ ಪಕ್ಷಗಳೂ ಭಾವಿಸುತ್ತವೆ ಎಂದು ಆಶಿಸುವ ಸಾಹಸ ಮಾಡುತ್ತಿದ್ದೇನೆ. ಕಾಂಗ್ರೆಸ್ ತನ್ನ ಪಕ್ಷರಹಿತ ರಾಷ್ಟ್ರೀಯ ಸ್ವರೂಪವನ್ನು ಉಳಿಸಿಕೊಳ್ಳುವಂತೆ ನಾನು ಲೀಗಿನ ನೀತಿಯನ್ನು ರೂಪಿಸಲು ಪ್ರಯತ್ನಿಸುತ್ತೇನೆ.

"ಇನ್ನು ನನ್ನ ವಿಧಾನಗಳು ರಾಷ್ಟ್ರದ ರಾಜಕೀಯಜೀವನಕ್ಕೆ ಸ್ವಲ್ಪವಾದರೂ ಸತ್ಯವನ್ನೂ ಪ್ರಾಮಾಣಿಕತೆಯನ್ನು ಸ್ವಲ್ಪವೂ ಪಟ್ಟುಬಿಡದೇ ಚ್ಯುತಿಮಾಡದೆ ತರುವುದು ಸಾಧ್ಯ ಎಂಬುದು ನನ್ನ ನಂಬಿಕೆ. ಸವಿನಯ ಕಾನೂನು ಭಂಗದ ನನ್ನ ವಿಧಾನಗಳನ್ನು ಲೀಗು ಅನುಸರಿಸಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಆದರೆ ನಮ್ಮ ಸಮಸ್ತ ರಾಷ್ಟ್ರೀಯ ಚಟುವಟಿಕೆಗಳೆಲ್ಲವೂ ಸತ್ಯ ಅಹಿಂಸೆಗಳನ್ನು ಒಪ್ಪಿಕೊಳ್ಳುವಂತೆ ಮಾಡಲು ನನ್ನ ನರನರವನ್ನೂ ದುಡಿಸಬಯಸುತ್ತೇನೆ. ಸರ್ಕಾರಕ್ಕೂ ಅದರ ಕ್ರಮಗಳಿಗೂ ಅಂಜುವುದು ಅವನ್ನು ಶಂಕಿಸುವುದೂ ಆಗಲೀಗ ತಪ್ಪುತ್ತದೆ. ಈ ವಿಷಯವನ್ನು ಇನ್ನು ಲಂಬಿಸುವುದು ನನಗೆ ಇಷ್ಟವಿಲ್ಲ. ಆದರೆ ಇಲ್ಲಿ ನಾನು ಮಾಡಿರುವ ಸಾಹಸದ ಹೇಳಿಕೆಯಿಂದ ಉದ್ಭವಿಸುವ ಅನೇಕ ಪ್ರಶ್ನೆಗಳನ್ನು ಪರಿಹರಿಸಲು ಕಾಲಕ್ಕೇ ಬಿಡಬೇಕೆಂದು ನನಗೆನಿಸುತ್ತದೆ. ಇದೀಗ ನನ್ನ ಉದ್ದೇಶ ನಾನು ಕೈಗೊಂಡ ಕ್ರಮದ ಔಚಿತ್ಯವನ್ನಾಗಲಿ, ಇಲ್ಲಿ ನಿರ್ದೇಶಿಸಿರುವ ನೀತಿಯ ಸತ್ಯವನ್ನಾಗಲಿ ತೋರಿಸಿಕೊಡುವುದಲ್ಲ. ಲೀಗಿನ ಸದಸ್ಯರ ವಿಶ್ವಾಸವನ್ನು ಗಳಿಸಿಕೊಂಡು ಅಲ್ಲಿನ ಕಾರ್ಯಕ್ರಮದ ಬಗ್ಗೆ ಅವರ ಟೀಕೆಯನ್ನೂ ಲೀಗಿನ ಪ್ರಗತಿ ಯೋಗಕ್ಷೇಮಗಳಿಗಾಗಿ ಅವರು ನೀಡಬಹುದಾದ ಯಾವುದೇ ಸಲಹೆಯನ್ನೂ ಕೋರುವುದು."

ತಿಲಕರ ಪ್ರಣಾಳಿಕೆಯಲ್ಲಿ ನಿರೂಪಿತವಾಗಿದ್ದಂತೆ ಅವರ ಕಾರ್ಯ ಕ್ರಮ ಇದು:

"ಕಾಂಗ್ರೆಸ್ ಡಿಮಾಕ್ರಟಿಕ್ (ಪ್ರಜಾಪ್ರಭುತ್ವ) ಪಕ್ಷವು ಅದರ ಹೆಸರೇ ಸೂಚಿಸುವಂತೆ, ಕಾಂಗ್ರೆಸ್ಸಿಗೆ ಅಚಲವಾದ ನಿಷ್ಠೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಈ ಭಾವನೆಗಳಿಂದ ಚೇತನಗೊಂಡಿರುವ ಸಂಸ್ಥೆ. ಭಾರತೀಯ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವ ಶಕ್ತಿ ಪ್ರಜಾಪ್ರಭುತ್ವದ ಸಿದ್ಧಾಂತಗಳಿಗುಂಟು ಎಂಬುದು ಅದರ ನಂಬಿಕೆ. ವಿದ್ಯಾಭ್ಯಾಸದ ಮತ್ತು ರಾಜಕೀಯ ಮತದಾನದ ಹಕ್ಕಿನ ವಿಸ್ತರಣಗಳು ತನ್ನ ಅತ್ಯುತ್ತಮ ಆಯುಧಗಳಲ್ಲೆರಡು ಎಂಬುದೂ ಅದರ ಭಾವನೆ. ಜಾತಿ ಅಥವಾ ರೂಢಿಯ ಆಧಾರದ ಮೇಲೆ ನಿಂತಿರುವ ಎಲ್ಲ ಬಗೆಯ ನಾಗರಿಕ, ಲೌಕಿಕ ಮತ್ತು ಸಾಮಾಜಿಕ ದೌರ್ಬಲ್ಯಗಳನ್ನೂ ಹೋಗಲಾಡಿಸಬೇಕೆಂದು ಅದು ವಾದಿಸುತ್ತದೆ. ಧಾರ್ಮಿಕ ಸಹಿಷ್ಣುತೆ, ತನ್ನ ಧರ್ಮ

ತನಗೆ ಪವಿತ್ರ ಎಂಬ ಪ್ರತಿ ವ್ಯಕ್ತಿಯ ನಂಬಿಕೆ, ಆಕ್ರಮಣದ ವಿರುದ್ಧ ಅದನ್ನು ರಕ್ಷಿಸುವ ಹಕ್ಕು ಹಾಗೂ ಕರ್ತವ್ಯ ಸರ್ಕಾರಕ್ಕುಟೆಂಬ ಭಾವನೆ ಈ ಎಲ್ಲದರಲ್ಲೂ ಈ ಪಕ್ಷಕ್ಕೆ ನಂಬಿಕೆಯುಂಟು. ಮುಸ್ಲಿಂ ಸಿದ್ಧಾಂತಗಳು, ನಂಬಿಕೆಗಳು ಮತ್ತು ಕೊರಾನಿನ ಸೂತ್ರಗಳ ಪ್ರಕಾರ ಖಿಲಾಫತ್ ಪ್ರಶ್ನೆಯನ್ನು ಪರಿಹರಿಸಬೇಕು ಎಂಬ ಮುಸ್ಲಿಮರ ಬೇಡಿಕೆಯನ್ನು ಈ ಪಕ್ಷವು ಬೆಂಬಲಿಸುತ್ತದೆ."

"ಮಾನವತೆಯ ಮತ್ತು ಮಾನವ ಸಹೋದರತೆಯ ಧ್ಯೇಯದ ಏಳಿಗೆಗಾಗಿ ಭಾರತವು ಬ್ರಿಟಿಷ್ ಕಾಮನ್‌ವೆಲ್ತಿನ ಅಂಗಭೂತ ಭಾಗವಾಗಿರಬೇಕು ಎಂಬುದು ಈ ಪಕ್ಷದ ನಂಬಿಕೆ. ಆದರೆ ಭಾರತಕ್ಕೆ ಸ್ವಾಯತ್ತತೆ ಇರಬೇಕು, ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಪಾಲುಗೊಂಡಿರುವ ಬ್ರಿಟನ್ನೂ ಸೇರಿದಂತೆ ಇತರ ಸೋದರೀ ರಾಷ್ಟ್ರಗಳೊಂದಿಗೆ ಸಮಾನಸ್ಥಾನ ಇದಕ್ಕಿರಬೇಕು ಎಂಬುದು ಇದರ ಕೋರಿಕೆ. ಕಾಮನ್‌ವೆಲ್ತಿನಾದ್ಯಂತ ಭಾರತೀಯರಿಗೆ ಸಮಾನವಾದ ಪೌರತ್ವ ಇರಬೇಕು, ಅದನ್ನೆಲ್ಲಿ ನಿರಾಕರಿಸಲಾಗುವುದೋ ಅಲ್ಲಿ, ಆಗ, ಫಲಕಾರಿಯಾದ ಪ್ರತೀಕಾರವಾಗಬೇಕು ಎಂದು ಇದು ಒತ್ತಾಯ ಪಡಿಸುತ್ತದೆ. ವಿಶ್ವಶಾಂತಿ ರಾಷ್ಟ್ರಗಳ ಸಮಗ್ರತೆ, ರಾಷ್ಟ್ರಗಳು ಮತ್ತು ರಾಷ್ಟ್ರೀಯತೆಗಳ ಸ್ವಾತಂತ್ರ್ಯ ಹಾಗೂ ಗೌರವ ಇವುಗಳನ್ನು ಯಶಸ್ವಿಯಾಗಿ ಸಾಧಿಸುವ ಹಾಗೂ ಬಲಗೊಳಿಸುವ. ಒಂದು ರಾಷ್ಟ್ರ ಮತ್ತೊಂದನ್ನು ದುರುಪಯೋಗ ಮಾಡಿಕೊಳ್ಳುವುದನ್ನು ಕೊನೆಗಾಣಿಸುವ ಸಾಧನ ಎಂದು ಲೀಗ್ ಆಫ್ ನೇಷನ್ಸ್‌ನ್ನು ಈ ಪಕ್ಷವು ಸ್ವಾಗತಿಸುತ್ತದೆ."

ಟರ್ಕಿಯ ಮೇಲೆ ಹೇರ ಬಯಸಿದ್ದ ಅನ್ಯಾಯದ ಷರತ್ತುಗಳ ವಿಷಯವಾಗಲಿ, ಪಂಜಾಬಿನಲ್ಲಿ ಎಸಗಿದ್ದ ಅಮಾನುಷ ದೌರ್ಜನ್ಯಗಳ ವಿಷಯವಾಗಲಿ ತಿಲಕರಿಗೆ ತಿಳಿದಿರಲಿಲ್ಲ ಎಂದಲ್ಲ. ಆದರೂ ಈ ಘಟನೆಗಳು ಉಕ್ಕಿಸಿದ್ದ ಎಲ್ಲ ಶಕ್ತಿಯನೂ ಹೀರಿಕೊಂಡು ಅದನ್ನು ಸುಧಾರಣಾ ಶಾಸನವು ತೆರೆದಿದ್ದ ದಾರಿಯಲ್ಲಿ ಹರಿಸುವುದು ಅವರ ಇಷ್ಟವಾಗಿತ್ತು. ಸುಧಾರಣೆಗಳನ್ನು ಅನ್ವಯಿಸುವುದರಲ್ಲಿ, ಮೊದಲಿಗೆ, ನೆರವು ನೀಡಬೇಕೆಂದಿದ್ದ ಗಾಂಧೀಜಿ, ಪಂಜಾಬ್ ಮತ್ತು ಖಿಲಾಫತ್ ಪ್ರಶ್ನೆಗಳನ್ನು ಸಮರ್ಪಕವಾಗಿ ಬಗೆಹರಿಸದೆ ಇಟ್ಟಿರುವವರೆಗೂ ಹಾಗೆ ನೆರವು ನೀಡುವುದು ತಮ್ಮ ನೈತಿಕ ಪ್ರಜ್ಞೆಗೆ ಎಷ್ಟು ವಿರೋಧಿ ಎಂಬುದನ್ನು ಕಂಡುಕೊಂಡರು. ಆದ್ದರಿಂದ ಕೌನ್ಸಿಲ್ ಪ್ರವೇಶದತ್ತ ರಾಷ್ಟ್ರದ ಗಮನವನ್ನು ಕೇಂದ್ರೀಕರಿಸಲು ತಿಲಕರು ಒಂದು ಕಡೆ ಪ್ರಯತ್ನಿಸಿದರೆ, ಇನ್ನೊಂದು ಕಡೆ ಗಾಂಧೀಜಿ ಸುಧಾರಣೆಗಳ ವಿಷಯದಲ್ಲಿ ಹೆಚ್ಚು ಹೆಚ್ಚು ಉಪೇಕ್ಷೆ ತಾಳಿದರು, ಖಿಲಾಫತ್ ಮತ್ತು ಪಂಜಾಬೀ ಪ್ರಶ್ನೆಗಳು ಪರಿಹಾರವಾಗುವವರೆಗೂ ಅವರಿಗೆ ಶಾಂತಿಯೇ ಇಲ್ಲವಾಯಿತು.

ಟರ್ಕಿಯ ಪರೀಕ್ಷೆಯ ಗಳಿಗೆ ನಿಧಾನವಾಗಿ ಹತ್ತಿರ ಬರುತ್ತಿತ್ತು. ಚಳುವಳಿಯನ್ನು ಯಾವಾಗ ತೊಡಗಬೇಕು ಎಂಬುದೇ ಆಗಿನ ಪ್ರಶ್ನೆ. ತಕ್ಷಣವೇ? ಅಥವಾ ಶಾಂತಿ ನಿಯಮಗಳನ್ನು ಅಧಿಕೃತವಾಗಿ ಪ್ರಕಟಿಸಿದ ಮೇಲೆಯೆ? ಅಖಿಲ ಭಾರತ ಖಿಲಾಫತ್ ಸಮಿತಿಯು ನೇಮಿಸಿದ್ದ ಉಪಸಮಿತಿಯಲ್ಲಿ ಗಾಂಧೀಜಿ, ಷೌಕತ್ ಅಲಿ ಮತ್ತು ಆಜಾದರು

ಸದಸ್ಯರಾಗಿದ್ದರಷ್ಟೆ. ಅದು ಅಧಿಕೃತ ಘೋಷಣೆಯ ವರೆಗೂ ಕಾಯೋಣ ಎಂದು ಒಮ್ಮತದಿಂದ ನಿರ್ಣಯಿಸಿತು.

ಮಿತ್ರರಾಷ್ಟ್ರಗಳು ಟರ್ಕಿಯ ಮುಂದಿಟ್ಟ ಶಾಂತಿ ಷರತ್ತುಗಳನ್ನು ಭಾರತ ಸರ್ಕಾರದ ವಿಶೇಷ ಗೆಜೆಟ್ಟು ಮೇ ೧೪ರಂದು ಪ್ರಕಟಿಸಿತು. ಆ ಷರತ್ತುಗಳು ಭಾರತದ ಮುಸ್ಲಿಮರಿಗೆ ನೋವನ್ನು ಉಂಟು ಮಾಡುವಂಥವು ಎಂಬುದನ್ನು ವೈಸರಾಯ್ ಪರಿಗಣಿಸಿದರು, ಆದರೂ ತಮ್ಮ ತುರ್ಕೀ ಸಹಧರ್ಮಿಗಳಿಗೆ ಒದಗಿರುವ ದೌರ್ಭಾಗ್ಯಗಳನ್ನು ಅವರು ಶಾಂತಿಯಿಂದ ಸಹಿಸಿಕೊಳ್ಳುವಷ್ಟು ವಿರಕ್ತರಾಗಬೇಕೆಂದು ಕೇಳಿಕೊಂಡರು. ಸೂಚಿಸಿದ್ದ ಶಾಂತಿ ಷರತ್ತುಗಳ ಪ್ರಕಟಣೆಯು ಅಗಾಧವಾದ ಆಗ್ರಹವನ್ನು ಕೆರಳಿಸಿತು. ಅಲ್ಲದೆ ಎಲ್ಲ ರೀತಿಯಲ್ಲೂ 'ಸುಣ್ಣ ಬಳಿಯುವ ವರದಿ ಎಂದು ಜನ ಭಾವಿಸಿದ ಹಂಟರ್ ಸಮಿತಿಯ ವರದಿಯೂ ಅದೇ ಕಾಲಕ್ಕೆ ಪ್ರಕಟವಾಗಿದದ್ದು. ಭಾರತಾದ್ಯಂತ ತೀವ್ರವಾದ ಅಸಮಾಧಾನದ ಹೊಗೆ ಎಬ್ಬಿಸಿತು.

ಗಾಂಧೀಜಿಯ ಅಸಹಕಾರ ಕಾರ್ಯಕ್ರಮವನ್ನು ಚರ್ಚಿಸಲು ಅಖಿಲ ಭಾರತ ಖಿಲಾಫತ್ ಸಮಿತಿಯು ಬೊಂಬಾಯಿಯಲ್ಲಿ ಸೇರಿತು. ಮುಸ್ಲಿಮರಿಗೆ ಉಳಿದಿರುವ ಏಕೈಕ ಮಾರ್ಗವೆಂದು ಅದನ್ನು ಮೇ ೨೮ರಂದು ಅನುಮೋದಿಸಿತು.

ಮೇ ೩೦ರಂದು ಕಾಶಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಖಿಲಾಫತ್ ಬೇಡಿಕೆಯೊಂದಿಗೆ ಪಂಜಾಬಿನ ದೌರ್ಜನ್ಯಗಳೂ, ಸುಧಾರಣಾ ಶಾಸನದಲ್ಲಿ ಎದ್ದು ಕಾಣುವ ಅರೆಕೊರೆಗಳೂ ಸೇರಿಕೊಂಡುವು. ಟರ್ಕಿಯ ಶಾಂತಿ ಕೌಲನ್ನೂ, ಹಂಟರ್ ಸಮಿತಿಯ ವರದಿಯಲ್ಲಿ ಸೂಚಿತವಾಗಿದ್ದಂತೆ ಪಂಜಾಬಿನ ವಿಷಯದಲ್ಲಿ ಸರ್ಕಾರ ಕೈಗೊಂಡಿದ್ದ ನಿರ್ಧಾರವನ್ನು ಪ್ರತಿಭಟಿಸಲು ಇನ್ನು ಸ್ವಲ್ಪವೂ ತಡಮಾಡದೆ ದೇಶವು ಅಸಹಕಾರದಲ್ಲಿ ತೊಡಗುವಂತೆ ಕಾಂಗ್ರೆಸ್ಸು ಶಿಫಾರ್ಸು ಮಾಡಬೇಕು ಎಂದು ಗಾಂಧೀಜಿ ಸೂಚಿಸಿದರು.

ಸುಧಾರಣಾ ಯೋಜನೆಗೆ ಸಂಬಂಧಿಸಿದಂತೆ ಅಮೃತಸರದ ಕಾಂಗ್ರೆಸ್ಸು ಅನುಮೋದಿಸಿದ್ದ ನಿರ್ಣಯಕ್ಕೆ ಇದು ವಿರೋಧವಾಗಿದ್ದುದದರಿಂದ ಅದನ್ನು ಒಪ್ಪಿಕೊಳ್ಳುವುದು ತನ್ನ ಸಾಮರ್ಥ್ಯಕ್ಕೆ ಮೀರಿದ್ದು ಎಂದು ಎ.ಐ.ಸಿ.ಸಿ. ಭಾವಿಸಿತು. ಇದರೊಡನೆಯೇ ಈ ವಿಷಯವನ್ನು ಕುರಿತು ದೇಶವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವನ್ನೇ ನೀಡದೆ ಅದನ್ನು ಕೈಬಿಡುವುದು ಸರಿಯಲ್ಲ ಎಂದೂ ಭಾವಿಸಿತು. ಗಾಂಧೀಜಿಯವರ ಯೋಜನೆಯನ್ನು ಪರಿಶೀಲಿಸಲು ವರ್ಷದ ಉತ್ತರ ಭಾಗದಲ್ಲಿ ಕಲ್ಕತ್ತೆಯಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ನಡೆಸಬೇಕೆಂದು ಸರ್ವಾನುಮತದಿಂದ ಅದು ಅಂಗೀಕರಿಸಿತು.

ಎ.ಐ.ಸಿ.ಸಿ. ಅಧಿವೇಶನಕ್ಕೆ ತಿಲಕರು ಹೋಗಲಿಲ್ಲ. ಆದರೆ ಕಾಂಗ್ರೆಸ್ಸಿನ ತೀರ್ಮಾನವನ್ನು ತಾವು ಪರಿಪಾಲಿಸುವುದಾಗಿ ಹೇಳಿದರು. ಗಾಂಧೀಜಿಯ ಪ್ರಕಾರ. ಅಸಹಕಾರ ಹೋರಾಟದ ಬಗೆಗೆ ತಿಲಕರ ಮನೋಭಾವ ಇದು: "ಕಾರ್ಯಕ್ರಮವೇನೋ ನನಗೆ ತಕ್ಕಷ್ಟು ಇಷ್ಟವಾದದ್ದೇ. ಆದರೆ ಅಸಹಕಾರವು ಜನತೆಯ ಮುಂದಿಡುವ ಸ್ವಾರ್ಥ

ತ್ಯಾಗದ ನೀತಿಯ ವಿಷಯದಲ್ಲಿ ಅವರು ನಮ್ಮೊಡನಿದ್ದಾರೆಯೆ ಎಂಬುದು ನನಗೆ ತೀರ ಸಂದೇಹ. ಅಸಹಕಾರ ಚಳುವಳಿಯ ಮುನ್ನಡೆಯನ್ನು ತಡೆಯಲು ಏನನ್ನೂ ನಾನು ಮಾಡುವುದಿಲ್ಲ. ನಿಮಗೆ ಎಲ್ಲ ಯಶಸ್ಸನ್ನು ಕೋರುತ್ತೇನೆ. ಜನ ನಿಮಗೆ ಕಿವಿಗೊಡುವ ಪಕ್ಷಕ್ಕೆ ಉತ್ಸಾಹದಿಂದ ನಾನೂ ನಿಮ್ಮ ಬೆಂಬಲಿಗನಾಗುವುದು ಖಂಡಿತ."

ಜೂನ್ ೧ರಂದು ಅಲಹಾಬಾದಿನಲ್ಲಿ ಮುನ್ನೂರು ಜನ ಪ್ರಭಾವೀ ಪ್ರತಿನಿಧಿಗಳಿಂದ ಕೂಡಿದ ಸಂಯುಕ್ತ ಹಿಂದೂ–ಮುಸ್ಲಿಂ ಅಧಿವೇಶನವು ಸಮಾವೇಶಗೊಂಡಿತು. ಶ್ರೀಮತಿ ಬೆಸೆಂಟ್, ಪಂಡಿತ ಮಾಳವೀಯರು, ಸರ್ ತೇಜ್ ಬಹದ್ದೂರ್ ಸಪ್ರು, ಮೋತಿಲಾಲ್ ನೆಹರೂ ಮತ್ತಿತರರು ಸಭೆಯಲ್ಲಿ ಹಾಜರಿದ್ದರು. ಅಸಹಕಾರ ನೀತಿಯನ್ನು ಹಾಜರಿದ್ದ ಮುಸ್ಲಿಮರು ಒಪ್ಪದಿರುವಂತೆ ಮಾಡಲು ಶ್ರೀಮತಿ ಬೆಸೆಂಟ್ ಮತ್ತು ಸಪ್ರು ಪ್ರಯತ್ನಿಸಿದರು. ಮಾತನಾಡಿದ ಇತರರು ಯಾವುದಕ್ಕೂ ಕಟ್ಟು ಬೀಳದಂಥ ಭಾಷಣಗಳನ್ನು (ಸ್ವಾಭಿಪ್ರಾಯಗಳನ್ನು ತೋರಗೊಡದ ಭಾಷಣಗಳನ್ನು) ಮಾಡಿದರು. ತತ್ವಶಃ ಅಸಹಕಾರವನ್ನು ಅವರೆಲ್ಲ ಅನುಮೋದಿಸಿದರೂ ಅಲ್ಲಿದ್ದ ಹಿಂದೂಗಳು ಅದರಲ್ಲಿ ಅನೇಕ ವ್ಯಾವಹಾರಿಕ ತೊಂದರೆಗಳನ್ನು ಕಂಡರು. ಅಲ್ಲದೆ ಮುಸ್ಲಿಮರು ಭಾರತಕ್ಕೆ ಆಫ್ಘನ್ ದಾಳಿಯನ್ನು ಆಹ್ವಾನಿಸುವುದರಿಂದ ಹುಟ್ಟುವ ತೊಡಕುಗಳಿಗೆ ಅಂಜಿದರು. ಭಾರತವನ್ನು ಆಕ್ರಮಿಸುವ ಉದ್ದೇಶದಿಂದ ಕೂಡಿದ ಯಾವುದೇ ವಿದೇಶೀಯ ದಾಳಿಯನ್ನು ಎದುರಿಸಿ ಕೊನೆಯ ಆಳು ಬದುಕಿರುವವರೆಗೂ ಹೋರಾಡುತ್ತೇವೆಂದು ಮುಸ್ಲಿಂ ಭಾಷಣಕಾರರು ಪೂರ್ಣವಾಗಿಯೂ ಬಿಚ್ಚು ಮನಸ್ಸಿನಿಂದಲೂ ಭರವಸೆ ನೀಡಿದರು. ಆದರೆ ಅವರು, ಇಸ್ಲಾಮಿನ ಗೌರವವನ್ನು ಎತ್ತಿ ಹಿಡಿಯುವ ಹಾಗೂ ನ್ಯಾಯವನ್ನು ಪ್ರತಿಪಾದಿಸುವ ಉದ್ದೇಶದಿಂದ ಕೂಡಿದ ಯಾವುದೇ ಹೊರಗಿನ ದಾಳಿಗೆ ಕಾರ್ಯತಃ ಬೆಂಬಲವಲ್ಲದಿದ್ದರೂ ಸಹಾನುಭೂತಿಯನ್ನಾದರೂ ತೋರುವುದಾಗಿ ಬಿಚ್ಚು ಮನಸ್ಸಿನಿಂದ ಖಚಿತಗೊಳಿಸಿದರು.

ಯಾವುದೇ ನಿರ್ದಿಷ್ಟ ನಿರ್ಣಯಕ್ಕೂ ಬರದೆ ಸಮ್ಮೇಳನವು ಚದುರಿತು. ಆದರೂ ತಮ್ಮ ಯೋಜನೆಯ ಪಕ್ಷ ಪ್ರತಿಪಕ್ಷಗಳ ಬಲಾಬಲವೆಷ್ಟು ಎಂಬುದನ್ನು ಅಂದಾಜು ಮಾಡಲು ಗಾಂಧೀಜಿಗೆ ಇದರಿಂದ ಅನುಕೂಲವಾಯಿತು. ಆದರೆ ಕಾಂಗ್ರೆಸ್ಸು ತನ್ನ ನಿರ್ಣಯವನ್ನು ಪ್ರಕಟಿಸುವವರೆಗೂ ಕಾಯಲು ಅವರಿಗೆ ಸಾಧ್ಯವಿರಲಿಲ್ಲ.

ಜೂನ್ ೯ರಂದು ಖಿಲಾಫತ್ ಸಮಿತಿಯು ಅಲಹಾಬಾದಿನಲ್ಲಿ ಸೇರಿ, ಅಸಹಕಾರದ ತತ್ವವನ್ನು ಒಮ್ಮತದಿಂದ ಪುನರುಚ್ಚರಿಸಿತು. ಕಟ್ಟುನಿಟ್ಟಾದ ಕಾರ್ಯಕ್ರಮವೊಂದನ್ನು ರೂಪಿಸಿ ಆಚರಣೆಗೆ ತರಲು ಒಂದು ಕಾರ್ಯ ನಿರ್ವಾಹಕ ಸಮಿತಿಯೂ ನೇಮಕವಾಯಿತು. ವೈಸರಾಯರಿಗೆ ಒಂದು ತಿಂಗಳ ಮುನ್ಸೂಚನೆ ಕೊಟ್ಟ ಬಳಿಕ ಗಾಂಧೀಜಿಯವರ ನಿರ್ದೇಶನದಲ್ಲಿ ಚಳುವಳಿಯನ್ನು ಆರಂಭಿಸಬೇಕೆಂದು ನಿರ್ಧಾರವಾಯಿತು.

ಚಳುವಳಿಯ ಕೋಲಾಹಲದ ನಡುವೆಯೂ ಗಾಂಧೀಜಿ ರಚನಾತ್ಮಕ ಕಾರ್ಯಕ್ರಮವನ್ನು ಒತ್ತಿ ಹೇಳಿದರು. ಹಿಂದೂ–ಮುಸ್ಲಿಂ ಐಕ್ಯ, ಸುಧಾರಿತ ಚರಕ, ದೇಶ ಭಾಷೆಗಳ

ಬಳಿಕೆ, ಸ್ವದೇಶಿ, ಖದ್ದರ್ ಇವುಗಳ ಪರವಾಗಿ ಪ್ರತಿವಾರವೂ ಅವರು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ವಾದಿಸಿದರು. ಗುಜರಾತೀ ಸಾಹಿತ್ಯ ಸಮ್ಮೇಳನದಲ್ಲಿ ಅವರು ಭಾಗವಹಿಸಿ ಸಾಮೂಹಿಕ ಜನತೆಯ ದೃಷ್ಟಿಯಿಂದ ಸಾಹಿತ್ಯದ ಅರ್ಥ ಏನು ಎಂಬುದನ್ನು ವಿವರಿಸಿದರು. ರವೀಂದ್ರನಾಥ ಠಾಕೂರರು ತಾವೂ ಸಮ್ಮೇಳನದಲ್ಲಿ ಹಾಜರಿದ್ದು ಹರಸಿದರು. ಗಾಂಧೀಜಿ ರವೀಂದ್ರರ ಭಾಷಣವನ್ನು ಮೆಚ್ಚಿ ಹೊಗಳಿದರು. ವಾಣಿಜ್ಯ ಮನೋಭಾವದ ಅಹಮ್ಮದಾಬಾದಿಗೆ ಕವಿಯು ನೀಡಿದ ಸಂದೇಶ: "ಧನಾನ್ವೇಷಣೆ ದೈವಾನ್ವೇಷಣೆಗೆ ಅಧೀನವಾಗಿರ ತಕ್ಕದ್ದು" ಎಂಬುದು.

ಠಾಕೂರರು ಖದ್ದರನ್ನು ಮೆಚ್ಚಿಕೊಂಡದ್ದು ಯಂಗ್ ಇಂಡಿಯದಲ್ಲಿ ಗಾಂಧೀಜಿ ಈ ಟಿಪ್ಪಣಿ ಬರೆಯಲು ಸ್ಫೂರ್ತಿ ನೀಡಿತು:

"ಸ್ವದೇಶಿ ಚಳುವಳಿಯು ಅತ್ಯಂತ ವೇಗದಿಂದ ಮುಂದುವರಿಯುತ್ತಿರುವಾಗಲೇ ಹಿಂದೂಗಳಷ್ಟೇ ಉತ್ಸಾಹದಿಂದ ಮುಸ್ಲಿಮರೂ ಅದನ್ನು ಬೆಂಬಲಿಸುತ್ತಿರುವಾಗಲೇ, ಸ್ವದೇಶೀಯನ್ನು ಅಭಿವೃದ್ಧಿಗೊಳಿಸುವ ಅತ್ಯುತ್ತಮ ವಿಧಾನ ಯಾವುದು ಎಂಬುದನ್ನು ವಿವೇಚಿಸಬೇಕಾದದ್ದು ವಿಹಿತ. ಸ್ವದೇಶಿಯನ್ನು ಪ್ರೋತ್ಸಾಹಿಸಲು ಇರುವ ಒಂದೇ ದಾರಿ ಎಂದರೆ ಹೆಚ್ಚು ಬಟ್ಟೆಯನ್ನು ತಯಾರಿಸುವುದು. ಗಿರಣಿಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳಲಾರವು. ಆದ್ದರಿಂದ ಕೈಯಲ್ಲಿ ನೂತ ನೂಲು ಕೈಯಲ್ಲಿ ನೆಯ್ದ ಬಟ್ಟೆಯನ್ನೇ ಆಶ್ರಯಿಸಬೇಕು. ನೂಲು ಬಹುಶಃ ಎಂದೂ ಇಂದಿನಷ್ಟು ತುಟ್ಟಿಯಾಗಿರಲಿಲ್ಲ. ಗಿರಣಿಗಳು ನೂಲಿನಿಂದ ನಂಬಲಾರದಷ್ಟು ಲಾಭಗಳಿಸುತ್ತವೆ. ಆದ್ದರಿಂದ ಯಾವನು ಒಂದು ಗಜ ನೂಲನ್ನು ಕೈಯಿಂದ ನೂಲುತ್ತಾನೋ ಅಂಥವನು ಅವರ ಉತ್ಪಾದನೆಯನ್ನೂ ಹೆಚ್ಚಿಸುತ್ತಾನೆ, ಬೆಲೆಯನ್ನು ತಗ್ಗಿಸುತ್ತಾನೆ, 'ಸ್ಟಾಂಡರ್ಡ್' ಮುದ್ರೆಹೊತ್ತ ಬಟ್ಟೆಯು ಉಡಲು ಯೋಗ್ಯವೆಂದು ಪರಿಗಣಿತವಾಗುವುದಾದರೆ ಕೈಯಲ್ಲಿ ನೂತ ನೂಲು ಮತ್ತೆ ಕೈಯಲ್ಲಿ ನೆಯ್ದ ಬಟ್ಟೆಯಿಂದ ಬಜಾರು ಬಜಾರನ್ನೇ ತುಂಬಿಬಿಡಬಹುದು, ಇದು ನನ್ನ ಸ್ವಂತ ಅನುಭವ. ಮೇಲಿನ ಭಾರತದಲ್ಲಿ ಈ ಬಟ್ಟೆಯನ್ನು ಖದ್ದರ್ ಎಂದು ಕರೆಯುತ್ತಾರೆ. ಬೊಂಬಾಯಿ ಪ್ರಾಂತ್ಯದಲ್ಲಿ ಇದನ್ನು ಖಾದಿ ಎನ್ನುತ್ತಾರೆ. ಸರಳಾದೇವಿಗೆ ನಾವು ಕೃತಜ್ಞರಾಗಿರಬೇಕು, ಏಕೆಂದರೆ ಖದ್ದರಿನಿಂದ ಸೀರೆಗಳನ್ನೂ ತಯಾರಿಸುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಖದ್ದರ್ ಸೀರೆ, ಖದ್ದರ್ ರವಿಕೆಗಳನ್ನು ಉಡುವುದು ತೊಡುವುದರಿಂದ ಮಾತ್ರವೇ ರಾಷ್ಟ್ರೀಯ ವಾರದಲ್ಲಿ ತಮ್ಮ ವ್ಯಕ್ತಿತ್ವವನ್ನು ಅತ್ಯುತ್ತಮವಾಗಿ ಹೊರಪಡಿಸಬಹುದು ಎಂದು ಆಕೆ ಭಾವಿಸಿದರು. ಅದನ್ನೇ ಆಕೆ ಮಾಡಿದ್ದು. ಖದ್ದರ್ ಸೀರೆ ರವಿಕೆಗಳನ್ನೇ ಉಟ್ಟುತೊಟ್ಟು ಆಕೆ ಸಂತೋಷ ಕೂಟಗಳಿಗೆ ಹೋದರು. ಇದು ಅಸಾಧ್ಯವೆಂದು ಆಕೆಯ ಗೆಳತಿಯರು ಭಾವಿಸಿದ್ದರು. ಎಲ್ಲ ಭಯಗಳನ್ನೂ ಅವರು ಸುಳ್ಳುಗೊಳಿಸಿದರು. ನಯವಾದ ಸಿಲ್ಕ್ ಸೀರೆ ಉಟ್ಟಿದ್ದಾಗ ಎಷ್ಟೋ ಖದ್ದರ್ ಸೀರೆಯನ್ನುಟ್ಟಾಗ ಅದಕ್ಕಿಂತ ಚುರುಕಿನಲ್ಲೊ, ಚೆಂದದಲ್ಲೊ ಆಕೆ

ಕಡಮೆಯೇನೂ ಆಗಿರಲಿಲ್ಲ. ಖದ್ದರ್ ಸೀರೆಯುಟ್ಟ ಅವರನ್ನು ಕಂಡು ಡಾಕ್ಟರ್ ರವೀಂದ್ರ ನಾಥ ಟಾಕೂರ್ ಅವರು ಈ ಅರ್ಥದ ಮಾತುಗಳನ್ನು ಹರಸಿದರು:

"`ಈ ಸೀರೆ ಉಟ್ಟಿರುವುದರಿಂದ ನಿಮಗೆ ಯಾವ ಸಂಕೋಚವೂ ಇಲ್ಲದಿದ್ದರೆ ನೀವು ಎಲ್ಲೇ ಬೇಕಾದರೂ ಹೋಗಬಹುದು, ಯಾವುದೇ ಸಂತೋಷ ಕೂಟದಲ್ಲಾದರೂ ಭಾಗವಹಿಸಬಹುದು. ನಿಮಗೆ ಶುಭವೇ ಆಗುತ್ತದೆ. ಅದು ನಿಮಗೇ ತಿಳಿಯುತ್ತದೆ' ಭಾರತದ ಅತ್ಯಂತ ಕಲಾರಾಧಕ ವ್ಯಕ್ತಿಗಳಿಬ್ಬರಿಗೆ ಖದ್ದರಿನಲ್ಲಿ ಕಲಾಶೂನ್ಯವಾದದ್ದೇನೂ ಕಾಣಲಿಲ್ಲ ಎಂಬುದನ್ನು ತೋರಿಸಲು ಈ ಪವಿತ್ರ ಘಟನೆಯನ್ನು ನಾನು ಕಥನ ಮಾಡಿದ್ದೇನೆ. ಭಾರತದ ಸುಸಂಸ್ಕೃತ ಕುಟುಂಬಗಳಿಗೆ ಪ್ರವೇಶ ಮಾಡಿಸಲು ನಾನು ಸಾಹಸ ಪಡುತ್ತಿರುವ ಬಟ್ಟೆ ಇದೇ. ಏಕೆಂದರೆ ಈಗಿನ್ನೂ ಶೈಶವಾವಸ್ಥೆಯಲ್ಲಿರುವ ಸ್ವದೇಶೀ ಚಳುವಳಿಯ ಯಶಸ್ಸೆಲ್ಲ ಇದರ ಬಳಕೆಯನ್ನೇ ಅವಲಂಬಿಸಿದೆ. ನನ್ನ ದೃಷ್ಟಿಯಲ್ಲಿ ಅತ್ಯಂತ ನವುರಾದ ಡಾಕ್ಕಾ ಮಸ್ಲಿನ್‌ಗಿಂತ ಖದ್ದರೇ ಎಲ್ಲ ರೀತಿಯಲ್ಲೂ ಹೆಚ್ಚು ಕಲಾತ್ಮಕವಾದದ್ದು, ಅದರೊಡನೆ ಬೆರೆತಿರುವ ಭಾವನೆಗಳು ಅಂಥವು. ಊಟವಿಲ್ಲದೆ ಸಾಯುತ್ತಿದ್ದವರಿಗೆ ಇಂದು ಖದ್ದರೇ ಜೀವನಾಧಾರವಾಗಿದೆ. ಅಪಮಾನದ ಬಾಳಿನಿಂದ ವಿಮುಕ್ತಗೊಳಿಸಿದ ಮಹಿಳೆಯರನ್ನೂ ರಕ್ಷಿಸುತ್ತಿದೆ. ಅವರು ಕೆಲಸಕ್ಕಾಗಿ ಮನೆಯಿಂದಾಚೆ ಹೋಗಲೊಲ್ಲದೆ, ಬೇರೆ ಕೆಲಸವೂ ಇಲ್ಲದೆ, ತಮ್ಮ ತಮ್ಮಲ್ಲೇ ಜಗಳವಾಡುತ್ತಿದ್ದರು. ಆದ್ದರಿಂದ ಖದ್ದರಿಗೆ ಒಂದು ಆತ್ಮವೆಂಬುದಿದೆ. ಅದಕ್ಕೊಂದು ವ್ಯಕ್ತಿತ್ವವಿದೆ. ನಮ್ಮ ಅಭಿರುಚಿಗಳು ಕೀಳಾಗದಿದ್ದಿದ್ದರೆ, ಬೇಸಗೆಯಲ್ಲಿ ಕೂಡ, ಮೈಗಂಟುವ ಕ್ಯಾಲಿಕೋಗಿಂತ ಖದ್ದರನ್ನೇ ನಾವು ಮೇಲೆನ್ನುತ್ತಿದ್ದೆವು."

ಉಕ್ಕೇರುತ್ತಿರುವ ಉತ್ಪಾತ

೧೯೨೦

ಗಾಂಧೀಜಿಯವರಿಗೆ ಪ್ರಚಂಡ ಮಾರುತವೊಂದು ಸಿದ್ಧಗೊಳ್ಳುತ್ತಿದೆ ಎನ್ನಿಸಿತು. ಅದರಿಂದಾಗುವ ಅನಾಹುತವನ್ನು ತಪ್ಪಿಸಲು ಅವರು ತಮ್ಮ ಕೈಲಾದದ್ದೆನ್ನೆಲ್ಲ ಮಾಡಿದರು. ಬರಲಿರುವ ಹೋರಾಟಕ್ಕೆ ಜನತೆಯನ್ನು ಸಿದ್ಧಪಡಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಆದರೆ ಈ ಶಿಕ್ಷಣ ಒಂದು ಕ್ರಮಕ್ರಮವಾದ ರೀತಿಯಲ್ಲಿ ಆಗಬೇಕಾಗಿದ್ದ ಕೆಲಸ.

೧೯೨೦ರ ಜೂನ್ ೧೬ರಂದು ಸಂಕಷ್ಟಗಳ ಸಹನೆಯ ನಿಯಮವನ್ನು ಕುರಿತು ಯಂಗ್ ಇಂಡಿಯಾದಲ್ಲಿ ಅವರು ಹೀಗೆ ಬರೆದರು:

"ಸಂಕಷ್ಟದ ಅಗ್ನಿಯಲ್ಲಿ ಪರಿಶುದ್ಧಗೊಳ್ಳದೆ ಯಾವ ದೇಶವೂ ಮೇಲ್ಮೆಗೇರಿಲ್ಲ. ತನ್ನ ಮಗು ಬದುಕಲೆಂದು ತಾಯಿಯಾದವಳು ವೇದನೆ ಅನುಭವಿಸುತ್ತಾಳೆ. ಗೋಧಿ ಬೆಳೆಯಬೇಕಾದರೆ ಬೀಜದ ಕಾಳು ನಾಶವಾಗಲೇ ಬೇಕು. ಬದುಕು ಉದ್ಭವಿಸುವುದು ಸಾವಿನಿಂದಲೇ. ವೇದನೆಯಿಂದಲೇ ಪರಿಶುದ್ಧಗೊಳ್ಳಬೇಕೆಂಬ ಶಾಶ್ವತವಾದ ನಿಯಮವನ್ನು ಪರಿಪಾಲಿಸದೆ ಭಾರತವು ತನ್ನ ದಾಸ್ಯವನ್ನು ಭೇದಿಸಿಕೊಂಡು ಹೊರಬರುವುದೆ?

"ನನಗೆ ಬುದ್ಧಿವಾದ ಹೇಳುತ್ತಿರುವವರ ಅಭಿಪ್ರಾಯ ಸರಿಯಾಗಿರುವ ಪಕ್ಷಕ್ಕೆ ಭಾರತವು ಸಂಕಷ್ಟವೇ ಇಲ್ಲದೆ ಭವಿತವ್ಯವನ್ನು ಸಾಧಿಸುತ್ತದೆ ಎಂಬುದು ಸ್ಪಷ್ಟವಾದಂತೆಯೆ. ಏಕೆಂದರೆ, ಅವರಿಗಿರುವ ಮುಖ್ಯವಾದ ಕಳವಳವೆಲ್ಲ ೧೯೧೯ರ ಏಪ್ರಿಲ್‌ನ ಘಟನೆಗಳು ತಿರುಗಿ ಆಗ ಬಾರದೆಂದಷ್ಟೆ. ಅಸಹಕಾರಕ್ಕೆ ಅವರು ಅಂಜುತ್ತಾರೆ; ಕಾರಣ ಅದರಿಂದ ಅನೇಕರಿಗೆ ಸಂಕಟಗಳೊದಗುತ್ತವೆ ಎಂಬುದು. ಹ್ಯಾಂಪ್‌ಡನ್ನನು (Hampden) ಹೀಗೆಯೇ ವಾದ ಮಾಡಿದ್ದರೆ ಹಡಗಿನ ತೆರ (Shipmorey)ವನ್ನು ಸಲ್ಲಿಸದೆ ತಡೆ ಹಿಡಿಯುತ್ತಿರಲಿಲ್ಲ, ವಾಟ್ ಟೈಲರ್(What Tyler)ನೂ ಸಹ ಬಂಡಾಯದ ಬಾವುಟವನ್ನು ಎತ್ತಿ ಹಿಡಿಯುತ್ತಿರಲಿಲ್ಲ. ಎಷ್ಟೇ ಸಂಕಟ ಒದಗಲಿ ಅದನ್ನು ಲೆಕ್ಕಿಸದೆ ನ್ಯಾಯವಾದುದನ್ನು ಸಾಧಿಸುವ ಪ್ರಯತ್ನವನ್ನು ಬಿಡದೆ ಮುಂದುವರಿಸುವ ನಿದರ್ಶನಗಳಿಂದ ಇಂಗ್ಲಿಷ್ ಮತ್ತು ಫ್ರೆಂಚ್ ಇತಿಹಾಸಗಳು ಇಡಿಕಿರಿದಿವೆ. ಏನೂ ಅರಿಯದ ಜನರು, ಅವರಿಗೆ ಇಚ್ಛೆಯೇ ಇಲ್ಲದಿದ್ದರೂ, ಸಂಕಟಪಡಬೇಕಾಗುವುದಲ್ಲವೆ ಎಂಬ ಯೋಚನೆ ಹುಟ್ಟುವಷ್ಟು ಹೊತ್ತು ಕೂಡ ಅಲ್ಲಿ ಪಾಲ್ಗೊಂಡವರು ನಿಲ್ಲಲಿಲ್ಲ. ನಮ್ಮ ಇತಿಹಾಸವನ್ನು ಬೇರೆ ಬೇರೆ ರೀತಿಯಾಗಿ ಬರೆಯಬಹುದೆಂದು ನಾವುಮಾತ್ರ ಏಕೆ ತಾನೆ ನಿರೀಕ್ಷಿಸಬೇಕು? ನಮಗೆ ಮನಸ್ಸಿದ್ದರೆ ಹಿಂದಿನವರು ಮಾಡಿದ ತಪ್ಪುಗಳಿಂದ

ಪಾಠ ಕಲಿತು ಅವರಿಗಿಂತ ಉತ್ತಮವಾದ ಕಾರ್ಯವನ್ನು ನಾವು ಮಾಡುವುದು ಸಾಧ್ಯವಿರಬಹುದು. ಆದರೂ ಸಂಕಷ್ಟಗಳನ್ನೆಲ್ಲ ಅನುಭವಿಸಿಕೊಳ್ಳಬೇಕೆಂಬ ನಿಯಮವನ್ನೇ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದು ನಮ್ಮ ಇರವಿನ ಒಂದು ಅನಿವಾರ್ಯ ಕಟ್ಟಳೆ. ಇನ್ನೂ ಉತ್ತಮ ಕಾರ್ಯ ಮಾಡುವ ಮಾರ್ಗವೆಂದರೆ, ನಮಗೆ ಸಾಧ್ಯವಾದಲ್ಲಿ, ನಮ್ಮ ಪಕ್ಷದಿಂದ ಹಿಂಸಾಕೃತ್ಯಗಳನ್ನು ತಪ್ಪಿಸಿ ತನ್ಮೂಲಕ ಮುನ್ನಡೆಯ ವೇಗವನ್ನು ಹೆಚ್ಚಿಸುವುದು ಮತ್ತು ಸಂಕಟಗಳನ್ನು ಸಹಿಸಿಕೊಳ್ಳುವ ವಿಧಾನಗಳಲ್ಲಿ ಹೆಚ್ಚು ಪರಿಶುದ್ಧತೆಯನ್ನುಂಟು ಮಾಡುವುದು. ನಾವು ಸಂಕಲ್ಪ ಮಾಡಿದರೆ, ತಪ್ಪಿತಸ್ಥನನ್ನು ನಮ್ಮ ಅಸಹನೆಯಿಂದಲೇ, ಸಿನ್‌ಫೀನರ್‌ಗಳು (Sinn Feinners) ಇಂದು ಮಾಡುತ್ತಿರುವಂತೆ, ದೇಹಬಲದಿಂದ ನಮ್ಮ ಇಷ್ಟಕ್ಕೆ ಬಗ್ಗಿಸುವ ಯತ್ನವನ್ನೂ ಅಥವಾ ಕಳೆದ ವರ್ಷ ನಮ್ಮಲ್ಲೇ ಕೆಲವರು ಹರತಾಳವನ್ನು ಉಂಟು ಮಾಡಲು ಮಾಡಿದಂತೆ ನಮ್ಮ ನೆರೆಹೊರೆಯವರನ್ನು ನಮ್ಮ ವಿಧಾನಗಳನ್ನನುಸರಿಸಲು ಬಲಾತ್ಕಾರಿಸುವುದನ್ನೂ ವರ್ಜಿಸಬಹುದು. ಸಂಕಷ್ಟವನ್ನು ಸಹಿಸಿಕೊಳ್ಳುವವನು ಎಷ್ಟನ್ನೂ ಸಹಿಸುತ್ತಾನೋ ಅದರ ಪ್ರಮಾಣವೆ ನಮ್ಮ ಮುನ್ನಡೆಯ ಅಳತೆ. ನಮ್ಮ ಸಹಿಷ್ಣುತೆ ಎಷ್ಟೆಷ್ಟು ಪರಿಶುದ್ಧವಾಗಿದ್ದರೆ ನಮ್ಮ ಮುನ್ನಡೆಯೂ ಅಷ್ಟಷ್ಟೇ ಹೆಚ್ಚುತ್ತದೆ. ಈ ಕಾರಣದಿಂದಲೇ ಯೇಸುವಿನ ಬಲಿದಾನವೊಂದೇ ದುಃಖಮಯವಾದ ಒಂದು ಪ್ರಪಂಚವನ್ನೇ ವಿಮುಕ್ತಗೊಳಿಸಲು ಸಾಕಾಯಿತು. ಈ ಮುನ್ನಡೆಯ ಯಾತ್ರೆಯಲ್ಲಿ ತನ್ನ ನೆರೆಹೊರೆಯವರಿಗೆ ಎಷ್ಟು ಸಂಕಟ ಒದಗಬಹುದೆಂದಾಗಲಿ. ಅವರದನ್ನು ಸ್ವಂತ ಇಚ್ಛೆಯಿಂದ ಅನುಭವಿಸುತ್ತಾರೆಯೋ ಇಲ್ಲವೋ ಎಂದಾಗಲಿ ಅವನು ಲೆಕ್ಕಿಸಲಿಲ್ಲ. ಹೀಗೆಯೇ ಒಬ್ಬ ಹರಿಶ್ಚಂದ್ರನು ಸಹಿಸಿದ ಸಂಕಟಗಳು ಸತ್ಯ ಸಾಮ್ರಾಜ್ಯವನ್ನೇ ಪುನಃ ಸ್ಥಾಪಿಸಲು ಸಾಕಾಯಿತು. ತಾನು ಪದತ್ಯಾಗ ಮಾಡುವುದರಿಂದ ತನ್ನ ಪ್ರಜೆಗಳು ಇಚ್ಛೆಯಿಲ್ಲದಿದ್ದರೂ ಸಂಕಟಕ್ಕೊಳಗಾಗುತ್ತಾರೆ ಎಂಬುದು ಅವನಿಗೆ ತಿಳಿದಿದ್ದಿರಲೇ ಬೇಕು. ಆದರೂ ಅವನದನ್ನು ಲೆಕ್ಕಿಸಲಿಲ್ಲ. ಏಕೆಂದರೆ ಸತ್ಯವನ್ನು ಅನುಸರಿಸುವುದರ ಹೊರತು ಬೇರೇನನ್ನೇ ಮಾಡಲು ಅವನಿಗೆ ಸಾಧ್ಯವಿರಲಿಲ್ಲ.

"ನಮ್ಮಿಂದಲೇ ಆಗಿರುವ ಇಂಗ್ಲಿಷರ ಕೊಲೆಗಳು ಮತ್ತು ಆಸ್ತಿಪಾಸ್ತಿಗಳ ನಾಶ ಇವುಗಳಿಗಾಗಿ ನಾನು ಶೋಕಿಸುವಷ್ಟು ಜಲಿಯನ್ ವಾಲಾಬಾಗಿನ ಹತ್ಯಾಕಾಂಡಕ್ಕಾಗಿ ಸಹ ನಾನು ಶೋಕಿಸುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಅಮೃತಸರ್ ಪ್ರಸಂಗದ ಭೀಕರತೆಯು ಜನರ ಗಮನವನ್ನು ಬೇರೆಡೆಗೆ ಸೆಳೆದು, ಲಾಹೋರಿನ ನಿವಾಸಿಗಳನ್ನು ನಿಧಾನವಾದ ವಿಧಾನಗಳಿಂದ ನಿರ್ವೀರ್ಯಗೊಳಿಸುವ ಪ್ರಯತ್ನದ ಭೀಕರತೆ ಇನ್ನೂ ಮಹತ್ತರವಾದುದೆಂಬುದು ಜನರ ಗಮನಕ್ಕೆ ಬರದಂತೆ ಮಾಡಿತು. ಆದರೆ ನಾವು ಮೇಲ್ಮೆ ಸಾಧಿಸುವ ಮುನ್ನ ಇನ್ನೂ ಅನೇಕಸಾರಿ ಇಂಥ ವಿಧಾನಗಳ ತುಳಿತವನ್ನನುಭವಿಸಲೇ ಬೇಕಾಗುತ್ತದೆ. ಸಂಕಟವನ್ನು ಸ್ವಸಂತೋಷದಿಂದ ಸ್ವೀಕರಿಸುವಂತೆಯೂ, ಅದರಲ್ಲೇ ಆನಂದವನ್ನು ಕಾಣುವಂತೆಯೂ ಅವು ನಮಗೆ ಕಲಿಸುವವರೆಗೂ ಹಾಗೆಯೇ ಮಾಡಬೇಕಾಗುತ್ತದೆ. ಲಾಹೋರಿನವರನ್ನು ಯಾವ ಕ್ರೂರವಾದ ಅಪಮಾನಗಳಿಗೆ

ಗುರಿ ಪಡಿಸಲಾಯಿತೋ ಅವುಗಳಿಗೆ ಅವರು ಎಂದಿಗೂ ಅರ್ಹರಾಗಿರಲಿಲ್ಲ ಎಂಬುದು ನನ್ನ ಮನವರಿಕೆ.

"ಒಬ್ಬನೇ ಒಬ್ಬ ಇಂಗ್ಲಿಷನನ್ನೂ ಅವರೆಂದೂ ನೋಯಿಸಲಿಲ್ಲ, ಯಾವ ಸೊತ್ತು ಸೊದೆಯನ್ನೂ ಅವರು ನಾಶಮಾಡಲಿಲ್ಲ. ಆದರೆ ಒಬ್ಬ ಸ್ವೇಚ್ಛಾಚಾರಿಯಾದ ಆಡಳಿತ ಗಾರನು ತಾನು ಹೊರಿಸಿದ್ದ ದಾಸ್ಯದ ಕುತ್ತಿಗೆ ಕೊಯ್ಯುವ ನೊಗವನ್ನು ಕಿತ್ತೆಸೆಯಲು ಪ್ರಯತ್ನ ಮಾಡಿದರೆಂಬೊಂದು ಕಾರಣಕ್ಕಾಗಿಯೇ ಜನರ ಕೆಚ್ಚನ್ನು ಅಡಗಿಸಲು ಸಂಕಲ್ಪಿಸಿದ್ದ. ಇದೆಲ್ಲ ನಾನು ಸತ್ಯಾಗ್ರಹವನ್ನು ಬೋಧಿಸಿದುದರ ಪರಿಣಾಮ ಎಂದು ಹೇಳುವುದಾದರೆ, ನನ್ನ ಉತ್ತರ ಇಷ್ಟೆ. ಹೀಗಾಗುವುದಾದರೆ ನಾನು ಸತ್ಯಾಗ್ರಹವನ್ನು ನನ್ನ ದೇಹದಲ್ಲಿ ಉಸಿರಿರುವವರೆಗೂ ಇನ್ನೂ ಬಲವಾಗಿ ಬೋಧಿಸುತ್ತೇನೆ. ಮುಂದಿನ ಬಾರಿ ಓಡ್ವೈಯರನ ದುರಹಂಕಾರಕ್ಕೆ ಜನರು ಉತ್ತರ ಕೊಡುವುದು ಬಲಾತ್ಕಾರದ ಮಾರಾಟಗಳ ಬೆದರಿಕೆಗಳಿಗಂಜಿಕೊಂಡು ಅಂಗಡಿಗಳನ್ನು ತೆರೆಯುವುದರಿಂದಲ್ಲ; ಅದರ ಬದಲು, ಆ ದಮನಗಾರ ತನ್ನ ಕೈಲಾದ ದೌರ್ಜನ್ಯವನ್ನೆಲ್ಲ ಎಸಗಲಿ, ತಮ್ಮ ಸರ್ವಸ್ವವನ್ನೂ ಮಾರಿಬಿಡಲಿ, ತಮ್ಮ ಅಜೇಯವಾದ ಆತ್ಮಗಳನ್ನಂತು ಅವನೆಂದಿಗೂ ಮಾರಲಾರ, ಎಂದು ಜನರಿಗೆ ನಾನು ಹೇಳುತ್ತೇನೆ. ಹಿಂದಿನಕಾಲದ ಋಷಿಗಳು ದೇಹದೊಳಗಿನ ಆತ್ಮವನ್ನು ವಿಮುಕ್ತಗೊಳಿಸಲು ದೇಹವನ್ನು ದುಡಿಸುತ್ತಿದ್ದರು. ಅವರ ಉದ್ದೇಶವೇನೆಂದರೆ, ತಮ್ಮ ಇಚ್ಛೆಯನ್ನು ಬಲಾತ್ಕಾರವಾಗಿ ಹೇರಲು ಯಾವ ದಮನಗಾರರೇ ಆಗಲಿ ತಮಗೆ ಉಂಟುಮಾಡುವ ವೇದನೆಗೆ ತಮ್ಮ ಸುಶಿಕ್ಷಿತ ದೇಹಗಳು ಅಭೇದ್ಯವಾಗಬೇಕೆಂಬುದು. ಭಾರತವು ತನ್ನ ಪ್ರಾಚೀನ ವಿವೇಕವನ್ನು ಪುನರ್ವಿಮರ್ಶಿಸಿಕೊಂಡು ಯೂರೋಪು ಮಾಡಿದ ತಪ್ಪುಗಳನ್ನೇ ತಾನೂ ಮಾಡದಂತೆ ತಪ್ಪಿಸಿಕೊಳ್ಳಲು ಬಯಸುವುದಾದರೆ, ಯೂರೋಪನ್ನೆಲ್ಲ ಈಗ ಆವರಿಸಿಕೊಂಡಿರುವ ಸೈತಾನೀ ರಾಜ್ಯಕ್ಕೆ ಬದಲಾಗಿ ಭೂಲೋಕದಲ್ಲಿ ಭಗವಂತನ ಸಾಮ್ರಾಜ್ಯ ಸ್ಥಾಪಿತವಾಗುವುದನ್ನು ನೋಡಬಯಸುವುದಾದರೆ, ಭಾರತದ ಸುಪುತ್ರಪುತ್ರಿಯರಲ್ಲಿ ನನ್ನ ವಿನಂತಿ ಇದು: ಅವರ ಸುಂದರವಾದ ಮಾತುಗಳಿಗೆ, ಪದಗಳ ಮರೆಯಲ್ಲಿ ಅಡಗಿಕೊಂಡು ನಮ್ಮನ್ನು ವಂಚಿಸುವ ಭಯಂಕರ ಸೂಕ್ಷ್ಮತೆಗಳಿಗೆ, ಭಾರತವು ಅನುಭವಿಸಬೇಕಾಗಿ ಬರುವ ಸಂಕಟದ ಭಯಗಳಿಗೆ,ಮರುಳಾಗದಿರಿ; ಇಂದು ಯೂರೋಪಿನಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಿ. ಯೂರೋಪು ಹೇಗೆ ಅನುಭವಿಸಿತೋ ಹಾಗೆಯೇ ನಾವೂ ಸಂಕಟವನ್ನು ಅನುಭವಿಸಲೇಬೇಕೆಂಬುದನ್ನು ಅದರಿಂದಲೇ ಅರಿಯಿರಿ. ಸಂಕಟಕ್ಕೆ ಗುರಿ ಮಾಡುವ ವಿಧಾನವನ್ನು ಮಾತ್ರ ಕಲಿಯಬೇಡಿ. ಜರ್ಮನಿಯು ಯೂರೋಪಿನಲ್ಲೆಲ್ಲ ಮೇಲುಗೈಯಾಗಿ ಮೆರೆಯಲು ಯತ್ನಿಸಿತು. ಮಿತ್ರರಾಷ್ಟ್ರಗಳೂ ಹಾಗೆಯೇ ಜರ್ಮನಿಯನ್ನು ನುಚ್ಚುನೂರು ಮಾಡಿ ತಾವು ಮೆರೆಯಲು ಯತ್ನಿಸಿದುವು. ಆದರೆ ಜರ್ಮನಿಯ ಪತನದಿಂದ ಯೂರೋಪಿನ ಸ್ಥಿತಿ ಯೇನೂ ಉತ್ತಮವಾಗಲಿಲ್ಲ. ಜರ್ಮನಿಯು ಎಷ್ಟು ಪ್ರಮಾಣದಲ್ಲಿ ಆಗಿತ್ತೋ ಅಥವಾ ಆಗುತ್ತಿತ್ತೋ ಅಷ್ಟೇ ಪ್ರಮಾಣದಲ್ಲಿ ಮಿತ್ರರಾಷ್ಟ್ರಗಳೂ ಸಹ ವಂಚನೆ, ಕ್ರೌರ್ಯ, ದುರಾಸೆ,

ಸ್ವಾರ್ಥಗಳಿಂದ ತುಂಬಿವೆಯೆಂಬುದನ್ನು ತೋರಿಸಿಕೊಂಡಿವೆ. ಆದರೆ ಮಿತ್ರರಾಷ್ಟ್ರಗಳ ಹಲವು ವ್ಯವಹಾರಗಳಲ್ಲಿ ಬೆರೆತು ಹೋಗಿರುವ ಧರ್ಮಿಷ್ಠ ವೇಷಗಾರಿಕೆಯನ್ನು ಮಾತ್ರ ಜರ್ಮನಿಯು ತಾಳುತ್ತಿರಲಿಲ್ಲ, ಅಷ್ಟೆ.

"ನನ್ನ ನಿರೀಕ್ಷಣೆ ತಪ್ಪಾಯಿತೆಂದು ಕಳೆದ ವರ್ಷ ನಾನು ವಿಷಾದ ವ್ಯಕ್ತಪಡಿಸಿದೆ. ಹೀಗೆ ಮಾಡಿದ್ದು ಜನರ ಮೇಲೆ ಸಂಕಟಗಳನ್ನು ಹೊರಿಸಿದಂತಾಯಿತೆಂದಲ್ಲ. ಸತ್ಯಾಗ್ರಹದ ಸಂದೇಶವನ್ನು ಸಾಕಷ್ಟು ಅರಿಯದೆ ಅವರು ಮಾಡಿದ ತಪ್ಪುಗಳಿಗಾಗಿ, ಮತ್ತು ಹಿಂಸಾ ಕೃತ್ಯಗಳಿಗಾಗಿ. ಹಾಗಾದರೆ ಸಂಕಟವನ್ನು ಸಹಿಸುವ ನಿಯಮದ ಪ್ರಕಾರ ಅಸಹಕಾರ ಎಂಬುದರ ಅರ್ಥ ಏನು? ನಮ್ಮ ಸಂಕಲ್ಪಕ್ಕೆ ವಿರುದ್ಧವಾಗಿ ನಮ್ಮನ್ನು ಆಳುತ್ತಿರುವ ಒಂದು ಸರಕಾರಕ್ಕೆ ನಾವು ಕೊಡುತ್ತಿದ್ದ ಬೆಂಬಲವನ್ನು ನಾವು ಹಿಂತೆಗೆದುಕೊಳ್ಳಬೇಕಾಗಿ ಬಂದದ್ದರಿಂದ ಹುಟ್ಟುವ ಎಲ್ಲ ನಷ್ಟಗಳನ್ನು ಅನನುಕೂಲಗಳನ್ನು ನಾವು ಸ್ವಂತ ಇಚ್ಛೆಯಿಂದ ಸಹಿಸಿಕೊಳ್ಳಬೇಕು. ಥೋರೋ ಹೇಳುತ್ತಾನೆ: 'ಒಂದು ಅನ್ಯಾಯದ ಸರಕಾರ ದಡಿಯಲ್ಲಿ ಅಧಿಕಾರವನ್ನಾಗಲಿ ಸಂಪತ್ತನ್ನಾಗಲಿ ಪಡೆದಿರುವುದೇ ಒಂದು ಅಪರಾಧ, ಅಂತಹ ಸಂದರ್ಭದಲ್ಲಿ ಬಡತನವೇ ಒಂದು ಸದ್ಗುಣ', ಎಂದು. ಈ ಸಂಧಿಕಾಲದಲ್ಲಿ ನಾವು ತಪ್ಪುಗಳನ್ನು ಮಾಡಬಹುದು. ನಿವಾರಣೀಯವಾಗಿದ್ದರೂ ನಿವಾರಿಸಲಾಗದೆ ಸಂಕಟವನ್ನನುಭವಿಸಲೂ ಬೇಕಾಗಬಹುದು. ರಾಷ್ಟ್ರೀಯ ನಿರ್ವೀರ್ಯತೆಗಿಂತ ಇವನ್ನೆಲ್ಲ ಅನುಭವಿಸುವುದು ಎಷ್ಟೋ ಮೇಲು.

"ಅನ್ಯಾಯವನ್ನು ತಪ್ಪಿಸಿ ನ್ಯಾಯವನ್ನು ಪಡೆಯಲಿಕ್ಕಾಗಿ, ತಪ್ಪಿತಸ್ಥನು ತಾನು ಮಾಡಿದ ಅನ್ಯಾಯವೆಷ್ಟೆಂದು ಅರಿತುಕೊಳ್ಳುವವರೆಗೂ ಕಾದು ಕೊಂಡಿರಲು ನಾವು ಒಪ್ಪಬಾರದು. ನಾವಾಗಲಿ ಇತರರಾಗಲಿ ಸಂಕಟ ಅನುಭವಿಸಬೇಕಾಗುವುದೆಂಬ ಭಯದಿಂದ ನಾವು ಅನ್ಯಾಯದಲ್ಲಿ ಭಾಗಿಗಳಾಗಿ ಉಳಿಯಬಾರದು. ತಪ್ಪಿತಸ್ಥನಿಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನೆರವಾಗುವುದನ್ನು ನಿಲ್ಲಿಸಿ ಅನ್ಯಾಯದ ವಿರುದ್ಧ ಹೋರಾಡಬೇಕು.

"ಒಬ್ಬ ತಂದೆಯು ಏನಾದರೂ ಅನ್ಯಾಯ ಮಾಡಿದರೆ ತಂದೆಯ ಮನೆಯನ್ನು ಬಿಡುವುದು ಅವನ ಮಕ್ಕಳ ಧರ್ಮ. ಒಂದು ಶಾಲೆಯ ಮುಖ್ಯೋಪಾಧ್ಯಾಯರು ಒಂದು ಅನೈತಿಕ ಆಧಾರದ ಮೇಲೆ ತನ್ನ ಸಂಸ್ಥೆಯನ್ನು ನಡೆಸುತ್ತಿದ್ದರೆ ಅದರ ವಿದ್ಯಾರ್ಥಿಗಳು ಆ ಶಾಲೆಯನ್ನು ತೊರೆಯಬೇಕು. ಒಂದು ಕಾರ್ಪೊರೇಷನ್ನಿನ ಅಧ್ಯಕ್ಷನು ದುರಾಚಾರ ಪ್ರವೃತ್ತನಾಗಿದ್ದರೆ, ಅದರ ಸದಸ್ಯರು ಸಂಸ್ಥೆಯನ್ನು ಬಿಟ್ಟು ಅವನ ದುರಾಚಾರದ ಸೋಂಕಿನಿಂದ ತಮ್ಮ ಕೈತೊಳೆದುಕೊಳ್ಳಬೇಕು. ಅದೇ ರೀತಿ ಒಂದು ಸರಕಾರವು ಘೋರವಾದ ಅನ್ಯಾಯವೊಂದನ್ನು ಮಾಡಿದರೆ, ಪ್ರಜೆಯಾದವನು ಸಂಪೂರ್ಣವಾಗಿ ಅಥವಾ ಭಾಗಶಃ, ಒಟ್ಟಿನಲ್ಲಿ, ಆಡಳಿತಗಾರನನ್ನು ಅವನ ದುಷ್ಟತನದಿಂದ ಪಾರುಮಾಡಲು ಸಾಕಾಗುವಷ್ಟು ಮಟ್ಟಿಗೆ, ತನ್ನ ಸಹಕಾರವನ್ನು ಹಿಂತೆಗೆದುಕೊಳ್ಳಬೇಕು. ಇಲ್ಲಿ ನಾನು ಊಹಿಸುತ್ತಿರುವ ಒಂದೊಂದು ಸಂದರ್ಭದಲ್ಲಿಯೂ ದೈಹಿಕವೋ ಮಾನಸಿಕವೋ ಆದ

ಸಂಕಟದ ಅಂತ ಇದ್ದೇ ಇದೆ. ಅಂತಹ ಸಂಕಟ ಅನುಭವಿಸದ ಹೊರತು ಸ್ವಾತಂತ್ರ್ಯ ಗಳಿಸುವುದು ಸಾಧ್ಯವಿಲ್ಲ."

ವಿಮರ್ಶಕರೆಂದರು "ಅಂಥದೊಂದು ಉದಾತ್ತ ಗುರಿಯನ್ನು ಸಾಧಿಸಲು ಬೇಕಾದ ಸಂಕಲ್ಪ ಶಕ್ತಿಯಾಗಲಿ ಬಲಿದಾನ ಮಾಡುವ ಸಾಮರ್ಥ್ಯವಾಗಲಿ ಭಾರತಕ್ಕೆ ಇಲ್ಲ" ಎಂಬುದಾಗಿ. ಅದಕ್ಕೆ ಗಾಂಧೀಜಿ ಉತ್ತರ ಕೊಟ್ಟರು: "ಅವರ ಮಾತು ಅಂಶತಃ ನಿಜ. ಭಾರತಕ್ಕೆ ಈ ಗುಣಗಳು ಈಗ ಇಲ್ಲ. ನಮ್ಮಲ್ಲಿ ಈಗ ಇಲ್ಲ ಎಂದ ಮಾತ್ರಕ್ಕೆ ಅವುಗಳನ್ನು ನಾವು ವಿಕಾಸ ಮಾಡಿಕೊಳ್ಳಬೇಡವೆ, ಅವುಗಳನ್ನೂ ರಾಷ್ಟ್ರಕ್ಕೂ ಹರಡಬೇಡವೆ? ಈ ಪ್ರಯತ್ನವು ಮಾಡಲರ್ಹವಾದದ್ದಲ್ಲವೆ? ಅಂಥದೊಂದು ಧ್ಯೇಯವನ್ನು ಸಾಧಿಸಲು ಯಾವ ತ್ಯಾಗವೇ ಆಗಲಿ ಅತಿ ದೊಡ್ಡದೆ?"

ಜೂನ್ ಅಂತ್ಯದಲ್ಲಿ ಒಂದು ಖಿಲಾಫತ್ ಮನವಿಯನ್ನು ವೈಸರಾಯಿಗೆ ಕಳುಹಿಸಿ ಕೊಡಲಾಯಿತು. ಮಜ್ ಹರಲ್ ಹಕ್, ಯಾಕೂಬ್ ಹಸನ್, ಅಬ್ದುಲ್ ಬ್ಯಾರಿ, ಷೌಕತ್ ಆಲಿ ಮತ್ತು ಆಜಾದ್ ಮೊದಲಾದ ಪ್ರಮುಖ ನಾಯಕರು ಅದಕ್ಕೆ ಸಹಿ ಹಾಕಿದ್ದರು. "ಟರ್ಕಿಯ ಮುಂದಿಡಲಾಗಿರುವ ಶಾಂತಿಯ ಷರತ್ತುಗಳನ್ನು ನಾವು ಬಹಳ ಸಾವಧಾನವಾಗಿ ಓದಿದ್ದೇವೆ. ಅವು ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ನೇರವಾಗಿ ಭಂಗಮಾಡುವಂಥವೆಂದು ನಾವು ಭಾವಿಸುತ್ತೇವೆ. ಜಗತ್ತಿನಲ್ಲಿಯೇ "ಮಹತ್ತಮ ಮುಸ್ಲಿಂ ಪ್ರಭುತ್ವ"ವಾದ ಬ್ರಿಟಿಷ್ ಸಾಮ್ರಾಜ್ಯವು ಖಿಲಾಫತ್ತಿಗೆ ಪ್ರತಿನಿಧಿಯಾದ ಟರ್ಕಿಯ ಸಾಮ್ರಾಜ್ಯವನ್ನು ಸೋಲನ್ನನುಭವಿಸಿದ ಒಂದು ಶತ್ರುರಾಷ್ಟ್ರವನ್ನು ಕಾಣುವಂತೆ ಕಾಣಲಾಗದೆಂದು ನಮ್ಮ ಅಭಿಪ್ರಾಯ. ಆದ್ದರಿಂದ ಪ್ರಭುವರ್ಯರಾದ ತಮ್ಮನ್ನೂ ತಮ್ಮ ಸರಕಾರವನ್ನು ನಾವು ಕೇಳಿಕೊಳ್ಳುವುದೇನೆಂದರೆ, ಚಕ್ರವರ್ತಿಗಳ ಮಂತ್ರಿಗಳನ್ನು ಒತ್ತಾಯಪಡಿಸಿ ಈ ಶಾಂತಿಯ ಷರತ್ತುಗಳ ಪರಿಷ್ಕರಣವನ್ನು ಅವರಿಂದ ಪಡೆದುಕೊಡಬೇಕು, ಅವರದಕ್ಕೊಪದಿದ್ದರೆ ಪ್ರಭುವರ್ಯರಾದ ತಾವು ಭಾರತದ ಜನತೆಯೊಂದಿಗೆ ಸೇರಿ ಹೋರಾಡುವುದಾಗಿ ಅವರಿಗೆ ತಿಳಿಸಬೇಕು. ದುರದೃಷ್ಟವಶಾತ್ ಪ್ರಭುವರ್ಯರಾದ ತಾವು ಈ ನಮ್ಮ ವಿನಯಪೂರ್ವಕವಾದ ಸಲಹೆಯಂತೆ ನಡೆಯಲು ಒಪ್ಪದ ಪಕ್ಷದಲ್ಲಿ, ಮುಂದಿನ ಆಗಸ್ಟ್ ೧ನೆಯ ತಾರೀಖಿನಿಂದ ನಾವು ಸರ್ಕಾರಕ್ಕೆ ಕೊಡುತ್ತಿರುವ ಸಹಕಾರವನ್ನು ಹಿಂತೆಗೆದುಕೊಳ್ಳಲೇ ಬೇಕಾಗುತ್ತದೆ. ನಮ್ಮ ಸಹಧರ್ಮಿಗಳನ್ನೂ ಮತ್ತು ನಮ್ಮ ಹಿಂದೂ ಸಹೋದರರನ್ನೂ ಹಾಗೆಯೇ ಮಾಡುವಂತೆ ಕೇಳಿಕೊಳ್ಳಬೇಕಾಗುತ್ತವೆ."

ಜೂನ್ ೨೨ರಂದು ಗಾಂಧೀಜಿ, ಮುಸ್ಲಿಮರ ನ್ಯಾಯವಾದ ಬೇಡಿಕೆಗಳಿಗೆ ಗಮನ ಕೊಡಬೇಕೆಂದು ವೈಸರಾಯ್‌ರವರಿಗೆ ಮನವಿ ಮಾಡಿಕೊಂಡರು.

"ಪ್ರಭುವರ್ಯರಾದ ತಮ್ಮ ವಿಶ್ವಾಸವನ್ನು ಸ್ವಲ್ಪಮಟ್ಟಿಗೆ ಪಡೆದಿರುವವನೂ, ಬ್ರಿಟಿಷ್ ಸಾಮ್ರಾಜ್ಯದ ನಿಷ್ಠಾವಂತ ಹಿತಚಿಂತಕನೂ ಆದ ನಾನು ಪ್ರಭುವರ್ಯರಾದ ತಮಗೂ ತಮ್ಮ ಮೂಲಕ ಸಾರ್ವಭೌಮರ ಮಂತ್ರಿಗಳಿಗೂ ಸಲ್ಲಿಸಬೇಕಾದ ಕರ್ತವ್ಯ

ಪೊಂದಿದೆ: ಅದೇನೆಂದರೆ, ಈ ಖಿಲಾಫತ್ ಸಮಸ್ಯೆಗೂ ನನಗೂ ಇರುವ ಸಂಬಂಧವನ್ನೂ ಈ ವಿಷಯದಲ್ಲಿ ನನ್ನ ನಡವಳಿಕೆಯೇನೆಂಬುದನ್ನೂ ವಿವರಿಸುವುದು.

"ಮಹಾಯುದ್ಧದ ತೀರ ಮೊದಲನೆಯ ಹಂತದಲ್ಲಿಯೇ, ಇಂಗ್ಲೆಂಡಿನಲ್ಲಿ ನಾನು ಇಂಡಿಯನ್ ವಾಲಂಟಿಯರ್ ಆಂಬುಲೆನ್ಸ್ ಕೋರನ್ನು ಸಂಘಟಿಸುತ್ತಿದ್ದಾಗಲೇನನಗೆ ಖಿಲಾಫತ್ ಪ್ರಶ್ನೆಯಲ್ಲಿ ಆಸಕ್ತಿ ಹುಟ್ಟಿತು. ಟರ್ಕಿಯು ಜರ್ಮನಿಯೊಡನೆ ಸೇರಿಕೊಳ್ಳಲು ನಿರ್ಧರಿಸಿದಾಗ ಸಣ್ಣ ಮುಸಲ್ಮಾನ್ ಪ್ರಪಂಚವೆಲ್ಲ ಎಷ್ಟು ಕಲಕಿಹೋಯಿತೆಂಬುದನ್ನು ನಾನು ಕಂಡೆ. ೧೯೧೫ರ ಜನವರಿಯಲ್ಲಿ ನಾನು ಭಾರತವನ್ನು ತಲುಪಿದಾಗ ನನಗೆ ಯಾರ ಸಂಸರ್ಗವುಂಟಾಯಿತೋ ಅಂಥ ಮುಸ್ಲಿಮರಲ್ಲಿ ಅದೇ ಕಳವಳ, ಅದೇ ಗಂಭೀರ ಮನೋಭಾವಗಳನ್ನು ಕಂಡೆ. ರಹಸ್ಯ ಒಪ್ಪಂದಗಳ ಸುದ್ದಿ ಹೇಗೋ ಬಯಲಾಗಿಬಿಟ್ಟಾಗ ಅವರ ಕಳವಳ ತೀವ್ರವಾಯಿತು. ಬ್ರಿಟಿಷರ ಉದ್ದೇಶಗಳಲ್ಲಿ ಅಪನಂಬಿಕೆಯು ಅವರ ಮನಸ್ಸನ್ನೆಲ್ಲ ತುಂಬಿತು, ನಿರಾಶೆಯು ಅವರನ್ನು ಸೆರೆಹಿಡಿಯಿತು. ಆಗಲೂ ನಾನು ನಿರಾಶೆಗೆ ಸೋಲಬಾರದೆಂದೂ ಅವರ ಭಯವನ್ನೂ ಭರವಸೆಗಳನ್ನೂ ಸಂಯಮದಿಂದ ವ್ಯಕ್ತಪಡಿಸಬೇಕೆಂದೂ ಅವರಿಗೆ ಬುದ್ಧಿವಾದ ಹೇಳಿದೆ. ಇಡೀ ಭಾರತದ ಮುಸಲ್ಮಾನ್ ಸಮುದಾಯವು ಕಳೆದ ಐದು ವರ್ಷಗಳಲ್ಲಿ ವಿಚಿತ್ರವಾದ ಸಂಯಮದಿಂದ ವರ್ತಿಸಿದೆ ಮತ್ತು ಅದರ ನಾಯಕರು ತಮ್ಮ ಸಮುದಾಯದ ಗಲಭೆಖೋರ ತಂಡಗಳನ್ನು ಸಂಪೂರ್ಣವಾಗಿ ಅಂಕೆಯಲ್ಲಿಟ್ಟುಕೊಳ್ಳಲು ಸಮರ್ಥರಾಗಿದ್ದಾರೆ ಎಂಬುದನ್ನು ಯಾರಾದರೂ ಒಪ್ಪಲೇಬೇಕು.

"ಈ ಶಾಂತಿಯ ಷರತ್ತುಗಳೂ ಪ್ರಭುವರ್ಯರಾದ ತಾವು ಅವುಗಳನ್ನು ಸಮರ್ಥಿಸಿರುವುದೂ ಭಾರತದ ಮುಸಲ್ಮಾನರಿಗೆ ಧಕ್ಕೆಯನ್ನುಂಟು ಮಾಡಿವೆ. ಅದರಿಂದ ಚೇತರಿಸಿಕೊಳ್ಳುವುದೇ ಅವರಿಗೆ ಕಷ್ಟವಾಗುತ್ತದೆ. ಮಂತ್ರಿಗಳು ಕೊಟ್ಟಿದ್ದ ಭರವಸೆಗಳನ್ನು ಈ ಷರತ್ತುಗಳು ಮುರಿದು ಹಾಕಿವೆ ಮತ್ತು ಮುಸಲ್ಮಾನರ ಭಾವನೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ನನ್ನ ಮುಸಲ್ಮಾನ್ ದೇಶಬಾಂಧವರೊಡನೆ ಅತ್ಯಂತ ನಿಕಟವಾದ ಸ್ನೇಹದಿಂದ ಬದುಕಲು ಬಯಸುವ ಒಬ್ಬ ಪಕ್ಕಾ ಹಿಂದೂವಾದ ನಾನು, ಅವರ ಈ ಸಂಕಟ ಸಮಯದಲ್ಲಿ ಅವರಿಗೆ ಬೆಂಬಲವಾಗಿ ನಿಲ್ಲದಿದ್ದರೆ ಭಾರತದ ಪುತ್ರನೆಂದು ಹೇಳಿಕೊಳ್ಳಲು ಅನರ್ಹನಾಗುತ್ತೇನೆಂದು ನನ್ನ ಭಾವನೆ. ನನ್ನ ನಮ್ರತೆಯಿಂದ ಕೂಡಿದ ಅಭಿಪ್ರಾಯದಲ್ಲಿ, ಅವರ ಗುರಿ ನ್ಯಾಯಬದ್ಧವಾದದ್ದು. ತಮ್ಮ ಭಾವನೆಗಳ ವಿಷಯದಲ್ಲಿ ಗೌರವವಿರುವ ಪಕ್ಷಕ್ಕೆ ಟರ್ಕಿಯನ್ನು ಶಿಕ್ಷಿಸಕೂಡದು ಎಂದು ಕೋರುತ್ತಾರೆ ಅವರು. ಮುಸ್ಲಿಂ ಯೋಧರು ಯುದ್ಧದಲ್ಲಿ ಹೋರಾಡಿದ್ದು ತಮ್ಮ ಕಲೀಫರನ್ನೇ ಶಿಕ್ಷೆಗೆ ಗುರಿಪಡಿಸುವುದಕ್ಕಲ್ಲ, ಅಥವಾ ಅವರ ಭೂಭಾಗಗಳನ್ನವರು ಕಳೆದುಕೊಳ್ಳಲಿ ಎಂದಲ್ಲ. ಮುಸಲ್ಮಾನ್ ಮನೋಭಾವವು ಈ ಐದು ವರ್ಷಗಳುದ್ದಕ್ಕೂ ಸುಸಂಗತವಾಗಿಯೇ ಇದೆ.

"ನಾನು ನಿಷ್ಠೆ ಸಲ್ಲಿಸಬೇಕಾದ ಸಾಮ್ರಾಜ್ಯದ ವಿಷಯದಲ್ಲಿ ನಾನು ಮಾಡಬೇಕಾದ ಧರ್ಮವೆಂದರೆ ಮುಸಲ್ಮಾನ್ ಭಾವನೆಗೆ ಈಗ ಉಂಟಾಗಿರುವ ಕ್ರೂರವಾದ ಹಿಂಸೆ

ಯನ್ನು ಪ್ರತಿಭಟಿಸುವುದೇ. ನಾನು ತಿಳಿದಿರುವ ಮಟ್ಟಿಗೂ ಮುಸಲ್ಮಾನರೂ ಹಿಂದೂಗಳೂ ಸಾಮುದಾಯಿಕವಾಗಿ ಬ್ರಿಟಿಷರ ನ್ಯಾಯಶೀಲತೆ ಗೌರವಗಳಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಹಂಟರ್ ಸಮಿತಿಯ ಅಧಿಕ ಪಕ್ಷದವರ ವರದಿ, ಪ್ರಭುವರ್ಯರಾದ ತಾವು ಅದರ ಬಗೆಗೆ ಕಳುಹಿಸಿದ ಸಂದೇಶ ಮತ್ತು ಮಾಂಟೆಗೂರವರ ಉತ್ತರ ಇವೆಲ್ಲ ಆ ಅಪನಂಬಿಕೆಯನ್ನು ಇನ್ನೂ ತೀವ್ರಗೊಳಿಸಿವೆ.

"ಇಂತಹ ಪರಿಸ್ಥಿತಿಯಲ್ಲಿ ನನ್ನಂಥವನೊಬ್ಬನಿಗೆ ತೆರೆದಿರುವ ಮಾರ್ಗ ಒಂದೇ. ಇಲ್ಲವೆ, ನಿರಾಶನಾಗಿ ಬ್ರಿಟಿಷ್ ಆಳ್ವಿಕೆಯೊಡನಿರುವ ಎಲ್ಲ ಸಂಬಂಧಗಳನ್ನೂ ಕಡಿದು ಹಾಕುವುದು, ಬ್ರಿಟಿಷ್ ಸಂವಿಧಾನವು ಈಗ ರೂಢಿಯಲ್ಲಿರುವ ಬೇರೆ ಎಲ್ಲ ಸಂವಿಧಾನಗಳಿಗಿಂತಲೂ ಸ್ವರೂಪತಃ ಉತ್ತಮವಾದುದು ಎಂದು ನನಗೆ ಇನ್ನೂ ನಂಬಿಕೆ ಉಳಿದಿದ್ದರೆ, ಈಗ ಮಾಡಲಾಗಿರುವ ಅನ್ಯಾಯವನ್ನು ಸರಿಪಡಿಸಲು ಏನು ಬೇಕೋ ಅಂಥ ಉಪಾಯವನ್ನು ಮಾಡಿ ತನ್ಮೂಲಕ ಜನರ ನಂಬಿಕೆಯನ್ನು ಪುನಃ ಜೀವಂತಗೊಳಿಸುವುದು. ನನಗೆ ಬ್ರಿಟಿಷ್ ಸಂವಿಧಾನವು ಉತ್ತಮವಾದುದೆಂಬುದರಲ್ಲಿ ನಾನಿನ್ನೂ ನನ್ನ ನಂಬಿಕೆಯನ್ನು ಕಳೆದುಕೊಂಡಿಲ್ಲ. ಸಂಕಟವನ್ನನುಭವಿಸಲು ಅಗತ್ಯವಾದ ಸಾಮರ್ಥ್ಯವನ್ನು ನಾವು ತೋರಿಸಿದ್ದೇ ಆದರೆ, ಈಗಲೂ ಸರ್ಕಾರದಿಂದ ಹೇಗೋ ನ್ಯಾಯವು ದೊರಕುತ್ತದೆ ಎಂಬ ಆಶೆಯು ನನಗಿಲ್ಲದಂತಾಗಿಲ್ಲ. ವಸ್ತುತಃ ಬ್ರಿಟಿಷ್ ಸಂವಿಧಾನದ ಬಗೆಗೆ ನನ್ನ ಭಾವನೆಯೇನೆಂದರೆ, ಅದು ತಮಗೆ ತಾವೇ ಯಾರು ನೆರವಾಗಬಲ್ಲರೋ ಅಂಥವರಿಗೆ ಮಾತ್ರ ಅದು ನೆರವಾಗುತ್ತದೆ ಎಂದು. ದುರ್ಬಲರಾದವರನ್ನು ಅದು ರಕ್ಷಿಸುತ್ತದೆ ಎಂದು ನಾನು ನಂಬಿಲ್ಲ. ಸಬಲರಾದವರಿಗೆ ತಮ್ಮ ಬಲವನ್ನುಳಿಸಿಕೊಳ್ಳಲು ಹಾಗೂ ಬೆಳೆಸಿಕೊಳ್ಳಲು ತಡೆಯಿಲ್ಲದ ಅವಕಾಶವನ್ನದು ಕೊಡುತ್ತದೆ. ಈ ಸಂವಿಧಾನಕ್ಕೊಳಪಟ್ಟಿರುವ ದುರ್ಬಲರಿಗೆ ದುರ್ಗತಿಯೇ ಕಟ್ಟಿಟ್ಟಿದ್ದು.

"ಅಂತು ಬ್ರಿಟಿಷ್ ಸಂವಿಧಾನದಲ್ಲಿ ನನಗೆ ನಂಬಿಕೆಯಿರುವುದರಿಂದಲೇ, ಮಂತ್ರಿಗಳು ಕೊಟ್ಟಿದ್ದ ಭರವಸೆಗಳಿಗೂ ಮುಸಲ್ಮಾನರ ಭಾವನೆಗಳಿಗೂ ಅನುಗುಣವಾಗಿ ಶಾಂತಿಯ ಷರತ್ತುಗಳನ್ನು ಪರಿಷ್ಕರಿಸದೆ ಹೋದ ಪಕ್ಷದಲ್ಲಿ, ನನ್ನ ಮುಸಲ್ಮಾನ್ ಮಿತ್ರರು ಪ್ರಭುಗಳಾದ ತಮ್ಮ ಸರ್ಕಾರಕ್ಕೆ ಕೊಡುತ್ತಿರುವ ಸಹಕಾರವನ್ನು ಹಿಂತೆಗೆದುಕೊಳ್ಳಬೇಕೆಂದು ಮುಸಲ್ಮಾನರಿಗೂ ಅವರೊಡನೆ ತಾವು ಸೇರಿಕೊಳ್ಳಬೇಕೆಂದು ಹಿಂದೂಗಳಿಗೂ ನಾನು ಬುದ್ಧಿವಾದ ಹೇಳಿದ್ದೇನೆ.

"ಸಾರ್ವಭೌಮರ ಮಂತ್ರಿಗಳೂ ಸಹ ಯಾವ ಘೋರ ಅನ್ಯಾಯಕ್ಕೆ ಭಾಗಿಗಳಾಗಿದ್ದರೋ ಅದರ ಬಗೆಗೆ ತಮ್ಮ ದೃಢವಾದ ಅಸಮ್ಮತಿಯನ್ನು ಸೂಚಿಸಲು ಮುಸಲ್ಮಾನರಿಗೆ ಮೂರು ದಾರಿಗಳಿದ್ದುವು:

(೧) ಹಿಂಸಾಕೃತ್ಯಗಳನ್ನು ಅವಲಂಬಿಸುವುದು (೨) ಸಮುದಾಯ ಸಮುದಾಯವೇ ದೇಶಬಿಟ್ಟು ತೊಲಗುವುದು (೩) ಸರಕಾರದೊಂದಿಗೆ ಸಹಕರಿಸುವುದನ್ನು ನಿಲ್ಲಿಸಿ ತನ್ಮೂಲಕ ಈಗಾಗಿರುವ ಅನ್ಯಾಯಕ್ಕೆ ತಾವೂ ಭಾಗಿಗಳಾಗದಿರುವುದು.

"ಪ್ರಭುಗಳಾದ ತಮಗೆ ಮುಸಲ್ಮಾನರ ಪೈಕಿ ಅತ್ಯಂತ ಧೀರರಾದವರೂ ಸಹ–ಇವರು ಅತ್ಯಂತ ವಿಚಾರಶೂನ್ಯರೂ ಆಗಿದ್ದಿರಬಹುದು–ಹಿಂಸಾಕೃತ್ಯಗಳಿಗೆ ಅನುಕೂಲ ರಾಗಿದ್ದ ಕಾಲವೊಂದಿತ್ತೆಂಬ ವಿಷಯವು ತಿಳಿದಿರಬೇಕು. ಆಗ ಹಿಜ್ರತ್ (ದೇಶತ್ಯಾಗ) ಎಂಬುದನ್ನು ಸಂಗ್ರಾಮದ ಘೋಷಣೆಯನ್ನಾಗಿ ಬಳಸುವುದು ಇನ್ನೂ ನಿಂತಿರಲಿಲ್ಲ. ನನ್ನ ತಾಳ್ಮೆಗೂಡಿದವಾದದಿಂದ ಹಿಂಸಾಪ್ರವರ್ತಕ ಪಕ್ಷವನ್ನು ಅದರ ಮಾರ್ಗಗಳಿಂದ ವಿಮುಕ್ತಗೊಳಿಸುವುದರಲ್ಲಿ ನಾನು ಸಫಲನಾಗಿದ್ದೇನೆಂದು ಹೇಳಿಕೊಳ್ಳುವ ಸಾಹಸ ಮಾಡುತ್ತಿದ್ದೇನೆ. ಹಿಂಸೆಯಿಂದ ಅವರನ್ನು ಸನ್ಮಾರ್ಗಕ್ಕೆಳೆಯಲು ನಾನು ಮಾಡಿದ ಸಫಲ ಪ್ರಯತ್ನವು ನೈತಿಕ ಕಾರಣಗಳಿಂದಲ್ಲ ಎಂದೊಪ್ಪಿಕೊಳ್ಳುತ್ತೇನೆ. ಶುದ್ಧಾಂಗವಾಗಿ ವ್ಯಾವಹಾರಿಕ ಪ್ರಯೋಜನದ ಕಾರಣಗಳಿಂದ ಮಾತ್ರವೇ ಮಾಡಿದ್ದು. ಆಗಿರುವ ಪರಿಣಾಮವಂತು, ಸದ್ಯಕ್ಕೆ ಆದರೂ, ಹಿಂಸೆಯು ನಿಂತು ಹೋಗಿರುವುದು. ಹಿಜ್ರತ್ ಪಂಥವು ತನ್ನ ಚಟುವಟಿಕೆಯನ್ನು ಪೂರ್ತಿಯಾಗಿ ನಿಲ್ಲಿಸಿಲ್ಲವೆಂದರೂ, ಅದಕ್ಕೆ ತಡೆಯೇನೋ ಉಂಟಾಗಿಯೇ ಇದೆ. ಗಣನೀಯವಾದಷ್ಟು ಬಲಿದಾನವನ್ನೊಳಗೊಂಡಂಥ ಒಂದು ನೇರವಾದ ಚಳುವಳಿಯ ರೂಪವನ್ನು ಜನರು ಅವರ ಮುಂದೆ ಇಡದೆ ಹೋಗಿದ್ದರೆ, ಅದನ್ನು ಸಾರ್ವಜನಿಕರು ವ್ಯಾಪಕವಾಗಿ ಕೈಗೊಂಡರೆ ಅದು ಸಫಲವಾಗಿಯೇ ತೀರುವುದೆಂಬ ಭರವಸೆ ಇಲ್ಲದೆ ಹೋಗಿದ್ದರೆ, ಹಿಂಸೆಯು ಸಿಡಿದೇಳುವುದನ್ನು ಎಂಥ ದಮನಶಕ್ತಿಗೇ ಆಗಲಿ ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೆಂದು ನನ್ನ ನಂಬಿಕೆ. ಅಸಹಕಾರವೊಂದೇ ಅಂತಹ ಘನತೆಯಿಂದ ಕೂಡಿದ ಹಾಗೂ ಶಾಸನಬದ್ಧವಾದ ಪ್ರತ್ಯಕ್ಷ ಚಳುವಳಿಯ ರೂಪ. ಏಕೆಂದರೆ ದುರಾಡಳಿತ ಮಾಡುವ ಒಬ್ಬ ಆಡಳಿತಗಾರನಿಗೆ ನೆರವಾಗಲೊಲ್ಲದ ಪ್ರಜೆಯೊಬ್ಬನ ಹಕ್ಕು ಅದು, ಅನಾದಿಕಾಲದಿಂದಲೂ ಅಂತಹ ಮಾನ್ಯತೆ ಪಡೆದದ್ದು.

"ಹೀಗೆನ್ನುವಾಗಲೇ ನಾನು, ಜನಸಾಮಾನ್ಯವು ಆಚರಿಸುವ ಅಸಹಕಾರದೊಡನೆಯೇ ಭಾರೀ ಅಪಾಯಗಳೂ ಉಂಟಾಗಬಹುದೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಭಾರತದ ಮುಸಲ್ಮಾನರ ಮೇಲೆ ಈಗ ಎರಗಿ ಬಂದಿರುವಂಥ ವಿಷಮ ಪರಿಸ್ಥಿತಿಯಲ್ಲಿ, ಅಪೇಕ್ಷಿತವಾದ ಬದಲಾವಣೆಯನ್ನು ಉಂಟು ಮಾಡಬೇಕಾದರೆ ಭಾರೀ ಅಪಾಯಗಳನ್ನೊಳಗೊಳ್ಳದ ಯಾವ ಕಾರ್ಯಕ್ರಮದಿಂದಲೂ ಸಾಧ್ಯವಿಲ್ಲ. ಕೆಲವು ಅಪಾಯಗಳನ್ನು ಎದುರಿಸದಿದ್ದರೆ ಇನ್ನೂ ಭಾರೀ ಅಪಾಯಗಳನ್ನು ಸ್ವಾಗತಿಸಿದಂತೆಯೇ. ಸುವ್ಯವಸ್ಥೆಯೇ ಕುಸಿದು ಬಿದ್ದರೂ ಬೀಳಬಹುದು.

"ಆದರೂ ಅಸಹಕಾರವನ್ನು ತಪ್ಪಿಸಿಕೊಳ್ಳಲು ಇನ್ನೂ ಒಂದು ದಾರಿಯುಂಟು. ಮುಸ್ಲಿಮರ ಮನವಿಯು ಪ್ರಭುಗಳಾದ ತಾವೇ ಈ ಚಳುವಳಿಯ ಮುಂದಾಳಾಗಿ ನಿಲ್ಲಬೇಕೆಂದು ಕೋರಿಕೊಂಡಿದೆ, ತಮಗೆ ಹಿಂದಿದ್ದ ಸನ್ಮಾನ್ಯ ವೈಸರಾಯರು ದಕ್ಷಿಣ ಆಫ್ರಿಕದ ಸಂಕಷ್ಟಕಾಲದಲ್ಲಿ ಮಾಡಿದಂತೆ. ಆದರೆ ಹಾಗೆ ಮಾಡುವುದು ಸೂಕ್ತವಲ್ಲವೆಂದು ತಮಗೆ ತೋರುವ ಪಕ್ಷಕ್ಕೆ, ಅಸಹಕಾರವೇ ದಾರುಣ ಅಗತ್ಯವಾಗುವ ಪಕ್ಷಕ್ಕೆ, ನನ್ನ

ಸಲಹೆಯನ್ನು ಒಪ್ಪಿಕೊಂಡಿರುವವರೂ ನಾನೂ ಒಂದು ಉಗ್ರವಾದ ಕರ್ತವ್ಯ ಪ್ರಜ್ಞೆಯಿಂದಲ್ಲದೆ ಅದಕ್ಕಿಂತ ಕೀಳಾದ ಯಾವ ಉದ್ದೇಶದಿಂದಲೂ ಪ್ರೇರಿತರಾಗಿಲ್ಲವೆಂದಾದರೂ ಮನ್ನಣೆಕೊಡುತ್ತೀರೆಂದು ನಂಬುತ್ತೇನೆ."

ಅವರು ವೈಸರಾಯಿಗೆ ಮಾಡಿಕೊಂಡ ಹೃತ್ಪೂರ್ವಕವಾದ ಪ್ರಾರ್ಥನೆಯಿಂದ ಏನೂ ಪರಿಣಾಮವಾಗಲಿಲ್ಲ. ಜುಲೈ ೭ನೆಯ ತಾರೀಖು ಅಸಹಕಾರ ಸಮಿತಿಯು ಹೇಗೆ ಮತ್ತು ಯಾವಾಗ ಕಾರ್ಯತೊಡಗಬೇಕು ಎಂಬುದರ ಬಗೆಗೆ ಸೂಚನೆಗಳನ್ನು ನೀಡಿತು. ಈ ಕಾರ್ಯಕ್ರಮದಲ್ಲಿ ಎಲ್ಲ ಬಗೆಯ ಗೌರವಾನ್ವಿತ ಬಿರುದುಗಳನ್ನೂ ಅಧಿಕಾರಗಳನ್ನೂ ತ್ಯಜಿಸುವುದು, ಶಾಲಾಕಾಲೇಜುಗಳು ನ್ಯಾಯಾಲಯಗಳು, ಮತ್ತು ಶಾಸನಸಭೆಗಳನ್ನು ಬಹಿಷ್ಕರಿಸುವುದು ಇವಕ್ಕೆಲ್ಲ ಪ್ರಮುಖಸ್ಥಾನ ಕೊಡಲಾಗಿತ್ತು. ಸಮಿತಿಯು ಹೀಗೆ ಮನವಿ ಮಾಡಿಕೊಂಡಿತು: "ಸ್ವದೇಶೀ ಚಳುವಳಿಯನ್ನು ಕೂಡಲೇ ಮುಂದುವರಿಸಬೇಕು, ಆಗಸ್ಟ್ ೧ರ ವರೆವಿಗೂ ಕಾಯಬೇಕಾಗಿಲ್ಲ. ಏಕೆಂದರೆ ಅದೊಂದು ಸದಾ ಅನುಷ್ಠಾನದಲ್ಲಿರಬೇಕಾದ ಶಾಶ್ವತ ನಿಯಮ. ಪ್ರಕೃತ ಸಮಸ್ಯೆಯ ಪರಿಹಾರವು ಉಂಟಾದಾಗಲೂ ಸ್ವದೇಶಿಯ ಅನುಷ್ಠಾನವು ನಿಲ್ಲಿಸತಕ್ಕದ್ದಲ್ಲ."

ಸ್ವದೇಶೀ ಕಾರ್ಯಕ್ರಮದಲ್ಲಿ ಗಾಂಧೀಜಿ ಖದ್ದರಿಗೆ ಪ್ರಧಾನವಾಗಿ ಪ್ರಾಮುಖ್ಯ ಕೊಟ್ಟರು. ಅವರ ಸಂದೇಶ ತಕ್ಕ ಪರಿಣಾಮ ನೀಡಿತು. ದೇಶಾದ್ಯಂತ 'ಚರಕದ ಸಂಗೀತ'ವು ಗುಂಜಿಸತೊಡಗಿತು. ಜುಲೈ ೨೧ರ ಯಂಗ್ ಇಂಡಿಯಾದಲ್ಲಿ ತಮ್ಮ ಭಾವಗೀತಾ ಸದೃಶವಾದ ಸ್ವರದಲ್ಲಿ ಗಾಂಧಿ ಹೀಗೆ ಬರೆದರು:

"ನಿಧಾನವಾಗಿ, ಆದರೂ ಖಂಡಿತವಾಗಿ, ಭಾರತದ ಬಹುಶಃ ಅತ್ಯಂತ ಪ್ರಾಚೀನ ಯಂತ್ರದ ಸಂಗೀತವು ಮತ್ತೆ ಸಮಾಜದಲ್ಲಿ ವ್ಯಾಪಿಸುತ್ತದೆ. ರಾಷ್ಟ್ರಕ್ಕಾಗಿ ಭಾರತದ ರಾಣಿ ಮಹಾರಾಣಿಯರು ನೂಲುವವರೆಗೂ ರಾಜ ಮಹಾರಾಜರು ಮಗ್ಗಗಳ ಹಿಂದೆ ಕುಳಿತು ರಾಷ್ಟ್ರಕ್ಕಾಗಿ ಬಟ್ಟೆಗಳನ್ನು ನೇಯುವವರೆಗೂ ತಮಗೆ ತೃಪ್ತಿಯುಂಟಾಗುವುದಿಲ್ಲ. ಪಂಡಿತ ಮಾಳವೀಯಾಜಿ ಹೇಳಿದ್ದಾರೆ: ತನ್ನ ಟೋಪಿಗಳನ್ನು ತಾನೇ ತಯಾರಿಸಿಕೊಳ್ಳುತ್ತಿದ್ದ ಔರಂಗಜೇಬನ ಮೇಲ್ಪಂಕ್ತಿ ಅವರ ಮುಂದಿದೆ. ಇನ್ನೂ ದೊಡ್ಡ ಚಕ್ರವರ್ತಿಯೊಬ್ಬ, ಕಬೀರ್ ಸ್ವತಃ ನೇಕಾರನೇ ಆಗಿದ್ದ, ಈ ಕಲೆಯನ್ನು ಆತ ತನ್ನ ಗೀತಗಳಲ್ಲಿ ಅಮರಗೊಳಿಸಿದ್ದಾನೆ. ಯೂರೋಪಿನ ರಾಣಿಯರು, ಯೂರೋಪು ಸೈತಾನನ ಬೋನಿಗೆ ಸಿಕ್ಕಿಕೊಳ್ಳುವುದಕ್ಕೆ ಮುಂಚೆ, ನೂಲುತ್ತಿದ್ದರು, ಅದೊಂದು ಉದಾತ್ತ ವೃತ್ತಿ ಎಂದು ಭಾವಿಸಿದ್ದರು. 'ಸ್ಪಿನ್‌ಸ್ಟರ್' ಮತ್ತು 'ವೈಫ್' ಎಂಬ ಪದಗಳೇ ನೂಲುವ ಮತ್ತು ನೇಯುವ ಕಲೆಯ ಪುರಾತನ ಘನತೆಗೆ ಸಾಕ್ಷಿಯಾಗಿವೆ. "ಶಿಷ್ಟವ್ಯಕ್ತಿಯಾಗಿದ್ದ ಆಡಮ್ ಅಗೆಯುತ್ತಿದ್ದಾಗ ಮತ್ತು ಈವ್ ನೇಯುತ್ತಿದ್ದಾಗ" ಎಂಬ ಮಾತು ಕೂಡ ಈ ಸತ್ಯಾಂಶದ ನೆನಪನ್ನು ತರುತ್ತದೆ. ಭಾರತದ ರಾಜವರ್ಗದ ಮನವೊಲಿಸಿ ಅವರು ಈ ನಮ್ಮ ಪವಿತ್ರ ಭೂಮಿಯ ಪುರಾತನ ವ್ಯಕ್ತಿಗೆ ಹಿಂದಿರುಗುವಂತೆ ಮಾಡುವ ಭರವಸೆಯನ್ನು ಪಂಡಿತ ಮಾಳವೀಯಜೀ ಯವರು ತಾಳಿರುವುದಕ್ಕೆ ಕಾರಣವಿದೆ. ಭಾರತದ ಏಳಿಗೆಯ ಮತ್ತು

ನಿಜವಾದ ಸ್ವಾತಂತ್ರ್ಯದ ಪುನರುಜ್ಜೀವನವು ಶಸ್ತ್ರಾಸ್ತ್ರಗಳ ಝಣತ್ಕಾರವನ್ನವಲಂಬಿಸಿಲ್ಲ. ಮನೆಮನೆಯಲ್ಲೂ ಚರಕದ ಸಂಗೀತದ ಪುನಃ ಪ್ರವೇಶವನ್ನು ಅದು ವಿಶೇಷವಾಗಿ ಅವಲಂಬಿಸಿದೆ. ನಿಕೃಷ್ಟವಾದ ಹಾರ್ಮೋನಿಯಮ್, ಕಾನ್ಸರ್ಟಿನಾ ಮತ್ತು ಅರ್ಕಾಡಿಯನ್‌ಗಳಿಗಿಂತ ಚರಕವು ಮಧುರವಾದ ನಾದವನ್ನು ಕೊಡುತ್ತದೆ, ಹೆಚ್ಚು ಲಾಭದಾಯಕವೂ ಆಗಿದೆ.

"ಪಂಡಿತಜೀ ಅವರು ತಮ್ಮ ಅನುಕರಣೀಯವಾದ, ಸೌಮ್ಯ ರೀತಿಯಲ್ಲಿ ಭಾರತದ ರಾಜವರ್ಗವು ಚರಕವನ್ನು ಹಿಡಿಯುವಂತೆ ಪ್ರಯತ್ನಿಸುತ್ತಿರುವಾಗಲೇ, ಸ್ವಯಂ ಭಾರತೀಯ ವರಿಷ್ಟ ವರ್ಗಕ್ಕೆ ಸೇರಿದ ಶ್ರೀಮತಿ ಸರಳಾದೇವಿ ಚೌಧುರಾಣಿಯವರು ಈ ಕಲೆಯನ್ನು ಕಲಿತು ಈ ಚಳುವಳಿಗೆ ತಮ್ಮ ಹೃದಯ ಆತ್ಮಗಳನ್ನೇ ಅರ್ಪಿಸಿ ಬಿಟ್ಟಿದ್ದಾರೆ. ಅಮೃತಸರ, ಲೂಧಿಯಾನ ಮತ್ತು ಇತರೆಡೆಗಳಲ್ಲಿ ಅವರು ಶ್ರೋತೃವೃಂದಗಳ ಮುಂದೆ ಮಾತನಾಡಿದ್ದಾರೆ. ಅಮೃತಸರದಲ್ಲಿರುವ ತಮ್ಮ ನೂಲುಗಾರಿಕೆ ಸಮಿತಿಗೆ ಶ್ರೀಮತಿ ರತನ್‌ಚಂದ್ ಮತ್ತು ಬುಗ್ಗಾ ಚೌಧುರಿ ಮತ್ತು ವಿಖ್ಯಾತಿ ಪಡೆದಿರುವ ರತನ್‌ದೇವಿ ಇವರೆಲ್ಲರ ಸೇವೆಗಳನ್ನು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಏಪ್ರಿಲ್ ೧೩ರ ಘೋರ ರಾತ್ರಿಯಲ್ಲಿ ಜನರಲ್ ಡಯರ್ ವಿಧಿಸಿದ್ದ ಕರ್ಫ್ಯೂ ಆಜ್ಞೆಯನ್ನೂ ಲಕ್ಷಿಸದೆ ನೂರುಗಟ್ಟಲೆ ಸತ್ತವರ ಹಾಗೂ ಸಾಯುತ್ತಿದ್ದವರ ನಡುವೆ ಕೇವಲ ಏಕಾಕಿನಿಯಾಗಿ ತಮ್ಮ ಪತಿಯ ಶೀತಲ ಶಿರಸ್ಸನ್ನು ತಮ್ಮ ತೊಡೆಯ ಮೇಲಿಟ್ಟುಕೊಂಡು ಕುಳಿತಿದ್ದರು ಈ ರತನ್‌ದೇವಿ. ಈ ಮಹಿಳೆಯರಿಗೆ ನನ್ನ ಅಭಿನಂದನೆಯನ್ನು ಅರ್ಪಿಸುವ ಸಾಹಸ ಮಾಡುತ್ತಿದ್ದೇನೆ. ಅವರು ಚರಕದ ಸಂಗೀತದಲ್ಲೂ ರಾಷ್ಟ್ರೀಯ ಕೆಲಸವನ್ನು ಮಾಡುತ್ತಿದ್ದೇವೆಂಬ ಭಾವನೆಯಲ್ಲೂ ಅವರಿಗೆ ಸಮಾಧಾನ ಸಿಗಲಿ. ಅಮೃತಸರದ ಇತರ ಮಹಿಳೆಯರೂ ಸರಳಾದೇವಿಗೆ ಆಕೆಯ ಪ್ರಯತ್ನಗಳಲ್ಲಿ ನೆರವಾಗುತ್ತಾರೆಂದೂ ಅಮೃತಸರದ ಪುರುಷರೂ ಸಹ ತಮ್ಮ ಸ್ವಂತ ಕರ್ತವ್ಯವನ್ನು ಅರಿತುಕೊಳ್ಳುತ್ತಾರೆಂದೂ ನಾನು ಆಶಿಸುತ್ತೇನೆ. ಮುಂಬಯಿಯಲ್ಲಿ ಗಣ್ಯ ಕುಟುಂಬಗಳ ಮಹಿಳೆಯರು ಈಗಾಗಲೇ ನೂಲುವುದನ್ನು ಕೈಗೊಂಡಿದ್ದಾರೆಂಬುದನ್ನು ವಾಚಕರು ಬಲ್ಲರು.

"ಈ ಮಹಾ ಕಲೆಯನ್ನು ಪುನರುಜ್ಜೀವನಗೊಳಿಸುವ ಈ ಪ್ರಯತ್ನವನ್ನು ನೋಡಿ ನಗುವ ಸ್ನೇಹಿತರೂ ಇದ್ದಾರೆಂಬುದು ನನಗೆ ಗೊತ್ತು. ಗಿರಣಿಗಳು, ಹೊಲಿಗೆ ಯಂತ್ರಗಳು ಅಥವಾ ಟೈಪ್‌ರೈಟರುಗಳು ಇವುಗಳಿರುವ ಇಂದಿನ ದಿನಗಳಲ್ಲಿ ಮೂಲೆಯ ಪಾಲಾಗಿರುವ ಚರಕವನ್ನು ಪುನರುಜ್ಜೀವನಗೊಳಿಸುವುದರಲ್ಲಿ ಸಫಲನಾಗುವೆನೆಂದು ಹುಚ್ಚು ಹಿಡಿದಿರುವನು ಮಾತ್ರವೇ ಆಶಿಸಬಹುದು ಎಂದು ಅವರು ನನಗೆ ನೆನಪು ಕೊಡುತ್ತಾರೆ. ಆದರೆ ಈ ಮಿತ್ರರು, ಸೂಜಿಯು ಇನ್ನೂ ಹೊಲಿಗೆ ಯಂತ್ರಕ್ಕೆ ತನ್ನ ಸ್ಥಳವನ್ನು ಬಿಟ್ಟುಕೊಟ್ಟಿಲ್ಲ ಎಂಬುದನ್ನೂ ಟೈಪ್‌ರೈಟರಿದ್ದರೂ ನಮ್ಮ ಕೈ ತನ್ನ ಕೌಶಲವನ್ನಿನ್ನೂ ಕಳೆದುಕೊಂಡಿಲ್ಲ ಎಂಬುದನ್ನು ಮರೆತಿದ್ದಾರೆ. ಕುಟುಂಬಗಳ ಅಡುಗೆ ಮನೆಗಳು ಹೋಟೆಲುಗಳೊಡನೆಯೇ ಇರುವಂತೆ ಚರಕವೂ ಸಹ ಗಿರಣಿಗಳೊಡನೆಯೇ

ಇರುವುದಕ್ಕೆ ಏನೇನೂ ಅಡ್ಡಿಯಿಲ್ಲ. ಹಾಗಿರಲಾರದೆಂಬುದಕ್ಕೆ ಎಳ್ಳಷ್ಟೂ ಕಾರಣವಿಲ್ಲ. ನಿಜವಾಗಿ ನೋಡಿದರೆ, ಟೈಪ್‌ರೈಟರ್‌ಗಳು ಹೊಲಿಗೆಯಂತ್ರಗಳೇ ಹೋಗಬಹುದು; ಆದರೂ ಸೂಜಿ ಮತ್ತು ಲೇಖಣಿಗಳು ಉಳಿದೇ ಉಳಿಯುತ್ತವೆ. ಗಿರಣಿಗಳು ನಾಶವಾದರೂ ಆಗಬಹುದು. ಚರಕವಾದರೋ ರಾಷ್ಟ್ರದ ಒಂದು ಅಗತ್ಯ. ಸಂಶಯಾತ್ಮಕರು ಬೇಕಾದರೆ, ಬಿಡಿ ಕುಟುಂಬಗಳನ್ನು ಹೋಗಿ ನೋಡಲಿ; ಆ ಕುಟುಂಬಗಳ ಅತ್ಯಲ್ಪ ವರಮಾನಕ್ಕೆ ಚರಕಗಳು ಮತ್ತೆ ಪೋಷಕ ವರಮಾನವನ್ನು ಒದಗಿಸುತ್ತಿವೆ. ಚರಕವು ಅವರ ಮನೆಗಳಿಗೆ ಆನಂದವನ್ನು ತಂದಿಲ್ಲವೇ ಎಂಬುದನ್ನು ಅಲ್ಲಿಯ ನಿವಾಸಿಗಳನ್ನೇ ಕೇಳಲಿ. ದೇವರ ದಯೆಯಿಂದ ಮಾನ್ಯ ರೇವಾಶಂಕರ್ ಜಗಜೀವನ್ ಅವರು ಪ್ರಕಟಿಸಿರುವ ಬಹುಮಾನವು ಸಫಲವಾಗುವ ಸೂಚನೆ ಕಂಡುಬರುತ್ತಿದೆ. ಸದ್ಯದಲ್ಲೇ ಭಾರತಕ್ಕೆ ಸುಧಾರಿಸಿದ ಚರಕವೊಂದು ದೊರೆಯಲಿದೆ. ದಖನ್ನಿನ ಸಹನಶೀಲನಾದ ಒಬ್ಬ ಕಸಬುದಾರನ ಅದ್ಭುತ ಸೃಷ್ಟಿ ಅದು. ಅತಿ ಸರಳ ಸಾಮಗ್ರಿಗಳಿಂದ ಅದು ನಿರ್ಮಿತವಾಗಿದೆ. ಅದರಲ್ಲಿ ದೊಡ್ಡ ತೊಡಕೇನೂ ಇಲ್ಲ. ಬಹಳ ಅಗ್ಗವಾಗಿಯೂ ಇರುತ್ತದೆ, ಅದನ್ನು ಸುಲಭವಾಗಿ ರಿಪೇರಿಯನ್ನೂ ಮಾಡಿಕೊಳ್ಳಬಹುದು. ಸಾಮಾನ್ಯ ಚರಕಕ್ಕಿಂತ ಅದು ಹೆಚ್ಚು ನೂಲು ಕೊಡುತ್ತದೆ. ಐದೇ ವರ್ಷದ ಹುಡುಗ ಅಥವಾ ಹುಡುಗಿ ಕೂಡ ಅದನ್ನು ನಡೆಸಬಹುದು. ಆದರೆ ಈ ಹೊಸ ಚರಕವು ಈಗ ಕೊಡುತ್ತಿರುವ ಭರವಸೆಯನ್ನು ಈಡೇರಿಸುವುದೋ ಇಲ್ಲವೋ, ಹೇಗಾದರೂ ಆಗಲಿ; ಕೈ ನೂಲುವಿಕೆ ಮತ್ತು ಕೈ ನೇಯ್ಗೆಗಳು ಭಾರತದ ಆರ್ಥಿಕ ಮತ್ತು ನೈತಿಕ ಪುನರುಜ್ಜೀವನಕ್ಕೆ ಅತಿ ದೊಡ್ಡ ಕೊಡುಗೆಯನ್ನಂತೂ ನೀಡುತ್ತವೆಯೆಂದು ನನ್ನ ಮನವರಿಕೆ. ಲಕ್ಷೋಪಲಕ್ಷ ಜನರಿಗೆ ವ್ಯವಸಾಯಕ್ಕೆ ಪೂರಕವಾದ ಒಂದು ಸರಳ ಕೈಗಾರಿಕೆ ಬೇಕೇ ಬೇಕು. ವರ್ಷಾಂತರಗಳ ಹಿಂದೆ ನೂಲುವುದು ಗೃಹ ಕೈಗಾರಿಕೆಯಾಗಿತ್ತು. ಲಕ್ಷಾಂತರ ಜನರು ತಮ್ಮ ಮನೆಗಳಲ್ಲೇ ಅನ್ನಾಭಾವದಿಂದ ಸಾಯುವುದನ್ನು ತಪ್ಪಿಸಬೇಕಾದರೆ, ಪ್ರತಿ ಹಳ್ಳಿಯು ತನ್ನ ತನ್ನ ನೇಕಾರನನ್ನು ಪುನಃ ಪಡೆಯಲೇಬೇಕು."

ಅದೇ ಸಂಚಿಕೆಯಲ್ಲಿ ಗಾಂಧೀಜಿ ಸಪ್ರೂ ಅವರೊಡನೆ ಹೋರಾಟ ಮಾಡಬೇಕಾಯಿತು. ಕಾರಣ ಅಸಹಕಾರದಲ್ಲಿ ತೊಡಗದಂತೆ ಮುಸ್ಲಿಮರನ್ನು ಸಪ್ರೂ ಅವರು ತಡೆದದ್ದು. ಗಾಂಧೀಜಿ ಬರೆದರು ಅಸಹಕಾರದಂತಹ ಉಗ್ರಮಾರ್ಗವನ್ನು ಹಿಡಿಯಬೇಕಾದರೆ ಅದನ್ನು ಸಮರ್ಥಿಸುವ ಕಾರಣವೂ ಅಷ್ಟೇ ಘೋರವಾದದ್ದಾಗಿರಬೇಕು, ಇದು ನಿಸ್ಸಂದೇಹ. ಈಗ ಇಸ್ಲಾಂ ಧರ್ಮದ ಮೇಲೆ ಎಸಗಿರುವ ಅಪಮಾನಕ್ಕೆ ಸಮನಾದದ್ದು ಒಂದು ಇಡೀ ಶತಮಾನ ಕಳೆಯುವವರೆಗೂ ಪುನಃ ಆಗಲಾರದು. ಇಸ್ಲಾಮ್ ಧರ್ಮವು ಈಗ ಎದ್ದು ನಿಲ್ಲಬೇಕು, ಇಲ್ಲವೆ 'ಪತಿತ'ವಾಗಬೇಕು. ಸದಾಕಾಲಕ್ಕೆ ಅಲ್ಲದಿದ್ದರೂ ಒಂದು ಶತಮಾನ ಪೂರ್ತಿ ಎಂಬುದು ಖಂಡಿತ. ಜಲಿಯನ್‌ವಾಲಾ ಬಾಗಿನ ಹತ್ಯಾಕಾಂಡ, ಅದರ ಹಿಂದೆಯೇ ಬಂದ ಅನಾಗರಿಕ ವರ್ತನೆ, ಹಂಟರ್ ಸಮಿತಿಯು ತಿಪ್ಪೆಸಾರಿಸಿದ್ದು, ಭಾರತ ಸರ್ಕಾರವು (ಇಂಗ್ಲೆಂಡಿಗೆ) ಕಳುಹಿಸಿದ ಸಂದೇಶ, ಮಾಂಟೆಗೂ

ರವರು ಮೊದಲ ವೈಸರಾಯಿಯು ಆಮೇಲೆ ಪಂಜಾಬಿನ ಲೆಫ್ಟಿನೆಂಟ್ ಗವರ್ನರನ ಕಾರ್ಯಕ್ರಮವನ್ನು ಎತ್ತಿಹಿಡಿದದ್ದು, ಲಷ್ಕರೀ ಶಾಸನದ ಅವಧಿಯಲ್ಲಿ ಪಂಜಾಬಿನ ಜನರ ಜೀವನವನ್ನೇ ನರಕವನ್ನಾಗಿ ಮಾಡಿದ ಅಧಿಕಾರಿಗಳನ್ನು ವಜಾ ಮಾಡಲು ನಿರಾಕರಿಸಿದ್ದು - ಇವೆಲ್ಲಕ್ಕಿಂತ ಘೋರವಾದ ಅನ್ಯಾಯವನ್ನು ಕಲ್ಪಿಸಿಕೊಳ್ಳಲು ಸಹ ನನಗೆ ಸಾಧ್ಯವಿಲ್ಲ. ಈ ಕೃತ್ಯಗಳು ಭಾರತಕ್ಕೆ ವಿರುದ್ಧವಾಗಿ ಈಗಲೂ ಮುಂದುವರಿಯುತ್ತಿರುವ ಒಂದು ಅನ್ಯಾಯ ಪರಂಪರೆಯೇ ಆಗಿವೆ. ಭಾರತಕ್ಕೆ ಕಿಂಚಿತ್ತಾದರೂ ಆತ್ಮಗೌರವದ ಅರಿವು ಇರುವುದಾದರೆ, ತಾನು ಪಡೆದಿರುವ ಸಮಸ್ತ ಲೌಕಿಕ ಸಂಪತ್ತನ್ನೂ ಬಲಿಕೊಟ್ಟಾದರೂ ಈ ಅನ್ಯಾಯಗಳನ್ನು ಸರಿಪಡಿಸಬೇಕು. ಹಾಗೆ ಮಾಡದಿದ್ದರೆ ಒಂದು ಬಟ್ಟಲು ಗಂಜಿಗಾಗಿ ತನ್ನ ಆತ್ಮವನ್ನೇ ಮಾರಿಕೊಂಡಂತಾಗುತ್ತದೆ."

ಆಗಸ್ಟ್ ೧ನೆಯ ತಾರೀಖಿನ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಯಶಸ್ವಿಯಾಗುವಂತೆ ಮೊದಲು ಖಿಲಾಫತ್ ಸಮಿತಿಯು ಆದೇಶಗಳನ್ನು ಕೊಟ್ಟಿತು. ಶಾಂತಿಯ ಷರತ್ತುಗಳ ಪರಿಷ್ಕರಣವನ್ನು ಪಡೆದುಕೊಳ್ಳುವ ಆಶೆಗಳನ್ನು ಅದು ಇನ್ನೂ ತ್ಯಜಿಸಿರಲಿಲ್ಲ. ಇನ್ನೊಂದು ಕಡೆ ನೂರಾರು ಮುಸ್ಲಿಮರು ಆಗಲೇ ಹಿಜ್‌ರತ್ ಹೊರಟಿದ್ದರು. ಮುಸ್ಲಿಮರ ದೇಶತ್ಯಾಗ ವೇಗವಾಗಿ ಬೆಳೆಯುತ್ತ ಬಂದಿತ್ತು. ಜನರು ತಮ್ಮ ಮನೆಗಳನ್ನೇ ಕಿತ್ತು ಹಾಕಿ ಅಜ್ಞಾತವಾದ ದೇಶಗಳಿಗೆ ಹೋಗಲು ಹೊರಟಿದ್ದರು. ಹಿಜ್‌ರತ್ ಚಳುವಳಿಯು ಸಿಂಧ್ ಪ್ರಾಂತದಲ್ಲಿ ಪ್ರಾರಂಭವಾಗಿ ವಾಯವ್ಯ ಗಡಿಗೆ ಹರಡಿತ್ತು. ಪೆಷಾವರ್ ಮತ್ತು ಇತರ ಗಡಿಯ ಪಟ್ಟಣಗಳು ಆಫ್‌ಘಾನಿಸ್ತಾನಕ್ಕೆ ಹೋಗುವಲ್ಲಿ ದಾರಿಯ ತಂಗುದಾಣಗಳಾಗಿದ್ದುವು. ಅಬ್ದುಲ್ ಗಫಾರ್‌ಖಾನ್ ಮತ್ತು ಅವರ ಅನುಯಾಯಿಗಳು ಹಿಜ್‌ರತ್ ಚಳುವಳಿಯಲ್ಲಿ ಸೇರಿಕೊಂಡರು. ಅನೇಕ ಜನರು ಆಫ್ಘನ್ ಗಡಿಯನ್ನು ತಲುಪಿದರು. ಕೆಲವರು ಅದನ್ನು ದಾಟಿ ಸೋವಿಯೆತ್ ಯೂನಿಯನ್ನನ್ನು ಪ್ರವೇಶಿಸಿದರು. ಕಾಬೂಲಿನಲ್ಲಿ ಗಫಾರ್‌ಖಾನ್ ಅವರು ರಾಜರಾದ ಅಮಾನುಲ್ಲಾಖಾನ್ ಅವರನ್ನು ಭೇಟಿ ಮಾಡಿದರು. ಸ್ವದೇಶಬಿಟ್ಟು ಓಡಿಹೋಗುವುದು ವ್ಯರ್ಥ ಎಂದು ಅವರಿಬ್ಬರೂ ಒಪ್ಪಿದರು. ಆದ್ದರಿಂದ ಗಫಾರ್ ಖಾನ್‌ರವರು ಹಿಂದಿರುಗಿದರು. ಜುಲೈ ತಿಂಗಳಿನಲ್ಲಿ ೧೮,೦೦೦ದಷ್ಟು ಜನರು ಹಿಜ್‌ರತ್ ಹೊರಟಿದ್ದರು. ಆದರೆ ಆಫ್ಘನ್ ಅಧಿಕಾರಿಗಳು ಅವರನ್ನು ತಡೆದರು. ಭಾರತೀಯ ಮುಸ್ಲಿಮರ ಕಣ್ಣುಗಳು ಆಗ ತಮ್ಮ ತಾಯ್ನಾಡ ಕಡೆಗೇ ತಿರುಗಿದುವು.

ದೇಶಾದ್ಯಂತ ಪರಿಸ್ಥಿತಿ ತೀವ್ರವಾಗುತ್ತಿತ್ತು, ಹೋರಾಟಕ್ಕೆ ಅಣಿಯಾಗುತ್ತಿತ್ತು. "ಖಿಲಾಫತ್ ಚಳುವಳಿಯನ್ನು ಕುರಿತು ಮಾಂಟೆಗೂರವರ ಮಾತು" ಎಂಬ ಹೆಸರಿನ ಲೇಖನದಲ್ಲಿ ಗಾಂಧೀಜಿ ಬರೆದರು:

"ದಿನೇ ದಿನೇ ಬಲಗೊಳ್ಳುತ್ತಿರುವ ಖಿಲಾಫತ್ ಚಳುವಳಿಯನ್ನು ಕಂಡರೆ ಮಾಂಟೆಗೂರವರಿಗೆ ಆಗುವುದಿಲ್ಲ. ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಅವರು ಹೀಗೆ ಹೇಳಿದರೆಂದು ವರದಿಯಾಗಿದೆ: ನಾನು

ಈ ಮೊದಲು ದೇಶಕ್ಕೆ ಗಣ್ಯವಾದ ಸೇವೆಗಳನ್ನು ಸಲ್ಲಿಸಿದೆನೆಂದು ಒಪ್ಪಿದರೂ ನನ್ನ ಈಗಿನ ಮನೋಭಾವವನ್ನು ಸಹನೆಯಿಂದ ಕಾಣಲು ಸಾಧ್ಯವಿಲ್ಲವೆಂದೂ ರೌಲಟ್ ಶಾಸನದ ವಿರುದ್ಧ ನಡೆದ ಚಳುವಳಿಯಲ್ಲಿ ನನಗೆ ತೋರಿದ ದಾಕ್ಷಿಣ್ಯವನ್ನು ಈಗಲೂ ನಿರೀಕ್ಷಿಸಲಾಗದೆಂದೂ ಅವರ ಅಭಿಪ್ರಾಯ. ಕೇಂದ್ರ ಹಾಗೂ ಸ್ಥಳೀಯ ಸರಕಾರಗಳಲ್ಲಿ ತಮಗೆ ಸಂಪೂರ್ಣ ವಿಶ್ವಾಸವಿರುವುದಾಗಿಯೂ ಈ ಸರ್ಕಾರಗಳು ಚಳುವಳಿಯನ್ನು ಜಾಗರೂಕತೆಯಿಂದ ಗಮನಿಸುತ್ತಿರುವುದಾಗಿಯೂ ಪರಿಸ್ಥಿತಿಯನ್ನು ಎದುರಿಸಲು ಅವಕ್ಕೆ ಪೂರ್ಣಾಧಿಕಾರವಿದೆಯೆಂದೂ ಅವರು ಹೇಳಿದರಂತೆ.

"ಮಾಂಟೆಗೂರವರ ಈ ಹೇಳಿಕೆಯನ್ನು ಬೆದರಿಕೆ ಎಂದು ಕೆಲವು ವೃತ್ತಗಳಲ್ಲಿ ಭಾವಿಸಲಾಗಿದೆ. ಭಾರತ ಸರ್ಕಾರಕ್ಕೆ ಇಷ್ಟ ಬಂದರೆ ಭಯಂಕರ ಅಳ್ವಿಕೆಯನ್ನು ಪುನಃ ಜಾರಿಗೆ ತರಲು ಅದೊಂದು ಲೈಸೆನ್ಸ್ ಎಂದೂ ಭಾವಿಸಲಾಗಿದೆ. ಜನರ ಸದ್ಭಾವನೆಯ ಅಡಿಗಲ್ಲಿನ ಮೇಲೆ ಸರಕಾರವನ್ನು ಕಟ್ಟುವೆನೆಂಬ ಅವರ ಬಯಕೆಗೆ ತೀರ ಅಸಂಗತವಾದದ್ದು ಈ ಮಾತು. ಇದರೊಡನೆ, ಹಂಟರ್ ಸಮಿತಿಯ ತೀರ್ಮಾನವು ಒಂದು ವೇಳೆ ನಿಜವೇ ಆಗಿದ್ದು, ಕಳೆದ ವರ್ಷ ನಡೆದ ಕ್ಷೋಭೆಗಳಿಗೆಲ್ಲ ನಾನೇ ಕಾರಣನಾಗಿದ್ದರೆ, ನನಗೆ ಅಸಾಧಾರಣವಾದ ದಾಕ್ಷಿಣ್ಯವನ್ನು ತೋರಿಸಿದರೆಂಬುದು ನಿಸ್ಸಂಶಯವೇ ಸರಿ. ನನ್ನ ಈ ವರ್ಷದ ಚಟುವಟಿಕೆಯು ಕಳೆದ ವರ್ಷದ ಚಟುವಟಿಕೆಗಿಂತ ಬ್ರಿಟಿಷ್ ಸಾಮ್ರಾಜ್ಯಕ್ಕೆ, ಅದನ್ನೀಗ ನಡೆಸುತ್ತಿರುವ ರೀತಿಯಲ್ಲಿ, ಭಾರೀ ಅಪಾಯವನ್ನು ಉಂಟುಮಾಡುವಂಥದ್ದು. ಅಸಹಕಾರವು ಸ್ವರೂಪತಃ ಸವಿನಯ ಶಾಸನಭಂಗಕ್ಕಿಂತ ಹೆಚ್ಚು ನಿರುಪದ್ರವಿಯಾದದ್ದು; ಆದರೆ ಪರಿಣಾಮದಲ್ಲಿ ಅದು ಸವಿನಯ ಶಾಸನ ಭಂಗಕ್ಕಿಂತ ಸರ್ಕಾರಕ್ಕೆ ತುಂಬ ಹೆಚ್ಚು ಗಂಡಾಂತರಕಾರಿ. ಇದುವರೆಗೂ ಅಸಹಕಾರವು ಸರ್ಕಾರಕ್ಕೆ ಪಾರ್ಶ್ವವಾಯುವಾಗಲೆಂದು ಉದ್ದೇಶಿಸಿಲ್ಲ. ಸರ್ಕಾರದಿಂದ ಒತ್ತಾಯಪೂರ್ವಕವಾಗಿ ನ್ಯಾಯಪಡೆಯುವುದಷ್ಟೇ ಅದರ ಗುರಿ. ಆದರೆ ಅದನ್ನು ಅತಿರೇಕಕ್ಕೆ ದೂಡಿದರೆ, ಅದು ಸರ್ಕಾರವನ್ನೇ ನಿಶ್ಚೇಷ್ಟಗೊಳಿಸಬಲ್ಲುದು.

"ನನ್ನ ಭಾಷಣಗಳನ್ನು ಕೇಳುತ್ತಿದ್ದ ಒಬ್ಬ ಸ್ನೇಹಿತರು ಇಂಡಿಯನ್ ಪೀನಲ್ ಕೋಡಿನ ರಾಜದ್ರೋಹದ ಕಲಮ್ ಪ್ರಕಾರ ನಾನು ಅಪರಾಧಿಯಾಗುವುದಿಲ್ಲವೆ ಎಂದೊಮ್ಮೆ ಕೇಳಿದರು. ನಾನದನ್ನು ಪೂರ್ಣವಾಗಿ ಪರ್ಯಾಲೋಚಿಸದಿದ್ದರೂ, ಬಹುಶಃ ಹಾಗಾಗಬಹುದೆಂದು ಹೇಳಿದೆ. ಆ ಕಲಮ್ ಪ್ರಕಾರ ನನ್ನ ಮೇಲೆ ದೂರು ಹೊರಿಸಿದರೆ 'ನಾನು ತಪ್ಪಿತಸ್ಥನಲ್ಲ' ಎಂದು ನಾನು ವಾದಿಸಲಾರೆನೆಂದೆ. ಏಕೆಂದರೆ ಪ್ರಸ್ತುತ ಸರಕಾರದ ಬಗೆಗೆ ನನಗೆ 'ಪ್ರೀತಿಯಿದೆಯೆಂದು ನಾನೇನೂ ನಟಿಸಲಾರೆ. ಅಲ್ಲದೆ ನನ್ನ ಭಾಷಣಗಳ ಉದ್ದೇಶ 'ಅಪ್ರೀತಿ'ಯನ್ನು ಉಂಟುಮಾಡಿ, ಜನರ ವಿಶ್ವಾಸ, ಗೌರವ ಬೆಂಬಲ ಇವೆಲ್ಲದರ ಹಕ್ಕನ್ನೂ ಕಳೆದುಕೊಂಡಿರುವ ಒಂದು ಸರ್ಕಾರಕ್ಕೆ ನೆರವನ್ನಾಗಲಿ ಸಹಕಾರವನ್ನಾಗಲಿ ನೀಡುವುದು ನಾಚಿಕೆಗೇಡು ಎಂದು ಜನರು ಭಾವಿಸುವಂತಾಗಲೆಂಬುದೇ."

"ಸಾರ್ವಭೌಮ ಸರಕಾರಕ್ಕೂ ಭಾರತ ಸರಕಾರಕ್ಕೂ ಯಾವೊಂದು ವ್ಯತ್ಯಾಸ ವಿದೆಯೆಂದೂ ನಾನು ಭಾವಿಸಿಲ್ಲ. ಖಿಲಾಫತ್ ಪ್ರಶ್ನೆಯ ವಿಷಯದಲ್ಲಿ ಮೊದಲನೆಯದು ವಿಧಿಸಿರುವ ನೀತಿಯನ್ನೇ ಎರಡನೆಯದು ಅಂಗೀಕರಿಸಿದೆ. ಮತ್ತು ಪಂಜಾಬಿನ ವಿಷಯ ದಲ್ಲಿ ಒಂದು ಧೀರ ಜನತೆಯನ್ನು ಬೆದರಿಸಿ ನಿರ್ವೀರ್ಯಗೊಳಿಸುವ ಭಾರತ ಸರಕಾರದ ನೀತಿಯನ್ನು ಸಾರ್ವಭೌಮ ಸರಕಾರವು ಅನುಮೋದಿಸಿದೆ. ಬ್ರಿಟಿಷ್ ಮಂತ್ರಿಗಳು ತಮ್ಮ ಪ್ರಮಾಣ ವಚನವನ್ನು ಮುರಿದು ಹಾಕಿ ಭಾರತದ ಏಳುಕೋಟಿ ಮುಸಲ್ಮಾನರ ಭಾವನೆ ಗಳನ್ನು ನಿಷ್ಕಾರಣವಾಗಿ ಘಾಸಿಗೊಳಿಸಿದ್ದಾರೆ. ಪಂಜಾಬ್ ಸರಕಾರದ ದುರಂಹಕಾರಿ ಅಧಿಕಾರಿಗಳು ಏನೂ ಅರಿಯದ ಸ್ತ್ರೀ ಪುರುಷರನ್ನು ಅವಮಾನ ಮಾಡಿದ್ದಾರೆ. ಅವರಿ ಗಾಗಿರುವ ಅನ್ಯಾಯಗಳನ್ನು ಇನ್ನೂ ಸರಿಪಡಿಸಿಲ್ಲ, ಅಷ್ಟೇ ಅಲ್ಲದೆ ಯಾವ ಅಧಿಕಾರಿಗಳು ಜನರನ್ನು ಅಷ್ಟು ಕ್ರೌರ್ಯದಿಂದ ಅನಾಗರಿಕರೀತಿಯಲ್ಲಿ ಅಪಮಾನಕ್ಕೆ ಗುರಿಪಡಿಸಿದರೋ ಅವರು ಅಧಿಕಾರದಲ್ಲಿ ಉಳಿದಿದ್ದಾರೆ.

"ಕಳೆದ ವರ್ಷ ಅಮೃತಸರದಲ್ಲಿದ್ದಾಗ ನಾನು ಸರಕಾರದೊಂದಿಗೆ ಸಹಕರಿಸಬೇಕು, ಸಾರ್ವಭೌಮರ ಘೋಷಣೆಯಲ್ಲಿ ವ್ಯಕ್ತಪಡಿಸಿದ್ದ ಅಪೇಕ್ಷೆಗಳಿಗೆ ಸರಿಯಾದ ಪ್ರತಿಕ್ರಿಯೆ ತೋರಿಸಬೇಕು ಎಂದು ನನಗೆ ಶಕ್ಯವಾದಷ್ಟೂ ಶ್ರದ್ಧೋ ಉತ್ಸಾಹಗಳಿಂದ ಜನತೆಯನ್ನು ಕೇಳಿಕೊಂಡೆ. ಹಾಗೆ ನಾನು ಮಾಡಿದ್ದು ಹೊಸದೊಂದು ಯುಗವೇ ಪ್ರಾರಂಭವಾಗಲಿದೆ, ಹಿಂದಿನ ಹೆದರಿಕೆ, ಅಪನಂಬಿಕೆ ಮತ್ತು ಅವುಗಳ ಫಲವಾಗಿ ಭೀತಿಕಾರಕ ಕೃತ್ಯಗಳು ಅಳಿದು ಅವುಗಳ ಸ್ಥಾನದಲ್ಲಿ ಗೌರವ, ನಂಬಿಕೆ ಮತ್ತು ಸದ್ಭಾವನೆಗಳ ಹೊಸ ಚೇತನ ಮೂಡುತ್ತದೆ ಎಂದು ನಾನು ನಂಬಿದ್ದೆ. ಮುಸಲ್ಮಾನರ ಭಾವನೆಯನ್ನು ಸಂತೃಪ್ತ ಗೊಳಿಸಲಾಗುತ್ತದೆ, ಲಷ್ಕರೀ ಶಾಸನದ ಅವಧಿಯಲ್ಲಿ ದುರುಳತನದಿಂದ ವರ್ತಿಸಿದ ಅಧಿಕಾರಿಗಳನ್ನು ಕೊನೆಯ ಪಕ್ಷ ವಜಾ ಮಾಡಲಾಗುತ್ತದೆ, ಬೇರೆ ರೀತಿಯಲ್ಲೂ ಸಹ, ಜನತೆಯ ಅತಿರೇಕಗಳನ್ನು ಶಿಕ್ಷಿಸಲು ಯಾವ ಸರ್ಕಾರವು ತುದಿಗಾಲಲ್ಲೇ ನಿಲ್ಲುತ್ತದೆಯೋ ಅದೇ ಸರ್ಕಾರ ತನ್ನ ಸ್ವಂತ ಕಾರ್ಯಕರ್ತರನ್ನೂ ಅವರ ದುಷ್ಕೃತ್ಯಗಳಿಗಾಗಿ ಶಿಕ್ಷಿಸದೆ ಹೋಗುವುದಿಲ್ಲ ಎಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಲಾಗುತ್ತದೆ–ಎಂದೆಲ್ಲ ನಾನು ಪ್ರಾಮಾಣಿಕವಾಗಿ ನಂಬಿದ್ದೆ. ಆದರೆ ಬ್ರಿಟಿಷ್ ಸಾಮ್ರಾಜ್ಯದ ಈಗಿನ ಪ್ರತಿನಿಧಿಗಳು ಅಪ್ರಾಮಾಣಿಕರೂ ಅಧರ್ಮಕ್ಕೆ ಹೇಸದವರೂ ಆಗಿದ್ದಾರೆಂಬುದನ್ನು ಕಂಡು ನನಗೀಗ ಸೋಜಿಗವೂ ಕಟುವಾದ ವೇದನೆಯೂ ಉಂಟಾಗಿವೆ. ಭಾರತದ ಜನರ ಆಶೆ ಆಕಾಂಕ್ಷೆ ಗಳಲ್ಲಿ ಅವರಿಗೆ ನಿಜವಾದ ಗೌರವ ಇಲ್ಲ. ಭಾರತದ ಗೌರವವನ್ನು ತೃಣಪ್ರಾಯವೆಂದು ಅವರು ಎಣಿಸಿದ್ದಾರೆ.

"ಇತ್ತೀಚೆಗೆ ಆಗಿರುವಂತೆ, ಇಷ್ಟು ಕೆಟ್ಟ ಅಧಿಕಾರಿಗಳಿಂದ ತುಂಬಿದ ಒಂದು ಸರಕಾರದಲ್ಲಿ ಪ್ರೀತಿಯನ್ನು ಇನ್ನು ಮುಂದೆಯೂ ಉಳಿಸಿಕೊಂಡು ಹೋಗುವುದು ನನಗೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ. ಮುಂದುವರಿಯುತ್ತಲೇ ಇರುವ ಅನ್ಯಾಯಕ್ಕೆ ಸಾಕ್ಷಿಯಾಗಿಯೇ ಇದ್ದುಕೊಂಡು ನನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿರುವುದು ನನ್ನ

ಪಾಲಿಗೆ ಅವಮಾನಕರ. ಸರಕಾರದ ಅಸ್ತಿತ್ವಕ್ಕೆ ಅಪಾಯವುಂಟಾಗುವಂತೆ ಮಾಡುತ್ತ ನಾನು ಮುಂದುವರಿದರೆ ನನ್ನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬೇಕಾದೀತು ಎಂದು ಮಾಂಟೆಗೂರವರು ಬೆದರಿಸುತ್ತಿರುವುದು ಖಂಡಿತ ಸರಿಯಾದದ್ದು. ಏಕೆಂದರೆ ನನ್ನ ಕಾರ್ಯವು ಫಲಕೊಡುವ ಪಕ್ಷಕ್ಕೆ ಸರ್ಕಾರಕ್ಕೆ ಅಪಾಯ ಒದಗುವಂಥ ಪರಿಣಾಮವಾಗಲೇ ಬೇಕು. ಇಷ್ಟೆ ನನ್ನ ವ್ಯಥೆ–ನನ್ನಂತಹ ಹಿತೈಷಿಯು ಸರಕಾರಕ್ಕೆ ತನ್ನ ಪ್ರೀತಿಯನ್ನು ಕೊಡಲಾರೆನೆಂದರೆ ಅಂಥ ಸರಕಾರದಲ್ಲಿ ಏನೋ ಅಸಾಧಾರಣವಾದಂಥ ಕೆಡುಕಿರಬೇಕು ಎಂದು ಮಾಂಟೆಗೂರವರು ಕಾಣಬಹುದಾಗಿತ್ತು. ಏಕೆಂದರೆ ಅವರೇ ನನ್ನ ಹಿಂದಿನ ಸೇವೆಗಳನ್ನು ಒಪ್ಪಿಕೊಂಡಿದ್ದಾರೆ. ನನಗೆ ಶಿಕ್ಷೆಯ ಬೆದರಿಕೆ ಹಾಕಿ ತನ್ಮೂಲಕ ಈಗಾಗಿರುವ ಅನ್ಯಾಯವನ್ನು ಉಳಿಸಿಕೊಂಡು ಹೋಗುವುದಕ್ಕಿಂತ ಮುಸಲ್ಮಾನರಿಗೂ ನ್ಯಾಯ ನೀಡುವುದು ಸುಲಭವಾದ ಕೆಲಸವಾಗುತ್ತಿತ್ತು. ನಿಜವಾಗಿ ನೋಡಿದರೆ, ಅನ್ಯಾಯ ಶೀಲ ಸರಕಾರದ ಬಗೆಗೆ ಅಪ್ರೀತಿಯನ್ನು ಬೆಳಸುವುದರಿಂದಲೂ ನಾನು ಈಗಾಗಲೇ ಮಾನ್ಯ ಮಾಡಲಾಗಿರುವ ನನ್ನ ಸೇವೆಗಳಿಗಿಂತ ಮಹತ್ತರವಾದ ಸೇವೆಗಳನ್ನು ಸಾಮ್ರಾಜ್ಯಕ್ಕೆ ಮಾಡಿದೆನೆಂದು ಮುಂದೆ ಗೋಚರವಾಗುವುದೆಂದು ನಾನು ಸಂಪೂರ್ಣವಾಗಿ ನಿರೀಕ್ಷಿಸಿದ್ದೇನೆ.

"ಪ್ರಕೃತ ಮುಹೂರ್ತದಲ್ಲಾದರೋ, ಚಟುವಟಿಕೆಯನ್ನು ಒಪ್ಪುವವರ ಕರ್ತವ್ಯವೇನೆಂಬುದು ಸ್ಪಷ್ಟವಾಗಿದೆ. ಭಾರತ ಸರಕಾರವು ನನ್ನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ತಮ್ಮ ಕರ್ತವ್ಯ ಎಂದು ಒಂದು ವೇಳೆ ಭಾವಿಸಿದರೆ, ನನ್ನ ಸ್ವಾತಂತ್ರ್ಯಹರಣಕ್ಕಾಗಿ ಅವರು ದ್ವೇಷ ತಾಳಲೇ ಕೂಡದು. ಯಾವ ರಾಷ್ಟ್ರಕ್ಕೆ ತಾನು ಸೇರಿದವನೋ ಅಂಥ ರಾಷ್ಟ್ರದ ಕಾನೂನಿಗಳಿಗುಣವಾಗಿ ವಿಧಿಸಿದ ನಿರ್ಬಂಧವನ್ನು ವಿರೋಧಿಸಲು ಆ ರಾಷ್ಟ್ರದ ಪೌರನಿಗೆ ಹಕ್ಕಿಲ್ಲ. ಅವನಲ್ಲಿ ಸಹಾನುಭೂತಿ ಇರುವವರಿಗಂತು ಅದು ಇಲ್ಲವೇ ಇಲ್ಲ. ಅದರಲ್ಲೂ ನನ್ನ ವಿಷಯದಲ್ಲಿ ಸಹಾನುಭೂತಿಯ ಪ್ರಶ್ನೆಯೇ ಸಾಧ್ಯವಿಲ್ಲ. ಏಕೆಂದರೆ ನಾನು ಬುದ್ಧಿಪೂರ್ವಕವಾಗಿಯೇ ಸರಕಾರದ ಅಸ್ತಿತ್ವಕ್ಕೆ ಗಂಡಾಂತರ ಒದಗುವಷ್ಟು ಮಟ್ಟಿಗೆ ಅದನ್ನು ವಿರೋಧಿಸುತ್ತಿದ್ದೇನೆ. ನನ್ನ ಬೆಂಬಲಿಗರಿಗೆ ನನ್ನಲ್ಲಿ ಸೆರೆಯಲ್ಲಿಡುವ ಕ್ಷಣವು ಸಂತೋಷದ ಮುಹೂರ್ತವಾಗಬೇಕು. ಏಕೆಂದರೆ ಅದು ವಿಜಯದ ನಾಂದಿಯೇ ಆಗುತ್ತದೆ, ಅವರು ನಾನು ಹಿಡಿದಿರುವ ನೀತಿಯನ್ನೇ ಮುಂದುವರಿಸಿದರೆ ಸಾಕು. ಸರಕಾರವು ನನ್ನನ್ನು ಸೆರೆಹಿಡಿದರೆ, ಹಾಗವರು ಮಾಡುವುದು ನಾನು ಬೋಧಿಸುತ್ತಿರುವ ಅಸಹಕಾರದ ಮುನ್ನಡೆಯನ್ನು ತಡೆಯುವ ಉದ್ದೇಶದಿಂದ. ಆದ್ದರಿಂದ ನನ್ನ ಬಂಧನವಾದ ಮೇಲೂ ಅಸಹಕಾರವು ಸ್ವಲ್ಪವೂ ತಗ್ಗದೆ ಮುಂದುವರಿದದ್ದೇ ಆದರೆ, ಸರಕಾರವು ಇತರರನ್ನು ಬಂಧಿಸಬೇಕು. ಇಲ್ಲವೇ ಅವರ ಸಹಕಾರವನ್ನು ಗಳಿಸಲು ಜನತೆಯ ಇಚ್ಛೆಯನ್ನು ಸಲ್ಲಿಸಬೇಕು. ಪ್ರಚೋದಕ ಸನ್ನಿವೇಶಗಳಿದ್ದಾಗಲೂ ಎಳ್ಳಷ್ಟಾದರೂ ಹಿಂಸೆಯ ಸಿಡಿತಕ್ಕೆ ಜನರು ಎಡೆಗೊಟ್ಟರೋ, ಎಲ್ಲವೂ ವಿನಾಶದಲ್ಲೇ ಕೊನೆಗೊಳ್ಳುತ್ತದೆ. ಆದ್ದರಿಂದ ಈ ಚಳುವಳಿಯಲ್ಲಿ ಬಂಧಿತನಾಗುವವನು ನಾನೇ ಆಗಲಿ ಬೇರೆ ಯಾರೇ ಆಗಲಿ. ಯಶಸ್ಸಿನ

ಮೊದಲನೆಯ ಷರತ್ತೆಂದರೆ, ಆ ಬಂಧನದ ವಿರೋಧವಾಗಿ ದ್ವೇಷ ತೋರಿಸಕೂಡದು. ನಾವು ಸರಕಾರದ ಅಸ್ತಿತ್ವಕ್ಕೆ ಗುಡಾಂತರವನ್ನು ತರಬೇಕು, ಆದರೂ ತನ್ನನು ಅಪಾಯ ಕ್ಕೊಳಪಡಿಸಿದವರನ್ನು ಶಿಕ್ಷಿಸುವುದರ ಮೂಲಕ ತನ್ನನ್ನು ಉಳಿಸಿಕೊಳ್ಳಲು ಸರ್ಕಾರವು ಮಾಡುವ ಪ್ರಯತ್ನವನ್ನೂ ವಿರೋಧಿಸಬೇಕು ಎನ್ನಲಾಗದು".

ಜುಲೈ ೨೮ನೆಯ ತಾರೀಖಿನಂದು ಗಾಂಧೀಜಿ, ಆಗಸ್ಟ್ ೧ರಂದು ಅಸಹಕಾರವನ್ನು ಪ್ರಾರಂಭಿಸುವುದಾಗಿಯೂ, ಅದಕ್ಕೆ ಸಿದ್ಧತೆಯ ಕಾರ್ಯಕ್ರಮವಾಗಿ ಅದರ ಹಿಂದಿನ ಒಂದು ದಿನ ಉಪವಾಸ ಮತ್ತು ಪ್ರಾರ್ಥನೆಗಳನ್ನು ಆಚರಿಸಬೇಕೆಂದೂ ಪುನಃ ಹೇಳಿದರು. ಉಪವಾಸ ಮತ್ತು ಪ್ರಾರ್ಥನೆಗಳನ್ನು ಅಪನಂಬಿಕೆಯಿಂದಾಗಲಿ ಸಂಶಯದಿಂದಾಗಲಿ ಕಾಣಲಾಗದೆಂದು ಯುವಜನರಿಗೆ ಅವರು ಮನವಿ ಮಾಡಿಕೊಂಡರು: "ಜಗತ್ತಿನ ಅತ್ಯಂತ ಮಹಾನ್ ಬೋಧಕರೆಲ್ಲ ಉಪವಾಸ ಮತ್ತು ಪ್ರಾರ್ಥನೆಗಳ ಮೂಲಕ ಮಾನವ ತೆಯ ಒಳಿತಿಗಾಗಿ ಅಸಾಧಾರಣ ಶಕ್ತಿಗಳನ್ನು ಸಂಪಾದಿಸಿಕೊಂಡಿದ್ದಾರೆ, ಅವುಗಳ ಮೂಲಕವೇ ತಮ್ಮ ದರ್ಶನಶಕ್ತಿಯ ಸ್ಪಷ್ಟತೆಯನ್ನು ಸಾಧಿಸಿದ್ದಾರೆ. ಈ ಸಾಧನೆಯ ಬಹು ಪಾಲು ನಷ್ಟವಾಗಿ ಹೋಗುತ್ತಿದೆ, ಕಾರಣ ಅದು ಹೃದಯಾಂತರಾಳದ ವಿಷಯವನ್ನಾ ಗಿರದೆ, ಹಲವೊಮ್ಮೆ ನಾಟಕೀಯ ಪರಿಣಾಮಕ್ಕಾಗಿ ಬಳಸಲಾಗುತ್ತಿದೆ. ಆದ್ದರಿಂದ ಈ ಚಳುವಳಿಯಲ್ಲಿ ಭಾಗವಹಿಸುವ ಎಲ್ಲ ಸಂಘ ಸಂಸ್ಥೆಗಳಿಗೂ ಇಂಥ ಆತ್ಮಹತ್ಯಾಕಾರಕ ವಾದ ತಂತ್ರದ ವಿರುದ್ಧ ಎಚ್ಚರಿಕೆ ಕೊಡಲಿಚ್ಛಿಸುತ್ತೇನೆ. ಯಾವುದನ್ನವರು ಒತ್ತಾಯ ಪಡಿಸುತ್ತಾರೋ ಅದರಲ್ಲಿ ಅವರಿಗೆ ಜೀವಂತ ನಂಬಿಕೆ ಇರಲಿ, ಇಲ್ಲವೇ ಅವರದನ್ನು ಕೈಬಿಟ್ಟು ಬಿಡಲಿ. ನಾವು ಈಗೀಗ ನಮ್ಮ ದೇಶದ ಲಕ್ಷಾಂತರ ಸಾಮಾನ್ಯ ಜನರನ್ನೂ ಆಕರ್ಷಿಸತೊಡಗಿದ್ದೇವೆ. ಬುದ್ಧಿಪುರಸ್ಸರ ಅವರನ್ನು ತಪ್ಪುದಾರಿಗೊಯ್ದರೆ ನಾವು ಶಾಪಕ್ಕೆ ಅರ್ಹರೇ ಆಗುತ್ತೇವೆ. ಹಿಂದೂಗಳಾಗಲಿ, ಮುಸ್ಲಿಮರಾಗಲಿ ನಮ್ಮೆಲ್ಲರಲ್ಲೂ ಧಾರ್ಮಿಕ ಸತ್ವ ಇದ್ದೇ ಇದೆ. ನಾವು ಧರ್ಮದೊಡನೆ ಚೆಲ್ಲಾಟವಾಡುವುದರಿಂದ ಅದರ ತಳಹದಿಯೇ ಭಗ್ನವಾಗದಿರಲಿ."

ಜುಲೈ ೨೮ರಂದು ಗಾಂಧೀಜಿ ರಾಷ್ಟ್ರಕ್ಕೊಂದು ಸುಸ್ಪಷ್ಟ ಕರೆಯಿತ್ತರು: "ಆಗಸ್ಟ್ ೧ಕ್ಕೆ ಮುಂಚೆ ಸಾರ್ವಭೌಮರ ಮಂತ್ರಿಗಳಿಂದ ಶಾಂತಿಯ ಷರತ್ತುಗಳ ಪರಿಷ್ಕರಣ ವಾಗುವ, ತತ್ಫಲವಾಗಿ ಅಸಹಕಾರದ ಆರಂಭವನ್ನು ನಾವು ಸ್ಥಗಿತಗೊಳಿಸುವ ಸಂಭವ ಬಹುಶಃ ಇಲ್ಲ. ಮುಂದಿನ ಆಗಸ್ಟ್ ೧ನೆ ತಾರೀಖು ಕಳೆದ ವರ್ಷದ ಏಪ್ರಿಲ್ ೬ನೆಯ ತಾರೀಖಿನಷ್ಟೇ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗುತ್ತದೆ. ಏಪ್ರಿಲ್ ೬ನೆಯ ತಾರೀಖು ರೌಲಟ್ ಶಾಸನವು ಉಳಿಯಬಲ್ಲುದೆಂದು ಯಾರೂ ಭಾವಿಸಲಾರರು. ಯಾವ ಶಕ್ತಿಯೂ ಪಂಜಾಬು ಹಾಗೂ ಖಿಲಾಫತ್‌ಗಳ ವಿಷಯದಲ್ಲಿ ಇಷ್ಟವೇ ಇಲ್ಲದ ಒಂದು ಸರ್ಕಾರದಿಂದ ನ್ಯಾಯವನ್ನು ಬಲಾತ್ಕಾರವಾಗಿ ಕಿತ್ತುಕೊಳ್ಳ ಬಲ್ಲುದೋ ಅಂಥ ಶಕ್ತಿಯೇ ರೌಲಟ್ ಶಾಸನದ ರದ್ದತಿಯನ್ನೂ ಸಾಧಿಸಬಲ್ಲುದು.

ಆ ಶಕ್ತಿಯೆಂದರೆ, ಸತ್ಯಾಗ್ರಹದ ಶಕ್ತಿಯೇ, ಅದನ್ನು ಸವಿನಯ ಶಾಸನ ಭಂಗವೆಂದಾದರೂ ಕರೆಯಲಿ, ಅಸಹಕಾರವೆಂದಾದರೂ ಕರೆಯಲಿ." ಅವರು ಮತ್ತೆ ಹೇಳಿದರು:

"ಕಳೆದ ವರ್ಷ ನಡೆದ ಘಟನೆಗಳಿಂದಾಗಿ ಕೆಲವರು ಅಸಹಕಾರದ ಆರಂಭದ ವಿಷಯದಲ್ಲಿ ಬೆದರುತ್ತಿದ್ದಾರೆ. ದೊಂಬಿಜನರು ಹುಚ್ಚೇಳುವರೆಂದೂ, ತತ್ಫಲವಾಗಿ ಕಳೆದ ವರ್ಷ ನಡೆದ ಪ್ರತೀಕಾರ ಕ್ರಮಗಳೂ ಪುನಃ ನಡೆಯುತ್ತವೆಯೆಂದೂ ಅವರು ಹೆದರುತ್ತಿದ್ದಾರೆ. ಏಕೆಂದರೆ ಈ ಪ್ರತಿಕಾರಗಳನ್ನು ಉಗ್ರತೆಯಲ್ಲಿ ಮೀರಿಸುವಂಥ ನಿದರ್ಶನವು ಆಧುನಿಕ ಕಾಲದ ಇತಿಹಾಸದಲ್ಲೇ ಎಲ್ಲೂ ಇಲ್ಲ. ನನ್ನ ಪಾಲಿಗಾದರೋ, ದೊಂಬಿಜನರ ಉದ್ರೇಕದಷ್ಟು ಸರ್ಕಾರದ ಉದ್ರೇಕವನ್ನು ಲೆಕ್ಕಿಸುವುದಿಲ್ಲ. ಏಕೆಂದರೆ ದೊಂಬಿಯ ಉದ್ರೇಕವೆಂಬುದು ರಾಷ್ಟ್ರಕ್ಕೇ ಜಾಡ್ಯ ತಗುಲಿರುವುದರ ಲಕ್ಷಣ. ಅದರೊಡನೆ ಹೆಣಗುವುದು ಒಂದು ಸಣ್ಣ ಸಮುದಾಯಕ್ಕೆ ಸೀಮಿತವಾದ ಸರ್ಕಾರದ ಉದ್ರೇಕ ದೊಡನೆ ಹೆಣಗುವುದಕ್ಕಿಂತ ಹೆಚ್ಚು ಕಷ್ಟ. ತನ್ನನ್ನು ತಾನೇ ಆಳಲನರ್ಹವಾಗಿ ಮಾಡಿ ಕೊಂಡಿರುವ ಸರ್ಕಾರದವೊಂದನ್ನು ಅಧಿಕಾರದಿಂದ ಓಡಿಸುವುದು ಯಾರು ಯಾರೆಂದೇ ತಿಳಿಯದ ಒಂದು ದೊಂಬಿಯ ಜನರ ಜಾಡ್ಯವನ್ನು ಗುಣಪಡಿಸುವುದಕ್ಕಿಂತ ಸುಲಭ. ಆದರೆ ಒಂದು ಸರಕಾರ ಅಥವಾ ಜನತೆ ಅಥವಾ ಇವೆರಡೂ ತಪ್ಪು ಮಾಡಬಹುದೆಂಬ ಕಾರಣಕ್ಕಾಗಿ ಮಹಾ ಚಳುವಳಿಗಳನ್ನೇ ಪೂರ್ಣವಾಗಿ ನಿಲ್ಲಿಸುವುದು ಸಾಧ್ಯವಿಲ್ಲ. ನಮ್ಮ ತಪ್ಪುಗಳು ಮತ್ತು ಸೋಲುಗಳಿಂದಲೇ ನಾವು ಪಾಠ ಕಲಿತು ಪ್ರಯೋಜನ ಪಡೆಯು ವುದು. ಸೋಲುಗಳನ್ನು ಅನುಭವಿಸಿದೆನೆಂದೋ, ಅಥವಾ ತಪ್ಪುಗಳನ್ನು ಮಾಡಿದೆ ನೆಂದೋ–ಎರಡೂ ಒಂದೇ–ಯಾವ ಸೇನಾಪತಿಯೂ ಒಂದು ಕದನವನ್ನು ಬಿಟ್ಟು ಬಿಡುವುದಿಲ್ಲ. ಆದ್ದರಿಂದ ಅಸಹಕಾರದೊಡನೆ ವರ್ತಿಸುವಾಗ ನಂಬಿಕೆ ಆಶೆಗಳಿಂದ ವರ್ತಿಸಬೇಕು. ಹಿಂದೆ ಮಾಡಿದಂತೆಯೇ ಈಗಲೂ ಅದರ ಆರಂಭವನ್ನು ಉಪವಾಸ ಮತ್ತು ಪ್ರಾರ್ಥನೆಗಳಿಂದಲೇ ಸೂಚಿಸಬೇಕು. ಏಕೆಂದರೆ ಈ ಪ್ರದರ್ಶನದ ಧಾರ್ಮಿಕ ಸ್ವರೂಪದ ಕುರುಹದು. ಆ ದಿನವಂದು ವಾಣಿಜ್ಯ ವ್ಯಾಪಾರವನ್ನೆಲ್ಲ ನಿಲ್ಲಿಸಬೇಕು, ಶಾಂತಿಯ ಷರತ್ತುಗಳನ್ನು ಪರಿಷ್ಕರಿಸಬೇಕೆಂಬ, ಪಂಜಾಬಿಗೆ ನ್ಯಾಯ ಸಲ್ಲಿಸಬೇಕೆಂಬ, ಮತ್ತು ನ್ಯಾಯ ದೊರಕುವವರೆಗೂ ಅಸಹಕಾರ ಮುಂದುವರಿಯುತ್ತದೆಂಬ ಅಂಶ ಗಳನ್ನು ಒಳಗೊಂಡ ನಿರ್ಣಯಗಳನ್ನು ಅಂಗೀಕರಿಸಲು ಸಭೆಗಳನ್ನು ನಡೆಸತಕ್ಕದ್ದು.

"ಬಿರುದುಗಳನ್ನೂ ಗೌರವಾನ್ವಿತ ಹುದ್ದೆಗಳನ್ನೂ ತ್ಯಜಿಸುವ ಕೆಲಸವೂ ಆಗಸ್ಟ್ ೧ರಿಂದಲೇ ತೊಡಗಬೇಕು. ಹೀಗೆ ಬಿರುದು ಮತ್ತು ಗೌರವಾನ್ವಿತ ಹುದ್ದೆಗಳನ್ನೂ ತ್ಯಜಿಸಲು ಸಾಕಷ್ಟು ಮುನ್ಸೂಚನೆ ಕೊಟ್ಟಿದೆಯೆ ಎಂಬ ಸಂದೇಹವನ್ನು ವ್ಯಕ್ತಪಡಿಸ ಲಾಗಿದೆ. ಆಗಸ್ಟ್ ೧ ಈ ಬಿರುದುಗಳ ತ್ಯಾಗದ ಆರಂಭವನ್ನು ಮಾತ್ರವೇ ಸೂಚಿಸುತ್ತದೆ ಯೆಂಬುದನ್ನು ನೆನಪಿನಲ್ಲಿಟ್ಟರೆ ಈ ಸಂದೇಹ ಬೇಗ ತೊಲಗಿಹೋಗುತ್ತದೆ. ಆ ತ್ಯಾಗ ನಡೆಯಬೇಕಾದದ್ದು ಅದೊಂದೇ ದಿನದಲ್ಲಲ್ಲ. ನಿಜಕ್ಕೂ ಮೊದಲನೆಯ ದಿನವೇ ತುಂಬ ವ್ಯಾಪಕವಾದ ಪ್ರತಿಕ್ರಿಯೆಯನ್ನು ನಾನು ನಿರೀಕ್ಷಿಸಿಯೇ ಇಲ್ಲ. ಇದಕ್ಕಾಗಿ ತೀವ್ರವಾದ

ಪ್ರಚಾರ ಕಾರ್ಯ ನಡೆಯಬೇಕು. ಪ್ರತಿಯೊಬ್ಬ ಬಿರುದಾಂಕಿತನಿಗೂ ಈ ಸಂದೇಶವನ್ನೊಯ್ಯಬೇಕು, ಅಂಥ ತ್ಯಾಗವು ಒಂದು ಕರ್ತವ್ಯ ಎಂಬ ವಾದವನ್ನು ಅವನ ಮುಂದಿಡಬೇಕು."

"ಆದರೆ ಈ ಅಸಹಕಾರ ಚಳುವಳಿಯಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಸುವ್ಯವಸ್ಥೆ, ಶಿಸ್ತು, ಜನರಲ್ಲಿ ಪರಸ್ಪರ ಸಹಕಾರ ಮತ್ತು ಕೆಲಸಗಾರರಲ್ಲಿ ಸಂಘಟನೆ–ಇವನ್ನೆಲ್ಲ ಮೂಡಿಸುವುದು. ಪರಿಣಾಮಕಾರೀ ಅಸಹಕಾರವು ಸಂಪೂರ್ಣ ಸಂಘಟನೆಯನ್ನೇ ಅವಲಂಬಿಸಿದ್ದು. ಪಂಜಾಬಿನಾದ್ಯಂತ ಸಭೆಗಳನ್ನು ತುಂಬಿಕೊಂಡಿದ್ದ ಸಹಸ್ರ ಸಹಸ್ರ ಜನರು ನನಗೆ ಮನವರಿಕೆ ಮಾಡಿಕೊಟ್ಟಿದ್ದಾರೆ, ಈ ಸರಕಾರಕ್ಕೆ ನೀಡುತ್ತಿರುವ ಸಹಕಾರವನ್ನು ಹಿಂತೆಗೆದುಕೊಳ್ಳಬೇಕೆಂದು ಜನತೆಯು ಬಯಸುವುದಾಗಿ, ಆದರೆ ಇದನ್ನು ಹೇಗೆ ಮಾಡಬೇಕೆಂದು ಅವರಿಗೆ ತಿಳಿಯಬೇಕು. ಬಹುಪಾಲು ಜನಕ್ಕೆ ಸರ್ಕಾರದ ಜಟಿಲ ಯಂತ್ರವು ಅರ್ಥವೇ ಆಗುವುದಿಲ್ಲ. ಪ್ರತಿಯೊಬ್ಬ ಪೌರನೂ ಮೌನವಾಗಿ, ಆದರೂ ಖಂಡಿತವಾಗಿ, ತನಗೇ ತಿಳಿಯದ ಹಲವೊಂದು ರೀತಿಯಲ್ಲಿ ತತ್ಕಾಲದ ಸರಕಾರವನ್ನು ರಕ್ಷಿಸುತ್ತಾನೆ ಎಂಬುದನ್ನವರು ಮನಗಾಣಿಸುವುದಿಲ್ಲ. ಆದ್ದರಿಂದ ಸರಕಾರದ ಒಂದೊಂದು ಕೆಲಸಕ್ಕೂ ಪ್ರತಿಯೊಬ್ಬ ಪೌರನೂ ತನ್ನನ್ನೇ ಹೊಣೆಗಾರನನ್ನಾಗಿ ಮಾಡಿಕೊಳ್ಳುತ್ತಾನೆ. ಸರಕಾರದ ಕೆಲಸಗಳು ಎಲ್ಲಿಯವರೆಗೂ ಸಹನೀಯವಾಗಿರುವುವೋ ಅಲ್ಲಿಯ ವರೆಗೂ ಅವಕ್ಕೆ ಬೆಂಬಲ ಕೊಡುವುದು ಯುಕ್ತವಾದದ್ದೇ. ಆದರೆ ಅವು ಅವನಿಗೂ ಅವನ ರಾಷ್ಟ್ರಕ್ಕೂ ಉಪದ್ರವ ಮಾಡಿದಾಗ ತನ್ನ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಳ್ಳುವುದೇ ಅವನ ಧರ್ಮವಾಗುತ್ತದೆ.

"ಆದರೆ, ನಾನು ಹೇಳಿರುವಂತೆ, ಇದನ್ನು ವ್ಯವಸ್ಥಿತ ರೀತಿಯಲ್ಲಿ ಮಾಡುವುದು ಹೇಗೆಂಬುದು ಪ್ರತಿಯೊಬ್ಬ ಪೌರನಿಗೂ ತಿಳಿಯದು. ಅವ್ಯವಸ್ಥೆ ಬರುವುದು ಕೋಪದಿಂದ, ವ್ಯವಸ್ಥೆ ಹುಟ್ಟುವುದು ಜಾಣ್ಮೆಗೂಡಿದ ಪ್ರತಿಭಟನೆಯಿಂದ. ಆದ್ದರಿಂದ ನಿಜವಾದ ಸಫಲತೆ ದೊರೆಯಲು ಮೊದಲ ಷರತ್ತೆಂದರೆ, ಹಿಂಸೆಯ ಹೆಸರೇ ಇಲ್ಲದಂತೆ ನೋಡಿಕೊಳ್ಳುವುದು. ಸರಕಾರವನ್ನು ಪ್ರತಿನಿಧಿಸುವವರಿಗೆ ಅಥವಾ ನಮ್ಮ ಸಾಲಿಗೆ ಸೇರದಿರುವವರಿಗೆ, ಅಂದರೆ ಸರಕಾರದ ಬೆಂಬಲಗಾರರಿಗೆ, ಹಿಂಸೆ ಮಾಡುವುದೆಂದರೆ ಪ್ರತಿಯೊಂದು ಸನ್ನಿವೇಶದಲ್ಲೂ ತಿರೋಗಮನವೇ ಆಗುತ್ತದೆ, ನಮ್ಮ ಈಗಿನ ಸಂದರ್ಭದಲ್ಲಿ ಅಸಹಕಾರವನ್ನೇ ನಿಲ್ಲಿಸಬೇಕಾಗುತ್ತದೆ. ಅಲ್ಲದೆ ನಿರಪರಾಧಿಗಳ ಜೀವಗಳ ವ್ಯರ್ಥ ನಷ್ಟ ಬೇರೆ. ಆದ್ದರಿಂದ ಅಸಹಕಾರವನ್ನು ಸಾಧ್ಯವಾದಷ್ಟು ಕ್ಷಿಪ್ರಕಾಲದಲ್ಲಿ ಯಶಸ್ವಿಗೊಳಿಸಬೇಕೆಂದು ಅಪೇಕ್ಷಿಸುವವರು ತಮ್ಮ ಸುತ್ತಮುತ್ತ ಸಂಪೂರ್ಣ ಸುವ್ಯವಸ್ಥೆ ಉಳಿಯುವಂತೆ ನೋಡಿಕೊಳ್ಳಬೇಕಾದದ್ದು ಆದ್ಯ ಕರ್ತವ್ಯ."

ರಾಷ್ಟ್ರವು ಆರಂಭ ಮುಹೂರ್ತಕ್ಕಾಗಿ ಕಾಯಲಾರದೆ ಕಾದಿತ್ತು, (ಅಂದರೆ ಸೊನ್ನೆ ಗಂಟೆಯನ್ನು) ಆಗಸ್ಟ್ ೧ಕ್ಕಾಗಿ. ಹೀಗೆ ಕಾಯುತ್ತಿದ್ದ ತಿಂಗಳುಗಳ ಉದ್ದಕ್ಕೂ ಜನ ಕೇಳುತ್ತಿದ್ದರು: "ತಿಲಕರ ಮನೋಭಾವ ಏನು?" ಎಂದು. ಖಿಲಾಫತ್ತಿನ ವಿಷಯದಲ್ಲಿ ತಿಲಕರೆಂದರು: "ನನ್ನ ಭಾವನೆಯೇನೆಂದರೆ ಈ ವಿಷಯದಲ್ಲಿ ಮುಸ್ಲಿಮರು ತಾವೇ

ಸ್ವತಂತ್ರವಾಗಿ ಕಾರ್ಯಾರಂಭ ಮಾಡಬೇಕು. ಸಂಪೂರ್ಣವಾಗಿ ಚರ್ಚಿಸಿದ ಅನಂತರ ಒಂದು ಖಚಿತವಾದ ನಿರ್ಧಾರಕ್ಕೆ ಅವರು ಬರಬೇಕು.ಆಮೇಲೆ ಅವರು ಯಾವ ನಿರ್ಧಾರಕ್ಕೆ ಬರುತ್ತಾರೋ ಅದಕ್ಕೆ ಬೆಂಬಲಕೊಡುವುದು ಹಿಂದೂಗಳಿಗೆ ಸೇರಿದ್ದು". ಮುಸ್ಲಿಮರು ಅಸಹಕಾರ ಮಾಡಿದರೆ ತಮ್ಮ ಪಕ್ಷವೂ, ಹಿಂದೂಗಳೂ ಖಂಡಿತವಾಗಿಯೂ ಅವರನ್ನು ಅನುಸರಿಸುವುದಾಗಿ ಷೌಕತ್ ಆಲಿಯವರಿಗೆ ಅವರು ಭರವಸೆ ಕೊಟ್ಟರು. ಶಾಸನ ಸಭೆಗಳ ಬಹಿಷ್ಕಾರವೂ ಸೇರಿದಂತೆ ಅಸಹಕಾರದ ವಿವರಗಳ ಬಗೆಗೆ ತಮಗೆ ಅಂತಿಮ ವಾದ ಅಭಿಪ್ರಾಯಗಳೇನೂ ಇಲ್ಲವೆಂದರು. ಆದರೆ ಗಾಂಧೀಜಿಯವರೊಂದಿಗೆ ಷಾಕತ್ ಆಲ್ಲಿಯವರು ಮುಂಬಯಿಯಲ್ಲಿ ಅವರನ್ನು ಭೇಟಿ ಮಾಡಿದಾಗ, ಮುಸ್ಲಿಮರು ಶಾಸನ ಸಭೆಗಳನ್ನು ಬಹಿಷ್ಕರಿಸಿದರೆ, ತಾವೂ ತಮ್ಮ ಪಕ್ಷವೂ ಅವರನ್ನು ಅನುಸರಿಸುವುದಾಗಿ ಹೇಳಿದರು.

೧೯೨೦ರಲ್ಲಿ ತಿಲಕರಿಗಿದ್ದ ಸ್ಥಾನಮಾನ ಭಾರತದಲ್ಲಿ ಯಾವ ರಾಜನೀತಿಜ್ಞನಿಗೂ ಅಸೂಯೆ ತರುವಂಥದಾಗಿತ್ತು. ಯುವ ಪೀಳಿಗೆಯನ್ನು ಮಾತ್ರವಲ್ಲದೆ, ಜೀವಂತ ರಾಗಿರುವವರಲ್ಲಿ ಅತ್ಯಂತ ಹಿರಿಯರ ಪೀಳಿಗೆಯನ್ನೂ ಪ್ರತಿನಿಧಿಸಬಲ್ಲವರು ಅವರೊಬ್ಬರೇ ಆಗಿದ್ದರು. ದಾದಾಭಾಯಿ, ರಾನಡೆ, ಫಿರೋಜ್ ಷಾ ಮೆಹ್ತಾ ಮತ್ತು ಗೋಖಲೆ ಇವರೆಲ್ಲ ತೀರಿಕೊಂಡಿದ್ದರು. ಸಂಪ್ರದಾಯವಾದಿಯಾಗಿ ಮೊದಲಿಟ್ಟ ಅತ್ಯಂತ ಶ್ರದ್ಧಾ ವಂತ ಸುಧಾರಕರನ್ನೂ ತಮ್ಮ ಅನುಯಾಯಿಗಳ ಪೈಕಿ ಕಾಣುವಷ್ಟು ಕಾಲ ಅವರು ಬದುಕಿದ್ದರು. "ಮುಸ್ಲಿಮರ ಶತ್ರು" ಎಂಬ ಮುದ್ರೆ ಹೊತ್ತ ಈ ಮಹನೀಯರು ಲಕ್ನೋದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಯ ಸಮರ್ಥಕರಾಗಿದ್ದರು. ಖಿಲಾಫತ್ ಚಳು ವಳಿಯ ಮುಖಂಡರು ಅವರ ಸಕ್ರಿಯ ಸಹಕಾರವನ್ನು ಕೋರಿದರು, ವಾಗ್ದಾನವನ್ನೂ ಪಡೆದರು. ಅವರು ೧೮೯೫ರಲ್ಲಿ ಪ್ರಾರಂಭಿಸಿದ ಸ್ವರಾಜ್ಯ ಘೋಷಣೆಯನ್ನು ೧೯೦೬ರಲ್ಲಿ ಕಾಂಗ್ರೆಸ್ ಪ್ರತಿಧ್ವನಿಗೈದಿತು. ೧೮೯೬ರಲ್ಲಿ ಅವರು ಮಾಡಿದ ಕಂದಾಯರದ್ದತಿ ಚಳು ವಳಿಯು ಗಾಂಧೀಜಿಯವರ ಅಸಹಕಾರ ಚಳುವಳಿಯ ಘೋಷಣೆಗಳಲ್ಲೊಂದಾಯಿತು. "ಕಾಂಗ್ರೆಸ್ಸಿನ ಭಗ್ನಕಾರಿ"ಯೆನಿಸಿಕೊಂಡ ಇವರು ಅದರ ರಕ್ಷಣೆಗೆ ಕೋಟೆಯಾದರು. ಅದರ ಚುನಾಯಿತ ಅಧ್ಯಕ್ಷರಾದರು. ಸರ್ಕಾರದ ಭೀತಿ, ಆಂಗ್ಲೋ ಇಂಡಿಯನ್ನರ ದ್ವೇಷ, ಮಂದಗಾಮಿಗಳ ಹೆದರಿಕೆ ಇವಕ್ಕೆಲ್ಲ ಕಾರಣರಾಗಿದ್ದ ತಿಲಕರು ಭಾರತದ ಆರಾಧ್ಯಮೂರ್ತಿಯೇ ಆಗಿದ್ದರು. ನಲವತ್ತು ವರ್ಷಗಳಿಗೂ ಮೀರಿದ ದೀರ್ಘಾ ವಧಿಯ ಹೃದಯ ಕಲಕುವ ಸ್ಮರಣೆಗಳು ಅವರ ಹಿಂದೆ ಇದ್ದುವು. ಅವರ ಮುಂದೆ ಒಂದು ಮಹಾಸಂಗ್ರಾಮವೇ ಕಾದಿತ್ತು. ಅದರಲ್ಲಿ ತಿಲಕ್ ಮತ್ತು ಗಾಂಧೀಜಿ ಇಬ್ಬರ ನೇತೃತ್ವವನ್ನೂ ರಾಷ್ಟ್ರವು ಎದುರು ನೋಡುತ್ತಿತ್ತು.

ಜುಲೈ ೨೩ರಂದು ತಿಲಕರ ಅರವತ್ತನಾಲ್ಕನೆಯ ಜನ್ಮದಿನ ಬಂದಿತು. ನಾಡಿನ ಎಲ್ಲೆಡೆಗಳಿಂದ ಅಭಿನಂದನೆಗಳ ಸುರಿಮಳೆ ಕರೆಯಿತು. ಅದೇ ತಾನೇ ಮಲೇರಿಯದ ಪೀಡೆಯಿಂದ ತಿಲಕರು ಚೇತರಿಸಿಕೊಂಡಿದ್ದರು. ಆದರೆ ಮುಂಬಯಿಯ ಸಮುದ್ರತೀರದಲ್ಲಿ

ಅವರು ಮಾಡಿದ ಮೋಟಾರು ವಿಹಾರದಿಂದ ಶೀತತಗುಲಿ ಬಹುಬೇಗ ಉಗ್ರ ಜ್ವರವಾಗಿ ಉಲ್ಬಣಿಸಿತು.

ಜುಲೈ ೨೬ನೆಯ ಸೋಮವಾರದಿಂದ ಜ್ವರವು ನಿಶ್ಚಿತವಾಗಿ ವಿಷಮಸ್ಥಿತಿಗೆ ತಿರುಗಿತು. ನ್ಯೂಮೋನಿಯದ ಚಿಹ್ನೆಗಳು ಕಾಣಿಸಿಕೊಂಡುವು. ಮಂಗಳವಾರ ಪೂರ್ತಿ ಕಳವಳದಲ್ಲೇ ಕಳೆಯಿತು. ಅವರ ಸೇವೆಗಾಗಿ ಸ್ನೇಹಿತರೂ ಬಂಧುಬಾಂಧವರೂ ಬಂದು ಸೇರಿದ್ದರು. ಬೀದಿಯಲ್ಲಿ ದೊಡ್ಡ ದೊಡ್ಡ ಗುಂಪುಗಳು ಸುದ್ದಿಗಾಗಿ ತಾಳ್ಮೆಯಿಂದ ಕಾದು ನಿಂತಿದ್ದುವು. ಕೆಲವು ಗಂಟೆಗಳಿಗೊಮ್ಮೆಮ್ಮೆ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿತ್ತು. ಬುಧವಾರ ಅವರ ಹೃದಯವು ದುರ್ಬಲತೆಯ ಲಕ್ಷಣಗಳನ್ನು ತೋರಿಸತೊಡಗಿತು. ಪ್ರಜ್ಞೆ ಹೋಗಿಬಿಟ್ಟಿತು. ಅವರು ಬಡಬಡಿಸತೊಡಗಿದರು. ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲೇ ಅವರು ಮುಂದಿನ ಮೂರು ದಿನ ಇದ್ದರು. ಶನಿವಾರ ಹೃದಯವು ನಿಷ್ಪ್ರಾಣವಾದ ಚಿಹ್ನೆಗಳನ್ನು ತೋರಿಸ ತೊಡಗಿತು. ಉಸಿರಾಟ ಕಷ್ಟವಾಯಿತು. ೧೯೨೦ರ ಆಗಸ್ಟ್ ೧ರಂದು ರಾತ್ರಿ ೧೨-೪೦ಕ್ಕೆ ಲೋಕಮಾನ್ಯ ತಿಲಕರು ವಿಧಿವಶರಾದರು.

ಮುಂಜಾನೆಯಿಂದಲೇ ಭಾರಿ ಭಾರಿ ಗುಂಪುಗಳು ಸರ್ದಾರ್ ಗೃಹದ ಮುಂದೆ ಬೀದಿಯಲ್ಲಿ ಸಂದಣಿಸಿದುವು. ತಿಲಕರ ದೇಹವನ್ನು ಮಾಳಿಗೆಯ ಮುಮ್ಮಂಟಪದ ಮೇಲೆ ಎತ್ತರಿಸಿದ ಕುರ್ಚಿಯಲ್ಲಿ ಕುಳಿತ ಭಂಗಿಯಲ್ಲಿ ಇರಿಸಲಾಯಿತು, ಜನರಿಗೆ ಲೋಕಮಾನ್ಯರ ಅಂತಿಮ ದರ್ಶನ ದೊರಕಿತು.

ಭಾರತದ ಈಚಿನ ಇತಿಹಾಸದಲ್ಲೇ ಹಿಂದೆಂದೂ ಇಂತಹ ರಾಷ್ಟ್ರವ್ಯಾಪೀ ಶೋಕವನ್ನು ಯಾರೂ ಕಂಡಿರಲಿಲ್ಲ. ಕಾಂಗ್ರೆಸ್ಸು ಅಸಹಕಾರದ ಸಲಹೆಯನ್ನು ಇದುವರೆಗೂ ಅಂಗೀಕರಿಸಿರಲಿಲ್ಲ. ಆಗಸ್ಟ್ ೧ನೆಯ ತಾರೀಖನ್ನು ಅಸಹಕಾರದ ಆರಂಭ ದಿನವೆಂದು ನಿಶ್ಚಯಿಸಲಾಗಿತ್ತು. ಆದರೂ ಅಂದು ಬೆಳಗ್ಗೆಯೇ ಗಾಂಧೀಜಿ ಜವಾಹರ್‌ಲಾಲ್ ನೆಹರೂರವರೊಂದಿಗೆ, ಸಿಂಧ್ ಪ್ರವಾಸವನ್ನು ಮುಗಿಸಿಕೊಂಡು ಮುಂಬಯಿಗೆ ಬಂದು ಮುಟ್ಟಿದ್ದರು. ತಮ್ಮ ಮಹಾನಾಯಕನಿಗೆ ಭಕ್ತಿಯನ್ನರ್ಪಿಸಲು ಹರಿದು ಬಂದಿದ್ದ ಇಡೀ ಮುಂಬಯಿಯ ಜನಸ್ತೋಮದ ಭಾರೀ ಪ್ರದರ್ಶನದಲ್ಲಿ ಅವರೂ ಸೇರಿಕೊಂಡರು. ಅಂತಿಮ ಯಾತ್ರೆಯ ಮೆರವಣಿಗೆಯು ಬಹಳ ಹೃದಯಸ್ಪರ್ಶಿಯಾಗಿತ್ತು. ಅದರಲ್ಲಿ ಎಲ್ಲ ವರ್ಗಗಳೂ ಎಲ್ಲ ಜಾತಿಗಳೂ ಭಾಗವಹಿಸಿದ್ದುವು. ತಿಲಕರು ಬ್ರಾಹ್ಮಣರು. ಆದ್ದರಿಂದ ಬ್ರಾಹ್ಮಣರು ಮಾತ್ರವೇ ಅವರ ಮೃತಶರೀರವನ್ನು ಹೊತ್ತೊಯ್ಯಬೇಕೆಂದು ಅವರ ಕೆಲವು ಮಿತ್ರರೂ ಬಂಧುಗಳೂ ಅಪೇಕ್ಷಿಸಿದ್ದರು. ಹಾಗಾಗಿ ಗಾಂಧೀಜಿ ಶಯ್ಯೆಯನ್ನು ಎತ್ತಿಕೊಳ್ಳಲು ಮುಂದೆ ಬಂದು ಬಗ್ಗಿದಾಗ ಕೆಲವರು ಅವರನ್ನು ತಡೆಯಲು ಪ್ರಯತ್ನಿಸಿದರು. ಗಾಂಧೀಜಿ ಒಂದು ಕ್ಷಣ ನಿಂತು ನುಡಿದರು: "ಸಾರ್ವಜನಿಕ ವ್ಯಕ್ತಿಗಳಿಗೆ ಜಾತಿಯ ಹಂಗಿಲ್ಲ" ಪುನಃ ಅವರು ಬಗ್ಗಿ ಒಂದು ತುದಿಯನ್ನೆತ್ತಿಕೊಂಡರು. ಅವರನ್ನನುಸರಿಸಿ ಷೌಕತ್ ಆಲಿ ಹಾಗೂ ಡಾ. ಕಿಚ್ಲೂ ಸರದಿಯಂತೆ ಚೌಪಾದಿ ಮಾರ್ಗದಲ್ಲಿ ಮೃತದೇಹವನ್ನು ಹೆಗಲ ಮೇಲೆ ಹೊತ್ತರು. ದಾರಿಯಲ್ಲಿ ಪದೇ ಪದೇ ಮೆರವಣಿಗೆಯು ನಿಲ್ಲ

ಬೇಕಾಗುತ್ತಿತ್ತು, ಹೂವುಗಳನ್ನು ಅರ್ಪಿಸುವ ಜನರಿಗಾಗಿ. ಒಂದೇ ಸಮನೆ ಸೋನೆ ಬೀಳುತ್ತಿತ್ತು. ಜನರ ಕಣ್ಣುಗಳಿಂದಲೂ ಹರಿಯುತ್ತಿದ್ದ ಕಣ್ಣೀರು ಮುಸುಕಿದ್ದ ಅಂಧಕಾರವನ್ನು ಹೆಚ್ಚಿಸಿತು. ಸೂರ್ಯ ಮುಳುಗುತ್ತಿದ್ದಂತೆ ಲೋಕಮಾನ್ಯರ ದೇಹವನ್ನು ಚೌಪಾತಿ ಮರುಳು ದಂಡೆಯಲ್ಲಿ ಶ್ರೀಗಂಧದ ಚಿತೆಯ ಮೇಲಿಟ್ಟು ದಹನ ಮಾಡಲಾಯಿತು.

ಜನ ಕೇಳುತ್ತಿದ್ದರು, "ತಿಲಕರಾದ ಮೇಲೆ ಭಾರತವನ್ನು ಮುನ್ನಡೆಸುವವರು ಯಾರು?" "ನನ್ನ ಅತಿದೊಡ್ಡ ಬಲವಾಗಿದ್ದ ಕೋಟೆಯೇ ಉರುಳಿ ಹೋಯಿತು" ಎಂದರು ಗಾಂಧೀಜಿ. ಯಂಗ್ ಇಂಡಿಯಾದಲ್ಲಿ ಅವರು ಬರೆದರು:

"ಲೋಕಮಾನ್ಯ ಬಾಲಗಂಗಾಧರ ತಿಲಕರು ಇನ್ನಿಲ್ಲ. ಅವರು ಮೃತರಾದರೆಂದು ನಂಬುವುದೇ ಕಷ್ಟವಾಗಿದೆ. ಅಷ್ಟುಮಟ್ಟಿಗೆ ಅವರು ಜನತೆಯ ಅಂಶವೇ ಆಗಿದ್ದರು. ನಮ್ಮ ಕಾಲದ ಯಾವೊಬ್ಬ ವ್ಯಕ್ತಿಗೂ ಜನಸಾಮಾನ್ಯರ ಮೇಲೆ ತಿಲಕರಿಗಿದ್ದಷ್ಟು ಹಿಡಿತ ಇರಲಿಲ್ಲ. ಸಹಸ್ರ ಸಹಸ್ರ ಜನ ದೇಶ ಬಾಂಧವರಲ್ಲಿ ಅವರು ಉಂಟು ಮಾಡಿದ್ದ ನಿಷ್ಠೆ ಅಸಾಧಾರಣವಾದದ್ದು. ಅವರು ತಮ್ಮ ಜನರ ಆರಾಧ್ಯಮೂರ್ತಿಯಾಗಿದ್ದರೆನ್ನುವುದರಲ್ಲಿ ಸಂಶಯವೇ ಇಲ್ಲ. ಸಹಸ್ರ ಸಹಸ್ರ ಜನರಿಗೆ ಅವರ ಮಾತೇ ಶಾಸನವಾಗಿತ್ತು. ಮಾನವರಲ್ಲಿ ಒಬ್ಬ ಭೀಮ ಸದೃಶ ವ್ಯಕ್ತಿ ಉರುಳಿ ಹೋದ. ಆ ಸಿಂಹನಾದ ಅಡಗಿ ಹೋಯಿತು.

"ತಮ್ಮ ದೇಶ ಬಾಂಧವರ ಮೇಲೆ ಅವರಿಗಿದ್ದ ಹಿಡಿತಕ್ಕೆ ಕಾರಣ ಏನು? ಇದರ ಉತ್ತರ ಸರಳವಾದದ್ದೆಂದು ನನಗೆನಿಸುತ್ತದೆ. ದೇಶಭಕ್ತಿ ಅವರ ಕಟ್ಟೊಲವು. ರಾಷ್ಟ್ರ ಪ್ರೇಮವನ್ನು ಬಿಟ್ಟು ಬೇರೆ ಯಾವ ಧರ್ಮವನ್ನೂ ಅವರರಿಯರು. ಅವರು ಜನ್ಮತಃ ಪ್ರಜಾಪ್ರಭುತ್ವವಾದಿ. ಬಹು ಸಂಖ್ಯಾತರ ಆಳ್ವಿಕೆಯಲ್ಲಿ ಅವರಿಗಿದ್ದ ನಂಬಿಕೆಯ ತೀವ್ರತೆಯು ನನಗೆ ಸ್ವಲ್ಪ ಮಟ್ಟಿಗೆ ದಿಗಿಲನ್ನೇ ಉಂಟು ಮಾಡುತ್ತಿತ್ತು. ಆದರೆ ಅವರಿಗೆ ಜನರ ಮೇಲೆ ಹಿಡಿತ ಕೊಟ್ಟಿದ್ದದ್ದು ಅದೆಯೆ. ಅವರದು ಉಕ್ಕಿನ ಸಂಕಲ್ಪ. ಅದನ್ನವರು ತಮ್ಮ ನಾಡಿಗಾಗಿ ಬಳಸಿದರು. ಅವರ ಬದುಕು ಒಂದು ತೆರೆದ ಪುಸ್ತಕ. ಅವರ ಅಭಿರುಚಿಗಳು ಬಹು ಸರಳ. ಅವರ ವೈಯುಕ್ತಿಕ ಜೀವನವು ನಿಷ್ಕಳಂಕವಾಗಿಯೂ ನಿರ್ಮಲವಾಗಿಯೂ ಇತ್ತು. ಅವರು ತಮ್ಮ ಆಶ್ಚರ್ಯಜನಕವಾದ ಸಹಜ ಶಕ್ತಿಗಳನ್ನೆಲ್ಲ ತಮ್ಮ ದೇಶಕ್ಕಾಗಿ ಮುಡಿಪು ಮಾಡಿದ್ದರು. ಲೋಕಮಾನ್ಯರಷ್ಟು ಸುಸಂಗತವಾಗಿಯೂ ದೃಢವಾಗಿಯೂ ಇನ್ನಾರೂ ಸ್ವರಾಜ್ಯದ ಸಂದೇಶವನ್ನು ಉಪದೇಶಿಸಲಿಲ್ಲ. ಆದ್ದರಿಂದಲೇ ಅವರ ದೇಶಬಾಂಧವರು ಮರುಮಾತಿಲ್ಲದೆ ಅವರನ್ನು ನಂಬಿದ್ದರು. ಅವರ ಧೈರ್ಯ ಅವರನ್ನೆಂದೂ ಬಿಡಲಿಲ್ಲ. ಅವರ ಆಶಾವಾದ ಅದಮ್ಯವಾಗಿತ್ತು. ತಮ್ಮ ಜೀವಾವಧಿಯಲ್ಲೇ ಸಂಪೂರ್ಣ ಸ್ವರಾಜ್ಯವು ಸ್ಥಾಪಿತವಾಗುವುದನ್ನು ಕಾಣುವೆನೆಂದು ಅವರು ಆಶೆ ಇಟ್ಟುಕೊಂಡಿದ್ದರು. ವಿಫಲರಾದದ್ದು ಅವರ ತಪ್ಪಲ್ಲ. ಸ್ವರಾಜ್ಯವು ಹಲವೊಂದು ವರ್ಷ ಮುಂಚೆಯೇ ಸ್ಥಾಪಿತವಾಗುವಂತೆ ಅವರು ಮಾಡಿರುವುದು ಖಂಡಿತ. ಪ್ರಯತ್ನವನ್ನು ಇಮ್ಮಡಿಗೊಳಿಸಿ ಅತ್ಯಲ್ಪ ಕಾಲಾವಧಿಯಲ್ಲಿ ಸ್ವರಾಜ್ಯದ ಕನಸನ್ನು ನನಸಾಗಿಸುವುದು ಉಳಿದಿರುವ ನಮ್ಮ ಪಾಲಿಗೆ ಸೇರಿದ್ದು.

"ಲೋಕಮಾನ್ಯರು ಆಡಳಿತಶಾಹಿಯ ಪ್ರಬಲವಾದ ಶತ್ರುವಾಗಿದ್ದರು. ಅಂದ ಮಾತ್ರಕ್ಕೆ ಇಂಗ್ಲಿಷ್ ಜನರನ್ನಾಗಲಿ, ಇಂಗ್ಲಿಷ್ ಆಳ್ವಿಕೆಯನ್ನಾಗಲಿ ಅವರು ದ್ವೇಷಿಸುತ್ತಿದ್ದರೆಂದಲ್ಲ. ಅವರು ತಮ್ಮ ಶತ್ರುವಾಗಿದ್ದರೆಂದು ಭಾವಿಸಿದರೆ ತಪ್ಪಾದೀತೆಂದು ಇಂಗ್ಲಿಷರಿಗೆ ನಾನು ಎಚ್ಚರಿಕೆ ಕೊಡುತ್ತೇನೆ."

"ಕಲ್ಕತ್ತದಲ್ಲಾದ ಕಳೆದ ಕಾಂಗ್ರೆಸ್ಸಿನಲ್ಲಿ ಹಿಂದಿಯು ರಾಷ್ಟ್ರಭಾಷೆ ಎಂಬುದರ ಮೇಲೆ ಅವರು ಮಾಡಿದ ಪಾಂಡಿತ್ಯಪೂರ್ಣವಾದ ಆಶು ಭಾಷಣವನ್ನು ಕೇಳುವ ಭಾಗ್ಯ ನನಗೊದಗಿತು. ಆಗ ತಾನೇ ಅವರು ಕಾಂಗ್ರೆಸ್ ಚಪ್ಪರದಿಂದ ಹಿಂದಿರುಗಿದ್ದರು. ಹಿಂದಿಯ ಮೇಲೆ ಅವರು ಮಾಡಿದ ಪ್ರಶಾಂತ ಭಾಷಣವನ್ನು ಕೇಳುವುದು ಒಂದು ಹಬ್ಬವಾಗಿತ್ತು. ತಮ್ಮ ಭಾಷಣದ ಮಧ್ಯೆ ಇಂಗ್ಲಿಷರು ನಮ್ಮ ದೇಶೀಯ ಭಾಷೆಗಳನ್ನು ರಕ್ಷಿಸುತ್ತಿರುವುದಕ್ಕಾಗಿ ಉಜ್ವಲವಾದ ಗೌರವ ಕಾಣಿಕೆ ಸಲ್ಲಿಸಿದರು. ಇಂಗ್ಲೆಂಡಿಗೆ ಅವರು ಕೊಟ್ಟ ಭೇಟಿಯಿಂದ, ಇಂಗ್ಲಿಷ್ ಜೂರಿಗಳ ಬಗೆಗೆ ಅವರ ಅನುಭವ ವಿಷಾದಕರವಾದದ್ದಾದರೂ, ಬ್ರಿಟಿಷ್ ಪ್ರಜಾಪ್ರಭುತ್ವದಲ್ಲಿ ಅವರಿಗೆ ದೃಢ ನಂಬಿಕೆಯನ್ನುಂಟುಮಾಡಿತ್ತು. ಚಲನಚಿತ್ರ ಮಾಧ್ಯಮದ ಮೂಲಕ ಪಂಜಾಬಿನ ವಿಷಯದಲ್ಲಿ ಬ್ರಿಟಿಷ್ ಪ್ರಜಾಪ್ರಭುತ್ವಕ್ಕೆ ಶಿಕ್ಷಣ ಕೊಡಬೇಕೆಂಬ ವಿಸ್ಮಯಕಾರಿಯಾದ ಸಲಹೆಯನ್ನವರು ಮಾಡಿದರು. ನಾನು ಇದನ್ನು ಹೇಳುತ್ತಿರುವುದು ಅವರ ನಂಬಿಕೆ ನನಗೂ ಇದೆಯೆಂದಲ್ಲ. ಏಕೆಂದರೆ, ನನಗೆ ಆ ನಂಬಿಕೆಯಿಲ್ಲ, ಅವರಿಗೆ ಇಂಗ್ಲಿಷರ ಮೇಲೆ ದ್ವೇಷ ಇರಲಿಲ್ಲ ಎಂಬುದನ್ನು ತೋರಿಸುವುದಕ್ಕಾಗಿ. ಆದರೆ ಭಾರತಕ್ಕೆ ಕೀಳಾದ ಸ್ಥಾನಮಾನ ಇರುವುದನ್ನು ಸಹಿಸಲು ಅವರಿಗೆ ಸಾಧ್ಯವೂ ಇರಲಿಲ್ಲ, ಇಷ್ಟವೂ ಇರಲಿಲ್ಲ. ಅವರಿಗೆ ಕೂಡಲೇ ಬೇಕಾಗಿದ್ದದ್ದು ಸಮಾನತೆ. ಅದು ತಮ್ಮ ದೇಶದ ಜನ್ಮಸಿದ್ಧ ಹಕ್ಕೆಂದು ಅವರ ನಂಬಿಕೆ. ಭಾರತದ ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಹೋರಾಟದಲ್ಲಿ ಸರ್ಕಾರಕ್ಕವರು ಸ್ವಲ್ಪವೂ ದಾಕ್ಷಿಣ್ಯ ತೋರಿಸಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಎಳ್ಳಷ್ಟೂ ರಿಯಾಯತಿಯನ್ನು ಅವರು ಕೊಡಲೂ ಇಲ್ಲ, ಕೋರಲೂ ಇಲ್ಲ. ಭಾರತವು ಯಾರನ್ನು ಪೂಜಿಸುತ್ತದೆಯೋ ಅಂಥ ಈ ವ್ಯಕ್ತಿಯ ಸತ್ವವನ್ನು ಇಂಗ್ಲಿಷರು ಪರಿಭಾವಿಸುತ್ತಾರೆಂದು ಆಶಿಸುತ್ತೇನೆ.

"ಇನ್ನು ನಮ್ಮ ಮಾತು. ಇನ್ನೂ ಹುಟ್ಟದಿರುವ ಭವಿಷ್ಯದ ಪೀಳಿಗೆಗಳಿಗೆ ಅವರು ಆಧುನಿಕ ಭಾರತದ ಒಬ್ಬ ನಿರ್ಮಾಪಕರಾಗಿ ಇತಿಹಾಸದಲ್ಲುಳಿಯುತ್ತಾರೆ. ತಮಗಾಗಿಯೇ ಬದುಕಿ ತಮಗಾಗಿಯೇ ಅಳಿದರೆಂದು ಜನ ಅವರನ್ನು ಭಕ್ತಿಯಿಂದ ಸ್ಮರಿಸುತ್ತಾರೆ. ಇಂತಹ ವ್ಯಕ್ತಿಯನ್ನು ಮೃತನಾದನೆಂದು ಹೇಳುವುದು ದೈವದ್ರೋಹದಂತೆ. ಅವರ ಶಾಶ್ವತ ಸತ್ವವು ನಮ್ಮೊಡನೆ ಸದಾಕಾಲಕ್ಕೂ ಬದುಕಿರುತ್ತದೆ. ನಮ್ಮ ಬದುಕುಗಳೊಡನೆ ಆತನ ಧೈರ್ಯ, ಆತನ ಸರಳತೆ, ಆತನ ಅದ್ಭುತ ಪರಿಶ್ರಮ ಮತ್ತು ಆತನ ರಾಷ್ಟ್ರಪ್ರೇಮಗಳನ್ನು ಹೆಣೆದುಕೊಂಡು ತನ್ಮೂಲಕ ಭಾರತದ ಏಕೈಕ ಲೋಕಮಾನ್ಯರ ನೆನಪಿಗೆ ಅವಿನಾಶಿಯಾದ ಸ್ಮಾರಕವೊಂದನ್ನು ನಿರ್ಮಿಸೋಣ.

"ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ."

ಪರಿಶಿಷ್ಟ

ಭಾರತೀಯ ಸಸ್ಯಾಹಾರಿಗಳು

(ಗಾಂಧೀಜಿಯ ಈ ಮುಂದಿನ ಲೇಖನಗಳೂ, ಅವರೊಂದಿಗೆ ನಡೆದ ಒಂದು ಸಂದರ್ಶನವೂ ಲಂಡನ್ನಿನ ವೆಜಿಟೇರಿಯನ್ ಪತ್ರಿಕೆಯಲ್ಲಿ ೧೮೯೧ರಲ್ಲಿ ಪ್ರಕಟವಾದುವು)

೧

ವಿವಿಧ ಜಾತಿ ಪಂಥಗಳ ಇಪ್ಪತ್ತೈದು ಕೋಟಿ ಜನರಿಂದ ತುಂಬಿದೆ ಭಾರತ. ಭಾರತಕ್ಕೆ ಬಂದಿಲ್ಲದ ಅಥವಾ ಭಾರತೀಯವಾದ ವಿಷಯದಲ್ಲಿ ಅಷ್ಟೇನೂ ಆಸಕ್ತಿ ತಾಳಿಲ್ಲದ ಇಂಗ್ಲಿಷರಲ್ಲಿರುವ ಸಾಮಾನ್ಯ ನಂಬಿಕೆಯೆಂದರೆ ಎಲ್ಲ ಭಾರತೀಯರೂ ಹುಟ್ಟಿನಿಂದಲೇ ಸಸ್ಯಾಹಾರಿಗಳೆಂದು. ಇದು ಭಾಗಶಃ ಮಾತ್ರ ಸತ್ಯ. ಭಾರತೀಯರನ್ನು ಮುಖ್ಯವಾದ ಮೂರು ಗುಂಪುಗಳಾಗಿ ವಿಭಾಗಿಸಬಹುದು: ಹಿಂದುಗಳು, ಮಹಮ್ಮದೀಯರು ಮತ್ತು ಪಾರ್ಸಿಗಳು.

ಹಿಂದುಗಳಲ್ಲಿ ಮತ್ತೆ ಮುಖ್ಯವಾದ ನಾಲ್ಕು ಜಾತಿಗಳಿವೆ. ಬ್ರಾಹ್ಮಣರು, ಕ್ಷತ್ರಿಯರು ವೈಶ್ಯರು, ಶೂದ್ರರು, ಇವರೆಲ್ಲರಲ್ಲಿ ಬ್ರಾಹ್ಮಣರು ಮತ್ತು ವೈಶ್ಯರು ಮಾತ್ರ ತತ್ತ್ವತಃ ಶುದ್ಧ ಸಸ್ಯಾಹಾರಿಗಳು. ಆದರೆ ಬಳಕೆಯಲ್ಲಿ ಹೆಚ್ಚು ಕಡಮೆ ಎಲ್ಲ ಭಾರತೀಯರೂ ಸಸ್ಯಾಹಾರಿಗಳು. ಕೆಲವರು ಸ್ವಂತ ಇಚ್ಛೆಯಿಂದ ಸಸ್ಯಾಹಾರಿಗಳಾಗಿದ್ದರೆ ಉಳಿದವರು ಪರಿಸ್ಥಿತಿಯ ಬಲದಿಂದ ಸಸ್ಯಾಹಾರಿಗಳಾಗಿದ್ದಾರೆ. ಎರಡನೆಯ ವರ್ಗದವರು ಯಾವಾಗಲೂ ಮಾಂಸಾಹಾರ ಮಾಡುವ ಇಷ್ಟವುಳ್ಳವರಾಗಿದ್ದರೂ ಅತಿ ಬಡವರಾದ್ದರಿಂದ ಮಾಂಸವನ್ನು ಕೊಳ್ಳಲಾರರು. ದಿನಕ್ಕೆ ಒಂದು ಪೈಸಾ ಆದಾಯದಿಂದ (ಇಂಗ್ಲೆಂಡಿನ ೧/೩ ಪೆನ್ನಿ) ಬದುಕಬೇಕಾಗಿರುವವರು ಭಾರತದಲ್ಲಿ ಸಹಸ್ರಾರು ಜನ ಇದ್ದಾರೆ ಎಂಬ ಅಂಶವು ಮೇಲಿನ ಹೇಳಿಕೆಗೆ ಸಾಕ್ಷಿ. ಇವರು ರೊಟ್ಟಿ ಮತ್ತು ಉಪ್ಪನ್ನು ತಿಂದೇ ಬದುಕಬೇಕು. ಉಪ್ಪಿಗೋ ತೆರಿಗೆಯ ತಲೆಭಾರ. ಬಡತನವು ಕಿತ್ತು ತಿನ್ನುತ್ತಿದ್ದರೂ ಭಾರತದಲ್ಲಿ ೧/೩ ಪೆನ್ನಿಗೆ ಮಾಂಸವನ್ನು ಕೊಳ್ಳುವುದು ಒಂದುವೇಳೆ ಸಂಪೂರ್ಣವಾಗಿ ಅಸಾಧ್ಯವಲ್ಲವೆಂದರೂ ತುಂಬ ಕಷ್ಟವಂತೂ ಆಗುತ್ತದೆ.

ಭಾರತದಲ್ಲಿ ಯಾರು ಸಸ್ಯಾಹಾರಿಗಳು ಎಂಬ ಪ್ರಶ್ನೆಯ ವಿವೇಚನೆ ಮುಗಿಯಿತು. ಮುಂದಿನ ಸಹಜವಾದ ಪ್ರಶ್ನೆ ಅವರಲ್ಲಿ ವಾಡಿಕೆಯಾಗಿರುವ ಸಸ್ಯಾಹಾರ ಪದ್ಧತಿ ಎಂಥದೇನು? ಮೊದಲಾಗಿ, ಭಾರತೀಯ ಸಸ್ಯಾಹಾರಿ ಪದ್ಧತಿ ಎಂದರೆ ತರಕಾರಿ, ಮೊಟ್ಟೆ, ಮತ್ತು ಹಾಲುಗಳ ಊಟ ಎಂದಲ್ಲ. ಭಾರತೀಯರು, ಎಂದರೆ ಭಾರತೀಯ ಸಸ್ಯಾಹಾರಿಗಳು, ಮೀನು, ಮಾಂಸ ಕೋಳಿಗಳಲ್ಲದೆ ಮೊಟ್ಟೆಯನ್ನೂ ತಿನ್ನುವುದಿಲ್ಲ. ಅವರ ವಾದ, ಮೊಟ್ಟೆ

ಯನ್ನು ತಿಂದರೆ ಜೀವ ತೆಗೆದಂತೆಯೇ ಎಂದು. ಅದರ ತಂಟೆಗೆ ಹೋಗದೆ ಬಿಟ್ಟರೆ ಮೊಟ್ಟೆಯು ಕೋಳಿಯಾಗುತ್ತದೆ ಎಂಬುದು ಮೇಲು ನೋಟಕ್ಕೆ ಕಾಣುತ್ತದೆ. ಆದರೆ ಇಲ್ಲಿನ (ಇಂಗ್ಲೆಂಡಿನ) ಕೆಲವು ಅತಿರೇಕದ ಸಸ್ಯಾಹಾರಿಗಳಂತಲ್ಲದೆ ಅವರು ಹಾಲು ಬೆಣ್ಣೆಗಳನ್ನು ವರ್ಜಿಸಿಲ್ಲ; ಅಷ್ಟೇ ಅಲ್ಲ ಹದಿನೈದು ದಿನಕ್ಕೊಮ್ಮೆ ಬರುವ 'ಫಲಾಹಾರ'ದ ದಿನ ಅವನ್ನು ತೆಗೆದುಕೊಳ್ಳುವುದು ಪವಿತ್ರವೆಂದೂ ಭಾವಿಸಿದ್ದಾರೆ. ಉತ್ತಮ ವರ್ಗದ ಹಿಂದುಗಳು ಸಾಮಾನ್ಯವಾಗಿ 'ಫಲಾಹಾರ'ದ (ಏಕಾದಶಿ) ದಿನವನ್ನು ಆಚರಿಸುತ್ತಾರೆ. ಅವರು ಕೊಡುವ ಕಾರಣವೇನೆಂದರೆ, ಹಸುವಿನಿಂದ ಹಾಲನ್ನು ಕರೆದುಕೊಳ್ಳುವುದರಿಂದ ಅದನ್ನು ತಾವು ಕೊಂದಂತಾಗುವುದಿಲ್ಲ ಎಂಬುದು. ಹಾಲು ಕರೆಯುವುದು ಚಿತ್ರಕಲೆ ಹಾಗು ಕಾವ್ಯಗಳಿಗೆ ವಸ್ತುವಾಗಿ ಹೋಗಿದೆ. ಈ ದೃಶ್ಯವು ಹಸುವನ್ನು ಕೊಲ್ಲುವ ದೃಶ್ಯದಂತೆ, ಅತಿ ಸೂಕ್ಷ್ಮ ಭಾವನೆಗಳಿಗೂ ಆಘಾತವುಂಟು ಮಾಡುವುದಿಲ್ಲ. ಹಿಂದುಗಳಿಗೆ ಗೋವು ಪೂಜಾರ್ಹವಾದ ವಸ್ತು ಎಂದು ಪ್ರಾಸಂಗಿಕವಾಗಿ ಹೇಳುವುದು ಸೂಕ್ತವಾಗಬಹುದು. ವಧೆಗೋಸ್ಕರ ಹಡಗಿನಲ್ಲಿ ಹಸುಗಳನ್ನು ತುಂಬಿ ಕಳುಹಿಸುವುದನ್ನು ನಿಲ್ಲಿಸಲು ಪ್ರಾರಂಭವಾದ ಚಳುವಳಿಯೊಂದು ಈಗ ವೇಗವಾಗಿ ಮುಂದುವರಿಯುತ್ತಿದೆ.

ಫೆಬ್ರುವರಿ ೭, ೧೮೯೧.

೨

ಭಾರತೀಯ ಸಸ್ಯಾಹಾರಿಗಳ ಆಹಾರ ಅವರು ದೇಶದ ಯಾವ ಭಾಗದಲ್ಲಿ ವಾಸಿಸುತ್ತಿದ್ದಾರೆ ಎಂಬುದನ್ನು ಅವಲಂಬಿಸಿ ಭಿನ್ನ ಭಿನ್ನವಾಗಿರುತ್ತದೆ. ಹೀಗೆ ಬಂಗಾಳದಲ್ಲಿ ಅಕ್ಕಿ, ಬೊಂಬಾಯಿ ಪ್ರಾಂತ್ಯದಲ್ಲಿ ಗೋಧಿ ಮುಖ್ಯವಾದ ಆಹಾರ.

ಸಾಮಾನ್ಯವಾಗಿ ಎಲ್ಲ ಭಾರತೀಯರೂ–ವಿಶೇಷವಾಗಿ ದೊಡ್ಡವರು, ಅದರಲ್ಲೂ ಉತ್ತಮ ಜಾತಿಯ ಹಿಂದುಗಳು–ದಿನಕ್ಕೆ ಎರಡು ಸಲ ಊಟಮಾಡುತ್ತಾರೆ. ಎರಡು ಊಟಗಳ ಮಧ್ಯೆ ದಾಹವಾದಾಗ ಒಂದೆರಡು ಲೋಟ ನೀರು ಕುಡಿಯುತ್ತಾರೆ. ಮೊದಲ ಊಟ ಬೆಳಗಿನ ಹತ್ತು ಗಂಟೆಯ ಸುಮಾರಿಗೆ. ಆ ಊಟ ಇಂಗ್ಲೆಂಡಿನ ಡಿನ್ನರ್‌ಗೆ ಸದೃಶವಾದದ್ದು. ಎರಡನೆಯದು ರಾತ್ರಿ ಎಂಟರ ಸುಮಾರಿಗೆ. ಹೆಸರಿಗೆ ಮಾತ್ರ ಅದು ನಿಮ್ಮಲ್ಲಿನ ಸಪ್ಪರ್‌ಗೆ ಸದೃಶವಾದದ್ದು, ಆದರೆ ವಾಸ್ತವವಾಗಿ ಅದು ಪುಷ್ಕಳವಾದ ಊಟ. ನಮ್ಮಲ್ಲಿ ಬ್ರೇಕ್‌ಫಾಸ್ಟ್ ಇಲ್ಲ ಎಂಬುದು ಮೇಲಿನ ಮಾತಿನಿಂದ ಗೊತ್ತಾಗುತ್ತದೆ. ಭಾರತೀಯರು ಸಾಮಾನ್ಯವಾಗಿ ಬೆಳಗಿನ ಆರು ಗಂಟೆಗೆ ಏಳುತ್ತಾರೆ. ಇನ್ನು ಕೆಲವರು ನಾಲ್ಕು ಅಥವಾ ಐದು ಗಂಟೆಗೇ ಏಳುತ್ತಾರೆ. ಇದನ್ನು ನೋಡಿದರೆ ಅವರಿಗೆ ಬೆಳಗಿನ ಉಪಾಹಾರ ಬೇಕೆನಿಸುತ್ತದೆ. ಅಲ್ಲದೆ, ಸಾಮಾನ್ಯವಾದ ಮಧ್ಯಾಹ್ನದ ಊಟವೂ ಅವರಿಗಿಲ್ಲ. ಭಾರತೀಯರು ಮೊದಲನೆಯ ಊಟವಾದ ಮೇಲೆ ಒಂಬತ್ತು ಗಂಟೆಗಳ ಕಾಲ ಏನೂ ಇಲ್ಲದೆ ಹೇಗೆ ತಾನೆ ಇರುತ್ತಾರೆ ಎಂದು ಆಶ್ಚರ್ಯ ಪಡಬಹುದು. ಇದಕ್ಕೆ ಎರಡು ವಿವರಣೆಗಳಿವೆ. ಮೊದಲನೆಯದು ರೂಢಿ; ರೂಢಿಯೇ ಎರಡನೆಯ ಸ್ವಭಾವ. ದಿನಕ್ಕೆ ಎರಡಕ್ಕಿಂತ ಹೆಚ್ಚು ಸಲ ಊಟ ಮಾಡಬಾರದು ಎಂದು ಧರ್ಮವು ಕೆಲವರನ್ನು, ಉದ್ಯೋಗ ಅಥವಾ ರೂಢಿಯು ಉಳಿದವ

ರನ್ನು ನಿರ್ಬಂಧಿಸುತ್ತದೆ. ಎರಡನೆಯದಾಗಿ ಕೆಲವು ಸ್ಥಳಗಳನ್ನು ಬಿಟ್ಟರೆ ಉಳಿದ ಕಡೆ ತುಂಬ ಸೆಕೆ. ಹಾಗಾಗಿ ಈ ಅಭ್ಯಾಸಕ್ಕೆ ಅದು ಕಾರಣ. ಇಂಗ್ಲೆಂಡಿನಲ್ಲಿ ಕೂಡ ಚಳಿಗಾಲದಷ್ಟು ಆಹಾರ ಬೇಸಿಗೆಯಲ್ಲಿ ಬೇಕಾಗುವುದಿಲ್ಲವಂತೆ. ಇಂಗ್ಲಿಷರಂತಲ್ಲದೆ, ಭಾರತೀಯರು ಪ್ರತಿಯೊಂದು ಆಹಾರ ಪದಾರ್ಥವನ್ನೂ ಬೇರೆ ಬೇರೆಯಾಗಿ ತೆಗೆದುಕೊಳ್ಳುವುದಿಲ್ಲ. ಅನೇಕ ವಸ್ತುಗಳನ್ನು ಬೆರೆಸುತ್ತಾರೆ. ಕೆಲವರು ಹಿಂದುಗಳು ತಮ್ಮ ಧರ್ಮದ ನಿಯಮಾನುಸಾರ ತಮ್ಮ ಆಹಾರವನ್ನೆಲ್ಲ ಒಟ್ಟಾಗಿ ಕಲೆಸಿಕೊಳ್ಳಲೇಬೇಕು. ಇದೂಅಲ್ಲದೆ ಪ್ರತಿಯೊಂದು ಪದಾರ್ಥವೂ ಅನೇಕ ಸಾಮಗ್ರಿಗಳು ಸೇರಿ ತಯಾರಾಗುತ್ತದೆ. ಬರಿ ಬೇಯಿಸಿದ ತರಕಾರಿಗಳಲ್ಲಿ ಅವರಿಗೆ ನಂಬಿಕೆಯಿಲ್ಲ. ಅನೇಕ ಸಂಬಾರಗಳನ್ನು, ಉದಾಹರಣೆಗೆ ಮೆಣಸು, ಉಪ್ಪು, ಲವಂಗ, ಅರಿಶಿನ, ಸಾಸಿವೆ ಇವನ್ನು ಬೆರಸಿ ರುಚಿಗೊಳಿಸುತ್ತಾರೆ. ಇನ್ನು ವಿವಿಧ ಪದಾರ್ಥಗಳು ಸೇರುತ್ತವೆ. ಔಷಧಗಳಲ್ಲಿ ಬಳಸುವ ಸಾಮಗ್ರಿಗನ್ನು ಬಿಟ್ಟರೆ ಉಳಿದವುಗಳಿಗೆ ಇಂಗ್ಲಿಷ್ ಪದಗಳನ್ನು ಹುಡುಕುವುದೇ ಕಷ್ಟ.

ಮೊದಲನೆಯ ಊಟದಲ್ಲಿ ರೊಟ್ಟಿ, ಅಥವಾ ಅವುಗಳನ್ನು ದೋಸೆಗಳೇ ಎನ್ನ ಬಹುದು. (ಇವುಗಳ ವಿಷಯ ಮುಂದೆ ಹೆಚ್ಚಾಗಿ ಹೇಳುತ್ತೇನೆ). ಜೊತೆಗೆ ಸ್ವಲ್ಪ ಬೇಳೆ, ಉದಾಹರಣೆಗೆ ಬಟಾಣಿ, ಹುರುಳಿ ಇತ್ಯಾದಿ. ಎರಡೋ ಮೂರೋ ಒಟ್ಟಿಗೆ ಅಥವಾ ಬೇರೆ ಬೇರೆ ಬೇಯಿಸಿದ ತರಕಾರಿಗಳು, ಇದಾದ ಮೇಲೆ ಅನ್ನ ಮತ್ತು ಸಾಂಬಾರ್, ಅದೂ ಅನೇಕ ಸಂಬಾರಗಳಿಂದ ಘಮಾಯಿಸುತ್ತಿರಬೇಕು. ಅದರ ಮೇಲೆ ಕೆಲವರು ಹಾಲನ್ನವನ್ನಾಗಲಿ, ಬರಿಯ ಹಾಲನ್ನಾಗಲಿ, ಮೊಸರನ್ನಾಗಲಿ, ಅದರಲ್ಲೂ ಬೇಸಗೆ ಯಲ್ಲಿ ಹಾಲೊಡಕನ್ನಾಗಲಿ ತೆಗೆದುಕೊಳ್ಳುತ್ತಾರೆ.

ಎರಡನೆಯ ಊಟ, ಎಂದರೆ ನಿಮ್ಮ ಸಪ್ಪರ್. ಅದರಲ್ಲಿ ಹೆಚ್ಚು ಕಡಮೆ ಮೊದಲ ನೆಯ ಊಟದ ವಸ್ತುಗಳೇ. ಆದರೆ ಪ್ರಮಾಣ ಕಡಮೆ. ತರಕಾರಿಗಳೂ ಕಡಮೆ.ಈ ಊಟದಲ್ಲಿ ಹಾಲನ್ನು ಯಥೇಚ್ಛವಾಗಿ ಬಳಸುತ್ತಾರೆ. ಇದೆಲ್ಲ ಭಾರತೀಯರು ಉಪ ಯೋಗಿಸಿಯೇ ತೀರುವ ಆಹಾರ ಎಂದಾಗಲಿ, ಭಾರತಾದ್ಯಂತ ಎಲ್ಲ ವರ್ಗಗಳ ಜನರೂ ಇದೇ ಆಹಾರವನ್ನು ತೆಗೆದುಕೊಳ್ಳುತ್ತಾರೆ ಎಂದಾಗಲಿ ಓದುಗರು ಭಾವಿಸಬಾರದು. ಉದಾಹರಣೆಗೆ, ಈ ಸಾಮಾನ್ಯ ನಮೂನೆಯ ಆಹಾರದಲ್ಲಿ ಸಿಹಿತಿಂಡಿಗಳ ಹೆಸರೇ ಇಲ್ಲ. ವಾಸ್ತವವಾಗಿ ಶ್ರೀಮಂತರು ವಾರಕ್ಕೆ ಒಂದು ಸಾರಿಯಾದರೂ ಸಿಹಿ ತಿನ್ನುತ್ತಾರೆ. ಅಲ್ಲದೆ ಮೇಲೆ ಹೇಳಿದಂತೆ ಮುಂಬಯಿ ಪ್ರಾಂತದಲ್ಲಿ ಗೋಧಿಯದೇ ಮೇಲುಗೈ. ಬಂಗಾಳದಲ್ಲಿ ಅದರ ಸ್ಥಾನವನ್ನು ಅಕ್ಕಿ ಆಕ್ರಮಿಸುತ್ತದೆ. ಹಾಗೆಯೇ ಈ ನಿಯಮವನ್ನು ಸಮರ್ಥಿಸುವ ಮೂರನೆಯ ಅಪವಾದವೆಂದರೆ ಶ್ರಮಜೀವಿಗಳ ಆಹಾರ. ಅದು ಮೇಲಿನದಕ್ಕಿಂತ ಬೇರೆ. ಎಲ್ಲ ವೈವಿಧ್ಯಗಳನ್ನು ಹೇಳಲು ಹೋದರೆ ಭಾರೀ ಸಂಪುಟಗಳೇ ಬೇಕಾಗುತ್ತವೆ. ಅಲ್ಲದೆ ಹಾಗೆ ಮಾಡ ಹೋದರೆ ಲೇಖನದ ಸ್ವಾರಸ್ಯವೇ ಹೋಗಿ ಬಿಡುತ್ತದೆ.

ಅಥಿಗೆಗೆ ಇಂಗ್ಲೆಂಡಿಗಿಂತ, ಏಕೆ ಇಡೀ ಯೂರೋಪಿಗಿಂತ, ಹೆಚ್ಚಾಗಿ ಬೆಣ್ಣೆಯನ್ನು ವಾಸ್ತವವಾಗಿ ತುಪ್ಪವನ್ನು, ಬಳಸುತ್ತಾರೆ. ತಕ್ಕ ಮಟ್ಟಿಗೆ ಪರಿಣತಿಯುಳ್ಳ ವೈದ್ಯರೊಬ್ಬರ ಪ್ರಕಾರ, ಅದರಿಂದೇನೂ ಒಳ್ಳೆಯದಾಗದಿದ್ದರೂ, ಇಂಗ್ಲೆಂಡಿನಂಥ ಚಳಿದೇಶದಲ್ಲಿನಂತೆ ಅದರಿಂದ ಕೆಟ್ಟದ್ದೇನೂ ಆಗುವುದಿಲ್ಲ.

ಹಣ್ಣು, ಹೌದು, ಎಲ್ಲಕ್ಕಿಂತ ಮುಖ್ಯವಾದ ಹಣ್ಣು, ಮೇಲಿನ ನಮೂನೆ ಆಹಾರದಲ್ಲಿ ಇಲ್ಲದೆಯೇ ಹೋಗಿರುವ ವಿಷಾದಕರ ಸಂಗತಿ ಎದ್ದು ಕಾಣುತ್ತದೆ. ಇದಕ್ಕೆ ಕೆಲವು ಕಾರಣಗಳುಂಟು. ಒಂದು, ಭಾರತೀಯರಿಗೆ ಹಣ್ಣಿನ ಮೌಲ್ಯ ಸರಿಯಾಗಿ ತಿಳಿದಿಲ್ಲ ಎನ್ನುವುದು. ಇನ್ನೊಂದು ಬಡಜನ ಒಳ್ಳೆಯ ಹಣ್ಣುಗಳನ್ನು ಕೊಳ್ಳಲಾರರು. ದೊಡ್ಡ ಪಟ್ಟಣಗಳಲ್ಲಿ ಬಿಟ್ಟರೆ ಭಾರತದ ಎಲ್ಲೆಡೆಯಲ್ಲೂ ಒಳ್ಳೆಯ ಹಣ್ಣುಗಳು ದೊರೆಯುವುದಿಲ್ಲ. ಇಲ್ಲಿಲ್ಲದ (ಬ್ರಿಟನ್ನಿನಲ್ಲಿ) ಕೆಲವು ಹಣ್ಣುಗಳು ಭಾರತದಲ್ಲಿವೆ. ಭಾರತದ ಎಲ್ಲ ವರ್ಗಗಳ ಜನರೂ ಅವನ್ನು ಬಳಸುತ್ತಾರೆ. ಆದರೆ ದುರದೃಷ್ಟವೆಂದರೆ, ಅವನ್ನು ಆಹಾರವಾಗಿ ಅಲ್ಲ, ಬಾಯಾಡಿಸುವುದಕ್ಕೆ ತಿನ್ನುತ್ತಾರೆ. ಆಹಾರ ರಸಾಯನದ ದೃಷ್ಟಿಯಿಂದ ಅದರ ಬೆಲೆಯೇನು ಎಂಬುದು ಯಾರಿಗೂ ತಿಳಿಯದು. ಏಕೆಂದರೆ ಅದನ್ನು ವಿಶ್ಲೇಷಿಸುವ ತೊಂದರೆಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ.

ಫೆಬ್ರುವರಿ ೧೪,೧೮೯೧.

೩

ಹಿಂದಿನ ಲೇಖನದಲ್ಲಿ ರೊಟ್ಟಿಗಳನ್ನು ಕುರಿತು “ಹೆಚ್ಚಿನದು ಇನ್ನು ಮುಂದೆ” ಎಂಬ ವಚನವನ್ನು ನೀಡಲಾಗಿತ್ತು. ಸಾಮಾನ್ಯವಾಗಿ ಈ ರೊಟ್ಟಿಗಳನ್ನು ಗೋಧಿ ಹಿಟ್ಟಿನಿಂದ ಮಾಡುತ್ತಾರೆ. ಮೊದಲು ಗೋಧಿಯನ್ನು ಬೀಸುವ ಕಲ್ಲಿನಲ್ಲಿ–ಗೋಧಿಯನ್ನು ಹಿಟ್ಟು ಮಾಡಲು ಇದೊಂದು ಸರಳವಾದ ಸಾಧನ–ಬೀಸುತ್ತಾರೆ. ಬಳಿಕ ಅದನ್ನು ದೊಡ್ಡ ರಂಧ್ರಗಳಿರುವ ಜರಡಿಯಲ್ಲಿ ಒಂದರಿಯಾಡುತ್ತಾರೆ, ಶೀರಾದಷ್ಟು ಹೊಟ್ಟು ಬೇರೆಯಾಗುತ್ತದೆ. ಬಡವರು ನಿಜವಾಗಿ ಒಂದರಿಯಾಡುವುದೇ ಇಲ್ಲ. ಇಲ್ಲಿನ ಸಸ್ಯಾಹಾರಿಗಳು ಬಳಸುವ ಗೋಧಿಹಿಟ್ಟೂ ಅದೂ ಒಂದೇ ಅಲ್ಲ. ಇಲ್ಲಿನ ಬಿಳಿಯ ಬ್ರೆಡ್ಡಿಗೆ ಬಳಸಿ ಅದನ್ನು ತುಂಬ ಕೆಡಿಸುತ್ತಿರುವ ಸಾಮಾನ್ಯ ಹಿಟ್ಟಿಗಿಂತ ನಮ್ಮಲ್ಲಿಯ ಹಿಟ್ಟು ಬಹುಪಾಲು ಉತ್ತಮ. ಒಂದು ಪೌಂಡು ಗೋಧಿಹಿಟ್ಟಿಗೆ ಒಂದು ಚಮಚ ತುಪ್ಪ ಹಾಕುತ್ತಾರೆ. ಸಾಕಷ್ಟು ನೀರು ಬೆರಸಿ ಅದು ಹದವಾದ ಉಂಡೆ ಆಗುವ ವರೆಗೆ ಕೈಯಲ್ಲಿ ನಾದುತ್ತಾರೆ. ಈ ಉಂಡೆಯನ್ನು ನಾಲ್ಕು ಸಮಭಾಗವಾಗಿ ಮಾಡುತ್ತಾರೆ ಒಂದೊಂದೂ ಸಣ್ಣ ಕಿತ್ತಳೆ ಹಣ್ಣಿನ ಗಾತ್ರಕ್ಕೆ. ಅದನ್ನು ತೆಳುವಾಗಿ ಲಟ್ಟಣಿಗೆಯಿಂದ ಲಟ್ಟಿಸುತ್ತಾರೆ. ಒಂದೊಂದು ರೊಟ್ಟಿಯು ಸುತ್ತಳತೆಯೂ ಆರು ಅಂಗುಲ. ಅವನ್ನು ಬೇರೆ ಬೇರೆಯಾಗಿ ಕಾವಲಿಯ ಮೇಲಿಟ್ಟು ಬೇಯಿಸುತ್ತಾರೆ. ಒಂದೊಂದನ್ನು ಬೇಯಿಸಲು ಶಿರಿಂದ ೭ ನಿಮಿಷಗಳು ಬೇಕು. ಬಿಸಿಯಾಗಿರುವಾಗ ಬೆಣ್ಣೆಯೊಂದಿಗೆ ತಿನ್ನುತ್ತಾರೆ. ಇದು ಬಹಳ ರುಚಿಯಾಗಿರುತ್ತದೆ. ತುಸು ತಣ್ಣಗಾಗಿರುವಾಗಲೂ ತಿನ್ನಬಹುದು, ತಿನ್ನುತ್ತಾರೆ. ಸಾಮಾನ್ಯ

ಇಂಗ್ಲೀಷನಿಗೆ ಮಾಂಸ ಹೇಗೋ, ಸಾಮಾನ್ಯ ಭಾರತೀಯನಿಗೆ, ಸಸ್ಯಾಹಾರಿಯಾಗಿರಲಿ, ಮಾಂಸಾಹಾರಿಯಾಗಿರಲಿ, ಈ ರೊಟ್ಟಿ ಹಾಗೆ. ಏಕೆಂದರೆ, ಈ ಲೇಖಕನ ಅಭಿಪ್ರಾಯದಲ್ಲಿ ಭಾರತದಲ್ಲಿ ಮಾಂಸಾಹಾರಿಯೂ ಮಾಂಸವನ್ನು ಅತ್ಯಂತ ಅಗತ್ಯ ವಸ್ತುವೆಂದು ಭಾವಿಸುವುದಿಲ್ಲ. ಹಾಗೆ ನೋಡಿದರೆ ಅವನಿಗೆ ಅದು ರೊಟ್ಟಿಗಳನ್ನು ತಿನ್ನಲು ನೆಂಜಿಕೆಯಂತೆ.

ಸ್ಥೂಲವಾಗಿ, ಸ್ಥೂಲವಾಗಿ ಮಾತ್ರವೇ; ಇದು ತಕ್ಕಷ್ಟು ಅನುಕೂಲಸ್ಥನಾದ ಭಾರತೀಯ ಸಸ್ಯಾಹಾರಿಯ ಸಾಮಾನ್ಯ ಆಹಾರ. ಈಗ ಒಂದು ಪ್ರಶ್ನೆ ಕೇಳಬಹುದು. ಭಾರತೀಯರ ರೂಢಿಯಲ್ಲಿ ಬ್ರಿಟಿಷ್ ಆಡಳಿತದಿಂದಾಗಿ ಏನೂ ಬದಲಾವಣೆಯಾಗಿಲ್ಲವೆ? ಆಹಾರ ಪಾನೀಯಗಳ ವಿಷಯದಲ್ಲಿ ಹೇಳುವುದಾದರೆ "ಹೌದು" ಮತ್ತು "ಇಲ್ಲ". "ಇಲ್ಲ" ಏಕೆಂದರೆ, ಸಾಮಾನ್ಯ ಸ್ತ್ರೀಪುರುಷರು ತಮ್ಮ ಮೊದಲಿಂದ ಬಂದಿರುವ ಆಹಾರಕ್ಕೂ ಊಟಗಳ ಸಂಖ್ಯೆಗೂ ಅಂಟಿಕೊಂಡಿದ್ದಾರೆ. "ಹೌದು" ಏಕೆಂದರೆ ಅಲ್ಪ ಸ್ವಲ್ಪ ಇಂಗ್ಲಿಷ್ ಕಲಿತವರು ಅಲ್ಲಿ ಇಲ್ಲಿ ಕೆಲವು ಇಂಗ್ಲಿಷ್ ಭಾವನೆಗಳನ್ನೂ ಆಯ್ದುಕೊಂಡಿದ್ದಾರೆ. ಆದರೆ ಈ ಬದಲಾವಣೆಯು–ಅದು ಒಳ್ಳೆಯದೋ ಕೆಟ್ಟದ್ದೋ ಓದುಗರೇ ನಿರ್ಣಯಿಸಲಿ–ಅಷ್ಟೇನೂ ಗಮನಾರ್ಹವಾಗಿಲ್ಲ.

ಕೊನೆಯಲ್ಲಿ ಹೇಳಿದ ವರ್ಗಕ್ಕೆ ಬೆಳಗಿನ ಉಪಾಹಾರದಲ್ಲಿ ನಂಬಿಕೆ ಪ್ರಾರಂಭವಾಗಿದೆ. ಅವರ ಉಪಾಹಾರ ಎಂದರೆ ಒಂದು ಅಥವಾ ಎರಡು ಕಪ್ಪು ಚಹಾ. ಇನ್ನು ಪಾನೀಯದ ವಿಷಯ. ವಿದ್ಯಾವಂತರು ಎಂದು ಕರೆಸಿಕೊಳ್ಳುವ ಭಾರತೀಯರು ಮುಖ್ಯವಾಗಿ ಬ್ರಿಟಿಷ್ ಆಳಿಕೆಯಿಂದಾಗಿ ಚಹಾ ಅಥವಾ ಕಾಫಿ ಕುಡಿಯುತ್ತಾರೆ. ಅದಕ್ಕೆ ಹೆಚ್ಚಿನ ಗಮನದ ಅಗತ್ಯವಿಲ್ಲ. ಟೀ ಅಥವಾ ಕಾಫಿಯಿಂದ ಇರುವ ತೊಂದರೆಯೆಂದರೆ ವೆಚ್ಚ ಸ್ವಲ್ಪ ಹೆಚ್ಚಾಗಬಹುದು. ಅತಿಯಾಗಿ ಕುಡಿಯುತ್ತಲೇ ಹೋದರೆ ಆರೋಗ್ಯ ಹಾಳಾಗಬಹುದು. ಆದರೆ ಬ್ರಿಟಿಷ್ ಆಳ್ವಿಕೆಯ ದುಷ್ಪರಿಣಾಮಗಳಲ್ಲಿ ಅತ್ಯಂತ ಗಮನೀಯವಾದದ್ದು ಎಂದರೆ ಒಂದಿಲ್ಲ ಒಂದು ರೂಪದಲ್ಲಿ ಆಲ್ಕೊಹಾಲಿನ ಅಮದು. ಮಾನವತೆಯ ಶತ್ರು, ನಾಗರಿಕತೆಯ ಶಾಪ ಅದು. ಎರವಲಾಗಿ ಪಡೆದ ಈ ಅಭ್ಯಾಸದಿಂದ ಆಗಿರುವ ದುಷ್ಪರಿಣಾಮದ ಪ್ರಮಾಣ ಎಷ್ಟು ಎನ್ನುವುದು, ಧರ್ಮವು ಪ್ರತಿಷೇಧಿಸುತ್ತಿದ್ದರೂ ಭಾರತದ ಉದ್ದಗಲಗಳನ್ನೆಲ್ಲ ಈ ಶತ್ರುವು ವ್ಯಾಪಿಸಿದೆ ಎಂಬುದಾಗಿ ಹೇಳಿದಾಗ ಓದುಗನಿಗೆ ಗೊತ್ತಾಗುತ್ತದೆ. ಏಕೆಂದರೆ ಮಹಮದೀಯ ಧರ್ಮದ ಪ್ರಕಾರ ಆಲ್ಕೊಹಾಲಿರುವ ಒಂದು ಸೀಸೆಯನ್ನು ಮುಟ್ಟಿದರೂ ಮಹಮದೀಯನು ಅಶುದ್ಧನಾಗುತ್ತಾನೆ. ಹಿಂದುವಿನ ಧರ್ಮವಂತೂ ಯಾವುದೇ ರೂಪದಲ್ಲಿ ಆಲ್ಕೊಹಾಲನ್ನು ಬಳಸುವುದನ್ನೂ ಬಹು ಕಟ್ಟುನಿಟ್ಟಾಗಿ ನಿಷೇಧಿಸುತ್ತದೆ. ಆದರೂ ಅಯ್ಯೋ! ಸರಕಾರವು ಆಲ್ಕೊಹಾಲಿನ ವ್ಯಾಪ್ತಿಯನ್ನು ತಡೆಗಟ್ಟುವುದರ ಬದಲು ಅದಕ್ಕೆ ನೆರವು ನೀಡಿ ವ್ಯಾಪಕಗೊಳಿಸುತ್ತಿದೆ ಎಂದು ತೋರುತ್ತದೆ. ಎಲ್ಲ ದೇಶಗಳಂತೆಯೇ ಇಲ್ಲಿ ಕೂಡ. ಬಡವರಿಗೇ ಹಾನಿ ಹೆಚ್ಚು. ಒಳ್ಳೆಯ ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ಕೊಳ್ಳುವ ಬದಲು ಅವರು

ತಾವು ಸಂಪಾದಿಸುವುದನ್ನೆಲ್ಲ ಹೆಂಡ–ಸಾರಾಯಿಗಳಿಗೆ ಸುರಿಯುತ್ತಿದ್ದಾರೆ. ಕುಡಿದು ಕುಡಿದು ದರಿದ್ರನಾಗುತ್ತಾನೆ. ಅಕಾಲ ಮೃತ್ಯುವನ್ನು ಅಪ್ಪುತ್ತಾನೆ. ತನ್ನ ಸಂಸಾರವನ್ನು ಉಪವಾಸ ಬೀಳಿಸುತ್ತಿರುವವನು, ಮಕ್ಕಳನ್ನು ನೋಡಿಕೊಳ್ಳಬೇಕಾದ ಪವಿತ್ರ ಜವಾಬ್ದಾರಿಯನ್ನು ಉಪೇಕ್ಷಿಸುತ್ತಿರುವವನು, ಈ ನಿರ್ಭಾಗ್ಯನಾದ ದರಿದ್ರ ವ್ಯಕ್ತಿಯೇ. ಬಾರೋ ಕೌಂಟಿಯ ಮಾಜಿ ಪ್ರತಿನಿಧಿಯಾದ ಕೇಯ್ನ್ (Caine)ಅವರನ್ನು ಇಲ್ಲಿ ಪ್ರಶಂಸಿಸಲೇಬೇಕು. ಏಕೆಂದರೆ ಈ ಹಾನಿಯ ವಿರುದ್ಧವಾಗಿ ಮೆಚ್ಚುವಂತಹ ರೀತಿಯಲ್ಲಿ ಧರ್ಮಯುದ್ಧವನ್ನು ಅವರು ಇನ್ನೂ ನಡೆಸುತ್ತಿದ್ದಾರೆ. ಆದರೆ ಸರಕಾರದ ಅಸಹಾನುಭೂತಿ ಮತ್ತು ಪ್ರಚ್ಛನ್ನವಾದ ನಿಷ್ಕ್ರಿಯೆಯ ವಿರುದ್ಧ ಎಷ್ಟೇ ಶಕ್ತಿಯುತನಾದ ಒಬ್ಬ ಮನುಷ್ಯ ಏನು ತಾನೆ ಮಾಡಬಲ್ಲ?

ಫೆಬ್ರುವರಿ ೨೧, ೧೮೯೧

೪

ಭಾರತದಲ್ಲಿ ಸಸ್ಯಾಹಾರಿಗಳು ಯಾರು? ಅವರು ಸಾಮಾನ್ಯವಾಗಿ ತೆಗೆದುಕೊಳ್ಳುವ ಆಹಾರ ಯಾವುದು? ಎಂಬುದು ಗೊತ್ತಾಯಿತಷ್ಟೆ. ಸಸ್ಯಾಹಾರಿಗಳಾದ ಹಿಂದುಗಳು ದುರ್ಬಲರಾಗಿರುತ್ತಾರೆ ಎಂದು ಕೆಲವರು ವಾದಿಸುತ್ತಾರಲ್ಲ, ಅದು ಎಷ್ಟು ಟೊಳ್ಳು, ಆಧಾರ ರಹಿತ ಎಂಬುದನ್ನು ಮುಂದಿನ ಅಂಶಗಳಿಂದ ಓದುಗರೇ ನಿರ್ಣಯಿಸಲಿ.

ಭಾರತೀಯ ಸಸ್ಯಹಾರಿಗಳ ವಿಷಯದಲ್ಲಿ ಪದೇ ಪದೇ ಹೇಳುವ ಒಂದು ವಿಷಯವೆಂದರೆ, ದೈಹಿಕವಾಗಿ ಅವರು ತುಂಬ ದುರ್ಬಲರು, ಆದ್ದರಿಂದ ದೇಹದ ಶಕ್ತಿಯೂ ಸಸ್ಯಾಹಾರವೂ ಕೂಡುವುದಿಲ್ಲ ಎಂಬುದು.

ಭಾರತದ ಮಾಂಸಾಹಾರಿಗಳಿಗಿಂತ ಒಂದು ವೇಳೆ ಹೆಚ್ಚು ಬಲಿಷ್ಠರಾಗಿಲ್ಲವೆಂದರೂ ಅವರಷ್ಟೇ ಆದರೂ, ಭಾರತದಲ್ಲಿ ಸಸ್ಯಾಹಾರಿಗಳು, ಮಾಂಸಾಹಾರಿಗಳಷ್ಟೇ, ಅಷ್ಟೇಕೆ, ಇಂಗ್ಲಿಷರಷ್ಟು ಸಹ, ಬಲಶಾಲಿಗಳಾಗಿದ್ದಾರೆ ಎಂಬುದನ್ನು ತೋರಿಸಿಕೊಡಬಲ್ಲೆವಾದರೆ, ಅಲ್ಲದೆ ದೌರ್ಬಲ್ಯವಿರುವಲ್ಲಿ ಅದಕ್ಕೆ ಕಾರಣ ಮಾಂಸೇತರ ಆಹಾರವಲ್ಲ, ಇತರ ಹಲವೊಂದು ಕಾರಣಗಳು, ಎಂಬುದನ್ನು ತೋರಿಸಿದರೆ, ಮೇಲಿನ ವಾದದ ಆಧಾರವೇ ಭೂಗತವಾಗುತ್ತದೆ.

ಹಿಂದುಗಳು ಸಾಮಾನ್ಯವಾಗಿ ಅಪಖ್ಯಾತಿ ತಂದುಕೊಳ್ಳುವಷ್ಟು ದುರ್ಬಲರು ಎಂಬುದನ್ನು ಮೊದಲಿಗೇ ಒಪ್ಪಿಕೊಳ್ಳಬೇಕು. ಮನೆಮಾತಾಗಿ ಹೋಗಿರುವ ದೌರ್ಬಲ್ಯಕ್ಕೆ ಇನ್ನೂ ನಿರಂತರವಾಗಿ ವರ್ತಿಸುವ ಬೇರೆ ಹಲವು ಕಾರಣಗಳಿವೆ ಎಂಬುದನ್ನು ನಿಷ್ಪಕ್ಷಪಾತ ದೃಷ್ಟಿಯುಳ್ಳ ಯಾವನೇ ಆಗಲಿ– ಅವನು ಮಾಂಸಾಹಾರಿಯೇ ಆಗಿರಬಹುದು, ಭಾರತವನ್ನೂ ಅದರ ಜನರನ್ನೂ ಕುರಿತು ಅವನಿಗಿರುವ ತಿಳುವಳಿಕೆ ಕೇವಲ ಹೊರ ಪರಿಚಯವಾಗಿರಬಹುದು, ಒಪ್ಪಿಕೊಳ್ಳಬೇಕು. ಹೀಗಿದ್ದರೂ–ನಿಮಗೆ ಹೇಳಬಲ್ಲ ಅತ್ಯಂತ ಮುಖ್ಯ ಕಾರಣಗಳಲ್ಲಿ ಒಂದು–ಇದೇ ಅತ್ಯಂತ ಮುಖ್ಯ ಕಾರಣವಲ್ಲದಿದ್ದರೂ–ಬಾಲ್ಯ ವಿವಾಹಗಳ ದುಷ್ಟ ಪದ್ಧತಿ ಹಾಗೂ ಅದರ ಸಹಚರವಾದ ಕೆಡುಕುಗಳು. ಸಾಮಾನ್ಯವಾಗಿ

ಮಕ್ಕಳು ಒಂಬತ್ತರ ಮಹಾವಯಸ್ಸನ್ನು ತಲುಪಿದ ಕೂಡಲೆ ವೈವಾಹಿಕ ಜೀವನದ ಸಂಕೋಲೆಗಳನ್ನು ಹೊರಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಇನ್ನೂ ಎಳೆಯ ವಯಸ್ಸಿನಲ್ಲೇ ಅವರಿಗೆ ಮದುವೆಯಾಗುತ್ತದೆ. ಕೆಲವು ನಿದರ್ಶನಗಳಲ್ಲಿ, ಹುಟ್ಟುವ ಮುಂಚೆಯೇ ಅವರಿಗೆ ನಿಶ್ಚಿತಾರ್ಥ ನಡೆದು ಹೋಗಿರುತ್ತದೆ. ತನ್ನ ಮಗು ಗಂಡಾದರೆ ಇನ್ನೊಬ್ಬಳ ಮಗು ಹೆಣ್ಣಾದರೆ ಆ ಹೆಣ್ಣನ್ನು ತನ್ನ ಗಂಡುಮಗುವಿಗೆ ಮದುವೆ ಮಾಡಿ ಕೊಳ್ಳುವುದಾಗಿ ಒಬ್ಬ ಹೆಂಗಸು ಇನ್ನೊಬ್ಬಳಿಗೆ ಮಾತುಕೊಡುತ್ತಾಳೆ. ಇದು ಪರಸ್ಪರ. ಆದರೆ ನಿಷೇಕ ನಡೆಯುವುದು ಅವಳಿಗೆ ಹತ್ತು ಅಥವಾ ಹನ್ನೊಂದು ವರ್ಷ ಆದ ಮೇಲೆಯೇ. ೧೬ ಅಥವಾ ೧೭ರ ಗಂಡನಿಂದ ೧೨ರ ಹುಡುಗಿ ಮಗುವನ್ನು ಪಡೆದ ಘಟನೆಗಳು ದಾಖಲೆಯಲ್ಲಿವೆ. ಅತ್ಯಂತ ಬಲಿಷ್ಠ ಮೈಕಟ್ಟುಳ್ಳವರಿಗೂ ಇಂತಹ ಮದುವೆಗಳು ದುಷ್ಪರಿಣಾಮವುಂಟು ಮಾಡುವುದಿಲ್ಲವೆ?

ಇಂತಹ ಮದುವೆಗಳಿಂದ ಹುಟ್ಟುವ ಮಕ್ಕಳು ಎಷ್ಟು ದುರ್ಬಲರಾಗಬೇಕು ಎಂಬುದನ್ನು ಕಲ್ಪಿಸಿಕೊಳ್ಳಿ. ಅಂತಹ ದಂಪತಿಗಳು ಎಷ್ಟು ಚಿಂತೆಗಳನ್ನನುಭವಿಸಬೇಕು, ನೋಡಿ. ಹನ್ನೊಂದು ವರ್ಷದ ಹುಡುಗನಿಗೆ ಸುಮಾರು ಅದೇ ವಯಸ್ಸಿನ ಹುಡುಗಿ ಯನ್ನು ಕೊಟ್ಟು ಮದುವೆ ಮಾಡಿದರು ಎನ್ನಿ. ಹೀಗೆ, ಗಂಡ ಎಂದರೆ ಏನು ಎಂಬುದನ್ನೇ ಅರಿಯಲಾರದ, ಅರಿಯದ, ಒಬ್ಬ ಹುಡುಗನ ಮೇಲೆ ಒಬ್ಬ ಹೆಂಡತಿಯನ್ನು ಹೇರ ಲಾಗುತ್ತದೆ. ಅವನಿನ್ನೂ ಶಾಲೆಗೆ ಹೋಗುತ್ತಿದ್ದಾನೆಂಬುದು ತಿಳಿದೇ ಇದೆ. ಶಾಲೆಯಲ್ಲಿ ಮಾಡಬೇಕಾದ ಬೇಸರದ ದುಡಿಮೆ ಸಾಲದೆಂದು ತನ್ನ ಎಳೆ ಹೆಂಡತಿಯನ್ನೂ ಅವನು ನೋಡಿಕೊಳ್ಳಬೇಕು. ಅವಳಿಗೆ ಅವನು ಕಾರ್ಯತಃ ದುಡಿದು ತಂದು ಹಾಕಬೇಕಾಗಿಲ್ಲ. ಏಕೆಂದರೆ, ಭಾರತದಲ್ಲಿ, ಮಗನಾದವನು, ತಂದೆ ತಾಯಿಗಳ ಜೊತೆ ಜಗಳ ಕಾದಿಲ್ಲದೆ ಇದ್ದರೆ, ತನಗೆ ಮದುವೆಯಾಗಿದ್ದರೂ ಅವರನ್ನು ಬಿಟ್ಟು ದೂರ ಇರಬೇಕಾಗಿಲ್ಲ. ಆದರೂ ಸಂಪಾದನೆಯೊಂದನ್ನು ಬಿಟ್ಟು ಉಳಿದೆಲ್ಲವನ್ನೂ ಅವನು ಮಾಡಬೇಕು. ಆಮೇಲೆ ಮದುವೆಯಾದ ಆರು ವರ್ಷಗಳ ಸುಮಾರಿಗೆ ಅವನಿಗೆ ಒಬ್ಬ ಮಗ. ನಾಗುತ್ತಾನೆ. ಇನ್ನೂ ಅವನ ವಿದ್ಯಾಭ್ಯಾಸವೇ ಬಹುಶಃ ಮುಗಿದಿರುವುದಿಲ್ಲ. ತನ್ನನ್ನಷ್ಟೇ ಅಲ್ಲದೆ, ಹೆಂಡತಿ ಮಗುವನ್ನೂ ನೋಡಿಕೊಳ್ಳಲು ಅವನು ಹಣ ಸಂಪಾದಿಸಬೇಕು ಏಕೆಂದರೆ ಇಡೀ ಜೀವಮಾನವನ್ನೇ ಅವನು ತಂದೆಯೊಂದಿಗೆ ಕಳೆಯುವಂತಿಲ್ಲ. ಹಾಗೆ ಕಳೆಯುತ್ತಾನೆಂದೇ ಇಟ್ಟುಕೊಂಡರೂ, ತನ್ನ ಹೆಂಡತಿ ಮಕ್ಕಳ ಜೀವನೋಪಾಯಕ್ಕಾಗಿ ಖಂಡಿತ ಏನಾದರೂ ತಂದು ಕೊಡಲೇ ಬೇಕು. ತನ್ನ ಕರ್ತವ್ಯ ಪ್ರಜ್ಞೆಯೇ ಅವನ ಮನಸ್ಸನ್ನು ಕೊರೆದು ಅವನ ಆರೋಗ್ಯವನ್ನು ಹಾಳುಮಾಡುವುದಿಲ್ಲವೆ? ಅತ್ಯಂತ ಬಲಿಷ್ಠವಾದ ದೇಹವನ್ನು ಕೂಡ ಇದುನುಚ್ಚು ನೂರು ಮಾಡುವುದಿಲ್ಲ ಎಂದು ಹೇಳುವ ಧೈರ್ಯ ಯಾರಿಗುಂಟು? ಮೇಲಿನ ಉದಾಹರಣೆಯ ಹುಡುಗ ಮಾಂಸಾಹಾರಿಯಾಗಿದ್ದರೆ, ಈಗಿಗಿಂತ ಹೆಚ್ಚು ಗಟ್ಟಿಮುಟ್ಟಾಗಿರುತ್ತಿದ್ದ ಎಂದು ಯಾರಾದರೂ ವಾದಿಸಬಹುದು. ಮಾಂಸಾಹಾರಿಗಳಾಗಿದ್ದರೂ, ಹಾದರದ ಚಾಳಿಯಿಂದ ದುರ್ಬಲರಾಗಿರುವ ಕ್ಷತ್ರಿಯ ರಾಜಕುಮಾರರಲ್ಲಿ ಅಂತಹ ವಾದಕ್ಕೆ ಉತ್ತರ ಸಿಕ್ಕುತ್ತದೆ.

ವಿರುದ್ಧವಾದ ಬೇರೆ ಕಾರಣಗಳ ಕೈವಾಡ ಇಲ್ಲದಿದ್ದಾಗ ಭಾರತೀಯ ಸಸ್ಯಾಹಾರಿಯೂ ಎಷ್ಟು ಬಲಶಾಲಿಯಾಗಿರಬಲ್ಲ ಎಂಬುದಕ್ಕೆ ಭಾರತದ ಕುರುಬರು ಒಳ್ಳೆಯ ಉದಾಹರಣೆ. ಭಾರತದ ಕುರುಬ, ಭೀಮನಂತಹ ಒಳ್ಳೆಯ ಮೈಕಟ್ಟುಳ್ಳವನು. ಬಲವಾದ ದೊಣ್ಣೆ ಹಿಡಿದು ನಿಂತರೆ ಅವನು ಕತ್ತಿ ಹಿಡಿದು ನಿಂತ ಸಾಮಾನ್ಯ ಯೂರೋಪಿಯನ್ನನಿಗೆ ಸರಿಸಮ. ದೊಣ್ಣೆ ಹಿಡಿದೇ ಹುಲಿಗಳನ್ನು ಸಿಂಹಗಳನ್ನೂ ಈ ಕುರುಬರು ಕೊಂದ ಅಥವಾ ಓಡಿಸಿದ ಘಟನೆಗಳು ದಾಖಲೆಯಲ್ಲಿವೆ. "ಆದರೆ" ಎಂದ ಒಂದು ದಿನ, ಒಬ್ಬ ಸ್ನೇಹಿತ. "ಒರಟೊರಟಾಗಿ ಇನ್ನೂ ನೈಸರ್ಗಿಕ ಸ್ಥಿತಿಯಲ್ಲೇ ಇರುವ ಜನರ ಉದಾಹರಣೆಯಾಯಿತು. ಈಗಿನ ಸಮಾಜದ ಅತ್ಯಂತ ಕೃತಕ ಸ್ಥಿತಿಯಲ್ಲಿ ಕೋಸುಗಡ್ಡೆ ಬಟಾಣಿಗಳೇ ಸಾಲದು, ಅದನ್ನು ಮೀರಿದ ಯಾವುದೋ ಒಂದು ನಮಗೆ ಬೇಕು. ನಿಮ್ಮ ಕುರುಬನಿಗೆ ಬುದ್ಧಿ ಕಡಿಮೆ. ಅವನು ಪುಸ್ತಕಗಳನ್ನೇ ಓದುವುದಿಲ್ಲ" ಇತ್ಯಾದಿ ಇತ್ಯಾದಿ. ಇದಕ್ಕೆ ಕೊಟ್ಟು, ಈಗಲೂ ಕೊಡಬಹುದಾದ, ಒಂದೇ ಒಂದು ಉತ್ತರವೆಂದರೆ, ಸಸ್ಯಾಹಾರಿ ಕುರುಬನು ಮಾಂಸಾಹಾರಿ ಕುರುಬನಿಗಿಂತ ಮೇಲುಗೈಯಾಗದಿದ್ದರೂ ಕನಿಷ್ಠ ಪಕ್ಷ ಅವನಿಗೆ ಸಮಾನ ಬಲಶಾಲಿ. ಹೀಗೆ ಒಂದು ವರ್ಗದ ಸಸ್ಯಾಹಾರಿಗೂ ಅದೇ ವರ್ಗದ ಮಾಂಸಾಹಾರಿಗೂ ಹೋಲಿಕೆಯಿದೆ. ಆ ಹೋಲಿಕೆ ಒಂದು ಬಲಕ್ಕೂ ಇನ್ನೊಂದು ಬಲಕ್ಕೂ ಇರುವ ಹೋಲಿಕೆ; ಬಲಕ್ಕೂ, ಬುದ್ಧಿಯೂ ಸೇರದ ಬಲಕ್ಕೂ ಅಲ್ಲ. ಏಕೆಂದರೆ ಸದ್ಯಕ್ಕೆ ನನ್ನ ಈ ಪ್ರಯತ್ನ ಭಾರತದ ಸಸ್ಯಾಹಾರಿಗಳು ದೈಹಿಕವಾಗಿ ದುರ್ಬಲರಾಗಿರುವುದಕ್ಕೆ ಕಾರಣ ಅವರ ಸಸ್ಯಾಹಾರ ಎಂಬ ವಾದ ತಪ್ಪು ಎಂದು ತೋರಿಸುವುದು, ಅಷ್ಟೆ.

ಯಾವುದೇ ಆಹಾರವನ್ನಾದರೂ ತಿನ್ನಿ. ಎಲ್ಲೋ ಕೇವಲ ವಿರಳವಾದ ಸಂದರ್ಭಗಳಲ್ಲಿ ಹೊರತು, ದೇಹಬಲವೂ ಮನೋಬಲವೂ ಕೂಡಿ ಮಾಡುವುದು ಅಸಾಧ್ಯವೆಂದೇ ತೋರುತ್ತದೆ. ಮನೋಬಲದಲ್ಲಾದ ಲಾಭವು ದೇಹ ಬಲದಲ್ಲಿ ನಷ್ಟವೇ ಆಗಬೇಕು ; ಇದು ಪರಿಹಾರ ನಿಯಮ (Law of compensation). ಒಬ್ಬ ಸ್ಯಾಂಸನ್ (Somson) ಒಬ್ಬ ಗ್ಲಾಡ್‌ಸ್ಟನ್ ಆಗಲಾರ. ಸಮಾಜದ ಸದ್ಯದ ಸ್ಥಿತಿಯಲ್ಲಿ ತರಕಾರಿಗಳ ಸ್ಥಾನದಲ್ಲಿ ಬೇರೆ ಏನೋ ಬೇಕು ಎಂಬ ವಾದವನ್ನು ಒಪ್ಪಿಕೊಂಡರೂ ಹಾಗೆ ಬೇಕಾದದ್ದು ಮಾಂಸವೇ ಎಂದು ನಿರ್ಣಾಯಕವಾಗಿ ರುಜುವಾತು ಮಾಡಿದಂತಾಯಿತೆ?

ಭಾರತದ ಯೋಧಕುಲ ಎಂದು ಕರೆಯಲಾಗಿರುವ ಕ್ಷತ್ರಿಯರನ್ನೇ ತೆಗೆದುಕೊಳ್ಳಿ. ಅವರೇನೋ ಮಾಂಸಾಹಾರಿಗಳೇ. ಆದರೆ ಅವರಲ್ಲಿ ಕತ್ತಿಯನ್ನು ಪ್ರಯೋಗಿಸಿರುವವರು ಎಷ್ಟು ವಿರಳ! ಅವರು ಅತಿ ದುರ್ಬಲರಾದ ಬುಡಕಟ್ಟೆಂದೇ ನಾನು ಖಂಡಿತ ಹೇಳುತ್ತಿಲ್ಲ.

ಬಹಳ ಪ್ರಾಚೀನ ಕಾಲಕ್ಕೆ ಹೋಗುವುದು ಬೇಡ. ಪೃಥ್ವೀರಾಜ, ಭೀಮ ಮತ್ತು ಅದೇ ನಮೂನೆಯ ಇತರರು ನಮ್ಮ ನೆನಪಿನಲ್ಲಿ ಉಳಿದಿರುವ ವರೆಗೂ ಕ್ಷತ್ರಿಯರ ಕುಲವೇ ದುರ್ಬಲ ಕುಲ ಎಂದು ಭಾವಿಸುವವನು ಮೂರ್ಖನೇ ಸರಿ. ಆದರೆ ಅವರು

ಈಗ ಅಧೋಗತಿಗಿಳಿದಿದ್ದಾರೆ ಎಂಬುದು ದುಃಖದ ಸಂಗತಿ. ನಿಜವಾದ ಯೋಧರೆಂದರೆ, ಇನ್ನೂ ಕೆಲವು ವರ್ಗಗಳಲ್ಲದೆ ಭಯ್ಯಾಸ್ ಎಂಬ ಹೆಸರಿನ ವಾಯುವ್ಯ ಪ್ರಾಂತದ ಜನ. ಅವರ ಆಹಾರ ಗೋಧಿ, ಬೇಳೆ, ಸೊಪ್ಪು. ಅವರೇ ಶಾಂತಿಯ ರಕ್ಷಕರು. ದೇಶೀಯ ಸೈನ್ಯ ಗಳಲ್ಲಿ ಹೆಚ್ಚಾಗಿ ಸೇರಿಸಿಕೊಂಡಿರುವುದು ಅವರನ್ನೇ.

ಸಸ್ಯಾಹಾರವು ಅಪಾಯಕರವಲ್ಲವೇ ಅಲ್ಲ; ಅಷ್ಟೇ ಅಲ್ಲದೆ, ದೇಹಾದಾರ್ಢ್ಯಕ್ಕೆ ಒಳ್ಳೆಯದು–ಎಂಬುದನ್ನೂ, ಹಿಂದುವಿನ ದೌರ್ಬಲ್ಯಕ್ಕೆ ಕಾರಣ ಸಸ್ಯಾಹಾರ ಎನ್ನುವ ವಾದಕ್ಕೆ ತಪ್ಪು ತಿಳಿವಳಿಕೆಯೇ ತಳಹದಿ ಎಂಬುದನ್ನೂ, ಮೇಲೆ ಹೇಳಿದ ಸತ್ಯಾಂಶಗಳಿಂದ ಸುಲಭವಾಗಿ ಕಾಣಬಹುದು.

ಫೆಬ್ರುವರಿ ೨೮, ೧೯೪೧

*

ಹಿಂದೂ ಸಸ್ಯಾಹಾರಿಗಳ ದೌರ್ಬಲ್ಯಕ್ಕೆ ಕಾರಣ ಅವರ ಆಹಾರ ಅಲ್ಲ, ಅದಕ್ಕೆ ಕಾರಣಗಳು ಬೇರೆ ಎಂಬುದನ್ನೂ ಸಸ್ಯಾಹಾರಿಗಳಾದ ಕುರುಬರು ಮಾಂಸಾಹಾರಿಗಳಷ್ಟೇ ಬಲಶಾಲಿಗಳು ಎಂಬುದನ್ನೂ ಹಿಂದಿನ ಲೇಖನದಲ್ಲಿ ನೋಡಿದೆವು. ಈ ಕುರುಬನು ಸಸ್ಯಾಹಾರಿಗಳ ಒಂದು ಸೊಗಸಾದ ನಿದರ್ಶನ. ಆದ್ದರಿಂದ ಅವನ ಜೀವನ ವಿಧಾನ ವನ್ನು ಪರೀಕ್ಷಿಸುವುದರಲ್ಲಿ ಲಾಭವುಂಟು. ಆದರೆ ಮುಂದುವರಿಯುವ ಮುನ್ನ, ನಾವಿಲ್ಲಿ ಹೇಳುವುದು ಎಲ್ಲ ಭಾರತೀಯ ಕುರುಬರಿಗೂ ಅನ್ವಯವಾಗುವುದಿಲ್ಲ ಎಂಬುದನ್ನು ಓದುಗರಿಗೆ ಹೇಳಲೇಬೇಕು. ಭಾರತದ ಯಾವುದೋ ಒಂದು ಭಾಗದ ಕುರುಬರಿಗೆ ಇದು ಅನ್ವಯವಾಗುತ್ತದೆ. ಸ್ಕಾಟ್ಲೆಂಡಿನ ಜನರ ಪದ್ಧತಿಗಳು ಇಂಗ್ಲೆಂಡಿನ ಜನರ ಪದ್ಧತಿ ಗಳಿಗಿಂತ ಬೇರೆಯಾಗಿರುವಂತೆಯೇ ಭಾರತದ ಒಂದು ಭಾಗದ ಜನರ ಜೀವನ ವಿಧಾನ ಬೇರೆ ಭಾಗದ ಜನರದಕ್ಕಿಂತ ಭಿನ್ನವಾಗಿರುತ್ತದೆ.

ಭಾರತದ ಕುರುಬನು ಸಾಮಾನ್ಯವಾಗಿ ಬೆಳಗಿನ ಜಾವ ಐದು ಗಂಟೆಗೆ ಏಳುತ್ತಾನೆ. ಧರ್ಮಶ್ರದ್ಧೆಯುಳ್ಳ ಕುರುಬನಾಗಿದ್ದರೆ ಅವನ ಮೊದಲ ಕೆಲಸ ದೇವರ ಪ್ರಾರ್ಥನೆ. ಅನಂತರ ಶೌಚ. ಎಂದರೆ, ಬಾಯಿ ಮುಖಗಳನ್ನು ತೊಳೆದುಕೊಳ್ಳುವುದು. ಭಾರತೀ ಯನ್ನು ಹಲ್ಲು ತಿಕ್ಕಲು ಉಪಯೋಗಿಸುವ ಬ್ರಷ್ಷು ಎಂಥದು ಎಂದು ಹೇಳಲು (ಒಂದು ಕ್ಷಣ ಕಾಲ) ಮುಖ್ಯ ವಿಷಯವನ್ನು ಬಿಟ್ಟು ಹೋಗಲು ಅಪ್ಪಣೆ ಬೇಡುತ್ತೇನೆ. ಬಬೂಲ್ ಎಂಬ ಮುಳ್ಳಿನ ಮರದ ಒಂದು ರೆಂಬೆ ಈ ಬ್ರಷ್ ಎಂಬುದು; ಇನ್ನೇನೂ ಅಲ್ಲ. ಆ ರೆಂಬೆಯನ್ನು ಸುಮಾರು ಒಂದು ಅಡಿ ಉದ್ದದ ಚೂರುಗಳಾಗಿ ಕತ್ತರಿಸುತ್ತಾರೆ. ಮುಳ್ಳು ಗಳನ್ನೆಲ್ಲಾ ತೆಗೆದು ಹಾಕುತ್ತಾರೆಂಬುದು ಗೊತ್ತೇ ಇದೆ. ಹಲ್ಲನ್ನು ಉಜ್ಜಲು ಅದು ಮೃದುವಾಗುವ ವರೆಗೂ ಕಡ್ಡಿಯ ಒಂದು ತುದಿಯನ್ನು ಹಲ್ಲಿನ ನಡುವೆ ಇಟ್ಟು ಅಗಿ ಯುತ್ತಾರೆ. ಹೀಗೆ ಪ್ರತಿ ದಿನವೂ ಅವನು ಹೊಸದಾದ, ಮನೆಯಲ್ಲೇ ತಯಾರಿಸಿದ ಬ್ರಷ್ಷನ್ನು ಮಾಡಿಕೊಳ್ಳುತ್ತಾನೆ. ಹಲ್ಲುಗಳನ್ನು ಚೆನ್ನಾಗಿ ತಿಕ್ಕಿ, ಮುತ್ತಿನಂತೆ ಬಿಳುಪು ಗೊಳಿಸಿದ ಮೇಲೆ ಕಡ್ಡಿಯನ್ನು ಸೀಳುತ್ತಾನೆ. ಅದರಲ್ಲಿ ಒಂದು ಭಾಗವನ್ನು ಬಗ್ಗಿಸಿ

ನಾಲಗೆ ತಿಕ್ಕುತ್ತಾನೆ. ಸಾಮಾನ್ಯ ಭಾರತೀಯನ ಹಲ್ಲುಗಳು ಗಟ್ಟಿಯಾಗಿಯೂ, ಸುಂದರ ವಾಗಿಯೂ ಇರುವುದಕ್ಕೆ, ಉಜ್ಜುವ ಈ ವಿಧಾನವೇ ಬಹುಶಃ ಕಾರಣ. ಅವನು ಹಲ್ಲು ಪುಡಿಯನ್ನು ಉಪಯೋಗಿಸುವುದಿಲ್ಲ ಎಂಬುದನ್ನು ಹೇಳಬೇಕಾದ ಅಗತ್ಯ ಇಲ್ಲವಷ್ಟೆ. ಕಚ್ಚಿ ಜಜ್ಜಲು ಸಾಕಾದಷ್ಟು ಶಕ್ತಿಯಿಲ್ಲದ ಮುದುಕರು, ಸಣ್ಣ ಸುತ್ತಿಗೆ ಉಪಯೋಗಿಸು ತ್ತಾರೆ. ಇಡೀ ಪ್ರಕ್ರಿಯೆಗೆ ಇಪ್ಪತ್ತು ನಿಮಿಷಕ್ಕಿಂತ ಹೆಚ್ಚು ಸಮಯ ಬೇಕಾಗಿಲ್ಲ.

ಈಗ ಕುರುಬನ ವಿಷಯಕ್ಕೆ ಹಿಂದಿರುಗೋಣ. ಬಳಿಕ ಅವನು ಬಾಜ್ರಾದಿಂದ ಮಾಡಿದ ದಪ್ಪವಾದ ರೊಟ್ಟಿಯ ಉಪಾಹಾರ ತೆಗೆದುಕೊಳ್ಳುತ್ತಾನೆ. ಬಾಜ್ರಾ ಎಂಬುದು ಗೋಧಿಗೆ ಬದಲು ಅಥವಾ ಗೋಧಿಯ ಜೊತೆಗೆ ಭಾರತದಲ್ಲಿ ಹೆಚ್ಚಾಗಿ ಬಳಸುವ ಧಾನ್ಯ. ರೊಟ್ಟಿಯ ಜೊತೆಗೆ ಅವನು ತುಪ್ಪ, ಕಾಕಂಬಿಗಳನ್ನು ಬಳಸುತ್ತಾನೆ. ತನ್ನ ವಶಕ್ಕೆ ಒಪ್ಪಿಸಿರುವ ದನಕರುಗಳನ್ನು ಮೇಯಿಸಲು ಅವನು ಬೆಳಗಿನ ಎಂಟೊಂಬತ್ತು ಗಂಟೆಯ ಸುಮಾರಿಗೆ ಹೊರಡುತ್ತಾನೆ. ಹುಲ್ಲು ಮೇಯಿಸುವ ಸ್ಥಳ ಸಾಮಾನ್ಯವಾಗಿ ಅವನ ಊರಿನಿಂದ ಎರಡು ಮೂರು ಮೈಲಿ ದೂರದಲ್ಲಿರುತ್ತದೆ. ಸೊಂಪಾಗಿ ಬೆಳೆದ ಸೊಪ್ಪಿನ ಹಸುರು ಜಮಖಾನೆ ಹರಡಿರುವ ಬೆಟ್ಟಗಾಡಿನ ಪ್ರದೇಶ ಅದು. ಹೀಗೆ ಪ್ರಕೃತಿ ಸೌಂದರ್ಯದ ನಡುವೆ ಅತ್ಯಂತ ಉಲ್ಲಾಸಕರವಾದ ಗಾಳಿಯನ್ನು ಸೇವಿಸುವ ಅನುಪಮವಾದ ಅನು ಕೂಲ ಅವನಿಗುಂಟು. ದನಕರುಗಳು ಅಡ್ಡಾಡುತ್ತಿರುವಾಗ ಹಾಡುತ್ತಲೋ, ಹೆಂಡತಿ ಸೋದರ ಅಥವಾ ಬೇರೆ ಯಾರೋ ಬಂಧುವಿನೊಡನೆ ಮಾತಾಡುತ್ತಲೋ ಅವನು ಕಾಲಕಳೆಯುತ್ತಾನೆ. ಹನ್ನೆರಡು ಗಂಟೆ ಸುಮಾರಿಗೆ ಅವನು ಮಧ್ಯಾಹ್ನದ ಊಟ ಮಾಡು ತ್ತಾನೆ. ಊಟವನ್ನು ಅವನು ಜೊತೆಯಲ್ಲೇ ಒಯ್ದಿರುತ್ತಾನೆ. ಊಟ ಎಂದರೆ, ಸರ್ವದಾ ಇದ್ದೇ ಇರುವ ರೊಟ್ಟಿಗಳು, ತುಪ್ಪ, ಒಂದು ತರಕಾರಿ ಅಥವಾ ಬೇಳೆಯ ತೊವ್ವೆ, ಅದರ ಬದಲು ಅಥವಾ ಜೊತೆಗೆ ಸ್ವಲ್ಪ ಉಪ್ಪಿನಕಾಯಿ, ಹಸುವಿನಿಂದ ನೇರವಾಗಿ ಕರೆದ ಹಾಲು. ಮಧ್ಯಾಹ್ನ ಎರಡು ಅಥವಾ ಮೂರುಗಂಟೆಗೆ ಯಾವುದಾದರೂ ಮರದ ನೆರಳಿನಲ್ಲಿ ಅರ್ಧಗಂಟೆ ಮಲಗುವುದು ಅಪರೂಪವೇನಲ್ಲ. ಉರಿಯುವ ಸೂರ್ಯನ ಬೇಗೆಯಿಂದ ಈ ಸಣ್ಣ ನಿದ್ದೆ ಅವನಿಗೆ ಪರಿಹಾರ ಕೊಡುತ್ತದೆ. ಆರಕ್ಕೆ ಮನೆಗೆ ಹಿಂದಿ ರುಗುತ್ತಾನೆ. ಏಳಕ್ಕೆ ಊಟ. ಅದರಲ್ಲಿ ಕೆಲವು ಬಿಸಿ ರೊಟ್ಟಿಗಳು, ಬೇಳೆಯ ತೊವ್ವೆ ಅಥವಾ ತರಕಾರಿ. ಕೊನೆಗೆ ಹಾಲನ್ನ ಅಥವಾ ಅನ್ನ ಮತ್ತು ಹಾಲೊಡಕು. ಆಮೇಲೆ ಸ್ವಲ್ಪ ಮನೆ ಕೆಲಸ. ಕೆಲಸ ಎಂದರೆ ಬಹುಪಾಲು ಮನೆಮಂದಿಯೊಂದಿಗೆ ಹರಟೆ. ಹತ್ತು ಗಂಟೆ ವೇಳೆಗೆ ನಿದ್ದೆ ಮಾಡಿಬಿಡುತ್ತಾನೆ. ಅವನು ಮಲಗುವುದು ಬಯಲಲ್ಲಿ ಅಥವಾ ಕೆಲ ವೊಮ್ಮೆ ಜನ ತುಂಬಿ ತುಳುಕುತ್ತಿರುವ ಗುಡಿಸಿಲಿನಲ್ಲಿ. ಚಳಿಗಾಲ ಅಥವಾ ಮಳೆಗಾಲದಲ್ಲಿ ಅವನು ಗುಡಿಸಿಲಿನ ಆಸರೆ ಪಡೆಯುತ್ತಾನೆ. ನೋಡುವುದಕ್ಕೆ ಶೋಚನೀಯವಾಗಿದ್ದು, ಕಿಟಕಿಗಳೇ ಇಲ್ಲದಿದ್ದರೂ ಅವುಗಳಲ್ಲಿ ಗಾಳಿಯೇ ಆಡದೆ ಹೋಗುವುದಿಲ್ಲ ಎಂಬುದು ಹೇಳ ಬೇಕಾದ ಅಂಶ. ಒರಟಾಗಿ ಮಾಡಿರುವ ಗುಡಿಸಿಲಿನ ಬಾಗಿಲುಗಳು ಇರುವುದು ಬಿಸಿಲು ಅಥವಾ ಗಾಳಿಗಳ ಹೊಡೆತಕ್ಕೆ ಮರೆಗಾಗಿಯಲ್ಲ, ಕಳ್ಳರು ನುಗ್ಗದಿರಲಿ ಎಂದು. ಆದರೂ

ಈ ಗುಡಿಸಲುಗಳನ್ನು ಇನ್ನೂ ಉತ್ತಮಗೊಳಿಸಬೇಕಾದ ಅಗತ್ಯ ಇದೆ ಎಂಬುದನ್ನು ನಿರಾಕರಿಸುವಂತಿಲ್ಲ.

ಅನುಕೂಲಸ್ಥನಾದ ಕುರುಬನೊಬ್ಬನ ಬದುಕು ಇರುವುದು ಹೀಗೆ. ಅನೇಕ ಅಂಶಗಳಲ್ಲಿ ಅವನದೊಂದು ಆದರ್ಶ ಜೀವನ. ಅವನ ಅಭ್ಯಾಸಗಳೆಲ್ಲ ಅನಿವಾರ್ಯವಾಗಿಯೇ ಕ್ರಮಬದ್ಧವಾದುವು. ಬಹುಪಾಲು ಸಮಯವನ್ನು ಮನೆಯ ಹೊರಗೇ ಕಳೆಯುತ್ತಾನೆ; ಹೊರಗಿರುವಾಗ ಅತ್ಯಂತ ಶುದ್ಧವಾದ ಗಾಳಿಯನ್ನು ಸೇವಿಸುತ್ತಾನೆ; ಅಗತ್ಯವಾದಷ್ಟು ವ್ಯಾಯಾಮ ದೊರೆಯುತ್ತದೆ; ಒಳ್ಳೆಯ ಪುಷ್ಟಿಕರವಾದ ಆಹಾರವಿದೆ; ಅಲ್ಲದೆ, ಕೊನೆಯ ಅಂಶವಾದರೂ ಇದು ಕಡಮೆಯಾದದ್ದಲ್ಲ, ಹಲವೊಮ್ಮೆ ದುರ್ಬಲ ದೇಹಗಳಿಗೆ ಕಾರಣವಾಗಿರುವ ಅನೇಕ ಚಿಂತೆಗಳು ಅವನಿಗಿಲ್ಲ.

ಮಾರ್ಚಿ ೭, ೧೮೯೧.

ಭಾರತದ ಕುರುಬರು

ಭಾರತದ ಕುರುಬನ ಜೀವನ ವಿಧಾನದಲ್ಲಿ ಒಂದೇ ದೋಷವೆಂದರೆ ಸ್ನಾನಗಳ ವಿರಳತೆ. ಸೆಕೆ ಹೆಚ್ಚಾಗಿರುವ ಕಡೆ ಸ್ನಾನದಿಂದ ತುಂಬ ಪ್ರಯೋಜನವುಂಟು. ಬ್ರಾಹ್ಮಣನು ದಿನಕ್ಕೆರಡು ಸಲ, ವೈಶ್ಯನು ಒಂದು ಸಲ ಸ್ನಾನಮಾಡಿದರೆ ಕುರುಬನು ವಾರಕ್ಕೊಂದೇ ಸಲ ಸ್ನಾನ ಮಾಡುತ್ತಾನೆ. ಭಾರತೀಯನು ಸ್ನಾನ ಮಾಡುವುದು ಹೇಗೆ ಎಂಬುದನ್ನು ವಿವರಿಸಲು ಮುಖ್ಯ ವಿಷಯವನ್ನು ಒಂದು ಕ್ಷಣ ಬಿಟ್ಟು ಹೋಗುತ್ತೇನೆ. ಸಾಮಾನ್ಯವಾಗಿ ಅವನು ಸ್ನಾನ ಮಾಡುವುದು ಊರ ಬಳಿಯ ನದಿಯಲ್ಲಿ. ನದಿಗೆ ಹೋಗಲು ಅವನಿಗೆ ಬೇಸರವಾದರೆ, ಅಥವಾ ಮುಳುಗಿ ಹೋಗುತ್ತೇನೆಂದು ಅವನು ಅಂಜಿದರೆ, ಅಥವಾ ಊರ ಹತ್ತಿರ ನದಿ ಇಲ್ಲದಿದ್ದರೆ, ಮನೆಯಲ್ಲೇ ಸ್ನಾನಮಾಡುತ್ತಾನೆ. ಮನೆಯಲ್ಲಿ ಮುಳುಗಲು ಸಾಧ್ಯವಾಗುವಂಥ ಸ್ನಾನದ ತೊಟ್ಟಿಯಿಲ್ಲ. ಹತ್ತಿರದ ದೊಡ್ಡ ಪಾತ್ರೆಯಲ್ಲಿನ ನೀರನ್ನು ಒಂದು ಸಣ್ಣ ಚೊಂಬಿನಲ್ಲಿ ತೆಗೆದುಕೊಂಡು ಮೈಮೇಲೆ ಸುರಿದುಕೊಳ್ಳುತ್ತಾನೆ. ನಿಂತ ನೀರಿನಲ್ಲಿ ಮುಳುಗಿದ ಕ್ಷಣವೇ ಅದು ಅಶುದ್ಧವಾಗುತ್ತದೆ. ಆಮೇಲೆ ಅದು ಬಳಸಲು ಅನರ್ಹ ಎಂದವನ ನಂಬಿಕೆ. ಆ ಕಾರಣಕ್ಕೇ ಅವನು ಒಂದು ಬೇಸಿನ್ನಿನಲ್ಲೂ ಕೈ ತೊಳೆಯುವುದಿಲ್ಲ, ಬದಲಿಗೆ ಕೈಗೇ ನೀರನ್ನು ಹಾಕಿಸಿಕೊಳ್ಳುತ್ತಾನೆ ಅಥವಾ ಮುಂಗೈಗಳ ನಡುವೆ ತಂಬಿಗೆಯನ್ನಿಟ್ಟುಕೊಂಡು ತಾನೇ ಕೈಮೇಲೆ ನೀರು ಸುರಿದುಕೊಳ್ಳುತ್ತಾನೆ.

ಈಗ ಸ್ನಾನಗಳ ವಿರಳತೆಯ ವಿಷಯಕ್ಕೆ ಹಿಂದಿರುಗೋಣ. ಅದು ಅವನ ಆರೋಗ್ಯದ ಮೇಲೆ ಅಷ್ಟೇನೂ ದುಷ್ಪರಿಣಾಮ ಮಾಡುವಂತೆ ತೋರುವುದಿಲ್ಲ. ಎಂದಾದರೂ ಒಂದೇ ಒಂದು ದಿನ ಸ್ನಾನ ಮಾಡದೇ ಹೋದರೂ ಬ್ರಾಹ್ಮಣನಿಗೆ ಬಹಳ ಮುಜಗರವಾಗುತ್ತದೆ. ಇನ್ನೂ ಹೆಚ್ಚು ಕಾಲ ಸ್ನಾನ ಮಾಡದೆ ಹೋದರೆ ಅವನು ಬಹುಬೇಗ ಖಾಯಿಲೆ ಬೀಳುತ್ತಾನೆ.

ಅಭ್ಯಾಸವೊಂದೇ ಕಾರಣವಾದ ಹಲವಾರು ವಿಷಯುಗಳಲ್ಲಿ ಇದೂ ಒಂದು, ಇದಕ್ಕೆ ಬೇರೆ ವಿವರಣೆ ಸಾಧ್ಯವಿಲ್ಲ. ಹೀಗೆ ಝಾಡಮಾಲಿಯೊಬ್ಬನು ತನ್ನ ಕಸಬು ಮಾಡುತ್ತಲೇ ಆರೋಗ್ಯವಾಗಿಯೂ ಇರುತ್ತಾನೆ. ಬೇರೆ ಯಾರಾದರೂ ಅದನ್ನೇ ಮಾಡಲು ಹೋದರೆ, ಸಾವನ್ನೇ ಎದುರಿಸಬೇಕಾಗುತ್ತದೆ. ಈಸ್ಟ್‌ಎಂಡಿನ ಕಾರ್ಮಿಕನನ್ನು ಅನುಸರಿಸಲು ಹೋದರೆ ಸೂಕ್ಷ್ಮ ಪ್ರಕೃತಿಯವನಾದ ಒಬ್ಬ ಲಾರ್ಡ್‌ನ ಮನೆಯ ಬಾಗಿಲನ್ನು ಮೃತ್ಯುವು ಬೇಗ ತಟ್ಟುತ್ತಿರುತ್ತದೆ.

ಈ ವಿಷಯುವನ್ನು ಸ್ಪಷ್ಟಪಡಿಸುವ ಒಂದು ದೃಷ್ಟಾಂತ ಕಥೆ ಅಥವಾ ಪ್ರಸಂಗವನ್ನು ಹೇಳಲೇಬೇಕು. ಒಬ್ಬ ರಾಜನು ರೂಪದಲ್ಲಿ ರತಿಯಂತಿದ್ದ ಒಬ್ಬ ಸ್ತ್ರೀಯಲ್ಲಿ ಅನುರಾಗ ತಳೆದ. ಆಕೆ ಹಲ್ಲಿನ ಬ್ರಷ್ ಮಾರುವವಳು. ಮುಂದೇನಾಯಿತೆಂದು ನಾವು ಊಹಿಸಿಕೊಳ್ಳಬಹುದು. ರಾಜನ ಅರಮನೆಗೆ ಅವಳನ್ನು ಕರೆದು ತಂದು ಬಿಡಬೇಕೆಂದು ಅಪ್ಪಣೆಯಾಯಿತು. ನಿಜವಾಗಿ ಅವಳನ್ನು ಭೋಗ ಸಾಮಗ್ರಿಗಳ ಮಡಿಲಲ್ಲೇ ಇಡಲಾಯಿತು. ಅತ್ಯುತ್ತಮ ಆಹಾರ, ಅತ್ಯುತ್ತಮ ವಸ್ತ್ರಗಳು, ಒಂದೇ ಮಾತಿನಲ್ಲಿ ಹೇಳಿದರೆ, ಅತ್ಯುತ್ತಮವಾದ ಸಮಸ್ತವೂ ಅವಳಿಗೆ ದೊರಕಿತು. ಆದರೆ ವಿಚಿತ್ರ! ಭೋಗವಸ್ತುಗಳು ಹೆಚ್ಚಿದಂತೆಲ್ಲ, ಅಷ್ಟಷ್ಟೂ ಅವಳ ಆರೋಗ್ಯ ಕೆಡತೊಡಗಿತು. ಹತ್ತಿಪ್ಪತ್ತು ಜನ ವೈದ್ಯರು ಚಿಕಿತ್ಸೆ ನೀಡಿದರು. ಆದರೆ ಬಿಡದೆ ಪ್ರಯೋಗಿಸಿದ ಯಾವ ಔಷಧಿಯೂ ಕೆಲಸಕ್ಕೆ ಬರಲಿಲ್ಲ. ಇಷ್ಟರಲ್ಲಿ ಜಾಣನಾದ ವೈದ್ಯನೊಬ್ಬ ಈ ಕಾಯಿಲೆಗೆಲ್ಲ ನಿಜವಾದ ಕಾರಣವನ್ನು ಕಂಡುಹಿಡಿದ. ಅವಳಿಗೆ ದೆವ್ವಗಳು ಹಿಡಿದಿದೆ ಎಂದ. ದೆವ್ವಗಳನ್ನು ತೃಪ್ತಿಪಡಿಸಲು ಆಕೆಯ ಹಲವು ಕೊಠಡಿಗಳಲ್ಲಿ ಒಂದೊಂದರಲ್ಲೂ ತಂಗಳು ರೊಟ್ಟಿ ಮತ್ತು ಹಣ್ಣು ಇಡಿಸಿದ. ಎಷ್ಟು ಕೊಠಡಿಗಳಿವೆಯೋ ಅಷ್ಟು ದಿನಗಳಲ್ಲಿ ರೊಟ್ಟಿ ಮತ್ತು ಹಣ್ಣುಗಳು ಮಾಯವಾಗಲೇ ಬೇಕು, ಅದರೊಂದಿಗೇ ಅವಳ ರೋಗವೂ ಮಾಯವಾಗುತ್ತದೆ ಎಂದ. ಆದದ್ದೂ ಹಾಗೆಯೆ. ಆ ಬಡಪಾಯಿ ರಾಣಿ ಅವುಗಳನ್ನೆಲ್ಲ ತಿಂದು ಹಾಕಿದ್ದಳೆಂಬುದು ತಿಳಿದೇ ಇದೆ.

ರೂಢಿ ನಮ್ಮನ್ನು ಹೇಗೆ ಹಿಡಿದಿಟ್ಟಿರುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಆದ್ದರಿಂದಲೇ ಸ್ನಾನದ ವಿರಳತೆಯಿಂದ ಕುರುಬನಿಗೆ ವಿಶೇಷ ಹಾನಿಯೇನೂ ಆಗುವುದಿಲ್ಲ ಎಂದು ನನಗನಿಸುತ್ತದೆ.

ಕಳೆದ ಲೇಖನದಲ್ಲಿ ಈ ವಿಧವಾದ ಜೀವನದ ಪರಿಣಾಮವನ್ನು ಭಾಗಶಃ ಗುರುತಿಸಿದ್ದೆವು; ಸಸ್ಯಾಹಾರಿಯಾಗಿದ್ದ ಕುರುಬ ದೈಹಿಕವಾಗಿ ಗಟ್ಟಿಮುಟ್ಟಾಗಿದ್ದಾನೆ ಎಂಬುದನ್ನು.ಅವನ ಆಯುಸ್ಸೂ ಹೆಚ್ಚು. ೧೮೮೮ರಲ್ಲಿ ನೂರು ವರ್ಷ ವಯಸ್ಸನ್ನು ಮೀರಿದ್ದ ಒಬ್ಬ ಕುರುಬತಿಯನ್ನು ನಾನು ಬಲ್ಲೆ. ಕಳೆದ ಸಲ ನಾನವಳನ್ನು ನೋಡಿದಾಗ ಅವಳ ದೃಷ್ಟಿಪಾಟವ ಸೊಗಸಾಗಿತ್ತು. ಸ್ಮೃತಿ ಶಕ್ತಿಯೂ ಚೆನ್ನಾಗಿತ್ತು. ಬಾಲ್ಯದಲ್ಲಿ ತಾನು ಕಂಡಿದ್ದ ವಿಷಯುಗಳನ್ನು ನೆನಪಿಗೆ ತಂದುಕೊಳ್ಳುವ ಶಕ್ತಿ ಇತ್ತು ಅವಳಿಗೆ. ಕೋಲೂರಿಕೊಂಡು ನಡೆಯುವ ಸಾಮರ್ಥ್ಯವೂ ಇತ್ತು. ಈಗಲೂ ಬದುಕಿದ್ದಾಳೆ ಎಂದೇ ನಂಬಿದ್ದೇನೆ.

ಇದಲ್ಲದೆ, ಕುರುಬರ ಆಕಾರ ಸಮಪ್ರಮಾಣದ್ದಾಗಿರುತ್ತದೆ. ಅವರಲ್ಲಿ ಯಾವುದೇ ಅಂಗವೈಕಲ್ಯವಿರುವುದು ತುಂಬ ಅಪರೂಪ. ಹುಲಿಯಂತೆ ಭಯಂಕರವಾಗದೆ ಆತ ಗಟ್ಟಿಮುಟ್ಟಾಗಿಯೂ ಧೀರನಾಗಿಯೂ ಇರುತ್ತಾನೆ. ಮತ್ತೆ ಅವನು ಕುರಿಮರಿಯಷ್ಟು ಸಾಧುಪ್ರಾಣಿ. ನೋಡಿದೊಡನೆಯೇ ಗಾಬರಿ ಹುಟ್ಟಿಸದಿದ್ದರೂ ಆತನ ಉನ್ನತಾಕಾರ ಗೌರವ ಜನಕವಾಗಿರುತ್ತದೆ. ಒಟ್ಟಿನಲ್ಲಿ ಭಾರತೀಯ ಕುರುಬ ಸಸ್ಯಾಹಾರಿಯ ಬಹು ಸೊಗಸಾದ ನಿದರ್ಶನ. ದೇಹಬಲದ ಮಟ್ಟಿಗಂತು ಎಂತಹ ಮಾಂಸಹಾರಿಗಾವರೂ ಸಮಾನ ಎಂದು ಧಾರಾಳವಾಗಿ ಹೇಳಬಹುದು.

ಮಾರ್ಚಿ ೧೪, ೧೮೯೧.

ಕೆಲವು ಭಾರತೀಯ ಹಬ್ಬಗಳು

೧

ಈಗ ಈಸ್ಟರ್ ಹಬ್ಬದ ಸಮಯ. ಇದೇ ಸಮಯದಲ್ಲಿ ಬರುವ ನಮ್ಮ ಕೆಲವು ಹಬ್ಬಗಳ ವಿಷಯ ಬರೆಯಬೇಕಾಗಿತ್ತು. ಆದರೆ ಈ ಹಬ್ಬಗಳೊಡನೆ ಕೆಲವು ನೋವಿನ ನೆನಪುಗಳು ಸೇರಿಕೊಂಡಿವೆ. ಅಲ್ಲದೆ ಅವು ಹಿಂದುಗಳ ದೊಡ್ಡ ಹಬ್ಬಗಳೂ ಅಲ್ಲ. ಆದ್ದರಿಂದ ಪ್ರಾಮುಖ್ಯ ವೈಭವಗಳಲ್ಲಿ ತುಂಬ ಮಹತ್ವದ್ದಾಗಿರುವ ದಿವಾಳಿ ಹಬ್ಬದ ವಿಷಯ ಹೇಳುತ್ತೇನೆ.

ದಿವಾಳಿಯನ್ನು ಹಿಂದುಗಳ ಕ್ರಿಸ್‌ಮಸ್ ಎಂದು ಕರೆಯಬಹುದು. ಹಿಂದುಗಳ ವರ್ಷದ ಕೊನೆಯಲ್ಲಿ, ಅಂದರೆ ನವೆಂಬರ್ ತಿಂಗಳಲ್ಲಿ ಬರುತ್ತದೆ. ಅದು ಸಾಮಾಜಿಕ ಹಬ್ಬವೂ ಹೌದು, ಧಾರ್ಮಿಕ ಹಬ್ಬವೂ ಹೌದು. ಹತ್ತಿರ ಹತ್ತಿರ ಒಂದು ತಿಂಗಳ ಕಾಲ ಇರುತ್ತದೆ. ಹಿಂದೂ ವರ್ಷದ ಹನ್ನೆರಡನೆಯ ತಿಂಗಳಾದ ಅಶ್ವಿನೀ ತಿಂಗಳ ಮೊದಲ ದಿನವು ಈ ದೊಡ್ಡ ಹಬ್ಬದ ಆಗಮನವನ್ನು ಘೋಷಿಸುತ್ತದೆ. ಪಟಾಕಿ ಚಟಾಕಿಗಳನ್ನು ಮೊದಲ ಬಾರಿಗೆ ಮಕ್ಕಳು ಹಾರಿಸುತ್ತಾರೆ. ಮೊದಲ ಒಂಬತ್ತು ದಿನಗಳನ್ನು ನವರಾತ್ರಿ-ಒಂಬತ್ತು ರಾತ್ರಿಗಳು– ಎಂದು ಕರೆಯುತ್ತಾರೆ. ಈ ದಿನಗಳ ಮುಖ್ಯ ವಿಶೇಷ ಗಾರ್ಬಿಗಳು. ಇಪ್ಪತ್ತು ಮೂವತ್ತು ಅಥವಾ ಇನ್ನೂ ಹೆಚ್ಚು ಜನ ದೊಡ್ಡ ವೃತ್ತಾಕಾರ ದಲ್ಲಿ ಸೇರುತ್ತಾರೆ. ನಡುವೆ ಸೊಗಸಾಗಿ ರಚಿಸಿದ ದೊಡ್ಡ ದೀಪಸ್ತಂಭ ಇರುತ್ತದೆ. ಸುತ್ತ ಬತ್ತಿ ಹಚ್ಚುತ್ತಾರೆ. ಮಧ್ಯ ತಂಬೂರಿ ಮೀಟಿಕೊಂಡು ಜನಪ್ರಿಯಗೀತೆಗಳನ್ನು ಹಾಡುತ್ತಾ ಒಬ್ಬ ವ್ಯಕ್ತಿ ಕೂರುತ್ತಾನೆ. ಕೈ ಚಪ್ಪಾಳೆಯ ತಾಳ ಹಾಕುತ್ತ ಸುತ್ತ ಕುಳಿತ ಜನ ಹಾಡುಗಳನ್ನು ಪುನರಾವರ್ತನೆ ಮಾಡುತ್ತಾರೆ. ಹಾಡುತ್ತಲೇ ಅವರು ಅರ್ಧ ಮೈ ಬಗ್ಗಿಸಿ ದೀಪದ ಕಂಬದ ಸುತ್ತ ಸುತ್ತುತ್ತಾರೆ. ಈ ಗಾರ್ಬಿಗಳನ್ನು ಕೇಳುವುದೇ ಒಂದು ಸೊಗಸು.

ಹೆಣ್ಣು ಮಕ್ಕಳು–ಅದರಲ್ಲೂ ಹೆಂಗಸರು–ಇದರಲ್ಲಿ ಭಾಗಿಗಳಾಗುವುದೇ ಇಲ್ಲ. ಗಂಡಸರನ್ನು ಸೇರಿಸಿಕೊಳ್ಳದೆ ತಮ್ಮದೇ ಗಾರ್ಬಿಗಳನ್ನು ಅವರು ನಡೆಸಿಕೊಳ್ಳಬಹುದು.

ಕೆಲವು ಕುಟುಂಬಗಳಲ್ಲಿ ಒಪ್ಪೊತ್ತು ಉಪವಾಸ ಮಾಡುತ್ತಾರೆ. ಕುಟುಂಬದ ಒಬ್ಬ ವ್ಯಕ್ತಿ ಉಪವಾಸ ಇದ್ದರೆ ಸಾಕು. ಉಪವಾಸ ಮಾಡುವವನಿಗೆ ಒಂದು ಹೊತ್ತು ಅದೂ ರಾತ್ರಿ ಮಾತ್ರ ಊಟ. ಅಲ್ಲದೆ ಅವನು ಯಾವುದೇ ಧಾನ್ಯ ಬೇಳೆಗಳಿಂದ ಮಾಡಿದ ಆಹಾರ ತೆಗೆದುಕೊಳ್ಳುವಂತಿಲ್ಲ. ಹಾಲು ಹಣ್ಣು, ಮತ್ತು ಆಲುವಿನಂತಹ ಗೆಡ್ಡೆಗೆಣಸು ಗಳನ್ನು ಮಟ್ಟಿಗೆ ತೆಗೆದುಕೊಳ್ಳಬೇಕು.

ತಿಂಗಳ ಹತ್ತನೆಯ ದಿನವನ್ನು ದಸರ ಎನ್ನುತ್ತಾರೆ. ಅಂದು ಮಿತ್ರರು ಸೇರಿ ಒಬ್ಬರಿಗೊಬ್ಬರು ಔತಣ ಮಾಡುತ್ತಾರೆ. ತಮ್ಮ ಹಿರಿಯರಿಗೆ ಉಪಚಾರ ಮಾಡಿದವರಿಗೆ ಮಿತ್ರರಿಗೆ ಸಿಹಿ ಹಂಚುವುದು ಪದ್ಧತಿ. ದಸರಾದ ದಿನ ಬಿಟ್ಟರೆ ಉಳಿದ ದಿನಗಳ ವಿನೋದ ಗಳೆಲ್ಲ ನಡೆಯುವುದು ರಾತ್ರಿಮಾತ್ರ. ಹಗಲಿನಲ್ಲಿ ದಿನಗೆಲಸ ನಡೆಯುತ್ತದೆ. ಹಬ್ಬದ ದೊಡ್ಡ ದಿನದ ನಿರೀಕ್ಷೆಯಲ್ಲಿ ಸ್ತ್ರೀಯರು ಸಿಹಿತಿಂಡಿ ತಯಾರಿ ಮುಂತಾದುವುಗಳನ್ನು ತಯಾರಿಸುವುದೇ ಮೊದಲಾದ ಸಿದ್ಧತೆಗಳಲ್ಲಿ ತೊಡಗಿರುತ್ತಾರೆ. ಭಾರತದಲ್ಲಿ ಅತ್ಯುನ್ನತ ವರ್ಗದ ಮಹಿಳೆಯರು ಕೂಡ ಅಡಿಗೆ ಮಾಡುವುದನ್ನು ಹೀನಾಯವೆಂದು ಭಾವಿಸು ವುದಿಲ್ಲ. ವಾಸ್ತವವಾಗಿ ಪ್ರತಿಯೊಬ್ಬ ಮಹಿಳೆಯೂ ಕರಗತ ಮಾಡಿಕೊಂಡಿರಲೇ ಬೇಕಾದ ಕಲೆ ಇದು.

ಹೀಗೆ ಸಂಜೆಯ ಹೊತ್ತು ಹಾಡುತ್ತಾ ನಲಿಯುತ್ತಾ ಅಶ್ವಿನೀ ಮಾಸದ ಕೃಷ್ಣ ಪಕ್ಷದ ಹದಿಮೂರನೆಯ ದಿನವನ್ನು ತಲುಪುತ್ತೇವೆ (ಭಾರತದಲ್ಲಿ ಪ್ರತಿಯೊಂದು ತಿಂಗಳನ್ನೂ ಎರಡು ಪಕ್ಷಗಳಾಗಿ ಮಾಡಿದ್ದಾರೆ–ಕೃಷ್ಣಪಕ್ಷ ಹಾಗೂ ಶುಕ್ಲಪಕ್ಷ. ಪೂರ್ಣಿಮೆ ಅಮಾವಾಸ್ಯೆಗಳು ಆರಂಭದ ದಿನಗಳು. ಹೀಗೆ ಪೂರ್ಣಿಮೆಯ ಮರುದಿನ ಕೃಷ್ಣಪಕ್ಷದ ಮೊದಲನೆಯ ದಿನ ಇತ್ಯಾದಿ) ಹದಿಮೂರನೆಯ ದಿನ ಮತ್ತು ಮುಂದಿನ ಮೂರು ದಿನ ಸಂತೋಷ ವಿನೋದಗಳಿಗೆ ಮೀಸಲು. ಹದಿಮೂರನೆಯದನ್ನು ಧನ್ ತೇರಶ್ ಎಂದು ಕರೆಯುತ್ತಾರೆ. ಐಶ್ವರ್ಯದ ಅಧಿದೇವತೆಯಾದ ಲಕ್ಷ್ಮಿಯ ಪೂಜೆಗೆ ಮೀಸಲಿಟ್ಟ ದಿನ ಅದು. ಶ್ರೀಮಂತರು ಬೇರೆ ಬೇರೆ ಬಗೆಯ ಒಡವೆಗಳು ಮುತ್ತುರತ್ನಗಳು ನಾಣ್ಯ ಗಳು ಮುಂತಾದುವನ್ನು ಸಂಗ್ರಹಿಸಿ ಎಚ್ಚರಿಕೆಯಿಂದ ಒಂದು ಪೆಟ್ಟಿಗೆಯಲ್ಲಿ ಹಾಕುತ್ತಾರೆ. ಪೂಜೆಯನ್ನು ಬಿಟ್ಟು ಬೇರಾವುದಕ್ಕೂ ಅವನ್ನು ಬಳಸುವುದಿಲ್ಲ. ಪ್ರತಿವರ್ಷವೂ ಅದಕ್ಕೆ ಸೇರಿಸುತ್ತಲೇ ಹೋಗುತ್ತಾರೆ. ಈ ಪೂಜೆಯ ಹೊರ ಲಕ್ಷಣವೇನೆಂದರೆ ನೀರು ಹಾಲು ಗಳ ಅಭಿಷೇಕ ಮಾಡಿ ಅದನ್ನು ಹೂವು ಕುಂಕುಮ ಮುಂತಾದುವುಗಳಿಂದ ಅಲಂಕರಿಸು ತ್ತಾರೆ. ಅಂತರಂಗದಲ್ಲಿ ಅದಕ್ಕಾಗಿ ಆಶೆ ಪಡದಿರುವ, ಎಂದರೆ ಹಣವನ್ನು ಪೂಜಿಸದಿರುವ ಜನ ಯಾರು ತಾನೆ ಇದ್ದಾರೆ?

ಹದಿನಾಲ್ಕನೆಯ ದಿನವನ್ನು ಕಾಳೀ ಚಾದಶ್ ಎನ್ನುತ್ತಾರೆ. ಅಂದು ಜನ ಬೆಳಗಿನ ಜಾವಕ್ಕೆ ಏಳುತ್ತಾರೆ. ಅತ್ಯಂತ ಸೋಮಾರಿಯಾದವನೂ ಕೂಡ ಚೆನ್ನಾಗಿ ಸ್ನಾನ ಮಾಡಲೇ ಬೇಕು. ಚಳಿಗಾಲವಾಗಿದ್ದರೂ ಮಕ್ಕಳೂ ಸಹ ಸ್ನಾನ ಮಾಡಿಯೇ ತೀರಬೇಕು ಎಂದು ತಾಯಿ ಬಲವಂತ ಮಾಡುತ್ತಾಳೆ. ಕಾಳಿ ಚೌದಶ್ ರಾತ್ರಿ ಪ್ರೇತಗಳು ಮೆರವಣಿಗೆ

ಯಲ್ಲಿ ಸ್ಮಶಾನಕ್ಕೆ ಭೇಟಿ ಕೊಡುತ್ತವೆಯಂತೆ. ಭೂತ ಪ್ರೇತಗಳಲ್ಲಿ ನಂಬಿಕೆಯಿದೆ ಎಂದು ಹೇಳಿಕೊಳ್ಳುವ ಜನ ತಮ್ಮ ಭೂತ ಮಿತ್ರರನ್ನು ಭೇಟಿ ಮಾಡಲು ಅಲ್ಲಿಗೆ ಹೋಗುತ್ತಾರೆ. ಎಲ್ಲಾದರೂ ಭೂತ ಕಣ್ಣಿಗೆ ಬಿದ್ದುಬಿಟ್ಟಿತೆಂದು ಅಂಜುಬುರುಕರಾದವರು ಮನೆಬಿಟ್ಟು ಆಚೆಗೆ ಕದಲುವುದೂ ಇಲ್ಲ.

ಮಾರ್ಚಿ ೨೮, ೧೮೯೧.

೨

ಇದೋ! ಇಂದು ಹದಿನೈದನೆಯ ದಿನದ ಉದಯ. ನಿಜವಾದ ದೀಪಾವಳಿ ಇದೇಯೆ. ಅತ್ಯಂತ ಭಾರೀ ಪ್ರಮಾಣದಲ್ಲಿ ಪಟಾಕಿಗಳನ್ನು ಹಾರಿಸುವುದು ದಿವಾಳಿಯಂದೇ. ಅಂದು ತನ್ನಲ್ಲಿರುವ ಹಣವನ್ನು ಇನ್ನೊಬ್ಬರಿಗೆ ಕೊಟ್ಟು ಬಿಡಲು ಯಾರಿಗೂ ಇಷ್ಟವಿರುವುದಿಲ್ಲ. ಸಾಲವನ್ನು ತೆಗೆದುಕೊಳ್ಳುವುದೂ ಇಲ್ಲ, ಕೊಡುವುದೂ ಇಲ್ಲ. ಕೊಳ್ಳುವಿಕೆಗಳೆಲ್ಲ ಹಿಂದಿನ ದಿನವೇ ಮುಗಿದು ಹೋಗಿರುತ್ತವೆ.

ನೀವೊಂದು ರಸ್ತೆಯ ಕೊನೆಯಲ್ಲಿ ನಿಂತಿದ್ದೀರಿ ಎಂದಿಟ್ಟುಕೊಳ್ಳಿ. ಹಾಲಿನಂತೆ ಬೆಳ್ಳಗಿರುವ ಬಟ್ಟೆ ಹಾಕಿಕೊಂಡು ಹೋಗುತ್ತಿರುವ ಕುರುಬನನ್ನು ಗಮನಿಸಿ. ಇವತ್ತೇ ಮೊದಲು ಅದನ್ನು ಅವನು ಹಾಕಿಕೊಂಡಿರುವುದು. ಉದ್ದನೆಯ ಗಡ್ಡವನ್ನು ಕೆನ್ನೆಯ ಮೇಲಕ್ಕೇರಿಸಿ ಪೇಟದೊಳಗೆ ಸಿಕ್ಕಿಸಿದ್ದಾನೆ. ಪದ್ಯಗಳ ತುಣುಕುಗಳನ್ನು ಹಾಡುತ್ತಾ ಹೋಗುತ್ತಿದ್ದಾನೆ. ಕೊಂಬುಗಳಿಗೆ ಕೆಂಪು ಹಸುರು ಬಣ್ಣ ಬಳಿದು; ಬೆಳ್ಳಿಯ ಕಟ್ಟು ಹಾಕಿ ಅಲಂಕರಿಸಿದ ದನಗಳ ಹಿಂಡು ಅವನ ಹಿಂದೆ ಹೋಗುತ್ತಿದೆ. ಸ್ವಲ್ಪ ಹೊತ್ತಿನಲ್ಲೇ ಯುವತಿಯರ ಒಂದು ಗುಂಪು ಕಾಣುತ್ತದೆ. ತಲೆಯ ಮೇಲೆ ಸಿಂಬಿಯಿಟ್ಟುಕೊಂಡು ಸಣ್ಣ ಗಡಿಗೆಗಳನ್ನು ಹೊತ್ತು ಅವರು ಬರುತ್ತಿದ್ದಾರೆ. ಏನಿರಬಹುದೆಂದು ನಿಮಗೆ ಕುತೂಹಲವಲ್ಲವೆ? ಅಗೋ ಎಚ್ಚರಿಕೆಯಿಲ್ಲದ ಆ ತರುಣಿ ಗಡಿಗೆಯಿಂದ ಹಾಲು ತುಳುಕಿಸಿ ನಿಮ್ಮ ಸಂದೇಹವನ್ನು ಪರಿಹರಿಸಿದ್ದಾಳೆ. ಆಮೇಲೆ ಅದೋ ಆ ದೊಡ್ಡ ಆಳನ್ನು ನೋಡಿ. ಬಿಳಿಯ ಮೀಸೆ, ಬಿಳಿಯ ದೊಡ್ಡ ಪೇಟಾ, ಉದ್ದವಾದ ಗರಿಲೇಖಣಿಯನ್ನು ಅದಕ್ಕೆ ಸಿಕ್ಕಿಸಿದ್ದಾನೆ. ಸೊಂಟದಲ್ಲಿ ಒಂದು ಉದ್ದನೆಯ ವಸ್ತ್ರ ಇದೆ. ಅದರಲ್ಲಿ ಬೆಳ್ಳಿಯ ಮಸಿ ಕುಡಿಕೆ ತಗುಲಿಸಿದೆ. ಅವನೊಬ್ಬ ದೊಡ್ಡ ಲೇವಾದೇವಿಗಾರ ಎಂದು ನೀವರಿಯಬೇಕು. ಹೀಗೆ ಅನೇಕ ಬಗೆಯ ಜನ ಸಂತೋಷ ಸಂಭ್ರಮಗಳಿಂದ ಬಿಡುವಾಗಿ ಓಡಾಡುತ್ತಿರುವುದನ್ನು ಕಾಣಬಹುದು.

ರಾತ್ರಿ ಬಂತು; ಕೋರೈಸುವ ಬೆಳಕುಗಳಿಂದ ಬೀದಿಗಳು ಜಗಜಗಿಸುತ್ತವೆ. ರೀಜೆಂಟ್ ಸ್ಟ್ರೀಟನ್ನಾಗಲಿ ಆಕ್ಸ್‌ಫರ್ಡ್ ಸ್ಟ್ರೀಟನ್ನಾಗಲಿ ಎಂದೂ ನೋಡದವನಿಗೆ ನಿಜಕ್ಕೂ ಕೋರೈಸುವಂಥದೇ ಸರಿ. ಆದರೂ ಕ್ರಿಸ್ಟಲ್ ಪ್ಯಾಲೇಸಿನಲ್ಲಿ ನಡೆಯುವ ದೀಪಾಲಂಕಾರದ ಪ್ರಮಾಣಕ್ಕೆ ಇದನ್ನು ಹೋಲಿಸಲಾಗುವುದಿಲ್ಲ, ಮುಂಬಯಿಯಂತಹ ಮಹಾನಗರಗಳಲ್ಲಿ ಹೊರತು ಗಂಡಸರು ಹೆಂಗಸರು ಮಕ್ಕಳು ಎಲ್ಲ ತಮ್ಮ ಅತ್ಯುತ್ತಮ ಉಡುಪುಗಳನ್ನು ಧರಿಸುತ್ತಾರೆ. ಅವೆಲ್ಲ ವಿವಿಧ ವರ್ಣಮಯ. ಇವೆಲ್ಲ ಸೇರಿ ವಿಲಕ್ಷಣವಾದ ಅಂದ

ವನ್ನು ಕೊಡುತ್ತವೆ. ಅದು ಕೆಲಿಡೋಸ್ಕೋಪಿನ ವರ್ಣಮಯ ಸೌಂದರ್ಯದಂತೆ. ಈ ರಾತ್ರಿಯು ವಿದ್ಯಾಧಿದೇವತೆಯಾದ ಸರಸ್ವತಿಯನ್ನು ಪೂಜಿಸುವ ರಾತ್ರಿಯೂ ಹೌದು. ವರ್ತಕರು ತಮ್ಮ ಹೊಸ ಲೆಕ್ಕದ ಪುಸ್ತಕಗಳನ್ನು ಮೊದಲನೆಯ ದಾಖಲೆ ಬರೆಯುವುದರ ಮೂಲಕ ಪ್ರಾರಂಭಿಸುತ್ತಾರೆ, ಎಲ್ಲೆಲ್ಲೂ ಕಣ್ಣಿಗೆ ಬೀಳುವ ಬ್ರಾಹ್ಮಣ ಪುರೋಹಿತನು ಕೆಲವು ಮಂತ್ರಗಳನ್ನು ಗುಣಿಗುಟ್ಟಿ ದೇವಿಯನ್ನು ಆವಾಹಿಸುತ್ತಾನೆ. ಪೂಜೆಯು ಕೊನೆಗೆ ಸಹನೆಯನ್ನು ಕಳೆದುಕೊಂಡ ಮಕ್ಕಳು ಮದ್ದುಗಳ ಜ್ವಾಲೆಯೆಬ್ಬಿಸುತ್ತಾರೆ. ಈ ಪೂಜೆ ಒಂದು ನಿಶ್ಚಿತ ಸಮಯಕ್ಕೆ ಸರಿಯಾಗಿ ನಡೆಯುವುದರಿಂದ ಬೀದಿಗಳು ಪಟಾಕಿಗಳ ಸಿಡಿತ ಸುಯ್ಯುಗಳಿಂದ ಭೋರ್ಗರೆಯುತ್ತವೆ. ಶ್ರದ್ಧಾಭಕ್ತಿಯುಳ್ಳ ಜನ ಆಮೇಲೆ ದೇವಾಲಯಗಳಿಗೆ ಹೋಗುತ್ತಾರೆ. ಇಲ್ಲಿಯೂ ಕಾಣುವುದು ಅದೇ ಗೆಲವು ಅದೇ ಹಿಗ್ಗು, ಕೋರೈಸುವ ಪ್ರಕಾಶ ಮತ್ತು ವೈಭವ, ಇವೇ.

ಮರುದಿನವೇ ವರ್ಷದ ಮೊದಲನೆಯ ದಿನ. ಅದು ಪರಸ್ಪರ ಭೇಟಿ ನೀಡುವ ದಿನ. ಅಡಿಗೆ ಮನೆಯ ಒಲೆ ಅಂದು ಉರಿಯುವುದಿಲ್ಲ. ಹಿಂದಿನ ದಿನವೇ ತಯಾರಿಸಿದ ಭಕ್ಷ್ಯ ಭೋಜ್ಯಗಳನ್ನೇ ಅಂದು ಜನ ತಿನ್ನುತ್ತಾರೆ. ಅಂದಮಾತ್ರಕ್ಕೆ ಹೊಟ್ಟೆಬಾಕನಾದವನಿಗೇನೂ ಅನ್ನಾಭಾವವಿಲ್ಲ. ಏಕೆಂದರೆ ಅದೆಷ್ಟು ಪ್ರಮಾಣದಲ್ಲಿ ತಯಾರಿಸಿರುತ್ತಾರೆಂದರೆ ಅವನು ತಿಂದು ತಿಂದು ತೇಗಿದರೂ ಇನ್ನು ಬೇಕಾದಷ್ಟಿರುತ್ತದೆ, ತಾವೂ ತಿಂದು ಇತರರಿಗೂ ಕೊಡುವಷ್ಟು. ಶ್ರೀಮಂತರಾದ ಜನ ಪ್ರತಿಯೊಂದು ಬಗೆಯ ತರಕಾರಿ, ಧಾನ್ಯ ಮತ್ತು ಬೇಳೆಯನ್ನೂ ಕೊಂಡು ಅಡಿಗೆ ಮಾಡಿ ಅವೆಲ್ಲವನ್ನೂ ಈ ಹೊಸವರ್ಷದ ದಿನ ಸವಿಯುತ್ತಾರೆ.

ಹೊಸ ವರ್ಷದ ಎರಡನೆಯ ದಿನ ತಕ್ಕಮಟ್ಟಿಗೆ ಶಾಂತವಾದ ದಿನ. ಅಡಿಗೆ ಮನೆಯ ಒಲೆಗಳು ಪುನಃ ಉರಿಯುತ್ತವೆ. ಹಿಂದಿನ ದಿನಗಳ ಊಟವಾದ ಮೇಲೆ ಇಂದು ಲಘುವಾದ ಆಹಾರ. ಮದ್ದು ಸುಡುವ ಪ್ರದರ್ಶನಗಳೇನೂ ಇಲ್ಲ, ಎಲ್ಲೋ ಕೆಲವು ತುಂಟ ಮಕ್ಕಳು ಮಾಡುವುದನ್ನು ಬಿಟ್ಟು. ದೀಪಾಲಂಕಾರವೂ ಕಡಮೆ ಪ್ರಮಾಣದಲ್ಲಿ. ಈ ಎರಡನೆಯ ದಿನದಿಂದ ದೀಪಾವಳಿಯ ಉತ್ಸವಗಳು ವಾಸ್ತವವಾಗಿ ಮುಗಿದಂತೆಯೇ.

ಈ ಉತ್ಸವಗಳು ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತವೆ, ಹೇಗೆ ಜನರು ತಮಗೆ ತಿಳಿಯದೆಯೇ ಅನೇಕ ಅಪೇಕ್ಷಣೀಯವಾದ ಕೆಲಸಗಳನ್ನು ಮಾಡುತ್ತಾರೆ ಎನ್ನುವುದನ್ನು ನೋಡೋಣ. ಸಾಮಾನ್ಯವಾಗಿ ಕುಟುಂಬದ ಎಲ್ಲ ವ್ಯಕ್ತಿಗಳೂ ಈ ಉತ್ಸವದ ದಿನಗಳಲ್ಲಿ ಒಟ್ಟಾಗಿ ತಮ್ಮ ಮನೆಯಲ್ಲಿ ಸೇರಲು ಪ್ರಯತ್ನಿಸುತ್ತಾರೆ. ವರ್ಷವೆಲ್ಲ ವ್ಯಾಪಾರ ವ್ಯವಹಾರಗಳಿಗಾಗಿ ಮನೆ ಬಿಟ್ಟು ಹೋಗಿದ್ದ ಗಂಡ ಮತ್ತೆ ತನ್ನ ಮನೆಗೆ, ತನ್ನ ಹೆಂಡತಿಯ ಬಳಿಗೆ, ಬರಲು ಯತ್ನಿಸುತ್ತಾನೆ. ತಂದೆಯೂ ತನ್ನ ಮಕ್ಕಳೊಡನೆ ಸೇರಲು ಬಹುದೂರದಿಂದ ಪ್ರಯಾಣ ಮಾಡಿ ಬರುತ್ತಾನೆ. ಮಗ ಬೇರೆಡೆಯಿದ್ದರೆ, ಶಾಲೆಯಿಂದ ಮನೆಗೆ ಹಿಂದಿರುಗುತ್ತಾನೆ. ಹೀಗೆ ಎಲ್ಲರ ಪುನರ್ಮಿಲನವುಂಟಾಗುತ್ತದೆ. ಇದಲ್ಲದೆ ಶಕ್ತಿಯಿರುವವರೆಲ್ಲರೂ ಹೊಸ ಉಡುಪುಗಳನ್ನು ಹೊಲಿಸಿಕೊಳ್ಳು

ತ್ತಾರೆ. ಶ್ರೀಮಂತ ವರ್ಗಗಳಲ್ಲಿ ಈ ಸಂದರ್ಭಕ್ಕಾಗಿಯೇ ವಿಶೇಷವಾಗಿ ಆಭರಣ ಗಳನ್ನೂ ಮಾಡಿಸಿಕೊಳ್ಳುವುದುಂಟು. ಹಳೆಯ ಜಗಳಗಳನ್ನೂ ಹೇಗೋ ರಾಜಿ ಮಾಡಿ ಕೊಳ್ಳುತ್ತಾರೆ. ಕನಿಷ್ಠ ಪಕ್ಷ ಹಾಗೆ ಮಾಡಿಕೊಳ್ಳಲು ಸರ್ವ ಪ್ರಯತ್ನವನ್ನೂ ಮಾಡುತ್ತಾರೆ. ಮನೆಗಳನ್ನು ರಿಪೇರಿ ಮಾಡಿಸಿ ಸುಣ್ಣ ಬಳಿಸುತ್ತಾರೆ. ಮರದ ದೊಡ್ಡ ಪೆಟ್ಟಿಗೆಯಲ್ಲಿ ಕಟ್ಟಿಟ್ಟಿದ್ದ ಹಳೆಯ ಗೃಹಾಲಂಕರಣ ವಸ್ತುಗಳನ್ನು ಹೊರತೆಗೆದು ನಿರ್ಮಲಗೊಳಿಸಿ ತತ್ಕಾಲಕ್ಕೆ ಕೊಠಡಿಗಳನ್ನಲಂಕರಿಸಲು ಬಳಸುತ್ತಾರೆ. ಹಳೆಯ ಸಾಲಗಳೇನಾದರೂ ಇದ್ದರೆ ಸಾಧ್ಯವಾದದ್ದನ್ನೆಲ್ಲ ತೀರಿಸಿಬಿಡುತ್ತಾರೆ. ಹೊಸವರ್ಷದ ದಿನಕ್ಕಾಗಿ ಪ್ರತಿ ಯೊಬ್ಬರೂ ಏನಾದರೂ ಹೊಸದನ್ನು ಕೊಳ್ಳಲೇಬೇಕು, ಬಹುಶಃ ಅದೊಂದು ಲೋಹದ ಪಾತ್ರೆಯೋ ಅಥವಾ ಅಂಥದೇ ಬೇರೆ ಯಾವುದೋ ವಸ್ತುವಾಗಿರುತ್ತದೆ. ಧಾರಾಳವಾಗಿ ದಾನಧರ್ಮ ಮಾಡುತ್ತಾರೆ. ಪ್ರಾರ್ಥನೆ ಮಾಡುವುದು, ದೇವಾಲಯಗಳಿಗೆ ಹೋಗುವುದು ಇವುಗಳಿಗೆ ಅಷ್ಟಾಗಿ ಗಮನಕೊಡದಿದ್ದ ಜನರೂ ಕೂಡ ಇವೆರಡನ್ನೂ ಈಗ ಮಾಡುತ್ತಾರೆ.

ಈ ಉತ್ಸವಗಳಲ್ಲಿ ಒಬ್ಬರೊಡನೊಬ್ಬರು ಜಗಳವಾಡಬಾರದು, ಒಬ್ಬರನ್ನೊಬ್ಬರು ಬೈಯಬಾರದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಎಲ್ಲವೂ ಪ್ರಶಾಂತವಾಗಿ ಸಂತೋಷ ಕರವಾಗಿರುತ್ತದೆ. ಒಂದು ಹೊರೆಯೆನಿಸುವ ಬದಲು ಸಂಪೂರ್ಣವಾಗಿ ಆನಂದಮಯ ವಾಗಿರುತ್ತದೆ. ಇಂತಹ ಉತ್ಸವಗಳಿಂದ ಒಳ್ಳೆಯ ಹಾಗೂ ದೂರಗಾಮಿಯಾದ ಪರಿಣಾಮ ಗಳು ಆಗದಿರಲಾರವೆಂಬುದನ್ನು ಸುಲಭವಾಗಿ ಕಾಣಬಹುದು. ಕೆಲವರು ಇವನ್ನು ಹಳೆಯ ಕಾಲದ ಮೂಢನಂಬಿಕೆ ಮತ್ತು ಅವಿವೇಕಗಳ ಅವಶೇಷವೆಂದು ಅಲ್ಲಗಳೆಯುತ್ತಾರೆ. ಆದರೆ ನಿಜವಾಗಿ ಅವು ಮಾನವ ಕುಲಕ್ಕೊಂದು ವರ. ಲಕ್ಷಾಂತರ ಶ್ರಮಜೀವಿಗಳ ಬದುಕಿನ ನೀರಸತೆಯನ್ನು ಇವು ಬಹುಮಟ್ಟಿಗೆ ಪರಿಹರಿಸಬಲ್ಲುವು.

ದೀಪಾವಳಿಯ ಉತ್ಸವಗಳು ಇಡೀ ಭಾರತಕ್ಕೆ ಸಮಾನವಾಗಿದ್ದರೂ, ಅದನ್ನು ಆಚರಿಸುವ ವಿಧಾನ ಮಟ್ಟಿಗೆ ಕೆಲವು ಅಂಶಗಳಲ್ಲಿ ಬೇರೆ ಬೇರೆಡೆಗಳಲ್ಲಿ ಬೇರೆ ಬೇರೆ ಯಾಗಿರುತ್ತದೆ. ಅಲ್ಲದೆ ಇಲ್ಲಿ ಕೊಟ್ಟಿರುವುದು ಹಿಂದುಗಳ ಅತ್ಯಂತ ಭಾರೀ ಹಬ್ಬದ ಕೇವಲ ಅಸಮರ್ಪಕ ವರ್ಣನೆ. ಈ ಉತ್ಸವಗಳನ್ನು ದುರುಪಯೋಗ ಮಾಡುವುದೇ ಇಲ್ಲವೆಂದೂ ಭಾವಿಸಬಾರದು. ಎಲ್ಲ ವಿಷಯಗಳಂತೆಯೇ ಈ ಹಬ್ಬಕ್ಕೂ ಒಂದು ಕಪ್ಪು ಮುಖವಿರಬಹುದು. ಇದೆಯೆಂದೇ ಹೇಳಬಹುದು. ಆದರದನ್ನು ಗಮನಿಸಬಾರದು ಏಕೆಂದರೆ ಅದರಿಂದಾಗುವ ಒಳಿತು ಕೆಡುಕಿಗಿಂತ ಹೆಚ್ಚು.

ಏಪ್ರಿಲ್ ೪, ೧೮೯೧.

೩

ದೀಪಾವಳಿ ಉತ್ಸವಗಳನ್ನು ಬಿಟ್ಟರೆ, ಹೋಳಿ ಹಬ್ಬದ ಉತ್ಸವಗಳು ಪ್ರಮುಖ ವಾದುವು. ಇದರ ವಿಷಯವಾಗಿ ಮಾರ್ಚಿ ೨೮ರ ವೆಜಿಟೇರಿಯನ್ ಪತ್ರಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಹೋಳಿಹಬ್ಬದ ಕಾಲ ಈಸ್ಟರ್ ಹಬ್ಬದ ಕಾಲಕ್ಕೆ ಹೊಂದಿಕೊಳ್ಳುತ್ತದೆಯೆಂಬುದು ನೆನಪಿರಬಹುದು. ಹಿಂದೂ ವರ್ಷದ ಐದನೆಯ ತಿಂಗಳ ಫಾಲ್ಗುಣದ ಪೂರ್ಣಿಮೆಯ ದಿನ ಹೋಳಿಯು ಬರುತ್ತದೆ. ಇದೀಗ ವಸಂತ ಕಾಲ ಮರಗಳು ಚಿಗುರಿರುತ್ತವೆ. ಬೆಚ್ಚನೆಯ ಉಡುಪನ್ನು ಈಗ ಕಳಚಿಟ್ಟಿರುತ್ತಾರೆ. ತೆಳುವಾದ ಬಟ್ಟೆಗಳೇ ಈಗ ಪಸಂದು (fashion). ಯಾವುದಾದರೂ ದೇವಾಲಯವನ್ನು ಹಣಿಕಿ ನೋಡಿದರೆ ವಸಂತದ ಆಗಮನ ಇನ್ನೂ ಸ್ಪಷ್ಟವಾಗಿ ಕಾಣುತ್ತದೆ. ದೇವಾಲಯವನ್ನು ನೀವು ಹೊಕ್ಕರೆ ಸಾಕು, ಪ್ರವೇಶ ದೊರಕಬೇಕಾದರೆ ನೀವು ಹಿಂದು ಆಗಿರಲೇಬೇಕು, ಮಧುರ ಪುಷ್ಪಗಳ ಪರಿಮಳವಲ್ಲದೆ ಬೇರೆ ವಾಸನೆಯೇ ಇಲ್ಲ. ಧರ್ಮನಿಷ್ಠರಾದವರು ಮೆಟ್ಟಿಲುಗಳ ಮೇಲೆ ಕುಳಿತು ಠಾಕೂರ್‌ಜೀಗಾಗಿ–ಅಂದರೆ ದೇವರಿಗಾಗಿ ಮಾಲೆಗಳನ್ನು ಕಟ್ಟುತ್ತಿರುತ್ತಾರೆ. ಪುಷ್ಪಗಳಲ್ಲಿ ನಿಮಗೆ ಸುಂದರವಾದ ಗುಲಾಬಿಗಳು, ತಾವರೆಗಳು, ಜಮೇಲಿ, ಮೋಘ್ರಾ, ಚಂಪಾ ಮೊದ ಲಾದುವೆಲ್ಲ ಕಂಡು ಬರುತ್ತವೆ. ದರ್ಶನಕ್ಕಾಗಿ ಬಾಗಿಲು ತೆರೆದೊಡನೆಯೇ ನಿಮಗೆ ಪುಷ್ಪ ಮಾಲೆಗಳು ಧಾರೆ ಧಾರೆಯಾಗಿ ಕಾಣುತ್ತವೆ. ಮೃದು ಮಧುರವಾದ ತಂಗಾಳಿಯನ್ನು ನೀವು ಅನುಭವಿಸುತ್ತೀರಿ. ಠಾಕೂರ್‌ಜೀ ಲಲಿತವರ್ಣಗಳ ಲಘುವಾದ ಉಡಿಗೆಯನ್ನು ಉಟ್ಟಿದ್ದಾರೆ. ಅವನ ಮುಂದಿರುವ ಪುಷ್ಪಗಳ ರಾಶಿಗಳೂ ಅವನ ಕೊರಳಿಗೆ ಹಾಕಿರುವ ಮಾಲೆಗಳೂ ಅವನನ್ನು ನಮ್ಮ ನೋಟಕ್ಕೆ ಸಿಗದಂತೆ ಮರೆಮಾಡುತ್ತವೆ. ದೇವರನ್ನು ಉಯ್ಯಾಲೆ ತೂಗುತ್ತಿದ್ದಾರೆ. ಉಯ್ಯಾಲೆಯನ್ನೂ ಹಸಿರೆಲೆಗಳಿಂದ ಮುಚ್ಚಿ ಅದರ ಮೇಲೆ ಪರಿಮಳೋದಕಗಳನ್ನು ಪ್ರೋಕ್ಷಿಸಿದ್ದಾರೆ.

ದೇವಾಲಯದ ಹೊರಗಣ ದೃಶ್ಯವು ಉನ್ನತಗೊಳಿಸುವಂಥದೇನೂ ಅಲ್ಲ. ಹೋಳಿಯ ದಿನದ ಹಿಂದಿನ ಹದಿನೈದು ದಿನಗಳು ಅಶ್ಲೀಲ ಭಾಷೆಯಲ್ಲದೆ ಬೇರೇನೂ ನಿಮಗೆ ಕೇಳಿಬರುವುದಿಲ್ಲ. ಸಣ್ಣ ಸಣ್ಣ ಹಳ್ಳಿಗಳಲ್ಲಿ ಹೆಂಗಸರು ಮೈಯೆಲ್ಲಾ ಕೆಸರನ್ನು ಎರಚಿಕೊಳ್ಳದೆ ಕಣ್ಣಿಗೆ ಬೀಳುವಂತೆಯೇ ಇಲ್ಲ. ಅವರನ್ನು ಕುರಿತು ಅಶ್ಲೀಲವಾದ ಪದ ಗಳನ್ನು ಬಳಸಲಾಗುತ್ತದೆ. ಗಂಡಸರಿಗೂ ಏನೇನೂ ತಾರತಮ್ಯವಿಲ್ಲದೆ ಇದೇ ಸೇವೆ ಯನ್ನೇ ಸಲ್ಲಿಸಲಾಗುತ್ತದೆ. ಜನರು ಸಣ್ಣ ಸಣ್ಣ ಗುಂಪುಗಳಾಗುತ್ತಾರೆ. ಆಮೇಲೆ ಒಂದು ಗುಂಪು ಇನ್ನೊಂದರೊಡನೆ ಅಶ್ಲೀಲ ಮಾತುಗಳನ್ನಾಡುವುದರಲ್ಲೂ ಅಶ್ಲೀಲ ಹಾಡು ಗಳನ್ನು ಹಾಡುವುದರಲ್ಲೂ ಮೇಲಾಟವಾಡುತ್ತದೆ. ಹೆಂಗಸರನ್ನು ಬಿಟ್ಟು ಎಲ್ಲರೂ –ಗಂಡಸರು ಮತ್ತು ಮಕ್ಕಳೆಲ್ಲ–ಹೇಸಿಕೆ ತರುವ ಈ ಸ್ಪರ್ಧೆಗಳಲ್ಲಿ ಪಾತ್ರವಹಿಸುತ್ತಾರೆ.

ನಿಜಕ್ಕೂ ಈ ಕಾಲದಲ್ಲಿ ಅಶ್ಲೀಲ ಪದಗಳನ್ನು ಬಳಸುವುದನ್ನು ಹಲ್ಕಾ ಅಭಿ ರುಚಿಯೆಂದು ಭಾವಿಸಲಾಗಿಲ್ಲ. ಜನರಿನ್ನೂ ಅಜ್ಞಾನದಲ್ಲೇ ಮುಳುಗಿ ಹೋಗಿರುವಂಥ ಸ್ಥಳಗಳಲ್ಲಿ ಒಬ್ಬರ ಮೇಲೊಬ್ಬರು ಏನನ್ನಾದರೂ ಎಸೆದು ಬಿಡುತ್ತಾರೆ. ನಿಮ್ಮ ಬಟ್ಟೆಯ ಮೇಲೆ ಬರೆಯುತ್ತಾರೆ. ಬಿಳಿಬಟ್ಟೆಯನ್ನು ಹಾಕಿಕೊಂಡು ನೀವು ಹೊರಗೆ ಹೋದರಂತೂ ತೀರಿತು, ಮೈತುಂಬ ಮಣ್ಣು ಮಾಡಿಕೊಳ್ಳದೆ ಮನೆಗೆ ಹಿಂದಿರುಗುವಂತೆಯೇ ಇಲ್ಲ. ಹೋಳಿ ದಿನದಂದು ಇದು ಶಿಖರಕ್ಕೇ ಏರುತ್ತದೆ. ನೀವು ಮನೆಯ ಒಳಗಿರಿ ಹೊರಗಿರಿ

ಹೊಲಸು ಮಾತುಗಳು ನಿಮ್ಮ ಕಿವಿ ಕೊರೆಯದೆ ಬಿಡುವುದೇ ಇಲ್ಲ. ನೀವು ಒಬ್ಬ ಸ್ನೇಹಿತನ ಮನೆಗೆ ಹೋದರೆ ನಿಮಗೆ ಸ್ನಾನ ಕೊಳಕು ನೀರಿನಲ್ಲಾದರೂ ಆಗಬಹುದು, ಸುಗಂಧ ಮಿಶ್ರಿತವಾದ ನೀರಿನಲ್ಲಾದರೂ ಆಗಬಹುದು, ನಿಮ್ಮ ಪುಣ್ಯ ಇದ್ದ ಹಾಗೆ.

ಸಂಜೆಯಾಗುತ್ತಲೆ ಕಟ್ಟಿಗೆಯು ಅಥವಾ ಬೆರಣಿಯು ದೊಡ್ಡರಾಶಿ ಮಾಡಿ ಬೆಂಕಿ ಹೊತ್ತಿಸುತ್ತಾರೆ. ಈ ರಾಶಿಗಳು ಅನೇಕ ವೇಳೆ ಇಪ್ಪತ್ತು ಅಡಿ ಅಥವಾ ಅದಕ್ಕಿಂತಲೂ ಎತ್ತರವಾಗಿರುವುದುಂಟು. ಕಟ್ಟಿಗೆ ತುಂಡುಗಳು ಎಷ್ಟು ದಪ್ಪವಾಗಿರುತ್ತವೆಂದರೆ ಈ ಬೆಂಕಿ ಏಳೆಂಟು ದಿನಗಳ ಕಾಲದ ವರೆಗೂ ಆರುವುದೇ ಇಲ್ಲ.

ಮಾರನೆಯ ದಿನ ಜನರು ಈ ಬೆಂಕಿಯಿಂದಲೇ ನೀರು ಕಾಯಿಸಿಕೊಂಡು ಮೀಯು ತ್ತಾರೆ. ಇಲ್ಲಿಯ ವರೆಗೂ ಹೋಳಿ ಉತ್ಸವವನ್ನು ಹೇಗೆ ಕೆಡಿಸುತ್ತಾರೆಂಬುದನ್ನು ಹೇಳಿ ದ್ದೇನೆ. ವಿದ್ಯಾಭ್ಯಾಸ ಹಾಗೂ ನಾಗರಿಕತೆ ಮುಂದುವರಿದಂತೆಲ್ಲ ಇಂಥ ದೃಶ್ಯಗಳು ನಿಧಾನವಾಗಿಯಾದರೂ ಖಂಡಿತವಾಗಿ ಗತಿಸುತ್ತಿವೆ ಎಂದು ಹೇಳುವುದು ಸಮಾಧಾನದ ವಿಷಯ. ಆದರೆ ಶ್ರೀಮಂತರೂ ಸುಸಂಸ್ಕೃತರೂ ಆದ ವರ್ಗಗಳವರು ಈ ಉತ್ಸವ ಗಳನ್ನು ತುಂಬ ಸಭ್ಯವಾದ ರೀತಿಯಲ್ಲಿ ನಡೆಸುತ್ತಾರೆ. ಕೆಸರಿನ ಬದಲಿಗೆ ಬಣ್ಣದ ನೀರು, ಪರಿಮಳದ ನೀರು ಬರುತ್ತವೆ. ಕೊಡಗಟ್ಟಲೆ ನೀರು ಹುಯ್ಯುವುದರ ಬದಲು ಕೆಲವು ಹನಿಗಳನ್ನು ಮಾತ್ರವೇ ಚಿಮುಕಿಸುತ್ತಾರೆ. ಈ ದಿವಸಗಳಲ್ಲಿ ಕೇಸರಿ ಬಣ್ಣದ ನೀರನ್ನು ವಿಶೇಷವಾಗಿ ಬಳಸುತ್ತಾರೆ. ಕೆಸುದಾ ಎಂಬ ಬಣ್ಣದ ಹೂಗಳನ್ನು ಕುದಿಸಿ ಅವನ್ನು ತಯಾರಿಸುತ್ತಾರೆ. ಈ ಹೂವುಗಳದು ಕೇಸರಿ ಬಣ್ಣ. ಕೊಳ್ಳಲು ಸಾಧ್ಯವಿದ್ದವರೆಲ್ಲಾ ಪನ್ನೀರನ್ನೂ ಬಳಸುತ್ತಾರೆ. ನೆಂಟರೂ ಇಷ್ಟರೂ ಒಟ್ಟಾಗಿ ಸೇರಿ ಹಬ್ಬದೂಟ ಮಾಡು ತ್ತಾರೆ. ವಸಂತಕಾಲವನ್ನು ಹೀಗೆ ಸಂತೋಷವಾಗಿ ಅನುಭವಿಸುತ್ತಾರೆ.

ಅನೇಕ ಅಂಶಗಳಲ್ಲಿ ದೀಪಾವಳಿ ಉತ್ಸವಗಳು ಬಹುಪಾಲು ಅಪವಿತ್ರವೆನ್ನಿಸುವ ಹೋಳಿ ಉತ್ಸವಗಳಿಗೆ ಸೊಗಸಾದ ವೈದೃಶ್ಯವನ್ನು ಕಲ್ಪಿಸುತ್ತದೆ. ದೀಪಾವಳಿ ಉತ್ಸವ ಗಳು ಪ್ರಾರಂಭವಾಗುವುದು ಮುಂಗಾರು ಮುಗಿದೊಡನೆಯೇ. ಈ ಮುಂಗಾರು ಕಾಲ ಉಪವಾಸದ ಕಾಲವೂ ಹೌದು. ಆದ್ದರಿಂದ ದೀಪಾವಳಿ ಉತ್ಸವಗಳ ಔತಣಗಳು ಇನ್ನೂ ಹೆಚ್ಚು ಸವಿ. ಆದರೆ ಹೋಳಿ ಹಬ್ಬ ಪ್ರಾರಂಭವಾಗುವುದು ಚಳಿಗಾಲ ಕಳೆದೊಡನೆ. ಈ ಚಳಿಗಾಲವು ಎಲ್ಲ ಬಗೆಯ ಸಾರವತ್ತಾದ ಆಹಾರಗಳನ್ನು ತೆಗೆದುಕೊಳ್ಳುವ ಕಾಲ. ಇಂಥ ಆಹಾರಗಳನ್ನು ಹೋಳಿ ಉತ್ಸವಗಳಲ್ಲಿ ವರ್ಜಿಸಲಾಗುತ್ತದೆ. ದೀಪಾವಳಿಯು ಅತ್ಯಂತ ಪವಿತ್ರವಾದ ಹಾಡುಗಳಾದ ಮೇಲೆ ಹೋಳಿಯು ಅಶ್ಲೀಲ ಭಾಷೆ ಬರುತ್ತದೆ. ಇದಲ್ಲದೆ ದೀಪಾವಳಿಯಲ್ಲಿ ಜನ ಚಳಿಗಾಲದುಡುಪುಗಳನ್ನು ಹಾಕಿಕೊಳ್ಳಲು ತೊಡಗಿದರೆ. ಹೋಳಿಯಲ್ಲಿ ಅವುಗಳನ್ನು ತೆಗೆದು ಹಾಕುತ್ತಾರೆ. ದೀಪಾವಳಿಯ ಪ್ರಮುಖ ಹಬ್ಬವು ಅಶ್ವಿನಿ ತಿಂಗಳ ಕೃಷ್ಣಪಕ್ಷದಲ್ಲಿ ಹದಿನೈದನೆಯ ದಿನ ನಡೆಯುತ್ತದೆ. ಇದರ ಪರಿಣಾಮ ವಾಗಿ ದೀಪಾಲಂಕಾರ ಬಹಳ ಹೆಚ್ಚು. ಹೋಳಿಯು ನಡೆಯುವುದಾದರೂ ಹುಣ್ಣಿಮೆ ಯಂದು. ದೀಪಾಲಂಕಾರಕ್ಕೆ ಇಲ್ಲಿ ಎಡೆಯಿಲ್ಲ.

ಏಪ್ರಿಲ್ ೨೫, ೧೮೯೧

ನಮ್ಮ ಕೆಲಸಗಾರರು

ಭಾರತವನ್ನು ಕುರಿತು ಅಲ್ಪಸ್ವಲ್ಪವಾದರೂ ಬಲ್ಲ ಹಲವರಲ್ಲಿ ಭಾರತದ ಸ್ವಂತ ನಿವಾಸಿಗಳ ಅಭ್ಯಾಸ ಆಚರಣೆಗಳು, ಚಿಂತನೆ ಆಶೋತ್ತರಗಳು, ಉಪದೇಶ ಹಾಗೂ ಅನುಷ್ಠಾನಗಳಲ್ಲಿರುವಂತೆ ಅವರ ವಿವಿಧ ಧರ್ಮಗಳು ಇವೆಲ್ಲದರ ನಿಜವಾದ ಕಲ್ಪನೆಯುಳ್ಳವರು ತೀರ ವಿರಳ. ಗಾಂಧೀಜಿಯವರ ಲೇಖಣಿಯು ಈ ಅಜ್ಞಾನವನ್ನು ತೊಲಗಿಸಲು ಈ ಪತ್ರಿಕೆಯ ಪುಟಗಳಲ್ಲಿ ಸಕ್ರಿಯವಾಗಿ ವರ್ತಿಸುತ್ತಿದೆ.

ಇಂಗ್ಲೆಂಡಿನಲ್ಲಿರುವ ಹಿಂದುಗಳೆಲ್ಲರ ಬದುಕಿಗೆ ಸಂಬಂಧಪಟ್ಟ ಒಂದು ಅಂಶವು ಸಾಮಾನ್ಯವಾಗಿ ಜನಕ್ಕೆ ಗೊತ್ತಿಲ್ಲ. ಅದೇನೆಂದರೆ, ಅವರು ಇಲ್ಲಿಗೆ ಬರಲು ಅಡ್ಡಿಯಾಗಿ ರುವ ಅಗಾಧವಾದ ಕಷ್ಟಗಳನ್ನು ಗೆಲ್ಲಲು ಬೇಕಾದ ಶಕ್ತಿಯನ್ನು ಅವರಿಗೆ ಕೊಡಬಲ್ಲ ಸತ್ವಪೂರ್ಣ ಶೀಲವು ತುಂಬ ಅಗತ್ಯ–ಅಂದರೆ ಸಹನೆ ಮತ್ತು ಪಟ್ಟುಬಿಡದ ಪ್ರಯತ್ನ ಇವುಗಳಿಂದ ಕೂಡಿದ ಶೀಲದ ಅಗತ್ಯ ಎಂಬುದು.

ಈ ಕಷ್ಟಗಳನ್ನು ಅರ್ಥಮಾಡಿಕೊಂಡು, ಈ ನೆಲದ ಮೇಲೆ ಕಾಲಿಡುವ ಪ್ರತಿ ಯೊಬ್ಬ ಭಾರತೀಯನನ್ನೂ ಇಂಗ್ಲಿಷರು ಗೌರವಿಸುವಂತೆ ಇಂಗ್ಲಿಷರಿಗೆ ಅನುಕೂಲಿಸ ಲೆಂದೂ, ಈ ಕಷ್ಟಗಳನ್ನು ಹೇಗೆ ಗೆಲ್ಲಬಹುದು, ಇಂಗ್ಲೆಂಡಿನಲ್ಲೂ ಸಸ್ಯಾಹಾರಿ ಮಿತ್ರರು ಅವರಿಗೆ ಹೇಗೆ ಸಿಕ್ಕುತ್ತಾರೆ ಎಂಬುದನ್ನು ಹಿಂದುಗಳಿಗೂ ತೋರಿಸಿಕೊಡಲೆಂದೂ. ಗಾಂಧಿಯವರನ್ನು ಕೆಲವು ಪ್ರಶ್ನೆಗಳಿಗೆ ಪೂರ್ಣವಾಗಿ ಉತ್ತರ ನೀಡಬೇಕೆಂದು ನಾವು ಕೇಳಿಕೊಂಡಿದ್ದೇವೆ.

ಇಂಗ್ಲೆಂಡಿಗೆ ಬರಬೇಕೆಂದೂ ವಕೀಲಿ ವೃತ್ತಿಯನ್ನು ಅವಲಂಬಿಸಬೇಕೆಂದೂ ಅವರನ್ನು ಮೊಟ್ಟಮೊದಲು ಪ್ರೇರಿಸಿದ ಕಾರಣವಾವುದು ಎಂದು ಗಾಂಧೀಜಿಯವರನ್ನು ಮೊದಲು ಕೇಳಲಾಯಿತು.

"ಒಂದೇ ಮಾತಿನಲ್ಲಿ ಹೇಳುವುದಾದರೆ, ಹಿರಿಯಾಸೆ. ೧೮೮೭ರಲ್ಲಿ ನಾನು ಮುಂಬಯಿ ವಿಶ್ವವಿದ್ಯಾನಿಲಯದಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದೆ. ಆಮೇಲೆ ಭಾವನಗರ್ ಕಾಲೇಜಿಗೆ ಸೇರಿದೆ. ಏಕೆಂದರೆ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದ ಹೊರತು ಸಮಾಜದಲ್ಲಿ ಸ್ಥಾನಮಾನ ದೊರಕುವುದಿಲ್ಲ. ಅದಕ್ಕಿಂತ ಮುಂಚೆಯೇ ಏನಾದರೂ ಉದ್ಯೋಗ ನಿಮಗೆ ಬೇಕಿದ್ದರೆ ಬಹಳ ದೊಡ್ಡ ಮಟ್ಟದ ಪ್ರಭಾವ ಶಿಫಾರ್ಸು ನಿಮ್ಮ ನೆರವಿಗೆ ಇದ್ದ ಹೊರತು ಉತ್ತಮ ವೇತನ ತರುವ ಹಾಗೂ ತಕ್ಕಷ್ಟು ಗೌರವ ವುಳ್ಳ ಹುದ್ದೆ ಸಿಕ್ಕುವುದಿಲ್ಲ. ಆದರೆ ಪದವಿ ಪಡೆಯಲು ನಾನು ಕೊನೆಯ ಪಕ್ಷ ಮೂರು ವರ್ಷ ಕಳೆಯಬೇಕಾಗಿತ್ತು. ಅಲ್ಲದೆ ನನಗೆ ಮೇಲಿಂದ ಮೇಲೆ ತಲೆನೋವು ಬರುತ್ತಿತ್ತು, ಮೂಗಿನಲ್ಲಿ ರಕ್ತ ಸುರಿಯುತ್ತಿತ್ತು. ಇದು ಉಷ್ಣ ಹವೆಯಿಂದಾಗಿ ಎಂಬ ಭಾವನೆಯಿತ್ತು. ಮತ್ತೆ ಪದವಿ ಪಡೆದ ಮೇಲೆ ಕೂಡ, ಅಂಥದೇನೂ ದೊಡ್ಡ ವರಮಾನ ದೊರಕೀತೆಂಬ ನಿರೀಕ್ಷೆ ಕೂಡ ನನಗಿರಲಿಲ್ಲ. ಈ ವಿಚಾರಗಳನ್ನು ಕುರಿತು ನಾನು ಚಿಂತಿಸುತ್ತಿದ್ದಾಗ ನನ್ನ ತಂದೆಯ ಹಳೆಯ ಮಿತ್ರರೊಬ್ಬರು ನನ್ನನ್ನು ನೋಡಿ ಇಂಗ್ಲೆಂಡಿಗೆ ಹೋಗಿ ವಕೀಲವೃತ್ತಿ

ಯನ್ನು ಹಿಡಿ ಎಂದು ಸಲಹೆ ಕೊಟ್ಟರು. ನನ್ನ ಅಂತರಂಗದಲ್ಲಿ ಉರಿಯುತ್ತಿದ್ದ ಆಶಾಜ್ಯೋತಿಯನ್ನವರು ಉಜ್ವಲಗೊಳಿಸಿದರೆನ್ನಬೇಕು. ನಾನೆಂದುಕೊಂಡೆ ! ನಾನು ಇಂಗ್ಲೆಂಡಿಗೆ ಹೋದರೆ, ನಾನೊಬ್ಬ ಬ್ಯಾರಿಸ್ಟರ್ ಆಗಬಹುದು.ಈ ಬ್ಯಾರಿಸ್ಟರ್ ಯೋಜನೆ ನನಗೆ ಆಗ ಬಹಳವಾಗಿ ಬರುತ್ತಿತ್ತು–ಅಷ್ಟೇ ಅಲ್ಲ, ತತ್ವಜ್ಞಾನಿಗಳ, ಕವಿಗಳ ನೆಲವೀಡಾದ, ನಾಗರಿಕತೆಯ ಕೇಂದ್ರವೇ ಆದ, ಇಂಗ್ಲೆಂಡನ್ನೂ ನೋಡಿದಂತಾಗುತ್ತದೆ; ಎಂಬುದಾಗಿ. ಈ ದೊಡ್ಡ ಮನುಷ್ಯರ ಮಾತು ನನ್ನ ಹಿರಿಯರಲ್ಲಿ ತುಂಬ ನಡೆಯುತ್ತಿತ್ತು. ಹಾಗಾಗಿ ನನ್ನನ್ನು ಇಂಗ್ಲೆಂಡಿಗೆ ಕಳುಹಿಸಲು ನನ್ನ ಹಿರಿಯರನ್ನು ಅವರು ಮನವೊಲಿಸಿದರು.

"ನಾನು ಇಂಗ್ಲೆಂಡಿಗೆ ಬಂದ ಕಾರಣಗಳ ಸಂಕ್ಷಿಪ್ತ ವಿವರಣೆ ಇದು. ಆದರೆ ನನ್ನ ಈಗಿನ ಅಭಿಪ್ರಾಯಗಳನ್ನು ಇದು ಎಷ್ಟು ಮಾತ್ರಕ್ಕೂ ನಿರೂಪಿಸುವುದಿಲ್ಲ".

ನಿಮ್ಮ ಮಹದುದ್ದೇಶದ ಬಗೆಗೆ ನಿಮ್ಮ ಆಪ್ತರೆಲ್ಲರಿಗೂ ಆನಂದವಾಗಿರಲೇಬೇಕಲ್ಲವೆ?

"ಇಲ್ಲ, ಎಲ್ಲರಿಗೂ ಆಗಲಿಲ್ಲ. ಎಷ್ಟೋ ತರಹ ಮಿತ್ರರಿರುತ್ತಾರೆ. ನನ್ನ ನಿಜವಾದ ಮಿತ್ರರು ನನ್ನ ವಯಸ್ಸಿನವರೇ ಆದವರು, ನಾನು ಇಂಗ್ಲೆಂಡಿಗೆ ಹೋಗಲಿರುವುದನ್ನು ತಿಳಿದು ತುಂಬ ಸಂತೋಷಪಟ್ಟರು. ಇನ್ನು ಕೆಲವರು ವಯಸ್ಸಾದ ಮಿತ್ರರು, ಅಥವಾ ಅವರನ್ನು ನನ್ನ ಹಿತೈಷಿಗಳು ಎನ್ನಬೇಕು, ನಾನು ಹಾಳಾಗಿ ಹೋಗುತ್ತೇನೆ, ಇಂಗ್ಲೆಂಡಿಗೆ ಹೋಗುವುದರಿಂದ ನನ್ನ ಮನೆತನಕ್ಕೇ ಅಪಕೀರ್ತಿ ತರುತ್ತೇನೆ ಎಂದು ಇವರು ಪೂರ್ವ ಕವಾಗಿ ನಂಬಿದ್ದರು. ಇನ್ನೂ ಇತರರು ಕೇವಲ ಮಾತ್ಸರ್ಯದಿಂದಲೇ ವಿರೋಧ ಒಡ್ಡಿದರು. ಅಪಾರವಾದ ಆದಾಯ ಪಡೆಯುತ್ತಿದ್ದ ಕೆಲವು ಬ್ಯಾರಿಸ್ಟರುಗಳನ್ನು ಅವರು ನೋಡಿದ್ದರು. ನಾನೂ ಹಾಗೆಯೇ ಮಾಡಬಹುದೆಂದು ಅವರ ಕಳವಳ. ಇನ್ನು ಕೆಲವರು ನಾನಿನ್ನೂ ಅತಿ ಚಿಕ್ಕವನು ಎಂದು ಹೆದರಿದರು (ಆಗ ತಾನೆ ನನಗೆ ಸುಮಾರು ಇಪ್ಪತ್ತೆರಡು ವರ್ಷ) ಅಥವಾ ಇಲ್ಲಿಯ ಹವೆಯನ್ನು ನಾನು ತಡೆಯಲಾರೆನೆಂದು ಅವರ ಚಿಂತೆ. ಸಂಕ್ಷೇಪವಾಗಿ ಹೇಳುವುದಾದರೆ, ನಾನು ಇಂಗ್ಲೆಂಡಿಗೆ ಬರುವುದರ ಪರವಾಗಿ ಅಥವಾ ವಿರುದ್ಧವಾಗಿ ಯಾವ ಇಬ್ಬರು ನನಗೆ ಬೆಂಬಲ ಕೊಡಲಿ, ಇಲ್ಲವೆ ನನ್ನನ್ನು ವಿರೋಧಿಸಲಿ. ಒಂದೇ ಕಾರಣಗಳಿಗಾಗಿ ಅಲ್ಲ ಹಾಗೆ ಮಾಡಿದ್ದು".

ನಿಮ್ಮ ಉದ್ದೇಶವನ್ನು ಸಾಧಿಸಲು ಏನು ಮಾಡಿದಿರಿ? ನಿಮಗೆ ಒದಗಿದ ಕಷ್ಟಗಳು ಯಾವುವು. ಅವುಗಳನ್ನು ಹೇಗೆ ಪರಿಹರಿಸಿಕೊಂಡಿರಿ ಎಂಬುವನ್ನೊಂದಷ್ಟು ಹೇಳಿ.

"ನನ್ನ ಕಷ್ಟಗಳ ಕಥೆಯನ್ನು ಮಾತ್ರವೇ ಹೇಳಲು ಹೊರಟರೂ ನಿಮ್ಮ ಈ ಅಮೂಲ್ಯವಾದ ಪತ್ರಿಕೆಯಲ್ಲಿ ತುಂಬಿ ಹೋಗುವಷ್ಟಾಗುತ್ತದೆ. ಅದೆಲ್ಲ ಕ್ಲೇಶ ಸಂಕಟಗಳ ಕತೆ. ಆ ಕಷ್ಟಗಳನ್ನು ರಾವಣನ ತಲೆಗೆ ಹೋಲಿಸಬಹುದೋ ಏನೋ. ಅವನು ಭಾರತದ ಮಹಾಕಾವ್ಯಗಳಲ್ಲಿ ಎರಡನೆಯ ಸ್ಥಾನ ಸಲ್ಲುವ ರಾಮಾಯಣದ ದೊಡ್ಡ ರಾಕ್ಷಸ. ನಾಯಕನಾದ ರಾಮನು ಅವನೊಡನೆ ಕಾದಿ ಅವನನ್ನು ಸೋಲಿಸಿದ. ಅವನ ತಲೆಗಳು ಹಲವು, ಅತ್ತ ಕಡಿದೆಸೆದರೆ ಇತ್ತ ಮತ್ತೆ ಹುಟ್ಟಿಕೊಳ್ಳುತ್ತಿದ್ದುವು. ನನ್ನ ಕಷ್ಟ

ಗಳನ್ನು ನಾಲ್ಕು ಗುಂಪಾಗಿ ಮಾಡಬಹುದಾಗಿತ್ತು–ಹಣ, ಹಿರಿಯರ ಸಮ್ಮತಿ, ಬಾಂಧವರಿಂದ ಅಗಲಿಕೆ ಮತ್ತು ಜಾತೀಯ ಕಟ್ಟುಪಾಡುಗಳು.

"ಮೊದಲು ಹಣದ ವಿಷಯ. ನನ್ನ ತಂದೆ ಒಂದಕ್ಕಿಂತಲೂ ಹೆಚ್ಚು ದೇಶೀಯ ಸಂಸ್ಥಾನಗಳಲ್ಲಿ ಪ್ರಧಾನ ಮಂತ್ರಿಯಾಗಿದ್ದರೂ ಅವರೆಂದೂ ಹಣವನ್ನು ಕೂಡಿಹಾಕಲಿಲ್ಲ. ತಾವು ಸಂಪಾದಿಸಿದ್ದನ್ನೆಲ್ಲ ದಾನಧರ್ಮ ಹಾಗೂ ಮಕ್ಕಳ ವಿದ್ಯಾಭ್ಯಾಸ ಮದುವೆಗಳು ಇವುಗಳಿಗೆ ವೆಚ್ಚ ಮಾಡಿಬಿಟ್ಟರು. ಹೀಗಾಗಿ ನಾವು ಹೆಚ್ಚು ಕಡಮೆ ನಿರ್ಧನಿಕರಾಗಿದ್ದೆವು. ಅವರು ಒಂದಿಷ್ಟು ಆಸ್ತಿ ಉಳಿಸಿದ್ದರು. ಅಷ್ಟೆ. ಹಣವನ್ನು ಏಕೆ ಸಂಗ್ರಹಿಸಲಿಲ್ಲ, ಮಕ್ಕಳಿಗಾಗಿ ಅದನ್ನೇಕೆ ಎತ್ತಿಡಲಿಲ್ಲ ಎಂದು ಕೇಳಿದರೆ ಅವರು ತಮ್ಮ ಮಕ್ಕಳೇ ತಮ್ಮ ಸಂಪತ್ತು ಎಂದು ಹೇಳಿ ಬಿಡುತ್ತಿದ್ದರು. ತಾವು ಹಣವನ್ನೇನಾದರೂ ಕೂಡಿಟ್ಟರೆ ತಾವೇ ಅವರನ್ನು ಕೆಡಿಸಿದಂತಾಗುತ್ತದೆ ಎನ್ನುತ್ತಿದ್ದರು. ಅಂತು ನನಗೆ ಹಣವೆಂಬುದು ಸಣ್ಣಪುಟ್ಟ ಅಡ್ಡಿಯಾಗಿರಲಿಲ್ಲ. ಸರಕಾರದ ಸ್ಕಾಲರ್‌ಷಿಪ್‌ಗಾಗಿ ಪ್ರಯತ್ನಿಸಿದೆ, ವಿಫಲನಾದೆ. ಒಂದೆಡೆಯಲ್ಲಿ, ನಾನು ಪದವೀಧರನಾಗಿ ನನ್ನ ಅರ್ಹತೆ ತೋರಿಸಿ ಆಮೇಲೆ ಸ್ಕಾಲರ್‌ಷಿಪ್ಪನ್ನು ನಿರೀಕ್ಷಿಸಬೇಕೆಂದು ಹೇಳಿದರು. ಹಾಗೆ ಹೇಳಿದ ದೊಡ್ಡ ಮನುಷ್ಯರ ಮಾತೇ ಸರಿ ಎಂದು ನನ್ನ ಅನುಭವ ನನಗೀಗ ಕಲಿಸಿದೆ. ಇದಕ್ಕೆಲ್ಲಾ ಸ್ವಲ್ಪವೂ ಜಗ್ಗದೆ, ನಾನು ನನ್ನ ಹಿರಿಯ ಅಣ್ಣನನ್ನು. ಆತ ಉಳಿಸಿದ್ದ ಹಣವೆಲ್ಲವನ್ನೂ ನನ್ನ ಇಂಗ್ಲೆಂಡಿನ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಬೇಕೆಂದು ಕೇಳಿಕೊಂಡೆ.

"ಭಾರತದಲ್ಲಿ ಪ್ರಚಲಿತವಿರುವ ಕುಟುಂಬ ವ್ಯವಸ್ಥೆಯನ್ನು ಕುರಿತು ಇಲ್ಲಿ ಹೇಳದೆ ಇರಲಾರೆ. ಅಲ್ಲಿ ಇಂಗ್ಲೆಂಡಿನಂತಲ್ಲ. ಮಕ್ಕಳು ಗಂಡು ಮಕ್ಕಳಾದರೆ ಕೊನೆಯವರೆಗೂ, ಹೆಣ್ಣು ಮಕ್ಕಳಾದರೆ ಮದುವೆಯಾಗುವವರೆಗೂ, ತಮ್ಮ ತಂದೆ ತಾಯಿಗಳೊಂದಿಗೆಯೇ ಇರುತ್ತಾರೆ. ಅವರು ಸಂಪಾದಿಸುವುದೂ ತಂದೆಗೇ ಸೇರುತ್ತದೆ. ಹಾಗೆಯೇ ಅವರಿಗೆ ನಷ್ಟವಾದರೆ ಅದೂ ಸಹ ತಂದೆಗೇ. ಅಸಾಧಾರಣ ಪರಿಸ್ಥಿತಿಗಳಲ್ಲಿ. ಉದಾಹರಣೆಗೆ ಒಂದು ಭಾರೀ ಜಗಳವಾದರೆ, ಗಂಡು ಮಕ್ಕಳೂ ಬೇರೆಯಾಗಿ ಹೋಗುವುದುಂಟು ನಿಜ. ಆದರೆ ಇಂಥ ಉದಾಹರಣೆಗಳು ಅಪವಾದಗಳು ಮಾತ್ರ. ಮೇಯ್ನ್ (Meyne)ರವರ ಮಾತಿನಲ್ಲಿ: 'ಪಾಶ್ಚಾತ್ಯರಲ್ಲಿ ವೈಯಕ್ತಿಕ ಆಸ್ತಿ ಸಾಮಾನ್ಯ ರೂಢಿ. ಕೌಟುಂಬಿಕ ಆಸ್ತಿ ಪೌರಸ್ತ್ಯ ರೂಢಿ'. ಆದ್ದರಿಂದ ನನ್ನದೇ ಎನ್ನುವ ಆಸ್ತಿಪಾಸ್ತಿ ಏನೂ ನನಗೆ ಇರಲಿಲ್ಲ, ಈಗಲೂ ಇಲ್ಲ. ಎಲ್ಲವೂ ನನ್ನ ಅಣ್ಣನ ಹತೋಟಿಯಲ್ಲಿತ್ತು. ನಾವೆಲ್ಲ ಒಟ್ಟಿಗೆ ವಾಸಿಸುತ್ತಿದ್ದೆವು.

"ಈಗ ಹಣದ ವಿಷಯಕ್ಕೆ ಹಿಂದಿರುಗೋಣ. ನನ್ನ ತಂದೆ ನನಗಾಗಿ ಏನು ಅಲ್ಪ ಸ್ವಲ್ಪ ಬಿಟ್ಟು ಹೋಗಲು ಸಾಧ್ಯವಾಗಿತ್ತೋ ಅದೂ ನನ್ನ ಅಣ್ಣನ ಕೈಯಲ್ಲೇ ಇತ್ತು. ಆತನ ಸಮ್ಮತಿಯಿಂದ ಮಾತ್ರವೇ ಅದನ್ನು ಆತನ ಕೈಯಿಂದ ಬಿಡಿಸಿಕೊಳ್ಳಬಹುದಿತ್ತು. ಅಲ್ಲದೆ ಅದು ಸಾಕಾಗುತ್ತಲೂ ಇರಲಿಲ್ಲ. ಆದ್ದರಿಂದಲೇ ಇಡೀ ಬಂಡವಾಳವನ್ನೇ ನನ್ನ ಶಿಕ್ಷಣಕ್ಕಾಗಿ ಮೀಸಲಿಡಬೇಕೆಂದು ನಾನು ಸಲಹೆ ಮಾಡಿದೆ. ಇಲ್ಲಿ ಯಾವ ಅಣ್ಣನೇ

ಆಗಲಿ ಹಾಗೆ ಮಾಡಿಯಾನೆ ಎಂದು ನಿಮ್ಮನ್ನು ನಾನು ಕೇಳುತ್ತೇನೆ. ಭಾರತದಲ್ಲೂ ಅಂತಹ ಅಣ್ಣಂದಿರು ಬಹಳ ಕಡಮೆ. ಪಾಶ್ಚಾತ್ಯ ಭಾವನೆಗಳನ್ನು ರೂಢಿಸಿಕೊಂಡು ಬಂದು ನಾನು ತೀರಾ ಅಯೋಗ್ಯ ತಮ್ಮನಾಗಿ ವರ್ತಿಸುತ್ತೇನೆಂದೂ ಹಣವನ್ನು ಪುನಃ ಪಡೆಯಬೇಕಾದರೆ ಭಾರತಕ್ಕೆ ಹಿಂದಿರುಗಿದರೆ ಮಾತ್ರವೇ ಸಾಧ್ಯವೆಂದೂ, ಹಾಗಾಗು ವುದು ಬಹಳ ಸಂಶಯಾಸ್ಪದವೆಂದೂ ಆತನಿಗೆ ಜನ ಹೇಳಿಕೊಟ್ಟರು. ಆದರೆ ಆತ ಯುಕ್ತವಾದ ಮತ್ತು ಸದುದ್ದೇಶದಿಂದ ಕೊಟ್ಟಂಥ ಈ ಎಲ್ಲ ಎಚ್ಚರಿಕೆಗಳಿಗೂ ಕಿವುಡಾದ. ನನ್ನ ಯೋಜನೆಗೆ ಹಾಕಿದ್ದು ಒಂದು ಷರತ್ತು, ಒಂದೇ ಒಂದು, ನನ್ನ ತಾಯಿ ಮತ್ತು ನನ್ನ ಚಿಕ್ಕಪ್ಪ ಈ ಇಬ್ಬರ ಸಮ್ಮತಿ ಪಡೆಯಬೇಕು ಎಂಬುದು. ನನ್ನ ಅಣ್ಣನಂತಹ ಅಣ್ಣಂದಿರೇ ಬಹು ಜನರಿಗೆ ಇರಲಿ! ಆಮೇಲೆ ಮುಂದಿನ ಕೆಲಸಕ್ಕೆ ತೊಡಗಿದೆ. ಮತ್ತೆ ಅದೂ ಒಂದು ದೊಡ್ಡ ಬೆಟ್ಟವೇ ಆಗಿತ್ತೆಂದು ನಿಮಗೆ ಖಂಡಿತ ಹೇಳಬೇಕು. ಅದೃಷ್ಟಕ್ಕೆ ನಾನು ನನ್ನ ತಾಯಿಗೆ ಮುದ್ದಿನ ಮಗ. ಆಕೆಗೆ ನನ್ನಲ್ಲಿ ತುಂಬ ನಂಬಿಕೆ. ಅದ್ದರಿಂದ ಆಕೆಯ ಮೂಢ ನಂಬಿಕೆಯನ್ನು ಹೋಗಲಾಡಿಸಲು ಸಮರ್ಥನಾದೆ. ಆದರೆ ಮೂರು ವರ್ಷಗಳ ಅಗಲಿಕೆಗೆ ಆಕೆ ಒಪ್ಪಿ ತಲೆದೂಗುವಂತೆ ಮಾಡುವುದು ಹೇಗೆ? ಇಂಗ್ಲೆಂಡಿಗೆ ಬರುವುದರಿಂದ ಆಗುವ ಅನುಕೂಲಗಳನ್ನು ತುಂಬ ಉತ್ಪ್ರೇಕ್ಷೆ ಮಾಡಿ, ಆಕೆ ತೀರ ಒಲ್ಲದ ಮನಸ್ಸಿನಿಂದ ನನ್ನ ಕೋರಿಕೆಗೆ ಒಪ್ಪುವಂತೆ ಮಾಡಿದೆ. ಇನ್ನು ಚಿಕ್ಕಪ್ಪನ ವಿಚಾರ. ಅವರು ವಾರಣಾಸಿ ಮುಂತಾದ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಹೊರಡುವುದರಲ್ಲಿದ್ದರು. ಮೂರು ದಿನ ಒಂದೇ ಸಮನೆ ಅವರನ್ನು ಪುಸಲಾಯಿಸಿ, ವಾದಿಸಿ ಕೊನೆಗೂ ಅವರಿಂದ ಈ ಉತ್ತರ ಪಡೆದದ್ದಾಯಿತು:

"ನಾನು ಯಾತ್ರೆ ಹೋಗುತ್ತಿದ್ದೇನೆ. ನೀವು ಹೇಳುತ್ತಿರುವುದೆಲ್ಲ ಸರಿಯೇ ಇರ ಬಹುದು. ಆದರೆ ನಿನ್ನ ಅಪವಿತ್ರ ಉದ್ದೇಶಕ್ಕೆ ನಾನು ಇಚ್ಛಾಪೂರ್ವಕವಾಗಿ 'ಆಗಲಿ' ಎನ್ನುವುದು ಹೇಗೆ? ಒಂದು ಮಾತನ್ನು ನಾನು ಹೇಳಬಲ್ಲೆ. ನೀನು ಹೋಗುವುದು ನಿನ್ನ ತಾಯಿಗೇನೂ ಅಡ್ಡಿಯಿಲ್ಲದಿದ್ದರೆ ಸರಿ, ನಡುವೆ ತಲೆ ಹಾಕಲು ನನಗೇನೂ ಹಕ್ಕಿಲ್ಲ".

"ಈ ಉತ್ತರಕ್ಕೆ 'ಆಗಲಿ' ಎಂದೇ ಅನುಕೂಲವಾದ ಅರ್ಥ ಕಲ್ಪಿಸಲಾಯಿತು. ಇವರಿಬ್ಬರನ್ನಷ್ಟೇ ಅಲ್ಲ ನಾನು ಒಪ್ಪಿಸಬೇಕಾಗಿದದ್ದು. ಭಾರತದಲ್ಲಿ ಎಲ್ಲರೂ, ಅದೆಷ್ಟೇ ದೂರದ ಸಂಬಂಧಿಗಳಾಗಿರಲಿ, ಇನ್ನೊಬ್ಬರ ವ್ಯವಹಾರದಲ್ಲಿ ತಲೆ ಹಾಕುವುದು ತಮ್ಮ ಹಕ್ಕು ಎಂದು ತಿಳಿದಿದ್ದಾರೆ. ಆದರೆ ನಾನು ಈ ಇಬ್ಬರಿಂದ ಸಮ್ಮತಿಯನ್ನು ಬಲಾತ್ಕಾರ ವಾಗಿ ಪಡೆದುಕೊಂಡ ಮೇಲೆ—ಅದು ಬಲಾತ್ಕಾರವೇ ಹೊರತು ಬೇರೇನೂ ಅಲ್ಲ— ಕಷ್ಟಗಳು ಹೆಚ್ಚು ಕಡಮೆ ಮಾಯವೇ ಆದುವು.

"ಎರಡನೆಯ ಗುಂಪಿನ ಕಷ್ಟಗಳನ್ನು ಈಗಾಗಲೇ ಮೇಲೆ ಚರ್ಚಿಸಲಾಗಿದೆ. ನಾನೊಬ್ಬ ವಿವಾಹಿತನೆಂದು ಕೇಳಿದರೆ ನಿಮಗೆ ತೀರ ಆಶ್ಚರ್ಯವಾಗಬಹುದು. ಈ ಮದುವೆ ನನ್ನ ಹನ್ನೆರಡನೆಯವರ್ಷದಲ್ಲೇ ನಡೆದು ಹೋಯಿತು. ನನ್ನ ಹೆಂಡತಿಯ ತಾಯಿತಂದೆಗಳು ತಮ್ಮ ಮಗಳಿಗೋಸ್ಕರವಾದರೂ ನಡುವೆ ಪ್ರವೇಶಿಸುವ ಹಕ್ಕು

ತಮಗೂ ಇದೆಯೆಂದು ಭಾವಿಸಿದ್ದರೆ ಅವರನ್ನು ಹೇಗೆ ದೂರಲು ಸಾಧ್ಯ? ಅವಳನ್ನು ನೋಡಿಕೊಳ್ಳುವವರಾರು? ಈ ಮೂರು ವರ್ಷ ಕಾಲವನ್ನೆಲ್ಲ ಅವಳು ಹೇಗೆ ಕಳೆಯಲು ಸಾಧ್ಯ? ಆಕೆಯನ್ನು ನೋಡಿಕೊಳ್ಳುವುದೂ ನನ್ನ ಅಣ್ಣನ ಪಾಲಿಗೇ ಬಂದಿತ್ತೆಂದು ಹೇಳಲೇಬೇಕಾಗಿಲ್ಲ. ನನ್ನ ಅಣ್ಣನ ಬಗೆಗೆ ಅಯ್ಯೋ ಪಾಪ ಎನ್ನಬೇಕು. ಆದರೆ ನನ್ನ ಆಗಿನ ಭಾವನೆಗಳ ಪ್ರಕಾರ ನನ್ನ ಅತ್ತೆ ಮಾವಂದಿರ ನ್ಯಾಯವಾದ ಹೆದರಿಕೆಗಳನ್ನೂ ಗುರುಗುಟ್ಟುವಿಕೆಯನ್ನೂ ಬಹುಶಃ ಸ್ವಲ್ಪವೂ ಲಕ್ಷಿಸುತ್ತಲೇ ಇರಲಿಲ್ಲ. ಆದರೆ ಅವರ ಅಸಮಾಧಾನವೆಲ್ಲ ನನ್ನ ತಾಯಿ ಮತ್ತು ಅಣ್ಣ ಇವರ ಮೇಲೆ ಬೀಳುವ ಭಯವೊಂದಿತ್ತು. ಒಂದು ರಾತ್ರಿಯ ಮೇಲಿನ್ನೊಂದು ರಾತ್ರಿ ಹೀಗೆ ನನ್ನ ಮಾವನವರೊಂದಿಗೆ ಕುಳಿತು ಅವರ ಅಪೇಕ್ಷೆಗಳನ್ನು ಕೇಳಿ ಅವುಗಳಿಗೆ ಯಶಸ್ವಿಯಾಗಿ ಉತ್ತರ ಕೊಡುವುದು ಅಷ್ಟೇನೂ ಸುಲಭದ ಕೆಲಸವಾಗಿರಲಿಲ್ಲ. 'ಸಹನೆಯೂ ಸತತ ಪ್ರಯತ್ನವೂ ಇದ್ದರೆ ಬೆಟ್ಟಗಳನ್ನೂ ಗೆಲ್ಲಬಹುದು' ಎಂಬ ಗಾದೆಯಂತಿದ್ದೆ ನಾನು. ಆದ್ದರಿಂದ ನನ್ನ ಪಟ್ಟನ್ನು ಬಿಡಲು ನನಗೆ ಸಾಧ್ಯವಿರಲಿಲ್ಲ.

"ಹಣವೂ ಒದಗಿ, ಅಗತ್ಯವಾದ ಅನುಮತಿಯೂ ದೊರೆತ ಮೇಲೆ ನನ್ನಲ್ಲಿನೇನಾ, ಅಂದುಕೊಂಡೆ: 'ನನಗೆ ಪ್ರಿಯವೂ ನಿಕಟವೂ ಆದ ಎಲ್ಲವನ್ನೂ ಅಗಲುವುದೆಂತು.' ಭಾರತೀಯರಾದ ನಮಗೆ ಅಗಲಿಕೆಯೆಂದೊಡನೆ ಹಿಂದೆಗೆಯುತ್ತೇವೆ. ನಾನು ಮನೆ ಬಿಟ್ಟು ಕೆಲವೇ ದಿನ ಹೋಗಬೇಕಾದರೂ ನನ್ನ ತಾಯಿ ಅತ್ತುಬಿಡುತ್ತಿದ್ದರು. ಹೀಗಿರುವಾಗ ಆ ಹೃದಯಭೇದಕ ದೃಶ್ಯವನ್ನು, ಏನೊ ವಿಕಾರಕ್ಕೊಳಗಾಗದೆಯೇ, ನಾನು ನೋಡುತ್ತಿರುವುದೆಂತು? ನನ್ನ ಮನಸ್ಸು ಆಗ ಅನುಭವಿಸಬೇಕಾಗಿ ಬಂದ ಚಿತ್ರಹಿಂಸೆಯನ್ನು ವರ್ಣಿಸುವುದು ನನಗೆ ಸಾಧ್ಯವೇ ಇಲ್ಲ. ಬೀಳ್ಕೊಳ್ಳುವ ದಿನ ಹತ್ತಿರವಾದಂತೆಲ್ಲ ನಾನು ಹೆಚ್ಚು ಕಡಮೆ ಅಧೀರನೇ ಆದೆ. ಆದರೆ ಇದನ್ನು ಯಾರಿಗೂ, ನನ್ನ ಅತಿ ನಿಕಟ ಮಿತ್ರರಿಗೂ ಬಿಟ್ಟೂ ಕೊಡಲಿಲ್ಲ, ಅಷ್ಟು ವಿವೇಕವಿತ್ತು. ನನ್ನ ಆರೋಗ್ಯ ಕೆಡುತ್ತಿತ್ತೆಂದೂ ನನಗೆ ಗೊತ್ತಿತ್ತು. ನಿದ್ದೆ, ಎಚ್ಚರ, ಅನ್ನಪಾನ, ಓಡಾಟ, ಓದು ಈ ಎಲ್ಲ ವೇಳೆಯಲ್ಲೂ ನಾನು ಇಂಗ್ಲೆಂಡಿನ ಕನಸನ್ನೇ ಕಾಣುತ್ತಿದ್ದೆ. ಅದನ್ನು ಕುರಿತೇ ಚಿಂತಿಸುತ್ತಿದ್ದೆ. ಆ ಮಹತ್ವದ ದಿನ ಬಂದಾಗ ನಾನು ಹೇಗೆ ವರ್ತಿಸಬಹುದು ಎಂದೇ ಯೋಚಿಸುತ್ತಿದ್ದೆ. ಕಡೆಗೂ ಆ ದಿನ ಬಂದೇ ಬಂತು. ಒಂದು ಕಡೆ ನನ್ನ ತಾಯಿ ಕಣ್ಣೀರು ತುಂಬಿದ ಮುಖವನ್ನು ತಮ್ಮ ಕೈಗಳಿಂದ ಮುಚ್ಚಿಕೊಂಡಿದ್ದರು. ಆದರೂ ಆಕೆ ಬಿಕ್ಕಿ ಬಿಕ್ಕಿ ಅಳುತ್ತಿರುವುದು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಇನ್ನೊಂದು ಕಡೆ ಸುಮಾರು ಐವತ್ತು ಜನ ಸ್ನೇಹಿತರ ನಡುವೆ ನನ್ನನ್ನು ನಿಲ್ಲಿಸಲಾಯಿತು. 'ನಾನು ಅತ್ತರೆ ನಾನು ತೀರ ದುರ್ಬಲನೆಂದು ಅವರಂದು ಕೊಂಡಾರು ಇಂಗ್ಲೆಂಡಿಗೆ ಹೋಗಲೂ ಬಿಡದೆ ಹೋದಾರು' ಎಂದು ನನ್ನೊಳಗೇ ಹೇಳಿಕೊಳ್ಳುತ್ತ ಹೃದಯ ಬಿರಿಯುತ್ತಿದ್ದರೂ ನಾನು ಅಳಲಿಲ್ಲ. ಕೊನೆಗೆ, ನನ್ನ ಪಾಲಿಗೆ ಕೊನೆ ಹೇಗಾದೀತು, ನನ್ನ ಹೆಂಡತಿಯಿಂದ ಬೀಳ್ಕೊಳ್ಳುವಿಕೆ. ಸ್ನೇಹಿತರ ಎದುರಿಗೆಲ್ಲ ಆಕೆಯನ್ನು ನೋಡುವುದೇ ಆಗಲಿ, ಆಕೆಯೊಡನೆ ಮಾತನಾಡುವುದೇ ಆಗಲಿ ರೂಢಿಗೆ ವಿರುದ್ಧ

ವಾಗುತ್ತಿತ್ತು. ಆದ್ದರಿಂದ ಏಕಾಂತವಾದೊಂದು ಕೊಠಡಿಯಲ್ಲೇ ಆಕೆಯನ್ನು ನಾನು ನೋಡಬೇಕಾಯಿತು. ಆಕೆ, ಆಗಲೇ, ಬಹಳ ಹೊತ್ತಿನಿಂದಲೆ ಬಿಕ್ಕಿ ಬಿಕ್ಕಿ ಅಳ ತೊಡಗಿ ಯಾಗಿತ್ತೆಂಬುದು ತಿಳಿದ ವಿಷಯವೇ. ಪತ್ತಿರಕ್ಕೆ ಹೋಗಿ ನಿಂತುಕೊಂಡೆ. ಒಂದುಕ್ಷಣ ಮೂಕಪ್ರತಿಮೆಯ ಹಾಗೆ ನಿಂತುಕೊಂಡೆ. ಆಕೆಯನ್ನು ಚುಂಬಿಸಿದೆ. 'ಹೋಗಬೇಡಿ' ಎಂದಾಕೆ ಹೇಳಿದಳು.

ಜೂನ್ ೧೩, ೧೯೪೧

ಗಾಂಧಿಯವರ ಕಥನ

ಇಂಗ್ಲೆಂಡಿಗೆ ಬಂದಾಗ ಮಾಂಸಾಹಾರದ ಸಮಸ್ಯೆ ನಿಮ್ಮೆದುರು ನಿಂತಿರಲೇ ಬೇಕಲ್ಲವೆ? ನೀವದನ್ನು ಹೇಗೆ ಪರಿಹರಿಸಿಕೊಂಡಿರಿ?

"ಪುಕ್ಕಟೆ ಸಲಹೆಗಳ ಸುರಿಮಳೆ ನನ್ನ ಮೇಲೆ ಬಿತ್ತು. ಸದುದ್ದೇಶವುಳ್ಳ, ಆದರೂ ಏನೂ ಅರಿಯದ, ಮಿತ್ರರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಇಷ್ಟವಿಲ್ಲದ ನನ್ನ ಕಿವಿಗಳಿಗೆ ತುರುಕಿದರು. ಅದರಲ್ಲಿ ಬಹುಪಾಲು ಜನ ಆ ಶೀತಹವೆಯಲ್ಲಿ ಮಾಂಸವನ್ನು ತಿನ್ನದೇ ನಾನು ಬದುಕುವುದೇ ಅಸಾಧ್ಯ ಎಂದು ಹೇಳಿದರು. ನನಗೆ ಕ್ಷಯರೋಗ ಬಂದೇ ಬಿಡುವುದೆಂದರು. ಮಾನ್ಯ 'ಕ' ಅವರು ಇಂಗ್ಲೆಂಡಿಗೆ ಹೋದರಂತೆ, ತಮ್ಮ ಹುಚ್ಚು ಸಾಹಸ ದಿಂದಾಗಿ ಅವರು ಆ ವ್ಯಾಧಿಯನ್ನು ತಂದುಕೊಂಡರಂತೆ. ಇನ್ನು ಕೆಲವರು ನಾನು ಮಾಂಸವನ್ನು ಬಿಟ್ಟಿದ್ದರೂ ಇರಬಹುದು, ಆದರೆ ವೈನು ಕುಡಿಯದೆ ಮಾತ್ರ ಓಡಾಡಲೂ ಸಾಧ್ಯವಿಲ್ಲ ಎಂದರು. ಚಳಿಯಿಂದ ಮೈಯೆಲ್ಲ ಸೆಡೆದು ಹೋಗುತ್ತದೆ ಎಂದರು. ವಿಡಸ್ ಬಿಟ್ಟೆನೆಂದರೆ ತೀರಿತು, ನನಗದು ಅಗತ್ಯವಾಗುತ್ತದೆಂದೂ ಬುದ್ಧಿ ಹೇಳುವಷ್ಟು ಮುಂದೆ ಹೋದರು. ಇನ್ನೊಬ್ಬರು ಮಿತ್ರರು ನಾನು ಧೂಮಪಾನ ಮಾಡಬೇಕೆಂದರು. ಏಕೆಂದರೆ ಅವರ ಮಿತ್ರರೊಬ್ಬರು ಇಂಗ್ಲೆಂಡಿನಲ್ಲಿ ಧೂಮಪಾನ ಮಾಡಲೇ ಬೇಕಾಯಿತಂತೆ. ಇಂಗ್ಲೆಂಡಿಗೆ ಹೋಗಿ ಬಂದಿದ್ದ ವೈದ್ಯ ವೃತ್ತಿಯ ಜನ ಕೂಡ ಇದೇ ಕಥೆ ಹೇಳಿದರು. ಆದರೂ, ಇಂಗ್ಲೆಂಡಿಗೆ ಏನೇ ಆಗಲಿ ಬರಲೇಬೇಕೆಂದು ಸಂಕಲ್ಪಿಸಿದ್ದ ನಾನು ಇವೆಲ್ಲವನ್ನೂ ವರ್ಜಿಸಿರಲು ಶಕ್ತಿಮೀರಿ ಪ್ರಯತ್ನ ಮಾಡುವೆನೆಂದೂ. ಆದರೆ ಇವೆಲ್ಲ ಅನಿವಾರ್ಯವೇ ಆದಲ್ಲಿ ಏನು ಮಾಡುವೆನೋ ತಿಳಿಯದೆಂದೂ ಉತ್ತರ ಕೊಟ್ಟೆ. ಮಾಂಸಾಹಾರದ ವಿಷಯ ದಲ್ಲಿ ನನ್ನ ಜಿಗುಪ್ಸೆ ಈಗಿರುವಷ್ಟು ತೀವ್ರವಾಗಿರಲಿಲ್ಲ ಆಗ ಎಂಬುದನ್ನು ನಾನಿಲ್ಲಿ ಹೇಳ ಬಹುದು. ನನ್ನ ಮಿತ್ರರೇ ನನ್ನ ಹಿತವನ್ನು ಚಿಂತಿಸಲು ನಾನವರಿಗೆ ಅವಕಾಶಕೊಟ್ಟು ಬಿಟ್ಟಿದ್ದಾಗ, ಆರೇಳು ಸಲ ವಂಚಿತ ನಾನಾಗಿನು, ಮಾಂಸ ತಿಂದಿದ್ದೆ. ಆದರೆ ಜಹಜಿನಲ್ಲಿ ದ್ದಾಗ ನನ್ನ ಭಾವನೆಗಳು ಬದಲಾಗತೊಡಗಿದುವು. ಏನೇ ಬರಲಿ, ಮಾಂಸ ತಿನ್ನಲೇ ಬಾರದ್ದೆಂದು ಯೋಚಿಸಿದ್ದೆ. ನನ್ನ ನಿರ್ಗಮನಕ್ಕೆ ಸಮ್ಮತಿ ಕೊಡುವ ಮುಂಚೆ ನನ್ನ ತಾಯಿ ನನ್ನಿಂದ ಹಠಮಾಡಿ ಈ ವಚನ ತೆಗೆದುಕೊಂಡಿದ್ದರು. ನಾನು ಮಾಂಸವನ್ನು ತಿನ್ನು ವುದಿಲ್ಲ ಎಂದು. ಅದ್ದರಿಂದ ನಾನು, ಆ ಶಪಥಕ್ಕಾಗಿಯಾದರೂ. ಮಾಂಸ ತಿನ್ನದಿರಲು

ಕಟ್ಟುಬಿದ್ದೆ. ಜಹಜಿನಲ್ಲಿದ್ದ ಸಹಪ್ರಯಾಣಿಕರು ನನಗೂ, ನನ್ನ ಜೊತೆಯಲ್ಲಿದ್ದ ಒಬ್ಬ ಮಿತ್ರನಿಗೂ ಮಾಂಸ ತಿಂದು ನೋಡಿ ಎಂದು ಬುದ್ಧಿ ಹೇಳತೊಡಗಿದರು.

"ಏಡನ್ ಬಿಟ್ಟ ಮೇಲೆ ನನಗದು ಬೇಕೇ ಬೇಕಾಗುವುದಾಗಿ ಅವರು ಹೇಳಿದರು. ಈ ಮಾತು ಸುಳ್ಳಾದ ಮೇಲೆ, ಕೆಂಪು ಸಮುದ್ರ ದಾಟಿದ ಮೇಲೆ, ನನಗದು ಬೇಕೇ ಆಗುತ್ತದೆಂದಾಯಿತು. ಇದೂ ಸುಳ್ಳೆಂದು ರುಜುವಾತಾದ ಮೇಲೆ ಸಹಪ್ರಯಾಣಿಕ ನೊಬ್ಬ ಹೇಳಿದ: 'ಇದುವರೆಗೂ ಹವೆ ಪ್ರತಿಕೂಲವಾಗಿರಲಿಲ್ಲ. ಆದರೆ ಬಿಸ್ಕೇ ಕೊಲ್ಲಿ ಯಲ್ಲಿ, ಮಾಂಸ ವೈನುಗಳನ್ನು ಸೇವಿಸಬೇಕು, ಇಲ್ಲವೇ ಸಾವನ್ನಪ್ಪಬೇಕು' ಎಂಬುದಾಗಿ. ಈ ವಿಪತ್ತೂ ಸುರಕ್ಷಿತವಾಗಿ ಕಳೆದೇ ಹೋಯಿತು. ಲಂಡನಿನಲ್ಲೂ ಇಂಥವೇ ಹಿತವಾದಗಳನ್ನು ನಾನು ಕೇಳಬೇಕಾಯಿತು. ತಿಂಗಳುಗಟ್ಟಲೆ ನನಗೆ ಯಾವ ಸಸ್ಯಾಹಾರಿಯೂ ಸಿಕ್ಕಲಿಲ್ಲ. ಸಸ್ಯಾಹಾರವೇ ಸಾಕು ಎಂಬ ವಿಷಯವಾಗಿ ಮಿತ್ರನೊಬ್ಬ ನೊಂದಿಗೆ ವಾದಿಸುತ್ತ ಹಲವಾರು ಕಳವಳದ ದಿನಗಳನ್ನು ಕಳೆದೆ. ಆದರೆ ಆ ಕಾಲದಲ್ಲಿ ನನಗೆ ಸಸ್ಯಾಹಾರದ ಪರವಾಗಿ ಮಾನವೀಯ ದೃಷ್ಟಿಯೊಂದಲ್ಲದೆ ಬೇರೆ ಯಾವ ವಾದ ಗಳೂ ಗೊತ್ತಿರಲಿಲ್ಲ. ಆದ್ದರಿಂದ ಇಂಥ ಚರ್ಚೆಗಳಲ್ಲಿ ನನ್ನ ಮಿತ್ರನು ಈ ಮಾನವೀಯ ಯುತೆಯ ಭಾವನೆಯನ್ನು ಜರಿಯುತ್ತಿದ್ದಾಗ ನಾನೇ ಸೋಲಬೇಕಾಗುತ್ತಿತ್ತು. ಕಟ್ಟ ಕಡೆಗೆ, ನನ್ನ ತಾಯಿಗೆ ಕೊಟ್ಟ ಮಾತನ್ನು ಮುರಿಯುವುದರ ಬದಲು ಸತ್ತಾದರೂ ಹೋದೇನು ಎಂದು ಹೇಳಿ ಅವನ ಬಾಯಿ ಮುಚ್ಚಿಸಿದೆ. 'ಹುಮ್, ಬರಿಯ ಬಾಲಿಶ ಬುದ್ಧಿ, ಶುದ್ಧ ಮೂಢ ನಂಬಿಕೆ. ಆದರೆ ಇಲ್ಲಿಗೆ ಬಂದ ಮೇಲೂ ನೀನು ಅರ್ಥಶೂನ್ಯ ವಾದದ್ದನ್ನೆಲ್ಲ ನಂಬುವಷ್ಟು ಮೂಢನಂಬಿಕೆಯುಳ್ಳವನಾದರೆ ನಾನಿನ್ನೇನೂ ಮಾಡ ಲಾರೆ. ನೀನು ಇಂಗ್ಲೆಂಡಿಗೇ ಬರದಿದ್ದರೆ ಚೆನ್ನಾಗಿತ್ತು, ಅಷ್ಟೆ', ಎಂದ ಆತ.

"ಇನ್ನು ಮುಂದೆ ಅವನು ಈ ವಿಷಯವಾಗಿ ನನಗೆಂದೂ ಒತ್ತಾಯಪಡಿಸಲಿಲ್ಲ. ಒಂದೇ ಒಂದು ಸಲ ಮಾಡಿದ್ದರೂ ಇರಬಹುದು. ಅಲ್ಲಿಂದಾಚೆ ನನ್ನನ್ನು ಶುದ್ಧ ಮುಠ್ಠಾ ಳನೇ ಹೊರತು ಅದಕ್ಕಿಂತ ಮೇಲಾದವನಲ್ಲವೆಂದು ಭಾವಿಸಿದ. ಈ ಮಧ್ಯೆ ಒಮ್ಮೆ, ನಾನು ಒಂದು ಸಸ್ಯಾಹಾರಿ ಉಪಾಹಾರ ಗೃಹವೊಂದನ್ನು ಹಾದು ಹೋದದ್ದು ನೆನಪಿದೆ. ಅದರ ಹೆಸರು 'ಪಾರಿಜ್‌ಚಾಲ್'. ಒಬ್ಬ ಗೃಹಸ್ಥರನ್ನು ಅಲ್ಲಿಗೆ ದಾರಿ ತೋರಿಸಿ ಎಂದು ಕೇಳಿಕೊಂಡೆ. ಆದರೆ ಅಲ್ಲಿಗೆ ತಲುಪುವ ಬದಲು 'ಸೆಂಟ್ರಲ್' ಉಪಾಹಾರ ಗೃಹವನ್ನು ಕಂಡೆ. ಅಲ್ಲಿಗೆ ಹೋಗಿ, ಮೊಟ್ಟ ಮೊದಲ ಬಾರಿ ಸ್ವಲ್ಪ ಪಾರಿಜ್ ತೆಗೆದು ಕೊಂಡೆ. ಮೊದಲದು ಅಷ್ಟಾಗಿ ಹಿಡಿಸಲಿಲ್ಲ. ಆದರೆ ಎರಡನೆಯ ಸಲ ಬಡಿಸಿದ ಕಡುಬು ನನಗೆ ಹಿಡಿಸಿತು. ಸಸ್ಯಾಹಾರವನ್ನು ಕುರಿತ ಸಾಹಿತ್ಯವನ್ನು ಮೊದಲ ಬಾರಿಗೆ ನಾನು ಕೊಂಡು ಕೊಂಡದ್ದು ಇಲ್ಲಿಯೇ. ಎಚ್. ಎಸ್. ಸಾಲ್ಟ್‌ರವರ 'ಶಾಕಾಹಾರದ ಪರವಾಗಿ ಒಂದು ಮನವಿ' (A Plea for Vegetarianism) ಎಂಬ ಪುಸ್ತಕದ ಒಂದು ಪ್ರತಿಯೂ ಅದರಲ್ಲಿತ್ತು. ಅದನ್ನು ಓದಿದ ಮೇಲೆ ಶಾಕಾಹಾರವನ್ನು ನಾನು ತತ್ತ್ವಶಃ ಅವಲಂಬಿಸಿದೆ. 'ಅಲ್ಲಿಯ ವರೆಗೂ ಮಾಂಸಾಹಾರವು ವೈಜ್ಞಾನಿಕ ದೃಷ್ಟಿಯಿಂದ

ಮೇಲುಮಟ್ಟದ್ದು ಎಂದೇ ನನ್ನ ಭಾವನೆಯಾಗಿತ್ತು. ಅಲ್ಲದೆ ನನಗೆ ಮ್ಯಾಂಚೆಸ್ಟರಿನ ಶಾಕಾಹಾರ ಸಂಘ (Vegetarian Society)ವಿರುವುದು ತಿಳಿದದ್ದೂ ಅಲ್ಲಿಯೇ. ಆದರೆ ನಾನು ಅದರಲ್ಲಿ ಸಕ್ರಿಯ ಆಸಕ್ತಿಯನ್ನೇನೂ ತಳೆಯಲಿಲ್ಲ. ಆಗೊಮ್ಮೆ ಈಗೊಮ್ಮೆ 'ವಿಜಿಟೇರಿಯನ್ ಮೆಸೆಂಜರ್' (Vegetarian Messenger) ಪತ್ರಿಕೆಯನ್ನು ಓದುತ್ತಿದ್ದೆ, ಅಷ್ಟೆ. ಈ ಪತ್ರಿಕೆಯ ಬಗೆಗೆ ನನ್ನ ಪರಿಚಯ ಇದೀಗ ಒಂದೂವರೆ ವರ್ಷದಿಂದ. ಅಂತರರಾಷ್ಟ್ರೀಯ ಶಾಕಾಹಾರಿಗಳ ಸಮ್ಮೇಳನದಲ್ಲಿಯೇ ನನಗೆ ಲಂಡನ್ ವೆಜಿಟೇರಿಯನ್ ಸೊಸೈಟಿಯ ವಿಷಯ ತಿಳಿದದ್ದು. ನನ್ನ ವಿಷಯವಾಗಿ ನನ್ನ ಮಿತ್ರರೊಬ್ಬರಿಂದ ಕೇಳಿದ್ದ ಜೊಸಿಯ ಓಲ್ಡ್ ಫೀಲ್ಡ್‌ನವರ ದಯೆಯಿಂದ ನನಗೆ ಈ ಸಮ್ಮೇಳನ ಸೇರಿದೆಯೆಂದು ತಿಳಿಯಿತು. ಅವರು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವ ಉಪಕಾರ ಮಾಡಿದರು.

"ಮುಕ್ತಾಯವಾಗಿ ಈ ಮಾತನ್ನು ನಾನು ಹೇಳಲೇ ಬೇಕು. ಇಂಗ್ಲೆಂಡಿನಲ್ಲಿ ನಾನು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟೋ ಕೆಲಸಗಳನ್ನು ಮಾಡದೆ ಬಿಟ್ಟಿದ್ದೇನೆ. ಆದರೂ ಒಂದು ದೊಡ್ಡ ಸಮಾಧಾನದಿಂದ ಹಿಂದಿರುಗುತ್ತೇನೆ. ಅದೆಂದರೆ, ಮಾಂಸವನ್ನಾಗಲಿ ಮದ್ಯವನ್ನಾಗಲಿ ಸೇವಿಸದೆಯೇ ನಾನು ಹಿಂದಿರುಗುತ್ತಿರುವೆನೆಂಬುದು. ಅಲ್ಲದೆ, ನನ್ನ ಸ್ವಂತ ಅನುಭವದಿಂದ ಇಂಗ್ಲೆಂಡಿನಲ್ಲಿ ಎಷ್ಟೋ ಮಂದಿ ಶುದ್ಧ ಸಸ್ಯಾಹಾರಿಗಳಿದ್ದಾರೆ ಎಂಬುದನ್ನು ಕಂಡುಕೊಂಡಿದ್ದೇನೆ.

ಜೂನ್ ೨೦, ೧೮೯೧

ಗಾಂಧೀಜಿ ಮತ್ತು ಟಾಲ್‌ಸ್ಟಾಯ್ ಅವರ ನಡುವೆ ಈ ಕೆಳಗಿನ ಪತ್ರ ವ್ಯವಹಾರ ನಡೆಯಿತು. ಮುಂದೆ ಉದ್ಧರಿಸಿರುವ ಟಾಲ್‌ಸ್ಟಾಯ್ ಆವರ ಕೊನೆಯ ಪತ್ರವೂ ಸೇರಿದಂತೆ ಅವರ ನಡುವೆ ನಡೆದ ಪತ್ರ ವ್ಯವಹಾರದಲ್ಲಿ ಮಹತ್ವವುಳ್ಳದ್ದೆಲ್ಲ ಇಲ್ಲಿದೆ.

ವೆಸ್ಟ್‌ಮಿನಿಸ್ಟರ್ ಪ್ಯಾಲೆಸ್ ಹೊಟೇಲ್
೪, ವಿಕ್ಟೋರಿಯಾ ಸ್ಟ್ರೀಟ್
ಲಂಡನ್ ಎಸ್. ಡಬ್ಲ್ಯೂ.
ಅಕ್ಟೋಬರ್ ೧, ೧೯೦೯

ಮಾನ್ಯರೆ,

(ದಕ್ಷಿಣ ಆಫ್ರಿಕದ) ಟ್ರಾನ್ಸ್‌ವಾಲಿನಲ್ಲಿ ಹತ್ತಿರ ಹತ್ತಿರ ಮೂರು ವರ್ಷಗಳಿಂದ ಏನು ನಡೆಯುತ್ತಿದೆ ಎಂಬುದರ ಕಡೆಗೆ ತಮ್ಮ ಗಮನ ಸೆಳೆಯುವ ಸ್ವಾತಂತ್ರ್ಯ ವಹಿಸುತ್ತಿದ್ದೇನೆ.

ಆ ವಸಾಹತಿನಲ್ಲಿ ಹತ್ತಿರ ಹತ್ತಿರ ೧೩,೦೦೦ ಜನ ಬ್ರಿಟಿಷ್ ಭಾರತೀಯರಿದ್ದಾರೆ. ಈ ಭಾರತೀಯರು ಕಳೆದ ಅನೇಕ ವರ್ಷಗಳಿಂದ ವಿಧವಿಧವಾದ ಕಾನೂನಿನ ತೊಂದರೆಗಳಿಗೆ ಸಿಕ್ಕಿ ನರಳುತ್ತಿದ್ದಾರೆ. ವರ್ಣದ್ವೇಷ ಮತ್ತು ಕೆಲವು ವಿಷಯಗಳಲ್ಲಿ ಏಷ್ಯನರ ವಿರುದ್ಧ ದ್ವೇಷ ಆ ವಸಾಹತಿನಲ್ಲಿ ತೀವ್ರವಾಗಿದೆ. ಇದಕ್ಕೆ ಬಹುಮಟ್ಟಿನ ಕಾರಣ, ಏಷ್ಯನರಿಗೆ ಸಂಬಂಧಿಸಿದಂತೆ, ವ್ಯಾಪಾರದಲ್ಲಿ ಅಸೂಯೆ. ಮೂರು ವರ್ಷಗಳ ಹಿಂದೆ ಇದು ಶಿಖರವನ್ನೇ ಮುಟ್ಟಿತು. ಅದಕ್ಕೆ ಕಾರಣ ಒಂದು ಕಾನೂನು. ನನ್ನ ಮತ್ತು ಇತರ ಅನೇಕರ ಅಭಿಪ್ರಾಯದಂತೆ, ಅದು ಯಾರು ಯಾರಿಗೆ ಅನ್ವಯವಾಗುತ್ತದೆಯೋ ಅವರಿಗೆಲ್ಲ ಆ ಕಾನೂನು ಹೀನಾಯಕರವಾದದ್ದು. ಅಲ್ಲದೆ ಅವರನ್ನೆಲ್ಲ ಅಧೀರರನ್ನಾಗಿ ಮಾಡಬೇಕೆಂದೇ ಯೋಜಿಸಿದ್ದು. ಈ ಸ್ವರೂಪದ ಕಾನೂನಿಗೆ ಮಣಿಯುವುದು ನಿಜವಾದ ಧರ್ಮದ ಮನೋಭಾವಕ್ಕೆ ಅಸಂಗತವಾದುದೆಂದು ನನಗನಿಸಿತು. ಕೆಡುಕಿನ ವಿರುದ್ಧ ಪ್ರತೀಕಾರ ಮಾಡಬಾರದು ಎಂಬ ಸಿದ್ಧಾಂತದಲ್ಲಿ ನನಗೂ ನನ್ನ ಕೆಲವು ಮಿತ್ರರಿಗೂ ದೃಢವಾದ ನಂಬಿಕೆಯಿತ್ತು, ಈಗಲೂ ಇದೆ. ನಿಮ್ಮ ಬರವಣಿಗೆಗಳನ್ನು ಅಧ್ಯಯನ ಮಾಡುವ ಸುಯೋಗವೂ ನನಗೊದಗಿತ್ತು. ನನ್ನ ಮನಸ್ಸಿನ ಮೇಲೆ ಅವು ಆಳವಾದ ಮುದ್ರೆಯನ್ನು ಒತ್ತಿದುವು. ಬ್ರಿಟಿಷ್ ಭಾರತೀಯರ ಮುಂದೆ ಪರಿಸ್ಥಿತಿಯನ್ನು ಪೂರ್ಣವಾಗಿ ವಿವರಿಸಲಾಯಿತು. ಅವರು ಈ ಕಾನೂನಿಗೆ ನಾವು ಮಣಿಯ ಕೂಡದೆಂಬುದನ್ನೂ ಅದನ್ನು ಮುರಿದು ಸೆರೆಯನ್ನೇ ಆಗಲಿ ಕಾನೂನು ವಿಧಿಸಬಹುದಾದ ಬೇರೆ ಯಾವ ಕ್ಲೇಶಗಳನ್ನೇ ಆಗಲಿ ಅನುಭವಿಸಬೇಕೆಂಬುದನ್ನು ಒಪ್ಪಿಕೊಂಡರು. ಪರಿಣಾಮ ಏನಾಯಿತು ಎಂದರೆ ಈ ಭಾರತೀಯರ ಜನಸಂಖ್ಯೆಯಲ್ಲಿ ಅರ್ಧದಷ್ಟು ಹೋರಾಟದ ಕಾವನ್ನು

ಸಹಿಸಲಾರದೆ, ಸೆರೆಯ ಕಷ್ಟಗಳನ್ನು ಅನುಭವಿಸಲಾರದೆ, ಅಪಮಾನಕಾರಕ ಎಂದು ತಾವು ಭಾವಿಸಿದ ಕಾನೂನಿಗೆ ಮಣಿಯುವ ಬದಲು ಟ್ರಾನ್ಸ್‌ವಾಲನ್ನು ಬಿಟ್ಟು ಹೊರಟು ಹೋಗಿದ್ದಾರೆ. ಉಳಿದ ಅರ್ಧದಲ್ಲಿ ಹತ್ತಿರ ಹತ್ತಿರ ೨೫೦೦ ಜನ ಅಂತಸ್ಸಾಕ್ಷಿಗೋಸ್ಕರ ಸೆರೆಗೆ ಹೋಗಿದ್ದಾರೆ. ಕೆಲವರಂತೂ ಐದು ಸಲ ಹೋಗಿದ್ದಾರೆ. ಅವರಿಗೆ ನಾಲ್ಕು ದಿನ ದಿಂದ ಆರು ತಿಂಗಳ ವರೆಗೆ ಸೆರೆಮನೆಯ ಶಿಕ್ಷೆಯಾಗಿದೆ. ಹೆಚ್ಚು ಪಾಲು ಜನಕ್ಕೆ ಕಠಿಣ ಶಿಕ್ಷೆಯೇ ಆಗಿದೆ. ಅನೇಕರು ಆರ್ಥಿಕವಾಗಿ ನಿರ್ನಾಮವಾಗಿದ್ದಾರೆ. ಈಗ ನೂರಕ್ಕೂ ಹೆಚ್ಚು ಮಂದಿ ನಿಷ್ಕ್ರಿಯ ಪ್ರತಿಭಟನಕಾರರು ಟ್ರಾನ್ಸ್‌ವಾಲಿನ ಜೈಲುಗಳಲ್ಲಿ ಇದ್ದಾರೆ. ಅವರಲ್ಲಿ ಅನೇಕರು ಕಡುಬಡವರು, ದಿನವೂ ದುಡಿದು ತಿನ್ನಬೇಕಾದವರು. ಪರಿಣಾಮ ವೆಂದರೆ ಅವರ ಹೆಂಡತಿ ಮಕ್ಕಳನ್ನು ಸಾರ್ವಜನಿಕ ಚಂದಾ ಹಣದಿಂದ ಸಾಕಬೇಕಾಗಿದೆ. ಅದರಲ್ಲೂ ಬಹು ಪಾಲೆಲ್ಲ ನಿಷ್ಕ್ರಿಯ ಪ್ರತಿಭಟನಾಕಾರರಿಂದಲೇ ಎತ್ತಿದ್ದು. ಇದರಿಂದಾಗಿ ಬ್ರಿಟಿಷ್ ಇಂಡಿಯನರ ಮೇಲೆ ಹೊರಲಾರದ ಹೊರೆ ಬಿದ್ದಿದೆ. ಆದರೂ ಅವರು ನನ್ನ ಅಭಿಪ್ರಾಯದಲ್ಲಿ ಸಂದರ್ಭಕ್ಕೆ ಸರಿಯಾಗಿ ವರ್ತಿಸಿದ್ದಾರೆ. ಈ ಹೋರಾಟ ಇನ್ನೂ ಮುಂದುವರಿಯುತ್ತಿದೆ. ಅದಕ್ಕೆ ಕೊನೆ ಎಂದೋ ತಿಳಿಯದು. ನಿಷ್ಕ್ರಿಯ ಪ್ರತಿಭಟನೆಯು ಗೆಲ್ಲಬಲ್ಲುದು, ಗೆದ್ದೇ ತೀರುತ್ತದೆ, ಪಾಶವೀ ಶಕ್ತಿಯು ಸೋಲಲೇಬೇಕು ಎಂಬುವನ್ನು ನಮ್ಮಲ್ಲಿ ಕೆಲವರಾದರೂ ಅತ್ಯಂತ ಸ್ಪಷ್ಟವಾಗಿ ಕಂಡುಕೊಂಡಿದ್ದೇವೆ. ಹೋರಾಟದ ಅವಧಿಯು ಎಲ್ಲಿ ಹೆಚ್ಚುತ್ತಾ ಹೋಗಿದೆಯೋ ಅಲ್ಲಿ ಅದಕ್ಕೆ ಕಾರಣ ಬಹುಮಟ್ಟಿಗೆ ನಮ್ಮ ದೌರ್ಬಲ್ಯವೇ ಎಂಬುದೂ ನಮ್ಮ ಗಮನಕ್ಕೆ ಬಂದಿದೆ. ನಮ್ಮ ದೌರ್ಬಲ್ಯವನ್ನು ಕಂಡು ಸರ್ಕಾರವು ಉಪದ್ರವವನ್ನು ಮುಂದುವರಿಸುತ್ತಲೇ ಇದ್ದರೆ ನಾವದನ್ನು ಸಹಿಸ ಲಾರೆವು ಎಂದು ಭಾವಿಸಿರುವುದೂ ಅದರಿಂದಲೇ.

ಸಾರ್ವಭೌಮ ಸರ್ಕಾರದ ಅಧಿಕಾರಿಗಳನ್ನು ಕಂಡು ಪರಿಸ್ಥಿತಿಯನ್ನು ವಿವರಿಸಿ ಅನ್ಯಾಯಕ್ಕೆ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಮಿತ್ರರೊಬ್ಬರೊಂದಿಗೆ ನಾನು ಇಲ್ಲಿಗೆ ಬಂದಿದ್ದೇನೆ. ಸರ್ಕಾರವನ್ನು ಬೇಡಿಕೊಳ್ಳ ಕೂಡದು ಎಂಬುದನ್ನು ನಿಷ್ಕ್ರಿಯ ಪ್ರತಿಭಟನಾಕಾರರು ಕಂಡುಕೊಂಡಿದ್ದಾರೆ. ಆದರೆ ಆ ಸಮುದಾಯದ ದುರ್ಬಲ ವ್ಯಕ್ತಿ ಗಳ ಪರವಾಗಿ ಈ ನಿಯೋಗ ಬಂದಿದೆ. ಆದ್ದರಿಂದ ಇದು ಅವರ ಶಕ್ತಿಗಿಂತ ಅವರ ದೌರ್ಬಲ್ಯವನ್ನೇ ತೋರಿಸುತ್ತದೆಯೆನ್ನಬೇಕು. ಆದರೆ ಇಲ್ಲಿ ನೋಡಿದ್ದರಲ್ಲಿ ಒಂದು ಭಾವನೆ ನನಗೆ ಬಂದಿದೆ: ನಿಷ್ಕ್ರಿಯ ಪ್ರತಿಭಟನೆಯ ನೈತಿಕತೆ ಮತ್ತು ಫಲಪ್ರದತೆ ಎಂಬುದನ್ನು ಕುರಿತು ಒಂದು ಸಾರ್ವಜನಿಕ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದರೆ ಚಳುವಳಿಯನ್ನು ಅದು ಜನಪ್ರಿಯಗೊಳಿಸಿ, ಜನರಲ್ಲಿ ವಿಚಾರವನ್ನು ಮೂಡಿಸುತ್ತದೆ. ಇಲ್ಲಿ ಸೂಚಿಸಿರುವ ಈ ಸ್ಪರ್ಧೆಯ ವಿಷಯದಲ್ಲಿ ಮಿತ್ರರೊಬ್ಬರು ಅದರ ನೈತಿಕತೆಯನ್ನು ಪ್ರಶ್ನಿಸಿದ್ದಾರೆ. ಅಂತಹ ಸ್ಪರ್ಧೆಗೆ ಲೇಖನಗಳನ್ನು ಆಹ್ವಾನಿಸುವುದು ನಿಷ್ಕ್ರಿಯ ಪ್ರತಿ ಭಟನೆಯ ನಿಜವಾದ ಮನೋಭಾವಕ್ಕೆ ಅನುಗುಣವಾಗಿರುವುದಿಲ್ಲ. ಅಭಿಪ್ರಾಯವನ್ನು ಕೊಂಡುಕೊಂಡಂತಾಗುತ್ತದೆ ಎಂಬುದು ಅವರ ಭಾವನೆ. ಇದರ ನೈತಿಕತೆಯ ವಿಷಯದಲ್ಲಿ

ತಮ್ಮ ಅಭಿಪ್ರಾಯವನ್ನು ಕೃಪೆಯಿಂದ ನೀಡಿ ಉಪಕರಿಸುವಿರೆಂದು ತಮ್ಮನ್ನು ಪ್ರಾರ್ಥಿಸಬಹುದೆ? ಲೇಖನಗಳನ್ನು ಆಹ್ವಾನಿಸುವುದರಲ್ಲಿ ತಪ್ಪೇನು ಇಲ್ಲ ಎಂದು ತಾವು ಭಾವಿಸುವುದಾದರೆ, ಆ ವಿಷಯದಲ್ಲಿ ಬರೆಯಿರಿ ಎಂದು ನಾವು ಪ್ರಾರ್ಥಿಸಬಹುದಾದ ವ್ಯಕ್ತಿಗಳ ಹೆಸರುಗಳನ್ನು ದಯೆಮಾಡಿ ನೀಡಬೇಕು.

ಮತ್ತೊಂದು ವಿಷಯದಲ್ಲಿ ತಮ್ಮ ಅಮೂಲ್ಯವಾದ ಸಮಯವನ್ನು ಅತಿಕ್ರಮಿಸಬೇಕಾಗಿದೆ. ಭಾರತದಲ್ಲಿನ ಸದ್ಯದ ಅಶಾಂತ ಪರಿಸ್ಥಿತಿಯನ್ನು ಕುರಿತು ತಾವು ಒಬ್ಬ ಹಿಂದುವಿಗೆ ಬರೆದ ಪತ್ರದ ಒಂದು ಪ್ರತಿಯನ್ನು ಮಿತ್ರರೊಬ್ಬರು ನನಗೆ ಕೊಟ್ಟಿದ್ದಾರೆ. ಹೊರನೋಟದಿಂದಲೇ ಅದು ನಿಮ್ಮ ಅಭಿಪ್ರಾಯಗಳನ್ನು ನಿರೂಪಿಸುವುದೆಂದು ಕಾಣುತ್ತದೆ. ಅದರ ೨೦,೦೦೦ ಪ್ರತಿಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಚ್ಚು ಹಾಕಿಸಿ ಹಂಚಬೇಕು, ಅದನ್ನು ತರ್ಜುಮೆ ಕೂಡ ಮಾಡಿಸಬೇಕು ಎಂದು ನನ್ನ ಮಿತ್ರರ ಉದ್ದೇಶ. ಆದರೆ ಅದರ ಮೂಲಪ್ರತಿ ಸಿಕ್ಕಿಲ್ಲ. ಅದು ನಿಮ್ಮ ಪತ್ರವೇ ಎಂಬುದೂ, ಈ ನಕಲು ಕರಾರುವಾಕ್ಕಾದುದೆಂಬುದೂ ಖಚಿತವಾಗುವವರೆಗೂ ಅದನ್ನು ಅಚ್ಚು ಮಾಡುವುದು ನ್ಯಾಯವಲ್ಲ ಎಂಬುದು ನಮ್ಮ ಭಾವನೆ. ಈ ನಕಲಿನ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸುವ ಸಾಹಸ ಮಾಡುತ್ತಿದ್ದೇನೆ. ಅದು ತಮ್ಮ ಪತ್ರವೇ ಎಂಬುದನ್ನೂ, ಈ ನಕಲು ಯಥಾವತ್ತಾಗಿದೆಯೇ ಎಂಬುದನ್ನೂ, ಮೇಲೆ ಹೇಳಿದ ರೀತಿಯಲ್ಲಿ ಅದನ್ನು ಪ್ರಕಟಿಸಲು ತಮ್ಮ ಒಪ್ಪಿಗೆಯಿದೆಯೇ ಎಂಬುದನ್ನೂ ತಿಳಿಸುವ ಕೃಪೆ ಮಾಡಬೇಕಾಗಿ ಕೋರುತ್ತೇನೆ. ಆ ಕಾಗದಕ್ಕೆ ಇನ್ನೂ ಏನಾದರೂ ಸೇರಬೇಕಾಗಿದ್ದರೆ ದಯವಿಟ್ಟು ಸೇರಿಸಿ. ಒಂದು ಸಲಹೆಯನ್ನು ಮುಂದಿಡುವ ಸಾಹಸವನ್ನು ಮಾಡುತ್ತಿದ್ದೇನೆ. ಪುನರ್ಜನ್ಮದಲ್ಲಿ ನಂಬಿಕೆಯಿಡಬಾರದು ಎಂದು ತಾವು ಕೊನೆಯ ಪ್ಯಾರಾದಲ್ಲಿ ಹೇಳಿರುವಂತೆ ತೋರುತ್ತದೆ. ತಾವು ಈ ಪ್ರಶ್ನೆಯನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದಿರೋ ಹೇಗೆ ಎಂಬುದು ನನಗೆ ತಿಳಿಯದು. (ಹೀಗೆ ಹೇಳುವುದು ಅಧಿಕ ಪ್ರಸಂಗವಾಗಲಾರದೆಂದು ನಂಬಿದ್ದೇನೆ.) ಭಾರತದಲ್ಲಿ ಕೋಟ್ಯಂತರ ಜನರಿಗೆ ಜನ್ಮಾಂತರದಲ್ಲಿ ನೆಚ್ಚಿನ ನಂಬಿಕೆ ಉಂಟು, ವಾಸ್ತವವಾಗಿ ಚೀಣಾದಲ್ಲೂ ಹಾಗೆಯೇ. ಅನೇಕರಿಗೆ ಈಗ ಕೇವಲ ಗ್ರಾಂಥಿಕ ನಂಬಿಕೆಯಷ್ಟೇ ಆಗಿಲ್ಲ, ಅನುಭವದ ವಿಷಯವೇ ಆಗಿದೆ. ಬದುಕಿನ ಅನೇಕ ಅಭೇದ್ಯ ರಹಸ್ಯಗಳನ್ನು ಅದು ವಿಚಾರಪೂರ್ಣವಾಗಿ ವಿವರಿಸುತ್ತದೆ. ಟ್ರಾನ್ಸ್‌ವಾಲಿನ ಸೆರೆಮನೆಗಳ ಕಷ್ಟವನ್ನು ಅನುಭವಿಸಿದ ನಿಷ್ಕ್ರಿಯ ಪ್ರತಿಭಟನಾಕಾರರಲ್ಲಿ ಕೆಲವರಿಗೆ ಅದೇ ದೊಡ್ಡ ಸಮಾಧಾನ. ಇದನ್ನು ನಾನು ಬರೆಯುತ್ತಿರುವ ಉದ್ದೇಶ ಈ ಸಿದ್ಧಾಂತದ ಸತ್ಯತೆಯನ್ನು ನಿಮಗೆ ಮನವರಿಕೆ ಮಾಡಿಕೊಡಬೇಕೆಂದಲ್ಲ. ವರ್ಜಿಸಬೇಕೆಂದು ನೀವು ಸೂಚಿಸಿರುವ ವಿಷಯಗಳ ಪಟ್ಟಿಯಿಂದ 'ಜನ್ಮಾಂತರ'ವನ್ನು ದಯೆಮಾಡಿ ತೆಗೆಯುವಿರಾ ಎಂದು ಕೇಳುವುದಕ್ಕೆ. ಪ್ರಸ್ತುತ ಪತ್ರದಲ್ಲಿ ನೀವು ಹೆಚ್ಚಾಗಿ ಕೃಷ್ಣನ ಮಾತುಗಳನ್ನು ಉದ್ಧರಿಸಿ ಅವುಗಳಿಗೆ ಉಲ್ಲೇಖಗಳನ್ನು ನೀಡಿದ್ದೀರಿ; ಅವುಗಳನ್ನು ಯಾವ ಪುಸ್ತಕದಿಂದ ಉದ್ಧರಿಸಿದ್ದೀರಿ ? ಅದರ ಹೆಸರು ತಿಳಿಸಿದರೆ ಉಪಕಾರವಾಗುತ್ತದೆ.

ಈ ಕಾಗದ ಬರೆದು ನಿಮ್ಮನ್ನು ಬಳಲಿಸಿದ್ದೇನೆ. ನಿಮ್ಮಲ್ಲಿ ಗೌರವವಿಟ್ಟು ನಿಮ್ಮನ್ನು ಅನುಸರಿಸಲು ಪ್ರಯತ್ನಿಸುತ್ತಿರುವವರಿಗೆ ನಿಮ್ಮ ಸಮಯವನ್ನು ಅತಿಕ್ರಮಿಸುವ ಹಕ್ಕಿಲ್ಲ ಎಂಬುದನ್ನು ಬಲ್ಲೆ. ಸಾಧ್ಯವಾದಷ್ಟೂ ನಿಮಗೆ ತೊಂದರೆ ಕೊಡದೇ ಇರುವುದೇ ಅವರ ಕರ್ತವ್ಯ. ಆದರೂ ಸಂಪೂರ್ಣ ಅಪರಿಚಿತನಾದ ನಾನು ಈ ಪತ್ರವನ್ನೇ ತಮಗೆ ಬರೆಯುವಷ್ಟು ಸ್ವಾತಂತ್ರ್ಯವಹಿಸಿದ್ದೇನೆ: ಹೀಗೆ ಮಾಡಿರುವುದು ಸತ್ಯದ ಹಿತದೃಷ್ಟಿಯಿಂದ; ಅಲ್ಲದೆ ಯಾವ ಸಮಸ್ಯೆಗಳ ಪರಿಹಾರವನ್ನು ತಮ್ಮ ಬದುಕಿನ ಕರ್ತವ್ಯವನ್ನಾಗಿ ಮಾಡಿಕೊಂಡಿದ್ದೀರೋ ಅಂಥ ಸಮಸ್ಯೆಗಳ ವಿಷಯದಲ್ಲಿ ತಮ್ಮ ಸಲಹೆಯನ್ನು ಪಡೆಯುವ ಉದ್ದೇಶದಿಂದ.

ಗೌರವ ಪೂರ್ವಕವಾಗಿ ನಿಮ್ಮ ವಿಧೇಯ ಸೇವಕ
ಎಂ. ಕೆ. ಗಾಂಧಿ

ಯಸ್ನಾಯ ಪೊಲಾನ್ಯ
ಅಕ್ಟೋಬರ್ ೭, ೧೯೦೯

ಎಂ. ಕೆ. ಗಾಂಧಿ,

ಈಗಷ್ಟೇ ನಿಮ್ಮ ಸ್ವಾರಸ್ಯವಾದ ಪತ್ರ ತಲುಪಿ ತುಂಬ ಸಂತೋಷವಾಗಿದೆ. ಟ್ರಾನ್ಸ್‌ವಾಲಿನಲ್ಲಿರುವ ನಮ್ಮ ಎಲ್ಲ ಸೋದರರಿಗೂ ಸಹ–ಕಾರ್ಯಕರ್ತರಿಗೂ ಭಗವಂತನು ಸಹಾಯ ಮಾಡಲಿ. ಮಾರ್ದವತೆ ಮತ್ತು ಪಾಶವೀಯತೆಗಳ ನಡುವೆ, ಒಂದು ಕಡೆ ದೈನ್ಯ, ಪ್ರೇಮ ಮತ್ತೊಂದು ಕಡೆ ಅಹಂಕಾರ ದ್ವೇಷ ಇವುಗಳ ನಡುವೆ ನಡೆಯುತ್ತಿರುವ ಈ ಹೋರಾಟವು ಇನ್ನೂ ಬಹು ತೀವ್ರರೂಪದಲ್ಲಿ ಇಲ್ಲೂ ನಮಗೆ ಅನುಭವವಾಗುತ್ತಿದೆ; ಅದರಲ್ಲೂ ವಿಶೇಷವಾಗಿ ಸೈನಿಕ ಸೇವೆಯನ್ನು ಸಲ್ಲಿಸಲು ಅಂತಸ್ಸಾಕ್ಷಿಯ ಆಕ್ಷೇಪಣೆಯನ್ನು ಪ್ರಕಟಿಸಿದ್ದರಿಂದ. ಧರ್ಮಕ್ಕೆ ಸಲ್ಲಬೇಕಾದ ಕರ್ತವ್ಯಗಳಿಗೂ ರಾಜ್ಯದ ಶಾಸನಗಳಿಗೂ ಉಂಟಾಗಿರುವ ತೀಕ್ಷ್ಣವಾದ ಘರ್ಷಣೆಯಲ್ಲಿ ಅಂಥ ಆಕ್ಷೇಪಣೆಗಳು ಪದೇ ಪದೇ ಬರುತ್ತಿವೆ.

"ಹಿಂದುವಿಗೆ ಒಂದು ಪತ್ರ" ಎಂಬುದು ನಾನು ಬರೆದದ್ದೇ. (ಇಂಗ್ಲಿಷಿಗೆ) ಅದು ಭಾಷಾಂತರವಾಗುವುದು ನನಗೆ ತುಂಬ ಸಂತೋಷ. ಕೃಷ್ಣನನ್ನು ಕುರಿತ ಪುಸ್ತಕದ ಹೆಸರೇನು ಎಂಬುದನ್ನು ನಿಮಗೆ ಮಾಸ್ಕೋದಿಂದ ತಿಳಿಸುತ್ತಾರೆ. "ಪುನರ್ಜನ್ಮದ ವಿಷಯ; ನನ್ನ ಪಾಲಿಗೆ ಹೇಳುವುದಾದರೆ, ಏನನ್ನೂ ನಾನು ತೆಗೆದು ಹಾಕಲಾರೆ. ಪುನರ್ಜನ್ಮದ ನಂಬಿಕೆಯು ಆತ್ಮದ ಅಮೃತತ್ವ, ದೈವೀಸತ್ಯ ಮತ್ತು ಪ್ರೇಮ ಇವುಗಳನ್ನು ಕುರಿತ ಶ್ರದ್ಧೆಯಷ್ಟು ಆಳವಾಗಿ ಮಾನವ ಹೃದಯದಲ್ಲಿ ಬೇರು ಬಿಡಲಾರದು, ಮಾನವರನ್ನು ಸಂಯಮದಲ್ಲೂ ಇಡಲಾರದು ಎಂದು ನನಗೆನಿಸುತ್ತದೆ. ಚರ್ಚೆಗೊಳಪಟ್ಟಿರುವ ಭಾಗಗಳನ್ನು ತೆಗೆದು ಹಾಕಬೇಕೆಂಬುದು ನಿಮ್ಮ ಬಯಕೆಯಾದರೆ, ನಿಮಗಾಗಿ ನಾನು ಅನುಮತಿ

ನೀಡುತ್ತೇನೆ. ನೀವು ತರಲಿರುವ ಆವೃತ್ತಿಗೆ ನೆರವಾಗುವುದು ನನಗೆ ತುಂಬ ಸಂತೋಷ. ನನ್ನ ಬರಹಗಳನ್ನು ಭಾರತೀಯ ಭಾಷೆಗಳಿಗೆ ಅನುವಾದ ಮಾಡಿ ಪ್ರಕಟಿಸಿ ಪ್ರಸಾರ ಮಾಡುವ ಕೆಲಸ ನನಗೆ ಆನಂದ ತರುವಂಥದೇ.

ಧಾರ್ಮಿಕ ಉದ್ಯಮಗಳಲ್ಲಿ ಗೌರವಧನವನ್ನು ಕೊಡುವ ಪ್ರಶ್ನೆ ಹುಟ್ಟುವುದಕ್ಕೇ ಎಡೆಗೊಡಬಾರದು.

ನಿಮಗೆ ನನ್ನ ಸೋದರಭಾವದ ಶುಭಾಶಯಗಳು. ನಿಮ್ಮೊಂದಿಗೆ ವೈಯಕ್ತಿಕ ಸಂಪರ್ಕವಾದದ್ದು ಸಂತೋಷದ ವಿಷಯ.

ಲಿಯೋ ಟಾಲ್‌ಸ್ಟಾಯ್.

ವೆಸ್ಟ್‌ಮಿನ್‌ಸ್ಟರ್ ಪ್ಯಾಲೆಸ್ ಹೊಟೇಲ್
೪, ವಿಕ್ಟೋರಿಯಾ ಸ್ಟ್ರೀಟ್.
ಲಂಡನ್ ಎಸ್. ಡಬ್ಲ್ಯು
ನವೆಂಬರ್ ೧೧, ೧೯೦೯

ಸನ್ಮಾನ್ಯರೇ,

ತಾವು 'ಹಿಂದುವಿಗೆ ಬರೆದ ಪತ್ರ'ಕ್ಕೂ ನಾನು ತಮಗೆ ಬರೆದ ಪತ್ರದಲ್ಲಿದ್ದ ವಿಷಯಗಳಿಗೂ ಸಂಬಂಧಿಸಿದಂತೆ ತಾವೀಗ ಕಳುಹಿಸಿರುವ ರಿಜಿಸ್ಟರ್ಡ್ ಪತ್ರಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಮರ್ಪಿಸಲು ತಮ್ಮ ಅಪ್ಪಣೆ ಬೇಡುತ್ತೇನೆ.

ತಮ್ಮ ಆರೋಗ್ಯ ಕೆಡುತ್ತಿದೆ ಎಂದು ಕೇಳಿ ನಾನು ಬರೆಯಲು ತಡಮಾಡಿದೆ. ತಾವು ಉತ್ತರ ಬರೆಯುವ ಶ್ರಮ ತೆಗೆದುಕೊಳ್ಳುತ್ತೀರಿ ಎಂಬುದೇ ಅದಕ್ಕೆ ಕಾರಣ. ನನ್ನ ಕೃತಜ್ಞತೆಗಳನ್ನು ಲಿಖಿತರೂಪದಲ್ಲಿ ವ್ಯಕ್ತಪಡಿಸುವುದು ಅನಗತ್ಯವಾದ ಉಪಚಾರ ಎಂದು ನನಗೆ ಗೊತ್ತು. ಆದರೆ ಐಲ್ಮರ್ ಮಾಡ್ (Mr. Aylmer Maude) ಅವರನ್ನು ಈಗ ಭೇಟಿ ಮಾಡುವುದು ಸಾಧ್ಯವಾದದ್ದರಿಂದ ನಿಮ್ಮ ಆರೋಗ್ಯ ಈಗ ಚೆನ್ನಾಗಿದೆಯೆಂದು ಅವರಿಂದ ತಿಳಿಯಿತು. ಪ್ರತಿ ಬೆಳಗ್ಗೆಯೂ ಒಂದು ದಿನವೂ ತಪ್ಪದೆ ಕ್ರಮವಾಗಿ ಕಾಗದ ಪತ್ರಗಳಿಗೆ ಗಮನ ಕೊಡುತ್ತಿದ್ದೀರಿ ಎಂಬುದೂ ತಿಳಿಯಿತು. ನನಗೆ ಈ ಸುದ್ದಿ ತುಂಬ ಸಂತೋಷವುಂಟು ಮಾಡಿತು. ನಿಮ್ಮ ಉಪದೇಶದಲ್ಲಿ ಅತ್ಯಂತ ಪ್ರಮುಖವಾಗಿರುವ ವಿಷಯಗಳನ್ನು ಕುರಿತು ಬರೆಯಲು ಅದು ನನಗೆ ಪ್ರೋತ್ಸಾಹ ನೀಡಿದೆ.

ನನ್ನ ಮಿತ್ರರೊಬ್ಬರು ಬರೆದಿರುವ ಒಂದು ಪುಸ್ತಕದ ನಕಲೊಂದನ್ನು ಇದರೊಂದಿಗೆ ಕಳುಹಿಸಲು ತಮ್ಮ ಅಪ್ಪಣೆ ಬೇಡುತ್ತಿದ್ದೇನೆ. ನಾನು ನಿಕಟವಾದ ಸಂಪರ್ಕ ಹೊಂದಿದ್ದು ನನ್ನ ಜೀವನವನ್ನೇ ಮುಡಿಪಾಗಿಟ್ಟಿರುವ ಚಳುವಳಿಗೆ ಸಂಬಂಧಪಟ್ಟದ್ದು ಈ ಪುಸ್ತಕ. ಸದ್ಯದಲ್ಲಿ ದಕ್ಷಿಣ ಆಫ್ರಿಕದಲ್ಲಿರುವ ನನ್ನ ಇಂಗ್ಲಿಷ್ ಮಿತ್ರರೊಬ್ಬರು ಇದನ್ನು ಬರೆದಿ

ದ್ದಾರೆ. ನಿಮ್ಮ ಸಕ್ರಿಯ ಆಸಕ್ತಿ, ಸಹಾನುಭೂತಿಗಳನ್ನು ಪಡೆಯಲು ನಾನು ತುಂಬ ಕಾತರನಾಗಿರುವುದರಿಂದ ನಿಮಗೆ ಈ ಪುಸ್ತಕ ಕಳುಹಿಸುವುದು ತಪ್ಪಲ್ಲ ಎಂದು ಭಾವಿಸಿದ್ದೇನೆ.

ಟ್ರಾನ್ಸ್‌ವಾಲಿನಲ್ಲಿ ಭಾರತೀಯರು ನಡೆಸುತ್ತಿರುವ ಹೋರಾಟವು, ನನ್ನ ಅಭಿಪ್ರಾಯದಲ್ಲಿ, ಆಧುನಿಕ ಕಾಲದಲ್ಲಿ ಅತ್ಯಂತ ಮಹತ್ತಾದದ್ದು. ಏಕೆಂದರೆ ಅದರ ಗುರಿ ದಾರಿಗಳೆರಡೂ ಆದರ್ಶಮಯವಾಗಿವೆ. ಇದರಲ್ಲಿ ಭಾಗವಹಿಸುವವರಿಗೆ ಕೊನೆಯಲ್ಲಿ ಯಾವ ಪ್ರಯೋಜನವೂ ದೊರೆಯುವುದಿಲ್ಲ. ಅಲ್ಲದೆ ನೊಂದಿರುವ ಜನರಲ್ಲಿ ಶೇಕಡಾ ಐವತ್ತರಷ್ಟು ಮಂದಿ ಒಂದು ತತ್ವಕ್ಕಾದ ಅಪಾರವಾದ ಸಂಕಟವನ್ನೂ ವಿಷಮ ಪರೀಕ್ಷೆಯನ್ನೂ ಅನುಭವಿಸಿದ್ದಾರೆ. ಇಂಥ ಇನ್ನೊಂದು ಹೋರಾಟ ನಡೆದದ್ದರ ಅರಿವು ನನಗಿಲ್ಲ. ಇಷ್ಟವಾದಷ್ಟು ಪ್ರಚಾರವನ್ನು ಈ ಹೋರಾಟಕ್ಕೆ ಕೊಡುವುದು ಸಾಧ್ಯವಾಗಿಲ್ಲ. ಇಂದು ಬಹುಶಃ ತಮಗೆ ಅತ್ಯಧಿಕ ಸಂಖ್ಯೆಯ ಓದುಗರಿದ್ದಾರೆ. ಡೋಕ್ ಅವರ ಪುಸ್ತಕದಲ್ಲಿರುವ ಸತ್ಯಾಂಶಗಳು ತಮಗೆ ತೃಪ್ತಿಕರವೆನಿಸಿದರೆ ಅವುಗಳ ಆಧಾರದಿಂದ ನಾನು ಮಾಡಿರುವ ತೀರ್ಮಾನಗಳನ್ನು ಆ ಸತ್ಯಾಂಶಗಳು ಸಮರ್ಥಿಸುತ್ತವೆ ಎಂದು ತಾವು ಭಾವಿಸುವುದಾದರೆ ಈ ಚಳುವಳಿಯನ್ನು, ತಮಗೆ ಸರಿದೋರುವ ಯಾವುದೇ ರೀತಿಯಲ್ಲಿ ಜನಪ್ರಿಯಗೊಳಿಸಲು ತಮ್ಮ ಪ್ರಭಾವವನ್ನು ಬಳಸಬೇಕು ಎಂದು ಪ್ರಾರ್ಥಿಸಬಹುದೆ ? ಈ ಚಳುವಳಿಯು ಯಶಸ್ಸನ್ನು ಸಾಧಿಸಿದರೆ ಅಧಾರ್ಮಿಕತೆ, ದ್ವೇಷ ಅಸತ್ಯಗಳ ಮೇಲೆ ಧರ್ಮ, ಪ್ರೇಮ, ಸತ್ಯಗಳು ಸಾಧಿಸುವ ಯಶಸ್ಸು ಮಾತ್ರವೇ ಆಗುವುದಿಲ್ಲ. ದಲಿತರಾಗಿರುವ ಕೋಟ್ಯಂತರ ಭಾರತೀಯರು ಹಾಗೂ ಜಗತ್ತಿನ ಇತರ ಭಾಗಗಳ ಜನರಿಗೆ ಉದಾಹರಣೆಯಾಗುವ ಸಂಭವ ವಿಶೇಷವಾಗಿದೆ. ಕನಿಷ್ಠಪಕ್ಷ ಭಾರತದಲ್ಲಾದರೂ ಹಿಂಸಾವಾದಿ ಪಕ್ಷವನ್ನು ಮುರಿಯಲು ಅದು ನೆರವಾಗುತ್ತದೆ. ಕೊನೆಯವರೆಗೂ ನಾವು ಹೋರಾಡಬಲ್ಲೆವಾದರೆ, ಬಲ್ಲೆವು ಎಂದು ನಾನಂದು ಕೊಂಡಿದ್ದೇನೆ, ಅಂತಿಮವಾಗಿ ನಮಗೆ ಯಶಸ್ಸು ದೊರೆಯುವುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ನೀವು ಸೂಚಿಸಿದ ರೀತಿಯಲ್ಲಿ ನೀವು ನೀಡುವ ಪ್ರೊತ್ಸಾಹವು ನಮ್ಮ ಈ ಸಂಕಲ್ಪವನ್ನು ಇನ್ನೂ ಬಲಪಡಿಸಬಲ್ಲುದು.

ಈ ಪ್ರಶ್ನೆಯನ್ನು ಪರಿಹರಿಸಲು ನಡೆಯುತ್ತಿದ್ದ ಸಂಧಾನಗಳು ಹೆಚ್ಚು ಕಡಮೆ ಮುರಿದು ಬಿದ್ದಿವೆ. ಈ ವಾರ ನಾನೂ ನನ್ನ ಸಹೋದ್ಯೋಗಿಗಳೂ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗುತ್ತಿದ್ದೇವೆ. ಅಲ್ಲಿ ನಾವು ಸೆರೆಯನ್ನು ಸ್ವಾಗತಿಸುತ್ತೇವೆ. ನನ್ನ ಮಗನು ಪುಣ್ಯವಶದಿಂದ ಈ ಹೋರಾಟದಲ್ಲಿ ಭಾಗಿಯಾಗಿದ್ದಾನೆ ಎಂಬುದನ್ನು ತಿಳಿಸಬೇಕು. ಅವನೀಗ ಆರು ತಿಂಗಳ ಕಠಿಣ ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ. ಈ ಹೋರಾಟದಲ್ಲಿ ಅವನಿಗೆ ಇದು ನಾಲ್ಕನೆಯ ಕಾರಾಗೃಹವಾಸ.

ತಾವು ಈ ಕಾಗದಕ್ಕೆ ಉತ್ತರ ಬರೆಯುವ ಕೃಪೆ ಮಾಡಿದರೆ ದಯವಿಟ್ಟು ಅದನ್ನು ಜೊಹಾನ್ಸ್‌ಬರ್ಗ್ ಎಸ್.ಎ.. ಬಾಕ್ಸ್ ೬೫೨೨ ಎಂಬ ವಿಳಾಸಕ್ಕೆ ಕಳುಹಿಸಿ ಎಂದು ಪ್ರಾರ್ಥಿಸಬಹುದೆ?

ನಿಮ್ಮ ಆರೋಗ್ಯ ಸೊಗಸಾಗಿರುತ್ತದೆ ಎಂಬ ಆಶೆಯೊಡನೆ,

ನಿಮ್ಮ ವಿಧೇಯ ಸೇವಕ
ಎಂ. ಕೆ. ಗಾಂಧೀ.

ಜೋಹಾನ್ಸ್‌ಬರ್ಗ್, ಟ್ರಾನ್ಸ್‌ವಾಲ್
ದಕ್ಷಿಣ ಆಫ್ರಿಕ, ಏಪ್ರಿಲ್ ೪, ೧೯೧೦

ಸನ್ಮಾನ್ಯರೇ,

ಲಂಡನ್ನಿನಲ್ಲಿ ನಾನು ತಂಗಿದ್ದಾಗ ತಮ್ಮೊಂದಿಗೆ ಪತ್ರ ವ್ಯವಹಾರ ನಡೆಸಿದ್ದು ತಮಗೆ ನೆನಪಿರಬಹುದು. ತಮ್ಮ ಅತಿ ನಮ್ರ ಅನುಯಾಯಿಯಾದ ನಾನು ಬರೆದಿರುವ ಒಂದು ಕಿರುಹೊತ್ತಿಗೆಯನ್ನು ಇದರೊಂದಿಗೆ ಕಳುಹಿಸುತ್ತಿದ್ದೇನೆ. ಗುಜರಾತೀ ಬರಹವೊಂದರ ನನ್ನದೇ ಅನುವಾದ ಇದು. ವಿಚಿತ್ರವೆಂದರೆ ಭಾರತ ಸರ್ಕಾರದವರು ಇದರ ಗುಜರಾತೀ ಮೂಲವನ್ನು ಮಟ್ಟುಗೋಲು ಹಾಕಿಕೊಂಡಿದ್ದಾರೆ. ಆದ್ದರಿಂದ ಅನುವಾದದ ಪ್ರಕಟಣೆಯನ್ನು ಜಾಗ್ರತೆ ತಂದೆ. ತಮಗೆ ತೊಂದರೆ ಕೊಡಬಾರದು ಎಂಬ ತೀವ್ರವಾದ ಕಾತರತೆ ನನಗುಂಟು. ಆದರೂ ತಮ್ಮ ಆರೋಗ್ಯ ಅನುವುಕೊಟ್ಟರೆ, ತಮಗೆ ಸಮಯವಿದ್ದರೆ, ಇದನ್ನು ಓದಿ ತಮ್ಮ ಟೀಕೆಯನ್ನು ನೀಡಿದರೆ ಅದು ನನ್ನ ಪಾಲಿಗೆ ತುಂಬ ಅಮೂಲ್ಯವಾಗಿರುತ್ತದೆ. ಪ್ರಕಟಿಸಲು ತಾವು ಅನುಮತಿ ನೀಡಿದ್ದ 'ಹಿಂದುವಿಗೊಂದು ಪತ್ರ' ಎಂಬುದರ ಕೆಲವು ಪ್ರತಿಗಳನ್ನೂ ಕಳುಹಿಸುತ್ತಿದ್ದೇನೆ. ಒಂದು ಭಾರತೀಯ ಭಾಷೆಗೂ ಅದು ಅನುವಾದವಾಗಿದೆ.

ತಮ್ಮ ವಿಧೇಯ ಸೇವಕ
ಎಂ. ಕೆ. ಗಾಂಧೀ.

ಮೇ ೮, ೧೯೧೦

ಪ್ರಿಯ ಮಿತ್ರರೆ,

ಈಗಷ್ಟೆ ನಿಮ್ಮ ಪತ್ರ ಮತ್ತು ನಿಮ್ಮ ಪುಸ್ತಕ 'ಇಂಡಿಯನ್ ಹೋಂರೂಲ್' ತಲುಪಿದೆ. ತುಂಬ ಆಸಕ್ತಿಯಿಂದ ನಿಮ್ಮ ಪುಸ್ತಕವನ್ನು ಓದಿದೆ. ಏಕೆಂದರೆ ನೀವು ಅಲ್ಲಿ ವಿವೇಚಿಸಿರುವ ಪ್ರಶ್ನೆ ಭಾರತೀಯರಿಗೆ ಮಾತ್ರವಲ್ಲದೆ ಇಡೀ ಮಾನವತೆಗೇ ಮಹತ್ವದ್ದಾಗಿದೆ.

ನಿಮ್ಮ ಮೊದಲ ಕಾಗದ ಸಿಕ್ಕುತ್ತಿಲ್ಲ. ಆದರೆ ಡೋಕ್ ಬರೆದಿರುವ ನಿಮ್ಮ ಜೀವನ ಚರಿತ್ರೆ ಸಿಕ್ಕಿದೆ. ನನ್ನ ಮನಸ್ಸನ್ನು ಸೆರೆಹಿಡಿದು ನಿಮ್ಮನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಆ ಜೀವನ ಚರಿತ್ರೆಯಿಂದ ನನಗೊಂದು ಅವಕಾಶ ದೊರೆಯಿತು.

ಸದ್ಯಕ್ಕೆ ನನ್ನ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ. ಆದ್ದರಿಂದ ನಿಮ್ಮ ಪುಸ್ತಕ ಹಾಗೂ ನಿಮ್ಮ ಚಟುವಟಿಕೆಗಳೊಡನೆ ಸಂಬಂಧಪಟ್ಟಿರುವ ಎಲ್ಲ ಪ್ರಶ್ನೆಗಳನ್ನೂ ಕುರಿತು ಬರೆಯಲು ಸಾಧ್ಯವಾಗುತ್ತಿಲ್ಲ. ನನ್ನ ಪಾಲಿಗೆ ಇವೆಲ್ಲದರ ಬೆಲೆ ತುಂಬ ಹೆಚ್ಚು. ನನ್ನ ಆರೋಗ್ಯ ಉತ್ತಮವಾದ ಕೂಡಲೇ ನಿಮಗೆ ಬರೆಯುತ್ತೇನೆ.

ನಿಮ್ಮ ಮಿತ್ರ ಹಾಗೂ ಸೋದರ
ಲಿಯೋ ಟಾಲ್‌ಸ್ಟಾಯ್

೨೧–೨೪ ಕೋರ್ಟ್ ಛೇಂಬರ್ಸ್
ಜೋಹಾನೀಸ್‌ಬರ್ಗ್
ಆಗಸ್ಟ್ ೧೫, ೧೯೧೦

ಸನ್ಮಾನ್ಯರೆ,

ಕಳೆದ ಮೇ ೮ರಂದು ತಾವು ಬರೆದಿರುವ ಪ್ರೋತ್ಸಾಹಕಾರಕ ಹಾಗೂ ಹೃತ್ಪೂರ್ವಕ ಪತ್ರಕ್ಕಾಗಿ ಅತ್ಯಂತ ಕೃತಜ್ಞನಾಗಿದ್ದೇನೆ. 'ಇಂಡಿಯನ್ ಹೋಂ ರೂಲ್' ಎಂಬ ನನ್ನ ಪುಸ್ತಿಕೆಯನ್ನು ಒಟ್ಟಾರೆ ತಾವು ಒಪ್ಪಿಕೊಂಡಿರುವುದು ನನ್ನ ಪಾಲಿಗೆ ಅಮೂಲ್ಯವಾದ ವಿಷಯ. ತಮಗೆ ಸಮಯವಿದ್ದರೆ, ತಮ್ಮ ಪತ್ರದಲ್ಲಿ ತಾವು ಕೃಪೆಯಿಟ್ಟು ಮಾತು ಕೊಟ್ಟಿರುವಂತೆ ವಿವರವಾದ ವಿಮರ್ಶೆಯನ್ನು ಕಳುಹಿಸುವಿರಿ ಎಂಬ ನಿರೀಕ್ಷೆಯಲ್ಲಿದ್ದೇನೆ.

ಕಾಲೆನ್‌ಬಾಕ್ ಅವರು ಟಾಲ್‌ಸ್ಟಾಯ್ ಫಾರಂ ಬಗ್ಗೆ ತಮಗೆ ಬರೆದಿದ್ದಾರೆ. ನನಗೂ ಕಲೆನ್‌ಬಾಕ್ ಅವರಿಗೂ ಅನೇಕ ವರ್ಷಗಳ ಸ್ನೇಹ. 'ನನ್ನ ತಪ್ಪೊಪ್ಪಿಗೆ' (My Confession) ಎಂಬ ತಮ್ಮ ಕೃತಿಯಲ್ಲಿ ಅಷ್ಟು ಚೆನ್ನಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿರುವ ಬಹುಪಾಲು ಅನುಭವಗಳನ್ನು ಅವರೂ ಅನುಭವಿಸಿದ್ದಾರೆಂದು ನಾನು ಹೇಳಬೇಕಾಗಿದೆ. ತಮ್ಮ ಬರಹಗಳಷ್ಟು ಮಟ್ಟಿಗೆ ಬೇರೆ ಯಾವುವೂ ಕಾಲೆನ್‌ಬಾಕ್ ಅವರ ಅಂತರಾಳವನ್ನು ಮುಟ್ಟಿಲ್ಲ. ತಾವು ಜಗತ್ತಿನ ಮುಂದೆ ಇಟ್ಟಿರುವ ಆದರ್ಶಗಳಿಗೆ ಅನುಗುಣವಾಗಿ ಬಾಳಲು ಪ್ರಯತ್ನಿಸಲು ಸ್ಫೂರ್ತಿಯಾಗಿರಲೆಂದು ಅವರ ಫಾರಮ್ಮಿಗೆ ನನ್ನ ಸಲಹೆ ಪಡೆದು ತಮ್ಮ ಹೆಸರನ್ನಿಡುವ ಸ್ವಾತಂತ್ರ್ಯ ವಹಿಸಿದ್ದಾರೆ.

ನಾನು ಇದರೊಂದಿಗೆ ಕಳುಹಿಸುತ್ತಿರುವ 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಸಂಚಿಕೆಗಳಿಂದ ತಮಗೆ ಕಲೆನ್‌ಬಾಕ್ ಅವರು ತಮ್ಮ ಫಾರಮ್ಮನ್ನು ನಿಷ್ಕ್ರಿಯ ಪ್ರತಿಭಟನಕಾರರ ಬಳಕೆಗೆ ಕೊಟ್ಟಿರುವ ಔದಾರ್ಯದ ಬಗೆಗೆ ಹೆಚ್ಚು ವಿವರಗಳು ತಿಳಿಯುತ್ತವೆ.

ಟ್ರಾನ್ಸ್‌ವಾಲಿನಲ್ಲಿ ನಡೆಯುತ್ತಿರುವ ನಿಷ್ಕ್ರಿಯ ಪ್ರತಿಭಟನೆಯ ಬಗ್ಗೆ ತಮ್ಮ ವೈಯಕ್ತಿಕ ಆಸಕ್ತಿಯಿಂದಾಗಿ ಇಷ್ಟೆಲ್ಲ ವಿವರಗಳ ಹೊರೆಯನ್ನು ಹೊರಿಸುತ್ತಿದ್ದೇನೆ.

ತಮ್ಮ ನಿಷ್ಠ ಸೇವಕ
ಎಂ. ಕೆ. ಗಾಂಧೀ.

WO 12200—MUPM—2,000 copies—29-3-74